ಪ್ರಸಾರಾಂಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಮಾಜ ವಿಜ್ಞಾನಗಳು

ಪಾರಿಭಾಷಿಕ ಪದಕೋಶ

ಸಂಪಾದಕ

ಡಾ. ಚಂದ್ರಶೇಖರ ದಾಮ್ಲೆ



ಸಮಾಜ ವಿಜ್ಞಾನಗಳ
ಪಾರಿಭಾಷಿಕ ಪದಕೋಶ

ಸಮಾಜ ವಿಜ್ಞಾನಗಳ
ಪಾರಿಭಾಷಿಕ ಪದಕೋಶ

ಸಂಪಾದಕರು

ಡಾ. ಚಂದ್ರಶೇಖರ ದಾಮ್ಲೆ

ಪ್ರಸಾರಾಂಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

SAMAJA VIJNANAGALA
PARIBHASHIKA PADAKOSHA
Technical Terms of Social Sciences
Edited by
Dr. Chandrashekhar Damle
Head, Dept. of Sociology
Neharu Memorial College,
Sullia 574 327, D.K. District
Published by
Dr: H.C.Boralingaiah
Director, Prasaranga
Kannada University, Hampi
Vidyaranya 583 276

Pages : xvi + 526 First Impression 2003

Price : Rs. 200/-

www.kavihampi.org

ಪ್ರಕಾಶಕರು
ಡಾ. ಹಿ.ಚಿ.ಬೋರಲಿಂಗಯ್ಯ
ನಿರ್ದೇಶಕರು, ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಬೆಲೆ : ರೂ. ೨೦೦/-

ಮುಖಪುಟ : ಕೆ.ಕೆ.ಮಕಾಳಿ
ಅಕ್ಷರ ಜೋಡಣೆ : ಯಾಜಿ ಗ್ರಾಫಿಕ್ಸ್, ಹೊಸಪೇಟೆ
✆ ೯೫೮೩೯೪ ೪೨೭೫೦೦
ಮುದ್ರಣ

ರಶ್ಮಿ ಮುದ್ರಣ
ಸುಧಾಮನಗರ, ಬೆಂಗಳೂರು ೨೭.
ದೂರವಾಣಿ : ೨೨೪೩೫೫೦, ೫೧೧೪೨೧೨೩.

ಕನ್ನಡ ಪ್ರಜ್ಞೆಯನ್ನು
ವಿಶ್ವಪ್ರಜ್ಞೆಯಾಗಿಸುವತ್ತ

ಸಾವಿರಾರು ವರ್ಷಗಳ ಸುದೀರ್ಘ ಮತ್ತು ಉಜ್ವಲ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಕರ್ನಾಟಕದ ಆಧುನಿಕ ಇತಿಹಾಸದಲ್ಲಿ ಕರ್ನಾಟಕದ ಏಕೀಕರಣ ಒಂದು ಐತಿಹಾಸಿಕವೂ ಮತ್ತು ಮಹತ್ವಪೂರ್ಣವೂ ಆದ ವಿಶಿಷ್ಟ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆ ಮತ್ತೊಂದು ಮಹತ್ವದ ಐತಿಹಾಸಿಕ ಘಟನೆ. ಕರ್ನಾಟಕದ ಇತರೆ ವಿಶ್ವವಿದ್ಯಾಲಯಗಳು ಕೇವಲ ಕೆಲವು ಜಿಲ್ಲೆಗಳಿಗೆ ಮಾತ್ರ ಪರಿಮಿತಗೊಂಡಿದ್ದರೆ ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿ ಅಖಂಡ ಕರ್ನಾಟಕ ಮಾತ್ರವಲ್ಲದೆ ಕನ್ನಡಿಗ ಮತ್ತು ಕನ್ನಡ ಸಂಸ್ಕೃತಿ ನೆಲೆಸಿರುವ ಎಲ್ಲ ದೇಶ ಮತ್ತು ವಿದೇಶಗಳನ್ನೂ ಒಳಗೊಂಡಿದೆ. ಈ ಕಾರಣದಿಂದ ನಮ್ಮ ವಿಶ್ವವಿದ್ಯಾಲಯದ ದಾರಿ ಮತ್ತು ಗುರಿ ಎರಡೂ ವಿಭಿನ್ನವೂ ಮತ್ತು ವೈಶಿಷ್ಟ್ಯಪೂರ್ಣವೂ ಆಗಿವೆ.

ಕನ್ನಡ ವಿಶ್ವವಿದ್ಯಾಲಯ ಕನ್ನಡ ನಾಡು, ನುಡಿ, ಸಂಸ್ಕೃತಿ ಮತ್ತು ಜನಜೀವನದ ಸರ್ವ ಮುಖಗಳ ವಿಶಿಷ್ಟವಾದ ಅಂತರಂಗ ಮತ್ತು ಬಹಿರಂಗ ಸಂಪತ್ತನ್ನು ಕುರಿತು ಅಧ್ಯಯನ ಮಾಡುವ, ಸಂಶೋಧಿಸುವ ಮತ್ತು ಅದರ ಅಧ್ಯಯನದ ಫಲಿತಗಳನ್ನು ಜಗತ್ತಿನಾದ್ಯಂತ ಪ್ರಸಾರ ಮಾಡಿ ಕರ್ನಾಟಕದ ಬಗೆಗಿನ ಅರಿವನ್ನು ಜನಸಮುದಾಯದಲ್ಲಿ ವಿಸ್ತರಿಸುವ ಹಾಗೂ ಅನಂತಮುಖಿಯಾದ ವಿಶ್ವಜ್ಞಾನವನ್ನು ಕನ್ನಡಜ್ಞಾನವನ್ನಾಗಿ ಪರಿವರ್ತಿಸಿ ಅದು ಕನ್ನಡಿಗರೆಲ್ಲರಿಗೆ ದಕ್ಕುವಂತೆ ಮಾಡುವ ಮೂಲಭೂತ ಆಶಯದ ಪ್ರತಿನಿಧಿಯಾಗಿ ಸ್ಥಾಪಿತಗೊಂಡಿದೆ. ಬೋಧನೆಗಿಂತ ಸಂಶೋಧನೆ, ಸೃಷ್ಟಿಗಿಂತ ವಿಶ್ವಂಭರ ದೃಷ್ಟಿ, ಶಿಥಿಲ ವಿವರಣೆಗಿಂತ ಅತುಳ ಸಾಧ್ಯತೆಗಳನ್ನೊಳಗೊಂಡ ಅನನ್ಯ ಅಭಿವ್ಯಕ್ತಿ. ನಾಡಿನ ಕೋಟಿ ಕೋಟಿ ಶ್ರೀಸಾಮಾನ್ಯರ ವಿವಿಧ ಪ್ರತಿಭಾಶಕ್ತಿ ಮತ್ತು ಸಾಮರ್ಥ್ಯಗಳ ಸದ್ಬಳಕೆಯ ಮೂಲಕ ಅವರ ಅಂತಃಪ್ರಜ್ಞೆಯನ್ನು ಎಚ್ಚರಿಸುವ, ವಿಕಸಿಸುವ ಶ್ರದ್ಧಾನ್ವಿತ ಕಾಯಕ ಇದರ ದಾರಿಯಾಗಿದೆ.

ಕನ್ನಡ ನಾಡನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ನೋಡು, ಕನ್ನಡ ವಿಶ್ವವಿದ್ಯಾಲಯವನ್ನು ನೋಡಿದಲ್ಲದೆ ಕನ್ನಡ ನಾಡಿನ ಯಾತ್ರೆ ಸಂಪೂರ್ಣವಾಗದು, ಸಾರ್ಥಕವಾಗದು ಎಂಬಂತೆ ರೂಪುಗೊಳ್ಳುತ್ತಿರುವ ಮತ್ತು ರೂಪುಗೊಳ್ಳಬೇಕಾದ ಮಹಾ ಸಂಸ್ಥೆ ಇದು. ಕನ್ನಡಪ್ರಜ್ಞೆ ತನ್ನ ಸತ್ವ ಮತ್ತು ಸತ್ವದೊಡನೆ ವಿಶ್ವಪ್ರಜ್ಞೆಯಾಗಿ ಅರಳಿ ನಳನಳಿಸಬೇಕು; ವಿಶ್ವಪ್ರಜ್ಞೆ ಕನ್ನಡ ದೇಶೀ ಪ್ರಜ್ಞೆಯೊಳಗೆ ಪ್ರವೇಶಿಸಿ, ಪ್ರವಹಿಸಿ, ಸಮನ್ವಯಗೊಂಡು, ಸಂಲಗ್ನಗೊಂಡು, ಸಮರಸಗೊಂಡು ಸಾಕ್ಷಾತ್ಕಾರಗೊಳ್ಳಬೇಕು ಎಂಬುದೇ ಇದರ ಗುರಿ. ಈ ಗುರಿಯ ಮೂಲಕ

ಕನ್ನಡ ಕರ್ನಾಟಕತ್ವದ ಉಸಿರಾಗಿ, ವಿಶ್ವಪ್ರಜ್ಞೆಯ ಹಸಿರಾಗಿ, ಕನ್ನಡಮಾನವ ವಿಶ್ವಮಾನವನಾಗಿ ಬೆಳೆಯಲು ಸಾಧನವಾಗಬೇಕು. ಕನ್ನಡಿಗರೆಲ್ಲರ ಸಾಮೂಹಿಕ ಶ್ರಮ ಮತ್ತು ಪ್ರತಿಭೆಗಳ ಸಮಷ್ಠಿ ಪ್ರಕ್ರಿಯೆಯಿಂದ ಬೆಳಕಿನ ಈ ಮಹಾಪಥವನ್ನು ಕ್ರಮಿಸುವುದು ನಮ್ಮ ವಿಶ್ವವಿದ್ಯಾಲಯದ ಮಹತ್ತರ ಆಶಯ.

ನಾಗಾಲೋಟದಿಂದ ಕ್ರಮಿಸುತ್ತಿರುವ ಜಗತ್ತಿನ ವ್ಯಾಪಕ ಜ್ಞಾನ, ತಂತ್ರಜ್ಞಾನ ಮತ್ತು ವಿಜ್ಞಾನಗಳ ಶೋಧನೆ ಮತ್ತು ಚಿಂತನೆಗಳನ್ನು ಕನ್ನಡದಲ್ಲಿ ಸತ್ವಪೂರ್ಣವಾಗಿ ದಾಖಲಿಸಿ ಕನ್ನಡ ಓದುಗರ ಜ್ಞಾನವನ್ನು ವಿಸ್ತರಿಸಿ ಅವರಲ್ಲಿ ಪುಸ್ತಕ ಸಂಸ್ಕೃತಿಯನ್ನು ಪ್ರಸರಿಸುವ ವಿಶೇಷ ಹೊಣೆಯನ್ನು ಹೊತ್ತು ನಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗ ಅಸ್ತಿತ್ವಕ್ಕೆ ಬಂದಿದೆ. ಶ್ರವ್ಯ, ದೃಶ್ಯ ಮತ್ತು ವಾಚನ ಸಾಮಗ್ರಿಗಳ ಸಮರ್ಪಕ ಉತ್ಪಾದನೆ ಮತ್ತು ವಿತರಣಾ ಪ್ರಕ್ರಿಯೆಗಳ ಮೂಲಕ ಇದು ಈ ಗುರಿಯನ್ನು ತಲುಪಲು ಶಕ್ತಿಮೀರಿ ಪ್ರಯತ್ನಿಸುತ್ತಿದೆ. ಈಗಾಗಲೇ ೭೦೦ಕ್ಕೂ ಹೆಚ್ಚು ವೈವಿಧ್ಯಮಯ ಮತ್ತು ವೈಶಿಷ್ಟ್ಯಮಯ ಕೃತಿಗಳ ಮೂಲಕ ಕನ್ನಡ ಗ್ರಂಥಲೋಕದ ಅಂತರಂಗ ಮತ್ತು ಬಹಿರಂಗ ಸೌಂದರ್ಯಗಳನ್ನು ಉಜ್ವಲಿಸಿರುವ ಇದು ತನ್ನ ಮುಂದಿನ ಗುರಿಯ ಕಡೆಗೆ ಆಶಾದಾಯಕವಾಗಿ ಚಲಿಸುತ್ತಿದೆ.

ಸಮಾಜ ವಿಜ್ಞಾನವೆಂಬುದು ವಿಸ್ತೃತ ಅರ್ಥದಲ್ಲಿ ಒಂದು ಸಮಗ್ರ ಜೀವನ ವಿಜ್ಞಾನ. ಆದಿಮಾನವನ ಹುಟ್ಟಿನಿಂದ ಹಿಡಿದು ಅತ್ಯಾಧುನಿಕ ಮಾನವನ ವಿಕಾಸಶೀಲವಾದ ಬಹು ಆಯಾಮಗಳ ಜೀವನ ವಿಧಾನಗಳನ್ನು, ವೈಶಿಷ್ಟ್ಯಗಳನ್ನು, ವೈವಿಧ್ಯಗಳನ್ನು ಅವುಗಳ ಕಾರ್ಯಕಾರಣ ಸಂಬಂಧಗಳನ್ನು ನಾಗರಿಕತೆಯ ಚರಿತ್ರೆಯ ವಿವಿಧ ಕಾಲಘಟ್ಟಗಳ ಬದಲಾವಣೆಗೆ ಮತ್ತು ಪ್ರಕೃತಿ ಹಾಗೂ ಮನುಷ್ಯನ ಸಂಬಂಧಗಳಿಗೆ ಹಾಗೂ ಕ್ರಿಯೆ-ಪ್ರತಿಕ್ರಿಯೆಗಳಿಗೆ ಅನ್ವಯಿಸಿದಂತೆ ಕೈಗೊಳ್ಳುವ ಅಧ್ಯಯನ ಮತ್ತು ಸಂಶೋಧನೆಗಳೆಲ್ಲವನ್ನು ಇದು ಒಳಗೊಳ್ಳುತ್ತದೆ. ಅಖಂಡ ಮಾನವ ಕುಲಕ್ಕೆಲ್ಲ ಅನ್ವಯಿಸಬಹುದಾದ ಸಾಮಾನ್ಯ ಸಮಾಜ ವಿಜ್ಞಾನದ ಪರಿಕಲ್ಪನೆಗಳು ಒಂದು ಮುಖವಾದರೆ ವಿವಿಧ ದೇಶಗಳ, ವಿವಿಧ ಜನಾಂಗಗಳ ಜೀವನ ಕ್ರಮವನ್ನು ನಿರೂಪಿಸುವ ಬಹುಶಿಸ್ತೀಯ ದೃಷ್ಟಿಕೋನಗಳನ್ನು ಒಳಗೊಳ್ಳುವ ಮುಖ ಮತ್ತೊಂದು. ಇವೆರಡೂ ಅವುಗಳ ಅದ್ಭುತ ವೈವಿಧ್ಯ, ವಿಕಾಸ ಹಾಗೂ ಅಭಿವೃದ್ಧಿಗಳಿಗೆ ಅನ್ವಯಿಸಿದಂತೆ ಸಮೃದ್ಧ ಸಾಮಗ್ರಿಗಳನ್ನು ಸೂಕ್ಷ್ಮ ಸ್ಥೂಲಗಳನ್ನು ಒಳಗೊಂಡಿದೆ. ಶುದ್ಧ ವಿಜ್ಞಾನಗಳಲ್ಲಿ ಅವುಗಳ ಸ್ವರೂಪ, ಸಿದ್ಧಾಂತಗಳಿಗೆ ಅನುಸಾರವಾಗಿ ಏಕರೂಪತೆ ಇರುತ್ತದೆ. ಆದರೆ, ಸಮಾಜ ವಿಜ್ಞಾನಗಳಲ್ಲಿ ಈ ರೀತಿಯ ಏಕರೂಪತೆಯನ್ನು ಸಿದ್ಧಾಂತ ಮತ್ತು ಭಾಷೆಗಳಲ್ಲಿ ನಿರೀಕ್ಷಿಸುವುದು ಸಾಧ್ಯವಿಲ್ಲ ಮತ್ತು ಸಾಧುವೂ ಅಲ್ಲ. ಹೀಗಾಗಿ ಸಮಾಜ ವಿಜ್ಞಾನ ಒಂದಕ್ಕೊಂದು ಪೂರಕವಾದ ಮತ್ತು ವಿರುದ್ಧವಾದ ಅಥವಾ ಸಂಬಂಧಿಸಿದ ಅನಂತ ವೈಚಿತ್ರ್ಯಗಳನ್ನು ಒಳಗೊಂಡಿರುವ ಕಾರಣ ಈ ವಿಜ್ಞಾನದಲ್ಲಿ ಬಳಸುವ ಪದಗಳು ಮತ್ತು ಪರಿಕಲ್ಪನೆಗಳು ಭಾಷೆಯಿಂದ ಭಾಷೆಗೆ, ಪ್ರದೇಶದಿಂದ ಪ್ರದೇಶಕ್ಕೆ,

ಸಮಾಜದಿಂದ ಸಮಾಜಕ್ಕೆ ಭಿನ್ನವಾಗುತ್ತಾ ಹೋಗುತ್ತವೆ. ಆದರೂ ಮೂಲ ತಾತ್ವಿಕ ಪರಿಭಾಷೆಯಲ್ಲಿ ಕೆಲಮಟ್ಟಿಗಾದರೂ ಏಕತೆ ಇರುವುದು ಸಾಧ್ಯ ಮತ್ತು ಅಪೇಕ್ಷಣೀಯ. ಸಮಾಜಗಳ ಅಧ್ಯಯನದಲ್ಲಿ ಪ್ರಪಂಚದಾದ್ಯಂತ ಅವುಗಳ ಶಾಸ್ತ್ರೀಯ ವಿವೇಚನೆಯಲ್ಲಿ ಸಾರೂಪ್ಯವನ್ನು ಕಂಡುಕೊಳ್ಳುವ ಪ್ರಯತ್ನಗಳು ಅವಿರತವಾಗಿ ನಡೆಯುತ್ತಲೇ ಇವೆ. ಜಗತ್ತಿನ ವಿವಿಧ ಭಾಷೆಗಳು ಸಮಾಜ ವಿಜ್ಞಾನಕ್ಕೆ ಸಂಬಂಧಿಸಿದ ಸಾಮಾನ್ಯ ಭಾಷೆ ಮತ್ತು ಪರಿ ಭಾಷೆಗಳನ್ನು ಹೆಚ್ಚು ಹೆಚ್ಚು ನಿಷ್ಕೃಷ್ಟವಾಗಿ ರೂಪಿಸಿಕೊಳ್ಳುವ ಮತ್ತು ರೂಢಿಸಿಕೊಳ್ಳುವ ಪ್ರಯತ್ನದಲ್ಲಿ ಸತತ ನಿರತವಾಗಿವೆ.

ಕನ್ನಡ ಭಾಷೆಯಲ್ಲಿ ಸಮಾಜಗಳನ್ನು ಕುರಿತ ಅಧ್ಯಯನಗಳು ಶತಮಾನಗಳ ಹಿಂದಿನಿಂದ ವಿರಳವಾಗಿ ಮತ್ತು ಈ ಶತಮಾನದಲ್ಲಿ ಸಾಕಷ್ಟು ದಟ್ಟವಾಗಿ ಮತ್ತು ಗಂಭೀರವಾಗಿ ನಡೆ ಯುತ್ತಿವೆ. ಜಗತ್ತಿನ ವಿವಿಧ ಸಮಾಜಗಳನ್ನು ಕುರಿತ ಅಧ್ಯಯನಗಳ ಸ್ವರೂಪ, ವೈಜ್ಞಾನಿಕತೆ, ಸೂಕ್ಷ್ಮತೆ ಮತ್ತು ಫಲಿತಗಳು ಕರ್ನಾಟಕದಲ್ಲೂ ತಮ್ಮ ಪ್ರೇರಣೆಯನ್ನು ಪ್ರತಿಫಲಿಸುತ್ತಿವೆ. ಆದ್ದರಿಂದ ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳ ಸಮಾಜ ವಿಜ್ಞಾನಿಗಳು ಹಾಗೂ ಇತರ ಜನಾಂಗ ಅಧ್ಯಯನಪ್ರಿಯ ಗಂಭೀರ ಅಭ್ಯಾಸಿಗಳು ಕುತೂಹಲಕಾರಿಯಾದ ಆಕರ್ಷಕ ವಾದ ಬಹುಮುಖಿಯಾದ ಈ ಅಧ್ಯಯನಗಳ ಕಡೆಗೆ ಹೆಚ್ಚು ಹೆಚ್ಚು ಒಲವನ್ನು ತೋರಿಸುತ್ತಾ ಲೇಖನ, ಗ್ರಂಥ ರಚನೆ, ಕ್ಷೇತ್ರಕಾರ್ಯ ಹಾಗೂ ಅವುಗಳ ವೈಜ್ಞಾನಿಕ ವಿಶ್ಲೇಷಣೆಗಳಲ್ಲಿ ತೊಡಗಿಕೊಂಡಿದ್ದಾರೆ. ಎಂ.ಫಿಲ್., ಪಿಎಚ್.ಡಿ., ಡಿ.ಲಿಟ್.ಗಾಗಿ ಮತ್ತಿತರ ಅಭಿವೃದ್ಧಿ ಪೂರಕ ಕಾರ್ಯಕ್ರಮಗಳಿಗಾಗಿ ಈ ಅಧ್ಯಯನ ಮತ್ತು ಚಿಂತನೆಗಳು ನಡೆಯುತ್ತಿವೆ. ವಿಶ್ವವಿದ್ಯಾಲಯಗಳ ಸ್ನಾತಕ ಮತ್ತು ಸ್ನಾತಕೋತ್ತರ ಬೋಧನೆಗಳ ಪ್ರಾರಂಭದಲ್ಲಿ ಇಂಗ್ಲಿಶ್ ಭಾಷೆಯೇ ವಿಜೃಂಭಿಸುತ್ತಿದ್ದರೂ ಇತ್ತೀಚಿನ ವರ್ಷಗಳಲ್ಲಿ ಗ್ರಾಮಾಂತರ ಪ್ರದೇಶದ ಬಹುಸಂಖ್ಯಾತ ವಿದ್ಯಾರ್ಥಿಗಳು ಕನ್ನಡದಲ್ಲೇ ಉತ್ತರವನ್ನು ಬರೆಯುವ ಮತ್ತು ಆ ಕಾರಣಕ್ಕೆ ಕನ್ನಡದಲ್ಲಿ ರಚಿತವಾದ ಸಮಾಜ ವಿಜ್ಞಾನಗಳ ಪಠ್ಯಗಳನ್ನು ಅಧ್ಯಯನ ಮಾಡುವ ಅನಿವಾರ್ಯತೆಯನ್ನು ಕಂಡುಕೊಂಡಿದ್ದಾರೆ. ಇಂಗ್ಲಿಶ್‌ನಿಷ್ಠ ಅಧ್ಯಾಪಕರೂ ಸಹ ವಿದ್ಯಾರ್ಥಿ ಗಳ ಹಕ್ಕೊತ್ತಾಯ ಹಾಗೂ ಸಾರ್ವಜನಿಕ ಬೇಡಿಕೆಗಳ ಮೂಲಕವಾಗಿ ಕನ್ನಡದಲ್ಲಿ ಬೋಧಿಸುವ ಮತ್ತು ಬರೆಯುವ ಪ್ರವೃತ್ತಿಯನ್ನು ನಿಧಾನವಾಗಿಯಾದರೂ ರೂಢಿಸಿಕೊಳ್ಳುವ ಗಂಭೀರ ಪ್ರಯತ್ನದಲ್ಲಿದ್ದಾರೆ. ಹೀಗಾಗಿ ಕನ್ನಡ ಭಾಷೆಯಲ್ಲಿ ಸಮಾಜ ವಿಜ್ಞಾನವನ್ನು ಕುರಿತ ಬರವಣಿಗೆಯ ವ್ಯಾಪ್ತಿ ವಿಸ್ತೃತಗೊಳ್ಳುತ್ತಿದೆ. ಈ ಕಾರಣದಿಂದಾಗಿ ಸಮಾಜ ವಿಜ್ಞಾನ ದಲ್ಲಿ ಬಳಸುತ್ತಿರುವ ವಿಶಿಷ್ಟ ಸಾಮಾನ್ಯ ಪರಿಭಾಷೆಯನ್ನು ರೂಪಿಸುವ ಶಾಸ್ತ್ರೀಯ ಪ್ರಯತ್ನ ನಡೆಯುತ್ತಿದೆ. ಸಮಾಜ ವಿಜ್ಞಾನದಲ್ಲಿ ಮಾನವಶಾಸ್ತ್ರ, ಮನಶ್ಶಾಸ್ತ್ರ, ಜಾನಪದ ಮುಂತಾದ ಪೂರಕ ವಿಜ್ಞಾನಗಳ ಪ್ರವೇಶವೂ ಗಣನೀಯ ಪ್ರಮಾಣದಲ್ಲಿ ಇರುವುದರಿಂದ ಈ ರೀತಿಯ ಪರಿಭಾಷಾ ರೂಪಣೆ ಅನಿವಾರ್ಯವೂ ಆಗಿದೆ. ಜೊತೆಗೆ ಈಗ ಕನ್ನಡವನ್ನು ಸಮಗ್ರ

ಸಾಮಾಜಿಕ ಹಾಗೂ ಶುದ್ಧ ವಿಜ್ಞಾನಗಳ ಪ್ರಬುದ್ಧ ಭಾಷೆಯನ್ನಾಗಿ ರೂಪಿಸುವ ಒತ್ತಡವೂ ಅಧಿಕವಾಗುತ್ತಿದೆ. ವಿದ್ಯಾರ್ಥಿಗಳ ಒತ್ತಡದಿಂದ ಮತ್ತು ಸಾರ್ವಜನಿಕರ ಅಪೇಕ್ಷೆಯ ಕಾರಣದಿಂದ ಸಮಾಜ ವೈಜ್ಞಾನಿಕ ವಿಷಯಗಳನ್ನು ಕನ್ನಡದಲ್ಲಿ ಸರಳವಾಗಿ ಮತ್ತು ಸಮರ್ಪಕವಾಗಿ ಬರೆಯುವ ಹಾಗೂ ಆ ಬರವಣಿಗೆಗಳಲ್ಲಿ ಬಳಸಲಾಗುವ ಪಾರಿಭಾಷಿಕ ಶಬ್ದಗಳಿಗೆ ಏಕರೂಪ ಪರ್ಯಾಯ ಕನ್ನಡ ಪದಗಳನ್ನು ರೂಪಿಸುವ ಪ್ರಯತ್ನ ಅತ್ಯಂತ ಜರೂರಾಗಿ ನಡೆಯಬೇಕಾಗಿದೆ. ಏಕೆಂದರೆ ಒಂದೇ ಪಾರಿಭಾಷಿಕ ಪದಕ್ಕೆ ಹಲವು ಲೇಖಕರು ಕನ್ನಡದ ಬೇರೆ ಬೇರೆ ಪ್ರದೇಶಗಳಲ್ಲಿ ಭಿನ್ನ ಭಿನ್ನವಾದ ಮತ್ತು ಮನಸ್ಸಿಗೆ ತೋಚಿದ ಪದಗಳನ್ನು ಬಳಸಿದಲ್ಲಿ ಅವುಗಳ ಹಿಂದಿನ ಮೂಲ ಅರ್ಥದ ಬಗ್ಗೆ ವಿದ್ಯಾರ್ಥಿಗಳಲ್ಲಿ ಮತ್ತು ಸಾಮಾನ್ಯ ಓದುಗರಲ್ಲಿ ಅರ್ಥ ಮತ್ತು ಪರಿಕಲ್ಪನೆಗಳ ಗೊಂದಲ ಉಂಟಾಗುವುದರಿಂದ ಸಮಾಜದ ಬಗೆಗಿನ ಅಧ್ಯಯನ ಒಂದು ಖಚಿತ ವೈಜ್ಞಾನಿಕ ಸ್ವರೂಪದ ಅಧ್ಯಯನವಾಗುವಲ್ಲಿ ಸೋಲಬಹುದಾದ ಸಾಧ್ಯತೆಗಳು ಹೆಚ್ಚಿವೆ.

ಮೇಲಿನ ಹಿನ್ನೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯವು ಕನ್ನಡವನ್ನು ಎಲ್ಲ ಜ್ಞಾನ ವಿಜ್ಞಾನಗಳ ಒಂದು ವಿಶಿಷ್ಟ ಮತ್ತು ಖಚಿತ ಮಾಧ್ಯಮವಾಗಿಸುವ ದಾರಿಯಲ್ಲಿ ಗಟ್ಟಿಯಾದ ಮತ್ತು ದೂರಗಾಮಿಯಾದ ಪ್ರಯತ್ನಗಳನ್ನು ಮಾಡುವ ಕರ್ತವ್ಯಭಾರವನ್ನು ಹೊತ್ತುಕೊಂಡಿದೆ. ಈ ವಿಶ್ವವಿದ್ಯಾಲಯದ ಪ್ರಥಮ ಕುಲಪತಿಗಳಾಗಿ ಅದರ ಕಾರ್ಯರೂಪಗಳನ್ನು ರೇಖಿಸಿ, ಅವುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಪ್ರಯತ್ನಿಸಿದ ಡಾ.ಚಂದ್ರಶೇಖರ ಕಂಬಾರ ಅವರು ಸಮಾಜ ವಿಜ್ಞಾನಗಳ ಪಾರಿಭಾಷಿಕ ಪದಕೋಶವನ್ನು ರಚಿಸುವ ಹೊಣೆಗಾರಿಕೆಯನ್ನು ಪ್ರಸಿದ್ಧ ಸಮಾಜ ವಿಜ್ಞಾನ ಲೇಖಕರಾದ ಡಾ. ಚಂದ್ರಶೇಖರ ದಾಮ್ಲೆ ಅವರಿಗೆ ವಹಿಸಿದ್ದರು. ಅವರು ಈ ಯೋಜನೆಯ ನಿರ್ದೇಶಕರಾಗಿ ತಮ್ಮ ಹಲವಾರು ವಿದ್ವಾಂಸ ಸ್ನೇಹಿತರ ಸಹಕಾರದೊಡನೆ ಈ ಕೋಶವನ್ನು ರೂಪಿಸಿದ್ದಾರೆ. ಸುಮಾರು ೧೦ ವರ್ಷಗಳ ಸುದೀರ್ಘ ಅವಧಿಯಲ್ಲಿ ಹಲವಾರು ಅಡೆತಡೆಗಳ ನಡುವೆ ರೂಪಿತವಾಗಿರುವ ಈ ಕೃತಿ ಈಗಲಾದರೂ ಬೆಳಕು ಕಾಣುತ್ತಿರುವುದು ನನಗೆ ಅಪಾರ ಹರ್ಷವನ್ನು ತಂದಿದೆ. ಸಮಾಜ ವಿಜ್ಞಾನದ ಬೇರೆ ಬೇರೆ ಶಾಖೆಗಳ ವಿದ್ವಾಂಸರ ಸಕ್ರಿಯ ನೆರವು ಮತ್ತು ಆಸಕ್ತಿಗಳಿಂದ ಕೊನೆಗೂ ಸಿದ್ಧಗೊಂಡಿರುವ ಈ ಕೃತಿ ಸಮಾಜ ವಿಜ್ಞಾನ ಕ್ಷೇತ್ರದ ಬಹುದೊಡ್ಡ ಕೊರತೆಯೊಂದನ್ನು ನಿವಾರಿಸುವಲ್ಲಿ ಸಫಲವಾಗುತ್ತದೆ ಎಂಬ ನಂಬಿಕೆ ನನಗಿದೆ. ಅಗತ್ಯ ಮೂಲಪದಗಳ ಆಯ್ಕೆಯಲ್ಲಿ, ಅವುಗಳಿಗೆ ಬಹುಮಟ್ಟಿಗೆ ಸರ್ವಸಮ್ಮತವಾದ ಸಮರ್ಪಕ ಪರ್ಯಾಯ ಪದಗಳನ್ನು ಕಂಡು ಹಿಡಿಯುವಲ್ಲಿ, ಬಳಕೆಯಲ್ಲಿ ಇರದಿದ್ದ ಸಾವಿರಾರು ಪದಗಳನ್ನು ಮೂಲಪದ ಸೃಷ್ಟಿಸುವ ಅರ್ಥ ಪರಂಪರೆಗನುಗುಣವಾಗಿ ಹೊಸ ಪದಗಳನ್ನು ಟಂಕಿಸುವಲ್ಲಿ, ಖಚಿತವಾದ, ಸ್ಪಷ್ಟವಾದ ಅರ್ಥ ಪರಿವೇಷವನ್ನು ಅವುಗಳಿಗೆ ತುಂಬುವಲ್ಲಿ, ಈ ವಿಶಾಲ ಕ್ಷೇತ್ರದ ಬಹುಮುಖ್ಯ ಪರಿಕಲ್ಪನೆಗಳಿಗೆ ಅನುಗುಣವಾದ ಪದಗಳನ್ನು ಸೇರ್ಪಡೆಗೊಳಿಸುವಲ್ಲಿ, ಅಪಾರ್ಥಕ್ಕೆ, ಅನ್ಯಾರ್ಥಕ್ಕೆ

ಎಡೆಗೊಡದಂತೆ ಅತ್ಯಂತ ಜಾಗರೂಕತೆಯಿಂದ ಅವುಗಳನ್ನು ಕಟ್ಟಿಕೊಡುವಲ್ಲಿ ಡಾ. ಚಂದ್ರಶೇಖರ ದಾಮ್ಲೆ ಮತ್ತು ಅವರ ವಿದ್ವತ್‌ಪರಿವಾರ ವಹಿಸಿರುವ ಶ್ರಮವನ್ನು, ಮಾಡಿರುವ ಕಾರ್ಯವನ್ನು ಅದರ ಹಿಂದಿರುವ ಅವರ ಅನನ್ಯ ವಿಷಯನಿಷ್ಠೆ ಮತ್ತು ಭಾಷಾನಿಷ್ಠೆಯನ್ನು ಈ ಕೋಶದ ಪುಟ ಪುಟವೂ ಅಭಿವ್ಯಂಜಿಸುತ್ತವೆ. ಸಮರ್ಪಣ ಮನೋಧರ್ಮ, ದಣಿವರಿಯದ ದುಡಿಮೆ, ಶಾಸ್ತ್ರೀಯ ನಿಷ್ಠೆ, ಅತ್ಯುತ್ತಮವಾದುದನ್ನು ಕೊಡಬೇಕೆಂಬ ಕಳಕಳಿ, ಭಾಷಾ ಪ್ರಭುತ್ವ ಇವುಗಳೆಲ್ಲದರ ಫಲವಾಗಿ ಈ ಅನನ್ಯವಾದ ಪದಕೋಶ ಕನ್ನಡಿಗರ ಮುಂದಿದೆ. ಮಾನ್ಯ ಸಂಪಾದಕರ ಮತ್ತು ಅವರ ಮಿತ್ರರ ಈ ಅಮೂಲ್ಯವಾದ, ಶ್ರದ್ಧಾನ್ವಿತವಾದ ವಿದ್ವತ್ ಕಾಯಕಕ್ಕೆ ನಾನು ವೈಯಕ್ತಿಕವಾಗಿ ಮತ್ತು ವಿಶ್ವವಿದ್ಯಾಲಯದ ಪರವಾಗಿ ಗೌರವಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಪದಕೋಶ ಮುಂದಿನ ಹಲವು ಕೋಶಗಳಿಗೆ ಮಾರ್ಗದರ್ಶಕವಾಗಲೆಂದು ಹಾರೈಸುತ್ತಾ ಸಮಾಜ ವಿಜ್ಞಾನದ ವಿದ್ಯಾರ್ಥಿಗಳು, ವಿದ್ವಾಂಸರು ಮತ್ತು ಆಸಕ್ತರು ಇದರ ಸದುಪಯೋಗ ವನ್ನು ಮಾಡಿಕೊಳ್ಳಲೆಂದು ಹಾರೈಸುತ್ತೇನೆ.

ಡಾ.ಎಚ್.ಜೆ. ಲಕ್ಕಪ್ಪಗೌಡ

ಕುಲಪತಿಯವರು

ಸಂಪಾದಕರ ಅರಿಕೆ

ಕರ್ನಾಟಕದಲ್ಲಿ ಪದವಿ ಶಿಕ್ಷಣ ಹಾಗೂ ಸ್ನಾತಕೋತ್ತರ ಶಿಕ್ಷಣದ ಹಂತದಲ್ಲಿ ಕನ್ನಡ ಮಾಧ್ಯಮದ ಬಳಕೆ ಆರಂಭವಾಗಿ ಕೆಲವು ವರ್ಷಗಳಾಗಿವೆ. ಪಾಠಪ್ರವಚನಗಳು ಇಂಗ್ಲಿಷ್ ಮಾಧ್ಯಮದಲ್ಲೇ ಇದ್ದು ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಉತ್ತರಗಳನ್ನು ಕನ್ನಡದಲ್ಲಿ ಬರೆಯಬಹುದೆಂಬ ಹಂತದಿಂದ ಮುಂದುವರಿದು ಈಗ ಸಮಾಜ ವಿಜ್ಞಾನ ವಿಷಯಗಳ ಮೇಲೆ ಕನ್ನಡದಲ್ಲಿ ಸಿದ್ಧಪಡಿಸಿದ ಸಂಶೋಧನಾ ಪ್ರಬಂಧಗಳನ್ನು ಮಾನಿಸುವ ಹಂತಕ್ಕೆ ತಲುಪಿದ್ದೇವೆ. ಸಮಾಜ ವಿಜ್ಞಾನಗಳಲ್ಲಿ ಅಲ್ಲದೆ ಈಗ ವಾಣಿಜ್ಯ ಹಾಗೂ ನೈಸರ್ಗಿಕ ವಿಜ್ಞಾನ ವಿಷಯಗಳಲ್ಲೂ ಕನ್ನಡದ ಬಳಕೆಯು ಹೆಚ್ಚುತ್ತಿದೆ. ಅನೇಕ ಮಂದಿ ಕಾಲೇಜುಗಳ ಮತ್ತು ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು ಹಾಗೂ ಉಪನ್ಯಾಸಕರು ತಮ್ಮ ವಿಷಯಗಳಲ್ಲಿ ಕನ್ನಡದಲ್ಲಿ ಪಠ್ಯಪುಸ್ತಕಗಳನ್ನು ಬರೆದಿದ್ದಾರೆ. ಮೂಲ ಆಂಗ್ಲ ಕೃತಿಗಳ ಭಾಷಾಂತರವೂ ಸಾಕಷ್ಟು ನಡೆದಿದೆ. ವಿಶ್ವವಿದ್ಯಾಲಯಗಳ ಪ್ರಸಾರಾಂಗಗಳಿಂದ ಹಾಗೂ ಸರಕಾರಿ ಮುದ್ರಣಾಲಯಗಳಿಂದಲ್ಲದೆ ಖಾಸಗಿಯಾಗಿಯೂ ಪ್ರಕಟಣೆ ಹಾಗೂ ವಿತರಣೆ ಆಗುತ್ತಿದೆ. ಈ ಬೆಳವಣಿಗೆಯು ಪದವಿ ಹಂತದಲ್ಲಿ ಶಿಕ್ಷಣ ಮಾಧ್ಯಮವಾಗಿ ಕನ್ನಡಕ್ಕೆ ಸಾಕಷ್ಟು ಆಕರ್ಷಣೆ ಇದೆಯೆಂಬುದರ ಸೂಚಕವಾಗಿದೆ. ಮುಖ್ಯವಾಗಿ ಗ್ರಾಮೀಣ ಹಿನ್ನೆಲೆಯ ವಿದ್ಯಾರ್ಥಿಗಳು ಕನ್ನಡದಲ್ಲೇ ಕಲಿಯುವುದರಿಂದ ಪರೀಕ್ಷೆಗಳಲ್ಲಿ ಹೆಚ್ಚಿನ ಯಶಸ್ಸು ಸಾಧಿಸುತ್ತಿದ್ದಾರೆ.

ಕನ್ನಡ ಮಾಧ್ಯಮದಲ್ಲಿ ಪ್ರಕಟವಾದ ಸಮಾಜ ವಿಜ್ಞಾನಗಳ ಬಹುತೇಕ ಪುಸ್ತಕಗಳ ಒಂದು ಮಿತಿಯೆಂದರೆ ಅವು ತತ್ಕಾಲೀನ ಬೇಡಿಕೆಯನ್ನು ಪೂರೈಸುವ ದೃಷ್ಟಿಯಿಂದ ಬರೆದವುಗಳಾಗಿವೆ. ಇವುಗಳಲ್ಲಿ ಅನೇಕ ಕೃತಿಗಳು ಇಂಗ್ಲೀಷಿನಲ್ಲಿ ಲಭ್ಯವಿರುವ ಪಠ್ಯಪುಸ್ತಕಗಳ ಕನ್ನಡ ಭಾಷಾಂತರವಾಗಿ ಕಂಡುಬರುತ್ತಿರುವುದರಲ್ಲಿ ಅಚ್ಚರಿ ಇಲ್ಲ. ಈ ಪ್ರಯತ್ನದಲ್ಲಿ ಸೃಜನಾತ್ಮಕತೆ, ದೇಶೀಯತೆ ಹಾಗೂ ಸ್ವಂತಿಕೆಗಿಂತ ಹೆಚ್ಚಾಗಿ ಪಾಠಪಟ್ಟಿಗನುಗುಣವಾಗಿ ಅಗತ್ಯವಿರುವ ಶೈಕ್ಷಣಿಕ ಸರಕನ್ನು ಪೂರೈಸುವುದೇ ಉದ್ದೇಶವಾಗಿರುವುದು ಕಂಡುಬರುತ್ತದೆ. ಇದರಿಂದಾಗಿ ಸಮಾಜ ವಿಜ್ಞಾನಗಳಲ್ಲಿ ಪಠ್ಯಪುಸ್ತಕ ಪ್ರಕಟಣೆಯ ಪ್ರಯತ್ನಗಳು ಹೆಚ್ಚು ವೈಯಕ್ತೀಕರಣಗೊಂಡವುಗಳಾಗಿವೆ. ಇವುಗಳಲ್ಲಿ ಅನೇಕ ವಿದ್ವಾಂಸರ ಸಮಷ್ಟಿ ಪ್ರಯತ್ನಗಳು ಕಂಡುಬರುವುದಿಲ್ಲ. ತತ್ಪರಿಣಾಮವಾಗಿ ಇಂದು ಕನ್ನಡ ಭಾಷೆಯಲ್ಲಿ ಲಭ್ಯವಿರುವ ಸಮಾಜ ವಿಜ್ಞಾನ ಪಠ್ಯಪುಸ್ತಕಗಳಲ್ಲಿ ಕೆಲವೊಂದು ಸಮಸ್ಯೆಗಳಿವೆ. ಒಂದನೆಯದಾಗಿ ಆಂಗ್ಲ

ಭಾಷೆಯಲ್ಲಿರುವ ಒಂದೇ ಪರಿಕಲ್ಪನೆಯನ್ನು ಬೇರೆ ಬೇರೆ ಪುಸ್ತಕಗಳಲ್ಲಿ ಬೇರೆ ಬೇರೆ ಪದ ಸಮುಚ್ಚಯಗಳಿಂದ ಪರಿಚಯಿಸಲಾಗಿದೆ. ಉದಾಹರಣೆಗೆ Social Morphology ಎಂಬ ಪರಿಕಲ್ಪನೆಯನ್ನು (ಅ) ಸಾಮಾಜಿಕ ರೂಪರಚನಾಶಾಸ್ತ್ರ, (ಆ) ಸಾಮಾಜಿಕ ಸ್ವರೂಪ ಶಾಸ್ತ್ರ, (ಇ) ಸಾಮಾಜಿಕ ಆಕಾರಶಾಸ್ತ್ರ ಎಂಬುದಾಗಿ ಬೇರೆ ಬೇರೆಯಾಗಿ ಪಠ್ಯ ರಚಯಿತರು ಅನುವಾದಿಸಿದ್ದಾರೆ. ಇವುಗಳಲ್ಲಿ ಯಾವುದು ಸೂಕ್ತವಾದ ಭಾಷಾಂತರವೆಂಬ ಬಗ್ಗೆ ಗೊಂದಲವುಂಟಾಗುತ್ತದೆ. ಎರಡನೆಯದಾಗಿ, ಕೆಲವೊಮ್ಮೆ ಒಂದೇ ಕನ್ನಡ ಪದವನ್ನು ಆಂಗ್ಲ ಭಾಷೆಯ ಬೇರೆ ಬೇರೆ ಪರಿಕಲ್ಪನೆಗಳಿಗೆ ಪ್ರಯೋಗಿಸಿದ್ದೂ ಇದೆ. ಉದಾಹರಣೆಗೆ ಸಂಸ್ಕೃತೀಕರಣ ಎಂಬ ಪರಿಕಲ್ಪನೆಯನ್ನು acculturation ಎಂಬುದಕ್ಕೂ Sanskritization ಎಂಬುದಕ್ಕೂ ಸಂವಾದಿಯಾಗಿ ಬಳಸಲಾಗಿದೆ. ಆದರೆ ಅವೆರಡೂ ವಿಭಿನ್ನ ಪ್ರಕ್ರಿಯೆಗಳು. ಅವುಗಳ ನಡುವೆ ಸೂಕ್ಷ್ಮ ವ್ಯತ್ಯಾಸವಿದೆ. ಹಾಗಾಗಿ ಸಂಸ್ಕೃತೀಕರಣ ಎಂಬ ಒಂದೇ ಪರಿಕಲ್ಪನೆಯನ್ನು ಮೇಲೆ ಹೇಳಿದ ಎರಡೂ ಪ್ರಕ್ರಿಯೆಗಳಿಗೆ ಪಾರಿಭಾಷಿಕ ಪದವಾಗಿ ಬಳಸಲಾಗದು. ಮೂರನೆಯದಾಗಿ, ಕೆಲವರು ಉಪಯೋಗಿಸಿದ ಕನ್ನಡ ಪರಿಕಲ್ಪನೆಗಳು ಅಪರ್ಯಾಪ್ತವೂ ಅರ್ಥಹೀನವೂ ಆಗಿರುತ್ತವೆ. ಹಾಗಾದುದರಿಂದ ಕನ್ನಡ ಪರಿಕಲ್ಪನೆಗಳ ಬಳಕೆಯಲ್ಲಿ ಸ್ಪಷ್ಟತೆ, ಏಕರೂಪತೆ ಹಾಗೂ ಶಬ್ದ ಸಮೃದ್ಧಿಯ ಅಗತ್ಯವನ್ನು ಮನಗಂಡು ಈ ಪಾರಿಭಾಷಿಕ ಪದಕೋಶದ ಯೋಜನೆಯನ್ನು ರೂಪಿಸಲಾಯಿತು. ಇದರ ಎರಡು ಮುಖ್ಯ ಗುರಿಗಳೆಂದರೆ:

೧. ಸಮಾಜ ವಿಜ್ಞಾನ ವಿಷಯಗಳಲ್ಲಿ ಅಖಿಲ ಕರ್ನಾಟಕ ಮಟ್ಟದಲ್ಲಿ ಸಮಾನರೂಪದ ಪಾರಿಭಾಷಿಕ ಪದಗಳ ಪ್ರಯೋಗಕ್ಕಾಗಿ ಒಂದು ಪದಕೋಶವನ್ನು ಒದಗಿಸುವುದು; ಹಾಗೂ

೨. ಕೇವಲ ಇಂಗ್ಲಿಷ್ ಪಠ್ಯಪುಸ್ತಕಗಳ ಭಾಷಾಂತರವಲ್ಲದೆ ಈ ವಿಷಯಗಳಲ್ಲಿ ಲಭ್ಯವಿರುವ ಅನೇಕ ಸಿದ್ಧಾಂತಕಾರರ ಹಾಗೂ ಚಿಂತಕರ ಇಂಗ್ಲೀಷ್ ಕೃತಿಗಳ ಸಮರ್ಥ ತರ್ಜುಮೆಗಾಗಿ ಶಬ್ದ ಭಂಡಾರ ಸಂಗ್ರಹಿಸುವುದು. ಈ ಎರಡು ಉದ್ದೇಶಗಳನ್ನು ಈ ಪದಕೋಶದಲ್ಲಿ ಸಾಧಿಸುವ ಯತ್ನವನ್ನು ಮಾಡಲಾಗಿದೆ.

ಪ್ರತಿಯೊಂದು ಸಮಾಜ ವಿಜ್ಞಾನದಲ್ಲಿ ತನ್ನದೇ ಆದ ಪರಿಕಲ್ಪನೆಗಳ ಪ್ರಯೋಗವಿರುವುದಾದರೂ ಬಹುತೇಕ ಕಲ್ಪನೆಗಳು ಇನ್ನುಳಿದ ವಿಷಯಗಳಲ್ಲೂ ಕಾಣಿಸಿಕೊಳ್ಳುತ್ತವೆ. ಒಂದೊಂದು ಸಮಾಜ ವಿಜ್ಞಾನಕ್ಕೂ ಪ್ರತ್ಯಪ್ರತ್ಯೇಕವಾದ ಪದಕೋಶವನ್ನು ತಯಾರಿಸಿದರೆ ಈ ಪ್ರತಿಯೊಂದು ಪದಕೋಶದಲ್ಲೂ ಬಹುತೇಕ ಪದಗಳು ಪುನರಾವರ್ತನೆಗೊಳ್ಳುತ್ತವೆ. ಅಲ್ಲದೆ ಒಂದೊಂದು ವಿಷಯದ ತಜ್ಞರು ಬೇರೆ ಬೇರೆ ಪದಕೋಶಗಳಲ್ಲಿ ವಿವಿಧ ಕನ್ನಡದ ಸಮಾನಾರ್ಥಕಗಳನ್ನು ನೀಡಿದರೆ ಆಗ ವಿದ್ಯಾರ್ಥಿಗಳ ಗೊಂದಲ ಇನ್ನೂ ಹೆಚ್ಚುತ್ತದೆ. ಆದುದರಿಂದ ಅಂತರ್‌ಶಿಸ್ತೀಯ ಸಮೀಪನ (interdisciplinary approach) ಅಗತ್ಯವೆಂದು ಮನಗಂಡು ಈ ಪದಕೋಶದ

ಕಾರ್ಯವನ್ನು ಕೈಗೆತ್ತಿಕೊಳ್ಳಲಾಯಿತು. ಸಮಾಜಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಇತಿಹಾಸ, ಮಾನವಶಾಸ್ತ್ರ, ಸಮಾಜಕಾರ್ಯ, ಮನಶ್ಶಾಸ್ತ್ರ ಹಾಗೂ ಜಾನಪದ ವಿಷಯಗಳಲ್ಲಿ ಬಳಕೆಯಲ್ಲಿರುವ ಪರಿಕಲ್ಪನೆಗಳನ್ನು ಸಂಗ್ರಹಿಸಿ ಈ ಒಂದೇ ಕೋಶದಲ್ಲಿ ಅಳವಡಿಸಲಾಗಿದೆ. ಇದರಿಂದಾಗಿ ಎರಡು ಮೂರು ಐಚ್ಛಿಕ ವಿಷಯಗಳನ್ನು ಕಲಿಯುವ ವಿದ್ಯಾರ್ಥಿಯು ಒಂದೊಂದು ವಿಷಯಕ್ಕೂ ಬೇರೆ ಬೇರೆ ಪದಕೋಶಗಳನ್ನು ಅವಲಂಬಿಸಬೇಕಾಗಿಲ್ಲ. ಅಲ್ಲದೆ ಯಾವುದೇ ಒಂದು ವಿಷಯದ ವಿದ್ಯಾರ್ಥಿಗೆ ಇನ್ನೊಂದು ವಿಷಯದ ಪರಿಕಲ್ಪನೆಗಳನ್ನು ಅರ್ಥೈಸಿಕೊಳ್ಳಲೂ ಈ ಪದಕೋಶವೇ ನೆರವಾಗುತ್ತದೆ. ಈ ಕಾರಣದಿಂದ ಇದನ್ನು ಸಮಾಜವಿಜ್ಞಾನಗಳ ಪಾರಿಭಾಷಿಕ ಪದಕೋಶವೆಂದು ಕರೆಯಲಾಗಿದೆ.

ಹಂಪಿ ಕನ್ನಡ ವಿಶ್ವವಿದ್ಯಾಲಯವು ಈ ಯೋಜನೆಗೆ ೧೯೯೩ರ ಎಪ್ರಿಲ್ ತಿಂಗಳಲ್ಲಿ ಅನುದಾನವನ್ನು ಮಂಜೂರು ಮಾಡಿತು. ಬಳಿಕ ಇದಕ್ಕೆ ಸ್ಪಷ್ಟ ವ್ಯಾಪ್ತಿ, ಉದ್ದೇಶ ಹಾಗೂ ಕಾರ್ಯವಿಧಾನಗಳನ್ನು ರೂಪಿಸುವುದಕ್ಕಾಗಿ ಆರಂಭದಲ್ಲಿ ಸಲಹಾ ಮಂಡಳಿಯನ್ನು ರಚಿಸಲಾಯಿತು. ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಡಾ.ಚಂದ್ರಶೇಖರ ಕಂಬಾರರ ನಿರ್ದೇಶನದಲ್ಲಿ ಡಾ.ಕೆ.ವಿ. ನಾರಾಯಣ, ಡಾ.ಪುರುಷೋತ್ತಮ ಬಿಳಿಮಲೆ, ಶ್ರೀ. ಎಚ್.ವಿ.ನಾಗೇಶ್, ಪ್ರೊ.ಎಚ್.ಎಂ.ಮರುಳಸಿದ್ಧಯ್ಯ, ಪ್ರೊ.ಎಂ.ಧ್ರುವನಾರಾಯಣ, ಡಾ.ಕೆ.ಜಿ.ಗುರುಮೂರ್ತಿ ಹಾಗು ಶ್ರೀಟಿ.ಆರ್.ಚಂದ್ರಶೇಖರ ಮತ್ತು ಸಂಪಾದಕನಾದ ನಾನೂ ಒಳಗೊಂಡು ಜರುಗಿದ ಸಲಹಾಮಂಡಳಿ ಸಭೆಯಲ್ಲಿ ಈ ಪದಕೋಶ ರಚನೆಯ ನೀಲಿ ನಕಾಶೆಯನ್ನು ತಯಾರಿಸಲಾಯಿತು. ಅದಲ್ಲದೆ ವಿವಿಧ ವಿಷಯಗಳಲ್ಲಿ ರಚಿಸ ಬೇಕಾಗಿದ್ದ ತಜ್ಞರ ಸಮಿತಿಗಳಿಗೆ ಆಮಂತ್ರಿಸಬೇಕಾದ ಪ್ರಾಧ್ಯಾಪಕರ ಹೆಸರುಗಳನ್ನು ಸಲಹಾಸಮಿತಿ ಸಭೆಯಲ್ಲೇ ನಿರ್ಧರಿಸಲಾಯಿತು. ಅದರಂತೆ ವಿನಂತಿಯನ್ನು ಕಳಿಸಿದಾಗ ಎಲ್ಲಾ ವಿಷಯಗಳ ತಜ್ಞರೂ ಈ ಕಾರ್ಯದಲ್ಲಿ ಭಾಗಿಗಳಾಗಲು ಸಮ್ಮತಿ ಸೂಚಿಸಿದ್ದಲ್ಲದೆ ಮುಂದಿನ ಕಾರ್ಯದಲ್ಲಿ ಸಹಕಾರ ನೀಡಿದ್ದಾರೆ.

ಈ ಪದಕೋಶ ರಚನೆಯು ಆರಂಭದಲ್ಲಿ ಈಗಾಗಲೇ ಕನ್ನಡದಲ್ಲಿ ಪ್ರಕಟವಾಗಿರುವ ಪಠ್ಯಪುಸ್ತಕಗಳಲ್ಲಿ ಲಭ್ಯವಿರುವ ಪರಿಕಲ್ಪನೆಗಳ ಸಂಗ್ರಹಕ್ಕಾಗಿ ಸ್ನಾತಕೋತ್ತರ ಪದವೀಧರರಾದ ಮೂವರು ಸಂಶೋಧನಾ ಸಹಾಯಕರನ್ನೂ ನೇಮಿಸಿಕೊಳ್ಳಲಾಯಿತು. ಒಂದೊಂದು ಆಂಗ್ಲ ಪರಿಕಲ್ಪನೆಗೂ ಒಂದೊಂದು ಚೀಟಿಯನ್ನು ತಯಾರಿಸಿ ಅದರ ಕನ್ನಡ ಸಮಾನಾರ್ಥಕವನ್ನು ಪುಸ್ತಕದ ಹಾಗೂ ಲೇಖಕರ ಉಲ್ಲೇಖದೊಂದಿಗೆ ನಮೂದಿಸಿಕೊಳ್ಳಲಾಯಿತು. ಒಂದೇ ಆಂಗ್ಲಪದಕ್ಕೆ ಬೇರೆ ಬೇರೆ ಪಠ್ಯಪುಸ್ತಕಗಳಲ್ಲಿ ನೀಡಲಾದ ವಿವಿಧ ಕನ್ನಡ ಸಮಾನಾರ್ಥಕಗಳನ್ನು ಒಂದೇ ಚೀಟಿಯಲ್ಲಿ ನಮೂದಿಸಿಕೊಳ್ಳುವ ವಿಧಾನವನ್ನು ಅನುಸರಿಸಿ ಪದಸಂಗ್ರಹ ಮಾಡಲಾಯಿತು. ಇದರಿಂದಾಗಿ ಬೇರೆ ಬೇರೆ ಲೇಖಕರು ಒಂದೇ ಆಂಗ್ಲ ಪರಿಕಲ್ಪನೆಗೆ ನೀಡಿದ ವಿವಿಧಾರ್ಥಗಳ ಸ್ಪಷ್ಟ ಚಿತ್ರಣವು ಸಿಕ್ಕಿತಲ್ಲದೆ ಹೆಚ್ಚು ಸಮರ್ಪಕವಾದ ಸಮಾನಾರ್ಥಕ

ಪದವನ್ನು ನಿರ್ಣಯಿಸಲು ತಜ್ಞಮಂಡಳಿಗೆ ಸಹಾಯ ವಾಯಿತು. ಇನ್ನು, ಸಮಾಜ ವಿಜ್ಞಾನಗಳ ಕನ್ನಡ ಮಾಧ್ಯಮದ ಪಠ್ಯಪುಸ್ತಕಗಳಲ್ಲಿ ಲಭ್ಯವಿಲ್ಲದ ಆದರೆ ಮುಖ್ಯವಾದ ಕೆಲವು ಪದಗಳನ್ನು ವಿವಿಧ ವಿಷಯಗಳ ಆಂಗ್ಲ ಪದ ಕೋಶಗಳಿಂದ ಸಂಗ್ರಹಿಸಿ ಅವುಗಳ ಸಮಾನಾರ್ಥಕಗಳನ್ನು ನಮೂದಿಸಲಾಯಿತು. ಇದಲ್ಲದೆ ಆಂಗ್ಲ ಮತ್ತು ಕನ್ನಡ ವರ್ತಮಾನ ಪತ್ರಿಕೆಗಳಿಂದ, ವಿವಿಧ ಕನ್ನಡ ಸಂಶೋಧನಾತ್ಮಕ ಹಾಗೂ ಸಾಹಿತ್ಯಿಕ ಕೃತಿಗಳಿಂದ, ಕಿರಿಯರ ವಿಶ್ವಕೋಶ, ಜ್ಞಾನಗಂಗೋತ್ರಿ ಹಾಗೂ ವಿವಿಧ ಇಂಗ್ಲಿಷ್-ಕನ್ನಡ ಪದಕೋಶಗಳಿಂದ ಸಮಾಜ ವಿಜ್ಞಾನಗಳಿಗೆ ಸಂಬಂಧಿಸಿದ ಪರಿಕಲ್ಪನೆಗಳನ್ನಾಯ್ದು ಸಂಗ್ರಹಿಸಲಾಗಿದೆ. ಒಂದೊಂದು ವಿಷಯದಲ್ಲಿಯೂ ಹೀಗೆ ಸಂಗ್ರಹವಾದ ಪದಗಳನ್ನು ಪಟ್ಟಿಮಾಡಿ ಅವುಗಳನ್ನು ಬೆರಳಚ್ಚು ಮಾಡಿಸಿ ಅವುಗಳ ನೆರಳಚ್ಚುಗಳನ್ನು (ಜೆರಾಕ್ಸ್) ತಯಾರಿಸಿ ಅದನ್ನು ವಿಷಯಗಳ ತಜ್ಞರಿಗೆ ೧೯೯೩ರ ಆಗಸ್ಟ್ ತಿಂಗಳ ಕೊನೆಯಲ್ಲಿ ಅಂಚೆಯ ಮೂಲಕ ಕಳಿಸಿಕೊಡಲಾಯಿತು. ಅವರು ಅವುಗಳನ್ನು ಸುಮಾರು ಒಂದು ತಿಂಗಳಕಾಲ ಪರಿಶೀಲಿಸಿ ಮುಂದೆ ೧೯೯೩ರ ಅಕ್ಟೋಬರ್ ೪ ರಿಂದ ೬ರ ನಡುವೆ ನಡೆದ ತಜ್ಞರ ಸಮಿತಿ ಸಭೆಗಳಲ್ಲಿ ಚರ್ಚಿಸಿ ಸೂಕ್ತವಾದ ಕನ್ನಡ ಸಮಾನಾರ್ಥಕಗಳನ್ನು ನಿರ್ಧರಿಸಿದರು. ಮುಂದಿನ ಹಂತದಲ್ಲಿ ಪ್ರತಿಯೊಂದು ಪರಿಕಲ್ಪನೆಯನ್ನೂ ಅದರ ಅರ್ಥವಿವರಣೆಯನ್ನೂ ದಪ್ಪ ಕಾರ್ಡುಗಳಲ್ಲಿ ಬರೆದು ವಿವಿಧ ವಿಷಯಗಳ ಪದಗಳನ್ನು ಒಟ್ಟುಗೂಡಿಸಲಾಯಿತು. ಒಂದೇ ಪದವು ಎರಡು ಮೂರು ವಿಷಯಗಳಲ್ಲಿ ಬಳಕೆಯಾಗುವುದಿದ್ದರೆ ಅದರ ಅರ್ಥಗಳನ್ನು ಒಂದೇ ಕಾರ್ಡಿನಲ್ಲಿ ನಮೂದಿಸಲಾಯಿತು. ಇದು ಪುನರುಕ್ತಿಗಳನ್ನು ತಪ್ಪಿಸಿದ್ದಲ್ಲದೆ ವಿವಿಧ ವಿಷಯಗಳಲ್ಲಿ ಒಂದೇ ಪರಿಕಲ್ಪನೆಯು ಪಡೆದಿರುವ ವಿಶೇಷಾರ್ಥಗಳು ಒಂದೇ ಕಡೆ ದೊರೆಯಲು ಸಹಕಾರಿ ಯಾಯಿತು.

ಸುಮಾರು ಹನ್ನೆರಡು ಸಾವಿರದಷ್ಟು ಆಂಗ್ಲ ಪರಿಕಲ್ಪನೆಗಳಿಗೆ ಪಾರಿಭಾಷಿಕ ಅರ್ಥಗಳಿರುವ ಈ ಪದಕೋಶದಲ್ಲಿ ಅಗತ್ಯವಿರುವಲ್ಲಿ ಹೆಚ್ಚಿನ ವಿವರಣೆಯನ್ನು ಕೊಡಲಾಗಿದೆ. ಇಂಗ್ಲೀಷ್ ಕನ್ನಡ ನಿಘಂಟುಗಳಲ್ಲಿ ಸರಳ ಅರ್ಥ ಸಿಕ್ಕುವ ಸಾಮಾನ್ಯ ಪದಗಳನ್ನು ಸೇರಿಸಿಕೊಂಡಿಲ್ಲ. ಸಾಧ್ಯವಾದಷ್ಟು ಇದನ್ನು ಪರಿಕಲ್ಪನೆಗಳಿಗೆ ಅರ್ಥ ಸೂಚಿಸುವ ಪದಕೋಶವನ್ನಾಗಿ ರೂಪಿಸಲಾಗಿದೆ. ಒಟ್ಟು ಎಂಟು ಸಮಾಜ ವಿಜ್ಞಾನಗಳಿಂದ ಪರಿಕಲ್ಪನೆಗಳನ್ನಾಯ್ದುಕೊಂಡಿ ದ್ದರೂ ಈ ವಿಷಯಗಳನ್ನು ಪ್ರತ್ಯೇಕ ವಿಭಾಗಗಳನ್ನಾಗಿ ನಮೂದಿಸದೆ ಎಲ್ಲಾ ಶಬ್ದ ಗಳನ್ನು ಒಟ್ಟಾಗಿ ಆಂಗ್ಲಭಾಷೆಯ ಅಕಾರಾದಿಯಾಗಿ ಜೋಡಿಸಲಾಗಿದೆ.

ಅಂತರ್‌ಶಿಸ್ತೀಯವಾದ ಈ ಪದಕೋಶವನ್ನು ಸಿದ್ಧಪಡಿಸುವ ಯೋಜನೆಯನ್ನು ಮುಂದಿಟ್ಟಾಗ ಅದರ ಅಗತ್ಯವನ್ನು ಮನಗಂಡು ಈ ಯೋಜನೆಗೆ ಅನುದಾನವಿತ್ತ ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ನನ್ನ ಆದ್ಯ ವಂದನೆಗಳು. ಪ್ರಸ್ತುತ ಇದರ ಪ್ರಕಟಣೆಯಲ್ಲಿ ಆಸಕ್ತಿವಹಿಸಿರುವ ಸನ್ಮಾನ್ಯ ಕುಲಪತಿಗಳಾದ ಪ್ರೊ.ಎಚ್.ಜೆ.ಲಕ್ಕಪ್ಪಗೌಡರಿಗೂ,

ಕುಲಸಚಿವರಾದ ಪ್ರೊ.ಕೆ.ವಿ.ನಾರಾಯಣರವರಿಗೂ, ಅಭಿವೃದ್ಧಿ ಅಧ್ಯಯನ ವಿಭಾಗದಲ್ಲಿ ಸಮಾಜಶಾಸ್ತ್ರ ಅಧ್ಯಾಪಕರಾದ ಶ್ರೀ ಹೆಚ್.ಡಿ. ಪ್ರಶಾಂತ್‌ರವರಿಗೂ ನಾನು ಆಭಾರಿಯಾಗಿದ್ದೇನೆ. ಸಲಹಾಮಂಡಳಿಯಲ್ಲಿದ್ದು ಪರಿಕಲ್ಪನೆಗಳ ಅರ್ಥವಿವರಣೆಯಲ್ಲಿ ನೆರವಿತ್ತುದಲ್ಲದೆ ಈ ಪದಕೋಶದ ಪ್ರಕಟಣೆಯ ಅಗತ್ಯವನ್ನು ಮನಗಾಣಿಸಿದ ತಜ್ಞ ಪ್ರಾಧ್ಯಾಪಕರನ್ನು ಪ್ರೀತ್ಯಾದರಗಳಿಂದ ವಂದಿಸುತ್ತೇನೆ.

ಈ ಯೋಜನೆಯ ನಿರ್ದೇಶಕನಾಗಿ ನಾನು ಸೂಕ್ತ ಸಮಾನಾರ್ಥಕಗಳ ನಿರ್ಧಾರ, ಅರ್ಥವಿವರಣೆಗಳ ಸ್ಪಷ್ಟನೆ, ಸುದೀರ್ಘ ವಿವರಣೆಗಳನ್ನು ಸಂಕ್ಷಿಪ್ತ ರೂಪಕ್ಕಿಳಿಸುವುದು ಮುಂತಾಗಿ ದಿನಕ್ಕೆ ನಾಲ್ಕೈದು ಗಂಟೆಗಳಂತೆ ನನ್ನ ಎಂದಿನ ಅಧ್ಯಾಪನ ಕೆಲಸದ ಹೊರತಾಗಿ ನಿರಂತರವಾಗಿ ಸಂಭಾವನೆರಹಿತವಾಗಿ ದುಡಿದು ಕೇವಲ ಒಂದು ವರ್ಷದಲ್ಲಿ ಈ ಪದಕೋಶವನ್ನು ಸಿದ್ಧಪಡಿಸಿದ್ದಾಗಿದೆ. ಸಂಶೋಧನಾ ಸಹಾಯಕರಾಗಿ ದುಡಿದ ಶ್ರೀಮತಿ ಜಯಲಕ್ಷ್ಮೀ ದಾಮ್ಲೆ, ಶ್ರೀಮತಿ ವಿದ್ಯಾ ದೇಲಂಪಾಡಿ ಮತ್ತು ದಾಮೋದರ ಕಣಜಾಲು ಇವರು ತಾಳ್ಮೆಯಿಂದ ಹಾಗೂ ನಿಷ್ಠೆಯಿಂದ ತಮ್ಮ ಕಾರ್ಯವನ್ನು ನಿಭಾಯಿಸಿದ್ದಾರೆ. ಇವರಲ್ಲದೆ ಶ್ರೀ ಪ್ರಸನ್ನ ಬಡ್ಡಡ್ಕ ಮತ್ತು ಶ್ರೀಮತಿ ಶೈಲಿ ಪ್ರಭಾಕರ್ ಇವರು ಕೂಡಾ ಪರಿಕಲ್ಪನೆಗಳ ಸಂಗ್ರಹ ಕಾರ್ಯದಲ್ಲಿ ನೆರವಾಗಿದ್ದಾರೆ. ಈ ಪದಕೋಶದ ಕಂಪ್ಯೂಟರ್ ಮುದ್ರಣದಲ್ಲಿ ಉಡುಪಿಯ ಆರ್.ಆರ್.ಸಿ.ಯ ಶ್ರೀ ಎಸ್.ಎ.ಕೃಷ್ಣಯ್ಯ, ಸುಳ್ಯದ ಶ್ರೀ ಎಂ.ಬಿ. ಸದಾಶಿವ, ಶ್ರೀಮತಿ ಗಿರಿಜಾ ಮತ್ತು ಕು.ಚಂದ್ರಾವತಿ ಅಮ್ಮೆ ಇವರು ಪಾಲ್ಗೊಂಡಿದ್ದಾರೆ. ಇನ್ನು ಸಮಾನಾರ್ಥಕಗಳ ತಿದ್ದುವಿಕೆ, ಪುನಃ ಪುನಃ ಅಕಾರಾದಿಯಾಗಿ ಜೋಡಿಸುವಿಕೆ, ಕಂಪ್ಯೂಟರ್ ಮುದ್ರಣ ಹಾಗೂ ಅಕ್ಷರ ತಿದ್ದುವಿಕೆ (Spelling correction) ಮುಂತಾಗಿ ವಿವಿಧ ಕೆಲಸಗಳಲ್ಲಿ ನನ್ನ ಪತ್ನಿ ಶ್ರೀಮತಿ ಜಯಲಕ್ಷ್ಮೀ ದಾಮ್ಲೆಯವರು ಯೋಜನಾವಧಿ ಮುಗಿದ ಬಳಿಕವೂ ಅಪಾರ ಶ್ರಮವಹಿಸಿ ಸಹಕರಿಸುವುದಲ್ಲವಾಗಿದ್ದರೆ ಈ ಪದಕೋಶದ ರಚನೆಯು ಇಷ್ಟು ವ್ಯವಸ್ಥಿತವಾಗಿ ಕೈಗೂಡುತ್ತಿರಲಿಲ್ಲ. ನನ್ನ ಮಕ್ಕಳಾದ ಸಮೀರ ಮತ್ತು ಅಕ್ಷರ ಕೂಡ ಈ ಕಾರ್ಯದ ಕ್ಷಿಪ್ರ ಪೂರೈಕೆಯಲ್ಲಿ ಸಹಕರಿಸಿದ್ದಾರೆ. ಅಂತೆಯೇ ನಮ್ಮ ಸುಳ್ಯದ ಸ್ನೇಹ ಪ್ರಾಥಮಿಕ ಶಾಲೆಯ ಶಿಕ್ಷಕ-ಶಿಕ್ಷಕಿಯರು ಹಸ್ತಪ್ರತಿ ನಿರ್ಮಾಣ ಹಾಗೂ ಪರಿಕಲ್ಪನೆಗಳನ್ನು ಬರೆದ ಕಾರ್ಡುಗಳ ತುಲನೆ ಮತ್ತು ಜೋಡಣೆಯಲ್ಲಿ ನೆರವಾಗಿದ್ದಾರೆ. ಇವರೆಲ್ಲರಿಗೂ ನಾನು ವೈಯಕ್ತಿಕವಾಗಿ ಅತ್ಯಂತ ಆಭಾರಿಯಾಗಿದ್ದೇನೆ. ಈ ಪದಕೋಶವು ಸಮಾಜ ವಿಜ್ಞಾನಗಳ ವಿದ್ಯಾರ್ಥಿ ಶಿಕ್ಷಕರ ಅಧ್ಯಯನ ಕಾರ್ಯದಲ್ಲಿ ನೆರವಿಗೆ ಒದಗಿತೆಂದಾದರೆ ಆಗ ಇದಕ್ಕಾಗಿ ದುಡಿದವರ ಶ್ರಮ ಸಾರ್ಥಕವೆನಿಸುವುದು.

ಡಾ.ಚಂದ್ರಶೇಖರ ದಾಮ್ಲೆ

ಉಪಯೋಗಿಸುವವರ ಗಮನಕ್ಕೆ

ಈ ಪದಕೋಶದಲ್ಲಿ ಪಾರಿಭಾಷಿಕ ಪದಗಳನ್ನು ಇಂಗ್ಲಿಷ್ ಭಾಷೆಯ A to Z ಅಕ್ಷರ ಮಾಲೆಯ ಪ್ರಕಾರ ಜೋಡಿಸಲಾಗಿದೆ. ಆದರೆ ಅನೇಕ ಪರಿಕಲ್ಪನೆಗಳು ಎರಡು ಅಥವಾ ಅದಕ್ಕಿಂತ ಹೆಚ್ಚು ಪದಗಳನ್ನು ಹೊಂದಿರುವುದರಿಂದ ಹಾಗೂ ಪದಗಳೆಡೆಯಲ್ಲಿ of, in, at ಮುಂತಾದ ಉಪಸರ್ಗ ಪದಗಳಿರುವುದರಿಂದ ಒಂದು ವಿಶಿಷ್ಟ ವಿಧಾನವನ್ನು ಅನುಸರಿಸ ಲಾಗಿದೆ. ಅಂದರೆ ಒಂದು ಮೂಲ ಪದದ ಜೊತೆಯಲ್ಲಿ ಬರುವ ಎಲ್ಲಾ ಪದಸಮುಚ್ಚಯ ಗಳನ್ನು ನಮೂದಿಸಿದ ಬಳಿಕ ಆ ಮೂಲಪದದೊಂದಿಗೆ ಇತರ ಅಕ್ಷರಗಳು ಸೇರಿ ವಿಸ್ತಾರಗೊಳ್ಳುವ ಪರಿಕಲ್ಪನೆಗಳನ್ನು ಸಂಕಲಿಸಲಾಗಿದೆ. ಉದಾ : abstract ಪದದೊಂದಿಗೆ ಬರುವ ಎಲ್ಲಾ ಪರಿಕಲ್ಪನೆಗಳು, ಅಂದರೆ abstract thought ವರೆಗೆ ಪಟ್ಟಿ ಮಾಡಿದ ಬಳಿಕ abstraction ಪದವನ್ನು ನಮೂದಿಸಲಾಗಿದೆ. ಅದೇ ರೀತಿ age structure ಪರಿ ಕಲ್ಪನೆಯ ಬಳಿಕ ageism ಪದ ಬಂದಿದೆ; animal worshipನ ನಂತರ animalism; folk urban continuumನ ನಂತರ folklore genre ಹೀಗೆ ಪದಜೋಡಣೆ ಮಾಡಲಾಗಿದೆ. ಈ ವಿಧಾನವನ್ನು George A. Theodorsan ಹಾಗೂ Achilles G. Theodorsan ರವರ Modern Dictionary of sociology ಕೃತಿಯಲ್ಲಿ ಅನುಸರಿಸಲಾಗಿದೆ. ಸಂಯುಕ್ತ ಶಬ್ದಗಳುಳ್ಳ ಪರಿಕಲ್ಪನೆಗಳ ಕ್ಷಿಪ್ರ ಗುರುತಿಸುವಿಕೆಗೆ ಈ ವಿಧಾನವು ಉಪಯುಕ್ತವಾಗಿರು ವುದರಿಂದ ಇಲ್ಲಿಯೂ ಅದೇ ವಿಧಾನವನ್ನು ಬಳಸಿದ್ದೇವೆ. ಈ ಪದಕೋಶವನ್ನು ಬಳಸು ವವರು ಈ ಪದಜೋಡಣೆಯ ವಿಧಾನವನ್ನು ಗಮನದಲ್ಲಿರಿಸಿಕೊಂಡು ಪಾರಿಭಾಷಿಕ ಅರ್ಥ ಗಳನ್ನು ಹುಡುಕಬೇಕೆಂದು ವಿನಂತಿ.

ಸಂಪಾದಕರು

ತಜ್ಞ ಸಲಹೆಗಾರರು

ಸಮಾಜಶಾಸ್ತ್ರ	:	ಪ್ರೊ. ಆರ್.ಇಂದಿರಾ, ಮೈಸೂರು
		ಪ್ರೊ. ಎಚ್.ವಿ.ನಾಗೇಶ್, ಧಾರವಾಡ
		ಪ್ರೊ. ಚ.ವಿ.ಮುಳಗುಂದ, ಧಾರವಾಡ
ಇತಿಹಾಸ	:	ಪ್ರೊ. ಅ.ಸುಂದರ, ಧಾರವಾಡ
		ಪ್ರೊ. ಎಸ್.ರಾಜಶೇಖರ, ಧಾರವಾಡ
ಅರ್ಥಶಾಸ್ತ್ರ	:	ಪ್ರೊ. ಸಿ.ಕೆ.ರೇಣುಕಾರ್ಯ, ಮೈಸೂರು
		ಪ್ರೊ. ಜಿ.ವಿ.ಜೋಶಿ, ಮಂಗಳಗಂಗೋತ್ರಿ
		ಪ್ರೊ. ಟಿ.ಆರ್.ಚಂದ್ರಶೇಖರ, ಹಂಪಿ
ರಾಜ್ಯಶಾಸ್ತ್ರ	:	ಪ್ರೊ. ಎಂ.ಧ್ರುವನಾರಾಯಣ, ಬೆಂಗಳೂರು
		ಪ್ರೊ. ಬಿ.ಆರ್.ಕೊಂಡ, ಬೀದರ್
ಮಾನವಶಾಸ್ತ್ರ	:	ಪ್ರೊ. ಕೆ.ಜಿ.ಗುರುಮೂರ್ತಿ, ಧಾರವಾಡ
		ಪ್ರೊ. ಎಸ್.ಜಿ.ಮೊರಬ್, ಮೈಸೂರು
		ಪ್ರೊ. ಎನ್.ಕೆ.ಕಡತೋಟದ, ಬೆಂಗಳೂರು
ಮನಶ್ಶಾಸ್ತ್ರ	:	ಪ್ರೊ. ಎ.ಎಸ್.ಧರಣೇಂದ್ರಯ್ಯ, ಧಾರವಾಡ
		ಪ್ರೊ. ಬಿ. ಕೃಷ್ಣಮೂರ್ತಿ, ಗುಲಬರ್ಗಾ
ಸಮಾಜಕಾರ್ಯ	:	ಪ್ರೊ. ಎಚ್.ಎಂ.ಮರುಳಸಿದ್ದಯ್ಯ, ಬೆಂಗಳೂರು
		ಪ್ರೊ. ಎಸ್.ಆರ್.ಶಾಸ್ತ್ರಿ, ಗುಲಬರ್ಗಾ
ಜನಪದ ವಿಜ್ಞಾನ	:	ಪ್ರೊ. ಪುರುಷೋತ್ತಮ ಬಿಳಿಮಲೆ, ದೆಹಲಿ
		ಪ್ರೊ. ಅಂಬಳಿಕೆ ಹಿರಿಯಣ್ಣ, ಮೈಸೂರು
		ಪ್ರೊ. ವೀರಣ್ಣ ದಂಡೆ, ಗುಲಬರ್ಗಾ
		ಪ್ರೊ. ಎ.ವಿ.ನಾವಡ, ಹಂಪಿ
ಸಂಶೋಧನ ಸಹಾಯಕರು	:	ಶ್ರೀಮತಿ ಜಯಲಕ್ಷ್ಮೀ ದಾಮ್ಲೆ, ಸುಳ್ಯ
		ಶ್ರೀಮತಿ ವಿದ್ಯಾ, ದೇಲಂಪಾಡಿ
		ಶ್ರೀ ಕೆ.ದಾಮೋದರ, ಕಣಜಾಲು

A

abandoned self: ತ್ಯಜಿತ ಸ್ವಪ್ರಜ್ಞೆ, ತ್ಯಜಿತ ವ್ಯಕ್ತಿತ್ವ: ತನ್ನ ಸ್ವಪ್ರಜ್ಞೆಯೊಳಗೇ ಯಾರಾದರೊಬ್ಬ ಆದರ್ಶ ವ್ಯಕ್ತಿಯ ವ್ಯಕ್ತಿತ್ವವನ್ನು ಅಳವಡಿಸಿಕೊಂಡು ಕಾಲಾಂತರದಲ್ಲಿ ಅದನ್ನು ತ್ಯಜಿಸುವುದು.

abandonment: ಪರಿತ್ಯಾಗ; ತ್ಯಜಿಸುವಿಕೆ. ಉದಾ: ಆಹಾರ ಸಂಗ್ರಹಣೆಯ ಹಂತದಲ್ಲಿರುವ ಅಲೆಮಾರಿ ಸಮುದಾಯದವರು ತಮ್ಮಲ್ಲಿನ ವೃದ್ಧರು, ಅಶಕ್ತರು, ಅನಾರೋಗ್ಯ ಪೀಡಿತರು ಮೊದಲಾದವರನ್ನು ತ್ಯಜಿಸಿ (ಸಾಯಲು ಬಿಟ್ಟು) ಮುಂದೆ ಹೋಗುವುದು.

abatement: ವಿನಾಯಿತಿ; ಕಡಿತ.

abbreviation: ಸಂಕ್ಷಿಪ್ತ ಚಿಹ್ನೆ. ಒಂದು ಶಬ್ದ, ಪದಪುಂಜ ಅಥವಾ ಹೆಸರನ್ನು ಸಂಕೇತಿಸುವ ಸಂಕ್ಷಿಪ್ತ ರೂಪ. ಉದಾ: ಕ.ಸಾ.ಪ. ಕನ್ನಡ ಸಾಹಿತ್ಯ ಪರಿಷತ್ತು; U.N.O. United Nations Organization.

abdication: ಅಧಿಕಾರ ತ್ಯಾಗ. ರಾಜತ್ವ, ಅಧಿಕಾರ, ಉನ್ನತ ಪದವಿ ಅಥವಾ ಜವಾಬ್ದಾರಿಯನ್ನು ಔಪಚಾರಿಕವಾಗಿ ತ್ಯಜಿಸುವುದು.

abdominal dance: ಕಿಬ್ಬೊಟ್ಟೆಯ ಕುಣಿತ. ಫಲಶಕ್ತಿಯನ್ನು ಪಡೆಯಲು ಪೆಲಿವಿಕ್ ಪ್ರಾಂತದ ಸ್ತ್ರೀಯರು ಮಾಡುವ ಒಂದು ಬಗೆಯ ನೃತ್ಯ.

abduction: ಅಪಹರಣ. ವ್ಯಕ್ತಿಯನ್ನು ಬಲಾತ್ಕಾರವಾಗಿ ಅಪಹರಿಸುವುದು. ಉದಾ: ವಿವಾಹವಾಗುವ ಉದ್ದೇಶಕ್ಕೆ ಹೆಣ್ಣನ್ನು ಹೊತ್ತೊಯ್ಯುವುದು.

aberrant behaviour: ಅಪವರ್ತನೆ. ನೋಡಿ : deviance.

aberrant personality: ವಿಪಥಗಾಮಿ ವ್ಯಕ್ತಿತ್ವ.

aberration: ಅಪಸರಣ. ರಚನೆಯಲ್ಲಿಯೂ ಕಾರ್ಯದಲ್ಲಿಯೂ ನಿಯಮ ತಪ್ಪುವುದು.

abetting: ಕುಮ್ಮಕ್ಕು ನೀಡುವಿಕೆ; ದುಷ್ಟಾನುಕೂಲವಾಗುವಿಕೆ.

abeyance: ಅಮಾನತ್ತಿನಲ್ಲಿ ಇಡುವುದು. ತಡೆಹಿಡಿದಿರುವಿಕೆ. ಉದಾ: ಆಜ್ಞೆಗಳ ಅನುಷ್ಠಾನವನ್ನು ತಡೆಹಿಡಿಯುವುದು

abnormal action: ವಿಕೃತ ಕ್ರಿಯೆ.

abnormal behaviour: ಅಸಂಗತ ನಡತೆ; ಅಪಸಾಮಾನ್ಯ ವರ್ತನೆ.

abnormal forgetting: ವಿಪರೀತ ವಿಸ್ಮೃತಿ.

abnormal mental process: ವಿಕೃತ ಮನೋಪ್ರಕ್ರಿಯೆ.

abnormal mind: ವಿಕೃತ ಮನಸ್ಸು.

abnormal personality: ಅಪ ಸಾಮಾನ್ಯ ವ್ಯಕ್ತಿತ್ವ.

abnormal psychology: ಅಪಸಾ ಮಾನ್ಯ ಮನೋವಿಜ್ಞಾನ. ವ್ಯಕ್ತಿಯ ಅಸಂಗತ ನಡವಳಿಕೆಗಳ ಬಗ್ಗೆ ಅಭ್ಯಸಿಸುವ ಮನಶ್ಶಾಸ್ತ್ರದ ಒಂದು ವಿಭಾಗ.

abnormality: ವಿಕೃತತೆ; ಅಪಸಾಮಾ ನ್ಯತೆ.

aboriginal tribe: ಆದಿವಾಸಿ ಬುಡಕಟ್ಟು. ಉದಾ: ಚೆಂಚುಗಳು (ಆಂಧ್ರ), ಕುರುಬರು, ಹಾಲಕ್ಕಿಗಳು (ಕರ್ನಾಟಕ).

abortion: ಗರ್ಭಪಾತ. ೧. ಹೆಣ್ಣಿನ

ಧಾರಣಾ ಸಾಮರ್ಥ್ಯದ ಕೊರತೆಯಿಂದ ಸಂಭವಿಸುವ ಗರ್ಭಸ್ರಾವ. ೨. ಔಷಧ ಅಥವಾ ಇನ್ನಿತರ ಕ್ರಮಗಳಿಂದ ಗರ್ಭವನ್ನು ತೆಗೆಯುವುದು.

abracadabra: ತಾಂತ್ರಿಕ ಮಂತ್ರ. ವ್ಯಾಧಿ ಅಥವಾ ದುರಾದೃಷ್ಟವನ್ನು ನಿವಾರಿಸಲು ಪಠಿಸುವ ಮಾಂತ್ರಿಕ ಶಬ್ದಗಳು.

abreaction: ಭಾವ ವಿಮುಕ್ತಿ. ಪ್ರಜ್ಞಾಪೂರ್ವಕವಾಗಿ ಅಥವಾ ಅಪ್ರಜ್ಞೆಯಿಂದ ಮನಸ್ಸಿನೊಳಗೆ ತುಂಬಿರುವ ಭಾವ ತುಮುಲವನ್ನು ಮಾನಸಿಕವಾಗಿ ಶಬ್ದೋಚ್ಚಾರಗಳಿಂದ ಅಥವಾ ಇನ್ನಿತರ ಕ್ರಿಯೆಗಳಿಂದ ಬಿಡುಗಡೆಗೊಳಿಸುವಿಕೆ.

absent mindedness: ವಿಮನಸ್ಕತೆ.

absentee landlord: ಅನುಪಸ್ಥಿತ ಭೂಮಾಲಕ. ತನ್ನ ಒಡೆತನದ ಭೂಮಿಯಲ್ಲಿ ಮನೆ ಮಾಡಿರದೆ ಕೂಲಿಯಾಳುಗಳಿಂದ ಕೃಷಿ ಮಾಡಿಸುತ್ತಾ ನಗರಗಳಲ್ಲಿ ಅಥವಾ ಹುಟ್ಟೂರಲ್ಲಿ ವಾಸ್ತವ್ಯವಿರುವ ಭೂಮಾಲಕ.

absentee voting: ಅನುಪಸ್ಥಿತ ಮತದಾನ. ಸರಕಾರೀ ನೌಕರರು ಅರ್ಹ ಮತದಾರರಾಗಿದ್ದು ಚುನಾವಣೆಯಲ್ಲಿ ನಿಗದಿಪಡಿಸಿದ ಮತಕೇಂದ್ರದಲ್ಲಿ ತಮ್ಮ ಮತ ಚಲಾಯಿಸಲು ಸಾಧ್ಯವಾಗದೇ ಇದ್ದಾಗ ಅಂಚೆ ಮೂಲಕ ಅಥವಾ ತಾವು ಚುನಾವಣಾ ಕಾರ್ಯ ನಿರ್ವಹಿಸುವ ಕೇಂದ್ರದಲ್ಲಿ ನೀಡುವ ಮತದಾನ.

absenteeism: ಗೈರುಹಾಜರಾತಿತ್ವ. ನಿರಂತರವಾಗಿ ಒಬ್ಬ ವ್ಯಕ್ತಿ ಅಥವಾ ಶ್ರಮಿಕ ಸಮೂಹವು ಕೆಲಸಕ್ಕೆ ಗೈರುಹಾಜರಾಗುವ ಪ್ರಕ್ರಿಯೆ.

absolute: ನಿರಪೇಕ್ಷ. ಗರಿಷ್ಠ; ಸಂಪೂರ್ಣ; ನಿಖರ; ನಿರಂಕುಶ.

absolute authority: ನಿರಂಕುಶ ಅಧಿಕಾರ; ಪ್ರಶ್ನಾತೀತವಾದ ಅಧಿಕಾರ.

absolute date : ನಿಖರ ಕಾಲ.

absolute divorce: ಪೂರ್ಣ ವಿಚ್ಛೇದನ. ನ್ಯಾಯಾಲಯದ ಆಜ್ಞೆಯ ಮೂಲಕ ಮುಂದೆ ಯಾವುದೇ ಹಕ್ಕು ಮತ್ತು ಹೊಣೆಗಾರಿಕೆಗಳು ಉಳಿಯದಂತೆ ನೀಡಲಾಗುವ ವಿವಾಹ ರದ್ದತಿ.

absolute idealism: ನಿರಪೇಕ್ಷ ಆದರ್ಶವಾದ.

absolute majority: ನಿಚ್ಚಳ ಬಹು ಮತ.

absolute monarchy: ನಿರಂಕುಶ ಅರಸೊತ್ತಿಗೆ. ಸರಕಾರದ ಎಲ್ಲಾ ಅಧಿಕಾರಗಳೂ ಅರಸನಲ್ಲಿ ಕೇಂದ್ರೀಕೃತವಾಗಿದ್ದು ಆತನು ಪ್ರಶ್ನಾತೀತನಾಗಿರುವುದು.

absolute personal equation: ನಿರಪೇಕ್ಷ ವೈಯಕ್ತಿಕ ಸಮೀಕರಣ.

absolute poverty: ಪೂರ್ಣ ಬಡತನ.

absolute power: ಪರಮಾಧಿಕಾರ.

absolute sovereignty: ಪರಮ ಸಾರ್ವಭೌಮತ್ವ.

absolute surplus value: ಪೂರ್ಣ ಮಿಗುತಾಯ ಮೌಲ್ಯ.

absolute value of a number: ಸಂಖ್ಯೆಯ ನಿಚ್ಚಳ ಮೌಲ್ಯ.

absolutism: ನಿರಂಕುಶತ್ವ. ೧೭-೧೮ನೇ ಶತಮಾನದ ಯುರೋಪಿನಲ್ಲಿ ರಾಜರ ದೈವೀ ಹಕ್ಕುಗಳನ್ನು ಪ್ರತಿಪಾದಿಸುವ ಮೂಲಕ ಸ್ಥಾಪಿಸಲಾಗಿದ್ದ ನಿರಂಕುಶ ಪ್ರಭುತ್ವ.

absorbing hobbies: ತನ್ಮಯಶೀಲ ಹವ್ಯಾಸಗಳು.

absorption: ಮಗ್ನತೆ; ಹೀರಿಕೆ. ಭಾಷಾ ಶಾಸ್ತ್ರದಲ್ಲಿ ಒಂದು ಪದ ಅಥವಾ ಶಬ್ದದ ಉಚ್ಚಾರಣೆಯನ್ನು ತಡೆಹಿಡಿಯುವ ಹಾಗೂ ಆ ಶಬ್ದದ ನಂತರ ಬರುವ ಪದದೊಂದಿಗೆ ಲೀನಗೊಳಿಸುವಿಕೆ.

absorption of tradition: ಸಂಪ್ರದಾಯ ತನ್ಮಯತೆ.

abstinence: ವರ್ಜನ ಶೀಲತೆ. ಉದಾ: ಮದ್ಯ, ರತಿ ಇತ್ಯಾದಿ ಭೋಗಗಳ ವರ್ಜನೆ.

abstract: ಅಮೂರ್ತ. ಮೂರ್ತ ಸ್ವರೂಪವಿಲ್ಲದಿದ್ದಾಗ್ಯೂ ಗ್ರಹಿಸಿದ ಸಂಗತಿ. ಉದಾ: ದೇವರು, ಸತ್ಯ ಇತ್ಯಾದಿ.

abstract collectivity: ಅಮೂರ್ತ ಸಮಷ್ಟಿ. ಸ್ಪಷ್ಟ ಗೋಚರಕ್ಕೆ ತೋರಿಸಲಾಗದಿದ್ದರೂ ಸೈದ್ಧಾಂತಿಕವಾಗಿ ಅಥವಾ ಪರಿಕಲ್ಪಿತ ವ್ಯಾಖ್ಯೆಯ ಮೂಲಕ ವಿವರಿಸಬಹುದಾದ ಸಮೂಹ. ಉದಾ: ಸಮಾಜ.

abstract concept: ಅಮೂರ್ತ ಪರಿಕಲ್ಪನೆ.

abstract empiricism: ಅಮೂರ್ತ ಅನುಭವಾತ್ಮಕತೆ.

abstract form: ಅಮೂರ್ತ ರೂಪ. ನಿರ್ದಿಷ್ಟ ಗೋಚರವಲ್ಲದ ಸ್ವರೂಪ.

abstract ideals: ಅಮೂರ್ತ ಆದರ್ಶಗಳು.

abstract imagination: ಅಮೂರ್ತ ಕಲ್ಪನೆ.

abstract intelligence: ಅಮೂರ್ತ ಬುದ್ಧಿಶಕ್ತಿ.

abstract labour: ಅಮೂರ್ತಶ್ರಮ; ಹೇರಳ ಶ್ರಮ.

abstract reasoning: ಅಮೂರ್ತ ವಿವೇಚನೆ.

abstract social class: ಅಮೂರ್ತ ಸಾಮಾಜಿಕ ವರ್ಗ. ವ್ಯವಸ್ಥಿತ ಸಂಘಟನೆಯಾಗಿ ರೂಪುಗೊಳ್ಳದ, ಆದರೆ ತಮ್ಮ ಸ್ಥಾನಮಾನದ ಪ್ರಜ್ಞೆ ಇದ್ದು ಹೆಚ್ಚು ಕಡಿಮೆ ಸಮಾನ ಪರಿಸ್ಥಿತಿಗಳಲ್ಲಿರುವ ಸಾಮಾಜಿಕ ವರ್ಗ. ಉದಾ: ಗೃಹಿಣಿಯರು, ಯುವ ಜನಾಂಗ, ಕೃಷಿ-ಕಾರ್ಮಿಕರು ಇತ್ಯಾದಿ.

abstract stage: ಅಮೂರ್ತ ಹಂತ. ಗುಣಲಕ್ಷಣಗಳನ್ನು ನಿರ್ದಿಷ್ಟವಾಗಿ ವಿವರಿಸಲಾಗದಂತಹ ಸೈದ್ಧಾಂತಿಕ ಅಥವಾ ಊಹಾತ್ಮಕ ಹಂತ.

abstract theory: ಅಮೂರ್ತ ಸಿದ್ಧಾಂತ.

abstract thought: ಅಮೂರ್ತ ಚಿಂತನೆ.

abstraction: ಅಮೂರ್ತೀಕರಣ; ಭಾವಗ್ರಹಣ. ಯಾವುದೇ ಮೂರ್ತ ವಸ್ತು ಅಥವಾ ಸಂದರ್ಭಗಳ ಆಳವಾದ ಪರಿಶೀಲನೆಯಿಂದ ಅವುಗಳ ಮೂಲಭೂತ ಲಕ್ಷಣ ಅಥವಾ ಗುಣಗಳನ್ನು ಪ್ರತ್ಯೇಕಿಸಿ ಗ್ರಹಿಸುವ ಪ್ರಕ್ರಿಯೆ. ಇದು ಅನೇಕ ವಸ್ತು ಅಥವಾ ವಿಷಯಗಳಲ್ಲಿರುವ ಸಮಾನ ಲಕ್ಷಣಗಳನ್ನು ಗುರುತಿಸಲು ಸಹಾಯಕವಾಗುವುದಲ್ಲದೆ ಸಾಮಾಜಿಕ ಸಂಶೋಧನೆಗಾಗಿ ಅವುಗಳ ವರ್ಗೀಕರಣ ಹಾಗೂ ವಿಶ್ಲೇಷಣೆಗೆ ಅನುವಾಗುತ್ತದೆ.

abulia, aboulia: ಅನಿಚ್ಛೆ. ಸ್ವಂತವಾಗಿ ನಿರ್ಧರಿಸುವ ಅಥವಾ ಕೆಲಸ ಮಾಡುವ ಸಾಮರ್ಥ್ಯ ಹೀನತೆ.

abweb: ವಗ್ಗೆರೆ ಕರಗಳು. ಜಮೀನುದಾರರು ಮತ್ತು ರಾಜಕೀಯ ಅಧಿಕಾರಿಗಳು ವಿಧಿಸುತ್ತಿದ್ದ ಕರಗಳು.

accelerated group: ತ್ವರಿತ ಸಮೂಹ. ಸರ್ವ ಸಾಮಾನ್ಯವಾದ ಅಥವಾ ನಿರೀಕ್ಷಿತವಾದ ಸಂಭವನೀಯತೆಗಿಂತ ವೇಗವಾಗಿ ಗುರಿ ಸಾಧಿಸಲು ತೊಡಗಿರುವ ಗುಂಪು.

acceleration co-efficient: ವೇಗೋತ್ಕರ್ಷ ಗುಣಾಂಕ. ಅನುಭೋಗದಲ್ಲಿಯ ನಿವ್ವಳ ಬದಲಾವಣೆಯಿಂದ ಪ್ರೇರಿತ ಹೂಟೆಗಳಲ್ಲಿ ಉಂಟಾಗುವ ಬದಲಾವಣೆಯ ಮಟ್ಟವನ್ನು ನಿರ್ಧರಿಸುವ ಅಂಶ.

acceleration of social change: ಸಾಮಾಜಿಕ ಬದಲಾವಣೆಯ ವೇಗೋತ್ಕರ್ಷ.

accelerator multiplier model: ವೇಗವರ್ಧಕ ಗುಣಕ ಮಾದರಿ. ವೇಗ ವರ್ಧಕ ಮತ್ತು ಗುಣಕದ ಪರಿಣಾಮಗಳನ್ನು ಒಟ್ಟುಗೂಡಿಸುವ ಆರ್ಥಿಕ ಬೆಳವಣಿಗೆಯ ಸಿದ್ಧಾಂತ.

accelerator theory: ವೇಗವರ್ಧಕ ಸಿದ್ಧಾಂತ. ಅನುಭೋಗದಲ್ಲಿ ಉಂಟಾಗುವ ಬದಲಾವಣೆಯಿಂದ ಹೂಡಿಕೆಯ ಮೇಲಾಗುವ ಪರಿಣಾಮವನ್ನು ವೇಗವರ್ಧಕ ಸಿದ್ಧಾಂತವು ವಿಶ್ಲೇಷಿಸುತ್ತದೆ.

accession: ಪಟ್ಟಕ್ಕೆ ಬರುವುದು; ಪದವಿಗೆ ಬರುವುದು; ಗೆದ್ದ ಪ್ರದೇಶದ ಸೇರ್ಪಡೆ.

accessory part: ಪೂರಕ ಭಾಗ. ಯಾವುದೇ ಪ್ರಕ್ರಿಯೆಗೆ ಸಹಕಾರಿಯಾಗುವ ಪೂರಕ ಅಂಶ. ಇದು ನೇರ ಪರಿಶೀಲನೆಗೆ ಕಂಡುಬರದಿರಲೂಬಹುದು. ಉದಾ: ಒಂದು ಅಪರಾಧ ಮಾಡಲು ಒಬ್ಬ ಇನ್ನೊಬ್ಬನನ್ನು ಪ್ರಚೋದಿಸಿ ಅಪರಾಧ ನಡೆಯುವ ಹೊತ್ತಿನಲ್ಲಿ ಅನುಪಸ್ಥಿತನಾಗಿರುವುದು. ಆತ ಒಟ್ಟು ಪ್ರಕರಣದಲ್ಲಿ ಪೂರಕ ಭಾಗವಾಗಿರುತ್ತಾನೆ.

accident proneness: ಅಪಘಾತ ಶೀಲತೆ; ಅಪಘಾತ ಪ್ರವಣತೆ.

accidental criminal: ಆಕಸ್ಮಿಕ ಅಪರಾಧಿ. ಮೂಲಭೂತವಾಗಿ ಅಪರಾಧ ಪ್ರವೃತ್ತಿ ಇಲ್ಲದಿದ್ದರೂ ಸಾಂದರ್ಭಿಕವಾಗಿ ಅಪರಾಧ ಘಟಿಸಿ ತಪ್ಪಿತಸ್ಥನಾದವನು.

accidental error: ಆಕಸ್ಮಿಕ ತಪ್ಪು. ಅನುದ್ದೇಶಿತವಾಗಿ, ಆಕಸ್ಮಿಕವಾಗಿ ಘಟಿಸಿದ ತಪ್ಪು.

accidental sample: ಆಕಸ್ಮಿಕ ಮಾದರಿ. ಒಟ್ಟು ಜನಸಂಖ್ಯೆಯನ್ನು ಪ್ರತಿನಿಧಿಸುವುದೇ ಇಲ್ಲವೇ ಎಂಬುದನ್ನು ಪರಿಗಣಿಸದೆ ಮಾಹಿತಿ ಸಂಗ್ರಹಕ್ಕಾಗಿ ಸಂದರ್ಶಿಸುವ ಸುಲಭ ಲಭ್ಯವಾದ ಹಾಗೂ ಅನುಕೂಲವಾದ ಮಾದರಿ.

accidentalism: ಆಕಸ್ಮಿಕತಾವಾದ. ಉದ್ದೇಶಿತವಲ್ಲದ, ಮುನ್ಸೂಚನೆ ದೊರೆಯದೆ ಘಟನೆಗಳು ನಡೆಯುತ್ತವೆ ಎಂಬ ವಾದ.

acclimatization: ಹವಾಮಾನ ಹೊಂದಿಕೆ. ಜೀವಿಗಳು ಬದಲಾದ ಅಥವಾ ಹೊಸ ಹವಾಮಾನಗಳಿಗೆ ತಮ್ಮನ್ನು ಒಗ್ಗಿಸಿಕೊಳ್ಳುವ ಪ್ರಕ್ರಿಯೆ.

accommodating term: ಅನುಕೂಲಕರವಾದ ಷರತ್ತು.

accommodation: ಸಮಂಜನ. ತಮ್ಮ ಪ್ರತ್ಯೇಕತೆಯನ್ನು ಉಳಿಸಿಕೊಂಡು ಘರ್ಷಣೆಯನ್ನು ತಡೆಗಟ್ಟಲು ಸಮೂಹಗಳು ಪರ

ಸ್ಪರವಾಗಿ ಮಾಡಿಕೊಳ್ಳುವ ತಾತ್ಕಾಲಿಕ ಅಥವಾ ಶಾಶ್ವತ ಹೊಂದಾಣಿಕೆ. ಇದರಿಂದ ಉಭಯ ಪಕ್ಷಗಳು ಆರ್ಥಿಕ, ಸಾಮಾಜಿಕ ಅಥವಾ ಮಾನಸಿಕ ಸ್ವರೂಪದ ಪರಿಹಾರಾತ್ಮಕ ಲಾಭಗಳನ್ನು ಗಳಿಸುತ್ತವೆ.

accommodation of sensation: ಸಂವೇದನಾ ಸಮಂಜನ.

accomplishment age: ಕಾರ್ಯಸಿದ್ಧಿಯ ವಯಸ್ಸು. ಬದುಕಿನ ಪ್ರಮುಖ ಗುರಿಗಳನ್ನು ಸಾಧಿಸಲು ಸಾಮಾನ್ಯವಾಗಿ ನಿರ್ದಿಷ್ಟಪಡಿಸಲಾದ ವಯೋಮಿತಿ. ಉದಾ: ಪ್ರೌಢ ಶಾಲಾ ಶಿಕ್ಷಣವನ್ನು ೧೬ ವರ್ಷಗಳೊಳಗೆ ಪೂರೈಸಬೇಕು.

accomplishment quotient: ಕಾರ್ಯಸಿದ್ಧಿಯ ಲಬ್ಧ.

accountant general: ಮಹಾ ಲೆಕ್ಕಾಧಿಕಾರಿ.

accounting rate of return: ಪ್ರತಿ ಫಲ ಲೆಕ್ಕಾಚಾರ ದರ.

accounting view: ಗಣನೆಯ ದೃಷ್ಟಿಕೋನ. ಉತ್ಪನ್ನ-ವೆಚ್ಚ ಸಂಬಂಧದ ವಿಶ್ಲೇಷಣೆಯನ್ನು ಮಾಡುವುದಕ್ಕೆ ಬಳಸಲಾದ ಒಂದು ವಿಧಾನ. ಗಣನೆಯ ದೃಷ್ಟಿಕೋನದಲ್ಲಿ ಪರಿಗಣನೆಗೆ ತೆಗೆದುಕೊಳ್ಳುವ ಎಲ್ಲಾ ಘಟಕಗಳ ಸೀಮಾಂತ ವೆಚ್ಚ ಮತ್ತು ಸರಾಸರಿ ವ್ಯತ್ಯಾಸಾತ್ಮಕ ವೆಚ್ಚ ಒಂದೇ ಆಗಿರುತ್ತದೆ.

accredited: ಅರ್ಹತೆಯ ಆಧಾರದಲ್ಲಿ ಕಾನೂನುಬದ್ಧವಾಗಿ ಅಂಗೀಕೃತವಾದ.

accrual accounting system: ಜಮಾಬಂದಿ ಪದ್ಧತಿ; ಕೂಡಿಕೆ ಲೆಕ್ಕ.

accrued expenses: ಸೇವಾವೆಚ್ಚಗಳು. ಕಂಪೆನಿಯಲ್ಲಿ ಹೊಣೆಗಾರಿಕೆಯೆಂದು ಪರಿಗಣಿಸಲ್ಪಟ್ಟ ಸೇವೆಗಳ ವೆಚ್ಚ.

acculturation: ಸಂಸ್ಕೃತೀಕರಣ; ಸಂಸ್ಕೃತಿಗ್ರಹಣ. ವಿವಿಧ ಸಂಸ್ಕೃತಿಗಳ ನೇರ ಸಂಪರ್ಕದ ಫಲವಾಗಿ ಒಂದು ಸಮೂಹ ಅಥವಾ ವ್ಯಕ್ತಿಯ ಸಂಸ್ಕೃತಿಯಲ್ಲಾಗುವ ಸೇರ್ಪಡೆಗಳ ಪ್ರಕ್ರಿಯೆ.

accumulation fund: ಸಂಚಯನ ನಿಧಿ.

accumulation of capital: ಬಂಡವಾಳ ಸಂಚಯ.

accumulation of culture: ಸಂಸ್ಕೃತಿ ಸಂಚಯನ. ಯಾವುದೇ ಒಂದು ಸಂಸ್ಕೃತಿಯ ಉತ್ತಮ ಅಂಶಗಳ ಸಂಗ್ರಹಣ ಪ್ರಕ್ರಿಯೆ.

accumulation of tradition: ಸಂಪ್ರದಾಯ ಸಂಚಯನ. ಒಂದು ಸಂಸ್ಕೃತಿಯ ಸತ್ವಯುತ ಅಂಶಗಳು ತಲೆತಲಾಂತರಗಳಲ್ಲಿ ಸಂಗ್ರಹಿತವಾಗಿ ಉಳಿದು ಬರುವ ಪ್ರಕ್ರಿಯೆ.

accuracy: ನಿಷ್ಕೃಷ್ಟತೆ. ವಸ್ತು ಅಥವಾ ಸಂಗತಿಗಳ ಅಳತೆ ಹಾಗೂ ಪ್ರಮಾಣಗಳಲ್ಲಿ ವೈಜ್ಞಾನಿಕ ಅಧ್ಯಯನಗಳು ಅಪೇಕ್ಷಿಸುವ ನಿರ್ದಿಷ್ಟತೆ.

acephalous society: ನಾಯಕ ರಹಿತ ಸಮಾಜ. ರಾಜ ಪ್ರಮುಖ ಅಥವಾ ನಾಯಕನಿಲ್ಲದ ಸಮಾಜಕ್ಕೆ ಸಂಬಂಧಿಸಿ ಉಪಯೋಗಿಸುವ ಪದ. ಈ ಸಮೂಹಗಳಲ್ಲಿ ರಕ್ತ ಬಂಧುತ್ವದ ಅಧಿಕಾರವೇ ಸಾಮಾಜಿಕ ನಿಯಂತ್ರಣದ ನಿಯೋಗಿಯಾಗಿರುತ್ತದೆ.

achieved role: ಅರ್ಜಿತ ಪಾತ್ರ. ವ್ಯಕ್ತಿಯು ಗಳಿಸಿದ ಸಾಮಾಜಿಕ ಸ್ಥಾನಮಾನಕ್ಕೆ ಅನುಗುಣವಾದ ಪಾತ್ರ.

achieved status: ಅರ್ಜಿತ ಸ್ಥಾನ ಮಾನ. ಒಬ್ಬ ವ್ಯಕ್ತಿಯು ತನ್ನ ಸಾಧನೆಗಳ ಮೂಲಕ ಗಳಿಸಿದ ಸ್ಥಾನಮಾನ.

achievement motivation: ಸಾಧನೆಯ ಪ್ರೇರಣೆ.

achievement quotient (A.Q.): ಸಾಧನಾಲಬ್ಧ.

achromatic sensation: ವರ್ಣಾಂಧ ಸಂವೇದನೆ; ಅವರ್ಣ ಸಂವೇದನೆ.

achromatism: ವರ್ಣಾಂಧತೆ; ಬಣ್ಣ ಗುರುಡುತನ.

acosmism: ಮಾಯಾವಾದ. ಈ ಜಗತ್ತೆಂಬುದು ಮಾಯೆ, ದೇವರೇ ನಿಜವಾದ ಸತ್ಯ. ಆದುದರಿಂದ ದೇವರಿಲ್ಲದೆ ಜಗತ್ತಿಲ್ಲ ವೆಂಬ ಸಿದ್ಧಾಂತ.

acoustic sensation: ಶ್ರವಣ ಸಂವೇದನೆ; ಧ್ವನಿ ಸಂವೇದನೆ.

acquired behaviour: ಅರ್ಜಿತ ವರ್ತನೆ. ತನ್ನ ಪಾತ್ರ ನಿರ್ವಹಣೆಗನುಕೂಲವಾಗುವಂತೆ ವ್ಯಕ್ತಿಯು ಅರ್ಜಿಸಿದ ವರ್ತನೆಯ ಪ್ರಕಾರ.

acquired characteristic: ಅರ್ಜಿತ ಗುಣ.

acquired defect: ಅರ್ಜಿತ ದೋಷ.

acquired drive: ಅರ್ಜಿತ ಪ್ರೇರಣೆ.

acquired habit: ಅರ್ಜಿತ ಅಭ್ಯಾಸ.

acquired impulse: ಅರ್ಜಿತ ಪ್ರವೃತ್ತಿ.

acquired interest: ಅರ್ಜಿತ ಅಭಿರುಚಿ.

acquired motive pattern: ಅರ್ಜಿತ ಪ್ರೇರಣಾ ವಿನ್ಯಾಸ. ವ್ಯಕ್ತಿಯು ನಿರ್ದಿಷ್ಟ ಪಾತ್ರ ನಿರ್ವಹಣೆಯನ್ನು ಸಮರ್ಪಕವಾಗಿ ಮಾಡಲು ವಿನ್ಯಾಸಗೊಳಿಸಿಕೊಳ್ಳುವ ಹೊಸ ಉದ್ದೇಶಗಳು ಹಾಗೂ ಪ್ರೇರಣೆಗಳು. ಈ ಪರಿಕಲ್ಪನೆಯನ್ನು ನೀಡಿದಾತ ಥಿಯೋಡೋರ್ ಎಂ. ನ್ಯೂಕೂಂಬ್.

acquired pattern: ಅರ್ಜಿತ ಮಾದರಿ. ಉದ್ದೇಶಪೂರ್ವಕವಾಗಿ ಗಳಿಸಿದ ಯಾವುದೇ ಮಾದರಿ ಅಥವಾ ವರ್ತನಾ ವಿನ್ಯಾಸ.

acquisitive disposition: ಸಂಗ್ರಹ ಧೋರಣೆ.

acquisitive instinct: ಸಂಗ್ರಹ ಮೂಲ ಪ್ರವೃತ್ತಿ. ಸಂಗ್ರಹಿಸುವ ಅಥವಾ ಗಳಿಸುವ ಮೂಲಭೂತ ಪ್ರವೃತ್ತಿ.

acquisitive mob: ಸಂಗ್ರಾಹಕ ಜನ ಜಂಗುಳಿ. ಉದಾ: ಸಾಮಾನ್ಯವಾಗಿ ನೀರನ್ನು ಸಂಗ್ರಹಿಸಲು ಅಥವಾ ಅಗತ್ಯ (ಅಪರೂಪ) ವಸ್ತುಗಳನ್ನು ಪಡೆಯಲು ಸೇರುವ ಗುಂಪು.

acquisitive propensity: ಸಂಗ್ರಹಣಾತ್ಮಕ ಒಲವು.

acquisitive temperament: ಸಂಗ್ರಹಣಾತ್ಮಕ ಸ್ವಭಾವ.

acquisitiveness: ಸಂಗ್ರಹಣಶೀಲತೆ.

acquittance: ವಿಮೋಚನೆ. ಋಣ ಅಥವಾ ಅಪರಾಧದಿಂದ ವಿಮೋಚನೆ.

acquittance roll: ವೇತನ ರಿಜಿಸ್ಟರು; ವೇತನ ಪಟ್ಟಿ.

acrophobia: ಸೂಕ್ಷ್ಮ ಭೀತಿ. ಎತ್ತರವಾದ ಸ್ಥಳದಲ್ಲಿ ಉಂಟಾಗುವ ತೀವ್ರ ಭೀತಿ.

across communication: ಲಂಬ ಛೇದಕ ಸಂಪರ್ಕ. ಸಂಸ್ಥೆಯ ಹಿರಿಯ ಮತ್ತು ಅಧೀನ ಅಧಿಕಾರಿಗಳೆಂಬ ಭೇದವಿಲ್ಲದೆ ವಿವಿಧ ಹಂತಗಳ ಅಧಿಕಾರಿಗಳೊಳಗಿನ ಸಂಪರ್ಕ.

act: ಕಾಯ್ದೆ; ಅಧಿನಿಯಮ; ಕ್ರಿಯೆ; ನಟನೆ.

act of misconduct: ದುಷ್ಪವರ್ತನೆ; ದುರ್ವರ್ತನೆ. ಕಾನೂನಿಗೆ ಅನುಚಿತವಾದ ಶಿಕ್ಷಾರ್ಹವೆನಿಸುವ ವರ್ತನೆ.

act of trespass: ಅತಿಕ್ರಮ ಪ್ರವೇಶ.

acting allowance: ಕಾರ್ಯಭಾರಿ ಭತ್ಯೆ.

action: ಕ್ರಿಯೆ. ವ್ಯಕ್ತಿಗೆ ಅರ್ಥಪೂರ್ಣವೆನಿಸುವ ನಿರ್ದಿಷ್ಟ ಉದ್ದೇಶ ಹೊಂದಿದ ವರ್ತನೆ ಅಥವಾ ಕ್ರಿಯೆ.

action anthropology: ಕ್ರಿಯಾ ಮಾನವಶಾಸ್ತ್ರ. ಅನ್ವಯಿಕ ಮಾನವಶಾಸ್ತ್ರದ ಒಂದು ವಿಭಾಗ.

action approach: ಕ್ರಿಯಾವಾದ; ಕ್ರಿಯಾ ದೃಷ್ಟಿ; ಕ್ರಿಯಾ ಸಮೀಪನ. ಯಾವುದೇ ವಿಷಯದ ಅಧ್ಯಯನಕ್ಕೆ ಕ್ರಿಯಾ ಪರಿಣಾಮದ ಸಂಶೋಧನಾ ವಿಧಾನದ ಅನ್ವಯ.

action frame of reference: ಉಲ್ಲೇಖಿತ ಕ್ರಿಯಾ ಚೌಕಟ್ಟು. ಸಾಮಾಜಿಕ ವ್ಯವಸ್ಥೆ ಮತ್ತು ವ್ಯಕ್ತಿತ್ವಗಳನ್ನು ವಿಶ್ಲೇಷಿಸಲು ಬಳಸುವ ಸಾಮಾಜಿಕ ಕ್ರಿಯೆಯನ್ನು ಉಲ್ಲೇಖಿಸುವ ವಿಧಾನ.

action group: ಕ್ರಿಯಾ ಸಮೂಹ. ಯಾವುದಾದರೂ ಸಮಾಜ ಕಲ್ಯಾಣದ ಉದ್ದೇಶಕ್ಕಾಗಿ ಚಟುವಟಿಕೆಯಲ್ಲಿ ತೊಡಗಿದ ಕ್ರಿಯಾಶೀಲ ಸಮೂಹ.

action programme: ಕ್ರಿಯಾ ಪರಿಣಾಮದ ಕಾರ್ಯಕ್ರಮ. ಯೋಜಿತ ಹಾಗೂ ರಚನಾತ್ಮಕ ಚಟುವಟಿಕೆಯಿಂದ ಪರಿಣಾಮವುಂಟಾಗುವಂತಹ ಕಾರ್ಯಕ್ರಮ.

action research: ಕ್ರಿಯಾಪರಿಣಾಮದ ಸಂಶೋಧನೆ. ಸಾಮಾಜಿಕ ಬದಲಾವಣೆಯನ್ನು ತಂದಿರುವ ಕಾರ್ಯಕ್ರಮ ಅಥವಾ ಸಾಧನಗಳ ಸಂಶೋಧನೆ.

action tendency component: ಕ್ರಿಯಾಶೀಲತ್ವದ ಘಟಕ.

action theory: ಕ್ರಿಯಾ ಸಿದ್ಧಾಂತ; ಸಾಮಾಜಿಕ ಕ್ರಿಯಾ ಸಿದ್ಧಾಂತ. ವ್ಯಕ್ತಿಯು ಸಾಮಾಜಿಕ ಸಂದರ್ಭಗಳನ್ನು ಹೇಗೆ ಅರ್ಥೈಸುತ್ತಾನೆ ಹಾಗೂ ಸಂಸ್ಕೃತಿ ನಿರೂಪಿತ ಸಂದರ್ಭಗಳಲ್ಲಿ ಹಾಗೂ ಸಾಮಾಜಿಕ ಸಂಬಂಧಗಳ ವ್ಯವಸ್ಥೆಯಲ್ಲಿ ಹೇಗೆ ವರ್ತಿಸುತ್ತಾನೆಂಬುದರ ಕುರಿತಾದ ಸಮಾಜ ಶಾಸ್ತ್ರೀಯ ಸಿದ್ಧಾಂತ. ಮ್ಯಾಕ್ಸ್‌ವೆಬರ್, ಕಾರ್ಲ್ ಮ್ಯಾನ್‌ಹೈಮ್, ಮೆಕೈವರ್, ಟಾಲ್‌ಕಾಟ್ ಪಾರ್‌ಸಾನ್ಸ್ ಈ ಸಿದ್ಧಾಂತದ ಪ್ರಮುಖ ಪ್ರತಿಪಾದಕರು.

action type: ಕ್ರಿಯಾ ಮಾದರಿ.

actionable wrong: ಕ್ರಮಕ್ಕೊಳಗಾಗುವ ತಪ್ಪು.

activation: ಕಾರ್ಯಪ್ರಚೋದನೆ.

active absorption: ಸಕ್ರಿಯ ತಲ್ಲೀನತೆ. ಯಾವುದೇ ಕ್ರಿಯೆಯಲ್ಲಿ ಪೂರ್ಣವಾಗಿ ತೊಡಗಿರುವುದು.

active aggressive personality: ಕ್ರಿಯಾಶೀಲ ವಿಧ್ವಂಸಕ ಪ್ರವೃತ್ತಿಯ ವ್ಯಕ್ತಿತ್ವ. ಕೋಪ-ತಾಪಗಳನ್ನು ಬಹಿರಂಗಪಡಿಸುವ ಮುಂಗೋಪದ, ವಿಧ್ವಂಸಕ ಪ್ರವೃತ್ತಿಯ ವ್ಯಕ್ತಿತ್ವ.

active attention: ಸಕ್ರಿಯಾವಧಾನ.

active attitude: ಸಕ್ರಿಯ ಮನೋವೃತ್ತಿ.

active balance: ಕ್ರಿಯಾತ್ಮಕ ಶಿಲ್ಕು.

active bearers: ಸಕ್ರಿಯ ಧಾರಕರು. ಜನಪದ ಪ್ರಸರಣಕ್ಕೆ ಸಂಬಂಧಿಸಿದವರು. ಉದಾ: ಧಾರ್ಮಿಕ ವೃತ್ತಿಗಾಯಕರು.

active consideration: ತೀವ್ರ ಪರಿಶೀಲನೆ, ತೀವ್ರ ಪರಿಗಣನೆ.

active courage: ಕ್ರಿಯಾತ್ಮಕ ಧೈರ್ಯ.

active crowd: ಸಕ್ರಿಯ ಜನಸಂದಣಿ. ಉದ್ರಿಕ್ತಗೊಳ್ಳುವ ಲಕ್ಷಣ ಹೊಂದಿದ ಜನ ಜಂಗುಳಿ.

active ideationalism: ಕ್ರಿಯಾಶೀಲ ಆದರ್ಶಧ್ಯೇಯ.

active magic: ಸಕ್ರಿಯ ಮಾಟ.

active movement: ಸಕ್ರಿಯ ಚಲನೆ.

active observation: ಸಕ್ರಿಯಾವ ಲೋಕನ.

active participant: ಸಕ್ರಿಯ ಸಹ ಭಾಗಿ.

active recall: ಸಕ್ರಿಯ ಸ್ಮರಣೆ; ನೆನಪಿಸುವಿಕೆ.

active recreation: ಸಕ್ರಿಯ ಮನೋರಂಜನೆ.

activism: ಕ್ರಿಯಾಶೀಲತ್ವ. ಸಾಮಾಜಿಕ-ರಾಜಕೀಯ ಗುರಿಸಾಧನೆಗಾಗಿ ತೀವ್ರವಾದ ಹಾಗೂ ನೇರವಾದ ಚಟುವಟಿಕೆಯಲ್ಲಿ ತೊಡಗಬೇಕೆಂಬ ತತ್ತ್ವ.

activist: ಕ್ರಿಯಾಶೀಲವಾದಿ. ಕ್ರಿಯಾಶೀಲತ್ವದಲ್ಲಿ ನಂಬಿಕೆ ಇರಿಸಿದಾತ.

activity analysis: ಕ್ರಿಯಾಶೀಲತೆಯ ವಿಶ್ಲೇಷಣೆ.

activity rate: ಕ್ರಿಯಾಶೀಲತೆಯ ದರ.

actor: ನಟ, ಕರ್ತೃ. ಸಮಾಜಶಾಸ್ತ್ರೀಯ ವಿಶ್ಲೇಷಣೆಯ ಪ್ರಕಾರ ಸಾಮಾಜಿಕ ಪಾತ್ರ ನಿರ್ವಹಿಸುವ ಪ್ರತಿಯೊಬ್ಬನೂ ಕರ್ತೃ ಅಥವಾ ನಟನೇ ಆಗಿರುತ್ತಾನೆ.

actual cost: ನೈಜ ವೆಚ್ಚ. ಯಥಾರ್ಥ ವೆಚ್ಚ.

actual price: ವಾಸ್ತವ ಬೆಲೆ; ನೈಜ ಬೆಲೆ.

actual rate of exchange: ನೈಜ ವಿನಿಮಯ ದರ.

actual sensation: ನೈಜ ಸಂವೇದನೆ.

actual wage: ನೈಜ ಕೂಲಿ; ವಾಸ್ತವಿಕ ಕೂಲಿ.

actual will: ಯಥಾರ್ಥ (ವಾಸ್ತವಿಕ) ಇಚ್ಛೆ

actualization: ವಾಸ್ತವೀಕರಣ.

actuarial valuation: ವಿಮಾಗಣಕ ಮೌಲ್ಯ.

acute anomie: ತೀವ್ರ ನಿಯಮರಾಹಿತ್ಯ.

acute consciousness: ತೀಕ್ಷ್ಣಪ್ರಜ್ಞೆ ತೀವ್ರ ಜಾಗ್ರತಾವಸ್ಥೆ.

acute hallucination: ತೀವ್ರ ವಿಭ್ರಾಂತಿ.

acute mania: ತೀವ್ರೋನ್ಮಾದ.

acute situational maladjustment: ತೀವ್ರ ಸನ್ನಿವೇಶಗತ ಅಪ ಹೊಂದಾಣಿಕೆ.

ad infinitum: ಅವಧಿರಹಿತ; ಕೊನೆಯಿಲ್ಲದ.

adaptation: ಹೊಂದಾಣಿಕೆ. ಜೀವಿಗಳು ತಮ್ಮ ಭೌತಿಕ ಅಥವಾ ಸಾಮಾಜಿಕ ಪರಿಸರಕ್ಕೆ ಹೊಂದಿಕೊಳ್ಳುವ ಪ್ರಕ್ರಿಯೆ. ಇದು ಮೂಲಭೂತವಾಗಿ ಜೀವಶಾಸ್ತ್ರದ ಪರಿಕಲ್ಪನೆಯಾಗಿದೆ.

adaptation level: ಹೊಂದಾಣಿಕೆಯ ಮಟ್ಟ.

adaptation of instinctive action: ಮೂಲ ಪ್ರೇರಣಾ ಕ್ರಿಯೆಯ ಹೊಂದಾಣಿಕೆ.

adaptive behaviour: ಹೊಂದಾಣಿಕೆಯ ವರ್ತನೆ.

adaptive culture: ಸಂಯೋಜಕ ಸಂಸ್ಕೃತಿ. ೧. ಒಂದು ಸಮಾಜವು ತನ್ನ ನೈಸರ್ಗಿಕ ಪರಿಸರಕ್ಕೆ ಹೊಂದಿಕೊಂಡು ಸಂಸ್ಕೃತಿ ಉಳಿಯುವಂತೆ ಮಾಡುವ ಜ್ಞಾನ, ನಿಯಮಗಳು ಹಾಗೂ ತಾಂತ್ರಿಕತೆ ಇತ್ಯಾದಿ ಸಂಯೋಜಕ ಗುಣವಿರುವ ಸಾಂಸ್ಕೃತಿಕ ಅಂಶಗಳು. ೨. ಅಭೌತ ಸಂಸ್ಕೃತಿಯು ಭೌತ ಸಂಸ್ಕೃತಿಗೆ ಹೊಂದಿಕೊಳ್ಳುವಂತೆ ಮಾಡುವ ನಿಯಮಗಳು, ಮೌಲ್ಯಗಳು, ಸಾಮಾಜಿಕ ಪಾತ್ರ ಇತ್ಯಾದಿ ಸಂಯೋಜಕತ್ವವುಳ್ಳ ಅಂಶಗಳು.

adaptive expectations: ಹೊಂದಾಣಿಕೆಯ ನಿರೀಕ್ಷೆಗಳು. ಚಲಗಳ ಹಿಂದಿನ ಮೌಲ್ಯ ಮತ್ತು ದಿಕ್ಕನ್ನು ಆಧಾರವಾಗಿಟ್ಟುಕೊಂಡು ಅವುಗಳ ಮುಂದಿನ ಮೌಲ್ಯದ ಕುರಿತು ನಂಬಿಕೆಯನ್ನು ರೂಪಿಸುವುದು.

adaptive growth: ಹೊಂದಿ ಬೆಳೆಯುವಿಕೆ.

addiction: ವ್ಯಸನಾಧೀನತೆ. ಯಾವುದಾದರೂ ವಸ್ತುವಿನ, ಸಂಗತಿಯ ಅಥವಾ ಸೌಲಭ್ಯದ ಮೇಲೆ ಅತಿಯಾಗಿ ಅವಲಂಬಿಸುವುದು.

additional net income: ಹೆಚ್ಚುವರಿ ನಿವ್ವಳ ಆದಾಯ.

adelphic polyandry: ನೋಡಿ: fraternal polyandry.

adequate sample: ಪರಿಪೂರ್ಣ ಮಾದರಿ. ಅಧ್ಯಯನಕ್ಕಾಗಿ ಆಯ್ಕೆ ಮಾಡಿದ ಮಾದರಿಯು ಪೂರ್ಣ ಜನಸಂಖ್ಯೆಯನ್ನು ಪ್ರತಿನಿಧಿಸುವ ಸಾಮರ್ಥ್ಯ ಹೊಂದಿರುವುದು.

adherence: ಅನುಸಕ್ತಿ; ಒಪ್ಪಿ ಅನುಸರಿಸುವಿಕೆ.

adhoc: ಹಂಗಾಮಿ; ತಾತ್ಕಾಲಿಕ.

adhoc hypothesis: ತಾತ್ಕಾಲಿಕ ಪ್ರಾಕ್ಕಲ್ಪನೆ.

adient behaviour: ಉನ್ಮುಖೀ ವರ್ತನೆ.

adimjathi: ಆದಿಮ ಜಾತಿ; ಆದಿವಾಸಿ.

adjourn sine die: ಅನಿಶ್ಚಿತ ಕಾಲದವರೆಗೆ ಮುಂದೂಡು. ಉದಾ: ಶಾಸಕಾಂಗದ ಅಧಿವೇಶನವನ್ನು ಯಾವುದೇ ಕಾರಣಗಳನ್ನು ನೀಡದೆ ಮತ್ತು ಪುನ: ಸಮಾವೇಶಗೊಳ್ಳುವ ದಿನವನ್ನು ನಿರ್ಧರಿಸದೇ ಅನಿರ್ದಿಷ್ಟ ಕಾಲಾವಧಿವರೆಗೆ ಮುಂದೂಡುವುದು.

adjournment motion: ನಿಲುವಳಿ ಸೂಚನೆ. ಸಾರ್ವಜನಿಕ ಹಿತದೃಷ್ಟಿಯಿಂದ ಮಹತ್ತರವಾದ ವಿಷಯಗಳನ್ನು ಕುರಿತು ಸಭಾಧ್ಯಕ್ಷನ ಅನುಮತಿ ಪಡೆದು ಮಂಡಿಸುವಂತಹ ಸೂಚನೆ. ಶಾಸಕಾಂಗ ಸಭೆಯು ನಿಗದಿತ ಕಾರ್ಯಕ್ರಮವನ್ನು ಬದಿಗಿಟ್ಟು ದೇಶದಲ್ಲಿನ ಬಹುಮುಖ್ಯವಾದ ವಿಷಯದ ಕಡೆಗೆ ಗಮನವನ್ನು ಹರಿಸಿ ಅದರ ಬಗ್ಗೆ ಚರ್ಚೆ ನಡೆಸುವಂತೆ ಮಾಡುವ ಗಮನ ಸೆಳೆಯುವ ಸೂಚನೆ.

adjudication: ನ್ಯಾಯಾಂಗ ನಿರ್ಣಯ.

adjustability: ಹೊಂದಾಣಿಕೆಯ ಸಾಮರ್ಥ್ಯ.

adjustment problem: ಹೊಂದಾಣಿಕೆಯ ಸಮಸ್ಯೆ. ವ್ಯಕ್ತಿ ಮತ್ತು ಸಮೂಹಗಳ ಒಳಗೆ ಹಾಗೂ ಅವುಗಳ ನಡುವೆ ಸಾಮರಸ್ಯದ ಸಂಬಂಧವಿಲ್ಲದಿರುವುದು.

admass: ಜಾಹಿರಾತು ಪ್ರಭಾವೀ ಸಮಾಜ.

ಪ್ರಭಾವಯುತ ಜಾಹಿರಾತುಗಳಿಂದ ತಕ್ಷಣ ಪ್ರಭಾವಕ್ಕೊಳಗಾಗುತ್ತದೆಂದು ತಿಳಿಯಲಾಗಿರುವ ಸಮಾಜ. ಉದಾ: ಯುವ ಜನತೆ.

administered price: ನಿಯಂತ್ರಿತ ಬೆಲೆ.

administration: ಆಡಳಿತ.

administration of justice: ನ್ಯಾಯಾಡಳಿತ.

administrative adjudication: ಆಡಳಿತ ನ್ಯಾಯಾಧಿಕಾರ; ಆಡಳಿತಾತ್ಮಕ ನ್ಯಾಯ ನಿರ್ಣಯ. ಆಡಳಿತಾಂಗವು ಕಾನೂನು ಮತ್ತು ವಾಸ್ತವಾಂಶಗಳ ಆಧಾರದ ಮೇಲೆ ಖಾಸಗಿ ವ್ಯಕ್ತಿ ಅಥವಾ ಸಂಸ್ಥೆಯ ವಿವಾದಾತ್ಮಕ ವಿಷಯಗಳನ್ನು ಇತ್ಯರ್ಥಪಡಿಸುವುದು.

administrative approval: ಆಡಳಿತಾತ್ಮಕ ಅನುಮೋದನೆ. ಯಾವುದೇ ಕಾರ್ಯ ಅಥವಾ ಯೋಜನೆಗೆ ಸಂಬಂಧಿಸಿದ ನ್ಯಾಯಬದ್ಧ ಕಛೇರಿಯಿಂದ ದೊರೆತ ಅನುಮೋದನೆ.

administrative autonomy: ಆಡಳಿತಾತ್ಮಕ ಸ್ವಾಯತ್ತತೆ. ವಿಶ್ವವಿದ್ಯಾಲಯದಂತಹ ಅರೆ ಸರಕಾರೀ ಸಂಸ್ಥೆಗಳಿಗೆ ನೀತಿ ನಿಯಮಾವಳಿಗಳನ್ನು ರೂಪಿಸಿಕೊಂಡು ಆಡಳಿತ ನಿರ್ವಹಣೆಗೆ ಅವಕಾಶ ನೀಡುವುದು. ಆದರೆ ಇವು ಸ್ವಂತವಾಗಿ ತಮ್ಮ ಆರ್ಥಿಕ ಮೂಲಗಳನ್ನು ಹೊಂದಿರಬೇಕಾಗುತ್ತದೆ.

administrative class: ಅಧಿಕಾರಶಾಹಿ ವರ್ಗ. ಸಮಸ್ತ ಅಧಿಕಾರಶಾಹಿ ವ್ಯವಸ್ಥೆಗೆ ಮಾರ್ಗದರ್ಶನ ನೀಡಿ ಆಡಳಿತಾತ್ಮಕ ಕಾರ್ಯಭಾರ ನಿರ್ವಹಿಸುವ ವರ್ಗ.

administrative court: ಆಡಳಿತಾತ್ಮಕ ನ್ಯಾಯಾಲಯ.

administrative ethics: ಆಡಳಿತ ಸಂಹಿತೆ. ಆಡಳಿತಾಂಗವು ರೂಪಿಸಿ ಬೆಳೆಸಿಕೊಂಡಿರುವ ತನ್ನದೇ ಆದ ವೃತ್ತಿನೀತಿ. ಅದು ರಾಷ್ಟ್ರನಿಷ್ಠೆ ಮತ್ತು ಸಾರ್ವಜನಿಕ ಹಿತಾಸಕ್ತಿಯನ್ನು ಕಾಯ್ದುಕೊಳ್ಳುತ್ತದೆ.

administrative executive: ಆಡಳಿತ ಕಾರ್ಯಾಧಿಕಾರಿ.

administrative function: ಆಡಳಿತಾತ್ಮಕ ಕಾರ್ಯ.

administrative head: ಆಡಳಿತ ಮುಖ್ಯಸ್ಥ.

administrative justice: ಆಡಳಿತಾತ್ಮಕ ನ್ಯಾಯ. ಆಡಳಿತದ ಬೇರೆ ಬೇರೆ ಇಲಾಖೆಗಳು ಖಟ್ಲೆಗಳನ್ನು ತೀರ್ಮಾನಿಸಿ ನ್ಯಾಯವನ್ನು ಒದಗಿಸಿಕೊಡುವ ಹಕ್ಕು.

administrative lapse: ಆಡಳಿತಾತ್ಮಕ ತಪ್ಪು.

administrative law: ಆಡಳಿತಾತ್ಮಕ ಕಾನೂನು. ಆಡಳಿತಾಧಿಕಾರಿಗಳ ಮತ್ತು ಪ್ರಜೆಗಳ ಸಂಬಂಧವನ್ನು ನಿಯಂತ್ರಿಸುವ, ಅವರ ಹಕ್ಕುಗಳು ಮತ್ತು ಕರ್ತವ್ಯಗಳನ್ನು ನಿರ್ಧರಿಸುವ ಹಾಗೂ ಅವನ್ನು ಜಾರಿಗೊಳಿಸುವ ಕಾರ್ಯ ವಿಧಾನಗಳನ್ನು ಒಳಗೊಂಡ ನಿಯಮ ಸಂಚಯ.

administrative leadership: ಆಡಳಿತಾತ್ಮಕ ನಾಯಕತ್ವ. ಸರಕಾರದ ಅಥವಾ ಸಂಸ್ಥೆಯ ಅಪೇಕ್ಷಿತ ಧ್ಯೇಯಗಳನ್ನು ಸಾಧಿಸಲು ಅದರ ಆಡಳಿತಾಂಗದ ಕಾರ್ಯ ಚಟುವಟಿಕೆಗಳನ್ನು ನಿರ್ದೇಶಿಸುವ, ಮಾರ್ಗದರ್ಶನ ನೀಡುವ, ನಿಯಂತ್ರಿಸುವ ಮತ್ತು ಸಮನ್ವಯಗೊಳಿಸುವ ಜವಾಬ್ದಾರಿಯನ್ನು ಹೊಂದಿರುವ ಅಧಿಕಾರಯುತ ನಾಯಕತ್ವ.

administrative legislation: ಆಡಳಿತಾತ್ಮಕ ಶಾಸನ. ನೋಡಿ: administrative law.

administrative machinery: ಆಡಳಿತಶಾಹಿ ವ್ಯವಸ್ಥೆ; ಆಡಳಿತ ಯಂತ್ರ.

administrative order: ಆಡಳಿತಾತ್ಮಕ ಆಜ್ಞೆ ಅಥವಾ ಆಡಳಿತಾಜ್ಞೆ. ಆಡಳಿತ ವ್ಯವಸ್ಥೆಯಲ್ಲಿ ಏಕರೀತಿಯ ವಿಷಯ ಅಥವಾ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ನೀಡಲಾಗುವ ನಿರ್ದಿಷ್ಟ ಸೂಚನೆಗಳು.

administrative planning: ಆಡಳಿತ ಯೋಜನೆ. ಸರಕಾರದ ನೀತಿ, ಕಾರ್ಯಕ್ರಮ ಹಾಗೂ ಕಾರ್ಯಾಚರಣೆಗಳ ಯೋಜನೆ.

administrative power: ಆಡಳಿತಾಧಿಕಾರ. ಸರಕಾರದ ಯೋಜನೆಗಳನ್ನು ಕಾರ್ಯಗತಗೊಳಿಸಲು ಆಡಳಿತಾಧಿಕಾರಿಗಳು ಹೊಂದಿರುವ ಅಧಿಕಾರ.

administrative practice: ಆಡಳಿತ ವ್ಯವಹಾರ. ಆಡಳಿತದ ನಿರ್ದಿಷ್ಟವಾದ ನಿಯಮಗಳು ಮತ್ತು ವಿಧಾನಗಳ ನಿರ್ವಹಣೆ.

administrative region: ಆಡಳಿತಾತ್ಮಕ ಪ್ರದೇಶ. ನಗರ, ಪಟ್ಟಣ ಅಥವಾ ರಾಜ್ಯ ಹೀಗೆ ರಾಜಕೀಯ ಗಡಿಗಳಿಂದ ಹೆಸರಿಸಲ್ಪಟ್ಟ ಭೂ ಘಟಕ.

administrative relation: ಆಡಳಿತ ಸಂಬಂಧ.

administrative responsibility: ಆಡಳಿತ ಜವಾಬ್ದಾರಿ. ತಮ್ಮ ಕಾರ್ಯನಿರ್ವಹಣೆಯಲ್ಲಿ ಸರಕಾರೀ ಅಧಿಕಾರಿಗಳು ತೋರುವ ವೈಫಲ್ಯಕ್ಕೆ ತಮ್ಮನ್ನೇ ಹೊಣೆಗಾರರನ್ನಾಗಿ ಮಾಡುವಿಕೆ.

administrative structure: ಆಡಳಿತ ರಚನೆ. ರಾಜ್ಯ, ಕೈಗಾರಿಕೆ ಮುಂತಾದುವುಗಳ ಆಡಳಿತ ನಿರ್ವಹಣೆಯಲ್ಲಿ ತೊಡಗಿರುವ ನೌಕರರ ಹಾಗೂ ಕಛೇರಿಗಳ ಏಣಿ ಶ್ರೇಣಿ.

administrative survey: ಆಡಳಿತ ಸಮೀಕ್ಷೆ. ಒಂದು ಸಂಸ್ಥೆಯ ಎಲ್ಲಾ ಆಡಳಿತ ವಿಷಯಗಳ ಸಮೀಕ್ಷೆ.

administrative theory: ಆಡಳಿತ ಸಿದ್ಧಾಂತ; ಆಡಳಿತ ತತ್ವ.

administrative tribunal: ಆಡಳಿತ ನ್ಯಾಯಮಂಡಳಿ. ತ್ವರಿತವಾಗಿ ಹಾಗೂ ದುಬಾರಿಯಲ್ಲದ ರೀತಿಯಲ್ಲಿ ನ್ಯಾಯ ವಿತರಣೆಯ ಅಧಿಕಾರ ಹೊಂದಿದ ನ್ಯಾಯ ಮಂಡಳಿ.

administrator: ಆಡಳಿತಗಾರ.

admirality jurisdiction: ನೌಕಾ ಬಲದ ಅಧಿಕಾರ ವ್ಯಾಪ್ತಿ.

admirality law: ನೌಕಾಧಿಪತ್ಯದ ಕಾನೂನು.

admit to bail: ಜಾಮೀನು ಅಂಗೀಕಾರ.

admonition : ವಾಗ್ದಂಡನೆ.

adolescence: ತಾರುಣ್ಯ. ವ್ಯಕ್ತಿಯ ಯೌವನಾವಸ್ಥೆ. ಸುಮಾರು ಹದಿಮೂರರಿಂದ ಇಪ್ಪತ್ತು ವರ್ಷದವರೆಗೆ. ಸಮಾಜಶಾಸ್ತ್ರಜ್ಞರ ಪ್ರಕಾರ ಇದು ಒಂದು ಸಂಸ್ಕೃತಿಯಿಂದ ಇನ್ನೊಂದಕ್ಕೆ ಭಿನ್ನವಾಗಿರುತ್ತದೆ.

adolescent court: ನೋಡಿ: juvenile court.

adolescent impulse: ತಾರುಣ್ಯಾವಸ್ಥೆಯ ಆವೇಗ.

adolescent instability: ತಾರುಣ್ಯಾವಸ್ಥೆಯ ಅಸ್ಥಿರತೆ.

adolescent stage: ತಾರುಣ್ಯಾವಸ್ಥೆಯ ಹಂತ.

adoption: ದತ್ತು ಸ್ವೀಕಾರ. ಒಂದೇ ಅಥವಾ ಬೇರೆ ಕುಲಕ್ಕೆ ಸೇರಿದ ಮಗು ಅಥವಾ ವ್ಯಕ್ತಿಯನ್ನು ತಮ್ಮ ಕುಟುಂಬದವನಾಗಿ ಸ್ವೀಕರಿಸುವುದು.

adoptive marriage: ದತ್ತು ಸ್ವೀಕರಣ ವಿವಾಹ. ಪಿತೃಪ್ರಧಾನ ಕುಟುಂಬದಲ್ಲಿ ಗಂಡು ಸಂತತಿಯಿಲ್ಲದಿದ್ದಾಗ ಅಳಿಯನನ್ನೇ ಮಗನೆಂದು ಪರಿಗಣಿಸಿ ಸಂತತಿ ಮುಂದುವರಿಸುವಿಕೆ.

adult correction: ವಯಸ್ಕರ ತಿದ್ದುವಿಕೆ (ಸುಧಾರಣೆ).

adult crime: ವಯಸ್ಕ ಅಪರಾಧ.

adult education: ವಯಸ್ಕ ಶಿಕ್ಷಣ.

adult franchise: ವಯಸ್ಕ ಮತದಾನ. ರಾಜ್ಯವು ನಿರ್ದಿಷ್ಟಪಡಿಸಿದ ವಯಸ್ಸನ್ನು ಮೀರಿದ ಪ್ರಜೆಗಳಿಗೆ ನೀಡಲಾದ ಮತದಾನದ ಹಕ್ಕು.

adult probation: ವಯಸ್ಕ ಪರಿವೀಕ್ಷಣೆ.

adult psychology: ವಯಸ್ಕ ಮನಶ್ಶಾಸ್ತ್ರ; ವಯಸ್ಕ ಮನೋಧರ್ಮ.

adult socialization: ವಯಸ್ಕರ ಸಮಾಜೀಕರಣ. ವಯಸ್ಕರಾಗಿದ್ದಾಗ ಒಳಗಾಗುವ ಸಮಾಜೀಕರಣದ ಪ್ರಕ್ರಿಯೆ.

adult suffrage: ನೋಡಿ: adult franchise.

adultery: ವ್ಯಭಿಚಾರ. ವಿವಾಹೇತರ ಲೈಂಗಿಕ ಸಂಬಂಧ.

advaita: ಅದ್ವೈತ. ಶಂಕರಾಚಾರ್ಯರು ಎಂಟನೇ ಶತಮಾನದಲ್ಲಿ ಪ್ರತಿಪಾದಿಸಿದ 'ಆತ್ಮ ಮತ್ತು ಪರಮಾತ್ಮ ಒಂದೇ' ಎಂಬ ತತ್ತ್ವ.

advalorem duty: ಮೌಲ್ಯಾಧಾರಿತ ಸುಂಕ; ಮೌಲ್ಯಾಧಾರಿತ ತೆರಿಗೆ.

advance: ಮುಂಗಡ.

advanced capitalism: ಪ್ರಬಲ ಬಂಡವಾಳ.

advent races: ಆಗಂತುಕ ಜನಾಂಗಗಳು. ಆಕ್ರಮಣದ ಮೂಲಕ ಬಂದ ಜನಾಂಗಗಳು.

adventitious circumstance: ಅನಿರೀಕ್ಷಿತ ಪರಿಸ್ಥಿತಿ (ಸಂದರ್ಭ).

adverse balance of payment: ಪ್ರತಿಕೂಲಕರ ಸಂದಾಯ ಬಾಕಿ.

adverse party: ಪ್ರತಿಕೂಲ ಪಕ್ಷ.

advertising elasticity: ಜಾಹೀರಾತು ಸ್ಥಿತಿಸ್ಥಾಪಕತ್ವ.

advice of payment: ಪಾವತಿ ಸೂಚನೆ

advisory council: ಸಲಹಾ ಸಮಿತಿ. ಅಧಿಕಾರಶಾಹಿಯನ್ನು ಮಿತಿಯಲ್ಲಿಡಲು ಪ್ರಯತ್ನಿಸುವ ಉದ್ದೇಶದಿಂದ ಸ್ಥಾಪಿಸಲಾಗುವ ಪ್ರಜೆಗಳ ಪ್ರತಿನಿಧಿಗಳನ್ನು ಒಳಗೊಂಡ ಸಮಿತಿ ಅಥವಾ ಮಂಡಳಿ.

advisory jurisdiction: ಸಲಹಾತ್ಮಕ ಅಧಿಕಾರ ವ್ಯಾಪ್ತಿ; ಸಲಹಾತ್ಮಕ ಕ್ಷೇತ್ರಾಧಿಕಾರ. ಅಂತಾರಾಷ್ಟ್ರೀಯ ನ್ಯಾಯಾಲಯವು ಹೊಂದಿರುವ ಅಧಿಕಾರ ವ್ಯಾಪ್ತಿಗಳಲ್ಲೊಂದು. ಇನ್ನೆರಡು ನೋಡಿ: compulsory jurisdiction, voluntary jurisdiction.

advocate general: ಪ್ರಧಾನ ನ್ಯಾಯವಾದಿ. ಸರಕಾರದ ಪರವಾಗಿ ವಾದಿಸುವ ಪ್ರಧಾನ ನ್ಯಾಯವಾದಿ.

aerophobia: ಬಿರುಗಾಳಿಯ ಭೀತಿ.

aesthesio meter: ಸ್ಪರ್ಶ ಸಂವೇದನಾ ಮಾಪಕ.

aesthesiometry: ಸ್ಪರ್ಶಸಂವೇದನಾ ಮಾಪನ.

aesthetic ability: ಸೌಂದರ್ಯಾನುಭವ ಸಾಮರ್ಥ್ಯ.

aesthetic emotion: ಸೌಂದರ್ಯೋನ್ಮಾದ.

aesthetic ideationalism: ಸೌಂದರ್ಯಾನುಭೂತಿಯ ಭಾವಕಲ್ಪನಾ ವಾದ.

aesthetic imagery: ಸೌಂದರ್ಯಾತ್ಮಕ ಬಿಂಬಾವಳಿ.

aesthetic imagination: ಸೌಂದರ್ಯಾನುಭವ ಕಲ್ಪನೆ.

aesthetic interest: ಸೌಂದರ್ಯಾಭಿರುಚಿ.

aesthetic judgement: ಸೌಂದರ್ಯಾಧಾರಿತ ನಿರ್ಣಯ.

aesthetic object: ಸೌಂದರ್ಯಾತ್ಮಕ ವಸ್ತು.

aesthetic sense: ಸೌಂದರ್ಯ ಪ್ರಜ್ಞೆ.

aesthetic sensitivity: ರಸಾನುಭವಾತ್ಮಕ ಸಂವೇದನ ಶೀಲತೆ.

aesthetics: ಸೌಂದರ್ಯಶಾಸ್ತ್ರ.

aetiology: ಕಾರಣಶಾಸ್ತ್ರ. ಯಾವುದೇ ಸಂಗತಿಯ ಉಗಮದ ಕಾರಣ ಅಥವಾ ಮೂಲಗಳ ಅಧ್ಯಯನ ಶಾಸ್ತ್ರ. ನೋಡಿ. etiology.

affective association: ವಾತ್ಸಲ್ಯಾತ್ಮಕ ಸಾಹಚರ್ಯ.

affective complex: ವಾತ್ಸಲ್ಯಾತ್ಮಕ ಭಾವಸಂಕೀರ್ಣ.

affective deficiency: ವಾತ್ಸಲ್ಯಾತ್ಮಕ ನ್ಯೂನತೆ.

affective disorder: ವಾತ್ಸಲ್ಯಾತ್ಮಕ ಅಸ್ವಾಸ್ಥ್ಯ.

affective judgement: ವಾತ್ಸಲ್ಯಾತ್ಮಕ ನಿರ್ಣಯ.

affective mental process: ವಾತ್ಸಲ್ಯಾತ್ಮಕ ಮನೋಪ್ರಕ್ರಿಯೆ.

affective neutrality: ಸಂವೇದನಾ ತಾಟಸ್ಥ್ಯ; ಭಾವ ತಾಟಸ್ಥ್ಯ. ದೂರಗಾಮಿ ಗುರಿ ಸಾಧನೆಗಾಗಿ ಆಸೆಯನ್ನು ತಕ್ಷಣವೇ ಈಡೇರಿಸಿಕೊಳ್ಳಬೇಕೆಂಬ ಅಪೇಕ್ಷೆಯನ್ನು ತತ್ಕಾಲ ನಿಯಂತ್ರಿಸಿಕೊಳ್ಳುವ ತಟಸ್ಥತೆ.

affective psychosis: ಭಾವ ಮನೋವಿಕ್ಷಿಪ್ತಿ; ಭಾವಮನೋವಿಕೃತಿ.

affective reaction: ಅನುರಾಗಾತ್ಮಕ ಪ್ರತಿಕ್ರಿಯೆ; ಭಾವಾತ್ಮಕ ಪ್ರತಿಕ್ರಿಯೆ.

affective state: ಮಮಕಾರದ ಸ್ಥಿತಿ; ಅನುರಾಗಾತ್ಮಕ ಸ್ಥಿತಿ.

affective stupidity: ಭಾವನಾತ್ಮಕ ಮೂಢತೆ.

affectivity: ಸಂವೇದನಾತ್ಮಕತೆ. ಆಸೆ ಅಥವಾ ಚಪಲದ ಈಡೇರಿಕೆಗಾಗಿ ಅನುಭವಿಸುವ ಅಥವಾ ಪ್ರಕಟಿಸುವ ಭಾವೋದ್ವೇಗ.

affectivity-affective neutrality: ವಾತ್ಸಲ್ಯ-ಸಂವೇದನಾ ತಾಟಸ್ಥ್ಯ. ಆಸೆಯ ತಕ್ಷಣದ ಈಡೇರಿಕೆ ಹಾಗೂ ಅದರ ನಿಗ್ರಹದ

ನಡುವಿನ ದ್ವಂದ್ವ. ಇದು ಟಾಲ್ ಕಾಟ್ ಪಾರ್ಸ್ಸನ್ಸ್ ಹೇಳಿದ ಐದು ಮಾದರಿ ಪರಿವರ್ತಕಗಳಲ್ಲೊಂದಾಗಿದೆ. ನೋಡಿ: pattern variable.

affectual action: ಭಾವಾತ್ಮಕ ಕ್ರಿಯೆ.

affiance: ನಿಶ್ಚಿತಾರ್ಥ. ವಿವಾಹ ವಾಗ್ದಾನ.

affidavit: ಪ್ರತಿಜ್ಞಾಪತ್ರ; ಶಪಥ.

affiliation: ಸ್ವೀಕಾರ. ಒಂದು ಸಂಸ್ಥೆಯು ಇತರ ಸಂಸ್ಥೆಗಳನ್ನು ಅರ್ಹತೆಯ ಆಧಾರದ ಮೇಲೆ ತನ್ನ ಅಂಗಸಂಸ್ಥೆಗಳೆಂದು ಸ್ವೀಕರಿಸುವುದು. ಉದಾ: ವಿಶ್ವವಿದ್ಯಾಲಯಗಳು ಕಾಲೇಜುಗಳ ಅರ್ಹತೆಯನ್ನು ಪರಿಶೀಲಿಸಿ ತಮ್ಮ ಕಕ್ಷೆಯೊಳಗೆ ಸೇರಿಸಿಕೊಳ್ಳುವುದು.

affiliation motive: ಸಂಬಂಧನ ಪ್ರೇರಣೆ.

affiliation want: ಸಂಬಂಧನ ಇಚ್ಛೆ.

affinal: ೧. ವೈವಾಹಿಕ. ವಿವಾಹದಿಂದ ಸಂಬಂಧವೇರ್ಪಟ್ಟ. ೨. ಏಕಮೂಲೀಯ. ಒಂದೇ ಮೂಲದಿಂದ ಉದಿಸಿದ.

affinal exchange: ವೈವಾಹಿಕ ವಿನಿಮಯ. ಎರಡು ಬಂಧುತ್ವ ಸಮೂಹಗಳು ತಮ್ಮ ಬಾಂಧವ್ಯವನ್ನು ನಿರಂತರಗೊಳಿಸುವುದಕ್ಕಾಗಿ ಪರಸ್ಪರರಲ್ಲಿಯೇ ವಿವಾಹದ ಮೂಲಕ ಕೊಡು-ಕೊಳ್ಳುವಿಕೆಯ ಸಂಬಂಧವನ್ನು ಬೆಳೆಸುವುದು.

affinal kin: ವೈವಾಹಿಕ ಬಂಧು; ನೆಂಟ. ವಿವಾಹದಿಂದಾದ ಸಂಬಂಧಿ. ಉದಾ: ನಾದಿನಿ, ಮೈದುನ ಇತ್ಯಾದಿ.

affinal marriage: ಸಂಗಾತಿಯ (ಪತಿ ಅಥವಾ ಪತ್ನಿ) ಸಂಬಂಧಿಯೊಂದಿಗಿನ ವಿವಾಹ.

affinal relative: ನೋಡಿ. affinal kin.

affinity: ೧. ನೆಂಟಸ್ತಿಕೆ; ಬಂಧುಭಾವತ್ವ. ವಿವಾಹದ ಮೂಲಕ ಉಂಟಾಗುವ ಬಂಧುತ್ವ. ೨. ವಿಭಿನ್ನ ಮೂಲಗಳಿಂದ ಬಂದ ಭಾಷೆಗಳಲ್ಲಿರುವ ಸಮಾನ ಅಂಶಗಳು.

affluent society: ಸಮೃದ್ಧ ಸಮಾಜ. ಶ್ರೀಮಂತಿಕೆ ತುಂಬಿರುವ ಸಮಾಜ.

after-care: ಅನುಚಿಕಿತ್ಸೆ; ಚಿಕಿತ್ಸಾನಂತರದ ಆರೈಕೆ.

after-care service: ಪಶ್ಚಾದ್ಯೋಗ ಕ್ಷೇಮ ಸೇವೆ.

after date bill: ಅವಧಿ ಮುಗಿದ ಹುಂಡಿ.

after sensation: ಅನುಸಂವೇದನೆ.

after sight usance bill: ಅವಲೋಕನ ವಿನಿಮಯ ಹುಂಡಿ.

agamy: ಮುಕ್ತ ಸಂಬಂಧ. ವಿವಾಹದ ಸಮಯದಲ್ಲಿ ಒಳಬಾಂಧವ್ಯ ಅಥವಾ ಹೊರ ಬಾಂಧವ್ಯದ ನಿಯಮಗಳಿಲ್ಲದಿದ್ದು ಯಾರೇ ಇಬ್ಬರು ಮದುವೆ ಮಾಡಿಕೊಳ್ಳಲು ಅವಕಾಶ ಇರುವ ಮುಕ್ತತೆ. ಇದು ರಾಬರ್ಟ್ ಎಚ್.ಲೂವಿಯವರು ಬಳಕೆಗೆ ತಂದ ಪರಿಕಲ್ಪನೆ.

age: ಕಾಲ; ಯುಗ; ವಯಸ್ಸು. ಸಾಂಸ್ಕೃತಿಕ ವಿಕಾಸದ ಚರಿತ್ರೆಯಲ್ಲಿ ಬರುವ ಅವಧಿ.

age area: ಪ್ರಾದೇಶಿಕ ಪ್ರಸರಣಾವಧಿ. ಒಂದು ಪ್ರದೇಶದ ಸಾಂಸ್ಕೃತಿಕ ಲಕ್ಷಣಗಳು ಅವುಗಳ ಕೇಂದ್ರದಿಂದ ಸಮ ಬೆಳವಣಿಗೆಯ ದರದಲ್ಲಿ ಪ್ರಸರಣಗೊಂಡಿರುತ್ತವೆ ಮತ್ತು ಆ ಲಕ್ಷಣಗಳು ಕೇಂದ್ರದಿಂದ ಎಷ್ಟು ದೂರದವರೆಗೆ ಹಬ್ಬಿವೆಯೆಂಬುದು ಅವುಗಳ

ತುಲನಾತ್ಮಕ ಪ್ರಾಯದ ಸೂಚಕಗಳಾಗಿವೆ ಎಂಬ ಪರಿಕಲ್ಪನೆ.

age class: ವಯೋವರ್ಗ. ವಯೋಮಾನದ ಆಧಾರದ ಮೇಲೆ ವಿವಿಧ ಸ್ಥಾನಮಾನಗಳ ಮಟ್ಟಗಳಲ್ಲಿ ಜನರನ್ನು ವರ್ಗೀಕರಿಸುವುದರಿಂದಾಗುವ ಗುಂಪು.

age composition: ವಯೋರಚನೆ. ವಿವಿಧ ಪ್ರಾಯಗಳ ಜನರು ಒಡಗೂಡಿದ ಸಾಮಾಜಿಕ ರಚನೆ.

age dating: ವಯೋ ನಿರ್ಣಯ. ವಿವಿಧ ಮಾಪಕಗಳ ಆಧಾರದಿಂದ ಯಾವುದೇ ವಸ್ತುವಿನ ಕಾಲನಿರ್ಣಯ ಮಾಡುವುದು.

age grading: ವಯೋ ಶ್ರೇಣೀಕರಣ. ನೋಡಿ: age class.

age group: ವಯೋ ಸಮೂಹ. ಯಾವುದಾದರೂ ನಿರ್ದಿಷ್ಟ ವರ್ಷಗಳ ಅಂದರೆ ೧ ರಿಂದ ೧೦, ೧೧ ರಿಂದ ೨೦ ಮುಂತಾದ ವಯೋ ಅಂತರಗಳಿಗೆ ಸೇರಿದ ಸಮೂಹ.

age of anxiety: ಆತಂಕದ ಕಾಲ; ವ್ಯಾಕುಲತೆಯ ಕಾಲ.

age of conformity: ಅನುವರ್ತನೆಯ ಕಾಲ; ಅನುವರ್ತನೆಯ ಪ್ರಾಯ.

age of consent: ಒಪ್ಪಿಗೆಯ ವಯಸ್ಸು. ೧. ಮದುವೆಯು ಕಾನೂನುಬದ್ಧವಾಗಿರಲು ಆಗಬೇಕಾದ ಕನಿಷ್ಟ ವಯಸ್ಸು. ೨. ಒಬ್ಬ ಹುಡುಗಿಯು ಲೈಂಗಿಕ ಸಂಪರ್ಕಕ್ಕೆ ಒಪ್ಪುವಂತಹ ಕನಿಷ್ಟ ವಯಸ್ಸು.

age of enlightenment: ತಿಳುವಳಿಕೆಯ ವಯಸ್ಸು; ಜ್ಞಾನೋದಯ ಯುಗ.

age of high mass consumption: ಉನ್ನತ ಮಟ್ಟದ ಅನುಭೋಗ ಹೊಂದಿರುವ ಹಂತ.

age of transformation: ಪರಿವರ್ತನೆಯ ಯುಗ.

age pattern: ವಯೋ ವಿನ್ಯಾಸ.

age role: ವಯೋ ಪಾತ್ರ.

age set: ವಯೋಗುಂಪು. ಸಮವಯಸ್ಸಿನವರೆಂದು ನಿರ್ಧರಿಸಲ್ಪಟ್ಟ ಗಂಡು ಅಥವಾ ಹೆಣ್ಣು ಸದಸ್ಯರನ್ನು ಹೊಂದಿರುವ ಔಪಚಾರಿಕ ಸಮೂಹ.

age-sex pyramid: ವಯೋ-ಲಿಂಗ ಗೋಪುರ.

age-sex specific birth rate: ವಯೋಲಿಂಗ ನಿರ್ದಿಷ್ಟ ಜನನ ದರ. ಒಂದು ನಿರ್ದಿಷ್ಟ ಲಿಂಗ ಹಾಗೂ ವಯಸ್ಸಿನ ಗುಂಪಿನಲ್ಲಿ ಪ್ರತಿ ಸಾವಿರಕ್ಕೆ ಎಷ್ಟು ಮಂದಿ ಹುಟ್ಟುತ್ತಾರೆ ಎಂಬ ಲೆಕ್ಕಾಚಾರ.

age-sex specific death rate: ವಯೋಲಿಂಗ ನಿರ್ದಿಷ್ಟ ಮರಣ ದರ. ಒಂದು ನಿರ್ದಿಷ್ಟ ಲಿಂಗ ಹಾಗೂ ವಯಸ್ಸಿನ ಗುಂಪಿನಲ್ಲಿ ಪ್ರತಿ ಸಾವಿರಕ್ಕೆ ಎಷ್ಟು ಮಂದಿ ಸಾಯುತ್ತಾರೆ ಎಂಬ ಲೆಕ್ಕಾಚಾರ.

age- sex specific fertility rate: ನೋಡಿ: age sex specific birth rate.

age specific birth rate: ನೋಡಿ: age specific fertility rate.

age specific death rate: ವಯೋ ನಿರ್ದಿಷ್ಟ ಮರಣ ದರ. ಒಂದು ನಿರ್ದಿಷ್ಟ ವಯಸ್ಸಿನ ಗುಂಪಿನಲ್ಲಿ ಪ್ರತಿ ಸಾವಿರಕ್ಕೆ ಎಷ್ಟು ಮಂದಿ ಸಾಯುತ್ತಾರೆ ಎಂಬ ಲೆಕ್ಕಾಚಾರ.

age specific fertility rate: ವಯೋ ನಿರ್ದಿಷ್ಟ ಫಲವಂತಿಕೆಯ ದರ. ಒಂದು ನಿರ್ದಿಷ್ಟ ವಯೋ ಪ್ರಮಾಣದ ಸಾವಿರ ಜನ

ರಲ್ಲಿ ಹುಟ್ಟುವ ಮಕ್ಕಳ ಸಂಖ್ಯೆಯ ಲೆಕ್ಕಾಚಾರ.

age status: ವಯೋ ಅಂತಸ್ತು.

age stratification: ವಯೋಸ್ತರ ವಿನ್ಯಾಸ.

age structure: ನೋಡಿ: age com position.

ageism: ಪ್ರಾಯಭೇದವಾದ. ಪ್ರಾಯ ಭಿನ್ನತೆಗನುಗುಣವಾಗಿ ವ್ಯಕ್ತಿಗಳನ್ನು ಸಮಾಜದಲ್ಲಿ ಪ್ರತ್ಯೇಕಿಸಿ ಗುರುತಿಸುವ, ಗೌರವಿಸುವ ಅಥವಾ ತಿರಸ್ಕರಿಸುವ ಕ್ರಮ. ಉದಾ: ವೃದ್ಧರ ಬಗ್ಗೆ ಗೌರವ ಅಥವಾ ಅಲಕ್ಷ್ಯ.

ageless: ಕಾಲಾತೀತ; ಪ್ರಾಯ ರಹಿತ; ಬೆಳವಣಿಗೆಯೇ ಕಾಣದ.

agelicism: ಸಮೂಹ ಪ್ರಧಾನ ಸಿದ್ಧಾಂತ. ಸಮೂಹವು ವ್ಯಕ್ತಿಗಿಂತ ಮೊದಲೇ ಅಸ್ತಿತ್ವದಲ್ಲಿರುವುದರಿಂದ ಸಮೂಹವೇ ಆತನ ಭಾವ, ಭಾವನೆ, ಮೌಲ್ಯಗಳು ಹಾಗೂ ಸಂಸ್ಕೃತಿಯನ್ನು ರೂಪಿಸುತ್ತದೆ ಎಂದು ಇಮೈಲ್ ಡರ್ಖೈಂ ಹಾಗೂ ಇತರರು ಮಂಡಿಸಿದ ಸೈದ್ಧಾಂತಿಕ ಪ್ರತಿಪಾದನೆ.

agency: ನಿಯೋಗಿ; ಕಾರ್ಯಭಾರಿ.

agency service: ನಿಯೋಗಿ ಸೇವೆ; ಮಧ್ಯವರ್ತಿ ಸೇವೆ.

agenitalism: ಲಿಂಗ ಸಂದಿಗ್ಧತೆ; ಲಿಂಗ ನಿರ್ಧಾರವಾಗದ ಸ್ಥಿತಿ.

agglomeration: ಜನ ನಿಬಿಡತೆ. ದೊಡ್ಡ ನಗರಗಳಲ್ಲಿ ಕಂಡುಬರುವ ಜನ ನಿಬಿಡತೆ.

aggregate: ಸಮುಚ್ಚಯ. ೧. ಸಾಮಾಜಿಕವಾಗಿ ಸಂಘಟಿತರಲ್ಲದ ಆದಾಗ್ಯೂ ಕೆಲವು ಸಮಾನ ಲಕ್ಷಣಗಳುಳ್ಳ (ಉದಾ: ಉದ್ಯೋಗ) ಜನ ಸಮೂಹ. ೨. ಪರಸ್ಪರ ಯಾವುದೇ ಸಂಘಟನೆಯಿಲ್ಲದೆ, ತಾತ್ಕಾಲಿಕವಾಗಿ ದೈಹಿಕ ಸಾಮೀಪ್ಯ ಇರುವ ಜನರ ಗುಂಪು. ಉದಾ: ಪ್ರೇಕ್ಷಕರು, ತಾತ್ಕಾಲಿಕ ಗುಂಪು ಇತ್ಯಾದಿ.

aggregate demand: ಸಮಗ್ರ ಬೇಡಿಕೆ; ಒಟ್ಟು ಬೇಡಿಕೆ. ಅರ್ಥವ್ಯವಸ್ಥೆಯೊಂದರಲ್ಲಿ ರಾಷ್ಟ್ರೀಯ ಆದಾಯ ಮತ್ತು ಖರ್ಚುಗಳನ್ನೊಳಗೊಂಡ ಎಲ್ಲಾ ಬೇಡಿಕೆಗಳ ಒಟ್ಟು ಮೊತ್ತ.

aggregative analysis: ಸಮಗ್ರತೆಯ ವಿಶ್ಲೇಷಣೆ.

aggression: ೧.ಆಕ್ರಮಣ. ಒಂದು ರಾಜ್ಯದ ಪ್ರದೇಶವನ್ನು ವಶಪಡಿಸಿಕೊಳ್ಳಲು ಮತ್ತು ಅದನ್ನು ಆರ್ಥಿಕವಾಗಿಯೂ ರಾಜಕೀಯವಾಗಿಯೂ ತನ್ನ ಅಧೀನಕ್ಕೊಳಪಡಿಸಲು ನಡೆಸುವ ಸಶಸ್ತ್ರ ಧಾಳಿ. ೨. ದುರಾಕ್ರಮಣ. ಸಾಮಾನ್ಯವಾಗಿ ಆಶಾಭಂಗದ ಪರಿಣಾಮವಾಗಿ ಇನ್ನೊಬ್ಬರನ್ನು ಅಥವಾ ಅವರ ವಸ್ತುಗಳನ್ನು ಹಾನಿಗೊಳಿಸುವಂತಹ ಉಗ್ರವರ್ತನೆ.

aggressive behaviour: ಉಗ್ರ ವರ್ತನೆ.

aggressive crowd: ಆಕ್ರಮಣಕಾರಿ ಜನಜಂಗುಳಿ.

aggressive instinct: ಅತಿಕ್ರಮಣ ಪ್ರವೃತ್ತಿ; ಉಗ್ರ ಪ್ರವೃತ್ತಿ.

aggressive mob: ಉಗ್ರ ಜನಜಂಗುಳಿ.

aggressive nationalism: ಉಗ್ರ ರಾಷ್ಟ್ರೀಯತೆ.

aggressive outburst: ಆಕ್ರಮಣಕಾರೀ ಭಾವಸ್ಫೋಟ.

aggressive tendency: ಆಕ್ರಮಣಕಾರೀ ಪ್ರವೃತ್ತಿ.

aggressiveness: ಆಕ್ರಮಣಶೀಲತೆ; ಕೋಪಾವಿಷ್ಟತೆ.

aggrieved party: ನೊಂದ ಪಕ್ಷ; ನೊಂದ ವ್ಯಕ್ತಿ.

agitated depression: ವ್ಯಗ್ರ ವಿಷಾದ; ವ್ಯಗ್ರ ಕ್ಷತಿ. ಕೋಪ, ಸಿಡುಕು, ಚಡಪಡಿಕೆ ಇವುಗಳಿಂದ ಕೂಡಿದ ವಿಷಾದ ಮನೋವಿಕೃತಿ.

agitation: ೧. ವ್ಯಗ್ರತೆ. ೨. ಆಂದೋಲನ; ಉದ್ರಿಕ್ತ ಚಳವಳಿ. ಸಾಮಾಜಿಕ-ರಾಜಕೀಯ ಉದ್ದೇಶಗಳಿಗಾಗಿ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸಲು ನಡೆಸುವ ಜನಾಂದೋಲನ.

agitophasia: ಗಲಿಬಿಲಿ ಬೇನೆ.

agnate: ಪಿತೃವಂಶ ಸಂಬಂಧಿ. ಪಿತೃ ಮೂಲೀಯವಾಗಿ ಗುರುತಿಸಲ್ಪಡುವ ಸಂಬಂಧಿಕರು.

agnatic descent: ಪಿತೃಮೂಲ ವಂಶಾವಳಿ. ಗಂಡು ಸಂತತಿಯ ಮೂಲಕ ಹೆಸರು, ಆಸ್ತಿ ಮತ್ತು ಅಧಿಕಾರದ ವರ್ಗಾವಣೆ.

agnatic kinship: ನೋಡಿ: patrilineal kinship.

agnation: ಪಿತೃಮೂಲೀಯ.

agnostic: ಅಜ್ಞೇಯತಾವಾದಿ. ದೇವರ ಅಸ್ತಿತ್ವವನ್ನಾಗಲೀ ಮತ್ತೇನನ್ನೇ ಆಗಲೀ ಇಂದ್ರಿಯ ಗೋಚರವಾದ ಸಾಕ್ಷಿಯ ವಿನಾ ಒಪ್ಪದಿರುವುದು.

agoraphobia: ವೈಶಾಲ್ಯಭೀತಿ. ಬಯಲು, ಮೈದಾನದಂತಹ ತೆರೆದುಕೊಂಡ ಸ್ಥಳಗಳಲ್ಲಿ ಒಬ್ಬನೇ ಇರಲು ವಿಪರೀತವಾಗಿ ಭಯಪಟ್ಟುಕೊಳ್ಳುವುದು.

agrarian crisis: ಕೃಷಿಕ ಬಿಕ್ಕಟ್ಟು. ಭೂಮಿಯ ಸ್ವಾಮ್ಯ, ನಿಯಂತ್ರಣ ಹಾಗೂ ಉಪಯೋಗಕ್ಕೆ ಸಂಬಂಧಿಸಿದ ಸಮಸ್ಯೆಗಳಿಂದಾಗಿ ಕೃಷಿಕ ಸಮಾಜದಲ್ಲುಂಟಾದ ಬಿಕ್ಕಟ್ಟು.

agrarian law: ಕೃಷಿಕ ಶಾಸನ.

agrarian reforms: ಕೃಷಿಕ ಸುಧಾರಣೆಗಳು. ಕೃಷಿಕ ಸಮಾಜದ ಅಭಿವೃದ್ಧಿಗಾಗಿ ಕೈಗೊಳ್ಳಲಾದ ಗೇಣಿ ರದ್ದತಿ, ಭೂಮಿತಿ ಶಾಸನ, ಭೂರಹಿತರಿಗೆ ಭೂಮಿಯ ಹಂಚೋಣ ಇತ್ಯಾದಿ ಸುಧಾರಣಾ ಕಾರ್ಯಕ್ರಮಗಳು.

agrarian revolution: ಕೃಷಿಕ ಕ್ರಾಂತಿ. ೧. ಕೃಷಿಯಲ್ಲಿ ತೊಡಗಿಸುವ ಶ್ರಮ, ತಾಂತ್ರಿಕತೆ, ಗೊಬ್ಬರದ ಬಳಕೆ, ಉತ್ಪಾದನೆಯಲ್ಲಿ ಹೆಚ್ಚಳ, ಮಾರುಕಟ್ಟೆಗಾಗಿ ಉತ್ಪಾದನೆ ಇತ್ಯಾದಿಗಳಲ್ಲಿ ಉಂಟಾಗಿರುವ ಪರಿವರ್ತನೆಗಳು. ೨. ಕೃಷಿಕರು ತಮ್ಮ ಶೋಷಣೆಯ ವಿರುದ್ಧ ಸಂಘಟಿತರಾಗಿ ನಡೆಸುವ ಕ್ರಾಂತಿ.

agrarian society : ಕೃಷಿಕ ಸಮಾಜ.

agrarian surplus population: ಕೃಷಿಕ ಮಿಗತೆ ಜನಸಂಖ್ಯೆ.

agrarian values: ಕೃಷಿಕ ಮೌಲ್ಯಗಳು.

agri-business: ಕೃಷಿಯಾಧಾರಿತ ವ್ಯವಹಾರ. ಕೃಷಿಯ ಮೇಲೆ ಅವಲಂಬಿತವಾದ ಆರ್ಥಿಕ ಚಟುವಟಿಕೆಗಳು. ಉದಾ: ಮಾರುಕಟ್ಟೆಯ ಒಲವನ್ನು ನೋಡಿಕೊಂಡು

ಲಾಭ ತರುವ ಕೃಷ್ಯುತ್ಪಾದನೆಗೆ ತೊಡಗುವುದು.

agricultural census: ಕೃಷಿ ಜನಗಣತಿ.

agricultural deity: ಕೃಷಿ ದೇವತೆ.

agricultural economics: ಕೃಷಿ ಅರ್ಥಶಾಸ್ತ್ರ.

agricultural labourer: ಕೃಷಿ ಕಾರ್ಮಿಕ.

agricultural ladder: ಕೃಷಿ ಏಣಿ. ಕೃಷಿ ಪ್ರಧಾನವಾಗುಳ್ಳ ಸಾಮಾಜಿಕ ವರ್ಗಗಳಲ್ಲಿ ಲಂಬಾಂತರ ಸಾಮಾಜಿಕ ಚಲನೆಯ ಸೂಚಕ. ವರ್ಗೋನ್ನತಿಯ ಸಾಧನವಾಗಿ ಕೃಷಿ.

agricultural revolution: ಕೃಷಿ ಕ್ರಾಂತಿ. ನೋಡಿ: agrarian revolution.

agricultural social system: ಕೃಷಿಯಾಧಾರಿತ ಸಾಮಾಜಿಕ ವ್ಯವಸ್ಥೆ.

agricultural stage: ಕೃಷಿ ಪ್ರಧಾನ ಹಂತ.

agricultural village: ಕೃಷಿ ಗ್ರಾಮ; ವ್ಯವಸಾಯ ಗ್ರಾಮ.

agro-biology: ಕೃಷಿ ಜೀವಶಾಸ್ತ್ರ.

agro service centre: ಕೃಷಿ ಸೇವಾ ಕೇಂದ್ರ.

agrofacts: ಕೃಷಿ ಉತ್ಪನ್ನಗಳು.

alcoholic psychosis: ಮದ್ಯವ್ಯಸನ ಮನೋವಿಕ್ಷಿಪ್ತಿ. ಮದ್ಯಪಾನಜನ್ಯ ಮನೋವಿಕ್ಷಿಪ್ತಿ. ದೀರ್ಘಕಾಲ ಅಮಲೇರಿಸುವ ಪದಾರ್ಥಗಳನ್ನು ಸೇವಿಸುವುದರಿಂದ ಉಂಟಾಗುವ ಮನೋರೋಗ.

Alcoholics Anonymous: ಅನಾಮಧೇಯ ಮದ್ಯವರ್ಜಿತರು. ಮದ್ಯವ್ಯಸನವನ್ನು ಬಿಟ್ಟು ಅದರ ದುಷ್ಪರಿಣಾಮಗಳನ್ನು ಮನದಟ್ಟು ಮಾಡಿಕೊಂಡು ಮತ್ತೊಮ್ಮೆ ಚಟಕ್ಕೊಳಗಾಗದಂತೆ ಪಾನಮುಕ್ತತೆಯ ಲಾಭಗಳನ್ನು ಚರ್ಚಿಸುವ ಮದ್ಯವರ್ಜಿಸಿದವರ ಸಂಘ.

alcoholism: ಮದ್ಯ ವ್ಯಸನ.

alcoholo mania: ಮದಿರೋನ್ಮಾದ.

aleatory element in religion: ಧರ್ಮದ ಅದೃಷ್ಟಾಂಶ. ಯಾವುದಾದರೂ ಅನಿರೀಕ್ಷಿತ ಅಥವಾ ಅನಿಯಂತ್ರಿತ ಘಟನೆಗಳ ಪ್ರಭಾವದಿಂದಾಗಿ ವ್ಯಕ್ತಿಯಲ್ಲಿ ನೆಲೆಗೊಳ್ಳುವ ಧಾರ್ಮಿಕತೆ.

algolagnia: ಪರಪೀಡಾರತಿ.

algophobia: ಪೀಡಾಭೀತಿ.

alien: ಪರಕೀಯ.

alien resident: ವಿದೇಶೀ ನಿವಾಸಿ; ಅನ್ಯದೇಶೀಯ ನಿವಾಸಿ.

alienation: ೧. ಪರಕೀಯತೆ. ಭೌತಿಕವಾಗಿ ಸಮುದಾಯದೊಳಗಿದ್ದೂ ಅವಗಣಿತನಾದಾಗ ವ್ಯಕ್ತಿಗೆ ಉಂಟಾಗುವ ಭಾವನೆ. ೨. ಪ್ರತ್ಯೇಕಿಸುವಿಕೆ. ಭೂಮಿಯನ್ನು ಪಾಲು ಮಾಡಿ ಅಥವಾ ಮಾರಾಟ ಮಾಡಿ ಪ್ರತ್ಯೇಕಿಸುವುದು.

alimony: ಜೀವನಾಂಶ. ಉದಾ: ಸ್ತ್ರೀಯರಿಗೆ ಆಸ್ತಿ ಹಕ್ಕು ಇಲ್ಲದಿದ್ದ ಕಾಲದಲ್ಲಿ ವಿಧವೆಯರಿಗೆ ಅಥವಾ ತ್ಯಜಿಸಲ್ಪಟ್ಟವರಿಗೆ ಜೀವನ ನಿರ್ವಹಣೆಗಾಗಿ ಮಾಸಿಕವಾಗಿ ಅಥವಾ ವಾರ್ಷಿಕವಾಗಿ ಗಂಡನ ಕುಟುಂಬದವರು ನೀಡುತ್ತಿದ್ದ ಹಣ. ವಿವಾಹ ವಿಚ್ಛೇದನ ಪಡೆದ ಹೆಣ್ಣಿಗೆ ಜೀವನ ನಿರ್ವಹಣೆ

ಗಾಗಿ ವಿಚ್ಛೇದಿತ ಗಂಡು ನೀಡಬೇಕೆಂದು ನ್ಯಾಯಾಲಯವು ವಿಧಿಸುವ ಹಣ.

allelotype: ತಳಿಸಂರಚನೆ. ಒಂದು ಜನಾಂಗದ ಅನುವಂಶೀಯತೆಯ ಸಂರಚನೆ.

alliance: ಮೈತ್ರಿಕೂಟ. ಸರಕಾರವನ್ನು ರಚಿಸಲು ವಿವಿಧ ತಾತ್ವಿಕ ನೆಲೆಗಳುಳ್ಳ ಪಕ್ಷಗಳು ಸಾಮಾನ್ಯ ಸಂಹಿತೆಯಡಿಯಲ್ಲಿ ಸಂಘಟಿಸುವ ಒಕ್ಕೂಟ.

allied jatis: ನಿಕಟವರ್ತಿ ಜಾತಿಗಳು; ಜಾತಿಪದ್ಧತಿಯ ಏಣಿಶ್ರೇಣಿಯಲ್ಲಿ ಒಂದರ ಮೇಲೊಂದರಂತೆ ಇರುವ ಸಮೀಪ ಸ್ಥಿತಿಯ ಜಾತಿಗಳು.

allied powers: ಮಿತ್ರ ರಾಷ್ಟ್ರಗಳು.

allocation of facilities: ಸೌಲಭ್ಯಗಳ ಹಂಚಿಕೆ.

allocation of roles: ಪಾತ್ರಗಳ ಹಂಚಿಕೆ.

allocative function: ಹಂಚುವಿಕೆಯ ಕಾರ್ಯ. ವ್ಯಕ್ತಿಯ ಬುದ್ಧಿಮತ್ತೆ ಮತ್ತು ಕೌಶಲ್ಯಗಳಿಗನುಗುಣವಾಗಿ ಸರಿಯಾದ ಸಾಮಾಜಿಕ ಸ್ಥಾನಮಾನಗಳಿಗೆ ತಲುಪುವಂತೆ ಮಾಡುವ ಶಿಕ್ಷಣ, ಕಾನೂನು ಇತ್ಯಾದಿಗಳ ಕಾರ್ಯ.

allogamy: ಪ್ರನಾಳ ಗರ್ಭಧಾರಣೆ. ಅನ್ಯ ಪರಾಗ ಸಂಪರ್ಕದಿಂದಾಗುವ ಗರ್ಭ ಧಾರಣೆ.

allometry: ಶರೀರ ಮಾಪನ. ಮಾನವ ಶರೀರದ ಭಾಗಗಳು ಬೆಳವಣಿಗೆಯ ಹಂತದಲ್ಲಿ ತೋರುವ ಭಿನ್ನತೆಗಳನ್ನು ತುಲನಾತ್ಮಕವಾಗಿ ವಿವರಿಸುವ ಮಾಪಕ.

allomotif : ಸಹ ಆಶಯ; ಉಪಾಶಯ.

allopatric group: ವಿಭಿನ್ನ ಪರಿಸರ ಸಮೂಹ. ತನ್ನ ಅನನ್ಯತೆಯನ್ನು ಕಾಪಾಡಿಕೊಂಡು ತನ್ನದೇ ಆದ ಭೌಗೋಳಿಕ ಪ್ರದೇಶದಲ್ಲಿ ವಾಸಿಸುವ ಸಾಂಸ್ಕೃತಿಕ ಗುಂಪು.

allotment order: ಹಂಚಿಕೆ ಆದೇಶ.

allrightnick: ಆಮದು ಸಂಸ್ಕೃತಿ. ವಲಸೆ ಬಂದವನು ತನ್ನೊಡನೆ ಆ ದೇಶದ ಸಂಸ್ಕೃತಿಯನ್ನೂ ತರುವುದು.

altar: ಬಲಿಪೀಠ. ಯಜ್ಞವೇದಿಕೆ. ದೇವತೆಗಳಿಗೆ ಹವಿಸ್ಸನ್ನು ನೀಡುವ ಬಲಿಪೀಠ.

alternative hypothesis: ಪರ್ಯಾಯ ಊಹನೆ.

alternative mythical family: ಪರ್ಯಾಯ ದೈವೀ ಕುಟುಂಬ.

altruism: ಪರಹಿತವಾದ, ಪರಹಿತ ನಿಷ್ಠೆ. ತನ್ನ ಸ್ವಂತ ಸುಖ ಅಥವಾ ಇಚ್ಛೆಯನ್ನು ಕಡೆಗಣಿಸಿ ಪರಹಿತಕ್ಕಾಗಿ ಕೆಲಸ ಮಾಡುವಿಕೆ.

altruistic suicide: ಪರಹಿತವಾದಿ ಆತ್ಮಹತ್ಯೆ. ಇಮೈಲ್ ಡರ್ಖೈಂ ವರ್ಗೀಕರಿಸಿದ ಒಂದು ಬಗೆಯ ಆತ್ಮಹತ್ಯೆ. ವ್ಯಕ್ತಿಯು ತನ್ನ ಹಿತಕ್ಕಿಂತ ಲೋಕಹಿತ ಮುಖ್ಯವೆಂಬ ಭಾವದಿಂದ ಪ್ರೇರಿತನಾಗಿ ಮಾಡುವ ಆತ್ಮಹತ್ಯೆ.

amalgamation: ಸಂಯೋಗ; ಸಮ್ಮಿಲನ; ಸಮಾವೇಶ. ಒಂದು ಜನಾಂಗ ಇನ್ನೊಂದರೊಡನೆ ಸಾಂಸ್ಕೃತಿಕವಾಗಿ ಅಥವಾ ಸಂಕರವಾಗಿ ಬೆರೆತು ಒಂದಾಗುವುದು.

amasiado: ಅಮಾಸಿಯಾಡೊ. ಮಾತೃಪ್ರಧಾನವಾಗಿರುವ ಆಫ್ರಿಕಾದ ಕೆಲವೊಂದು ನೀಗ್ರೋ ಸಮೂಹಗಳಲ್ಲಿ ಪ್ರಚಲಿತವಾಗಿರುವ ಗಂಡು ಹೆಣ್ಣಿನ ಲೈಂಗಿಕ ಸಂಬಂಧದ ಸರಳ ನಿಯಮಾವಳಿ.

ambience: ಸಾಂದರ್ಭಿಕ ಸಾಮುದಾಯಿ

ಕತೆ. ವ್ಯಕ್ತಿಗಳು ಯಾವುದಾದರೊಂದು ನಿಶ್ಚಿತ ಉದ್ದೇಶಕ್ಕಾಗಿ ಮಾತ್ರ ಒಂದಾಗುವ ಸನ್ನಿವೇಶ. ಇದು ನಗರಗಳಲ್ಲಿ ಕಂಡುಬರುತ್ತದೆ. ಸಾಮಾನ್ಯವಾಗಿ ತಮ್ಮಷ್ಟಕ್ಕೇ ಇರುವ ಜನರು ಸಮಸ್ಯೆಗಳ ಪರಿಹಾರಕ್ಕಾಗಿ ಮಾತ್ರ ಒಟ್ಟು ಸೇರುತ್ತಾರೆ.

ambilateral: ಉಭಯ ಬಂಧುತ್ವ. ಒಬ್ಬ ವ್ಯಕ್ತಿಗೆ ತನ್ನ ತಂದೆ ಅಥವಾ ತಾಯಿಯ ರಕ್ತ ಬಂಧುತ್ವ ಸಮೂಹಕ್ಕೆ ಸೇರಿಕೊಳ್ಳಲು ಆಯ್ಕೆ ಹಕ್ಕು ಇರುವ ಬಂಧುತ್ವ ವ್ಯವಸ್ಥೆ.

ambilocal residence: ಉಭಯ ವಾಸ್ತವ್ಯ. ಹೊಸದಾಗಿ ಮದುವೆಯಾದ ಜೋಡಿಗೆ ಹುಡುಗನ ಅಥವಾ ಹುಡುಗಿಯ ತಂದೆ ತಾಯಿಗಳೊಂದಿಗೆ ಅವರಿಚ್ಛೆಯಂತೆ ವಾಸಿಸಲು ಅವಕಾಶವಿರುವ ಪದ್ಧತಿ.

ambivalence: ದ್ವಂದ್ವ ಭಾವ. ಯಾವುದೇ ವಸ್ತು, ವ್ಯಕ್ತಿ ಯಾ ಕೃತಿಯ ಬಗ್ಗೆ ಇರುವ ಆಕರ್ಷಣೆ ಹಾಗೂ ಅಪಕರ್ಷಣೆಯ ವೈರುಧ್ಯ ಭಾವನೆಗಳ ತಾಕಲಾಟ.

ambivalent situation: ದ್ವಿವಿಧ ಪರಿಸ್ಥಿತಿ; ಗೊಂದಲದ ಪರಿಸ್ಥಿತಿ.

ambivert: ಉಭಯಮುಖಿ. ಅಂತರ್ಮುಖತೆ ಮತ್ತು ಬಹಿರ್ಮುಖತೆಯ ಎರಡೂ ಲಕ್ಷಣಗಳನ್ನು ಪಡೆದ ವ್ಯಕ್ತಿತ್ವ.

ambulatory passage: ಪ್ರದಕ್ಷಿಣಾ ಪಥ; ಪರಿಕ್ರಮಣ ಪ್ರಾಂಗಣ.

ambulatory schizophrenia: ಮೃದು ಮನೋ ವಿಚ್ಛಿದ್ರ ರೋಗ; ಚಂಚಲ ಚಿತ್ತ.

ameliorative measure: ಪರಿಹಾರ ಕ್ರಮ. ಸಮಸ್ಯೆಗಳ ಪರಿಹಾರಕ್ಕಾಗಿ ಕೈಗೊಂಡ ಕಾರ್ಯಕ್ರಮಗಳು.

amending authority: ತಿದ್ದುಪಡಿ ಅಧಿಕಾರ.

amendment: ತಿದ್ದುಪಡಿ.

amenities fund: ಸೌಲಭ್ಯ ನಿಧಿ.

amicable settlement: ಸೌಹಾರ್ದ ಯುತ ಒಪ್ಪಂದ.

amildar: ಅಮಲದಾರ; ಕಂದಾಯ ನ್ಯಾಯಾಧಿಕಾರಿ.

amitate: ಪಿತೃ ಭಗಿನೀ ಸಂಬಂಧ. ಕೆಲವು ಸಮುದಾಯಗಳಲ್ಲಿ ಬಳಕೆಯಲ್ಲಿರುವ ಸೋದರತ್ತೆ ಹಾಗೂ ಸೋದರಳಿಯ ಅಥವಾ ಸೊಸೆಯ ನಡುವಿನ ವಿಶೇಷ ಸಂಬಂಧ.

amnesia: ವಿಸ್ಮೃತಿ; ಮರೆವು. ಬಾಳಿನ ಕೆಲವು ಘಟನೆಗಳ ಮರೆವು ಅಥವಾ ಬದುಕಿನ ಕೆಲಕಾಲದ ಪೂರ್ಣ ಸ್ಮರಣೆ ಅಳಿಸಿ ಹೋಗುವುದು.

amorality: ಅನೈತಿಕತೆ. ನೈತಿಕ ನಿಯಮಗಳ ಉಲ್ಲಂಘನೆ ಅಥವಾ ಅಲಕ್ಷ್ಯ ತಾಳಿರುವಿಕೆ.

amulet: ತಾಯಿತ; ರಕ್ಷಾಕರಂಡಕ. ದುಷ್ಟ ಶಕ್ತಿಗಳಿಂದ ನಿವಾರಣೆ ಹೊಂದಲು ಅಥವಾ ಸಂರಕ್ಷಿಸಿಕೊಳ್ಳಲು ಕಟ್ಟಿಕೊಳ್ಳುವ ಮಾಂತ್ರಿಕ ವಸ್ತು.

anachronism: ಕಾಲವಿರೋಧ. ಯಾವುದೇ ಸಂಗತಿಯ ಇರುವಿಕೆ ಅಥವಾ ಸಂಭವಿಸುವಿಕೆಯು ಅಕಾಲದಲ್ಲಿ ಅಥವಾ ಐತಿಹಾಸಿಕವಲ್ಲದ ಕಾಲದಲ್ಲಿ ಕಂಡುಬರುವುದು.

anaclitic depression: ಪರಾವಲಂಬಿ ಖಿನ್ನತೆ. ತಾಯಿಯ ಮಡಿಲಿನ ಸುಖವನ್ನು ಅನುಭವಿಸುತ್ತಿದ್ದ ಮಗುವಿಗೆ ಮಾತ್ರ ವಿಯೋಗ ಸಂಭವಿಸಿದ ಬಳಿಕ ಉಂಟಾಗುವ ಪರಾವಲಂಬಿ ಖಿನ್ನತೆ.

anal crisis: ಶೌಚ ಸಂಕಟ. ಸುಮಾರು ೨ ರಿಂದ ೪ ವರ್ಷ ವಯಸ್ಸಿನಲ್ಲಿ ಮಗುವು ಮಲವಿಸರ್ಜನೆ ಮತ್ತು ಶುಚಿಗೊಳ್ಳುವ ನಿಯಮಗಳಿಗೆ ಒಗ್ಗಿಕೊಳ್ಳಲು ಪಡುವ ಕಷ್ಟ.

anal stage: ಶೌಚ ಶಿಕ್ಷಣದ ಹಂತ. ಸಮಾಜೀಕರಣದ ದ್ವಿತೀಯ ಹಂತ. ಇದರಲ್ಲಿ ಶಿಶುವು ಶೌಚಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಅಭ್ಯಾಸಗಳನ್ನು ಕಲಿಯುವುದಲ್ಲದೆ ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ತಿಳಿಯಲು ತೊಡಗುತ್ತದೆ.

analgesia: ನೋವಳಿಕೆ; ದು:ಖಾನುಭವ ಶೂನ್ಯತೆ. ನೋವಿನ ಸಂವೇದನೆ ಪೂರ್ತಿ ಅಥವಾ ಸ್ವಲ್ಪ ಮಟ್ಟಿಗೆ ನಾಶವಾಗಿರುವುದು.

analgia: ನೋಡಿ: analgesia.

analogical method: ಸಾದೃಶ್ಯ ಪದ್ಧತಿ. ಒಂದು ವಿಷಯವನ್ನು ಅಂತಹುದೇ ಇನ್ನೊಂದು ವಿಷಯದ ಹೋಲಿಕೆಯ ಮೂಲಕ ಅಭ್ಯಸಿಸುವುದು. ಉದಾ: ಜೀವ ವಿಕಾಸ ಸಿದ್ಧಾಂತವು ಜೀವಿಗಳ ಹಾಗೂ ಸಮಾಜದ ಸಾದೃಶ್ಯಗಳ ವಿವರಣೆಯ ಮೇಲೆ ನಿಂತಿದೆ.

analogical thinking: ಸಾದೃಶ್ಯಾತ್ಮಕ ಚಿಂತನೆ.

analogies test: ಸಾದೃಶ್ಯಗಳ ಪರೀಕ್ಷೆ.

analogue model: ಸಾದೃಶ್ಯ ಮಾದರಿ. ಎರಡು ಸಂಗತಿಗಳ ನಡುವೆ ಇರುವ ಸಮಾನ ಗುಣಲಕ್ಷಣಗಳ ಆಧಾರದ ಮೇಲೆ ರೂಪಿಸಿದ ಮಾದರಿ.

analogy: ಸಾದೃಶ್ಯತೆ. ಎರಡು ವಿಷಯಗಳ ನಡುವೆ ಕೆಲವು ಅಥವಾ ಎಲ್ಲಾ ಗುಣ ಲಕ್ಷಣಗಳಲ್ಲಿ ಸಮಾನತೆ ಅಥವಾ ಏಕ ರೂಪತೆ ಇರುವಿಕೆ.

analysis: ವಿಶ್ಲೇಷಣೆ. ಒಂದು ವಸ್ತುವನ್ನು ಅದರ ಮೂಲಾಂಶದವರೆಗೆ ಒಡೆದು ನೋಡಿ ಅದರ ಸ್ವರೂಪ, ಉಪಯುಕ್ತತೆ ಹಾಗೂ ಇನ್ನಿತರ ವಸ್ತುಗಳೊಂದಿಗಿನ ಸಂಬಂಧವನ್ನು ಪರೀಕ್ಷಿಸುವುದು.

analytic induction: ವಿಶ್ಲೇಷಣಾತ್ಮಕ ಅನುಗಮನ.

analytic judgement: ವಿಶ್ಲೇಷಣಾತ್ಮಕ ನಿರ್ಣಯ.

analytic psychology: ವಿಶ್ಲೇಷಣಾ ಮನಶ್ಶಾಸ್ತ್ರ.

analytic psychotherapy: ವಿಶ್ಲೇಷಣಾತ್ಮಕ ಮನೋಚಿಕಿತ್ಸೆ. ಅಚೇತನದ ಪ್ರಭಾವ ಹೆಚ್ಚಾಗಿರುವ ಮನೋಬೇನೆಗಳಿಗೆ ಇಂತಹ ಚಿಕಿತ್ಸೆಯನ್ನು ಅನುಸರಿಸುತ್ತಾರೆ.

analytical aproach: ವಿಶ್ಲೇಷಣಾತ್ಮಕ ವಿಧಾನ.

analytical demography: ವಿಶ್ಲೇಷಣಾತ್ಮಕ ಜನಸಂಖ್ಯಾ ಶಾಸ್ತ್ರ.

analytical interview: ವಿಶ್ಲೇಷಣಾತ್ಮಕ ಸಂದರ್ಶನ.

analytical psychology: ನೋಡಿ: analytic psychology.

analytical school: ವಿಶ್ಲೇಷಣಾ ಪಂಥ.

anamnesis: ವಿಕಲ ಸ್ಮರಣೆ; ಪೂರ್ವ ಜನ್ಮ ಸ್ಮರಣೆ.

anaphrodisiac: ಕಾಮಶಾಮಕ. ಲೈಂಗಿಕ ತೃಷೆಯನ್ನು ಕಡಿಮೆಗೊಳಿಸಲು ಬಳಸುವ ಆಹಾರ ಅಥವಾ ಮಾದಕ ದ್ರವ್ಯ.

anarchism: ಅರಾಜಕತಾವಾದ. ಸಾಮಾಜಿಕ ಸಾಮರಸ್ಯಕ್ಕೆ ರಾಜಕೀಯ ಸರಕಾರ

ಅಗತ್ಯವಿಲ್ಲವೆಂಬ ವಾದ. ಪೈರೆ ಪ್ರೌಧನ್ ಹಾಗೂ ಮಿಖೈಲ್ ಬಕುನಿನ್ ಇದರ ಪ್ರತಿಪಾದಕರು. ಅವರ ಪ್ರಕಾರ ಆಸ್ತಿಯೆಲ್ಲವೂ ಸಾಮುದಾಯಿಕವಾಗಿರಬೇಕು ಹೊರತು ಖಾಸಗಿ ಆಸ್ತಿ ಇರಬಾರದು.

anarch-syndicalism: ಅರಾಜಕ-ವೃತ್ತಿ ಸಂಘವಾದ. ಕಾರ್ಮಿಕ ಚಳವಳಿಯಲ್ಲಿ ಮಾರ್ಕ್ಸ್‌ವಾದ-ಲೆನಿನ್ ವಾದಕ್ಕೆ ಪರಕೀಯ ವಾದ (ಭಿನ್ನವಾದ) ಮತ್ತು ವೈಚಾರಿಕವಾಗಿ ಅರಾಜಕತೆಯಿಂದ ಪ್ರಭಾವಿತವಾದ ಒಂದು ಸಿದ್ಧಾಂತ.

anarchy: ಅರಾಜಕತೆ. ಸರಕಾರದ ಅನುಪಸ್ಥಿತಿಯಲ್ಲಿ ಉಂಟಾಗುವ ಅಕ್ರಮಗಳು.

anarchy of production: ಉತ್ಪಾದನೆಯ ಅರಾಜಕತೆ. ಆರ್ಥಿಕ ನಿಯಮಗಳ ಯೋಜನೆ ಹಾಗೂ ಸಂಘಟನೆಗಳ ಕೊರತೆ ಇರುವ ಅವ್ಯವಸ್ಥೆ.

anasthesia: ಸ್ಪರ್ಶಜ್ಞಾನ ಹೀನತೆ; ವೇದನಾ ಶೂನ್ಯತೆ.

anatomical age: ದೈಹಿಕ ವಯಸ್ಸು, ದೈಹಿಕ ಲಕ್ಷಣಗಳಿಂದ ವಯಸ್ಸನ್ನು ನಿರ್ಧರಿಸುವುದು.

ancestor cult: ಪೂರ್ವಿಕರ ಆರಾಧನೆ.೧. ಪೂರ್ವಿಕರ ಪೂಜೆ ಅಥವಾ ಅವರ ಆತ್ಮದೊಂದಿಗಿನ ಸಂವಾದದ ಸಮಯದಲ್ಲಿ ನಡೆಸಲಾಗುವ ವಿಧಿಗಳು. ೨. ಗತಿಸಿದ ಪೂರ್ವಜರು ಲೋಕರಕ್ಷಕರೆಂದು ಪೂಜಿಸುವುದು.

ancestor worship: ನೋಡಿ: ancestor cult.

ancestral worship: ಪೂರ್ವಿಕರ ಪೂಜೆ.

ancestry: ಪುರಾತನತೆ; ವಂಶ ಪಾರಂಪರ್ಯ.

anchorage: ಅವಲಂಬನ; ಆಸರೆ.

anchorite: ವಿರಕ್ತ; ನಿಸ್ಸಂಗಿ. ಏಕಾಂತವಾಗಿರುವುದರಲ್ಲೇ ಸುಖ ಕಾಣುವವನು.

ancient law: ಪುರಾತನ ಕಾಯಿದೆ. ಪರಂಪರೆಯಿಂದ ಅನುಸರಿಸಲಾಗುತ್ತಿರುವ ಪದ್ಧತಿ, ನೈತಿಕ ನಿಯಮಗಳು ಇತ್ಯಾದಿ.

ancient mode of production: ಪ್ರಾಚೀನ ಉತ್ಪಾದನಾ ವಿಧಾನ.

ancillary service: ಅನುಷಂಗಿಕ ಸೇವೆ; ಸಹಾಯಕ ಸೇವೆ.

ancillary unit: ಪೂರಕ ಘಟಕ; ಅನುಷಂಗಿಕ ಘಟಕ.

androcracy: ಪುರುಷ ಪ್ರಧಾನತೆ.

androgyny: ದ್ವಿಲಿಂಗತ್ವ. ಒಂದೇ ಗಿಡದಲ್ಲಿ ಅಥವಾ ಹೂವಿನಲ್ಲಿ ಕೇಸರಗಳೂ, ಶಲಾಕಗಳೂ ಇರುವಂತಹ ದ್ವಿಲಿಂಗತ್ವ.

anecdotal record: ಘಟನೆಗಳ ವರದಿ; ಸಮ್ಮೇಳನ ಕಥಾನಕ ದಾಖಲೆ.

anecdote: ಆಖ್ಯಾಯಿಕೆ; ಅದ್ದಗತೆ.

animal ecology: ಪ್ರಾಣಿ ಪರಿಸರ ಶಾಸ್ತ್ರ. ಪ್ರಾಣಿಜೀವನಕ್ಕೂ ಪರಿಸರಕ್ಕೂ ಇರುವ ಸಂಬಂಧವನ್ನು ಅಧ್ಯಯನ ಮಾಡುವ ಶಾಸ್ತ್ರ.

animal instinct: ಪಶು ಪ್ರವೃತ್ತಿ. ಸಾಂಸ್ಕೃತಿಕ ಸ್ವರೂಪಕ್ಕೊಳಗಾಗದ ಮೂಲ ಪ್ರವೃತ್ತಿ.

animal lore: ಪ್ರಾಣಿ ಸಾಹಿತ್ಯ. ನೋಡಿ: animal tale.

animal society: ಪ್ರಾಣಿ ಸಮಾಜ. ಪ್ರತಿಯೊಂದು ಪ್ರಾಣಿವರ್ಗದಲ್ಲೂ ಕಂಡುಬರುವ ಸಾಮಾಜಿಕ ಸಂಬಂಧಗಳ ಸೂಕ್ಷ್ಮ ಲಕ್ಷಣಗಳು.

animal tale: ಪ್ರಾಣಿಕತೆ. ಪ್ರಾಣಿಗಳ ರೂಪ-ಸಾಮರ್ಥ್ಯಗಳನ್ನು ವಿವರಿಸುವ ಕತೆಗಳು.

animal worship: ಪ್ರಾಣಿ ಪೂಜೆ. ಕೆಲವು ಪ್ರಾಣಿಗಳಲ್ಲಿ ದೈವಶಕ್ತಿ ನೆಲೆಸಿದೆಯೆಂದು ತಿಳಿದು ಮಾಡುವ ಪೂಜೆ. ಉದಾ: ಗೋ ಪೂಜೆ. ನೋಡಿ: totemism.

animalism: ೧. ಪಶುಚೇಷ್ಟೆ. ಶಾರೀರಿಕ ಕ್ರಿಯೆಗಳಲ್ಲಿ ಮತ್ತು ಭೋಗಗಳಲ್ಲಿ ಅನುರಕ್ತಿ. ೨. ಮೃಗತ್ವ. ಇಂದ್ರಿಯ ಕಾಮನೆಗಳನ್ನು ಮನಬಂದಂತೆ ತೀರಿಸಿಕೊಳ್ಳುವಿಕೆ.

animatism: ಸಚೇತನವಾದ. ವ್ಯಕ್ತಿ ಗಳಲ್ಲಿ, ಪ್ರಾಣಿಗಳಲ್ಲಿ ಹಾಗೂ ನಿರ್ಜೀವ ವಸ್ತುಗಳಲ್ಲಿ ಕೂಡಾ ಅಲೌಕಿಕ ಶಕ್ತಿಯು ತುಂಬಿರುತ್ತದೆಂಬ ನಂಬಿಕೆ. ಈ ಶಕ್ತಿಯು 'ಮಾನಾ' (mana) ಎಂಬುದಾಗಿಯೂ ಹೇಳಲಾಗಿದ್ದು ಇದು ವ್ಯಕ್ತಿಯಿಂದ ವ್ಯಕ್ತಿಗೆ ಸಾಗುತ್ತದೆ. ಆರ್.ಆರ್.ಮರೆಟ್ ಎಂಬವರು ಈ ಪರಿಕಲ್ಪನೆಯನ್ನು ಬಳಕೆಗೆ ತಂದಿದ್ದು ಇದು ಇ.ಬಿ.ಟೈಲರ್‌ರವರ ಸರ್ವ ಚೇತನವಾದಕ್ಕಿಂತ ಭಿನ್ನವಾಗಿದೆ.

animism: ಸರ್ವಚೇತನವಾದ. ಎಲ್ಲಾ ಸಜೀವ ಹಾಗೂ ನಿರ್ಜೀವ ವಸ್ತುಗಳಲ್ಲಿ ಆಧ್ಯಾತ್ಮಿಕ ಹಾಗೂ ಅತಿ ಮಾನವ ಶಕ್ತಿಗಳಿವೆಯೆಂದು ಹೇಳುವ ಸಿದ್ಧಾಂತ. ಇದನ್ನು ತನ್ನ Primitive Culture ಕೃತಿಯಲ್ಲಿ ಇ.ಬಿ. ಟೈಲರನು ಪ್ರಚುರಪಡಿಸಿದನು.

animistic origin: ಸರ್ವಚೇತನ ಮೂಲ.

animistic theory: ನೋಡಿ: animism.

annals school: ಚರಿತ್ರ ಲೇಖನ ಪಂಥ. ಶೀಘ್ರವಾಗಿ ಬೆಳೆಯುತ್ತಿರುವ ಸಮಾಜ ವಿಜ್ಞಾನಗಳನ್ನು ಪುನರ್ರಚಿತ ವೈಜ್ಞಾನಿಕ ಚರಿತ್ರೆಯಾಗಿ ಮಾಡುವ ಇತಿಹಾಸದ ಹೊಸ ಪಂಥ.

annual budget: ವಾರ್ಷಿಕ ಮುಂಗಡ ಪತ್ರ.

annulment: ರದ್ದತಿ; ರದ್ದುಗೊಳಿಸುವಿಕೆ.

anomic division of labour: ಮೌಲ್ಯರಹಿತ ಶ್ರಮ ವಿಭಜನೆ. ವಿವಿಧ ನೈಪುಣ್ಯತೆ ಇರುವ ವ್ಯಕ್ತಿಗಳ ನಡುವೆ ಸಂಪರ್ಕದ ಕೊರತೆಯಿಂದಾಗಿ ಉಂಟಾಗುವ ಮೌಲ್ಯರಾಹಿತ್ಯ.

anomic suicide: ಹತಾಶೆಯ ಆತ್ಮಹತ್ಯೆ. ಡರ್ಖೈಂ ವಿವರಿಸಿದ ಆತ್ಮ ಹತ್ಯೆಯ ಪ್ರಕಾರಗಳಲ್ಲೊಂದು. ಸಾಮಾಜಿಕ ನಿಯಮ ರಾಹಿತ್ಯದ ಸಂದರ್ಭಗಳಲ್ಲಿ ವ್ಯಕ್ತಿತ್ವಕ್ಕೆ ಬೆಲೆ ಇಲ್ಲದಾಗ ಸಾಯುವುದೇ ಸುಖವೆಂಬ ತೀರ್ಮಾನಕ್ಕೆ ಬರುವುದರಿಂದ ಜರಗುವ ಆತ್ಮಹತ್ಯೆ.

anomie, anomy: ನಿಯಮರಾಹಿತ್ಯ. ಒಂದು ಸಮಾಜದಲ್ಲಿ ಮೌಲ್ಯಗಳ ಗೊಂದಲ ಅಥವಾ ಅನುಪಸ್ಥಿತಿಯಿಂದಾಗಿ ಉಂಟಾಗುವ ಆಂಶಿಕ ಅಥವಾ ಪೂರ್ಣ ನಿಯಮರಹಿತತೆ

anonymity: ಅನಾಮಧೇಯತೆ. ಆಧುನಿಕ ನಗರ ಸಮಾಜಗಳಲ್ಲಿ ಮಾಧ್ಯಮಿಕ ಸಂಬಂಧಗಳೇ ಹೆಚ್ಚಾಗಿದ್ದು ಪ್ರಾಥಮಿಕ ಸಂಬಂಧಗಳ ಕೊರತೆಯಿಂದಾಗಿ ವ್ಯಕ್ತಿಯು ಅನಾಮಧೇಯತೆಯನ್ನು ಅನುಭವಿಸುವುದು.

anorexia nervosa: ನಿರಶನ ವ್ಯಾಧಿ. ಹಸಿವಿರದ, ಉಪವಾಸ ಬೀಳುವ, ಶೀಘ್ರವಾಗಿ ತೂಕ ಕಳೆದುಕೊಳ್ಳುವ ಒಂದು

ಮನೋರೋಗ. ಹೆಚ್ಚಾಗಿ ಹುಡುಗಿಯರಲ್ಲಿ ಕಾಣಿಸುತ್ತದೆ.

antagonism: ಶತ್ರುತ್ವ. ಶೋಷಣೆಯ ಆಧಾರದ ಮೇಲಿರುವ ಸಮಾಜದಲ್ಲಿ ಶೋಷಕರ ಮತ್ತು ಶೋಷಿತರ ನಡುವಣ ಹೋರಾಟದಲ್ಲಿ ಅಭಿವ್ಯಕ್ತವಾಗುವ ಶತ್ರುತ್ವ.

antagonistic acculturation: ವಿರುದ್ಧ ಸಂಸ್ಕೃತಿ ಗ್ರಹಣ.

antagonistic co-operation: ವಿರೋಧಾತ್ಮಕ ಸಹಕಾರ.

antagonistic effort: ವಿರೋಧಾತ್ಮಕ ಪ್ರಯತ್ನ.

antagonistic impulse: ವಿರೋಧಾತ್ಮಕ ಆವೇಗ.

anthro-archaeology: ಮಾನವ ಪುರಾತತ್ವ ಶಾಸ್ತ್ರ.

anthropic: ನರವಾನರ. ಸಂಸ್ಕೃತಿ ಪೂರ್ವದ ಮಾನವನಂತಹ ಪ್ರಾಣಿ.

anthropocentric: ಮಾನವ ಕೇಂದ್ರಿತ. ಸೃಷ್ಟಿಯಲ್ಲಿ ಮಾನವನೇ ಪ್ರಧಾನನೆಂಬ ಭಾವನೆ.

anthropocentrism: ಮಾನವ ಕೇಂದ್ರವಾದ. ವಿಶ್ವದ ಯಾವುದೇ ವಿದ್ಯಮಾನವನ್ನು ಮಾನವ ಪ್ರಧಾನತೆಯ ದೃಷ್ಟಿಯಿಂದಲೇ ವಿವರಿಸುವ ವಾದ.

anthropogency: ಮಾನವ ಮೂಲ ಶಾಸ್ತ್ರ. ಮಾನವನ ಉಗಮಕ್ಕೆ ಕಾರಣವಾದ ಅಂಶಗಳ ಅಧ್ಯಯನ.

anthropogenesis: ನೋಡಿ: anthropogency.

anthropogeny: ಮಾನವ ಮೂಲ ಶೋಧ.

anthropo-geography: ಮಾನವ ಭೂಗೋಳಶಾಸ್ತ್ರ. ಮಾನವ ಸಂಸ್ಕೃತಿ ಹಾಗೂ ಭೌಗೋಳಿಕ ಪರಿಸರದ ಮಧ್ಯೆ ಇರುವ ಅಂತರ್ ಸಂಬಂಧಗಳ ಅಧ್ಯಯನ.

anthropography: ಮಾನವ ಕುಲ ಪ್ರಸರಣ ಶಾಸ್ತ್ರ.

anthropoid: ನೋಡಿ: anthropoidape.

anthropoid ape: ಮಂಗ ಮಾನವ. ಮಾನವ ಸ್ವರೂಪಕ್ಕೆ ಹತ್ತಿರವಾದ ದೈಹಿಕ ರಚನೆ ಇರುವ ಮಾನವ. ನೋಡಿ: anthropic.

anthropolatry: ಮನುಷ್ಯಾರಾಧನೆ. ಮನುಷ್ಯನನ್ನು ದೇವರೆಂದು ಪೂಜಿಸುವುದು.

anthropolite: ಮಾನವ ಪಳೆಯುಳಿಕೆ. ಪಳೆಯುಳಿಕೆಯಾಗಿ ಮಾರ್ಪಟ್ಟ ಮಾನವ ಶರೀರ.

anthropolith: ನೋಡಿ: anthropo lite.

anthropological linguistics: ಮಾನವಶಾಸ್ತ್ರೀಯ ಭಾಷಾ ವಿಜ್ಞಾನ.

anthropological school: ಮಾನವ ಶಾಸ್ತ್ರೀಯ ಪಂಥ. ಜಗತ್ತಿನ ಜನಪದ ಕತೆಗಳಲ್ಲಿ ಕಾಣುವ ಸಾಮ್ಯಕ್ಕೆ ಹಾಗೂ ಅಸಂಗತ ಅಂಶಗಳಿಗೆ ಮಾನವಶಾಸ್ತ್ರೀಯ ಕಾರಣಗಳನ್ನು ಕೊಡುವ ಪಂಥ.

anthropology: ಮಾನವಶಾಸ್ತ್ರ. ಮಾನವ ಜೀವಿಯ ಹುಟ್ಟು, ಬೆಳವಣಿಗೆ, ಸಂಘ ಜೀವನ, ಸಂಸ್ಕೃತಿ ಹಾಗೂ ನಾಗರಿಕತೆಗಳ ವಿಕಾಸವನ್ನು ಅಧ್ಯಯನ ಮಾಡುವ ಶಾಸ್ತ್ರ.

anthropomancy: ಕರುಳಿನ ಬಲಿ. ನರಬಲಿಯಾದ ಕನ್ಯೆಯ ಅಥವಾ ಶಿಶುವಿನ ಕರುಳನ್ನು ದೈವಕ್ಕೆ ಅರ್ಪಿಸುವುದು.

anthropometer: ಮಾನವ ದೇಹ ಮಾಪಕ.

anthropometry: ಮಾನವ ದೇಹ ಮಾಪನ. ವಿವಿಧ ಜನಾಂಗಗಳ ಹಾಗೂ ವಿವಿಧ ವಯಸ್ಸಿನ ಜನರ ದೇಹ ಹಾಗೂ ಅಂಗಗಳ ಅಳತೆಯ ಪ್ರಮಾಣದಲ್ಲಿರುವ ವ್ಯತ್ಯಾಸಗಳ ಅಧ್ಯಯನ. ಇದರಲ್ಲಿ ಕಣ್ಣು, ಕೂದಲು ಹಾಗೂ ಮೈಬಣ್ಣ ಇತ್ಯಾದಿ ಲಾಕ್ಷಣಿಕ ವ್ಯತ್ಯಾಸಗಳ ಅಧ್ಯಯನವೂ ಸೇರಿದೆ.

anthropomorpha: ಮಾನವಾಕೃತಿಯ ಪಳೆಯುಳಿಕೆ. ನೋಡಿ : anthropolite.

anthropomorphic: ನೋಡಿ: anthropic.

anthropomorphism: ಮನುಷ್ಯ ರೂಪಾರೋಪಣೆ. ದೇವರು ಅಥವಾ ವಸ್ತು ಯಾ ಪ್ರಾಕೃತಿಕ ಸಂಗತಿಗಳಿಗೆ ಮಾನವ ರೂಪವನ್ನು ವ್ಯಾಖ್ಯಾನಿಸುವುದು.

anthropopathism: ಮಾನವಭಾವ ರಾಗಾರೋಪಣೆ. ದೇವರು ಅಥವಾ ಪ್ರಾಕೃತಿಕ ವಸ್ತು ಯಾ ಸಂಗತಿಗಳಿಗೆ ಮಾನವರಂತೆ ಕೋಪ, ತಾಪ, ಪ್ರೇಮ, ಭಾವಗಳನ್ನು ವಿವರಿಸುವುದು.

anthropophagi: ನರಭಕ್ಷಕರು.

anthropophagous: ನರಭಕ್ಷಕ. ಕಾಲ್ಪನಿಕ ಕಥೆ ಹಾಗೂ ಪುರಾಣಗಳಲ್ಲಿ ಬರುವ ನರಭಕ್ಷಕರು.

anthropophagy: ನರಭಕ್ಷಣೆ.

anthropophobia: ಮಾನವ ದ್ವೇಷ.

anthroposcopy: ದೇಹ ಲಕ್ಷಣ ವಿವರಣೆ. ಮಾಪನ ಮಾಡಲಾಗದ ದೈಹಿಕ ಲಕ್ಷಣಗಳನ್ನು ದೃಷ್ಟಿಯಿಂದ ಪರೀಕ್ಷಿಸಿ ವರದಿ ಮಾಡುವುದು. ಉದಾ: ಕಣ್ಣಿನ ಬಣ್ಣ, ಕೂದಲಿನ ರಚನೆ ಇತ್ಯಾದಿ.

anthroposophy: ಮಾನವ ಚೈತನ್ಯ ವಾದ. ದೇವರ ಮೇಲಿನ ನಂಬಿಕೆಗಿಂತ ಹೆಚ್ಚಾಗಿ ಮನುಷ್ಯನ ಮನಃಶಕ್ತಿಯ ಅಭಿವೃದ್ಧಿಯ ಮೇಲೆ ಕೇಂದ್ರಿತವಾಗಿರುವ ಧಾರ್ಮಿಕ ಪಂಥ.

anthroposphere: ಮಾನವ ಮಂಡಲ.

anti-apartheid: ವರ್ಣಭೇದ ವಿರೋಧ. ಜನಾಂಗೀಯ ವರ್ಣಭೇದ ನೀತಿಯನ್ನು ಅನುಸರಿಸುವವರ ವಿರುದ್ಧವಾಗಿ ತಾಳುವ ನಿಲುವು.

anti-communism: ಕಮ್ಯುನಿಸಂ ವಿರೋಧ ತತ್ವ. ಕಮ್ಯುನಿಸ್ಟ್ ಸಿದ್ಧಾಂತ ಮತ್ತು ಆಚರಣೆಯನ್ನು ವಿರೋಧಿಸುವ ಸಾಮ್ರಾಜ್ಯ ಶಾಹಿಯ ವಿಚಾರಸೂತ್ರ ಮತ್ತು ನೀತಿ.

anti-cyclical planning: ಆವರ್ತ ವಿರುದ್ಧ ಯೋಜನೆ.

anti-federalists: ಸಂಯುಕ್ತ ರಾಷ್ಟ್ರ ವಿರೋಧವಾದಿಗಳು. ಅಮೇರಿಕದಲ್ಲಿ ಸಂವಿಧಾನ ಸ್ವೀಕರಿಸಲು ನಡೆದ ಚಳವಳಿಯಿಂದಾಗಿ ಈ ಪಕ್ಷ ಹುಟ್ಟಿಕೊಂಡಿತು.

anti-intellectualism: ಬೌದ್ಧಿಕ ವಿರೋಧೀ ತತ್ವ.

anti-natalist policy: ಜನನ ವಿರೋಧೀ ನೀತಿ.

anti naturalism: ನಿಸರ್ಗ ವಿರೋಧ ವಾದ.

anti-nominalism: ಕಂದಾಚಾರ ವಿರೋಧಿ. ಈ ತತ್ವವನ್ನು ಒಪ್ಪುವವರು ಪ್ರಾಚೀನ ಪದ್ಧತಿಗಳನ್ನು ವಿರೋಧಿಸಿ

ಬೈಬಲ್‌ಗನುಸಾರವಾಗಿ ಶ್ರದ್ಧೆ ಇರಬೇಕೆಂದು ಭಾವಿಸುವವರು.

anti-ritualistic: ಕರ್ಮಾಚರಣಾ ವಿರೋಧಿ.

anti-semitism: ಯಹೂದೀ ವಿರೋಧೀ ಭಾವನೆ.

anti-social activity: ಸಮಾಜ ವಿರೋಧೀ ಕೃತ್ಯ.

anti-social behaviour: ಸಮಾಜ ವಿರೋಧೀ ವರ್ತನೆ.

anti-social child: ಸಮಾಜ ವಿರೋಧೀ ಶಿಶು.

anti-social grudge: ಸಾಮಾಜಿಕ ವಿದ್ವೇಷ. ಸಮಾಜ ಹಾಗೂ ಸಾಮಾಜಿಕ ಕಟ್ಟಳೆಗಳ ಬಗ್ಗೆ ದ್ವೇಷ.

anti-social personality: ಸಮಾಜ ವಿರೋಧೀ ವ್ಯಕ್ತಿತ್ವ.

anti-thesis: ಪ್ರತಿಸಿದ್ಧಾಂತ, ಪ್ರತಿ ಮಂಡನೆ. ನೇರ ಅಥವಾ ಸ್ಪಷ್ಟ ವಿರೋಧಿ ನಿಲುವು.

anti-trust law: ನ್ಯಾಸ ವಿರೋಧಿ ಕಾಯಿಲೆ

anti-urban bias : ನಗರ ವಿರೋಧಿ ಪೂರ್ವಾಗ್ರಹ.

anticipatory socialization: ನಿರೀಕ್ಷಣಾತ್ಮಕ ಸಮಾಜೀಕರಣ. ಭವಿಷ್ಯದಲ್ಲಿ ತಾನು ವಹಿಸಲಿರುವ ಪಾತ್ರಕ್ಕೆ ತಕ್ಕ ವರ್ತನೆಗಳನ್ನು ಅಭ್ಯಾಸಗತ ಮಾಡಿಕೊಳ್ಳುವುದು. ಉದಾ: ಸೈನ್ಯಕ್ಕೆ ಸೇರ ಬಯಸುವ ಅಭ್ಯರ್ಥಿ ಸೇನಾ ಜವಾನನ ಮೌಲ್ಯ ಮತ್ತು ವರ್ತನೆಗಳನ್ನು ಮೈಗೂಡಿಸಿಕೊಳ್ಳುವುದು ನಿರೀಕ್ಷಣಾತ್ಮಕ ಸಮಾಜೀಕರಣವಾಗಿದೆ.

antipathy: ವಿರುದ್ಧ ಚಿತ್ತತೆ, ವಿರೋಧ ಭಾವ.

antiquarian: ಪ್ರಾಚೀನಾನ್ವೇಷಕ; ಪ್ರಾಚೀನತೆಯ ಅಧ್ಯಯನಕಾರ.

antiquated: ರೂಢಿ ತಪ್ಪಿದ; ಹಳೆಯದಾಗಿ ಹೋದ.

antique: ಪ್ರಾಚ್ಯ ವಸ್ತು; ಪ್ರಾಚ್ಯಾವಶೇಷ.

antiquity: ಪ್ರಾಚೀನತೆ.

anuloma marriage: ನೋಡಿ: hypergamy.

anxiety hysteria: ಉದ್ವಿಗ್ನ ಉನ್ಮಾದ ರೋಗ.

anxiety neurosis: ಉದ್ವಿಗ್ನತಾ ಮನೋಬೇನೆ.

anxiety reaction: ಉದ್ವಿಗ್ನ ಪ್ರತಿಕ್ರಿಯೆ.

anxiety state: ಆತಂಕಾವಸ್ಥೆ; ಕಳವಳ ಸ್ಥಿತಿ.

apartheid policy: ವರ್ಣಭೇದ ನೀತಿ. ಜನಾಂಗೀಯ ಆಧಾರದ ಮೇಲೆ ಮನುಷ್ಯರನ್ನು ಪ್ರತ್ಯೇಕವಾಗಿರಿಸುವ ಮತ್ತು ಅವರ ನಡುವೆ ಭೇದವೆಣಿಸುವ ಸರಕಾರೀ ನೀತಿ. ಉದಾ: ದಕ್ಷಿಣ ಆಫ್ರಿಕಾದಲ್ಲಿ ಈಗಲೂ ಪ್ರಚಲಿತವಿರುವ ಕರಿಯರ-ಬಿಳಿಯರ ನಡುವಿನ ಭೇದ.

apathetic temperament: ಉದಾ: ಸೀನ ಚಿತ್ತ ಪ್ರವೃತಿ (ಸ್ವಭಾವ).

apathia: ಔದಾಸೀನ್ಯ ರೋಗ.

apathy: ನಿರ್ಭಾವ, ಭಾವಶೂನ್ಯತೆ. ತೀವ್ರವಾದ ಖಿನ್ನತೆಯಲ್ಲಿ ಕಾಣಿಸುವ ಲಕ್ಷಣ.

ape man : ನೋಡಿ : anthropic

aphonia: ಧ್ವನಿಹೀನತೆ; ಮಾತಿನ ತೊಂದರೆ ಅಥವಾ ಮೂಕತ್ವ.

aphorism: ಸೂಕ್ತಿ.

apolitical: ರಾಜಕೀಯ ರಹಿತ. ರಾಜಕೀಯ ವ್ಯವಹಾರಗಳ ಬಗ್ಗೆ ನಿರಾಸಕ್ತಿ.

apollonian culture: ಶಾಂತಚಿತ್ತ ಸಂಸ್ಕೃತಿ; ಸಮಚಿತ್ತ ಸಂಸ್ಕೃತಿ. ಮನುಷ್ಯರ ವರ್ತನೆಯಲ್ಲಿ ವಿವೇಚನೆ, ಆತ್ಮ ಸಂಯಮ, ಸಾಮರಸ್ಯ ಹಾಗೂ ಸಹಕಾರ ಮನೋಭಾವ ತುಂಬಿಕೊಂಡಿರುವ ಸಂಸ್ಕೃತಿ. ರುತ್ ಬೆನೆಡಿಕ್ಟರವರು ಪ್ಯುಬ್ಲೊ ಇಂಡಿಯನ್ ಜನಾಂಗದವರನ್ನು ಶಾಂತಚಿತ್ತ ಸಂಸ್ಕೃತಿಯುವರೆಂದಿದ್ದಾರೆ. ತುಲನೆ ಮಾಡಿ: dionysian culture.

apostasy: ಸ್ವಧರ್ಮ ಪರಿತ್ಯಾಗ. ತಾನು ಅವಲಂಬಿಸಿದ ಧರ್ಮ ಅಥವಾ ಮೆಚ್ಚಿಕೊಂಡಿರುವ ತತ್ವವನ್ನು ತ್ಯಜಿಸುವುದು.

aposteriori: ಅನುಭವ ಗಮ್ಯ. ಗಮನಿಸಿದ ಕಾರ್ಯದಿಂದ ಕಾರಣವನ್ನು ತರ್ಕಿಸುವಿಕೆ.

apostles: ಧರ್ಮ ಪ್ರಚಾರಕರು. ಕ್ರಿಸ್ತನು ತನ್ನ ಧರ್ಮವನ್ನು ಉಪದೇಶ ಮಾಡಲು ಕಳಿಸಿದ ಹನ್ನೆರಡು ಮಂದಿ ಶಿಷ್ಯರು.

apotheosis: ದೈವೀಕರಣ, ಸಂತೀಕರಣ. ವ್ಯಕ್ತಿಯನ್ನು ಆತನ ಗುಣ ಮತ್ತು ಪವಾಡಗಳಿಗಾಗಿ ದೇವರ ಮಟ್ಟಕ್ಕೇರಿಸುವುದು. ಕ್ರಿಶ್ಚಿಯನ್ನರಲ್ಲಿ ವಿಧಿವತ್ತಾಗಿ ಸಂತರ ಪಟ್ಟಿಯಲ್ಲಿ ಸೇರಿಸಿಕೊಳ್ಳುವುದು.

apotropaic ritual: ಮಾಟ ನಿಷ್ಫಲ ವಿಧಿ. ದುಷ್ಟ ಶಕ್ತಿ ಅಥವಾ ಮಾಟಗಳ ಕೆಟ್ಟ ಪರಿಣಾಮಗಳನ್ನು ನಿಷ್ಫಲಗೊಳಿಸುವ ಮಾಂತ್ರಿಕ ವಿಧಿ.

apotropaism: ದುಷ್ಟಶಕ್ತಿ ನಿಯಂತ್ರಣ. ಧಾರ್ಮಿಕ ಆಚರಣೆಗಳು, ನೃತ್ಯ, ವಾದ್ಯ ಬಾರಿಸುವುದು, ರಕ್ತಬಲಿ, ಪ್ರಾಣಿಬಲಿ ಇತ್ಯಾದಿ ವಿಧಾನಗಳಿಂದ ದುಷ್ಟ ಶಕ್ತಿಗಳನ್ನು ದೂರವಿಡುವ ಕ್ರಮ ಅಥವಾ ಪ್ರಕ್ರಿಯೆ.

apparent truth: ಪ್ರತ್ಯಕ್ಷ ಸತ್ಯ, ವ್ಯಕ್ತ ಸತ್ಯ.

appeal: ೧. ಮನವಿ. ೨. ಮನಸ್ಸಿಗೆ ಮೆಚ್ಚಿಗೆಯಾಗುವಿಕೆ.

appellant: ಅಪೀಲುದಾರ. ತನಗೆ ನ್ಯಾಯ ದೊರಕಿಲ್ಲವೆಂದು ಮೇಲಿನ ಹಂತದ ನ್ಯಾಯಾಲಯಕ್ಕೆ ದೂರು ಸಲ್ಲಿಸುವಾತ.

appellate authority: ಅಪೀಲು ಅಧಿಕಾರಿ. ಕೆಳಗಿನ ಹಂತದ ನ್ಯಾಯಾಲಯದಲ್ಲಿ ನೀಡಿದ ತೀರ್ಪಿನ ಬಗ್ಗೆ ಅತೃಪ್ತರಾದವರು ಸಲ್ಲಿಸುವ ಮೇಲ್ಮನವಿಯನ್ನು ಸ್ವೀಕರಿಸುವ ಅಧಿಕಾರಿ.

appellate jurisdiction: ಅಪೀಲು ಅಧಿಕಾರ. ಮೇಲ್ಮನವಿ ವಿಚಾರಣಾಧಿಕಾರ. ಅಧೀನ ನ್ಯಾಯಾಲಯಗಳ ತೀರ್ಮಾನದ ವಿರುದ್ಧ ಮೇಲಿನ ನ್ಯಾಯಾಲಯಕ್ಕೆ ಅಪೀಲು ಮಾಡಿಕೊಂಡಾಗ ಅಂತಹ ಮೊಕದ್ದಮೆಗಳನ್ನು ವಿಚಾರಣೆ ಮಾಡುವ ಅಧಿಕಾರ ವ್ಯಾಪ್ತಿ.

appellate power: ಅಪೀಲು ಸಂಬಂಧಿ ಅಧಿಕಾರ.

apperceptive tendency: ಅನುಬೋಧನಾತ್ಮಕ ಪ್ರವೃತ್ತಿ. ಯಾವುದೇ ಹೊಸ ಅವಲೋಕನಗಳನ್ನು ಹಿಂದಿನ ಅನುಭವಗಳಿಗೆ ಹೋಲಿಸಿ ತಿಳಿಯುವ ಪ್ರವೃತ್ತಿ.

applicability: ಅನ್ವಯಾರ್ಹತೆ.

application blank: ಅರ್ಜಿಪತ್ರ; ಅರ್ಜಿ ನಮೂನೆ.

applied anthropology: ಅನ್ವಯಿಕ ಮಾನವಶಾಸ್ತ್ರ. ಮಾನವಶಾಸ್ತ್ರಜ್ಞನು ಅಧ್ಯಯನ ಮಾಡುತ್ತಿರುವ ಪಂಗಡಗಳ ಅಭಿವೃದ್ಧಿಗೆ ಆತನ ಮಾನವಶಾಸ್ತ್ರೀಯ ಅಧ್ಯಯನದ ತಿಳುವಳಿಕೆಯನ್ನು ಉಪಯೋಗಿಸುವುದು. ನೋಡಿ: applied science.

applied economics: ಅನ್ವಯಿಕ ಅರ್ಥಶಾಸ್ತ್ರ.

applied folklore: ಅನ್ವಯಿಕ ಜಾನಪದ. ನೋಡಿ : applied science.

applied linguistics: ಅನ್ವಯಿಕ ಭಾಷಾ ವಿಜ್ಞಾನ. ನೋಡಿ: applied science.

applied manpower research: ಅನ್ವಯಿಕ ಮಾನವ ಶಕ್ತಿಯ ಸಂಶೋಧನೆ.

applied politics: ಅನ್ವಯಿಕ ರಾಜಕೀಯ.

applied psychology: ಅನ್ವಯಿಕ ಮನಶ್ಶಾಸ್ತ್ರ. ನೋಡಿ : applied science.

applied research: ಅನ್ವಯಿಕ ಸಂಶೋಧನೆ. ನೋಡಿ: applied science.

applied science: ಅನ್ವಯಿಕ ವಿಜ್ಞಾನ. ಸಮಾಜ ಕಲ್ಯಾಣ ದೃಷ್ಟಿಯಿಂದ ಹಾಗೂ ಅಭಿವೃದ್ಧಿಗಾಗಿ ಯಾವುದೇ ವಿಜ್ಞಾನದ ಸಿದ್ಧಾಂತಗಳನ್ನು ಪ್ರಾಯೋಗಿಕವಾಗಿ ಅನ್ವಯಿಸುವ ವಿಜ್ಞಾನದ ವಿಭಾಗ. ಉದಾ: ಅನ್ವಯಿಕ ಮಾನವಶಾಸ್ತ್ರ, ಅನ್ವಯಿಕ ಜಾನಪದ, ಅನ್ವಯಿಕ ಭಾಷಾವಿಜ್ಞಾನ ಇತ್ಯಾದಿ.

applied sociology: ಅನ್ವಯಿಕ ಸಮಾಜಶಾಸ್ತ್ರ. ನೋಡಿ: applied science.

apportionment of responsibility: ಜವಾಬ್ದಾರಿಯ ವಿತರಣೆ; ಹೊಣೆಗಾರಿಕೆಯ ಹಂಚಿಕೆ.

appreciation of currency: ಹಣದ ಮೌಲ್ಯವೃದ್ಧಿ.

apprehension: ೧. ಗ್ರಹಿಕೆ ಸಾಮರ್ಥ್ಯ ೨. ಆತಂಕ. ಮುಂದೇನಾಗುವುದೋ ಎಂಬ ಕಾತರ ಮತ್ತು ಭಯ.

approdisiac: ಕಾಮೋದ್ದೀಪಕ. ಲೈಂಗಿಕ ತೃಷೆಯನ್ನು ಹೆಚ್ಚಿಸಲು ಬಳಸುವ ದ್ರವ್ಯ.

appropriate technology: ಯುಕ್ತ ತಂತ್ರಜ್ಞಾನ. ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶಗಳು ಬಳಕೆಗೆ ತಂದಿರುವ ಶ್ರಮ ಉಳಿತಾಯದ ತಾಂತ್ರಿಕತೆ.

a priori: ಬುದ್ಧಿರೂಢ. ನಿರ್ದಿಷ್ಟ ಕಾರಣದ ಎಳೆ ಹಿಡಿದು ಕಾರ್ಯವನ್ನು ತರ್ಕಿಸುವಿಕೆ.

a priori forms of perception: ಪ್ರತ್ಯಕ್ಷದ ಪೂರ್ವಭಾವೀ ದೃಷ್ಟಿ. ಯಾವುದೇ ಸಂಗತಿಯನ್ನು ಪ್ರತ್ಯಕ್ಷವಾಗಿ ಕಾಣುವ ಮೊದಲೇ ಕಾರಣ ತಿಳಿದು ಅದರ ಮೂಲಕವಾಗಿ ಗ್ರಹಿಸಿಕೊಳ್ಳುವ ದೃಷ್ಟಿಕೋನ.

a priori proof: ಅನುಭವಪೂರ್ವ ಪ್ರಮಾಣ.

apselaphasia: ಸ್ಪರ್ಶ ವಿಕಾರ.

aptitude test: ಒಲವಿನ ಪರೀಕ್ಷೆ. ವಿದ್ಯಾರ್ಥಿಗೆ ಯಾವುದಾದರೂ ನಿಗದಿತ ಶಿಕ್ಷಣ ವಿಭಾಗಕ್ಕೆ ಪ್ರವೇಶ ನೀಡುವ ಮುನ್ನ ಆತನಿಗೆ ಆ ವಿಷಯದ ಬಗ್ಗೆ ಕಲಿಯುವ ಒಲವು ಇದೆಯೇ ಎಂಬುದರ ಪರೀಕ್ಷೆ.

ಇದೇ ರೀತಿ ಅಭ್ಯರ್ಥಿಗಳನ್ನು ಉದ್ಯೋಗಕ್ಕೆ ಸೇರಿಸಿಕೊಳ್ಳುವ ಮುನ್ನ ಕೆಲವು ಸಂಸ್ಥೆಗಳು ಇಂತಹ ಪರೀಕ್ಷೆ ನಡೆಸುವುದುಂಟು.

aquaphobia: ಮಜ್ಜನಭೀತಿ. ಸ್ನಾನ ಮಾಡುವ ಮತ್ತು ಈಜುವ ಭೀತಿ.

arbitrage: ಪಂಚಾಯಿತಿ. ವಿವಿಧ ಮಾರುಕಟ್ಟೆಯಲ್ಲಿ ವಿಭಿನ್ನ ದರಗಳಿದ್ದಾಗ ಈ ದರಗಳ ವ್ಯತ್ಯಾಸದ ಲಾಭಪಡೆಯುವ ಉದ್ದೇಶದಿಂದ ಮಾಡುವ ಹುಂಡಿಶೇರು.

arbitral tribunal: ಮಧ್ಯಸ್ಥ ನ್ಯಾಯಾಧಿಕರಣ. ನೋಡಿ: arbitration tribunal.

arbitrariness: ಸ್ವೇಚ್ಛಾನುಸಾರವಾದ. ಖುಷಿ ಬಂದಂತೆ ನಿರ್ಣಯಿಸುವ ಅಥವಾ ಪೂರ್ವಾಗ್ರಹ ಪೀಡಿತವಾದ ಚಟುವಟಿಕೆ ಅಥವಾ ವರ್ತನೆ.

arbitrary action: ಮನಸ್ವೀ ಕ್ರಮ.

arbitrary decision: ಸ್ವೇಚ್ಛಾ ನಿರ್ಣಯ. ಯಾವುದೇ ಪ್ರಮಾಣವಿಲ್ಲದೆ ಬರಿಯ ಅಭಿಪ್ರಾಯದಿಂದ ಮಾಡುವ ನಿರ್ಣಯ.

arbitrary government: ಸ್ವೇಚ್ಛಾನುಸಾರ ಸರಕಾರ. ಪ್ರಜೆಗಳ ಅಭಿಪ್ರಾಯಕ್ಕೆ ಮನ್ನಣೆ ಕೊಡದೆ ಸ್ವೇಚ್ಛಾನುಸಾರದಿಂದ ನಡೆಯುವ ಸರಕಾರ.

arbitrary power: ಸ್ವೇಚ್ಛಾಧಿಕಾರ.

arbitration: ಮಧ್ಯಸ್ಥಿಕೆ. ಎರಡು ಘರ್ಷಣಾ ಗುಂಪುಗಳು ಮೂರನೇ ನಿರ್ಲಿಪ್ತ ವ್ಯಕ್ತಿಯ ಅಥವಾ ಪಂಚಾಯಿತಿ ಮಂಡಳಿಯ ನಿರ್ಣಯಕ್ಕೆ ಒಪ್ಪುವ ಮೂಲಕ ಕಲಹವನ್ನು ಕೊನೆಗೊಳಿಸುವ ಒಂದು ವಿಧದ ಸಮಂಜನ ಅಥವಾ ಹೊಂದಾಣಿಕೆಯ ಪ್ರಕ್ರಿಯೆ.

arbitration council: ಮಧ್ಯಸ್ಥ ಮಂಡಳಿ.

arbitration tribunal: ಪಂಚಾಯಿತಿ ಮಂಡಳಿ. ಮಧ್ಯಸ್ಥಿಕೆಯ ಮೂಲಕ ದಾವೆಗಳನ್ನು ತೀರ್ಮಾನಿಸುವ ಮಂಡಳಿ.

arbitrator's award: ಮಧ್ಯಸ್ಥಗಾರರ ತೀರ್ಪು.

arboreal theory: ಮರಸಂಬಂಧೀ ಸಿದ್ಧಾಂತ. ಪ್ರಾರಂಭದ ಅತ್ಯುನ್ನತ ಶ್ರೇಣಿಯ ಸಸ್ತನಿ ವರ್ಗವು ಮಾನವನಾಗಿ ಅಭಿವೃದ್ಧಿ ಹೊಂದಲು ಮರದ ಜೀವನ ಸಹಾಯ ಮಾಡಿತೆಂಬ ಸಿದ್ಧಾಂತ.

arc method: ಚಾಪ ವಿಧಾನ. ಬೆಲೆ-ಬೇಡಿಕೆಯ ಸ್ಥಿತಿಸ್ಥಾಪಕತೆಯ ಮಾಪನದ ಒಂದು ವಿಧಾನ. ಈ ವಿಧಾನದ ಮೂಲಕ ಹಳೆಯ ಮತ್ತು ಹೊಸ ಬೇಡಿಕೆ ಮತ್ತು ಬೆಲೆ ಬದಲಾವಣೆಗಳ ಸರಾಸರಿಯನ್ನು ಕಂಡು ಹಿಡಿದು ಸ್ಥಿತಿಸ್ಥಾಪಕತೆಯನ್ನು ಅಳೆಯಲಾಗುತ್ತದೆ.

archaeologist: ಪುರಾತತ್ವ ಶಾಸ್ತ್ರಜ್ಞ, ಪ್ರಾಚ್ಯವಸ್ತು ಸಂಶೋಧಕ.

archaeology: ಪುರಾತತ್ವ ಶಾಸ್ತ್ರ. ಪ್ರಾಚ್ಯವಸ್ತುಶಾಸ್ತ್ರ. ಪಳೆಯುಳಿಕೆಗಳ ಆಧಾರದಿಂದ ಪ್ರಾಚೀನ ಸಂಸ್ಕೃತಿಯನ್ನು ಅಭ್ಯಸಿಸುವ ಶಾಸ್ತ್ರ.

archanthropic: ಆದಿಮಾನವಿಕ. ಆದಿಮಾನವನಿಗೆ ಸಂಬಂಧಿಸಿದ.

archetype: ಮೂಲ ಮಾದರಿ.

architecture: ವಾಸ್ತುಶಿಲ್ಪ; ವಾಸ್ತುಶಾಸ್ತ್ರ; ಸ್ಥಾಪತ್ಯ ಕಲೆ.

architrave: ತೋರಣ; ಉತ್ತರಾಂಗ.

archives: ಪತ್ರಾಗಾರ, ದಾಖಲಾತಿ ಸಂಗ್ರ

ಹಾಲಯ. ಆಡಳಿತಾತ್ಮಕ ವಿಷಯಗಳನ್ನು ಒಳಗೊಂಡ ದಾಖಲೆ ಪತ್ರಗಳನ್ನಿಡುವ ಸ್ಥಳ.

area diagram: ಕ್ಷೇತ್ರ ನಕ್ಷೆ. ವೃತ್ತ ಅಥವಾ ಆಯತದಂತಹ ರಚನೆಯಲ್ಲಿ ದಾಮಾಶಯ ಪ್ರಕಾರ ನಿರ್ಮಿಸಿದ ಖಂಡಗಳ ಮೂಲಕ ಒಟ್ಟು ಜನಸಂಖ್ಯೆಯಲ್ಲಿ ಒಂದೊಂದು ವಿಭಾಗವೂ ಹೊಂದಿರುವ ಪ್ರಮಾಣದ ನಕ್ಷಾರೂಪದ ಚಿತ್ರ.

area of characterization: ಗುಣ ರೂಪಣ ಕ್ಷೇತ್ರ. ಗುಣವಿಶೇಷ ಕ್ಷೇತ್ರ. ಯಾವುದೇ ಒಂದು ಪ್ರದೇಶದಲ್ಲಿ ಯಾವು ದಾದರೊಂದು ಸಮೂಹವು ತಮ್ಮ ವಿಶಿಷ್ಟ ಗುಣಗಳನ್ನು ಬೆಳೆಸಿಕೊಳ್ಳುವುದು.

area of deterioration: ನೋಡಿ : zone in transition.

area of sympathy: ಸಹಾನುಭೂತಿ ಕ್ಷೇತ್ರ. ಯಾವುದೇ ವಿದ್ಯಮಾನದ ಕುರಿತು ಸಮೂಹದ ಸದಸ್ಯರೆಲ್ಲರ ಸಹಾನುಭೂತಿ ಸಿಕ್ಕುವ ಪ್ರಕ್ರಿಯೆ.

area of understanding: ಅರಿವಿನ ವಿಸ್ತಾರ. ಒಂದು ಘಟನೆಯ ಅಥವಾ ವಿದ್ಯ ಮಾನದ ಕುರಿತು ಸಮೂಹದ ಜನ ರೆಲ್ಲರಲ್ಲೂ ಪರಸ್ಪರ ಮಾಹಿತಿ ಇರುವಿಕೆ. ಯಾವುದೇ ಮಾಹಿತಿ ಅಥವಾ ತಿಳುವಳಿಕೆಯು ಪಸರಿಸಿರುವ ಜನಸಮುದಾಯದ ವ್ಯಾಪ್ತಿ.

area sample: ಕ್ಷೇತ್ರ ಮಾದರಿ. ಒಟ್ಟು ಅಧ್ಯಯನ ಕ್ಷೇತ್ರಗಳನ್ನು ನಿರ್ದಿಷ್ಟ ತುಂಡು ಕ್ಷೇತ್ರಗಳಾಗಿ ವಿಂಗಡಿಸಿ ಅವುಗಳಲ್ಲಿ ಗೊತ್ತು ಪಡಿಸಿದಷ್ಟು ಪ್ರಮಾಣದಲ್ಲಿ ಕ್ಷೇತ್ರಗಳನ್ನು ಮಾದರಿಯಾಗಿ ಅಧ್ಯಯನಕ್ಕೆ ಆಯ್ಕೆ ಮಾಡುವ ವಿಧಾನ.

area study: ಪ್ರದೇಶಾಧ್ಯಯನ. ಒಂದು ನಿರ್ದಿಷ್ಟ ಪ್ರದೇಶದ ಮಾನವ ಮತ್ತು ನೈಸರ್ಗಿಕ ಸಂಪನ್ಮೂಲಗಳ ಅಧ್ಯಯನ.

areopagus: ಏರೋಪಗಸ್. ಕೇವಲ ಕೆಲವೇ ವೃದ್ಧರು ಸದಸ್ಯರಾಗಿದ್ದ ಅಥೆನ್ಸಿನ ಆಡಳಿತ ಸಂಸ್ಥೆ. ಅಥೆನ್ಸ್‌ನ ಪ್ರಜಾಪ್ರಭು ತ್ವದ ಸ್ಥಾಪಕನಾದ ಸೋಲನ್ ಈ ಸಂಸ್ಥೆಯ ಅನೇಕ ಅಧಿಕಾರಗಳನ್ನು ನಾಲ್ಕುನೂರು ಸದಸ್ಯರುಳ್ಳ ಹೊಸ ಮಂಡಲಕ್ಕೆ ವರ್ಗಾಯಿ ಸಿದನು.

argot: ಸಂಕೇತ ಭಾಷೆ. ಅಪರಾಧಿಗಳ ಗುಂಪುಗಳೊಳಗಿನ ಗುಟ್ಟಿನ ಭಾಷೆ.

aristocracy: ೧. ಶ್ರೀಮಂತವರ್ಗ. ಅನು ವಂಶೀಯವಾಗಿ ಮೇಲ್ವರ್ಗಕ್ಕೆ ಸೇರಿ ದವರು.೨. ಕುಲೀನಸತ್ತೆ. ಮೇಲ್ವರ್ಗದ ಕುಲೀನ ಶ್ರೀಮಂತ ಜನರಿಂದ ನಡೆಸಲ್ಪ ಡುತ್ತಿದ್ದ ಸಾಧಾರಣವಾಗಿ ಅನುವಂಶೀಯ ವಾಗಿ ನಡೆಯುತ್ತಿದ್ದ ಆಡಳಿತ.

aristocratic family: ಕುಲೀನ ಕುಟುಂಬ.

arithmetic mean: ಅಂಕಗಣಿತದ ಸರಾಸರಿ. ಒಂದು ಸರಣಿ ಸಂಗತಿಗಳ ಒಟ್ಟು ಮೌಲ್ಯವನ್ನು ಆ ಸಂಗತಿಗಳ ಸಂಖ್ಯೆಯಿಂದ ಭಾಗಿಸಿದಾಗ ಬರುವ ಸರಾಸರಿ.

arithmetical proportion: ಅಂಕ ಗಣಿತದ ದಾಮಾಶಯ.

arithmetic riddle: ಗಣಿತಾತ್ಮಕ ಒಗಟು.

arm of legislature: ಶಾಸಕಾಂಗದ ತೋಳು.

armament: ಶಸ್ತ್ರೀಕರಣ. ಯುದ್ಧಕ್ಕೋ ಸ್ಕರ ಶಸ್ತ್ರಾಸ್ತ್ರಗಳ ಸಂಗ್ರಹ ಮಾಡುವಿಕೆ.

armed rebellion: ಸಶಸ್ತ್ರ ದಂಗೆ. ಜನರು ಶಸ್ತ್ರಾಸ್ತ್ರಗಳಿಂದೊಡಗೂಡಿ ನಡೆಸುವ ದಂಗೆ.

armed uprising: ಸಶಸ್ತ್ರ ಬಂಡಾಯ. ರಾಜ್ಯಾಧಿಕಾರವನ್ನು ವಶಪಡಿಸಿಕೊಳ್ಳುವುದಕ್ಕಾಗಿ ದುಡಿಯುವ ಜನರು ನಡೆಸುವ ವರ್ಗಸಮರದ ಅತ್ಯಂತ ತೀವ್ರವಾದ ಘಟ್ಟ.

armistice: ತಾತ್ಕಾಲಿಕ ಸಂಧಿ.

arms control: ಶಸ್ತ್ರ ನಿಯಂತ್ರಣ.

arms race: ಶಸ್ತ್ರಾಸ್ತ್ರ ಪೈಪೋಟಿ. ಎರಡು ಅಥವಾ ಅದಕ್ಕಿಂತ ಹೆಚ್ಚು ರಾಷ್ಟ್ರಗಳ ನಡುವೆ ಸೈನಿಕ ಮೇಲ್ಮೆಗಾಗಿ ಸ್ಪರ್ಧೆ.

arms trade: ಶಸ್ತ್ರಾಸ್ತ್ರ ವ್ಯಾಪಾರ. ಸರ್ಕಾರ ಅಥವಾ ಖಾಸಗಿ ಗುತ್ತಿಗೆದಾರರು ಲಾಭಕ್ಕಾಗಿ ಶಸ್ತ್ರಾಸ್ತ್ರಗಳನ್ನು ಮಾರಾಟ ಮಾಡುವುದು.

arranged marriage: ನಿಶ್ಚಯಿತ ವಿವಾಹ. ಹಿರಿಯರು ವಧು-ವರರ ಕುಲ ಗೋತ್ರ, ಜಾತಕ ಇತ್ಯಾದಿ ಸೂಕ್ತತೆಗಳನ್ನು ಪರಿಶೀಲಿಸಿ ನಿಶ್ಚೈಸಿದ ವಿವಾಹ.

arrow sacrifice: ಶರಬಲಿ. ಬುಡಕಟ್ಟು ಜನಾಂಗಗಳಲ್ಲಿ ಹೊಳೆಯುವ ಬಾಣವನ್ನು ಸೂರ್ಯನತ್ತ ಎಸೆಯುವ ಮೂಲಕ ಮಾಡುವ ಅರ್ಪಣೆ.

article: ವಿಧಿ; ಸಂವಿಧಾನದಲ್ಲಿರುವ ಶಾಸನಗಳ ಕಲಂ.

articles of association: ಸಂಘದ ನಿಯಮಾವಳಿಗಳು.

artifact: ಕುಶಲವಸ್ತು. ಕುಶಲತೆಯಿಂದ ಮಾನವನು ನಿರ್ಮಿಸಿದ ಯಾವುದೇ ವಸ್ತು.

artificial context: ಕೃತಕ ಸಂದರ್ಭ; ಅಸಹಜ ಸಂದರ್ಭ.

artisan: ಕೈಕಸುಬುದಾರ.

artistic ability: ಕಲಾತ್ಮಕ ಸಾಮರ್ಥ್ಯ.

artistic imagery: ಕಲಾತ್ಮಕ ಬಿಂಬಾವಳಿ.

artistic manifestation: ಕಲಾತ್ಮಕ ಅಭಿವ್ಯಕ್ತಿ.

artistic thinking: ಕಲಾತ್ಮಕ ಚಿಂತನೆ.

Aryanism: ಆರ್ಯತ್ವ.

ascendancy: ಅಭ್ಯುದಯ; ಏಳಿಗೆ; ಪ್ರಾಬಲ್ಯ. ಸಾಮಾಜಿಕ ಸ್ಥಾನಮಾನಗಳಲ್ಲಿ ಶ್ರೇಷ್ಠತ್ವ ಪ್ರಾಪ್ತಿಯ ಪ್ರಕ್ರಿಯೆ.

asceticism: ಸನ್ಯಾಸತ್ವ; ವಿರಕ್ತತೆ.

ascribed role: ಆರೋಪಿತ ಪಾತ್ರ. ಸಮಾಜದತ್ತ ಸ್ಥಾನಮಾನದಲ್ಲಿ ವ್ಯಕ್ತಿಯು ನಿರ್ವಹಿಸಬೇಕಾದ ಪಾತ್ರ. ಉದಾ: ಜಾತಿಯ ಚಟುವಟಿಕೆಗಳನ್ನು ನಿರ್ವಹಿಸುವುದು.

ascribed status: ಆರೋಪಿತ ಅಂತಸ್ತು. ಇದು ಜನ್ಮಜಾತವಾಗಿ ಬರುವ ಸಮಾಜ ದತ್ತ ಸ್ಥಾನಮಾನ. ತಾನು ಹುಟ್ಟಿದ ಕುಟುಂಬ, ಜಾತಿ, ಮತ, ಜನಾಂಗಕ್ಕೆ ಅನು ಸಾರವಾಗಿ ಇದು ಲಭಿಸುತ್ತದೆ.

ascription-achievement: ಆರೋಪಿತ - ಸಂಗ್ರಹಿತ. ಟಾಲ್‌ಕಾಟ್ ಪಾರ್‌ಸಾನ್ಸ್ ಹೇಳಿದ ಐದು ಮಾದರಿ ಪರಿವರ್ತಕಗಳಲ್ಲೊಂದು. ಒಂದು ಸನ್ನಿವೇಶದಲ್ಲಿ ವ್ಯಕ್ತಿಯನ್ನು ಆತನು ಯಾರು (ಆರೋಪಿತ ಸ್ಥಾನ ಮಾನ) ಅಥವಾ ಆತನು ಏನು (ಗಳಿಸಿದ ಸ್ಥಾನಮಾನ) ಎಂಬ ವಿರೋಧಾತ್ಮಕ ನೆಲೆ ಗಳಿಂದ ಗಮನಿಸಿ ಗೌರವಿಸುವ ವಿಧಗಳಲ್ಲಿನ ದ್ವಂದ್ವವೇ ಈ ಮಾದರಿ ಪರಿವರ್ತಕ (pattern variable) ಆಗಿದೆ.

asexual: ಲಿಂಗರಹಿತ.

asexual reproduction: ಅಲೈಂಗಿಕ ಸಂತಾನೋತ್ಪತ್ತಿ; ನಿರ್ಲಿಂಗ ಸಂತಾನೋತ್ಪತ್ತಿ. ಉದಾ : ದೇವ ಗರ್ಭ.

ashrama dharma: ಆಶ್ರಮ ಧರ್ಮ. ಹಿಂದೂ ಜೀವನ ದೃಷ್ಟಿಯ ಪ್ರಕಾರ ಮನುಷ್ಯನ ಒಟ್ಟು ಆಯುಷ್ಯವನ್ನು ನಾಲ್ಕು ಹಂತಗಳಾಗಿ ವಿಭಜಿಸಲಾಗಿದ್ದು ಅವು ಶ್ರಮದ ಮೌಲ್ಯಕ್ಕೆ ಸಂಬಂಧಿಸಿದುದಾಗಿವೆ. ಬ್ರಹ್ಮಚರ್ಯಾಶ್ರಮ, ಗೃಹಸ್ಥಾಶ್ರಮ, ವಾನಪ್ರಸ್ಥಾಶ್ರಮ ಹಾಗೂ ಸನ್ಯಾಸಾಶ್ರಮ ಎಂಬ ನಾಲ್ಕು ಆಶ್ರಮಗಳಲ್ಲಿ ಪಾಲಿಸುವ ವಿವಿಧ ಧರ್ಮಾಚರಣೆಯೇ ಆಶ್ರಮ ಧರ್ಮವೆನಿಸಿದೆ.

Asianic: ಏಷ್ಯಾಖಂಡಕ್ಕೆ ಸಂಬಂಧಿಸಿದ. ಪುರಾತನ ಮೆಸಪಟೋಮಿಯಾ ಮತ್ತು ಏಷ್ಯಾ ಮೈನರ್ ಪ್ರದೇಶಗಳಲ್ಲಿ ಅಭಿವೃದ್ಧಿ ಹೊಂದಿದ್ದ ಮತ್ತು ಬಳಕೆಯಾಗಿದ್ದ, ಈಗ ಅಸ್ತಿತ್ವದಲ್ಲಿಲ್ಲದ ಭಾಷಾ ಸಮೂಹಗಳು.

Asianism: ಏಷ್ಯಾವಾದ.

Asiatic mode of production: ಏಷಿಯಾಟಿಕ್ ಉತ್ಪಾದನಾ ವಿಧಾನ. ಯುರೋಪಿನ ಉತ್ಪಾದನಾ ವಿಧಾನಕ್ಕಿಂತ ಭಿನ್ನವಾಗಿ ಏಶಿಯಾ ಖಂಡದಲ್ಲೇ ವಿಶಿಷ್ಟವಾಗಿದ್ದ ಉತ್ಪಾದನಾ ವಿಧಾನ.

asocial: ಅಸಾಂಘಿಕ; ಅಸಾಮಾಜಿಕ. ಆತ್ಮಕೇಂದ್ರಿತನಾಗಿ ಜನಮಂದೆಯನ್ನು ಅಪೇಕ್ಷಿಸದೆ ಸಮಾಜದಿಂದ ದೂರವಿರಲು ಬಯಸುವ ವ್ಯಕ್ತಿತ್ವ.

asocial child: ಅಸಾಮಾಜಿಕ ಮಗು.

aspirational level: ಉತ್ಕಾಂಕ್ಷೆ (ಆಕಾಂಕ್ಷೆ)ಯ ಮಟ್ಟ. ಒಬ್ಬ ವ್ಯಕ್ತಿಯು ತಾನು ಸಾಧಿಸಬೇಕೆಂದಿರುವ ಮಟ್ಟವನ್ನು ತಾನೇ ನಿರ್ಧರಿಸಿಕೊಂಡಿರುವುದು.

aspirational reference group: ಉತ್ಕಾಂಕ್ಷೆಯ ಉಲ್ಲೇಖ ಸಮೂಹ. ಒಬ್ಬ ವ್ಯಕ್ತಿಯು ತಾನು ಆಯ್ದುಕೊಂಡ ಮಾದರಿ ಸಮೂಹದ ಸದಸ್ಯನಾಗಿ ಸ್ವೀಕರಿಸಲ್ಪಡಬೇಕೆಂದು ಅಪೇಕ್ಷಿಸುವ ಉಲ್ಲೇಖ ಸಮೂಹ.

assertive mating: ನೋಡಿ: assortative mating.

assertiveness: ಪ್ರತಿಷ್ಠತೆ; ಪ್ರತಿಪಾದಕತ್ವ; ದೃಢವಾಗಿ ಹೇಳುವುದು.

assessee: ತೆರಿಗೆದಾರ.

assessment of tax: ತೆರಿಗೆ ನಿರ್ಧಾರ; ಕರ ನಿರ್ಧಾರ.

assessor: ಮೌಲ್ಯ ನಿರ್ಧಾರಕ; ನ್ಯಾಯದರ್ಶಿ. ನ್ಯಾಯ ನಿರ್ಣಯ ಕಾರ್ಯದಲ್ಲಿ ನ್ಯಾಯಾಧಿಪತಿಗೆ ಸಹಾಯಕವಾಗಿರುವವನು.

asset: ಆಸ್ತಿ; ಸೊತ್ತು.

asset-output ratio: ಆಸ್ತಿ-ಉತ್ಪನ್ನ ನಿಷ್ಪತ್ತಿ.

assigned position: ದತ್ತ ಸ್ಥಾನಮಾನ.

assigned status: ನೋಡಿ: ascribed status.

assignment: ಕಾರ್ಯನಿಯೋಜನೆ.

assimilate: ಏಕರೂಪಗೊಳಿಸು; ಸಮೀಕರಿಸು; ವಿಲೀನಗೊಳಿಸು.

assimilation: ಸ್ವಾಂಗೀಕರಣ. ವಿಭಿನ್ನ ಸಂಸ್ಕೃತಿಗಳು ತಮ್ಮಲ್ಲಿನ ಅಂಶಗಳನ್ನು ಪರಸ್ಪರ ಹೀರಿಕೊಳ್ಳುವ ಅಥವಾ ಲೀನವಾಗುವ ಏಕಮುಖ ಯಾ ಪೂರಕ ಪ್ರಕ್ರಿಯೆ.

assimilationist minorities: ಸಮನ್ವಯಗೊಳ್ಳುವ ಅಲ್ಪಸಂಖ್ಯಾತರು.

association: ಸಂಘ. ನಿರ್ದಿಷ್ಟ ಉದ್ದೇಶ ಅಥವಾ ಉದ್ದೇಶಗಳ ಈಡೇರಿಕೆಗಾಗಿ ಸಮಾನ ಆಸಕ್ತಿಯ ಸದಸ್ಯರುಳ್ಳ ಔಪಚಾರಿಕ ಸಮೂಹ.

associationism: ಸಂಘೀಯತೆ. ಮಾನಸಿಕ ವಿಕಸನವು ಅನೇಕ ಅಮೂರ್ತ ಸರಳ ಅಂಶಗಳ ಸಂಘಟನೆಯಿಂದ ಕೂಡಿದೆ ಎಂಬ ಮನಶ್ಶಾಸ್ತ್ರೀಯ ಸಿದ್ಧಾಂತ.

associative law: ಸಾಹಚರ್ಯ ನಿಯಮ.

assortative mating: ಸರಿಸಮ ದಾಂಪತ್ಯ. ಒಂದೇ ಜನಾಂಗದ ಅಥವಾ ಸಮೂಹದ ಜನರು ಅಂಥದೇ ವ್ಯಕ್ತಿತ್ವದ ಜನರೊಡನೆ ವಿವಾಹ ಸಂಬಂಧ ಬೆಳೆ ಸುವುದು. ಉದಾ: ವಿದ್ಯಾಭ್ಯಾಸ, ಧಾರ್ಮಿಕ ನಂಬುಗೆಗಳಲ್ಲಿ ಸಮಾನತೆ ಇರುವವರು ಸಂಗಾತಿಗಳಾಗುವುದು.

assumed role: ನೋಡಿ: achieved role.

assumed status: ಕಲ್ಪಿತ ಸ್ಥಾನಮಾನ.

assumption: ಪೂರ್ವಕಲ್ಪನೆ; ಊಹನೆ. ಯಾವುದಾದರೂ ವಿಷಯದ ಪುರಾವೆ ಅಥವಾ ಪ್ರಯೋಗದ ಆಧಾರವಿಲ್ಲದೆ ಅದನ್ನು ಸತ್ಯವಿರಬಹುದೆಂದು ಊಹಿಸುವುದು.

asthenic group: ದುರ್ಬಲ ಸಮೂಹ.

asymmetric descent: ಅಸಮ ಸೂತ್ರತೆಯ ವಂಶಾವಳಿ. ಗಂಡಿನಿಂದ ಗಂಡಿನ ವಂಶಾವಳಿಯನ್ನೂ, ಹೆಣ್ಣಿನಿಂದ ಹೆಣ್ಣಿನ ವಂಶಾವಳಿಯನ್ನೂ ಗುರುತಿಸುವ ಸಂಬಂಧ.

asymmetrical cross-cousin marriage: ಅಸಮ ಅಂತರ್ ಭ್ರಾತೃವಿವಾಹ.

atavism: ಪೂರ್ವ ಪಿತೃರೂಪದ ಪುನರಾವರ್ತನೆ. ಹೆತ್ತವರಿಗಿಂತಲೂ ಮೊದಲಿನ ಪೂರ್ವಿಕರಲ್ಲಿ ಇದ್ದಂಥ ಲಕ್ಷಣಗಳು ಮಕ್ಕಳಲ್ಲಿ ಪುನ: ಕಾಣಿಸಿಕೊಳ್ಳುವುದು. ಕೆಲವು ಸಲ ತಂದೆ ತಾಯಿಗಳಿಗಿಂತ ಹಿಂದಿನ ತಲೆಮಾರುಗಳ ರೋಗಗಳೂ ಪುನರಾವರ್ತಿಸುವುದೂ ಇದೆ.

atheism: ನಾಸ್ತಿಕವಾದ. ದೇವರ ಅಸ್ತಿತ್ವದಲ್ಲಿ ವಿಶ್ವಾಸವಿಲ್ಲದಿರುವ ತತ್ವ. ಧಾರ್ಮಿಕ ನಂಬಿಕೆಗಳನ್ನು ತಿರಸ್ಕರಿಸುವ, ಅಲೌಕಿಕ ಶಕ್ತಿಗಳ ಅಸ್ತಿತ್ವವನ್ನು ನಿರಾಕರಿಸುವ, ಮರಣೋತ್ತರ ಜೀವನದಲ್ಲಿ ವಿಶ್ವಾಸವಿಲ್ಲದಿರುವ ಹಾಗೂ ಮನುಷ್ಯ ಮತ್ತು ಅವನ ಆಸಕ್ತಿಗಳೇ ಇತಿಹಾಸದ ಮುಖ್ಯ ಚಾಲಕ ಶಕ್ತಿ ಎಂದು ಅಂಗೀಕರಿಸುವ ಒಂದು ವಿಚಾರ ಸಮೂಹ.

atlantis: ಅಟ್ಲಾಂಟಿಸ್. ನಾಗರಿಕತೆ ಉಗಮಗೊಂಡಿತು ಎಂದು ಹೇಳಲಾಗುವ, ಅಟ್ಲಾಂಟಿಕ್ ಸಾಗರದಲ್ಲಿರುವ ಒಂದು ಪೂರ್ವ ಕಲ್ಪಿತ ಭೂಪ್ರದೇಶ. ಆದರೆ ಇದರ ಸಮರ್ಥನೆಗೆ ಯಾವುದೇ ನಿಖರ ಪುರಾವೆಗಳಿಲ್ಲ.

atlanto-mediterranean: ಅಟ್ಲಾಂಟೋ ಮೆಡಿಟರೇನಿಯನ್. ಮೆಡಿಟರೇನಿಯನ್ ಕಾಕೆಸೊಯಿಡ್ ಜನಾಂಗದ, ಕಲ್ಪಿತ ಪಾಶ್ಚಿಮಾತ್ಯ ಐರೋಪ್ಯ ಉಪಪಂಗಡಕ್ಕೆ ಸಂಬಂಧಿಸಿದ.

atomism: ಅಣುವಾದ; ಕಣವಾದ. ವ್ಯಕ್ತಿಗಳ ಚಟುವಟಿಕೆಗಳ ಕಣಕಣವೂ ಸೇರಿ

ಸಮೂಹ, ಸಂಸ್ಥೆ, ಸಾಮಾಜಿಕ ವರ್ಗ ಇತ್ಯಾದಿಗಳುಳ್ಳ ಸಮಾಜರೂಪುಗೊಳ್ಳುತ್ತದೆಂಬ ದೃಷ್ಟಿಕೋನ ಹೊಂದಿರುವ ಸಿದ್ಧಾಂತ.

atomistic family: ವ್ಯಕ್ತಿ ಪ್ರಧಾನ ಕುಟುಂಬ. ವ್ಯಕ್ತಿಯ ಮೇಲೆ ಕುಟುಂಬದ ನಿಯಂತ್ರಣವು ಕಡಿಮೆ ಇದ್ದು ಕುಟುಂಬದ ಕಲ್ಯಾಣಕ್ಕಿಂತ ವ್ಯಕ್ತಿಯ ಶ್ರೇಯಸ್ಸೇ ಮೇಲೆಂಬ ಭಾವನೆಯುಳ್ಳ ಕುಟುಂಬ ವ್ಯವಸ್ಥೆ.

atomistic study: ಸೂಕ್ಷ್ಮ ಅಧ್ಯಯನ; ಅಣು ಅಧ್ಯಯನ.

atonement: ಪ್ರಾಯಶ್ಚಿತ.

attachment order: ಕುರ್ಕಿ ಆಜ್ಞೆ; ಜಪ್ತಿ ಆಜ್ಞೆ.

attainment level: ಸಿದ್ಧಿಯ ಮಟ್ಟ; ಸಾಧನೆಯ ಮಟ್ಟ.

attesting officer: ಪ್ರಮಾಣೀಕರಿಸುವ ಅಧಿಕಾರಿ.

attitude: ಮನೋಭಾವ. ವ್ಯಕ್ತಿಯು ಯಾವುದೇ ವಸ್ತು, ಸನ್ನಿವೇಶ, ತಾತ್ವಿಕತೆ ಇತ್ಯಾದಿಗಳ ಬಗ್ಗೆ ವ್ಯಕ್ತವಾಗಿ ಅಥವಾ ವರ್ತನೆಗಳ ಮೂಲಕ ತೋರುವ ಮನೋಭಾವ ಅಥವಾ ಮನೋಸ್ಥಿತಿ.

attitude cluster: ಮನೋಭಾವ ಸಮುಚ್ಚಯ. ಒಬ್ಬ ವ್ಯಕ್ತಿಯು ವಿಭಿನ್ನವಾದ ಆದರೆ ಕೆಲವೊಮ್ಮೆ ಪರಸ್ಪರ ಪೂರಕವಾದ ಅನೇಕ ಮನೋವೃತ್ತಿಗಳನ್ನು ಹೊಂದಿರುವ ಸ್ಥಿತಿ.

attitude research: ಮನೋವೃತ್ತಿಯ ಸಂಶೋಧನೆ. ವ್ಯಕ್ತಿಗಳ ಮನೋಭಾವ ವನ್ನು ಅಧ್ಯಯನ ವಿಷಯವಾಗಿ ಹೊಂದಿರುವ ಸಂಶೋಧನೆ.

attitude scale: ಮನೋಭಾವ ಮಾಪಕ. ಯಾವುದೇ ಮನೋಭಾವವು (ಉದಾ: ದೇಶ ಪ್ರೇಮ) ಎಷ್ಟು ಪ್ರಬಲವಾಗಿದೆ ಎಂಬುದನ್ನು ಅಳೆಯುವ ಮಾಪಕ.

attorney general: ಸರಕಾರೀ ಮುಖ್ಯ (ಪ್ರಧಾನ) ನ್ಯಾಯವಾದಿ.

auc: ರೋಮನ್ ಶಕೆ. auc ಅಂದರೆ annourbis conditare. ಲ್ಯಾಟಿನ್‌ನಲ್ಲಿ ರೋಮ್ ನಗರದ ಸ್ಥಾಪನೆ ಎಂದರ್ಥ. (ನೋಡಿ: Roman Era.).

auction notice: ಹರಾಜು ತಿಳುವಳಿಕೆ (ಸೂಚನೆ).

audience expectation: ಪ್ರೇಕ್ಷಕ ನಿರೀಕ್ಷೆ. ಜಾನಪದ ಕಲಾಪ್ರದರ್ಶನಗಳಿಗೆ ಇರುವ ಸಾಂಪ್ರದಾಯಿಕ ರೂಪಲಕ್ಷಣಗಳನ್ನು ತಿಳಿದಿರುವ ಪ್ರೇಕ್ಷಕರಿಗೆ ಪ್ರದರ್ಶಕರಿಂದ ನಿರ್ದಿಷ್ಟ ನಿರೀಕ್ಷೆಗಳಿರುತ್ತವೆ.

audio-visual education: ಶ್ರವಣ-ದೃಕ್ ಶಿಕ್ಷಣ.

audit report: ತಪಾಸಣಾ ವರದಿ.

auditor general: ಮಹಾಲೆಕ್ಕ ಪರಿಶೋಧಕ. ಸರಕಾರದ ಖರ್ಚುವೆಚ್ಚಗಳ ಲೆಕ್ಕವನ್ನು ಪರಿಶೋಧನೆ ಮಾಡುವ ಲೆಕ್ಕ ಪರಿಶೋಧಕ.

auditory delusion: ಶ್ರವಣ ವಿಭ್ರಮೆ.

auditory hallucination: ನೋಡಿ: auditory delusion.

Australasian: ಆಸ್ಟ್ರೋಲೆಷಿಯನರು. ಆಸ್ಟ್ರೇಲಿಯಾದಲ್ಲಿರುವ ಏಷ್ಯಾ ಮೂಲದವರು.

austric: ಆಸ್ಟ್ರಿಕ್. ಆಸ್ಟ್ರೋ ಏಷ್ಯಾಟಿಕ್

ಮತ್ತು ಮಲೆಯಾ ಪೊಲಿನೇಶಿಯನ್ ಸಂಸ್ಕೃತಿಗೆ ಸೇರಿದ ಭಾಷಾ ಕುಟುಂಬ.

Austro-asiatic: ಆಸ್ಟ್ರೋ-ಏಷಿಯಾಟಿಕ್. ಆಸ್ಟ್ರೇಲಿಯಾ ಮತ್ತು ಏಷ್ಯಾಕ್ಕೆ ಸಂಬಂಧಿಸಿದ ಭಾಷೆ.

authorisation: ಅಧಿಕೃತಗೊಳಿಸುವಿಕೆ; ಅಧಿಕಾರ ನೀಡುವಿಕೆ. ತನ್ನ ಪರವಾಗಿ ಕಾರ್ಯ ನಿರ್ವಹಿಸಲು ಅಥವಾ ಹಣ ಪಡೆಯಲು ನೀಡುವ ಅಧಿಕಾರ.

authorised capital: ಅಧಿಕೃತ ಬಂಡವಾಳ.

authoritarian control: ಅಧಿಕಾರಾತ್ಮಕ ನಿಯಂತ್ರಣ.

authoritarian leader: ಅಧಿಕಾರ ಯುತ ನಾಯಕ.

authoritarian leadership: ಅಧಿಕಾರಯುತ ನಾಯಕತ್ವ. ನಾಯಕರಾದವರು ತಮ್ಮ ಅನುಯಾಯಿಗಳ ಅಭಿಪ್ರಾಯ ತೆಗೆದುಕೊಳ್ಳದೇನೇ ಸಮೂಹದ ಉದ್ದೇಶಗಳು ಹಾಗೂ ವರ್ತನೆಯ ನಿಯಮಗಳನ್ನು ನಿರಂಕುಶವಾಗಿ ನಿರ್ಧರಿಸುವ ನಾಯಕತ್ವದ ವಿಧ.

authoritarian personality: ಅಧಿಕಾರಯುತ ವ್ಯಕ್ತಿತ್ವ. ಅತಿಯಾದ ನಿಯಮಪಾಲನೆ, ಅತಿನಿಷ್ಠೆ, ಅಧಿಕಾರಕ್ಕೆ ಗೌರವ, ಭಾವನೆಗಳ ದಮನ ಇತ್ಯಾದಿ ಗುಣಗಳುಳ್ಳ ವ್ಯಕ್ತಿತ್ವದ ಒಂದು ವಿಧ. ಅದೊಂದು ಅಮೂರ್ತ ಅಥವಾ ಮಾದರಿ ವಿಧವಷ್ಟೇ ಹೊರತು ವಾಸ್ತವಿಕವಲ್ಲ.

authoritarian praetorianism: ಗಣ್ಯ ರಕ್ಷಣಾ ಅಧಿಕಾರತ್ವ, ನಾಗರಿಕ-ರಾಜಕೀಯ ಅಧಿಕಾರಿಗಳು ಸೈನಿಕ ಶಕ್ತಿಗಳೊಂದಿಗೆ ಮಾಡಿಕೊಳ್ಳುವ ನಾಯಕತ್ವದ ಹಂಚಿಕೆ.

authoritarian rule: ಅಧಿಕಾರಯುತ ಆಡಳಿತ.

authoritarian socialism: ಅಧಿಕಾರಯುತ ಸಮತಾವಾದ.

authoritarianism: ಅಧಿಕಾರ ವಾದ. ಸರಕಾರ ಅಥವಾ ಆಡಳಿತದಲ್ಲಿರುವವರು ಅನಿರ್ಬಂಧಿತ ಹಾಗೂ ನಿರಂಕುಶ ಅಧಿಕಾರ ಹೊಂದಿರಬೇಕೆಂಬ ತತ್ವ.

authoritative: ಅಧಿಕಾರಯುಕ್ತ.

authority: ಪ್ರಾಧಿಕಾರ; ಅಧಿಕಾರ; ನಿರ್ದಿಷ್ಟ ಕಾರ್ಯಗಳನ್ನು ನಿರ್ವಹಿಸಲು ಅಸ್ತಿತ್ವದಲ್ಲಿರುವ ಕಾನೂನುಬದ್ಧ ಸರಕಾರಿ ಸಂಸ್ಥೆ. ಉದಾ: ನಗರಾಭಿವೃದ್ಧಿ ಪ್ರಾಧಿಕಾರ.

authority structure: ಅಧಿಕಾರ ರಚನೆ. ವಿವಿಧ ಅಧಿಕಾರ ವರ್ಗದವರ ನಡುವಿನ ಸಂಬಂಧದ ರಚನೆ.

autism: ಅತಿಸ್ವಾರ್ಥಪರತೆ. ವಾಸ್ತವಿಕತೆಯನ್ನು ಗಮನಿಸದೆ ತನ್ನ ಅಗತ್ಯಗಳ ಬಗೆಗೆ ಮಾತ್ರ ಚಿಂತಿಸುವುದು.

autistic child: ಸ್ವಾರ್ಥಿ ಶಿಶು. ಬಹಳಷ್ಟು ಅಂತರ್‌ಮುಖಿಯಾಗಿರುವ ಮತ್ತು ವಾಸ್ತವಿಕತೆಯಿಂದ ದೂರವಿರುವ ಹಾಗೂ ತನ್ನಲ್ಲೇ ತಾನು ತೊಡಗಿರುವ ಮಗು.

autistic thinking: ಆತ್ಮರತ ಚಿಂತನೆ; ಸ್ವಲೀನ ಚಿಂತನೆ.

auto-analysis: ಸ್ವಯಂ ವಿಶ್ಲೇಷಣೆ. ಸಂಶೋಧಕನು ಸ್ವತಃ ಸದಸ್ಯನಾಗಿರುವ ಸಮಾಜದ ಅಧ್ಯಯನ ಮತ್ತು ವಿಶ್ಲೇಷಣೆ.

auto-correlation: ಸ್ವ ಸಹ ಸಂಬಂಧ. ನಾನಾ ಚರಗಳ ನಡುವಣ ಸಹ ಸಂಬಂಧ.

autocracy: ನಿರಂಕುಶ ಆಡಳಿತ ಸ್ವಯಂ ಅಧಿಕಾರತ್ವ. ನಿರಂಕುಶ ರೀತಿಯಲ್ಲಿ ನಡೆಸಲ್ಪಡುವ ಅಪರಿಮಿತ ಅಧಿಕಾರವನ್ನು ಹೊಂದಿರುವ ಏಕವ್ಯಕ್ತಿ ಸರಕಾರ.

autocratic leader: ನಿರಂಕುಶ ನಾಯಕ; ಏಕತಂತ್ರಾತ್ಮಕ ನಾಯಕ.

autocratic military rule: ನಿರಂಕುಶ ಸೈನ್ಯಾಡಳಿತ. ಸಂಪೂರ್ಣ ಅಧಿಕಾರ ಹೊಂದಿದ ಮಿಲಿಟರಿ ಸರ್ಕಾರ.

auto-erotism: ಸ್ವರತಿ; ಹಸ್ತ ಮೈಥುನ. ಸ್ವಯಂ ಕಾಮ ಸುಖ ಹೊಂದುವುದು.

autogenetic: ಸ್ವಯಂಜನ್ಯ. ಜೀವಿಗಳು ಅಂತರ್ಗತವಾಗಿ ಸ್ವವಿಕಾಸ ಹೊಂದಿರುತ್ತವೆ ಎಂಬ ವಿಕಾಸವಾದ.

autokinetic effect: ಸ್ವಯಂಚಲನಾ ಪರಿಣಾಮ. ನಿರ್ದಿಷ್ಟ ಚೌಕಟ್ಟಿಲ್ಲದೆ ಸ್ಥಿರ ವಾದ ಒಂದು ಸಂಗತಿಯೂ ಕೂಡಾ ಸ್ವತಃ ಚಲಿಸುತ್ತದೆಯೆಂಬ ಭ್ರಾಮಕ ಅನುಭವ.

automated management system: ಸ್ವಯಂ ನಿಯಂತ್ರಿತ ನಿರ್ವಹಣಾ ವಿಧಾನ. ಆರ್ಥಿಕ ನಿರ್ಧಾರಗಳಿಗೆ ಅಗತ್ಯವಾದ ಮಾಹಿತಿಯನ್ನು ಒಂದುಗೂಡಿಸಲು, ನೋಂದಾಯಿಸಲು, ವರ್ಗಾಯಿಸಲು, ಶೇಖರಿಸಲು ಹಾಗೂ ವರ್ಗೀಕರಿಸಲು ಆರ್ಥಿಕ ಹಾಗೂ ಗಣಿತಾತ್ಮಕ ವಿಧಾನಗಳ ವಿಸ್ತೃತ ಉಪ ಯೋಗದ ಆಧಾರದಿಂದ ಉತ್ಪಾದನೆಯ ನಿರ್ವಹಣಾ ದಕ್ಷತೆಯನ್ನು ಹೆಚ್ಚಿಸುವ ವಿಧಾನ.

automatic mechanism: ಸ್ವಯಂ ಚಲನೀಕರಣ. ಮಾನವರು ಮಾಡುತ್ತಿದ್ದ ಕೆಲಸಗಳನ್ನು ಮಾಡಲು ಯಂತ್ರಸಾಧನ ಗಳನ್ನು ಉಪಯೋಗಿಸಿ ಕೆಲಸಗಳೆಲ್ಲಾ ಸ್ವತಃ ಆಗುವ ಹಾಗೆ ಮಾಡುವ ಪ್ರಕ್ರಿಯೆ.

automation: ಸ್ವಯಂ ಚಲನೆ.

automation of production: ಉತ್ಪಾದನೆಯ ಸ್ವಚಲನೀಕರಣ. ಯಂತ್ರಗಳ ಕಾರ್ಯದ ಮೇಲ್ವಿಚಾರಣೆ ಮತ್ತು ಉತ್ಪಾದನೆಯ ಎಲ್ಲಾ ಹಂತಗಳನ್ನು ಯಂತ್ರಗಳೇ ಸ್ವಯಂ ಆಗಿ ನಡೆಸುವ ವಿಧಾನ.

autonomous area: ಸ್ವಾಯತ್ತಾಧಿಕಾರ ಪ್ರದೇಶ.

autonomous demand: ಸ್ವತಂತ್ರ ಬೇಡಿಕೆ; ಸ್ವಯಂ ಪ್ರೇರಿತ ಬೇಡಿಕೆ.

autonomous expenditure: ಸ್ವಯಂ ಪ್ರೇರಿತ ವೆಚ್ಚ.

autonomous family: ಸ್ವಾಯತ್ತ ಕುಟುಂಬ. ಆರ್ಥಿಕ ಸ್ವಾವಲಂಬನೆಯುಳ್ಳ ಕುಟುಂಬ.

autonomous investment: ಸ್ವಯಂ ಪ್ರೇರಿತ ಹೂಡಿಕೆ; ಸ್ವತಂತ್ರ ಹೂಟೆ.

autonomous payment: ಸ್ವಾಯತ್ತ ಪಾವತಿ.

autonomous region: ಸ್ವಾಯತ್ತ ಪ್ರಾಂತ.

autonomous republic: ಸ್ವಾಯತ್ತ ಗಣತಂತ್ರ.

autonomy: ಸ್ವಾಯತ್ತತೆ, ಸ್ವಯಂ ಆಡಳಿತ. ಸ್ವಯಂ ಆಡಳಿತ ನಡೆಸಲು ಸ್ವಾತಂತ್ರ್ಯ ಇರುವುದು.

autophilia: ಸ್ವಪ್ರೇಮ.

autophobia: ಏಕಾಂತ ಭೀತಿ. ಒಬ್ಬಂಟಿಗನಾಗಿರಲು ಭಯ.

auto-suggestion: ಸ್ವಯಂ ಸಲಹೆ.

auxiliary agency: ಸಹಾಯಕ ನಿಯೋಗಿ; ಪೂರಕ ನಿಯೋಗಿ. ಸರಕಾರದ ಪ್ರಧಾನ ಅಂಗವಾದ ಕಾರ್ಯನಿರ್ವಾಹಕ ವರ್ಗಕ್ಕೆ ಸಹಾಯ ಒದಗಿಸುವುದೇ ಮುಖ್ಯ ಗುರಿಯಾಗಿರುವ ವರ್ಗ.

auxiliary capital: ಸಹಾಯಕ ಬಂಡವಾಳ; ಪೂರಕ ಬಂಡವಾಳ.

auxiliary document: ಸಹಾಯಕ ದಾಖಲೆ.

auxiliary homes: ಸಹಾಯಕ ಗೃಹಗಳು.

auxiliary service: ಸಹಾಯಕ ಸೇವೆ.

auxiliary staff: ಸಹಾಯಕ ಸಿಬ್ಬಂದಿ.

auxiliary technical staff: ಸಹಾಯಕ ತಾಂತ್ರಿಕ ಸಿಬ್ಬಂದಿ.

auxiliary worker: ಸಹಾಯಕ ಕಾರ್ಯಕರ್ತ.

average capital output ratio: ಸರಾಸರಿ ಬಂಡವಾಳ ಉತ್ಪನ್ನ ಪ್ರಮಾಣ.

average cost: ಸರಾಸರಿ ವೆಚ್ಚ.

average deviation: ಸರಾಸರಿ ವ್ಯತಿ ಕಲನ

average expectancy of life: ಸರಾ ಸರಿ ಆಯುರ್ಮಾನ.

average fixed cost: ಸರಾಸರಿ ಸ್ಥಿರ ವೆಚ್ಚ.

average propensity to consume: ಸರಾಸರಿ ಅನುಭೋಗ ಪ್ರವೃತ್ತಿ.

average propensity to save: ಸರಾಸರಿ ಉಳಿತಾಯ ಪ್ರವೃತ್ತಿ.

average rate of profit: ಲಾಭದ ಸರಾಸರಿ ದರ. ಸಮಾನ ಬಂಡವಾಳಕ್ಕೆ ಸಿಗುವ ಸಮಾನ ಲಾಭ.

average revenue: ಸರಾಸರಿ ಆದಾಯ.

average revenue curve: ಸರಾಸರಿ ಆದಾಯ ರೇಖೆ.

average total cost: ಸರಾಸರಿ ಒಟ್ಟು ವೆಚ್ಚ.

average variable cost: ಸರಾಸರಿ ವ್ಯತ್ಯಾಸಾತ್ಮಕ ವೆಚ್ಚ. ಸರಾಸರಿ ಬದಲಾಗಬಲ್ಲ ವೆಚ್ಚ.

aversion: ವಿಮುಖತೆ.

aversion therapy: ಜಿಗುಪ್ಸಾ ಚಿಕಿತ್ಸೆ. ವರ್ತನ ಚಿಕಿತ್ಸೆಯ ಒಂದು ವಿಧಾನ.

avocation: ವಿರಾಮದ ಸದುಪಯೋಗ. ವಿರಾಮ ಸಮಯವನ್ನು ಮನರಂಜನೆ ಹಾಗೂ ಇತರ ಉಪಯುಕ್ತ ಕಾರ್ಯಗಳಿಗೆ ನಿಯಮಿತವಾಗಿ ಬಳಸುವುದು.

avoidable cost: ತಪ್ಪಿಸಿಕೊಳ್ಳಬಹು ದಾದ ವೆಚ್ಚ.

avoidance learning: ವರ್ಜನ ಕಲಿಕೆ; ನಿವಾರಣಾ ಕಲಿಕೆ.

avoidance relationship: ವರ್ಜನ ಸಂಬಂಧ; ದೂರ ವಿಡುವಿಕೆಯ ಸಂಬಂಧ; ತಪ್ಪಿಸಿ ಓಡಾಡುವ ಸಂಬಂಧ. ಉದಾ: ಕೆಲವು ಸಮಾಜಗಳಲ್ಲಿ ಅತ್ತೆ ಮತ್ತು ಅಳಿಯ ಪರಸ್ಪರ ಮಾತನಾಡದಿರುವಷ್ಟು ಹಾಗೂ ಕೆಲವೊಮ್ಮೆ ನೋಡದಿರುವಷ್ಟು ದೂರದ ಸಂಬಂಧ.

avoidance response: ವರ್ಜನಾನುಕ್ರಿಯೆ. ಪ್ರತಿಕ್ರಿಯೆ ನೀಡದಿರುವುದು

avoidance ritual: ವರ್ಜನ ಸಂಸ್ಕಾರ. ಸಂಬಂಧಗಳನ್ನು ಮಿತಗೊಳಿಸುವ ಸಂಸ್ಕಾರ. ವಿವಿಧ ಸ್ತರಗಳ ಅಂತರ್ ಕ್ರಿಯೆಯಲ್ಲಿ ಎಚ್ಚರವಹಿಸಬೇಕಾದ ಕ್ರಿಯಾವಿಧಿಗಳ ಮೂಲಕ ಪರಸ್ಪರ ಸಂಬಂಧಗಳು ಚೆನ್ನಾಗಿರುವಂತೆ ನೋಡಿಕೊಳ್ಳುವುದು. ಉದಾ: ಹಿರಿಯ ಸ್ಥಾನದವರಿಗೆ ಕಿರಿಯರು ಮೊದಲೇ ವಂದಿಸುವುದು, ಅವರೆದುರು ನಿಂತುಕೊಳ್ಳುವುದು, ಅವರಿಗಿಂತ ಕೆಳಗಿನ ಆಸನದಲ್ಲಿ ಕುಳಿತುಕೊಳ್ಳುವುದು, ಅಡ್ಡದಾಟಿ ಹೋಗದಿರುವುದು ಇತ್ಯಾದಿ.

avuncular avoidance: ಸೋದರ ಮಾವನನ್ನು ತಪ್ಪಿಸಿ ಓಡಾಡುವುದು.

avuncular inheritance: ಮಾತುಲ ಪ್ರಧಾನ ಉತ್ತರಾಧಿಕಾರ. ಸೋದರ ಮಾವನ ಮರಣಾನಂತರ ಸೋದರಳಿಯನು ಆತನ ಆಸ್ತಿಯ ಹಕ್ಕು ಪಡೆಯುವಿಕೆ.

avuncular marriage: ಸೋದರ ಮಾವನ ಮಗ / ಮಗಳೊಂದಿಗೆ ನಡೆಯುವ ವಿವಾಹ.

avunculate: ಮಾತುಲ ಹಕ್ಕುದಾರಿಕೆ. ಸೋದರಳಿಯನು ತನ್ನ ಸೋದರ ಮಾವನ ಸ್ಥಾನಮಾನಗಳನ್ನು ಹಾಗೂ ಸಂಪತ್ತನ್ನು ಪಡೆಯುವುದು.

avunculocal residence: ಮಾತುಲ ಸ್ಥಾನೀಯ ನಿವಾಸ. ವಿವಾಹಾನಂತರ ವ್ಯಕ್ತಿಯು ತನ್ನ ಸೋದರ ಮಾವನ ಮನೆಯಲ್ಲಿ ವಾಸಿಸುವ ಪದ್ಧತಿ.

awareness: ಜಾಗೃತಿ; ಎಚ್ಚರ.

axiate hypothesis of urban grow th: ಬಾಹ್ಯಾಭಿಮುಖ ನಗರ ವಿಸ್ತರಣಾ ಪ್ರಾಕ್ ಕಲ್ಪನೆ. ನಗರಗಳು ಕೇಂದ್ರದಿಂದ ಬಾಹ್ಯಾಭಿಮುಖವಾಗಿ ಬೆಳೆಯುತ್ತಾ ಹೋಗುವವು ಎಂಬ ಪ್ರಾಕ್ ಕಲ್ಪನೆ.

axiom: ಸಿದ್ಧತತ್ತ್ವ.

axis powers: ಅಕ್ಷ ಶಕ್ತಿಗಳು. ಪ್ರಥಮ ವಿಶ್ವ ಸಮರದ ನಂತರ ಇಟಲಿ, ಜರ್ಮನಿ ಮತ್ತು ಜಪಾನ್ ಈ ಮೂರು ದೇಶಗಳು ಫ್ಯಾಸಿಸ್ಟ್ ಮಾರ್ಗವನ್ನು ಹಿಡಿದು ಅವುಗಳ ಮಧ್ಯೆ ಆದ ಸೈನಿಕ ಹಾಗೂ ರಾಜಕೀಯ ಸ್ವರೂಪದ ಮಿತ್ರತ್ವ.

azoic age: ಅಜೀವ ಯುಗ.

B

baalism: ಮಿಥ್ಯಾ ದೈವಾರಾಧನೆ. ಫಲವತ್ತತೆಗೆ ಪ್ರಾಮುಖ್ಯ ನೀಡುವ ಒಂದು ನಿಸರ್ಗವಾದ.

bachelor dormitories: ಅವಿವಾಹಿತರ ಶಯನಶಾಲೆ. ಕೆಲವು ಬುಡಕಟ್ಟುಗಳಲ್ಲಿ ಅವಿವಾಹಿತ ಯುವಕರಿಗೆ ಹಾಗೂ ಯುವತಿಯರಿಗೆ ಪ್ರತ್ಯೇಕ ಸಾಮುದಾಯಿಕ ಶಯನ ಗೃಹಗಳಿರುತ್ತವೆ.

backward caste: ಹಿಂದುಳಿದ ಜಾತಿ.

backward class: ಹಿಂದುಳಿದ ವರ್ಗ.

backward classes movement: ಹಿಂದುಳಿದ ವರ್ಗಗಳ ಆಂದೋಲನ.

backward community: ಹಿಂದುಳಿದ ಸಮುದಾಯ.

backward linkage: ಹಿಂಜೋಡಣೆ. ಒಂದು ನಿರ್ದಿಷ್ಟ ಯೋಜನೆಯಲ್ಲಿ ಬಂಡವಾಳ ಹೂಡಿಕೆಯ ಆರಂಭಿಕ ಉತ್ಪಾದನಾ ಹಂತವನ್ನು ಉತ್ತೇಜಿಸುವುದು.

backward linkage effect: ಹಿಂಜೋ

ಡಣಾ ಪರಿಣಾಮ. ಉತ್ಪಾದನಾ ಸರಣಿಯಲ್ಲಿ ಒಂದು ಹಂತದ ಉದ್ಯಮವು ಹಿಂದಿನ ಹಂತದ ವಿಸ್ತರಣೆಗೆ ಕಾರಣವಾಗುವುದು.

backward special group: ಹಿಂದುಳಿದ ವಿಶೇಷ ಸಮುದಾಯ.

backward tax shifting: ತೆರಿಗೆಯ ಹಿನ್ನಡೆ ವರ್ಗಾವಣೆ.

backward tract: ಹಿಂದುಳಿದ ಪ್ರದೇಶ; ಹಿಂದುಳಿದ ಹರವು.

backward tribe: ಹಿಂದುಳಿದ ಬುಡಕಟ್ಟು.

backwash effect: ಹಿಮ್ಮುಖ ಸಂಚಲನೆಯ ಪರಿಣಾಮ; ಕ್ಷೀಣಿಸುವ ಪರಿಣಾಮ.

bacteriological weapons: ವಿಷಾಣು ಜೀವಿ ಅಸ್ತ್ರಗಳು. ವಿಷಾಣು ಜೀವಿಗಳನ್ನು ಪ್ರಸರಿಸುವಂತಹ ವಿನಾಶಕಾರಿ ಅಸ್ತ್ರಗಳು. ಉದಾ: ಅಂಥ್ರಾಕ್ಸ್.

bail: ಜಾಮೀನು. ಅಪರಾಧಿ ಎಂದು ಬಂಧಿಸಲ್ಪಟ್ಟ ವ್ಯಕ್ತಿಗೆ ಸಂಬಂಧಿಸಿದವರು ಆತ ನನ್ನು ವಿಚಾರಣೆಗೆ ಒಪ್ಪಿಸುವ ಭರವಸೆ ನೀಡಿ ನ್ಯಾಯಾಧೀಶರು ವಿಧಿಸಿದ ಮೊಬಲಗನ್ನು ಸಂದಾಯ ಮಾಡಿ ತಾತ್ಕಾಲಿಕವಾಗಿ ಬಂಧನದಿಂದ ಬಿಡುಗಡೆ ಪಡೆಯುವುದು.

balance of payment: ಸಂದಾಯ ಶಿಲ್ಕು. ಪಾವತಿ ಶೇಷ.

balance of power: ಶಕ್ತಿ ಸಮತೋ ಲನ. ೧. ಯಾವುದೇ ರಾಷ್ಟ್ರವು ದುರಾಕ್ರಮಣ ಅಥವಾ ಯುದ್ಧದಲ್ಲಿ ತೊಡಗದಂತೆ ಮತ್ತು ವಿಶ್ವ ಸಾಮ್ರಾಜ್ಯವನ್ನು ಸ್ಥಾಪಿಸುವ ಆಕಾಂಕ್ಷೆ ಹೊಂದದಂತೆ ರಾಷ್ಟ್ರೀಯ ಶಕ್ತಿಯನ್ನು ವ್ಯವಸ್ಥೆಗೊಳಿಸುವುದು. ೨. ಎರಡು ವಿರುದ್ಧ ಗುಂಪುಗಳ ಅಥವಾ ಉದ್ಯಮಗಳ ನಡುವಿನ ಶಕ್ತಿ ಸಮತೋಲನ.

balance of terror: ಉಗ್ರತೆಯ ಸಮತೋಲನ. ಆಧುನಿಕ ಪ್ರಪಂಚದಲ್ಲಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಆಧುನಿಕ ಮಾರಕಾಸ್ತ್ರಗಳ ಉತ್ಪಾದನೆ ಅಥವಾ ಖರೀದಿಯೊಂದಿಗೆ ತಮ್ಮ ಸೈನ್ಯಶಕ್ತಿಯನ್ನು ಅಭಿವೃದ್ಧಿಪಡಿಸುವುದು.

balance of trade: ವ್ಯಾಪಾರ ಬಾಕಿ ಸಮತೋಲನ; ವ್ಯಾಪಾರ ಶಿಲ್ಕು ಸಮ ತೋಲನ.

balance sheet: ಅಢಾವೆ ಪತ್ರ.

balanced budget: ಸಮತೋಲಿತ ಮುಂಗಡ ಪತ್ರ; ಸಮತೂಕದ ಬಜೆಟ್. ಖರ್ಚು ಮತ್ತು ಆದಾಯಗಳ (ಆಯ-ವ್ಯಯಗಳ) ಪ್ರಮಾಣ ಸರಿಸಮವಿರುವ ಮುಂಗಡ ಪತ್ರ.

balanced farming: ಸಮತೋಲಿತ ಬೇಸಾಯ.

balanced growth: ಸಮತೋಲಿತ ಬೆಳವಣಿಗೆ.

balanced growth argument: ಸಮತೋಲಿತ ಬೆಳವಣಿಗೆಯ ಸಿದ್ಧಾಂತ.

balanced sectroal development: ವಿಭಾಗಗಳ ಸಮತೋಲಿತ ಬೆಳವಣಿಗೆ.

balancing force: ಸಮತೋಲಕ ಶಕ್ತಿ. ಸಮಾಜದ ಬಲಿಷ್ಠ ಮತ್ತು ಬಲಹೀನ ವರ್ಗಗಳು ಹೊಂದಿರುವ ಪರಸ್ಪರ ವಿರುದ್ಧ ಹಿತಾಸಕ್ತಿಗಳ ನಡುವೆ ಸಮತೋಲನ ತರುವ ಶಕ್ತಿ.

bali: ಬಳಿ. ಗೋತ್ರಕ್ಕೆ ಸಂವಾದಿಯಾಗಿ ರಕ್ತ ಸಂಬಂಧವನ್ನು ಸೂಚಿಸುವ ಪದ್ಧತಿ. ಇದು

ತುಳುನಾಡಿನಲ್ಲಿ ಪ್ರಚಲಿತವಿದ್ದು ಒಂದೇ ಬಳಿಯವರಲ್ಲಿ ವಿವಾಹ ನಿಷಿದ್ಧವಾಗಿದೆ.

ball bouncing rhyme: ಚೆಂಡಿನಂತೆ ಪುಟಿಯುವ ಪ್ರಾಸ.

ballad: ಲಾವಣಿ. ಈ ಪದವನ್ನು ಜನಪದ ಕಥನಗೀತೆಗಳಿಗೆ ಅನ್ವಯಿಸಿ ಬಳಸಲಾಗುತ್ತದೆ. ಲಾವಣಿಗಳು ಸಾಮಾನ್ಯವಾಗಿ ಏಕ ಘಟನೆಯ ಮೇಲೆ ನಿಂತಿರುತ್ತವೆ.

ballad cycle: ಲಾವಣಿ ವರ್ತುಲ. ಒಬ್ಬರಿಂದೊಬ್ಬರು ಮುಂದುವರಿಸುತ್ತಲೇ ಸಾಗುವ ಲಾವಣಿಗಳು.

ballet: ಬ್ಯಾಲೆ. ವೃತ್ತಿನೃತ್ಯಗಾರರ ಹಾವಭಾವಪೂರ್ಣ ಕುಣಿತ.

ballot box: ಮತ ಪೆಟ್ಟಿಗೆ.

ballot paper: ಮತ ಪತ್ರ.

baltic: ಬಾಲ್ಟಿಕ್. ಇಂಡೋ-ಯುರೋಪಿಯನ್ ಕುಟುಂಬಗಳ ಭಾಷಾ ಸಮೂಹ.

bancor: ಬೇಂಕರ್. ವಿವಿಧ ರಾಷ್ಟ್ರಗಳ ನಡುವೆ ಸಾಲಪಾವತಿಗಾಗಿ ಕೇಂದ್ರ ಅಂತಾರಾಷ್ಟ್ರೀಯ ಬ್ಯಾಂಕ್ ತಯಾರಿಸಬೇಕಾದ ಹಾಗೂ ಚಲಾವಣೆಗೆ ತರಬೇಕೆಂದು ಕೇನ್ಸ್‌ನಿಂದ ಸೂಚಿಸಲ್ಪಟ್ಟ ಕರೆನ್ಸಿ.

band wagon technique: ತಂಡ ಪ್ರಚಾರ ತಂತ್ರ. ಗುಂಪುಗಳಲ್ಲಿ ಹೋಗಿ ಪ್ರಚಾರ ಮಾಡುವುದು.

banishment: ಗಡೀಪಾರು.

bank credit: ಬ್ಯಾಂಕ್ ಸಾಲ.

bank rate: ಬ್ಯಾಂಕ್ ದರ; ಮುರಿಕೆಯ ದರ.

bank rate policy: ಬ್ಯಾಂಕ್ ದರದ ನೀತಿ.

bankruptcy: ದಿವಾಳಿತನ. ವ್ಯಕ್ತಿಯ ಅಥವಾ ಸಂಸ್ಥೆಯ ಎಲ್ಲಾ ಆರ್ಥಿಕ ಮೂಲಗಳು ಬರಿದಾಗುವುದು.

bank's owned fund: ಬ್ಯಾಂಕಿನ ಸ್ವನಿಧಿ.

baptism: ಬಾಪ್ಟಿಸಂ. ಜ್ಞಾನಸ್ನಾನ. ಕ್ರೈಸ್ತರ ಶುದ್ಧಿ ಸಂಸ್ಕಾರದಲ್ಲಿ ಅಂದರೆ ಮಗುವಿಗೆ ನಾಮಕರಣ ಮಾಡುವಾಗ ಅಥವಾ ಮತಕ್ಕೆ ಸೇರಿಸಿಕೊಳ್ಳುವಾಗ ಮಾಡಿಸುವ ಸ್ನಾನ.

bar chart: ಕಂಬಿ ಚಿತ್ರಪಟ; ಪಟ್ಟಿ ಚಿತ್ರಪಟ. ಲಂಬಾಂತರ ಅಥವಾ ಸಮಾಂತರ ರೇಖೆಗಳ ಮೂಲಕ ಅಂಕಿ ಅಂಶಗಳನ್ನು ನಕ್ಷೆಯಲ್ಲಿ ತೋರಿಸುವುದು.

bar diagram: ನೋಡಿ: bar chart.

bar graph: ಕಂಬಿ ರೇಖಾಚಿತ್ರ; ಪಟ್ಟಿ ರೇಖಾ ಚಿತ್ರ.

barbarian: ಅನಾಗರಿಕ; ಬರ್ಬರ.

barbaric stage: ಅನಾಗರಿಕ ಹಂತ.

barbarism: ಅನಾಗರಿಕ ಸ್ಥಿತಿ; ಬರ್ಬರ ಸ್ಥಿತಿ.

bargaining power: ಚೌಕಾಶಿ ಸಾಮರ್ಥ್ಯ.

bargaining power theory of wages: ಕೂಲಿಯ ಚೌಕಾಶಿ ಸಾಮರ್ಥ್ಯ ತತ್ವ.

barren hypothesis: ಸತ್ವರಹಿತ ಪ್ರಾಕ್‌ಕಲ್ಪನೆ; ಬರಡು ಪ್ರಾಕ್‌ಕಲ್ಪನೆ.

barter: ವಸ್ತು ವಿನಿಮಯ.

barter agreement: ವಸ್ತು ವಿನಿಮಯ ಒಪ್ಪಂದ.

barter system: ವಸ್ತು ವಿನಿಮಯ ಪದ್ಧತಿ.

base and super structure : ಮೂಲ ಮತ್ತು ಮೇಲು ರಚನೆ. ಮಾರ್ಕ್ಸ್‌ನ

ಸಿದ್ಧಾಂತದ ಪ್ರಕಾರ ಬದುಕಿನಲ್ಲಿ ಆರ್ಥಿಕತೆಯೇ ಮೂಲ ಅಂಶವಾಗಿದ್ದು ಅದನ್ನು ಆಧರಿಸಿ ಜಾತಿ, ಧರ್ಮ, ಶಿಕ್ಷಣ, ಕಲೆ ಇತ್ಯಾದಿಗಳು ಮೇಲು ರಚನೆಯಲ್ಲಿ ಕಂಡುಬರುವ ಅಂಶಗಳಾಗಿವೆ.

base colour: ತಳಪಾಯ ಬಣ್ಣ; ಮೂಲ ಲೇಪ. ಭೂತಾರಾಧನೆಯಂತಹ ಆರಾಧನಾ ರಂಗಕಲೆಗಳಲ್ಲಿ ಕಲಾವಿದರು ವಿವಿಧ ಮುಖ ವರ್ಣಿಕೆಗಳ ವಿನ್ಯಾಸಗಳನ್ನು ರಚಿಸುವ ಮೊದಲು ಹಚ್ಚುವ ತಳಪಾಯ ಬಣ್ಣ. ಉದಾ: ಭೂತಾರಾಧನೆಯಲ್ಲಿ ಅರಿಸಿನವನ್ನು ಅರೆದು ಹಚ್ಚುವುದು.

base line: ಮೂಲರೇಖೆ.

base make-up: ಮೂಲಪ್ರಸಾಧನ.

base map: ಮೂಲನಕ್ಷೆ.

base period: ಮೂಲವರ್ಷ; ಆಧಾರ ವರ್ಷ.

base rate: ಮೂಲ ದರ; ಆಧಾರ ದರ.

basic assumption: ಮೂಲಭೂತ ಊಹೆ; ಪೂರ್ವಕಲ್ಪಿತ ಭಾವನೆ.

basic concept: ಪ್ರಾಥಮಿಕ ಪರಿಕಲ್ಪನೆ; ಮೂಲ ಕಲ್ಪನೆ.

basic conflicts: ಮೂಲ ತುಮುಲ ಗಳು. ಜನರೊಡನೆ ಬೆರೆಯುವ, ಜನರಿಂದ ದೂರವಾಗುವ ಅಥವಾ ಜನರಿಗೆ ವಿರುದ್ಧ ವಾಗಿ ನಡೆಯುವ ಆತಂಕ.

basic drive: ಮೂಲ ಪ್ರೇರಣೆ.

basic duty: ಮೂಲಭೂತ ಕರ್ತವ್ಯ.

basic education: ಮೂಲ ಶಿಕ್ಷಣ.

basic human needs: ಮೂಲಭೂತ ಮಾನವ ಅಗತ್ಯಗಳು.

basic industry: ಮೂಲಾಧಾರ ಕೈಗಾರಿಕೆ; ಆಧಾರ ಕೈಗಾರಿಕೆ.

basic infrastructure: ಮೂಲಭೂತ ಸೌಕರ್ಯ.

basic motive: ಮೂಲಭೂತ ಅಂತ ರ್ಭಾವ; ಮೂಲೋದ್ದೇಶ.

basic personality type: ಮೂಲ ಭೂತ ವ್ಯಕ್ತಿತ್ವದ ವಿಧ.

basic research: ಮೂಲ ಸಂಶೋಧನೆ. ವೈಜ್ಞಾನಿಕ ಸಿದ್ಧಾಂತಗಳ ಬೆಳವಣಿಗೆಗಾಗಿ ನಡೆಸಲ್ಪಡುವ ಸಂಶೋಧನೆ.

basic social institution: ಮೂಲ ಸಾಮಾಜಿಕ ಸಂಸ್ಥೆ. ಸಮಾಜದ ಉಳಿವಿಗೆ ಅಗತ್ಯವಾದ ಮಾನವನ ಮೂಲಭೂತ ಅವ ಶ್ಯಕತೆಗಳನ್ನು ಪೂರೈಸುವ ಸಾಮಾಜಿಕ ಸಂಸ್ಥೆ. ಉದಾ: ಕುಟುಂಬ.

basic technology: ಮೂಲಭೂತ ತಂತ್ರ ಜ್ಞಾನ.

basic terminology: ಮೂಲ ತಾಂತ್ರಿಕ ಪದ.

bastard golden age: ಕೃತಕ ಸ್ವರ್ಣ ಯುಗ; ಬೆರಕೆ ಸ್ವರ್ಣಯುಗ.

batai: ಒಕ್ಕಲು ಅಥವಾ ಭೂಮಾಲಿಕ ಬೆಳೆಯನ್ನು ಪಾಲು ಮಾಡುವ ಪದ್ಧತಿ.

battlement: ಕೈಪಿಡಿ ಗೋಡೆ, ಕೋಟೆಯ ತೆನೆ, ಕಂಗುರ.

baulk: ಉತ್ಖನನ ಗುಂಡಿಗಳ ಮಧ್ಯೆ ಬಿಡುವ ಅಡ್ಡಗೋಡೆ.

bay: ಚೌಕಿ, ಅಂಕಣ, ಆಖಾತ (ಸಮುದ್ರ). ಉದಾ: ಬಂಗಾಳ ಆಖಾತ.

bazar sermon: ಬಯಲು ಧರ್ಮ ಬೋಧೆ.

bear: ಮಂದಗಾಮಿ, ಶೇರುಪತ್ರಗಳ ಬೆಲೆ ಮುಂದೆ ತಗ್ಗಬಹುದೆಂದೂ ಅದನ್ನು ಆ ಸಂದರ್ಭದಲ್ಲಿ ಕಡಿಮೆ ಬೆಲೆಗೆ ಕೊಳ್ಳಬಹು ದೆಂದೂ ಊಹಿಸಿ, ಅವುಗಳನ್ನು ಮುಂದೆ ವಶ ಮಾಡುವ ಕರಾರಿನ ಮೇಲೆ ಮಾರಿ ಬೆಲೆ ತಗ್ಗಿಸಲು ಯತ್ನಿಸುವವನು.

bearer bond: ಧಾರಕ ಸಾಲಪತ್ರ.

beena marriage: ಬೀನಾ ವಿವಾಹ. ಅರಬ್ ಬುಡಕಟ್ಟುಗಳಲ್ಲಿ ಪ್ರಚಲಿತವಿದ್ದ ವಿವಾಹ ಪದ್ಧತಿ. ವಿವಾಹಾನಂತರ ಪತ್ನಿಯ ಮನೆಯಲ್ಲಿ ಪತಿ ವಾಸ ಮಾಡುವ ಈ ಪದ್ಧ ತಿಯಲ್ಲಿ ವಿವಾಹ ಸಂಬಂಧವನ್ನು ಮುಂದು ವರಿಸುವ ಅಥವಾ ತಿರಸ್ಕರಿಸುವ ಹಕ್ಕು ಹೆಣ್ಣಿಗೇ.

begar: ಬಿಟ್ಟಿ ದುಡಿಮೆ; ಬೇಗಾರಿ. ಕೃಷಿ ಕಾರ್ಮಿಕರಿಗೆ ನಗದು ಅಥವಾ ವಸ್ತು ರೂಪದಲ್ಲಿ ಸಂಬಳ ನೀಡದೆ ಕನಿಷ್ಠ ಆಹಾರ ನೀಡಿ ಪುಕ್ಕಟೆಯಾಗಿ ದುಡಿಸುವ ಪದ್ಧತಿ.

beggary: ಭಿಕ್ಷಾವೃತ್ತಿ; ಭಿಕ್ಷಾಟನೆ.

behaviour pattern: ವರ್ತನಾ ವಿನ್ಯಾಸ.

behaviour psychology: ವರ್ತನಾ ಮನೋವಿಜ್ಞಾನ.

behaviour therapy: ವರ್ತನಾ ಚಿಕಿತ್ಸೆ. ವರ್ತನಾ ನಿಯಮಗಳ ಕಲಿಕೆಯಲ್ಲಿ ಕಂಡು ಬರುವ ಚಿಕಿತ್ಸಾ ತಂತ್ರ.

behavioural approach: ವರ್ತನಾ (ಅಧ್ಯಯನ) ಸಮೀಪನ.

behavioural assumption: ವರ್ತನಾ ಊಹನೆ.

behavioural disorders: ವರ್ತನಾ ವಿಕಾರಗಳು.

behavioural method: ವರ್ತನಾ ವಿಧಾನ.

behavioural science: ವರ್ತನಾ ವಿಜ್ಞಾನ. ಮಾನವನ ವರ್ತನೆಯನ್ನು ಅರಿ ಯುವ ವೈಜ್ಞಾನಿಕ ಶಾಸ್ತ್ರ.

behaviourism: ವರ್ತನಾ ತತ್ತ್ವ. ಅವ ಲೋಕನಾ ವರ್ತನೆಯನ್ನು ಅಭ್ಯಸಿಸುವ ಮನಶ್ಶಾಸ್ತ್ರದ ಒಂದು ಪಂಥ.

behaviourist school: ವರ್ತನಾ ತತ್ತ್ವ ಪಂಥ.

behaviouristic: ವರ್ತನಾ ಮೂಲದ.

behaviouristic ordinalist approach: ವರ್ತನಾತ್ಮಕ ಸ್ಥಾನಸೂಚಕ ಸಮೀಪನ.

behaviouristic psychology: ವರ್ತನಾತ್ಮಕ ಮನೋವಿಜ್ಞಾನ.

belief: ನಂಬಿಕೆ.

belief system: ನಂಬಿಕೆಯ ವ್ಯವಸ್ಥೆ. ಒಂದಕ್ಕೊಂದು ಪೂರಕವಾದ ಅನೇಕ ನಂಬಿ ಕೆಗಳು ಬದುಕಿನ ಅವಿಭಾಜ್ಯ ಅಂಗಗಳಾಗಿ ಪ್ರಭಾವಿಸುವಿಕೆ.

bell of justice: ನ್ಯಾಯದ ಗಂಟೆ. ಮೊಘಲ ಚಕ್ರವರ್ತಿ ಜಹಾಂಗೀರನು ಆಗ್ರಾ ಕೋಟೆಯಲ್ಲಿ 'ನ್ಯಾಯದ ಗಂಟೆ'ಯನ್ನು ಕಟ್ಟಿಸಿದ್ದನು. ಅನ್ಯಾಯಕ್ಕೊಳಗಾದವರು ಆ ಗಂಟೆಯನ್ನು ಬಾರಿಸಿ ಅರಸರ ಗಮನ ಸೆಳೆ ಯಬಹುದಿತ್ತು.

beneficial diversion: ಲಾಭದಾಯಕ ಗತಿ ಬದಲಾವಣೆ.

beneficiary: ಫಲಾನುಭವಿ.

benefit cost analysis: ಲಾಭ ವೆಚ್ಚ ವಿಶ್ಲೇಷಣೆ.

benevolent fund: ಕ್ಷೇಮನಿಧಿ.

bestiality: ಮೃಗರತಿ, ವಿಷಯ ಲಂಪಟತೆ, ಪ್ರಾಣಿಗಳೊಡನೆ ಲೈಂಗಿಕ ಸಂಪರ್ಕ ಬೆಳೆಸುವುದು.

betrothal: ವಿವಾಹ ವಾಗ್ದಾನ.

betterment levy: ಸುಧಾರಣಾ ತೆರಿಗೆ/ಕಂದಾಯ.

beweddung: ಕನ್ಯಾಶುಲ್ಕ.

bhiga: ಭೂವಿಸ್ತೀರ್ಣದ ಮಾಪಕ. ಉತ್ತರ ಭಾರತದಲ್ಲಿ ಪ್ರಚಲಿತವಿರುವ ಭೂಮಿಯ ಅಳತೆ ಮಾಡುವ ಮಾಪನ.

bhokta: ಭೋಕ್ತ; ಫಲಾನುಭವಿ. ಕೆಲವೊಂದು ಭೂಮಿಗಳ ಮೇಲಿನ ಕಂದಾಯ ಹಕ್ಕುಗಳನ್ನು ಅನುಭೋಗಿಸುವವರನ್ನು ಕುರಿತು ಬಳಸಲಾದ ಸಾಮಾನ್ಯ ಪದ.

bhoodan movement: ಭೂದಾನ ಚಳವಳಿ. ಸಾಮಾಜಿಕ ನ್ಯಾಯ ಮತ್ತು ಭೂಸುಧಾರಣೆಯನ್ನು ಚುರುಕುಗೊಳಿಸಲು ಆಚಾರ್ಯ ವಿನೋಭಾ ಭಾವೆಯವರು ಇದನ್ನು ಪ್ರಚಾರಗೊಳಿಸಿದರು.

biased distribution: ಪಕ್ಷಪಾತದ ವಿತರಣೆ.

biased sample: ಪಕ್ಷಪಾತದ ಮಾದರಿ. ಉದ್ದೇಶ ಪೂರ್ವಕವಾಗಿ ಅಧ್ಯಯನಕ್ಕಾಗಿ ಆಯ್ದ ಮಾದರಿ.

bicameral legislature: ದ್ವಿಸದನ ಶಾಸಕಾಂಗ.

bicameralism: ದ್ವಿಸದನ ಪದ್ಧತಿ. ರಾಷ್ಟ್ರದ ಶಾಸಕಾಂಗವು ಕೆಳಗಿನ ಸದನ ಮತ್ತು ಮೇಲಿನ ಸದನ ಎಂಬ ಎರಡು ಸದನಗಳನ್ನು ಹೊಂದಿರುವುದು. ಉದಾ: ಭಾರತದ ಕೇಂದ್ರ ಶಾಸಕಾಂಗದ ಲೋಕಸಭೆ ಮತ್ತು ರಾಜ್ಯಸಭೆ ಹಾಗೂ ರಾಜ್ಯ ಶಾಸಕಾಂಗಗಳ ವಿಧಾನಸಭೆ ಮತ್ತು ವಿಧಾನ ಪರಿಷತ್.

bicentric evolution: ದ್ವಿಕೇಂದ್ರೀಯ ವಿಕಾಸ. ಯಾವುದೇ ಜೀವಿ ಅಥವಾ ಪ್ರಾಣಿ ಜಾತಿಯ ವಿಕಾಸವು ಎರಡು ಕೇಂದ್ರಗಳಲ್ಲಿ ಸಂಭವಿಸಿದೆ ಎಂಬ ಉಲ್ಲೇಖ.

biennial report: ದ್ವೈವಾರ್ಷಿಕ ವರದಿ.

big brother: ಪ್ರಭಾವಶಾಲೀ ರಾಷ್ಟ್ರ. ಯಾವುದೇ ರಾಷ್ಟ್ರದ ನೀತಿ ನಿರೂಪಣೆಯಲ್ಲಿ ಪ್ರಬಲ ಹಿತೈಷಿಯಂತೆ ಹಸ್ತಕ್ಷೇಪ ಮಾಡಬಲ್ಲ ರಾಷ್ಟ್ರ.

big push theory: ಬೃಹತ್ ಹೂಡಿಕೆ ಸಿದ್ಧಾಂತ; ಬೃಹತ್ ಪ್ರೇರಣೆ ಸಿದ್ಧಾಂತ.

big stick policy: ದೊಣ್ಣೆ ನೀತಿ. ವೈಸರಾಯ್ ರೂಜವೆಲ್ಟನ ಬಲ ಪ್ರದರ್ಶನದ ನೀತಿ.

bigamy: ದ್ವಿವಿವಾಹ; ದ್ವಿಪತ್ನಿತ್ವ ಅಥವಾ ದ್ವಿಪತಿತ್ವ.

bilateral agreement: ದ್ವಿಪಕ್ಷೀಯ ಒಪ್ಪಂದ.

bilateral descent: ದ್ವಿವಂಶೀಯತೆ. ತಂದೆ ಮತ್ತು ತಾಯಿ ಇವರಿಬ್ಬರ ವಂಶಗಳಿಗೂ ಸಮಾನ ಪ್ರಾಧಾನ್ಯ ಕೊಡುವ ವಂಶಾನುಕ್ರಮ.

bilateral family: ದ್ವಿವಂಶೀಯ ಕುಟುಂಬ. ತಂದೆ ಮತ್ತು ತಾಯಿಯ ಕಡೆಯ ಸಂಬಂಧಿಗಳನ್ನು ಸಮಾನವಾಗಿ ಪರಿಗಣಿಸುವ ದ್ವಿಪಕ್ಷೀಯ ರಕ್ತ ಸಂಬಂಧವುಳ್ಳ ಕುಟುಂಬ.

bilateral inheritance: ದ್ವಿವಂಶೀಯ ಉತ್ತರಾಧಿಕಾರ.

bilateral kinship: ದ್ವಿವಂಶೀಯ ಬಂಧುತ್ವ.

bilateral kinship system: ದ್ವಿ ವಂಶೀಯ ಬಂಧುತ್ವ ವ್ಯವಸ್ಥೆ; ಉಭಯ ಕಳ್ಳುಬಳ್ಳಿ ಸಂಬಂಧದ ವ್ಯವಸ್ಥೆ.

bilateral method: ದ್ವಿಪಕ್ಷೀಯ ವಿಧಾನ.

bilateral monopoly: ದ್ವಿಪಕ್ಷೀಯ ಏಕಸ್ವಾಮ್ಯ. ಮಾರುಕಟ್ಟೆಯಲ್ಲಿ ಒಬ್ಬನೇ ಮಾರಾಟಗಾರನು (monopoly) ಒಬ್ಬನೇ ಗ್ರಾಹಕನೊಂದಿಗೆ (monopsony) ಮುಖಾಮುಖಿಯಾಗುವ ಸನ್ನಿವೇಶ.

bilateral power relationship: ದ್ವಿ ಪಕ್ಷೀಯ ಅಧಿಕಾರ ಸಂಬಂಧ.

bilateral trade agreement: ದ್ವಿಮುಖಿ (ದ್ವಿಪಕ್ಷೀಯ) ವ್ಯಾಪಾರ ಒಪ್ಪಂದ; ಪರಸ್ಪರ ವ್ಯಾಪಾರ ಒಪ್ಪಂದ.

bilateralism: ದ್ವಿಪಕ್ಷೀಯ ತತ್ವ. ಉಭಯ ರಾಷ್ಟ್ರಗಳ ಅಥವಾ ಗುಂಪುಗಳ ನಡುವಿನ ವಿವಾದಗಳನ್ನು ಪರಸ್ಪರ ಮಾತು ಕತೆಯ ಮೂಲಕ ಬಗೆಹರಿಸುವುದು. ಇದ ರಲ್ಲಿ ಮೂರನೆಯವರಿಗೆ ಮಧ್ಯಸ್ಥಿಕೆ ವಹಿ ಸಲು ಅವಕಾಶವಿಲ್ಲ.

bilineal descent: ನೋಡಿ: bilateral descent.

bilinear kinship: ದ್ವಿವಂಶೀಯ ರಕ್ತ ಸಂಬಂಧ. ಮಾತೃ ವಂಶೀಯ ಮತ್ತು ಪಿತೃವಂಶೀಯ ರಕ್ತ ಸಂಬಂಧ.

bilingual: ದ್ವಿಭಾಷಿ. ಸುಲಭವಾಗಿ, ನಿಖ ರವಾಗಿ ಮತ್ತು ಸುಲಲಿತವಾಗಿ ಎರಡು ಭಾಷೆಗಳಲ್ಲಿ ಮಾತಾಡಬಲ್ಲ ಹಾಗೂ ಭಾಷಾಂತರ ಮಾಡಬಲ್ಲ ವ್ಯಕ್ತಿ.

bilinguality: ದ್ವಿಭಾಷಿಕತೆ.

bill: ವಿಧೇಯಕ, ಮಸೂದೆ, ಹುಂಡಿ.

bill broker: ಹುಂಡಿ ದಲ್ಲಾಳಿ. ಹಣದ ಮಾರುಕಟ್ಟೆಯಲ್ಲಿ ಖಜಾನೆ ಹುಂಡಿಗಳ ಮತ್ತು ವಿನಿಮಯ ಹುಂಡಿಗಳ ವ್ಯವಹಾರ ದಲ್ಲಿ ತೊಡಗಿರುವ ವ್ಯಕ್ತಿ.

bill of rights: ಹಕ್ಕುಗಳ ಅಧಿನಿಯಮ.

bill of sale: ವಿಕ್ರಯ ಪತ್ರ.

bill of exchange: ವಿನಿಮಯ ಹುಂಡಿ.

bill of lading: ರಫ್ತು ಭರಾವಣೆ ಹುಂಡಿ. ಸಾಗಿಸಬೇಕಾದ ಸರಕನ್ನು ಹಡಗು ಸಂಸ್ಥೆ ಸ್ವೀಕರಿಸಿ, ಅದನ್ನು ಸ್ವೀಕರಿಸಿದಾಗ ಇದ್ದ ಸ್ಥಿತಿಯಲ್ಲೇ ನಿಶ್ಚಿತ ವಿಳಾಸಕ್ಕೆ ತಲಪಿಸುವ ಭರವಸೆಯನ್ನು ಸರಕಿನ ಮಾಲಿಕನಿಗೆ ಕೊಡುವ ಪತ್ರ.

bilocal residence: ದ್ವಿಸ್ಥಾನೀಯ ವಾಸ್ತವ್ಯ. ವಿವಾಹಾನಂತರ ವಧೂವರರು ಆದ್ಯತೆಯನ್ನು ನೋಡಿ ವಧುವಿನ ಅಥವಾ ವರನ ಹೆತ್ತವರ ಜೊತೆ ವಾಸ್ತವ್ಯ ಹೂಡುವ ಪದ್ಧತಿ.

bimetallism: ದ್ವಿಲೋಹ ನಾಣ್ಯ ಪ್ರಮಿತಿ. ಎರಡು ಲೋಹಗಳ ಬೆಲೆಯ ಪರ ಸ್ಪರ ಸಂಬಂಧವನ್ನು ಕಾನೂನಿನಿಂದ ನಿಗದಿ ಮಾಡಿ ಎರಡೂ ಲೋಹಗಳಿಂದ ಮಾಡಿದ ನಾಣ್ಯಗಳನ್ನು ಚಲಾವಣೆ ಮಾಡುವ ಪದ್ಧತಿ.

bimodal distribution curve: ದ್ವಿಬ ಹುಳಕ ವಿತರಣ ವಕ್ರರೇಖೆ.

binarism: ಯುಗ್ಮವಾದ.

binary opposition: ದ್ವಿಮುಖಿ ವೈರುಧ್ಯ.

binding agreement: ಪ್ರತಿಬಂಧಕ ಒಪ್ಪಂದ.

biogenic motive: ಜೀವಜನ್ಯ ಪ್ರೇರಕ. ಜೀವಿಯ ದೈಹಿಕ ಪ್ರಕೃತಿಯಿಂದ ಉಂಟಾಗುವ ಸ್ವಾಭಾವಿಕ ಆವೇಗ, ಒತ್ತಡ ಮುಂತಾದ ಪ್ರೇರಕ.

biographical method: ಜೀವನ ಚರಿತ್ರೆ ವಿಧಾನ. ಜೀವನ ವೃತ್ತಾಂತಗಳ ಆಧಾರಿತವಾದ ಅಧ್ಯಯನ.

biolinguistics : ಜೈವಿಕ ಭಾಷಾ ವಿಜ್ಞಾನ. ನರವ್ಯೂಹ ಶಾಸ್ತ್ರ ಮತ್ತು ತಳಿ ಶಾಸ್ತ್ರದ ಅಂಶಗಳ ಮೂಲಕ ಭಾಷೆಗಳ ವೈಜ್ಞಾನಿಕ ಅಧ್ಯಯನ.

biological anthropology: ಜೈವಿಕ ಮಾನವಶಾಸ್ತ್ರ.

biological drive: ಜೈವಿಕ ಪ್ರೇರಣೆ.

biological evolution: ಜೈವಿಕ ವಿಕಾಸ. ಏಕರೂಪ ಮತ್ತು ಸರಳತೆಯಿಂದ ಬಹುರೂಪ ಮತ್ತು ಸಂಕೀರ್ಣತೆಯೆಡೆಗೆ ಜೀವಿಗಳ ಬೆಳವಣಿಗೆ.

biological factor : ಜೈವಿಕ ಅಂಶ.

biological family: ನೋಡಿ: conjugal family.

biological fatherhood: ಜೈವಿಕ ಪಿತೃತ್ವ. ಮಗುವಿನ ಜನ್ಮಕ್ಕೆ ಕಾರಣಕರ್ತನಾದ್ದರಿಂದ ಲಭಿಸುವ ಪಿತೃತ್ವ. ಕೆಲವು ಬುಡಕಟ್ಟುಗಳಲ್ಲಿ ಜೈವಿಕ ಪಿತೃವು ನಿರ್ದಿಷ್ಟ ಆಚರಣಾತ್ಮಕ ಸಮಾರಂಭ ಮಾಡದ ಹೊರತು ಸಾಮಾಜಿಕ ಪಿತೃವೆನಿಸುವುದಿಲ್ಲ.

biological heritage: ಜೈವಿಕ ಅನುವಂಶೀಯತೆ. ತಂದೆ ತಾಯಿಯಿಂದ ಮಕ್ಕಳಿಗೆ ಸಾಗಿಸಲ್ಪಡುವ ಜೈವಿಕ ಗುಣಲಕ್ಷಣಗಳು.

biological imperative: ಜೈವಿಕ ಅನಿವಾರ್ಯ. ಒಂದು ಜೀವಿಯ ಮುಂದುವರಿಯುವಿಕೆಗೆ ಅಥವಾ ಉಳಿವಿಗೆ ಅಗತ್ಯವಾದ ಚಟುವಟಿಕೆಗಳು.

biological intelligence: ಜೈವಿಕ ಬುದ್ಧಿಶಕ್ತಿ.

biological method: ಜೈವಿಕ ವಿಧಾನ.

biological mutation: ಜೈವಿಕ ಮಾರ್ಪಾಟು. ಹೊಸ ವಂಶ ಉತ್ಪನ್ನವಾಗುವಂತಹ ಪರಿಣಾಮವುಳ್ಳ ಜೈವಿಕ ಪರಿವರ್ತನೆ.

biological potentiality: ಜೈವಿಕ ಸಾಮರ್ಥ್ಯ.

biological school: ಜೈವಿಕ ಪಂಥ.

biological tale: ಜೈವಿಕ ಕಥೆ.

biologism: ಜೈವಿಕ ವಾದ. ಜೀವಶಾಸ್ತ್ರದ ಸೈದ್ಧಾಂತಿಕ ದೃಷ್ಟಿಕೋನಗಳನ್ನು ಮಾನವ ಸಮಾಜದ ಅಧ್ಯಯನದಲ್ಲಿ ಬಳಸಿಕೊಳ್ಳುವ ಪಂಥ.

bio-psychology: ಜೀವ ಮನೋವಿಜ್ಞಾನ.

bio-social school: ಜೈವಿಕ ಸಾಮಾಜಿಕ ಪಂಥ

bio-social system: ಜೈವಿಕ ಸಾಮಾಜಿಕ ವ್ಯವಸ್ಥೆ.

bio-socio cultural group: ಜೈವಿಕ ಸಾಮಾಜಿಕ ಸಾಂಸ್ಕೃತಿಕ ಸಮೂಹ.

bio-sociology: ಜೈವಿಕ ಸಮಾಜಶಾಸ್ತ್ರ.

bio-sphere: ಜೀವ ಮಂಡಲ. ಪ್ರಾಣಿಗಳು ಜೀವಿಸುವ ವಾತಾವರಣ.

biotic community: ಜೀವ ಸಮುದಾಯ. ಸಾಂಸ್ಕೃತಿಕ ಹಂತವನ್ನು ತಲುಪದ

ಊಹಾತ್ಮಕ ಪ್ರಾಣಿ ಸದೃಶ ಮಾನವ ಸಮುದಾಯ.

bipartite agreement: ದ್ವಿಭಾಗೀಯ ಒಪ್ಪಂದ. ಉಭಯ ಪಕ್ಷದವರಿಗೂ ಒಂದೊಂದರಂತೆ ಎರಡು ಪ್ರತಿಗಳಲ್ಲಿ ಬರೆದ ಒಪ್ಪಂದ.

bi-party system: ದ್ವಿಪಕ್ಷ ಪದ್ಧತಿ.

bi-polarity of power: ಶಕ್ತಿಯ ದ್ವಿಧ್ರುವ ಪ್ರಪಂಚದ ಶಕ್ತಿಯು ಎರಡು ಗುಂಪುಗಳಾಗಿ ವಿಂಗಡಣೆಯಾಗುವುದು. ಉದಾ: ದ್ವಿತೀಯ ವಿಶ್ವ ಸಮರದ ನಂತರ ರಶ್ಯಾ ಮತ್ತು ಅಮೆರಿಕಗಳು ಪ್ರಪಂಚದ ಎರಡು ಶಕ್ತಿ ಗುಂಪುಗಳ ನೇತೃತ್ವ ವಹಿಸಿದ್ದವು.

birth control: ಜನನ ನಿಯಂತ್ರಣ.

birth rate: ಜನನ ದರ.

birth right: ಜನ್ಮಸಿದ್ಧ ಹಕ್ಕು. ಹುಟ್ಟಿನ ಕಾರಣಕ್ಕಾಗಿ ಆಸ್ತಿಯನ್ನು ಪಡೆಯುವ ಅಥವಾ ಕೆಲವೊಂದು ಸಾಮಾಜಿಕ ಸ್ಥಾನ ಮಾನಗಳನ್ನು ಪಡೆಯುವ ಹಕ್ಕು.

birth rite: ಜನನ ಸಂಸ್ಕಾರ. ಹುಟ್ಟಿಗೆ ಸಂಬಂಧಿಸಿದ ಸಂಸ್ಕಾರ. ಮಗುವಿನ ಜನನಾನಂತರ ಮಗು ಮತ್ತು ತಾಯಿಯನ್ನು ಶುದ್ಧೀಕರಿಸಲು ಮತ್ತು ಮಗುವಿಗೆ ಉತ್ತಮ ಶಕ್ತಿ ಮತ್ತು ಉತ್ತಮ ಅದೃಷ್ಟ ದೊರೆಯಲು ಹಾಗೂ ಆತನನ್ನು ದುಷ್ಟ ದೃಷ್ಟಿಯಿಂದ ರಕ್ಷಿಸಲು ಮಾಡುವ ಕ್ರಿಯಾವಿಧಿ.

birth trauma: ಜನನಾಘಾತ. ಬಾಣಂತನದ ತೊಂದರೆಗಳಿಂದುಂಟಾಗುವ ದೈಹಿಕ, ಮಾನಸಿಕ ನ್ಯೂನತೆಗಳು.

biserial correlation: ದ್ವಿಸರಣಿ ಸಹ ಸಂಬಂಧ.

bisexual: ಉಭಯ ಲಿಂಗಿ; ದ್ವಿಮುಖ ಲೈಂಗಿಕ. ನೋಡಿ : bisexuality.

bisexual libido: ಉಭಯಲಿಂಗೀ ಕಾಮವಾಂಛೆ.

bisexuality : ದ್ವಿಮುಖ ಲೈಂಗಿಕತೆ. ವ್ಯಕ್ತಿಗೆ ಗಂಡು-ಹೆಣ್ಣು ಇಬ್ಬರಲ್ಲೂ ಸಮಾನ ಲೈಂಗಿಕ ಆಕರ್ಷಣೆ ಉಂಟಾಗುವ ಸ್ಥಿತಿ.

bivariate data: ದ್ವಿಪರಿವರ್ತಕ ದತ್ತಾಂಶ.

bivariate distribution: ದ್ವಿಪರಿವರ್ತಕ ವಿತರಣೆ.

black code: ಕರಾಳ ಶಾಸನ. ಉತ್ತರ ಅಮೇರಿಕದಲ್ಲಿ ಗುಲಾಮರನ್ನು ನಿಯಂತ್ರಿಸಲು ರಚಿಸಿದ್ದ ಶಾಸನ.

black list: ಕಪ್ಪು ಪಟ್ಟಿ. ದಸ್ತಗಿರಿ ಮಾಡಬೇಕಾದ ಅಪರಾಧಿಗಳ ವಿವರಗಳ ಪಟ್ಟಿ.

black magic: ಮಾಟ. ಪಿಶಾಚಿಗಳನ್ನು ಉದ್ದೀಪಿಸಿ ತಮಗಾಗದವರಿಗೆ ಕೆಡುಕುಂಟು ಮಾಡುವ ಕ್ರಿಯೆ.

black-mailing dance: ಬೆದರಿಕೆ ನೃತ್ಯ. ನೃತ್ಯ ಮಾಡುವಾತ ಮನೆ ಮನೆಗೆ ಹೋಗಿ ಮನೆಯಾತ ಹಣ ಕೊಡುವವರೆಗೆ ಹಾಡು ಹೇಳುವ ಮತ್ತು ನೃತ್ಯ ಮಾಡುವ ಕ್ರಮ.

black-market : ಕಾಳಸಂತೆ; ಕಪ್ಪು ಪೇಟೆ.

black-money: ಕಪ್ಪು ಹಣ; ಕಳ್ಳ ಹಣ.

black pages: ಕರಿಹಾಳೆಗಳು. ಕುಕೃತ್ಯಗಳ ಇತಿಹಾಸ. ಉದಾ: ಬ್ರಿಟಿಷರು ಸಿಪಾಯಿ ದಂಗೆಯ ಬಳಿಕ ತೋರಿದ ಪ್ರತೀಕಾರ ಮನೋಭಾವ. ೧೯೧೯ರಲ್ಲಿ ಜಲಿಯನ್ ವಾಲಾಬಾಗ್ ನರಮೇಧ, ಸೈನ್ಯದ ದಬ್ಬಾಳಿಕೆ ಮತ್ತು ಸ್ವಾತಂತ್ರ ಹೋರಾಟಗಾರರಿಗೆ ನೀಡಿದ ಕರಿನೀರಿನ ಶಿಕ್ಷೆ ಇತ್ಯಾದಿಗಳ ಇತಿಹಾಸ.

Black Scholes formula: ಬ್ಲೇಕ್ ಶೋಲಿನ ಪ್ರಮೇಯ. ಹಣಕಾಸು ಮಾರುಕಟ್ಟೆಯಲ್ಲಿ ಗೊತ್ತಾದ ಬಂಡವಾಳ ಪತ್ರ ಅಥವಾ ಗೊತ್ತಾದ ಮೊಬಲಗನ್ನು ಗೊತ್ತಾದ ಬೆಲೆಗೆ ಕೊಳ್ಳಲು ಅಥವಾ ಮಾರಲು ಹಣ ಕೊಟ್ಟು ಪಡೆದ ಹಕ್ಕುಗಳಿಗೆ ನ್ಯಾಯ ಬೆಲೆ ವಿಧಿಸಲು ಉಪಯೋಗಿಸುವ ಒಂದು ಸಂಕೀರ್ಣ ಸಮೀಕರಣ.

black-shirts: ಕಪ್ಪಂಗಿಗಳು. ಇಟಲಿಯ ಸರ್ವಾಧಿಕಾರವಾದದ ಪ್ರಧಾನ ಪ್ರತಿಪಾದಕನಾದ ಬೆನಿಟೊ ಮುಸಲೋನಿಯ ಅನುಯಾಯಿಗಳು.

black tongue: ಕೆಟ್ಟ ನಾಲಿಗೆ. ಕೆಟ್ಟ ನುಡಿಗಳ ಮೂಲಕ ಶಾಪಹಾಕುವಿಕೆ.

black endorsement: ಖಾಲಿ ಹಿಂಬರಹ.

blastogenesis: ಜೀವದ್ರವ್ಯ ಅನುವಂಶೀಯತೆ. ಜೀವದ್ರವ್ಯದ ಪ್ರವಾಹದಿಂದಾಗಿ ಕೆಲವು ಗುಣಗಳು ಅನುವಂಶಿಕವಾಗಿ ಹೆತ್ತವರಿಂದ ಮಕ್ಕಳಿಗೆ ವರ್ಗಾವಣೆ ಹೊಂದುತ್ತವೆಯೆಂಬ ಸಿದ್ಧಾಂತ.

blighted area: ನಶಿತ ಪ್ರದೇಶ. ಅವನತಿ ಹೊಂದುತ್ತಿರುವ ನಗರ ಪ್ರದೇಶ. ನೋಡಿ: zone in transition.

blind belief: ಕುರುಡು ನಂಬಿಕೆ; ಅಂಧ ವಿಶ್ವಾಸ.

blind forces: ಕುರುಡು ಶಕ್ತಿಗಳು. ಉದಾ: ಮೂಢನಂಬಿಕೆಗಳು.

block voting: ಕ್ಷೇತ್ರ ಮತದಾನ. ಸಮ್ಮೇಳನಗಳಲ್ಲಿ ಒಂದು ದೊಡ್ಡ ಸಮುದಾಯದ ಪ್ರತಿನಿಧಿಯು ಚಲಾಯಿಸುವ ಮತ.

blockade: ದಿಗ್ಬಂಧನ; ಶಾಂತಿಯುತ ದಿಗ್ಬಂಧನ.

blocked account: ಪ್ರತಿಬಂಧಿತ ಖಾತೆ.

blood brotherhood: ರಕ್ತ ಭ್ರಾತೃತ್ವ ಒಂದೇ ಗುಂಪಿಗೆ ಸೇರಿದವರೆಂಬ ಭ್ರಾತೃಭಾವತ್ವ.

blood feud: ರಕ್ತ ಕಲಹ. ರಕ್ತ ಹರಿಸುವ ಮಟ್ಟದ ವೈರತ್ವ.

blood group: ರಕ್ತದ ಗುಂಪು.

blood relative: ರಕ್ತ ಸಂಬಂಧಿ.

blood revenge: ರಕ್ತ ಪ್ರತೀಕಾರ. ತನ್ನ ರಕ್ತ ಸಂಬಂಧಿಯನ್ನು ಕೊಂದವನನ್ನು ಕೊಲ್ಲಲೇಬೇಕೆಂಬ ಪದ್ಧತಿ ಅಥವಾ ಸಂಪ್ರದಾಯ.

bloodless revolution: ರಕ್ತರಹಿತ ಕ್ರಾಂತಿ. ಉದಾ: ಇಂಗ್ಲೆಂಡಿನಲ್ಲಿ ೧೬೮೮ ರಲ್ಲಿ ನಡೆದ ಈ ಕ್ರಾಂತಿಯು ಫ್ರೆಂಚ್ ತಾತ್ವಿಕರ ಮೇಲೆ ಪರಿಣಾಮ ಬೀರಿ ಅದರಿಂದಾಗಿ ಫ್ರಾನ್ಸ್‌ನ ಜನರಿಗೆ ನಿರಂಕುಶ ಪ್ರಭುತ್ವವನ್ನು ತೊಡೆದು ಹಾಕುವ ಕಲ್ಪನೆ ಬಂತು.

blue blood: ರಾಜವಂಶದ ರಕ್ತ. ಕೆಲವೊಂದು ಗಣ್ಯ ಮತ್ತು ಶ್ರೀಮಂತ ವ್ಯಕ್ತಿಗಳು ಹೊಂದಿರುತ್ತಾರೆ ಎನ್ನಲಾಗುವ ಕಲ್ಪಿತ ರಕ್ತ. ಈ ಕಲ್ಪನೆಯು ಸ್ಪೈನ್‌ನಲ್ಲಿ ಉಗಮಗೊಂಡಿತು ಮತ್ತು ಅಲ್ಲಿನ ಕೆಲವು ಗಣ್ಯ ಕುಟುಂಬಗಳು ತಮ್ಮ ಶುದ್ಧತೆಯನ್ನು ಕಾಪಾಡಿಕೊಳ್ಳಲು ಕುಟುಂಬದ ಒಳಗೇ ವಿವಾಹವಾಗುತ್ತಿದ್ದರು. ಇಂಗ್ಲೆಂಡಿನ ರಾಜಕುಟುಂಬದಲ್ಲೂ ಈ ಪದ್ಧತಿ ಬಳಕೆಯಲ್ಲಿರುವುದರಿಂದ ಇದನ್ನು ರಾಜ ವಂಶದ ರಕ್ತ ಎಂದು ಕರೆಯಲಾಗಿದೆ.

blue collar workers: ನೀಲಿ ಕೊರಳು ಪಟ್ಟಿಯ ನೌಕರರು. ಸಾಮಾನ್ಯವಾಗಿ ಈ ಪದವನ್ನು ಕಾರ್ಖಾನೆಗಳ ಕಾರ್ಮಿಕರಿಗೆ ಅನ್ವಯಿಸಲಾಗಿದೆ.

blue print: ನೀಲಿ ನಕ್ಷೆ. ಯಾವುದೇ ಒಂದು ಕಾರ್ಯ ಅಥ'ವಾ ಉದ್ಯಮವನ್ನು ಕೈಗೊಳ್ಳುವ ಮೊದಲು ಅದಕ್ಕೆ ಸಂಬಂಧಿ ಸಿದ ವಿಷಯಗಳ ನಕ್ಷೆಯನ್ನು ತಯಾರಿಸಿ ಮಾಡುವ ಪೂರ್ವ ಯೋಜನೆ.

blue water policy: ಸಾಗರ ರಕ್ಷಣಾ ನೀತಿ.

board system: ಮಂಡಳಿ ಪದ್ಧತಿ.

bodily contact: ದೈಹಿಕ ಸ್ಪರ್ಶ.

body constitution: ದೇಹ-ಚಿತ್ತ ಪ್ರಕೃತಿ. ಅನುವಂಶಿಕವಾಗಿ ವ್ಯಕ್ತಿಯ ಮೂಲ ಶಾರೀರಕ ಮತ್ತು ಮಾನಸಿಕ ಗುಣ ಸ್ವಭಾವ. ಇದು ವ್ಯಕ್ತಿಯ ಪ್ರತಿಕ್ರಿಯಾ ಸಾಮರ್ಥ್ಯವನ್ನು ಮತ್ತು ರೋಗ ಪ್ರತಿರೋಧಕ ಶಕ್ತಿಯನ್ನು ನಿರ್ಧರಿಸುತ್ತದೆ.

body language: ಶರೀರ ಭಾಷೆ; ಹಾವ ಭಾವದ ಭಾಷೆ.

body politic: ರಾಜ್ಯಾಂಗ ವ್ಯವಸ್ಥೆ.

body type theories: ಶರೀರ ರಚನಾ ಪ್ರಕಾರದ ಸಿದ್ಧಾಂತಗಳು . ವ್ಯಕ್ತಿಯ ದೈಹಿಕ ರಚನೆ ಮತ್ತು ವ್ಯಕ್ತಿತ್ವ ರಚನೆಯ ನಡುವಿನ ಸಂಬಂಧದ ಸಿದ್ಧಾಂತಗಳು.

Bogardus social distance scale: ಬೊಗಾರ್‌ಡಸ್‌ನ ಸಾಮಾಜಿಕ ಅಂತರ ಮಾಪಕ. ಒಬ್ಬ ವ್ಯಕ್ತಿ ಹಾಗೂ ವಿವಿಧ ಜನಾಂಗೀಯ ಹಾಗೂ ರಾಷ್ಟ್ರೀಯ ಗುಂಪುಗಳ ನಡುವಿನ ಸಾಮಾಜಿಕ, ಮಾನಸಿಕ ಅಂತರವನ್ನು ಅಳೆಯಲು ಬಳಸುವ ಮಾಪಕ.

bohemian: ಸ್ವೇಚ್ಛಾಚಾರಿ.

bolshevism: ಬೋಲ್ಷೆವಿಸಂ. ೧೯೦೩ ರಲ್ಲಿ ಕಾರ್ಮಿಕ ವರ್ಗದ ಚಳವಳಿಯಲ್ಲಿ ಉದ್ಭವಿಸಿದ ಒಂದು ಮಾರ್ಕ್ಸ್‌ವಾದೀ ಕ್ರಾಂತಿಕಾರೀ ಪ್ರವೃತ್ತಿ.

bond : ಸಾಲಪತ್ರ.

bonded labour: ಜೀತ. ಇದು ಗುಲಾಮಗಿರಿಯ ಇನ್ನೊಂದು ಸ್ವರೂಪ. ಸಾಲದ ತೀರಿಸುವಿಕೆಗಾಗಿ ಧನಿಯ ಮನೆಯಲ್ಲಿ ಸಂಬಳರಹಿತವಾಗಿ ಅನಿಯಮಿತ ದುಡಿತ. ಇದು ನಮ್ಮ ಗ್ರಾಮೀಣ ಬದುಕಿನಲ್ಲಿ ವ್ಯಾಪಕವಾಗಿದ್ದುದು ನಮ್ಮ ಕೃಷಿಯ ಹಿಂಬೀಳಿಕೆಗೆ ಕಾರಣ ಎನ್ನಲಾಗಿದೆ. ಈಗ ಇದರ ವಿರುದ್ಧ ಶಾಸನ ರೂಪುಗೊಂಡಿದೆ.

bone harpon: ಮೂಳೆಯ ಗಾಳ. ಆದಿ ಮಾನವರು ಮೂಳೆ ಮತ್ತು ಕೊಂಬುಗಳಿಂದ ತಯಾರಿಸುತ್ತಿದ್ದ ದಬ್ಬಣಗಳು ಮತ್ತು ಸೂಜಿಗಳು.

boom: ಸಮೃದ್ಧಿ; ಉತ್ಕರ್ಷ; ಅತಿಹೆಚ್ಚಳ.

booty: ಕೊಳ್ಳೆ ಹೊಡೆದ ಸಂಪತ್ತು.

born criminal: ಹುಟ್ಟಾ ಅಪರಾಧಿ.

borstal institution: ಬಾರ್‌ಸ್ಟಲ್ ಸಂಸ್ಥೆ. ೧೫ ರಿಂದ ೨೧ ರ ನಡುವಿನ ವಯಸ್ಸಿನ ಅಪರಾಧಿಗಳಿಗೆ ಶಿಸ್ತಿನ ಶಿಕ್ಷಣ ನೀಡುವ ಸಂಸ್ಥೆ.

bos-nomadicus: ಪ್ರಾಣಿಯ ಅವಶೇಷ. ಉದಾ: ನಿಟ್ಟೂರಿನಲ್ಲಿ (ಬಳ್ಳಾರಿ ಜಿಲ್ಲೆ) ಮಧ್ಯ ಶಿಲಾಯುಗದ ಚಕೆಕಲ್ಲಿನ ಆಯುಧಗಳೊಂದಿಗೆ ದನದ ಅವಶೇಷವೂ ದೊರೆತಿದೆ.

boudoir diplomacy: ಏಕಾಂತ ರಾಯಭಾರ. ಏಕಾಂತ ಗೃಹದಲ್ಲಿ ನಡೆಸುವ ರಾಯಭಾರ.

bound list system: ನಿಯಂತ್ರಿತ ಸೂಚೀ ವ್ಯವಸ್ಥೆ.

bound theatre: ಬದ್ಧ ರಂಗಭೂಮಿ.

boundary dispute: ಗಡಿ ವಿವಾದ.

boundary stone: ಗಡಿಕಲ್ಲು.

bounded rationality: ನಿರ್ಬಂಧಿತ ವೈಚಾರಿಕತೆ.

bourgeois democracy: ಬೂರ್ಷ್ವಾ ಪ್ರಜಾಪ್ರಭುತ್ವ; ಮಧ್ಯಮ ವರ್ಗದ ಪ್ರಜಾ ಪ್ರಭುತ್ವ.

bourgeois democratic revolution: ಬೂರ್ಷ್ವಾ ಪ್ರಜಾಪ್ರಭುತ್ವವಾದಿ ಕ್ರಾಂತಿ. ಮಧ್ಯಮ ವರ್ಗದ ಜನಸಮೂಹಗಳ ಭಾಗವಹಿಸುವಿಕೆಯಿಂದ ನಡೆಯುವ ಕ್ರಾಂತಿ.

bourgeois society: ಬೂರ್ಷ್ವಾ ಸಮಾಜ; ಮಧ್ಯಮ ವರ್ಗ ಪ್ರಧಾನ ಸಮಾಜ.

bourgeoisie: ಬೂರ್ಷ್ವಾಸೀ. ೧. ಮಧ್ಯಮ ವರ್ಗದ ಜನ. ೨. ಮಾರ್ಕ್ಸ್‌ನ ಸಿದ್ಧಾಂತ ಪ್ರಕಾರ ಕಾರ್ಮಿಕ ವರ್ಗಕ್ಕೆ ವಿರುದ್ಧವಾದ ಜನ ಸಮುದಾಯಗಳು. ಅಂದರೆ ಮುಖ್ಯವಾಗಿ ಬಂಡವಾಳಗಾರರು; ಶ್ರೀಮಂತ ವರ್ಗ.

bow and arrow ceremony: ನೋಡಿ: social fatherhood.

box headed: ಶಿರಪೇಟಿಕಾ. ಪೆಟ್ಟಿಗೆಯಾಕಾರದ ತಲೆಕಟ್ಟುಳ್ಳ ಲಿಪಿ. ಇದು ಕದಂಬ, ಪಲ್ಲವ ಮತ್ತು ಗುಪ್ತರ ಕಾಲದಲ್ಲಿ ಬಳಕೆಯಲ್ಲಿತ್ತು.

boycott movement: ಬಹಿಷ್ಕಾರ ಚಳವಳಿ. ರಾಜಕೀಯ ಪ್ರತಿಭಟನೆಯ ಒಂದು ವಿಧಾನ.

brachiation: ನಾಲ್ಕು ಕಾಲಿನ ಚಲನೆ. ಕೈ ಮತ್ತು ಕಾಲುಗಳನ್ನೂರಿ ಪ್ರಾಣಿಯಂತೆ ನಡೆದಾಡುವುದು.

brachycealic: ಹ್ರಸ್ವಶೀರ್ಷಿಗಳು. ಸಣ್ಣದಾದ ಶಿರವನ್ನು ಹೊಂದಿರುವವರು.

brachycephalic ದೀರ್ಘಶೀರ್ಷಿ. ತುಲನಾತ್ಮಕವಾಗಿ ವಿಸ್ತಾರವಾದ ಹಣೆಯನ್ನು ಹೊಂದಿರುವವ. ಅಂದರೆ ತಲೆ ಬುರುಡೆಯ ಅಗಲವು ಅದರ ಉದ್ದದ ಸುಮಾರು ೪/೫ ರಷ್ಟು ಇರುವುದು.

brahmadaya: ಬ್ರಹ್ಮಾದಾಯ. ಬ್ರಾಹ್ಮಣರಿಗೆ ರಾಜರುಗಳು ಉಂಬಳಿಯಾಗಿ ಬಿಟ್ಟಿದ್ದ ಭೂಮಿ. ಇದು ತೆರಿಗೆರಹಿತ ವಾಗಿದ್ದು ಹೆಚ್ಚಾಗಿ ಗೇಣಿ ಪದ್ಧತಿಯ ಮೂಲಕ ಕೃಷಿಗೊಳಪಟ್ಟು ಸಂಪೂರ್ಣ ಆದಾಯವು ದಾನಪಡೆದವರಿಗೆ ಸಲ್ಲುತ್ತಿತ್ತು. ಭೂಸುಧಾರಣೆ ಶಾಸನದ ಬಳಿಕ ಈ ಪದ್ಧತಿ ಮರೆಯಾಗಿದೆ.

brahmi lipi: ಬ್ರಾಹ್ಮೀ ಲಿಪಿ. ಭಾರತದ ಅತೀ ಪ್ರಾಚೀನ ಲಿಪಿಗಳಲ್ಲಿ ಒಂದು. ಅಶೋಕನ ಕಾಲದಿಂದ ಗುಪ್ತರ ಕಾಲದವರೆಗೆ ಭಾರತದಲ್ಲಿ ಬಳಕೆಯಲ್ಲಿತ್ತು.

brahminisation: ಬ್ರಾಹ್ಮಣೀಕರಣ. ಬ್ರಾಹ್ಮಣರಲ್ಲದ ಕೆಳವರ್ಗದ ಜನರು ಬ್ರಾಹ್ಮಣರ ರೀತಿನೀತಿಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಬ್ರಾಹ್ಮಣತ್ವಕ್ಕೇರುವ ಪ್ರಕ್ರಿಯೆ. ಪ್ರೊ.ಎಂ.ಎನ್. ಶ್ರೀನಿವಾಸರು ಮೊದಲು ನೀಡಿದ ಈ ಪರಿಕಲ್ಪನೆಯ ಮಿತಿಯನ್ನು ಅರ್ಥೈಸಿ ನಂತರ

ಸಂಸ್ಕೃತಾನುಕರಣ (sansk ritization) ಎಂಬ ಪರಿಕಲ್ಪನೆಯನ್ನು ನೀಡಿದರು.

brain drain: ಪ್ರತಿಭಾ ಪಲಾಯನ.

branding: ಬರೆ ಹಾಕುವುದು; ಸುಟ್ಟು ಗುರುತು ಹಾಕುವುದು. ಸಾಮಾನ್ಯವಾಗಿ ಗುಲಾಮರನ್ನು ಮತ್ತು ಅಪರಾಧಿಗಳನ್ನು ಗುರುತಿಸಲು ಈ ಕ್ರಮ ಬಳಸುತ್ತಿದ್ದರು.

breach of contract: ಒಪ್ಪಂದ ಉಲ್ಲಂಘನೆ.

breach of discipline: ಶಿಸ್ತು ಉಲ್ಲಂಘನೆ.

breach of trust: ನಂಬಿಕೆ ದ್ರೋಹ; ವಿಶ್ವಾಸ ದ್ರೋಹ.

bread labour: ಕೂಳಿನ ಕಾಯಕ; ಆಹಾರಕ್ಕಾಗಿ ದುಡಿತ. ನೋಡಿ: begar.

break in transportation hypothesis: ಸಾರಿಗೆ ನಿಲ್ದಾಣ ಪ್ರಾಕ್‌ಕಲ್ಪನೆ. ಸಾರಿಗೆ ವ್ಯವಸ್ಥೆಯ ತಂಗುದಾಣಗಳಲ್ಲಿ ನಗರಗಳು ಉದ್ಭವಿಸುವುವು ಎಂಬ ಊಹಾ ನಿರ್ಣಯ.

breed: ತಳಿ.

bride price: ವಧು ದಕ್ಷಿಣೆ; ಕನ್ಯಾ ಶುಲ್ಕ.

bride purchase; ನೋಡಿ: marriage by purchase.

bride service: ಕನ್ಯಾಸೇವೆ.

bride wealth: ನೋಡಿ: bride price.

broken home: ಭಗ್ನ ಕುಟುಂಬ. ಗಂಡ-ಹೆಂಡಿರ ಜಗಳದಿಂದಾಗಿ ಒಡೆದ ಕುಟುಂಬ.

broken line: ಕಡಿಗೆರೆ; ಛೇದಗೆರೆ.

broker: ದಲ್ಲಾಳಿ; ಮಧ್ಯವರ್ತಿ

brokerage: ದಲ್ಲಾಳಿ ಶುಲ್ಕ.

brokers of ideas: ಧ್ಯೇಯ-ಧೋರಣೆ ಗಳ ದಲ್ಲಾಳಿಗಳು. ವಿವಿಧ ರಾಜಕೀಯ ಪಕ್ಷಗಳು ತಮ್ಮ ರಾಜಕೀಯ ಧೋರಣೆಯ ವಿಚಾರ ಪ್ರಣಾಳಿಕೆಗಳನ್ನು ಜನರ ಮುಂದಿಟ್ಟು ಪ್ರಜೆಗಳು ತಮಗಿಷ್ಟ ಬಂದ ಪಕ್ಷದ ಧ್ಯೇಯ-ಧೋರಣೆಗಳನ್ನು ಆರಿಸಿಕೊಳ್ಳಲು ಅವಕಾಶ ವನ್ನು ನೀಡುತ್ತವೆ. ಇದಕ್ಕಾಗಿ ರಾಜಕೀಯ ಪಕ್ಷಗಳನ್ನು ಧ್ಯೇಯ-ಧೋರಣೆಗಳ ದಲ್ಲಾಳಿ ಗಳು ಎಂದು ಕರೆಯಲಾಗಿದೆ.

brothel: ವೇಶ್ಯಾಗೃಹ.

brother equivalence: ಸಮಸಹೋದರತ್ವ. ಏಕರಕ್ತ ಸಂಬಂಧಿ ಸ್ಥಾನಮಾನದ ಮೂಲಕ ಗುರುತಿಸಲ್ಪಟ್ಟ ಸಹೋದರತ್ವ.

brotherhood: ಸೋದರಭಾವತ್ವ. ರಕ್ತ ಸಂಬಂಧ ಅಥವಾ ಒಂದೇ ಸಮಾಜದ ಸದಸ್ಯತನದ ಕಾರಣಕ್ಕಾಗಿ ಪರಸ್ಪರರಲ್ಲಿ ಉಂಟಾಗುವ ಸಹೋದರ ಭಾವನೆ.

brutality: ಪಾಶವೀಯತೆ; ಕ್ರೂರತೆ; ಪಶುತ್ವ.

brute majority: ಕ್ರೂರ ಬಹುಮತ. ಒಂದು ಪ್ರಜಾಸತ್ತಾತ್ಮಕ ರಾಷ್ಟ್ರದಲ್ಲಿ ಯಾವುದೇ ಒಂದು ಪಂಗಡದ ಮತ ಧರ್ಮೀಯರು ಅತ್ಯಂತ ಹೆಚ್ಚು ಸಂಖ್ಯೆಯಲ್ಲಿದ್ದು ಅಲ್ಪಸಂಖ್ಯಾತರು ತುಳಿಯಲ್ಪಡುವ ಸಂದರ್ಭ ಉಂಟಾದರೆ ಅದು ಕ್ರೂರ ಬಹುಮತವೆನಿಸುತ್ತದೆ.

budget: ಮುಂಗಡಪತ್ರ. ಆಯವ್ಯಯ ಅಂದಾಜು ಪತ್ರ. ಪ್ರಸ್ತುತ ಹಣಕಾಸು ವರ್ಷದ ನಿರೀಕ್ಷಿತ ಆದಾಯ ವೆಚ್ಚಗಳಿಗೆ ಸಂಬಂಧಿಸಿದ ವರದಿ ಮಾತ್ರವಾಗಿರದೆ, ಕಳೆದ ವರ್ಷದ ಮತ್ತು ಮುಂದಿನ ವರ್ಷದ

ಆದಾಯ ವೆಚ್ಚಗಳಿಗೆ ಸಂಬಂಧಿಸಿದ ವಿವರಗಳನ್ನೊಳಗೊಂಡ ಅಂದಾಜು ಪತ್ರ.

budget estimate: ಅಂದಾಜು ಮುಂಗಡ ಪತ್ರ (ಆಯವ್ಯಯದ ಅಂದಾಜು).

budget line: ಮುಂಗಡ ಪತ್ರ ರೇಖೆ; ಆಯವ್ಯಯ ರೇಖೆ. ಅನುಭೋಗಿಯ ನಿಗದಿತ ಆದಾಯದ ಮಟ್ಟಕ್ಕೆ ಸರಿಯಾಗಿ ಈತನು ಕೊಂಡುಕೊಳ್ಳಬಹುದಾದ ವಿವಿಧ ಸರಕುಗಳ ಸಂಯೋಜನೆ.

budgetary control: ಮುಂಗಡ ಪತ್ರಾಂಕಿತ ನಿಯಂತ್ರಣ.

budgetary policy: ಮುಂಗಡ ಪತ್ರಾಂಕಿತ ನೀತಿ. ಸರಕಾರವು ಸಾರ್ವಜನಿಕ ಹಣಕಾಸಿಗೆ ಸಂಬಂಧಿಸಿದಂತೆ ಅಂದರೆ ತೆರಿಗೆ, ಆದಾಯ, ಸಾರ್ವಜನಿಕ ವೆಚ್ಚ ಮತ್ತು ಸಾರ್ವಜನಿಕ ಸಾಲಗಳ ಬಗ್ಗೆ ಅನು ಸರಿಸುವ ನೀತಿ.

budgetary power: ಮುಂಗಡ ಪತ್ರಾಂಕಿತ ಅಧಿಕಾರ. ರಾಷ್ಟ್ರದ ಸಾರ್ವಜನಿಕ ಹಣಕಾಸಿನ ಬಗ್ಗೆ ಇರುವ ಅಂತಿಮ ಅಧಿಕಾರ.

budgetary process: ಮುಂಗಡ ಪತ್ರದ ಪ್ರಕ್ರಿಯೆ.

budgetary surplus: ಆಯವ್ಯಯ ಮಿಗತೆ.

buffer state/buffer nation: ನಿರೋಧಕ ರಾಷ್ಟ್ರ; ತಡೆರಾಜ್ಯ; ಕಾಪು ರಾಜ್ಯ. ಎರಡು ಪ್ರಬಲ ರಾಜ್ಯಗಳ ಮಧ್ಯೆ ಇದ್ದು ಅವುಗಳ ನಡುವೆ ಕಾದಾಟದ ಸಂಭವವನ್ನು ಕಡಿಮೆ ಮಾಡುವ ರಾಜ್ಯ. ಎರಡು ಶತ್ರು ರಾಷ್ಟ್ರಗಳು ಒಂದಕ್ಕೊಂದು ನೇರವಾಗಿ ಎದುರುಬದುರಾಗಿರುವುದನ್ನು ತಪ್ಪಿಸುವುದರ ಮೂಲಕ ಯುದ್ಧವಾಗದಂತೆ ಎರಡು ಬಲಿಷ್ಠ ರಾಷ್ಟ್ರಗಳ ಮಧ್ಯೆ ಒಂದು ತಡೆ ಗೋಡೆಯಾಗಿ ಕೆಲಸ ಮಾಡುವ ಸಣ್ಣ ರಾಷ್ಟ್ರ.

buffer stock: ಕಾಪು ದಾಸ್ತಾನು; ಸಂಗ್ರಹ.

building industry: ಕಟ್ಟಡ ಕೈಗಾರಿಕೆ.

building sacrifice: ಕಟ್ಟಡ ಬಲಿ. ಕಟ್ಟುವ ಕಟ್ಟಡದ ಭದ್ರತೆಗಾಗಿ ಒಬ್ಬ ಅಮಾಯಕ ವ್ಯಕ್ತಿಯನ್ನು ಬಲಿಕೊಟ್ಟು ಆತನ ಶವ ವನ್ನು ಹೊಸ ಕಟ್ಟಡ ಅಥವಾ ಗೋಡೆಯ ಅಡಿಪಾಯದಲ್ಲಿ ಹೂಳುವುದು.

built in flexibility: ಸ್ವಯಂ ಹೊಂದಾಣಿಕೆ ಗುಣ.

bull: ತೇಜಿವಾಲ. ಷೇರುಪತ್ರಗಳ ಬೆಲೆಯೇರಿಕೆಯನ್ನು ನಿರೀಕ್ಷಿಸಿ ಯಾವುದೇ ದರದಲ್ಲಿ ಷೇರುಗಳನ್ನು ಕೊಳ್ಳುವ ಕರಾರು ಮಾಡಿಕೊಂಡು ಅವುಗಳ ಬೆಲೆ ಏರಿದಾಗ ಹೆಚ್ಚಿನ ಬೆಲೆಗೆ ಮಾರಿ ಲಾಭ ಸಂಪಾದಿಸುವ ಸಟ್ಟಾ ವ್ಯಾಪಾರಿ.

buncombe: ಬೂಟಾಟಿಕೆ; ಒಣ ಮಾತು; ಡಾಂಭಿಕತೆ. ರಾಜಕೀಯವಾಗಿ ಪರಿಣಾಮ ಬೀರುವ ಉದ್ದೇಶದಿಂದ ಬಡಾಯಿ ಕೊಚ್ಚಲು ಭಾಷಣ ಮಾಡುವುದು ಇಲ್ಲವೇ ಹುರುಳಿಲ್ಲದ ಆಡಂಬರದ ಮಾತುಗಳನ್ನು ಆಡುವುದು.

burden of public debt: ಸಾರ್ವಜನಿಕ ಸಾಲಭಾರ.

bureau system: ಕಛೇರಿ ಪದ್ಧತಿ. ದಕ್ಷ ಕಾರ್ಯಾಚರಣೆ. ಏಕ ಆದೇಶ, ತ್ವರಿತ ನಿರ್ಧಾರ ಮತ್ತು ಪ್ರಾಮಾಣಿಕ ಕಾರ್ಯ ನಿರ್ವಹಣೆಗಾಗಿ ಎಲ್ಲಾ ಅಧಿಕಾರಗಳು ಒಬ್ಬ ವ್ಯಕ್ತಿಯಲ್ಲಿ ನೆಲೆಗೊಳ್ಳುವುದು. (ಒಬ್ಬ ವ್ಯಕ್ತಿಯನ್ನು ಅವಲಂಬಿಸುವದು.)

bureaucracy: ನೌಕರಶಾಹಿ; ಅಧಿಕಾರ ಶಾಹಿ. ಶ್ರೇಣಿಪದ್ಧತಿ ಹೊಂದಿರುವ ಆಡಳಿತ ವ್ಯವಸ್ಥೆಯಲ್ಲಿನ ಸ್ಥಾನವರ್ಗೀಕರಣ ಮಾಡಲಾಗಿರುವ ಸಿಬ್ಬಂದಿ ವರ್ಗ.

bureaucrat: ಅಧಿಕಾರಿ.

bureaucratic commitment: ನೌಕರಶಾಹಿಯ ಬದ್ಧತೆ.

bureaucratic government: ಅಧಿಕಾರಶಾಹಿ ಸರಕಾರ. ಸರಕಾರದ ಆಡಳಿತ, ಶಾಸನ ಮತ್ತು ಹಣಕಾಸು ಕಾರ್ಯಗಳಲ್ಲಿ ನಾಗರಿಕ ಸೇವಾವರ್ಗದ ಪ್ರಭಾವ ಸತತ ಹಾಗೂ ಖಾಯಂ ಆಗಿ ಇರುವುದು.

bureaucratic leader: ನೌಕರಶಾಹೀ ನಾಯಕ.

bureaucratic religious leader: ಅಧಿಕಾರಶಾಹಿ (ನೌಕರಶಾಹಿ) ಧಾರ್ಮಿಕ ನಾಯಕ.

bureaucratic system: ಆಡಳಿತಶಾಹಿ ವ್ಯವಸ್ಥೆ. ಅಧಿಕಾರಶಾಹಿ ವ್ಯವಸ್ಥೆ. ಶ್ರೇಣಿ ಪದ್ಧತಿಯಿಂದ ಕೂಡಿರುವ ಆಡಳಿತ ವ್ಯವಸ್ಥೆಯಲ್ಲಿ ಉದ್ಯೋಗಿಗಳ ವರ್ಗೀಕರಣ ಮಾಡಿರುವ ಸಿಬ್ಬಂದಿವರ್ಗ ವ್ಯವಸ್ಥೆ.

bureaucratization: ನೌಕರಶಾಹೀ ಕರಣ

burial: ಶವ ಹೂಳುವಿಕೆ.

burial cannibalism: ಶವಸೇವನೆ. ಮೃತ ವ್ಯಕ್ತಿಯ ಮಾಂಸ ಸೇವನೆ. ಮೃತ ವ್ಯಕ್ತಿಯ ಶಕ್ತಿಯನ್ನು ಪಡೆಯಲು ಆತನ ಮಾಂಸ ಸೇವನೆ. ಆಸ್ಟ್ರೇಲಿಯಾದ ಲಿವರ್ ಪೂಲ್ ನದೀ ತೀರದ ಜನರಲ್ಲಿ ಈ ಸಂಪ್ರದಾಯವಿದ್ದಿತು.

burial ground: ರುದ್ರಭೂಮಿ; ಸ್ಮಶಾನ.

burid: ಮಾರುಕಟ್ಟೆಯ ವಿವರಗಳ ಪಟ್ಟಿಯನ್ನು ಸಿದ್ಧಗೊಳಿಸುವ ಅಧಿಕಾರಿ.

burnt offering: ಯಜ್ಞ ನೈವೇದ್ಯ. ಸುಡುವ ಮೂಲಕ ನೀಡುವ ಕಾಣಿಕೆ (ಅರ್ಪಣೆ). ಯಜ್ಞಕುಂಡದಲ್ಲಿ ಪ್ರಾಣಿಯ ಮಾಂಸವನ್ನು ದಹಿಸುವುದರ ಮೂಲಕ ನೀಡುವ ಆಹುತಿ.

business cost: ವ್ಯವಹಾರ ವೆಚ್ಚ. ವ್ಯಾಪಾರ ವೆಚ್ಚ.

business cycle: ವ್ಯಾಪಾರ ಚಕ್ರ; ಆರ್ಥಿಕ ಆವರ್ತ.

business decision: ವ್ಯವಹಾರ ನಿರ್ಣಯ.

business depression: ವ್ಯಾಪಾರ ಮುಗ್ಗಟ್ಟು; ವ್ಯವಹಾರ ಮುಗ್ಗಟ್ಟು.

business district: ವ್ಯಾಪಾರೀ ಕ್ಷೇತ್ರ.

business economics: ವ್ಯವಹಾರ ಅರ್ಥಶಾಸ್ತ್ರ.

business enterprise: ವ್ಯವಹಾರೋದ್ಯಮ.

business ethics: ವ್ಯಾಪಾರ ನೀತಿ.

business taxation: ವ್ಯವಹಾರ ತೆರಿಗೆ.

business wealth: ಉದ್ಯಮ ಸಂಪತ್ತು; ವ್ಯವಹಾರ ಸಂಪತ್ತು.

buyers market: ಗ್ರಾಹಕರ ಮಾರುಕಟ್ಟೆ.

buyers monopoly: ಗ್ರಾಹಕರ ಏಕಸ್ವಾಮ್ಯ.

by-election: ಉಪಚುನಾವಣೆ. ಅಭ್ಯರ್ಥಿಯ ಮರಣ ಇಲ್ಲವೇ ರಾಜೀನಾಮೆಯಿಂದ ತೆರವಾದ ಶಾಸಕಾಂಗದ ಸದಸ್ಯ

ಸ್ಥಾನವನ್ನು ಭರ್ತಿಮಾಡಲು ನಡೆಸುವ ಚುನಾವಣೆ.

by-law: ಉಪನಿಯಮ; ಯಾವುದೇ ನಿಗಮವು (ಕಾರ್ಪೋರೇಷನ್) ತನ್ನ ವ್ಯವಹಾರಗಳನ್ನು ನಿರ್ವಹಿಸಲು, ದೇಶದ ಮುಖ್ಯ ಕಾಯಿದೆಗಳಿಗೆ ವಿರೋಧವಾಗಿಲ್ಲದಿರುವಂತೆ ಅಳವಡಿಸಿಕೊಂಡು ಬರುವ ನಿಯಮ.

byproduct: ಉಪ-ಉತ್ಪನ್ನ.

bystander apathy: ಪ್ರೇಕ್ಷಕ ಜಡತೆ. ಯಾವುದೇ ಘಟನೆಯ ನೋಡುಗರು ತೋರುವ ಭಾವಶೂನ್ಯತೆ.

C

cabinet : ಸಚಿವ ಸಂಪುಟ; ಕ್ಯಾಬಿನೆಟ್. ರಾಷ್ಟ್ರೀಯ ಧೋರಣೆಯನ್ನು ನಿರ್ಧರಿಸುವಲ್ಲಿ ಮತ್ತು ರಚಿಸುವಲ್ಲಿ ಹಾಗೂ ಕಾರ್ಯಾಂಗದ ವ್ಯವಹಾರಗಳನ್ನು ನಿಭಾಯಿಸುವ ಸರಕಾರದ ಪ್ರಮುಖ ಸಚಿವರ ಸಮಿತಿ.

cabinet government: ಸಂಪುಟ ಸರಕಾರ; ಸಂಸದೀಯ ಸರಕಾರೀ ಪದ್ಧತಿಯಲ್ಲಿ ಸಂಪುಟವು ಹೆಚ್ಚು ಪ್ರಭಾವಶಾಲಿ ಯಾಗಿದ್ದು ಎಲ್ಲಾ ಕಾರ್ಯಾಂಗೀಯ ಅಧಿಕಾರವನ್ನು ಹೊಂದಿರುತ್ತದೆ. ಆದುದರಿಂದ ಈ ಪದ್ಧತಿಯನ್ನು ಸಂಪುಟ ಸರಕಾರ ಪದ್ಧತಿ ಎಂದು ಕರೆಯಲಾಗುತ್ತದೆ.

cabinet mission: ಸಂಪುಟ ಆಯೋಗ; ಸಚಿವರ ನಿಯೋಗ.

cabinet secrecy: ಸಂಪುಟ ರಹಸ್ಯ. ಸಂಪುಟದ ಸದಸ್ಯರು ತಮ್ಮ ಕಾರ್ಯಚಟುವಟಿಕೆಯ ಬಗ್ಗೆ ಸಾಂವಿಧಾನಿಕ ನಿಯಮಾವಳಿಗಳಂತೆ ಕಾಪಾಡಬೇಕಾದ ರಹಸ್ಯ.

cacogenics: ಕೆಕೊಜೆನಿಕ್ಸ್. ಜನಾಂಗೀಯ ಅನುವಂಶೀಯ ಗುಣಗಳ ಅವನತಿಗೆ ಕಾರಣವಾಗುವ ಅಂಶಗಳನ್ನು ಅಧ್ಯಯನ ಮಾಡುವ ಜೀವಶಾಸ್ತ್ರೀಯ ವಿಭಾಗ.

caesaropapism: ಧರ್ಮಗುರುವಿನ ರಾಜ್ಯಭಾರ. ರಾಜಕೀಯ ಮತ್ತು ಧಾರ್ಮಿಕ ವಿಷಯಗಳ ಉಸ್ತುವಾರಿಯನ್ನು ಒಬ್ಬನೇ ನಡೆಸುವಂಥ ಸರ್ಕಾರ.

cafeteria approach: ಕೆಫೆಟೇರಿಯಾ ವಿಧಾನ; ಜನನ ನಿಯಂತ್ರಣದ ವಿಧಾನ. ಕುಟುಂಬ ಯೋಜನೆಯನ್ನು ಅಳವಡಿಸಿಕೊಳ್ಳಲು ಇಚ್ಛೆ ಹೊಂದಿದ ದಂಪತಿಗಳಿಗೆ ಜನನನಿಯಂತ್ರಣ ಕ್ರಮಗಳಾದ ಟ್ಯೂಬೆಕ್ಟಮಿ, ವ್ಯಾಸೆಕ್ಟಮಿ, ವಂಕಿ ಇತ್ಯಾದಿಗಳ ಬಗೆಗೆ ತಿಳಿಹೇಳುವ ವಿಧಾನ.

calendrical rite: ಪಂಚಾಂಗ ಸೂಚಿತ ಸಂಸ್ಕಾರ.

calipen: ಮಾನವನ ತಲೆಯ ಸುತ್ತಳತೆಯನ್ನು ಅಳೆಯುವ ಒಂದು ಉಪಕರಣ.

call: ಕರೆ. ಭಾಗಶ: ಪಾವತಿಯಾಗಿರುವ ಷೇರುಗಳ ಅಥವಾ ಡಿಬೆಂಚರುಗಳ ಮೇಲೆ ಉಳಿದ ಹಣವನ್ನೂ ಪೂರ್ಣವಾಗಿ ಇಲ್ಲವೆ ಭಾಗಶಃ ಪಾವತಿ ಮಾಡುವಂತೆ ಕೋರಿ ಕಂಪೆನಿ ಕಳುಹಿಸುವ ಕರೆ.

call girl: ಕರೆ ಕನ್ಯೆ; ಕರೆಹುಡುಗಿ. ಹಣಕ್ಕಾಗಿ ಲೈಂಗಿಕ ಸುಖ ನೀಡುವ ಸ್ತ್ರೀ.

call money: ಕರೆ ಹಣ. ಬೇಡಿದಾಗ ಹಿಂದಿರುಗಿಸುವ ಷರತ್ತಿನ ಮೇಲೆ ತುರ್ತು ಅವಶ್ಯಕತೆಗಾಗಿ ಪಡೆದ ಹಣ.

call money market: ಕರೆ ಹಣದ ಮಾರುಕಟ್ಟೆ; ಕರೆ ಹಣವನ್ನು ಒದಗಿಸುವುದರಲ್ಲಿ ನಿರತವಾಗಿರುವ ಸಂಸ್ಥೆಗಳು.

call option: ಕರೆ ಆಯ್ಕೆ.

callable debt: ಕರೆ ಸಾಲ; ಸರಕಾರದ ಸೆಕ್ಯೂರಿಟಿಗಳ ಅವಧಿಗೆ ಮುನ್ನವೇ ಅವುಗಳ ಹಣವನ್ನು ಮರುಪಾವತಿ ಮಾಡಬೇಕಿದ್ದರೆ ಅದು ಕರೆ ಸಾಲವೆನಿಸುತ್ತದೆ.

calligraphy: ಅಲಂಕಾರ ಲಿಪಿ; ಸುಂದರ ವಿನ್ಯಾಸದ ಬರಹ; ಉತ್ಕೃಷ್ಟ ಕೈಬರಹ; ಚೆಲುವು ಲಾಲಿತ್ಯದಿಂದ ಕೂಡಿದ ಲಿಪಿ ಅಥವಾ ರೇಖಾವಿನ್ಯಾಸ.

calling: ಕಾಯಕ; ಉದ್ಯೋಗ.

calling attention motion: ಗಮನ ಸೆಳೆಯುವ ಗೊತ್ತುವಳಿ: ಶಾಸಕಾಂಗದ ಅಧಿವೇಶನದ ಸಮಯದಲ್ಲಿ ದೇಶದ ಯಾವ ಭಾಗದಲ್ಲಾದರೂ ಅನಾಹುತ ಅಥವಾ ಗಲಭೆಗಳುಂಟಾದರೆ ಅವುಗಳನ್ನು ಸರಕಾರದ ಗಮನಕ್ಕೆ ತರಲು ಶಾಸಕಾಂಗದ ಎರಡೂ ಸದನಗಳ ಸದಸ್ಯರು ಗಮನ ಸೆಳೆಯುವ ಸೂಚನೆಯನ್ನು ಮಂಡಿಸಬಹುದಾಗಿದೆ.

Calvinism: ಕಾಲ್ವಿನ್ನನ ದೈವಜ್ಞಾನವಾದ. ಅಭಯ ಪ್ರಧಾನ ಮಾಡುವುದರಲ್ಲಿ ದೇವರಿಗೆ ಸರ್ವ ಸ್ವತಂತ್ರವಿರುವುದು ಎಂಬ ವಾದ.

Cambridge School: ಕೇಂಬ್ರಿಡ್ಜ್ ಪಂಥ. ಇಂಗ್ಲೆಂಡಿನ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಅರ್ಥಶಾಸ್ತ್ರಜ್ಞರಿಂದ ಪ್ರಭಾವಿತಗೊಂಡ ಆರ್ಥಿಕ ಚಿಂತನೆ.

camp approach: ಶಿಬಿರ ವಿಧಾನ. ಸರ್ವಸಾಮಾನ್ಯ ಕಾಯಿಲೆಯ ಚಿಕಿತ್ಸೆಗಾಗಿ ತಾತ್ಕಾಲಿಕವಾಗಿ ಏರ್ಪಡಿಸಿದ ಶಿಬಿರಗಳಲ್ಲಿ ಸಾಮೂಹಿಕ ಚಿಕಿತ್ಸೆಗಳನ್ನು ನೀಡುವುದು. ಉದಾ: ನೇತ್ರ ಚಿಕಿತ್ಸಾ ಶಿಬಿರ. ಇದೇ ವಿಧಾನವು ಜನನ ನಿಯಂತ್ರಣ ಶಸ್ತ್ರಕ್ರಿಯೆಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಪ್ರಚಲಿತವಿದೆ.

campaign fund: ಪ್ರಚಾರ ನಿಧಿ. ಅಭ್ಯರ್ಥಿ ಅಥವಾ ರಾಜಕೀಯ ಪಕ್ಷವು ಚುನಾವಣಾ ಪ್ರಚಾರ ವೆಚ್ಚಗಳಿಗಾಗಿ ಸಂಗ್ರಹಿಸುವ ನಿಧಿ.

candidate: ಅಭ್ಯರ್ಥಿ.

canine teeth: ಕೋರೆ ಹಲ್ಲು. ಶಾರೀರಿಕ ಮತ್ತು ಬುದ್ಧಿಯ ಬೆಳವಣಿಗೆಯನ್ನು ಗುರುತಿಸುವ ಹಲ್ಲು.

cannibalism: ನರಭಕ್ಷಕತನ. ಮನುಷ್ಯ ಮಾಂಸವನ್ನು ಸಾಂಕೇತಿಕವಾಗಿ ಅಥವಾ ದೈನಂದಿನ ಆಹಾರವಾಗಿ ಸೇವಿಸುವುದು. ನೋಡಿ: anthropophagy.

canon: ನಿಯಮ; ಸೂತ್ರ.

canon law: ಧರ್ಮಶಾಸ್ತ್ರ ನಿಯಮ. ಕ್ರಿಶ್ಚಿಯನ್ ಧರ್ಮವು ಸ್ಥಾಪಿತವಾದ ಮೇಲೆ ರಚಿತವಾದ ಧರ್ಮಶಾಸ್ತ್ರ ನಿಯಮ.

canon of ability: ಸಾಮರ್ಥ್ಯದ ನಿಯಮ.

canon of certainty: ನಿಶ್ಚಿತತೆಯ ನಿಯಮ.

canon of convenience: ಅನುಕೂಲತೆಯ ನಿಯಮ.

canon of co-ordination: ಸಂಯೋಜನೆಯ ನಿಯಮ.

canon of discovery: ಸಂಶೋಧನಾ ಸೂತ್ರ.

canon of diversity: ವಿವಿಧತೆಯ ನಿಯಮ.

canon of economy: ಮಿತವ್ಯಯದ ನಿಯಮ.

canon of elasticity: ಸ್ಥಿತಿ ಸ್ಥಾಪಕತೆಯ ನಿಯಮ.

canon of equitable distribution: ಸಮಾನ ಹಂಚಿಕೆಯ ನಿಯಮ.

canon of equity: ಸಮಾನತೆಯ ನಿಯಮ; ಸಮತೆಯ ನಿಯಮ.

canon of expediency: ಔಚಿತ್ಯತೆಯ ನಿಯಮ; ಯುಕ್ತತೆಯ ನಿಯಮ.

canon of expenditure: ವೆಚ್ಚದ ನಿಯಮ.

canon of flexibility: ನಮ್ಯತೆಯ ನಿಯಮ.

canon of productivity: ಉತ್ಪಾದಕತೆಯ ನಿಯಮ.

canon of sanction: ಅನುಮೋದನೆಯ ನಿಯಮ.

canon of simplicity: ಸರಳತೆಯ ನಿಯಮ.

canon of surplus: ಆಧಿಕ್ಯದ ನಿಯಮ; ಮಿಗತೆಯ ನಿಯಮ.

canon of taxation: ತೆರಿಗೆಯ ನಿಯಮ.

cantonment: ದಂಡುಪ್ರದೇಶ; ಸೈನ್ಯ ಠಾಣ್ಯ.

capacity utilization rate: ಸಾಮರ್ಥ್ಯ ಉಪಯುಕ್ತತಾ ದರ.

capital: ಬಂಡವಾಳ.

capital absorptive capacity: ಬಂಡವಾಳ ಹೀರಿಕಾ ಸಾಮರ್ಥ್ಯ. ಬಂಡವಾಳವನ್ನು ಪರಿಣಾಮಕಾರಿಯಾಗಿ ಹೀರಿಕೊಳ್ಳಬಲ್ಲ ಸಾಮರ್ಥ್ಯ.

capital accumulation: ಬಂಡವಾಳ ಸಂಚಯ.

capital allowance: ಬಂಡವಾಳ ಸೋಡಿ.

capital asset: ಬಂಡವಾಳ ಸ್ವತ್ತು (ಆಸ್ತಿ).

capital budgeting: ಬಂಡವಾಳ ಮುಂಗಡಪತ್ರ ತಯಾರಿ; ಬಂಡವಾಳ ಮುಂಗಡ ಪತ್ರ. ಬಂಡವಾಳದ ಸಮರ್ಪಕ ಕಾರ್ಯನಿರ್ವಹಣೆಗಾಗಿ ದೀರ್ಘಾವಧಿಯ ಬಂಡವಾಳ ಹೂಡಿಕೆಯ ನಿರ್ಧಾರಗಳು.

capital deepening: ಬಂಡವಾಳ ಆಳಗೊಳಿಸುವಿಕೆ. ಉತ್ಪನ್ನತೆಯನ್ನು ಹೆಚ್ಚಿಸುವ ಉತ್ಪಾದನಾ ತಂತ್ರವು ಒಳಗೊಳ್ಳುವ ವಿಶಿಷ್ಟವಾದ ಬಂಡವಾಳ ಸರಕುಗಳ ನಿರ್ಮಾಣ.

capital expenditure: ಬಂಡವಾಳ ವೆಚ್ಚ.

capital flight: ಬಂಡವಾಳ ಪಲಾಯನ. ಬಂಡವಾಳವು ದೇಶದಿಂದ ಹೊರಕ್ಕೆ ಹೋಗುವ ಪ್ರಕ್ರಿಯೆ

capital formation: ಬಂಡವಾಳ ಸಂಚಯನ (ಸಂಗ್ರಹಣೆ).

capital fund: ಬಂಡವಾಳ ನಿಧಿ.

capital gain: ಬಂಡವಾಳ ಲಾಭ.

capital gain tax: ಬಂಡವಾಳ ಲಾಭ ತೆರಿಗೆ.

capital good: ಬಂಡವಾಳ ಸರಕು.

capital income and expenditure: ಮೂಲ ಆದಾಯ ಮತ್ತು ವೆಚ್ಚ.

capital intensive technology: ಬಂಡವಾಳ ಸಾಂದ್ರ ತಾಂತ್ರಿಕತೆ; ಬಂಡವಾಳ ಆಧಾರಿತ ತಾಂತ್ರಿಕತೆ.

capital investment: ಬಂಡವಾಳ ಹೂಡಿಕೆ.

capital levy: ಬಂಡವಾಳ ತೆರಿಗೆ (ಕಂದಾಯ).

capital loss: ಬಂಡವಾಳ ನಷ್ಟ. ಆಸ್ತಿ ಅಥವಾ ಸೊತ್ತುಗಳ ಹಣರೂಪೀ ಮೌಲ್ಯ ದಲ್ಲಿ ಉಂಟಾಗುವ ಕಡಿತ.

capital management: ಬಂಡವಾಳ ನಿರ್ವಹಣೆ.

capital market: ಬಂಡವಾಳ ಮಾರು ಕಟ್ಟೆ. ದೀರ್ಘಕಾಲೀನ ಸಾಲನಿಧಿಗಳ ಮಾರುಕಟ್ಟೆ

capital movement: ಬಂಡವಾಳ ಚಲನೆ.

capital of pillar: ಸ್ತಂಭಶಿರ; ಬೋದಿಗೆ.

capital output ratio: ಬಂಡವಾಳ-ಉತ್ಪಾದನಾ ಪ್ರಮಾಣ. ಬಂಡವಾಳ-ಉತ್ಪನ್ನ ಪ್ರಮಾಣ.

capital productivity ratio: ಬಂಡ ವಾಳ ಉತ್ಪಾದಕತೆಯ ನಿಷ್ಪತ್ತಿ. ಬಂಡವಾಳ ಹೂಡಿಕೆಯ ಉಪಯುಕ್ತತೆಯಲ್ಲಿನ ದಕ್ಷ ತೆಯ ಸೂಚಿಗಳಲ್ಲೊಂದು.

capital punishment: ಮರಣ ದಂಡನೆ

capital sector: ಬಂಡವಾಳ ವಲಯ.

capital structure: ಬಂಡವಾಳ ರಚನೆ.

capital theory: ಬಂಡವಾಳ ಸಿದ್ಧಾಂತ.

capital transfer tax: ಬಂಡವಾಳ ವರ್ಗಾವಣೆ ತೆರಿಗೆ.

capital widening: ಬಂಡವಾಳದ ವಿಸ್ತರಣೆ. ಇದು ಪ್ರಚಲಿತ ಉತ್ಪಾದನಾ ತಂತ್ರವು ಒಳಗೊಳ್ಳುವ ಬಂಡವಾಳ ಸರಕು ಗಳ ಪ್ರಮಾಣವನ್ನು ಹೆಚ್ಚಿಸುವುದು.

capitation fee: ತಲೆಗಂದಾಯ ಶುಲ್ಕ; ದೇಣಿಗೆ ಶುಲ್ಕ. ವೈದ್ಯಕೀಯ, ಇಂಜಿನಿಯ ರಿಂಗ್ ಮುಂತಾಗಿ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯಲು ನೀಡಬೇಕಾದ ದೇಣಿಗೆ ಹಣ.

capitalism: ಬಂಡವಾಳಶಾಹಿ ಪದ್ಧತಿ. ಖಾಸಗಿ ಒಡೆತನದಲ್ಲಿ ಉತ್ಪಾದನಾ ಸಾಧನಗಳಿರುವ ಮತ್ತು ಬಂಡವಾಳಗಾರರು ಕೂಲಿಗಾರರನ್ನು ಶೋಷಣೆ ಮಾಡುವ ಒಂದು ಸಾಮಾಜಿಕ ವ್ಯವಸ್ಥೆ.

capitalist democracy: ಬಂಡವಾಳ ಶಾಹಿ ಪ್ರಜಾಪ್ರಭುತ್ವ.

capitalist integration: ಬಂಡವಾಳ ಶಾಹಿ ಏಕೀಕರಣ. ಹಲವು ಬಂಡವಾಳಶಾಹಿ ದೇಶಗಳ ನಡುವೆ ಸಮಗ್ರ ಆರ್ಥಿಕ ಸಂಬಂಧ ಗಳ ಸ್ಥಾಪನೆ.

capitalist mode of production: ಬಂಡವಾಳಶಾಹಿ ಉತ್ಪಾದನಾ ವಿಧಾನ.

capitalist society: ಬಂಡವಾಳಶಾಹಿ ಸಮಾಜ.

capitalist state : ಬಂಡವಾಳಶಾಹಿ ರಾಜ್ಯ (ರಾಷ್ಟ್ರ).

capitalistic: ಬಂಡವಾಳಶಾಹಿ.

capitalistic economy: ಬಂಡವಾಳ ಶಾಹಿ ಆರ್ಥಿಕ ವ್ಯವಸ್ಥೆ.

capitalistic farming: ಬಂಡವಾಳ ಶಾಹಿ ಬೇಸಾಯ.

capitalistic imperialism: ಬಂಡವಾಳ ಶಾಹೀ ಸಾಮ್ರಾಜ್ಯವಾದ.

capitalistic mode of production: ಬಂಡವಾಳಶಾಹಿ ಉತ್ಪಾದನಾ ಮಾದರಿ.

capitalization: ಬಂಡವಾಳೀಕರಣ.

card stacking: ಇಸ್ಪೀಟ್ ಆಟದ ತಂತ್ರ. ಇಸ್ಪೀಟ್ ಆಟದಲ್ಲಿರುವಂತೆ ಗೆಲ್ಲುವ ಮಗ್ಗಲನ್ನು ಮಾತ್ರ ತೋರಿಸುವ ಪ್ರಚಾರ ತಂತ್ರ.

cardiac neurosis: ಹೃನ್ಮನೋರೋಗ. ಹೃದಯದ ತೊಂದರೆ ಇದೆಯೆಂಬ ಭಯದಿಂದ ತೀವ್ರವಾಗಿ ಚಿಂತಿಸುವ ಗೀಳು. ಇದೊಂದು ವಿಶಿಷ್ಟ ರೀತಿಯ ಮನೋಬೇನೆ. ಇಲ್ಲಿ ನಿಜವಾದ ಹೃದಯದ ತೊಂದರೆಗಳಿರುವುದಿಲ್ಲ.

cardinal utility: ಸಂಖ್ಯಾಸೂಚಕ ತುಷ್ಟಿಗುಣ.

care taker government: ಉಸ್ತುವಾರಿ ಸರಕಾರ. ರಾಜಕೀಯವಾಗಿ ಪ್ರತಿನಿಧಿತ ಹಾಗೂ ಜವಾಬ್ದಾರಿಯುತ ಸಚಿವ ಸಂಪುಟವು ರಾಜೀನಾಮೆ ನೀಡಿದ ಬಳಿಕ ಸಂಸದೀಯ ಬೆಂಬಲ ಪಡೆದು ಹೊಸದಾಗಿ ರೂಪುಗೊಂಡ ಸಚಿವ ಸಂಪುಟವು ಅಧಿಕಾರಕ್ಕೆ ಬರುವವರೆಗೆ ಅತ್ಯಾವಶ್ಯಕ ಕಾರ್ಯಗಳನ್ನು ನಿರ್ವಹಿಸುವ ತಾತ್ಕಾಲಿಕ ಅಧಿಕಾರ ಹೊಂದಿದ ಸರಕಾರ.

career: ಜೀವನ ವೃತ್ತಿ; ಉಪಜೀವನ ಮಾರ್ಗ.

career development: ಜೀವನ ವೃತ್ತಿಯ ಪುರೋಭಿವೃದ್ಧಿ.

careerist politician: ವೃತ್ತಿಪರ ರಾಜಕಾರಣಿ.

cargo cult: ನೌಕಾರಾಧನಾ ಪಂಥ. ಹಡಗಿನಲ್ಲಿ ಬರುವ ಸರಕುಗಳ ಆರಾಧನೆ.

carol: ಹರ್ಷಗೀತ.

carpet crossing: ಪಕ್ಷಾಂತರ; ರಾಜಕೀಯ ವ್ಯಕ್ತಿಗಳು ಒಂದು ಪಕ್ಷವನ್ನು ತೊರೆದು ಇನ್ನೊಂದು ಪಕ್ಷವನ್ನು ಸೇರುವುದು.

cartel: ಕೈಗಾರಿಕೆಗಳ ಸಂಘ. ಕಾರ್ಟೆಲ್. ಉತ್ಪನ್ನ ಮತ್ತು ಪೈಪೋಟಿಯನ್ನು ನಿಯಂತ್ರಿಸುವುದರ ಮೂಲಕ ಬೆಲೆಯನ್ನು ನಿಯಂತ್ರಿಸಲು ಉತ್ಪಾದಕರು ತಮ್ಮೊಳಗೆ ಮಾಡಿಕೊಂಡ ಸಂಘಟನೆ.

cascading effect: ಧುಮುಕು ಪರಿಣಾಮ. ಒಂದು ಹಂತದಿಂದ ಕೆಳ ಹಂತಕ್ಕೆ ಬಿಡಿ ಬಿಡಿಯಾಗಿ ಬೀಳುವ ಪ್ರಕ್ರಿಯೆಯ ಪರಿಣಾಮ. ಉದಾ: ಆರ್ಥಿಕತೆಯು ನಿಯಂತ್ರಣವಿಲ್ಲದೆ ಕುಸಿಯುವುದು.

case: ವ್ಯಕ್ತಿ; ಪರಿಸ್ಥಿತಿ; ಸಂಗತಿ; ವಿಷಯ; ಪ್ರಸಂಗ; ವ್ಯಾಜ್ಯ; ಏಕವಿಷಯಕ.

case history: ವಿಷಯ ಚರಿತ್ರೆ; ಸಂಗತಿಯ ವಿವರ. ರೋಗ ನಿದಾನಕ್ಕೆ ಮತ್ತು ಚಿಕಿತ್ಸೆಗೆ ರೋಗಿಯ ರೋಗ ಚಿಹ್ನೆಗಳ, ಕಳೆದ ದಿನಗಳ ಮತ್ತು ಆತನ ವ್ಯಕ್ತಿತ್ವದ ವಿವರ ಸಂಗ್ರಹ. ಆದುದರಿಂದ ಚಿಕಿತ್ಸಕರು ಮೊದಲು ಸಂದರ್ಶನವನ್ನು ದೀರ್ಘವಾದ ರೋಗ ಸಂಗತಿಯನ್ನು ಬರೆದುಕೊಳ್ಳಲು ಮೀಸಲಿಡುತ್ತಾರೆ. ಸಾಮಾಜಿಕ ಸಂಶೋಧನೆಯಲ್ಲಿಯೂ ಇದು ಅಗತ್ಯ.

case law: ಪ್ರಕರಣದ ಕಾನೂನು. ವಿಧಿ, ನಿಬಂಧನೆಗಳಿಗೆ ಬದಲಾಗಿ ಪೂರ್ವ ನಿದರ್ಶನಗಳು ಮತ್ತು ನ್ಯಾಯಾಂಗ ನಿರ್ಣಯಗಳ ಆಧಾರವನ್ನು ಹೊಂದಿರುವ ಕಾನೂನು.

case study method: ವಿಷಯ ಅಧ್ಯಯನ ವಿಧಾನ. ವ್ಯಕ್ತಿ, ಸ್ಥಳ, ಸಮುದಾಯ, ಘಟನೆ ಅಥವಾ ಯಾವುದೇ ಒಂದು ಸಂಗತಿಯ ಸಮಗ್ರ ಅಧ್ಯಯನ.

case work process: ವ್ಯಕ್ತಿಗತ ಕಾರ್ಯ ಪ್ರಕ್ರಿಯೆ.

cash: ನಗದು. ನೋಟು ಹಾಗೂ ನಾಣ್ಯಗಳ ರೂಪದಲ್ಲಿರುವ ಹಣ.

cash account system: ನಗದಿ ಲೆಕ್ಕ ಪದ್ಧತಿ. ಎಲ್ಲಿ ವಾಸ್ತವ ಹಣದ ವರ್ಗಾವಣೆ ಆಗಿದೆಯೋ ಅಂತಹ ಕಾರ್ಯಾಚರಣೆಗಳನ್ನು ಮಾತ್ರ ದಾಖಲೆ ಮಾಡುವ ಪದ್ಧತಿ.

cash balance: ನಗದು ಶಿಲ್ಕು.

cash credit: ನಗದು ಪತ್ತು; ನಗದು ಉದ್ದರಿ; ನಗದು ಸಾಲ.

cash discount: ನಗದು ಸೋಡಿ; ನಗದು ರಿಯಾಯಿತಿ.

cash flow: ನಗದು ಹಣದ ಹರಿವು.

cash limit: ನಗದಿನ ಮಿತಿ.

cash plan: ನಗದು ಯೋಜನೆ.

cash reserve ratio: ನಗದು ದಾಸ್ತಾನು ಅನುಪಾತ; ನಗದು ಮೀಸಲು ಅನುಪಾತ.

caste: ಜಾತಿ. ಸದಸ್ಯರ ಸ್ಥಾನಮಾನ, ಉದ್ಯೋಗ, ವಾಸ್ತವ್ಯದ ಜಾಗ, ಸಾಮಾಜಿಕ ಸಂಬಂಧ ಇವೆಲ್ಲವುಗಳನ್ನೂ ವಂಶಪಾರಂಪರ್ಯವಾಗಿ ಅಥವಾ ಹುಟ್ಟಿನಿಂದ ನಿರ್ಧರಿಸುವ ಮುಚ್ಚಿದ ಸಾಮಾಜಿಕ ವರ್ಗ.

caste endogamy: ಜಾತಿಯ ಒಳ ಬಾಂಧವ್ಯ.

caste hierarchy: ಜಾತಿಯ ಸ್ತರವಿನ್ಯಾಸ; ಜಾತಿಯ ಏಣಿ-ಶ್ರೇಣಿ. ಜಾತಿ ವ್ಯವಸ್ಥೆಯಲ್ಲಿ ಕಂಡುಬರುವ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ಲಂಬಾತ್ಮಕ ಸ್ಥಾನಭೇದ.

caste panchayat: ಜಾತಿ ಪಂಚಾಯತಿ. ಜಾತಿಯೊಳಗಿನ ವ್ಯಾಜ್ಯಗಳನ್ನು ಬಗೆಹರಿಸಲು ಸೇರುವ ಜಾತಿ ಮುಖ್ಯಸ್ಥರ ಸಭೆ.

caste patriotism: ಜಾತ್ಯಾಭಿಮಾನ. ತನ್ನ ಜಾತಿಯೇ ಪರಮ ಶ್ರೇಷ್ಠವೆಂಬ ಅಭಿಮಾನ.

casteism : ಜಾತಿವಾದ; ಜಾತೀಯತೆ.

casteless society: ಜಾತಿರಹಿತ ಸಮಾಜ.

casting vote: ನಿರ್ಣಾಯಕ ಮತ. ಶಾಸಕಾಂಗದಲ್ಲಿ ಯಾವುದೇ ಮಸೂದೆಯನ್ನು ಮತಕ್ಕೆ ಹಾಕಿದಾಗ ಅದರ ಪರ ಹಾಗೂ ವಿರೋಧವಾಗಿ ಸಮಬಲ ವ್ಯಕ್ತವಾಗಿ ಬಿಕ್ಕಟ್ಟು ಉಂಟಾದಾಗ ಈ ಬಿಕ್ಕಟ್ಟನ್ನು ನಿವಾರಿಸಲು ಸಭಾಪತಿಯು ಚಲಾಯಿಸುವ ಮತ. ಅಂತಿಮವಾಗಿ ಆ ಮಸೂದೆಯ ಸೋಲು ಅಥವಾ ಗೆಲುವು ಸಭಾಪತಿಯ ಮತದಾನದ ಮೂಲಕ ನಿರ್ಣಯಿಸಲ್ಪಡುತ್ತದೆ.

casual contradiction: ಅನಿಶ್ಚಿತ ವಿರೋಧೋಕ್ತಿ; ಅನಿಯಮಿತ ಅಸಂಗತತೆ.

casual crowd: ಆಕಸ್ಮಿಕ ಜನಜಂಗುಳಿ; ಅನಿಶ್ಚಿತ ಜನಜಂಗುಳಿ.

casual occupation: ಸಾಂದರ್ಭಿಕ ವೃತ್ತಿ.

catalyst : ಉತ್ಪ್ರೇರಕ; ವೇಗವರ್ಧಕ.

catastrophic reaction: ಆಘಾತ ಪ್ರತಿಕ್ರಿಯೆ. ವಿನಾಶಕಾರಿ ಪ್ರತಿಕ್ರಿಯೆ. ಪರಿಸರದ ಒತ್ತಡಗಳಿಗೆ ಹೊಂದಿಕೊಳ್ಳಲಾರದೆ ಮಾನಸಿಕ ತೊಂದರೆಗಳಿಗೆ ತುತ್ತಾಗುವುದು.

catastrophic self devaluation: ಆತ್ಮಘಾತಕ ಅಪಮೌಲ್ಯೀಕರಣ.

catastrophism: ಉತ್ಪಾತ ವಾದ. ಭೂಮಿಯ ಚರಿತ್ರೆಯು ಮಹಾ ಪ್ರಳಯಗಳ ಸರಣಿಯಿಂದ ಕೂಡಿದೆ ಎಂಬ ನಂಬಿಕೆ.

catatonia: ಬಿಗುವೇರಿಳಿತ; ಮನೋವಿದಳನ. ಸೆಟೆತ ಮತ್ತು ಉದ್ರಿಕ್ತತೆ ಇದರ ಮುಖ್ಯ ಲಕ್ಷಣಗಳು. ಈ ರೋಗಕ್ಕೆ

ಒಳಗಾದವರು ನಕಾರಾತ್ಮಕರು. ಕೆಲವು ವೇಳೆ ಇಡೀ ಸ್ನಾಯು ರಚನೆ ತೀರ ಗಡಸು ಅಥವಾ ಮೆದು ಆಗಿರುತ್ತದೆ. ಹಿಂದು ಮುಂದಿಲ್ಲದ ಮತ್ತು ಮಾಡಿದ್ದನ್ನೇ ಮಾಡುವ ವರ್ತನೆ ಸಾಮಾನ್ಯ.

catatonic schizophrenia: ಸೆಡೆತ ಮನೋವಿದಳನ; ಅನಿರೀಕ್ಷಿತ ಮನೋ ವಿಕೃತಿ; ಇದ್ದಕ್ಕಿದ್ದಂತೆ ಬರುವ ಮನೋ ವಿದಳನ. ಮೈ ಕೈಗಳ ಬಿಗಿತವೂ ವಿಚಿತ್ರ ಭಂಗಿಯಲ್ಲಿ ರೋಗಿ ನಿಲ್ಲುವ ಹಾಗೆ ಮಾಡುವಷ್ಟು ತೀವ್ರವಾಗಿರುತ್ತದೆ.

catatonic stupor: ಅತಿ ಕಡಿಮೆ ಚಟುವಟಿಕೆಯ ಸ್ಥಿತಿ.

categorical attitude: ನಿರುಪಾಧಿಕ (ಪ್ರಭೇದಕ) ಮನೋವೃತ್ತಿ.

categorical contact: ನಿರುಪಾಧಿಕ ಸಂಪರ್ಕ.

categorical imperative: ನಿರುಪಾಧಿಕ ವಿಧಿ.

categorical judgement: ನಿರುಪಾಧಿಕ ನಿರ್ಣಯ.

categorization: ವಿಭಾಗೀಕರಣ. ವಸ್ತುಗಳನ್ನು ಒಂದಲ್ಲ ಒಂದು ಪ್ರಭೇದ ದಲ್ಲಿ ಸೇರಿಸಲಾಗುವಂತೆ ವಿಂಗಡಿಸುವುದು.

catharsis: ಭಾವ ಶುದ್ಧೀಕರಣ; ಭಾವ ಪ್ರಕಟನೆ. ಭಾವನೆಗಳನ್ನು ಸಂಪೂರ್ಣವಾಗಿ ಪ್ರಕಟಗೊಳಿಸಲು ಸಹಾಯಕವಾಗುವ ಭಾವಪ್ರಕಟಣಾ ವಿಧಾನಗಳು. ಮಾತ ನಾಡುವ ಮೂಲಕ ಅದುಮಿಟ್ಟ ಭಾವನೆ ಗಳನ್ನು ಹೊರಗೆಡಹುವಂತೆ ಮಾಡುವುದು.

catholic: ೧. ಮನೋವಿಕಾಸ; ಎಲ್ಲರಿಗೂ ಸೇರಿದ ವಿಶಾಲ ಹೃದಯದ ಉದಾರ ಮನೋಭಾವನೆ. ೨. ಕ್ರಿಶ್ಚಿಯನ್ ಧರ್ಮದ ಒಂದು ಪಂಥ.

caucasian: ಕಕೇಷಿಯನ್ ಜನಾಂಗ. ಕಕೇಶಿಯನ್ ಬೆಟ್ಟ ಪ್ರದೇಶದ ಜನರ ಭಾಷಾ ಗುಂಪು. ಇವರು ಬಿಳಿಯ ಮೈಬಣ್ಣ ಉಳ್ಳವರು.

caucus: ಗುಪ್ತಕೂಟ. ಚುನಾವಣೆಗಾಗಿ ಅಭ್ಯರ್ಥಿಗಳನ್ನು ಆರಿಸಲು, ಶಾಸಕಾಂಗ ಅಥವಾ ನೀತಿ ರೂಪಿಸುವ ಇತರ ಅಂಗ ಗಳಲ್ಲಿ ಪರಿಗಣಿಸದೇ ಬಾಕಿ ಉಳಿದಿರುವ ವಿಷಯಗಳನ್ನು ಚರ್ಚಿಸಲು, ರಾಜಕೀಯ ತಂತ್ರಗಳನ್ನು ನಿರ್ಧರಿಸಲು ಅಧಿಕಾರ ಹೊಂದಿದ ರಾಜಕೀಯ ಪಕ್ಷದೊಳಗಿನ ಒಳಕೂಟ.

causal adequacy: ಸಾಂದರ್ಭಿಕ ಪರಿಪೂರ್ಣತೆ.

causal explanation: ಸಾಂದರ್ಭಿಕ ವಿವರಣೆ; ಕಾರ್ಯಕಾರಣ ವಿವರಣೆ.

causal hypothesis: ಕಾರ್ಯಕಾರಣ ಸಂಬಂಧದ ಊಹನೆ.

causal model: ಕಾರಣ ಮಾದರಿ. ಕಾರ್ಯಕಾರಣ ಸಂಬಂಧದ ಮಾದರಿ.

causal relationship: ಕಾರ್ಯಕಾರಣ ಸಂಬಂಧ. ಒಂದು ಕಾರಣದ ಪರಿಣಾಮ ವಾಗಿ ಉಂಟಾಗುವ ಇನ್ನೊಂದು ಸಂಬಂಧ.

causal system: ಕಾರ್ಯಕಾರಣ ವ್ಯವಸ್ಥೆ.

causation: ನೋಡಿ: causal explanation.

causative factor: ಕಾರಕಾಂಶ.

cause and effect: ಕಾರಣ ಮತ್ತು

ಪರಿಣಾಮ. ವೈಜ್ಞಾನಿಕ ವಿಧಾನದಲ್ಲಿ ಯಾವುದೇ ಸಂಗತಿಯ ಕಾರಣ ಮತ್ತು ಪರಿಣಾಮಗಳ ಅಧ್ಯಯನವೇ ಪ್ರಧಾನ ಲಕ್ಷ್ಯವಾಗಿದೆ.

cave art: ಗುಹಾ ಕಲಾಕೃತಿ. ಗುಹೆಗಳಲ್ಲಿ ಲಭ್ಯವಿರುವ ಕಲಾಕೃತಿ.

cease-fire: ಕದನ ವಿರಾಮ. ಎರಡು ಶಕ್ತಿಗಳು (ರಾಷ್ಟ್ರಗಳು) ರಾಜಿ ಸೂತ್ರದ ಪ್ರಸ್ತಾವ ಬಂದಾಗ ಪರಸ್ಪರ ಕಾದಾಡುವುದನ್ನು ತಾತ್ಕಾಲಿಕವಾಗಿ ನಿಲ್ಲಿಸುವುದು.

cephalic index: ಶೀರ್ಷ ಸಂಬಂಧೀ ಸೂಚಕ.

cession power: ತ್ಯಜಿಸಿ ಹೊರಗೆ ಹೋಗುವ ಅಧಿಕಾರ; ತ್ಯಾಜ್ಯಾಧಿಕಾರ. ಒಂದು ಒಕ್ಕೂಟದ ಸದಸ್ಯ ರಾಷ್ಟ್ರಗಳು ಯಾವ ಸಂದರ್ಭದಲ್ಲಾದರೂ ಒಕ್ಕೂಟವನ್ನು ಬಿಟ್ಟು ಹೋಗುವ ಅಧಿಕಾರ ಅಥವಾ ಸ್ವಾತಂತ್ರ್ಯ.

ceiling on income and property: ಆಸ್ತಿ ಮತ್ತು ಆದಾಯದ ಮೇಲೆ ಮಿತಿ.

cella: ಗರ್ಭಗೃಹ; ಕೇಂದ್ರಭಾಗ.

cenozoic age : ಜೀವವಿಕಾಸ ಯುಗ.

censorial tribunal: ದೋಷ ವಿಮರ್ಶನಾ ಮಂಡಳಿ; ಸೆನ್ಸಾರ್ ಮಂಡಳಿ.

censorship: ದೋಷ ವಿಮರ್ಶನ. ಸಾರ್ವಜನಿಕ ನೈತಿಕತೆ ಮತ್ತು ರಾಷ್ಟ್ರದ ಭದ್ರತೆಗೆ ಧಕ್ಕೆಯುಂಟು ಮಾಡುವ ಹಾಗೂ ಹಿಂಸೆ-ಅಪರಾಧಗಳನ್ನು ಉತ್ತೇಜಿಸುವ ಭಾಷಣಗಳು, ಸಭೆಗಳು, ಪ್ರಕಟಣೆಗಳು, ಚಲನಚಿತ್ರಗಳು, ನಾಟಕಗಳು, ರೇಡಿಯೋ, ದೂರದರ್ಶನ ಮತ್ತಿತರ ಸಮೂಹ ಮಾಧ್ಯಮಗಳ ಮೇಲೆ ಪೂರ್ವಭಾವಿಯಾಗಿ ವಿಧಿಸುವ ನಿರ್ಬಂಧ.

censure: ವಾಗ್ದಂಡನೆ; ಛೀಮಾರಿ.

censure motion: ಖಂಡನಾ ಗೊತ್ತು ವಳಿ. ಸರಕಾರವು ತನ್ನ ಆಡಳಿತ ವೈಖರಿಯಲ್ಲಿ ವಿಫಲವಾದಾಗ ಶಾಸಕಾಂಗದ ಸದಸ್ಯರು (ಸಾಮಾನ್ಯವಾಗಿ ವಿರೋಧ ಪಕ್ಷದ ಸದಸ್ಯರು) ಮಂಡಿಸುವ ಗೊತ್ತು ವಳಿ. ಇದು ಸರಕಾರದ ಕಾರ್ಯವೈಖರಿಯನ್ನು ಖಂಡಿಸುವ ಗೊತ್ತುವಳಿಯಾಗಿರುತ್ತದೆ.

census: ಜನಗಣತಿ. ಒಂದು ನಿರ್ದಿಷ್ಟ ಕಾಲದ ಅಂತರದಲ್ಲಿ ನಡೆಸಲಾಗುವ ಜನಸಂಖ್ಯೆಯ ಪೂರ್ಣಮಾಹಿತಿ ಸಂಗ್ರಹ. ಭಾರತದಲ್ಲಿ ೧೮೭೧ ರ ಬಳಿಕ ಪ್ರತಿ ಹತ್ತು ವರ್ಷಗಳಿಗೊಮ್ಮೆ ಜನಗಣತಿ ನಡೆಸಲಾಗುತ್ತದೆ.

census of income method: ವರಮಾನ ಗಣತಿಯ ವಿಧಾನ. ಆದಾಯ ಗಣತಿ ವಿಧಾನ.

census of production method: ಉತ್ಪಾದನಾ ಗಣತಿಯ ವಿಧಾನ.

census tract: ಜನಗಣತಿ ಪ್ರದೇಶ.

centile score: ಶತಾಂಶ ಪ್ರಾಪ್ತಾಂಕ.

central bureau: ಕೇಂದ್ರಿಯ ವಿಭಾಗ.

central chancellory: ಕೇಂದ್ರ ಆರ್ಥಿಕ ಶಾಖೆ.

central conflict: ಆತ್ಮಕೇಂದ್ರಿತ ತುಮುಲ. ತನ್ನ ಇರುವಿಕೆ ಮತ್ತು ತಾನು ಹೇಗಿರಬೇಕು ಎಂಬ ಆದರ್ಶ ಕಲ್ಪನೆಗಳ ನಡುವಣ ತಿಕ್ಕಾಟ.

central excise duty: ಕೇಂದ್ರ ಅಬಕಾರಿ ಸುಂಕ.

central finance: ಕೇಂದ್ರ ಹಣಕಾಸು.

Central Intelligence Agency (CIA): ಕೇಂದ್ರೀಯ ಗೂಢಚರ್ಯೆ ಸಂಸ್ಥೆ. ದೇಶದೊಳಗೆ ಹಾಗೂ ವಿದೇಶಗಳಲ್ಲಿ ರಾಜಕೀಯ, ಆರ್ಥಿಕ ಮತ್ತು ಸೈನಿಕ ಕ್ಷೇತ್ರಗಳ ಮಾಹಿತಿ ಸಂಗ್ರಹಿಸಲು ೧೯೪೭ ರಲ್ಲಿ ಸ್ಥಾಪಿಸಲ್ಪಟ್ಟ ಅಮೇರಿಕಾ ಸಂಯುಕ್ತ ಸಂಸ್ಥಾನದ ಒಂದು ಸಂಸ್ಥೆ.

central legislative assembly: ಕೇಂದ್ರ ಶಾಸನ ಸಭೆ.

central legislature: ಕೇಂದ್ರ ಶಾಸಕಾಂಗ.

central list: ಕೇಂದ್ರ ಪಟ್ಟಿ. ಕೇಂದ್ರ ಸರಕಾರದ ಸಂಪೂರ್ಣ ಕಾರ್ಯವ್ಯಾಪ್ತಿಗೆ ಒಳಪಡುವ ವಿಷಯಗಳನ್ನೊಳಗೊಂಡ ಪಟ್ಟಿ. ಇನ್ನೆರಡು ಪಟ್ಟಿಗಳಿಗಾಗಿ ನೋಡಿ: state list concurrent list.

central personnel agency: ಕೇಂದ್ರ ಸೇವಾ ಸಿಬ್ಬಂದಿ ವರ್ಗ.

central quality control laboratory: ಕೇಂದ್ರ ಗುಣಮಟ್ಟ ನಿಯಂತ್ರಣದ ಪ್ರಯೋಗಶಾಲೆ. ಕೃಷಿ ಸರಕುಗಳ ಗುಣ ಮಟ್ಟ ಮತ್ತು ಪರಿಶುದ್ಧತೆಯನ್ನು ಪರೀಕ್ಷಿಸುವುದಕ್ಕಾಗಿ ನಾಗಪುರದಲ್ಲಿ ಸ್ಥಾಪಿಸಿರುವ ಪ್ರಯೋಗ ಶಾಲೆ.

central-state financial relation: ಕೇಂದ್ರ-ರಾಜ್ಯಗಳ ಹಣಕಾಸು ಸಂಬಂಧ.

central tendency: ಕೇಂದ್ರೀಯ ಒಲವು; ಕೇಂದ್ರೀಯ ಪ್ರವೃತ್ತಿ. ಇದು ಸಾಮಾಜಿಕ ಸಂಖ್ಯಾಶಾಸ್ತ್ರದಲ್ಲಿ ಬರುವ ಅಧ್ಯಯನಾಂಶ ವಾಗಿದೆ.

centralization: ಕೇಂದ್ರೀಕರಣ. ರಾಜಕೀಯ ಕ್ಷೇತ್ರ ಅಥವಾ ಆಡಳಿತ ಕ್ಷೇತ್ರದಲ್ಲಿ ಅಧಿಕಾರವು ಒಬ್ಬ ವ್ಯಕ್ತಿ ಅಥವಾ ಒಂದು ಅಂಗದಲ್ಲಿ ಕೇಂದ್ರೀಕೃತ ವಾಗಿರುವುದು. ಉದಾ: ಶಾಸನೀಯ, ಕಾರ್ಯಾಂಗೀಯ ಹಾಗೂ ನ್ಯಾಯಿಕ ಅಧಿಕಾರಗಳೆಲ್ಲವೂ ಕೇಂದ್ರ ಸರಕಾರವೊಂದರಲ್ಲೇ ಕೇಂದ್ರೀಕೃತವಾಗಿರುವುದು.

centralization of finance: ಹಣ ಕಾಸಿನ ಕೇಂದ್ರೀಕರಣ.

centralized administration: ಕೇಂದ್ರೀಕೃತ ಆಡಳಿತ.

centralized bureaucratic hierarchy: ಕೇಂದ್ರೀಕೃತ ಅಧಿಕಾರಶಾಹಿ ಶ್ರೇಣಿ.

centralized federal system: ಕೇಂದ್ರೀಕೃತ ಸಂಯುಕ್ತ ಪದ್ಧತಿ; ಬಲಿಷ್ಠ ಕೇಂದ್ರ ಸರಕಾರವಿರುವ ಸಂಯುಕ್ತ ಪದ್ಧತಿ.

centralized planning: ಕೇಂದ್ರೀಕೃತ ಯೋಜನೆ.

centralized service: ಕೇಂದ್ರೀಕೃತ ಸೇವೆ.

centre and periphery: ಕೇಂದ್ರ ಮತ್ತು ಪರಿಧಿ. ಯಾವುದೇ ಪ್ರದೇಶದಲ್ಲಾಗುವ ಪರಿವರ್ತನೆಗಳಿಗೆ ಅದರ ಕೇಂದ್ರದಲ್ಲಾಗುವ ಬದಲಾವಣೆಗಳೇ ಕಾರಣವೆಂಬ ಸಿದ್ಧಾಂತದಲ್ಲಿ ಈ ಪರಿಕಲ್ಪನೆಯನ್ನು ಬಳಸಲಾಗಿದೆ.

centrifugal: ಕೇಂದ್ರಾಪಗಾಮಿ; ಕೇಂದ್ರದಿಂದ ಹೊರಚಿಮ್ಮುವ.

centrifugal force: ಕೇಂದ್ರಾಪಗಾಮಿ ಬಲ.

centripetal: ಕೇಂದ್ರಾಭಿಗಾಮಿ. ಕೇಂದ್ರದೆಡೆಗೆ ಆಕರ್ಷಿಸುವ.

centripetal force: ಕೇಂದ್ರಾಭಿಗಾಮಿ ಬಲ.

cerebral palsy: ಮಿದುಳಿನ ಪಾರ್ಶ್ವ ರೋಗ. ಮಿದುಳಿನ ತೊಂದರೆಯಿಂದ ಪಾರ್ಶ್ವವಾಯು ಬಡಿದಂತಾಗಿ ಅಂಗಾಂಗಗಳ ಬಲಹೀನತೆ ಉಂಟಾಗುತ್ತದೆ. ಜೊತೆಗೆ ಬುದ್ಧಿಮಾಂದ್ಯತೆಯ ಲಕ್ಷಣಗಳೂ ಕಾಣಿಸಬಹುದು.

cerebrotonia: ಪ್ರಮಸ್ತಿಷ್ಕ ಪ್ರಧಾನತೆ.

ceremonial rite: ಸಂಸ್ಕಾರ ವಿಧಿ.

ceremonial specialist: ಪೂಜಾರಿ; ಪುರೋಹಿತ.

ceremony of swearing: ಪ್ರಮಾಣ ವಚನ ಸ್ವೀಕಾರ ಸಮಾರಂಭ.

certification: ದೃಢೀಕರಣ; ಪ್ರಮಾಣೀಕರಣ; ಸಮರ್ಥನಾಧಿಕಾರ ಪ್ರಯೋಗ.

certified school: ಪ್ರಮಾಣಿತ ಶಾಲೆ. ಬಾಲಾಪರಾಧಿಗಳ ನಡತೆಯ ಸುಧಾರಣೆಗಾಗಿ ಇರುವ ಶಾಲೆಯಲ್ಲಿ ಎರಡು ವಿಧಗಳಿವೆ. ೧. ಕಿರಿಯರ ಶಾಲೆ : ೧೨ ವರ್ಷದೊಳಗಿನ ಮಕ್ಕಳ ಈ ಶಾಲೆಯಲ್ಲಿ ಸಾಮಾನ್ಯ ಜ್ಞಾನದ ಬಗೆಗೆ ಕಲಿಸಲಾಗುತ್ತದೆ. ೨. ಹಿರಿಯರ ಶಾಲೆ: ೧೨ ರಿಂದ ೧೬ ವರ್ಷ ದೊಳಗಿನ ಮಕ್ಕಳಿರುವ ಈ ಶಾಲೆಯಲ್ಲಿ ವೃತ್ತಿ ಶಿಕ್ಷಣ ನೀಡಲಾಗುತ್ತದೆ. ಸಾಮಾನ್ಯ ವಾಗಿ ಬಾಲಕ, ಬಾಲಕಿಯರಿಗೆ ಪ್ರತ್ಯೇಕ ಶಾಲೆಗಳಿರುತ್ತವೆ.

certiorari: ಆಜ್ಞಾಪತ್ರ. ಕೆಳಗಿನ ನ್ಯಾಯಾಲಯ ತೀರ್ಮಾನಿಸಿದ ವಿವಾದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಮೇಲಿನ ನ್ಯಾಯಾಲಯದ ಪರಿಶೀಲನೆಗಾಗಿ ಒಪ್ಪಿಸುವಂತೆ ಕೇಳುವ ನ್ಯಾಯಾಲಯದ ಆಜ್ಞಾಪತ್ರ.

cess: ಚಿಲ್ಲರೆ ತೆರಿಗೆ; ಪಟ್ಟಿ ತೆರಿಗೆ; ಮೇಲು ತೆರಿಗೆ

cessationist minorities: ವಿಘಟನಾತ್ಮಕ ಅಲ್ಪಸಂಖ್ಯಾತರು.

ceteris paribus: 'ಸದ್ಯದ ಸ್ಥಿತಿ ಇದ್ದಂತೆ ಇರುವುದಾದರೆ'; 'ಇತರ ವಿಷಯಗಳು ಬದಲಾಗದೇ ಇದ್ದಾಗ'. ಇದು ಸಮಾಜ ವಿಜ್ಞಾನಗಳಲ್ಲಿ ಸಿದ್ಧಾಂತಗಳನ್ನು ಮಂಡಿಸುವಾಗ ಉಪಯೋಗಿಸುವ ತಳಹದಿ ವಾಕ್ಯ.

chain reaction: ಸರಪಣಿ ಪ್ರತಿಕ್ರಿಯೆ. ಒಂದು ಕ್ರಿಯೆಯ ಪರಿಣಾಮವಾಗಿ ಒಂದು ಇನ್ನೊಂದು ಹೀಗೆ ಸರಣಿ ಪ್ರತಿಕ್ರಿಯೆಗಳುಂಟಾಗುವುದು.

chain tale: ಸರಣಿ ಕತೆ. ವಸ್ತುಗಳ, ಘಟನೆಗಳ ಅಥವಾ ವ್ಯಕ್ತಿಗಳೊಳಗಿನ ನಿರ್ದಿಷ್ಟ ಸಂಬಂಧದ ಸಮಾನ ಲಕ್ಷಣ ಸ್ವಭಾವಗಳನ್ನು ಹೇಳುವ ಜನಪದ ಕತೆ.

chairman: ಸಭಾಧ್ಯಕ್ಷ. ಸಭೆಯ ಕಾರ್ಯಕಲಾಪಗಳನ್ನು ಸಭೆಯ ನೀತಿ ನಿಯಮಾವಳಿಗನುಸಾರವಾಗಿ ಸುಸೂತ್ರವಾಗಿ ನಡೆಸಿಕೊಂಡು ಬರುವ ವ್ಯಕ್ತಿ.

chaitya: ಚೈತ್ಯ. ಬೌದ್ಧರ, ಜೈನರ ಆರಾಧನಾ ಸ್ಥಳ ಅಥವಾ ಮಂದಿರ.

chaityalaya: ನೋಡಿ: chaitya.

chalcolithic civilization: ತಾಮ್ರ ಶಿಲಾಯುಗ; ತಾಮ್ರ ಪಾಷಾಣಯುಗ. ಕಬ್ಬಿಣಯುಗ ಪೂರ್ವದ ಹಂತ. ಹರಪ್ಪಾ (ಸಿಂಧೂ) ನಾಗರಿಕತೆ ಈ ಯುಗಕ್ಕೆ ಸಂಬಂಧಿಸಿದುದಾಗಿದೆ.

challenge and response: ಸವಾಲು ಮತ್ತು ಸ್ಪಂದನ. ನಾಗರಿಕತೆಯ ಬೆಳವಣಿಗೆ

ಯಲ್ಲಿ ಕಂಡುಬರುವ ಸವಾಲು ಹಾಗೂ ಅದಕ್ಕೆ ಪೂರಕವಾದ ಸ್ಪಂದನ.

chamber of commerce: ವಾಣಿಜ್ಯ ಮಹಾಮಂಡಳಿ.

chamber of princes: ರಾಜ ಮಂಡಳಿ.

chamber tomb: ಕೋಣೆ ಗೋರಿ.

chance error: ನೋಡಿ : accidental error.

chance factor: ಆಕಸ್ಮಿಕ ಅಂಶ; ಅನಿರೀಕ್ಷಿತ ಅಂಶ.

chance fluctuation: ಆಕಸ್ಮಿಕ ಏರಿ ಳಿತ.

chance quality: ಆಕಸ್ಮಿಕ ಗುಣ.

chancellor: ಕುಲಪತಿ. ವಿಶ್ವವಿದ್ಯಾಲಯಗಳ ಅತ್ಯುನ್ನತ ಸ್ಥಾನ. ಹೆಚ್ಚಾಗಿ ರಾಜ್ಯಗಳ ರಾಜ್ಯಪಾಲರು ವಿಶ್ವವಿದ್ಯಾಲಯಗಳ ಕುಲಪತಿಗಳಾಗಿರುತ್ತಾರೆ.

chancellor of exchequer: ಬ್ರಿಟನ್‌ನ ಅರ್ಥಮಂತ್ರಿಯನ್ನು ಕರೆಯುವ ಪದ.

change: ಬದಲಾವಣೆ; ಪರಿವರ್ತನೆ.

channels of communication: ಸಂದೇಶ ವಿನಿಮಯ ಮಾರ್ಗಗಳು; ಸಂಪರ್ಕ ಮಾರ್ಗಗಳು.

channels of processing: ಪ್ರಕ್ರಿಯೆಯ ಮಾರ್ಗಗಳು. ಆಡಳಿತ ಸಂಸ್ಥೆಯ ಗುರಿಗಳನ್ನು ಸಾಧಿಸುವ ಮಾರ್ಗಗಳು.

chant: ಮಟ್ಟು; ಧಾಟಿ; ತಾಳಬದ್ಧವಾದ ಹಾಡು.

Chapin social status scale: ಚಾಪಿನ್‌ನ ಸಾಮಾಜಿಕ ಸ್ಥಾನಮಾನದ ಮಾಪಕ. ವಾಸದ ಕೋಣೆಯ ಭೌತಿಕ ಉಪಕರಣಗಳ ಆಧಾರದ ಮೇಲೆ ಒಂದು ಕುಟುಂಬದ ಸಾಮಾಜಿಕ-ಆರ್ಥಿಕ ಸ್ಥಾನಮಾನವನ್ನು ನಿರ್ಧರಿಸುವ ಮಾಪಕ.

chaplet: ಬಾಸಿಂಗ; ಹಾರ. ಹಬ್ಬ-ಹರಿ ದಿನ, ಮದುವೆ-ಮುಂಜಿ ಇತ್ಯಾದಿ ಸಂಭ್ರಮಾಚರಣೆಗಳಲ್ಲಿ ಹಣೆಗೆ ಧರಿಸುವ ಹೂವಿನ ಹಾರ.

character: ಗುಣನಡತೆ; ನಡವಳಿಕೆ; ಚಾರಿತ್ರ್ಯ.

character dance: ಪಾತ್ರಧಾರಿ ನೃತ್ಯ. ನೃತ್ಯದಲ್ಲಿ ನೃತ್ಯಗಾರನು ಪ್ರಾಣಿಯ ಅಥವಾ ಬೇರೆ ವ್ಯಕ್ತಿಯ ಅಭಿವ್ಯಕ್ತಿ ಮಾಡುವ ವಿಧಾನ.

character formation: ಶೀಲರೂಪಣ; ಚಾರಿತ್ರ್ಯ ರೂಪಣ.

character structure: ನೋಡಿ: personality.

charge: ಆಪಾದನೆ; ವೆಚ್ಚ; ದರ.

charge-d-affairs: ವ್ಯವಹಾರಗಳ ಪಾರುಪತ್ಯಗಾರ; ಉಪರಾಯಭಾರಿ.

charge report: ಕಾರ್ಯಭಾರ ವರದಿ.

charge sheet: ಆರೋಪ ಪತ್ರ.

charisma: ಕರಿಷ್ಮಾ; ಅಪೂರ್ವ ಪ್ರಭಾವ. ಮಾನವಾತೀತ ಗುಣಗಳುಳ್ಳವರ ವರ್ಚಸ್ಸು.

charisma politics: ಜನಾಕರ್ಷಕ ರಾಜಕೀಯ; ಪ್ರಜಾಕ್ಷೇಮವನ್ನು ಸಾಧಿಸುವುದಾಗಿ ಭರವಸೆ ಇತ್ತು ಜನರನ್ನು ಮರುಳು ಮಾಡಿ ಮತಗಳಿಸಿ ಅಧಿಕಾರದ ಗದ್ದುಗೆ ಏರುವುದು.

charismatic authority: ಪ್ರಭಾವಯುತ ಅಧಿಕಾರ.

charismatic leadership: ಜನಾಕರ್ಷಕ ನಾಯಕತ್ವ; ಕರಿಷ್ಮಾಯುತ ನಾಯಕತ್ವ; ಪವಿತ್ರ ಧೀರೋದ್ದಾತ ಅಥವಾ

ಇನ್ನಾವುದೇ ಗುಣಲಕ್ಷಣಗಳಿಂದ ವ್ಯಕ್ತಿಯು ನಾಯಕನ ಸ್ಥಾನವನ್ನು ಪಡೆಯುವುದು. ಆತನು ಔಪಚಾರಿಕ ಸಂಘ-ಸಂಸ್ಥೆಗಳಲ್ಲಿ ಯಾವುದೇ ಸ್ಥಾನಮಾನಗಳನ್ನು ಹೊಂದಿರ ಬೇಕೆಂದಿಲ್ಲ. ಉದಾ: ಕ್ರಿಸ್ತ, ಬುದ್ಧ, ವಿವೇಕಾನಂದ, ಗಾಂಧಿ ಮೊದಲಾದವರು ಕರಿಷ್ಮಾಯುತ ನಾಯಕರು.

charismatic religious leader: ಆಕರ್ಷಕ ವ್ಯಕ್ತಿತ್ವವುಳ್ಳ (ವಿಶೇಷ ಗುಣ ಗಳುಳ್ಳ) ಧಾರ್ಮಿಕ ನಾಯಕ.

charitable service: ಔದಾರ್ಯ ಸೇವೆ.

charity : ಔದಾರ್ಯ.

charm: ಗೂಢಶಕ್ತಿ; ಚೆಲುವು. ಅತಿ ಮಾನುಷವೂ ನಿಗೂಢವೂ ಆದ ಮಾಟ.

chart: ಮಾಹಿತಿ ಚಿತ್ರ. ಸಂಖ್ಯಾ ಮಾಹಿತಿ ಗಳನ್ನು ರೇಖಾಚಿತ್ರ ರೂಪದಲ್ಲಿ ಹೊಂದಿಸಿ ಬರೆದ ನಕಾಶೆ.

charter: ಸನ್ನದು; ಘೋಷಣಾ ಪತ್ರ; ವಿಶ್ವಸಂಸ್ಥೆಯ ಸಂವಿಧಾನ. ಕೆಲವು ಹಕ್ಕು ಗಳು ಅಥವಾ ಸವಲತ್ತುಗಳನ್ನು ನೀಡುವ ಸರಕಾರದ ಔಪಚಾರಿಕ ದಾಖಲೆ.

charvaka: ಚಾರ್ವಾಕ. ನಾಸ್ತಿಕ ವಾದ ವನ್ನು ಪ್ರಚುರಪಡಿಸಿದ ಒಬ್ಬ ತತ್ವಜ್ಞ. ಭೌತಿಕ ವಾದವನ್ನು ಅನುಸರಿಸುವ ಬುದ್ಧನ ಕಾಲದ ಒಂದು ಪಂಥ.

chastity: ನೈತಿಕ ಪರಿಶುದ್ಧತೆ. ಉದಾ: ಕನ್ಯತ್ವ; ಬ್ರಹ್ಮಚರ್ಯ.

chaudhari: ಚೌಧರಿ; ಗ್ರಾಮದ ಒಬ್ಬ ಅಧಿಕಾರಿ.

chauvinism: ಉತ್ಕಟಾಭಿಮಾನ. ತನ್ನ ದೇಶ, ಜನಾಂಗ, ಲಿಂಗ ಇತ್ಯಾದಿಗಳ ಬಗ್ಗೆ ಅತಿಯಾದ ಅಭಿಮಾನ ಹೊಂದಿ ಇತರ ದೇಶಗಳು, ಜನಾಂಗಗಳು, ಲಿಂಗಿಗಳ ಬಗ್ಗೆ ತಾತ್ಸರ ಭಾವನೆ ಹೊಂದಿರುವುದು. ಇದು ಕೆಲವೊಮ್ಮೆ ದುರಭಿಮಾನವಾಗಿ ಅಭಿವ್ಯಕ್ತ ವಾಗುತ್ತದೆ. ಉದಾ: ನೋಡಿ: male chauvinism.

cheap currency: ದುರ್ಬಲ ಹಣ. ಕೊಳ್ಳುವ ಸಾಮರ್ಥ್ಯ ಕಡಿಮೆ ಇರುವ ಹಣ. ಉದಾ : ಡಾಲರಿನ ಮುಂದೆ ರೂಪಾಯಿ.

cheap money policy: ಅಗ್ಗದ ಹಣದ ನೀತಿ; ಸುಲಭ ಹಣದ ನೀತಿ. ಬ್ಯಾಂಕುಗಳು ಬಡ್ಡಿಯ ದರವನ್ನು ಕಡಿಮೆ ಮಾಡಿ ಸಾಲ ವಿಸ್ತರಿಸುವ ಕ್ರಮ.

check list: ತನಿಖೆ ಪಟ್ಟಿ.

checks and balances: ತಡೆ ಮತ್ತು ಸಮತೋಲನ. ಸರಕಾರದ ಅಂಗಗಳು ತಮ್ಮ ಅಧಿಕಾರವನ್ನು ನಿರಂಕುಶವಾಗಿ ಚಲಾಯಿಸು ವುದರ ವಿರುದ್ಧ ಪ್ರತಿಯೊಂದು ಅಂಗವೂ ಮತ್ತೊಂದು ಅಂಗಕ್ಕೆ ತಡೆಯಾಗಿ ಕಾರ್ಯ ನಿರ್ವಹಿಸುವುದು.

chemotherapy: ರಾಸಾಯನಿಕ ಚಿಕಿತ್ಸೆ. ರಾಸಾಯನಿಕ ಔಷಧಗಳ ಮೂಲಕ ಚಿಕಿತ್ಸೆ.

cheque: ಚೆಕ್ಕು; ಧನಾದೇಶ.

chief commissioner: ಮುಖ್ಯ ಆಯುಕ್ತ.

chief election commissioner: ಮುಖ್ಯಚುನಾವಣಾ ಆಯುಕ್ತ. ಚುನಾವಣಾ ಆಯೋಗದ ಮುಖ್ಯಸ್ಥ.

chief electoral officer: ಮುಖ್ಯ ಚುನಾವಣಾಧಿಕಾರಿ. ಪ್ರತಿಯೊಂದು ರಾಜ್ಯ ದಲ್ಲಿ ಚುನಾವಣಾ ಪ್ರಕ್ರಿಯೆಯನ್ನು ನಡೆಸಿ

ಕೊಂಡು ಬರುವವ. ಚುನಾವಣೆ ನಡೆಯುವಾಗ ಈತ ಚುನಾವಣಾ ಆಯೋಗಕ್ಕೆ ನೆರವಾಗುತ್ತಾನೆ.

chief executive: ಮುಖ್ಯ ಕಾರ್ಯ ನಿರ್ವಾಹಕ.

chief justice: ಮುಖ್ಯ ನ್ಯಾಯಾಧೀಶ.

chief minister: ಮುಖ್ಯಮಂತ್ರಿ.

chief whip: ಮುಖ್ಯ ಸಚೇತಕ. ವಿಧಾನ ಸಭೆಯಲ್ಲಿ ಮತದಾನದ ಸಂದರ್ಭದಲ್ಲಿ ಆಡಳಿತ ಪಕ್ಷದವರು ತಪ್ಪದೆ ಹಾಜರಿರಬೇಕಾಗಿಯೂ, ನಿರ್ದಿಷ್ಟ ವ್ಯಕ್ತಿಗೆ ಅಥವಾ ವಿಷಯಕ್ಕೆ ಮತ ನೀಡಬೇಕಾಗಿಯೂ ನಿರ್ಬಂಧಿಸುವ ಅಧಿಕಾರ ಇರುವಾತ. ಈತನದು ಸಚೇತಕಾಜ್ಞೆ.

child abuse: ಮಕ್ಕಳ ದುರ್ಬಳಕೆ ; ಶಿಶು ಶೋಷಣೆ.

child development centre: ಶಿಶು ಅಭಿವೃದ್ಧಿ ಕೇಂದ್ರ.

child centered education: ಶಿಶು ಕೇಂದ್ರಿತ ಶಿಕ್ಷಣ.

child centered school: ಶಿಶು ಕೇಂದ್ರಿತ ಶಾಲೆ.

child guidance clinic: ಶಿಶು ಸಲಹಾ ಚಿಕಿತ್ಸಾಲಯ; ಶಿಶು ಮಾರ್ಗದರ್ಶನ ಕೇಂದ್ರ.

child labour: ಬಾಲ ಕಾರ್ಮಿಕ.

child marriage: ಬಾಲ್ಯವಿವಾಹ. ಅಪ್ರಾಪ್ತ ವಯಸ್ಸಿನವರ ವಿವಾಹ.

child of evolution: ವಿಕಾಸದ ಕೂಸು. ವರ್ಷದಿಂದ ವರ್ಷಕ್ಕೆ ಸದಾ ಬೆಳೆಯುತ್ತಾ ಮತ್ತು ಅಭಿವೃದ್ಧಿ ಹೊಂದುತ್ತಾ ಬರುವಂತಹದು. ಈ ಪರಿಕಲ್ಪನೆಯನ್ನು ಬ್ರಿಟಿಷ್ ಸಂವಿಧಾನದ ಒಂದು ಲಕ್ಷಣವಾಗಿ ಹೇಳಲಾಗುತ್ತದೆ. ೧೪೦೦ಕ್ಕೂ ಹೆಚ್ಚು ವರ್ಷಗಳಿಂದ ಈ ಸಂವಿಧಾನವು ಸದಾ ಬೆಳೆಯುತ್ತಾ ಅಭಿವೃದ್ಧಿ ಹೊಂದುತ್ತಾ ಬಂದಿದೆ. ಹಿಂದಿನ ಸಂಪ್ರದಾಯ ಮತ್ತು ಸಂಸ್ಥೆಗಳನ್ನು ಆದಷ್ಟು ಕಡಿಮೆ ಬದಲಾವಣೆ ಮಾಡಿ ಪರಿವರ್ತಿತ ಕಾಲದ ಅವಶ್ಯಕತೆ ಗಳಿಗೆ ಸರಿಹೊಂದುವಂತೆ ಬದಲಾವಣೆ ಮತ್ತು ಬೆಳವಣಿಗೆ ಆಗಿರುವುದರಿಂದ ಇದನ್ನು 'ವಿಕಾಸದ ಕೂಸು' ಎನ್ನ ಲಾಗುತ್ತದೆ.

child psychology: ಶಿಶು ಮನೋವಿಜ್ಞಾನ; ಬಾಲ ಮನೋವಿಜ್ಞಾನ.

child sacrifice: ಶಿಶು ಬಲಿದಾನ, ಮಗುವನ್ನು ಸಂಪ್ರದಾಯಬದ್ಧವಾಗಿ ಕೊಲ್ಲುವುದು. ಹೆಚ್ಚು ಸಂತತಿ ದೊರಕಬೇಕೆಂದು ಪ್ರಥಮ ಸಂತಾನವನ್ನು ಕೊಲ್ಲುವ ಪದ್ಧತಿ ಕೆಲವು ಬುಡಕಟ್ಟುಗಳಲ್ಲಿತ್ತು.

child welfare: ಶಿಶು ಕಲ್ಯಾಣ.

child welfare centre: ಶಿಶು ಕಲ್ಯಾಣ ಕೇಂದ್ರ.

children born out of wedlock: ವಿವಾಹ ಬಾಹಿರ ಮಕ್ಕಳು.

China's woe: ಚೀನಾದ ಕಣ್ಣೀರು. ದುಃಖ ನದಿ ಎಂದು ಕರೆಯಲ್ಪಡುವ "ಹೊಯೆಂಗೋ" ನದಿ. ಇದನ್ನು ಅಲೆದಾಡುವ ನದಿ ಎಂದೂ ಕರೆಯಲಾಗುತ್ತದೆ.

chi-square test: ಕೈಸ್ಕೇರ್ ಪರೀಕ್ಷೆ. ಪ್ರಮೇಯವನ್ನು ಪರೀಕ್ಷಿಸಲು ಬಳಸುವ ಸಂಖ್ಯಾಶಾಸ್ತ್ರೀಯ ಪರೀಕ್ಷೆ.

chokidar: ಕಾವಲುಗಾರ; ಚೌಕೀದಾರ.

choleric temperament: ಪಿತ್ತ ಪ್ರಕೃತಿ; ಸಿಡುಕು ಸ್ವಭಾವ.

chopper: ಕಲ್ಲುಮಚ್ಚು; ಮಚ್ಚುಗತ್ತಿ.

chopping tool: ಬೃಹದಾಕಾರದ ಒರೆಯುವ ಮಚ್ಚು. ಇಂತಹ ಆಯುಧಗಳು ವಾಯುವ್ಯ ಭಾರತದಲ್ಲಿ ಬಹುವಾಗಿ ಬಳಕೆಯಲ್ಲಿದ್ದವು.

choral song: ಮೇಳಗೀತ.

chowki: ಚೌಕಿ; ಸುಂಕದಕಟ್ಟೆ.

Christian calendar: ಕ್ರಿಶ್ಚಿಯನ್ ಪಂಚಾಂಗ. ಕ್ರಿಸ್ತನ ಜನನದಿಂದ ಈ ಶಕವನ್ನು ಆರಂಭಿಸಲಾಗಿದೆ.

christianization: ಕ್ರಿಶ್ಚಿಯನೀಕರಣ.

chromosomes: ಬೀಜಾಣುಗಳು; ವರ್ಣತಂತುಗಳು.

chronic unemployment: ತೀವ್ರ ನಿರುದ್ಯೋಗ. ಹಿಂದುಳಿದ ದೇಶಗಳಲ್ಲಿ ಬಡತನದ ವಿಷವೃತ್ತದಿಂದಾಗಿ ಸರಕುಗಳ ಬೇಡಿಕೆ ಕಡಿಮೆ ಇರುವುದರಿಂದ ಉತ್ಪಾದನೆಯೂ ಕಡಿಮೆ ಇದ್ದು, ಬಹುಕಾಲದವರೆಗೆ ಕಾಣಿಸಿಕೊಳ್ಳುವ ನಿರುದ್ಯೋಗ.

chronogram: ಕಾಲಲೇಖನ. ನಿರ್ದಿಷ್ಟ ಸಂವತ್ಸರವನ್ನು ಸೂಚಿಸುವ ಶಬ್ದ. ವಿಜಯನಗರ ಶಾಸನದಲ್ಲಿ ಇದು ವಿಶೇಷವಾಗಿದೆ.

chronological approach: ಕಾಲಾಧಾರಿತ ವಿಶ್ಲೇಷಣೆ. ಕಾಲಾನುಗುಣ ವಿಶ್ಲೇಷಣೆ.

chronology: ಕಾಲಾನುಕ್ರಮಣಿಕೆ.

cinerary urn: ಅಸ್ಥಿಪಾತ್ರೆ; ಶವದಹನಾನಂತರದ ಅಸ್ಥಿಗಳನ್ನು ತುಂಬಿಡಲು ಬಳಸುವ ಮಡಕೆ. ಪೂರ್ವಭಾವಿ ಇತಿಹಾಸ ಕಾಲದ ಶವಸಂಸ್ಕಾರ ಪದ್ಧತಿಗಳಲ್ಲಿ ಒಂದು.

circle graph (chart): ವೃತ್ತರೇಖಾ ಚಿತ್ರ.

circuit of capital: ಬಂಡವಾಳದ ಆವರ್ತ. ಹೆಚ್ಚುವರಿ ಮೌಲ್ಯವನ್ನು ಹಾಗೂ ಬಂಡವಾಳದ ಪುನರುತ್ಪಾದನೆಯನ್ನು ಹೆಚ್ಚಿಸುವುದಕ್ಕೋಸ್ಕರ ಆವರ್ತ ಮತ್ತು ಉತ್ಪನ್ನದ ವಲಯಗಳ ಮೂಲಕ ಬಂಡವಾಳದ ಚಲನೆ.

circular causation: ಆವರ್ತಾಕಾರದ ಕಾರ್ಯಕಾರಣ.

circular cumulative causation: ಸಂಚಿತ ಆವರ್ತ ಬದಲಾವಣೆ; ಕೂಡಿಕೊಳ್ಳುವ ಆವರ್ತ ಬದಲಾವಣೆ.

circular flow of income: ಆದಾಯದ (ವರಮಾನದ) ವರ್ತುಲಾಕಾರದ ಪ್ರವಹಿಸುವಿಕೆ.

circular letter: ಸುತ್ತೋಲೆ.

circular manic depressive reaction: ಚಕ್ರಗತಿ ಉನ್ಮಾದ-ವಿಷಣ್ಣತಾ ಪ್ರತಿಕ್ರಿಯೆ.

circular movement: ಚಕ್ರಗತಿ ಚಲನೆ; ವೃತ್ತಾತ್ಮಕ ಚಲನೆ.

circular tale: ವೃತ್ತೀಯ ಕತೆ. ಕಥೆಯಲ್ಲಿ ವಸ್ತು, ಘಟನೆ ಇತ್ಯಾದಿಗಳ ನಿಯಮಿತ ಪುನರಾವರ್ತನೆ ಇರುವ ಜನಪದ ಕಥೆ.

circular training: ವೃತ್ತಮಾದರಿ ತರಬೇತಿ. ಹೊಸ ನೌಕರರು ಹಿರಿಯ ನೌಕರರ ಕಾರ್ಯವಿಧಾನವನ್ನು ನೋಡುತ್ತಾ ಅವರೊಂದಿಗೆ ದುಡಿಯುವುದರ ಮೂಲಕ ನಿಗದಿತ ಅವಧಿಯೊಳಗೆ ಸಂಸ್ಥೆಯ ವಿವಿಧ ವಿಭಾಗಗಳಲ್ಲಿ ಕಾರ್ಯಕೌಶಲದ ತರಬೇತಿ

ಪಡೆಯುವ ವಿಧಾನ. ಉದಾ : ಪ್ರೊಬೇಶನರಿ ಅವಧಿಯಲ್ಲಿ ಕಾರ್ಯಸಾಮರ್ಥ್ಯವನ್ನು ಸಾಧಿಸಿಕೊಳ್ಳುವ ತರಬೇತಿಯ ಅವಕಾಶ.

circular trend: ಆವರ್ತ ಪ್ರವೃತ್ತಿ. ಆವರ್ತ ಒಲವು.

circulating capital: ಆವರ್ತ ಬಂಡವಾಳ.

circulation of capital: ಬಂಡವಾಳದ ಆವರ್ತನೆ. ವ್ಯವಹಾರದಲ್ಲಿ ಹಣವು ಸರಕು ರೂಪಕ್ಕೆ ಬದಲಾಗುವ ಮತ್ತು ಸರಕು ಹಣದ ರೂಪಕ್ಕೆ ಬದಲಾಗುವ ಬಂಡವಾಳ ಚಲನೆಯ ಪ್ರಕ್ರಿಯೆ.

circulation of elites: ಗಣ್ಯರ ವರ್ತುಲ ಚಲನೆ. ಸಮಾಜದಲ್ಲಿ ಶ್ರೀಮಂತ ಹಾಗೂ ಆಡಳಿತ ವರ್ಗದ ಜನರು ಗಣ್ಯರೆನ್ನಿಸಿ ಕೊಂಡು ತಮ್ಮ ಸ್ಥಾನ ಭದ್ರತೆಗಾಗಿ ಉಪಾಯ ಮಾಡುತ್ತಿದ್ದಂತೆ ತಳವರ್ಗದಲ್ಲಿ ರುವವರು ಕ್ರಾಂತಿಯ ಮೂಲಕ ಗಣ್ಯರನ್ನು ಉರುಳಿಸಿ ಆಸ್ತಿ ಹಾಗೂ ಅಧಿಕಾರವನ್ನು ಪಡೆದು ಗಣ್ಯರೆನಿಸಿಕೊಳ್ಳುತ್ತಾರೆ. ಮುಂದೆ ಇವರೂ ಕ್ರಾಂತಿಯನ್ನು ಎದುರಿಸಿ ಉರುಳು ತ್ತಾರೆ. ಹೀಗೆ ಗಣ್ಯರ ವರ್ತುಲ ಚಲನೆ ನಡೆ ಯುತ್ತದೆಂಬುದು ಎಲ್‌ಫ್ರೆಡೊ ಪೆರೆಟೋನ ಸಿದ್ಧಾಂತವಾಗಿದೆ.

circumambulation: ಪ್ರದಕ್ಷಿಣೆ. ಪವಿತ್ರ ವಸ್ತುಗಳಿಗೆ ಹಾಗೂ ದೇವಸ್ಥಾನ ಗಳಿಗೆ ಎಡಬದಿಯಿಂದಾರಂಭಿಸಿ ಸುತ್ತು ಬರುವಿಕೆ ಅಂದರೆ ಪ್ರದಕ್ಷಿಣೆ ಹಾಕುವುದು.

circumambulatory passage: ನೋಡಿ : ambulatory passage.

circumcision: ಪುರುಷತ್ವುನಿ ಸಂಸ್ಕಾರ; ಸುನ್ನತಿ.

circumlocution: ಬಳಸು ವಿಧಾನ. ಸುತ್ತುಬಳಸು ವಿಧಾನಗಳಿಂದ ಕೂಡಿರುವ ಆಡಳಿತಶಾಹಿಯ ಕಾರ್ಯನಿರ್ವಹಣೆ.

circumstantial evidence: ಸಾಂದ ರ್ಭಿಕ ಸಾಕ್ಷ್ಯ.

circumstantiality: ಪ್ರಾಸಂಗಿಕತೆ.

cist: ೧. ಕಲ್ಲು ಗೋರಿ. ಕಲ್ಲಿನಲ್ಲಿ ಕೊರೆದ ಅಥವಾ ಬಂಡೆಗಳಿಂದ ಮುಚ್ಚಿದ ಗೋರಿ. ೨. ಪಾತ್ರ ಸಂಪುಟ. ಗ್ರೀಕ್ ರಹಸ್ಯ ಮತ ಪ್ರಕ್ರಿಯೆಗಳಲ್ಲಿ ಉಪಯೋಗಿಸುತ್ತಿದ್ದ ಪವಿತ್ರ ಪಾತ್ರೆಗಳನ್ನು ಇಡುತ್ತಿದ್ದ ಪೆಟ್ಟಿಗೆ.

citadel: ಪೌಳಿಗೋಡೆಯಿಂದ ಆವೃತ ವಾದ ಅರಮನೆ ಪ್ರದೇಶ.

citizen patron: ಪೌರಪೋಷಕ.

citizenship: ನಾಗರಿಕತ್ವ; ಪೌರತ್ವ.

city-father: ಪುರ-ಪಿತೃ.

city government: ನಗರಾಡಳಿತ; ಪುರ ಸರಕಾರ.

city planning: ನಗರ ಯೋಜನೆ.

city states: ನಗರ ರಾಷ್ಟ್ರಗಳು; ಪುರರಾಜ್ಯ ಗಳು. ನಿರ್ದಿಷ್ಟ ಭೂಪ್ರದೇಶ ಮತ್ತು ನಿರ್ದಿಷ್ಟ ಜನಸಂಖ್ಯೆ (೫೦೪೦) ಯನ್ನು ಒಳ ಗೊಂಡಿದ್ದ ಪ್ರಾಚೀನ ಗ್ರೀಕ್‌ನ ಸಣ್ಣ ರಾಜ್ಯ ಗಳು.

civil capacity: ಪೌರ ಅರ್ಹತೆ; ಪೌರ ಸ್ಥಾನ. ಭಾರತ ಸರಕಾರದ ಅಧೀನದಲ್ಲಿ ಅಥವಾ ರಾಜ್ಯ ಸರಕಾರದ ಅಧೀನದಲ್ಲಿ ಒಬ್ಬ ವ್ಯಕ್ತಿಯು ಹೊಂದಿರುವ ನಾಗರಿಕ ಸೇವಾ ಅರ್ಹತೆ.

civil code: ಪೌರಸಂಹಿತೆ; ನಾಗರಿಕ ಸಂಹಿತೆ.

civil contract: ಪೌರ ಒಪ್ಪಂದ.

civil court: ಪೌರ ನ್ಯಾಯಾಲಯ; ನಾಗರಿಕ ನ್ಯಾಯಾಲಯ. ಪೌರರ ಮೊಕದ್ದಮೆಗಳನ್ನು ವಿಚಾರಣೆಗೆ ಎತ್ತಿಕೊಳ್ಳುವ (ವಿಚಾರಣೆ ಮಾಡುವ) ನ್ಯಾಯಾಲಯ.

civil culture : ನಾಗರಿಕ ಸಂಸ್ಕೃತಿ.

civil disobedience: ಸವಿನಯ ಕಾನೂನುಭಂಗ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬ್ರಿಟಿಷರ ವಿರುದ್ಧ ಈ ಶಸ್ತ್ರಾಸ್ತ್ರ ರಹಿತ ಚಳವಳಿಯನ್ನು ನಡೆಸಲಾಯಿತು. ಉದಾ: ಉಪ್ಪಿನ ಸತ್ಯಾಗ್ರಹ.

civil equality: ನಾಗರಿಕ ಸಮಾನತೆ. ಜಾತಿ, ಮತ, ಪಂಥ, ಲಿಂಗ, ಅಂತಸ್ತು ಮೊದಲಾದ ಅಂಶಗಳ ಆಧಾರದ ಮೇಲೆ ಯಾವುದೇ ಭೇದವನ್ನು ಮಾಡದೆ ಎಲ್ಲರಿಗೂ ನೀಡಲಾಗುವ ಸರಿಸಮಾನ ಹಕ್ಕು.

civil expenditure: ಪೌರ ವೆಚ್ಚ; ಒಂದು ದೇಶದ ಆಡಳಿತಕ್ಕೆ ತಗಲುವ ವೆಚ್ಚ. ಇದರಲ್ಲಿ ಮಂತ್ರಿಗಳ ವೇತನ, ಭತ್ಯೆ, ಅಧಿಕಾರಿಗಳ ವೇತನ, ಪೋಲೀಸು ಇಲಾಖೆ ವೆಚ್ಚ, ನ್ಯಾಯಾಂಗದ ವೆಚ್ಚ ಮತ್ತು ಶಾಸಕಾಂಗದ ವೆಚ್ಚ ಸೇರಿರುತ್ತದೆ.

civil inattention: ನಾಗರಿಕ ಉಪೇಕ್ಷೆ; ನಾಗರಿಕ ಅನಾದರಣೆ.

civil intolerance: ಪೌರ ಅಸಹಿಷ್ಣುತೆ. ಇದು ಕ್ರಾಂತಿಕಾರಿ ಚಳವಳಿಗಳಿಗೆ ಹೇತುವಾಗುತ್ತದೆ.

civil law: ಪೌರ ಕಾನೂನು; ಪೌರ ಕಾಯಿದೆ.

civil liberty: ಪೌರ ಸ್ವಾತಂತ್ರ್ಯ.

civil list: ಸರಕಾರಿ ಅಧಿಕಾರಿಗಳ ಪಟ್ಟಿ.

civil procedure code: ನಾಗರಿಕ ಪ್ರಕ್ರಿಯಾ ಸಂಹಿತೆ.

civil registration: ಸಾರ್ವಜನಿಕ ನೋಂದಣಿ.

civil religion: ಪೌರ ಧರ್ಮ; ನಾಗರಿಕ ಧರ್ಮ.

civil right: ನಾಗರಿಕ ಹಕ್ಕು; ಪೌರಹಕ್ಕು.

civil rights movement: ನಾಗರಿಕ ಹಕ್ಕುಗಳ ಆಂದೋಲನ.

civil servants: ಆಡಳಿತಶಾಹಿಯ ನೌಕರರು.

civil service: ನಾಗರಿಕ ಸೇವೆ. ರಾಷ್ಟ್ರದ ಉದ್ದೇಶ ಮತ್ತು ಸರಕಾರದ ಕಾರ್ಯಗಳನ್ನು ವಾಸ್ತವವಾಗಿ ನಿರ್ವಹಿಸುವ ಮತ್ತು ದೇಶದ ನಾಗರಿಕ ವ್ಯವಹಾರಗಳನ್ನು ನಿರ್ವಹಿಸುವ ವಿಭಾಗ.

civil state: ಪೌರರಾಜ್ಯ.

civil society: ನಾಗರಿಕ ಸಮಾಜ; ಪೌರ ಸಮಾಜ.

civil tranquility: ಪೌರ ಶಾಂತಿ.

civil war: ಯಾದವೀ ಕಲಹ; ಯಾದವೀ ಯುದ್ಧ. ಒಂದು ದೇಶದಲ್ಲಿ ರಾಜ್ಯಾಧಿಕಾರ ಪಡೆದುಕೊಳ್ಳುವುದಕ್ಕಾಗಿ ವಿಭಿನ್ನ ವರ್ಗಗಳ ಮತ್ತು ಸಾಮಾಜಿಕ ತಂಡಗಳ ಮಧ್ಯೆ (ಇದರಲ್ಲಿ ರಾಷ್ಟ್ರೀಯ ಮತ್ತು ಧಾರ್ಮಿಕ ತಂಡಗಳೂ ಸೇರಿರುತ್ತವೆ) ನಡೆಯುವ ಸಾಯುಧ ಸಮರ. ಇದು ಸಾಮಾಜಿಕ ಬಿಕ್ಕಟ್ಟುಗಳಿಂದಾಗಿ ಉಂಟಾಗುವುದರಿಂದ ವರ್ಗ ಸಮರದ ಒಂದು ರೂಪವಾಗಿರುತ್ತದೆ.

civilian conservation corps: ನಾಗರಿಕ ರಕ್ಷಣಾ ದಳ; ಪೌರರಕ್ಷಣಾ ದಳ; ಫ್ರಾಂಕ್ಲಿನ್ ರೂಜ್‌ವೆಲ್ಟ್ ಈ ದಳವನ್ನು ರಚಿಸಿದನು.

civilian government: ಪೌರಸರಕಾರ.

civilization: ನಾಗರಿಕತೆ. ಒಂದು ಜನಾಂಗದ ಕಲೆ, ಸಂಸ್ಕೃತಿ, ವಿಜ್ಞಾನ ಮತ್ತು ರಾಜಕೀಯ ಬದುಕು.

civilized stage: ನಾಗರಿಕ ಹಂತ.

claimant: ಹಕ್ಕುದಾರ.

clairvoyance: ಅತೀಂದ್ರಿಯ ದೃಷ್ಟಿ. ದೂರ ಪ್ರಸಂಗಾನುಭೂತಿ; ಸ್ಪಷ್ಟ ದರ್ಶನ. ಹೊರಗಿನ ದೂರದ ಪ್ರಸಂಗಗಳನ್ನೂ ಪದಾರ್ಥಗಳನ್ನೂ ಇಂದ್ರಿಯಗಳ ನೆರವಿಲ್ಲದೆ ಅರಿಯುವ ವಿಧಾನ.

clan: ಕುಲ. ಈ ಪದ ಗೋತ್ರ, ಕುಟುಂಬ, ಬಳಿ, ವಂಶ ಮುಂತಾದವುಗಳಿಗೆ ಪರ್ಯಾಯವಾಗಿಯೂ ಉಪಯೋಗಿಸಲ್ಪಡುವುದಿದೆ.

class: ವರ್ಗ.

class awareness : ವರ್ಗ ಪ್ರಜ್ಞೆ.

class conflict: ವರ್ಗ ಕಲಹ; ವರ್ಗ ಸಂಘರ್ಷ.

class consciousness: ವರ್ಗ ಪ್ರಜ್ಞೆ. ಒಂದು ಸಾಮಾಜಿಕ ವರ್ಗದೊಂದಿಗೆ ತಾದಾತ್ಮ್ಯತೆ ಹಾಗೂ ಆ ವರ್ಗಕ್ಕೆ ಸೇರಿಕೊಂಡಿರುವೆವೆಂಬ ಪ್ರಜ್ಞೆ.

class criteria : ವರ್ಗ ನಿರ್ಧಾರಕಗಳು.

class crystallization: ವರ್ಗ ಘನೀಕರಣ. ಅನೇಕ ಸ್ತರಮಾಪಕಗಳ ಕಾರಣದಿಂದಾಗಿ ರೂಪುಗೊಂಡ ಹೆಚ್ಚು ಬಲವತ್ತರವಾದ ವರ್ಗವ್ಯವಸ್ಥೆ.

class determinants : ನೋಡಿ : class criteria.

class difference: ವರ್ಗ ವ್ಯತ್ಯಾಸ; ವರ್ಗ ಭೇದ.

class domination : ವರ್ಗ ಪ್ರಭುತ್ವ.

class endogamy: ವರ್ಗ ಒಳಬಾಂಧವ್ಯ.

class-extreme: ತುರೀಯ ವರ್ಗ. ಕೆಲವೇ ಮಂದಿ ಅತಿ ಶ್ರೀಮಂತ ಅಥವಾ ತೀರಾ ಬಡವರಾದ ವ್ಯಕ್ತಿಗಳ ವರ್ಗ.

class frequency: ವರ್ಗ ಆವೃತ್ತಿ.

class hegemony: ವರ್ಗ ಪ್ರಾಬಲ್ಯ. ವರ್ಗಾಧಾರಿತ ಸ್ತರವಿನ್ಯಾಸದ ಸಮಾಜದಲ್ಲಿ ಉಳ್ಳವರು ಬಡವರ ಮೇಲೆ ಸಾಧಿಸುವ ಪ್ರಾಬಲ್ಯ.

class identity: ವರ್ಗ ಅನನ್ಯತೆ.

class imagery: ವರ್ಗ ಪ್ರತಿಮೆ; ವರ್ಗ ಕಲ್ಪನೆ.

class interest consciousness: ವರ್ಗ ಹಿತಾಸಕ್ತಿ ಪ್ರಜ್ಞೆ.

class interval: ವರ್ಗ ಅಂತರ. ಸಾಮಾಜಿಕ ಸಂಖ್ಯಾಶಾಸ್ತ್ರದಲ್ಲಿ ಮಾಹಿತಿ ವಿಶ್ಲೇಷಣೆಗೆ ಅನುಕೂಲವಾಗುವಂತೆ ಸಂಗತಿಗಳನ್ನು ನಿರ್ದಿಷ್ಟ ಅಂತರದ ಗುಂಪುಗಳಾಗಿ ವಿಂಗಡಿಸುವಿಕೆ.

class location: ವರ್ಗನೆಲೆ.

class polarization: ವರ್ಗ ಧ್ರುವೀಕರಣ.

class rigidity: ವರ್ಗ ಕಾಠಿಣ್ಯ.

class situation: ವರ್ಗ ಸನ್ನಿವೇಶ. ಯಾವುದೇ ಒಂದು ದೇಶದಲ್ಲಿ ಸಾಪೇಕ್ಷ ವಾಗಿ ಒಂದು ಸಾಮಾಜಿಕ ವರ್ಗವು ಇರುವ ಆರ್ಥಿಕ-ರಾಜಕೀಯ-ಸಾಂಸ್ಕೃತಿಕ-ಸಾಮಾ ಜಿಕ ಸನ್ನಿವೇಶ.

class society: ವರ್ಗ ಸಮಾಜ. ವರ್ಗ ಘನೀಕರಣದ ಪರಿಣಾಮವಾಗಿ ಸಾಮಾಜಿಕ

ವರ್ಗಗಳ ನಡುವೆ ತೀವ್ರ ಭಿನ್ನತೆಗಳು ಕಂಡು ಬರುವ ಸಮಾಜ.

class solidarity: ವರ್ಗ ಐಕ್ಯಮತ್ಯ.

class-status consciousness: ವರ್ಗ ಸ್ಥಾನಮಾನದ ಪ್ರಜ್ಞೆ. ತನ್ನ ವರ್ಗದೊಂದಿಗೇ ತಾದಾತ್ಮ್ಯ ಹೊಂದಿರುವ ವರ್ಗ ಪ್ರಜ್ಞೆ.

class strata: ವರ್ಗ ಸ್ತರ.

class stratification: ವರ್ಗ ಸ್ತರ ವಿನ್ಯಾಸ.

class structure: ವರ್ಗ ರಚನೆ.

class structure consciousness: ವರ್ಗ ರಚನಾಪ್ರಜ್ಞೆ. ತನ್ನ ಸಮಾಜದ ಸಾಮಾಜಿಕ ವರ್ಗಗಳ ರಚನೆಯ ಕುರಿತ ಸಾಮಾನ್ಯ ಜ್ಞಾನ.

class struggle: ವರ್ಗ ಸಂಘರ್ಷ; ವರ್ಗ ಹೋರಾಟ. ಪರಸ್ಪರ ಸಾಂಗತ್ಯವಿಲ್ಲದ ಹಾಗೂ ರಾಜಿಯಾಗಲು ಸಾಧ್ಯವಿಲ್ಲದ ಹಿತಾಸಕ್ತಿಗಳನ್ನು ಹೊಂದಿರುವ ವರ್ಗಗಳ ನಡುವಣ ಹೋರಾಟ.

class war: ನೋಡಿ: class struggle.

classical: ಮಾರ್ಗಶೈಲಿಯ; ಶಾಸ್ತ್ರೀಯ.

classical approach: ಶಾಸ್ತ್ರೀಯ ದೃಷ್ಟಿಕೋನ; ಸಾಪ್ರದಾಯಿಕ ದೃಷ್ಟಿಕೋನ.

classical archaeology: ಸಾಂಪ್ರದಾಯಿಕ ಪ್ರಾಚೀನ ವಸ್ತು ಸಂಶೋಧನಾ ಶಾಸ್ತ್ರ. ಪ್ರಾಚೀನ ಮೆಡಿಟರೇನಿಯನ್ ಪ್ರದೇಶದ, ನಿರ್ದಿಷ್ಟವಾಗಿ ಗ್ರೀಕ್ ಮತ್ತು ರೋಮನ್ ನಾಗರಿಕತೆಯ ಕುರಿತು ಪುರಾತತ್ತ್ವ ಶಾಸ್ತ್ರದ ಅಧ್ಯಯನ.

classical school: ಸಾಂಪ್ರದಾಯಿಕ ಪಂಥ.

classical stage: ಸಾಂಪ್ರದಾಯಿಕ ಹಂತ. ಆರ್ಥಿಕ ಅಭಿವೃದ್ಧಿಯ ಹಂತಗಳ ಲ್ಲೊಂದು. ಮಿತವಾದ ಉತ್ಪಾದನಾ ಕಾರ್ಯಗಳೊಳಗೆ ಬೆಳೆದಿರುವಂತಹ ಸಮಾಜವನ್ನು ಸಾಂಪ್ರದಾಯಿಕ ಹಂತ ಎಂದು ಕರೆಯಲಾಗುತ್ತದೆ.

classical theories: ಸಾಂಪ್ರದಾಯಿಕ ಸಿದ್ಧಾಂತಗಳು.

classical theory of interest: ಬಡ್ಡಿಯ ಸಾಂಪ್ರದಾಯಿಕ ಸಿದ್ಧಾಂತ.

classical theory of unemployment: ಸಂಪ್ರದಾಯ ಪಂಥದ ನಿರುದ್ಯೋಗ ಸಿದ್ಧಾಂತ.

classicism: ಸಂಪ್ರದಾಯ ಪಂಥ.

classification : ವರ್ಗೀಕರಣ.

classification of estimates: ಅಂದಾಜುಗಳ ವರ್ಗೀಕರಣ.

classificatory kinship: ವರ್ಗೀಯ ರಕ್ತಸಂಬಂಧ. ವಿಭಿನ್ನ ವಂಶವಾಹಿ ಸಂಬಂಧಿಗಳನ್ನು ಒಂದೇ ರಕ್ತ ಸಂಬಂಧದ ಸ್ತರದಲ್ಲಿಡುವುದು.

classificatory kinship term: ಬಂಧುತ್ವದ ವರ್ಗೀಕೃತ ಪದ.

classificatory sister: ಬಂಧುತ್ವ ಸೋದರಿ.

classificatory term: ವರ್ಗೀಕೃತ ಸಂಬೋಧನಾ ಪದ. ಅನೇಕ ಸಂಬಂಧಿಗಳನ್ನು ಗುರುತಿಸುವ ರಕ್ತಸಂಬಂಧಿ ಪದ. ಉದಾ : ಅಕ್ಕ. ಅಣ್ಣ, ಮಾವ, ಅತ್ತೆ, ಅತ್ತಿಗೆ ಇತ್ಯಾದಿ.

classificatory terminology: ವರ್ಗೀಕೃತ ಪರಿಭಾಷೆ.

classless society: ವರ್ಗರಹಿತ ಸಮಾಜ.

clauses: ಕಲಮುಗಳು; ಉಪವಿಧಿಗಳು.

claustrophobia: ಬಂಧನ ಭೀತಿ. ಮುಚ್ಚಿದ ಕೊಠಡಿಗಳ, ಗೂಡು, ಗುಹೆ ಮುಂತಾದ ಕಿರಿದಾದ ಸ್ಥಳಗಳ ಭೀತಿ.

clay tablet: ಮಣ್ಣಿನ ಫಲಕ.

clearing account: ತೀರುವೆ ಖಾತೆ.

clearing agreement: ತೀರುವೆ ಒಪ್ಪಂದ.

clearing house: ತೀರುವೆ ಗೃಹ; ಪರಸ್ಪರ ಬೇಡಿಕೆ ಮತ್ತು ಹಕ್ಕುಗಳ ಲೆಕ್ಕಾಚಾರವನ್ನಾಧರಿಸಿದ ವಾಣಿಜ್ಯ ಹಾಗೂ ಇತರ ಕಾರ್ಯಗಳಿಗೆ, ದೇಶೀಯ ಅಥವಾ ಅಂತರ್ದೇಶೀಯವಾದ ಲಿಖಿತ ವ್ಯವಹಾರಗಳ ವ್ಯವಸ್ಥೆ.

clearing receipt: ತೀರುವೆ ರಶೀದಿ.

clergy: ಪುರೋಹಿತ ವರ್ಗ; ಕ್ರೈಸ್ತ ಪುರೋಹಿತ ವರ್ಗ.

clemency: ಕ್ಷಮಾದಾನ. ವ್ಯಕ್ತಿಯ ದುರ್ವರ್ತನೆಯನ್ನು ನ್ಯಾಯಾಲಯ ಸ್ಥಿರಪಡಿಸಿದಾಗಲೂ, ದೇಶದ ಮುಖ್ಯಸ್ಥನಿಗೆ ಮನವಿ ಮಾಡಿಕೊಂಡಾಗ ಅಪರಾಧಿಯನ್ನು ಮನ್ನಿಸಿ ಆತನಿಗೆ ನೀಡುವ ಕ್ಷಮೆ. ಉದಾ: ರಾಷ್ಟ್ರಪತಿಯವರ ಕ್ಷಮಾದಾನದ ಅಧಿಕಾರ.

cleptomania: ಚೌರ್ಯಾಸಕ್ತಿ.

client and clientalism: ನೋಡಿ patron-client relationship.

clientele: ಕಕ್ಷಿದಾರ.

climatic determinism: ವಾಯುಗುಣ ನಿರ್ಣಯವಾದ; ವಾಯುಗುಣ ನಿಯತಿವಾದ. ಸಾಮಾಜಿಕ ರಚನೆ ಹಾಗೂ ಮಾನವ ವರ್ತನಾ ವಿಧಾನಗಳನ್ನು ನಿರ್ಧರಿಸುವಲ್ಲಿ ವಾಯುಗುಣವು ಪ್ರಾಮುಖ್ಯ ಪಾತ್ರವಹಿಸುತ್ತದೆ ಎಂಬ ವಾದ.

climatic theory: ವಾಯುಗುಣ ಸಿದ್ಧಾಂತ. ವಾಯುಗುಣವು ಮನುಷ್ಯನ ವರ್ತನೆಗಳನ್ನು ಪ್ರಭಾವಿಸುತ್ತದೆಂಬ ವಾದ.

clinical approach: ಚಿಕಿತ್ಸಾತ್ಮಕ ಮಾರ್ಗ.

clinical legal education: ವೈದ್ಯಕೀಯ ಕಾನೂನು ಶಿಕ್ಷಣ.

clinical method: ಚಿಕಿತ್ಸಕ ವಿಧಾನ.

clinical psychology: ಚಿಕಿತ್ಸಕ ಮನಶ್ಶಾಸ್ತ್ರ; ನೈದಾನಿಕ ಮನೋವಿಜ್ಞಾನ; ವೈದ್ಯಕೀಯ ಮನೋವಿಜ್ಞಾನ. ಮಾನಸಿಕ ಪರೀಕ್ಷೆಗಳು ಮತ್ತು ವಿಧಾನಗಳನ್ನು ಶೈಕ್ಷಣಿಕ ಮತ್ತು ಔದ್ಯೋಗಿಕ ಸಲಹೆ ಸೂಚನೆಗಳ ನೀಡುವಿಕೆಯಲ್ಲಿ ಬಳಸುವುದು.

clinical sociology: ಚಿಕಿತ್ಸಕ ಸಮಾಜಶಾಸ್ತ್ರ.

clique: ಒಳಬಳಗ; ಸಂಚುಕೂಟ. ಎರಡು ಅಥವಾ ಅದಕ್ಕಿಂತ ಸ್ವಲ್ಪವೇ ಹೆಚ್ಚಿನ ಸದಸ್ಯರುಳ್ಳ ಸಣ್ಣ ಅನೌಪಚಾರಿಕ ಸಮೂಹ. ಸ್ನೇಹ ಹಾಗೂ ಪರಸ್ಪರ ಸಮಾನಾಸಕ್ತಿಗಳಿರುವ ಇಲ್ಲಿ ಯಾವುದೇ ಔಪಚಾರಿಕ ರಚನೆಗಳಿಲ್ಲ. ವಿಸ್ತೃತ ಔಪಚಾರಿಕ ಸಂಘಟನೆಯ ಒಳಗೂ ಕೆಲವೊಮ್ಮೆ ಈ ಬಗೆಯ ಅನೌಪಚಾರಿಕ ಸಂಚುಕೂಟಗಳಿರಬಹುದು.

closed class: ಅಮುಕ್ತ ವರ್ಗ; ಮುಚ್ಚಿದ ವರ್ಗ. ವೈಯಕ್ತಿಕ ಸಾಧನೆ, ಸಾಮರ್ಥ್ಯಗಳ ಬದಲಾಗಿ ವ್ಯಕ್ತಿಯ ಕೌಟುಂಬಿಕ ಸ್ಥಾನಮಾನದಿಂದ ನಿರ್ಧರಿಸಲ್ಪಡುವ ವರ್ಗ.

closed economic system: ಮುಚ್ಚಿದ ಅರ್ಥವ್ಯವಸ್ಥೆ.

closed hall: ಆವೃತ ಸಭಾಗೃಹ. ಗುಪ್ತ ಸಭೆಗಳನ್ನು ನಡೆಸುವ ಸುರಕ್ಷಿತ ಸಭಾಗೃಹ.

closed population: ಅಮುಕ್ತ ಜನ ಸಂಖ್ಯೆ. ಹೊರ ಮತ್ತು ಒಳ ವಲಸೆಗೆ ಅವಕಾಶವಿಲ್ಲದ ಜನಸಂಖ್ಯೆ.

closed question: ಮುಚ್ಚಿದ ಪ್ರಶ್ನೆ. ಹೆಚ್ಚಿನ ಚರ್ಚೆಗೆ ಅವಕಾಶವಿಲ್ಲದ ಪ್ರಶ್ನೆ.

closed social class system: ಮುಚ್ಚಿದ ಸಾಮಾಜಿಕ ವರ್ಗ ವ್ಯವಸ್ಥೆ. ಸಾಮಾಜಿಕ, ಆರ್ಥಿಕ ಸ್ಥಾನಮಾನಗಳು ಒಗ್ಗೂಡಿದಾಗ ಸಾಮಾಜಿಕ ಚಲನೆಯು ನಿರ್ಬಂಧಿಸಲ್ಪಡುತ್ತದೆ. ಉದಾ: ಭಾರತದಲ್ಲಿ ಜಾತಿ ಪದ್ಧತಿಯು ಮುಚ್ಚಿದ ಸಾಮಾಜಿಕ ವರ್ಗ ವ್ಯವಸ್ಥೆಯಾಗಿದೆ.

closed society: ಅಮುಕ್ತ ಸಮಾಜ. ನೋಡಿ : closed social class system.

closure by compartments: ವಿಭಾಗೀಯ ಮುಚ್ಚುಗಡೆ.

closed society: ಅಮುಕ್ತ ಸಮಾಜ. ನೋಡಿ : closed social class system

closure rule: ಮುಕ್ತಾಯದ ನಿಯಮ; ಸಭಾಧ್ಯಕ್ಷರು (ಸ್ಪೀಕರ್) ಚರ್ಚೆ ಮುಕ್ತಾಯಗೊಂಡಿತು ಎಂದು ಘೋಷಿಸಿದ ಮೇಲೆ ಯಾವುದೇ ವಿಷಯಕ್ಕೆ ಸಂಬಂಧಿಸಿದ ಭಾಷಣವನ್ನು (ಚರ್ಚೆಯನ್ನು) ಶಾಸಕಾಂಗದ ಸದಸ್ಯನು ಕೊನೆಗೊಳಿಸಬೇಕೆಂಬ ನಿಯಮ.

cluster sample: ಗುಚ್ಛ ಮಾದರಿ. ವ್ಯಕ್ತಿಯ ಘಟಕಗಳಿಗೆ ಬದಲಾಗಿ ಒಟ್ಟು ಜನಸಂಖ್ಯೆಯಿಂದ ಒಂದು ಗುಂಪು ಅಥವಾ ಸಮೂಹದ ಜನರನ್ನೇ ಸಂಶೋಧನಾ ಘಟಕವಾಗಿ ಬಳಸಿಕೊಳ್ಳುವಿಕೆ.

clustered settlement: ಕೇಂದ್ರೀಕೃತ ವಾಸಸ್ಥಳ; ಗುಂಪುಗೂಡಿದ ವಾಸಸ್ಥಳ. ಒಂದೇ ಕಡೆ ಗುಂಪುಗೂಡಿದ ಜನವಸತಿ.

clustered village: ಗುಂಪೆ ಗ್ರಾಮ.

coalition: ಸಮ್ಮಿಶ್ರ. ಸಂಯೋಜನ. ವಿಭಿನ್ನ ಉದ್ದೇಶಗಳ ಗುಂಪುಗಳು ಅಥವಾ ಪಕ್ಷಗಳು ನಿರ್ದಿಷ್ಟ ಗುರಿಸಾಧನೆಗಾಗಿ ತಾತ್ಕಾಲಿಕವಾಗಿ ಒಂದಾಗುವಿಕೆ.

coalition government: ಸಮ್ಮಿಶ್ರ ಸರಕಾರ. ಸಂಸತ್ತಿನಲ್ಲಿ ಅಥವಾ ರಾಜ್ಯದ ಶಾಸಕಾಂಗದಲ್ಲಿ ಯಾವುದೇ ಒಂದು ರಾಜಕೀಯ ಪಕ್ಷ ಸ್ಪಷ್ಟ ಬಹುಮತ ಪಡೆಯದೆ, ಸರಕಾರ ರಚಿಸಲು ವಿಫಲವಾದ ಸಂದರ್ಭದಲ್ಲಿ ಎರಡು ಅಥವಾ ಹೆಚ್ಚು ಪಕ್ಷಗಳು ಒಗ್ಗೂಡಿ ರಚಿಸುವ ಸರಕಾರ.

coalition ministry: ಸಮ್ಮಿಶ್ರ ಮಂತ್ರಿ ಮಂಡಲ.

cobweb model: ಜೇಡನ ಬಲೆ ಮಾದರಿ; ಕೋಬ್‌ವೆಬ್ ಮಾದರಿ. ಉತ್ಪನ್ನದ ಬೆಲೆಯಲ್ಲಿನ ಬದಲಾವಣೆ ಹಾಗೂ ಅದಕ್ಕೆ ಉತ್ಪಾದಕರ ಪ್ರತಿಕ್ರಿಯೆಯ ನಡುವೆ ಸಮಯಾವಕಾಶವಿದ್ದಾಗ ಉಂಟಾಗುವ ಬೇಡಿಕೆ ಮತ್ತು ಪೂರೈಕೆಗಳ ಪರಿವರ್ತನೆಯ ಒಂದು ಸರಳ ಕ್ರಿಯಾಶೀಲ ಮಾದರಿ.

code: ನಿಯಮ; ಸಂಹಿತೆ.

code of conduct: ಆಚಾರ ಸಂಹಿತೆ; ನಡತೆ ಸಂಹಿತೆ. ದೇಶದ ಪರಮಾಧಿಕಾರವನ್ನು ಸರಕಾರದ ಅಧಿಕಾರಿಗಳು ಮತ್ತು ನೌಕರರು

ಚಲಾಯಿಸುವುದರಿಂದ ಅವರು ಒಳ್ಳೆಯ ನಡತೆ ಮತ್ತು ನೀತಿಗಳನ್ನು ಅನುಸರಿಸಿ ಶಿಸ್ತಿನಿಂದ ಕಾರ್ಯ ನಿರ್ವಹಿಸುವ ಮೂಲಕ ಪ್ರಜೆಗಳಿಗೆ ಮಾದರಿ ಯಾಗಬೇಕು ಎಂಬು ದನ್ನು ಸೂಚಿಸುವ ಸಲುವಾಗಿ ರೂಪಿಸಲಾದ ನೀತಿ ನಿಯಮಗಳು ಮತ್ತು ಸಂಹಿತೆಗಳು.

code of fashion: ನೀಟುಗಾರಿಕೆಯ ನಿಯಮ; ಸೊಗಸುಗಾರಿಕೆಯ ನಿಯಮ.

code of law: ಕಾನೂನು ನಿಯಮ; ಕಾನೂನು ಸಂಹಿತೆ.

codification: ಕ್ರೋಢೀಕರಣ.

codified norms: ಕ್ರೋಢೀಕೃತ ನಿಯಮ ಗಳು; ಲಿಖಿತ ನಿಯಮಗಳು.

coding: ಸಂಕೇತೀಕರಣ.

co-education system: ಸಹಶಿಕ್ಷಣ ಪದ್ಧತಿ. ಗಂಡು ಮಕ್ಕಳು ಹಾಗೂ ಹೆಣ್ಣು ಮಕ್ಕಳು ಒಂದೇ ತರಗತಿಯಲ್ಲಿ ಕುಳಿತು ಕಲಿಯುವ ಪದ್ಧತಿ.

co-efficient balance: ದಾಮಾಶಯ ಶಿಲ್ಕು.

co-efficient of alienation: ಪರಕೀಯ ಪ್ರಜ್ಞೆಯ ಗುಣಾಂಕ.

co-efficient of association: ಸಾಹ ಚರ್ಯ ಗುಣಾಂಕ.

co-efficient of concordance: ಸಂಗತತೆಯ ಗುಣಾಂಕ; ಸಂವಾದಿತ್ವದ ಗುಣಾಂಕ; ಸಂಬಂಧದ ಗುಣಾಂಕ.

co-efficient of correlation: ಸಹ ಸಂಬಂಧದ ಗುಣಾಂಕ.

co-efficient of racial likeness: ಜನಾಂಗೀಯ ಸಾಮ್ಯತೆಯ ಗುಣಾಂಕ.

co-efficient of regression: ಸಮಾ ಶ್ರಯಣ ಗುಣಾಂಕ.

co-efficient of reliability: ವಿಶ್ವಾಸಾರ್ಹತೆಯ ಗುಣಾಂಕ.

co-efficient of variation: ವ್ಯತ್ಯಾಸದ ಗುಣಾಂಕ; ವೈವಿಧ್ಯದ ಗುಣಾಂಕ.

coercion: ಬಲಪ್ರಯೋಗ;ಬಲಾತ್ಕಾರ; ದಬ್ಬಾಳಿಕೆ.

cognate: ಸಗೋತ್ರದ; ಸ್ವಕುಟುಂಬಿಕ; ದಾಯಾದಿ . ೧. ಒಂದೇ ರಕ್ತಕ್ಕೆ ಸೇರಿದ. ಉದಾ: ಅಣ್ಣ, ತಮ್ಮ, ತಂಗಿ ಇತ್ಯಾದಿ ಬಂಧುಗಳು. ೨. ಹುಟ್ಟಿನಿಂದ ವಿಶೇಷವಾಗಿ ತಾಯಿಯ ಕಡೆಯಿಂದ ಒಬ್ಬನು ಇನ್ನೊಬ್ಬ ನೊಡನೆ ಹೊಂದುವ ಸಂಬಂಧ.

cognition: ಅರಿವು; ಸಂಜ್ಞಾನ; ಜ್ಞಾನ; ಗ್ರಹಣ.

cognitive consonance: ಗ್ರಹೀತ ಧ್ವನಿಸಾಮ್ಯ, ಗ್ರಹೀತ ಸಾಮರಸ್ಯ . ೧. ವಿವಿಧ ಭಾಗಗಳ ನಡುವೆ ಸಾಮರಸ್ಯ ಇರುವುದರ ಗ್ರಹಿಕೆ. ೨. ಭಾಷಾ ಜ್ಞಾನಕ್ಕೆ ಸಂಬಂಧಪಟ್ಟಂತೆ ಧ್ವನಿಸಾಮ್ಯದ ಗ್ರಹಣ.

cognitive dissonance: ಗ್ರಹೀತ ಅಸಂಗತತೆ; ಸಂಜ್ಞಾನಾತ್ಮಕ ಸಂದಿಗ್ಧತೆ. ತದ್ವಿರುದ್ಧವಾದ ನಂಬಿಕೆಗಳು ಅಥವಾ ವಿಚಾರಗಳಿಂದಾಗಿ ನಿರ್ಧಾರಕ್ಕೆ ಬರಲಾಗದ ಪರಿಸ್ಥಿತಿಯ ಅರಿವು.

cognitive dissonance hypothesis: ಸಂಜ್ಞಾನಾತ್ಮಕ ಅಸಂಗತತೆಯ ಪ್ರಾಕ್ ಕಲ್ಪನೆ. ಭಾಷೆಯನ್ನು ಅಭ್ಯಸಿಸುವಾಗ ಅಸಂಗತ ವಿಷಯಗಳ ಪ್ರಾಕ್ ಕಲ್ಪನೆ.

cognitive experience: ಗ್ರಹೀತ (ಸಂಜ್ಞಾನಾತ್ಮಕ) ಅನುಭವ.

cognitive map: ಗ್ರಹಿಕೆಯ ನಕ್ಷೆ.

cognitive mental process: ಗ್ರಹೀತ (ಸಂಜ್ಞಾನಾತ್ಮಕ) ಮನೋಪ್ರಕ್ರಿಯೆ.

cognitive pattern: ಗ್ರಹೀತ ಮಾದರಿ.

cognitive process: ಗ್ರಹೀತ ಪ್ರಕ್ರಿಯೆ. ಭಾಷಾ ಸಂಶೋಧನೆಯಲ್ಲಿ ಸಂಜ್ಞಾನಾತ್ಮಕ ಪ್ರಕ್ರಿಯೆ.

cognitive structure: ಗ್ರಹೀತ ರಚನೆ, ಸಂಜ್ಞಾನಾತ್ಮಕ ರಚನೆ.

cognitive system: ಗ್ರಹೀತ ಪದ್ಧತಿ; ಅರಿವಿನ ಪರಿಧಿಯಲ್ಲಿರುವ ವಿಧಾನ.

cognitive theory: ಗ್ರಹೀತ ಸಿದ್ಧಾಂತ. ಸಂಜ್ಞಾನಾತ್ಮಕ ಸಿದ್ಧಾಂತ.

cognizable offence: ಗುರುತಿಸಬಹುದಾದ ಅಪರಾಧ.

co-habitation: ಸಹವಾಸ; ಜತೆಯಲ್ಲಿ ವಾಸಮಾಡುವುದು. ಮದುವೆಯಾಗದೆ ಇಬ್ಬರು ವ್ಯಕ್ತಿಗಳು ಲೈಂಗಿಕ ಸಂಬಂಧವುಳ್ಳವರಾಗಿ ಕೆಲಕಾಲದವರೆಗೆ ಒಟ್ಟಿಗೆ ವಾಸಮಾಡುವುದು.

coherent normative system: ಸುಸಂಗತವಾದ ನಿಯಮಾತ್ಮಕ ವ್ಯವಸ್ಥೆ.

cohesion: ಒಗ್ಗೂಡುವಿಕೆ; ಸಂಸಕ್ತಿ.

cohort group: ಸಮರೂಪಿ ಸಮೂಹ; ಸಮಾನ ಗುಣಲಕ್ಷಣಗಳುಳ್ಳ ಗುಂಪು.

cold colour: ಮೆದು ಬಣ್ಣ.

cold war: ಶೀತಲ ಯುದ್ಧ; ಶೀತಲ ಸಮರ. ಎರಡನೇ ಮಹಾಯುದ್ಧದ (೧೯೩೯-೪೫) ನಂತರ ಸೋವಿಯತ್ ಒಕ್ಕೂಟ ಮತ್ತು ಇತರ ಸಮಾಜವಾದಿ ದೇಶಗಳ ವಿಷಯದಲ್ಲಿ ಸಾಮ್ರಾಜ್ಯಶಾಹಿ ದೇಶಗಳ ಪ್ರತಿಗಾಮಿ ವಲಯಗಳು ಅನುಸರಿಸತೊಡಗಿದ ವಿರೋಧಿ ನೀತಿ.

collaboration: ಸಹಯೋಗ.

collateral evidence: ಸಹಾಯಕ ಸಾಕ್ಷ್ಯ; ಪೂರಕ ಸಾಕ್ಷ್ಯ.

collateral inheritance: ಸಗೋತ್ರದ ಉತ್ತರಾಧಿಕಾರ. ಸೋದರ ಸಂಬಂಧಿ ಬಂಧುಗಳಿಂದ ಆಸ್ತಿ ಪಡೆಯುವ ಹಕ್ಕು.

collateral kinship: ಸಗೋತ್ರ ಬಂಧುತ್ವ.

collateral securities: ಸಹಾಯದ ಬದ್ಧತೆಗಳು; ಜೊತೆಯಾಧಾರ ಪಡೆದಿರುವ ಸಾಲಕ್ಕೆ ಸಾಲಗಾರನ ವೈಯಕ್ತಿಕ ಜವಾಬ್ದಾರಿಯ ಹೊರತಾಗಿ ವಸ್ತು, ಆಸ್ತಿ, ಶೇರ‍ಗಳು, ವಿಮಾಪಾಲಿಸಿ ಮುಂತಾದವುಗಳನ್ನು ಜವಾಬ್ದಾರಿಯಾಗಿ ನೀಡುವ ಸಹಾಯಕ ಆಧಾರ ದಾಖಲೆಗಳು.

collecting economy: ಸಂಗ್ರಹಣ ಆರ್ಥಿಕತೆ. ಕಾಡು ಸಸ್ಯಗಳಿಂದ ಆಹಾರ ಸಂಗ್ರಹಣೆಯ ಮೂಲಕ ಗುರುತಿಸಲ್ಪಡುವ ಮಾನವ ಅಸ್ತಿತ್ವದ ಹಂತ.

collective action: ಸಾಮೂಹಿಕ ಕ್ರಿಯೆ.

collective bargaining: ಸಾಮೂಹಿಕ ಚೌಕಾಶಿ.

collective behaviour: ಸಾಮೂಹಿಕ ವರ್ತನೆ; ಸಮಷ್ಟಿ ವರ್ತನೆ.

collective being: ಸಾಮಾಜಿಕ ಅಸ್ತಿತ್ವ. ಸಮಷ್ಟಿ ಅಸ್ತಿತ್ವ.

collective burial: ಸಾಮೂಹಿಕ ಶವಸಂಸ್ಕಾರ. ಎರಡು ಅಥವಾ ಹೆಚ್ಚು ಮೃತ ಶರೀರಗಳನ್ನು ಒಂದೇ ಗೋರಿಯಲ್ಲಿಟ್ಟು ಹೂಳುವುದು.

collective conscience: ಸಾಮೂಹಿಕ ಮನಸ್ಸಾಕ್ಷಿ.

collective consciousness: ಸಾಮೂಹಿಕ ಪ್ರಜ್ಞೆ.

collective consumption: ಸಾಮೂ ಹಿಕ ಅನುಭೋಗ; ಸಮಷ್ಟಿ ಅನುಭೋಗ.

collective decision: ಸಾಮೂಹಿಕ ತೀರ್ಮಾನ; ಸಮಷ್ಟಿ ತೀರ್ಮಾನ.

collective excitement: ಸಾಮೂಹಿಕ ಉದ್ರೇಕ; ಸಮಷ್ಟಿ ಉದ್ವಿಗ್ನತೆ.

collective executive: ಸಾಮೂಹಿಕ ಕಾರ್ಯಾಂಗ.

collective farming: ಸಾಮೂಹಿಕ ಬೇಸಾಯ; ಸಮಷ್ಟಿ ಬೇಸಾಯ.

collective labour: ಸಾಮೂಹಿಕ ಶ್ರಮ.

collective leadership: ಸಾಮೂಹಿಕ ನಾಯಕತ್ವ; ಸಮಷ್ಟಿ ನಾಯಕತ್ವ.

collective legislation: ಸಾಮೂಹಿಕ ಶಾಸನ; ಸಮಷ್ಟಿ ಶಾಸನ.

collective mediocracy: ಸಾಮೂಹಿಕ ಮಧ್ಯಮಾರ್ಹತೆ. ಯೋಗ್ಯತೆಯಲ್ಲಿ ಸಮುದಾಯದವರೆಲ್ಲ ಉತ್ತಮರೂ ಅಲ್ಲ, ಅಧಮರೂ ಅಲ್ಲದ ಮಧ್ಯಮಾರ್ಹತೆ ಹೊಂದಿರುವುದು.

collective mind: ಸಾಮೂಹಿಕ ಮನಸ್ಸು; ಸಮಷ್ಟಿ ಮನಸ್ಸು.

collective opinion: ಸಾಮೂಹಿಕ ಅಭಿಪ್ರಾಯ.

collective opinion method: ಸಾಮೂಹಿಕ ಅಭಿಪ್ರಾಯ ವಿಧಾನ.

collective representation: ಸಾಮೂಹಿಕ ಪ್ರಾತಿನಿಧ್ಯ.

collective responsibility: ಸಾಮೂ ಹಿಕ ಜವಾಬ್ದಾರಿ.

collective ritual: ಸಾಮೂಹಿಕ ಆಚರಣೆ.

collective security: ಸಾಮೂಹಿಕ ಭದ್ರತೆ. ಶಾಂತಿಪ್ರೇಮಿ ರಾಷ್ಟ್ರಗಳು ತಮ್ಮ ಸಾಮೂಹಿಕ ಶಕ್ತಿಯಿಂದ ಆಕ್ರಮಣಕಾರಿ ರಾಷ್ಟ್ರವನ್ನು ನಿರ್ಬಂಧಿಸುವುದು ಅಥವಾ ಆಕ್ರಮಣಕಾರಿಯ ವಿರುದ್ಧ ಸಮರ ಹೂಡುವುದು.

collective symbol: ನೋಡಿ: collective representation.

collective unconsciousness: ಸಮಷ್ಟಿ ಪ್ರಜ್ಞಾವಿಹೀನತೆ.

collective wisdom: ಸಾಮೂಹಿಕ ತಿಳುವಳಿಕೆ.

collectivism: ಸಾಮೂಹಿಕ ವಾದ; ಸಮಷ್ಟಿ ವಾದ. ಮುಕ್ತ ಆರ್ಥಿಕ ನೀತಿಗೆ ಪ್ರತಿಯಾಗಿ ಆರ್ಥಿಕ ಚಟುವಟಿಕೆಗಳೆಲ್ಲವೂ ಸಮಷ್ಟಿ ಕ್ರಿಯೆಯಿಂದ ನಿಯಂತ್ರಿಸಲ್ಪಡಬೇಕು ಎಂಬ ವಾದ.

collectivity: ಸಮಷ್ಟಿ; ಸಮುದಾಯ.

collectivization: ಸಮಷ್ಟೀಕರಣ. ಖಾಸಗಿ ಆಸ್ತಿಗಳನ್ನು ಬಲವಂತವಾಗಿ ಸರ್ಕಾರೀ ಮೇಲ್ವಿಚಾರಣೆಗೆ ಒಳಪಡಿಸು ವುದು. ಉದಾ: ೧೯೩೦ ರಲ್ಲಿ ರಶ್ಯಾದಲ್ಲಿ ಸ್ಟಾಲಿನ್ ಆಡಳಿತವು ಎಲ್ಲಾ ಖಾಸಗಿ ಆಸ್ತಿ ಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಂಡಿತು.

collectivization of agriculture: ಕೃಷಿಯ ಸಾಮುದಾಯೀಕರಣ. ಸಣ್ಣ ವೈಯಕ್ತಿಕ ರೈತ ಹಿಡುವಳಿಗಳನ್ನು ದೊಡ್ಡ ಸಹಕಾರಿ ಕ್ಷೇತ್ರಗಳಲ್ಲಿ ಒಂದುಗೂಡಿಸು

ವುದರ ಮೂಲಕ ಸಮಾಜವಾದಿ ರೀತಿಯಲ್ಲಿ ಸೋವಿಯತ್ ಒಕ್ಕೂಟವು ಕೃಷಿರಂಗದಲ್ಲಿ ನಡೆಸಿದ ಪುನರ್‌ಸಂಘಟನೆ.

collegial executive: ಸಂಸ್ಥಾ ಕಾರ್ಯಾಂಗ; ಸಾಮೂಹಿಕ ಕಾರ್ಯಾಂಗ; ಬಹು ಕಾರ್ಯಾಂಗ ಪದ್ಧತಿ. ಸ್ವಿಸ್ ಕಾರ್ಯಾಂಗವು ಬಹು ಸದಸ್ಯತ್ವದ (ಸಂಸ್ಥಾ) ಕಾರ್ಯಾಂಗವಾಗಿದೆ. ಇದರಲ್ಲಿ ಏಳು ಸದಸ್ಯರು ಇದ್ದು ಅವರೆಲ್ಲರ ಅಧಿಕಾರ ಹಾಗೂ ಸ್ಥಾನಮಾನ ಸಮಾನವಾಗಿರುತ್ತದೆ.

collegiate president: ಸಂಸ್ಥಾ ಕಾರ್ಯಾಧ್ಯಕ್ಷ; ರಷ್ಯಾವು ಬಹುಜನ ಕಾರ್ಯಾಂಗ ಪದ್ಧತಿಯನ್ನು ಹೊಂದಿದೆ. ಇದರಲ್ಲಿ ಮೂವತ್ತಮೂರು ಜನ ಸದಸ್ಯರಿದ್ದು ಅದರ ಅಧ್ಯಕ್ಷನನ್ನು ಸಂಸ್ಥಾ ಕಾರ್ಯಾಧ್ಯಕ್ಷ ಎಂದು ಕರೆಯಲಾಗುತ್ತದೆ.

collusion: ಕೂಟ ಒಪ್ಪಂದ. ಸ್ವತಂತ್ರ ಸಂಸ್ಥೆಗಳ ನಡುವೆ ಇರುವ ಒಪ್ಪಂದ.

colonial policy: ವಸಾಹತು ನೀತಿ.

colonialism: ವಸಾಹತು ವಾದ. ತಾವು ಗೆದ್ದುಕೊಂಡ ದೇಶಗಳ ರಾಜಕೀಯ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಹರಣಮಾಡಿ ಅವನ್ನು ವಸಾಹತುಗಳಾಗಿ ಪರಿವರ್ತಿಸುವ ಬಂಡವಾಳಶಾಹಿ ದೇಶಗಳ ದುರಾಶೆಯ ನೀತಿ.

colonies of proprietorship: ಸ್ವಾಮಿತ್ವದ ವಸಾಹತುಗಳು.

colonization : ವಸಾಹತೀಕರಣ.

colony: ವಸಾಹತು.

colour bar: ನೋಡಿ: apartheid policy.

column: ಅಂಕಣ; ಸಾಲು; ಸ್ತಂಭ; ಪೀಠ; ಶಲಾಕ; ಮುಕುಟ ಕಂಬ.

coma: ಅತಿಸುಪ್ತಿ; ತೀವ್ರ ಪ್ರಜ್ಞಾಹೀನ ಸ್ಥಿತಿ. ಎಲ್ಲಾ ವರ್ತನೆಗಳೂ, ಪ್ರತಿಕ್ರಿಯೆಗಳೂ ಸ್ತಬ್ಧವಾಗಿರುವ ಸ್ಥಿತಿ. ಅಜಾಗೃತಾವಸ್ಥೆಯ ಈ ಸ್ಥಿತಿಯಲ್ಲಿ ಯಾವ ಬಗೆಯ ಸಂವೇದನೆಯೂ ಇರುವುದಿಲ್ಲ.

combat fatigue: ಯುದ್ಧಾಯಾಸ; ಕದನಾಯಾಸ; ಉದಾ: ಎರಡನೆಯ ಮಹಾಯುದ್ಧದ ಸಮಯದಲ್ಲಿ ಕದನ ಭೂಮಿಯಲ್ಲಿ ಬಲು ದೀರ್ಘಕಾಲ ಕೆಲಸ ಮಾಡಿದವರಲ್ಲಿ ಕಂಡುಬಂದ ಬಳಲಿಕೆಯನ್ನು ಸೂಚಿಸುವ ಒಂದು ಸಾಮಾನ್ಯ ಶಬ್ದ.

combat instinct: ಕದನ ಮೂಲ ಪ್ರವೃತ್ತಿ.

combat neurosis: ಯುದ್ಧ ಮನೋಬೇನೆ. ಯುದ್ಧದ ಭಯದಿಂದ ಸೈನಿಕರಲ್ಲಿ ಉಂಟಾಗುವ, ಮುಖ್ಯವಾಗಿ ಹಿಸ್ಟೀರಿಯಾ ಮತ್ತು ಉದ್ವಿಗ್ನತೆಗಳ ಚಿಹ್ನೆಯುಳ್ಳ ಮನೋಬೇನೆಗಳು.

combat reaction: ಕದನ ಪ್ರತಿಕ್ರಿಯೆ.

combative impulse: ಹೋರಾಟದ ಆವೇಗ.

combatives: ಹೋರಾಡುವ ದ್ವಂದ್ವಿಗಳು.

combination: ಸಂಯೋಜನೆ; ಒಂದುಗೂಡುವಿಕೆ.

combined effect: ಸಂಯುಕ್ತ ಪರಿಣಾಮ.

combined operation: ಸಂಯುಕ್ತ ಕಾರ್ಯಾಚರಣೆ.

commemorative stupa: ಸ್ಮಾರಕ ಸ್ತೂಪ.

commensalism: ಸಹಜೀವಿತ್ವ. ಒಂದೇ ತೆರನಾದ ಕಾರ್ಯಗಳನ್ನು ನಡೆಸುವ ವ್ಯಕ್ತಿಗಳು ಅಥವಾ ಸಮೂಹಗಳ ನಡುವಿನ ಅಂತರಕ್ರಿಯೆ.

commensality: ಸಹಭೋಜನ; ಸಹಪಂಕ್ತಿ ಭೋಜನ.

commercial agriculture: ವಾಣಿಜ್ಯ ಕೃಷಿ. ಮಾರುಕಟ್ಟೆಯಲ್ಲಿ ವ್ಯಾಪಾರಕ್ಕಾಗಿ ಉತ್ಪಾದಿಸುವ ಬೆಳೆಗಳು. ಉದಾ: ತೆಂಗು, ಗೋಡಂಬಿ, ಅಡಿಕೆ, ಕಬ್ಬು, ಕೊಕ್ಕೊ ಇತ್ಯಾದಿಗಳ ಕೃಷಿ. ಆಹಾರ ಬೆಳೆಗಳನ್ನೂ ವ್ಯಾಪಾರದ ಉದ್ದೇಶದಿಂದ ಬೆಳೆಸಿದಾಗ ಅದು ವಾಣಿಜ್ಯ ಕೃಷಿ ಎನಿಸುತ್ತದೆ.

commercial amusement: ವಾಣಿಜ್ಯೀಕೃತ ಮನರಂಜನೆ. ಉದಾ: ಸಿನಿಮಾ, ಕ್ಯಾಬರೆ.

commercial bank: ವಾಣಿಜ್ಯ ಬ್ಯಾಂಕು.

commercial bargaining: ವಾಣಿಜ್ಯ ಚೌಕಾಶಿ.

commercial bill: ವಾಣಿಜ್ಯ ಹುಂಡಿ.

commercial city: ವಾಣಿಜ್ಯ ನಗರ.

commercial economy: ವಾಣಿಜ್ಯ ಆರ್ಥಿಕತೆ.

commercial farming: ನೋಡಿ: commercial agriculture.

commercial invoice: ವಾಣಿಜ್ಯ ಧಾರಣೆ ಪಟ್ಟಿ.

commercial policy: ವಾಣಿಜ್ಯ ನೀತಿ.

commercial revolution: ವಾಣಿಜ್ಯ ಕ್ರಾಂತಿ. ಯುರೋಪ್ ಹಾಗೂ ಇತರ ದೇಶಗಳಲ್ಲಿ ಆರ್ಥಿಕ-ಸಾಮಾಜಿಕ ಬದಲಾವಣೆಗಳನ್ನು ತಂದ ಕ್ರಾಂತಿ. ಈ ಕ್ರಾಂತಿಯಿಂದ ವ್ಯಾಪಾರೀ ವರ್ಗಗಳು ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಪ್ರಾಮುಖ್ಯತೆಯನ್ನು ಪಡೆದುವು.

commercialism: ವ್ಯಾಪಾರೀ ದೃಷ್ಟಿಕೋನ.

commission: ದಲ್ಲಾಳಿ ದರ; ಮಧ್ಯವರ್ತಿ ಸಂದಾಯ.

commission system: ಆಯೋಗ ಪದ್ಧತಿ.

commitment: ಬದ್ಧತೆ. ಒಂದು ನಿರ್ದಿಷ್ಟ ಸಾಮಾಜಿಕ ಕ್ರಿಯೆಯನ್ನು ನಡೆಸಬೇಕೆಂಬ ಸಾಮಾಜಿಕ ಹೊಣೆಗಾರಿಕೆ.

committed judiciary: ಬದ್ಧ ನ್ಯಾಯಾಂಗ.

committee stage: ಸಮಿತಿಯ ಹಂತ; ಶಾಸಕಾಂಗದಲ್ಲಿ ಶಾಸನ ರೂಪಿಸುವ ಪ್ರಕ್ರಿಯೆಯಲ್ಲಿನ ಮೂರನೆಯ ಹಂತ. ದ್ವಿತೀಯ ವಾಚನದ ನಂತರ ಸಮಿತಿಯ ಹಂತ ಪ್ರಾರಂಭವಾಗುತ್ತದೆ. ವಿವಿಧ ಬಗೆಯ ಮಸೂದೆಗಳನ್ನು ಪರಿಶೀಲಿಸಲು ಹಲವಾರು ಬಗೆಯ ಸಮಿತಿಗಳಿವೆ. ಇವುಗಳ ಪೈಕಿ ಸಂಬಂಧಪಟ್ಟ ಸಮಿತಿಗೆ ಮಸೂದೆ ಯನ್ನು ಚರ್ಚೆಗಾಗಿ ಮತ್ತು ಸಮರ್ಪಕ ನಿರೂಪಣೆಗಾಗಿ ಒಪ್ಪಿಸಲಾಗುತ್ತದೆ.

committee system: ಸಮಿತಿ ಪದ್ಧತಿ; ಸದನಗಳ ಕಾರ್ಯಗಳಲ್ಲಿ ಸಹಕಾರ ನೀಡಿ ಶೀಘ್ರಗತಿಯಲ್ಲಿ ಶಾಸನ ರೂಪಿಸಲು ಅನೇಕ ಸಮಿತಿಗಳನ್ನು ಒಳಗೊಂಡಿರುವ ಪದ್ಧತಿ.

commodity: ಸರಕು.

commodity agreement: ಸರಕು ಒಪ್ಪಂದ.

commodity circulation: ಸರಕು ಆವರ್ತ; ಹಣದ ಸಹಾಯದಿಂದ ಸರಕುಗಳ ವಿನಿಮಯ ಕ್ರಿಯೆ. ಈ ಕ್ರಿಯೆಯಲ್ಲಿ ಮೊದಲು ಹಣಕ್ಕೆ ಸರಕುಗಳ ಮಾರಾಟ (ಸರಕು-ಹಣ) ಮತ್ತು ಎರಡನೆಯ ಕ್ರಿಯೆಯಲ್ಲಿ ಹಣವು ಸರಕಿನೊಂದಿಗೆ (ಹಣ-ಸರಕು) ವಿನಿಮಯಗೊಳ್ಳುತ್ತದೆ.

commodity exchange: ಸರಕು ವಿನಿಮಯ. ವಸ್ತುಗಳು ಕೊಳ್ಳಲ್ಪಡುವ ಮತ್ತು ಮಾರಾಟವಾಗುವ ಮಾರುಕಟ್ಟೆ. ಇಲ್ಲಿ ವಸ್ತುಗಳ ಮಾಲಕತ್ವದ ಹಕ್ಕು ಮಾತ್ರ ವಿನಿಮಯ ಆಗಬೇಕಾದ ಅವಶ್ಯಕತೆಯಿದ್ದು ವಸ್ತುಗಳು ಭೌತಿಕವಾಗಿ ವಿನಿಮಯವಾಗಬೇಕೆಂದಿಲ್ಲ.

commodity fetishism: ಸರಕು ಪ್ರಭಾವವಾದ. ಉತ್ಪಾದನಾ ಮೂಲಗಳ ಖಾಸಗಿ ಒಡೆತನವನ್ನು ಆಧರಿಸಿ ಸರಕುಗಳ ಉತ್ಪಾದನೆಯ ಸಂದರ್ಭದಲ್ಲಿ ಉಂಟಾಗುವ ಉತ್ಪಾದನಾ ಸಂಬಂಧಗಳೇ ಸಾಮಾಜಿಕ ಸಂಬಂಧಗಳನ್ನು ಪ್ರಭಾವಿಸುತ್ತವೆ ಎಂಬ ವಾದ.

commodity movement: ಸರಕು ಸಂಚಲನೆ.

commodity output: ಸರಕು ಉತ್ಪನ್ನ.

commodity taxation: ಸರಕುಗಳ ಮೇಲಿನ ತೆರಿಗೆ.

commodity terms of trade: ಸರಕು ವ್ಯಾಪಾರದ ಕರಾರುಗಳು (ಶರತ್ತುಗಳು).

common denominator: ಸಾಮಾನ್ಯ ಛೇದ.

common economic interest: ಸಮಾನ ಆರ್ಥಿಕ ಆಸಕ್ತಿ.

common factor: ಸರ್ವ ಸಾಮಾನ್ಯಾಂಶ.

common good: ಸಾರ್ವತ್ರಿಕ ಹಿತ.

common historical background: ಸಾಮಾನ್ಯ ಐತಿಹಾಸಿಕ ಹಿನ್ನೆಲೆ.

common idea: ಸರ್ವಸಾಮಾನ್ಯ ವಿಚಾರ.

common interest: ಸಾಮಾನ್ಯ ಹಿತಾಸಕ್ತಿ.

common language: ಸಾಮಾನ್ಯ ಭಾಷೆ.

common law: ರೂಢಿಗತ ಕಾಯಿದೆ.

common law marriage: ಜನಾಂಗಗಳ ವಿವಾಹ ರೂಢಿ. ವಿವಾಹವು ಶಾಸ್ತ್ರೋಕ್ತವಾಗಿ ನಡೆಯದೇ ಇದ್ದರೂ ಎರಡು ಕಡೆಯವರ ಸಮ್ಮತಿ ಮೇರೆಗೆ ಇಬ್ಬರು ಜೊತೆಯಾಗಿ ಗಂಡ-ಹೆಂಡತಿಯರಂತೆ ಜೀವಿಸುವಿಕೆ.

common market: ಸಾರ್ವಜನಿಕ ಮಾರುಕಟ್ಟೆ.

common monetary standard: ಸಾಮಾನ್ಯ ಹಣಕಾಸು ಪ್ರಮಿತಿ.

common ownership: ಸಾಮೂಹಿಕ ಒಡೆತನ.

common parentage: ಏಕವಂಶ ಮೂಲ.

common political aspiration: ಸಮಾನ ರಾಜಕೀಯ ಆಕಾಂಕ್ಷೆ.

common production cost: ಸಾಮಾನ್ಯ ಉತ್ಪಾದನಾ ವೆಚ್ಚ.

common propensity: ಸಾಮಾನ್ಯ ಒಲವು.

common race: ಒಂದೇ ಜನಾಂಗ.

common sense: ಲೋಕ ಜ್ಞಾನ; ಸಾಮಾನ್ಯ ಜ್ಞಾನ.

common sense beliefs: ಸಾಮಾನ್ಯ ನಂಬುಗೆಗಳು. ಸಾಮಾಜಿಕ ಅಥವಾ ಸ್ವಾಭಾವಿಕ (ಪ್ರಾಕೃತಿಕ) ಜಗತ್ತಿನ ಬಗೆಗೆ ಸಮೂಹದ ಎಲ್ಲಾ ಜನರು ಹೊಂದಿರುವಂತಹ ನಂಬುಗೆಗಳು.

common standard: ಸಾಮಾನ್ಯ ಪ್ರಮಾಣ; ಸಾಮಾನ್ಯ ನಿಯಮ.

Common Wealth Nations: ಕಾಮನ್ ವೆಲ್ತ್ ರಾಷ್ಟ್ರಗಳು, ಬ್ರಿಟಿಷ್ ಸಾಮ್ರಾಜ್ಯಶಾಹಿ ವ್ಯವಸ್ಥೆಯ ವಸಾಹತುಗಳಾಗಿದ್ದ ರಾಷ್ಟ್ರಗಳು.

communal award: ಕೋಮುವಾರು ಪ್ರಾತಿನಿಧ್ಯ; ಕೋಮುವಾರು ಕೊಡುಗೆ.

communal character: ಸಾಮು ದಾಯಿಕ ಲಕ್ಷಣ.

communal creation: ಸಾಮುದಾಯಿಕ ಸೃಷ್ಟಿ.

communal feast: ಸಾಮುದಾಯಿಕ ಹಬ್ಬದೂಟ. ಸಾಂಕೇತಿಕ ಅರ್ಥ ಮತ್ತು ವಿಶೇಷ ಮತಸಂಸ್ಕಾರಗಳುಳ್ಳ ಸಾಮುದಾಯಿಕ ಊಟ.

communal house: ಸಾಮುದಾಯಿಕ ಮನೆ. ಮಾತೃವಂಶೀಯ ಕುಟುಂಬಗಳಲ್ಲಿ ಕಂಡುಬರುವ, ೧೫ ರಿಂದ ೨೦ ಜನ ವಾಸಿಸುವ ದೊಡ್ಡ ವ್ಯವಸ್ಥಿತ ಮನೆ.

communal land tenure system: ಸಾಮುದಾಯಿಕ ಭೂ ಹಿಡುವಳಿ ವ್ಯವಸ್ಥೆ.

communal life: ಸಾಮುದಾಯಿಕ ಜೀವನ.

communal production: ಸಾಮುದಾಯಿಕ ಉತ್ಪಾದನೆ.

communal re-creation: ಸಾಮುದಾಯಿಕ ಪುನರ್‌ಸೃಷ್ಟಿ. ಗಾಯಕ ಕವಿಯೊಬ್ಬನಿಂದ ರಚಿತವಾದ ಗೀತವನ್ನು ಜನಪದರು ಸ್ವೀಕರಿಸಿ ತಮ್ಮಲ್ಲಿ ಅಂತರ್ಗತಗೊಳಿಸಿಕೊಂಡ ಬಳಿಕ ಆ ಮೂಲರಚನೆ ಬದಲಾವಣೆಗೆ ಒಳಗಾಗಿ ಸಾಮೂಹಿಕ ಪುನರ್‌ಸೃಷ್ಟಿಯಾಗುತ್ತದೆ.

communal representation: ಕೋಮುವಾರು ಪ್ರಾತಿನಿಧ್ಯ.

communal riot: ಕೋಮುಗಲಭೆ; ಮತೀಯ ಗಲಭೆ.

communalism: ಕೋಮುವಾದ.

communalist: ಕೋಮುವಾದಿ; ಮತೀಯವಾದಿ.

commune: ಪರಗಣೆ; ಕಿರು ಸಮುದಾಯ. ಇದರಲ್ಲಿ ಎಲ್ಲರೂ ಸಮಾನರು. ಫ್ರಾನ್ಸ್‌ನಲ್ಲಿ ಆಡಳಿತಕ್ಕನುಕೂಲವಾಗುವಂತೆ ಮಾಡಿದ ವಿಭಾಗಗಳಲ್ಲಿ ಅತ್ಯಂತ ಸಣ್ಣದು.

communication: ಸಂಪರ್ಕ.

communication channnel: ಸಂಪರ್ಕಮಾರ್ಗ.

communication distortion: ಸಂಪರ್ಕ ವಿಕೃತಿ. ತಪ್ಪು ಅರ್ಥ ಕೊಡುವ ಸಂಪರ್ಕ; ಅಸ್ಪಷ್ಟ ಮತ್ತು ಅಪಾರ್ಥ ಸಂಪರ್ಕ.

communication gap: ಸಂವಹನದ ಅಂತರ.

communication network: ಸಂಪರ್ಕ ಜಾಲ.

communication problem: ಸಂವಹನ

ಸಮಸ್ಯೆ. ಹೇಳಬೇಕಾದಷ್ಟನ್ನು ಹೇಗೆ ಹೇಳಬೇಕೆಂದು ತಿಳಿಯದೆ, ಹೇಳಿದ್ದನ್ನು ಅಪಾರ್ಥ ಮಾಡಿಕೊಂಡು, ಒಟ್ಟಿನಲ್ಲಿ ಮಾತಿನ ರೀತಿ ಸರಿಯಿಲ್ಲದೆ, ವೈಮನಸ್ಸಿಗೆ ಕಾರಣವಾಗುವುದು.

communication system: ಸಂಪರ್ಕ ವ್ಯವಸ್ಥೆ.

communicative ability: ಸಂವಹನ ಸಾಮರ್ಥ್ಯ; ಅಭಿವ್ಯಕ್ತ್ಯಾತ್ಮಕ ಸಾಮರ್ಥ್ಯ.

communism: ಸಮತಾವಾದ; ಸಾಮ್ಯವಾದ; ಸಮಸ್ತಜನ ಸಾಮ್ಯವಾದ. ಸಮತಾವಾದವು ಉತ್ಪಾದನಾ ಸಾಧನಗಳ ಸಾರ್ವಜನಿಕ ಒಡೆತನವನ್ನು ಪ್ರತಿಪಾದಿಸುತ್ತದೆ. ಇದು ಎರಡು ಘಟ್ಟಗಳನ್ನು ಒಳಗೊಂಡಿರುತ್ತದೆ. ಮೊದಲನೆಯದು ಸಮಾಜವಾದಿ ಘಟ್ಟ. ಎರಡನೆಯದು ಅದಕ್ಕಿಂತ ಉನ್ನತವಾದ ವರ್ಗರಹಿತ ಸಾಮಾಜಿಕ ವ್ಯವಸ್ಥೆಯಾಗಿರುತ್ತದೆ.

communism of property and wives: ಆಸ್ತಿಯ ಮತ್ತು ಹೆಂಡಂದಿರ ಸಮತಾವಾದ. ಆಳುವ ವರ್ಗದವರು ಖಾಸಗಿ ಆಸ್ತಿಯನ್ನು ಹೊಂದಿರಬಾರದು ಎಂಬುದು ಪ್ಲೇಟೋನ ವಿಚಾರವಾಗಿದೆ. ಅದೇ ರೀತಿ ಆಸ್ತಿ ಮತ್ತು ಕುಟುಂಬಕ್ಕೆ ನಿಕಟ ಸಂಬಂಧವಿದೆ. ಖಾಸಗೀ ಆಸ್ತಿ ಮತ್ತು ಸ್ವಂತ ಹೆಂಡಿರು-ಮಕ್ಕಳನ್ನು ಹೊಂದಿದ್ದರೆ ಆಳುವ ವರ್ಗ ಕೇವಲ ಸ್ವಹಿತ ರಕ್ಷಣೆಗೆ ಮಾತ್ರ ಗಮನ ಹರಿಸುತ್ತದೆ. ಆದ್ದರಿಂದ ಇದನ್ನು ತಪ್ಪಿಸಲು ಆಳುವ ವರ್ಗದವರು ಖಾಸಗಿ ಆಸ್ತಿ ಮತ್ತು ಸ್ವಂತ ಹೆಂಡಿರು ಮಕ್ಕಳನ್ನು ಹೊಂದಿರಬಾರದು ಎನ್ನುವ ಪ್ಲೇಟೋನ ಸಮತಾವಾದ.

communist league: ಕಮ್ಯೂನಿಸ್ಟ್ ಲೀಗ್. ಕಾರ್ಲ್‌ಮಾರ್ಕ್ಸ್ ಮತ್ತು ಫ್ರೆಡರಿಕ್ ಏಂಗೆಲ್ಸ್ ಸ್ಥಾಪಿಸಿದ್ದ ಹಾಗೂ ನಾಯಕತ್ವ ವಹಿಸಿದ್ದ ಶ್ರಮಜೀವಿ ವರ್ಗದ ಪ್ರಪ್ರಥಮ ಅಂತಾರಾಷ್ಟ್ರೀಯ ಕಮ್ಯೂನಿಸ್ಟ್ ಸಂಘಟನೆ.

communist manifesto: ಕಮ್ಯೂನಿಸ್ಟ್ ಪ್ರಣಾಳಿಕೆ; ಕಮ್ಯೂನಿಸ್ಟ್ ಜಾಹೀರನಾಮೆ. ೧೮೪೭ರ ಡಿಸೆಂಬರ್ - ೧೮೪೮ ರ ಜನವರಿಯಲ್ಲಿ ಕಮ್ಯೂನಿಸ್ಟ್ ಲೀಗ್‌ನ ಕಾರ್ಯಕ್ರಮವಾಗಿ ಕಾರ್ಲ್‌ಮಾರ್ಕ್ಸ್ ಮತ್ತು ಫ್ರೆಡರಿಕ್ ಏಂಗೆಲ್ಸ್ ರಚಿಸಿದ ವೈಜ್ಞಾನಿಕ ಕಮ್ಯೂನಿಸಂನ ಪ್ರಥಮ ಕಾರ್ಯಕ್ರಮಾತ್ಮಕ ದಸ್ತೇವೇಜು. ಬಂಡವಾಳಶಾಹಿ ಆಳ್ವಿಕೆಯ ಕ್ರಾಂತಿಕಾರಿ ಪದಚ್ಯುತಿ, ಕಾರ್ಮಿಕ ವರ್ಗದಿಂದ ರಾಜಕೀಯ ಅಧಿಕಾರದ ವಶೀಕರಣ ಮತ್ತು ಕಮ್ಯೂನಿಸಂನ ನಿರ್ಮಾಣ ಇವುಗಳ ಅನಿವಾರ್ಯತೆಯನ್ನು ಕಮ್ಯೂನಿಸ್ಟ್ ಪ್ರಣಾಳಿಕೆಯು ವೈಜ್ಞಾನಿಕವಾಗಿ ನಿರೂಪಿಸಿದೆ.

communistic theory: ಸಮತಾ ವಾದ; ಸಾಮ್ಯವಾದಿ ಸಿದ್ಧಾಂತ.

communitarian state: ಸಾಮುದಾಯಿಕ ರಾಜ್ಯ. ಪ್ರಜೆಗಳು ಹೆಚ್ಚಿನ ಸ್ವಾತಂತ್ರ್ಯ ಹಾಗೂ ಸ್ವಾವಲಂಬನೆಯನ್ನು ಹೊಂದಿರುವ ರಾಜ್ಯ ಪದ್ಧತಿ. ಇದರ ಪ್ರಕಾರ ಸರಕಾರದ ಅಧಿಕಾರವು ಮೇಲಿಂದ ಬರದೆ ಕೆಳಕಡೆಯಿಂದ ಮೇಲೆ ಹರಿದು ಹೋಗುತ್ತದೆ.

community: ಸಮುದಾಯ. ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿ ವಾಸವಾಗಿರುವ ಪರಸ್ಪರ ಅಂತರ ಸಂಬಂಧದಿಂದ ತಮ್ಮ ದಿನವಹಿ ಅವಶ್ಯಕತೆಗಳನ್ನು

ಪೂರೈಸುವ, ಸ್ವಸಮುದಾಯ ಪ್ರಜ್ಞೆ ಹಾಗೂ ಸಮೂಹ ತಾದಾತ್ಮ್ಯತೆಯುಳ್ಳ ಸಾಮಾಜಿಕ ಘಟಕ.

community care: ಸಮುದಾಯ ಸಂರಕ್ಷಣೆ.

community centre: ಸಮುದಾಯ ಕೇಂದ್ರ.

community control: ಸಾಮುದಾಯಿಕ ನಿಯಂತ್ರಣ.

community decision: ಸಾಮುದಾಯಿಕ ನಿರ್ಣಯ.

community development: ಸಾಮುದಾಯಿಕ ಅಭಿವೃದ್ಧಿ.

community development proj ect: ಸಮುದಾಯ ಅಭಿವೃದ್ಧಿ ಯೋಜನೆ.

community disorganization: ಸಾಮುದಾಯಿಕ ವಿಘಟನೆ. ಸದಸ್ಯರ ಬೇಡಿಕೆಗಳನ್ನು ಪೂರೈಸಲು ಸಮುದಾಯವು ಅಸಮರ್ಥವಾಗಿ ತನ್ನ ಸಂಘಟಿತತೆಯನ್ನು ಕಳಕೊಳ್ಳುವ ಪ್ರಕ್ರಿಯೆ.

community health centre: ಸಮುದಾಯ ಆರೋಗ್ಯ ಕೇಂದ್ರ.

community health worker: ಸಮುದಾಯ ಆರೋಗ್ಯ ಕಾರ್ಯಕರ್ತ.

community organization: ಸಾಮುದಾಯಿಕ ಸಂಘಟನೆ.

community planning: ಸಾಮು ದಾಯಿಕ ಯೋಜನೆ. ಸಾಮುದಾಯಿಕ ಅಭಿವೃದ್ಧಿಗಾಗಿ ಹಾಕಿಕೊಂಡ ಯೋಜಿತ ಕಾರ್ಯಕ್ರಮಗಳು. ಉದಾ: ಶಿಕ್ಷಣ, ಆರೋಗ್ಯ, ಅಂಚೆ, ಮಾರುಕಟ್ಟೆ, ರಸ್ತೆ ವ್ಯವಸ್ಥೆ, ನಿರುದ್ಯೋಗ ನಿವಾರಣೆ ಇತ್ಯಾದಿ.

community psychology: ಸಮುದಾಯ ಮನೋವಿಜ್ಞಾನ.

community sentiment: ಸಮುದಾಯ ಭಾವನೆ. ನಿರ್ದಿಷ್ಟ ಪ್ರದೇಶವೊಂದರಲ್ಲಿ ವಾಸಿಸುವ ಸಮುದಾಯದ ಜನರು ತಮ್ಮಲ್ಲಿ ಸ್ವಕೀಯ ಭಾವನೆ ಬೆಳೆಸಿಕೊಂಡು, ಪರಸ್ಪರ ಆತ್ಮೀಯ ಭಾವನೆಯಿಂದ ಇರುವಿಕೆ.

community study: ಸಮುದಾಯ ಅಧ್ಯಯನ.

community study method: ಸಮುದಾಯ ಅಧ್ಯಯನ ವಿಧಾನ.

commutation: ಪರಿವರ್ತನೆ; ಮಾರುವೆ.

commuter's zone: ಸಂಚಾರೀ ವಲಯ. ನೋಡಿ: concentric zone hypothesis.

compact settlement: ಸಾಂದ್ರ ವಾಸಸ್ಥಳ; ಏಕತ್ರಿತ ವಾಸಸ್ಥಳ.

companionate marriage: ಸಾಹಚರ್ಯ ವಿವಾಹ. ವಿವಾಹೇಚ್ಛಿಗಳಾದ ಯುವಕ-ಯುವತಿಯರು ಕೆಲವು ಕಾಲ ಸಹಬಾಳ್ವೆ ನಡೆಸಿ, ತಮ್ಮ ಸಾಹಚರ್ಯ ಯಶಸ್ವಿ ಎಂದೆನಿಸಿದಲ್ಲಿ ಮಾತ್ರ ಸ್ಥಾಪಿಸುವ ವಿವಾಹ ಸಂಬಂಧ.

companionship: ಸಾಹಚರ್ಯ; ಜೊತೆಗಾರಿಕೆ.

companionship family: ಸಾಹಚರ್ಯದ ಕುಟುಂಬ. ಕುಟುಂಬದ ಸದಸ್ಯರುಗಳ ನಡತೆಯಲ್ಲಿ ಪರಸ್ಪರ ಪ್ರೀತಿ ಹಾಗೂ ಸಹಮತವುಳ್ಳ ಕುಟುಂಬ.

companionship marriage: ನೋಡಿ: companionship family.

comparative advantage: ತೌಲನಿಕ ಅನುಕೂಲತೆ.

comparative analysis: ತೌಲನಿಕ ವಿಶ್ಲೇಷಣೆ.

comparative context: ತೌಲನಿಕ ಸಂದರ್ಭ.

comparative cost advantage: ತುಲನಾತ್ಮಕ ವೆಚ್ಚ ಅನುಕೂಲತೆ.

comparative demography: ತೌಲನಿಕ ಜನಸಂಖ್ಯಾಶಾಸ್ತ್ರ.

comparative differences in cost: ವೆಚ್ಚದ ತುಲನಾತ್ಮಕ ವ್ಯತ್ಯಾಸ.

comparative differences in labour cost: ಶ್ರಮದ ವೆಚ್ಚದ ತುಲನಾತ್ಮಕ ವ್ಯತ್ಯಾಸ.

comparative disadvantage: ತುಲನಾತ್ಮಕ ಅನಾನುಕೂಲತೆ.

comparative effectiveness of labour: ಶ್ರಮದ ತುಲನಾತ್ಮಕ ಪರಿಣಾಮಕತೆ.

comparative folkloristics: ತೌಲ ನಿಕ ಜನಪದ ವಿಜ್ಞಾನ.

comparative history: ತೌಲನಿಕ ಇತಿಹಾಸ.

comparative macro statics: ತುಲನಾತ್ಮಕ ಸಮಗ್ರ ಸ್ಥಿರತೆ.

comparative method: ತೌಲನಿಕ ವಿಧಾನ.

comparative micro statics: ತುಲನಾತ್ಮಕ ಸೂಕ್ಷ್ಮ ಸ್ಥಿರತೆ.

comparative psychology: ತೌಲನಿಕ ಮನಶ್ಶಾಸ್ತ್ರ. ಮಾನವ ಹಾಗೂ ಪ್ರಾಣಿಗಳ ನಡತೆಯ ಹೋಲಿಕೆಗಳ ಹಾಗೂ ವ್ಯತ್ಯಾಸಗಳ ಬಗೆಗೆ ತೌಲನಿಕ ಅಧ್ಯಯನ.

comparative questions: ತೌಲನಿಕ ಪ್ರಶ್ನೆಗಳು. ಸಮಾಜಶಾಸ್ತ್ರೀಯ ಸಿದ್ಧಾಂತ ಅಥವಾ ಸಂಶೋಧನೆಗಾಗಿ ವಿವಿಧ ಮಾನವ ಸಮಾಜಗಳ ಕುರಿತ ತುಲನಾತ್ಮಕ ಪ್ರಶ್ನೆ ಗಳು.

comparative school: ತೌಲನಿಕ ಪಂಥ.

comparative sociology: ತೌಲನಿಕ ಸಮಾಜಶಾಸ್ತ್ರ.

comparative static equilibrium analysis: ತುಲನಾತ್ಮಕ ಜಡ ಸಮತೋಲನ ವಿಶ್ಲೇಷಣೆ.

comparative static method: ತುಲನಾತ್ಮಕ ಸ್ಥಿರಾತ್ಮಕ ವಿಧಾನ.

comparative statics and dynamics: ತುಲನಾತ್ಮಕ ಸ್ಥಿತಿಶಾಸ್ತ್ರ (ಸ್ಥಿರಶಾಸ್ತ್ರ) ಮತ್ತು ಚಲನಶಾಸ್ತ್ರ.

comparative theory: ತೌಲನಿಕ ಸಿದ್ಧಾಂತ.

compartmentalization: ವಿಭಾಗೀಕರಣ.

compassion: ಅನುಕಂಪ; ಕರುಣೆ.

compatibility: ಸಂಗತತೆ; ಅನುರೂಪತೆ.

compensating variation in income: ವರಮಾನದ ಪರಿಹಾರಾತ್ಮಕ ವ್ಯತ್ಯಾಸ.

compensation: ಪರಿಹಾರ. ಇರುವ ನ್ಯೂನತೆಗಳನ್ನು ಬಚ್ಚಿಡಲು, ಬೇರೆ ವಲಯಗಳಲ್ಲಿ ಸಾಧನೆ ನಡೆಸಿ, ಸಮತೋಲನವನ್ನು ಕಾಪಾಡಿಕೊಳ್ಳುವ ಒಂದು ಮನೋರಕ್ಷಣಾ ತಂತ್ರ.

compensation agreement: ಪರಿಹಾರ ಒಪ್ಪಂದ.

compensation plan: ಪರಿಹಾರ ಯೋಜನೆ.

compensation principle: ಪರಿಹಾರ ಸೂತ್ರ.

compensatory allowance: ಪರಿಹಾರ ಭತ್ಯ; ಪರಿಹಾರ ಭತ್ತೆ.

compensatory duty: ಪರಿಹಾರ ಸುಂಕ.

compensatory education: ಪರಿ ಹಾರ ಬೋಧನೆ ; ನ್ಯೂನಪೂರಣ ಶಿಕ್ಷಣ.

compensatory spending: ಪರಿಹಾರ ರೂಪದ ವೆಚ್ಚ; ಪರಿಹಾರಾತ್ಮಕ ವೆಚ್ಚ.

competent authority: ಸೂಕ್ತ ಅಧಿಕಾರಿ; ಅರ್ಹ ಅಧಿಕಾರಿ.

competing oligopoly: ಸ್ಪರ್ಧಾತ್ಮಕ ಬಹುಜನ ಸ್ವಾಮ್ಯ.

competition: ಸ್ಪರ್ಧೆ; ಪೈಪೋಟಿ.

competitive behaviour: ಸ್ಪರ್ಧಾತ್ಮಕ ವರ್ತನೆ.

competitive capitalism: ಸ್ಪರ್ಧಾತ್ಮಕ ಬಂಡವಾಳಶಾಹಿತ್ವ.

compilation of data: ಮಾಹಿತಿ ಸಂಕಲನ.

complementarity of demand: ಬೇಡಿಕೆಯ ಪೂರಕತೆ.

complementary filiation: ಪೂರಕ ಪುತ್ರತ್ವ.

complementary goods: ಪೂರಕ ವಸ್ತುಗಳು (ಸರಕುಗಳು).

complete independence: ಪೂರ್ಣ ಸ್ವರಾಜ್ಯ.

complex: ಸಂಕೀರ್ಣತೆ. ೧. ಪರಸ್ಪರ ಸಂಬಂಧವಿರುವ ಭಾವನಾತ್ಮಕ ನಂಬುಗೆಗಳು, ವರ್ತನೆಗಳು ಹಾಗೂ ನೆನಪುಗಳು. ಇವನ್ನು ವ್ಯಕ್ತಿಯು ದಮನ ಮಾಡಲು ಪ್ರಯತ್ನಿಸಿದಷ್ಟೂ ಅವು ಅವನ ನಡತೆಯ ಮೇಲೆ ಸಕ್ರಿಯ ಪರಿಣಾಮ ಬೀರುವುವು. ೨. ಒಂದು ವಿಚಾರದ ಅಥವಾ ಸಮಸ್ಯೆಯ ಬಗೆಗೆ ಹಲವು ಭಾವನೆಗಳು, ಕಲ್ಪನೆಗಳು, ತುಮುಲಗಳು ಸೇರಿಕೊಂಡು ವ್ಯಕ್ತಿತ್ವದ ಇತರ ಅಂಶಗಳಿಂದ ಬೇರೆಯಾಗಿ ನಿಲ್ಲುವ ಮನಃಸ್ಥಿತಿ.

complex folk tales: ಸಂಕೀರ್ಣ ಜನಪದ ಕತೆಗಳು. ಎರಡಕ್ಕಿಂತ ಹೆಚ್ಚಿನ ಆಶಯಗಳನ್ನು ಹೊಂದಿದ್ದು ತಮ್ಮ ರಚನೆಯಲ್ಲಿ ಸಂಕೀರ್ಣವಾಗಿರುವ ಜನಪದ ಕತೆಗಳು.

complex labour: ಸಂಕೀರ್ಣ ಶ್ರಮ.

complex organization: ಸಂಕೀರ್ಣ ಸಂಘಟನೆ. ನೋಡಿ: bureaucracy.

complex personality: ಸಂಕೀರ್ಣ ವ್ಯಕ್ತಿತ್ವ.

complex society: ಕ್ಲಿಷ್ಟ (ಸಂಕೀರ್ಣ) ಸಮಾಜ.

complexity: ಜಟಿಲತೆ, ಸಂಕೀರ್ಣತೆ.

compliance: ಆಜ್ಞಾಪಾಲನೆ, ಅನು ಸರಣೆ.

compliance cost: ಅನುಸರಣೆ ವೆಚ್ಚ. ಸರಕಾರದ ಅವಶ್ಯಕತೆಗಳಿಗೆ ಸರಿ ಹೊಂದಿಕೊಳ್ಳುವಂತೆ ಮಾಡುವ ಸಮಯ ಅಥವಾ ಹಣದ ವೆಚ್ಚ.

component: ಘಟಕ.

component part of parliament: ಸಂಸದೀಯ ಅಂಗ.

components of national income: ರಾಷ್ಟ್ರೀಯ ಆದಾಯದ ಘಟಕಗಳು.

composite culture: ಸಮ್ಮಿಶ್ರ ಸಂಸ್ಕೃತಿ.

composite demand: ಸಮ್ಮಿಶ್ರ ಬೇಡಿಕೆ.

composite family: ಸಮ್ಮಿಶ್ರ ಕುಟುಂಬ. ಪರಸ್ಪರ ಸಂಬಂಧವುಳ್ಳ ಎರಡು ಅಥವಾ ಅದಕ್ಕಿಂಥ ಹೆಚ್ಚು ಪ್ರಾಥಮಿಕ (ವಿಭಕ್ತ) ಕುಟುಂಬಗಳು ಒಂದೇ ಮನೆಯಲ್ಲಿ ವಾಸಿಸುವುದು. ನೋಡಿ: joint family.

composite image: ಸಮ್ಮಿಶ್ರ ಬಿಂಬ; ಸಂಯುಕ್ತ ರೂಪ.

composite race: ಸಮ್ಮಿಶ್ರ ಜನಾಂಗ. ಎರಡು ಅಥವಾ ಹೆಚ್ಚು ಜನಾಂಗಗಳ ಲಕ್ಷಣಗಳನ್ನು ಪ್ರತಿನಿಧಿಸುವ ಜನಾಂಗ.

composite supply: ಸಮ್ಮಿಶ್ರ ಪೂರೈಕೆ.

composition: ಸಂರಚನೆ.

composition in performance: ಪ್ರದರ್ಶನದಲ್ಲಿ ಸಂರಚನೆ.

composition of population: ಜನ ಸಂಖ್ಯಾ ಸಂರಚನೆ.

compound family: ಸಂಯುಕ್ತ ಕುಟುಂಬ. ಬಹುಪತಿತ್ವ ಅಥವಾ ಬಹು ಪತ್ನಿತ್ವ ಬಳಕೆಯಲ್ಲಿರುವ ಕುಟುಂಬಗಳಲ್ಲಿ ಒಬ್ಬ ಸಾಮಾನ್ಯ ಗಂಡ ಅಥವಾ ಸಾಮಾನ್ಯ ಹೆಂಡತಿಯ ಮೂಲಕ ಒಟ್ಟಾಗಿ ವಾಸಿಸುವ ಎರಡು ಅಥವಾ ಎರಡಕ್ಕಿಂತ ಹೆಚ್ಚು ವೈಯಕ್ತಿಕ ಕುಟುಂಬಗಳು.

compound group: ಸಂಯುಕ್ತ ಗುಂಪು. ಎರಡು ಅಥವಾ ಎರಡಕ್ಕಿಂತ ಹೆಚ್ಚಿನ ಉಪ ಗುಂಪುಗಳ ಸೇರುವಿಕೆ.

compound riddle: ಸಂಯುಕ್ತ ಒಗಟು.

comprehension: ಪರಿಬೋಧೆ; ಗ್ರಹಿಕೆ; ಅರ್ಥಗ್ರಹಣ.

comprehensive data: ಸಮಗ್ರ ಮಾಹಿತಿ; ಪೂರ್ಣ ಮಾಹಿತಿ.

comprehensive document: ಸಂಪೂರ್ಣ ದಾಖಲೆ.

compromise: ರಾಜಿ; ಅನುಸಂಧಾನ; ಒಪ್ಪಂದ. ವೈರತ್ವವಿರುವ ಎರಡು ವ್ಯಕ್ತಿಗಳ ಅಥವಾ ಗುಂಪುಗಳ ನಡುವೆ ಪರಸ್ಪರ ರಿಯಾಯಿತಿಯ ಮೇರೆಗೆ ಮಾಡಿಕೊಳ್ಳುವ ಒಂದು ರೀತಿಯ ಸಮಂಜನ ಅಥವಾ ಹೊಂದಾಣಿಕೆ.

compromise formation: ರಾಜಿ ರೂಪಣ; ಸಮನ್ವಯ ರೂಪಣ.

compromise reaction: ರಾಜಿ ಪ್ರತಿಕ್ರಿಯೆ. ವ್ಯಕ್ತಿಯು ತನ್ನ ನಿರಾಶೆಯನ್ನು ಆಂಶಿಕವಾಗಿ ಒಪ್ಪಿಕೊಳ್ಳುವಂಥ ಮಾನಸಿಕ ಪ್ರತಿಕ್ರಿಯೆ.

comptroller and auditor general: ನಿಯಂತ್ರಕ ಮತ್ತು ಮಹಾಲೆಕ್ಕ ಪರಿ ಶೋಧಕ. ರಾಷ್ಟ್ರದ ಹಣವನ್ನು ಹೇಗೆ ಖರ್ಚು ಮಾಡಲಾಯಿತು ಎಂಬುದರ ಬಗ್ಗೆ ತಿಳಿಸುವ, ಕಾರ್ಯಾಂಗದಿಂದ ಸ್ವತಂತ್ರ ವಾದ ಮತ್ತು ಶಾಸಕಾಂಗಕ್ಕೆ ಜವಾಬ್ದಾರಿ ಹೊಂದಿ ರುವ ಅಂಗ.
(comptroller- ಎಂಬ ಪದವು cont roller ಪದದ ತಪ್ಪು ರೂಪವಾಗಿ ಈಗಲೂ ಬಳಕೆಯಲ್ಲಿದೆ.)

compulsion: ಒತ್ತಾಯ; ಚಟ. ತನಗೆ ಇಷ್ಟವಿಲ್ಲದಿದ್ದರೂ ಮತ್ತೆ ಮತ್ತೆ ಕೆಲವು ನಿರ್ದಿಷ್ಟ ವರ್ತನೆಗಳನ್ನು ಪ್ರಕಟಿಸಲೇ

ಬೇಕಾದ ಆಂತರಿಕ ಒತ್ತಡ. ಉದ್ವೇಗ ವನ್ನು ಕಡಿಮೆಗೊಳಿಸಲು ವ್ಯಕ್ತಿಯು ಅವೈಚಾರಿಕ ಕ್ರಿಯೆಗಳನ್ನು ತನ್ನ ಅರಿವಿಲ್ಲದೆಯೇ ಮಾಡುವ ಮಾನಸಿಕ ಪ್ರಕ್ರಿಯೆ.

compulsive deviance: ಸ್ವನಿಯಂ ತ್ರಣ ರಹಿತ ಅಪವರ್ತನೆ. ಅಪವರ್ತನೆ ಯನ್ನು ವ್ಯಕ್ತಿಯು ಸ್ವತಃ ಹಿಡಿತದಲ್ಲಿಡ ಲಾರದಂತಹ ವರ್ತನೆ. ಉದಾ: ಮಾದಕ ದ್ರವ್ಯಗಳ ಸೇವನೆ.

compulsive personality: ಒತ್ತಡ ವ್ಯಕ್ತಿತ್ವ. ತೊಡಕುಗಳು ಬಂದಾಗ ಅಚಲ ರಂತೆ ವರ್ತಿಸುವ, ಮನೋಗತಗಳನ್ನು ಭಾವನೆಗಳನ್ನು ಹತ್ತಿಕ್ಕುವ, ನಿಯಮ ಬದ್ಧತೆಯಿಂದ ಆರಾಮವಾಗಿರಲು ಸಾಧ್ಯ ವಾಗದೆ ಚಡಪಡಿಸುವ ಬಿಗುವಿನ ಸ್ವಭಾವ ದವರು.

compulsory acquisition: ಕಡ್ಡಾಯ ಅರ್ಜನೆ.

compulsory association: ಕಡ್ಡಾಯ ಸಂಘಟನೆ. ಉದಾ: ಜಾತಿ.

compulsory debt: ಕಡ್ಡಾಯ ಸಾಲ. ಸರಕಾರವು ಕೆಲವು ವಿಶೇಷ ಸಂದರ್ಭಗಳಲ್ಲಿ ಯುದ್ಧ ಮತ್ತು ಹಣದುಬ್ಬರದ ಸಮಯದಲ್ಲಿ ಪ್ರಜೆಗಳಿಂದ ಪಡೆಯುವ ಸಾಲ.

compulsory factor: ಒತ್ತಾಯದ ಅಂಶ; ಇರಲೇಬೇಕಾದ ಕಾರಕಾಂಶ.

compulsory jurisdiction: ಕಡ್ಡಾಯ ಅಧಿಕಾರವ್ಯಾಪ್ತಿ; ಕಡ್ಡಾಯ ಕಾರ್ಯವ್ಯಾಪ್ತಿ. ಕಡ್ಡಾಯವಾಗಿ ಮಾಡಬೇಕಾದ ಯಾ ಚಲಾ ಯಿಸಬೇಕಾದ ಕಾರ್ಯ ಅಥವಾ ಅಧಿಕಾರ.

compulsory referendum: ಕಡ್ಡಾಯ ಜನಾದೇಶ; ಕಡ್ಡಾಯ ಪ್ರಜಾನಿರ್ಧಾರ. ಕೆಲವೊಂದು ವಿಶಿಷ್ಟವಾದ ಮತ್ತು ಉಲ್ಲೇಖಿತವಾದ ವಿಷಯಗಳ ಬಗೆಗಿನ ಎಲ್ಲಾ ವಿಧೇಯಕಗಳು ಜನಾದೇಶದ ಮುಖಾಂತರವೇ ಅಂತಿಮವಾಗಿ ಸ್ವೀಕರಿ ಸಲ್ಪಟ್ಟು ಕಾಯಿದೆಗಳಾಗುವುದು. ಸ್ವಿಡ್ಜರ್‌ಲ್ಯಾಂಡ್‌ನಲ್ಲಿ ಈ ವಿಧಾನವಿದೆ.

compulsory retirement: ಕಡ್ಡಾಯ ನಿವೃತ್ತಿ.

computer: ಗಣಕ ಯಂತ್ರ.

computerization: ಗಣಕೀಕರಣ.

comradely court: ರಶಿಯಾದ ಜನ ಸಾಮಾನ್ಯ ನ್ಯಾಯಾಲಯ. ಸೋವಿಯೆಟ್ ನ್ಯಾಯಾಂಗ ವ್ಯವಸ್ಥೆಯ ತಳಹದಿ ಮಟ್ಟ ದಲ್ಲಿಯ ನ್ಯಾಯಾಲಯ.

conation: ಕ್ರಿಯಾವೃತ್ತಿ.

conative behaviour: ಕ್ರಿಯಾವೃತ್ತಿಯ ವರ್ತನೆ.

concatenation: ಸಂಯೋಜನೆ; ಸರಪಣಿ; ಕಾರಣಮಾಲೆ.

concealed discount: ಅವ್ಯಕ್ತ ಸೋಡಿ. ಸಗಟು ವ್ಯಾಪಾರಿಯು ಚಿಲ್ಲರೆ ವ್ಯಾಪಾರಿಗೆ ಅಥವಾ ತಯಾಕರಕನು ವಿತರಕನಿಗೆ ತನ್ನ ಸರಕುಗಳನ್ನು ಮಾರಾಟ ಮಾಡುವಾಗ ಪ್ರಕಟಿತ ಬೆಲೆಗಿಂತ ಕಡಿಮೆ ದರದಲ್ಲಿ ವಿಧಿಸುವ ಬೆಲೆಯ ಶೇಕಡಾ ದರ.

conceit: ಹಮ್ಮು; ಗರ್ವ.

concentration: ಏಕತ್ರೀಕರಣ.

concentration camp: ರಾಜಕೀಯ ಕೈದಿಗಳ ಶಿಬಿರ.

concentric plan: ಏಕಕೇಂದ್ರ ವೃತ್ತ ಯೋಜನೆ.

concentric zone hypothesis: ಕೇಂದ್ರೀಕೃತ ವಲಯ ಪ್ರಮೇಯ. ಕೇಂದ್ರ ವ್ಯಾಪಾರ ಸ್ಥಳದ ಸುತ್ತಲೂ ಆಧುನಿಕ ನಗರ ಬೆಳೆಯುತ್ತದೆ ಎಂಬ ಊಹೆ. ಇಲ್ಲಿ ದಿನಾಲೂ ಬಂದು ಹೋಗುವ ಜನರ ಸಂಖ್ಯೆ ಅಧಿಕವಾಗಿದ್ದು ಇದು ಸಂಚಾರೀ ವಲಯ ವಾಗಿದೆ.

concept: ಪರಿಕಲ್ಪನೆ; ಕಲ್ಪನೆ. ಯಾವುದೇ ಒಂದು ಸಂಗತಿಯ ಲಕ್ಷಣವನ್ನು ಅಥವಾ ವಸ್ತುಗಳ ನಡುವಿನ ಸಂಬಂಧವನ್ನು ಅಭಿವ್ಯಕ್ತಿಸುವ ಪದ ಸಮುಚ್ಚಯ.

concept of justice: ನ್ಯಾಯದ ಕಲ್ಪನೆ.

concept of self: ಸ್ವಪರಿಕಲ್ಪನೆ; ಆತ್ಮ ಕಲ್ಪಿತ ಭಾವ; ಅಹಂನ ಪರಿಕಲ್ಪನೆ.

concept of stationary state: ಸ್ಥಿರಸ್ಥಿತಿಯ ಪರಿಕಲ್ಪನೆ.

concept of time perspective: ಕಾಲ ದೃಷ್ಟಿಯ ಪರಿಕಲ್ಪನೆ.

conceptual approach: ಪರಿಕಲ್ಪನೆ ಯಾಧಾರಿತ ಅಧ್ಯಯನ ವಿಧಾನ.

conceptual framework: ಪರಿ ಕಲ್ಪನೆಯ ಚೌಕಟ್ಟು.

conceptual model: ಪರಿಕಲ್ಪನಾ ಮಾದರಿ.

conceptual thinking: ಪರಿಕಲ್ಪನಾ ತ್ಮಕ ಚಿಂತನೆ.

conceptualization: ಪರಿಕಲ್ಪನಾ ತ್ಮಕತೆ; ಭಾವವಾಚೀಕರಣ.

Concert of Europe: ಐರೋಪ್ಯ ಕೂಟ.

concession curve: ರಿಯಾಯಿತಿ ರೇಖೆ.

conciliation: ಮನವೊಲಿಸುವಿಕೆ; ಸಂಧಾನ ಉಭಯ ಪಕ್ಷಗಳನ್ನು ಸಮಾಧಾನ ಪಡಿಸುವುದು.

conciliation officer: ಸಮನ್ವಯ ಅಧಿಕಾರಿ.

conclusive evidence: ನಿರ್ಣಯಾತ್ಮಕ ಸಾಕ್ಷ್ಯ.

concomitant part: ಸಹವರ್ತಿ ಭಾಗ.

concomitant variables: ಸಹವರ್ತಿ ಪರಿವರ್ತಕಗಳು. ಎರಡು ಅಥವಾ ಅದಕ್ಕಿಂತ ಹೆಚ್ಚು ಸಂಖ್ಯಾತ್ಮಕ ಪರಿವರ್ತಕಗಳ ಅಂತರ್ ಸಂಬಂಧದಿಂದ ಒಂದು ಪರಿವರ್ತಕದ ಆಕಾರ, ಪರಿಮಾಣದಲ್ಲಾಗುವ ಹೆಚ್ಚಳವು ಇನ್ನೊಂದು ಪರಿವರ್ತಕದ ಆಕಾರ, ಪರಿ ಮಾಣದಲ್ಲಿ ಹೆಚ್ಚಳ ಅಥವಾ ಕಡಿತವನ್ನು ತರಬಹುದು.

concrete: ವಾಸ್ತವಿಕ; ಮೂರ್ತ; ಸ್ಪಷ್ಟ ಗೋಚರ.

concrete case: ನಿರ್ದಿಷ್ಟ ಪ್ರಕರಣ.

concrete image: ಮೂರ್ತ ಬಿಂಬ.

concrete intelligence: ಮೂರ್ತ ಬುದ್ಧಿಶಕ್ತಿ.

concrete labour: ಮೂರ್ತ ಶ್ರಮ. ಸರಕಿನ ಉಪಯುಕ್ತತಾ ಮೌಲ್ಯವನ್ನು ಉಪ ಯೋಗವಾಗುವ ರೀತಿಯಲ್ಲಿ ವ್ಯಯಿಸಿದ ಶ್ರಮ.

concrete operational stage: ಮೂರ್ತ ಕ್ರಿಯಾ ಹಂತ. ಪ್ರಪಂಚದ ಭೌತಿಕ ವಸ್ತುಗಳ ಗ್ರಹಿಸಿಕೊಳ್ಳುವಿಕೆಯಿಂದ ಮಗುವಿನ ಜ್ಞಾನ ಬೆಳವಣಿಗೆಯಾಗುವ ಹಂತ.

concrete social class: ಮೂರ್ತ ಸಾಮಾಜಿಕ ವರ್ಗ. ಪರಸ್ಪರ ಸಂಬಂಧವುಳ್ಳ

ಒಂದು ಗುಂಪಿನ ಸದಸ್ಯರು ಸಾಮಾಜಿಕ ಘಟಕದಂತೆ ಕೆಲಸ ಮಾಡುವುದು. ಉದಾ: ರಾಜಕೀಯ ಪಕ್ಷಗಳು, ಕ್ಲಬ್‌ಗಳು, ನಿಗಮ ಗಳು.

concrete social group: ನೋಡಿ: concrete social class.

concrete sociology: ಮೂರ್ತ ಸಮಾಜಶಾಸ್ತ್ರ.

concrete system: ಮೂರ್ತ ವ್ಯವಸ್ಥೆ.

concubinage: ಉಪಪತ್ನಿತ್ವ.

concubine: ಉಪಪತ್ನಿ. ಧರ್ಮಪತ್ನಿ ಯಲ್ಲದೆ ವಿವಾಹಿತ ಹೆಣ್ಣಿನಷ್ಟೇ ನಿಷ್ಠೆ ಯಿಂದ ಜೊತೆಯಲ್ಲಿ ಬಾಳುವ ಸ್ತ್ರೀ. ಕೆಲ ವೊಂದು ಸಂದರ್ಭಗಳನ್ನು ಬಿಟ್ಟು ಉಳಿ ದಂತೆ ಅಂತಹ ಸಂಬಂಧದಿಂದ ಜನಿಸಿದ ಮಕ್ಕಳು ತಂದೆಯಿಂದ ಉತ್ತರಾಧಿಕಾರದ ಹಕ್ಕನ್ನು ಪಡೆಯುತ್ತಾರೆ.

concurrence: ಸಹಮತಿ.

concurrent jurisdiction: ಸಹ ಸಮಾನಾಧಿಕಾರ ವ್ಯಾಪ್ತಿ.

concurrent list: ಸಮವರ್ತಿ ಪಟ್ಟಿ. ರಾಜ್ಯ ಸರಕಾರಗಳು ಹಾಗೂ ಕೇಂದ್ರ ಸರಕಾರ ಸಹಭಾಗಿತ್ವದಲ್ಲಿ ನಿರ್ವಹಿಸಬೇಕಾದ ಕಾರ್ಯಗಳ ಪಟ್ಟಿ. ನೋಡಿ : state list, union list.

condensed course of education: ಸಂಕ್ಷೇಪಾವಧಿಯ ಶಿಕ್ಷಣ.

condition: ಉಪಾಧಿ; ಸ್ಥಿತಿ.

conditional acceptance: ಷರತ್ತಿಗೆ ಒಳಪಟ್ಟು ಒಪ್ಪಿಗೆ; ಷರತ್ತುಸಹಿತ ಒಪ್ಪಿಗೆ.

conditional endorsement: ಷರತ್ತು ಯುಕ್ತ ಹಿಂಬರಹ.

conditional liquidity: ನಿರ್ಬಂಧಿತ ದ್ರವ್ಯತೆ. ಅನೇಕ ನಿಬಂಧನೆ ಮತ್ತು ನಿರ್ಬಂಧಗಳಿಗೊಳಪಟ್ಟು ಆರ್ಥಿಕ ತೊಂದರೆ ಗೊಳಗಾದ ದೇಶವೊಂದಕ್ಕೆ ಹಣದ ರೂಪ ದಲ್ಲಿ ದೊರೆಯುವ ಸಾಲ.

conditional reflex: ನಿಯಂತ್ರಿತ ಪ್ರತಿಫಲನ; ಅನುಬಂಧಿತ ಪ್ರತಿಫಲನ.

conditional response: ನಿಯಂತ್ರಿತ ಪ್ರತಿಕ್ರಿಯೆ. ಅನುಬಂಧಿತ ಪ್ರತಿಕ್ರಿಯೆ.

conditional sale: ಷರತ್ತುಯುಕ್ತ ಮಾರಾಟ.

conditioned learning: ಅನುಬಂಧಿತ ಕಲಿಕೆ.

conditioned reaction: ಅನುಬಂಧಿತ ಪ್ರತಿಕ್ರಿಯೆ. ಆಘಾತಕಾರಿ ಸನ್ನಿವೇಶಗಳಲ್ಲಿ ಉಂಟಾದ ಮಾನಸಿಕ ಮತ್ತು ದೈಹಿಕ ಬೇನೆಯ ಚಿಹ್ನೆಗಳನ್ನು ಪುನಃ ಅನುಭವಿಸುವುದು. ಉದಾ: ಬಾಂಬುಗಳ ಶಬ್ದದಿಂದ ಭಯಭೀತ ನಾದ ರೋಗಿಯೊಬ್ಬ ಆಮೇಲೆ ದೊಡ್ಡ ಶಬ್ದಗಳನ್ನು ಕೇಳಿದಾಗಲೆಲ್ಲಾ ಹೌಹಾರುವ ಅಥವಾ ಕಿರುಚುವಂತಹ ಪ್ರತಿಕ್ರಿಯೆ.

conditioned reflex: ಅನುಬಂಧಿತ ಪ್ರತಿಕ್ಷೇಪ.

conditioned reinforcement: ಅನು ಬಂಧಿತ ಪುನರ್ಬಲನ.

conditioned response: ನಿಯಂತ್ರಿತ ಪ್ರತಿಕ್ರಿಯೆ.

conditioned stimulus: ಅನುಬಂಧಿತ ಪ್ರಚೋದಕ.

conditioning: ಅನುಬಂಧನ.

conduct: ನಡತೆ.

conduct-disorders: ದುರ್ನಡತೆಗಳು.

confabulation: ಹುಸಿಗಥೆ; ಜ್ಞಾಪಕ ಶಕ್ತಿಯ ತಾರಮಾರು. ಕಾಲ್ಪನಿಕ ಅನುಭವಗಳನ್ನು ಸತ್ಯವೆಂದು ಗ್ರಹಿಸಿ ಮರೆತುಹೋದ ಅನುಭಗಳ ಬದಲಿಗೆ ಸೇರಿಸಿಕೊಂಡು ಬಿಡುವುದು. ಆದರೆ ಇದು ಇನ್ನೊಬ್ಬರನ್ನು ಮೋಸಗೊಳಿಸಬೇಕೆಂಬ ಇಚ್ಛೆಯಿಲ್ಲದ ಸಹಜ ಪ್ರಕ್ರಿಯೆ.

confederacy: ಮಿತ್ರರ ಒಕ್ಕೂಟ; ಉದಾ: ವಿಜಯನಗರದ ವಿರುದ್ಧ ದಖ್ಖನ್ನಿನ ಸುಲ್ತಾನರು ಮಾಡಿಕೊಂಡ ಒಪ್ಪಂದ.

confederate government: ಮಹಾಕೂಟ ಸರಕಾರ.

confederation: ಸಂಘವ್ಯವಸ್ಥೆ; ಒಕ್ಕೂಟ.

confederation period: ಒಕ್ಕೂಟದ ಅವಧಿ.

confession: ತಪ್ಪೊಪ್ಪಿಗೆ; ಪಶ್ಚಾತ್ತಾಪ ನಿವೇದನೆ. ಮನೋಬೇನೆಯ ಚಿಕಿತ್ಸೆಯಲ್ಲಿ ಬರುವ ನಾಲ್ಕು ಮುಖ್ಯ ಹಂತಗಳಲ್ಲೊಂದು. ರೋಗಿ ತನ್ನ ನಿರೋಧಿತವಾದ ಅನುಭವಗಳನ್ನೆಲ್ಲ ಹೊರಹಾಕಿಕೊಳ್ಳುವುದು ಮತ್ತು ಹುದುಗಿದ ಭಾವನೆಗಳನ್ನು ವ್ಯಕ್ತಪಡಿಸುವುದು.

confidential record: ರಹಸ್ಯ ದಾಖಲೆ; ಗೋಪ್ಯ ದಾಖಲೆ.

confidential report: ರಹಸ್ಯ ವರದಿ.

configuration: ವಿನ್ಯಾಸ; ಸಾಪೇಕ್ಷ ಸ್ಥಾನ. ಪರಸ್ಪರ ಸಂಬಂಧಿತ ಅಂಶಗಳ ಸಂಘಟಿತ ವಿನ್ಯಾಸ.

confirmation: ಸ್ಥಿರೀಕರಣ. ಪವಿತ್ರ ಚೇತನವನ್ನು ಸ್ವೀಕರಿಸುವುದು. ಕ್ರೈಸ್ತಜ್ಞಾನಸ್ನಾನವಾದವರಿಗೆ ಕೊಡುವ ಸ್ಥಿರೀಕರಣ ಸಂಸ್ಕಾರ.

confirmation letter: ದೃಢೀಕರಣ ಪತ್ರ.

confiscation: ಮುಟ್ಟುಗೋಲು.

conflict: ಘರ್ಷಣೆ; ಹೋರಾಟ; ಸಂಘರ್ಷ. ಒಂದೇ ಉದ್ದೇಶ ಸಾಧನೆಗಾಗಿ ವ್ಯಕ್ತಿಗಳ ಅಥವಾ ಗುಂಪುಗಳ ನಡುವೆ ಪ್ರತ್ಯಕ್ಷ ಹಾಗೂ ಪ್ರಜ್ಞಾಪೂರ್ವಕ ಹೋರಾಟ.

conflict approach: ಸಂಘರ್ಷ ವಿಧಾನ.

conflict model: ಘರ್ಷಣಾ ಮಾದರಿ.

conflict model of society: ನೋಡಿ: conflict theory.

conflict of duties: ಕರ್ತವ್ಯಗಳ ಸಂಘರ್ಷ.

conflict situation: ದ್ವಂದ್ವ ಪರಿಸ್ಥಿತಿ.

conflict structures: ಸಂಘರ್ಷಾತ್ಮಕ ರಚನೆಗಳು.

conflict theory: ಸಂಘರ್ಷ ಸಿದ್ಧಾಂತ. ಹಿಂದಿನ, ಇಂದಿನ ಹಾಗೂ ಮುಂದಿನ ಸಾಮಾಜಿಕ ಸಂಗತಿಗಳೆಲ್ಲವೂ ಸಂಘರ್ಷದ ಫಲಿತಾಂಶ ಎಂದು ವಿವರಿಸುವ ಸಿದ್ಧಾಂತ.

conflicting motives: ಘರ್ಷಣಾತ್ಮಕ ಪ್ರೇರಣೆಗಳು.

conformity: ಅನುವರ್ತನೆ; ಅನುಸರಣೆ; ಅನುರೂಪತೆ. ಸಾಮಾಜಿಕ ಸಮೂಹದ ನಿರೀಕ್ಷೆಯಂತೆಯೇ ಇರುವ ವರ್ತನೆ.

conformity behaviour: ಅನುಸರಣಾ ವರ್ತನೆ.

conformity disposition: ಅನುಸರಣಾ ಸನ್ನಾಹ.

conformity proneness: ಅನುಸರಣಾ ಪ್ರವೃತ್ತಿ.

congeniality group: ಹಿತಕಾರಿ ಗುಂಪು. ಪರಸ್ಪರ ಮೆಚ್ಚುವ ಹಾಗೂ ಹೊಂದಿಕೊಂಡು ಹೋಗುವ, ಸಾಮಾನ್ಯ ಹಿತಾಸಕ್ತಿಯುಳ್ಳ ಸದಸ್ಯರುಗಳ ಸಣ್ಣ ಅನೌಪಚಾರಿಕ ಸಮೂಹ.

congenital character: ಜನ್ಮಜಾತ ಗುಣ.

congenital differences: ಜನ್ಮಜಾತ ವ್ಯತ್ಯಾಸಗಳು; ಹುಟ್ಟು ವ್ಯತ್ಯಾಸಗಳು.

conglomeration: ಒಂದುಗೂಡುವಿಕೆ.

congregate groups: ಒಂದುಗೂಡಿದ ಗುಂಪುಗಳು.

Congress oligarchy: ಕಾಂಗ್ರೆಸ್ ಅಧಿಪತ್ಯ. ಭಾರತದ ಮೊದಲ ಪ್ರಧಾನಿ ನೆಹರು, ಉಪಪ್ರಧಾನಿಯಾಗಿದ್ದ ಪಟೇಲ್, ಆಹಾರ ಮತ್ತು ವ್ಯವಸಾಯ ಸಚಿವರಾಗಿದ್ದ ರಾಜೇಂದ್ರ ಪ್ರಸಾದ್ ಮತ್ತು ವಿದ್ಯಾ ಸಚಿವರಾಗಿದ್ದ ಆಜಾದ್ ಸಂವಿಧಾನ ರಚನಾ ಸಭೆಯಲ್ಲಿ ಹೆಚ್ಚು ಪ್ರಭಾವ ಬೀರಿ ಸಂವಿಧಾನದ ಶಿಲ್ಪಿಗಳೆಂದು ಪ್ರಸಿದ್ಧಿಯಾದವರು; ಈ ನಾಲ್ವರು ಸಂವಿಧಾನ ರಚನಾಸಭೆಯಲ್ಲಿ 'ಕಾಂಗ್ರೆಸ್ ಆಲಿಗಾರ್ಕಿ' ಸ್ಥಾಪಿಸಿದರೆಂಬ ಅಭಿಪ್ರಾಯ.

congressional district: ಮತಕ್ಷೇತ್ರ ಜಿಲ್ಲೆ. ಅಮೇರಿಕಾದ ಕಾಂಗ್ರೆಸ್‌ನ ಚುನಾವಣೆಗೆ ಸಂಬಂಧಪಟ್ಟ ಮತಕ್ಷೇತ್ರ.

conjectural amendation: ಊಹಾತ್ಮಕ ತಿದ್ದುಪಡಿ ಕ್ರಮ. ವಿಭಿನ್ನ ಪಾಠಾಂತರಗಳಿಲ್ಲದೇ, ಒಂದೇ ಪಾಠಾಂತರವೂ ಸಂದೇಹಾಸ್ಪದವಾಗಿದ್ದಾಗ ಅನ್ವೇಷಕನು ಈ ಕ್ರಮವನ್ನು ಬಳಸಿ ಸಂದರ್ಭಾನುಸಾರವಾಗಿ ತಿದ್ದುಪಡಿಗಳನ್ನು ಮಾಡುವ ಕ್ರಮ.

conjectural history: ಊಹಾತ್ಮಕ ಇತಿಹಾಸ.

conjugal family: ದಾಂಪತ್ಯ ಕುಟುಂಬ. ರಕ್ತಸಂಬಂಧಕ್ಕಿಂತಲೂ ಗಂಡ-ಹೆಂಡಿರ ಸಂಬಂಧಕ್ಕೆ ಹೆಚ್ಚಿನ ಮಹತ್ವ ಕೊಡುವ ಕೌಟುಂಬಿಕ ಸಂಘಟನೆ.

conjugal role: ದಾಂಪತ್ಯ ಪಾತ್ರ.

conjugate movement: ಸಂಯುಕ್ತ ಚಲನೆ.

connubium: ಕಾನೂನುಬದ್ಧ ವಿವಾಹ.

consanguine: ರಕ್ತ ಸಂಬಂಧ; ಸಪಿಂಡ; ಒಂದೇ ರಕ್ತದ.

consanguine family: ರಕ್ತಸಂಬಂಧೀ ಕುಟುಂಬ. ಗಂಡ-ಹೆಂಡಿರ ಸಂಬಂಧಕ್ಕಿಂತ ಹೆತ್ತವರು, ಮಕ್ಕಳು, ಅಣ್ಣ ತಮ್ಮಂದಿರು, ಅಕ್ಕತಂಗಿಯರ ರಕ್ತ ಸಂಬಂಧದ ಬಗೆಗೆ ಹೆಚ್ಚಿನ ಮಹತ್ವಕೊಡುವ ಕೌಟುಂಬಿಕ ಸಂಘಟನೆ.

consanguine group: ರಕ್ತ ಸಂಬಂಧೀ ಸಮೂಹ. ನೋಡಿ: consanguine family.

consanguineal group: ರಕ್ತ ಸಂಬಂಧೀ ಗುಂಪು. ಸಂಬಂಧವು ಊಹನೆ ಅಥವಾ ಕಾಲ್ಪನಿಕವಾಗಿರುವ ರಕ್ತ ಸಂಬಂಧಿಗಳ ಸಾಮಾಜಿಕ ಗುಂಪು. ಉದಾ: ಗೋತ್ರ. ಅಂತಹ ಕಾಲ್ಪನಿಕ ಸಂಬಂಧದಲ್ಲಿ ರಕ್ತೇತರ ಸಂಬಂಧಿಗಳೂ ಗುಂಪಿಗೆ ಸೇರುವ ಮತ್ತು

ನಿಜವಾದ ರಕ್ತಸಂಬಂಧಿಗಳು ಗುಂಪಿನಿಂದ ಹೊರಗುಳಿಯುವ ಸಾಧ್ಯತೆಗಳಿವೆ.

consanguineal kin group: ರಕ್ತ ಸಂಬಂಧೀ ಕಳ್ಳುಬಳ್ಳಿ ಸಮೂಹ. ಒಂದೇ ಮನೆಯಲ್ಲಿ ವಾಸಿಸದಿದ್ದರೂ ರಕ್ತ ಸಂಬಂಧಿಗಳಾಗಿರುವ ವ್ಯಕ್ತಿಗಳ ಗುಂಪು.

consanguineal relative: ರಕ್ತ ಸಂಬಂಧಿ; ರಕ್ತಸಂಬಂಧೀ ಬಂಧು. ಸಾಮಾನ್ಯ ರಕ್ತ ಹಾಗೂ ಒಬ್ಬನೇ ಪೂರ್ವಿಕನಿರುವ ಸಂಬಂಧಿಗಳು.

consanguineous family: ನೋಡಿ: consanguine family.

consanguinity: ರಕ್ತಸಂಬಂಧ. ರಕ್ತ ಸಂಬಂಧದ ಮೂಲಕ ಅಥವಾ ಸಾಮಾನ್ಯ ಪೂರ್ವಜರಿಂದ ಆದ ಸಂಬಂಧ.

conscience: ಸದ್ವಿವೇಚನೆ; ಮನಸ್ಸಾಕ್ಷಿ. ಸಾಮಾಜಿಕ ಸಮೂಹದ ಅನುಭವಗಳಿಂದ ವ್ಯಕ್ತಿಯು ಮೈಗೂಡಿಸಿಕೊಳ್ಳುವ ವರ್ತನೆಯ ನೈತಿಕ ಮಾಪಕಗಳು.

conscious experience: ಪ್ರಜ್ಞಾಪೂರ್ವಕ ಅನುಭವ. ವ್ಯಕ್ತಿಯು ಒಂದು ನಿರ್ದಿಷ್ಟ ಸಮಯದ ಅನುಭವಗಳನ್ನು ನೆನಪಿಸಿ, ಸಂಘಟಿಸಿ, ಮಾತಿನ ಮೂಲಕ ಹೇಳುವ ಕ್ರಿಯೆ.

conscious imitation: ಪ್ರಜ್ಞಾಪೂರ್ವಕ ಸುಪ್ತಚೇತನ ಅನುಕರಣೆ.

conscious mental function: ಪ್ರಾಜ್ಞಿಕ ಮನೋಕಾರ್ಯ.

conscious state: ಪ್ರಾಜ್ಞಿಕ ಸ್ಥಿತಿ.

consciousness: ಪ್ರಜ್ಞೆ; ಜಾಗ್ರತಾವಸ್ಥೆ.

consciousness of kind: ಪ್ರಭೇದ ಪ್ರಜ್ಞೆ; ಪ್ರಭೇದದ ಅರಿವು; ಸಾದೃಶ್ಯ ಸ್ವರೂಪ ಪ್ರಜ್ಞೆ. ತನ್ನಂತೆಯೇ ಇರುವ ಇತರರೊಡನೆ ವ್ಯಕ್ತಿಯು ತನ್ನನ್ನು ಗುರುತಿಸಿಕೊಳ್ಳುವುದು ಅಥವಾ ಪ್ರಭೇದದ ಬಗ್ಗೆ ವ್ಯಕ್ತಿಗೆ ಅರಿವಿರುವುದು.

consciousnesss of status: ಸ್ಥಾನಮಾನದ ಪ್ರಜ್ಞೆ.

consecration ceremony: ಪರಿಶುದ್ಧಗೊಳಿಸುವ ಧಾರ್ಮಿಕ ವಿಧಿ.

consensus theory: ಸಹಮತ ಸಿದ್ಧಾಂತ.

consensus view: ಸಹಮತ ದೃಷ್ಟಿ.

conservation of energy: ಶಕ್ತಿ ಸ್ಥಾಯಿತ್ವ.

consent: ಸಮ್ಮತಿ.

conservatism: ಸಂಪ್ರದಾಯಬದ್ಧತೆ. ಸಾಂಪ್ರದಾಯಿಕ, ಸಾಂಸ್ಕೃತಿಕ ಮೌಲ್ಯಗಳು ಹಾಗೂ ಈ ನಿಯಮಗಳಲ್ಲಿ ಯಾವುದೇ ರೀತಿಯ ಬದಲಾವಣೆಯನ್ನು ವಿರೋಧಿಸುವ ಮನೋಭಾವ.

conservative group: ಸಂಪ್ರದಾಯಶೀಲ ಗುಂಪು.

Conservative Party: ಸಂಪ್ರದಾಯವಾದಿ ಪಕ್ಷ. ಇಂಗ್ಲೆಂಡ್‌ನ ರಾಜಕೀಯದಲ್ಲಿ ಪ್ರಮುಖ ಪಾತ್ರವಹಿಸುವ ಎರಡು ರಾಜಕೀಯ ಪಕ್ಷಗಳಲ್ಲಿ ಒಂದು.

consistency: ಸುಸಂಗತೆ; ಸಮಂಜಸತೆ; ದೃಢತೆ.

consistency postulate: ಖಚಿತ ನಿಲುವಿನ ಗ್ರಹೀತ ತತ್ವ.

consolidated fund of India: ಭಾರತದ ಸಂಚಿತ ನಿಧಿ. ರಾಷ್ಟ್ರಾಧ್ಯಕ್ಷರು, ಸರ್ವೋಚ್ಚ

ನ್ಯಾಯಾಲಯದ ನ್ಯಾಯಾಧೀಶರು ಸಂಸತ್ತಿನ ಎರಡೂ ಸದನಗಳ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ನಿಯಂತ್ರಕ ಮತ್ತು ಪ್ರಧಾನ ಲೆಕ್ಕಶೋಧಕ ಇವರೆಲ್ಲರ ವೇತನ, ಹಲವು ರೀತಿಯ ನಿವೃತ್ತಿ ವೇತನಗಳು, ನ್ಯಾಯಾಲಯ ನೀಡುವ ತೀರ್ಪಿಗೆ ಅನುಸಾರವಾಗಿ ಸರ್ಕಾರ ನೀಡಬೇಕಾದ ಹಣ ಮತ್ತು ಕಾನೂನು ಅಥವಾ ಸಂಸತ್ತು ನಿರ್ಧರಿಸುವಂತಹ ವೆಚ್ಚಗಳನ್ನು ಭರಿಸುವಂತಹ ನಿಧಿ.

consolidated stock: ಕ್ರೋಢೀಕೃತ ಶೇಖರಣೆ.

consolidation: ಕ್ರೋಢೀಕರಣ; ಏಕತ್ರೀಕರಣ.

consolidation of holdings: ಹಿಡುವಳಿಗಳ ಕ್ರೋಢೀಕರಣ.

conspicuous consumption: ಪ್ರತಿಷ್ಠೆಯ ಅನುಭೋಗ. ವಿಲಾಸೀ ಅನುಭೋಗ.

constancy of I.Q. : ಬುದ್ಧಿಶಕ್ತಿ ಲಬ್ಧದ ಸ್ಥಿರತೆ (ಬು.ಲ. ಸ್ಥಿರತೆ).

constant: ನಿಯತ; ಸ್ಥಿರ.

constant action: ಸ್ಥಿರ ಕ್ರಿಯೆ; ನಿಯತ ಕ್ರಿಯೆ.

constant adjustment: ಸತತ ಹೊಂದಾಣಿಕೆ; ಅವಿರತ ಸಮಾಯೋಜನೆ.

constant capital: ಸ್ಥಿರ ಬಂಡವಾಳ.

constant cost: ನೋಡಿ: fixed cost.

constant cost condition: ಸ್ಥಿರವೆಚ್ಚದ ಪರಿಸ್ಥಿತಿ.

constant element: ಸ್ಥಿರ ಅಂಶ.

constant factor endowment: ಸ್ಥಿರ ಉತ್ಪಾದನಾಂಗ ಸಂಪತ್ತು.

constant price: ಸ್ಥಿರ ಬೆಲೆ.

constant returns to scale: ಸ್ಥಿರ ಪ್ರತಿಫಲ ನಿಯಮ; ಸ್ಥಿರ ಪ್ರತಿಫಲ. ಈ ನಿಯಮದ ಪ್ರಕಾರ ಒಂದು ವಸ್ತುವಿನ ಉತ್ಪನ್ನವನ್ನು ಉಪಯೋಗಿಸುತ್ತಾ ಹೋದಂತೆ ಉತ್ಪನ್ನವು ಸಮಪ್ರಮಾಣದಲ್ಲಿ ಅಥವಾ ಸ್ಥಿರ ಪ್ರಮಾಣದಲ್ಲಿ ಹೆಚ್ಚಾಗುತ್ತಾ ಹೋಗುತ್ತದೆ.

constant vector: ಸ್ಥಿರದಿಕ್ ಪರಿ ಮಾಣ. ಒಂದು ಬಿಂದುವಿನಿಂದ ಮತ್ತೊಂದು ಬಿಂದುವಿಗಿರುವ ದೂರ ಮತ್ತು ದಿಕ್ಕುಗಳನ್ನು ಸರಳ ರೇಖೆಯಿಂದ ನಿರ್ದೇಶಿಸಲಾಗುವ ಪರಿಮಾಣ.

constituency: ಮತಕ್ಷೇತ್ರ. ಪ್ರತಿನಿಧಿ ಇಲ್ಲವೇ ಶಾಸಕನನ್ನು ಚುನಾಯಿಸಲು ಅರ್ಹತೆ ಹೊಂದಿರುವ ಮತದಾರರನ್ನು ಒಳಗೊಂಡ ಭೂಪ್ರದೇಶದ ಒಂದು ನಿರ್ದಿಷ್ಟ ಭಾಗ.

constituent assembly: ಸಂವಿಧಾನ ಸಭೆ; ಸಂವಿಧಾನ ರಚನಾಸಭೆ. ಸಂವಿಧಾನವನ್ನು ರಚಿಸುವ ಜವಾಬ್ದಾರಿ ಹೊಂದಿರುವ ಸದಸ್ಯರ ಸಮಿತಿ.

constituent elements: ಘಟಕಾಂಶಗಳು; ಸಂವಿಧಾನಾಂಶಗಳು.

constituent function: ಸಂವಿಧಾನಿಕ ಕಾರ್ಯ.

constituent power: ಸಂವಿಧಾನಿಕ ಅಧಿಕಾರ.

constitution: ಸಂವಿಧಾನ. ಸರ್ಕಾರದ ಆಡಳಿತ ರೂಪುರೇಷೆಗಳನ್ನು ಹಾಗೂ

ನಿಯಮಾವಳಿಗಳನ್ನು ನಿರ್ಧರಿಸುವ, ಪ್ರಜೆಗಳ ಹಕ್ಕುಗಳು ಮತ್ತು ಕರ್ತವ್ಯಗಳನ್ನು ನಿರ್ಧರಿಸುವ ನಿರ್ದಿಷ್ಟ ನಿಯಮಗಳ ಸಂಕಲನ.

constitutional autocracy: ಸಂವಿಧಾನಶಾಹಿ ದಬ್ಬಾಳಿಕೆ; ಸಂವಿಧಾನ ಬದ್ಧ ನಿರಂಕುಶ ಪ್ರಭುತ್ವ. ಭಾರತದ ರಾಷ್ಟ್ರಪತಿಗೆ ಸಂವಿಧಾನದಲ್ಲಿ ಅಪಾರ ಅಧಿಕಾರಗಳನ್ನು ನೀಡಿರುವುದರಿಂದ ಆತನು ನಿರಂಕುಶನಂತೆ ನಡೆದುಕೊಳ್ಳಬಹುದು ಎಂಬ ಅಭಿಪ್ರಾಯ.

constitutional breakdown: ಸಂವಿಧಾನದ ಕುಸಿತ.

constitutional convention: ಸಂವೈಧಾನಿಕ ಸಂಪ್ರದಾಯ. ಇಂಗ್ಲೆಂಡ್ ಅಲಿಖಿತ ಸಂವಿಧಾನವನ್ನು ಹೊಂದಿದೆ. ಇಂತಹ ಅಲಿಖಿತ ಸಂವಿಧಾನವನ್ನು ಹೊಂದಿದ ಸರಕಾರವು ಪಾಲಿಸುವ ನಿಯಮಗಳು ಅಧಿಕೃತವಾದ ಲಿಖಿತ ದಾಖಲೆಗಳಲ್ಲಿ ಇರದೆ, ಆ ದೇಶದ ಪರಂಪರಾಗತವಾದ ಪದ್ಧತಿ ಹಾಗೂ ಸಂಪ್ರದಾಯಗಳಲ್ಲಿ ಇರುತ್ತವೆ. ಈ ಬಗೆಯ ರೂಢಿ ಹಾಗೂ ಸಂಪ್ರದಾಯಗಳನ್ನು "ಸಂವೈಧಾನಿಕ ಸಂಪ್ರದಾಯ"ಗಳು ಎಂದು ಕರೆಯಲಾಗುತ್ತದೆ.

constitutional council: ಸಂವಿಧಾನಾತ್ಮಕ ಸಮಿತಿ.

constitutional court: ಸಂವಿಧಾನಾ ತ್ಮಕ ನ್ಯಾಯಾಲಯ. ಸಂವಿಧಾನದ ಪ್ರಕಾರ ಸ್ಥಾಪಿತವಾದ ನ್ಯಾಯಾಲಯ.

constitutional democratic party: ಸಂವಿಧಾನಾತ್ಮಕ ಪ್ರಜಾಪ್ರಭುತ್ವ ಪಕ್ಷ; ಘಟನಾಬದ್ಧ ಪ್ರಜಾಪ್ರಭುತ್ವ ಪಕ್ಷ.

constitutional dictatorship: ಸಂವಿಧಾನಾತ್ಮಕ ನಿರಂಕುಶತೆ. ಭಾರತದ ಸಂವಿಧಾನದಲ್ಲಿ ರಾಷ್ಟ್ರಪತಿಗಳಿಗೆ ತುರ್ತು ಪರಿಸ್ಥಿತಿಯನ್ನು ಘೋಷಿಸುವ ಅಧಿಕಾರವನ್ನು ನೀಡಲಾಗಿದೆ. ಆದರೆ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಪ್ರಜೆಗಳಿಗೆ ಕೊಡಲ್ಪಟ್ಟಿರುವ ಮೂಲಭೂತ ಹಕ್ಕುಗಳನ್ನು ಸರಕಾರವೇ ಕಸಿದುಕೊಳ್ಳುತ್ತದೆ. ಆದ್ದರಿಂದ ಇದನ್ನು ಸಂವಿಧಾನಾತ್ಮಕ ನಿರಂಕುಶತೆ ಎಂದು ಕರೆಯಲಾಗುತ್ತದೆ.

constitutional government: ಸಂವಿಧಾನಾತ್ಮಕ ಸರಕಾರ.

constitutional head: ಸಂವಿಧಾನಾತ್ಮಕ ಪ್ರಮುಖ. ಭಾರತದ ರಾಷ್ಟ್ರಪತಿಯು ವಾಸ್ತವ ಕಾರ್ಯಾಂಗಾಧಿಕಾರಿಯಲ್ಲ. ಆದರೆ ಅವರು ಸಂವಿಧಾನ ಮತ್ತು ಮಂತ್ರಿಮಂಡಲದ ಸಲಹೆ ಪ್ರಕಾರ ಕಾರ್ಯ ನಿರ್ವಹಿಸುತ್ತಾರೆ. ಆದುದರಿಂದ ಅವರನ್ನು ಸಂವಿಧಾನಾತ್ಮಕ ಮುಖ್ಯಸ್ಥ ಎಂದು ಕರೆಯಲಾಗಿದೆ.

constitutional initiative: ಸಂವಿಧಾನಿಕ ಉಪಕ್ರಮಣ.

constitutional law: ಸಂವಿಧಾನಾತ್ಮಕ ಕಾನೂನು. ರಾಷ್ಟ್ರದ ಸಂವಿಧಾನದ ತತ್ವಗಳನ್ನಾಧರಿಸಿ ಮಾಡಲ್ಪಡುವ ಕಾಯಿದೆ.

constitutional limited monarchy: ಸಂವಿಧಾನಬದ್ಧ ಮಿತಪ್ರಭುತ್ವ. ಇಂಗ್ಲೆಂಡ್‌ನಲ್ಲಿ ಅರಸನು ಸಚಿವ ಸಂಪುಟದ ಸಲಹೆ ಮತ್ತು ಒಪ್ಪಿಗೆ ಇಲ್ಲದೆ ಯಾವ ಕಾರ್ಯವನ್ನೂ, ನಿರ್ವಹಿಸುವ ಹಾಗಿಲ್ಲ. ಅದೇ ರೀತಿ

ಅರಸನ ಅಧಿಕಾರಗಳನ್ನು ನಿಧಾನವಾಗಿ ಸಚಿವರು ಪಡೆದುಕೊಂಡು ರಾಜನ ಹೆಸರಿನಲ್ಲಿ ಅವುಗಳನ್ನು ಉಪಯೋಗಿಸುತ್ತಿರುವುದರಿಂದ ಇಂಗ್ಲೆಡ್‌ನಲ್ಲಿ ಸಂವಿಧಾನಬದ್ಧ ಮಿತ ಅರಸು ಪ್ರಭುತ್ವ ಇದೆ ಎನ್ನಲಾಗಿದೆ.

constitutional machinery: ಸಂವಿಧಾನಾತ್ಮಕ ವ್ಯವಸ್ಥೆ.

constitutional monarchy: ಸಂವಿಧಾನಬದ್ಧ ರಾಜಪ್ರಭುತ್ವ; ಸಂವಿಧಾನಾತ್ಮಕ ರಾಜಪ್ರಭುತ್ವ. ಅರಸನ ಅಧಿಕಾರಗಳು ರಾಷ್ಟ್ರದ ಸಂವಿಧಾನ ಮತ್ತು ರಾಷ್ಟ್ರದ ಕಾನೂನುಗಳಿಗನುಸಾರವಾಗಿ ನಿಗದಿಪಡಿಸಲ್ಪಟ್ಟಿರುವುದನ್ನು ಸಂವಿಧಾನಬದ್ಧ ರಾಜಪ್ರಭುತ್ವ ಎನ್ನಲಾಗುತ್ತದೆ.

constitutional process: ಸಂವಿಧಾನಾತ್ಮಕ ಪ್ರಕ್ರಿಯೆ.

constitutional provisions: ಸಂವಿಧಾನಾತ್ಮಕ ಸೌಲಭ್ಯಗಳು.

constitutional referendum: ಸಂವಿಧಾನಾತ್ಮಕ ಜನಾದೇಶ. ಸಂವಿಧಾನದ ತಿದ್ದುಪಡಿಗೆ ಬಳಸಲಾಗುವ ವಿಧಾನ. ಇದರ ಪ್ರಕಾರ ತಿದ್ದುಪಡಿಯ ಬಗ್ಗೆ ಜನಮತ ಗಣನೆ ನಡೆದು ಬಹುಸಂಖ್ಯಾತ ಮತದಾರರು ತಿದ್ದುಪಡಿಯ ಪರವಾಗಿ ಮತವನ್ನು ಹಾಕಿದರೆ ಅದು ಸ್ವೀಕೃತವಾಗಿ ಕಾಯಿದೆಯಾಗುವುದು.

constitutionalism: ಸಂವೈಧಾನಿಕ ವಾದ.

constraint: ಮಿತಿ; ನಿರ್ಬಂಧ.

constructed language: ರಚಿತ ಭಾಷೆ.

constructed type: ರಚಿತ ಮಾದರಿ.

construction instinct: ರಚನೆಯ ಮೂಲ ಪ್ರವೃತ್ತಿ.

constructive ability: ರಚನಾತ್ಮಕ ಸಾಮರ್ಥ್ಯ.

constructive activity: ರಚನಾತ್ಮಕ ಚಟುವಟಿಕೆ.

constructive approach: ರಚನಾತ್ಮಕ ದೃಷ್ಟಿ; ರಚನಾತ್ಮಕ ಧೋರಣೆ.

constructive imagery: ರಚನಾತ್ಮಕ ಬಿಂಬಾವಳಿ.

constructive imagination: ರಚನಾತ್ಮಕ ಕಲ್ಪನೆ.

constructive temperament: ರಚನಾತ್ಮಕ ಸ್ವಭಾವ; ರಚನಾತ್ಮಕ ಚಿತ್ತ ಪ್ರಕೃತಿ.

constructive thinking: ರಚನಾತ್ಮಕ ಚಿಂತನೆ.

constructive vote of confidence: ಸೃಜನಾತ್ಮಕ ವಿಶ್ವಾಸ ಮತ; ರಚನಾತ್ಮಕ ವಿಶ್ವಾಸ ಮತ. ರಚನಾತ್ಮಕ ವಿಶ್ವಾಸ ಮತದ ಪ್ರಕಾರ ಅವಿಶ್ವಾಸ ನಿರ್ಣಯದ ಮೂಲಕ ಸರಕಾರವನ್ನು ಪದಚ್ಯುತಿ ಗೊಳಿಸುವಾಗ, ಪರ್ಯಾಯ ಸರಕಾರವನ್ನು ರಚಿಸಬಲ್ಲ ನಾಯಕನನ್ನು ಏಕಕಾಲದಲ್ಲಿ ಆಯ್ಕೆ ಮಾಡಬೇಕು. ಇಂತಹ ಕ್ರಮದಿಂದ ಸರಕಾರದ ಅಸ್ಥಿರತೆಯನ್ನು ಮತ್ತು ಆಗಾಗ್ಗೆ ನಡೆಯುವ ಚುನಾವಣೆಗಳನ್ನು ತಪ್ಪಿಸಬಹುದು.

consular invoice: ರಾಯಭಾರಿಯ ಸೂಚಿಪತ್ರ.

consulate: ರಾಯಭಾರ ಕಛೇರಿ.

consuls: ಪ್ರತಿನಿಧಿ (ರೋಮನ್ ಸಾಮ್ರಾಜ್ಯದಲ್ಲಿದ್ದಂತೆ); ಪರರಾಜ್ಯ ಪ್ರತಿನಿಧಿ.

consultative group: ವಿಚಾರ ವಿನಿಮಯ ತಂಡ.

consumer: ಅನುಭೋಗಿ; ಬಳಕೆದಾರ; ಗ್ರಾಹಕ.

consumer behaviour: ಅನುಭೋಗಿಯ ವರ್ತನೆ.

consumer category price differential: ಅನುಭೋಗಿ ವರ್ಗ ಬೆಲೆ ವ್ಯತ್ಯಾಸ, ಸಾರ್ವಜನಿಕ ಸೇವೆಗಳ ದರಗಳು ಅನುಭೋಗಿ ಪಂಗಡಗಳಿಗನುಗುಣವಾಗಿ ವ್ಯತ್ಯಸ್ಥಗೊಂಡಿರುವುದು. ಉದಾ: ಕೃಷಿ ಬಳಕೆಯ ವಿದ್ಯುತ್ತಿಗೆ ಕಡಿಮೆ ದರ, ಬಸ್ಸುಗಳಲ್ಲಿ ವಿದ್ಯಾರ್ಥಿಗಳಿಗೆ ನೀಡುವ ರಿಯಾಯಿತಿ.

consumer component: ಬಳಕೆದಾರರ ಅಂಶ.

consumer credit: ಅನುಭೋಗೀ ಉದ್ದರಿ (ಸಾಲ). ನಿರ್ದಿಷ್ಟ ವಸ್ತುಗಳನ್ನು ಕೊಂಡುಕೊಳ್ಳಲು ಸಾರ್ವಜನಿಕರಿಗೆ ನೀಡುವ ಅಲ್ಪಾವಧಿ ಸಾಲ.

consumer culture : ಗ್ರಾಹಕ ಸಂಸ್ಕೃತಿ.

consumer good: ಅನುಭೋಗಿ ಸರಕು; ಕುಟುಂಬವೊಂದರಿಂದ ಅಂತಿಮ ಅನುಭೋಗಕ್ಕಾಗಿ ಖರೀದಿಸಲಾದ ಆರ್ಥಿಕ ಸರಕು (ವಸ್ತು).

consumer movement: ಗ್ರಾಹಕ ಚಳುವಳಿ.

consumer price: ಗ್ರಾಹಕ ಬೆಲೆ.

consumer price index: ಅನುಭೋಗಿ ಬೆಲೆ ಸೂಚಿ. ರೂಪಾಯಿಯ ಕೊಳ್ಳುವ ಶಕ್ತಿಯಲ್ಲಿನ ಬದಲಾವಣೆಯನ್ನು ಅಳೆಯಲು ಕೇಂದ್ರ ಅಂಕಿಅಂಶ ಇಲಾಖೆ ಸಂಕಲಿಸುವ ಸೂಚಿ. ವಿವಿಧ ರೀತಿಯ ಅನುಭೋಗಿ ಸರಕುಗಳ ಚಾಲ್ತಿ ದರಗಳನ್ನಾಧರಿಸಿ ಈ ಸೂಚಿಯನ್ನು ತಯಾರಿಸಲಾಗುತ್ತದೆ.

consumer resistance: ಬಳಕೆದಾರರ ಪ್ರತಿರೋಧ.

consumer surplus: ಅನುಭೋಗಿಯ ಮಿಗತೆ; ಅನುಭೋಗೀ ಅಧಿಶೇಷ; ಅನುಭೋಗಿಯು ಒಂದು ವಸ್ತುವಿಗೆ ಕೊಡಲು ಸಿದ್ಧವಾಗಿರುವ ಬೆಲೆ ಮತ್ತು ಆ ವಸ್ತುವಿನ ವಾಸ್ತವ ಬೆಲೆಗಳಲ್ಲಿನ ವ್ಯತ್ಯಾಸದ ಮೊತ್ತ.

consumerism: ಅನುಭೋಗವಾದ.

consumer's association: ಬಳಕೆದಾರರ ಸಂಘ.

consumers' capital: ಅನುಭೋಗೀ ಬಂಡವಾಳ; ಗ್ರಾಹಕರ ಬಂಡವಾಳ. ಅನುಭೋಗಕ್ಕಾಗಿ ಬಳಸಲ್ಪಡುವ ಸರಕುಗಳು ಗ್ರಾಹಕರ ಬಂಡವಾಳ ಎನಿಸುತ್ತವೆ. ಎಲ್ಲಾ ಸಿದ್ಧ ವಸ್ತುಗಳು ಈ ವರ್ಗಕ್ಕೆ ಸೇರಿದವುಗಳಾಗಿವೆ.

consumers' co-operative: ಗ್ರಾಹಕರ ಸಹಕಾರಿ ಸಂಸ್ಥೆ. ಬಳಕೆದಾರರ ಸಹಕಾರಿ ಸಂಘ.

consumers' equilibrium: ಅನುಭೋಗಿಯ ಸಮತೋಲನ. ಅನುಭೋಗಿಯು ಖರ್ಚು ಮಾಡುವಾಗ ವಸ್ತುಗಳ ಸೀಮಾಂತ ತುಷ್ಟಿಗುಣಗಳು ಅವುಗಳಿಗೆ ಕೊಟ್ಟ ಬೆಲೆಗಳಿಗೆ ಸಮವಾಗುವಂತೆ ಖರ್ಚು ಮಾಡಿ ಗರಿಷ್ಟ ತೃಪ್ತಿಯನ್ನು ಪಡೆಯುವ ಸನ್ನಿವೇಶ.

consumers' market: ನೋಡಿ: buyer's market.

consumers' preference: ಅನುಭೋಗಿಯ ಒಲವು. ಪರ್ಯಾಯ ಸರಕುಗಳ ಸಮೂಹಗಳ ನಡುವೆ ಅನುಭೋಗಿಯು ಮಾಡುವ ಆಯ್ಕೆಯನ್ನು ನಿರ್ಧರಿಸುವ ಪ್ರವೃತ್ತಿ.

consumers' revolt: ಗ್ರಾಹಕರ ಪ್ರತಿಭಟನೆ.

consumer's sovereignty: ಅನುಭೋಗಿಯ ಸಾರ್ವಭೌಮತೆ; ಅನುಭೋಗಿಯ ಸಾರ್ವಭೌಮತ್ವ.

consummation of marriage: ವಿವಾಹದ ಪರಿಪೂರ್ಣತೆ. ಪೂರ್ಣಗೊಂಡ ವಿವಾಹ.

consumption: ಅನುಭೋಗ; ಉಪಭೋಗ; ಮಾನವನ ಬಯಕೆ ಹಾಗೂ ಅವಶ್ಯಕತೆಗಳನ್ನು ಪೂರೈಸಲು ಸರಕು ಮತ್ತು ಸೇವೆಗಳನ್ನು ವಿನಿಯೋಗಿಸುವ ಕ್ರಿಯೆ.

consumption curve: ಅನುಭೋಗ ರೇಖೆ.

consumption demand: ಅನುಭೋಗ ಬೇಡಿಕೆ.

comsumption effect: ಅನುಭೋಗ ಪರಿಣಾಮ.

consumption expenditure: ಅನುಭೋಗ ವೆಚ್ಚ.

consumption function: ಅನುಭೋಗ ಕಾರ್ಯ. ಅನುಭೋಗ ಮತ್ತು ಆದಾಯಗಳ ನಡುವೆ ಇರುವ ಕಾರ್ಯಾತ್ಮಕ ಸಂಬಂಧ.

consumption habit: ಅನುಭೋಗದ ಹವ್ಯಾಸ (ಅಭ್ಯಾಸ).

consumption pattern: ಅನುಭೋಗ ನಮೂನೆ; ಅನುಭೋಗ ವಿನ್ಯಾಸ.

contagion: ಸಂಸರ್ಗ ದೋಷ; ಸೋಂಕು.

contagious disease: ಸಾಂಕ್ರಾಮಿಕ ರೋಗ.

contagious magic: ಸಾಂಕ್ರಾಮಿಕ ಮಾಟ.

contamination: ಒಟ್ಟಿಗೆ ಬೆರೆಸುವುದು; ಮಲಿನಗೊಳಿಸುವಿಕೆ.

contemporary philosophy: ಸಮಕಾಲೀನ ತತ್ವಶಾಸ್ತ್ರ.

contempt of court: ನ್ಯಾಯಾಲಯದ ನಿಂದನೆ.

content: ಒಳವಿಷಯ; ಸಂತೃಪ್ತಿ; ಸಮಾಧಾನ.

content analysis method: ವಿಷಯ ವಿಶ್ಲೇಷಣಾ ವಿಧಾನ. ಮುದ್ರಿತ ಅಕ್ಷರ, ಸಿನೆಮಾ, ರೇಡಿಯೋ, ದೂರದರ್ಶನಗಳಂಥ ಪ್ರಕಟಿತ ಸಂಪರ್ಕ ಮಾಧ್ಯಮಗಳ ವಸ್ತುನಿಷ್ಠ ಹಾಗೂ ಕ್ರಮಬದ್ಧ ಅಧ್ಯಯನದ ಮೂಲಕ ಸಂಶೋಧನೆ ನಡೆಸುವ ವಿಧಾನ.

context: ಸಂದರ್ಭ. ಪ್ರದರ್ಶನವೊಂದರ ನಿರ್ದಿಷ್ಟ ಪ್ರಕಾರವು ನಿಜವಾಗಿ ಬಳಕೆಯಾಗುವ ವಿಶಿಷ್ಟ ಸಾಮಾಜಿಕ ಸನ್ನಿವೇಶ.

contextual method: ಸಾಂದರ್ಭಿಕ ವಿಧಾನ; ಪ್ರಾಸಂಗಿಕ ವಿಧಾನ.

contextual theory: ಸಾಂದರ್ಭಿಕತೆಯ ಸಿದ್ಧಾಂತ.

continental bridge hypothesis: ಭೂಖಂಡಗಳು ಒಂದಕ್ಕೊಂದು ಅಂಟಿಕೊಂಡಿದ್ದವು ಎಂಬ ಪ್ರಾಕ್‌ಕಲ್ಪನೆ.

Continental Congress: ಭೂಖಂಡ

ಕಾಂಗ್ರೆಸ್. ಭೂಖಂಡವೊಂದರ ರಾಜ್ಯಗಳ ನಡುವಿನ ಸಭೆ. ಉದಾ: ಅಮೆರಿಕಾದ ೧೩ ವಸಾಹತುಗಳು ಸ್ವಾತಂತ್ರ್ಯಾನಂತರ ೧೩ ಸ್ವತಂತ್ರ ರಾಜ್ಯಗಳಾದವು. ಈ ಸ್ವತಂತ್ರ ರಾಜ್ಯಗಳು ತಮ್ಮ ಪರಸ್ಪರ ಸಮಸ್ಯೆಗಳ ಬಗ್ಗೆ ಚರ್ಚೆ ಹಾಗೂ ವಿಚಾರ ವಿನಿಮಯ ಮಾಡಲು ನಡೆಸಿದ ಸಭೆ.

continental drift hypothesis: ಖಂಡ ಚಲನಾ ಪ್ರಾಕ್‌ಕಲ್ಪನೆ. ಹತ್ತಿರವಿದ್ದ ಭೂಖಂಡಗಳು ಒಂದರಿಂದ ಒಂದು ದೂರ ಸರಿಯಿತು ಎಂಬ ಪ್ರಾಕ್‌ಕಲ್ಪನೆ.

continental system: ಖಂಡಾಂತರ ಪದ್ಧತಿ.

contingency fund: ಸಾದಿಲ್ವಾರು ನಿಧಿ; ಅನಿರೀಕ್ಷಿತ ವೆಚ್ಚದ ನಿಧಿ. ಮುಖ್ಯ ಕಾರ್ಯ ನಿರ್ವಾಹಕನು ಶಾಸಕಾಂಗದ ಮಂಜೂರಾತಿ ಪಡೆಯದೇ ಅನಿರೀಕ್ಷಿತವಾಗಿ ಉಂಟಾಗುವ ಯುದ್ಧ, ಪ್ರವಾಹ, ಕ್ಷಾಮ ಇತ್ಯಾದಿಗಳನ್ನು ಎದುರಿಸಲು ಹಣ ಖರ್ಚುಮಾಡಲು ಅನುಕೂಲತೆಯನ್ನು ಕಲ್ಪಿಸುವ ನಿಧಿ.

contingent charge: ಆಕಸ್ಮಿಕ ವೆಚ್ಚ.

continuity: ನಿರಂತರತೆ; ಅವಿಚ್ಛಿನ್ನತೆ; ಸಾತತ್ಯ.

continuous interaction: ನಿರಂತರ ಪರಸ್ಪರಾನುಕ್ರಿಯೆ. ನಿರಂತರ ಅಂತರಕ್ರಿಯೆ.

continuous variable: ನಿರಂತರ ಪರಿವರ್ತಕ.

continuum: ಸಾತತ್ಯ; ಘಟನೆಗಳ ಸತತ ಮುಂದುವರಿಕೆ.

contour map: ನಿವೇಶನದ ಎತ್ತರ ತಗ್ಗುಗಳನ್ನು ತೋರಿಸುವ ನಕಾಶೆ.

contra-acculturative movement: ಸಂಸ್ಕೃತಿ ಗ್ರಹಣ ವಿರೋಧೀ ಚಳವಳಿ. ರಾಷ್ಟ್ರೀಯ ಮನೋಭಾವದ ಪ್ರಭಾವ ದಿಂದಾಗಿ ಸ್ವದೇಶೀ ಸಂಸ್ಕೃತಿಯ ಮೇಲ್ಮೆ ಯನ್ನು ಪ್ರತಿಪಾದಿಸುತ್ತಾ ಪರಸಂಸ್ಕೃತಿ ಗ್ರಹಣವನ್ನು ವಿರೋಧಿಸುವ ಚಳುವಳಿ.

contra-culture: ಪ್ರತಿ ಸಂಸ್ಕೃತಿ. ಒಂದು ವಿಸ್ತೃತ ಸಂಸ್ಕೃತಿಯ ಪರಿಧಿಯೊಳಗೇನೇ ಅದರ ಮುಖ್ಯ ಲಕ್ಷಣಗಳನ್ನು ವಿರೋಧಿ ಸುವ ಉಪಸಂಸ್ಕೃತಿ. ಉದಾ: ಅಪಚಾರೀ ಚಟುವಟಿಕೆಗಳಲ್ಲಿ ತೊಡಗಿದ ಯುವ ಸಮೂಹ.

contra-suggestion: ವ್ಯತಿರಿಕ್ತ ಭಾವ ಪ್ರೇರಣೆ; ವ್ಯತಿರಿಕ್ತ ಸೂಚನೆ.

contra-suggestibility: ಪ್ರತಿ ಸಂಸೂಚ್ಯನಾಶೀಲತೆ.

contraceptives: ಗರ್ಭನಿರೋಧಕಗಳು.

contract curve: ಒಪ್ಪಂದ ರೇಖೆ. ಎರಡು ಪಕ್ಷಗಳ ನಡುವೆ ಮಾರಾಟವಾದ ಸರಕುಗಳಿಗೆ ಸಂಬಂಧಿಸಿದಂತೆ ಅದರ ಸೀಮಾಂತ ಪ್ರತಿ ನಿದಾನ ದರಗಳು ಸಮವಾಗಿರುವ ವಿನಿ ಮಯದ ರೇಖೆ.

contract marriage: ಕರಾರು ವಿವಾಹ.

contract rent: ಒಪ್ಪಂದದ ಬಾಡಿಗೆ (ಗೇಣಿ).

contraction phase: ಕುಗ್ಗುವಿಕೆಯ ಹಂತ.

contractual rent: ನೋಡಿ: contract rent.

contractualists: ಒಪ್ಪಂದ ಪ್ರತಿಪಾದ

ಕರು. ಸಾಮಾಜಿಕ ಒಪ್ಪಂದ ಸಿದ್ಧಾಂತದ ಪ್ರತಿಪಾದಕರು.

contradiction: ಅಡ್ಡ ನಿಲುವು; ಪ್ರತಿಷೇಧ; ಅಸಂಗತಿ.

contrastive linguistics: ವೈದೃಶ್ಯಾತ್ಮಕ ಭಾಷಾವಿಜ್ಞಾನ.

contravention: ಉಲ್ಲಂಘನೆ; ಅತಿ ಕ್ರಮ.

contrived group: ಸಿದ್ಧ ಸಮೂಹ. ಸಂಶೋಧಕನು ಅವಲೋಕನ ಅಥವಾ ಪ್ರಯೋಗಕ್ಕಾಗಿ ರಚಿಸಿದ ಸಮೂಹ.

control group: ನಿಯಂತ್ರಿತ ಸಮೂಹ. ಸಾಮೂಹಿಕ ಸಂಶೋಧನೆಯಲ್ಲಿ ಪ್ರಾಯೋಗಿಕ ಅಧ್ಯಯನಕ್ಕಾಗಿ ಪ್ರತ್ಯೇಕ ಅವಲೋಕನಕ್ಕೊಳಗಾಗುವ ಗುಂಪು.

control of credit: ಸಾಲ ನಿಯಂತ್ರಣ; ಉದ್ದರಿ ನಿಯಂತ್ರಣ.

controllable cost: ನಿಯಂತ್ರಿಸಬಹುದಾದ ವೆಚ್ಚ.

controlled association: ನಿಯಂತ್ರಿತ ಸಾಹಚರ್ಯ.

controlled capitalism: ನಿಯಂತ್ರಿತ ಬಂಡವಾಳಪ್ರಭುತ್ವ; ನಿಯಂತ್ರಿತ ಬಂಡವಾಳ ಶಾಹಿತ್ವ.

controlled economy: ನಿಯಂತ್ರಿತ ಆರ್ಥಿಕತೆ.

controlled expansion: ನಿಯಂತ್ರಿತ ವಿಸ್ತರಣೆ.

controlled experiment: ನಿಯಂತ್ರಿತ ಪ್ರಯೋಗ.

controlled interview: ನಿಯಂತ್ರಿತ ಸಂದರ್ಶನ.

controlled observation: ನಿಯಂತ್ರಿತ ಅವಲೋಕನ.

controlled sample: ನಿಯಂತ್ರಿತ ಮಾದರಿ.

controlling officer: ನಿಯಂತ್ರಣಾಧಿಕಾರಿ.

conurbation: ನಗರ ವಿಸ್ತರಣೆ; ಸಹ ನಗರ ಸೇರ್ಪಡೆ. ಮಹಾನಗರದ ದಟ್ಟ ಜನ ಸಂದಣಿಯ ಕೇಂದ್ರವು ವಿಸ್ತೃತಗೊಳ್ಳುವ ಪ್ರಕ್ರಿಯೆ. ಕೆಲವೊಮ್ಮೆ ಅನೇಕ ಪಟ್ಟಣ ಮತ್ತು ನಗರಗಳು ಸೇರಿ ಉಂಟಾಗುವ ವಿಸ್ತಾರವಾದ ನಗರೀಕರಣ.

convenience sampling: ಅನುಕೂಲ ಮಾದರಿ.

convention: ಶಿಷ್ಟಾಚಾರ; ರೂಢಿ.

convention ridden constitution: ಸಂಪ್ರದಾಯ ಬದ್ಧ ಸಂವಿಧಾನ; ಅಲಿಖಿತ ಸಂವಿಧಾನ. ಸಂಪ್ರದಾಯ, ತಿಳುವಳಿಕೆ, ಅನುಕರಣೆ, ಪದ್ಧತಿ ಮುಂತಾದವುಗಳ ಮೂಲವನ್ನು ಹೊಂದಿರುವ ಸಂವಿಧಾನ. ಉದಾ: ಇಂಗ್ಲೆಂಡ್‌ನ ಸಂವಿಧಾನ.

conventional approach: ಸಾಂಪ್ರದಾಯಿಕ ಸಮೀಪನ.

conventional behaviour: ಸಾಂಪ್ರದಾಯಿಕ ವರ್ತನೆ.

conventional choreography: ಸಾಂಪ್ರದಾಯಿಕ ರಂಗಭಾಷೆ (ರಂಗತಂತ್ರ).

conventional crowd: ಸಾಂಪ್ರದಾಯಿಕ ಗುಂಪು. ಪ್ರಚಲಿತ ನಿಯಮಗಳನ್ನು ಪಾಲಿಸಿಕೊಂಡು, ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಒಟ್ಟುಗೂಡಿದ ವ್ಯಕ್ತಿಗಳ ಸಮೂಹ.

conventional economics: ಸಾಂಪ್ರದಾಯಿಕ ಅರ್ಥಶಾಸ್ತ್ರ.

conventional series: ಸಾಂಪ್ರದಾಯಿಕ ಸರಣಿ.

conventional tariff: ಸಾಂಪ್ರದಾಯಿಕ ಸುಂಕ.

conventionalised crowd: ಸಂಪ್ರದಾಯಗತ ಜನಜಂಗುಳಿ; ರೂಢಿಗತ ಜನಜಂಗುಳಿ.

conventionalism: ಸಂಪ್ರದಾಯವಾದ.

conventionalization: ಸಂಪ್ರದಾಯೀಕರಣ.

convergence: ಏಕಾಗ್ರಮುಖತೆ.

convergence theory: ಸಂಗಮ ಸಿದ್ಧಾಂತ; ಒಮ್ಮುಖ ಸಿದ್ಧಾಂತ. ಪರಸ್ಪರ ವಿರುದ್ಧವಾಗಿರುವ ಸಾಮಾಜಿಕ ವ್ಯವಸ್ಥೆಗಳಾದ ಸಮಾಜವಾದಿ ಮತ್ತು ಬಂಡವಾಳಶಾಹಿ ವ್ಯವಸ್ಥೆಗಳು ಇತಿಹಾಸದ ಗತಿಯಲ್ಲಿ ಒಂದಕ್ಕೊಂದು ಸಮೀಪಕ್ಕೆ ಬಂದು ಕ್ರಮೇಣ ಮಿಲನಗೊಳ್ಳುವುವು ಎಂಬ ಒಂದು ಬೂರ್ಷ್ವಾ ಸಿದ್ಧಾಂತ.

convergent thinking: ಏಕಾಗ್ರಮುಖ ಚಿಂತನೆ.

conversation analysis: ಸಂಭಾಷಣಾ ವಿಶ್ಲೇಷಣೆ. ಮಾನವಕುಲ ಅಧ್ಯಯನ ವಿಧಾನದ ತಂತ್ರವನ್ನು ಬಳಸಿ, ಸಂಭಾಷಣೆಯ ಕುರಿತ ಪ್ರಾಯೋಗಿಕ ಅಧ್ಯಯನ.

coversational genre: ಸಂಭಾಷಣಾತ್ಮಕ ಪ್ರಕಾರ.

conversational interest: ಸಂಭಾಷಣಾಭಿರುಚಿ.

conversational songs: ಸಂಭಾಷಣಾತ್ಮಕ ಗೀತೆಗಳು.

conversion: ಮತಾಂತರ; ಮತ ಪರಿವರ್ತನೆ; ಪರಿವರ್ತನೆ. ವ್ಯಕ್ತಿಯ ದೃಷ್ಟಿಕೋನದಲ್ಲಿ ಗುರುತಿಸಬಹುದಾದ ಶೀಘ್ರ ಬದಲಾವಣೆ. ಉದಾ: ಒಂದು ಧಾರ್ಮಿಕ ಮತದಿಂದ ಇನ್ನೊಂದಕ್ಕೆ ಪರಿವರ್ತನೆಗೊಳ್ಳುವುದು.

conversion hysteria: ರೂಪಾಂತರ ಉನ್ಮಾದರೋಗ; ಹಿಸ್ಟೀರಿಯಾ; ವಿಪರ್ಯಯ ಉನ್ಮಾದ ರೋಗ. ನಿರೋಧಕ್ಕೀಡಾದ ಮಾನಸಿಕ ಸಮಸ್ಯೆಯೊಂದು ಶಾರೀರಿಕ ತಳಹದಿಯಿಲ್ಲದೆ ದೈಹಿಕ ಚಿಹ್ನೆಯಾಗಿ ರೂಪಾಂತರ ಹೊಂದುತ್ತದೆ.

conversion hysteria reaction: ಪರಿವರ್ತಿತ ಉನ್ಮಾದ ಪ್ರತಿಕ್ರಿಯೆ ಹಿಸ್ಟೀರಿಯಾದ ದೈಹಿಕ ತೊಂದರೆ.

conversion hysteria type: ಪರಿವರ್ತಿತ ಬಗೆಯ ಹಿಸ್ಟೀರಿಯಾ; ದೈಹಿಕ ತೊಂದರೆಗಳು ಮಾನಸಿಕ ತೊಂದರೆಗಳ ರೂಪಾಂತರವಾಗಿ ಕಾಣಿಸಿಕೊಳ್ಳುವ ಬಗೆ.

conversion of loan: ಸಾಲದ ಪರಿವರ್ತನೆ.

convertible debenture: ಪರಿವರ್ತನೀಯ ಠೇವಣಿ ಪತ್ರ (ಡಿಬೆಂಚರ್).

convertible money: ಪರಿವರ್ತನೀಯ ಹಣ.

convertible paper money: ಪರಿವರ್ತನೀಯ ಕರೆನ್ಸಿ ಹಣ. ಪರಿವರ್ತನೀಯ ಕಾಗದದ ಹಣ.

convexity: ಪೀನಮಧ್ಯತೆ; ಯಾವು

ದಾದರೂ ಒಂದೇ ಸರಕಿನ ಉತ್ಪಾದಕತೆಯ ಆಯ್ಕೆಯ ಬದಲಾಗಿ ವಿವಿಧ ಸರಕುಗಳ ಉತ್ಪಾದನೆಯನ್ನು ಆಯ್ಕೆ ಮಾಡುವ ತಾಂತ್ರಿಕತೆ ಅಥವಾ ಅಭಿರುಚಿಯ ಲಕ್ಷಣ. ಇದರ ಸ್ವರೂಪವನ್ನು ಉಪೇಕ್ಷಿತ ರೇಖೆಗಳ ಪೀನಮಧ್ಯತೆಯಲ್ಲಿ ಗುರುತಿಸಬಹುದು.

convict: ಅಪರಾಧಿ. ಕಾನೂನು ಬದ್ಧವಾಗಿ ಅಪರಾಧಿಯೆಂದು ನಿರ್ಣಯಿಸಲ್ಪಟ್ಟವನು.

convict warder: ಖೈದಿ ಪಹರೆಗಾರ.

conviction: ಅಪರಾಧ ನಿರ್ಣಯ; ದೋಷನಿರ್ಣಯ; ಮನವರಿಕೆ.

convulsion: ಸೆಳವು; ಅಪಸ್ಮಾರದ ಚಿಹ್ನೆ; ಇದ್ದಕ್ಕಿದ್ದಂತೆಯೇ ವ್ಯಕ್ತಿಯ ಪ್ರಜ್ಞೆ ಹೋಗಿ ಸ್ವಲ್ಪ ಸಮಯ ವ್ಯಕ್ತಿಯ ಇಡೀ ಶರೀರ ಎಳೆದು ಕೊಳ್ಳತೊಡಗುವುದು.

convulsive seizure: ಸೆಳೆವಿನ ಹಿಡಿತ.

co-operating kin: ಸಹಕರಿಸುವ ಸಂಬಂಧಿ.

co-operation: ಸಹಕಾರ.

co-operative association: ಸಹಕಾರೀ ಸಾಹಚರ್ಯ. ಒಂದು ಸಾಮಾನ್ಯ ಉದ್ದೇಶ ಸಾಧನೆಗಾಗಿ ಜನರು ಸಂಘಟಿತರಾಗಿ ಸಮೂಹದಲ್ಲಿ ಕೆಲಸ ಮಾಡುವುದು.

co-operative behaviour: ಸಹಕಾರೀ ವರ್ತನೆ.

co-operative composition: ಸಹಕಾರೀ ಸಂರಚನೆ. ಲಾವಣಿಯ ಹುಟ್ಟನ್ನು ವಿವರಿಸುವ ಸಂದರ್ಭದಲ್ಲಿ ಅದು ಸಾಮುದಾಯಿಕ ಆಶುಕವಿತೆಯ ಮೂಲಕ ಉಗಮವಾಗುವು ದಾಗಿ ಅಭಿಪ್ರಾಯ ಬಂದಿತು. ಅದನ್ನು ಸಹಕಾರೀ ಸಂರಚನೆ ಎಂದು ಕರೆಯಲಾಗು ತ್ತದೆ.

co-operative development: ಸಹಕಾರೀ ಅಭಿವೃದ್ಧಿ.

co-operative farming: ಸಹಕಾರೀ ವ್ಯವಸಾಯ (ಬೇಸಾಯ).

co-operative housing: ಸಹಕಾರೀ ಗೃಹ ನಿರ್ಮಾಣ.

co-operative industry: ಸಹಕಾರೀ ಕೈಗಾರಿಕೆ.

co-operative movement : ಸಹಕಾರೀ ಚಳುವಳಿ.

co-operative product: ಸಹಕಾರೀ ಉತ್ಪನ್ನ.

co-operative society: ಸಹಕಾರೀ ಸಂಘ.

co-operative system: ಸಹಕಾರೀ ಪದ್ಧತಿ.

co-optation: ಸಹ ಆಯ್ಕೆ. ಒಂದು ಸಂಘದ ಸದ್ಯದ ಸದಸ್ಯರ ಅಭಿಮತಗಳಿಂದ ಹೊಸಬ ರನ್ನು ಸಂಘಕ್ಕೆ ಸೇರಿಸಿಕೊಳ್ಳುವುದು.

co-ordinated movement: ಸಂಘಟಿತ ಚಲನೆ.

co-ordination: ಸಂಯೋಜನೆ; ಸಮ ನ್ವಯ; ಸಮಾನಾಧಿಕರಣ.

coparcenary: ಸಹಭಾಗಿತ್ವ.

coping behaviour: ಹೊಂದಾಣಿಕೆಯ ವರ್ತನೆ.

coping reaction: ಹೊಂದಾಣಿಕೆಯ ಪ್ರತಿಕ್ರಿಯೆ.

core: ತಿರುಳು; ಸತ್ವ; ತಿರುಳ್ಗಲ್ಲು. ಚೆಕ್ಕೆ ತೆಗೆದುಳಿದ ಶಿಲೆ.

core sector: ಪ್ರಮುಖ ವಲಯ; ತಿರುಳಿನ ಕ್ಷೇತ್ರ.
core tools: ತಿರುಳ್ಗಲ್ಲಿನ ಆಯುಧಗಳು.
corn law: ದವಸಧಾನ್ಯಗಳ ಕಾಯಿದೆ.
corn spirit: ಧಾನ್ಯ ದೇವತೆ.
corollary: ಅನುಸಿದ್ಧಾಂತ; ಉಪ ಸಿದ್ಧಾಂತ.
corporate action: ಸಾಂಸ್ಥಿಕ ನಡವಳಿ. ಸಂಸ್ಥೆಯು ಕೈಗೊಳ್ಳುವ ಕಾರ್ಯ.
corporate enterprise: ಸಾಂಸ್ಥಿಕ ಉದ್ಯಮ.
corporate income tax: ಸಾಂಸ್ಥಿಕ ವರಮಾನ ತೆರಿಗೆ.
corporate planning: ಸಾಂಸ್ಥಿಕ ಯೋಜನೆ; ದೀರ್ಘಕಾಲಿಕ ಗುರಿಗಳನ್ನು ಹೊಂದಿಸಿ, ಅವುಗಳನ್ನು ಸಾಧಿಸಲು ಯೋಜನೆಗಳನ್ನು ಅಭಿವೃದ್ಧಿಪಡಿಸುವ ಉದ್ದೇಶವನ್ನು ಹೊಂದಿರುವ ವ್ಯವಹಾರ ಕಾರ್ಯ.
corporate state: ನಿಗಮಿತ ರಾಜ್ಯ; ಸಂಯುಕ್ತ ರಾಜ್ಯ; ಒಗ್ಗೂಡಿದ ರಾಜ್ಯ.
corporateness: ಒಕ್ಕೂಟ ದೃಷ್ಟಿಕೋನ.
corporation tax: ಕಾರ್ಪೊರೇಶನ್ ತೆರಿಗೆ; ಪೌರಸಂಸ್ಥೆ ತೆರಿಗೆ.
correctional institutions: ಸುಧಾರಣಾ ಸಂಸ್ಥೆಗಳು.
correctional school: ಸುಧಾರಣಾ ಶಾಲೆ.
corrective justice: ತಿದ್ದುಪಡಿ ನ್ಯಾಯ.
correlated variable: ಸಹಸಂಬಂಧೀ ಪರಿವರ್ತಕ.
correlation: ಸಹಸಂಬಂಧ. ವಿಭಿನ್ನ ಚಲಗಳ ಮೌಲ್ಯದಲ್ಲಿನ ವ್ಯತ್ಯಸ್ಥತೆಯ ಅಂತರವನ್ನು ಅಳೆಯುವ ಸಂಖ್ಯಾ ಶಾಸ್ತ್ರೀಯ ಮಾಪಕ (ವಿಧಾನ).
correlation cluster: ಸಹಸಂಬಂಧೀ ಗುಂಪು.
correlation matrix: ಸಹಸಂಬಂಧೀ ಮಾತೃಕೆ.
correlation ratio: ಸಹಸಂಬಂಧೀ ಅನುಪಾತ.
correspondence: ಪತ್ರ ವ್ಯವಹಾರ; ಅನುರೂಪತೆ; ಸಂವಾದ.
correspondence course: ಅಂಚೆ-ತೆರಪಿನ ಶಿಕ್ಷಣ.
correspondence theory: ಸಂವಾದ ಸಿದ್ಧಾಂತ; ಅನುರೂಪತೆಯ ಸಿದ್ಧಾಂತ.
corroborative evidence: ಬೆಂಬಲ ಸಾಕ್ಷ್ಯ.
corrupt form: ಭ್ರಷ್ಟ ರೂಪ; ಭಾಷೆಯ ಅಪಭ್ರಂಶ ರೂಪ.
corruption: ಭ್ರಷ್ಟಾಚಾರ; ಲಂಚಗುಳಿತನ. ಸರಕಾರಿ ನೌಕರರು ಹಣ ಹಾಗೂ ವಸ್ತು ರೂಪದ ಲಾಭಗಳಿಗಾಗಿ ತಮ್ಮ ಅಧಿಕಾರ ಸ್ಥಾನವನ್ನು ದುರುಪಯೋಗ ಪಡಿಸುವುದು.
cosmic evolution: ವಿಶ್ವ ವಿಕಾಸ.
cosmic explosion: ಬ್ರಹ್ಮಾಂಡದ ಸ್ಫೋಟ.
cosmic law: ವಿಶ್ವ ನಿಯಮ.
cosmology: ವಿಶ್ವ ಸೃಷ್ಟಿಶಾಸ್ತ್ರ; ವಿಶ್ವ ಶಾಸ್ತ್ರ.
cosmopolitan: ವಿಶ್ವ ಪ್ರಜ್ಞಾವಂತ.
cosmopolitanism: ವಿಶ್ವ ಪ್ರಜ್ಞಾಭಾವ.
cost: ವೆಚ್ಚ.

cost-benefit analysis: ವೆಚ್ಚ-ಲಾಭ ವಿಶ್ಲೇಷಣೆ. ಹೂಡಿಕೆಯ ಅಥವಾ ಉತ್ಪಾದನೆಯ ಯೋಜನೆಯಲ್ಲಿ ಸಂಭವಿಸಬಹುದಾದ ಸಾಮಾಜಿಕ ಹಾಗೂ ಹಣಕಾಸಿನ ವೆಚ್ಚ ಮತ್ತು ಲಾಭಗಳ ಅಂಶಗಳನ್ನೊಳಗೊಂಡಂತೆ ಒಂದು ನಿರ್ದಿಷ್ಟ ಹೂಡಿಕೆ ಯೋಜನೆಯ ಕುರಿತು ಮಾಡುವ ಅಧ್ಯಯನ.

cost control: ವೆಚ್ಚ ನಿಯಂತ್ರಣ.

cost control tool: ವೆಚ್ಚ ನಿಯಂತ್ರಣ ಸಾಧನ.

cost curve: ವೆಚ್ಚದ ರೇಖೆ; ಉತ್ಪಾದನೆಯ ವಿವಿಧ ಹಂತಗಳಿಗೆ ಅನುಗುಣವಾಗಿರುವ (ಸರಾಸರಿ ವೆಚ್ಚ ಸೀಮಾಂತ ವೆಚ್ಚ, ಒಟ್ಟು ವೆಚ್ಚಗಳೇ ಮೊದಲಾದ) ವೆಚ್ಚಗಳ ಅನುಸೂಚಿಯ ರೇಖಾಚಿತ್ರದ ವಿವರಣೆ.

cost difference: ವೆಚ್ಚದ ವ್ಯತ್ಯಾಸ.

cost function: ವೆಚ್ಚದ ಕಾರ್ಯ.

cost of debt capital: ಋಣ ಬಂಡವಾಳದ ವೆಚ್ಚ. ತೆರಿಗೆಯ ಬಳಿಕವೂ ಸಂಗ್ರಾಹಕನ ಗಳಿಕೆಯಲ್ಲಿ ವ್ಯತ್ಯಾಸವಾಗದಂತೆ ಮಾಡುವ ಸಾಲ. ಬಂಡವಾಳದ ಮೇಲಿನ ಪ್ರತಿಫಲ ದರ. ಋಣ ಬಂಡವಾಳದ ವೆಚ್ಚ=ಬಡ್ಡಿಯ ದರ-ತೆರಿಗೆಯ ದರ.

cost of education: ಶಿಕ್ಷಣದ ವೆಚ್ಚ. ಮಗುವಿನ ವಿದ್ಯಾಭ್ಯಾಸಕ್ಕೆ ತಗಲುವ ಎಲ್ಲಾ ಬಗೆಯ ವೆಚ್ಚಗಳ ಒಟ್ಟು ಲೆಕ್ಕಾಚಾರ.

cost of equity capital: ಸಮ ಬಂಡವಾಳದ ವೆಚ್ಚ. ಹಳೆಯ ದಾಸ್ತಾನುಗಳ ಮಾರುಕಟ್ಟೆ ಮೌಲ್ಯ ಬದಲಾಗದಂತೆ ಸಾಮಾನ್ಯ ದಾಸ್ತಾನುಗಳ ಮಾರಾಟದ ಮೂಲಕ ಹಣಕಾಸು ಸೌಲಭ್ಯ ಪಡೆದ ಯೋಜನೆಗಳ ಕನಿಷ್ಠ ಪ್ರತಿಫಲ ದರ.

cost of living index : ಜೀವನ ವೆಚ್ಚದ ಸೂಚ್ಯಂಕ. ಯಾವುದೇ ವರ್ಗದ ಜನರ ಜೀವನ ಮಟ್ಟದ ಏರಿಳಿತಗಳನ್ನು ಅವರು ಸಾಮಾನ್ಯವಾಗಿ ಬಳಸುವ ಸರಕು -ಸೇವೆಗಳ ಬೆಲೆಗಳ ಆಧಾರದಿಂದ ನಿರ್ಧರಿಸುವ ಸೂಚಿ.

cost of preferred stock: ಒಲವಿನ ದಾಸ್ತಾನು ವೆಚ್ಚ; ಒಲವಿನ ಶೇಖರಣಾ ವೆಚ್ಚ. ಸಾಮಾನ್ಯ ಸಂಗ್ರಾಹಕನ ಗಳಿಕೆಯಲ್ಲಿ ವ್ಯತ್ಯಾಸವಾಗದಂತೆ ನಿರ್ಣಯವಾಗುವ ದಾಸ್ತಾನುಗಳ ಪ್ರತಿಫಲ ದರ.

cost of production: ಉತ್ಪಾದನಾ ವೆಚ್ಚ.

cost of retained earning: ಉಳಿಸಿದ ಗಳಿಕೆಯ ವೆಚ್ಚ. ಲಾಭಾಂಶದ (ಡಿವಿಡೆಂಡ್‌ಗಳ) ಮರು ಹೂಟೆಯ ನಿರೀಕ್ಷಿತ ಆದಾಯ.

cost of service principle: ಸೇವಾವೆಚ್ಚದ ತತ್ವ.

cost-output relationship: ವೆಚ್ಚ ಮತ್ತು ಉತ್ಪನ್ನಗಳ ಸಂಬಂಧ.

cost-push inflation: ವೆಚ್ಚ-ಪ್ರೇರಿತ ಹಣದುಬ್ಬರ. ಸರಕು ಹಾಗೂ ಸೇವೆಗಳ ಉತ್ಪಾದನಾ ವೆಚ್ಚವು ಹೆಚ್ಚುವುದರ ಪರಿಣಾಮವಾಗಿ ಉಂಟಾಗುವ ಹಣ ದುಬ್ಬರ.

cost ratio: ವೆಚ್ಚದ ಅನುಪಾತ (ನಿಷ್ಪತ್ತಿ).

cost reduction: ವೆಚ್ಚದ ಕಡಿತ.

cost schedule: ವೆಚ್ಚದ ಅನುಸೂಚಿ; ವಿವಿಧ ಉತ್ಪಾದನಾ ಹಂತಗಳಲ್ಲಿ ಸಂಭವಿಸಬಹುದಾದ ವೆಚ್ಚಗಳನ್ನು ತೋರಿಸುವ ಹಾಗೂ ಸೀಮಾಂತ ವೆಚ್ಚ ಮತ್ತು ಸರಾಸರಿ

ವೆಚ್ಚಗಳನ್ನು ಲೆಕ್ಕಹಾಕಿ ವೆಚ್ಚದ ರೇಖೆಗಳನ್ನು ಬಿಡಿಸಬಹುದಾದ ಸೂಚಿ (ಪಟ್ಟಿ).

costume: ವೇಷಭೂಷಣ.

council for mutual economic assistance: ಪರಸ್ಪರ ಆರ್ಥಿಕ ಸಹಾಯ ಮಂಡಲಿ; ೧೯೪೯ರಲ್ಲಿ ಸಮಾಜವಾದಿ ರಾಷ್ಟ್ರಗಳು ಸ್ಥಾಪಿಸಿಕೊಂಡ ಒಂದು ಅಂತರರಾಷ್ಟ್ರೀಯ ಸಂಘಟನೆ. ಸಮಾಜವಾದಿ ಆರ್ಥಿಕ ಏಕೀಕರಣ, ಸಮಾಜವಾದಿ ದೇಶಗಳ ಆರ್ಥಿಕಾಭಿವೃದ್ಧಿಯ ಉತ್ತೇಜನ, ಅವುಗಳ ಆರ್ಥಿಕಾಭಿವೃದ್ಧಿಯ ಮಟ್ಟಗಳನ್ನು ಕ್ರಮೇಣ ಸಮಮಟ್ಟವಾಗಿಸುವುದು, ಸದಸ್ಯ ರಾಷ್ಟ್ರಗಳ ಜನತೆಯ ಯೋಗಕ್ಷೇಮವನ್ನು ನಿರಂತರವಾಗಿ ವರ್ಧಿಸುವುದು ಇವೇ ಅದರ ಉದ್ದೇಶ.

council of elders: ಹಿರಿಯರ ಸಭೆ; ಹಿರಿಯರ ಕೂಟ.

council of five ministers: ಪಂಚ ಪ್ರಧಾನ ಮಂತ್ರಿಮಂಡಲ.

council of ministers: ಮಂತ್ರಿ ಮಂಡಲ; ಸಚಿವ ಸಂಪುಟ.

council of regency: ರಾಜ್ಯಪ್ರತಿನಿಧಿ ಸಮಿತಿ; ರಾಜಪ್ರತಿನಿಧಿ ಮಂಡಲಿ; ರಕ್ಷಣಾ ಸಮಿತಿ.

council of states: ರಾಜ್ಯ ಸಭೆ; ಭಾರತದ ಸಂಸತ್ತಿನ ಮೇಲ್ಮನೆ.

councillor: ಮಂತ್ರಿ. ಆಲೋಚನಾ ಸಭೆಯ ಸದಸ್ಯ.

counselling: ಸಮಾಲೋಚನೆ; ಪರಾಮರ್ಶೆ; ಉಪಬೋಧನೆ.

counselling psycholog1y: ಮಾರ್ಗದರ್ಶನ ಮನೋವಿಜ್ಞಾನ, ಹಿತಬೋಧನ ಮನೋವಿಜ್ಞಾನ.

counselling service: ಪರಾಮರ್ಶನ ಸೇವೆ; ಉಪಬೋಧನ ಸೇವೆ.

counselling treatment: ಹಿತಬೋಧನಾತ್ಮಕ ಚಿಕಿತ್ಸೆ, ಮಾರ್ಗದರ್ಶಕ ಚಿಕಿತ್ಸೆ.

counsellor: ಸಲಹೆಗಾರ.

counter alliance: ಪ್ರತಿಮೈತ್ರಿಕೂಟ. ಒಂದು ಮೈತ್ರಿಕೂಟಕ್ಕೆ ವಿರುದ್ಧವಾಗಿ ಮತ್ತೊಂದು ಮೈತ್ರಿಕೂಟವನ್ನು ರಚಿಸುವುದು. ಇದು ಪ್ರಪಂಚದಲ್ಲಿ ಶಕ್ತಿಯನ್ನು ಸಮತೋಲನ ಮಾಡಲು ಬಳಸುವ ತಂತ್ರಗಳಲ್ಲೊಂದು.

counter charge: ಪ್ರತ್ಯಾರೋಪ.

counter-claim: ಪ್ರತಿದಾವೆ; ಪ್ರತಿಹಕ್ಕು ಮಂಡನೆ.

counter magic: ಪ್ರತಿ-ಮಾಟ.

counter propaganda: ಅಪಪ್ರಚಾರ.

counter reformation: ಪ್ರತಿಧರ್ಮ ಕ್ರಾಂತಿ; ಪ್ರತಿಸುಧಾರಣೆ.

counter revolution: ಪ್ರತಿಕ್ರಾಂತಿ; ಕ್ರಾಂತಿ ವಿರೋಧಿ. ಸಾಮಾಜಿಕ ಕ್ರಾಂತಿಯ ಕಾಲದಲ್ಲಿ ಪದಚ್ಯುತಗೊಂಡಿರುವ ಅಥವಾ ಪದಚ್ಯುತಗೊಳ್ಳುತ್ತಿರುವ ಪ್ರತಿಗಾಮಿ ವರ್ಗವು ಹಳೆಯ ವ್ಯವಸ್ಥೆಯನ್ನು ಉಳಿಸಿಕೊಳ್ಳುವುದಕ್ಕಾಗಿಯೋ ಅಥವಾ ಪುನರ್ ಸ್ಥಾಪಿಸುವುದಕ್ಕಾಗಿಯೋ ಹೊಸ ಸಾಮಾಜಿಕ ವ್ಯವಸ್ಥೆಗೆ ವಿರುದ್ಧವಾಗಿ ನಡೆಸುವ ತೀವ್ರವಾದ ಹೋರಾಟ.

counter signature: ಮೇಲು ರುಜು; ದೃಢಾಂಕಿತ.

counter statement: ಪ್ರತಿಹೇಳಿಕೆ.

counter suggestion: ವಿರುದ್ಧ ಸೂಚನೆ.

counter trade: ಪ್ರತಿ ವ್ಯಾಪಾರ; ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ಸಾಟಿ ವಿನಿಮಯದ ಒಂದು ರೂಪ. ಇಲ್ಲಿ ವ್ಯಾಪಾರ ಸಂದರ್ಭದಲ್ಲಿ ಗ್ರಾಹಕನು ಮಾರಾಟಗಾರನೊಂದಿಗೆ ಹಣದ ಬದಲಾಗಿ ಸರಕುಗಳನ್ನು ಕೊಂಡುಕೊಳ್ಳಲು ಆಗ್ರಹಿಸುತ್ತಾನೆ.

counter transference: ಪ್ರತಿ ಭಾವಾಂತರಣ; ರೋಗಿಯ ಬಗ್ಗೆ ಚಿಕಿತ್ಸಕನು ತಳೆಯುವ ತೀರ್ಮಾನ ಮುಖ್ಯವಾದುದರಿಂದ ಚಿಕಿತ್ಸೆಯ ಮತ್ತು ನೈತಿಕ ದೃಷ್ಟಿಯಿಂದ ಆತ ಪ್ರತಿಭಾವಾಂತರಣವನ್ನು ಬೆಳೆಸಿಕೊಳ್ಳಬಾರದು ಅಥವಾ ರೋಗಿಯೊಡನೆ ಭಾವ ಸಂಬಂಧ ಬೆಳೆಸಿಕೊಳ್ಳಕೂಡದು.

counter wish dreams: ಪ್ರತಿ ಇಚ್ಛೆಯ ಕನಸುಗಳು.

counterfeit role: ಕೃತಕ ಪಾತ್ರ. ತನ್ನ ನಿಜವಾದ ಸ್ವರೂಪವನ್ನು ಬಚ್ಚಿಟ್ಟು ಮರ್ಯಾದೆಗಾಗಿ ನಿರ್ವಹಿಸುವ ಪಾತ್ರ. ಉದಾ: ಭ್ರಷ್ಟಾಚಾರಿ ರಾಜಕಾರಣಿಗಳು ಹಾಗೂ ಅಧಿಕಾರಿಗಳು ದೇವಸ್ಥಾನಗಳಿಗೆ ಹಾಗೂ ಧಾರ್ಮಿಕ ಸಂಘ ಸಂಸ್ಥೆಗಳಿಗೆ ಒಂದಿಷ್ಟು ದಾನ ನೀಡಿ ಧರ್ಮಭೀರುಗಳೆಂಬಂತೆ ಕಾಣಿಸಿಕೊಳ್ಳುವುದು.

countermand: ಪ್ರತ್ಯಾದೇಶ.

country ballad: ಗ್ರಾಮೀಣ ಲಾವಣಿ.

coup d'etat: ಕ್ಷಿಪ್ರಕ್ರಾಂತಿ. ಬುಡಮೇಲು ಕೃತ್ಯ. ತ್ವರಿತ ಕ್ರಾಂತಿ ಅಥವಾ ಕಾರ್ಯಾಚರಣೆಯ ಮೂಲಕ ಸರಕಾರದ ಪ್ರಮುಖ ವ್ಯಕ್ತಿಗಳಾದ ರಾಷ್ಟ್ರಾಧ್ಯಕ್ಷ ಮತ್ತು ಪ್ರಧಾನ ಮಂತ್ರಿ ಮುಂತಾದ ನಾಯಕರನ್ನು ಅಧಿಕಾರದಿಂದ ಕೆಳಗಿಳಿಸುವುದು ಅಥವಾ ಕಗ್ಗೊಲೆ ಮಾಡುವುದು.

couple dance: ಜತೆನೃತ್ಯ. ವ್ಯಕ್ತಿಯ ಪ್ರಣಯಾಚರಣೆಯನ್ನು ಸೂಚಿಸುವ ನೃತ್ಯ.

court martial: ಸೈನಿಕ ನ್ಯಾಯಾಲಯ. ಸೇನೆಯ ಕಾನೂನನ್ನು ಉಲ್ಲಂಘಿಸಿದ ವ್ಯಕ್ತಿಯನ್ನು ಸೇನೆಯ ಅಧಿಕಾರಿಗಳುಳ್ಳ ನ್ಯಾಯ ಮಂಡಳಿಯು ಸೈನಿಕ ನ್ಯಾಯಾಲಯಕ್ಕೆ ಗುರಿಪಡಿಸಿ ನಡೆಸುವ ವಿಚಾರಣೆ.

court of appeal: ಮೇಲ್ಮನವಿ ನ್ಯಾಯಾಲಯ. ಅಧೀನ ನ್ಯಾಯಾಲಯಗಳ ತೀರ್ಮಾನಕ್ಕೆ ವಿರುದ್ಧವಾಗಿ ಬರುವ ಅಪೀಲು (ಮೇಲ್ಮನವಿ)ಗಳನ್ನು ಇತ್ಯರ್ಥ ಮಾಡುವ ನ್ಯಾಯಾಲಯ.

court of conflicts: ವಿವಾದಗಳ (ಮಧ್ಯವರ್ತಿ) ನ್ಯಾಯಾಲಯ; ವಿವಾದ ಪರಿಹಾರ ನ್ಯಾಯಾಲಯ.

court of criminal appeal: ಫೌಜುದಾರಿ (ಕ್ರಿಮಿನಲ್) ಮೇಲ್ಮನವಿ ನ್ಯಾಯಾಲಯ; ಅಪರಾಧಿಗಳ ಪುನರ್ವಿಚಾರಣಾ ಬೇಡಿಕೆಯ ನ್ಯಾಯಾಲಯ.

court of domestic relations: ಕೌಟುಂಬಿಕ ನ್ಯಾಯಾಲಯ.

court of first gustance: ಪ್ರಥಮ ಹಂತದ ನ್ಯಾಯಾಲಯ. ಪ್ರಥಮ ಹಂತದ ವಿಚಾರಣೆಗಳನ್ನು ನಡೆಸುವ ನಾಗರಿಕ ಅಥವಾ ಅಪರಾಧೀ ನ್ಯಾಯಾಲಯ.

court of exchequer: ಆರ್ಥಿಕ ನ್ಯಾಯಾಲಯ.

court of impeachment: ಮಹಾಭಿಯೋಗ ನ್ಯಾಯಾಲಯ. ಅಮೇರಿಕಾದಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಇನ್ನಿತರ ನಾಗರಿಕ ಅಧಿಕಾರಿಗಳು ಅಧಿಕಾರದ ದುರುಪಯೋಗ ಮಾಡಿದಾಗ ಅವರನ್ನು ಅಧಿಕಾರದಿಂದ ಕೆಳಗಿಳಿಸಲು ಅಮೇರಿಕಾದ ಸೆನೆಟ್ ದೋಷಾರೋಪಣಾ ನ್ಯಾಯಾಲಯವಾಗಿ ಕಾರ್ಯನಿರ್ವಹಿಸುತ್ತದೆ. ಅಮೇರಿಕಾದ ಕೆಳಮನೆಯು ದೋಷಾರೋಪಣಾ ನಿಲುವಳಿಯನ್ನು ಸಭೆಯಲ್ಲಿ ಮಂಡಿಸಿದಾಗ ಅದನ್ನು ಮೇಲ್ಮನೆಯಾದ ಸೆನೆಟ್ ನಿರ್ಧರಿಸುತ್ತದೆ.

court of king's bench: ರಾಜ ನ್ಯಾಯಪೀಠ.

court of proprietors: ಮಾಲೀಕರ ನ್ಯಾಯಪೀಠ; ಮಾಲೀಕರ ನ್ಯಾಯಮಂಡಳಿ.

court ruling: ನ್ಯಾಯಾಲಯದ ನಿರ್ಣಯ.

courtship: ಪ್ರೇಮ ಸ್ನೇಹಾಚಾರ. ವಿವಾಹಪೂರ್ವದಲ್ಲಿ ಗಂಡು-ಹೆಣ್ಣುಗಳು ಸ್ನೇಹ ಬೆಳೆಸುವ ಪದ್ಧತಿ.

courtship dance: ಪ್ರೇಮಿಗಳ ನೃತ್ಯ. ವಿವಾಹ ಮಾಡಿಕೊಳ್ಳುವ ಉದ್ದೇಶದಿಂದ ನಡೆಸುವ ನೃತ್ಯ ಪ್ರಕಾರ. ಉದಾ: ಆಸ್ಟ್ರೇಲಿಯಾದಲ್ಲಿ ಗಂಡಸರು ನರ್ತನ ಮಾಡುವಾಗ ಸ್ತ್ರೀಯರು ಗಮನಿಸಿ ತಮಗೆ ಮೆಚ್ಚುಗೆಯಾದವನೊಂದಿಗೆ ನರ್ತಿಸಿ ವಿವಾಹವಾಗುತ್ತಾರೆ.

cousin: ಸೋದರ ಸಂಬಂಧಿ.

couvade: ಗಂಡನ ನಟನೆಯ ಬಾಣಂತನ. ಮಗುವಿನ ಜನನಾನಂತರ ತಂದೆಯು ಬಾಣಂತಿ ಪಾಲಿಸಬೇಕಾದ ಎಲ್ಲಾ ನಿಯಮ ಹಾಗೂ ಪಥ್ಯಗಳನ್ನು ಪಾಲಿಸುತ್ತಾ ತಾಯಿಯ ಸ್ಥಾನದಲ್ಲಿ ನಿಂತು ಮಗುವಿನ ಆರೈಕೆ ಮಾಡುವ ಪದ್ಧತಿ. ಆಫ್ರಿಕಾದ ಕೆಲವು ಆದಿ ವಾಸಿಗಳಲ್ಲಿ ಈ ಪದ್ಧತಿ ಪ್ರಚಲಿತದಲ್ಲಿದೆ. ಕೆಲವು ಭಾರತೀಯ ಸಮುದಾಯಗಳಲ್ಲಿ ಗಂಡನು ಬಾಣಂತಿಯಾದ ತನ್ನ ಹೆಂಡತಿಯನ್ನು ಎಬ್ಬಿಸಿ ಮಗುವಿನ ಬಳಿ ಒಮ್ಮೆ ಮಲಗಿ ಸಾಂಕೇತಿಕವಾಗಿ ಬಾಣಂತನವನ್ನು ಆಚರಿಸುವ ಪದ್ಧತಿ ಇದೆ.

covariance: ಸಹ ಪರಿವರ್ತನೆ. ಎರಡು ಅಥವಾ ಎರಡಕ್ಕಿಂತ ಹೆಚ್ಚು ಪರಿವರ್ತಕಗಳು ಸರಾಸರಿ ಮೌಲ್ಯಕ್ಕಿಂತ ಎಷ್ಟು ವ್ಯತ್ಯಸ್ಥಗೊಂಡಿವೆ ಎಂಬುದರ ಒಟ್ಟು ಪ್ರಮಾಣ.

covariation: ಸಹವಿಚರಣ.

covenant: ಒಡಂಬಡಿಕೆ.

covert behaviour: ಪ್ರಚ್ಛನ್ನ (ಗೂಢ) ವರ್ತನೆ.

covert culture: ಪ್ರಚ್ಛನ್ನ ಸಂಸ್ಕೃತಿ.

co-wives: ಸಹಪತ್ನಿಯರು; ಸವತಿಯರು.

cradle song: ತೊಟ್ಟಿಲ ಹಾಡು.

craft guild: ವೃತ್ತಿ ಸಂಘ.

craft village: ವೃತ್ತಿ(ಕುಶಲಕಲಾ) ಗ್ರಾಮ; ಗುಡಿಕೈಗಾರಿಕಾ ಗ್ರಾಮ. ನಿರ್ದಿಷ್ಟ ಕರಕುಶಲ ಕಲೆಯಲ್ಲಿ ವಿಶೇಷ ಪ್ರಾವೀಣ್ಯತೆಯ ಜನರಿರುವ ಗ್ರಾಮ.

cranial capacity: ತಲೆ ಬುರುಡೆಯ ಸಾಮರ್ಥ್ಯ. ಒಂದೇ ಸಮೂಹದ ಜನರಲ್ಲಿ ತಲೆಬುರುಡೆಯ ಸಾಮರ್ಥ್ಯದ ಆಧಾರದಿಂದ

ಗಮನಾರ್ಹ ಭಿನ್ನತೆಗಳು ಕಾಣಿಸಿಕೊಳ್ಳು ತ್ತವೆ.

creation of charge: ಸ್ವಾಮ್ಯ ಹಕ್ಕಿನ ನಿರ್ಮಾಣ.

creation of credit: ಸಾಲದ ಸೃಷ್ಟಿ; ಉದ್ದರಿ ಸೃಷ್ಟಿ.

creative ability: ಸೃಜನಾತ್ಮಕ ಸಾಮರ್ಥ್ಯ.

creative accommodation: ಸೃಜನಾತ್ಮಕ ಸಮಂಜನ. ಒಂದು ಸಂಘರ್ಷದ ಪರಿಹಾರವನ್ನು ಒಪ್ಪಂದದ ಹೊಸ ಕ್ಷೇತ್ರಗಳ ಬೆಳವಣಿಗೆಯಿಂದ ಮಾಡುವ ಮೂಲಕ ಇದರಲ್ಲಿ ಭಾಗಿಯಾದ ಎಲ್ಲರ ಅವಶ್ಯಕತೆಗಳು, ಹಿತಾಸಕ್ತಿಗಳು ಹಾಗೂ ಪ್ರೇರಣೆಗಳನ್ನು ಗಮನದಲ್ಲಿರಿಸಿ ಮಾಡುವ ಸಮಂಜನ.

creative activity: ಸೃಜನಾತ್ಮಕ ಚಟುವಟಿಕೆ.

creative behaviour: ಸೃಜನಶೀಲ ವರ್ತನೆ; ಸೃಜನಾತ್ಮಕ ವರ್ತನೆ.

creative expression: ರಚನಾತ್ಮಕ ಅಭಿವ್ಯಕ್ತಿ; ಸೃಜನಾತ್ಮಕ ಅಭಿವ್ಯಕ್ತಿ.

creative group: ಸೃಜನಾತ್ಮಕ ಸಮೂಹ.

creative imagination: ಸೃಜನಾತ್ಮಕ ಕಲ್ಪನೆ.

creative inspiration: ರಚನಾತ್ಮಕ ಸ್ಫೂರ್ತಿ; ಅಂತಸ್ಫೂರ್ತಿ

creative intelligence: ಸೃಜನಾತ್ಮಕ ಬುದ್ಧಿಶಕ್ತಿ.

creative research: ಸೃಜನಾತ್ಮಕ ಸಂಶೋಧನೆ.

creative self: ಸೃಜನಾತ್ಮಕ ಆತ್ಮ.

creative self expression: ಸೃಜನಾತ್ಮಕ ಆತ್ಮಾಭಿವ್ಯಕ್ತಿ.

creative synthesis: ಸೃಜನಾತ್ಮಕ ಸಂಯೋಜನೆ.

creative talent: ಸೃಜನಾತ್ಮಕ ಪ್ರತಿಭೆ; ಸೃಷ್ಟ್ಯಾತ್ಮಕ ಪ್ರತಿಭೆ.

creative thinking: ಸೃಜನಾತ್ಮಕ ಚಿಂತನೆ.

creative writing: ಸೃಜನಾತ್ಮಕ ಲೇಖನ.

creativity: ಸೃಜನಾತ್ಮಕತೆ; ಸೃಜನಶೀಲತೆ.

creator: ಸೃಷ್ಟಿಕರ್ತ.

creches: ತೊಟ್ಟಿಲು ಮನೆ; ಶಿಶುಪಾಲನಾ ಕೇಂದ್ರ.

credential: ವಿಶ್ವಾಸಾರ್ಹತೆ.

credit: ಸಾಲ; ಉದ್ದರಿ; ಪತ್ತು.

credit control measure: ಸಾಲ ನಿಯಂತ್ರಣ; ಉದ್ದರಿ ನಿಯಂತ್ರಣ.

credit creation: ಸಾಲ (ಉದ್ದರಿ) ಸೃಷ್ಟಿ.

credit economy: ಉದ್ದರಿ ಆರ್ಥಿಕತೆ; ಸಾಲದ ಅರ್ಥವ್ಯವಸ್ಥೆ.

credit function: ಉದ್ದರಿ ಕಾರ್ಯ.

credit instrument: ಸಾಲ ಸಾಧನ; ಉದ್ದರಿ ಸಾಧನ.

credit money: ಸಾಲದ ಹಣ; ಉದ್ದರಿ ಹಣ; ಪತ್ತಿನ ಹಣ.

creditor: ಸಾಲಿಗ.

creeping inflation: ತೆವಳುವ ಹಣದುಬ್ಬರ. ಬೆಲೆಗಳು ಅತಿ ನಿಧಾನವಾಗಿ ಬಹಳ ಕಡಿಮೆ ದರದಲ್ಲಿ ಏರುತ್ತಿರುವ ಸ್ಥಿತಿ.

cremation: ಶವಸಂಸ್ಕಾರ.

crescive social institution: ಸ್ವಯಂಭೂ ಸಾಮಾಜಿಕ ಸಂಸ್ಥೆ. ಅನುದ್ದೇ

ಶಿತವಾಗಿ ಹಾಗೂ ಅಪ್ರಯತ್ನಪೂರ್ವಕವಾಗಿ ಸ್ವಪ್ರೇರಿತವಾಗಿ ನಿಧಾನವಾಗಿ ಬೆಳೆದ ಸಾಮಾಜಿಕ ಸಂಸ್ಥೆ.

crime: ಅಪರಾಧ.

crime without victims: ನೋಡಿ: victimless crime.

crimes of the powerful: ಪ್ರಬಲರ ಅಪರಾಧಗಳು. ಅಧಿಕಾರದ ಉತ್ತಮ ಸ್ಥಾನಮಾನದಲ್ಲಿರುವವರು ಮಾಡುವ ಅಪರಾಧಗಳು. ನೋಡಿ: white collar crime.

criminal anthropology: ಅಪರಾಧೀ ಮಾನವಶಾಸ್ತ್ರ. ಅಪರಾಧಿತ್ವ ಹಾಗೂ ದೈಹಿಕ ಗುಣಲಕ್ಷಣಗಳ ನಡುವಿನ ಸಂಬಂಧಗಳನ್ನು ಅಧ್ಯಯನ ಮಾಡುವ ಮಾನವ ಶಾಸ್ತ್ರ.

criminal association: ಅಪರಾಧೀ ಸಂಘಟನೆ. ಅಪರಾಧೀ ಪ್ರವೃತ್ತಿಯ ಜನರು ತಮ್ಮ ಉದ್ದೇಶ ಸಾಧನೆಗಾಗಿ ಸಂಘಟಿತರಾಗುವಿಕೆ.

criminal behaviour: ಅಪರಾಧೀ ವರ್ತನೆ.

criminal court: ಫೌಜುದಾರಿ ನ್ಯಾಯಾಲಯ. ಅಪರಾಧೀ ಮೊಕದ್ದಮೆಗಳನ್ನು ವಿಚಾರಣೆಗೆ ತೆಗೆದುಕೊಳ್ಳುವ ನ್ಯಾಯಾಲಯ.

criminal justice: ಅಪರಾಧೀ ನ್ಯಾಯ ಸಂಹಿತೆ.

criminal law: ಅಪರಾಧೀ ಕಾನೂನು.

criminal network: ಅಪರಾಧೀ ಜಾಲ. ಅಪರಾಧೀ ಕ್ರಿಯೆಗಳಲ್ಲಿ ತೊಡಗಿರುವ ವ್ಯಕ್ತಿಗಳ ನಡುವಿನ ಸಾಮಾಜಿಕ ಸಂಬಂಧದ ಜಾಲ.

criminal offence: ಶಿಕ್ಷಾರ್ಹ ಅಪರಾಧ.

criminal procedure code: ದಂಡ ಪ್ರಕ್ರಿಯಾ ಸಂಹಿತೆ. ಅಪರಾಧೀ ದಂಡ ಸಂಹಿತೆ.

criminal psychology: ಅಪರಾಧ ಮನೋವಿಜ್ಞಾನ.

criminal sub-culture: ಅಪರಾಧೀ ಉಪ ಸಂಸ್ಕೃತಿ. ಅಪರಾಧಿಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಏಕಪ್ರಕಾರದ ಗುಣಲಕ್ಷಣಗಳು, ನಡತೆಗಳು, ವಿಚಾರ ಧೋರಣೆಗಳು ಇತ್ಯಾದಿ.

criminal tribes: ಅಪರಾಧೀ ಬುಡಕಟ್ಟುಗಳು.

criminality: ಅಪರಾಧಿತ್ವ.

criminalization: ಅಪರಾಧೀಕರಣ. ಕಾನೂನಿನ ಆಧಾರದ ಮೇಲೆ ನ್ಯಾಯಯುತ ನಡತೆಯನ್ನು ಅಪರಾಧವನ್ನಾಗಿ ಪರಿವರ್ತಿಸುವ ಪ್ರಕ್ರಿಯೆ.

crimiogenic: ಅಪರಾಧಕಾರಕ.

criminology: ಅಪರಾಧಶಾಸ್ತ್ರ.

crisis: ಬಿಕ್ಕಟ್ಟು; ಒಂದು ತಿರುಗುಬಿಂದು ಅಥವಾ ವಿಷಮ ಪರಿಸ್ಥಿತಿ.

critical minimum effort thesis: ಸಂದಿಗ್ಧ ಕನಿಷ್ಠ ಪ್ರಯತ್ನ ಸಿದ್ಧಾಂತ; ಆಪತ್ಕಾಲದ ಕನಿಷ್ಠ ಪ್ರಯತ್ನ ಸಿದ್ಧಾಂತ. ಆಪತ್ತಿನ ಸಂದರ್ಭದಲ್ಲಿ ಕನಿಷ್ಠತಮ ಪ್ರಯತ್ನ (ಶ್ರಮ)ದ ಮೂಲಕ ತಲಾ ಆದಾಯವನ್ನು ಹೆಚ್ಚಿಸಿ ಬಡತನದ ವಿಷಚಕ್ರದಿಂದ ಹೊರಬಂದು ರಾಷ್ಟ್ರದ ಪ್ರಗತಿಯನ್ನು ಸಾಧಿಸಬಹುದೆಂಬ ಸಿದ್ಧಾಂತ.

critical philosophy: ಟೀಕಾತ್ಮಕ ತತ್ವಶಾಸ್ತ್ರ; ವಿಮರ್ಶಾತ್ಮಕ ತತ್ವಶಾಸ್ತ್ರ.

critical situation: ಸಂದಿಗ್ಧ ಸಂದರ್ಭ.

critical skill: ವಿವೇಚಕ ಕುಶಲತೆ.

critical theory: ವಿಮರ್ಶಾ ಸಿದ್ಧಾಂತ. ಫ್ರಾಂಕ್‌ಫರ್ಟ್ ಪಂಥದವರು ಮಾರ್ಕ್ಸ್ ಮತ್ತು ವೇಬರ್ ನೀಡಿದ ಬಂಡವಾಳಶಾಹಿ ವಿವರಣೆಯನ್ನು ಪುನರ್‌ವಿಮರ್ಶಿಸಿದ ಸಿದ್ಧಾಂತ.

critique of pure reason: ಶುದ್ಧ ಬುದ್ಧಿಯ ಮೀಮಾಂಸೆ.

cromagnon art: ನೋಡಿ: cave art.

cross communication: ಅಡ್ಡ ಸಂಪರ್ಕ.

cross cousin: ಅಂತರ್ ಭ್ರಾತೃ; ವಿಲೋಮ ಭ್ರಾತೃ. ಸೋದರತ್ತೆ, ಸೋದರ ಮಾವನ ಮಕ್ಕಳು.

cross-cousin marriage: ಅಂತರ್ ಭ್ರಾತೃ ವಿವಾಹ; ಸೋದರಿಕೆಯ ವಿವಾಹ. ತಾಯಿಯ ಸಹೋದರರ ಮಕ್ಕಳಲ್ಲಿ ಅಥವಾ ತಂದೆಯ ಸಹೋದರಿಯರ ಮಕ್ಕಳಲ್ಲಿ ವಿವಾಹ ಸಂಗಾತಿಯನ್ನು ಆಯ್ಕೆ ಮಾಡಿ ನೆರವೇರುವ ವಿವಾಹ.

cross cultural comparison: ಅಂತರ್‌ಸಾಂಸ್ಕೃತಿಕ ತುಲನೆ. ಒಂದು ಯಾ ಅದಕ್ಕಿಂತ ಹೆಚ್ಚು ಸಾಂಸ್ಕೃತಿಕ ಲಕ್ಷಣ ಗಳನ್ನು ಇನ್ನೊಂದು ಸಮಾಜಕ್ಕೆ ಹೋಲಿಸಿ ನೋಡು ವುದು.

cross cultural method: ಅಂತರ್ ಸಾಂಸ್ಕೃತಿಕ ವಿಧಾನ.

cross cultural study: ಅಂತರ್ ಸಂಸ್ಕೃತಿಯ ಅಧ್ಯಯನ. ಒಂದು ಸಂಸ್ಕೃತಿ ಗಿಂತ ಹೆಚ್ಚು ಸಂಸ್ಕೃತಿಗೆ ಸಂಬಂಧಿಸಿದ ಅಥವಾ ಅನೇಕ ಸಂಸ್ಕೃತಿಗಳ ತುಲನಾತ್ಮಕ ಅಧ್ಯಯನ.

cross cultural theory: ಅಂತರ್ ಸಂಸ್ಕೃತಿ ಸಿದ್ಧಾಂತ. ಕಾಡು ಸ್ಥಿತಿಯಿಂದ ನಾಗರಿಕತೆಯ ಸ್ಥಿತಿಯ ಕಡೆಗೆ ಸಾಂಸ್ಕೃತಿಕ ವಿಕಾಸ ಹೇಗಾಯಿತೆನ್ನುವುದನ್ನು ಹೇಳುವ ಸಿದ್ಧಾಂತ.

cross culture: ಅಂತರ್‌ಸಂಸ್ಕೃತಿ.

cross dating: ಅಂತರ್ ವಯೋ ನಿರ್ಣಯ. ನೇರ ಸಂಪರ್ಕ ಹೊಂದಿರುವ ಸಾಂಸ್ಕೃತಿಕ ವಿದ್ಯಮಾನಗಳ ಸಾಪೇಕ್ಷ ವಯ ಸ್ಸನ್ನು ನಿರ್ಣಯಿಸುವ ಪ್ರಕ್ರಿಯೆ.

cross demand: ಅಂತರ್ ಬೇಡಿಕೆ; ಛೇದಕ ಬೇಡಿಕೆ. ನಿರ್ದಿಷ್ಟ ವಸ್ತುವೊಂದರ ಬೆಲೆಯಲ್ಲಿ ಬದಲಾವಣೆಯಾದಾಗ, ಅದರ ಸಂಬಂಧೀ ವಸ್ತುವಿನ ಬೇಡಿಕೆಯಲ್ಲಿ ಬದ ಲಾವಣೆ ಉಂಟಾದರೆ ಆ ಬೇಡಿಕೆಯನ್ನು ಅಂತರ್‌ಬೇಡಿಕೆಯೆಂದು ಕರೆಯಲಾಗು ತ್ತದೆ.

cross dressing: ಭಿನ್ನಲಿಂಗ ವಸ್ತ್ರ ಧಾರಣೆ. ಪುರುಷರು ಸ್ತ್ರೀಯರ ಹಾಗೂ ಸ್ತ್ರೀಯರು ಪುರುಷರ ವಸ್ತ್ರಗಳನ್ನು ಧರಿಸು ವಿಕೆ.

cross elasticity of demand: ಬೇಡಿ ಕೆಯ ಅಂತರ್ ಸ್ಥಿತಿಸ್ಥಾಪಕತ್ವ. ಒಂದು ವಸ್ತುವಿನ ಬೇಡಿಕೆಯಲ್ಲಿ ಉಂಟಾದ ಬದ ಲಾವಣೆಯ ಪರಿಣಾಮವಾಗಿ ಅದರ ಸಂಬಂಧೀ ವಸ್ತುವಿನ ಬೇಡಿಕೆಯ ಪ್ರಮಾಣ ದಲ್ಲಿ ಕಂಡುಬರುವ ಸ್ಥಿತಿಸ್ಥಾಪಕತ್ವ.

cross genres: ವಿಷಮ ಬಗೆ.

cross reference: ಅಡ್ಡ ಉಲ್ಲೇಖ.

cross section analysis: ಕಾಲಾಧಾರಿತ

ವಿಶ್ಲೇಷಣೆ. ಒಂದು ನಿರ್ದಿಷ್ಟ ಅವಧಿಗೆ ಸಂಬಂಧಿಸಿದ ವಿಶ್ಲೇಷಣೆ.

cross sectional study: ಸೀಳು ನೋಟದ ಅಧ್ಯಯನ.

cross-sex descent: ವಿಷಮ ಲಿಂಗ ಸಂತತಿ. ಹೆಣ್ಣು ಮಕ್ಕಳು ತಂದೆಯ ಮನೆತನದ ಮೂಲಕ ಮತ್ತು ಗಂಡು ಮಕ್ಕಳು ತಾಯಿಯ ಮನೆತನದ ಮೂಲಕ ವಂಶಾವಳಿಯನ್ನು ಗುರುತಿಸುವ ವ್ಯವಸ್ಥೆ. ಇದೊಂದು ಮಿಶ್ರ ವಂಶಾವಳಿಯ ವಿಧಾನ.

cross subsidy: ಅಂತರ್ ಹಣ ವರ್ಗಾವಣೆ ಸರಿದೂಗಿಸುವಿಕೆ. ಉದ್ಯಮ ವೊಂದರ ನಷ್ಟಸಂಭವ ವಿಭಾಗವನ್ನು ಉಳಿದ ವಿಭಾಗಗಳ ಲಾಭಾಂಶಗಳಿಂದ ಹಣವೊದಗಿಸಿ ಸರಿದೂಗಿಸುವುದು.

cross uncle: ಮಾವ; ತಾಯಿಯ ಸಹೋದರ.

crowd: ಜನಸಂದಣಿ; ಜನಜಂಗುಳಿ; ಜನಮಂದೆ.

crowd activity: ಜನಜಂಗುಳಿಯ ಚಟುವಟಿಕೆ.

crowd behaviour: ಜನಮಂದೆ ವರ್ತನೆ.

crowd opinion: ಜನಜಂಗುಳಿಯ ಅಭಿಪ್ರಾಯ.

crown power: ಪ್ರಭುತ್ವದ ಅಧಿಕಾರ.

crown prerogative: ರಾಜ ವಿಶೇಷಾಧಿಕಾರ.

crowned republic: ಮುಕುಟಧಾರಿ ಗಣರಾಜ್ಯ; ಕಿರೀಟಧಾರಿ ಗಣರಾಜ್ಯ. ಇಂಗ್ಲೆಂಡ್‌ನಲ್ಲಿ ಪ್ರಜಾಪ್ರಭುತ್ವ ಮತ್ತು ಅರಸೊತ್ತಿಗೆ ಎರಡೂ ಇದ್ದು ಅರಸೊತ್ತಿಗೆಯನ್ನು ಪ್ರಜಾಪಭುತ್ವ ಪದ್ಧತಿಗೆ ಅಳವಡಿಸಿಕೊಂಡಿರುವುದರಿಂದ ಅಲ್ಲಿನ ಪ್ರಜಾಪ್ರಭುತ್ವವನ್ನು ಕಿರೀಟಧಾರಿ ಗಣರಾಜ್ಯ ಎನ್ನಲಾಗಿದೆ.

crude birth rate: ಕಚ್ಚಾ ಜನನ ದರ. ಒಂದು ನಿರ್ದಿಷ್ಟ ಅವಧಿಯಲ್ಲಿ ಪ್ರತಿ ಒಂದು ಸಾವಿರ ಜನಸಂಖ್ಯೆಯಲ್ಲಿ ಹುಟ್ಟುವ ಮಕ್ಕಳ ಸಂಖ್ಯೆ.

crude death rate: ಕಚ್ಚಾ ಮರಣ ದರ; ಸಹಜ ಮರಣ ದರ. ಒಂದು ನಿರ್ದಿಷ್ಟ ಅವಧಿಯಲ್ಲಿ ಪ್ರತಿ ಒಂದು ಸಾವಿರ ಜನ ಸಂಖ್ಯೆಯಲ್ಲಿ ಸಾಯುವ ಜನರ ಸಂಖ್ಯೆ.

crude theism: ಅಪಕ್ವ ದೈವಾಸ್ತಿತ್ವ ವಾದ.

crusade: ಧರ್ಮಯುದ್ಧ.

crystallized form: ಸ್ಫಟಿಕೀಕೃತ ರೂಪ.

cue: ಸಂಕೇತ.

culpable homicide: ದಂಡನೀಯ ಕೊಲೆ; ನರಹತ್ಯಾ ಅಪರಾಧ.

cult: ಉಪಾಸನೆ; ಧರ್ಮಪಂಥ; ಆರಾಧನಾ ಪದ್ಧತಿ.

cult doctrine: ಆರಾಧಾನಾ ಸಿದ್ಧಾಂತ. ಉಪಾಸನಾ ಸಿದ್ಧಾಂತ.

cult group: ಆರಾಧನಾ ಸಮೂಹ.

cult song: ಆರಾಧನಾ ಗೀತೆ.

cult tradition: ಆರಾಧನಾ ಸಂಪ್ರ ದಾಯ.

cult of the dead: ಮೃತರ ಆರಾಧನಾ ಪಂಥ. ಮೃತರಿಂದ ಸಹಾಯವನ್ನು ಪಡೆಯಲು ಅಥವಾ ಅವರಿಗೆ ಅನುಕೂಲ ಮಾಡುವ ಉದ್ದೇಶದಿಂದ ನಡೆಸುವ ಸಮಾರಂಭಿಕ ಚಟುವಟಿಕೆಗಳು.

cultic milieu: ಉಪಾಸನಾ ಆವರಣ. ಅನೇಕ ಉಪಾಸನಾ ಪದ್ಧತಿಗಳ ಆವರಣ.

cultivation jhum: ಕುಮೇರಿ ಬೇಸಾಯ. ಕಾಡು ಸವರಿ ಸುಟ್ಟು ಮಾಡುವ ಬೇಸಾಯ.

cultivation tenure: ಸಾಗುವಳಿಯ ಹಿಡುವಳಿ; ಸಾಗುವಳಿ ಅವಧಿ(ಗೇಣಿ).

cultural absolute: ಸಾಂಸ್ಕೃತಿಕ ನಿರಪೇಕ್ಷ; ಸಾಂಸ್ಕೃತಿಕ ಪೂರ್ಣತೆ. ಯಾವುದೇ ಒಂದು ಸಾಂಸ್ಕೃತಿಕ ಗುಂಪು ತನ್ನ ಸಾಂಸ್ಕೃತಿಕ ಮೌಲ್ಯವನ್ನು ಎಲ್ಲಾ ಸಮಾಜಗಳಿಗೂ ಅನ್ವಯ ಯೋಗ್ಯವೆಂದು ಭಾವಿಸುವುದು.

cultural acceleration: ಸಾಂಸ್ಕೃತಿಕ ವೇಗೋತ್ಕರ್ಷ.

cultural adaptation: ಸಾಂಸ್ಕೃತಿಕ ಹೊಂದಾಣಿಕೆ.

cultural adhesion: ಸಾಂಸ್ಕೃತಿಕ ಅನುಸಕ್ತಿ. ಮೂಲಭೂತವಾದ ಕ್ರಿಯಾತ್ಮಕ ಸಂಬಂಧ ಇಲ್ಲದಿದ್ದರೂ ಎರಡು ಅಥವಾ ಎರಡಕ್ಕಿಂತ ಹೆಚ್ಚು ಸಾಂಸ್ಕೃತಿಕ ಅಂಶಗಳು ಮತ್ತು ಲಕ್ಷಣಗಳ ನಡುವೆ ಉಂಟಾಗುವ ಒಗ್ಗೂಡುವಿಕೆ.

cultural alternatives: ನೋಡಿ: cultural variants.

cultural ambivalence: ಸಾಂಸ್ಕೃತಿಕ ದ್ವಂದ್ವ.

cultural and educational right: ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಹಕ್ಕು. ಭಾರತದ ಸಂವಿಧಾನವು ಪ್ರಜೆಗಳಿಗೆ ನೀಡಿರುವ ಮೂಲಭೂತ ಹಕ್ಕುಗಳ ಲ್ಲೊಂದು. ಸಂವಿಧಾನದ ೨೯ ಮತ್ತು ೩೦ ನೇ ವಿಧಿಗಳು ಈ ಹಕ್ಕುಗಳ ಬಗ್ಗೆ ವಿವರಣೆ ನೀಡುತ್ತವೆ.

cultural anthropology: ಸಾಂಸ್ಕೃತಿಕ ಮಾನವಶಾಸ್ತ್ರ.

cultural approach: ಸಾಂಸ್ಕೃತಿಕ ಸಮೀಪನ; ಸಾಂಸ್ಕೃತಿಕ ಮಾರ್ಗ. ಸಮಾಜಶಾಸ್ತ್ರೀಯ ಅಧ್ಯಯನದಲ್ಲಿ ಸಂಸ್ಕೃತಿಗಳ ವಿಶ್ಲೇಷಣೆಯ ಮೂಲಕ ಅಧ್ಯಯನ ನಡೆಸುವ ವಿಧಾನ.

cultural artifact: ಸಾಂಸ್ಕೃತಿಕ ವಸ್ತು. ಸಾಂಸ್ಕೃತಿಕವಾಗಿ ವ್ಯಾಖ್ಯಾನಿಸಲ್ಪಟ್ಟ ಪ್ರಮಾಣೀಕೃತ ರೂಪ ಹಾಗೂ ಬಳಕೆ ಇರುವ ಮಾನವ ನಿರ್ಮಿತ ಅಥವಾ ಮಾನವನಿಂದ ನವೀಕರಿಸಲ್ಪಟ್ಟ ವಸ್ತು. ಉದಾ: ಉಪಕರಣಗಳು, ಕಟ್ಟಡಗಳು, ಶಸ್ತ್ರಾಸ್ತ್ರ ಇತ್ಯಾದಿ.

cultural assimilation: ಸಾಂಸ್ಕೃತಿಕ ಸ್ವಾಂಗೀಕರಣ.

cultural attache: ಸಾಂಸ್ಕೃತಿಕ ರಾಯಭಾರಿ.

cultural bankruptcy: ಸಾಂಸ್ಕೃತಿಕ ದಿವಾಳಿತನ.

cultural behaviour: ಸಾಂಸ್ಕೃತಿಕ ವರ್ತನೆ.

cultural blindness: ಸಾಂಸ್ಕೃತಿಕ ಅಂಧತ್ವ.

cultural borrowing: ಸಾಂಸ್ಕೃತಿಕ ಸ್ವೀಕರಣ.

cultural capital: ಸಾಂಸ್ಕೃತಿಕ ಬಂಡವಾಳ.

cultural change: ಸಾಂಸ್ಕೃತಿಕ ಬದಲಾವಣೆ. ವಿವಿಧ ಜನರ ಸಮ್ಮಿಳಿತದಿಂದ ಕಾಲಕಾಲಕ್ಕೆ ಸಂಸ್ಕೃತಿಗಳು ಬದಲಾವಣೆ ಹೊಂದುತ್ತವೆ ಎಂಬ ತತ್ವ.

cultural clash: ಸಾಂಸ್ಕೃತಿಕ ತಿಕ್ಕಾಟ.

cultural competition: ಸಾಂಸ್ಕೃತಿಕ ಸ್ಪರ್ಧೆ.

cultural conditioning: ಸಾಂಸ್ಕೃತಿಕ ಅನುಬಂಧನ.

cultural configuration: ಸಾಂಸ್ಕೃತಿಕ ವಿನ್ಯಾಸ. ಸಾಂಸ್ಕೃತಿಕ ಮೂಲಭೂತ ಸಮಗ್ರ ವಿನ್ಯಾಸದೊಳಗೆ ಸಂಘಟಿತಗೊಂಡ ಜನ ಜೀವನ.

cultural conflict: ಸಾಂಸ್ಕೃತಿಕ ಸಂಘರ್ಷ.

cultural contact: ಸಾಂಸ್ಕೃತಿಕ ಸಂಪರ್ಕ. ವಿವಿಧ ಸಂಸ್ಕೃತಿಯ ಸಮೂಹಗಳ ಸದಸ್ಯರೊಂದಿಗೆ ಅಂತರಕ್ರಿಯೆಯಿಂದಾಗಿ ಸಾಂಸ್ಕೃತಿಕ ಗುಣಲಕ್ಷಣಗಳ ಪ್ರಸರಣ.

cultural control: ಸಂಸ್ಕೃತಿಯ ನಿಯಂತ್ರಣಾಂಶ. ಸಾಮಾಜಿಕ ನಿರೀಕ್ಷೆಗಳಿಗನುಗುಣ ವಾಗಿ ವ್ಯಕ್ತಿಗಳು ವರ್ತಿಸುವಂತೆ ಪ್ರಚೋದಿಸುವ ಹಾಗೂ ಒತ್ತಡ ಬೀರುವ, ತನ್ಮೂಲಕ ಸಮಾಜದ ಕಾರ್ಯವು ಸರಿಯಾಗಿ ನಡೆಯುವಂತೆ ಮಾಡುವ ಸಂಸ್ಕೃತಿಯ ಅಂಶಗಳು. ಉದಾ: ನೀತಿ ನಿಯಮಗಳು, ಮೌಲ್ಯಗಳು, ಧಾರ್ಮಿಕ ವಿಧಿಗಳು, ಕಾನೂನು ಇತ್ಯಾದಿ.

cultural convergence: ಸಾಂಸ್ಕೃತಿಕ ಏಕಾಗ್ರಮುಖತೆ.

cultural deprivation: ಸಾಂಸ್ಕೃತಿಕ ಕಳೆತ; ಸಾಂಸ್ಕೃತಿಕ ಅಪಹೃತಿ.

cultural determinism: ಸಾಂಸ್ಕೃತಿಕ ನಿಯತಿವಾದ.

cultural diffusion: ಸಾಂಸ್ಕೃತಿಕ ಪ್ರಸರಣ; ಸಂಸ್ಕೃತಿ ಪ್ರಸರಣ.

cultural drift: ಸಾಂಸ್ಕೃತಿಕ ದಿಚ್ಯುತಿ.

cultural ecology: ಸಾಂಸ್ಕೃತಿಕ ಜೀವ-ಪರಿಸರ ಶಾಸ್ತ್ರ.

cultural entropy: ಸಾಂಸ್ಕೃತಿಕ ನಿಷ್ಕ್ರಿಯತೆ.

cultural environment: ಸಾಂಸ್ಕೃತಿಕ ಪರಿಸರ.

cultural epoch: ಸಾಂಸ್ಕೃತಿಕ ಯುಗ.

cultural ethos: ಸಾಂಸ್ಕೃತಿಕ ಶೀಲ; ಸಾಂಸ್ಕೃತಿಕ ಗುಣ ವಿಶೇಷ. ಯಾವುದೇ ಸಂಸ್ಕೃತಿ ಅಥವಾ ಉಪಸಂಸ್ಕೃತಿಯ ಪ್ರಮುಖ ವಿಚಾರಗಳು, ಮೌಲ್ಯಗಳು ಹಾಗೂ ಆದರ್ಶಗಳು.

cultural evolution: ಸಾಂಸ್ಕೃತಿಕ ವಿಕಾಸ. ಸರಳತೆಯಿಂದ ಸಂಕೀರ್ಣತೆಯೆಡೆಗೆ ಮತ್ತು ಏಕರೂಪತೆಯಿಂದ ಬಹುರೂಪತೆಯೆಡೆಗೆ ಸಂಸ್ಕೃತಿಯ ನಿರಂತರ ಬೆಳವಣಿಗೆ.

cultural expectancy: ಸಾಂಸ್ಕೃತಿಕ ನಿರೀಕ್ಷೆ.

cultural fatigue: ಸಾಂಸ್ಕೃತಿಕ ಬಳಲಿಕೆ.

cultural flexibility: ಸಾಂಸ್ಕೃತಿಕ ನಮ್ಯತೆ.

cultural focus: ಸಾಂಸ್ಕೃತಿಕ ಲಕ್ಷ್ಯ.

cultural gap: ಸಾಂಸ್ಕೃತಿಕ ಅಂತರ.

cultural heritage: ಸಾಂಸ್ಕೃತಿಕ ಪರಂಪರೆ; ಸಾಂಸ್ಕೃತಿಕ ಬಳುವಳಿ.

cultural hero: ಸಾಂಸ್ಕೃತಿಕ ವೀರ. ಗುಂಪಿನ ರಕ್ಷಕನೆಂದು ಭಾವಿಸಲಾಗುವ ಕಾಲ್ಪನಿಕ ಗಣ್ಯವ್ಯಕ್ತಿ ಅಥವಾ ದೇವರು. ಅವನು ಆ ಗುಂಪಿನ ರಕ್ಷಕ ಮಾತ್ರವಲ್ಲದೆ ಅವರ ಪ್ರಸಕ್ತ ಸ್ಥಿತಿ, ಬೆಳೆ ಇವೆಲ್ಲವುಗಳ ನಿಯಂತ್ರಕನಾಗಿರುತ್ತಾನೆ.

cultural heterogeneity: ಸಾಂಸ್ಕೃತಿಕ ಬಹುರೂಪತೆ.

cultural homogeneity: ಸಾಂಸ್ಕೃತಿಕ ಸಮರೂಪತೆ; ಸಾಂಸ್ಕೃತಿಕ ಏಕರೂಪತೆ.

cultural hybrid: ಸಾಂಸ್ಕೃತಿಕ ಮಿಶ್ರ ತಳಿ. ಉದಾಹರಣೆಗೆ ನೋಡಿ: marginal man.

cultural identity: ಸಾಂಸ್ಕೃತಿಕ ಅನನ್ಯತೆ; ಸಾಂಸ್ಕೃತಿಕ ಗುರುತಿಸುವಿಕೆ.

cultural imperatives: ಸಾಂಸ್ಕೃತಿಕ ಅನಿವಾರ್ಯಗಳು. ಯಾವುದೇ ಸಮಾಜದ ಉಳಿವಿಗೆ ಅಗತ್ಯವಾದ ಸಾಂಸ್ಕೃತಿಕ ಅಂಶಗಳು. ಉದಾ: ಅಶನ, ವಸನ, ಚಿಕ್ಕವರ ಪೋಷಣೆ, ಜ್ಞಾನವಹನ, ಆಂತರಿಕ ಕಲಹಗಳ ನಿವಾರಣೋಪಾಯಗಳು ಇತ್ಯಾದಿ.

cultural inertia: ಸಾಂಸ್ಕೃತಿಕ ಜಡತೆ. ಸಾಂಸ್ಕೃತಿಕ ಲಕ್ಷಣಗಳು, ವಿನ್ಯಾಸಗಳು ಹಾಗೂ ಸಂಕೀರ್ಣಗಳು ಅಪ್ರಸ್ತುತವಾದ ಬಳಿಕವೂ ಸಂಪ್ರದಾಯವೆಂಬ ನೆಲೆಯಲ್ಲಿ ಜಡವಾಗಿ ಮುಂದುವರಿಯುವಿಕೆ.

cultural integration: ಸಾಂಸ್ಕೃತಿಕ ಸಮಗ್ರತೆ; ಏಕತೆ. ಸಮರಸವಾದ ಸಾಂಸ್ಕೃತಿಕ ವ್ಯವಸ್ಥೆಯನ್ನು ರೂಪಿಸಲು ವಿಭಿನ್ನ ಅಥವಾ ಸಂಘರ್ಷಾತ್ಮಕ ಸಾಂಸ್ಕೃತಿಕ ಲಕ್ಷಣಗಳ ನಡುವೆ ಪರಸ್ಪರ ಹೊಂದಾಣಿಕೆ.

cultural island: ಸಾಂಸ್ಕೃತಿಕ ದ್ವೀಪ.

cultural lag: ಸಾಂಸ್ಕೃತಿಕ ಹಿಂಬೀಳಿಕೆ. ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಭೌತ ಅಂಶಗಳು ಅಂದರೆ ಬದುಕಿನ ಸವಲತ್ತುಗಳು ತುಂಬಾ ಮುಂದುವರಿದು, ಅಭೌತ ಅಂಶ ಅಂದರೆ ಸಾಮಾಜಿಕ ಮೌಲ್ಯಗಳು ಹಿಂದುಳಿಯುವುದರಿಂದ ಕಂಡುಬರುವ ಅಂತರ.

cultural land scape: ಸಾಂಸ್ಕೃತಿಕ ಭೂಪ್ರದೇಶ.

cultural learning: ಸಾಂಸ್ಕೃತಿಕ ಕಲಿಕೆ. ಒಂದು ಗುಂಪು ಅಥವಾ ಸಮೂಹದ ಸಂಸ್ಕೃತಿಯ ನಮೂನೆಯನ್ನು ನಿರ್ಧರಿಸುವ ಕಲಿಕೆ.

cultural materialism: ಸಾಂಸ್ಕೃತಿಕ ಭೌತವಾದ.

cultural milieu: ಸಾಂಸ್ಕೃತಿಕ ಪರಿಸರ.

cultural monism: ಸಾಂಸ್ಕೃತಿಕ ಏಕರೂಪತೆ (ಏಕತಾವಾದ). ಅಲ್ಪಸಂಖ್ಯಾತ ಸಾಂಸ್ಕೃತಿಕ ಕುಲಸಮೂಹವನ್ನು ಸಮಾಜದ ಪ್ರಮುಖ ಸಂಸ್ಕೃತಿಯು ತನ್ನೊಳಗೆ ಸ್ವಾಂಗೀಕರಿಸಿಕೊಳ್ಳುವ ಮೂಲಕ ಉಂಟಾಗುವ ಸಾಂಸ್ಕೃತಿಕ ಏಕರೂಪತೆಯಿಂದ ಆಂತರಿಕ ಘರ್ಷಣೆಯನ್ನು ತಡೆಗಟ್ಟಬಹುದೆಂಬ ವಾದ.

cultural nationalism: ಸಾಂಸ್ಕೃತಿಕ ರಾಷ್ಟ್ರೀಯತೆ.

cultural need: ಸಾಂಸ್ಕೃತಿಕ ಅಗತ್ಯತೆ.

cultural norm: ಸಾಂಸ್ಕೃತಿಕ ನಿಯಮ; ಸಾಂಸ್ಕೃತಿಕ ಪ್ರಮಾಣಕ.

cultural object: ಸಾಂಸ್ಕೃತಿಕ ವಸ್ತು.

cultural orthogenesis: ಸಾಂಸ್ಕೃತಿಕ ಸಮ್ಮತಜನನ.

cultural parallelism: ಸಾಂಸ್ಕೃತಿಕ ಸಮಾಂತರತೆ.

cultural pattern: ಸಾಂಸ್ಕೃತಿಕ ಮಾದರಿ; ಸಾಂಸ್ಕೃತಿಕ ವಿನ್ಯಾಸ.

cultural pluralism: ಸಾಂಸ್ಕೃತಿಕ ಅನೇಕತಾವಾದ. ಬಹುಸಂಸ್ಕೃತಿಗಳ ಸಹ ಅಸ್ತಿತ್ವ. ಒಂದು ಸಮಾಜದಲ್ಲಿ ಸಾಂಸ್ಕೃತಿಕ ಗುಂಪುಗಳು ತಮ್ಮ ಪ್ರತ್ಯೇಕತೆಯನ್ನು ಉಳಿಸಿಕೊಂಡು ವಾಸಿಸುವುದು.

cultural possibilities: ಸಾಂಸ್ಕೃತಿಕ ಸಾಧ್ಯತೆಗಳು.

cultural pre-requisites: ಸಾಂಸ್ಕೃತಿಕ ಪೂರ್ವಾವಶ್ಯಕತೆಗಳು.

cultural primitivism: ಸಾಂಸ್ಕೃತಿಕ ಆದಿಮತವಾದ; ಸಾಂಸ್ಕೃತಿಕ ಅನಾಗರಿಕ ತಾವಾದ.

cultural process: ಸಾಂಸ್ಕೃತಿಕ ಪ್ರಕ್ರಿಯೆ.

cultural rationalization: ಸಾಂಸ್ಕೃ ತಿಕ ಸಮರ್ಥನೆ; ಸಾಂಸ್ಕೃತಿಕ ಯುಕ್ತಿ ಪೂರ್ವಕ ವಿವರಣೆ. ಒಂದು ಸಂಸ್ಕೃತಿಯ ಅಥವಾ ಉಪಸಂಸ್ಕೃತಿಯ ನಿಯಮಗಳಲ್ಲಿನ ಅಸಂಗತತೆಯನ್ನು ಸಮರ್ಥಿಸುವ ವಿವರಣೆ.

cultural refuse: ಸಾಂಸ್ಕೃತಿಕ ಅವಶೇಷ. ಮಾನವನ ಸಾಂಸ್ಕೃತಿಕ ಚಟುವಟಿಕೆಗಳ ಅವಶೇಷ.

cultural relativism: ಸಾಂಸ್ಕೃತಿಕ ಸಾಪೇಕ್ಷವಾದ. ಸಾಮಾಜಿಕ ಪದ್ಧತಿಗಳು, ಮೌಲ್ಯಗಳು, ಆಚರಣೆಗಳು, ಸಾಮೂಹಿಕ ನಿರೀಕ್ಷೆಗಳು ಮುಂತಾದವು ಪರಸ್ಪರ ಸಂಬಂಧಿತವಾಗಿರುವುದರಿಂದ ಯಾವುದೇ ಒಂದು ಸಾಂಸ್ಕೃತಿಕ ಅಂಶವನ್ನು ಆಯಾ ಸಮಾಜದ ಸಾಮಾಜಿಕ ಹಾಗೂ ಮಾನಸಿಕ ಸಂಗತಿಗಳನ್ನು ಅರಿಯದೆ ಅರ್ಥೈಸಲು, ವಿವರಿಸಲು ಅಥವಾ ಮೌಲ್ಯಮಾಪನ ಮಾಡಲು ಸಾಧ್ಯವಿಲ್ಲ ಎಂಬ ಸಿದ್ಧಾಂತ. ಇದರ ಪ್ರಕಾರ ಯಾವುದೇ ಒಂದು ಸಮಾ ಜದ ಪದ್ಧತಿಗಳು ಇನ್ನೊಂದಕ್ಕಿಂತ ಮೇಲು ಅಥವಾ ಕೀಳೆನ್ನಲು ಸಾಧ್ಯವಿಲ್ಲ.

cultural renaissance: ಸಾಂಸ್ಕೃತಿಕ ಪುನರುಜ್ಜೀವನ.

cultural reproduction: ಸಾಂಸ್ಕೃತಿಕ ಪುನರುತ್ಪತ್ತಿ.

cultural residue: ಸಾಂಸ್ಕೃತಿಕ ಶೇಷ.

cultural revolution: ಸಾಂಸ್ಕೃತಿಕ ಕ್ರಾಂತಿ.

cultural specialities: ಸಾಂಸ್ಕೃತಿಕ ವಿಶೇಷತೆಗಳು.

cultural specific: ಸಾಂಸ್ಕೃತಿಕ ನಿರ್ದಿಷ್ಟ.

cultural stance: ಸಾಂಸ್ಕೃತಿಕ ನಿಲುವು.

cultural survival: ಸಾಂಸ್ಕೃತಿಕ ಉಳಿವು. ಸಾಂಸ್ಕೃತಿಕ ಗುಣಲಕ್ಷಣಗಳು ಯಾವುದೇ ಉಪಯುಕ್ತ ಕಾರ್ಯಗಳನ್ನು ನಿರ್ವಹಿಸದಿದ್ದಾಗ್ಯೂ, ಅವುಗಳನ್ನು ಸಾಂಪ್ರದಾಯಿಕವೆಂದು ಉಳಿಸಿಕೊಳ್ಳುವುದು.

cultural system: ಸಾಂಸ್ಕೃತಿಕ ವ್ಯವಸ್ಥೆ. ಸಾಂಸ್ಕೃತಿಕ ಲಕ್ಷಣಗಳು ಹಾಗೂ ವಿನ್ಯಾಸಗಳು ಒಂದು ಸುಸಂಬದ್ಧ ರೂಪದಲ್ಲಿ ಸಂಘಟಿತವಾದ ವ್ಯವಸ್ಥೆ.

cultural theme: ಸಾಂಸ್ಕೃತಿಕ ಸಾರ.

cultural trait: ಸಾಂಸ್ಕೃತಿಕ ಮೂಲಾಂಶ.

cultural transmission: ಸಾಂಸ್ಕೃತಿಕ ಸಂವಹನ. ಔಪಚಾರಿಕ ಅಥವಾ ಅನೌಪಚಾರಿಕ ಕಲಿಕೆಯ ಮೂಲಕ ಪೀಳಿಗೆಯಿಂದ ಪೀಳಿಗೆಗೆ ಸಂಸ್ಕೃತಿಯು ಸಾಗಿಸಲ್ಪಡುವ ಪ್ರಕ್ರಿಯೆ.

cultural transmutation: ಸಾಂಸ್ಕೃತಿಕ ಪರಿವರ್ತನೆ. ಪೀಳಿಗೆಯಿಂದ ಪೀಳಿಗೆಗೆ ಸಂಸ್ಕೃತಿಯು ವಹನವಾಗುವಾಗ ಸಂಭವಿಸುವ ಬದಲಾವಣೆಗಳು.

cultural universals: ಸಾಂಸ್ಕೃತಿಕ ಸಾರ್ವತ್ರಿಕಗಳು. ಒಂದು ಸಮಾಜದ ಎಲ್ಲಾ ವಯಸ್ಕ ಸದಸ್ಯರಲ್ಲೂ ಸಾಮಾನ್ಯವಾಗಿರುವ ವಿಚಾರಗಳು, ಹವ್ಯಾಸಗಳು ಹಾಗೂ ಭಾವನಾತ್ಮಕ ಪ್ರತಿಕ್ರಿಯೆಗಳು.

cultural value: ಸಾಂಸ್ಕೃತಿಕ ಮೌಲ್ಯ.

cultural variants: ಸಾಂಸ್ಕೃತಿಕ ಪರ್ಯಾಯಗಳು. ಒಂದು ನಿರ್ದಿಷ್ಟ ಸಂದರ್ಭದಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚಿನ ವರ್ತನಾ ವಿಧಗಳು ಯಾವುದೇ ಒಂದು ಸಮಾಜದಲ್ಲಿ ಒಪ್ಪಿಗೆಯಾಗಿರು ವುದು.

cultural variation: ಸಾಂಸ್ಕೃತಿಕ ಭಿನ್ನತೆ.

cultural zone: ಸಾಂಸ್ಕೃತಿಕ ವಲಯ.

culture: ಸಂಸ್ಕೃತಿ. ಸಮಾಜ ಜೀವಿಯಾಗಿ ಮಾನವನು ಸಂಗ್ರಹಿಸಿದ ಕಲೆ, ನೈತಿಕತೆ, ಮೌಲ್ಯಗಳು, ಬದುಕಿನ ಅನುಕೂಲಗಳು ಇತ್ಯಾದಿ ಜೀವನ ಸೌಲಭ್ಯಗಳ ಸಂಕೀರ್ಣ ಮೊತ್ತ.

culture accumulation: ಸಂಸ್ಕೃತಿ ಸಂಚಯ. ಹೊಸ ಸಾಂಸ್ಕೃತಿಕ ಅಂಶ ಗಳನ್ನು ಸೇರಿಸಿಕೊಳ್ಳುವುದರ ಮೂಲಕ ಜರಗುವ ಸಂಸ್ಕೃತಿಯ ವಿಸ್ತರಣೆ.

culture area: ಸಂಸ್ಕೃತಿ ಕ್ಷೇತ್ರ. ಒಂದು ಸಂಸ್ಕೃತಿಗೆ ಸಂಬಂಧಿಸಿದ ಪ್ರದೇಶ. ಆ ಪ್ರದೇಶದ ಕೇಂದ್ರ ಸ್ಥಳದಲ್ಲಿ ಪದ್ಧತಿಗಳು ಹೆಚ್ಚು ಏಕರೂಪದ್ದಾಗಿರುತ್ತವೆ ಮತ್ತು ಹೊರಭಾಗಕ್ಕೆ ಬಂದಂತೆ ಏಕರೂಪ ತೆಯನ್ನು ಕಳೆದುಕೊಳ್ಳುತ್ತವೆ. ಭೌತಿಕ ಸಂಸ್ಕೃತಿಗೆ ಈ ಕಲ್ಪನೆಯು ಹೆಚ್ಚು ಪ್ರಸ್ತುತ ವಾಗುತ್ತದೆ.

culture base: ಸಂಸ್ಕೃತಿ ಮೂಲ. ಒಂದು ನಿರ್ದಿಷ್ಟ ಸಮಯದಲ್ಲಿ ಸಮಾಜವೊಂದ ರಲ್ಲಿ ಅಸ್ತಿತ್ವದಲ್ಲಿರುವ ಒಟ್ಟು ಸಂಸ್ಕೃತಿ. ಸಾಮಾನ್ಯವಾಗಿ ಈ ಪದವನ್ನು ಭೌತ ಅಥವಾ ಅಭೌತ ಸಂಸ್ಕೃತಿಯ ಆವಿಷ್ಕಾರಗಳ ಕುರಿತ ಚರ್ಚೆಯಲ್ಲಿ ಉಪಯೋಗಿಸಲಾಗು ತ್ತದೆ.

culture bearer: ಸಂಸ್ಕೃತಿ ಧಾರಕ.

culture belief: ಸಂಸ್ಕೃತಿ ನಂಬಿಕೆ.

culture borrowing: ಸಂಸ್ಕೃತಿ ಎರವಲು.

culture bounded syndrome: ಸಂಸ್ಕೃತಿ ಬಂಧಿತ ಲಕ್ಷಣ.

culture center: ಸಂಸ್ಕೃತಿ ಕೇಂದ್ರ. ಒಂದು ಸಂಸ್ಕೃತಿಯ ಲಕ್ಷಣಗಳು ಹೆಚ್ಚು ಪ್ರಾತಿನಿಧಿಕವಾಗಿ ಕಂಡು ಬರುವ ಪ್ರದೇಶ.

culture circle: ಸಂಸ್ಕೃತಿ ವೃತ್ತ. ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಕಾಲಗಳಲ್ಲಿ ಬೆಳವಣಿಗೆ ಹೊಂದುವ ಸಾಂಸ್ಕೃತಿಕ ಸಂಕೀರ್ಣಗಳು ಪ್ರಪಂಚದ ಇತರ ಭಾಗಗಳಿಗೆ ಹರಡುವ ಪ್ರಕ್ರಿಯೆಯಲ್ಲಿ ಸಾಂಸ್ಕೃತಿಕ ಅಂಶಗಳ ಪ್ರಸರಣ ಪರಿಧಿಗಳನ್ನು ಗುರುತಿಸ ಬಹುದು. ಈ ಪ್ರಸರಣ ಪರಿಧಿಗಳೇ ಸಂಸ್ಕೃತಿ ವೃತ್ತಗಳು.

culture complex: ಸಂಕೀರ್ಣ ಸಂಸ್ಕೃತಿ. ವಿವಿಧ ರೀತಿಯಲ್ಲಿ ಮಿಳಿತಗೊಂಡಿರುವ ಅನೇಕ ಸಂಸ್ಕೃತಿಗಳ ಆಂಶಿಕ ಲಕ್ಷಣಗಳ ಸಂಕೀರ್ಣ.

culture conflict: ಸಂಸ್ಕೃತಿ ಸಂಘರ್ಷ.

culture element: ಸಂಸ್ಕೃತಿಯ ಅಂಶ. ಒಂದು ನಿರ್ದಿಷ್ಟ ಸಂದರ್ಭದಲ್ಲಿ ಬಳಸಲ್ಪಡುವ ಸಂಸ್ಕೃತಿಯ ಸರಳ ಹಾಗೂ ಮಹತ್ವಪೂರ್ಣ ವಸ್ತು.

culture epoch: ಸಂಸ್ಕೃತಿ ಯುಗ.

culture gradient: ಸಂಸ್ಕೃತಿಯ ಏರಿಳಿಕೆ. ಸಂಸ್ಕೃತಿ ಕೇಂದ್ರದಿಂದ ದೂರ ಸರಿ ದಂತೆ ಸಾಂಸ್ಕೃತಿಕ ಲಕ್ಷಣಗಳ ಪ್ರಾಮುಖ್ಯತೆ ಯಲ್ಲಿ ಆಗುವ ವ್ಯತ್ಯಾಸದ ಪ್ರಮಾಣ.

culture gulf: ಸಾಂಸ್ಕೃತಿಕ ಕಂದರ.

culture island: ಸಾಂಸ್ಕೃತಿಕ ದ್ವೀಪ. ಸುತ್ತು ಮುತ್ತಲಿನ ಪ್ರದೇಶಗಳಿಗಿಂತ ಭಿನ್ನ ಸಂಸ್ಕೃತಿ ಇರುವ ಸ್ಥಳೀಯ ಸಮುದಾಯ.

culture of poverty: ಬಡತನದ ಸಂಸ್ಕೃತಿ. ಬಡತನದಲ್ಲೇ ಬೆಳೆದ ಬಡವರಿಗೆ ಬಡತನಕ್ಕೆ ಹೊಂದಿಕೊಳ್ಳುವ ಪ್ರವೃತ್ತಿ ಇರುತ್ತದೆ. ಇದು ಮಕ್ಕಳಲ್ಲೂ ಬೆಳೆಯುತ್ತದೆ. ಇದರಿಂದಾಗಿ ಅವರು ಬಡತನವನ್ನು ತಪ್ಪಿಸಿಕೊಳ್ಳಲು ಬೇಕಾದ ಕೌಶಲ್ಯಗಳನ್ನು ಬೆಳೆಸಿಕೊಳ್ಳುವುದಿಲ್ಲ. ಅಲ್ಲದೆ ಅವರಲ್ಲಿ ಬದಲಾವಣೆಯ ಅಂತಃಪ್ರೇರಣೆ ಇರುವುದಿಲ್ಲ.

culture parallels: ಸಾಂಸ್ಕೃತಿಕ ಸಮಾಂತರಗಳು; ಸಾಂಸ್ಕೃತಿಕ ಸಾದೃಶ್ಯಗಳು. ವಿಭಿನ್ನ ಸಂಸ್ಕೃತಿಗಳಲ್ಲಿರುವ ಸಮಾನ ಸ್ವರೂಪದ ನಂಬಿಕೆ, ಆಚರಣೆ, ಆರಾಧನಾ ವಿಧಾನಗಳು ಇತ್ಯಾದಿ.

culture region: ನೋಡಿ: culture area.

culture shock: ಸಾಂಸ್ಕೃತಿಕ ಆಘಾತ. ಭಿನ್ನ ಸಂಸ್ಕೃತಿ ಇರುವ ಹೊಸ ಸಮಾಜದಲ್ಲಿ ವಾಸಿಸಲಾರಂಭಿಸುವಾಗ ವ್ಯಕ್ತಿಯು ಅನುಭವಿಸುವ ಮಾನಸಿಕ ಹಾಗೂ ಸಾಮಾಜಿಕ ಅಪಹೊಂದಾಣಿಕೆ.

culture sub-area: ಸಂಸ್ಕೃತಿಯ ಉಪ ಪ್ರದೇಶ. ಸಾಪೇಕ್ಷ ಪರಿಪೂರ್ಣತೆ ಮತ್ತು ಸಾಪೇಕ್ಷವಾಗಿ ನಿರ್ದಿಷ್ಟ ಲಕ್ಷಣಗಳಲ್ಲಿ ಪ್ರಗತಿ ಸಾಧಿಸಿದ ಒಂದು ಸಂಸ್ಕೃತಿ ಪ್ರದೇಶ.

culture trait: ಸಂಸ್ಕೃತಿ ಲಕ್ಷಣ. ಸಂಸ್ಕೃತಿಯ ವಿಶ್ಲೇಷಣೆ ಮಾಡಲು ಸಹಾಯಕವಾಗುವ ಸಂಸ್ಕೃತಿಯ ಅತಿ ಸರಳ ಮೂಲ ಘಟಕ.

culture trait complex: ಸಾಂಸ್ಕೃತಿಕ ಲಕ್ಷಣ ಸಂಕೀರ್ಣ. ಒಂದು ನಿರ್ದಿಷ್ಟ ವಿಶ್ಲೇಷಣೆಯಲ್ಲಿ ಉಪಯೋಗಿಸುವ ಸಂಸ್ಕೃತಿಯ ಸರಳವಾದ ಹಾಗೂ ಗುರುತಿಸಬಹುದಾದ ಪ್ರಾಮುಖ್ಯ ಘಟಕ.

culturology: ಸಂಸ್ಕೃತಿ ಶಾಸ್ತ್ರ. ವಿವಿಧ ಸಂಸ್ಕೃತಿಗಳನ್ನು ಅಭ್ಯಸಿಸುವ ಶಾಸ್ತ್ರ.

cumulative causation: ಸಂಚಿತ ಕಾರ್ಯಕಾರಣ.

cumulative evidence: ಸಂಚಯಿತ ಸಾಕ್ಷ್ಯ.

cumulative evolution: ಸಂಚಯಿತ ವಿಕಾಸ. ಸಮಾಜದ ಸಂಬಂಧಿತ ವ್ಯವಸ್ಥೆ ಅಥವಾ ಸ್ಥಿತಿಗಳ ಬೆಳವಣಿಗೆ.

cumulative frequency distribution: ಸಂಚಯೀ ಆವೃತ್ತಿ ವಿತರಣೆ.

cumulative frequency graph: ಸಂಚಯೀ ಆವೃತ್ತಿ ರೇಖಾಚಿತ್ರ.

cumulative group: ಒಟ್ಟುಗೂಡಿದ ಸಮೂಹ.

cumulative process of development: ಅಭಿವೃದ್ಧಿಯ ಸಂಚಯ ಪ್ರಕ್ರಿಯೆ.

cumulative scale: ಸಂಚಯೀ ಮಾಪಕ.

cumulative sinking fund: ಸಂಚಿತ ಋಣವಿಮೋಚಕ ನಿಧಿ.

cumulative story: ಸಂಚಿತ ಕತೆ. ಸಸ್ಯಗಳು ಹಾಗೂ ಪ್ರಾಣಿಗಳು ಮಾನವ ಗುಣ ಹೊಂದಿರುವ ಕತೆ.

cumulative tale: ಸಂಚಿತ ಕತೆ. ನೋಡಿ: cumulative story.

cuneiform: ಕ್ಯೂನಿಫಾರ್ಮ್;

ಪರ್ಷಿಯಾ, ಅಸಿರಿಯಾ ದೇಶಗಳ ಪ್ರಾಚೀನ ಲಿಪಿ; ಬೆಣೆ ಲಿಪಿ. ಸುಮೇರಿಯನ್ನರು ಮೂಲೆಯ ಆಕಾರದಲ್ಲಿ (wedge shaped) ಅಕ್ಷರ ಚಿಹ್ನೆಗಳನ್ನು ಬರೆಯುತ್ತಿದ್ದುದರಿಂದ ಈ ಲಿಪಿಗೆ ಕ್ಯೂನಿಫಾರ್ಮ್ ಎಂದು ಹೆಸರು ಬಂದಿದೆ. ಇವರು ಹಸಿಯಾದ ಮಣ್ಣಿನ ಇಟ್ಟಿಗೆಗಳ ಮೇಲೆ ಮೊನೆಯಾಕಾರದ ಅಲುಗಿನಿಂದ ಬರೆಯುತ್ತಿದ್ದರು.

cupola: ಕ್ಯೂಪೋಲ. ಕಟ್ಟಡದ ಅರ್ಧ ಗೋಲಾಕೃತಿಯ ಮೇಲ್ಛಾವಣಿ; ಗುಮ್ಮಟದ ಒಳಮಾಳಿಗೆ.

curiosity instinct: ಕುತೂಹಲ ಮೂಲಪ್ರವೃತ್ತಿ.

currency appreciation: ನೋಡಿ: appreciation of currency.

currency blocks: ಕರೆನ್ಸಿ ಕ್ಷೇತ್ರಗಳು.

currency system: ಕರೆನ್ಸಿಯ ಪದ್ಧತಿ.

current capital: ಪ್ರಸ್ತುತ ಬಂಡವಾಳ; ಚಾಲ್ತಿ ಬಂಡವಾಳ.

current expenditure: ಪ್ರಸ್ತುತ ವೆಚ್ಚ; ಚಾಲ್ತಿ ವೆಚ್ಚ.

current life table: ಪ್ರಚಲಿತ ಆಯುರ್ಕೋಷ್ಟಕ.

current planning: ಪ್ರಸ್ತುತ ಯೋಜನೆ; ಚಾಲ್ತಿ ಯೋಜನೆ.

current price: ಪ್ರಸ್ತುತ ಬೆಲೆ; ಚಾಲ್ತಿ ಬೆಲೆ.

current ratio: ಪ್ರಸ್ತುತ ನಿಷ್ಪತ್ತಿ; ಚಾಲ್ತಿ ನಿಷ್ಪತ್ತಿ.

curve graph: ವಕ್ರ ರೇಖಾಚಿತ್ರ.

curvilinear correlation: ವಕ್ರರೇಖಾತ್ಮಕ ಸಹಸಂಬಂಧ.

curvilinear relationship: ನೋಡಿ: curvilinear correlation.

curvilinear tower: ವಕ್ರರೇಖಾ ಶಿಖರ.

custodian of the national purse: ರಾಷ್ಟ್ರೀಯ ಖಜಾಂಜಿ; ರಾಷ್ಟ್ರದ ಖಜಾನೆಯ ರಕ್ಷಕ. ಹೆಚ್ಚಿನೆಲ್ಲಾ ರಾಜಕೀಯ ವ್ಯವಸ್ಥೆಗಳಲ್ಲಿ ಶಾಸಕಾಂಗದ ಕೆಳ ಮನೆಯು (ಉದಾ: ಭಾರತದಲ್ಲಿ ಲೋಕಸಭೆ, ಇಂಗ್ಲೆಂಡ್‌ನಲ್ಲಿ ಸಾಮಾನ್ಯರ ಸಭೆ) ರಾಷ್ಟ್ರದ ಹಣಕಾಸಿನ ಮೇಲೆ ಸಂಪೂರ್ಣ ಹತೋಟಿಯನ್ನು ಹೊಂದಿರುತ್ತದೆ. ಆದ್ದರಿಂದ ಕೆಳಮನೆಯನ್ನು ರಾಷ್ಟ್ರದ ಖಜಾನೆಯ ರಕ್ಷಕ ಎಂದು ಕರೆಯಲಾಗುತ್ತದೆ.

custody of funds: ನಿಧಿಗಳ ರಕ್ಷಣೆ.

custom: ಸಂಪ್ರದಾಯ; ಪದ್ಧತಿ; ರೂಢಿ. ಲೋಕರೂಢಿ ಅಥವಾ ಇನ್ನಾವುದೇ ಸಾಮಾಜಿಕ ವರ್ತನೆಯ ವಿಧವು ಹಲವು ಕಾಲದಿಂದ ಸಮಾಜದಲ್ಲಿ ಅಸ್ತಿತ್ವದಲ್ಲಿದ್ದು ಸಾಂಪ್ರದಾಯಿಕತೆಯನ್ನು ಹೊಂದಿದ್ದು ಔಪಚಾರಿಕ ಮನ್ನಣೆಯನ್ನು ಪಡೆದಿರುವಿಕೆ.

custom unit: ಪದ್ಧತಿಯ ಘಟಕ. ಸಾಮಾಜಿಕವಾಗಿ ಕಲಿತ ಅತಿಸೂಕ್ಷ್ಮ ನಡತೆ.

customary law: ಸಾಂಪ್ರದಾಯಿಕ ಕಾನೂನು.

customer: ಗ್ರಾಹಕ; ಗಿರಾಕಿ.

customs duty: ಆಮದು-ರಫ್ತು ಸುಂಕ.

customs invoice: ಸುಂಕದ ಪಾವತಿ ಪೂರ್ವ ದರಪಟ್ಟಿ.

cut motion: ಕಡಿತದ ನಿಲುವಳಿ. ಸರಕಾರದ ಕೆಲಸದ ಬಗ್ಗೆ ಅತೃಪ್ತಿ ವ್ಯಕ್ತಪಡಿಸಲು

ಶಾಸನ ಸಭೆಯು ತರಬಹುದಾದ ಸೂಚನೆ. ಮುಂಗಡ ಪತ್ರದ ಮಂಡನೆಯ ನಂತರ ಯಾವುದಾದರೂ ಕೆಲಸ ಸಮರ್ಪಕವಾಗಿಲ್ಲ ದಿದ್ದರೆ ಆ ಇಲಾಖೆಯ ಖರ್ಚನ್ನು ಕಡಿಮೆ ಮಾಡುವಂತೆ ಕೋರಿ ಸೂಚನೆಯನ್ನು ಸದ ಸ್ಯರು ತರಬಹುದು.

cut stimulus: ಕರ್ತವ್ಯೋದ್ದೀಪನ.

cycle of deprivation: ಕಳೆತದ ಚಕ್ರ. ಪೂರ್ಣ ಉದ್ಯೋಗ ಹಾಗೂ ಸಾಪೇಕ್ಷ ಉಚ್ಛ್ರಾಯ ಸ್ಥಿತಿ ಹಾಗೂ ಕಲ್ಯಾಣ ಸೇವೆಗಳ ಯೋಜನೆಗಳಿದ್ದಾಗ್ಯೂ, ಅಪ ಹೊಂದಾಣಿಕೆ ಹಾಗೂ ಕಳೆತದ (ಹಾನಿಯ) ಪ್ರಮಾಣವು ಏರುತ್ತಲೇ ಇರುವಿಕೆ.

cycle of political change: ರಾಜ ಕೀಯ ಪರಿವರ್ತನಾ ಚಕ್ರ.

cyclical change: ಚಕ್ರೀಯ ಬದಲಾ ವಣೆ.

cyclical concept of time: ಕಾಲದ ಚಕ್ರಾಕಾರದ ಕಲ್ಪನೆ.

cyclical disequilibrium: ಆವರ್ತ ಅಸಮತೋಲನ.

cyclical movement: ಚಕ್ರೀಯ ಚಲನೆ.

cyclical theory: ಚಕ್ರೀಯ ಸಿದ್ಧಾಂತ.

cyclical unemployment: ಆವರ್ತ ರೂಪದ ನಿರುದ್ಯೋಗ. ಆರ್ಥಿಕ ಹಿಂಜರಿ ತದ ಸಂದರ್ಭಗಳಲ್ಲಿ ಸಮಗ್ರ ಬೇಡಿಕೆಯ ಕೊರತೆಯಿಂದಾಗಿ ಸಂಭವಿಸುವ ತಾತ್ಕಾಲಿಕ ನಿರುದ್ಯೋಗ.

cycloid: ವ್ಯಕ್ತಿತ್ವದ ಒಂದು ನಮೂನೆ. ಇದರಲ್ಲಿ ಮನಃಸ್ಥಿತಿಯು ಖಿನ್ನತೆಯಿಂದ ಪರಮಾನಂದದವರೆಗೆ ಬದಲಾಗುತ್ತ ಇರುತ್ತದೆ. ಇವರು ಬಹಿರ್ಮುಖಿಗಳು, ಸಾಮಾಜಿಕ ಸನ್ನಿವೇಶಗಳನ್ನು ಇಷ್ಟಪಡು ವವರು ಮತ್ತು ವಾಸ್ತವಿಕರು.

cycloid component mania: ಅಭಿ ಚಕ್ರ ಘಟಕೋನ್ಮಾದ.

cyclothymic personality: ಭಾವ ಚಾಂಚಲ್ಯತೆಯ ವ್ಯಕ್ತಿತ್ವ; ಚಂಚಲ ವ್ಯಕ್ತಿತ್ವ. ಉನ್ಮಾದ ಮತ್ತು ವಿಷಾದ ಮನೋಭಾವ ಗಳಿಗೆ ಬದಲಾಯಿಸುತ್ತಿರುವ ಸ್ವಭಾವ.

cyclothymic temperament: ವಿಕ್ಷಿ ಪ್ತಾತ್ಮಕ ಚಿತ್ತ ಪ್ರಕೃತಿ.

cynicism: ಸಿನಿಕಭಾವ, ಮಾನವದ್ವೇಷ. ಎಲ್ಲರಲ್ಲೂ ತಪ್ಪು ಹುಡುಕುವ ಪ್ರವೃತ್ತಿ.

D

daimonology: ನೋಡಿ: demono logy

dancing mania: ನೃತ್ಯೋನ್ಮಾದ. ಜನರು ಗುಂಪಾಗಿ ಸ್ವಯಂ ನಿಯಂತ್ರಣವಿ ಲ್ಲದೆ ಕುಣಿಯುವ ಒಂದು ತೆರನ ಉನ್ಮಾದ ಮನೋವಿಕೃತಿ.

dark age: ಅಂಧಕಾರ ಯುಗ.

dark continent: ಕಗ್ಗತ್ತಲ ಖಂಡ. ಆಫ್ರಿಕಾ ಖಂಡವನ್ನು ಹೀಗೆ ಕರೆಯಲಾಗಿದೆ.

Darwinian theory of evolution: ಡಾರ್ವಿನ್‌ನ ವಿಕಾಸ ವಾದ. ಸರಳವಾದ ಏಕಕೋಶ ಜೀವಿಯಿಂದ ತೊಡಗಿ ಜೀವ ವಿಕಾಸವಾಗುತ್ತಾ ಮೃದ್ವಂಗಿಗಳು, ಸರೀಸೃ ಪಗಳು, ಸಸ್ತನಿಗಳು ಹೀಗೆ ಸಂಕೀರ್ಣವಾದ ಮಾನವನವರೆಗೆ ನಡೆದಿರುವ ಹಂತಹಂತದ ಬೆಳವಣಿಗೆಯನ್ನು ವಿವರಿಸಿದ ಡಾರ್ವಿನ್‌ನ ಸಿದ್ಧಾಂತ.

dasa: ದಾಸ; ಗುಲಾಮು; ಸೇವಕ; ಊಳಿಗ ದಾಳು. ಪ್ರಾಚೀನ ಸಮಾಜದ ಒಂದು ವರ್ಗ.

dastaks: ಸುಂಕ ರಹಿತ ಪರವಾನಿಗೆ

data: ಮಾಹಿತಿ; ದತ್ತಾಂಶಗಳು. ಅವಲೋಕನದಿಂದ ಅಥವಾ ಅಳತೆಯಿಂದ ಸಂಗ್ರಹಿಸಿದ ವಿಷಯಗಳಿಂದ ಸಾಮಾನ್ಯೀಕರಣಕ್ಕಾಗಿ ಉಪಯೋಗಿಸುವ ಮಾಹಿತಿ.

data analysis: ಮಾಹಿತಿ ವಿಶ್ಲೇಷಣೆ.

data collection: ಮಾಹಿತಿ ಸಂಗ್ರಹಣೆ; ದತ್ತಾಂಶ ಸಂಗ್ರಹಣೆ.

dated security: ದಿನಾಂಕಿತ ಭದ್ರತಾ ಪತ್ರ. ಸಾಲಪತ್ರ ಅಥವಾ ವಿನಿಮಯ ಹುಂಡಿಗಳು ತಮ್ಮ ಅಂಕಿತ ಮೌಲ್ಯದ ಮರುಪಾವತಿಯ ದಿನಾಂಕವನ್ನು ಸೂಚಿಸಿದ್ದರೆ ಅದನ್ನು ದಿನಾಂಕಿತ ಸಾಲಪತ್ರವೆನ್ನಲಾಗುತ್ತದೆ.

dating: ಪ್ರಣಯ ವಿಹಾರ.

dawn man: ಮೂಲ ಮಾನವ; ಆದಿ ಮಾನವ.

day dream: ಹಗಲುಗನಸು; ದಿವಾಸ್ವಪ್ನ; ಭಾವಲಹರಿ.

de-anthropomorphism: ಕೆಳ ಮನುಷ್ಯತ್ವಾರೋಪಣೆ. ಸಹಜ ಮಾನವೀಯ ಗುಣಗಳಿಗೆ ಅವಾಸ್ತವಿಕ ಆದರ್ಶ ರೂಪಣ ನೀಡುವಿಕೆಯನ್ನು ವಿರೋಧಿಸಿ ಮನುಷ್ಯ ಸಹಜವಾದ ಸರಿ-ತಪ್ಪುಗಳ ನೆಲೆಯಲ್ಲಿ ಕಾಣಬೇಕೆಂಬ ತತ್ವ.

dead account: ನಿಷ್ಕ್ರಿಯ ಖಾತೆ. ದೀರ್ಘಕಾಲದವರೆಗೆ ಯಾವುದೇ ವಹಿವಾಟುಗಳಿಲ್ಲದಿರುವ ಖಾತೆ.

dead stock: ಜಡಸರಕು; ಉಪಯೋಗಕ್ಕೆ ಬಾರದ ಸರಕು.

dead weight debt: ಜಡ ತೂಕ ಸಾಲ. ಪ್ರಚಲಿತ ಖರ್ಚುಗಳಿಗಾಗಿ ಅಥವಾ ಇತರ ಯಾವುದೇ ಖರ್ಚುಗಳಿಗಾಗಿ ಮಾಡಿದ, ಯಾವ ರೀತಿಯ ಆಸ್ತಿಯನ್ನೂ ಒಳಗೊಂಡಿರದ ಸಾಲ.

dead weight loss: ಜಡ ತೂಕ ನಷ್ಟ. ಯಾವುದೇ ಲಾಭಗಳಿಲ್ಲದ ನೀತಿ ಅಥವಾ ಕ್ರಿಯೆಯಿಂದ ಸಮಾಜಕ್ಕೆ ಆಗುವ ನಷ್ಟ.

dealer's licence: ವ್ಯಾಪಾರಿಯ ಪರವಾನಿಗೆ. ವಿನಿಮಯ ವ್ಯವಹಾರ ನಡೆಸಲು ವ್ಯಾಪಾರಿಗಳಿಗೆ ಭಾರತೀಯ ರಿಸರ್ವ್ ಬ್ಯಾಂಕ್ ನೀಡುವ ಪರವಾನಿಗೆ.

dear money policy: ತುಟ್ಟಿ ಹಣದ ನೀತಿ. ಹಣದ ಪೂರೈಕೆಯನ್ನು ನಿಯಂತ್ರಿಸುವುದಕ್ಕೋಸ್ಕರ ಬಡ್ಡಿದರವನ್ನು ಹೆಚ್ಚಿಸುವುದು.

death dance: ಮರಣ ನೃತ್ಯ. ಶವ ಸಂಸ್ಕಾರದ ಕಾಲದಲ್ಲಿ ಮಾಡುವ ನೃತ್ಯ.

death duty: ಮರಣೋತ್ತರ ತೆರಿಗೆ; ವಾರಸು ತೆರಿಗೆ. ಸತ್ತವನ ಆಸ್ತಿ ವಾರಸುದಾರನಿಗೆ ಹೋಗುವುದಕ್ಕೆ ಮೊದಲು ವಸೂಲು ಮಾಡುವ ತೆರಿಗೆ.

death phobia: ಮರಣ ಭೀತಿ.

death rate: ಮರಣ ದರ.

debenture: ಠೇವಣಿ ಪತ್ರ. (ಡಿಬೆಂ ಚರ್).

debt: ಸಾಲ; ಋಣ.

debt burden: ಸಾಲದ ಹೊರೆ.

debt conversion: ಸಾಲ ಪರಿವರ್ತನೆ; ಋಣ ಪರಿವರ್ತನೆ.

debt redemption: ಸಾಲ ಮರು ಪಾವತಿ; ಸಾಲ ವಿಮೋಚನೆ.

debt relief: ಋಣ ಪರಿಹಾರ.

debt repudiation: ಸಾಲ ನಿರಾಕರಣೆ; ಋಣ ನಿರಾಕರಣೆ.

debtor: ಸಾಲಗಾರ.

decay of memory: ಸ್ಮೃತಿ ಕ್ಷೀಣತೆ.

decennial settlement: ದಶವಾರ್ಷಿಕ ಇತ್ಯರ್ಥ. ದಶವಾರ್ಷಿಕ ಭೂಕಂದಾಯ (ನಿರ್ಧಾರ ಕ್ರಮ). ಇದನ್ನು ೧೭೮೯ರಲ್ಲಿ ಗವರ್ನರ್ ಜನರಲ್ ಕಾರ್ನ್‌ವಾಲಿಸ್ ಜಾರಿಗೆ ತಂದನು.

decentralization: ವಿಕೇಂದ್ರೀಕರಣ. ರಾಜಕೀಯ ಕ್ಷೇತ್ರ ಅಥವಾ ಆಡಳಿತ ಕ್ಷೇತ್ರದಲ್ಲಿ ಅಧಿಕಾರವು ಒಂದೇ ಅಂಗದಲ್ಲಿ ಅಥವಾ ಒಬ್ಬ ವ್ಯಕ್ತಿಯಲ್ಲಿ ಕೇಂದ್ರೀಕೃತವಾಗಿರದೆ ನಾನಾ ಅಂಗಗಳಲ್ಲಿ ಹಂಚಿಹೋಗಿರುವುದು.

decentralization of finance: ಹಣಕಾಸಿನ ವಿಕೇಂದ್ರೀಕರಣ.

decentralized production: ವಿಕೇಂದ್ರೀಕೃತ ಉತ್ಪಾದನೆ.

decipherment: ಶಾಸನ ಪಾಠ ಓದುವುದು (ಅರ್ಥೈಸುವುದು).

decisiveness: ಖಚಿತತೆ; ನಿರ್ಧಾರಕತೆ.

declaration of human rights: ಮಾನವ ಹಕ್ಕುಗಳ ಘೋಷಣೆ. ರಾಷ್ಟ್ರದ ಸಂವಿಧಾನವು ಪ್ರಜೆಗಳ ಹಕ್ಕುಗಳಿಗೆ ಮನ್ನಣೆ ನೀಡಿ ಅವುಗಳ ಘೋಷಣೆಯನ್ನು ಮಾಡುವುದು. ಉದಾ: ವಿಶ್ವಸಂಸ್ಥೆಯು ಮಾನವ ಹಕ್ಕುಗಳಿಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ನೀಡುವ ದೃಷ್ಟಿಯಿಂದ ಮಾನವ ಹಕ್ಕುಗಳ ಘೋಷಣೆಯನ್ನು ಡಿಸೆಂಬರ್ ೧೯೪೮ರಲ್ಲಿ ಅಂಗೀಕರಿಸಿತು.

declaration of independence: ಸ್ವಾತಂತ್ರ್ಯದ ಘೋಷಣೆ.

decolonization: ವಸಾಹತು ವಿಮೋಚನೆ.

deconcentration: ವಿಕೇಂದ್ರೀಕರಣ. ನಗರಗಳಲ್ಲಿ ಕೇಂದ್ರದಿಂದ ದೂರ ಪ್ರದೇಶಗಳಲ್ಲಿ ಜನವಸತಿ ಅಧಿಕಗೊಳ್ಳುವ ಒಂದು ಪ್ರಕ್ರಿಯೆ.

deconstruction theory: ವಿರಚನ ಸಿದ್ಧಾಂತ.

deconstructionist: ವಿರಚನವಾದಿ.

decreasing average cost: ಇಳಿಮುಖ ಸರಾಸರಿ ವೆಚ್ಚ.

decreasing cost condition: ಇಳಿಮುಖ ವೆಚ್ಚದ ಪರಿಸ್ಥಿತಿ.

decree of infallibility: ಅಂತಿಮ ಪರಮಾಧಿಕಾರ ಶಾಸನ (ಘೋಷಣೆ).

decrees: ನ್ಯಾಯಾಜ್ಞೆಗಳು.

deduced consequence: ನಿಗಮನ ಪರಿಣಾಮ.

deduction: ನಿಗಮನ; ಕಾರಣಪೂರ್ವಕ ಊಹನೆ.

deductive ability: ನೈಗಮನಿಕ ಸಾಮರ್ಥ್ಯ; ನಿಗಮನ ಸಾಮರ್ಥ್ಯ.

deductive approach: ನಿಗಮನ ವಿಧಾನ; ನಿಗಮನ ಸಮೀಪನ.

deductive inference: ನಿಗಮನದ ಊಹೆ.

deductive method: ನಿಗಮನ ವಿಧಾನ. ನಿಗಮನ ವಿಧಾನವವನ್ನು ವಿಶ್ಲೇಷಣಾತ್ಮಕ ವಿಧಾನ (analytical method), ಆದ್ಯ

ವಿಧಾನ (priori method), ಅಮೂರ್ತ ವಿಧಾನ (abstract method)ಗಳೆಂದೂ ಕರೆಯುವರು. ಇದು ಮಾನವನ ವರ್ತನೆಯ ಬಗೆಗೆ ಕೆಲವು ಊಹೆಗಳನ್ನು ಅಂಗೀಕರಿಸಿ ಅವುಗಳ ಆಧಾರದಿಂದ ಆರ್ಥಿಕ ನಿಯಮ ಗಳನ್ನು ರೂಪಿಸುವುದು.

deductive science: ನಿಗಮನ ವಿಜ್ಞಾನ.

deed of hypothecation: ಅಡಮಾನ ಕರಾರು ಪತ್ರ.

deep structure: ಆಳರಚನೆ.

de-facto census: ಯಥಾಸ್ಥಳ ಜನ ಗಣತಿ. ಜನಸಂಖ್ಯೆಯನ್ನು ಗಣನೆ ಮಾಡುವ ಹೊತ್ತಿನಲ್ಲಿ ಜನರು ಎಲ್ಲಿರುತ್ತಾರೋ ಅಲ್ಲೇ ಇದ್ದಾರೆಂಬುದಾಗಿ ಗಣನೆ ಮಾಡುವುದು.

de-facto government: ವಾಸ್ತವಿಕ ಅಧಿ ಕಾರಸ್ಥ ಸರಕಾರ. ಇತರ ದೇಶಗಳ ಮಾನ್ಯತೆ ಪಡೆಯದೆ ಅಥವಾ ಶಾಸನೀಯ ಅಧಿಕಾರ ವನ್ನು ಪಡೆಯದೆ ಕ್ರಾಂತಿಯ ಮೂಲಕ ಅಸ್ತಿತ್ವಕ್ಕೆ ಬಂದು ವಾಸ್ತವವಾಗಿ ದೇಶವನ್ನು ಆಳುತ್ತಿರುವ ಸರಕಾರ. ನೋಡಿ: de-jure government.

de facto sovereignty: ವಾಸ್ತವ ಪರ ಮಾಧಿಕಾರ. ಕಾನೂನಿನ ಆಧಾರವಿಲ್ಲದೆ ಕೇವಲ ಶಕ್ತಿಯ ಆಧಾರದ ಮೇಲೆ ಇರುವ ಪರಮಾಧಿಕಾರ. ನೋಡಿ: de jure sovereignty.

defamation: ಮಾನನಷ್ಟ; ಮಾನಹಾನಿ. ವ್ಯಕ್ತಿಯ ಚಾರಿತ್ರ್ಯ ಅಥವಾ ಗೌರವಕ್ಕೆ ಧಕ್ಕೆ ಉಂಟು ಮಾಡುವ ಉದ್ದೇಶದಿಂದ ಸುಳ್ಳು ಪ್ರಚಾರ ಇಲ್ಲವೇ ಸುಳ್ಳು ಹೇಳಿಕೆ ನೀಡು ವುದು.

defamation case: ಮಾನನಷ್ಟ ಮೊಕ ದ್ದಮೆ; ಮಾನಹಾನಿ ಮೊಕದ್ದಮೆ.

defaulter: ತಪ್ಪಿತಸ್ಥ; ಜವಾಬ್ದಾರಿಯ ನಿರ್ವಹಣೆಯಲ್ಲಿ ಹಿಂದುಳಿದವ.

defection: ಪಕ್ಷಾಂತರ. ಒಂದು ಪಕ್ಷದ ಸದಸ್ಯನು ತನ್ನ ಪಕ್ಷವನ್ನು ತೊರೆದು ಮತ್ತೊಂದು ಪಕ್ಷವನ್ನು ಸೇರುವುದು ಅಥವಾ ಮತ್ತೊಂದು ಪಕ್ಷಕ್ಕೆ ತನ್ನ ನಿಷ್ಠೆಯನ್ನು ಬದಲಾಯಿಸುವುದು.

defective delinquent: ಬುದ್ಧಿ ಮಾಂದ್ಯತೆಯುಳ್ಳ ಅಪಚಾರಿ.

defence argument: ರಕ್ಷಣಾ ವಾದ.

defence economy: ರಕ್ಷಣಾ ಅರ್ಥ ವ್ಯವಸ್ಥೆ.

defence expenditure: ರಕ್ಷಣಾ ವೆಚ್ಚ (ಖರ್ಚು).

defence mechanism: ನೋಡಿ: defensive mechanism.

defence reaction: ರಕ್ಷಣಾ ಪ್ರತಿಕ್ರಿಯೆ.

defendant: ಪ್ರತಿವಾದಿ.

defensive mechanism: ರಕ್ಷಣಾ ತಂತ್ರ. ಮಾನಸಿಕ ತುಮುಲಗಳಿಂದ ಮನಸ್ಸಿನ ಸಮತೋಲನ ತಪ್ಪದಿರುವಂತೆ ತಡೆಯಲು ಮನಸ್ಸು ಬಳಸುವ ತಂತ್ರ.

defensiveness: ಸ್ವರಕ್ಷಣಾ ಸ್ವಭಾವ.

deference behaviour: ಮರ್ಯಾ ದೆಯುತ ನಡತೆ. ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಗೆ ತೋರಿಸುವ ಗೌರವ ಯುತ ನಡತೆ.

deferred consummation: ವಿಳಂಬಿತ ನಿಷೇಕಪ್ರಸ್ತ. ಧಾರ್ಮಿಕ ಕಾರಣಕ್ಕಾಗಿ ವೈವಾಹಿಕ ನಿಷೇಕಪ್ರಸ್ತದ ಮುಂದೂಡಿಕೆ.

deferred gratification pattern: ಸಂತೃಪ್ತಿಯ ಮುಂದೂಡಿಕೆ. ಉತ್ತಮ ಭವಿಷ್ಯಕ್ಕಾಗಿ ತಕ್ಷಣದ ಸಂತೃಪ್ತತೆಯನ್ನು ಮುಂದಕ್ಕೆ ಹಾಕುವ ಕ್ರಮ.

deferred payment: ಮುಂತಳ್ಳಿದ ಪಾವತಿ. ಪ್ರಸ್ತುತ ಕರಾರಿನ ಪ್ರಕಾರ ಭವಿಷ್ಯ ದಲ್ಲಿ ಕಂತಿನ ರೂಪದಲ್ಲಿ ಮಾಡಲಾಗುವ ಪಾವತಿ.

deferred rebate system: ವಿಳಂಬಿತ ಸೋಡಿ ಪದ್ಧತಿ.

deficiency of demand: ಬೇಡಿಕೆಯ ಕೊರತೆ.

deficiency of imagination: ಕಲ್ಪನೆಯ ನ್ಯೂನತೆ; ಕಲ್ಪನಾ ಹೀನತೆ.

deficit budget: ಖೋತಾ ಬಜೆಟ್; ಕೊರತೆ ಆಯವ್ಯಯ ಪಟ್ಟಿ; ಕೊರತೆ ಮುಂಗಡ ಪತ್ರ.

deficit financing: ಕೊರತೆ ಹಣಕಾಸು; ಕೊರತೆ ಧನವಿನಿಯೋಗ. ಕೊರತೆ ಆಯ ವ್ಯಯ ಪಟ್ಟಿಯ ಕೊರತೆಯನ್ನು ತುಂಬಲು ಸರಕಾರವು ಬಳಸುವ ವಿಧಾನಕ್ಕೆ ಕೊರತೆ ಧನ ವಿನಿಯೋಗ (ಹಣಕಾಸು) ಎನ್ನಲಾಗುತ್ತದೆ.

defilement: ಅಶುದ್ಧಿ; ಮೈಲಿಗೆ. ಜನನ, ಮರಣ, ದೈವದ್ರೋಹ (ದೇವಾಲಯದ ದರೋಡೆ ಅಥವಾ ಅಶುದ್ಧಿ ಮಾಡುವುದು) ಮೊದಲಾದ ಕಾರಣಗಳಿಂದಾದ ಅಶುದ್ಧ ಸ್ಥಿತಿ.

definite strata: ನಿರ್ದಿಷ್ಟ ಸ್ತರ.

definition of the situation: ಸಂದರ್ಭದ ಅರ್ಥ ವಿವರಣೆ. ಸಾಂದರ್ಭಿಕ ನಿರ್ದೇಶ; ಸಂದರ್ಭದ ವ್ಯಾಖ್ಯೆ. ನಿರ್ದಿಷ್ಟ ಸಾಮಾಜಿಕ ಅಂತರಕ್ರಿಯಾ ಸಂದರ್ಭಗಳಲ್ಲಿ ಹಿರಿಯರಿಂದ ದೊರಕುವ ನಿರ್ದೇಶನಗಳು ಮಗುವಿಗೆ ತನ್ನ ವರ್ತನೆಯನ್ನು ರೂಪಿಸಿ ಕೊಳ್ಳುವ ವ್ಯಾಖ್ಯೆಗಳಾಗುತ್ತವೆಂಬ ಸಿದ್ಧಾಂತ.

deflation: ಅನಪ್ರಸರಣ. ಸರಕಿನ ಉತ್ಪಾದನೆಯ ಖರ್ಚು ಇಳಿಯದೆ, ಸರಕುಗಳ ಬೆಲೆಯಲ್ಲಿ ಇಳಿಕೆಯುಂಟಾಗುವ ಪರಿಸ್ಥಿತಿ.

deflationary gap: ಅನಪ್ರಸರಣದ ಅಂತರ. ಅತಿಪ್ರಸರಣದ ಒತ್ತಡವಿಲ್ಲದ ಮತ್ತು ಉಪಯೋಗಿಸಿರದ ಸಂಪನ್ಮೂಲ ಗಳಿರುವ ಅರ್ಥ ವ್ಯವಸ್ಥೆಯ ಸ್ಥಿತಿ.

deflationary policy: ಅನಪ್ರಸರಣ (ಕುಗ್ಗುಪ್ರಸರಣ) ನೀತಿ.

deformation: ರೂಪವಿಕೃತಿ; ವಿಕಾರತೆ; ವಿರೂಪತೆ. ಶರೀರದ ಅಂಗವನ್ನು ರೂಪುಗೆಡಿಸುವುದು. ಆದಿವಾಸಿ ಜನಾಂಗಗಳಲ್ಲಿ ಸೊಂಟ, ತುಟಿ, ಕಿವಿ, ಮೂಗು, ತಲೆ ಮತ್ತು ಕಾಲುಗಳನ್ನು ಸಾಮಾನ್ಯವಾಗಿ ವಿಕೃತಿ ಮಾಡುವ ಕ್ರಮ.

degeneration: ನಶಿಸುವಿಕೆ; ಅವನತಿ. ಜೀವಿಗಳ ಬೆಳವಣಿಗೆಯಲ್ಲಿ ನಿರಂತರವಾಗಿ ಅನುವಂಶಿಕ ಲಕ್ಷಣಗಳ ಕ್ಷೀಣಗೊಳ್ಳುವಿಕೆ.

degeneration of values: ಮೌಲ್ಯಗಳ ಅವನತಿ.

degradation: ಕೆಳಮಟ್ಟಕ್ಕೆ ಇಳಿಸುವಿಕೆ.

degree of price discrimination: ಬೆಲೆ ತಾರತಮ್ಯದ ಪ್ರಭಾವ.

degree of prohibited relationship: ನಿಷೇಧಿತ ಸಂಬಂಧದ ಶ್ರೇಣಿ ಅಥವಾ ಹಂತ.

degressive tax: ಇಳಿಕೆಯ ತೆರಿಗೆ.

dehumanisation: ಅಮಾನವೀಕರಣ; ಮನುಷ್ಯತ್ವಗೆಡಿಸುವ ಪ್ರಕ್ರಿಯೆ.

deicide: ದೇವಘಾತಕ. ವಾಚ್ಯಾರ್ಥದಲ್ಲಿ ದೇವರನ್ನು ಕೊಲ್ಲುವುದು. ಸಾಮಾನ್ಯವಾಗಿ ಕುಲ ಲಾಂಛನದ ಪ್ರಾಣಿಯ ಅಥವಾ ಪ್ರಾಚೀನ ಧರ್ಮದ ಪುರೋಹಿತ-ರಾಜರ ಕೊಲೆ.

deification: ದೈವೀಕರಣ. ವಸ್ತು, ವಿಚಾರ, ವ್ಯಕ್ತಿಗಳನ್ನು ದೈವೀಕರಿಸುವ ಪ್ರಕ್ರಿಯೆ.

de-industrialisation : ಅಪ ಕೈಗಾರಿಕೀಕರಣ; ಕೈಗಾರಿಕೀಕರಣದಿಂದ ವಿಮುಖತೆ.

dejected state: ಖಿನ್ನ ಮನಸ್ಥಿತಿ; ವಿಷಣ್ಣಾವಸ್ಥೆ.

de jure census: ಸ್ಥಿರ ನಿವಾಸ ಜನಗಣತಿ. ಜನರು ಸಾಮಾನ್ಯವಾಗಿ ಯಾವ ಪ್ರದೇಶದಲ್ಲಿ ವಾಸಿಸುತ್ತಾರೋ ಅದನ್ನೇ ಗಣನೆಗೆ ತೆಗೆದುಕೊಂಡು ಜನಸಂಖ್ಯೆಯನ್ನು ಲೆಕ್ಕಹಾಕುವುದು.

de-jure government: ವಿಧಿಬದ್ಧ ಸರಕಾರ. ಕ್ರಮಬದ್ಧ ನೀತಿ ನಿಯಮಗಳಿಗೆ ಅನುಸಾರವಾಗಿ ಅಧಿಕಾರಕ್ಕೆ ಬಂದು ಶಾಸನಗಳನ್ನು ರೂಪಿಸುವ ಮತ್ತು ಪ್ರಜೆಗಳಿಂದ ಸ್ವಾಭಾವಿಕ ವಿಧೇಯತೆಯನ್ನು ಪಡೆಯುವ ಹಾಗೂ ಇತರ ದೇಶಗಳಿಂದ ಪೂರ್ಣ ಮಾನ್ಯತೆ ಪಡೆದ ಸರಕಾರ.

de-jure sovereignty: ವಿಧಿಬದ್ಧ ಪರಮಾಧಿಕಾರ. ಕಾನೂನಿನ ಬೆಂಬಲದೊಂದಿಗೆ ಅಸ್ತಿತ್ವಕ್ಕೆ ಬರುವ ಪರಮಾಧಿಕಾರ.

delayed reaction: ವಿಳಂಬಿತ ಪ್ರತಿಕ್ರಿಯೆ.

delayed recall: ವಿಳಂಬಿತ ಪುನಃಸ್ಮರಣೆ.

delayed response: ನಿಧಾನ ಪ್ರತಿಕ್ರಿಯೆ. ಮಾನವ ಶಾಸ್ತ್ರಜ್ಞರು ಚಿಂಪಾಂಜಿಯ ಜ್ಞಾಪಕ ಶಕ್ತಿಯನ್ನು ನಿಧಾನ ಪ್ರತಿಕ್ರಿಯೆ ಎಂದು ಕರೆದಿದ್ದಾರೆ.

delaying power: ವಿಳಂಬನಾಧಿಕಾರ. ಸಂಸದೀಯ ಸರಕಾರ ಪದ್ಧತಿಯನ್ನು ಹೊಂದಿದ ಭಾರತ ಮತ್ತು ಇಂಗ್ಲೆಂಡ್‌ನ ಸಂಸತ್ತಿನ ಕೆಳಮನೆಯಿಂದ ಮನ್ನಣೆ ಪಡೆದ ಮಸೂದೆಯು ಮೇಲ್ಮನೆಗೆ ಬಂದಾಗ ಅದನ್ನು ಕೆಲ ಸಮಯದವರೆಗೆ ಹಿಡಿದಿಟ್ಟುಕೊಳ್ಳುವ ಮೇಲ್ಮನೆಯ ಅಧಿಕಾರ.

delegated administrative power: ನಿಯೋಜಿತ ಆಡಳಿತಾಧಿಕಾರ. ಸರಕಾರದ ಶಾಸಕಾಂಗವು ತನ್ನ ಕಾರ್ಯಭಾರದ ಒತ್ತಡದಿಂದಾಗಿ ಶಾಸನೀಕರಣದ ಅಧಿಕಾರವನ್ನು ಆಡಳಿತಾಧಿಕಾರಿಗಳಿಗೆ ನಿಯೋಜಿಸುವುದು. ಆಡಳಿತಾಧಿಕಾರ ವರ್ಗದವರು ನಿಯಮಗಳನ್ನು ಮಾಡುವುದರ ಮೂಲಕ ಈ ಅಧಿಕಾರ ಚಲಾಯಿಸುತ್ತಾರೆ.

delegated authority: ನಿಯುಕ್ತಾಧಿಕಾರ; ನಿಯೋಜಿತಾಧಿಕಾರ. ಕಾರ್ಯಾಂಗದ ಶ್ರೇಷ್ಠಾಧಿಕಾರಿಯು ನಿರ್ದಿಷ್ಟ ಅಧಿಕಾರವನ್ನು ಕೆಳಗಿನ ಅಧಿಕಾರಿಗಳಿಗೆ ನೀಡುವುದು.

delegated function: ಪ್ರತಿನಿಯೋಜಿತ ಕಾರ್ಯ.

delegated legislation: ಪ್ರತಿನಿಯೋಜಿತ ಶಾಸನ. ಶಾಸಕಾಂಗವು ತನ್ನ ಕಾರ್ಯಭಾರದ ಒತ್ತಡದಿಂದಾಗಿ ಶಾಸನಗಳನ್ನು ರೂಪಿಸುವಾಗ ವಿಳಂಬವಾಗಬಾರದೆಂದು ಕೆಲವೊಂದು ಶಾಸನಾಧಿಕಾರಗಳನ್ನು ಕಾರ್ಯಾಂಗಕ್ಕೆ ಬಿಟ್ಟುಕೊಡುವುದು.

delegation: ನಿಯೋಗ; ಪ್ರತಿನಿಯೋಜನೆ. ಅಧಿಕಾರಸ್ಥ ಪ್ರತಿನಿಧಿಗಳು.

delegation of authority: ಅಧಿಕಾರದ ಪ್ರತಿನಿಯೋಜನೆ. ಆಡಳಿತ ವ್ಯವಸ್ಥೆಯಲ್ಲಿ ಅಧಿಕಾರಿಯು ಕಾರ್ಯಾಂಗದ ಒತ್ತಡ ದಿಂದಾಗಿ ಹಾಗೂ ತ್ವರಿತ ಕಾರ್ಯ ಸಾಧನೆ ಗಾಗಿ ತನ್ನ ಕೆಲಸದ ಸ್ವಲ್ಪ ಭಾಗವನ್ನು ಸಮಾನ ಅಥವಾ ಕೆಳಹಂತದ ಅಧಿಕಾರಿಗೆ ಬಿಟ್ಟುಕೊಡುವುದು.

deliberate action: ಉದ್ದೇಶಿತ ಕ್ರಿಯೆ.

deliberative body: ಚರ್ಚಾಸದನ; ವಿಮರ್ಶಾಸದನ.

deliberative function: ಚರ್ಚಾತ್ಮಕ ಕಾರ್ಯ.

deliberative method: ಚರ್ಚಾ ವಿಧಾನ.

delimitation: ಸೀಮಾ ನಿರ್ಣಯ.

delimitation of constituency: ಮತ ಕ್ಷೇತ್ರಗಳ ಪರಿಮಿತೀಕರಣ.

delinquency: ಅಪರಾಧ; ವಿಲೋಪನ.

delinquency area: ಅಪರಾಧೀ ಪ್ರ ದೇಶ. ಉದಾ: ಕೊಳೆಗೇರಿಗಳು.

delinquent: ಅಪಚಾರಿ ಮಗು; ವಿಲೋಪಿ ಮಗು.

delinquent drift : ಅಪರಾಧೀ ಹರಿವು.

delinquent sub-culture: ಬಾಲಾಪ ರಾಧಿ ಉಪಸಂಸ್ಕೃತಿ.

delirious mania: ಪ್ರಲಾಪೋನ್ಮಾದ.

delirious rage: ಉನ್ಮತ್ತ ರೋಷ.

delirium: ಉನ್ಮಾದ.

deliverance day: ವಿಮೋಚನಾ ದಿನ.

delusion: ಭ್ರಾಂತಿ; ಅಸಂತುಷ್ಟಕರವಾದ ಭ್ರಾಂತಿ. ಕಾಲ್ಪನಿಕ ಅಸಂಗತ ಮನೋವಿಕೃತಿ ಗಳಲ್ಲಿ ಕಾಣಿಸುವ ವಿಚಾರದ ತೊಂದರೆ. ಅವಾಸ್ತವವಾದರೂ ವ್ಯಕ್ತಿಯ ಮನಸ್ಸಿನಲ್ಲಿ ಗಟ್ಟಿಯಾಗಿ ಬೇರೂರಿದ ಸುಳ್ಳು ನಂಬಿಕೆ. ಇದನ್ನು ವಾದ ಅಥವಾ ವಿರುದ್ಧ ಪುರಾವೆ ಗಳನ್ನು ಒದಗಿಸುವುದರ ಮೂಲಕ ಸರಿಪಡಿ ಸುವುದು ಸಾಧ್ಯವಿಲ್ಲ.

delusion of enormity: ಅಪಾರತೆಯ ವಿಭ್ರಾಂತಿ; ವಿಪುಲತೆಯ ಭ್ರಾಂತಿ.

delusion of grandeur: ಭವ್ಯತೆಯ ವಿಭ್ರಾಂತಿ; ಮಹೋನ್ನತ ಭ್ರಾಂತಿ. ತಾನು ಯಾರೋ ಮಹಾನುಭಾವ, ದೊಡ್ಡ ಶ್ರೀಮಂತ, ವಿಜ್ಞಾನಿ ಇಲ್ಲವೆ ಯೋಧ ಎಂಬ ಭ್ರಾಂತಿಯುತ ವರ್ತನೆ.

delusion of influence: ಪ್ರೇರೇಪಣಾ ಭ್ರಾಂತಿ. ವೈರಿಗಳು ತನ್ನನ್ನು ವಿವಿಧ ಸಾಧನ ಗಳಿಂದ, ಮಂತ್ರ-ತಂತ್ರಗಳ ಸಹಾಯದಿಂದ ಪ್ರೇರೇಪಿಸುತ್ತಾರೆಂಬ ವಿಭ್ರಾಂತಿ.

delusion of persecution: ಶತ್ರು ಭ್ರಾಂತಿ; ವ್ಯಕ್ತಿಪೀಡನ ಭ್ರಾಂತಿ. ತನಗ್ಯಾರೋ ವೈರಿಗಳಿದ್ದಾರೆ, ಅವರು ತನ್ನ ಬೆನ್ನು ಹತ್ತಿ ಕಾಡಿಸುತ್ತಿದ್ದಾರೆಂಬ ಭ್ರಾಂತಿ.

delusion of reference: ಉಲ್ಲೇಖ ಭ್ರಾಂತಿ. ಇತರರು ತನ್ನ ಬಗ್ಗೆಯೇ ಯೋಚಿ ಸುತ್ತಾರೆ, ತನ್ನನ್ನೇ ನೋಡುತ್ತಾರೆ, ಎಲ್ಲವೂ ತನ್ನನ್ನೇ ಕುರಿತದ್ದಾಗಿದೆ ಎಂಬ ಭ್ರಾಂತಿ.

delusion of sin and guilt: ಪಾಪ ಮತ್ತು ದೋಷಭಾವದ ಭ್ರಾಂತಿ. ತಾನು ಮಹಾಪಾಪ ಮಾಡಿರುವುದರಿಂದ ತನಗೆ ಪ್ರಾಯಶ್ಚಿತ್ತವಾಗಬೇಕೆಂಬ ಭ್ರಾಂತಿ.

delusional insanity: ವಿಭ್ರಾಂತಿಯುತ ಹುಚ್ಚುತನ.

demagogues: ದುರಾಗ್ರಹಿ ಜನನಾಯಕರು. ಪ್ರಜಾಪ್ರಭುತ್ವದಲ್ಲಿ ಜನಸಾಮಾನ್ಯರ ದುರಾಗ್ರಹವನ್ನು ಕೆರಳಿಸುವ ರಾಜಕೀಯ ನಾಯಕರು.

demand: ಬೇಡಿಕೆ. ವಸ್ತುಗಳ ಒಡೆತನವನ್ನು ಹೊಂದಲು ಅವಶ್ಯಕವಾದ ವಿನಿಮಯ ಮಾಧ್ಯಮವನ್ನು ಹೊಂದಿದ್ದು ಅದರಿಂದ ಪ್ರೇರಿತವಾಗಿ ಸರಕು ಹಾಗೂ ಸೇವೆಗಳನ್ನು ಪಡೆಯುವ ಬಯಕೆಯ ಮಂಡನೆ.

demand bill of exchange: ಬೇಡಿಕೆ ವಿನಿಮಯ ಹುಂಡಿ.

demand curve: ಬೇಡಿಕೆ ರೇಖೆ. ವಿಭಿನ್ನ ದರಗಳಲ್ಲಿ ಅನುಭೋಗಿಯು ಕೊಂಡುಕೊಳ್ಳಬಹುದಾದ ವಸ್ತುಗಳ ಪ್ರಮಾಣಗಳ ರೇಖಾತ್ಮಕ ವಿವರಣೆ.

demand deficiency theory: ಬೇಡಿಕೆಯ ಕೊರತೆ ಸಿದ್ಧಾಂತ.

demand deposit: ಬೇಡಿಕೆ ಠೇವಣಿ. ಠೇವಣಿದಾರ ಬೇಡಿಕೆ ಮಂಡಿಸಿದಾಗ ಹಿಂದಿರುಗಿಸಬೇಕಾದ ಠೇವಣಿ.

demand determinant: ಬೇಡಿಕೆಯ ನಿರ್ಧಾರಕ.

demand elasticity: ಬೇಡಿಕೆಯ ಸ್ಥಿತಿಸ್ಥಾಪಕತ್ವ.

demand forecasting: ಬೇಡಿಕೆಯ ಮುನ್ನಂದಾಜು; ಬೇಡಿಕೆಯ ಮುಂಗಾಣುವಿಕೆ.

demand function: ಬೇಡಿಕೆಯ ಕಾರ್ಯ. ಸರಕು ಹಾಗೂ ಸೇವೆಗಳ ಬೇಡಿಕೆಯ ಪ್ರಮಾಣ ಹಾಗೂ ಅನೇಕ ಆರ್ಥಿಕ ಅಂಶಗಳ ಬದಲಾವಣೆಯ ನಡುವಿನ ಸಂಬಂಧಗಳ ಗಣಿತಾತ್ಮಕ ವಿವರಣೆ. ಆರ್ಥಿಕ ಅಂಶಗಳು ಮುಖ್ಯವಾಗಿ ವಸ್ತುಗಳ ಬೆಲೆ, ಬದಲಿ ವಸ್ತು ಮತ್ತು ಪೂರಕ ವಸ್ತುಗಳ ಬೆಲೆ, ಆದಾಯ, ಸಾಲ ಶರತ್ತುಗಳು.

demand inelasticity: ಬೇಡಿಕೆಯ ಸ್ಥಿತಿಸ್ಥಾಪಕ ರಹಿತತೆ.

demand management: ಬೇಡಿಕೆ ನಿರ್ವಹಣೆ.

demand pull inflation: ಬೇಡಿಕೆಯ ಎಳೆತಕ್ಕೊಳಗಾದ ಹಣದುಬ್ಬರ. ಒಂದು ಅರ್ಥವ್ಯವಸ್ಥೆಯಲ್ಲಿ ಸಮಗ್ರ ಬೇಡಿಕೆಯು ಸಮಗ್ರ ಪೂರೈಕೆಯಿಂದ ಹೆಚ್ಚಾಗಿದ್ದು ಏರುತ್ತಲೇ ಇದ್ದರೆ ಹಣದುಬ್ಬರ ಸಂಭವಿಸುತ್ತದೆ. ಇದು ಬೇಡಿಕೆಯ ಎಳೆತಕ್ಕೊಳಗಾದ ಹಣದುಬ್ಬರ.

demand schedule: ಬೇಡಿಕೆಯ ಅನುಸೂಚಿ. ವಿಭಿನ್ನ ದರಗಳಲ್ಲಿ ಅನುಭೋಗಿಯು ಕೊಂಡುಕೊಳ್ಳಬಯಸುವ ಸರಕು-ಸೇವೆಗಳ ಪ್ರಮಾಣವನ್ನು ಸೂಚಿಸುವ ಪಟ್ಟಿ.

deme: ಒಳಬಾಂಧವ್ಯದ ಕುಲ ಸಮೂಹ.

demeanour: ದುರ್ವರ್ತನೆ.

dementia: ಮನೋಹ್ರಾಸ. ಬುದ್ಧಿಶಕ್ತಿ, ನೆನಪುಶಕ್ತಿ, ನಿರ್ಧಾರಶಕ್ತಿ, ಭಾವನೆ ಮತ್ತು ವರ್ತನೆಗಳೂ ಅವನತಿಗೊಳ್ಳುವ ಹೆಚ್ಚಾಗಿ ಇಳಿ ವಯಸ್ಸಿನಲ್ಲಿ ಬರುವ, ಮೆದುಳಿನ ತೊಂದರೆಗಳಿಂದ ಉಂಟಾಗುವ ಮನೋರೋಗ.

demilitarization: ನಿಸ್ಸೈನೀಕರಣ. ಒಂದು ಪ್ರದೇಶದ ಮೇಲೆ ಇರುವ ಸೈನಿಕ ಹಿಡಿತವನ್ನು ಹಿಂತೆಗೆದುಕೊಳ್ಳುವುದು.

democracy: ಪ್ರಜಾಪ್ರಭುತ್ವ; ಪ್ರಜಾಸತ್ತೆ. ಪ್ರಜಾತಾಂತ್ರಿಕ ಆಡಳಿತ.

democratic constitution: ಪ್ರಜಾಸತ್ತಾತ್ಮಕ ಸಂವಿಧಾನ. ಪ್ರಜಾಪ್ರಭುತ್ವವಾದಿ ತತ್ವಗಳನ್ನು ಒಳಗೊಂಡಿರುವ ಸಂವಿಧಾನ.

democratic control: ಪ್ರಜಾಸತ್ತಾತ್ಮಕ ನಿಯಂತ್ರಣ.

democratic decentralization: ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ.

democratic family: ಪ್ರಜಾತಾಂತ್ರಿಕ ಕುಟುಂಬ. ಕುಟುಂಬದ ಸದಸ್ಯರೆಲ್ಲರೂ ಸಮಾನರು ಎಂಬ ಭಾವನೆಯುಳ್ಳ ಕುಟುಂಬ.

democratic leader: ಪ್ರಜಾಸತ್ತಾತ್ಮಕ ನಾಯಕ.

democratic leadership: ಪ್ರಜಾಸತ್ತಾತ್ಮಕ ನಾಯಕತ್ವ. ಆಡಳಿತ ವ್ಯವಸ್ಥೆಯಲ್ಲಿ ನಾಯಕನು ಎಲ್ಲಾ ಸಂದರ್ಭಗಳಲ್ಲೂ ತನ್ನ ಅನುಯಾಯಿಗಳ ಜೊತೆ ಸಮಾಲೋಚಿಸಿ, ನೀತಿ ನಿಯಮಗಳನ್ನು ರೂಪಿಸುವಾಗ ಅವರ ಸಲಹೆ ಮತ್ತು ಅಭಿಪ್ರಾಯಗಳಿಗೆ ಮನ್ನಣೆ ನೀಡಿ ಕಾರ್ಯ ನಿರ್ವಹಿಸುವ ಬಗೆ.

democratic party: ಪ್ರಜಾಸತ್ತಾತ್ಮಕ ಪಕ್ಷ.

democratic planning: ಪ್ರಜಾಸತ್ತಾ ತ್ಮಕ ಯೋಜನೆ.

democratic republic: ಪ್ರಜಾಸತ್ತಾ ತ್ಮಕ ಗಣರಾಜ್ಯ.

democratic right: ಪ್ರಜಾಸತ್ತಾತ್ಮಕ ಹಕ್ಕು.

democratic socialism: ಪ್ರಜಾಸತ್ತಾತ್ಮಕ ಸಮಾಜವಾದ. ಪ್ರಜಾಸತ್ತಾತ್ಮಕ ಸುಧಾರಣೆಗಳಿಂದ ಬಂಡವಾಳಶಾಹಿ ವ್ಯವಸ್ಥೆಯನ್ನು ಸಮಾಜವಾದಕ್ಕೆ ಪರಿವರ್ತಿಸಬಹುದು ಎಂಬ ರಾಜಕೀಯ ಪರಿಕಲ್ಪನೆ.

democratic state: ಪ್ರಜಾಸತ್ತಾತ್ಮಕ ರಾಷ್ಟ್ರ.

democratization of art: ಕಲೆಯ ಪ್ರಜಾತಂತ್ರೀಕರಣ.

demographic cycle: ಜನಸಂಖ್ಯಾ ಚಕ್ರ. ದೇಶದ ಜನಸಂಖ್ಯೆಯಲ್ಲಿ ಕಾಲ ಕಾಲಕ್ಕೆ ಆಗುವ ಬದಲಾವಣೆ.

demographic evolution: ಜನ ಸಂಖ್ಯಾ ವಿಕಾಸ.

demographic gap: ಜನಸಂಖ್ಯಾ ಅಂತರ. ಜನಸಂಖ್ಯಾ ಸ್ಥಿತ್ಯಂತರದ ಅವಧಿಯಲ್ಲಿ ಜನನ ದರ ಮತ್ತು ಮರಣ ದರಗಳ ನಡುವೆ ಉಂಟಾಗುವ ಅಂತರ.

demographic structure: ಜನ ಸಂಖ್ಯಾ ರಚನೆ. ನಿರ್ದಿಷ್ಟ ಜನಸಂಖ್ಯೆಯು ಲಿಂಗ, ವಯಸ್ಸು ಮದುವೆಯ ಸ್ಥಾನಮಾನ ಹಾಗೂ ಇತರ ಅಂಶಗಳಾದ ಜನಾಂಗ, ಆರ್ಥಿಕ-ಸಾಮಾಜಿಕ ಸ್ಥಾನಮಾನ, ಧರ್ಮ ಇತ್ಯಾದಿಗಳಲ್ಲಿ ಎಷ್ಟೆಷ್ಟು ಹಂಚಿದೆಯೆಂಬ ವಿವರಣೆ.

demographic transition: ಜನಸಂಖ್ಯಾ ಸ್ಥಿತ್ಯಂತರ. ಯಾಂತ್ರೀಕರಣ ಮತ್ತು ಆಧುನೀಕರಣ ಪ್ರಕ್ರಿಯೆಗಳಿಂದ ಜನನ ದರ ಹಾಗೂ ಮರಣ ದರಗಳಲ್ಲಾಗುವ ಬದಲಾವಣೆಗಳು.

demography: ಜನಸಂಖ್ಯಾ ಶಾಸ್ತ್ರ. ಜನಸಂಖ್ಯೆಯ ಗಾತ್ರ, ರಚನೆ ಮತ್ತು ವಿತರಣೆ

ಇವುಗಳಲ್ಲಾಗುವ ಬದಲಾವಣೆಗಳನ್ನು ಅಭ್ಯಸಿಸುವ ಶಾಸ್ತ್ರ.

demon: ಅತಿಮಾನುಷ ವ್ಯಕ್ತಿ; ಅಸುರ; ರಾಕ್ಷಸ.

demon dance: ಅಸುರ ನರ್ತನ; ಪೈಶಾಚಿಕ ನರ್ತನ. ಅಭೌತಿಕ ಶಕ್ತಿಗಳ ಮುಖವಾಡ ಧರಿಸಿ ಅವರ ಅನುಕರಣೆ ಮಾಡುವ ನೃತ್ಯ ಪ್ರಕಾರ.

de-monitization: ಅನಾಣ್ಯೀಕರಣ.

demonological concept: ದೈವ ವಿರೋಧೀ ಕಲ್ಪನೆ.

demonology: ಭೂತ ಪೂಜಾಶಾಸ್ತ್ರ. ದೈವ, ಭೂತ, ಪ್ರೇತ, ಬ್ರಹ್ಮರಾಕ್ಷಸ ಮುಂತಾದ ಆಸುರೀಶಕ್ತಿಗಳ ಆರಾಧನಾ ಶಾಸ್ತ್ರ.

demonologist: ಭೂತ ಪೂಜಾರಿ.

demonstrable certainty: ಪ್ರಯೋಗ ಸಿದ್ಧ ಸತ್ಯ; ಬಾಹ್ಯ ಪ್ರಮಾಣದಿಂದ ಸಿದ್ಧಪಡಿಸಬಹುದಾದ ಸತ್ಯ.

demonstration effect: ಪ್ರದರ್ಶನ ಪರಿಣಾಮ.

demo-phobia: ಜನಜಂಗುಳಿಯ ಭೀತಿ.

demotion: ಹಿಂಬಡ್ತಿ (ಹಿಂಬಡತಿ). ಆಡಳಿತದಲ್ಲಿ ದಕ್ಷತೆ ಮತ್ತು ಕಾರ್ಯ ಚೈತನ್ಯಗಳನ್ನು ವೃದ್ಧಿಸಲು ಮತ್ತು ಶಿಸ್ತು ಕ್ರಮಗಳನ್ನು ಕೈಗೊಳ್ಳುವ ಉದ್ದೇಶದಿಂದ ಸರಕಾರಿ ನೌಕರರನ್ನು ಮೇಲಿನ ಸ್ಥಾನದಿಂದ ಕೆಳಗಿನ ಸ್ಥಾನಕ್ಕೆ ತಳ್ಳುವುದು.

demurrage: ವಿಳಂಬ ಶುಲ್ಕ.

dendro chronology: ವೃಕ್ಷ ಕಾಲಗಣನೆ. ಮರದ ಉಂಗುರಗಳಿಂದ ಕಾಲ ಪರಿಗಣನೆ. ಮರದ ಸೀಳುನೋಟದಲ್ಲಿ ಕಾಣುವ ಉಂಗುರಗಳ ಅಧ್ಯಯನವನ್ನು ಆಧರಿಸಿದ ಕಾಲಗಣನೆ.

denial of reality: ನಿಜಸ್ಥಿತಿಯ ನಿರಾಕರಣೆ.

denotative term: ಸೂಚಕ ಸಂಬೋಧನಾ ಪದ. ಲಿಂಗ, ತಲೆಮಾರು, ವಂಶ ವಾಹಿಬಂಧ ಇತ್ಯಾದಿಗಳಿಂದ ನಿರ್ಣಯಿಸಲ್ಪಟ್ಟ ರಕ್ತ ಸಂಬಂಧ ವರ್ಗವನ್ನು ಸೂಚಿಸಲು ಬಳಸುವ ರಕ್ತಸಂಬಂಧೀಪದ.

de novo trial: ಹೊಸದಾಗಿ ವಿಚಾರಣೆ ನಡೆಸುವುದು.

density of population: ಜನ ಸಾಂದ್ರತೆ. ಜನಸಂಖ್ಯೆಯನ್ನು ಅದು ವ್ಯಾಪಿಸುವ (ಆಕ್ರಮಿಸುವ) ಪ್ರತಿ ಚ.ಕಿ.ಮಿ. ಜಾಗದ ಆಧಾರದ ಮೇಲೆ ವಿವರಿಸುವ ಸಾಪೇಕ್ಷ ಗಾತ್ರ.

density of settlement: ನೋಡಿ: density of population

department: ಇಲಾಖೆ. ಸರ್ಕಾರದ ಕಾರ್ಯಾಚರಣೆಯನ್ನು ವಿಭಜಿಸಿ ಅದನ್ನು ನಿರ್ವಹಿಸಿಕೊಂಡು ಹೋಗುವ ಮುಖ್ಯವಾದ ಒಂದು ಸಾಧನ ಅಥವಾ ಘಟಕ.

departmental enquiry: ಇಲಾಖಾ ವಿಚಾರಣೆ. ನ್ಯಾಯಾಲಯಕ್ಕೆ ವಿಚಾರಣೆ ಗಾಗಿ ಖಟ್ಲೆಯನ್ನು ಒಪ್ಪಿಸುವ ಮೊದಲು ಇಲಾಖಾ ಹಂತದಲ್ಲಿ ತಪ್ಪಿತಸ್ಥ ಉದ್ಯೋಗಿಗಳನ್ನು ವಿಚಾರಿಸಿ ನೀಡುವ ನ್ಯಾಯ ತೀರ್ಮಾನ.

departmental management: ಇಲಾಖಾತ್ಮಕ ನಿರ್ವಹಣೆ.

dependency feeling: ಅವಲಂಬನೆಯ ಭಾವನೆ.

dependency ratio: ಅವಲಂಬನೆಯ ಅನುಪಾತ.

dependent child: ಅವಲಂಬೀ ಮಗು; ಪರಾವಲಂಬೀ ಮಗು.

dependent colony: ಅಧೀನ ವಸಾಹತು.

dependent variable: ಅವಲಂಬಿತ ಪರಿವರ್ತಕ; ಅವಲಂಬಿತ ಚಲಕ. ಸ್ವತಂತ್ರ ಪರಿವರ್ತಕದಲ್ಲಾಗುವ ಬದಲಾವಣೆಗೆ ಹೊಂದಿಕೊಂಡು ಇನ್ನೊಂದು ಪರಿವರ್ತಕ ದಲ್ಲಿ ಬದಲಾವಣೆಗಳಾದರೆ ಅದು ಅವ ಲಂಬಿತ ಪರಿವರ್ತಕ ಎನಿಸುತ್ತದೆ. ಕಾರಣ-ಕಾರ್ಯ ಸಂಬಂಧದಲ್ಲಿ ಕಾರಣವು ಸ್ವತಂತ್ರ ಪರಿವರ್ತಕ, ಕಾರ್ಯವು ಅವಲಂಬಿತ ಪರಿ ವರ್ತಕ.

depersonalization: ಅವ್ಯೆಯಕ್ತೀ ಕರಣ.

depletion theory: ಸಂಪನ್ಮೂಲ ಬರಿದಾಗುವಿಕೆ ಸಿದ್ಧಾಂತ. ನಿಗದಿತ ಕಾಲಾವಧಿ ಯಲ್ಲಿ ಪ್ರಾಕೃತಿಕ ಸಂಪನ್ಮೂಲಗಳು ಎಷ್ಟರ ಮಟ್ಟಿಗೆ ಬಳಕೆಯಾಗಿದೆ ಎಂಬುದರ ಕುರಿತು ಅಧ್ಯಯನ ಮಾಡುವ ಅರ್ಥಶಾಸ್ತ್ರದ ಒಂದು ವಿಭಾಗ.

deposit insurance: ವಿಮೆ ಮಾಡಿರುವ ಠೇವಣಿ.

depreciation: ಸವಕಳಿ. ಯಾವುದೇ ಸ್ಥಿರ ಆಸ್ತಿಯ ಮೌಲ್ಯ ಅಥವಾ ಉಪಯುಕ್ತತೆ ಯಲ್ಲಿ ಕುಸಿತ ಉಂಟಾಗುವುದು.

depreciation allowance: ಸವಕಳಿ ಭತ್ಯೆ.

depreciation charge: ಸವಕಳಿ ವೆಚ್ಚ.

depreciation of currency: ಹಣದ ಮೌಲ್ಯದ ಸವೆತ. ವಿದೇಶೀ ಮಾರುಕಟ್ಟೆ ಯಲ್ಲಿ ಹಣದ ಪೂರೈಕೆಯು ಬೇಡಿಕೆಗಿಂತ ಹೆಚ್ಚಾಗಿ ಹಣದ ಮೌಲ್ಯವು ಕಡಿಮೆಯಾಗು ವುದು.

depressed class: ದಲಿತ ವರ್ಗ.

depression: ಹಿನ್ನಡೆ; ಆರ್ಥಿಕ ಮುಗ್ಗಟ್ಟು; ಖಿನ್ನತೆ; ವಿಷಣ್ಣತೆ. ೧.ಉತ್ಪಾದನೆ ಹಾಗೂ ಉದ್ಯೋಗದ ಮಟ್ಟದಲ್ಲಿ ತೀವ್ರ ಕುಸಿತ ಉಂಟಾಗುವ ಸ್ಥಿತಿ. ೨. ವೈಯಕ್ತಿಕ ಸೋಲಿನ ಪರಿಣಾಮವಾಗಿ ಅನುಭವಿಸುವ ಖಿನ್ನತೆ.

depressive state: ವಿಷಣ್ಣತಾ ಸ್ಥಿತಿ; ಖಿನ್ನತಾ ಸ್ಥಿತಿ.

depth interview: ಆಳ ಸಂದರ್ಶನ. ಅಧ್ಯಯನಕ್ಕಾಗಿ ಆಯ್ದ ವಿಷಯದ ಬಗ್ಗೆ ಒಳ ನೋಟಗಳನ್ನು ನೀಡುವುದಕ್ಕಾಗಿ ತೀರಾ ಅಂತರಂಗದ ವಿಚಾರಗಳನ್ನು ಚರ್ಚೆ ಗೆಳೆಯುವ ಸಂದರ್ಶನ.

depth psychology: ಅಂತರಾಳ ಮನೋವಿಜ್ಞಾನ.

deputy governor: ಉಪರಾಜ್ಯಪಾಲ; ಉಪಪ್ರಾಂತಾಧಿಕಾರಿ.

deputy minister: ಉಪ ಸಚಿವ; ಮಂತ್ರಿ ಮಂಡಲದ ಸದಸ್ಯರಲ್ಲಿಯ ಒಂದು ವಿಧ. ಸಚಿವ ಸಂಪುಟದ ಮೂರು ದರ್ಜೆಯ ಮಂತ್ರಿಗಳಲ್ಲಿ (ಕ್ಯಾಬಿನೆಟ್ ಮಂತ್ರಿಗಳು, ಸಹಾಯಕ ಸಚಿವರು, ಉಪಸಚಿವರು) ಇವರು ಅತ್ಯಂತ ಕೆಳಹಂತದ ಮಂತ್ರಿಗಳು. ಇವರು ಕ್ಯಾಬಿನೆಟ್ ಮತ್ತು ಸಹಾಯಕ ಸಚಿವರು ಗಳಿಗೆ ನೆರವಾಗುತ್ತಾರೆ.

deputy speaker: ಉಪ ಸಭಾಧ್ಯಕ್ಷ.

deranged mind: ವಿಕೃತ ಮನ.

derangement of personality: ವ್ಯಕ್ತಿತ್ವ ವಿಕೃತಿ.

dereliction of duty: ಕರ್ತವ್ಯ ವಿಮುಖತೆ; ಕರ್ತವ್ಯ ಚ್ಯುತಿ.

derivation: ನಿರ್ವಚನ. ಅತಾರ್ಕಿಕ ಕ್ರಿಯೆಗಳಿಗೆ ನೀಡುವ ವೈಚಾರಿಕ ವಿವರಣೆ.

derivative influence: ಅನುದ್ದೇಶಿತ ಪ್ರಭಾವ. ಯಾವುದಾದರೊಂದು ಕ್ರಿಯೆ ಅಥವಾ ಘಟನೆಯಿಂದಾಗಿ ಉಂಟಾಗುವ ಸರಣಿ ಘಟನೆಗಳ ಅನಪೇಕ್ಷಿತ ಹಾಗೂ ಅನಿರೀಕ್ಷಿತ ಪರಿಣಾಮ.

derivative penalization: ಅನುದ್ದೇಶಿತ ದಂಡನೆ. ಯಾವುದಾದರೂ ಉದ್ದೇಶಿತ ನ್ಯಾಯಸಂಹಿತೆಯನ್ನು ಜಾರಿಗೊಳಿಸುವುದರಿಂದ ಉಂಟಾಗುವ ಅನುದ್ದೇಶಿತ ದುಷ್ಫಲಗಳು.

derivative quality: ಅನುಸಾಧಿತ ಗುಣ; ಉತ್ಪನ್ನ ಗುಣ.

derivative social effect: ಅನುದ್ದೇಶಿತ ಸಾಮಾಜಿಕ ಪರಿಣಾಮ.

derivative term: ಉತ್ಪನ್ನ ಪದ. ಸರಳ ರಕ್ತಸಂಬಂಧೀ ಪದ.

derived demand: ಸಂಗ್ರಹಿತ ಬೇಡಿಕೆ; ಉತ್ಪನ್ನವಾದ ಬೇಡಿಕೆ.

derived score: ಉತ್ಪನ್ನ ಪ್ರಾಪ್ತಾಂಕ.

de-sanskritization: ಅಪಸಂಸ್ಕೃತೀಕರಣ. ಸಂಸ್ಕೃತೀಕರಣಕ್ಕೆ ವ್ಯತಿರಿಕ್ತವಾದ ಪ್ರಕ್ರಿಯೆ. ಕೆಳಜಾತಿಯವರ ಕೆಲವೊಂದು ಆಚಾರ ವಿಚಾರಗಳನ್ನು ತಮ್ಮ ಸ್ಥಾನಮಾನದ ಉನ್ನತಿಗಾಗಿ ಮೇಲ್ಜಾತಿಯವರು ಸ್ವೀಕರಿಸುವುದು. ಉದಾ: ವೈದಿಕ ಸಂಪ್ರದಾಯದ ಬ್ರಾಹ್ಮಣರು ಭೂತಾರಾಧನೆಯನ್ನು ಅನುಸರಿಸುವುದು.

descent: ವಂಶಾವಳಿ; ವಂಶ; ಸಂತತಿ.

deschooling: ಶಾಲಾ ವಿಮುಖತೆ.

descriptive demography: ವಿವರಣಾತ್ಮಕ ಜನಸಂಖ್ಯಾಶಾಸ್ತ್ರ.

descriptive design: ವಿವರಣಾತ್ಮಕ ವಿನ್ಯಾಸ.

descriptive economics: ವಿವರಣಾತ್ಮಕ ಅರ್ಥಶಾಸ್ತ್ರ.

descriptive hypothesis: ವಿವರಣಾತ್ಮಕ ಪ್ರಾಕ್ ಕಲ್ಪನೆ.

descriptive kinship terminology: ಬಂಧುತ್ವದ ವಿವರಣಾತ್ಮಕ ಪದ.

descriptive method: ವಿವರಣಾತ್ಮಕ ವಿಧಾನ.

descriptive psychology: ವಿವರಣಾತ್ಮಕ ಮನೋವಿಜ್ಞಾನ.

descriptive science: ವಿವರಣಾತ್ಮಕ ವಿಜ್ಞಾನ.

descriptive statistics: ವಿವರಣಾತ್ಮಕ ಸಂಖ್ಯಾಶಾಸ್ತ್ರ.

descriptive study: ವಿವರಣಾತ್ಮಕ ಅಧ್ಯಯನ.

descriptive term: ವಿವರಣಾತ್ಮಕ ಸಂಬೋಧನಾ ಪದ. ನಿರ್ದಿಷ್ಟ ಸಂಬಂಧವನ್ನು ಹೆಸರಿಸಲು ಎರಡು ಅಥವಾ ಹೆಚ್ಚು ಮೂಲಪದಗಳು ಸಂಯೋಗ ಹೊಂದಿರುವ ರಕ್ತಸಂಬಂಧೀ ಪದ.

desertion: ಪರಿತ್ಯಜನೆ. ಗಂಡಹೆಂಡಿರು ಪರಸ್ಪರ ದೂರ ಇರುವಿಕೆ.

desire for perpetuation: ಸಂತತಿ ಮುಂದುವರಿಕೆಯ ಅಪೇಕ್ಷೆ; ಪೀಳಿಗೆಯನ್ನು ಮುಂದುವರಿಸುವ ಹಂಬಲ.

desired growth rate: ಇಚ್ಛಿತ ಬೆಳವಣಿಗೆಯ ದರ.

despatch register: ರವಾನೆ ದಾಖಲೆ.

despondency: ವಿಷಣ್ಣತೆ; ಹತಾಶೆ.

despondent disposition: ವಿಷಣ್ಣ ಪ್ರವೃತ್ತಿ.

despot: ನಿರಂಕುಶ ಪ್ರಭು. ನಿರಂಕುಶವಾಗಿ ಯಾವುದೇ ಇತಿಮಿತಿಗೊಳಪಡದೆ ಆಳುವವ.

despotic government: ನಿರಂಕುಶ ಸರಕಾರ.

despotic system: ನಿರಂಕುಶ ವ್ಯವಸ್ಥೆ.

despotism: ನಿರಂಕುಶತ್ವ. ಸರಕಾರದ ಎಲ್ಲಾ ಅಧಿಕಾರಗಳು ಒಬ್ಬ ವ್ಯಕ್ತಿಯ ಕೈಯಲ್ಲಿ ಕೇಂದ್ರೀಕೃತವಾಗಿ ಸರ್ವಾಧಿಕಾರ ಪಡೆದ ಪ್ರಭುತ್ವ.

destructive activity: ವಿನಾಶಕಾರಿ ಚಟುವಟಿಕೆ; ವಿಧ್ವಂಸಕ ಚಟುವಟಿಕೆ.

destructive conflict: ವಿನಾಶಕಾರಿ ಸಂಘರ್ಷ.

destructive consumption: ವಿನಾಶಕ ಅನುಭೋಗ. ಕೆಲವು ವಸ್ತುಗಳ ಉಪಯೋಗವು ಕೆಲವೊಮ್ಮೆ ಯಾವುದೇ ತೃಪ್ತಿಯನ್ನು ಕೊಡದೆ ನಾಶವಾದರೆ ಅದು ವಿನಾಶಕ ಅನುಭೋಗವಾಗುತ್ತದೆ. ಉದಾ: ಹಾಲು ಚೆಲ್ಲಿದಾಗ ಅದರ ತುಷ್ಟಿಗುಣವು ಯಾವುದೇ ತೃಪ್ತಿಯನ್ನು ಕೊಡದೆ ನಾಶವಾಗುತ್ತದೆ.

destructive law: ವಿನಾಶಕಾರಿ ಕಾನೂನು.

destructive magic: ವಿನಾಶಕಾರಿ ಮಾಟ. ೧. ವೈರಿಯ ಸರ್ವನಾಶವನ್ನು ಅಪೇಕ್ಷಿಸಿ ನಡೆಸುವ ಮಾಟ. ೨. ವೈರಿಗೆ ಕೆಟ್ಟ ಹವಾಮಾನ, ತೊಂದರೆ, ಖಾಯಿಲೆ, ಅಸಂತೊಷ, ಮರಣ ಇತ್ಯಾದಿಗಳನ್ನುಂಟು ಮಾಡಲು ಮಾಡುವ ಮಾಟ.

destructive temperament: ವಿಧ್ವಂಸಕ ಚಿತ್ತಪ್ರಕೃತಿ.

destructiveness: ವಿಧ್ವಂಸಕತೆ. ಮಕ್ಕಳಲ್ಲಿ ಸಮಾಜಘಾತಕಿಗಳಲ್ಲಿ, ಮನೋವಿಕೃತರಲ್ಲಿ ಕಾಣಸಿಕೊಳ್ಳುವ ವರ್ತನೆ.

desultory memory: ಅಸಂಬದ್ಧ ಸ್ಮರಣೆ.

detention: ತಡೆಹಿಡಿಯುವುದು.

detailed contingent bill: ವಿಸ್ತೃತ ಸಾದಿಲ್ವಾರು ಬಿಲ್ಲು.

detailed sub-head: ವಿಸ್ತೃತ ಉಪಖಾತೆ.

detain in custody: ಬಂಧನದಲ್ಲಿಡು; ಬಂಧಿಸು.

detente: ಉಪಶಮನ; ರಾಷ್ಟ್ರಗಳ ಮಧ್ಯೆ ಇರುವ ವೈಮನಸ್ಸನ್ನು ಕಡಿಮೆಗೊಳಿಸುವ ವಿಧಾನ. ಇದು ವಿಶ್ರಾಂತಿ, ಸಡಿಲಿಕೆ, ಅಥವಾ ನಿಧಾನಗೊಳಿಸುವಿಕೆ ಎಂಬ ಅರ್ಥವುಳ್ಳ ಒಂದು ಫ್ರೆಂಚ್ ಪದ. ಅಂತಾರಾಷ್ಟ್ರೀಯ ಉದ್ರಿಕ್ತತೆಯ ಉಪಶಮನ, ಶಕ್ತಿರಾಜಕಾರಣ ಮತ್ತು ಶೀತಲಯುದ್ಧದ ನೀತಿಗಳಿಂದ ಕೂಡಿರುವ ಅಂತಾರಾಷ್ಟ್ರೀಯ ಸಂಬಂಧ ಗಳಿಂದ ಸಹಜ ಸಂಬಂಧಗಳಿಗೆ ಪರಿವರ್ತನೆ; ವಿಭಿನ್ನ ಸಾಮಾಜಿಕ ವ್ಯವಸ್ಥೆಗಳನ್ನು ಹೊಂದಿರುವ ರಾಜ್ಯಗಳ ಮಧ್ಯೆ ಶಾಂತಿಯುತ ಸಹಬಾಳ್ವೆ ಮತ್ತು ಸಮಾನ ಸಹಕಾರದ ಸೂತ್ರಗಳ ಅನುಸರಣೆ ಮುಂತಾದವುಗಳನ್ನು ಈ ಪದ ಸೂಚಿಸುತ್ತದೆ.

deterioration of intelligence: ಬುದ್ಧಿಶಕ್ತಿಯ ಕ್ಷೀಣತೆ.

deterioration of memory: ಸ್ಮೃತಿ ಕ್ಷೀಣತೆ.

deterioration quotient: ಕ್ಷೀಣತಾ ಲಬ್ಧ.

determinant: ನಿರ್ಧಾರಕ.

determinate human superior: ನಿಶ್ಚಿತ ಮಾನವ ಶ್ರೇಷ್ಠ. ಜಾನ್ ಆಸ್ಟಿನ್‌ನ ಪರಮಾಧಿಕಾರ ಸಿದ್ಧಾಂತದ ಪ್ರಕಾರ ಸ್ವತಂತ್ರವೆಂದು ಕರೆಸಿಕೊಳ್ಳುವ ಸಮಾಜದಲ್ಲಿ ಪರಮಾಧಿಕಾರವನ್ನು ಚಲಾಯಿಸುವ ನಿಶ್ಚಿತ ಶ್ರೇಷ್ಠ ವ್ಯಕ್ತಿ ಅಥವಾ ವ್ಯಕ್ತಿಗಳ ಕೂಟ.

determinants of interest: ಅಭಿರುಚಿಯ ನಿರ್ಧಾರಕಗಳು.

determining temperament: ನಿರ್ಧಾರಕ ಸ್ವಭಾವ.

determinism: ನಿಯತಿವಾದ. ನೋಡಿ: economic determinism.

deterrence theory: ಪ್ರತಿಬಂಧನೆಯ ಸಿದ್ಧಾಂತ. ಮುಖ್ಯವಾಗಿ ಅಪರಾಧ ಶಾಸ್ತ್ರದಲ್ಲಿ ಬಳಸುವಂತೆ ಕಠಿಣ ಶಿಕ್ಷೆಗಳು ಮುಂದೆ ಸಂಭವಿಸಬಹುದಾದ ಅಪರಾಧಗಳನ್ನು ತಡೆಯಬಲ್ಲವೆಂಬ ಸಿದ್ಧಾಂತ.

devaluation of money: ಹಣದ ಅಪಮೌಲ್ಯೀಕರಣ; ಮೌಲ್ಯ ವಿಚ್ಛೇದನ. ಒಂದು ದೇಶದ ಹಣದ ಮೌಲ್ಯವನ್ನು(ಬೆಲೆ ಯನ್ನು) ಇತರ ದೇಶಗಳ ಹಣ ಅಥವಾ ಚಿನ್ನದ ಮೌಲ್ಯಕ್ಕೆ ಸಂಬಂಧಿಸಿದಂತೆ ಕಡಿಮೆ ಮಾಡುವುದು. ಇದರಿಂದ ಸಂಬಂಧಿತ ದೇಶದ ಆಮದು ತುಟ್ಟಿಯಾಗಿ, ರಫ್ತು ಅಗ್ಗವಾಗುತ್ತದೆ.

devanagari: ದೇವನಾಗರಿ. ಸಂಸ್ಕೃತ, ಹಿಂದಿ ಮತ್ತಿತರ ಭಾರತೀಯ ಭಾಷೆಗಳ ಲಿಪಿ.

developed country: ಅಭಿವೃದ್ಧಿ ಹೊಂದಿದ ರಾಷ್ಟ್ರ; ಮುಂದುವರಿದ ರಾಷ್ಟ್ರ.

developed socialism: ಪ್ರಬುದ್ಧ (ವಿಕಸಿತ) ಸಮಾಜವಾದ. ಸಮಾಜವಾದದಿಂದ ಕಮ್ಯೂನಿಸಮ್‌ಗೆ ಸಮಾಜವು ಪರಿವರ್ತನೆಯಾಗುವ ಕಾಲದ ಒಂದು ಐತಿಹಾಸಿಕ ಘಟ್ಟ.

developing country: ವರ್ಧಮಾನ ರಾಷ್ಟ್ರ; ಅಭಿವೃದ್ಧಿಶೀಲ ದೇಶ; ಉದಾ: ಏಶ್ಯಾ, ಆಫ್ರಿಕಾ, ಲ್ಯಾಟಿನ್ ಅಮೇರಿಕಾ ಮತ್ತು ಫೆಸಿಫಿಕ್ ವಲಯದ ದೇಶಗಳು. ಬಹುತೇಕ ವಾಗಿ ಸಾಮ್ರಾಜ್ಯಶಾಹಿ ದೇಶಗಳ ಮಾಜಿ ವಸಾಹತುಗಳು ಅಥವಾ ಅರೆ ವಸಾಹತುಗಳು. ರಾಷ್ಟ್ರೀಯ ವಿಮೋಚನಾ ಹೋರಾಟಗಳ ಮೂಲಕ ರೂಪುಗೊಂಡ ವರ್ಧಿಷ್ಣು ದೇಶಗಳು.

development of interest: ಅಭಿರುಚಿಯ ಬೆಳವಣಿಗೆ.

development of self: ಸ್ವಪ್ರಜ್ಞೆಯ ಬೆಳವಣಿಗೆ; ವ್ಯಕ್ತಿವಿಕಸನ.

development scheme: ಅಭಿವೃದ್ಧಿಯ ಯೋಜನೆ.

developmental expenditure: ಅಭಿವೃದ್ಧಿಯ ವೆಚ್ಚ.

developmental planning: ಅಭಿ ವೃದ್ಧಿ ಯೋಜನೆ.

developmental psychology: ಅಭಿವೃದ್ಧಿ ಮನಶ್ಶಾಸ್ತ್ರ.

developmental question: ಬೆಳವಣಿಗೆಯ ಕುರಿತ ಪ್ರಶ್ನೆ.

developmental schedule: ವಿಕಾಸಾನುಸೂಚಿ.

deviance: ಅಪವರ್ತನೆ. ಸಾಮಾಜಿಕ ಕ್ಲಪ್ತ ಪ್ರಮಾಣಕಗಳಿಗೆ ಬದ್ಧನಾಗದಿರುವುದು.

deviant: ಅಪಚಾರಿ; ದಾರಿತಪ್ಪಿದ ವರ್ತನೆಯ ವ್ಯಕ್ತಿ.

deviant behaviour: ಅಪಮಾರ್ಗೀ ವರ್ತನೆ; ದಾರಿತಪ್ಪಿದ ವರ್ತನೆ.

deviant child: ಅಪಚಾರೀ ಮಗು.

deviant sub-culture: ಅಪಮಾರ್ಗೀ ಉಪಸಂಸ್ಕೃತಿ. ಸಮಾಜದಲ್ಲಿ ಬಹುಮಾನ್ಯವಾದ ಸಾಂಸ್ಕೃತಿಕ ಮೌಲ್ಯಗಳಿಗೆ ವಿರುದ್ಧವಾದ ಮೌಲ್ಯಗಳನ್ನು ಹೊಂದಿರುವ ಗುಂಪು.

deviation: ದಾರಿತಪ್ಪಿದ ವರ್ತನೆ; ನಿಯಮಗಳ ಅತಿಕ್ರಮ.

deviation intelligence quotient: ವಿಚಲನ ಬುದ್ಧಿಶಕ್ತಿಯ ತುಲನಾತ್ಮಕ ಸೂಚಿ.

deviation score: ಚ್ಯುತಿ ಪ್ರಾಪ್ತಾಂಕ.

devolution: ಅಪವಿಕಾಸ; ಅವಸರಣ; ಜೀವವಂಶಗಳ ಅಪಕರ್ಷ. ಹೆಚ್ಚು ಪ್ರಗತಿ ಹೊಂದಿದ ಮತ್ತು ವಿಶಿಷ್ಟ ಲಕ್ಷಣಗಳ ಸ್ಥಿತಿಯಿಂದ ಕಡಿಮೆ ಅಭಿವೃದ್ಧಿ ಹೊಂದಿದ ಸ್ಥಿತಿಗೆ ಅಪಕರ್ಷ ಹೊಂದುವುದು. ಇದು ವಿಕಾಸದ ವಿರುದ್ಧ ಸ್ಥಿತಿ.

devolution of revenue: ಆದಾಯದ ಅವಸರಣ.

devolution rules: ಅವಸರಣ ನಿಯಮಗಳು.

devolutionary premise: ಅಪವಿಕಾಸವಾದ.

devolutionism: ಅಪವಿಕಾಸತೆ.

dharmashastra: ಧರ್ಮಶಾಸ್ತ್ರ. ವೇದಗಳ ನಂತರದ ಮಹತ್ವವುಳ್ಳ ಹಿಂದೂ ಧಾರ್ಮಿಕ ಗ್ರಂಥ.

diachronic: ಅನ್ಯಕಾಲೀನ.

diagnostic interview: ಪರೀಕ್ಷಾರ್ಥಕ ಸಂದರ್ಶನ. ರೋಗ ಪರೀಕ್ಷಣಾ ಸಂದರ್ಶನ.

diagnosis of mental disorder: ಮನೋರೋಗ ನಿದಾನ.

diagnostics: ರೋಗ ನಿಧಾನ ಶಾಸ್ತ್ರ; ರೋಗ ಪರೀಕ್ಷಾ ಶಾಸ್ತ್ರ.

diagram: ಸಂಖ್ಯಾಪಟ; ರೇಖಾಚಿತ್ರ.

dialect: ಆಡುಭಾಷೆ; ಲಿಪಿಯಿಲ್ಲದ (ಆಡು) ಭಾಷೆ.

dialect atlas: ಭಾಷಾ ನಕಾಶೆ. ಪ್ರಾಂತ ಭಾಷೆಯಲ್ಲಿರುವ ವಿಭಿನ್ನತೆಗಳನ್ನು ತೋರಿಸುವ ರೇಖಾಚಿತ್ರ ಅಥವಾ ನಕ್ಷೆ.

dialectical materialism: ದ್ವಂದ್ವಮಾನ ಭೌತಿಕವಾದ; ದ್ವಂದ್ವಾತ್ಮಕ ಭೌತಿಕವಾದ; ತಾರ್ಕಿಕ ಭೌತಿಕವಾದ. ಪ್ರಚಲಿತ ಸಿದ್ಧಾಂತವೊಂದಕ್ಕೆ ಪ್ರತಿ ಸಿದ್ಧಾಂತವೊಂದು ಹುಟ್ಟಿಕೊಂಡು ಹೊಸ ಸಿದ್ಧಾಂತ ರೂಪಗೊಳ್ಳುವ ತಾತ್ವಿಕ ಜಿಜ್ಞಾಸೆ.

dialectical method: ತತ್ವ ಮೀಮಾಂಸೆಯ ವಿಧಾನ.

dialectics: ದ್ವಂದ್ವವಾದ; ದ್ವಂದ್ವ ಮೀಮಾಂಸೆ. ಪ್ರಕೃತಿ, ಸಮಾಜ ಮತ್ತು ಚಿಂತನೆಯ ಬೆಳವಣಿಗೆಯನ್ನು ವಿಶ್ಲೇಷಿಸುವ ವೈಜ್ಞಾನಿಕ ದೃಷ್ಟಿಕೋನ.

dialogue: ಸಂವಾದ.

diamond water paradox: ವಜ್ರ-ನೀರಿನ ವಿರೋಧಾಭಾಸ. ನೋಡಿ: paradox of value.

diana complex: ಪುರುಷೇಚ್ಛೆ. ಸ್ತ್ರೀಯರಲ್ಲಿ ತಾವು ಪುರುಷರಾಗಿರಬೇಕಿತ್ತೆಂಬ ಇಚ್ಛೆ.

diarchy: ದ್ವಿಸರಕಾರ ಪದ್ಧತಿ; ದ್ವಿಪ್ರಭುತ್ವ. ಎರಡು ಸ್ವತಂತ್ರ ಅಧಿಕಾರಿವರ್ಗಗಳಿಂದ ನಡೆಸಲ್ಪಡುವ ಪ್ರಭುತ್ವ. ಉದಾ: ೧೯೨೧ರಲ್ಲಿ ಭಾರತದಲ್ಲಿ ಜಾರಿಗೆ ಬಂದ ಸುಧಾರಿತ ರಾಜ್ಯಭಾರ ಕ್ರಮ.

dichotomous: ದ್ವಂದ್ವ.

dichotomous division: ದ್ವಿವಿಧ ವರ್ಗೀಕರಣ; ದ್ವಿವಿಭಜನೆ.

dichotomous population: ದ್ವಿವಿಧ ಜನಸಂಖ್ಯೆ. ಸಂಖ್ಯಾಶಾಸ್ತ್ರೀಯವಾಗಿ ಜನಸಂಖ್ಯೆಯನ್ನು ಎರಡು ಪ್ರತ್ಯೇಕಿಸಲ್ಪಟ್ಟ ವರ್ಗಗಳಾಗಿ ವಿಂಗಡಿಸುವಿಕೆ.

dichotomous question: ದ್ವಿಭಾಜಕ ಪ್ರಶ್ನೆ. ಕೇವಲ ಎರಡೇ ಉತ್ತರಗಳ ಸಾಧ್ಯತೆಗಳಿರಬಹುದಾದ ಪ್ರಶ್ನೆ.

dichotomy: ದ್ವಿವಿಭಜನ ವಿಧಾನ. ಒಂದು ಪರಿವರ್ತಕಕ್ಕೆ ಕೇವಲ ಎರಡು ಬೆಲೆ ಅಥವಾ ಮೌಲ್ಯಗಳಿರುವುದು.

dictatorial centralism: ಸರ್ವಾಧಿಕಾರತ್ವದ ಕೇಂದ್ರೀಕರಣ. ಸೋವಿಯತ್ ಯೂನಿಯನ್‌ನಲ್ಲಿದ್ದ ಸಮಾಜವಾದಿ ಆಡಳಿತದಲ್ಲಿ ಮೇಲ್ನೋಟಕ್ಕೆ ಪ್ರಜಾಸತ್ತಾತ್ಮಕ ಕೇಂದ್ರೀಕರಣ ಇದ್ದರೂ ನಿಜವಾದ ಅರ್ಥದಲ್ಲಿ ಸಮಾಜವಾದಿ ಪಕ್ಷವು ಅಲ್ಲಿ ಎಲ್ಲಾ ಚಟುವಟಿಕೆಗಳನ್ನು (ಮೇಲಿಂದ ಕೆಳಗಿನವರೆಗಿನ ಆಡಳಿತ ಹಂತಗಳಲ್ಲಿಯೂ) ನಿರ್ಧರಿಸುತ್ತಿದ್ದುದರಿಂದ ಪಕ್ಷದ ಸರ್ವಾಧಿಕಾರವಿತ್ತು.

dictatorial constitution: ಸರ್ವಾಧಿಕಾರಿ ಸಂವಿಧಾನ.

dictatorship: ಸರ್ವಾಧಿಕಾರ; ನಿರಂಕುಶ ಪ್ರಭುತ್ವ. ರಾಜ್ಯ ಅಥವಾ ಸರಕಾರವು ಸರ್ವಾಧಿಕಾರಿ ಆಡಳಿತದ ಒಳಗೆ ಇರುವುದು.

dictatorship of the cabinet: ಸಂಪುಟದ ಸರ್ವಾಧಿಕಾರ. ಸಂಸದೀಯ ಸರಕಾರ ಪದ್ಧತಿಯಲ್ಲಿ ಸರಕಾರದ ಎಲ್ಲಾ ಅಧಿಕಾರಗಳೂ ಕ್ಯಾಬಿನೆಟ್ ಸಂಪುಟದಲ್ಲಿ ಕೇಂದ್ರೀಕೃತವಾಗಿರುವುದು.

dictatorship of the proletariat: ಕಾರ್ಮಿಕರ ಸರ್ವಾಧಿಕಾರ. ಸಮಾಜವಾದಿ ಕ್ರಾಂತಿಯ ಪರಿಣಾಮವಾಗಿ ಸ್ಥಾಪನೆಯಾಗುವ ಕಾರ್ಮಿಕ ವರ್ಗದ ಆಡಳಿತ. ಇದು ಅತ್ಯಗತ್ಯವಾಗಿರುವುದರಿಂದ ಬಂಡವಾಳಶಾಹಿ ವ್ಯವಸ್ಥೆಯಿಂದ ಸಮಾಜ ವಾದಕ್ಕೆ ಪರಿವರ್ತನೆಯಾಗುವ ಇಡೀ ಕಾಲಾವಧಿಯುದ್ದಕ್ಕೂ ಅದನ್ನು ಉಳಿಸಿಕೊಳ್ಳಬೇಕಾಗುವುದು.

didactic analysis: ಬೋಧನಾತ್ಮಕ ವಿಶ್ಲೇಷಣೆ.

didactic group therapy: ಸಮೂಹ ಬೋಧನಾ ಚಿಕಿತ್ಸೆ; ಸಾಮೂಹಿಕ ಬೋಧನಾ ಚಿಕಿತ್ಸೆ.

diety: ದೇವತೆ.

different net price: ವಿಭಿನ್ನ ನಿವ್ವಳ ಬೆಲೆ.

differentia: ವಿಶೇಷ ಲಕ್ಷಣ; ಜೀವಿ ವಂಶಗಳ ವಿಷಯದಲ್ಲಿ ಕಂಡುಬರುವ ನಿರ್ಣಾಯಕ ವಿಶೇಷಣ.

differential aspiration: ವ್ಯತ್ಯಸ್ಥ ಆಕಾಂಕ್ಷೆ. ಒಂದು ಗುಂಪು ಅಥವಾ ಸಮಾಜದ ವಿವಿಧ ಜನರು ಉನ್ನತ ಸ್ಥಾನ ಮಾನಗಳಿಗಾಗಿ ಅಸಮಾನ ಪ್ರಯತ್ನಗಳನ್ನು ಮಾಡುವುದು.

differential association: ಪ್ರಭೇದಾತ್ಮಕ ಸಹವಾಸ. ಮೂಲ ಕೌಟುಂಬಿಕ, ಸಾಮಾಜಿಕ ಪರಿಸರಕ್ಕಿಂತ ಭಿನ್ನವಾದ ಅಪರಾಧೀ ನಡತೆಗಳುಳ್ಳ ಸಾಹಚರ್ಯ.

differential association theory of crime: ಅಪರಾಧದ ಭೇದಾತ್ಮಕ ಸಹವಾಸ ಸಿದ್ಧಾಂತ. ಇದರ ಪ್ರಕಾರ ಅಪರಾಧಿ ಪ್ರವೃತ್ತಿಯು ವ್ಯಕ್ತಿಯ ಗುಣಲಕ್ಷಣಗಳಿಂದ ಅಥವಾ ಜೈವಿಕ ಸಂತತಿಯಿಂದ ಬಂದುದಲ್ಲ. ಬದಲಾಗಿ ಈ ಪ್ರವೃತ್ತಿಯು ಸಾಮಾಜಿಕ ಅಂತರಕ್ರಿಯೆಯಿಂದ ವ್ಯಕ್ತಿಯು ಕಲಿತ ವರ್ತನೆಯಾಗಿದೆ.

differential fertility: ವಿಭೇದಾತ್ಮಕ ಸಂತಾನಶಕ್ತಿ. ಭಿನ್ನಜನಾಂಗಗಳ ಸ್ತ್ರೀಯರ ಸಂತಾನಶಕ್ತಿಯು ಬೇರೆಬೇರೆಯಾಗಿರುವಿಕೆ. ಹವಾಗುಣ, ಪರಿಸರ, ವಿದ್ಯಾಭ್ಯಾಸ ಮುಂತಾದವುಗಳಿಂದಾಗಿ ಮಹಿಳೆಯರ ಸಂತಾನಶಕ್ತಿಯಲ್ಲಿ ಕಂಡುಬರುವ ವ್ಯತ್ಯಾಸ.

differential forgetting: ಭೇದಾತ್ಮಕ ಮರೆವು.

differential method: ಭೇದಾತ್ಮಕ ಪದ್ಧತಿ.

differential opportunity structure: ಭೇದಾತ್ಮಕ ಅವಕಾಶ ರಚನೆ.

differential psychology: ವಿಭೇದಾತ್ಮಕ ಮನೋವಿಜ್ಞಾನ.

differential rent: ಭೇದಾತ್ಮಕ ಗೇಣಿ; ವ್ಯತ್ಯಾಸಾತ್ಮಕ ಗೇಣಿ. ಭೂಮಿಯ ಫಲವತ್ತತೆ, ಶ್ರಮದ ಅವಶ್ಯಕತೆ ಹಾಗೂ ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳಿಂದಾಗಿ ವ್ಯತ್ಯಾಸಾತ್ಮಕವಾಗಿ ನಿರ್ಧರಿಸಲ್ಪಡುವ ಗೇಣಿ.

differential response: ವಿಭೇದಾತ್ಮಕ ಪ್ರತಿಕ್ರಿಯೆ.

differential satisfaction: ಭಿನ್ನ ಸಂತೃಪ್ತಿ; ವ್ಯತ್ಯಾಸಾತ್ಮಕ ತೃಪ್ತಿ.

differential scale: ವಿಭೇದಾತ್ಮಕ ಮಾಪಕ.

differential surplus: ವ್ಯತ್ಯಾಸಾತ್ಮಕ ಮಿಗತೆ; ವ್ಯತ್ಯಾಸಾತ್ಮಕ ಆಧಿಕ್ಯ.

differential taste: ಪ್ರಭೇದೀಯ ಅಭಿರುಚಿ; ವಿಭಿನ್ನ ಅಭಿರುಚಿ.

differential voting: ವ್ಯತ್ಯಾಸಾತ್ಮಕ ಮತದಾನ.

differentiated oligopoly: ಪ್ರಭೇದಿತ ಬಹುಜನಸ್ವಾಮ್ಯ.

diffraction technique: ವಿವರ್ತನ ತಂತ್ರ.

diffused response: ಚದುರಿದ ಪ್ರತಿಕ್ರಿಯೆ. ಸ್ಪಷ್ಟವಾಗಿ ಪ್ರಕಟಗೊಳ್ಳದ ದುರ್ಬಲ ಪ್ರತಿಕ್ರಿಯೆ.

diffused sanction: ದುರ್ಬಲ ನಿರ್ಬಂಧ. ಸಾಮಾಜಿಕ ನಿಯಮಗಳ ದುರ್ಬಲ ಜಾರಿಯಿಂದಾಗಿ ಒಬ್ಬ ವ್ಯಕ್ತಿಯು ಅಪಮಾರ್ಗವನ್ನು ಅಂಗೀಕರಿಸುವುದು.

diffuseness-specificity: ಪ್ರಸರಣತೆ-ನಿರ್ದಿಷ್ಟತೆ. ನೋಡಿ: pattern variable.

diffusion: ಪ್ರಸರಣ. ಸಂಸ್ಕೃತಿಯ ಗುಣ

ಲಕ್ಷಣಗಳು ಒಂದು ಸಮಾಜದಿಂದ ಇನ್ನೊಂದು ಸಮಾಜಕ್ಕೆ ಪ್ರಸರಿಸುವ ಕ್ರಿಯೆ.

diffusion map: ಪ್ರಸರಣ ನಕಾಶೆ.

diffusion of tale: ಕಥೆಯ ಪ್ರಸರಣ.

diffusion theory: ಪ್ರಸರಣ ಸಿದ್ಧಾಂತ.

diffusionism: ಪ್ರಸರಣವಾದ. ಮಾನವ ಸಂಸ್ಕೃತಿಯ ಬೆಳವಣಿಗೆಯಲ್ಲಿ ಪ್ರಸರಣದ ಪ್ರಾಮುಖ್ಯತೆಯನ್ನು ಪ್ರತಿಪಾದಿಸುವ ಮಾನವ ಶಾಸ್ತ್ರೀಯ ಸಿದ್ಧಾಂತ.

dignity of labour: ಶ್ರಮಗೌರವ.

dilatory motion: ವಿಳಂಬಕಾರಿ ಮಸೂದೆ.

dimentions of personality: ವ್ಯಕ್ತಿತ್ವದ ಆಯಾಮಗಳು.

diminishing marginal rate: ಇಳಿಮುಖ ಸೀಮಾಂತ ದರ.

diminishing marginal rate of substitution: ಇಳಿಮುಖ ಸೀಮಾಂತ ಪ್ರತಿನಿದಾನ ದರ.

diminishing marginal utility: ಇಳಿಮುಖ ಸೀಮಾಂತ ತುಷ್ಟಿಗುಣ.

diminishing returns: ಇಳಿಮುಖ ಪ್ರತಿಫಲ. ಒಂದು ನಿರ್ದಿಷ್ಟ ಹಿಡುವಳಿಯಲ್ಲಿ ಶ್ರಮ ಮತ್ತು ಬಂಡವಾಳ ಪ್ರಮಾಣವನ್ನು ಹೆಚ್ಚಿಸುತ್ತಾ ಹೋದಂತೆ ಕೃಷಿ ಉತ್ಪನ್ನವು ಇಳಿಮುಖ ಪ್ರಮಾಣದಲ್ಲಿ ಹೆಚ್ಚಾಗುತ್ತಾ ಹೋಗುತ್ತದೆ.

dionysian culture: ಡಯೋನೀಶಿಯನ್ ಸಂಸ್ಕೃತಿ. ಭಾವೋನ್ಮಾದ, ಮಿತಿ ಮೀರಿದ ವರ್ತನೆ, ಸ್ಪರ್ಧಾತ್ಮಕ ಮನೋಭಾವ, ಅತಿಯಾದ ವೈಯಕ್ತಿಕತೆ ಹಾಗೂ ಪ್ರತಿಷ್ಠೆಯ ಆಕಾಂಕ್ಷೆಗಳಿರುವ ಸಂಸ್ಕೃತಿ. ಇದಕ್ಕೆ ಪ್ರತಿಯಾಗಿ ನೋಡಿ: appollonian culture.

diplomacy: ರಾಯಭಾರ. ಒಂದು ಸರಕಾರದ ನೀತಿಯನ್ನು ಅನ್ಯಸರಕಾರಗಳಿಗೆ ತಿಳಿಸಿ ಮನವರಿಕೆ ಮಾಡುವ ಮೂಲಕ ಅಂತಾರಾಷ್ಟ್ರೀಯ ಸ್ನೇಹ ಸಂಪಾದನೆ.

diplomat: ರಾಯಭಾರಿ.

diplomatic immunity: ರಾಯಭಾರಿ ವಿನಾಯಿತಿ. ರಾಯಭಾರಿಗಳು ತಾವು ಕೆಲಸ ಮಾಡುತ್ತಿರುವ ರಾಷ್ಟ್ರದ ಕಾಯಿದೆಯ ವ್ಯಾಪ್ತಿಯ ಹೊರಗೆ ಇರುವುದು. ಉದಾ: ತೆರಿಗೆಯಿಂದ ವಿನಾಯಿತಿ ಪಡೆಯುವುದು.

diplomatic mission: ರಾಜತಾಂತ್ರಿಕ ನಿಯೋಗ.

dipsomania: ಮದ್ಯೋನ್ಮಾದ; ಮದಿರೋನ್ಮಾದ. ಮದ್ಯಪಾನದ ತೀವ್ರ ಆಕಾಂಕ್ಷೆ ಮತ್ತು ಚಪಲತೆ. ಇದು ಎಂದಾದರೊಮ್ಮೆ ಉಂಟಾಗಿ ಕೆಲಕಾಲದ ಮೇಲೆ ಕಡಿಮೆಯಾಗುತ್ತದೆ. ಉನ್ಮಾದ, ವಿಷಾದ ಮನೋವಿಕೃತಿಯೊಡನೆ ಬರುವುದುಂಟು. ಕುಡಿತದ ಚಟದಿಂದ ಬೇರೆಯಾಗಿ ಇದನ್ನು ಪರಿಗಣಿಸಬೇಕು.

direct action: ಪ್ರತ್ಯಕ್ಷ ಕ್ರಿಯೆ. ಮುಷ್ಕರ, ಹಿಂಸೆ ಮುಂತಾದ ಅರಾಜಕೀಯ ಕ್ರಮಗಳಿಗೆ ಅವಲಂಬಿಸಿ ರಾಜಕಿಯ, ಸಾಮಾಜಿಕ, ಆರ್ಥಿಕ ಬದಲಾವಣೆಯನ್ನು ಈಡೇರಿಸುವಿಕೆ.

direct communication: ನೇರ ಸಂಪರ್ಕ, ಪ್ರತ್ಯಕ್ಷ ಸಂಪರ್ಕ.

direct consumption: ನೇರ ಅನುಭೋಗ. ಯಾವುದೇ ಒಂದು ವಸ್ತು ಅಥವಾ ಸೇವೆಯನ್ನು ನೇರವಾಗಿ ಉಪಯೋಗಿಸಿ

ಅವುಗಳ ನೇರವಾದ ಮತ್ತು ತಕ್ಷಣದ ತೃಪ್ತಿಯನ್ನು ಪಡೆಯಬಹುದಾದಲ್ಲಿ ಅಂತಹವುಗಳ ಉಪಯೋಗಕ್ಕೆ ನೇರ ಅನುಭೋಗ ಎನ್ನಲಾಗುವುದು.

direct control: ನೇರ ನಿಯಂತ್ರಣ.

direct co-operation: ಪ್ರತ್ಯಕ್ಷ ಸಹಕಾರ.

direct correlation: ಪ್ರತ್ಯಕ್ಷ ಸಹ ಸಂಬಂಧ.

direct cost: ನೇರ ವೆಚ್ಚ. ಉತ್ಪನ್ನದ ದರದೊಂದಿಗೆ ನೇರವಾಗಿ ಬದಲಾಗುವ ವೆಚ್ಚ. ಬದಲಾಗಬಲ್ಲ ವೆಚ್ಚವೂ ಈ ಹೆಸರಿನಿಂದ ಕರೆಯಲ್ಪಡುತ್ತದೆ. ನೋಡಿ: vari able cost.

direct dating: ಪ್ರತ್ಯಕ್ಷ ಕಾಲನಿರ್ಧಾರ. ನಿರ್ದಿಷ್ಟ ವಸ್ತುವಿನ ಅಧ್ಯಯನದ ಮೂಲಕ, ವರ್ಷಗಳಲ್ಲಿ ಆ ವಸ್ತುವಿನ ಕಾಲ ಗಣನೆ ಮಾಡುವುದು.

direct demand: ನೇರ ಬೇಡಿಕೆ.

direct democratic devices: ಪ್ರತ್ಯಕ್ಷ ಪ್ರಜಾಪ್ರಭುತ್ವ ಸಾಧನಗಳು. ಪ್ರಜೆಗಳೇ ನೇರವಾಗಿ ಸರಕಾರದ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸುವ ಸಾಧನಗಳು. ಈ ಸಾಧನಗಳ ಮೂಲಕ ಪ್ರಜೆಗಳು ಶಾಸನೀಯ ಕಾರ್ಯದ ಮೇಲೆ ತಮ್ಮದೇ ಆದ ಹತೋಟಿಯನ್ನಿರಿಸಿಕೊಳ್ಳುತ್ತಾರೆ. ಉದಾ: ಸ್ವಿಡ್ಜರ್‌ಲ್ಯಾಂಡ್‌ನಲ್ಲಿರುವ ಪ್ರಜಾನಿರ್ಣಯ, ಪ್ರಜಾನಿರ್ದೇಶನ ಹಾಗೂ ವಾಪಾಸು ಕರೆಸಿಕೊಳ್ಳುವ ಸಾಧನಗಳು.

direct election: ಪ್ರತ್ಯಕ್ಷ ಚುನಾವಣೆ. ಮತದಾರರೇ ನೇರವಾಗಿ ಚುನಾವಣೆಯಲ್ಲಿ ಭಾಗವಹಿಸಿ ಜನರ ಪ್ರತಿನಿಧಿಗಳನ್ನು ಅಥವಾ ರಾಷ್ಟ್ರದ ನಾಯಕರನ್ನು ಆಯ್ಕೆಮಾಡುವ ಚುನಾವಣಾ ಪದ್ಧತಿ.

direct interaction: ಪ್ರತ್ಯಕ್ಷ ಅಂತರ್‌ಕ್ರಿಯೆ.

direct interview method: ನೇರ ಸಂದರ್ಶನ ವಿಧಾನ.

direct investment: ನೇರ ಹೂಡಿಕೆ (ಹೂಟೆ).

direct legislation: ಪ್ರತ್ಯಕ್ಷ ಶಾಸನ; ನೇರ ಶಾಸನ. ಜನಾಭಿಪ್ರಾಯದ ಮೂಲಕವೇ ಶಾಸನವು ಅಂಗೀಕಾರವಾಗುವ ಪದ್ಧತಿ. ಸ್ವಿಡ್ಜರ್‌ಲ್ಯಾಂಡ್‌ನಲ್ಲಿ ಪ್ರಚಲಿತ ವಿರುವ ಇದಕ್ಕೆ ಜನಮತಗಣನೆ ಮತ್ತು ಪ್ರಜಾನಿರ್ದೇಶನ (ನೋಡಿ: referendum) ವಿಧಾನವನ್ನು ಅನುಸರಿಸುತ್ತಾರೆ.

direct observation: ಪ್ರತ್ಯಕ್ಷ ಅವಲೋಕನ; ನೇರ ಅವಲೋಕನ. ಘಟನೆಗಳನ್ನು ಅಥವಾ ಸಂಗತಿಗಳನ್ನು ನೇರವಾಗಿ ಪರೀಕ್ಷಿಸಿ, ಪರಿಶೀಲಿಸಿ ದಾಖಲಿಸುವುದು.

direct productive activity: ನೇರ ಉತ್ಪಾದನಾಕ್ರಿಯೆ; ಪ್ರತ್ಯಕ್ಷ ಉತ್ಪಾದಕ ಚಟುವಟಿಕೆ.

direct recruitment: ನೇರ ನೇಮಕಾತಿ.

direct tax: ನೇರ ತೆರಿಗೆ; ಪ್ರತ್ಯಕ್ಷ ತೆರಿಗೆ.

direct verification: ಪ್ರತ್ಯಕ್ಷ ಪರಿಶೀಲನೆ.

direction: ನಿರ್ದೇಶನ; ನಿರ್ದೇಶ. ಆಡಳಿತ ವ್ಯವಸ್ಥೆಯಲ್ಲಿ ಅಧಿಕಾರಿಗಳು ಹಾಗೂ ನೌಕರರ ವರ್ತನೆಗಳಲ್ಲಿ ಏಕರೂಪತೆ ಸಾಧಿಸಲು ಹಾಗೂ ಆಡಳಿತ ಕಾರ್ಯಗಳನ್ನು ಶಾಸನಬದ್ಧವಾಗಿರಿಸಲು ಮುಖ್ಯ ಕಾರ್ಯ

ನಿರ್ವಾಹಕನು ತನ್ನ ಅಧೀನ ಅಧಿಕಾರಿಗಳು ಹಾಗೂ ನೌಕರರಿಗೆ ಆದೇಶಗಳು, ಸುತ್ತೋಲೆಗಳು, ಪ್ರಕಟಣೆಗಳು, ಸೂಚನೆಗಳು ಮೊದಲಾದವುಗಳ ಮೂಲಕ ನೀಡುವ ನಿರ್ದೇಶನ.

directionary power: ನಿರ್ದೇಶನಾಧಿಕಾರ.

directive planning: ನಿರ್ದೇಶಿತ ಯೋಜನೆ.

directive principles of state policy: ರಾಜ್ಯ ನೀತಿ ನಿರ್ದೇಶಕ ತತ್ವ.

directive therapy: ನಿರ್ದೇಶಾತ್ಮಕ ಚಿಕಿತ್ಸೆ.

director general: ಮಹಾನಿರ್ದೇಶಕ.

dirt archaeology: ಕೊಚ್ಚೆ (ತಿಪ್ಪೆ) ಪ್ರಾಚ್ಯವಸ್ತು ಶೋಧನಾ ಶಾಸ್ತ್ರ. ಉತ್ಖನನದ ಮೂಲಕ ಪ್ರಾಚೀನ ಇತಿಹಾಸದ ಶೋಧನೆ ಹಾಗೂ ಅಧ್ಯಯನ.

disarmament: ನಿಶ್ಯಸ್ತ್ರೀಕರಣ. ಶಸ್ತ್ರಾಸ್ತ್ರ ಸ್ಪರ್ಧೆಯನ್ನು ಕೊನೆಗಾಣಿಸಲು ಪ್ರಬಲ ವಿರೋಧಿ ರಾಷ್ಟ್ರಗಳು ಪರಸ್ಪರ ಒಪ್ಪಂದದ ಮೂಲಕ ಹಲವು ರೀತಿಯ ಅಥವಾ ಎಲ್ಲಾ ರೀತಿಯ ಯುದ್ಧಶಸ್ತ್ರಾಸ್ತ್ರಗಳನ್ನು ನಿರ್ಮೂಲನ ಮಾಡುವ ಅಥವಾ ಮಿತಿಗೊಳಿಸುವ ವಿಧಾನ.

disaster management: ವಿಪತ್ತು ನಿರ್ವಹಣೆ; ಸಂಕಟ ಸ್ಥಿತಿ ನಿರ್ವಹಣೆ.

disaster studies: ವಿಪತ್ತುಗಳ ಅಧ್ಯಯನ; ಸಂಕಟ ಸ್ಥಿತಿ ಅಧ್ಯಯನ. ಆಕಸ್ಮಿಕ ಅನಾಹುತಗಳಾದ ನೆರೆ, ಭೂಕಂಪ, ಚಂಡಮಾರುತ ಇತ್ಯಾದಿಗಳಿಂದ ಸಮುದಾಯ ಜೀವನದ ಮೇಲಾಗುವ ಪರಿಣಾಮಗಳ ಅಧ್ಯಯನ.

disbursement of funds: ನಿಧಿಗಳ ವಿಲೇವಾರಿ. ಸಾರ್ವಜನಿಕ ನಿಧಿಗಳನ್ನು ವಸೂಲಿ ಮಾಡಿ ಅದನ್ನು ವ್ಯವಸ್ಥಿತ ರೀತಿಯಲ್ಲಿ ವಿವಿಧ ಬೇಡಿಕೆಗಳಿಗನುಗುಣವಾಗಿ ವಿಲೇವಾರಿ (ಬಟವಾಡೆ) ಮಾಡುವುದು.

disciplinary action: ಶಿಸ್ತಿನ ಕ್ರಮ. ಆಡಳಿತ ವ್ಯವಸ್ಥೆಯಲ್ಲಿ ದಕ್ಷತೆಯನ್ನು ಕಾಪಾಡಿಕೊಂಡು ಬರಲು ನೌಕರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದು.

disciplinary authority: ಶಿಸ್ತಿನ ಕ್ರಮಾಧಿಕಾರಿ. ಅಗತ್ಯವಿದ್ದಾಗ ಶಿಸ್ತಿನ ಕ್ರಮಕೈಗೊಂಡು ಉದ್ಯೋಗಿಯು ಜವಾಬ್ದಾರಿಯಿಂದ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುವ ಮೇಲಧಿಕಾರಿ.

discontinous diffusion: ಅಸಂತತ ಪ್ರಸರಣ. ಭೌಗೋಳಿಕವಾಗಿ ಬೇರ್ಪಟ್ಟ ಕ್ಷೇತ್ರಗಳಿಗೆ ಸಂಸ್ಕೃತಿಯ ಗುಣಲಕ್ಷಣಗಳ ಅಥವಾ ಸಂಕೀರ್ಣಗಳ ಅವ್ಯವಸ್ಥಿತ ಪ್ರಸರಣ.

discount: ಮುರಿಕೆ; ವಟ್ಟ; ರಿಯಾಯಿತಿ.

discount house: ವಟಾವಣೆ ಗೃಹ; ವಟ್ಟಾ ಅಂಗಡಿ.

discount market: ವಟಾವಣೆ ಮಾರುಕಟ್ಟೆ.

discount rate: ವಟಾವಣೆ ದರ.

discounted bill: ಸೋಡೀಕೃತ ಹುಂಡಿ.

discounted cash flow method: ವಟಾಯಿಸಿದ ನಗದುಹಣ ಪ್ರವಹಿಸುವಿಕೆ ವಿಧಾನ.

discounted productivity theory of

wage: ಸೀಮಾಂತ ಉತ್ಪಾದಕತೆಯ ಕೂಲಿ ಸಿದ್ಧಾಂತ.

discounting principle: ವಟಾವ ಣೆಯ ತತ್ವ.

discourse: ೧. ಸಂವಾದ. ಮಾತುಕತೆ ಹಾಗೂ ಚರ್ಚೆಯ ಮೂಲಕ ಯೋಚನೆ ಮತ್ತು ಮಾಹಿತಿಗಳ ವಿನಿಮಯ. ೨. ಉಪನ್ಯಾಸ. ಒಂದು ನಿರ್ದಿಷ್ಟ ವಿಷಯದ ಬಗ್ಗೆ ಭಾಷಣ.

discretion: ವಿವೇಚನೆ.

discretionary power: ವಿವೇಚನಾ ಅಧಿಕಾರ. ಆಡಳಿತಾಧಿಕಾರಿಗಳು ಅಥವಾ ಕಾರ್ಯನಿರ್ವಾಹಕರು ಸ್ವಂತ ವಿವೇಚನೆಯಿಂದ ಚಲಾಯಿಸುವ ಅಧಿಕಾರ.

discriminating duty: ತಾರತಮ್ಯದ ಸುಂಕ.

discriminating market: ತಾರತ ಮ್ಯದ ಮಾರುಕಟ್ಟೆ.

discriminating monopoly: ತಾರತಮ್ಯದ ಏಕಸ್ವಾಮ್ಯ. ತನ್ನ ಉತ್ಪನ್ನಗಳ ವಿವಿಧ ಘಟಕಗಳಿಗೆ ವಿಭಿನ್ನ ಮಾರುಕಟ್ಟೆಗಳಲ್ಲಿ ಬೇರೆ ಬೇರೆ ವರ್ಗದ ಗ್ರಾಹಕರಿಗೆ ವ್ಯತ್ಯಸ್ಥ (ಬೇರೆ ಬೇರೆ) ಬೆಲೆಯನ್ನು ವಿಧಿಸಲು ಸಾಧ್ಯವಾಗುವಂತಹ ಏಕಸ್ವಾಮ್ಯ **discriminating pricing:** ತಾರತಮ್ಯದ ಬೆಲೆ ವಿಧಿಸುವಿಕೆ.

discrimination: ಪಕ್ಷಪಾತ; ತಾರ ತಮ್ಯ.

discriminatory interest rate: ತಾರತಮ್ಯದ ಬಡ್ಡಿದರ.

discriminatory tariff: ತಾರತಮ್ಯದ ಸುಂಕ; ಭೇದಕ ತೆರಿಗೆ.

discriminatory tax policy: ತಾರತಮ್ಯದ ತೆರಿಗೆ ನೀತಿ.

discursive thought: ತರ್ಕಬುದ್ಧಿ; ತಾರ್ಕಿಕ ಚಿಂತನೆ.

diseconomies of management: ಆಡಳಿತದ ಅಪವ್ಯಯಗಳು. ಉದ್ಯಮಗಳ ವಿಸ್ತರಣೆಯ ಪ್ರಕ್ರಿಯೆಯಲ್ಲಿ ಆಡಳಿತ ಮತ್ತು ವ್ಯವಸ್ಥಾಪನಾ ಸಮಸ್ಯೆಗಳು ಜಟಿಲವಾಗಿ ಉಂಟಾಗುವ ಸರಾಸರಿ ವೆಚ್ಚಗಳ ಆಧಿಕ್ಯ.

disengagement theory: ವಿಯೋಜನಾ ಸಿದ್ಧಾಂತ.

disentitle: ಪದ ವಿಮುಕ್ತಿಗೊಳಿಸು.

disfranchisement: ಮತದಾನ ಅಧಿಕಾರ ರದ್ಧತಿ. ಪೌರರಿಗೆ ಕೊಡಲ್ಪಟ್ಟಿರುವ ಮತದಾನದ ಹಕ್ಕನ್ನು ರದ್ದುಪಡಿಸುವುದು. ಉದಾ: ಅಪರಾಧಿಗಳು, ದಿವಾಳಿಗಳು, ಮತಿಭ್ರಮಣೆಯಾದವರು ಮುಂತಾದವರಿಗೆ ಮತದಾನದ ಅಧಿಕಾರ ಕೊಡಲಾಗುವುದಿಲ್ಲ.

disguised motive: ಬಚ್ಚಿಟ್ಟ ಅಂತರ್ಭಾವ.

dishallucination: ಭ್ರಾಂತಿ ವಿಮೋ ಚನೆ; ಮರಳು ಬಿಡಿಸುವುದು.

disillusion: ಭ್ರಾಂತಿ ನಿವಾರಣೆ; ಭ್ರಮನಿರಸನ. ತಪ್ಪು ತಿಳುವಳಿಕೆ ಕಳೆಯುವಿಕೆ.

disinflation : ಹಣದುಬ್ಬರದ ಇಳಿತ.

disinhibition: ಸಡಿಲ ವರ್ತನೆ. ಆಂತರಿಕ ನಿರ್ಬಂಧಗಳ ಸಡಿಲಿಕೆ. ಮನೋರೋಗಗಳಲ್ಲಿ ಮತ್ತು ಅಮಲಿನ (ಮತ್ತೇರಿದ) ಸ್ಥಿತಿಗಳಲ್ಲಿ ಕಾಣಿಸಿಕೊಳ್ಳುವ ವಿವೇಕರಹಿತ ಸಡಿಲವರ್ತನೆ.

disintegrated personality: ವಿಘಟಿತ ವ್ಯಕ್ತಿತ್ವ.

disintegration: ವಿಭಜನೆ; ವಿಘಟನೆ.

disinvestment: ಹೂಟಿಯಿಂದ ಹಿಂತೆಗೆದ ಹಣ.

disjunctive group: ವಿಯೋಜಕ ಸಮೂಹ.

disjunctive reasoning: ವಿಯೋಜಕ ವಿವೇಚನೆ.

disorder of mental function: ಮಾನಸಿಕ ಕ್ರಿಯಾ ವಿಕೃತಿ; ಮನೋವ್ಯಾಪಾರ ವಿಕಾರ.

disorganization : ವಿಸಂಘಟನೆ.

disorganized memory: ಅವ್ಯವಸ್ಥಿತ ಸ್ಮರಣೆ; ವಿಸಂಘಟಿತ ಸ್ಮೃತಿ.

disorientation: ಕಾಲ-ದೇಶ ಪ್ರಜ್ಞಾಹೀನತೆ; ನೆಲೆ ಪರಿಜ್ಞಾನದ ಅಭಾವ. ಕಾಲ, ಸ್ಥಳ ಮತ್ತು ವ್ಯಕ್ತಿಪ್ರಜ್ಞೆಯ ತೊಂದರೆ ಕಾಣುವ ಮನೋರೋಗ.

dispersed constitution: ವಿಕಿರಣ ಸಂವಿಧಾನ. ಇದು ಅಲಿಖಿತ ಸಂವಿಧಾನಕ್ಕೆ ಅನ್ವಯಿಸುತ್ತದೆ. ಕಾಲಾನುಕ್ರಮದಲ್ಲಿ ತನಗೆ ತಾನೇ ರೂಪುಗೊಳ್ಳುವ ನಿಯಮಾವಳಿಗಳಲ್ಲಿ ವಿಚಾರಗಳು ಚದುರಿರುವ ಪದ್ಧತಿಗೆ ವಿಕಿರಣ ಸಂವಿಧಾನ ಎನ್ನಲಾಗುತ್ತದೆ.

dispersed settlement: ಚದುರಿದ ವಾಸಸ್ಥಳ. ವಾಸದ ಮನೆಗಳು ಅವರವರ ಖಾಸಗಿ ಆಸ್ತಿಗಳಲ್ಲಿ ರಚಿಸಲ್ಪಟ್ಟು, ದೂರ ದೂರ ಇರುವ ವಸತಿ ವ್ಯವಸ್ಥೆ.

dispersion: ಚದುರುವಿಕೆ.

displaced aggression: ಸ್ಥಾನಾಂತರಗೊಂಡ ಆಕ್ರಮಣ. ವ್ಯಕ್ತಿಯ ನಿರಾಶೆಯ ಮೂಲ ಗೊತ್ತಿಲ್ಲದಿದ್ದಾಗ, ಭಯಕಾರಿಯಾಗಿದ್ದಾಗ ಅಥವಾ ಕೈಗೆಟುಕದಿದ್ದಾಗ ಉದ್ದೇಶಿತ ವ್ಯಕ್ತಿಯನ್ನು ಬಿಟ್ಟು ಬದಲಾದ ಗುರಿಯ ಅಥವಾ ವ್ಯಕ್ತಿಯ ಮೇಲೆ ಕೋಪ ತೀರಿಸಿಕೊಳ್ಳುವುದು. ಉದಾ: ಗಂಡನ ಮೇಲಿನ ಸಿಟ್ಟಿಗೆ ಮಕ್ಕಳ ಮೇಲೆ ಪ್ರಹಾರ.

disposable income: ವೆಚ್ಚಯೋಗ್ಯ ಆದಾಯ. ಒಟ್ಟು ವರಮಾನದಿಂದ ವ್ಯಕ್ತಿಗತ ತೆರಿಗೆಗಳನ್ನು ಕಳೆದು ಉಳಿಯುವ ಆದಾಯ. ಇದನ್ನು ವ್ಯಕ್ತಿಯು ಹೊಸ ಉದ್ಯಮ, ಸಾಲ ಪತ್ರಗಳು ಹಾಗೂ ಇನ್ನಿತರ ಅನುಭೋಗಿ ಉದ್ದೇಶಗಳಿಗೆ ವ್ಯಯಿಸಬಹುದಾಗಿದೆ.

disposal of the dead: ಶವ ಸಂಸ್ಕಾರ. ಶವ ದಹನ, ಶವವನ್ನು ಹೂಳುವುದು, ಶವವನ್ನು ಪಕ್ಷಿಗಳ ಭಕ್ಷಣೆಗಾಗಿ ಎತ್ತರದಲ್ಲಿಡುವುದು, ಪ್ರಾಣ ಹೋದ ಸ್ಥಳದಲ್ಲಿ ಶವವನ್ನು ಬಿಡುವುದು ಮುಂತಾದ ಪದ್ಧತಿಗಳು.

disposition: ಪ್ರವೃತ್ತಿ.

disproportion: ಅಸಮತೆ.

disproportionate stratified sample: ಅಸಮ ವಿಭಜಿತ ಮಾದರಿ; ಅಪ್ರಮಾಣಾನುಗುಣವಾದ ಸ್ತರಭೇದ ಮಾದರಿ.

disputed bill: ವಿವಾದಾತ್ಮಕ ಮಸೂದೆ.

dissavings: ಉಳಿತಾಯರಾಹಿತ್ಯ. ಆದಾಯಕ್ಕಿಂತ ಅನುಭೋಗವು ಹೆಚ್ಚಾಗಿ ಸೊತ್ತುಗಳನ್ನು ಮಾರುವುದರ ಮೂಲಕ ಹಣಕಾಸು ಹೊಂದಾಣಿಸುವ ಸ್ಥಿತಿ.

dissension: ಭಿನ್ನಾಭಿಪ್ರಾಯ.

dissenting judgement: ಭಿನ್ನಾಭಿಪ್ರಾಯದ ತೀರ್ಪು.

dissertation: ಪ್ರೌಢ ಪ್ರಬಂಧ

dissidents: ಭಿನ್ನಮತೀಯರು.ಅಧಿಕೃತ ಅಭಿಪ್ರಾಯವನ್ನು ಒಪ್ಪದೆ ಬೇರೆ ಅಭಿಪ್ರಾಯಗಳನ್ನು ಹೊಂದಿರುವ ವ್ಯಕ್ತಿಗಳು.

dissimilarity: ಭಿನ್ನತೆ; ವಿಷಣ್ಣತೆ.

dissociability: ವಿಸಾಂಘಿಕತೆ; ಅಸಾಮಾಜಿಕತೆ; ಸಹವಾಸಹೀನತೆ.

dissociative disorder: ವಿಯೋಜಿತ ವಿಕಾರ.

dissociated personality: ವಿಯೋಗಿ ವ್ಯಕ್ತಿತ್ವ; ಅನೈಕ್ಯ ವ್ಯಕ್ತಿತ್ವ.

dissolution: ವಿಸರ್ಜನೆ; ಕಾರ್ಯಸ್ಥಗಿತತೆ. ಉದಾ: ಶಾಸನಸಭೆ ಅಥವಾ ಕಾನೂನುಬದ್ಧ ಘಟಕಗಳ ವಿಸರ್ಜನೆ.

dissolution of marriage: ವಿವಾಹ ಬಂಧನದ ಪರಿಸಮಾಪ್ತಿ. ನೋಡಿ: divorce.

distinctive feature analysis: ವಿಶಿಷ್ಟಾಂಶ ವಿಶ್ಲೇಷಣೆ.

distinctive feature principle: ವಿಶಿಷ್ಟಾಂಶ ತತ್ವ.

distraction: ಚಿತ್ತ ಭ್ರಮಣೆ; ವ್ಯಗ್ರತೆ; ಗೊಂದಲ; ಚಿತ್ತಭ್ರಂಶ.

distress: ಬೇಗುದಿ; ಸಂಕಟ; ಅಪಾಯ ಸ್ಥಿತಿ; ಇಕ್ಕಟ್ಟು.

distressed area: ಸಂತ್ರಸ್ತ ಪ್ರದೇಶ.

distribution: ಹಂಚಿಕೆ; ವಿತರಣೆ.

distribution control: ವಿತರಣಾ ಹತೋಟಿ.

distribution of attention: ಅವಧಾನದ ವಿತರಣೆ.

distributionist school: ವಿತರಣಾತ್ಮಕ ಪಂಥ.

distributive justice: ವಿತರಣಾ ನ್ಯಾಯ; ಹಂಚಿಕೆಯ ನ್ಯಾಯ.

distributive system: ಹಂಚಿಕೆಯ ವ್ಯವಸ್ಥೆ.

distributor's discount: ವಿತರಕರ ರಿಯಾಯಿತಿ.

district council: ಜಿಲ್ಲಾಪರಿಷತ್ತು. ಜಿಲ್ಲಾ ಸಮಿತಿ.

district court: ಜಿಲ್ಲಾ ನ್ಯಾಯಾಲಯ.

disturbance of mind: ಮನಸ್ಸಿನ ಸಂಕ್ಷೋಭೆ; ಚಿತ್ತಕ್ಷೋಭೆ.

disutility: ತುಷ್ಟಿಗುಣಹೀನತೆ.

divergence of mental state: ಮಾನಸಿಕ ಸ್ಥಿತಿಗಳ ಅವಸರಣ.

divergent: ಕೇಂದ್ರ ವಿಚಲಿತ.

divergent evolution: ವೈವಿಧ್ಯಮಯ ವಿಕಾಸ. ಮೂಲ ಸಾಮಾನ್ಯರೂಪಕ್ಕೆ ಅನೇಕ ಆಯಾಮಗಳ ಬದಲಾವಣೆಗಳನ್ನು ತರುವ ವಿಕಾಸಕಾರಕ ಬೆಳವಣಿಗೆ.

diversification of employment: ಉದ್ಯೋಗದ ವೈವಿಧ್ಯ; ಉದ್ಯೋಗ ವೈವಿಧ್ಯ. ನೋಡಿ: specialization.

diversification of export: ರಫ್ತು ವೈವಿಧ್ಯ; ನಿರ್ಯಾತದ ವೈವಿಧ್ಯ.

diversion of attention: ಅವಧಾನ ಚಲನೆ.

diversity of emotional qualities: ಸಂವೇಗ ಗುಣಗಳ ವೈವಿಧ್ಯತೆ.

diversity of sensation: ಸಂವೇದನಾ ವೈವಿಧ್ಯ.

divide and rule policy: ಒಡೆದು ಆಳುವ

ನೀತಿ. ಸರಕಾರ ಅಥವಾ ಆಡಳಿತ ಶಾಹಿಯು ತನ್ನ ಸ್ವಂತ ಹಿತರಕ್ಷಣೆಗಾಗಿ ಎದುರಾಳಿ ಶಕ್ತಿಗಳನ್ನು ವಿಭಜಿಸಿ ಅವು ಒಂದುಗೂಡದಂತೆ ಹಾಗೂ ಅವುಗಳ ನಡುವಿನ ವಿರೋಧ ಭಾವನೆ ನಿರಂತರವಾಗುವಂತೆ ಮಾಡುವುದು. ಉದಾ: ಬ್ರಿಟಿಷರು ಭಾರತದಲ್ಲಿ ತಮ್ಮ ಅಧಿಕಾರವನ್ನು ಗಟ್ಟಿಗೊಳಿಸಲು ಮುಸ್ಲಿಂ ಮತ್ತು ಹಿಂದೂ ಸಮುದಾಯಗಳನ್ನು ಭಾವನಾತ್ಮಕವಾಗಿ ವಿಭಜಿಸಿ ಏಕತೆಯನ್ನು ಭಂಗ ಪಡಿಸಿದರು.

divided bar graph: ವಿಭಾಗಿತ ಕಂಬಿ ರೇಖಾಚಿತ್ರ.

divided personality: ವಿಭಕ್ತ ವ್ಯಕ್ತಿತ್ವ.

divided self: ವಿಭಕ್ತ ಆತ್ಮ; ವಿಭಜಿತ ವ್ಯಕ್ತಿತ್ವ.

dividend: ಲಾಭಾಂಶ. ಒಂದು ಕಂಪೆನಿಯ ಷೇರುದಾರರು ಆ ಕಂಪೆನಿಯಲ್ಲಿ ಹೊಂದಿರುವ ಷೇರುಗಳಿಗನುಗುಣವಾಗಿ ಅವರಿಗೆ ನೀಡುವ ಕಂಪೆನಿ ಗಳಿಸಿದ ಲಾಭಾಂಶ.

divination: ಭವಿಷ್ಯ ಜ್ಞಾನ. ಕಣಿ ಹೇಳುವಿಕೆ.

divine grace : ಭಗವದ್‌ಕೃಪೆ; ದೈವ ಕಾರುಣ್ಯ.

divine inspiration: ದೈವ ಸ್ಫೂರ್ತಿ.

divine law: ದೈವೀ ನಿಯಮ.

divine origin theory: ದೈವಿಕ ಮೂಲ ಸಿದ್ಧಾಂತ. ರಾಜ್ಯದ ಉಗಮವು ದೇವರಿಂದಾಗಿದೆ ಹಾಗೂ ರಾಜನು ದೇವರ ಪ್ರತಿನಿಧಿ ಎಂಬ ಸಿದ್ಧಾಂತ.

divine reason: ದೈವಿಕ ವಿವೇಚನೆ.

divine right: ದೈವದತ್ತ ಹಕ್ಕು.

divine right theory: ದೈವಿಕ ಅಧಿಕಾರ ಸಿದ್ಧಾಂತ.

divine theory: ನೋಡಿ: divine origin theory.

division of attention: ಅವಧಾನ ವಿಭಜನೆ.

division of labour: ಶ್ರಮ ವಿಭಜನೆ.

division of power: ಅಧಿಕಾರದ ಹಂಚಿಕೆ. ಸರಕಾರದ ಅಧಿಕಾರವು ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳಲ್ಲಿ ಹಂಚಿರುವ ಪದ್ಧತಿ.

division of work: ಕಾರ್ಯವಿಭಜನೆ.

divorce: ವಿವಾಹ ವಿಚ್ಛೇದನ. ನೋಡಿ: absolute divorce.

diwan: ದಿವಾನ. ರಾಜ್ಯದ (ಪ್ರಾಂತ್ಯದ) ವಿತ್ತಮಂತ್ರಿ.

dizzy sensation: ತಲೆ ಸುತ್ತುವ ಸಂವೇದನೆ.

doab: ಎರಡು ನದಿಗಳ ನಡುವಿನ ಪ್ರದೇಶ.

docile disposition: ಸಾಧು ಪ್ರವೃತ್ತಿ; ಮೃದು ಮನೋಭಾವ.

dock receipt: ಹಡಗುಕಟ್ಟೆ ಸಂದಾಯ.

doctrine: ಸಿದ್ಧಾಂತ; ಬೋಧನೆ.

doctrine of aggrendisement: ಪ್ರಸರಣಾತ್ಮಕ ತತ್ವ. ೧. ರಾಷ್ಟ್ರವು ಬೆಳವಣಿಗೆ ಹಾಗೂ ವಿಸ್ತಾರ ಹೊಂದುತ್ತದೆಂಬ ತತ್ವ. ೨. ರಾಜ್ಯವು ವಿಸ್ತಾರವನ್ನು ಮತ್ತು ಪ್ರಸರಣವನ್ನು ಹೊಂದಬೇಕು ಎಂಬ ಮೆಕೈವಲಿಯ ಚಿಂತನ.

doctrine of classification: ವರ್ಗೀಕರಣ ತತ್ವ.

doctrine of error of law: ವಿಧಿ ಸಂಬಂಧವಾದ ತಪ್ಪಿನ ತತ್ವ. ನ್ಯಾಯಾಲಯಗಳು ಈ ಸಿದ್ಧಾಂತದ ಅನ್ವಯಿಕೆಯ ಮೂಲಕ ಆಡಳಿತ ನ್ಯಾಯಾಧಿಕರಣಗಳ ನ್ಯಾಯ ನಿರ್ಣಯವನ್ನು ನಿಯಂತ್ರಿಸುತ್ತವೆ.

doctrine of fair hearing: ನ್ಯಾಯಯುತ ವಿಚಾರಣೆಯ ತತ್ವ.

doctrine of implied powers: ನಿಹಿತಾಧಿಕಾರಗಳ ತತ್ವ. ಶ್ರೇಷ್ಠ ನ್ಯಾಯಾಲಯವು ಸಂವಿಧಾನದ ಕಾಯಿದೆಗಳಿಗೆ ಸರಿಯಾದ ಅರ್ಥವಿವರಣೆ ಕೊಡುವ ಸಂದರ್ಭದಲ್ಲಿ ಅನುಸರಿಸಬೇಕಾದ ನಿಯಮಾಚರಣೆ.

doctrine of lapse: ದತ್ತು ಪುತ್ರಾಧಿಕಾರ ರದ್ದತಿ ತತ್ವ. ದತ್ತು ಮಕ್ಕಳಿಗೆ ಸಿಂಹಾಸನದ ಹಕ್ಕಿಲ್ಲವೆಂಬ ಸಿದ್ಧಾಂತ. ಲಾರ್ಡ್‌ಡಾಲ್‌ಹೌಸಿಯು ಮಕ್ಕಳಿಲ್ಲದ ಅರಸರುಗಳ ರಾಜ್ಯವನ್ನು ಬ್ರಿಟಿಷ್ ಪ್ರಭುತ್ವಕ್ಕೆ ಒಳಪಡಿಸಲು ಇದನ್ನು ಅನುಷ್ಠಾನಕ್ಕೆ ತಂದನು.

doctrine of natural law: ನಿಸರ್ಗ ನಿಯಮದ ತತ್ವ.

doctrine of trusteeship: ಸಾರ್ವಜನಿಕ ದತ್ತಿತತ್ವ; ಸಾರ್ವಜನಿಕ ಧರ್ಮ ದರ್ಶಿತ್ವ.

doctrine of ultra vires: ಸಂವಿಧಾನ ಬಾಹಿರತ್ವ. ಶಾಸಕಾಂಗದ ಶಾಸನ ರಚನಾ ಕಾರ್ಯವನ್ನು ಸಂವಿಧಾನದ ಪರಿಮಿತಿಗೆ ಸೀಮಿತಗೊಳಿಸುವುದರ ಮೂಲಕ ಶಾಸಕಾಂಗದ ಅಧಿಕಾರ ವ್ಯಾಪ್ತಿಯನ್ನು ನಿಯಂತ್ರಿಸುವುದು. ಉದಾ: ರಾಷ್ಟ್ರದ ಶಾಸಕಾಂಗವು ಸಂವಿಧಾನದ ತತ್ವಗಳಿಗೆ ವಿರುದ್ಧವಾಗಿ ಶಾಸನಗಳನ್ನು ರಚಿಸಿದರೆ ಅಥವಾ ಶಾಸನಗಳು ಸಂವಿಧಾನದ ತತ್ವಗಳಿಗನುಸಾರ ಇಲ್ಲದಿದ್ದರೆ ಅದನ್ನು ರಾಷ್ಟ್ರದ ನ್ಯಾಯಾಲಯವು ಸಂವಿಧಾನ ಬಾಹಿರ ಎಂದು ಘೋಷಿಸುತ್ತದೆ.

doctrinnaire: ಸಿದ್ಧಾಂತನಿಷ್ಠ; ಶುಷ್ಕ ತತ್ವಜ್ಞ. ಪರಿಸ್ಥಿತಿಯನ್ನು ಪರಿಗಣಿಸದೆ ತತ್ವ ವಿಚಾರಗಳನ್ನು ಪ್ರಯೋಗಿಸುವವನು.

document: ದಾಖಲೆ ಪತ್ರ.

documentaries: ಸಾಕ್ಷ್ಯಚಿತ್ರಗಳು.

documentary bill of exchange: ದಾಖಲೆಸಹಿತ ವಿನಿಮಯ ಹುಂಡಿ. ದಸ್ತೈವೇಜ್ ಆಧಾರಿತ ವಿನಿಮಯ ಹುಂಡಿ.

documentary constitution: ಸಾಕ್ಷ್ಯ ದಾಖಲೆಯುಕ್ತ ಸಂವಿಧಾನ.

documentary letter of credit: ದಸ್ತೈವೇಜಾಧಾರಿತ ಪತ್ತಿನ ಪತ್ರ; ದಾಖಲೆಯುಕ್ತ ಉದ್ದರಿ ಪತ್ರ.

documentary proof: ಲಿಖಿತ ಪ್ರಮಾಣ; ದಸ್ತೈವೇಜ್‌ನ ಪುರಾವೆ.

documentary research: ದಾಖಲೆಗಳನ್ನಾಧರಿಸಿದ ಸಂಶೋಧನೆ. ಕಛೇರಿ ಅಂಕಿಅಂಶಗಳು ಅಥವಾ ಪತ್ರಾಗಾರಗಳಲ್ಲಿನ ದಾಖಲೆಗಳನ್ನಾಧರಿಸಿ ನಡೆಸುವ ಸಂಶೋಧನೆ.

documentary sources: ಲಿಖಿತ ಮೂಲಗಳು. ಸಮಾಜಶಾಸ್ತ್ರೀಯವಾಗಿ ಪ್ರಾಮುಖ್ಯ ಪಡೆದಿರುವ ಎಲ್ಲಾ ಪ್ರಕಟಿತ ಹಾಗೂ ಅಪ್ರಕಟಿತ ಲಿಖಿತ ದಾಖಲೆಗಳು. ಉದಾ: ಗಣತಿ ದಾಖಲೆಗಳು, ಪತ್ರಗಳು,

ಡೈರಿಗಳು, ಸಾರ್ವಜನಿಕ ಹಾಗೂ ಖಾಸಗಿ ದಾಖಲೆಗಳು.

documentation: ದಾಖಲಾತಿ; ದಾಖಲೀಕರಣ.

dogma: ಮತತತ್ವ. ಅಧಿಕಾರಯುತ ತತ್ವ. ಉಪದೇಶಸ್ಥಾಪಿತ ತತ್ವ; ಮತೀಯ ತತ್ವ.

dogmatic authoritarianism: ಮತಧರ್ಮದ ಅಧಿಕಾರತ್ವ.

dogmatic religion: ಶಾಸ್ತ್ರ ಪ್ರಮಾಣಿತ ಧರ್ಮ; ಶಾಸ್ತ್ರಾಂಧಮತ.

dogmatism: ಮತಾಂಧತೆ.

doll play procedure: ಗೊಂಬೆಯಾಟ ವಿಧಾನ. ವ್ಯಕ್ತಿಯು, ಮುಖ್ಯವಾಗಿ ಮಕ್ಕಳ ಮನೋಭಾವ ಮತ್ತು ವ್ಯಕ್ತಿತ್ವವನ್ನು ಅರಿಯಲು ಬಳಸುವ ಪ್ರೇಕ್ಷಣಾ ವಿಧಾನ. ಈ ವಿಧಾನದಲ್ಲಿ ಉಪಯೋಗಿಸುವ ಮುಖ್ಯ ವಸ್ತುಗಳೆಂದರೆ ಗೊಂಬೆಗಳು.

dollar: ಡಾಲರ್. ಅಮೇರಿಕ, ಆಸ್ಟ್ರೇಲಿಯ, ಇಥಿಯೋಪಿಯ, ಕೆನಡ, ನ್ಯೂಜಿಲೆಂಡ್, ಬಹಮಾನ್, ಮಲೇಷಿಯಾ, ಲೈಬೀರಿಯ, ವೆಸ್ಟ್ ಇಂಡೀಸ್, ಹಾಂಗ್‌ಕಾಂಗ್, ಫಿಜಿ ಮುಂತಾದ ದೇಶಗಳ ಹಣ.

dome: ಗುಮ್ಮಟ; ಗುಂಬಜ್.

domestic family: ಗೃಹಪ್ರಧಾನ ಕುಟುಂಬ. ವ್ಯಕ್ತಿಪ್ರಧಾನ ಹಾಗೂ ನ್ಯಾಸ ಕುಟುಂಬಗಳ ನಡುವಿನ ಕುಟುಂಬ. ಇಂಥ ಕುಟುಂಬಗಳಲ್ಲಿ ವ್ಯಕ್ತಿಪ್ರಧಾನ ಕುಟುಂಬಕ್ಕಿಂತ ಕಡಿಮೆ ವೈಯಕ್ತಿಕತೆ ಹಾಗೂ ಹೆಚ್ಚು ಸಮೂಹ ಐಕ್ಯತೆ ಇರುತ್ತದೆ. ಹೆತ್ತವರು ಮತ್ತು ಮದುವೆಯಾದ ಮಕ್ಕಳ ಮಧ್ಯೆ ಹತ್ತಿರದ ಸಂಬಂಧ ಮಾತ್ರವಲ್ಲದೆ ಮದುವೆಯಾದ ಸಹೋದರ, ಸಹೋದರಿಯರ ನಡುವೆಯೂ ನಿಕಟ ಸಂಪರ್ಕವಿರುತ್ತದೆ.

domestic government: ದೇಶೀಯ ಸರಕಾರ.

domestic group: ಆಂತರಿಕ ಗುಂಪು.

domestic investment: ಆಂತರಿಕ ಹೂಡಿಕೆ.

domestic jurisdiction: ಆಂತರಿಕ ಕಾರ್ಯವ್ಯಾಪ್ತಿ; ಆಂತರಿಕ ಅಧಿಕಾರ ವ್ಯಾಪ್ತಿ.

domestic labour: ಗೃಹಕೃತ್ಯ; ಆಂತರಿಕ ಕೆಲಸ.

domestic policy: ಆಂತರಿಕ ನೀತಿ.

domestic production system: ಗೃಹಕೈಗಾರಿಕಾ ಉತ್ಪಾದನಾ ವಿಧಾನ. ಕೈಗಾರಿಕೋತ್ಪನ್ನಗಳ ಆರಂಭಕ್ಕೆ ಹಿಂದಿದ್ದ ಉತ್ಪಾದನಾ ವಿಧಾನ.

domestic trade: ಆಂತರಿಕ ವ್ಯಾಪಾರ.

domestic violence: ಗೃಹ ಹಿಂಸೆ; ಆಂತರಿಕ ಹಿಂಸೆ. ೧. ಮನೆಯ ಒಬ್ಬ ವ್ಯಕ್ತಿಯು ಇನ್ನೊಬ್ಬ ವ್ಯಕ್ತಿಗೆ ತೋರಿಸುವ ಹಿಂಸಾ ಪ್ರವೃತ್ತಿ. ಹೆಚ್ಚಾಗಿ ಗಂಡಸರು ಹೆಂಗಸರ ಮೇಲೆ ಕ್ರೌರ್ಯ ತೋರಿಸುತ್ತಾರೆ. ೨. ದೇಶದೊಳಗೆ ಸಂಭವಿಸುವ ಗಲಭೆ, ದೊಂಬಿ ಇತ್ಯಾದಿಗಳು.

domestication: ಸಾಧುಮಾಡುವಿಕೆ; ಪಳಗಿಸುವುದು; ಮಾನವಾಧೀನತೆ.

dominance: ಪ್ರಬಲತೆ; ಪ್ರಾಬಲ್ಯ; ಪ್ರಾಧಾನ್ಯತೆ.

dominance feeling: ಪ್ರಾಧಾನ್ಯತಾ ಭಾವನೆ.

dominant caste: ಪ್ರಬಲ ಜಾತಿ; ಪ್ರಧಾನ ಜಾತಿ.

dominant class: ಪ್ರಬಲ ವರ್ಗ.

dominant cultural trait: ಪ್ರಧಾನ ಸಂಸ್ಕೃತಿಯ ಲಕ್ಷಣ.

dominant culture: ಪ್ರಬಲ ಸಂಸ್ಕೃತಿ; ಪ್ರಧಾನ ಸಂಸ್ಕೃತಿ.

dominant gene: ಪ್ರಬಲ ವಂಶವಾಹಿ.

dominant ideology: ಪ್ರಬಲ ತತ್ತ್ವಾದರ್ಶ.

dominant leader: ಪ್ರಮುಖ ನಾಯಕ; ಪ್ರಭಾವೀ ನಾಯಕ.

dominant members: ಪ್ರಭಾವೀ ಸದಸ್ಯರು; ಪ್ರಮುಖ ಸದಸ್ಯರು.

dominant sentiment: ಪ್ರಮುಖ ರಸಭಾವ; ಪ್ರಭಾವೀ ಭಾವನೆ.

dominant trait: ಪ್ರಧಾನ ಗುಣಲಕ್ಷಣ.

dominant value: ಪ್ರಬಲ ಮೌಲ್ಯ.

dominant undertaking: ಪ್ರಬಲ ಉದ್ಯಮ.

dominion state: ಅಧೀನ ರಾಜ್ಯ.

double blind technique: ಇಮ್ಮಡಿ ಕುರುಡು ತಂತ್ರ.

double citizenship: ದ್ವಿಪೌರತ್ವ. ಒಂದು ರಾಷ್ಟ್ರದ ಪ್ರಜೆಗಳಿಗೆ ಎರಡು ಬಗೆಯ ಪೌರತ್ವವನ್ನು ಕೊಡುವುದು. ಉದಾ: ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಪ್ರತಿಯೊಬ್ಬ ಪ್ರಜೆಗೆ ರಾಷ್ಟ್ರದ ಹಾಗೂ ರಾಜ್ಯದ ಪ್ರತ್ಯೇಕ ಪೌರತ್ವವನ್ನು ನೀಡಲಾಗುತ್ತದೆ.

double column tariff: ದ್ವಿದರದ ಸುಂಕ; ಎರಡು ಸಾಲಿನ ಸುಂಕ. ಇದು ಸಾಮಾನ್ಯ ಸುಂಕ (general tariff), ಸಾಂಪ್ರದಾಯಿಕ ಸುಂಕ (conventional tariff) ಎಂಬ ಪ್ರಭೇದಗಳನ್ನೊಳಗೊಂಡಿದೆ.

double entry book keeping: ದ್ವಿನಮೂನೆ ಲೆಕ್ಕ ಪದ್ಧತಿ. ಹಣದ ದುರುಪಯೋಗವನ್ನು ತಡೆಯಲು ಪ್ರತಿಯೊಂದು ಖರ್ಚಿನ ಬಾಬನ್ನು ಎರಡು ಕಡೆ ದಾಖಲು ಮಾಡುವುದು.

double descent : ನೋಡಿ : bilateral desent.

double factoral terms of trade: ದ್ವಿಘಟಕ ವ್ಯಾಪಾರದ ಕರಾರುಗಳು. ಯಾವುದೇ ರಾಷ್ಟ್ರದ ಘಟಕಗಳ ಉತ್ಪನ್ನಗಳ ಬದಲಾವಣೆಗಳನ್ನು ಮತ್ತು ಆಯಾತ ವಸ್ತುಗಳನ್ನು ಉತ್ಪಾದಿಸುವ ವಿದೇಶೀ ಘಟಕಗಳ ದಕ್ಷತೆಯನ್ನು ಗಣನೆಗೆ ತೆಗೆದುಕೊಳ್ಳುವ ವ್ಯಾಪಾರ ಕರಾರುಗಳು.

double personality: ದ್ವಿಮುಖ ವ್ಯಕ್ತಿತ್ವ.

double standard of morality: ದ್ವಿಮುಖ ನೈತಿಕತೆ. ನೈತಿಕತೆಯ ಮಾಪಕಗಳನ್ನು ಪುರುಷರಿಗೆ ಹೆಚ್ಚು ಸೌಲಭ್ಯಯುತವಾಗಿ ಹಾಗೂ ಸ್ತ್ರೀಯರಿಗೆ ಹೆಚ್ಚು ಶೋಷಣೆಯುಕ್ತವಾಗಿ ಅಳವಡಿಸಿರುವುದು.

double unilineal descent: ಉಭಯ ಪಕ್ಷೀಯ ವಂಶಾವಳಿ. ತಂದೆಯ ಮತ್ತು ತಾಯಿಯ ವಂಶದಿಂದ ಗುರುತಿಸುವ ವಂಶಾವಳಿ. ನೋಡಿ: bilateral descent.

doubling time: ದ್ವಿಗುಣ ಸಮಯ. ಒಂದು ನಿರ್ದಿಷ್ಟ ಜನಸಂಖ್ಯೆಯು ದ್ವಿಗುಣಗೊಳ್ಳಲು ತೆಗೆದುಕೊಳ್ಳುವ ಸಮಯ.

dower: ಸ್ತ್ರೀಧನ.

downward communication: ಕೆಳ

ಮುಖ ಸಂಪರ್ಕ. ಉನ್ನತ ಸ್ಥಾನದಲ್ಲಿರುವ ಅಧಿಕಾರಿಗಳಿಂದ ಪ್ರಾರಂಭವಾಗಿ ಅಧೀನ ಅಧಿಕಾರಿಗಳತ್ತ ಕೆಳಮುಖವಾಗಿ ಹರಿಯುವ ಸಂಪರ್ಕ.

downward cumulative cau sation: ಕೆಳಮುಖ ಸಂಚಯ ವಿಧಾನ.

downward mobility: ಕೆಳಮುಖ ಗತಿಶೀಲತೆ; ಕೆಳಮುಖ ಸಂಚರಣೆ.

dowry offence: ವರದಕ್ಷಿಣೆ ಅಪರಾಧ.

draft constitution: ಕರಡು ಸಂವಿಧಾನ.

draft outline: ಕರಡು ರೂಪುರೇಷೆ.

draftsman: ನಕಾಶೆಗಾರ; ಕರಡು ಪ್ರತಿ ತಯಾರು ಮಾಡುವವ.

drain theory: ಶೋಷಣಾ ಸಿದ್ಧಾಂತ. ಅನಭಿವೃದ್ಧ ರಾಷ್ಟ್ರಗಳಲ್ಲಿ ಲಭ್ಯವಿರುವ ಪ್ರಾಥಮಿಕ ಸರಕುಗಳು ವಿದೇಶೀ ವ್ಯಾಪಾರ ಮತ್ತು ವಿದೇಶೀ ಹೂಟೆಗಳ ನೆವದಲ್ಲಿ ಅಭಿವೃದ್ಧ ರಾಷ್ಟ್ರಗಳಿಗೆ ಹರಿದುಹೋಗುವುದರಿಂದಾಗಿ ಅನಭಿವೃದ್ಧ ರಾಷ್ಟ್ರಗಳು ಶೋಷಣೆ ಗೊಳಗಾಗುತ್ತವೆಂದು ವಿವರಿಸುವ ಸಿದ್ಧಾಂತ.

dramaturgy: ನಾಟಕಾಭಿನಯ ಶಾಸ್ತ್ರ.

dramaturgical approach: ನಾಟಕಾಭಿನಯಾತ್ಮಕ ಸಮೀಪನ.

dravida style: ದ್ರಾವಿಡ ಶೈಲಿ. ೧. ಪಿರಾಮಿಡ್‌ನ ಆಕಾರದಲ್ಲಿ ಹಂತಹಂತವಾಗಿ ಮೇಲೇರಿದಂತೆ ಚಿಕ್ಕದಾಗುವ ದಾಕ್ಷಿಣಾತ್ಯ ವಾಸ್ತುಶಿಲ್ಪ ಶೈಲಿ. ೨. ದೇವಾಲಯಗಳ ವಾಸ್ತುಶಿಲ್ಪ ಪ್ರಕಾರಗಳಲ್ಲಿ ಒಂದು. ದಕ್ಷಿಣ ಭಾರತದಲ್ಲಿ ಈ ಪ್ರಕಾರದ ದೇವಾಲಯಗಳಿವೆ.

dravidians: ದ್ರಾವಿಡರು. ಉತ್ತರ ಮತ್ತು ದಕ್ಷಿಣ ಭಾರತದಲ್ಲಿ ವಾಸಿಸುತ್ತಿದ್ದರು ಎಂದು ನಂಬಲಾಗಿದ್ದ ಪ್ರಾಚೀನ ಜನಾಂಗಗಳಲ್ಲೊಂದು.

dream analysis: ಸ್ವಪ್ನ ವಿಶ್ಲೇಷಣೆ. ಮನೋವಿಶ್ಲೇಷಣೆಯ ಒಂದು ವಿಧಾನ.

dream content: ಸ್ವಪ್ನ ವಿಷಯ; ಸ್ವಪ್ನದ ಒಳತಿರುಳು.

dream interpretation: ಸ್ವಪ್ನದ ಅರ್ಥವಿವರಣೆ.

dream theory: ಸ್ವಪ್ನ ಸಿದ್ಧಾಂತ.

drive: ಪ್ರಚೋದಕ ಶಕ್ತಿ; ಅಂತಃಪ್ರೇರಣೆ; ಚೋದಿಸು; ಚೋದಕ.

drought prone area: ಬರಗಾಲ ಪೀಡಿತ ಪ್ರದೇಶ.

drug abuse: ಮಾದಕ ವಸ್ತುಗಳ ದುರ್ಬಳಕೆ.

drug addiction: ಮಾದಕ ದ್ರವ್ಯ ವ್ಯಸನ.

drug therapy: ಔಷಧ ಚಿಕಿತ್ಸೆ.

dry farming: ಒಣಬೇಸಾಯ (ಕೃಷಿ).

dual citizenship: ದ್ವಿಪೌರತ್ವ.

dual consciousness: ಉಭಯ ಪ್ರಜ್ಞೆ.

dual economy: ದ್ವಿವಲಯ ಆರ್ಥಿಕತೆ; ದ್ವಂದ್ವ ಅರ್ಥವ್ಯವಸ್ಥೆ.

dual government: ದ್ವಿಸರಕಾರ ಪದ್ಧತಿ. ನೋಡಿ: diarchy.

dual personality: ದ್ವಿಮುಖ ವ್ಯಕ್ತಿತ್ವ; ದ್ವಂದ್ವ ವ್ಯಕ್ತಿತ್ವ.

dual system of government: ದ್ವಿಮುಖ ಸರಕಾರ ಪದ್ಧತಿ.

dualism: ದ್ವೈತವಾದ; ದ್ವಂದ್ವವಾದ.

dualistic structural framework: ದ್ವಿಮುಖ ರಾಚನಿಕ ಚೌಕಟ್ಟು.

dualistic theory: ದ್ವೈತ ಸಿದ್ಧಾಂತ. ಆತ್ಮ-ಪರಮಾತ್ಮ ಪ್ರತ್ಯೇಕ ಎಂದು ವಾದಿಸುವ ತತ್ತ್ವ ವಿಚಾರ.

due process of law: ಕಾನೂನಿನ ನೈಜ ಪ್ರಕ್ರಿಯೆ.

dull ness: ಮಂಕುತನ; ಜಡತೆ; ದಡ್ಡತನ.

dummy variable: ಬದಲೀ ಪರಿವರ್ತಕ (ಚಲ).

dumping of goods: ಸರಕುಗಳ ರಾಶಿ ಹಾಕುವಿಕೆ. ಸ್ವದೇಶಗಳಲ್ಲಿ ಮಾರಾಟ ಮಾಡುವ ಬೆಲೆಗಳಿಗಿಂತ ಕಡಿಮೆಬೆಲೆಗಳಿಗೆ ಅನೇಕ ವೇಳೆ ಉತ್ಪಾದನಾ ಬೆಲೆಗಿಂತಲೂ ಕಡಿಮೆ ಬೆಲೆಗೆ ವಿದೇಶೀ ಮಾರುಕಟ್ಟೆಗಳಲ್ಲಿ ಸರಕುಗಳನ್ನು ಮಾರಾಟಮಾಡುವ ಪದ್ಧತಿ.

duopoly: ದ್ವಿಮಾರುಕಟ್ಟೆ; ದ್ವಿಸ್ವಾಮ್ಯ; ದ್ವಿಜನಸ್ವಾಮ್ಯ; ಮಾರುಕಟ್ಟೆಯಲ್ಲಿ ಇಬ್ಬರೇ ಮಾರಾಟಗಾರರಿರುವ ಸ್ಥಿತಿ.

duopsony: ದ್ವಿಗ್ರಾಹಕ ಮಾರುಕಟ್ಟೆ. ಮಾರುಕಟ್ಟೆಯಲ್ಲಿ ಇಬ್ಬರೇ ಗ್ರಾಹಕರು ಇರುವ ಸ್ಥಿತಿ.

durable good: ದೀರ್ಘಬಾಳಿಕೆಯ ಸರಕು; ಬಾಳಿಕೆ ಬರುವ ಸರಕು.

durable social relationship: ದೀರ್ಘಕಾಲಿಕ ಸಾಮಾಜಿಕ ಸಂಬಂಧ.

duration theory: ಕಾಲಾವಧಿಯ ತತ್ತ್ವ. ಒಬ್ಬ ವ್ಯಕ್ತಿಯು ಬ್ಯಾಂಕಿನ ಗ್ರಾಹಕನೆಂದು ಪರಿಗಣಿಸಲ್ಪಡಬೇಕಾದರೆ ಒಂದು ಕನಿಷ್ಟ ನಿಗದಿತ ಅವಧಿಯವರೆಗಾದರೂ ಆತ ಬ್ಯಾಂಕಿನಲ್ಲಿ ವ್ಯವಹಾರ ನಡೆಸಬೇಕೆಂಬ ತತ್ತ್ವ. ಅಂದರೆ ಒಬ್ಬನು ಬ್ಯಾಂಕಿನಲ್ಲಿ ಖಾತೆಯನ್ನು ತೆರೆದ ಮಾತ್ರಕ್ಕೆ ಆತನು ಬ್ಯಾಂಕಿನ ಗ್ರಾಹಕನಾಗಲಾರ.

dwija: ದ್ವಿಜ; ಎರಡು ಬಾರಿ ಜನಿಸಿದವ. ಉಪನಯನ ಎಂಬ ಸಂಸ್ಕಾರ ವಿಧಿಯಿಂದ ಎರಡನೇ ಬಾರಿ ಜನಿಸಿದವ. ಆದುದರಿಂದ ಜನಿವಾರ ಧರಿಸುವ ಬ್ರಾಹ್ಮಣ, ಕ್ಷತ್ರಿಯ ಹಾಗೂ ವೈಶ್ಯರು ದ್ವಿಜರು ಎನಿಸಿಕೊಂಡಿದ್ದಾರೆ.

dyad: ದ್ವಯ. ಪರಸ್ಪರ ಅಂತರಕ್ರಿಯೆಯಲ್ಲಿರುವ ಇಬ್ಬರು ವ್ಯಕ್ತಿಗಳ ಗುಂಪು. ಸಾಮಾಜಿಕ ಗುಂಪುಗಳ ವರ್ಗೀಕರಣದಲ್ಲಿ ಇದು ಅತೀ ಸಣ್ಣದು.

dyadic group: ಇಬ್ಬರ ಗುಂಪು. ನೋಡಿ: dyad.

dyarchy: ನೋಡಿ: diarchy.

dynamic: ಚಲನಶೀಲ; ಕ್ರಿಯಾಶೀಲ.

dynamic assessment of the situation: ಪರಿಸ್ಥಿತಿಯ ಚಲನಶೀಲ ಮೌಲ್ಯೀಕರಣ. ಹೊಸ ಸಾಮಾಜಿಕ ಪರಿಸ್ಥಿತಿಯನ್ನು ವ್ಯಕ್ತಿಯು ಮೌಲ್ಯಮಾಪನ ಮಾಡಿ ನಿರ್ದಿಷ್ಟ ಕ್ರಿಯೆಯನ್ನು ಅನುಸರಿಸುವುದು.

dynamic behaviour: ಚಲನಶೀಲ ವರ್ತನೆ; ಕ್ರಿಯಾಶೀಲ ವರ್ತನೆ.

dynamic equilibrium: ಕ್ರಿಯಾತ್ಮಕ ಸಮತೋಲನ; ಚಲನಾತ್ಮಕ ಸಮ ತೋಲನ.

dynamic macro analysis: ಚಲನಾತ್ಮಕ ಸಮಗ್ರ ವಿಶ್ಲೇಷಣೆ; ಚಲನಾತ್ಮಕ ವಿಸ್ತೃತ ವಿಶ್ಲೇಷಣೆ. ವಿಶಾಲಾತ್ಮಕ ಚಲಕಗಳ ಮತ್ತು ಮೊತ್ತಗಳ ಬದಲಾವಣೆಯಿಂದ ಅರ್ಥವ್ಯವಸ್ಥೆಯ ಸಮತೋಲನದ ಮೇಲೆ ಆಗುವ ಪರಿಣಾಮಗಳ ಅಧ್ಯಯನ.

dynamic method: ಚಲನಾತ್ಮಕ ವಿಧಾನ; ಕ್ರಿಯಾತ್ಮಕ ವಿಧಾನ.

dynamic neutrality: ಕ್ರಿಯಾಶೀಲ ಅಲಿಪ್ತ ನೀತಿ. ಅಂತರ್‌ರಾಷ್ಟ್ರೀಯ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಯಾವ ಬಣಕ್ಕೂ ಸೇರದೆ ಪರಿಣಾಮಕಾರಿಯಾದ ಪಾತ್ರವನ್ನು ನಿರ್ವಹಿಸುವುದು.

dynamic psychology: ಚಲನಶೀಲ ಮನೋವಿಜ್ಞಾನ; ಗತಿಶೀಲ ಮನೋವಿಜ್ಞಾನ.

dynamic theory of economics: ಕ್ರಿಯಾತ್ಮಕ ಆರ್ಥಿಕ ವಿಶ್ಲೇಷಣಾ ಸಿದ್ಧಾಂತ; ಅರ್ಥಶಾಸ್ತ್ರದ ಕ್ರಿಯಾತ್ಮಕ (ಚಲನಾತ್ಮಕ) ಸಿದ್ಧಾಂತ.

dynamic theory of production: ಚಲನಾತ್ಮಕ ಉತ್ಪಾದನಾ ಸಿದ್ಧಾಂತ.

dynamic theory of profit: ಚಲನಾತ್ಮಕ ಲಾಭ ಸಿದ್ಧಾಂತ.

dynamics of behaviour: ವರ್ತನೆಯ ಗತಿಶೀಲತೆ.

dynamics of psychotherapy: ಮಾನಸಿಕ ಶಕ್ತಿಯ ಗತಿಶೀಲತೆ.

dynastic aristocracy: ಅನು ವಂಶೀಯ ಶ್ರೀಮಂತರ ಪ್ರಭುತ್ವ.

dynastic incest: ರಾಜವಂಶೀಯ ಅಗಮ್ಯಗಮನ. ಕೆಲವೊಂದು ರಾಜವಂಶಗಳಲ್ಲಿ ಪ್ರಚಲಿತವಿದ್ದ ಅಗಮ್ಯ ಗಮನ. ನೋಡಿ: incest taboo.

dysacousia: ಶ್ರವಣ ವೈಕಲ್ಯ.

dysbulia: ವಿಚಾರಚಾಂಚಲ್ಯ. ಯೋಚನಾ ಲಹರಿಯ ತಡೆಯುಂಟಾಗಿ ಆಗಾಗ ಅದರ ಗತಿ ತಪ್ಪುವುದು. ಏಕಾಗ್ರತೆ ಇಲ್ಲದಿರುವುದು.

dyschiria: ಹಸ್ತಗತಿವೈಕಲ್ಯ.

dysfunction: ಅಪಕಾರ್ಯ. ಸಾಮಾಜಿಕ ಅಥವಾ ವೈಯಕ್ತಿಕ ವ್ಯವಸ್ಥೆಯ ಯಾವುದಾದರೊಂದು ಅಂಶದ ಇರುವಿಕೆ ಅಥವಾ ಕಾರ್ಯಾಚರಣೆಯು ಒಟ್ಟು ವ್ಯವಸ್ಥೆಯ ಹೊಂದಾಣಿಕೆ, ಸಮಗ್ರತೆ ಹಾಗೂ ಭದ್ರತೆಗೆ ತೊಂದರೆಯುಂಟು ಮಾಡುವಿಕೆ. ಆದರೆ ಒಂದು ವ್ಯವಸ್ಥೆಗೆ ಅಪಕಾರ್ಯ ಎನಿಸಿದ್ದು ಇನ್ನೊಂದು ವ್ಯವಸ್ಥೆಗೆ ಕಾರ್ಯಾತ್ಮಕ ಎನಿಸಬಹುದು.

dysgenic trend theory: ಅನುವಂಶೀಯ ಗುಣಗಳ ಅವನತಿ ಸಿದ್ಧಾಂತ. ಜನಸಂಖ್ಯೆಯ ಹೆಚ್ಚಳದಲ್ಲಿ ಜೈವಿಕವಾಗಿ ದುರ್ಬಲರು ಸಶಕ್ತರಿಗಿಂತ ಹೆಚ್ಚಿನ ಪ್ರಮಾಣದಲ್ಲಿರುವಾಗ ಉಂಟಾಗುವ ಅನುವಂಶೀಯ ಗುಣಗಳ ಅವನತಿಯ ಕುರಿತಾದ ಸಿದ್ಧಾಂತ.

dysgensia: ರುಚಿ ವೈಕಲ್ಯ.

dysgnosia: ಪ್ರತ್ಯಕ್ಷ ವೈಕಲ್ಯ.

dysgraphia: ಲೇಖನ ವೈಕಲ್ಯ.

dyslexia: ವಾಚನ ವೈಕಲ್ಯ.

dyslogia: ಅಭಿವ್ಯಕ್ತಿ ವೈಕಲ್ಯ.

dysmimia: ಅನುಕರಣ ಶಕ್ತಿ ಹೀನತೆ.

dysmnesia: ಸ್ಮೃತಿ ವೈಕಲ್ಯ.

dysnomia : ನೋಡಿ : dysfunction.

dyspareunia: ರತಿ ಹೀನತೆ. ಲೈಂಗಿಕ ಸುಖ ಪಡೆಯಲಾಗದಿರುವುದು.

dysphoria: ಭಯೋದ್ವಿಗ್ನ ಖಿನ್ನತೆ; ಉತ್ಸಾಹ ವೈಕಲ್ಯ. ಭಯ ಉದ್ವಿಗ್ನತೆಗಳಿಂದ ಖಿನ್ನತೆ.

dyssocial reaction: ವಿಕೃತಮೌಲ್ಯ ಪ್ರತಿಕ್ರಿಯೆ; ಅಸಾಮಾಜಿಕ ಪ್ರತಿಕ್ರಿಯೆ.

E

earmarked outlay: ಗೊತ್ತುಪಡಿಸಿದ ಖರ್ಚುಗಳು.

eccentricity of behaviour: ವರ್ತನೆಯ ವಿಲಕ್ಷಣತೆ; ವಿಪರೀತ ವರ್ತನೆ.

ecclesia: ಚುನಾಯಕ ಸಭೆ. ಪ್ರಾಚೀನ ಗ್ರೀಕ್‌ನಲ್ಲಿ (ವಿಶೇಷವಾಗಿ ಅಥೆನ್ಸ್‌ನಲ್ಲಿ) ಇಪ್ಪತ್ತು ವರ್ಷ ಮೇಲ್ಪಟ್ಟ ಜನರಿಗೆ ಮತದಾನದ ಹಕ್ಕು ಇದ್ದ ಒಂದು ಸಾಮಾನ್ಯ ಸಭೆ.

ecclesiastical court: ಧಾರ್ಮಿಕ ನ್ಯಾಯಾಲಯ.

ecdemomania: ಪಲಾಯನೋನ್ಮಾದ; ಅಲೆಮಾರಿ ಲಾಲಸೆ; ತಿರುಗಾಡುವ ಹುಚ್ಚು.

echo of past experience: ಪೂರ್ವಾನುಭವದ ಪ್ರತಿಧ್ವನಿ.

echolalia: ಪುನರುಚ್ಚರಣೆ. ಇನ್ನೊಬ್ಬರು ಹೇಳುವುದನ್ನು ಯಾಂತ್ರಿಕವಾಗಿ ಇಚ್ಛೆ ಇಲ್ಲದೆ ಪುನರುಚ್ಚರಿಸುವುದು. ಎಳೆಯ ಮಕ್ಕಳಲ್ಲಿ ಇದನ್ನು ಕಾಣಬಹುದು.

echopathy: ಅನುಕರಣಲಾಲಸೆ; ಅನುಕರಣೋನ್ಮಾದ.

echopraxia: ಪ್ರತಿಕರಣ. ಇಚ್ಛೆ ಇಲ್ಲದೆ ಯಾಂತ್ರಿಕವಾಗಿ ಇನ್ನೊಬ್ಬರ ಹಾವಭಾವ, ಚಲನವಲನಗಳನ್ನು ಅನುಕರಿಸುವುದು.

eclectic pantheism: ಧರ್ಮಸಂಕಲನ. ಎಲ್ಲಾ ಧರ್ಮಗಳ ಶ್ರೇಷ್ಠ ವಿಚಾರಗಳ ಸಂಕಲನ.

eclecticism: ಸಾರಸಂಗ್ರಹವಾದ; ವಿಚಾರತರ್ಕದ ವಿಧಾನ.

ecological approach: ಪರಿಸರ ಶಾಸ್ತ್ರೀಯ ವಿಧಾನ.

ecological balance: ಜೀವಪರಿಸರ ಸಮತೋಲನ.

ecological condition: ಜೀವಪರಿಸ್ಥಿತಿ; ಜೀವಪರಿಸರದ ಸ್ಥಿತಿ.

ecological constellation: ಜೀವ ಪರಿಸರದ ಪುಂಜ. ಒಂದು ಸಾಮಾನ್ಯ ಕೇಂದ್ರವನ್ನು ಸುತ್ತುವರಿದ ಅಂತರ ಸಂಬಂಧವುಳ್ಳ ಜನರ ಕೂಟ.

ecological correlation: ಪರಿಸರದ ಸಹ ಸಂಬಂಧ.

ecological dispersion: ಪರಿಸರದ ಚದರಿಕೆ. ಜೀವಪರಿಸರಾನುಗುಣವಾಗಿ ಜೀವಸಂದಣಿ ಚದರುವಿಕೆ.

ecological displacement: ಜೀವ ಪರಿಸರದ ಸ್ಥಾನಾಂತರ; ಒಂದು ಪ್ರಬಲ ಜೀವಸಂದಣಿಯು ಅಷ್ಟೊಂದು ಪ್ರಬಲ ವಲ್ಲದ ಇನ್ನೊಂದನ್ನು ಸ್ಥಾನಾಂತರಗೊಳಿಸುವುದು. ಉದಾ: ಬುಡಕಟ್ಟು ಜನರ ಸ್ಥಳಾಂತರ.

ecological dominance: ಪರಿಸರ ಪ್ರಾಬಲ್ಯ.

ecological fallacy: ಪರಿಸರ ಭ್ರಮೆ.

ecological mobility: ಜೀವಪರಿಸರ ಚಲನೆ. ಜನರು ತಮ್ಮ ವಾಸ್ತವ್ಯವನ್ನು ಒಂದೆಡೆಯಿಂದ ಇನ್ನೊಂದೆಡೆಗೆ ವರ್ಗಾಯಿಸುವುದು.

ecological organization: ಜೀವ ಪರಿಸರದ ವ್ಯವಸ್ಥೆ.

ecological routinisation: ಜೀವ ಪರಿಸರದ ಕ್ರಮಾಕರಣ. ಉದಾ: ಮಹಾನಗರ ಪ್ರದೇಶಗಳಲ್ಲಿ ಜನರ ದಿನವಹಿ ಚಲನೆಯ ಮರುಕಳಿಸುವ ಮಾದರಿ.

ecological structure: ನೋಡಿ: ecological organization.

ecology: ಜೀವಪರಿಸರ ವಿಜ್ಞಾನ; ಜೀವಪರಿಸರ ಶಾಸ್ತ್ರ. ಒಂದು ನಿರ್ದಿಷ್ಟ ಪರಿಸರದಲ್ಲಿ ವಾಸಿಸುವ ಜೀವಿಗಳ ನಡುವಿನ ಅಂತರ್ ಸಂಬಂಧದ ಅಧ್ಯಯನ.

econometrics: ಗಣಿತೀಯ ಅರ್ಥಶಾಸ್ತ್ರ.

economic: ಆರ್ಥಿಕ.

economic activity rate: ಆರ್ಥಿಕ ಚಟುವಟಿಕೆಯ ದರ.

economic anthropology: ಆರ್ಥಿಕ ಮಾನವಶಾಸ್ತ್ರ.

economic approach: ಆರ್ಥಿಕ ದೃಷ್ಟಿಕೋನ.

economic area: ಆರ್ಥಿಕ ಕ್ಷೇತ್ರ. ಆರ್ಥಿಕ ಆಧಾರದ ಮೇಲೆ ವಿಭಾಗಿಸ ಬಹುದಾದ ಒಂದು ಕ್ಷೇತ್ರ. ವಿಶೇಷವಾಗಿ ಒಂದು ಉದ್ಯೋಗ, ಬೆಳೆ, ಆರ್ಥಿಕ ಚಟುವಟಿಕೆಗಳಿಗೆ ಹೆಸರಾದ ಭೂಭಾಗ.

economic ascendency: ಆರ್ಥಿಕ ಉತ್ತುಂಗತೆ.

economic class: ಆರ್ಥಿಕ ವರ್ಗ. ಆರ್ಥಿಕ ಅಂಶಗಳ ಆಧಾರದಿಂದ ಗುರುತಿಸಲ್ಪಡುವ ವರ್ಗ.

economic commission: ಆರ್ಥಿಕ ಸಮಿತಿ.

economic cycle: ಆರ್ಥಿಕ ಆವರ್ತ.

economic democracy: ಆರ್ಥಿಕ ಪ್ರಜಾಪ್ರಭುತ್ವ.

economic depression: ಆರ್ಥಿಕ ಕುಸಿತ; ಆರ್ಥಿಕ ಮುಗ್ಗಟ್ಟು.

economic determinism: ಆರ್ಥಿಕ ನಿಯತಿವಾದ; ಆರ್ಥಿಕ ನಿರ್ಣಯವಾದ. ಸಾಮಾಜಿಕ ವರ್ತನೆಯನ್ನು ವಿವರಿಸುವಲ್ಲಿ ಆರ್ಥಿಕ ಅಂಶಗಳು ಪ್ರಮುಖ ಪಾತ್ರವಹಿಸುತ್ತವೆ ಎಂಬ ವಾದ.

economic development: ಆರ್ಥಿಕಾಭಿವೃದ್ಧಿ.

economic disabilities: ಆರ್ಥಿಕ ದೌರ್ಬಲ್ಯಗಳು.

economic dynamics: ಆರ್ಥಿಕ ಚಲನಾತ್ಮಕತೆ; ಆರ್ಥಿಕ ಚಲನಶಾಸ್ತ್ರ.

economic emancipation: ಆರ್ಥಿಕ ವಿಮೋಚನೆ.

economic equality: ಆರ್ಥಿಕ ಸಮಾನತೆ. ಆರ್ಥಿಕ ವೈಷಮ್ಯವನ್ನು ತೊಡೆದು ಹಾಕಿ ಸಂಪತ್ತನ್ನು ಸಮಾನವಾಗಿ ಹಂಚುವುದು.

economic ethics: ಆರ್ಥಿಕ ನೀತಿಶಾಸ್ತ್ರ.

economic expenditure: ಆರ್ಥಿಕ ವೆಚ್ಚ (ಖರ್ಚು).

economic factor: ಆರ್ಥಿಕ ಅಂಶ.

economic fluctuation: ಆರ್ಥಿಕ ಏರಿಳಿತ.

economic geography: ಆರ್ಥಿಕ ಭೂಗೋಳ ಶಾಸ್ತ್ರ. ನೈಸರ್ಗಿಕ ಪರಿಸರದ ಪ್ರಭಾವದಿಂದುಂಟಾದ ಚೌಕಟ್ಟಿನೊಳಗೆ ನಿರ್ಬಂಧಿತವಾದ ಮಾನವನ ಆರ್ಥಿಕ ಚಟುವಟಿಕೆಗಳ ವ್ಯವಸ್ಥಿತವಾದ ವ್ಯಾಸಂಗ.

economic good: ಆರ್ಥಿಕ ಸರಕು.

economic growth: ಆರ್ಥಿಕ ಬೆಳವಣಿಗೆ.

economic history: ಆರ್ಥಿಕ ಚರಿತ್ರೆ.

economic holding: ಆರ್ಥಿಕ ಹಿಡುವಳಿ.

economic independence: ಆರ್ಥಿಕ ಸ್ವಾತಂತ್ರ್ಯ.

economic inequality: ಆರ್ಥಿಕ ಅಸಮಾನತೆ.

economic infrastructure: ಆರ್ಥಿಕ ಅಂತಾರಚನೆ. ನೋಡಿ: infrastructure.

economic instability: ಆರ್ಥಿಕ ಅಸ್ಥಿರತೆ.

economic institution: ಆರ್ಥಿಕ ಸಂಸ್ಥೆ (ವ್ಯವಸ್ಥೆ). ಉತ್ಪಾದನೆ, ವಿತರಣೆ, ವಸ್ತುಗಳು ಹಾಗೂ ಸೇವೆಗಳ ಅನುಭೋಗಿಸುವಿಕೆ. ಇವುಗಳನ್ನು ಸಂಘಟಿಸುವ ಸಾಮಾಜಿಕ ಪಾತ್ರ ಹಾಗೂ ಸೂಕ್ತ ಪ್ರಮಾಣಕಗಳ ವ್ಯವಸ್ಥೆ.

economic instrument: ಆರ್ಥಿಕ ಸಾಧನ. ವಿದೇಶಾಂಗ ನೀತಿಯಲ್ಲಿ ರಾಷ್ಟ್ರದ ಆರ್ಥಿಕ ಹಿತಾಸಕ್ತಿಗೆ ಅನುಕೂಲವಾದ ಅಂಶಗಳನ್ನು ಅನುಸರಿಸುವುದು.

economic interest: ಆರ್ಥಿಕ ಹಿತಾಸಕ್ತಿ.

economic law: ಆರ್ಥಿಕ ನಿಯಮ.

economic man: ಆರ್ಥಿಕ ಮಾನವ. ಸ್ವ-ಹಿತಾಸಕ್ತಿಯಿಂದ ವಿವೇಚನಾಯುಕ್ತವಾಗಿ ಆರ್ಥಿಕ ನಿರ್ವಹಣೆ ಮಾಡುವ ವ್ಯಕ್ತಿ.

economic mobility: ಆರ್ಥಿಕ ಚಲನೆ.

economic nationalism: ಆರ್ಥಿಕ ರಾಷ್ಟ್ರೀಯತೆ.

economic order: ನೋಡಿ: economic institution.

economic organisation: ಆರ್ಥಿಕ ಸಂಘಟನೆ.

economic planning: ಆರ್ಥಿಕ ಯೋಜನೆ.

economic policy: ಆರ್ಥಿಕ ನೀತಿ.

economic principle: ಆರ್ಥಿಕ ತತ್ವ.

economic progress: ಆರ್ಥಿಕ ಪ್ರಗತಿ.

economic rationality: ಆರ್ಥಿಕ ವೈಚಾರಿಕತೆ.

economic reality: ಆರ್ಥಿಕ ನೈಜತೆ.

economic rent: ಆರ್ಥಿಕ ಗೇಣಿ (ಬಾಡಿಗೆ).

economic revolution: ಆರ್ಥಿಕ ಕ್ರಾಂತಿ.

economic security: ಆರ್ಥಿಕ ಭದ್ರತೆ.

economic service: ಆರ್ಥಿಕ ಸೇವೆ.

economic sociology: ಆರ್ಥಿಕ ಸಮಾಜಶಾಸ್ತ್ರ.

economic stagnation: ಆರ್ಥಿಕ ಸ್ಥಗಿತತೆ.

economic statics: ಆರ್ಥಿಕ ಸ್ಥಿತಿಶಾಸ್ತ್ರ.

economic stratification: ಆರ್ಥಿಕ ಸ್ತರವಿನ್ಯಾಸ. ಸಂಪತ್ತು ಹಾಗೂ ಸಂಬಂಧಿತ ಆರ್ಥಿಕ ಅನುಕೂಲತೆಗಳ ವ್ಯತ್ಯಸ್ಥ ವಿತರಣೆಯಿಂದಾಗಿ ಜನರ ಜೀವನ ಮಟ್ಟ ಹಾಗೂ ಅವಕಾಶಗಳಲ್ಲಿ ಕಂಡುಬರುವ ಏಣಿಶ್ರೇಣಿ ಅಥವಾ ಸ್ತರವಿನ್ಯಾಸ.

economic surplus: ಆರ್ಥಿಕ ಆಧಿಕ್ಯ (ಹೆಚ್ಚಳ).

economic system: ಆರ್ಥಿಕ ವ್ಯವಸ್ಥೆ.

economic theory of rights: ಆರ್ಥಿಕ ಹಕ್ಕುಗಳ ಸಿದ್ಧಾಂತ.

economic unit: ಆರ್ಥಿಕ ಘಟಕ.

economic value: ಆರ್ಥಿಕ ಮೌಲ್ಯ. ಒಂದು ವಸ್ತುವಿನ ಆರ್ಥಿಕ ಉಪಯುಕ್ತತೆ.

economic variable: ಆರ್ಥಿಕ ಚಲ; ಆರ್ಥಿಕ ಪರಿವರ್ತಕ.

economic view: ಆರ್ಥಿಕ ದೃಷ್ಟಿಕೋನ.

economic welfare: ಆರ್ಥಿಕ ಕಲ್ಯಾಣ (ಯೋಗಕ್ಷೇಮ).

economical: ಮಿತವ್ಯಯದ; ಹಿಡಿತ ವೆಚ್ಚದ.

economics: ಅರ್ಥಶಾಸ್ತ್ರ.

economics of integration: ಸಂಯೋಜನೆಯ ಅರ್ಥಶಾಸ್ತ್ರ.

economics of intervention: ಮಧ್ಯ ಪ್ರವೇಶಿಸುವಿಕೆಯ ಅರ್ಥಶಾಸ್ತ್ರ; ಹಸ್ತ ಕ್ಷೇಪದ ಅರ್ಥಶಾಸ್ತ್ರ.

economics of welfare: ಯೋಗಕ್ಷೇಮ ಅರ್ಥಶಾಸ್ತ್ರ, ಕಲ್ಯಾಣ ಅರ್ಥಶಾಸ್ತ್ರ.

economies: ಮಿತವ್ಯಯಗಳು.

economies of disintegration: ಪ್ರತ್ಯೇಕತೆಯ ಮಿತವ್ಯಯ; ವಿಸಂಘಟನೆಯ ಮಿತವ್ಯಯ. ಒಂದು ಕೈಗಾರಿಕೆ ಬೆಳೆಯುತ್ತಾ ಹೋದಂತೆ ಉತ್ಪನ್ನದ ಕೆಲವು ಅಂಶಗಳನ್ನು ಪ್ರತ್ಯೇಕಿಸಿ ವಿಶೇಷತೆ ಪಡೆದ ನಿರ್ದಿಷ್ಟ ಕಾರ್ಖಾನೆಗಳಿಗೆ ನೀಡುವುದರಿಂದ ಉಂಟಾಗುವ ಮಿತವ್ಯಯ.

economies of information: ಸಮಾಚಾರದ ಮಿತವ್ಯಯ. ವ್ಯಾಪಾರಕ್ಕೆ ಸಂಬಂಧಿಸಿದ ಮತ್ತು ತಾಂತ್ರಿಕ ಪತ್ರಿಕೆಗಳ ಪ್ರಕಟಣೆಯಿಂದ ಹಾಗೂ ಕೇಂದ್ರ ಸಂಶೋಧನಾಲಯಗಳ ಪ್ರಕಟಣೆಯಿಂದ ದೊರೆಯುವ ಪ್ರಯೋಜನ.

economies of scale: ಪ್ರಮಾಣಾಧಾರಿತ ಮಿತವ್ಯಯ; ಪ್ರಮಾಣದ ಆರ್ಥಿಕ ಅನುಕೂಲ. ಸರಕುಗಳ ಉತ್ಪನ್ನವು ಹೆಚ್ಚುತ್ತಾ ಹೋದಂತೆ ಅವುಗಳನ್ನು ಉತ್ಪಾದಿಸುವ ಸರಾಸರಿ ವೆಚ್ಚವು ಕಡಿಮೆಯಾಗುವಂತೆ ಮಾಡುವ ಅಂಶಗಳು.

economies of specialization: ವೈಶಿಷ್ಟ್ಯತೆಯ ಮಿತವ್ಯಯ. ಯಾವುದೇ ಉದ್ದಿಮೆಯು ಬೃಹತ್ ಪ್ರಮಾಣದಲ್ಲಿ ಬೆಳೆದು ಬಂದರೆ ಅನೇಕ ಸಂಸ್ಥೆಗಳು ಆ ಉದ್ದಿಮೆಗೆ ಬೇಕಾದ ವಿವಿಧ ವಸ್ತುಗಳ ಉತ್ಪಾದನೆಯಲ್ಲಿ ವೈಶಿಷ್ಟ್ಯವನ್ನು ಪಡೆಯುವುದರಿಂದ ಉಂಟಾಗುವ ಅನುಕೂಲತೆ ಹಾಗೂ ಮಿತವ್ಯಯ.

economies of survival: ಅಸ್ತಿತ್ವದ ಮಿತವ್ಯಯಗಳು. ವಿಕೇಂದ್ರೀಕರಣದಿಂದಾಗಿ ಬೃಹತ್ ಕಾರ್ಖಾನೆಗಳಿಗೆ ಅಪಾಯವನ್ನು ತಡೆಗಟ್ಟುವ ಸಾಮರ್ಥ್ಯ ಲಭ್ಯವಾಗುವುದು.

economizing: ಉಳಿತಾಯ ಮಾಡುವಿಕೆ; ಮಿತವ್ಯಯ ಸಾಧನೆ.

economy: ಅರ್ಥವ್ಯವಸ್ಥೆ; ಆರ್ಥಿಕತೆ; ಮಿತವ್ಯಯ.

eco-sociology: ಜೀವಪರಿಸರ ಸಮಾಜಶಾಸ್ತ್ರ.

eco-system: ಜೀವವಾಸ ವ್ಯವಸ್ಥೆ; ಪರಿಸರ ವ್ಯವಸ್ಥೆ.

ecotype: ಪರಿಸರ ಪ್ರಕಾರ. ವಿಶಿಷ್ಟ ಜೀವ ಪರಿಸರ ಸನ್ನಿವೇಶದಲ್ಲಿ ವಾಸಿಸುವುದರ ಮೂಲಕ ಗುರುತಿಸಲ್ಪಡುವ ಉಪವಂಶ.

ecstasy: ಭಾವಪರವಶತೆ; ಭಾವಾವೇಶ.

edict: ರಾಜಾಜ್ಞೆ; ಶಾಸನ. ಅಶೋಕನ ಶಾಸನಗಳನ್ನು ಈ ರೀತಿ ಕರೆಯಲಾಗಿದೆ.

educated unemployment: ಸುಶಿಕ್ಷಿತರ ನಿರುದ್ಯೋಗ; ವಿದ್ಯಾವಂತರ ನಿರುದ್ಯೋಗ.

education: ವಿದ್ಯಾಭ್ಯಾಸ; ಶಿಕ್ಷಣ. ಔಪಚಾರಿಕ ಅಥವಾ ಅನೌಪಚಾರಿಕ ವಿಧಾನದ ಮೂಲಕ ಜ್ಞಾನವನ್ನು ಪ್ರಸರಿಸುವ ಪಕ್ರಿಯೆ.

education bill: ಶಿಕ್ಷಣ ಮಸೂದೆ.

educational counselling: ಶೈಕ್ಷಣಿಕ ಮಾರ್ಗದರ್ಶನ; ಶೈಕ್ಷಣಿಕ ಪರಾಮರ್ಶೆ.

educational guidance: ನೋಡಿ: educational counselling.

educational institution: ಶೈಕ್ಷಣಿಕ ಸಂಸ್ಥೆ. ಸಾಮಾಜಿಕ ಪಾತ್ರ ಹಾಗೂ ಕ್ಲಪ್ತ ಪ್ರಮಾಣಕಗಳನ್ನೊಳಗೊಂಡ ಜ್ಞಾನವನ್ನು ಪ್ರಸರಿಸುವ ಸಾಮಾಜಿಕ ಸಂಸ್ಥೆ ಅಥವಾ ವ್ಯವಸ್ಥೆ.

educational measurement: ಶೈಕ್ಷಣಿಕ ಮಾಪನ.

educational mobility: ಶೈಕ್ಷಣಿಕ ಸಂಚರಣೆ.

educational psychology: ಶೈಕ್ಷಣಿಕ ಮನಶ್ಶಾಸ್ತ್ರ; ಶೈಕ್ಷಣಿಕ ಮನೋವಿಜ್ಞಾನ.

educational quotient: ಶೈಕ್ಷಣಿಕ ತುಲನಾತ್ಮಕ ಸೂಚಿ. ವಿದ್ಯಾಭ್ಯಾಸದ ಪ್ರಾಯ ಹಾಗೂ ಕ್ರಮಾಗತ ಪ್ರಾಯದ ನಡುವಿನ ಪ್ರಮಾಣ.

educational sociology: ಶೈಕ್ಷಣಿಕ ಸಮಾಜಶಾಸ್ತ್ರ. ವಿದ್ಯಾಸಂಸ್ಥೆಗಳು ಹಾಗೂ ಇತರ ಸಾಮಾಜಿಕ ಸಂಸ್ಥೆಗಳ ನಡುವಿನ ಸಂಬಂಧವನ್ನು ತಿಳಿಸುವ ಸಮಾಜಶಾಸ್ತ್ರದ ಒಂದು ಪ್ರಮುಖ ಕ್ಷೇತ್ರ.

effect of repetition: ಪುನರಾವರ್ತನೆಯ ಪರಿಣಾಮ.

effect of taxation: ತೆರಿಗೆಯ ಪರಿಣಾಮ.

effective cause: ಪ್ರಬಲ ಕಾರಣ.

effective control: ಪರಿಣಾಮಕಾರಿ ನಿಯಂತ್ರಣ.

effective demand: ಪರಿಣಾಮಕಾರಿ ಬೇಡಿಕೆ; ಫಲಕಾರೀ ಬೇಡಿಕೆ.

effective exchange rate: ಪರಿಣಾಮಕಾರಿ ವಿನಿಮಯ ದರ.

effective fertility ratio: ಪರಿಣಾಮಕಾರಿ ಫಲೋತ್ಪನ್ನ ಅನುಪಾತ.

effeminacy: ಹೆಣ್ಣಿಗತನ; ಸ್ತ್ರೀ ಸ್ವಭಾವ.

efferent: ಬಹಿರ್ವಾಹಿ; ಅಪವಾಹಿ.

efficacy: ಪರಿಣಾಮಕಾರಿತ್ವ; ಸಫಲತ್ವ.

efficiency rating: ದಕ್ಷತಾ ಮಾಪನ. ಆಡಳಿತ ವ್ಯವಸ್ಥೆಯಲ್ಲಿ ನೌಕರರನ್ನು ಬಡ್ತಿಗಾಗಿ ಪರಿಶೀಲಿಸುವಾಗ ಅವರ ಅನುಭವ ಮತ್ತು ದಕ್ಷತೆಯನ್ನು ಅಳೆಯುವ ವಿಧಾನ.

efficiency record: ದಕ್ಷತಾ ದಾಖಲೆ; ಕಾರ್ಯದಕ್ಷತೆಯ ದಾಖಲೆ. ನೌಕರರ ಅನುಭವ ಮತ್ತು ಕೆಲಸಕ್ಕೆ ಸಂಬಂಧಿಸಿದ ದಾಖಲೆಗಳು.

efficiency survey: ಕಾರ್ಯದಕ್ಷತೆಯ ಸಮೀಕ್ಷೆ.

efficient cause: ನಿಮಿತ್ತ ಕಾರಣ.

effigy: ಪ್ರತಿಕೃತಿ.

effigy magic: ಪ್ರತಿಮಾ ಮಾಟ. ಪ್ರತಿಕೃತಿಯನ್ನು ನೈಜವಸ್ತು ಎಂದು ಪರಿಗಣಿಸಿ ಮಾಡಲಾಗುವ ಮಾಟ.

effort syndrome: ಸಂಕಟ ಮನೋಬೇನೆ; ಸಂಕಟದ ಲಕ್ಷಣಗಳು. ಬಿಕ್ಕಳಿಕೆ, ರಕ್ತದ ಒತ್ತಡ, ಉಸಿರಾಟದ ತೊಂದರೆ, ಸುಸ್ತು ಇವು ಮುಖ್ಯ ಲಕ್ಷಣಗಳು.

egalitarian society: ಸರಿಸಮಾನತೆಯ ಸಮಾಜ.

ego: ಅಹಂ; ಅಹಮಿಕೆ; ಸ್ವಪರಿಕಲ್ಪನೆ.

ego defence: ಅಹಂ ರಕ್ಷಣೆ.

ego defence mechanism: ಅಹಂ ರಕ್ಷಣಾ ತಂತ್ರ ಉದಾ: ಪ್ರತಿಕ್ರಿಯೆ. ನೋಡಿ: defensive mechanism.

egocentric stage: ಸ್ವಕೇಂದ್ರಿತ ಹಂತ.

egocentrism: ಅಹಂ ಭಾವ; ಅಹಂ ಕೇಂದ್ರಿತ್ವ.

egoism: ಅಹಂವಾದ; ಆತ್ಮಪ್ರತ್ಯಯ.

egoistic: ಆತ್ಮಕೇಂದ್ರಿತ.

egoistic hedonism: ಸ್ವಸುಖವಾದ.

egoistic suicide: ಆತ್ಮಕೇಂದ್ರಿತ ಆತ್ಮಹತ್ಯೆ. ಸ್ವಪ್ರತಿಷ್ಠೆಯ ಭಾವದಿಂದ ಪ್ರೇರಿತ ಆತ್ಮಹತ್ಯೆ.

eidetic image: ಸುಸ್ಪಷ್ಟ ಪ್ರತಿಮೆ. ಅವಾಸ್ತವವಾಗಿದ್ದರೂ ಕಲ್ಪನೆಯಲ್ಲಿ ಸ್ಪಷ್ಟರೂಪ ಪಡೆದಿರುವ ಪ್ರತಿಮೆ.

eidolism: ಪ್ರೇತವಾದ; ಅಶರೀರ ಆತ್ಮದ ಬಗ್ಗೆ ನಂಬಿಕೆ.

eidos: ಸಾಂಸ್ಕೃತಿಕ ವ್ಯಕ್ತಾಂಶಗಳು. ಒಂದು ಸಮಾಜದಲ್ಲಿ ಪ್ರಚಲಿತವಿರುವ ಅಥವಾ ವ್ಯಕ್ತ ಆದರ್ಶಗಳ ಸಮುಚ್ಚಯ.

eight fold path: ಅಷ್ಟಾಂಗ ಮಾರ್ಗ. ಬುದ್ಧನು ದೇಹ, ಮನಸ್ಸು ಮತ್ತು ಚಿತ್ತವನ್ನು ಶುದ್ಧಗೊಳಿಸಲು ಪ್ರತಿಪಾದಿಸಿದ ಮಾರ್ಗ.

eistotrophobia: ದರ್ಪಣ ಭೀತಿ. ಕನ್ನಡಿಗಳನ್ನು ಕಂಡಾಗ ಉಂಟಾಗುವ ಭೀತಿ.

elaborated code: ವಿಶದ ಸಂಕೇತ ಭಾಷೆ ಸಂಗ್ರಹಾರ್ಥಗಳಿಗೆ ನಿರ್ದೇಶಿಸುವುದಕ್ಕಾಗಿ ಉದ್ದೇಶಪೂರ್ವಕವಾಗಿ ರಚಿಸಿದ ಮಾತಿನ ವಿಧಾನ.

elasticity: ಸ್ಥಿತಿಸ್ಥಾಪಕತ್ವ; ಸ್ಥಿತಿಸ್ಥಾಪಕತೆ; ಪುಟತ್ವ.

elasticity co-efficient: ಸ್ಥಿತಿಸ್ಥಾಪಕತ್ವ ಗುಣಾಂಕ.

elasticity of demand: ಬೇಡಿಕೆಯ ಸ್ಥಿತಿಸ್ಥಾಪಕತ್ವ.

elasticity of finance: ಹಣಕಾಸಿನ ಸ್ಥಿತಿ ಸ್ಥಾಪಕತ್ವ.

elasticity of price expectation: ಬೆಲೆ ನಿರೀಕ್ಷೆಯ ಸ್ಥಿತಿಸ್ಥಾಪಕತ್ವ.

elasticity of substitution: ಪ್ರತಿ ನಿದಾನದ ಸ್ಥಿತಿಸ್ಥಾಪಕತ್ವ. ಬದಲೀ ಸ್ಥಿತಿ ಸ್ಥಾಪಕತ್ವ; ಪರ್ಯಾಯ ಸ್ಥಿತಿಸ್ಥಾಪಕತ್ವ.

elasticity of supply: ಪೂರೈಕೆಯ ಸ್ಥಿತಿಸ್ಥಾಪಕತ್ವ.

elected executive: ಚುನಾಯಿತ ಕಾರ್ಯಾಂಗ.

elected member: ಚುನಾಯಿತ ಸದಸ್ಯ.

election alliance: ಚುನಾವಣಾ ಮೈತ್ರಿ.

election commission: ಚುನಾವಣಾ ಆಯೋಗ.

election commissioner: ಚುನಾವಣಾ ಆಯುಕ್ತ.

election fatigue: ಚುನಾವಣಾ ದಣಿವು; ಚುನಾವಣಾ ಬಳಲಿಕೆ. ಮೇಲಿಂದ ಮೇಲೆ ನಡೆಯುವ ಚುನಾವಣೆಗಳಿಂದ ಜನರು ಚುನಾವಣೆಯ ಬಗ್ಗೆ ಉದಾಸೀನತೆ ತೋರಿಸುವುದು. ಇದರಿಂದಾಗಿ ಚುನಾವಣೆಯಲ್ಲಿ ಅಲ್ಪಸಂಖ್ಯೆಯಲ್ಲಿ ಮತದಾರರು ಭಾಗವಹಿಸುವುದು.

election intrigue: ಚುನಾವಣಾ ಒಳಸಂಚು.

election manifesto: ಚುನಾವಣಾ ಪ್ರಣಾಳಿಕೆ; ಚುನಾವಣಾ ಘೋಷಣಾಪತ್ರ.

election petition: ಚುನಾವಣಾ ತಕರಾರು ಅರ್ಜಿ.

election process: ಚುನಾವಣಾ ಪ್ರಕ್ರಿಯೆ.

election propaganda: ಚುನಾವಣಾ ಪ್ರಚಾರ. ನೋಡಿ: electioneering.

electioneering: ಚುನಾವಣಾ ಪ್ರಚಾರ. ಮುಂದೆ ನಡೆಯಲಿರುವ ಚುನಾವಣೆಯಲ್ಲಿ ಅಭ್ಯರ್ಥಿ ಇಲ್ಲವೇ ರಾಜಕೀಯ ಪಕ್ಷದ ಪರವಾಗಿ ಮತ ಗಳಿಸಲು ನಡೆಸುವ ಪ್ರಚಾರ.

elective affinity: ಆಯ್ಕೆಯ ಸಂಯೋಗ. ಕೆಲವು ಪದಾರ್ಥಗಳನ್ನು ಬಿಟ್ಟು ಮತ್ತೆ ಕೆಲವುಗಳೊಡನೆ ಸಂಯೋಗ ಹೊಂದುವ ಪ್ರವೃತ್ತಿ. ಅಂತೆಯೇ ಸಾಹ ಚರ್ಯಕ್ಕಾಗಿ ವ್ಯಕ್ತಿಗಳೂ ಕೆಲವರನ್ನೇ ಆಯ್ದುಕೊಳ್ಳುತ್ತಾರೆ.

electoral college: ಚುನಾಯಕ ಮಂಡಳಿ. ಅಮೇರಿಕಾದಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಆಯ್ಕೆ ಮಾಡಲು ಅಧಿಕಾರ ಹೊಂದಿರುವ, ಜನರಿಂದಲೇ ನೇರವಾಗಿ ಆಯ್ಕೆ ಮಾಡಲ್ಪಟ್ಟ ಮತದಾರರ ಸಮೂಹ. ಭಾರತದಲ್ಲಿ ಕೂಡ ಅಧ್ಯಕ್ಷ ಉಪಾಧ್ಯಕ್ಷರನ್ನು ಆಯ್ಕೆ ಮಾಡುವ ಮತದಾರರ ಸಮೂಹ ವನ್ನು ಈ ರೀತಿ ಕರೆಯಲಾಗುತ್ತದೆ.

electoral system: ಚುನಾವಣಾ ವಿಧಾನ.

electorate: ಮತದಾರರ ವರ್ಗ; ಚುನಾಯಕ ಸಮುದಾಯ.

electra complex: ಪಿತೃಕಾಮನೆ. ತಂದೆಯ ಬಗ್ಗೆ ಮಗಳಿಗಿರುವ ಪಿತೃಕಾಮನೆ. ತಂದೆಯ ಪ್ರೀತಿಯನ್ನು ಗಳಿಸುವಲ್ಲಿ ತಾಯಿಯೇ ತನಗೆ ಪ್ರತಿಸ್ಪರ್ಧಿಯೆಂದು ಭಾವಿಸುವ ಮಗಳ ಸಂಕೀರ್ಣ ಮನೋಭಾವ.

electric shock method: ವಿದ್ಯುದಾಘಾತ ವಿಧಾನ.

electric shock treatment: ವಿದ್ಯುದಾಘಾತ ಚಿಕಿತ್ಸೆ.

electro-convulsive therapy: ವಿದ್ಯುತ್ ಸೆಳೆವು ಚಿಕಿತ್ಸೆ; ವಿದ್ಯುದಾಘಾತ ಚಿಕಿತ್ಸೆ. ಮನೋವಿಕೃತಿಗಳಿಗೆ, ಮುಖ್ಯವಾಗಿ ವಿಷಾದ ಮತ್ತು ಭಯಗಳಿಗೆ ಕೊಡುವ ಚಿಕಿತ್ಸೆ.

elementary family: ಪ್ರಾಥಮಿಕ ಕುಟುಂಬ, ಗಂಡ, ಹೆಂಡತಿ ಮತ್ತು ಅವರ ವಿವಾಹವಾಗದ ಮಕ್ಕಳು (ದತ್ತು ಮಕ್ಕಳನ್ನು ಸೇರಿಸಿ) ಇರುವ ಕುಟುಂಬ.

elementary term: ಪ್ರಾಥಮಿಕ ಪದ.

elements of nationality: ರಾಷ್ಟ್ರೀಯತೆಯ ಮೂಲಾಂಶಗಳು. ಒಂದೇ ಕಡೆ ವಾಸ್ತವ್ಯ, ಒಂದೇ ಬುಡಕಟ್ಟು, ಒಂದೇ ಭಾಷೆ, ಒಂದೇ ಮತ, ಒಂದೇ ಇತಿಹಾಸ, ಒಂದೇ ಸಂಸ್ಕೃತಿ, ಸಮಾನ ರಾಜಕೀಯ ಆಕಾಂಕ್ಷೆಗಳು, ಸಮಾನ ಆರ್ಥಿಕ ಆಸಕ್ತಿಗಳು, ಒಂದೇ ಸರಕಾರ ಇತ್ಯಾದಿಗಳು ರಾಷ್ಟ್ರೀಯತೆಯ ಮೂಲಾಂಶಗಳೆನಿಸಿಕೊಂಡಿವೆ.

elements of state: ರಾಜ್ಯದ ಮೂಲಾಂಶಗಳು. ರಾಜ್ಯದ ಅಸ್ತಿತ್ವಕ್ಕೆ ಅವಶ್ಯಕವಾಗಿ ಬೇಕಾಗಿರುವ ಮೂಲಾಂಶಗಳು. ಜನಸಂಖ್ಯೆ, ಸರಕಾರ, ಭೂಪ್ರದೇಶ ಮತ್ತು ಪರಮಾಧಿಕಾರ ಇತ್ಯಾದಿ.

elephas namadicus: ಪ್ರಾಣಿವರ್ಗದ ಅಸ್ಥಿ ಅವಶೇಷಗಳು.

elevation: ಊರ್ಧ್ವ ನಕಾಶೆ; ವಾಸ್ತುವಿನ ಊರ್ಧ್ವ ವಿನ್ಯಾಸ.

elite class: ಗಣ್ಯರ ವರ್ಗ; ಪ್ರತಿಷ್ಠಿತರ ವರ್ಗ.

elite power: ಗಣ್ಯರ ಅಧಿಕಾರ.

elites: ಗಣ್ಯರ ವರ್ಗ; ಪ್ರತಿಷ್ಠಿತರ ವರ್ಗ.

elitism: ಗಣ್ಯತನ.

elitist: ಪ್ರತಿಷ್ಠಿತ.

emancipation of labour class: ಶ್ರಮಿಕ ಸಮೂಹದ ವಿಮೋಚನೆ; ಕಾರ್ಮಿಕರ ವಿಮೋಚನೆ. ಬಂಡವಾಳಶಾಹಿಗಳ ಶೋಷಣೆಗೆ ಒಳಗಾದ ಕಾರ್ಮಿಕರನ್ನು ವಿಮೋಚನೆಗೊಳಿಸುವುದು.

embalming: ಶವಸಂಸ್ಕರಣೆ; ಶವ ಸಂಲೇಪನ. ಶವಕೆಡದಂತೆ ಕೆಲವೊಂದು ಗಿಡ ಮೂಲಿಕೆಗಳ ರಸದ ಲೇಪನದಿಂದ ರಕ್ಷಿಸುವುದು.

embargo: ಬಂದರಿನ ದಿಗ್ಬಂಧನ. ಯಾವುದೇ ದೇಶದ ಸರಕಾರವು ಹಡಗು ಸಾಗಾಣಿಕೆಯ ಮೂಲಕ ನಡೆಸುವ ವಾಣಿಜ್ಯ ವ್ಯಾಪಾರ ನಿಷೇಧ.

embassy: ದೂತಾವಾಸ.

embryo: ಭ್ರೂಣ.

emergency: ತುರ್ತುಪರಿಸ್ಥಿತಿ.

emergency measure: ತುರ್ತು ಕ್ರಮ.

emergency planning: ತುರ್ತು ಯೋಜನೆ.

emergency power: ತುರ್ತು ಪರಿಸ್ಥಿತಿಯ ಅಧಿಕಾರ. ದೇಶದೊಳಗೆ ಉಂಟಾಗಬಹುದಾದ ಜರೂರು ಪರಿಸ್ಥಿತಿ ಗಳನ್ನು ಎದುರಿಸಲು ಸಾಧ್ಯವಾಗುವಂತೆ ದೇಶದ ಕಾರ್ಯಾಂಗೀಯ ಮುಖ್ಯಸ್ಥನು ಚಲಾಯಿಸುವ ಅಧಿಕಾರ. ಉದಾ: ಭಾರತದ ರಾಷ್ಟ್ರಪತಿಯು ಮೂರು ಬಗೆಯ ತುರ್ತು ಪರಿಸ್ಥಿತಿ ಅಧಿಕಾರಗಳನ್ನು ಚಲಾಯಿಸಬಹುದು: ೧. ರಾಷ್ಟ್ರೀಯ ತುರ್ತುಪರಿಸ್ಥಿತಿ. ೨. ಆಡಳಿತಾತ್ಮಕ ತುರ್ತು ಪರಿಸ್ಥಿತಿ. ೩. ಹಣಕಾಸಿನ ತುರ್ತುಪರಿಸ್ಥಿತಿ.

emergency theory of emotion: ಸಂವೇಗದ ಅವಸರ ಸಿದ್ಧಾಂತ; ಸಂವೇಗದ ಜರೂರು ಸಿದ್ಧಾಂತ.

emergent evolution: ಉತ್ಪನ್ನ ವಿಕಾಸ. ಮೂಲ ಅಂಶಗಳ ವಿಶಿಷ್ಟ ಹೊಂದಾಣಿಕೆಯ ಫಲವಾಗಿ ಉತ್ಪನ್ನಗೊಳ್ಳುವ ಪರಿವರ್ತಿತ ಸ್ವರೂಪದ ವಿಕಾಸ.

emergent quality: ಉತ್ಪನ್ನ ಗುಣ.

emerging society: ಉಗಮಿಸುವ ಸಮಾಜ.

emigration: ಹೊರವಲಸೆ; ದೇಶಾಂತರ ವಲಸೆ.

emotion: ಉದ್ವೇಗ.

emotional activity: ಸಂವೇಗಾತ್ಮಕ ಕ್ರಿಯೆ; ಭಾವಾತ್ಮಕ ಕ್ರಿಯೆ.

emotional adjustment: ಭಾವಾತ್ಮಕ ಹೊಂದಾಣಿಕೆ.

emotional apathy: ಸಂವೇಗಾತ್ಮಕ ನಿರಾಸಕ್ತಿ.

emotional balance: ಸಂವೇಗಾತ್ಮಕ ಸಮತೋಲನ; ಭಾವ ಸಮತೋಲನ.

emotional behaviour: ಸಂವೇಗಾತ್ಮಕ ವರ್ತನೆ.

emotional bias: ಸಂವೇಗಾತ್ಮಕ ಪಕ್ಷಪಾತ.

emotional blocking: ಸಂವೇಗಾತ್ಮಕ ಅಡಚಣೆ; ಭಾವಾತ್ಮಕ ಅಡ್ಡಿ.

emotional commitment: ಸಂವೇಗಾತ್ಮಕ ಬದ್ಧತೆ.

emotional conflict: ಸಂವೇಗಾತ್ಮಕ ಒಳತೋಟಿ.

emotional control: ಸಂವೇಗಾತ್ಮಕ ನಿಯಂತ್ರಣ; ಭಾವ ನಿಯಂತ್ರಣ.

emotional dementia: ಸಂವೇಗಾತ್ಮಕ ಮನೋವಿದಳನ.

emotional deprivation: ಸಂವೇಗಾತ್ಮಕ ಚ್ಯುತಿ, ಸಂವೇಗಾತ್ಮಕ ಹಾನಿ.

emotional development: ಸಂವೇಗಾತ್ಮಕ ವಿಕಾಸ; ಸಂವೇಗಾತ್ಮಕ ಬೆಳವಣಿಗೆ.

emotional disorder: ಸಂವೇಗಾತ್ಮಕ ವಿಕಾರ.

emotional disposition: ಸಂವೇಗಾತ್ಮಕ ಪ್ರವೃತ್ತಿ.

emotional disturbance: ಸಂವೇಗಾತ್ಮಕ ಕ್ಷೋಭೆ.

emotional ecstasy: ಸಂವೇಗಾತ್ಮಕ ಭಾವಾವೇಶ.

emotional excitement: ಸಂವೇಗಾತ್ಮಕ ಉದ್ವೇಗ.

emotional expression: ಸಂವೇಗಾತ್ಮಕ ಅಭಿವ್ಯಕ್ತಿ; ಭಾವಾಭಿವ್ಯಕ್ತಿ; ಸಂವೇಗಾಭಿವ್ಯಕ್ತಿ.

emotional fixation: ಸಂವೇಗಾತ್ಮಕ ಸ್ಥಿರೀಕರಣ.

emotional forgetting: ಸಂವೇಗಾತ್ಮಕ ವಿಸ್ಮರಣೆ.

emotional growth: ಸಂವೇಗಾತ್ಮಕ ಬೆಳವಣಿಗೆ.

emotional immaturity: ಬಾಲಿಶ ಭಾವುಕತೆ; ಸಂವೇಗಾತ್ಮಕ ಅಪರಿಪಕ್ವತೆ. ತನ್ನ ವಯಸ್ಸಿಗೆ ತಕ್ಕುದಲ್ಲದ ಕೆಳಮಟ್ಟದ ಭಾವುಕತೆ.

emotional insecurity: ಸಂವೇಗಾತ್ಮಕ ಅರಕ್ಷಿತತೆ.

emotional instability: ಭಾವ ಚಾಂಚಲ್ಯ; ಸಂವೇಗಾತ್ಮಕ ಅಸ್ಥಿರತೆ.

emotional maladjustment: ಸಂವೇಗಾತ್ಮಕ ಅಪಹೊಂದಾಣಿಕೆ.

emotional maturity: ಸಂವೇಗಾತ್ಮಕ ಪರಿಪಕ್ವತೆ.

emotional mood: ಸಂವೇಗಾತ್ಮಕ ಚಿತ್ತಸ್ಥಿತಿ.

emotional reaction: ರಸಭಾವದ ಪ್ರತಿಕ್ರಿಯೆ; ಸಂವೇಗಾತ್ಮಕ ಪ್ರತಿಕ್ರಿಯೆ.

emotional readiness: ಸಂವೇಗಾತ್ಮಕ ಸಿದ್ಧತೆ.

emotional reinforcement: ಸಂವೇಗಾತ್ಮಕ ಪುನರ್ಬಲನ.

emotional response: ಸಂವೇಗಾತ್ಮಕ ಪ್ರತಿಕ್ರಿಯೆ.

emotional shock: ಸಂವೇಗಾತ್ಮಕ ಆಘಾತ; ಭಾವಾಘಾತ.

emotional stability: ಸಂವೇಗಾತ್ಮಕ ಸ್ಥಿರತೆ.

emotional stress: ಭಾವ ತೀವ್ರತೆ; ಸಂವೇಗಾತ್ಮಕ ಸಂಕ್ಷೋಭೆ; ಭಾವ ಸಂಕ್ಷೋಭೆ

emotional symptom: ಸಂವೇಗಾತ್ಮಕ ರೋಗಲಕ್ಷಣ.

emotional temperament: ಭಾವ ಪ್ರಕೃತಿ; ಸಂವೇಗಾತ್ಮಕ ಚಿತ್ತಪ್ರಕೃತಿ.

emotional tendency: ಸಂವೇಗಾತ್ಮಕ ಪ್ರವೃತ್ತಿ.

emotional tension: ಸಂವೇಗಾತ್ಮಕ ಉದ್ವೇಗ.

emotional violence: ಸಂವೇಗಾತ್ಮಕ ಹಿಂಸೆ.

emotional warmth: ಸಂವೇಗಾತ್ಮಕ ಅನುರಾಗ.

emotionality: ಸಂವೇಗಾತ್ಮಕತೆ; ಭಾವಾತ್ಮಕತೆ; ಭಾವುಕತೆ.

emotionally unstable personality: ಉದ್ವಿಗ್ನ ವ್ಯಕ್ತಿತ್ವ. ಹತೋಟಿಯಲ್ಲಿಲ್ಲದ ಭಾವನೆಗಳು, ಕೋಪ, ಭಯ, ಉದ್ವಿಗ್ನತೆ, ಚಿತ್ತ ಶಾಂತಿಯಿಲ್ಲದ ವ್ಯಕ್ತಿತ್ವ.

emotive memory: ಭಾವೋದ್ವೇಗ ಕಾರಕ ಸ್ಮೃತಿ; ಸಂವೇಗಾತ್ಮಕ ಸ್ಮೃತಿ.

emotive theory: ಸಂವೇಗಾತ್ಮಕತಾ ಸಿದ್ಧಾಂತ.

empathy: ಅನುಭೂತಿಶಕ್ತಿ.

empirical: ಅನುಭವಾತ್ಮಕ; ಇಂದ್ರಿಯಾನುಭವಾತ್ಮಕ.

empirical ego: ಅನುಭವಾತ್ಮಕ ಅಹಂ.

empirical fact: ಅನುಭವಾತ್ಮಕ ತಥ್ಯಾಂಶ.

empirical generalization: ಅನುಭವಾತ್ಮಕ ಸಾಮಾನ್ಯೀಕರಣ, ಪ್ರಯೋ ಗಾತ್ಮಕ ಸಾಮಾನ್ಯೀಕರಣ.

empirical hedonism: ಅನುಭವಾತ್ಮಕ ಸುಖವಾದ.

empirical law: ಅನುಭವಾತ್ಮಕ ನಿಯಮ.

empirical macro economics: ಪ್ರಾಯೋಗಿಕ ಸಮಗ್ರ ಅರ್ಥಶಾಸ್ತ್ರ.

empirical method: ನೋಡಿ: empiricism.

empirical observation: ಅನುಭವಾತ್ಮಕ ಅವಲೋಕನ.

empirical psychology: ಅನುಭವಾತ್ಮಕ ಮನೋವಿಜ್ಞಾನ.

empirical regularity: ಅನುಭವಾತ್ಮಕ ನಿಯಮಿತತೆ.

empirical research: ಅನುಭವಾತ್ಮಕ ಸಂಶೋಧನೆ; ಪ್ರಾಯೋಗಿಕ ಸಂಶೋಧನೆ.

empirical self: ಅನುಭವಾತ್ಮಕ ಸ್ವಂತಿಕೆ; ಇಂದ್ರಿಯಾನುಭವಿತ ಆತ್ಮ; ಜೀವಾತ್ಮ.

empirical test: ಪ್ರಾಯೋಗಿಕ ಪರೀಕ್ಷೆ.

empirical theory: ಪ್ರಾಯೋಗಿಕ ಸಿದ್ಧಾಂತ.

empirical trend: ಪ್ರಾಯೋಗಿಕ ಒಲವು.

empiricism: ಅನುಭವವೇದ್ಯವಾದ; ಅನುಭವೈಕ ವಾದ; ಪ್ರಯೋಗವಾದ. ಅನುಭವ ಅಥವಾ ಪ್ರಯೋಗವೊಂದೇ ಜ್ಞಾನಕ್ಕೆ ಮೂಲಾಧಾರವೆಂದು ಪ್ರತಿಪಾದಿಸುವ ತತ್ವ (ವಾದ).

empirio-criticism: ಅನುಭವಾತ್ಮಕ ಟೀಕಾ ವಾದ.

employee counselling: ಉದ್ಯೋಗೀ ಪರಾಮರ್ಶೆ; ಉದ್ಯೋಗೀ ಉಪಬೋಧನೆ.

employee society: ನೌಕರ ಸಮಾಜ. ಶ್ರೇಣಿ, ಸ್ಥಾನಮಾನಗಳು ಪ್ರಾಮುಖ್ಯ ವಾಗಿದ್ದು ವ್ಯಕ್ತಿ-ವ್ಯಕ್ತಿಗಳ ಸಂಬಂಧಗಳು ಹೆಚ್ಚು ಔಪಚಾರಿಕವಾಗಿರುವ ಸಮಾಜ.

employee's union: ನೌಕರರ ಸಂಘ. ಕಾರ್ಮಿಕರ ಸಂಘ. ನೌಕರರು ಒಗ್ಗಟ್ಟಿನ ಭಾವನೆಯಿಂದ ಸಂಘಟಿತರಾಗಿ ಸಾಮೂಹಿಕ ವಾಗಿ ತಮ್ಮ ಕಷ್ಟ-ನಷ್ಟಗಳ ನಿವಾರಣೆಗಾಗಿ ಹೋರಾಡುವ ಸಂಘಟನೆ. ಈ ಸಂಘ ನೌಕರರಿಗೆ ಉತ್ತಮ ವೇತನ, ನಿಗದಿತ ಕೆಲಸದ ವೇಳೆ, ರಜೆ ಸೌಲಭ್ಯ ಮುಂತಾದವು ಗಳನ್ನು ಒದಗಿಸಿಕೊಡಲು ಆಡಳಿತ ವರ್ಗ ದವರಲ್ಲಿ ಹಕ್ಕೊತ್ತಾಯ ಮಂಡಿಸುತ್ತದೆ.

employing suburb: ಉದ್ಯೋಗದ ಚಿಕ್ಕನಗರ.

employment argument: ಉದ್ಯೋಗ ವಾದ.

employment exchange: ಉದ್ಯೋಗ ವಿನಿಮಯ.

employment function: ಉದ್ಯೋಗದ ಕಾರ್ಯ.

employment model: ಉದ್ಯೋಗ ಮಾದರಿ.

employment multiplier: ಉದ್ಯೋಗ ಗುಣಕ. ಹೂಡಿಕೆಯ ಹೆಚ್ಚಳದಿಂದಾಗಿ ಉದ್ಯೋಗದ ಮೇಲಾಗುವ ಪರಿಣಾಮ.

employment policy: ಉದ್ಯೋಗ ನೀತಿ.

employment psychology: ಉದ್ಯೋಗ ಮನೋವಿಜ್ಞಾನ.

employment service: ಉದ್ಯೋಗ ಸೇವೆ.

enacted constitution: ಶಾಸನೀಕೃತ ಸಂವಿಧಾನ.

enacted law: ಶಾಸನೀಕೃತ ಕಾನೂನು.

enacted social institution: ಶಾಸನೀಕೃತ ಸಾಮಾಜಿಕ ಸಂಸ್ಥೆ. ಒಂದು ನಿರ್ದಿಷ್ಟ ಉದ್ದೇಶಕ್ಕಾಗಿ ಸ್ಥಾಪಿಸಲ್ಪಟ್ಟ ಸಂಘಟನೆ.

enactment: ಕಾನೂನು; ಶಾಸನ.

enclosure: ಪ್ರಾಕಾರ; ದೇಗುಲದ ಸುತ್ತಲಿ ರುವ ರಕ್ಷಣಾಗೋಡೆ (ರಕ್ಷಣಾ ಬೇಲಿ).

encroachment: ಅತಿಕ್ರಮಣ; ಆಕ್ರ ಮಣ.

enculturation: ಸಂಸ್ಕೃತಿ ಸ್ವೀಕರಣ ಪ್ರಕ್ರಿಯೆ. ಒಂದು ಸಮಾಜದ ಸಾಂಸ್ಕೃತಿಕ ಪರಂಪರೆಯನ್ನು ಗಳಿಸುವ ಪ್ರಕ್ರಿಯೆ.

encyclopedic sociology: ವಿಶ್ವ ಕೋಶೀಯ ಸಮಾಜಶಾಸ್ತ್ರ.

endless tale: ಅಂತ್ಯವಿಲ್ಲದ ಕಥೆ. ಜಾನ ಪದ ಕಥೆಗಳಲ್ಲಿ ಕೆಲವು ಸರಣಿ ಕಥೆಗಳು ಬೆಳೆದು ಅವು ಅಂತ್ಯವಿಲ್ಲದ ಕಥೆಗಳಾಗಿ ಮುಂದುವರಿಯುತ್ತಲೇ ಇರುತ್ತವೆ. ಉದಾ: ಬೇತಾಳ ಕಥೆ.

endo cannibalism: ಸ್ವಕುಲದ ವ್ಯಕ್ತಿಯ ಭಕ್ಷಣೆ. ತನ್ನ ಪಂಗಡದ ವ್ಯಕ್ತಿಯನ್ನೇ ಬಲಿಪಶುವಾಗಿಸಿ, ಆತನ ಮಾಂಸ ಸೇವಿಸು ವುದು.

endo psychic process: ಅಂತರ್ಮಾನಸ ಪ್ರಕ್ರಿಯೆ.

endogamous community: ಒಳ ಬಾಂಧವ್ಯ ಸಮುದಾಯ.

endogamous status group:

ಒಳಬಾಂಧವ್ಯ ಅಂತಸ್ತು ಸಮೂಹ. ಸದಸ್ಯನು ತನ್ನ ಪಂಗಡದೊಳಗೇ ವಿವಾಹ ವಾಗಬೇಕಾಗಿರುವ ಉಭಯ ವಂಶೀಯ ರಕ್ತಸಂಬಂಧದ ಗುಂಪು. ಉದಾ: ಭಾರತದ ಜಾತಿ ವ್ಯವಸ್ಥೆ.

endogamy: ಒಳಬಾಂಧವ್ಯ; ಒಳವಿವಾಹ ಪದ್ಧತಿ. ಒಂದು ಜನಸಂಖ್ಯಾ ಪಂಗಡದ ಒಳಗೇ ಕಡ್ಡಾಯ ವಿವಾಹವಾಗುವುದು.

endogenous variable: ಆಂತರಿಕ ಚಲ.

endomorph: ಅಂತರ್ರಚನೆ.

endomorphy: ಅಂತರ್‌ರೂಪ.

endorsee: ಷರಾ ಬರೆಸಲ್ಪಟ್ಟಾತ. ಯಾರ ಪರವಾಗಿ ಹಿಂಬರಹ ಬರೆಯಲಾಗಿದೆಯೋ ಆತ.

endorser: ಷರಾ ಬರೆಯುವಾತ; ಹಿಂಬರಹಗಾರ.

endowment fund: ದತ್ತಿ ನಿಧಿ.

enforcement: ಜಾರಿಗೊಳಿಸುವಿಕೆ.

engrailed arches: ಗರಗಸದ ಹಲ್ಲಿನಂತಿರುವ ಕಮಾನುಗಳು.

engineering psychology: ತಾಂತ್ರಿಕ (ಎಂಜಿನಿಯರಿಂಗ್) ಮನೋವಿಜ್ಞಾನ.

enlightened monarchy: ಪ್ರಗತಿಪರ ಅರಸೊತ್ತಿಗೆ.

enrichment: ಸಮೃದ್ಧಿಗೊಳಿಸುವಿಕೆ.

entablature: ಪ್ರಸ್ತರ; ವಿಮಾನ ಮಾದರಿಯ ದೇಗುಲದ ಪಾವಟ ಭಿತ್ತಿಯ ಮೇಲ್ಭಾಗ.

enterprise: ಉದ್ಯಮಘಟಕ.

enterprise culture: ಉದ್ಯಮ ಸಂಸ್ಕೃತಿ.

entertainment tax: ಮನರಂಜನಾ ತೆರಿಗೆ.

entrepreneur: ಉದ್ಯಮ ಸಾಹಸಿ; ವ್ಯವಹಾರ ಸಾಹಸಿ; ನಿರ್ವಹಣಾ ಸಾಹಸಿ.

entrepreneurship: ವ್ಯವಹಾರ ನಿರ್ವಹಣೆ; ಉದ್ಯಮಶೀಲತೆ.

enumerated power: ನಿರೂಪಿತ ಅಧಿಕಾರ.

enumerated subject: ನಿರೂಪಿತ ವಿಷಯ.

enumeration: ಗಣನೆ; ಗಣತಿ.

enumeration district: ಗಣತಿಯ ಜಿಲ್ಲೆ.

enveloping curve: ಆವೃತ ರೇಖೆ.

environment: ಪರಿಸರ; ಪರ್ಯಾವರಣ; ಸನ್ನಿವೇಶ; ವಾತಾವರಣ.

environmental economics: ಪರಿಸರ ಅರ್ಥಶಾಸ್ತ್ರ. ಮಾನವನ ಉಪಯುಕ್ತತೆ ಮತ್ತು ಸಂಪನ್ಮೂಲಗಳ ಉಪಯೋಗಗಳಿಗೆ ಸಂಬಂಧಿಸಿದ ವಿಷಯಗಳ ಅಧ್ಯಯನ.

environmental education: ಪರಿಸರ ಶಿಕ್ಷಣ.

environmental protection: ಪರಿಸರ ಸಂರಕ್ಷಣೆ.

environmental purification: ಪರಿಸರ ನಿರ್ಮಲೀಕರಣ.

environmental stimulus: ಪರಿಸರ ಪ್ರಚೋದಕ.

environmental warfare: ಪರಿಸರ ಯುದ್ಧ. ಯುದ್ಧ ಮತ್ತಿತರ ವಿನಾಶಕಾರಕ ಕೃತ್ಯಗಳಿಗಾಗಿ ಪರಿಸರವನ್ನೇ ಬದಲಿಸುವಂತಹ ಸಮರ ತಂತ್ರ.

environmentalism: ಪರಿಸರವಾದ.

envoutement: ಅನುಕರಣ ಮಾಟ. ನೋಯಿಸಬೇಕಾದ ವ್ಯಕ್ತಿಯ ಆಕೃತಿಯನ್ನು

ಮಾಡಿ ಅದಕ್ಕೆ ನೋವು ತಂದು ಈ ನೋವು ಆ ವ್ಯಕ್ತಿಗೆ ಪ್ರಸಾರವಾಗುತ್ತದೆಂಬ ನಂಬಿಕೆ.

eonism: ವಿಲಿಂಗಿ ವಸ್ತ್ರಧಾರಣವಾದ. ಗಂಡಸರು ಹೆಂಗಸರ ಹಾಗೂ ಹೆಂಗಸರು ಗಂಡಸರ ಉಡುಪು ಧರಿಸಲು ಬಯಸುವುದು. ಉದಾ: ಎಲ್ಲಮ್ಮನ ಜೋಗತಿ ಮತ್ತು ಜೋಗಪ್ಪಗಳ ವಿಲಿಂಗಿ ವಸ್ತ್ರ ಧಾರಣೆ. ನೋಡಿ: cross dressing; transvertism.

ephemeral group: ಕ್ಷಣಿಕ ಸಮೂಹ.

epic of growth: ವಿಕಾಸದ ಮಹಾಕಾವ್ಯ.

epic performance tradition: ಮಹಾಕಾವ್ಯ ಪ್ರದರ್ಶನ ಸಂಪ್ರದಾಯ.

epic singer: ಮಹಾಕಾವ್ಯ ಗಾಯಕ.

epical ornamentation: ಕಾವ್ಯಾಲಂಕರಣ.

epicritic sensibility: ಸೂಕ್ಷ್ಮ ಸಂವೇದನೆ.

epicureanism: ಸುಖಸಾಧಕ ಪಂಥ. ಸುಖಸಾಧನೆಯೇ ಮುಖ್ಯವೆಂದು ಸಮರ್ಥಿಸುವ ಪಂಥ.

epidemiology: ಸೋಂಕು ರೋಗಶಾಸ್ತ್ರ. ರೋಗಗಳ ಹರಡುವಿಕೆ ಹಾಗೂ ಪರಿಸರದ ಕುರಿತ ಅಧ್ಯಯನ.

epigenesis: ಜೈವಾಂಕುರ ಸೃಷ್ಟಿ ವಾದ.

epigram: ನಾಟು ನುಡಿ.

epigraphy: ಶಾಸನಶಾಸ್ತ್ರ; ಶಾಸನ ಅಭ್ಯಾಸಶಾಸ್ತ್ರ. ಕಲ್ಲು, ಮರ, ಇಟ್ಟಿಗೆ ಮೊದಲಾದ ವಸ್ತುಗಳ ಮೇಲೆ ಬರೆದ ಬರಹ ಮತ್ತು ಇದರ ವ್ಯವಸ್ಥಿತ ವ್ಯಾಖ್ಯಾನ (ಅಧ್ಯಯನ).

epilepsy: ಅಪಸ್ಮಾರ; ಮೂರ್ಛೆರೋಗ.

epileptic equivalent: ಅಪಸ್ಮಾರ ಸಮಾನ. ವ್ಯಕ್ತಿ ತೋರಿಕೆಗೆ ತಾನು ಮಾಡುತ್ತಿರುವುದನ್ನು ಸರಿಯಾಗಿಯೇ ನಿರ್ವಹಿಸುತ್ತಿದ್ದಂತೆ ಕಂಡರೂ ಸೂಕ್ಷ್ಮವಾಗಿ ನೋಡಿದಾಗ ಕೆಲವು ವೈಪರೀತ್ಯಗಳು ಕಾಣುತ್ತವೆ. ಉದಾ: ಬೆರಳಚ್ಚು ಮಾಡುವಾಗ ಒಂದೇ ವಾಕ್ಯವನ್ನು ಮತ್ತೆ ಮತ್ತೆ ಹೊಡೆಯುವುದು.

epileptic furor: ಅಪಸ್ಮಾರ ರೋಷ. ಕೋಪ ಮತ್ತು ಹಿಂಸಾತ್ಮಕ ಪ್ರತಿಕ್ರಿಯೆ ತೋರಿಸುವ ಅಪಸ್ಮಾರ ರೋಗ.

epi-mesolithic: ಆದಿಮಧ್ಯ ಶಿಲಾಯುಗ.

epi-paleolithic: ಆದಿ(ಹಳೆ) ಶಿಲಾಯುಗದ. ಹಳೆಯ ಜಗತ್ತಿನ ಪುರಾತನ ಯುಗ ಮತ್ತು ನವಶಿಲಾಯುಗದ ಮಧ್ಯದ ಅವಸ್ಥಾ ಪರಿವರ್ತನೆಯ ಅಭಿವೃದ್ಧಿಯ ಹಂತಕ್ಕೆ ಸಂಬಂಧಿಸಿದ.

epiphany: ಉದ್ಭವ ದೇವತೆ.

epiphenomenalism: ಗೌಣಲಕ್ಷಣ ತತ್ವ. ಪ್ರಜ್ಞೆ ಹಾಗೂ ಮಾನಸಿಕ ಪ್ರವೃತ್ತಿಗಳು ಶಾರೀರಿಕ ಅಥವಾ ನರಪ್ರಕ್ರಿಯೆಯ ಉಪ ಉತ್ಪಾದನೆ ಎಂಬ ತತ್ವ.

epiphenomenon: ಗೌಣಲಕ್ಷಣ; ಉಪ ಸಂಘಟನೆ; ಅನುಘಟನೆ.

episodes of change: ಪರಿವರ್ತನೆಯ ಘಟನಾವಳಿಗಳು. ಹಲವು ಸಮಾಜಗಳಲ್ಲಿ ಒಂದೇ ತೆರನಾದ ಸಾಮಾಜಿಕ ಬದಲಾವಣೆಯ ಘಟನಾವಳಿಗಳು.

epistemology: ಜ್ಞಾನ ಮೀಮಾಂಸೆ; ತತ್ವ

ಶಾಸ್ತ್ರದಲ್ಲಿ ಪ್ರಮಾಣ ಪ್ರಮೇಯ ವಿಚಾರ. ಜ್ಞಾನದ ಉಗಮ, ಲಕ್ಷಣಗಳು ಹಾಗೂ ಮಿತಿಗಳ ಬಗೆಗಿನ ಅಧ್ಯಯನ.

eponym: ಕುಲಮೂಲ ಪುರುಷ. ಒಬ್ಬ ವ್ಯಕ್ತಿಯ ಹೆಸರನ್ನು ಒಂದು ಜನಾಂಗ ಇಲ್ಲವೆ ಒಂದು ದೊಡ್ಡ ಗುಂಪಿಗೆ ಇಟ್ಟುಕೊಳ್ಳುವುದು. ಇಂಥ ವ್ಯಕ್ತಿ ಪೌರಾಣಿಕ ಪುರುಷ ಅಥವಾ ನಿಜ ವ್ಯಕ್ತಿಯಾಗಿರಬಹುದು.

equal cost difference: ಸಮಾನ ವೆಚ್ಚದ ವ್ಯತ್ಯಾಸ.

equal justice: ಸಮಾನ ನ್ಯಾಯ.

equal protection of the laws: ಕಾನೂನುಗಳ ಸಮಾನ ರಕ್ಷಣೆ. ಕಾನೂನು ಎಲ್ಲರಿಗೂ ಸಮಾನವಾಗಿದ್ದು ಅದನ್ನು ಒಂದೇ ರೀತಿಯಲ್ಲಿ ಪ್ರತಿಯೊಬ್ಬರಿಗೂ ಅನ್ವಯಿಸುವಂತೆ ನೋಡಿಕೊಳ್ಳುವುದು.

equal representation: ಸಮಾನ ಪ್ರತಿನಿಧಿತ್ವ. ಸಂಯುಕ್ತ ರಾಜಪದ್ಧತಿಯಲ್ಲಿಯ ಎಲ್ಲಾ ರಾಜ್ಯಗಳಿಗೂ ಶಾಸಕಾಂಗದಲ್ಲಿ ಸಮಾನ ಪ್ರತಿನಿಧಿತ್ವವನ್ನು ಕೊಡುವುದು. ಉದಾ: ಅಮೇರಿಕಾದ ಮೇಲ್ಮನೆಯಲ್ಲಿ (ಸೆನೆಟ್) ಪ್ರತಿಯೊಂದು ರಾಜ್ಯದ ಇಬ್ಬರು ಸದಸ್ಯರು ರಾಜ್ಯವನ್ನು ಪ್ರತಿನಿಧಿಸುತ್ತಾರೆ. ಇದಕ್ಕೆ ಯಾವುದೇ ಜನಸಂಖ್ಯೆಯ ಪರಿಮಿತಿಗಳಿಲ್ಲ.

equalitarian family: ನೋಡಿ: democratic family.

equalitarianism: ಸರ್ವಸಮಾನತಾವಾದ.

equality: ಸಮಾನತ್ವ; ಸಮಾನತೆ.

equality before law: ಕಾನೂನಿನ ದೃಷ್ಟಿಯಲ್ಲಿ ಸಮಾನತೆ. ರಾಷ್ಟ್ರದ ಕಾನೂನಿನ ಪ್ರಕಾರ ಎಲ್ಲರೂ ಸಮಾನರು ಎಂಬ ಭಾವನೆ. ಯಾರೇ ಆಗಲಿ ಕಾನೂನಿಗಿಂತ ಶ್ರೇಷ್ಠರಲ್ಲ.

equality of opportunity: ಸಮಾನಾವಕಾಶ. ಅವಕಾಶಗಳನ್ನು ಪಡೆಯುವಲ್ಲಿ ಸಮಾನತೆ.

equality of status: ಸಮಾನ ಸ್ಥಾನಮಾನ; ಸ್ಥಾನಮಾನದ ಸಮಾನತೆ.

equanimity: ಸಮಚಿತ್ತತೆ; ಸಮಭಾವ.

equilibrium: ಸಮತೋಲನ.

equilibrium economics: ಸಮತೋಲನ ಅರ್ಥಶಾಸ್ತ್ರ.

equilibrium level of production: ಉತ್ಪಾದನೆಯ ಸಮತೋಲನ ಮಟ್ಟ.

equilibrium price: ಸಮತೋಲನ ಬೆಲೆ.

equilibrium quantity: ಸಮತೋಲನ ಪ್ರಮಾಣ.

equilibrium rate of exchange: ಸಮತೋಲನ ವಿನಿಮಯ ದರ.

equilibrium theory: ಸಮತೋಲನ ಸಿದ್ಧಾಂತ (ಮೀಮಾಂಸೆ).

equi-marginal principle: ಸಮ ಸೀಮಾಂತ ತತ್ವ.

equi-marginal utility: ಸಮ ಸೀಮಾಂತ ತುಷ್ಟಿ ಗುಣ.

equipotentiality: ಸಮ ಸಾಮರ್ಥ್ಯತೆ.

equiprobabilism: ಸಮ ಸಂಭಾವ್ಯತಾವಾದ.

equitable mortgage: ಸಮ ಸಾಮರ್ಥ್ಯದ ಅಡಮಾನ. ಠೇವಣಿಜನ್ಯ ಅಡ ಮಾನ.

equitable principle: ಸಮದರ್ಶಿ ತತ್ವ.

equity: ಸಮಾನ; ಸಾಮ್ಯ; ನ್ಯಾಯ.
equity shares: ಸಾಮ್ಯ ಶೇರುಗಳು; ಈಕ್ವಿಟಿ ಶೇರುಗಳು.
equivalence: ಸಮವರ್ಪಲ್ಯತೆ; ಸಮಾನಾರ್ಥತೆ.
equivocation: ದ್ವಂದ್ವಾರ್ಥ; ಸಂದಿಗ್ಧ ವಚನ; ವಕ್ರೋಕ್ತಿ.
era: ಕಾಲ; ಶಕೆ; ಸಂವತ್ಸರ.
era of good will: ಸದ್ಭಾವನೆಯ ಶಕೆ (ಕಾಲ). ಅಮೇರಿಕಾದ ಆರ್ಥಿಕ ಅಭಿವೃದ್ಧಿ ವೇಗವಾಗಿ ಸಾಗಿದ ೧೮೧೭-೨೪ರ ಅವಧಿಯ ಅಮೇರಿಕಾದ ಇತಿಹಾಸವನ್ನು ಹೀಗೆ ಕರೆಯಲಾಗುತ್ತದೆ.
era of specialization: ವಿಶೇಷ (ಪರಿಣತ) ಜ್ಞಾನದ ಯುಗ. ಪ್ರತಿಯೊಂದು ಜ್ಞಾನದ ವಿಭಾಗದಲ್ಲಿಯೂ ಆಳ ಸಂಶೋಧನೆಗಳ ಕಾರಣದಿಂದಾಗಿ ವಿಶೇಷ ಪರಿಣತಿ ಗಳಿಸಲು ಸಾಧ್ಯವಾಗಿರುವ ಆಧುನಿಕ ಯುಗ.
eripatti: ಏರಿಪಟ್ಟಿ. ದಕ್ಷಿಣ ಭಾರತದಲ್ಲಿ ನೀರಾವರಿ ಕೆರೆಗಳ ನಿರ್ವಹಣೆಗಾಗಿ ಅದರ ಆದಾಯವನ್ನು ಪ್ರತ್ಯೇಕವಾಗಿರಿಸುವ ವಿಶಿಷ್ಟ ಭೂಮಿ.
erogenous zone: ಕಾಮೋತ್ತೇಜಕ ವಲಯ.
eros: ಕಾಮ. ನೋಡಿ: libido.
eros cult: ರತಿಯಾರಾಧನೆ.
erotic desire: ಕಾಮೇಚ್ಛೆ.
erotic pleasure: ಕಾಮುಕ ಖುಷಿ.
eroticism: ಕಾಮುಕತೆ.
erotology: ಕಾಮಶಾಸ್ತ್ರ.
erotomania: ಅತಿ ಕಾಮಸಕ್ತಿ.
error of law: ಕಾನೂನಿನ ದೋಷ.
escapable cost: ತಪ್ಪಿಸಿಕೊಳ್ಳಬಹು ದಾದ ವೆಚ್ಚ. ಕಾರ್ಖಾನೆಯ ಔದ್ಯಮಿಕ ಚಟುವಟಿಕೆಗಳನ್ನು ಸಂಕುಚನಗೊಳಿಸುವುದರ ಮೂಲಕ ಕಡಿಮೆಗೊಳಿಸಬಹುದಾದ ವೆಚ್ಚ.
escape from conflict: ಒಳತೋಟಿಯಿಂದ ಪಾರಾಗುವುದು.
escape instinct: ಪಾರಾಗುವ ಮೂಲ ಪ್ರವೃತ್ತಿ.
escape mechanism: ಪಾರಾಗುವ ತಂತ್ರ; ಪಲಾಯನ ತಂತ್ರ.
escapism: ಪಲಾಯನ ಶೀಲತೆ.
eschatological legends: ಅಂತಿಮ ಗತಿಶಾಸ್ತ್ರದ ಐತಿಹ್ಯಗಳು.
eschatology: ಅಂತಿಮ ಗತಿಶಾಸ್ತ್ರ. (ಕ್ರೈಸ್ತರಲ್ಲಿ). ಸಾವು, ತೀರ್ಪು, ಸ್ವರ್ಗ, ನರಕ ಎಂಬ ಅಂತಿಮ ಹಂತದ ನಾಲ್ಕು ಅಂಶಗಳಿಗೆ ಸಂಬಂಧಿಸಿದ ಶಾಸ್ತ್ರ.
escheat: ವಾರಸುದಾರರಿಲ್ಲದ ಆಸ್ತಿ; ಹಕ್ಕುದಾರ ರಹಿತ ಆಸ್ತಿ.
esprit de corps: ಸಂಘಾಭಿಮಾನ. ಸಂಸ್ಥೆಯ ನೌಕರರಲ್ಲಿ ಉತ್ತಮವಾದ ವೈಯಕ್ತಿಕ ಒಡನಾಟವಿದ್ದು ಅವರು ರೂಢಿಸಿಕೊಂಡಿರುವ ಕಾರ್ಯವಿಧಾನ ಮತ್ತು ಆ ಸಂಸ್ಥೆಯ ಕೆಲಸದ ಪರಿಸ್ಥಿತಿಗಳಿಗೆ ಮನೋಪ್ರವೃತ್ತಿಗಳನ್ನು ಸುಲಭವಾಗಿ ಹೊಂದಿಸಿಕೊಳ್ಳುವುದು.
estabilished generalization: ಸ್ಥಾಪಿತ ಸಾಮಾನ್ಯೀಕರಣ.
establishment branch: ಸಿಬ್ಬಂದಿ ಶಾಖೆ.

establishment cost: ಸ್ಥಾಪನಾ ವೆಚ್ಚ.

estampages: ಶಾಸನದ ಪಡಿಯಚ್ಚು.

estate: ಎಸ್ಟೇಟ್; ಜನವರ್ಗ. ಮಧ್ಯಕಾಲೀನ ಇಂಗ್ಲೆಂಡ್ ಮತ್ತು ಐರೋಪ್ಯ ದೇಶಗಳಲ್ಲಿ ಕಂಡುಬಂದ ಧಾರ್ಮಿಕ ಪ್ರಭುಗಳು, ಲೌಕಿಕ ಪ್ರಭುಗಳು, ಜನ ಸಾಮಾನ್ಯರು ಮತ್ತು ಸೇವಾವೃತ್ತಿಯವರು ಎಂಬುದಾಗಿ ನಾಲ್ಕು ಸ್ತರಗಳಲ್ಲಿ ವಿಭಾಗಗೊಂಡ ಊಳಿಗಮಾನ್ಯ ಪದ್ಧತಿಯ ಸಾಮಾಜಿಕ ವ್ಯವಸ್ಥೆ.

estate duty: ಆಸ್ತಿ ತೆರಿಗೆ; ಸ್ವತ್ತು ತೆರಿಗೆ.

estrangement: ಪ್ರತ್ಯೇಕೀಕರಣ.

eternal law: ಶಾಶ್ವತ ಕಾನೂನು; ಶಾಶ್ವತ ಕಾಯಿದೆ. ಶಾಶ್ವತ ಕಾನೂನು ದೇವನ ಮನಸ್ಸಿನಿಂದಲೇ ಮೂಡಿಬಂದು ಬ್ರಹ್ಮಾಂಡವನ್ನೇ ನಿಯಂತ್ರಿಸುತ್ತದೆ. ಈ ಕಾಯಿದೆಗಳು ಸ್ವರ್ಗ ಮತ್ತು ಭೂಲೋಕಗಳೆರಡನ್ನೂ ನಿಯಂತ್ರಿಸುತ್ತವೆ ಎನ್ನಲಾಗಿದೆ.

eternal vigilance: ನಿರಂತರ ಜಾಗರೂಕತೆ. ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಪ್ರಜೆಗಳು ಅದರ ಮಹತ್ವವನ್ನು ಅರಿತು ಅದನ್ನು ಕಾಪಾಡುವುದು ಮತ್ತು ಹಕ್ಕುಗಳನ್ನು ಅರಿತು ಕರ್ತವ್ಯಗಳನ್ನು ಪಾಲಿಸುವುದು.

ethical argument: ನೈತಿಕ ವಾದ.

ethical behaviour: ನೈತಿಕ ವರ್ತನೆ.

ethical code: ನೈತಿಕ ನಿಬಂಧನೆ.

ethical hedonism: ನೈತಿಕ ದೃಷ್ಟಿಯ ಭೋಗವಾದ.

ethical neutrality: ನೈತಿಕ ತಾಟಸ್ಥ್ಯ.

ethical relativism: ನೈತಿಕ ಸಾಪೇಕ್ಷವಾದ. ಮೌಲ್ಯಗಳನ್ನು ಹಾಗೂ ನಿಯಮಗಳನ್ನು ನಿರಪೇಕ್ಷ ಸಾರ್ವತ್ರಿಕ ಪ್ರಮಾಣಕಗಳಿಂದ ಅಳೆಯಲು ಸಾಧ್ಯವಿಲ್ಲ ಅವು ಗಳನ್ನು ಬದಲಾಗುತ್ತಿರುವ ಸಮೂಹ ಪ್ರಮಾಣಕಗಳ ನೆಲೆಯಲ್ಲಿ ಅರ್ಥೈಸಿಕೊಳ್ಳ ಬೇಕೆಂಬ ವಾದ.

ethicization: ನೈತಿಕೀಕರಣ.

ethics : ನೀತಿ ಶಾಸ್ತ್ರ; ನೀತಿ ತತ್ವ.

ethnic consciousness: ಸಾಂಸ್ಕೃತಿಕ ಕುಲ ಸಮೂಹಪ್ರಜ್ಞೆ. ಒಬ್ಬ ವ್ಯಕ್ತಿಯು ಇನ್ನೊಬ್ಬ ನೊಡನೆ ವ್ಯವಹರಿಸುವಾಗ ತನ್ನ ಕುಲ ಸಮೂಹದ ಬಗ್ಗೆ ಪ್ರಜ್ಞೆ ಇರಿಸಿಕೊಳ್ಳುವುದು.

ethnic discrimination: ಸಾಂಸ್ಕೃತಿಕ ಕುಲ ಭೇದಭಾವ.

ethnic environment: ಕುಲಸಂಬಂಧಿ ಪರಿಸರ. ಕುಲಸಮೂಹಗಳು ಒಂದು ಪ್ರದೇಶದಲ್ಲಿ ಉತ್ಪಾದಿಸಿದ ಸಾಮಾಜಿಕ ಸಾಂಸ್ಕೃತಿಕ ಪರಿಸರ. ನೋಡಿ: culture area.

ethnic group: ಸಾಂಸ್ಕೃತಿಕ ಕುಲ ಸಮೂಹ. ಒಂದೇ ಸಾಂಸ್ಕೃತಿಕ ಪರಂಪರೆಯುಳ್ಳ ಹಾಗೂ ಸ್ವ-ಗುರುತಿಸಿಕೊಳ್ಳುವಿಕೆ ಇರುವ ದೊಡ್ಡ ಸಮಾಜದ ಉಪ ಸಮೂಹ.

ethnic heterogeneity: ಸಾಂಸ್ಕೃತಿಕ ಕುಲವೈವಿಧ್ಯತೆ.

ethnic homogeneity: ಸಾಂಸ್ಕೃತಿಕ ಕುಲಸಮತೆ (ಏಕರೂಪತೆ).

ethnic identification: ಕುಲ-ಸಂಸ್ಕೃತಿಯ ಗುರುತಿಸುವಿಕೆ. ಸ್ವ-ಪರಿಕಲ್ಪನೆ ಯಲ್ಲಿ, ವ್ಯಕ್ತಿ-ವ್ಯಕ್ತಿಗಳ ಸಂಬಂಧದಲ್ಲಿ ಕುಲಸಮೂಹದ ಸದಸ್ಯತ್ವದ ಗುರುತಿಸಿಕೊಳ್ಳುವಿಕೆ.

ethnic minorities: ಕುಲಮೂಲ ಅಲ್ಪ ಸಂಖ್ಯಾತರು.

ethnic transposition: ಕುಲ ಸ್ಥಳಾಂತರ.

ethnicity: ಸ್ವಸಮುದಾಯ ಪ್ರಜ್ಞೆ.

ethnobiology: ಕುಲಮೂಲ ಜೀವ ಶಾಸ್ತ್ರ.

ethnocentric: ಕುಲಕೇಂದ್ರೀಯ.

ethnocentric personality: ಕುಲ ಕೇಂದ್ರಿತ ವ್ಯಕ್ತಿತ್ವ.

ethnocentrism: ಸ್ವಕುಲಾಭಿಮಾನ. ತಮ್ಮ ಕುಲವೇ ಶ್ರೇಷ್ಠ ಎಂಬ ಭಾವನೆ.

ethnogenic: ಕುಲಮೂಲಜನ್ಯ. ಕುಲ ಸಮೂಹದ ಉಗಮಕ್ಕೆ ಸಂಬಂಧಿಸಿದ.

ethnographer: ಮಾನವಕುಲ ಶಾಸ್ತ್ರಜ್ಞ.

ethnographic report: ಕುಲ ವಿವರಣೆಯ ವರದಿ.

ethnography: ಕುಲಮೂಲ ವಿವರಣಾ ಶಾಸ್ತ್ರ. ವೈಯಕ್ತಿಕ ಸಂಸ್ಕೃತಿಯ ವಿವರಣಾತ್ಮಕ ಅಧ್ಯಯನವಾದ ಈ ಶಾಸ್ತ್ರವು ಸಾಂಸ್ಕೃತಿಕ ಮಾನವಶಾಸ್ತ್ರದ ಒಂದು ಭಾಗ. ನೋಡಿ: cultural anthropology.

ethno-history: ಕುಲಮೂಲ ಇತಿಹಾಸ.

ethno-linguistics: ಕುಲಮೂಲ ಭಾಷಾ ಶಾಸ್ತ್ರ. ಭಾಷೆ ಮತ್ತು ಮಾನವಕುಲಶಾಸ್ತ್ರದ ನಡುವಿನ ಸಂಬಂಧದ ಅಧ್ಯಯನ.

ethnology: ಕುಲಮೂಲ ವಿಜ್ಞಾನ (ಶಾಸ್ತ್ರ); ಮಾನವ ಸಂಸ್ಕೃತಿ ವಿಜ್ಞಾನ; ಮಾನವಕುಲ ವಿಜ್ಞಾನ. ಮಾನವ ಸಂಸ್ಕೃತಿ ಸಿದ್ಧಾಂತಗಳ ರಚನೆಗಾಗಿ ವಿವಿಧ ಸಂಸ್ಕೃತಿಗಳನ್ನು ತೌಲನಿಕವಾಗಿ ಅಧ್ಯಯನ ಮಾಡುವ ಸಾಂಸ್ಕೃತಿಕ ಮಾನವಶಾಸ್ತ್ರದ ಒಂದು ವಿಭಾಗ.

ethno-methodology: ಕುಲಮೂಲ ಅಧ್ಯಯನ ವಿಧಾನ.

ethno-musicology: ಕುಲಮೂಲ ಸಂಗೀತಶಾಸ್ತ್ರ.

ethno-psychology: ಮಾನವಕುಲ ಮನೋವಿಜ್ಞಾನ.

ethno-sociology: ಕುಲಮೂಲ ಸಮಾಜಶಾಸ್ತ್ರ. ಆದಿಮಾನವರಿಗೆ ಅನ್ವಯವಾಗುವ ಸಮಾಜಶಾಸ್ತ್ರ.

ethnos: ಸಾಂಸ್ಕೃತಿಕ ಲಕ್ಷಣಗಳು; ಸಂಸ್ಕೃತಿಯ ಅಂಶಗಳು; ಕುಲಮೂಲಗಳು; ಜನಾಂಗಗಳು.

ethology: ಶೀಲ ಸ್ವಭಾವಶಾಸ್ತ್ರ.

ethos: ಶೀಲ ಸ್ವಭಾವ; ಆಚಾರ ತತ್ವ. ಯಾವುದೇ ಗುಂಪಿನ ಅನನ್ಯತೆಯನ್ನು ಗುರುತಿಸಲು ಸಾಧ್ಯವಾಗುವಂತಹ ವಿಶಿಷ್ಟ ಸಾಮಾಜಿಕ ವರ್ತನೆ.

etiological legends: ಕಾರಣ ನಿರ್ದೇಶ ಐತಿಹ್ಯಗಳು.

etiological school: ಕಾರಣ ನಿರ್ದೇಶ ಪಂಥ.

etiological tale: ಕಾರಣ ನಿರ್ದೇಶ ಕತೆ; ಶಾಬ್ದಿಕ ಕತೆ; ವಿವರಣಾತ್ಮಕ ಕತೆ. ಪ್ರಾಕೃತಿಕ ವಿಷಯ ಅಥವಾ ವೈಲಕ್ಷಣದ ಮೂಲವನ್ನು ಕುರಿತಾದ ವಿವರಣೆಯೇ ಕಾರಣ ನಿರ್ದೇಶ ಕತೆ. ಇದು ಸ್ಥಳೀಯ ಸಂಪ್ರದಾಯಕ್ಕೆ ಹತ್ತಿರವಾದದ್ದು.

etiology: ಕಾರಣ ವಿಜ್ಞಾನ.

etiquette: ಸಮಾಜ ಮರ್ಯಾದೆ; ಸಭ್ಯಾಚಾರ.

etymology: ಶಬ್ದ ಉತ್ಪತ್ತಿ ಶಾಸ್ತ್ರ. ಪದಗಳ

ಚರಿತ್ರೆ ಮತ್ತು ರೂಪ ನಿಷ್ಪತ್ತಿಯ ಕುರಿತಾದ ಅಧ್ಯಯನ.

eufunction: ಪೂರಕಕಾರ್ಯ. ನೋಡಿ: **function.**

eugenics: ಮಾನವ ಸತ್ ಸಂತಾನ ಶಾಸ್ತ್ರ. ಮಾನವಕುಲದ ಅಭಿವೃದ್ಧಿಗಾಗಿ ಆಯ್ಕೆ ತಳಿಗಳ ಮೂಲಕ ಉತ್ತಮ ಸಂತಾನ ಪಡೆಯುವ ಉದ್ದೇಶಕ್ಕಾಗಿ ನಡೆಸುವ ಸಂತತಿ ಅಧ್ಯಯನ ಶಾಸ್ತ್ರ.

euhemerism: ಮಾನವ ದೈವ ಸಿದ್ಧಾಂತ. ಐತಿಹಾಸಿಕ ನಾಯಕರನ್ನು ದೈವಾಂಶ ಸಂಭೂತರೆಂದು ಪೂಜಿಸುವುದೇ ದೇವರ ಕಲ್ಪನೆಯ ಹುಟ್ಟಿಗೆ ಕಾರಣವೆಂಬ ಸಿದ್ಧಾಂತ.

eunuch (hijida): ನಪುಂಸಕ. ವ್ಯಕ್ತಿ ಪುರುಷನಾಗಿದ್ದರೂ, ನಿರ್ವೀರ್ಯನಾಗಿದ್ದು ಹೆಣ್ಣಿನಂತೆ ವರ್ತಿಸುವ ಹಾಗೂ ಬಟ್ಟೆ ಧರಿಸುವ ಪ್ರವೃತ್ತಿಯುಳ್ಳವ.

euphemism: ಸೌಮ್ಯೋಕ್ತಿ. ಕಠಿಣ ಅಥವಾ ಒರಟಾದ ಶಬ್ದಗಳನ್ನು ಪ್ರಯೋಗಿಸ ಬೇಕಾಗುವಲ್ಲಿ ಅವಕ್ಕೆ ಬದಲಾಗಿ ನಯವಾದ ಅಸ್ಪಷ್ಟ ಪದ ಪ್ರಯೋಗ ಮಾಡುವುದು.

euphoria: ಭ್ರಮಿತಾನಂದ; ಉಲ್ಲಾಸೋ ನ್ಮಾದ. ಉನ್ಮಾದದಲ್ಲಿ ಕಾಣಿಸುವ ಅತ್ಯಾ ನಂದ, ಅತ್ಯಾಸಕ್ತಿಯ ಅತಿಚಟುವಟಿಕೆಯ ಮನೋಸ್ಥಿತಿ.

euryprosopic: ಅಗಲಮುಖದ ಮಾನವ.

euthenics: ಜನಸಂಖ್ಯಾ ಸಂರಚನಾ ಶಾಸ್ತ್ರ. ಮಾನವನ ದೈಹಿಕ ಹಾಗೂ ಸಾಮಾಜಿಕ ಪರಿಸರವನ್ನು ಅಭಿವೃದ್ಧಿ ಪಡಿಸುವುದರ ಮೂಲಕ ಜನಸಂಖ್ಯಾ ಲಕ್ಷಣ ಗಳನ್ನು ಉತ್ತಮಗೊಳಿಸಲು ನಡೆಸುವ ಅಧ್ಯಯನ.

evacuee property: ನಿರ್ವಸಿತನ ಸ್ವತ್ತು.

evaluation committee: ಮೌಲ್ಯ ಮಾಪನ ಸಮಿತಿ.

event analysis: ಸಂದರ್ಭ ವಿಶ್ಲೇಷಣೆ; ಘಟನಾ ವಿಶ್ಲೇಷಣೆ.

event research: ಘಟನಾ ಸಂಶೋಧನೆ. ಘಟನೆಯನ್ನು ಕೇಂದ್ರವಾಗಿಟ್ಟುಕೊಂಡು ನಡೆಸುವ ಸಂಶೋಧನಾ ವಿಧಾನ. ನೋಡಿ: case study.

ever virgin: ನಿತ್ಯಕುವರಿ; ನಿರಂತರ ಕನ್ನೆ.

eviction proceeding: ಹೊರಹಾಕುವ ಕ್ರಮ.

evil eye: ಕೆಟ್ಟಕಣ್ಣು; ಕೆಟ್ಟದೃಷ್ಟಿ. ವ್ಯಕ್ತಿ ಯನ್ನು ದಿಟ್ಟಿಸಿ ನೋಡುವುದರ ಮೂಲಕ ಗಾಯ ಅಥವಾ ತೊಂದರೆಯನ್ನು ಉಂಟು ಮಾಡಬಹುದು ಎಂಬ ನಂಬಿಕೆ.

evil spirit: ದುಷ್ಟ ಶಕ್ತಿ.

evoked response: ಹೊರ ಹೊರಡಿ ಸಲಾದ ಪ್ರತಿಕ್ರಿಯೆ.

evolution: ವಿಕಾಸ.

evolutionary change: ವಿಕಾಸಾತ್ಮಕ ಪರಿವರ್ತನೆ. ಸತತ ಹೊಂದಾಣಿಕೆ ಯಿಂದಾಗಿ ವಿಕಾಸ ಕ್ರಮದಲ್ಲಿ ರೂಪಗಳೇ ಬದಲಾವಣೆ ಯಾಗುವುದು.

evolutionary ecology: ವಿಕಾಸವಾದಿ ಜೀವಪರಿಸರಶಾಸ್ತ್ರ.

evolutionary method: ವಿಕಾಸ ವಿಧಾನ.

evolutionary psychology: ವಿಕಾ ಸಾತ್ಮಕ ಮನೋವಿಜ್ಞಾನ.

evolutionary sociology: ವಿಕಾಸಾತ್ಮಕ ಸಮಾಜಶಾಸ್ತ್ರ.

evolutionary theory: ವಿಕಾಸ ಸಿದ್ಧಾಂತ.ನೋಡಿ: Darwinian theory of evolution.

evolutionary unity of species: ಜೀವಿಗಳ ವಿಕಾಸಾತ್ಮಕ ಏಕತೆ. ವಿಕಾಸವು ಎಲ್ಲಾ ಜೀವಿಗಳ ಉಗಮಕ್ಕೆ ಕಾರಣ ಎಂಬ ಸಿದ್ಧಾಂತ. ಜೀವ ವಿಕಾಸಾತ್ಮಕ ಸಮತೆ.

evolutionism: ವಿಕಾಸವಾದ. ನೋಡಿ: Darwinian theory of evolution.

evolutionist: ವಿಕಾಸವಾದಿ.

evolved constitution: ವಿಕಸಿತ ಸಂವಿಧಾನ.

evolving social process: ವಿಕಾಸ ಗೊಳ್ಳುತ್ತಿರುವ ಸಾಮಾಜಿಕ ಪ್ರಕ್ರಿಯೆ. ವಿಕಾಸಶೀಲ ಸಾಮಾಜಿಕ ಪ್ರಕ್ರಿಯೆ.

exaltation: ಮಹೋನ್ನತಭಾವ. ಇದರಲ್ಲಿ ಆನಂದ ಮತ್ತು ಔನ್ನತ್ಯ ಭಾವಗಳೆರಡೂ ಸೇರಿಕೊಳ್ಳುತ್ತವೆ. ಇದು ಆತ್ಮ ಭಾವದಿಂದ ಕೂಡಿದ ತುಂದಿಲ ಸ್ಥಿತಿ. ಈ ಪ್ರಕ್ರಿಯೆಗಳು ವಿಕೃತವಾಗಿರುತ್ತವೆ. ಇವುಗಳಿಂದ ರೋಗಿಯ ಸನ್ನಿವೇಶಗಳಿಗೆ ಯಾವ ಸಂಬಂಧವೂ ಇರದೆ ಅನೇಕ ಬಾರಿ ಅವುಗಳಿಂದ ಖುಷಿಗಿಂತ ಹೆಚ್ಚು ಅಸುಖವೇ ಉಂಟಾಗಬಹುದು.

examination phobia: ಪರೀಕ್ಷೆಯ ಭೀತಿ.

ex-ante investment: ಯೋಜಿತ ಹೂಡಿಕೆ (ಹೂಟೆ).

excavation: ಉತ್ಖನನ. ಜನವಾಸ್ತವ್ಯ ವಿದ್ದ ಅಥವಾ ಸ್ಮಶಾನ ಭೂಮಿಯನ್ನು ಅಗೆಯುವ ವೈಜ್ಞಾನಿಕ ವಿಧಾನ.

exceptional children: ಅಸಾಧಾರಣ ಮಕ್ಕಳು.

exceptional grant: ಅಸಾಧಾರಣ ಅನುದಾನ.

excess-competition: ಹೆಚ್ಚುವರಿ ಸ್ಪರ್ಧೆ (ಪೈಪೋಟಿ).

excessive speculation: ಮಿತಿಮೀರಿದ ಸಟ್ಟಾವ್ಯಾಪಾರ.

exchange: ವಿನಿಮಯ.

exchange bank: ವಿನಿಮಯ ಬ್ಯಾಂಕು.

exchange clearing agreement: ವಿನಿಮಯ ನಿರಭ್ರ ಒಪ್ಪಂದ.

exchange control: ವಿನಿಮಯ ನಿಯಂತ್ರಣ. ಹಣದ ಪ್ರಸಾರದ ಮೇಲೆ ನಿಯಂತ್ರಣಗಳನ್ನು ವಿಧಿಸುವುದು.

exchange depreciation: ವಿನಿಮಯ ಸವಕಳಿ; ವಿನಿಮಯ ದರ ಇಳಿತ.

exchange economy: ವಿನಿಮಯ ಆರ್ಥಿಕತೆ.

exhcange equalization account: ವಿನಿಮಯ ಸಮಾನತೆ ಖಾತೆ.

exchange equalization fund: ವಿನಿಮಯ ಸಮಾನತೆಯ ನಿಧಿ.

exchange pegging: ವಿನಿಮಯ ಮೌಲ್ಯಬಂಧನ.

exchange rate: ವಿನಿಮಯ ದರ.

exchange restriction: ವಿನಿಮಯ ನಿಯಂತ್ರಣ.

exchange stabilization fund: ವಿನಿಮಯ ಸ್ಥಿರೀಕರಣ ನಿಧಿ.

exchange theory: ವಿನಿಮಯ ಸಿದ್ಧಾಂತ. ಸಾಮಾಜಿಕ ವಿನಿಮಯವು ಜೀವನದ ಒಂದು ಮೂಲಭೂತ ಪ್ರಕ್ರಿಯೆ ಎಂಬ ಪರಿಕಲ್ಪನೆಯನ್ನು ಆಧರಿಸಿದ ಸಿದ್ಧಾಂತ.

exchange value: ವಿನಿಮಯ ಮೌಲ್ಯ.

excise duty: ಅಬಕಾರಿ ಸುಂಕ (ತೆರಿಗೆ).

excitement: ಉದ್ರಿಕ್ತ ಸ್ಥಿತಿ; ಭಾವೋದ್ರೇಕ; ಉತ್ತೇಜನ; ಉದ್ವೇಗ. ಕೆಲವೊಮ್ಮೆ ಇದು ಅತ್ಯಾನಂದದ ಸ್ಥಿತಿಯಾಗಿರಬಹುದು. ಕೆಲವೊಮ್ಮೆ ವಿಧ್ವಂಸಕಾರೀ ಪ್ರವೃತ್ತಿಯಾಗಿರಬಹುದು.

excommunication: ಜಾತಿ ಬಹಿಷ್ಕಾರ; ಬಹಿಷ್ಕಾರ; ಹೊರಗಿಡುವುದು. ವ್ಯಕ್ತಿಯನ್ನು ಧರ್ಮ ಅಥವಾ ಧಾರ್ಮಿಕ ಕಾರಣಗಳಿಂದಾಗಿ ಸಮುದಾಯದಿಂದ ಗಡೀಪಾರು ಮಾಡುವದು ಅಥವಾ ಹೊರಹಾಕುವುದು.

execution: ಕಾರ್ಯಗತಗೊಳಿಸುವಿಕೆ; ಜಾರಿಮಾಡುವುದು.

execution of the budget: ಮುಂಗಡ ಪತ್ರದ ಕಾರ್ಯಾನ್ವಯಗೊಳಿಸುವಿಕೆ.

execution petition: ಅಮಲ್ಜಾರಿ ಮನವಿ.

executive: ಕಾರ್ಯಾಂಗ. ಕಾರ್ಯನಿರ್ವಾಹಕ. ಶಾಸಕಾಂಗ ರೂಪಿಸಿದ ಕಾನೂನುಗಳನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿ ಹೊಂದಿರುವ ಸರಕಾರದ ಅಂಗ.

executive action: ಕಾರ್ಯಾಂಗೀಯ ಕ್ರಮ.

executive bureau: ಕಾರ್ಯನಿರ್ವಾಹಕ ಇಲಾಖೆ; ಕಾರ್ಯಕಾರಿ ಮಂಡಳಿ.

executive class: ಕಾರ್ಯನಿರ್ವಾಹಕ ವರ್ಗ.

executive control: ಕಾರ್ಯಾಂಗೀಯ ನಿಯಂತ್ರಣ.

executive council: ಕಾರ್ಯಕಾರಿ ಮಂಡಳಿ.

executive councillor: ಕಾರ್ಯನಿರ್ವಾಹಕ ಸದಸ್ಯ; ಕಾರ್ಯಸಮಿತಿಯ ಸದಸ್ಯ; ಕಾರ್ಯ ನಿರ್ವಹಣಾ ಸಹಾಯಕ.

executive function: ಆಡಳಿತಾತ್ಮಕ ಕಾರ್ಯಗಳು; ಕಾರ್ಯಾಂಗೀಯ ಕಾರ್ಯಗಳು.

executive order: ಕಾರ್ಯಾಂಗೀಯ ಆಜ್ಞೆ.

executive power: ಕಾರ್ಯಾಂಗಾ ಧಿಕಾರ; ಕಾರ್ಯಾಂಗೀಯ ಅಧಿಕಾರ.

executive staff: ಕಾರ್ಯನಿರ್ವಾಹಕ ಸಿಬ್ಬಂದಿ.

executive will: ಕಾರ್ಯಾಂಗ ಇಚ್ಛೆ.

executor: ಕಾರ್ಯನಿರ್ವಾಹಕ ಅಧಿಕಾರಿ; ನಿರ್ವಾಹಕ.

exemplary: ಅನುಕರಣೀಯ.

exhaustible resource: ಮುಗಿದು ಹೋಗುವ ಸಂಪನ್ಮೂಲ. ಉದಾ: ಖನಿಜೋತ್ಪನ್ನಗಳು.

exhibitionism: ಪ್ರದರ್ಶನ ಕಾಮ; ಪ್ರದರ್ಶನ ರತಿ.

exhortation: ಒತ್ತಾಯ. ಮನೋವೈದ್ಯರು ಮತ್ತು ತಾಯ್ತಂದೆಯರು ಮನೋಚಿಕಿತ್ಸೆಗಾಗಿ ಉಪಯೋಗಿಸುವ ಒಂದು ವಿಧಾನ.

existential anxiety: ಇರುವಿಕೆಯ ಆತಂಕ.

existential psychology: ಅಸ್ತಿತ್ವ ಮನಶ್ಶಾಸ್ತ್ರ; ಅಸ್ತಿತ್ವ ಮನೋವಿಜ್ಞಾನ.

existentialism: ಅಸ್ತಿತ್ವವಾದ.
exit interview: ನಿರ್ಗಮನ ಸಂದರ್ಶನ.
ex-officio: ಪದನಿಮಿತ್ತ.
exogamy: ಹೊರಬಾಂಧವ್ಯ; ಹೊರ ವಿವಾಹ ಪದ್ಧತಿ; ಹೊರ ಪಂಗಡ ವಿವಾಹ.
exogenous source: ಬಾಹ್ಯ ಮೂಲ; ಬಾಹ್ಯ ಆಕರ.
exogenous variable: ಬಾಹ್ಯ ಚಲ; ಬಾಹ್ಯ ಪರಿವರ್ತಕ.
exonerate: ದೋಷಮುಕ್ತವಾಗಿ ಮಾಡು; ಆರೋಪಮುಕ್ತ ಮಾಡು.
exorcism: ದೆವ್ವ ಬಿಡಿಸುವಿಕೆ; ಭೂತೋಚ್ಚಾಟನೆ. ಅನೈಚ್ಛಿಕ ಸ್ಥಿತಿ ಅಥವಾ ವರ್ತನೆಗೆ ಕಾರಣವಾಗುವ ಶಕ್ತಿಗಳನ್ನು ವಿಶಿಷ್ಟ ಸಂಸ್ಕಾರಗಳ ಮೂಲಕ ಹೊರದೂಡುವುದು.
exorcistic ritual: ಭೂತೋಚ್ಚಾಟನೆಯ ಆಚರಣೆ.
expanded family: ವಿಸ್ತೃತ ಕುಟುಂಬ. ಅವಿವಾಹಿತ ಸೋದರಿಯರು, ವಿಧುರರು, ವಿಧವೆಯರು ಗಂಡನ ಅಥವಾ ಹೆಂಡತಿಯ ಸೋದರ ಸಂಬಂಧಿಗಳು ಸೇರಿಕೊಂಡಿರುವ ದಾಂಪತ್ಯ ಕುಟುಂಬ.
expanded personality: ವಿಸ್ತರಿತ ವ್ಯಕ್ತಿತ್ವ.
expanded phase: ವಿಸ್ತರಣೆಯ ಹಂತ.
expansionism: ವಿಸ್ತರಣಾವಾದ.
exparte: ಏಕಪಕ್ಷೀಯ.
expectancy of life: ಆಯುರ್ಮಾನ ನಿರೀಕ್ಷೆ.
expectation of life at birth: ಜನನ ಸಮಯದಲ್ಲಿ ನಿರೀಕ್ಷಿತ ಆಯುರ್ಮಾನ.
expected behaviour: ನಿರೀಕ್ಷಿತ ವರ್ತನೆ
expedient conformity: ಸಮಯೋಜಿತ ಅನುಸರಣೆ; ಯಥೋಚಿತ ಅನುವರ್ತನೆ.
expedition: ಧಾಳಿ; ದಂಡಯಾತ್ರೆ.
expenditure: ವೆಚ್ಚ.
expenditure method: ವೆಚ್ಚದ ವಿಧಾನ (ಪದ್ಧತಿ); ಖರ್ಚಿನ ವಿಧಾನ.
expenditure tax: ವೆಚ್ಚದ ತೆರಿಗೆ.
experimentability: ಪ್ರಯೋಗ ಸಾಧ್ಯತೆ.
experimental attitude: ಪ್ರಾಯೋಗಿಕ (ಅನುಭವಾತ್ಮಕ) ಮನೋವೃತ್ತಿ. ವೈಯಕ್ತಿಕ ಅನುಭವದಿಂದ ಪಡೆದ ಮನೋಭಾವ ಅಥವಾ ಭಾವಭಂಗಿ.
experimental bias: ಪ್ರಯೋಗ ಸಂಬಂಧ ಪೂರ್ವಾಗ್ರಹ (ಪಕ್ಷಪಾತ).
experimental control: ಪ್ರಾಯೋಗಿಕ ನಿಯಂತ್ರಣ.
experimental group: ಪ್ರಾಯೋಗಿಕ ಗುಂಪು (ಸಮೂಹ). ನೋಡಿ: control group.
experimental interview: ಪ್ರಾಯೋಗಿಕ ಸಂದರ್ಶನ.
experimental introspection: ಪ್ರಾಯೋಗಿಕ ಅಂತರಾವಲೋಕನ.
experimental method: ಪ್ರಾಯೋಗಿಕ ವಿಧಾನ.
experimental neurosis: ಪ್ರಾಯೋಗಿಕ ಮನೋಬೇನೆ. ಪ್ರಾಣಿಗಳಲ್ಲಿ ಅಥವಾ ಮನುಷ್ಯರಲ್ಲಿ ಪ್ರಾಯೋಗಿಕ ವಿಧಾನ ಗಳಿಂದ ಹುಟ್ಟಿಸುವ ಮನೋಬೇನೆ. ಸಾಮಾನ್ಯವಾಗಿ

ಕಷ್ಟವಾದ ಪರಿಭೇದ ಸಮಸ್ಯೆಗಳನ್ನೊಡ್ಡುವುದ ರಿಂದ ಇದನ್ನುಂಟು ಮಾಡುವರು.

experimental observation: ಪ್ರಾಯೋಗಿಕ ಅವಲೋಕನ.

experimental psychology: ಪ್ರಾಯೋಗಿಕ ಮನೋವಿಜ್ಞಾನ.

experimental social psychology: ಪ್ರಾಯೋಗಿಕ ಸಮಾಜ ಮನೋವಿಜ್ಞಾನ.

experimental research: ಪ್ರಾಯೋಗಿಕ ಸಂಶೋಧನೆ.

experimental variable: ಪ್ರಾಯೋ ಗಿಕ ಪರಿವರ್ತಕ.

expert committee: ತಜ್ಞ ಸಮಿತಿ.

expiation: ಪ್ರಾಯಶ್ಚಿತ್ತ. ಅಪರಾಧ ಮಾಡಿದ ವ್ಯಕ್ತಿಯನ್ನು ಪ್ರತೀಕಾರ ರೂಪ ದಲ್ಲಿ ಸಾಯಿಸುವ ಇಲ್ಲವೇ ಶಿಕ್ಷಿಸುವ ಮೂಲಕ ದೇವತೆಗಳು ಇಡೀ ಗುಂಪಿನ ಬಗ್ಗೆ ಹೊಂದಿದ್ದ ಕೋಪವನ್ನು ಶಾಂತಗೊಳಿಸುವ ಪ್ರಕ್ರಿಯೆ.

expiatory rites: ಪ್ರಾಯಶ್ಚಿತ್ತ ಕರ್ಮಗಳು. ತಪ್ಪು ಮಾಡಿದವರು ಅಥವಾ ಪಾಪವೆಸಗಿದವರು ಮಾಡುವ ಪ್ರಾಯಶ್ಚಿತ ಕರ್ಮಗಳು. ಉದಾ: ದಂಡ ನೀಡುವುದು. ತೀರ್ಥಸ್ನಾನ; ಕರಸೇವೆ ಶುದ್ಧಿ, ಇತ್ಯಾದಿ.

explanatory tale: ವಿವರಣಾತ್ಮಕ ಕಥೆ.

explicit cost: ವ್ಯಕ್ತ (ಸ್ಪಷ್ಟ) ವೆಚ್ಚ.

explicit cost of production: ವ್ಯಕ್ತ ಉತ್ಪಾದನಾ ವೆಚ್ಚ.

explicit culture: ವ್ಯಕ್ತ ಸಂಸ್ಕೃತಿ; ಪ್ರಕಟಿತ ಸಂಸ್ಕೃತಿ.

explicit law: ವ್ಯಕ್ತ ನಿಯಮ; ವ್ಯಕ್ತ ಕಾನೂನು.

explicit value: ವ್ಯಕ್ತ ಮೌಲ್ಯ.

exploitation: ಶೋಷಣೆ.

exploitation policy: ಶೋಷಣಾ ಧೋರಣೆ.

exploitation theory: ಶೋಷಣಾ ಸಿದ್ಧಾಂತ; ಶೋಷಣೆಯ ಸಿದ್ಧಾಂತ. ನೋಡಿ: drain theory.

exploiter-exploited relationship: ಶೋಷಕ-ಶೋಷಿತ ಸಂಬಂಧ.

exploration: ಅನ್ವೇಷಣೆ; ಪ್ರಾದೇಶಿಕ ಪರಿವೀಕ್ಷಣೆ.

explorative disposition: ಅನ್ವೇಷಣಾ ಶೀಲ ಪ್ರವೃತ್ತಿ.

exploratory drive: ಪರಿಶೋಧಕ ಪ್ರೇರಣೆ.

exploratory study: ಪರಿಶೋಧಕ ಅಧ್ಯಯನ.

explosive evolution: ಸ್ಫೋಟಕ ವಿಕಾಸ. ಕೆಲವು ಗುಂಪುಗಳು ಅತ್ಯಂತ ತೀವ್ರಗತಿಯಲ್ಲಿ ಬದಲಾವಣೆ ಹೊಂದುವ ವಿಕಾಸ.

explosive temperament: ಸ್ಫೋಟಕ ಚಿತ್ತಪ್ರಕೃತಿ,

explosive tendencies: ಸ್ಫೋಟಕ ಚಿತ್ತವೃತ್ತಿಗಳು.

exponential growth: ರೇಖಾಗಣಿತ ಪ್ರಮಾಣದ ಬೆಳವಣಿಗೆ. ಜನಸಂಖ್ಯಾ ಬೆಳವಣಿಗೆಯಲ್ಲಿ ಕ್ಷಿಪ್ರ ಏರಿಕೆ.

exponential trend: ಪ್ರತಿವಾದದ ಪ್ರವೃತ್ತಿ; ಪ್ರತಿಪಾದಕ ಪ್ರವೃತ್ತಿ.

export: ರಫ್ತು; ನಿರ್ಯಾತ.

export credit: ರಫ್ತು (ನಿರ್ಯಾತ) ಉದ್ದರಿ. ರಫ್ತಿಗಾಗಿ ನೀಡುವ ಸಾಲ.

export duty: ರಫ್ತು ತೆರಿಗೆ.

export import bank: ನಿರ್ಯಾತ-ಆಯಾತ ಬ್ಯಾಂಕು; ರಫ್ತು-ಆಮದು ಬ್ಯಾಂಕ್.

export incentive: ರಫ್ತು ಉತ್ತೇಜಕ. ರಫ್ತುದಾರರು ವಿದೇಶಗಳಲ್ಲಿ ಪೈಪೋಟಿಯನ್ನು ಅನುಕೂಲಕರವಾಗಿ ಪರಿವರ್ತಿಸಲು ಸಾಧ್ಯವಾಗುವಂತೆ ನೀಡಲಾಗುವ ರಿಯಾಯಿತಿ, ಸವಲತ್ತುಗಳು.

export licence: ನಿರ್ಯಾತ (ರಫ್ತು) ಪರವಾನಿಗೆ.

export promotion: ರಫ್ತು ಉತ್ತೇಜನ; ನಿರ್ಯಾತ ಪ್ರೋತ್ಸಾಹ.

export quota: ನಿರ್ಯಾತ ನಿಗದಿ; ನಿರ್ಯಾತ ದೇಯಾಂಶ.

export surplus: ರಫ್ತು (ನಿರ್ಯಾತ) ಆಧಿಕ್ಯ; ರಫ್ತು ಮಿಗತೆ.

expost: ಅಯೋಜಿತ; ಯೋಜಿಸಿರದ.

expost facto: ಕಾರ್ಯೋತ್ತರ.

expost facto experiment: ಕಾರ್ಯೋತ್ತರ ಪ್ರಯೋಗ; ಘಟನಾನಂತರ ನಡೆಯುವ ಪ್ರಯೋಗ.

expost investment: ಯೋಜಿಸಿರದ ಹೂಡಿಕೆ (ಹೂಟೆ).

expressed interest: ಅಭಿವ್ಯಕ್ತ ಅಭಿರುಚಿ; ಪ್ರಕಟಿತ ಅಭಿರುಚಿ.

expression of feeling: ಭಾವನಾಭಿವ್ಯಕ್ತಿ.

expressive crowd: ಅಭಿವ್ಯಕ್ತಶೀಲ ಜನ ಜಂಗುಳಿ; ಭಾವ ಪ್ರದರ್ಶಕ ಜನ ಜಂಗುಳಿ.

expressive disorder: ಅಭಿವ್ಯಕ್ತಶೀಲ ವಿಕಾರ; ಪ್ರಕಟವಾಗುವ ವಿಕಾರ.

expressive disposition: ಅಭಿವ್ಯಕ್ತಕ ಚಿತ್ತಪ್ರವೃತ್ತಿ.

expressive mob: ಭಾವಪ್ರದರ್ಶಕ ದೊಂಬಿ.

expressive orientation: ಭಾವಾತ್ಮಕ ಒಲವು. ಉದಾ: ಒಂದು ಗುಂಪಿನ ಗೆಳೆಯರು ಕಾಫಿಗಾಗಿ ಒಟ್ಟುಗೂಡುವುದು.

expressive temperament: ಅಭಿವ್ಯಕ್ತಕ ಚಿತ್ತ ಪ್ರಕೃತಿ.

expropriation: ಆಸ್ತಿಹರಣ. ಒಬ್ಬನ ಸ್ವಾಧೀನದಲ್ಲಿರುವ ಆಸ್ತಿಯನ್ನು ಕಡ್ಡಾಯವಾಗಿ ಪರಾಧೀನ ಮಾಡುವುದು ಅಥವಾ ವಶಪಡಿಸಿಕೊಳ್ಳುವುದು.

expropriator: ಶೋಷಕ. ಆಸ್ತಿ ಅಥವಾ ಭೂಮಿಯ ಒಡೆತನವನ್ನು ಕಸಿದುಕೊಳ್ಳುವುದು.

expulsion: ಹೊರಹಾಕುವಿಕೆ. ಹೊರದೂಡುವಿಕೆ.

extended burial: ಚಾಚಿದ ಶವ ಸಂಸ್ಕಾರ. ವಿಸ್ತೃತ ಸ್ಥಿತಿಯಲ್ಲಿ ಅಂದರೆ ಹೆಣವನ್ನು ಅಂಗಾತನೆ ಕಾಲುಚಾಚಿ ಮಲಗಿಸಿ ಹೂಳುವುದು.

extended family: ವಿಸ್ತೃತ ಕುಟುಂಬ. ಎಲ್ಲಾ ರೀತಿಯ ಸಂಬಂಧಿಗಳು ಇರುವ ವಿಸ್ತಾರವಾದ ಕುಟುಂಬ.

extended fund facility: ವಿಸ್ತೃತ ನಿಧಿ ಸೌಲಭ್ಯ.

extended Keynesian model: ವಿಸ್ತೃತ ಕೇನ್ಸ್ (ಉದ್ಯೋಗ ವರಮಾನ) ಮಾದರಿ.

extended self: ವಿಸ್ತೃತ ಅಹಂ; ವಿಸ್ತೃತಾತ್ಮ; ವಿಸ್ತರಿತ ಅಹಂ.

extension and contraction of supply: ಪೂರೈಕೆಯ ಹಿಗ್ಗುವಿಕೆ ಮತ್ತು ಕುಗ್ಗುವಿಕೆ.

extension approach: ವಿಸ್ತರಣಾ ಮಾರ್ಗ.

extensive cultivation: ವ್ಯಾಪಕ ಬೇಸಾಯ.

extensive market: ವ್ಯಾಪಕ ಮಾರುಕಟ್ಟೆ; ವಿಸ್ತಾರವಾದ ಮಾರುಕಟ್ಟೆ.

extenuating: ಪರಿಶಮನಕಾರಿ.

exterior castes: ಬಾಹ್ಯ ಜಾತಿಗಳು.

exteriority and constraint: ಬಾಹ್ಯತ್ವ ಮತ್ತು ನಿರ್ಬಂಧತ್ವ. ಸಾಮಾಜಿಕ ಸಂಗತಿಗಳು ವ್ಯಕ್ತಿಯ ಆಂತರಿಕ ಪ್ರವೃತ್ತಿಗಳಾಗಿರದೆ ಅವು ಬಾಹ್ಯ ಮೂಲದಿಂದ ವಿಧಿಸಲ್ಪಡುತ್ತವೆ ಹಾಗೂ ಆತನ ಮೇಲೆ ನಿರ್ಬಂಧ ಹೇರುತ್ತವೆ ಎಂಬ ತತ್ವ. ಉದಾ: ಪದ್ಧತಿಗಳು, ಮೌಲ್ಯಗಳು, ನಂಬಿಕೆಗಳು, ಆಚರಣೆಗಳು ಇತ್ಯಾದಿ. ಇವು ಬಾಹ್ಯವಾಗಿದ್ದು ನಿರ್ಬಂಧ ಹೇರುತ್ತವೆ.

external aggression: ಬಾಹ್ಯ ಆಕ್ರಮಣ.

external arena: ಹೊರಕಾರ್ಯಕ್ಷೇತ್ರ. ಒಂದು ನಿರ್ದಿಷ್ಟ ಸಮಯದಲ್ಲಿ ಜಾಗತಿಕ ಆರ್ಥಿಕತೆಯಿಂದ ಹೊರಗುಳಿಯುವ ದೇಶಗಳು.

external balance: ಬಾಹ್ಯ ಸಮತೂಕ; ಬಾಹ್ಯ ಶೇಷ.

external debt: ಬಾಹ್ಯ ಸಾಲ; ವಿದೇಶೀ ಸಾಲ. ಒಂದು ದೇಶ ಬೇರೆ ದೇಶಗಳಿಗೆ ಅಥವಾ ಸಂಸ್ಥೆಗಳಿಗೆ ಸಲ್ಲಿಸಬೇಕಾದ ಹಣ.

external deficit: ಬಾಹ್ಯ ಕೊರತೆ.

external diseconomies: ಬಾಹ್ಯ ಅಪವ್ಯಯಗಳು.

external economies: ಬಾಹ್ಯ ಮಿತವ್ಯಯಗಳು; ಬಾಹ್ಯ ಆರ್ಥಿಕ ಲಾಭಗಳು.

external emergency: ಬಾಹ್ಯ ತುರ್ತುಪರಿಸ್ಥಿತಿ. ಬಾಹ್ಯಶಕ್ತಿಗಳು ಆಕ್ರಮಣ ನಡೆಸಿದಾಗ ರಾಷ್ಟ್ರಪತಿಯು ಘೋಷಿಸುವ ತುರ್ತುಪರಿಸ್ಥಿತಿ; ಉದಾ: ೧೯೬೨ ರ ಅಕ್ಟೋಬರ್ ೨೬ ಚೈನಾ ಭಾರತ ಯುದ್ಧದ ಸಂದರ್ಭದಲ್ಲಿ ಘೋಷಿಸಿದ ಬಾಹ್ಯತುರ್ತು ಪರಿಸ್ಥಿತಿ.

external relation: ಬಾಹ್ಯ ಸಂಬಂಧ.

external sovereignty: ಬಾಹ್ಯ ಪರಮಾಧಿಕಾರ.

external stimulation: ಬಾಹ್ಯ ಪ್ರಚೋದನೆ.

external soul: ಬಾಹ್ಯ ಆತ್ಮ. ಆತ್ಮವು ಶರೀರದಿಂದ ಹೊರಗೆ ಜೀವಿಸುತ್ತದೆ ಎಂಬ ನಂಬಿಕೆ.

external system: ಬಾಹ್ಯ ವ್ಯವಸ್ಥೆ. ಗುಂಪಿನ ಬಾಹ್ಯ ಪರಿಸರದ ಕಡೆ ನಿರ್ದೇಶಿತವಾದ ಸಮೂಹ ಚಟುವಟಿಕೆಗಳನ್ನು ಭಾವನೆಗಳು ಹಾಗೂ ಸಾಮಾಜಿಕ ಅಂತರಕ್ರಿಯೆಗಳು. ಒಟ್ಟು ಸಾಮಾಜಿಕ ವ್ಯವಸ್ಥೆಗೆ ಬಾಹ್ಯ ಹಾಗೂ ಆಂತರಿಕ. ವ್ಯವಸ್ಥೆಗಳೆರಡೂ ಅನಿವಾರ್ಯ. ನೋಡಿ: internal system.

externality: ಬಾಹ್ಯ ಪರಿಣಾಮ.

extra conformist: ಕಟ್ಟಾ ಸಂಪ್ರದಾಯವಾದಿ

extramarital relationship: ವಿವಾಹ ಬಾಹಿರ ಸಂಬಂಧ.

extra mental: ಬಾಹ್ಯ ಮಾನಸಿಕ.

extranatural: ಅಪ್ರಾಕೃತಿಕ; ಪ್ರಕೃತಿಕೇತರ.

extraordinary budget: ವಿಶೇಷ (ಅಸಾಧಾರಣ) ಮುಂಗಡಪತ್ರ. ಈ ರೀತಿಯ ಆಯವ್ಯಯದ ಅಂದಾಜು ಪಟ್ಟಿಗಳನ್ನು ಯುದ್ಧ ಸಿದ್ಧತೆ ಅಥವಾ ರೈಲ್ವೆಗಳಂತಹ ಭಾರಿ ಬಂಡವಾಳದ ಯೋಜನೆಗಳಿಗೆ ಹಣ ಒದಗಿಸಲು ಉಪಯೋಗಿಸಲಾಗುತ್ತದೆ.

extraordinary commission: ವಿಶೇಷ ಸಮಿತಿ.

extraordinary session: ವಿಶೇಷ (ಅಸಾಧಾರಣ). ಅಧಿವೇಶನ. ನಿಗದಿಗೊಳಿಸಿದ ಅಧಿವೇಶನಗಳನ್ನು ಹೊರತುಪಡಿಸಿ ವಿಶೇಷ ಸಂದರ್ಭದಲ್ಲಿ ದೊರೆ (ಇಂಗ್ಲೆಂಡ್), ರಾಜ್ಯಪಾಲ ಅಥವಾ ರಾಷ್ಟ್ರಾಧ್ಯಕ್ಷರು (ಭಾರತ) ಕರೆಯುವ ಶಾಸಕಾಂಗದ ಅಧಿವೇಶನ.

extra punitive reaction: ಪರ ಶಿಕ್ಷಾತ್ಮಕ ಪ್ರತಿಕ್ರಿಯೆ.

extra-sensory perception: ಅತೀಂದ್ರಿಯ ಗ್ರಹಿಕೆ.

extra social: ಬಾಹ್ಯ ಸಾಮಾಜಿಕ.

extra territorial: ರಾಜ್ಯ ಕ್ಷೇತ್ರಾತೀತ.

extra territorial jurisdiction: ಪ್ರದೇಶಾತೀತ ಅಧಿಕಾರವ್ಯಾಪ್ತಿ.

extreme democracy: ಅತಿರೇಕದ ಪ್ರಜಾಪ್ರಭುತ್ವ ಪ್ಲೇಟೋನ ಸರಕಾರದ ವಿಧಗಳಲ್ಲಿ ಒಂದು. ಅವನ ಪ್ರಕಾರ ಬಹುಸಂಖ್ಯಾತ ಸರಕಾರವು ಕಾನೂನು ಬಾಹಿರವಾಗಿ ನಡೆದುಕೊಂಡರೆ ಅದು ಅತಿರೇಕದ ಪ್ರಜಾಪ್ರಭುತ್ವ. ನೋಡಿ: moderate democracy.

extreme nationalism: ಉಗ್ರ ರಾಷ್ಟ್ರೀಯವಾದ.

extremism: ಅತಿರೇಕವಾದ.

extremists: ಉಗ್ರವಾದಿಗಳು. ೧೯೦೭ ರಲ್ಲಿ ಗುಜರಾತ್‌ನಲ್ಲಿ ಜರಗಿದ ಅಧಿವೇಶನದಲ್ಲಿ ಕಾಂಗ್ರೆಸ್ ಪಕ್ಷವು ಉಗ್ರವಾದಿಗಳು ಮತ್ತು ಸೌಮ್ಯವಾದಿಗಳು ಎಂಬ ಎರಡು ಬಣಗಳಾಗಿ ಒಡೆಯಿತು. ನೋಡಿ: moderates.

extrinsic: ಬಾಹ್ಯ; ಹೊರಗಿನ; ಅನುಷಂಗಿಕ; ಗೌಣ.

extrinsic motivation: ಬಾಹ್ಯಾಭಿಪ್ರೇರಣೆ; ಬಾಹ್ಯಪ್ರೇರಣೆ.

extrinsic value: ಅನುಷಂಗಿಕ ಮೌಲ್ಯ; ಗೌಣಮೌಲ್ಯ.

extroversion: ಬಹಿರ್ಮುಖತ್ವ. ಸಾಮಾಜಿಕ ವರ್ತನೆಯ ಒಂದು ಭಾವ ಪ್ರಕಾರ. ಎಲ್ಲರೊಂದಿಗೆ ಬೆರತು ಆನಂದದಿಂದ ಮಾತನಾಡುವ 'ಸೋಷಿಯಲ್' ಸ್ವಭಾವ.

extrovert: ಬಹಿರ್ಮುಖಿ. ತನ್ನಿಂದ ಹೊರತಾಗಿ ಹೊರಪ್ರಪಂಚದತ್ತ ಮನಸ್ಸನ್ನು ಆಸಕ್ತಿಗಳನ್ನು ಹರಿಸುವ, ಸಾಮಾಜಿಕ ಚಟುವಟಿಕೆಗಳನ್ನು ಇಷ್ಟಪಡುವ, ಕ್ರಿಯಾಶೀಲ ವ್ಯಕ್ತಿ.

extrovert personality: ಬಹಿರ್ಮುಖೀ ವ್ಯಕ್ತಿತ್ವ.

extrovert temperament: ಬಹಿರ್ಮುಖೀ ಚಿತ್ತಪ್ರಕೃತಿ.

F

fabianism: ಫೇಬಿಯನ್ ವಾದ. ಪ್ರಜಾಪ್ರಭುತ್ವದ ಚೌಕಟ್ಟಿನಲ್ಲೇ ಸಮಾಜ ವಾದವನ್ನು ಜಾರಿಗೆ ತರಬೇಕೆಂಬುದು ಫೇಬಿಯನ್ ವಾದದ ಮುಖ್ಯ ತಿರುಳು. ಸಾವಕಾಶವಾಗಿ ಕ್ರಾಂತಿ ಇಲ್ಲದೆ ಪ್ರಜಾ ಪ್ರಭುತ್ವ ಪದ್ಧತಿಯಿಂದ ಸಮಾಜವಾದವು ಬೆಳೆದು ಬರಬೇಕು ಎಂಬುದು ಇದರ ಮುಖ್ಯಾಂಶ. ಇದು ಇಂಗ್ಲೆಂಡ್‌ನಲ್ಲಿ ಹುಟ್ಟಿ ಬೆಳೆಯಿತು.

fabians: ಫೇಬಿಯನ್ನರು. ಇಂಗ್ಲೇಂಡಿನ ಸಮಾಜವಾದೀ ಸಂಘಟನೆಯ ಈ ಜನರು ಮಾರ್ಕ್ಸ್‌ನ ತತ್ವಗಳನ್ನು ನಿರಾಕರಿಸಿದವರು.

fable: ನೀತಿಬೋಧಕ ಕಟ್ಟುಕತೆ.

fabricate: ಕಲ್ಪಿಸು; ನೇಯು; ಪೋಣಿಸು.

facade: ಮುಖವಾಡ; ವಾಸ್ತುವಿನ ಮುಂಬದಿ; ಹೆಬ್ಬಾಗಿಲಿನ ಮಾಡು.

face to face: ಮುಖಾಮುಖಿ.

faction: ಒಳಪಂಗಡ; ಒಡಕು.

factional strife: ಅಂತರ್ ಕಲಹ; ಬಣಗಳ ಅಂತಃಕಲಹ.

factor analysis: ಕಾರಕಾಂಶ ವಿಶ್ಲೇಷಣೆ. ಬಹುಮುಖ ವಿಶ್ಲೇಷಣೆ ಗಳನ್ನೊಳಗೊಂಡ ಸಂಖ್ಯಾಶಾಸ್ತ್ರೀಯ ವಿಧಾನ. ವ್ಯಕ್ತಿತ್ವ ಅಥವಾ ಬೌದ್ಧಿಕ ಪರೀಕ್ಷೆಗಾಗಿ ವಿವಿಧ ಪ್ರಕಾರದ ಅಂತರ್ ಸಂಬಂಧ ಅಧ್ಯಯನ.

factor contribution: ಉತ್ಪಾದನಾಂಗ ಕೊಡುಗೆ.

factor cost: ಉತ್ಪಾದನಾಂಗ ವೆಚ್ಚ.

factor elasticity of substitution: ಉತ್ಪಾದನಾಂಗ ಪ್ರತಿನಿದಾನ ಸ್ಥಿತಿಸ್ಥಾಪಕತ್ವ. ಪ್ರತಿನಿದಾನ ಸ್ಥಿತಿಸ್ಥಾಪಕತ್ವವು ಇತರ ಘಟಕಗಳ ಪ್ರಮಾಣಾನುಗುಣ ಬದಲಾ ವಣೆಗೆ ಸಂಬಂಧಿಸಿದಂತೆ ಸೀಮಾಂತ ಉತ್ಪನ್ನ ದರದಲ್ಲಿ ಉಂಟುಮಾಡುವ ಅನುಪಾತೀಯ ಬದಲಾವಣೆ.

factor endowment theory: ಉತ್ಪಾದನಾಂಗ ಸಂಪನ್ಮೂಲ ಸಿದ್ಧಾಂತ. ಸಂಪನ್ಮೂಲಗಳ ವಿತರಣೆಯಲ್ಲಿನ ವ್ಯತ್ಯಾಸ ದಿಂದಾಗಿ ವ್ಯಾಪಾರ ಉಂಟಾಗುತ್ತದೆಯೆಂಬ ಸಿದ್ಧಾಂತ.

factor market: ಉತ್ಪಾದನಾಂಗ ಮಾರುಕಟ್ಟೆ. ಉತ್ಪಾದನಾಂಗ ಮಾರುಕಟ್ಟೆ ಯಲ್ಲಿ ಬೇಡಿಕೆಯು ಕಾರ್ಖಾನೆಗಳಿಂದ ಮತ್ತು ಪೂರೈಕೆಯು ಖಾಸಗಿ ಲೆಕ್ಕಗಳಿಂದ ಹುಟ್ಟಿಕೊಳ್ಳುತ್ತವೆ.

factor of production: ಉತ್ಪಾದನೆಯ ಅಂಶ.

factor price equalization theorem: ಉತ್ಪಾದನಾಂಗ ಬೆಲೆ ಸಮಾನತಾ ಪ್ರಮೇಯ. ಸರಕುಗಳ ಮುಕ್ತ ವ್ಯಾಪಾರದಿಂದ ಕೆಲವು ಸಂದರ್ಭಗಳಲ್ಲಿ ಬೆಲೆಗಳ ಸಂಪೂರ್ಣ ಸಮಾನತೆ ಸಾಧ್ಯವೆಂಬುದರ ವಿವರಣೆ.

factor pricing: ಉತ್ಪಾದನಾಂಗ ಬೆಲೆ ನಿರ್ಣಯ.

factor theory of intelligence: ಬುದ್ಧಿಶಕ್ತಿಯ ಕಾರಕಾಂಶ ಸಿದ್ಧಾಂತ; ಬುದ್ಧಿ ಶಕ್ತಿಯ ಕಾರಕ ಸಿದ್ಧಾಂತ.

factor unit: ಉತ್ಪಾದನಾಂಗ ಘಟಕ.

factorial experiment: ಕಾರಕಾಂಶ ಪ್ರಯೋಗ. ಒಂದಕ್ಕಿಂತ ಹೆಚ್ಚು ಪರಿವರ್ತಕ ಗಳ ಪ್ರಭಾವವನ್ನು ಏಕಕಾಲದಲ್ಲಿ ಮೌಲ್ಯಮಾಪನ ಮಾಡುವ ಪ್ರಯೋಗ.

factory folklore: ಕಾರ್ಖಾನೆ ಜಾನಪದ.

factory law: ಕಾರ್ಖಾನೆ ಕಾಯಿದೆ.

factory system: ಕಾರ್ಖಾನೆ ವ್ಯವಸ್ಥೆ.

factual recall: ವಾಸ್ತವಿಕ ಪುನಃಸ್ಮರಣೆ; ನಡೆದ ಸಂಗತಿಯ ನೆನಪು.

faculty: ಮನಶ್ಶಕ್ತಿ ನಿಕಾಯ; ಬೌದ್ಧಿಕ ವರ್ಗ ಉದಾ: ಶಿಕ್ಷಕರು.

faculty psychology: ಬೌದ್ಧಿಕ ವರ್ಗದ ಮನೋವೃತ್ತಿ.

fad: ಗೀಳು; ಅಭಿಮಾನದ ಭಾವನೆ.

fading of memory: ಸ್ಮರಣ ಮ್ಲಾನತೆ; ಸ್ಮರಣ ಶಕ್ತಿಗುಂದುವಿಕೆ, ನೆನಪು ಅಳಿಸಿ ಹೋಗುವುದು.

fair wage principle: ನ್ಯಾಯ ಕೂಲಿ ತತ್ತ್ವ.

fairy tale: ಕಿನ್ನರ ಕತೆ. ಕಿನ್ನರ ಕತೆ ಒಂದು ಅವಿಚ್ಛಿನ್ನ ಕಥನ. ಹಾಸ್ಯದಿಂದ ಕೂಡಿ ಗಂಭೀರವಾದ ದೀರ್ಘ ಗದ್ಯ ಕೃತಿ. ಇಲ್ಲಿ ಬರುವ ಪಾತ್ರಗಳೆಲ್ಲ ರಾಜ-ರಾಣಿಯರು, ಮಂತ್ರಿ ಮುಖ್ಯರು ದೇವತೆಗಳು ಇತ್ಯಾದಿ. ಇದರ ಕೇಂದ್ರದಲ್ಲಿ ನಾಯಕ ಅಥವಾ ನಾಯಕಿ ಇರುತ್ತಾರೆ. ನಿರ್ಗತಿಕನೂ, ದೀನನೂ ಆಗಿ ಮೊದಲು ಕಾಣಿಸಿಕೊಳ್ಳುವ ನಾಯಕ ಹಲವಾರು ಸಾಹಸ ಕೃತ್ಯಗಳನ್ನು ಎಸಗಿದ ಮೇಲೆ ನಿರೀಕ್ಷಿಸಿದ ಗುರಿ ತಲುಪುತ್ತಾನೆ. ಕಥೆ ನಾಯಕ-ನಾಯಕಿಯರ ವಿವಾಹದಲ್ಲಿ ಮುಕ್ತಾಯ ಪಡೆಯುತ್ತದೆ. ಕಿನ್ನರ ಕಥೆ ಹರ್ಷಾಂತವಾದ, ಭಾವರಸಾತಿರೇಕವುಳ್ಳ ಸದ್ಗುಣಕ್ಕೆ ಜಯ ತೋರಿಸುವ ಕಥೆ.

faith: ನಂಬಿಕೆ; ಶ್ರದ್ಧೆ; ವಿಶ್ವಾಸ.

faith cure: ಶ್ರದ್ಧಾ ಚಿಕಿತ್ಸೆ.

faith healer: ಶ್ರದ್ಧಾ ಚಿಕಿತ್ಸಕ.

fakelore: ಖೋಟಾ ಜಾನಪದ.

fallacy: ಸುಳ್ಳು; ಮಿಥ್ಯೆ; ತರ್ಕದೋಷ.

fallacy of reification: ಮಿಥ್ಯಾತ್ಮಕ ಮೂರ್ತೀಕರಿಸುವಿಕೆ. ಅಮೂರ್ತತೆಯನ್ನು ನೈಜವೆಂದು ಪರಿಗಣಿಸುವಿಕೆ.

fallibility of introspection: ಅಂತರಾವಲೋಕನದ ಪ್ರಮಾದ.

false classs consciousness: ಹುಸಿ ವರ್ಗಪ್ರಜ್ಞೆ. ತನ್ನದಲ್ಲದ ಸಾಮಾಜಿಕ ವರ್ಗದೊಂದಿಗೆ ತಾದಾತ್ಮ್ಯತೆ ಹೊಂದಿ ಹೊಂದಿಕೆಯಾಗದ ವರ್ಗತತ್ತ್ವ ಹಾಗೂ ಅಭಿರುಚಿಗಳನ್ನು ಬೆಂಬಲಿಸುವುದು.

false consciousness: ಮಿಥ್ಯಾ ಪ್ರಜ್ಞೆ.

false perception: ಮಿಥ್ಯಾ ಗ್ರಹಿಕೆ.

false recognition: ತಪ್ಪು ಗುರುತಿಸುವಿಕೆ.

false testimony: ಸುಳ್ಳು ಸಾಕ್ಷ್ಯ. ಮಿಥ್ಯಾ ಸಾಕ್ಷ್ಯ.

familism: ಕೌಟುಂಬಿಕತೆ; ಕುಟುಂಬತ್ವ.

family: ಕುಟುಂಬ. ಮೂಲಭೂತ ಸಾಮಾಜಿಕ ಸಂಸ್ಥೆ. ಪ್ರಜೋತ್ಪಾದನೆ, ಮಕ್ಕಳ ಬೆಳವಣಿಗೆ, ಸಮಾಜೀಕರಣ ಮುಂತಾದ ಪ್ರಮುಖ ಕಾರ್ಯಗಳುಳ್ಳ ಗಂಡ-ಹೆಂಡತಿ ಮಕ್ಕಳನ್ನು ಹೊಂದಿರುವ ಸಾಮಾಜಿಕ ಸಂಸ್ಥೆ.

family adjustment: ಕೌಟುಂಬಿಕ ಹೊಂದಾಣಿಕೆ.

family capitalism: ಕುಟುಂಬ ಬಂಡವಾಳಶಾಹಿತ್ವ. ಉದ್ಯಮೀ ಕುಟುಂಬಗಳ ಒಡೆತನವಿದ್ದು ಅದರಿಂದಲೇ ನಡೆಸಲ್ಪಡುವ ಬಂಡವಾಳಶಾಹೀ ಉದ್ಯಮ.

family court: ಕುಟುಂಬ ನ್ಯಾಯಾ ಲಯ.

family cycle: ಕುಟುಂಬ ಚಕ್ರ. ದಂಪತಿಗಳ ಮದುವೆಯಾದಂದಿನಿಂದ ಮಕ್ಕಳ ಹುಟ್ಟು, ಪೋಷಣೆ ಹಾಗೂ ಇನ್ನಿತರ ಪ್ರಾಮುಖ್ಯ ಘಟನೆಗಳನ್ನು ಒಳಗೊಂಡ, ಅವರ ಜೀವಿತಾವಧಿಯ ಎಲ್ಲಾ ಘಟನೆ ಗಳ ಅನುಕ್ರಮ ವರದಿ.

family disorganization: ಕುಟುಂಬ ವಿಘಟನೆ; ಕೌಟುಂಬಿಕ ವಿಘಟನೆ.

family income supplement: ಕುಟುಂಬದ ಪೂರಕ ಆದಾಯ. ೧೯೭೧ ರಲ್ಲಿ ಇಂಗ್ಲೆಂಡಿನಲ್ಲಿ ಸರ್ಕಾರವು ಒಂದು ನಿರ್ದಿಷ್ಟ ಮೊತ್ತಕ್ಕಿಂತ ಕಡಿಮೆ ಆದಾಯ ಇದ್ದ ಕುಟುಂಬದವರಿಗಾಗಿ ಜಾರಿಗೊಳಿಸಿದ ಪೂರಕ ಹಣದ ಯೋಜನೆ.

family of orientation: ಹುಟ್ಟಿದ ಕುಟುಂಬ; ಜನ್ಯ ಕುಟುಂಬ. ವ್ಯಕ್ತಿಯು ಹುಟ್ಟಿದ ಹಾಗೂ ಸಮಾಜೀಕರಣಗೊಳ್ಳುವ ಕುಟುಂಬ.

family of procreation: ಪ್ರಜೋತ್ಪಾದನಾ ಕುಟುಂಬ. ವ್ಯಕ್ತಿಯು ಮದುವೆಯಾಗಿ ಮಕ್ಕಳನ್ನು ಹೊಂದುವ ಕುಟುಂಬ.

family planning: ಕುಟುಂಬ ಯೋಜನೆ. ಜನನ ನಿಯಂತ್ರಣ ವಿಧಾನಗಳ ಮೂಲಕ ಮಕ್ಕಳ ಸಂಖ್ಯೆಯನ್ನು ಮಿತಿಗೊಳಿಸಿ ಕುಟುಂಬ ಸೌಖ್ಯವನ್ನು ಹೆಚ್ಚಿಸಿಕೊಳ್ಳುವ (ಸರಕಾರೀ ಪ್ರೇರಿತ) ಯೋಜನೆ.

family role identification: ಕೌಟುಂಬಿಕ ಪಾತ್ರ ಗುರುತಿಸುವಿಕೆ.

family roles: ಕೌಟುಂಬಿಕ ಪಾತ್ರಗಳು.

family sentiment: ಕೌಟುಂಬಿಕ ಭಾವನೆ.

family structure: ಕೌಟುಂಬಿಕ ರಚನೆ.

family therapy: ಕೌಟುಂಬಿಕ ಚಿಕಿತ್ಸೆ.

family tree: ವಂಶವೃಕ್ಷ; ವಂಶಾವಳಿ.

family welfare centre: ಕುಟುಂಬ ಕಲ್ಯಾಣ ಕೇಂದ್ರ.

famine cannibalism: ಬರಗಾಲದ ನರಭಕ್ಷಕತನ. ಬರಗಾಲದಲ್ಲಿ ಹಸಿವೆ ನೀಗಿಸುವುದಕ್ಕಾಗಿ ಮನುಷ್ಯ ಮಾಂಸವನ್ನು ಸೇವಿಸುವುದು. ಉದಾ: ಎಸ್ಕಿಮೋ ಜನರಲ್ಲಿ ಈ ರೀತಿಯ ನರಭಕ್ಷಣೆಯನ್ನು ನಾವು ಹೆಚ್ಚು ಗಮನಿಸಬಹುದು. ಇವರಿಗೆ ನರಮಾಂಸ ಭಕ್ಷಣೆ ಸಂಪ್ರದಾಯವಲ್ಲ.

famine code: ಕ್ಷಾಮ ಸಂಹಿತೆ.

fanaticism: ಧರ್ಮಾಂಧತೆ; ಮತಾಂಧತೆ.

fantasy: ಭ್ರಮೆ; ಹಗಲುಗನಸು. ವಾಸ್ತವಿಕತೆಯ ಒತ್ತಡಗಳನ್ನು ಸಹಿಸಲು, ಹಗಲುಗನಸಿನಲ್ಲಿ ತೃಪ್ತಿಪಡುವ ಒಂದು ಮನೋರಕ್ಷಣಾ ತಂತ್ರ.

farm population: ವ್ಯವಸಾಯದ ಜನಸಂಖ್ಯೆ. ವ್ಯವಸಾಯ ಕ್ಷೇತ್ರದಲ್ಲಿ ವಾಸಿಸುವ ಜನರ ಸಂಖ್ಯೆ. ಅವರು ಸ್ವತಃ ಕೃಷಿಕರೇ ಅಲ್ಲವೇ ಎಂಬ ಪ್ರಶ್ನೆ ಗೌಣ.

fascism: ಫ್ಯಾಸಿಸ್ಟ್ ವಾದ. ಬಂಡವಾಳಶಾಹಿ ವ್ಯವಸ್ಥೆಯ ಸಾರ್ವತ್ರಿಕ ಬಿಕ್ಕಟ್ಟಿನ ಕಾಲದಲ್ಲಿ ಬಂಡವಾಳಶಾಹಿ ದೇಶಗಳಲ್ಲಿ ಉದ್ಭವಿಸಿದ ಒಂದು ರಾಜಕೀಯ ಪ್ರವೃತ್ತಿ. ಅದು ಸಾಮ್ರಾಜ್ಯಶಾಹಿ ಬೂರ್ಜ್ವಾಸಿಯ (ಮಧ್ಯಮ ವರ್ಗದ) ಅತ್ಯಂತ ಪ್ರತಿಗಾಮಿ ಮತ್ತು ದುರಾಕ್ರಮಣಕಾರಿ ಶಕ್ತಿಗಳ ಹಿತಾಸಕ್ತಿಗಳನ್ನು ವ್ಯಕ್ತಗೊಳಿಸುತ್ತದೆ. ಉಗ್ರವಾದ ರಾಷ್ಟ್ರೀಯ ದುರಭಿಮಾನ,

ಜನಾಂಗ ಶ್ರೇಷ್ಠವಾದ ಮತ್ತು ಕಮ್ಯೂನಿಸಮ್ ವಿರೋಧವು ಫ್ಯಾಸಿಸಂನ ವಿಶಿಷ್ಟ ಲಕ್ಷಣ. ೧೯೨೨ ರಲ್ಲಿ ಇಟಲಿಯಲ್ಲಿ ಪ್ರಥಮ ವಾಗಿ ಫ್ಯಾಸಿಸ್ಟ್ ಆಳ್ವಿಕೆ ಸ್ಥಾಪನೆಯಾಯಿತು.

fashion: ಸೊಗಸುಗಾರಿಕೆ. ನೋಡಿ: code of fashion.

fasid: ಮಿಥ್ಯಾವಿವಾಹ. ಮುಸ್ಲಿಮರಲ್ಲಿ ಕ್ರಮಬಾಹಿರ ವಿವಾಹ ಸಂಬಂಧ.

fastidious disposition: ಸೂಕ್ಷ್ಮ ರುಚಿಯ ಪ್ರವೃತ್ತಿ.

fatalism: ಅದೃಷ್ಟವಾದ; ವಿಧಿವಾದ. ಎಲ್ಲಾ ಘಟನೆಗಳೂ ಒಂದು ಗೊತ್ತಾದ ರೀತಿಯಲ್ಲೇ ನಡೆಯಬೇಕೆಂದು ವಿಧಿ ಮೊದಲೇ ಗೊತ್ತು ಮಾಡಿರುವುದೆಂಬ ನಂಬಿಕೆ.

father complex: ಪಿತೃಸ್ಥಾನದರಿವು.

father right: ಪಿತೃಹಕ್ಕು. ಪಿತೃ ವಂಶೀಯ ಉತ್ತರಾಧಿಕಾರದ ವ್ಯವಸ್ಥೆ.

fatigue sensation: ದಣಿವಿನ ಸಂವೇದನೆ; ಬಳಲಿಕೆಯ ಸಂವೇದನೆ.

faujdari adalat: ಫೌಜುದಾರಿ ನ್ಯಾಯಾಲಯ. ಫೌಜುದಾರನು ಅಪರಾಧ ಮೊಕದ್ದಮೆಗಳನ್ನು ನಿರ್ಣಯಿಸುತ್ತಿದ್ದ ನ್ಯಾಯಾಲಯ.

favourable balance of payment: ಅನುಕೂಲ ಸಂದಾಯ ಶಿಲ್ಕು. ಅನುಕೂಲಕರ ಪಾವತಿ ಶೇಷ (ಸಂದಾಯ ಬಾಕಿ).

favourable balance of trade: ಅನುಕೂಲಕರ ವ್ಯಾಪಾರ ಶಿಲ್ಕು.

favouritism: ಸ್ವಜನಪಕ್ಷಪಾತ; ತಮ್ಮವರೊಲವು.

fear reaction: ಭಯದ ಪ್ರತಿಕ್ರಿಯೆ.

fear theory: ಭೀತಿಯ ಸಿದ್ಧಾಂತ.

feasts for the dead: ಸತ್ತವರ ಹೆಸರಿನಲ್ಲಿ ವಿಶೇಷ ಊಟ; ಸತ್ತವರಿಗೋಸ್ಕರ ವಿಶೇಷ ಊಟ; ಶವ ಸಂಸ್ಕಾರದ ಸಮಯದಲ್ಲಿ ಆಹಾರ ಸೇವಿಸುವ ಕ್ರಮ. ಮೃತರಿಗೆ ಆಹಾರ ಒದಗಿಸುವುದು ಅಥವಾ ಅವರಿಗೆ ವಿರಾಮ ಮತ್ತು ಸಂತೋಷ ಒದಗಿಸುವುದು ಈ ಕ್ರಿಯೆಯ ಹಿಂದಿನ ಉದ್ದೇಶ.

fecundity: ಫಲವತ್ತತೆಯ ಸಾಮರ್ಥ್ಯ. ಹೆಂಗಸರ ಪ್ರಜೋತ್ಪಾದನೆಯ ದೈಹಿಕ ಸಾಮರ್ಥ್ಯ.

federal assembly: ಸಂಯುಕ್ತ ಶಾಸಕಾಂಗ.

federal constitution: ಸಂಯುಕ್ತ ರಾಷ್ಟ್ರದ ಸಂವಿಧಾನ.

federal court: ವರಿಷ್ಠ ನ್ಯಾಯಾಲಯ. ಉದಾ: ಅಮೇರಿಕಾದ ನ್ಯಾಯಾಂಗವನ್ನು ವರಿಷ್ಠ ಕೇಂದ್ರ ನ್ಯಾಯಾಲಯ ಎಂದು ಕರೆಯಲಾಗುತ್ತದೆ.

federal executive: ಸಂಯುಕ್ತ ಕಾರ್ಯಾಂಗ.

federal executive council: ಸಂಯುಕ್ತ ಕಾರ್ಯನಿರ್ವಾಹಕ ಮಂಡಳಿ.

federal finance: ಒಕ್ಕೂಟ ಹಣಕಾಸು; ಸಂಯುಕ್ತ ರಾಜ್ಯದ ಹಣಕಾಸು.

federal government: ಸಂಯುಕ್ತ ಸರಕಾರ. ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ಅಧಿಕಾರವನ್ನು ವಿಭಜಿಸಿ ಕೊಡುವುದರ ಮೂಲಕ ಅವು ತಮ್ಮ ಕಾರ್ಯವ್ಯಾಪ್ತಿಯಲ್ಲಿ ಸ್ವತಂತ್ರವಾಗಿ ಮತ್ತು

ಅನ್ಯೋನ್ಯವಾಗಿ ಕಾರ್ಯ ನಿರ್ವಹಿಸುವ ವ್ಯವಸ್ಥೆ.

federal legislature: ಸಂಯುಕ್ತ ಶಾಸಕಾಂಗ.

federal principle: ಸಂಯುಕ್ತ ರಾಜ್ಯತತ್ತ್ವ. ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ಸಮಾನ ಅಧಿಕಾರವನ್ನು ಒದಗಿಸಿ ಕೊಡುವ ತತ್ತ್ವ.

federal state: ಸಂಯುಕ್ತ ರಾಜ್ಯ.

federal system: ಸಂಯುಕ್ತ ರಾಜ್ಯ ಪದ್ಧತಿ. ಅಧಿಕಾರಗಳನ್ನು ಕೇಂದ್ರ ಮತ್ತು ರಾಜ್ಯ ಸರಕಾರಗಳ ನಡುವೆ ಲಿಖಿತ ಸಂವಿಧಾನದ ಮೂಲಕ ಹಂಚಿ ಕೇಂದ್ರ ಮತ್ತು ರಾಜ್ಯ ಸರಕಾರಗಳು ತಮಗೆ ಸೇರಿದ ಅಧಿಕಾರಗಳನ್ನು ಸ್ವತಂತ್ರವಾಗಿ ಚಲಾಯಿಸುವುದು.

federal tribunal: ಸಂಯುಕ್ತ ನ್ಯಾಯ ಮಂಡಳಿ.

federalism: ಸಂಯುಕ್ತ ರಾಜ್ಯವಾದ. ಸಂಯುಕ್ತ ಸರಕಾರ ಪದ್ಧತಿಯ ಸಿದ್ಧಾಂತ.

federalists: ಸಂಯುಕ್ತ (ಒಕ್ಕೂಟ) ರಾಷ್ಟ್ರವಾದಿಗಳು.

federation: ಸಂಯುಕ್ತ ರಾಜ್ಯ; ಒಕ್ಕೂಟ. ಹಲವು ಘಟಕ ರಾಜ್ಯಗಳ ಒಕ್ಕೂಟ ಅಥವಾ ಸಂಘಟನೆ. ಇಲ್ಲಿ ಅಧಿಕಾರವು ಕೇಂದ್ರ ಮತ್ತು ರಾಜ್ಯ ಸರಕಾರಗಳ ಮಧ್ಯೆ ಹಂಚಿರುತ್ತದೆ ಮತ್ತು ಸಾಮಾನ್ಯವಾಗಿ ಕೇಂದ್ರ ಸರಕಾರವು ಹೆಚ್ಚು ಪ್ರಬಲವಾಗಿರುತ್ತದೆ.

federation of village panchayats: ಗ್ರಾಮ ಪಂಚಾಯಿತಿಗಳ ಸಂಯುಕ್ತ ವ್ಯವಸ್ಥೆ.

feeble minded child: ದುರ್ಬಲ ಬುದ್ಧಿಯ ಮಗು.

feeble mindedness: ದುರ್ಬಲ ಮನಸ್ಕತೆ; ದುರ್ಬಲ ಬುದ್ಧಿಮತ್ತೆ. ಮಾನಸಿಕ ಸಾಮರ್ಥ್ಯ ಕಡಿಮೆ ಇರುವುದು.

feed back: ಪ್ರತಿಫಲ ಪರೀಕ್ಷೆ. ಅನುಷ್ಠಾನಗೊಳಿಸಿದ ಅಭಿವೃದ್ಧಿ ಕಾರ್ಯಕ್ರಮಗಳ ಪ್ರತಿಫಲಗಳೇನೆಂದು ತಿಳಿಸುವ ಅಥವಾ ಮಾಡಿದ ಪಾಠದ ಗ್ರಹಿಕೆ ವಿದ್ಯಾರ್ಥಿಗಳಿಗೆ ಹೇಗಾಗಿದೆಯೆಂದು ಲಿಖಿತ ಅಭಿಪ್ರಾಯಗಳ ಮೂಲಕ ತಿಳಿಯುವ ವಿಧಾನ.

feeling of dissatisfaction: ಅತೃಪ್ತಿಯ ಭಾವನೆ.

feeling of insecurity: ಅಭದ್ರತಾ ಭಾವನೆ.

feeling of lonliness: ಏಕಾಕಿತನದ ಭಾವನೆ.

feelingless psychosis: ಭಾವನಾರಹಿತ ಮನೋವಿಕ್ಷಿಪ್ತಿ.

felony: ತೀವ್ರಾಪರಾಧ. ಒಂದಕ್ಕಿಂತ ಹೆಚ್ಚು ವರ್ಷಗಳ ಅವಧಿಯ ಜೈಲುವಾಸ; ಶಿಕ್ಷೆ ಅಥವಾ ಮರಣ ದಂಡನೆ ವಿಧಿಸಬೇಕಾದ ತೀವ್ರಾಪರಾಧ.

female foeticide: ಹೆಣ್ಣು ಭ್ರೂಣಹತ್ಯೆ.

female infanticide: ಹೆಣ್ಣು ಶಿಶುಹತ್ಯೆ. ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದ ಉತ್ತರ ಮತ್ತು ಪೂರ್ವ ಪ್ರಾಂತಗಳಲ್ಲಿ ಪ್ರಚಲಿತವಿದ್ದ ಕಂದಾಚಾರ. ಶಾಸನರೀತ್ಯಾ ಇದನ್ನು ನಿರ್ಬಂಧಿಸಲಾಗಿದ್ದರೂ ಈಗಲೂ ಈ ಪ್ರಕರಣಗಳು ಸಂಭವಿಸುವುದುಂಟು.

female mortality: ಸ್ತ್ರೀಮರಣ.

feminism: ಸ್ತ್ರೀವಾದ. ಮಹಿಳೆಯರಿಗೂ ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಹಕ್ಕುಗಳನ್ನು ನೀಡಿ ಗಂಡಸರ ಸರಿಸಮಾನರೆಂದು ಕಾಣಬೇಕೆಂದು ೧೮ ನೇ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಆರಂಭವಾದ ಸಾಮಾಜಿಕ ಚಳವಳಿ. ಈ ಚಳವಳಿ ಇಂದು ವಿಶ್ವಾದ್ಯಂತ ಹಬ್ಬಿದೆ.

feminity: ಹೆಣ್ತನ; ಸ್ತ್ರೀತ್ವ.

feral child: ತೋಳ ಶಿಶು. ಕಾಡಿನಲ್ಲಿ ನಿರ್ಲಕ್ಷ್ಯಕ್ಕೊಳಪಟ್ಟು ತೋಳಗಳಿಂದ ಸಾಕಲ್ಪಟ್ಟ ಮಾನವ ಶಿಶು. ಅದು ಸ್ವರ, ಓಟ ಮತ್ತು ಆಹಾರದಲ್ಲಿ ತೋಳಗಳನ್ನೇ ಅನುಕರಿಸುತ್ತಿತ್ತು.

fertile crescent: ಫಲವತ್ತಾದ ಖಂಡ. ಇರಾನ್ ಮತ್ತು ಇರಾಕ್ ಪ್ರದೇಶ.

fertility: ಫಲವತ್ತತೆ; ಫಲವಂತಿಕೆ; ಪ್ರಜನನ ಶಕ್ತಿ.

fertility cult: ಸಂತತಿಗಾಗಿ ಆರಾಧನೆ; ಫಲವತ್ತತೆಯ ಉಪಾಸನೆ.

fertility motif: ಪ್ರಜನನ ಆಶಯ.

fertility rate: ಫಲೋತ್ಪನ್ನ ದರ; ಜನನ ದರ. ಮಕ್ಕಳನ್ನು ಹೆರುವ ಸಾಮರ್ಥ್ಯ ಇರುವ ಪ್ರತಿ ೧೦೦೦ ಹೆಂಗಸರಿಗೆ ಹುಟ್ಟಿದ ಮಕ್ಕಳ ಸಂಖ್ಯೆಯನ್ನು ತಿಳಿಸುವ ಸೂಚಿಕೆ.

fertility ratio: ಫಲೋತ್ಪನ್ನದ ಅನುಪಾತ (ನಿಷ್ಪತ್ತಿ).

fertility rite: ಫಲವತ್ತತೆಯ ವಿಧಿ. ಫಲವತ್ತತೆ ಪಡೆಯಲು ಮಾಡುವ ವಿಧಿ ಅಥವಾ ಸಂಸ್ಕಾರ.

fetich: ಅಂಧಶ್ರದ್ಧೆಯ ವಸ್ತು. ಮೂಢಾರಾಧನೆಯ ವಸ್ತು. ಮಾಂತ್ರಿಕ ಶಕ್ತಿಯಿರುವುದೆಂದು ಅಥವಾ ಭೂತ ನೆಲೆಸಿರುವುದೆಂದು ಜನರು ಆರಾಧಿಸುವ ಒಂದು ನಿರ್ಜೀವ ವಸ್ತು.

fetish: ನೋಡಿ: fetich.

fetishism: ವಸ್ತುಪೂಜೆ. ವಸ್ತುಗಳಲ್ಲಿ ವಿಶೇಷ ಶಕ್ತಿಯು ನೆಲೆಗೊಂಡಿದೆಯೆಂಬ ನಂಬಿಕೆಯೊಡನೆ ಮಾಡುವ ಆರಾಧನೆ. ಉದಾ: ಹುತ್ತದ ಪೂಜೆ.

fetusphilic society: ಶಿಶುಪ್ರಿಯ ಸಮಾಜ; ಶಿಶುಲಕ್ಷ್ಯ ಸಮಾಜ. ನವಜಾತ ಶಿಶುವನ್ನು ಅತಿಜಾಗ್ರತೆಯಿಂದ ಬೆಳೆಸುವ ಸಮಾಜ.

fetusphobic society: ಶಿಶುನಿರ್ಲಕ್ಷ್ಯ ಸಮಾಜ. ನವಜಾತ ಶಿಶುವನ್ನು ಬೆಳೆಸುವಲ್ಲಿ ಜಾಗ್ರತೆ ವಹಿಸದ ಸಮಾಜ.

feud: ಅಂತಃಕಲಹ. ಗುಂಪುಗಳ ಅಥವಾ ಉಪಗುಂಪುಗಳ ನಡುವಿನ ಕಲಹ.

feudal age: ಊಳಿಗಮಾನ್ಯ ಯುಗ; ಸರದಾರ ಯುಗ.

feudal economy: ಊಳಿಗಮಾನ್ಯ ಆರ್ಥಿಕತೆ.

feudal estate: ನೋಡಿ : fief.

feudal government: ಊಳಿಗಮಾನ್ಯ ಸರಕಾರ.

feudal hierarchy: ಊಳಿಗಮಾನ್ಯ ಶ್ರೇಣಿ ವ್ಯವಸ್ಥೆ.

feudal mode of production: ಊಳಿಗಮಾನ್ಯ ಉತ್ಪಾದನಾ ವಿಧಾನ.

feudal socialism: ಊಳಿಗಮಾನ್ಯ ಸಮಾಜವಾದ.

feudal society: ಊಳಿಗಮಾನ್ಯ ಸಮಾಜ.

feudal system: ಊಳಿಗಮಾನ್ಯ ಪದ್ಧತಿ. ಉದಾ: ಇನಾಂದಾರಿ ಪದ್ಧತಿ, ಜಹಗೀರು ದಾರೀ ಪದ್ಧತಿ. ಗುಲಾಮರನ್ನೇ ಇಟ್ಟು ಕೊಂಡಿರುವ ವ್ಯವಸ್ಥೆಯ ಸ್ಥಾನದಲ್ಲಿ ಅಸ್ತಿತ್ವಕ್ಕೆ ಬಂದ ಬಂಡವಾಳಶಾಹಿ ವ್ಯವಸ್ಥೆಗೆ ಹಿಂದೆ ಇದ್ದ ಒಂದು ಸಾಮಾಜಿಕ ವ್ಯವಸ್ಥೆ.

feudalism: ನೋಡಿ: feudal system.

fiat money: ಕಾನೂನುಬದ್ಧ ಹಣ.

fickle mind: ಚಂಚಲ ಚಿತ್ತ.

fictitious stage: ಕಾಲ್ಪನಿಕ ಹಂತ. ನೋಡಿ: theological stage.

fictive genres: ಕಾಲ್ಪನಿಕ ಪ್ರಕಾರಗಳು.

fidelity: ಸ್ವಾಮಿಭಕ್ತಿ. ನಂಬಿಕೆ.

fief: ಜಹಗೀರು; ಉಂಬಳಿ. ಊಳಿಗಮಾನ್ಯ ಕರಾರಿನ ಮೇಲೆ ಅಧೀನತೆಯನ್ನೊಪ್ಪಿ ಕೊಂಡು ಸ್ವಾಮಿ ಭೃತ್ಯ ಸಂಬಂಧದಲ್ಲಿ ಅನುಭವಿಸುತ್ತಿದ್ದ ಭೂಕ್ಷೇತ್ರ (ಜಮೀನು).

field archaeology: ಕ್ಷೇತ್ರಾಧಾರಿತ ಪ್ರಾಚ್ಯವಸ್ತುಶಾಸ್ತ್ರ; ಭೂ ಪರಿಶೋಧನೆ; ಪ್ರಾಕ್ತನ ಕ್ಷೇತ್ರಕಾರ್ಯ. ಭೂಮಿಯ ಮೇಲ್ಪದರದಲ್ಲಿರುವ ದೃಷ್ಟಿಗೆ ಗೋಚರ ವಾಗುವ ಹಳೆಯ ವಸ್ತುಗಳ ಮೂಲಕ (ಪಳೆಯುಳಿಕೆ) ಇತಿಹಾಸದ ಅಧ್ಯಯನ. ಈ ರೀತಿಯ ಅಧ್ಯಯನದಲ್ಲಿ ಉತ್ಖನನ ಕೈಗೊಳ್ಳು ವುದಿಲ್ಲ.

field demonstration: ಕ್ಷೇತ್ರ ಪ್ರಾತ್ಯಕ್ಷಿಕೆ.

field investigation method: ಕ್ಷೇತ್ರ ಅನ್ವೇಷಣಾ ಪದ್ಧತಿ (ವಿಧಾನ).

field mehtod: ಕ್ಷೇತ್ರ ವಿಧಾನ.

field of observation: ಅವಲೋಕನ ಕ್ಷೇತ್ರ.

field research: ಕ್ಷೇತ್ರ ಸಂಶೋಧನೆ.

field study method: ಕ್ಷೇತ್ರ ಅಧ್ಯಯನ ವಿಧಾನ. ನೈಜ ಪರಿಸರದ ಸಂದರ್ಭಗಳಲ್ಲೇ ಸಂಶೋಧಕನು ಅಧ್ಯಯನ ವಿಷಯವನ್ನು ಅಭ್ಯಸಿಸುವುದು.

field theory: ಕ್ಷೇತ್ರ ಸಿದ್ಧಾಂತ.

field work: ಕ್ಷೇತ್ರ ಕಾರ್ಯ.

fiery temper: ಉಗ್ರ ಚಿತ್ತವೃತ್ತಿ.

figure head: ನಾಮಮಾತ್ರ ಮುಖ್ಯಸ್ಥ. ವಾಸ್ತವ ಅಧಿಕಾರಗಳನ್ನು ಹೊಂದಿಲ್ಲದ ಮುಖ್ಯಸ್ಥ. ಇವನು ನಾಮಮಾತ್ರ ಮುಖ್ಯಸ್ಥನಾಗಿದ್ದು ಅವನ ಅಧಿಕಾರಗಳನ್ನು ಅವನ ಹೆಸರಿನಲ್ಲಿ ಬೇರೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳು ಚಲಾಯಿಸುವುದು. ಉದಾ: ಭಾರತದಲ್ಲಿ ರಾಷ್ಟ್ರಾಧ್ಯಕ್ಷ ಮತ್ತು ಇಂಗ್ಲೆಂಡ್‌ನಲ್ಲಿ ರಾಣಿ. ಇವರ ಅಧಿಕಾರಗಳನ್ನು ಮಂತ್ರಿ ಮಂಡಲದ ಸದಸ್ಯರು ಚಲಾಯಿಸುತ್ತಾರೆ.

filial behaviour: ಹೆತ್ತವರ ಬಗೆಗಿನ ವರ್ತನೆ. ತಂದೆ-ತಾಯಿ ಸಂಬಂಧೀ ವರ್ತನೆ.

filial regression: ಪುತ್ರ ಸಂಬಂಧದ ಹಿಂತೆಗೆತ; ವಂಶವೃಕ್ಷ ಹಿಂತೆಗೆತ.

filial relationship: ಮಾತಾ-ಪಿತೃ ಪ್ರೇಮ ಸಂಬಂಧ. ಹೆತ್ತವರ ಬಗ್ಗೆ ಮಕ್ಕಳ ಪ್ರೀತಿ ಬಾಂಧವ್ಯ.

filial sentiment: ಮಾತಾ-ಪಿತೃ ಗೌರವ. ಹೆತ್ತವರ ಬಗ್ಗೆ ಮಕ್ಕಳ ಗೌರವ ಭಾವನೆ.

filiation: ಪುತ್ರತ್ವ; ಮಗತನ. ರಕ್ತ ಸಂಬಂಧದ ಹೊರತಾಗಿ ಪುತ್ರಭಾವದಿಂದ ಸಾಕಿದವರೊಡನೆ ಬೆಳೆಸಿಕೊಂಡಿರುವ ಸಂಬಂಧ.

filibuster: ವಿಲಂಬಕಾರಕ; ತಡೆಗಾರ. ಶಾಸನೀಯ ಕಾರ್ಯದಲ್ಲಿ ವಿಳಂಬ ಮಾಡುವ

ಉದ್ದೇಶದಿಂದ ಬಹಳ ದೀರ್ಘವಾದ ಭಾಷಣ ಮಾಡುವುದು ಅಥವಾ ಇನ್ನಿತರ ಅಡೆತಡೆಗಳನ್ನು ಉಂಟುಮಾಡುವುದು.

final degree of utility: ತುಷ್ಟಿಗುಣದ ಅಂತಿಮ ಶ್ರೇಣಿ.

final good: ಅಂತಿಮ ವಸ್ತು (ಸರಕು); ಸಿದ್ಧವಸ್ತು.

final output: ಅಂತಿಮ ಉತ್ಪನ್ನ; ಕೊನೆಯ ಘಟ್ಟದ ಉತ್ಪಾದನೆ.

final product: ಅಂತಿಮ ಉತ್ಪನ್ನ.

financial administration: ಆರ್ಥಿಕ ಆಡಳಿತ. ಸರಕಾರದ ಚಟುವಟಿಕೆಗಳಿಗೆ ಅವಶ್ಯವಾದ ಹಣ ದೊರಕಿಸುವ ಮತ್ತು ಅದನ್ನು ವಿಧಿವಿಹಿತವಾಗಿ ಹಾಗೂ ದಕ್ಷವಾಗಿ ಬಳಸುವ ಉದ್ದೇಶವನ್ನು ಒಳಗೊಂಡ ಕಾರ್ಯಾಚರಣೆ.

financial aspects of planning: ಯೋಜನೆಯ ಹಣಕಾಸು ಸ್ವರೂಪ.

financial autonomy: ಹಣಕಾಸಿನ ಸ್ವಾಯತ್ತತೆ.

financial balance: ಹಣಕಾಸು ಶಿಲ್ಕು.

financial bill: ಹಣಕಾಸಿನ ಮಸೂದೆ; ವಿತ್ತ ಮಸೂದೆ. ಮುಂಬರುವ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ ಸರಕಾರದ ಎಲ್ಲಾ ರೀತಿಯ ಸೂಚನೆಗಳನ್ನು ಒಳಗೊಂಡ ಮಸೂದೆ.

financial burden: ಹಣಕಾಸು ಹೊರೆ; ಹಣಕಾಸಿನ ಭಾರ. ನೋಡಿ: primary burden.

financial capitalism: ಹಣಕಾಸಿನ ಬಂಡವಾಳಶಾಹಿತ್ವ.

financial economies: ಹಣಕಾಸಿನ ಮಿತವ್ಯಯ.

financial emergency: ಹಣಕಾಸಿನ ತುರ್ತುಪರಿಸ್ಥಿತಿ. ನೋಡಿ: emergency.

financial grant: ಹಣಕಾಸಿನ ಅನುದಾನ.

financial oligopoly: ಹಣಕಾಸಿನ ಬಹುಜನ ಸ್ವಾಮ್ಯ.

financial power: ಆರ್ಥಿಕ (ವಿತ್ತ) ಅಧಿಕಾರ.

financial reform: ಹಣಕಾಸು ಸುಧಾರಣೆ.

financial relation: ಆರ್ಥಿಕ ಸಂಬಂಧ. ಕೇಂದ್ರ ಮತ್ತು ರಾಜ್ಯ ಸರಕಾರಗಳ ನಡುವಿನ ಆರ್ಥಿಕ ಸಂಬಂಧ.

financial stabilization: ಹಣಕಾಸಿನ ಸ್ಥಿರೀಕರಣ.

financial statement: ವಿತ್ತ ವಿವರಣೆ ಪತ್ರ.

financial system: ಹಣಕಾಸಿನ ವ್ಯವಸ್ಥೆ.

financial year: ಆರ್ಥಿಕ (ವಿತ್ತ) ವರ್ಷ. ಹಣಕಾಸು ಕಾರ್ಯಾಚರಣೆಗಳು, ಆಯ-ವ್ಯಯ ಹಾಗೂ ಲೆಕ್ಕಚಾರ ಈ ಉದ್ದೇಶಗಳಿಗಾಗಿ ವರ್ಷದ ಯಾವುದೇ ಅವಧಿಯನ್ನು ಹಣಕಾಸು ವರ್ಷ ಎಂದು ನಿಗದಿಪಡಿಸುವುದು (ಪರಿಗಣಿಸುವುದು).

financing approach: ಹಣಕಾಸಿನ ವಿಧಾನ; ಹಣಕಾಸು ಕ್ರಮ.

fine arts: ಲಲಿತ ಕಲೆಗಳು. ಶಾಸ್ತ್ರೀಯ ಸಂಗೀತ, ನೃತ್ಯ, ಚಿತ್ರಕಲೆ ಇತ್ಯಾದಿ.

finial: ಕಲಶಾಲಂಕಾರ; ಶಿಖರಾಲಂಕಾರ.

finite horizon method: ಪರಿಮಿತ ದಿಗಂತ ವಿಧಾನ. ಹೂಟೆಯ ನಿರ್ಧಾರ

ಗಳಲ್ಲಿನ ಅಪಾಯ ಮತ್ತು ಅನಿಶ್ಚಿತತೆಗಳ ನಿವಾರಣೆಗೆ ಅನುಸರಿಸುವ ಕ್ರಮಗಳ ಲ್ಲೊಂದು. ಇದರ ಪ್ರಕಾರ ಪರಿಮಿತ ಎಲ್ಲೆ ಯೊಳಗಿನ ಅಂಕಿಅಂಶಗಳನ್ನಷ್ಟೇ ತೀರ್ಮಾನ ಕೈಗೊಳ್ಳುವಾಗ ಉಪಯೋಗಿಸಲಾಗುತ್ತದೆ.

finite population: ಪರಿಮಿತ ಜನ ಸಂಖ್ಯೆ.

finite series: ಸಾಂತ ಶ್ರೇಣಿ. ಒಂದು ಹಂತದಲ್ಲಿ ಕೊನೆಗೊಳ್ಳುವ ಸರಣಿ ಬೆಳ ವಣಿಗೆ.

Finnish method of folklore: ಜಾನಪದ ಅಧ್ಯಯನದಲ್ಲಿ ಫಿನ್ಲೆಂಡಿನ ವಿಧಾನ.

fire side psychology: ಕಲ್ಪನಾಜನ್ಯ ಮನೋವಿಜ್ಞಾನ; ಕಾಲ್ಪನಿಕ ಮನೋ ವಿಜ್ಞಾನ.

fire walking: ಕೆಂಡಸೇವೆ. ಬೆಂಕಿಯಲ್ಲಿ ನಡೆಯುವ ಒಂದು ವಿಧಿ. ದಕ್ಷಿಣ ಭಾರತದ ಅನೇಕ ಕಡೆಗಳಲ್ಲಿ ಹಬ್ಬವನ್ನಾಚರಿಸುವಾಗ ಪೂಜಾರಿಗಳು, ಹರಕೆ ಹೊತ್ತವರು ಮುಂತಾ ದವರು ಬೆಂಕಿಯಲ್ಲಿ ನಡೆಯುವ ಕ್ರಮ ಇದೆ.

fire worship: ಅಗ್ನಿಪೂಜೆ. ಅಗ್ನಿಯನ್ನು ಪೂಜ್ಯ ಅಥವಾ ಪವಿತ್ರ ಎಂದು ಪೂಜಿಸು ವಿಕೆ.

firm: ಉದ್ಯಮ ಕಾರ್ಖಾನೆ.

first preferential vote: ಪ್ರಥಮ ಆದ್ಯತೆ ಮತ.

first reading: ಮೊದಲನೇ ಪರಿಶೀಲನೆ. ಶಾಸಕಾಂಗದಲ್ಲಿ ಕಾನೂನುಗಳನ್ನು ರಚಿಸು ವಲ್ಲಿಯ ಮೊದಲ ಹಂತ. ಸಾಮಾನ್ಯವಾಗಿ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸುವ ಹಂತದಲ್ಲಿ ಮಸೂದೆಯ ಬಗ್ಗೆ ನಡೆಯುವ ಚರ್ಚೆಯನ್ನು ಮೊದಲನೆಯ ಪರಿಶೀಲನೆ ಎನ್ನಲಾಗುತ್ತದೆ.

first world: ಪ್ರಬಲ ವಿಶ್ವ. ಬಂಡವಾಳ ಶಾಹಿ ಉತ್ಪಾದನೆಯ ಮೇಲೆ ಆಧಾರಿತ ವಾಗಿದ್ದು ಪಕ್ವ ಕೈಗಾರಿಕಾ ಆರ್ಥಿಕತೆಯನ್ನು ಹೊಂದಿರುವ ರಾಷ್ಟ್ರಗಳ ಕೂಟ.

fiscal expenditure: ವಿತ್ತೀಯ ವೆಚ್ಚ.

fiscal measure: ವಿತ್ತ ಕ್ರಮ.

fiscal policy: ವಿತ್ತ ನೀತಿ. ಸರಕಾರವು ಸಾರ್ವಜನಿಕ ಹಣಕಾಸಿಗೆ ಸಂಬಂಧಿಸಿದ ಅಂಶಗಳ ಬಗ್ಗೆ ಅನುಸರಿಸುವ ನೀತಿ.

fiscal safety: ಆರ್ಥಿಕ ಭದ್ರತೆ.

fiscal year: ನೋಡಿ: financial year.

fission: ವಿದಲನ.

five Indies: ಪಂಚಭಾರತ. ಭಾರತದ ಪಂಚವಲಯಗಳನ್ನು ಚೀನೀ ಯಾತ್ರಿಕ ಹ್ಯೂಯೆನ್‌ತ್ಸಾಂಗ್ (ಕ್ರಿ.ಶ. ೬೪೦) ಹೀಗೆ ಕರೆದಿದ್ದಾನೆ. ಪಂಚ ಭಾರತವೆಂದರೆ. ೧. ಮಧ್ಯಪ್ರದೇಶ. ೨.ಪೂರ್ವ ದೇಶ (ಪ್ರಾಚ್ಯ) ೩. ದಕ್ಷಿಣಾಪಥ. ೪. ಅಪರಾಂತ (ಪ್ರತೀಚ್ಯ) ಮತ್ತು ೬. ಉತ್ತಾರಾಪಥ (ಉದೀಚ್ಯ).

five principles: ಪಂಚಶೀಲ ತತ್ವಗಳು. ಭಾರತದ ವಿದೇಶಾಂಗ ನೀತಿಯ ಪ್ರಮುಖ ಅಂಶ. ೧. ರಾಷ್ಟ್ರಗಳ ಪ್ರಾದೇಶಿಕ ಸಮಗ್ರತೆ ಮತ್ತು ಸಾರ್ವಭೌಮ ಅಧಿಕಾರಗಳಿಗೆ ಪರಸ್ಪರ ಮನ್ನಣೆಯನ್ನು ಕೊಡುವುದು. ೨. ಪರಸ್ಪರ ಯುದ್ಧವನ್ನು ಮಾಡದಿರುವುದು. ೩. ಆಂತರಿಕ ವ್ಯವಹಾರಗಳಲ್ಲಿ ಪರಸ್ಪರ ಹಸ್ತ ಕ್ಷೇಪ ಮಾಡದಿರುವುದು. ೪. ಸಮಾನತೆ ಮತ್ತು ಪರಸ್ಪರ ಸಹಾಯ. ೫. ಶಾಂತಿಯುತ ಸಹಜೀವನ. ೧೯೫೪ ರಲ್ಲಿ ಭಾರತ ಮತ್ತು

ಚೀನಾದೇಶಗಳ ನಡುವಣ ಒಪ್ಪಂದದಲ್ಲಿ ಪಂಚಶೀಲ ತತ್ವಗಳನ್ನು ಸೇರಿಸಲಾಯಿತು.

Five Year Plan: ಪಂಚವಾರ್ಷಿಕ ಯೋಜನೆ. ಇದನ್ನು ಭಾರತದಲ್ಲಿ ೧೯೫೧ ರಲ್ಲಿ ಪ್ರಾರಂಭಿಸಲಾಯಿತು.

fixation hysteria: ಬಂಧನೋನ್ಮಾದ ರೋಗ.

fixed alternative question: ನಿರ್ದಿಷ್ಟ ಪರ್ಯಾಯ ಪ್ರಶ್ನೆ. ನಿಗದಿತ ಉತ್ತರಗಳನ್ನು ನೀಡಿ ಅವುಗಳಲ್ಲಿ ಸರಿಯಾದುದನ್ನು ಆಯ್ಕೆ ಮಾಡುವ ಪ್ರಶ್ನೆ.

fixed asset: ಸ್ಥಿರ ಆಸ್ತಿ. ಭೂಮಿ, ಕಟ್ಟಡ, ಯಂತ್ರಸ್ಥಾವರ, ಪೀಠೋಪಕರಣ ಇತ್ಯಾದಿ.

fixed capital: ಸ್ಥಿರ ಬಂಡವಾಳ. ಭೂಮಿ, ಕಟ್ಟಡಗಳೇ ಮುಂತಾದ ಉತ್ಪಾ ದನೆಗೆ ಪೂರಕವಾಗಬಲ್ಲ ಆಸ್ತಿಗಳಲ್ಲಿ ತೊಡಗಿಸಿದ ಹಣ.

fixed cost: ಸ್ಥಿರ ವೆಚ್ಚ. ಸಂಸ್ಥೆಯ ಉತ್ಪನ್ನದ ಪ್ರಮಾಣದೊಂದಿಗೆ ಬದಲಾಗದ ಸ್ಥಿರವೆಚ್ಚ. ಉದಾ: ಕಟ್ಟಡದ ಬಾಡಿಗೆ.

fixed deposit: ಸ್ಥಿರ ಠೇವಣಿ; ಮುದ್ದತಿ ಠೇವಣಿ.

fixed deposit receipt: ಸ್ಥಿರ ಠೇವಣಿ ರಶೀದಿ. ಗ್ರಾಹಕನು ಬ್ಯಾಂಕಿನಲ್ಲಿ ನಿಶ್ಚಿತ ಕಾಲಾವಧಿಯವರೆಗೆ ಠೇವಣಿಯಾಗಿಟ್ಟ ಹಣವನ್ನು ಸ್ವೀಕರಿಸಿದ್ದಕ್ಕೆ ಬ್ಯಾಂಕು ಕೊಡುವ ರಸೀದಿ. ಪರಿಪಕ್ವತಾ ದಿನಾಂಕ ಹಾಗೂ ಮೊಬಲಗನ್ನು ಇದರಲ್ಲಿ ನಮೂದಿಸಿರುತ್ತದೆ.

fixed equivalent: ಸ್ಥಿರ ಸಮತೆ.

fixed exchange rate: ಸ್ಥಿರ ವಿನಿಮಯ ದರ. ಚಿನ್ನಕ್ಕೆ ಅಥವಾ ಇತರ ಕರೆನ್ಸಿಗಳಿಗೆ ಸಂಬಂಧಿಸಿದಂತೆ ನಿಗದಿಗೊಳಿಸುವ ಹಣದ ವಿನಿಮಯ ದರ.

fixed factor of production: ಸ್ಥಿರ ಉತ್ಪಾದನಾ ಅಂಶ.

fixed fiduciary system: ನಿರ್ದಿಷ್ಟ ನ್ಯಾಸರಕ್ಷಕ ಪದ್ಧತಿ. ಒಂದು ನಿರ್ದಿಷ್ಟ ಪ್ರಮಾಣದಷ್ಟು ನೋಟುಗಳನ್ನು ಚಿನ್ನದ ಆಧಾರವಿಲ್ಲದೆ ಕೇಂದ್ರ ಬ್ಯಾಂಕು ಹೊರಡಿಸಬಹುದಾದ ಪದ್ಧತಿ.

fixed input ratio: ಸ್ಥಿರ ಹೂಡಿಕೆ ಅನುಪಾತ.

fixed point theorem: ಸ್ಥಿರ ಬಿಂದು ಪ್ರಮೇಯ.

fixed rate of exchange: ನೋಡಿ: fixed exchange rate.

fixed tenure: ನಿಗದಿತ ಕಾರ್ಯ ಕಾಲಾವಧಿ.

flagging interest: ಕ್ಷೀಣಾಭಿರುಚಿ.

flagging of attention: ಅವಧಾನ ಕ್ಷಯತೆ; ಅವಧಾನ ಕ್ಷೀಣತೆ.

flake tools: ಚಕ್ಕೆ ಕಲ್ಲಿನ ಸಲಕರಣೆಗಳು. (ಆಯುಧಗಳು).

flat structures: ಸಮತಲ ರಚನೆಗಳು.

flattening of affect: ಪ್ರಭಾವದ ನಿರರ್ಥಕತೆ. ಸ್ಕಿಜೋಫ್ರೀನಿಯಾದಲ್ಲಿ ಕಾಣುವ ಚಿಹ್ನೆ.

flexed burial: ಮಡಚಿದ ಶವಸಂಸ್ಕಾರ. ಮೃತ ಶರೀರದ ಕೈ ಅಥವಾ ಕಾಲುಗಳನ್ನು ಅಥವಾ ಎರಡನ್ನೂ ಸಂಸ್ಕಾರಕ್ಕೆ ಸಹಾಯಕವಾಗುವಂತೆ ಮಡಚಿ ಶವಸಂಸ್ಕಾರ ನಡೆಸುವಿಕೆ.

flexibility: ನಮ್ಯತೆ.

flexible constitution: ನಮ್ಯ ಸಂವಿಧಾನ. ಬದಲಾಗುವ ಸಂದರ್ಭಗಳಿಗೂ ಮತ್ತು ಕಾಲಕ್ಕೂ ಸುಲಭವಾಗಿ ಮತ್ತು ಸಮರ್ಪಕವಾಗಿ ಹೊಂದಿಕೊಳ್ಳುವ ಸಂವಿಧಾನ. ಉದಾ: ಇಂಗ್ಲೆಂಡ್‌ನ ಸಂವಿಧಾನ.

flexible exchange rate: ಬದಲಾಗುವ ವಿನಿಮಯ ದರ. ನಿಗದಿಯಾದ ಮಿತಿಯಲ್ಲಿ ಏರಿಳಿತ ಹೊಂದುವ ವಿನಿಮಯ ದರ.

flight from reality: ವಾಸ್ತವದಿಂದ ಪಲಾಯನ. ವಾಸ್ತವಿಕತೆಯಿಂದ ದೂರ ವಾಗಿ ಕಾಲ್ಪನಿಕ ಪ್ರಪಂಚದಲ್ಲಿ ಮುಳುಗುವುದು.

flight of capital: ಬಂಡವಾಳದ ಪಲಾಯನ.

flight of ideas: ವಿಚಾರಗಳ ಮಹಾಪೂರ. ಒಂದಕ್ಕೊಂದು ಸಂಬಂಧವಿಲ್ಲದ, ಅಸಂಬದ್ಧ ವಿಚಾರಧಾರೆ.

floating affect: ಅಸ್ಥಾಯೀ ಪ್ರಭಾವ. ತಂತಾನೇ ನಿಜವಾದ ಪ್ರೇರಕವಿಲ್ಲದೆಯೇ ಭಾವನೆಯೊಂದು ಅನುಭವಕ್ಕೆ ಬರುವುದು.

floating capital: ತೇಲುವ ಬಂಡವಾಳ; ಚರ ಬಂಡವಾಳ. ಸ್ಥಿರ ಆಸ್ತಿಗಳಲ್ಲಿ ಹೂಡಿರದ ಆದರೆ ಪ್ರಗತಿ ಕಾರ್ಯಗಳಲ್ಲಿ ತೊಡಗಿಸಿರುವ (ಹೂಡಿರುವ) ಬಂಡವಾಳ.

floating charge: ಚರ ಹಕ್ಕು ಹೊಣೆ. ಯಾವುದೇ ಸಾಲಗಾರ ಕಂಪೆನಿ ಅಥವಾ ವ್ಯಕ್ತಿಯ ಎಲ್ಲಾ ಆಸ್ತಿಗಳ ಮೇಲೆ ಬ್ಯಾಂಕು ಹಕ್ಕು ಪಡೆದಿರುವುದು.

floating currency: ಚರ ಕರೆನ್ಸಿ (ಹಣ). ಮಾರುಕಟ್ಟೆಯ ಸೆಳೆತಗಳಿಂದ ದರದ ವ್ಯತ್ಯಾಸಕ್ಕೆ ಒಳಗಾಗುವ ಹಣ.

floating debt: ಚರ ಋಣ. ಯಾವುದೇ ರೀತಿಯ ಅಲ್ಪಾವಧಿ ಸಾಲ.

floating policy: ತೇಲು ವಿಮೆ. ತೇಲು ವಿಮೆಯಲ್ಲಿ ಹಡಗಿನ ಹೆಸರು, ಗಮ್ಯ ಸ್ಥಾನ, ಸರಕಿನ ವಿವರ ಇತ್ಯಾದಿಗಳು ಸೂಚಿತವಾಗಿರದಿದ್ದರೂ ಇದು ಅನೇಕ ಅಪಾಯಗಳನ್ನು ವ್ಯಾಪಿಸುವ ವಿಮೆಯಾಗಿದೆ.

floating population: ಅಸ್ಥಾಯಿ ಜನರು; ದಿನನಿತ್ಯ ನಗರಗಳಿಗೆ ಬಂದು ಹೋಗುವ ಜನರು.

floating rate: ತೇಲುವ ದರ; ಚರ ದರ.

floor crossing: ಪಕ್ಷಾಂತರ ಮಾಡುವಿಕೆ. ನೋಡಿ:carpet crossing.

fluctuation of emotion: ಸಂವೇಗದ ಏರಿಳಿತ.

fluctuation of sensibility: ಸಂವೇದನೆಯ ಏರಿಳಿತ.

fluidity of labour: ಶ್ರಮದ ಚಲನೆ.

fluidity of population: ಜನ ಸಂಚಲನ. ಜನ ವಸತಿಯನ್ನು ಬದಲಾಯಿಸದೇ ಜನರು ಒಂದೆಡೆಯಿಂದ ಇನ್ನೊಂದೆಡೆಗೆ ಉದ್ಯೋಗ ಅಥವಾ ವ್ಯವಹಾರಕ್ಕಾಗಿ ಚಲಿಸುವುದಕ್ಕೆ ಜನ ಸಂಚಲನ ಎನ್ನುತ್ತಾರೆ. ಉದಾ: ಕೇಂದ್ರ ವ್ಯಾಪಾರೀ ಸಂಕೀರ್ಣದಿಂದ ಹಾಗೂ ಸಂಕೀರ್ಣಕ್ಕೆ ದಿನವಿಡೀ ಬಂದು ಹೋಗುವ ಜನರು.

flush: ಭಾವೋದ್ರೇಕ.

focus of attention: ಪ್ರಜ್ಞಾಕೇಂದ್ರ. ಒಂದು ನಿರ್ದಿಷ್ಟ ಸಂದರ್ಭದ ಬಗ್ಗೆ ವ್ಯಕ್ತಿಯು ಪ್ರಜ್ಞಾಪೂರ್ವಕವಾಗಿ ಜಾಗೃತನಾಗಿರುವುದು.

focussed crowd: ಕೇಂದ್ರಿತ ಜನ ಜಂಗುಳಿ. ಒಂದು ಸಾಮಾನ್ಯ (ಏಕ) ಉದ್ದೇಶಕ್ಕಾಗಿ ಒಂದು ಜನಜಂಗುಳಿಯ ಜನರು ಕೆಲಸ ಮಾಡುವುದು.

focussed interaction: ಕೇಂದ್ರೀಕೃತ ಅಂತಃಕ್ರಿಯೆ ನಿರ್ದಿಷ್ಟ ಚಟುವಟಿಕೆಗಳಿಗಾಗಿ ವ್ಯಕ್ತಿಗಳ ನಡುವೆ ಜರಗುವ ಅಂತಃಕ್ರಿಯೆ.

focussed interview: ಕೇಂದ್ರೀಕೃತ ಸಂದರ್ಶನ. ಒಂದು ನಿರ್ದಿಷ್ಟ ಘಟನೆಯ ಆಯ್ದ ಅಂಶಗಳ ಬಗ್ಗೆ ಅಥವಾ ಸಂದರ್ಶಕನು ತನ್ನ ಅನುಭವಕ್ಕೆ ಸಿಕ್ಕ ವಿಷಯದ ಕುರಿತು ಗಮನವನ್ನು ಕೇಂದ್ರೀಕರಿಸುವ ಸಂದರ್ಶನ.

foetal death: ಭ್ರೂಣದ ಸಾವು.

folie a-deux: ಸಂಗ ಮನೋವಿಕ್ಷಿಪ್ತಿ; ಸಂಬಂಧ ಮನೋವಿಕೃತಿ. ಹತ್ತಿರದ ಸಂಬಂಧಿಗಳಲ್ಲಿ (ಉದಾ: ಗಂಡ-ಹೆಂಡತಿಯರಿಬ್ಬರಲ್ಲೂ) ಒಟ್ಟಿಗೆ ಮನೋವಿಕೃತಿ ತಲೆದೋರುವುದು.

folk: ಜನಪದ. ಯಾವುದಾದರೊಂದು ಸಮಾನ ಮನೋಧರ್ಮವುಳ್ಳ ಜನ ಸಮೂಹವನ್ನು ಜಾನಪದ ವಿಜ್ಞಾನಿಗಳು ಜನಪದ ಎಂದು ಗುರುತಿಸಿದ್ದಾರೆ. ಭಾಷೆ, ವೃತ್ತಿ, ಶಿಕ್ಷಣ, ಧರ್ಮ ಇತ್ಯಾದಿಗಳಲ್ಲಿ ಯಾವುದಾದರೊಂದು ಸಮಾನ ಧರ್ಮವಾಗಿರುವ ಗುಂಪು ಜನಪದ ಎನಿಸಿಕೊಳ್ಳುತ್ತದೆ. ಕನ್ನಡ ಜನಪದ, ರೈತ ಜನ ಪದ, ಕ್ರೈಸ್ತ ಜನಪದ, ಕಾಲೇಜು ಜನಪದ, ಸೈನಿಕ ಜನಪದ ಹೀಗೆ ಅನೇಕ ಜನಪದಗಳು ಅಸ್ತಿತ್ವದಲ್ಲಿವೆ.

folk art: ಜನಪದ ಕಲೆ.

folk audience: ಪ್ರೇಕ್ಷಕ ಸಮುದಾಯ.

folk belief: ಜನಪದ ನಂಬಿಕೆ.

folk category: ಜನಪದ ಪ್ರವರ್ಗ.

folk charmers: ಜನಪದ ಮನ ರಂಜಕರು. ಉದಾ: ವೇಷಗಾರರು, ಹಾವಾಡಿಗರು, ದೊಂಬರು ಇತ್ಯಾದಿ.

folk community: ಜನಪದ ಸಮುದಾಯ.

folk dance: ಜನಪದ ನೃತ್ಯ; ಜಾನಪದ ನೃತ್ಯ.

folk epic: ಜನಪದ ಮಹಾಕಾವ್ಯ. ಉದಾ: ಫಿನ್ಲೆಂಡಿನ ಕಾಲೆವಾಲ; ಕರಾವಳಿಯ ಸಿರಿ ಪಾಡ್ದನ.

folk etymology: ಜನಪದ ನಿರುಕ್ತಿ; ಜಾನಪದದ ಶಬ್ದ ವ್ಯುತ್ಪತ್ತಿ ಶಾಸ್ತ್ರ. ಊರು, ಕೇರಿ, ನದಿ, ಬೆಟ್ಟಗುಡ್ಡ, ಕೆರೆ, ಕಾಲುವೆ ಮುಂತಾದವುಗಳ ಹೆಸರುಗಳ ಬಗ್ಗೆ ಸಾಮಾನ್ಯ ಜನ ಕೊಡುವ ವಿವರಗಳೇ ಜನ ಪದ ನಿರುಕ್ತಿಗಳು. ಸಂಕೀರ್ಣ ಪದಗಳು ಸುಲಭವಾಗಿ ಗ್ರಾಹ್ಯವಾಗುವಂತೆ ಜಾನ ಪದರ ಬಳಕೆಯಲ್ಲಿ ರೂಪುಗೊಳ್ಳುವಿಕೆ.

folk exegesis: ಜನಪದ ವ್ಯಾಖ್ಯಾನ.

folk festival: ಜನಪದ ಹಬ್ಬ; ಜನಪದ ಜಾತ್ರೆ.

folk group: ಜನಪದ ಸಮೂಹ.

folk ideas: ಜನಪದ ಯೋಚನೆಗಳು.

folk knowledge: ಜನಪದ ಜ್ಞಾನ; ಜಾನಪದೀಯ ಅರಿವು.

folk language: ಜನಪದ ಭಾಷೆ. ಒಂದು ಕಾಲಮಿತಿಯಲ್ಲಿ ಒಂದು ಪ್ರದೇಶಕ್ಕೆ ಸೇರಿದ ಒಂದು ಜನಪದದ ಸದಸ್ಯರು ಸಾಮಾನ್ಯ ಸಂವಹನಕ್ಕಾಗಿ ಬಳಸುವ ಭಾಷೆಯನ್ನು ಭಾಷಾ ಪ್ರಭೇದ ಎನ್ನುತ್ತಾರೆ. ಆದರೆ ಅವರ

ವಾಚಕ ಕಲೆಯಲ್ಲಿ ಅಭಿವ್ಯಕ್ತಗೊಂಡ ಭಾಷೆಯನ್ನು ಪಾರಿಭಾಷಿಕವಾಗಿ ಜನಪದ ಭಾಷೆ ಎಂದು ಕರೆಯುತ್ತಾರೆ.

folk life: ಜನಪದ ಜೀವನ.

folk literature: ಜನಪದ ಸಾಹಿತ್ಯ.

folk medicine: ಜನಪದ ವೈದ್ಯ.

folk lore : ಜಾನಪದ.

folk motif: ಜನಪದ ಆಶಯ. ಕತೆಯ ಅತ್ಯಂತ ಚಿಕ್ಕ ಘಲಕ ಅಥವಾ ಮೂಲಾಂಶವೇ ಆಶಯವೆನಿಸುತ್ತದೆ. ಈ ಆಶಯಗಳು ಸ್ವಾಭಾವಿಕವಾಗಿರದೆ ಅದ್ಭುತವೂ, ಅಸಾಮಾನ್ಯವೂ ಆಗಿರುತ್ತವೆ. ಹೆಚ್ಚಾಗಿ ಇವು ಕಿನ್ನರರು, ಮಾಟಗಾತಿಯರು, ರಾಕ್ಷಸರು, ಕ್ರೂರ ಮಲತಾಯಿಯರು, ಮಾತನಾಡುವ ಪ್ರಾಣಿಗಳಾಗಿರುತ್ತವೆ. ಎಲ್ಲಾ ವಿಷಯಗಳೂ ತಮಗೆ ತಾವೇ ಆಶಯಗಳಾಗುವುದಿಲ್ಲ. ಅವು ನಿರ್ವಹಿಸುವ ಕಾರ್ಯಗಳಿಂದ ಹಾಗೆ ಪರಿಗಣಿತವಾಗುತ್ತವೆ. ಉದಾಹರಣೆಗೆ ಮಂತ್ರ ದಂಡ, ಮಾಯದ ಚಾಪೆ ಇತ್ಯಾದಿ ಕತೆ ಬೆಳೆಯುವುದು ಈ ಆಶಯಗಳ ಮೂಲಕ. ಹೀಗೆ ಆಶಯವು ಕಥನ ಕ್ರಿಯೆಯ ಚಾಲಕ ಶಕ್ತಿ ಯಾಗಿ ಕೆಲಸ ಮಾಡುತ್ತದೆ.

folk music: ಜನಪದ ಸಂಗೀತ; ಜಾನಪದ ಸಂಗೀತ.

folk poerty: ಜನಪದ ಹಾಡು; ಜಾನಪದ ಹಾಡು.

folk psychology: ಜಾನಪದ ಮನೋವಿಜ್ಞಾನ.

folk religion: ಜನಪದ ಧರ್ಮ. ಪುರಾತನ ಆದಿವಾಸಿ ಜನ ಸಮೂಹಗಳಲ್ಲಿ ಪ್ರಚಲಿತವಿದ್ದ ಧಾರ್ಮಿಕ ರೀತಿ ನೀತಿಗಳ ಹಾಗೂ ಅತಿ ಮಾನುಷ ಶಕ್ತಿಗಳ ನಂಬಿಕೆಗಳು.

folk riddle: ಜನಪದ ಒಗಟು.

folk singer: ಜನಪದ ಗಾಯಕ.

folk society: ಜನಪದ ಸಮಾಜ. ಆಧುನಿಕ ನಗರೀಕರಣಗೊಂಡ ಸಮಾಜಕ್ಕಿಂತ ಮೊದಲಿನ ಕೃಷಿಯಾಧಾರಿತ ಗ್ರಾಮೀಣ ಸಮಾಜ. ಸಣ್ಣ ಅನಕ್ಷರಸ್ಥ, ಸಜಾತೀಯ ಲಕ್ಷಣಗಳುಳ್ಳ ಈ ಸಮಾಜ ದಲ್ಲಿ ಸಮೂಹ ಐಕ್ಯತೆ ಮೂಲಭೂತವಾಗಿರುತ್ತದೆ.

folk song: ಜನಪದ ಗೀತೆ; ಅನಕ್ಷರಸ್ಥ ಜನಸಮೂಹದ ನಡುವೆ ವಾಕ್ಸಂಪ್ರದಾಯದ ಮೂಲಕ ಹರಿದು ಬಂದಿರುವ ಒಂದು ಗುಂಪಿನ ಕಾವ್ಯ ಮತ್ತು ಸಂಗೀತಗಳ ಸಮಾವೇಶದಿಂದಾದುದು ಜನಪದ ಗೀತೆ. ಮದುವೆಯ ಹಾಡುಗಳು, ಗೆಯ್ಮೆಯ ಹಾಡುಗಳು, ಆಚರಣಾತ್ಮಕ ಗೀತೆಗಳು, ಕುಣಿತದ ಹಾಡುಗಳು ಇತ್ಯಾದಿ ಜನಪದ ಗೀತೆಗಳು.

folk speech: ಜನಪದ ಭಾಷೆ; ಜನಪದ ಮಾತು.

folk tale: ಜನಪದ ಕತೆ. ತಲೆಮಾರಿನಿಂದ ತಲೆಮಾರಿಗೆ ವಾಚಿಕ ಸಂಪ್ರದಾಯದ ಮೂಲಕ ಹರಿದು ಬಂದಿರುವ ಕತೆಯನ್ನು ಜನಪದ ಕತೆ ಎಂದು ಕರೆಯಲಾಗುತ್ತದೆ. ನಮ್ಮಲ್ಲಿ ಇದನ್ನು ಅಜ್ಜಿಕತೆ ಎಂದೂ ಕರೆಯುತ್ತಾರೆ.

folk urban continuum: ಜನಪದ-ನಗರ ಸಾತತ್ಯ. ಗಾತ್ರ, ಪ್ರತ್ಯೇಕತೆಯ ಅಂಶ, ಸಾಮಾಜಿಕ ಏಕರೂಪತೆ, ಸಾಕ್ಷ್ಯ ಹಾಗೂ ಸಮೂಹ ಐಕ್ಯತೆ ಈ ಐದು ಅಂಶಗಳ

ಆಧಾರದ ಮೇಲೆ ಸಮುದಾಯದ ವರ್ಗೀಕರಣ. ಗ್ರಾಮೀಣ-ನಗರ ಸಂತತ ಧಾರೆಯ ಪರಿಷ್ಕರಣದ ರೂಪವಾದ ಜನಪದ-ನಗರ ಅಖಂಡತೆಯು ಜೀವನ ಪರಿಸರ ನಿಶ್ಚಿತವಾದವನ್ನು ಅಲ್ಲಗಳೆಯುತ್ತದೆ.

folklore genres: ಜಾನಪದ ರೂಪಗಳು.

folklore process: ಜಾನಪದ ಪ್ರಕ್ರಿಯೆ.

folkloristics: ಜಾನಪದ ವಿಜ್ಞಾನ.

folkways: ಲೋಕರೂಢಿಗಳು; ಲೋಕ ರೀತಿಗಳು.

follow up study: ಅನುವರ್ತಿ ಅಧ್ಯಯನ; ಕಾರ್ಯದ ಪರಿಣಾಮದ ಕುರಿತಾಗಿ ನಡೆಸಲಾಗುವ ಪರಿಶೀಲನಾ ಅಧ್ಯಯನ.

food adultration: ಆಹಾರ ಕಲಬೆರಕೆ.

food gathering stage: ಆಹಾರ ಸಂಗ್ರಹಣಾ ಹಂತ; ಆಹಾರ ಹೆಕ್ಕುವ ಹಂತ; ಹಣ್ಣುಗಳು, ಗೆಡ್ಡೆ ಗೆಣಸುಗಳು, ಪ್ರಾಣಿ ಪಕ್ಷಿಗಳು ಇತ್ಯಾದಿಗಳನ್ನು ಜೀವನೋಪಾಯಕ್ಕಾಗಿ ಸಂಗ್ರಹಿಸುತ್ತಿದ್ದ ನಾಗರಿಕತೆಯ ಹಂತ.

food seeking instinct: ಆಹಾರಾನ್ವೇಷಣಾ ಮೂಲ ಪ್ರವೃತ್ತಿ.

force bill: ಒತ್ತಾಯ ಮಸೂದೆ.

force of habit: ಅಭ್ಯಾಸ ಬಲ.

force of law: ಕಾನೂನಿನ ಪ್ರಭಾವ; ಕಾನೂನು ಬಲ.

force theory: ಶಕ್ತಿ ಸಿದ್ಧಾಂತ. ಶಕ್ತಿಯೇ ರಾಜ್ಯದ ಉಗಮಕ್ಕೆ ಮೂಲ ಕಾರಣ ಎಂದು ಪ್ರತಿಪಾದಿಸುವ ಸಿದ್ಧಾಂತ. ಈ ಸಿದ್ಧಾಂತದ ಪ್ರಕಾರ ಬಲಾಢ್ಯನು ಬಲಹೀನನ ಮೇಲೆ ಶಕ್ತಿಯನ್ನು ಪ್ರಯೋಗಿಸಿ ಅಧೀನವ್ಯಕ್ತಿಗಳನ್ನು ಅಡಿಯಾಳುಗಳನ್ನಾಗಿ ಮಾಡಿಕೊಳ್ಳುವುದರ ಮೂಲಕ ರಾಜ್ಯದ ಸಂಘಟನೆ ಉಂಟಾಯಿತು.

forced attention: ಬಲಾತ್ಕಾರಾವಧಾನ.

forced choice: ಒತ್ತಾಯಪೂರ್ಣ ಆಯ್ಕೆ.

forced division of labour: ಬಲವಂತದ ಶ್ರಮ ವಿಭಜನೆ. ತಮ್ಮ ಇಷ್ಟದ್ದಲ್ಲದ ಹಾಗೂ ಅದಕ್ಕೆ ಅರ್ಹರಲ್ಲದ ವ್ಯಕ್ತಿಗಳನ್ನು ಆ ಕೆಲಸ ಮಾಡಲು ಒತ್ತಾಯಿಸುವ ಶ್ರಮ ವಿಭಜನೆಯ ಒಂದು ಮಾದರಿ.

forced labour: ಜೀತ ಪದ್ಧತಿ; ಒತ್ತಾಯದ ದುಡಿಮೆ.

forced savings: ಬಲವಂತದ ಉಳಿತಾಯ; ಕಡ್ಡಾಯ ಉಳಿತಾಯ.

forces of production: ಉತ್ಪಾದನಾ ಶಕ್ತಿಗಳು.

fore consciousness: ಅಗ್ರಚೇತನ; ಪುರೋಪ್ರಜ್ಞೆ.

fore-ground: ಪುರೋಭೂಮಿ; ಮುನ್ನೆಲ.

fore-knowledge: ಮುನ್ನರಿವು.

fore sight: ಮುನ್ನೋಟ; ದೂರದೃಷ್ಟಿ.

fore thought: ಮುಂದಾಲೋಚನೆ; ದೂರಾಲೋಚನೆ.

foreign affair: ವಿದೇಶಾಂಗ ವ್ಯವಹಾರ.

foreign aid: ವಿದೇಶೀ ನೆರವು. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಅವುಗಳ ಆರ್ಥಿಕ ಪ್ರಗತಿಯನ್ನು ಉತ್ತೇಜಿಸಲು ಅಭಿವೃದ್ಧಿ ರಾಷ್ಟ್ರಗಳಿಂದ ಸಂಪನ್ಮೂಲಗಳ ಅಥವಾ ಹಣದ ರೂಪದ ನೆರವು.

foreign assistance: ವಿದೇಶೀ ನೆರವು (ಸಹಾಯ). ನೋಡಿ: foreign aid.

foreign capital : ವಿದೇಶೀ ಬಂಡವಾಳ.

foreign currency: ವಿದೇಶೀ ಕರೆನ್ಸಿ (ಹಣ).

foreign economic aid: ವಿದೇಶೀ ಆರ್ಥಿಕ ನೆರವು. ಇದು ವಿದೇಶಾಂಗ ನೀತಿಯ ಪ್ರಮುಖ ಅಂಗ. ಈ ಪದ್ಧತಿಯು ಎರಡನೇ ಮಹಾಯುದ್ಧದ ನಂತರ ಜಾರಿಯಲ್ಲಿ ಬಂದಿದೆ. ಇದು ಹಣದ ರೂಪದಲ್ಲಿ ಅಥವಾ ಸಾಲರೂಪದಲ್ಲಿ ಅಥವಾ ಸರಕುಗಳ ರೂಪದಲ್ಲಿ ಒಂದು ದೇಶ ಮತ್ತೊಂದು ದೇಶಕ್ಕೆ ನೀಡಬಹುದಾದ ಆರ್ಥಿಕ ನೆರವು.

foreign exchange: ವಿದೇಶೀ ವಿನಿಮಯ.

foreign exchange bill: ವಿದೇಶೀ ವಿನಿಮಯ ಹುಂಡಿ.

foreign exchange control: ವಿದೇಶೀ ವಿನಿಮಯ ನಿಯಂತ್ರಣ.

foreign exchange market: ವಿದೇಶೀ ವಿನಿಮಯ ಮಾರುಕಟ್ಟೆ. ಬೇರೆ ಬೇರೆ ದೇಶಗಳ ಕರೆನ್ಸಿಗಳಲ್ಲಿ ವ್ಯವಹಾರ ನಡೆಸುವ ಮಾರುಕಟ್ಟೆ.

foreign exchange rate: ವಿದೇಶೀ ವಿನಿಮಯ ದರ.

foreign intervention: ವಿದೇಶೀ ಹಸ್ತಕ್ಷೇಪ. ಇನ್ನೊಂದು ದೇಶದ ಆಂತರಿಕ ವ್ಯವಹಾರಗಳಲ್ಲಿ ಒಂದು ಅಥವಾ ಹಲವು ದೇಶಗಳು ಬಲವಂತವಾಗಿ ಮಧ್ಯಪ್ರವೇಶ ಮಾಡುವುದು. ಇದನ್ನು ಆರ್ಥಿಕ, ರಾಜಕೀಯ ಮತ್ತು ಮಿಲಿಟರಿ ವಿಧಾನಗಳಿಂದ ನಡೆಸಲಾಗುತ್ತದೆ. ಉದಾ: ೧೯೬೦ರ ದಶಕದಲ್ಲಿ ವಿಯೆಟ್ನಾಮ್ ಜನತೆಯ ವಿರುದ್ಧವಾಗಿ ಅಮೇರಿಕಾ ನಡೆಸಿದ ಮಿಲಿಟರಿ ಹಸ್ತಕ್ಷೇಪ.

foreign investment: ವಿದೇಶೀ ಹೂಡಿಕೆ; ಪರರಾಷ್ಟ್ರಗಳಲ್ಲಿ ಬಂಡವಾಳ ಹೂಡಿಕೆ.

foreign payment: ವಿದೇಶೀ ಹಣ ಸಂದಾಯ (ಪಾವತಿ).

foreign policy: ವಿದೇಶಾಂಗ ನೀತಿ. ಪರಮಾಧಿಕಾರ ಹೊಂದಿರುವ ರಾಜ್ಯಗಳು (ರಾಷ್ಟ್ರಗಳು) ಒಂದರೊಡನೊಂದು ವ್ಯವಹರಿಸುವಾಗ ಅನುಸರಿಸುವ ನೀತಿ ಮತ್ತು ನಡವಳಿಕೆ.

foreign relation: ವಿದೇಶೀ ಸಂಬಂಧ.

foreign service: ವಿದೇಶೀ ಸೇವೆ.

foreign trade: ವಿದೇಶೀ ವ್ಯಾಪಾರ.

foreign trade contract: ವಿದೇಶೀ ವ್ಯಾಪಾರ ಕರಾರು ಒಪ್ಪಂದ.

forensic anthropology: ನ್ಯಾಯಿಕ ಮಾನವಶಾಸ್ತ್ರ.

forensic medicine: ವೈದ್ಯನ್ಯಾಯ ಶಾಸ್ತ್ರ.

forfeiture: ಮುಟ್ಟುಗೋಲು.

forgetfulness: ಮರೆವು; ವಿಸ್ಮರಣಶೀಲತೆ.

form: ರೂಪ.

form utility: ರೂಪ ತುಷ್ಟಿಗುಣ. ಉದಾ: ಕಲ್ಲನ್ನು ಕಡೆದು ಮೂರ್ತಿಯನ್ನಾಗಿ ಮಾಡಿದಾಗ ಅದಕ್ಕೆ ಒಂದು ಸ್ಪಷ್ಟ ಆಕಾರ ದೊರೆಯುವುದರಿಂದ ಆ ಕಲ್ಲಿಗೆ ರೂಪ ತುಷ್ಟಿಗುಣ ಲಭ್ಯವಾಗುತ್ತದೆ.

formal behaviour: ಔಪಚಾರಿಕ ವರ್ತನೆ.

formal control: ಔಪಚಾರಿಕ ನಿಯಂತ್ರಣ.

formal co-optation: ಔಪಚಾರಿಕ ಸಹ ಆಯ್ಕೆ. ಸಂಘಟನೆಯ ನಾಯಕತ್ವಕ್ಕೆ ಹೊಸ ಅಂಶಗಳನ್ನು ಸೇರಿಸಿಕೊಳ್ಳಲಾಗಿದೆ ಎಂಬುದನ್ನು ಔಪಚಾರಿಕವಾಗಿ ಗುರುತಿಸುವುದು.

formal group: ಔಪಚಾರಿಕ ಸಮೂಹ (ಗುಂಪು).

formal means: ಔಪಚಾರಿಕ ಸಾಧನ ಗಳು. ಉದಾ: ಕಾನೂನು, ಅಧಿಕಾರಶಾಹಿ ಇತ್ಯಾದಿ.

formal method: ಔಪಚಾರಿಕ ವಿಧಾನ.

formal operational stage: ಔಪಚಾರಿಕ ಕ್ರಿಯಾಹಂತ. ಮಗುವು ಅಮೂರ್ತ ಪರಿಕಲ್ಪನೆಗಳನ್ನು (ವಸ್ತು ಗಳನ್ನು) ಅರಿಯುವ ಜ್ಞಾನದ ಬೆಳವಣಿಗೆಯ ಹಂತ.

formal organization: ಔಪಚಾರಿಕ ಸಂಘಟನೆ; ಅಧಿಕೃತ ಸಂಘ. ಸ್ಪಷ್ಟ ಉದ್ದೇಶಗಳು, ಹಕ್ಕುಗಳು ಹಾಗೂ ಕರ್ತವ್ಯಗಳು, ಸ್ಪಷ್ಟವಾಗಿ ವ್ಯಾಖ್ಯಾನಿಸಲ್ಪಟ್ಟಿರುವ ಪಾತ್ರಗಳು ಹಾಗೂ ಔಪಚಾರಿಕ ನೀತಿ ನಿಯಮಗಳಿರುವ ಸಮೂಹ. ಉದಾ: ಶಾಲೆ, ಆಸ್ಪತ್ರೆ, ಸ್ವಯಂ ಸೇವಾ ಸಂಸ್ಥೆಗಳು, ನಿಗಮಗಳು, ಸರಕಾರೀ ನಿಯೋಗಗಳು ಇತ್ಯಾದಿ.

formal relations: ಔಪಚಾರಿಕ ಸಂಬಂಧಗಳು.

formal religion: ಔಪಚಾರಿಕ ಧರ್ಮ. ಧರ್ಮದ ಬಾಹ್ಯ ಆಚರಣೆ.

formal sanction: ಔಪಚಾರಿಕ ನಿರ್ಬಂಧ (ಽಸಂಹಿತೆ).

formal sociology: ಔಪಚಾರಿಕ ಸಮಾಜಶಾಸ್ತ್ರ.

formal status: ಔಪಚಾರಿಕ ಸ್ಥಾನಮಾನ.

formal structure: ಔಪಚಾರಿಕ ರಚನೆ.

formalism: ಬಾಹ್ಯ ನಿಷ್ಠೆ; ಅತಿನಿಯಮಬದ್ಧತೆ; ರೂಪ ನಿಷ್ಠೆ. ಒಂದು ವಿಷಯದ ಆಕಾರಕ್ಕೆ ಹೆಚ್ಚಿನ ಪ್ರಾಮುಖ್ಯತೆಯೇ ಹೊರತು ಒಳತಿರುಳಿಗಲ್ಲ.

formalistic school of thought: ಔಪಚಾರಿಕ ಚಿಂತನವಾದಿಗಳ ಪಂಥ. ಇವರ ಪ್ರಕಾರ ಸಮಾಜಶಾಸ್ತ್ರದ ವ್ಯಾಪ್ತಿಯು ಕೇವಲ ಔಪಚಾರಿಕ ಸಾಮಾಜಿಕ ಸಂಬಂಧಗಳ ಅಧ್ಯಯನಕ್ಕೆ ಸೀಮಿತವಾಗಿದೆ.

formation: ರೂಪಣ.

formative influence: ಪ್ರಾರಂಭಿಕ ಪ್ರಭಾವ.

formed habit: ರೂಪಿಸಿಕೊಂಡ ಚಾಳಿ; ಬೆಳೆಸಿಕೊಂಡ ಅಭ್ಯಾಸ.

forms of sociation: ಸಂಘಜೀವನದ ರೂಪಗಳು. ಸಾಮಾಜಿಕ ಸಂಬಂಧಗಳಲ್ಲಿ ಕಂಡುಬರುವ ವಿಧಗಳು.

formula: ಸೂತ್ರ. ಒಂದು ಆಲೋಚನೆಯನ್ನು ಕ್ರಮಬದ್ಧವಾಗಿ ವ್ಯಕ್ತಪಡಿಸಲು ಬಳಸುವ ಪದಗಳ ಗುಂಪೇ ಸೂತ್ರ.

formula tales: ಸೂತ್ರ ಕತೆಗಳು. ಕಥಾವಸ್ತುವಿಗಿಂತ ಕಥಾರೂಪ ಮುಖ್ಯವಾಗಿರುವ ಈ ಕಥೆಗಳು ಅತಿ ಚಿಕ್ಕವು. ಈ ಕತೆಗಳಲ್ಲಿ ಏನು ನಡೆಯುತ್ತದೆ ಎಂಬುದಕ್ಕಿಂತ ಅದು ಕಥನಗೊಳ್ಳುವ ರೂಪವೇ ಪ್ರಧಾನವಾದುದು. ತೀರ ಸರಳ ಕಥಾವಸ್ತುವಿರುವ ಇಲ್ಲಿ ಕಥೆಯನ್ನು ಹೆಣೆದ ರೀತಿ ಸ್ವಾರಸ್ಯವಾಗಿರುತ್ತದೆ.

formulated initiative: ನಿರೂಪಿತ ತೊಡಗುವಿಕೆ.

formulative study: ನೋಡಿ: exploratory study.

forward exchange: ಮುಂದಣ ವಿನಿಮಯ. ಮುಂದಣ ವಿನಿಮಯವೆಂದರೆ, ಭವಿಷ್ಯತ್ತಿನ ಪೇಟೆಯಲ್ಲಿ ವಿದೇಶೀ ವಿನಿಮಯದ ಮಾರಾಟ ಮತ್ತು ಕೊಳ್ಳುವಿಕೆ.

forward linkage: ಮುಂಜೋಡಣೆ; ಮುನ್ನಡೆ ಸಂಪರ್ಕ. ಒಂದು ನಿರ್ದಿಷ್ಟ ಯೋಜನೆಯಲ್ಲಿ ಉತ್ಪಾದನೆಯ ತುರೀಯ ಹಂತದಲ್ಲಿ ಬಂಡವಾಳ ಹೂಡುವಿಕೆಯನ್ನು ಉತ್ತೇಜಿಸಿದರೆ ಅದನ್ನು ಮುಂಜೋಡಣೆಯೆಂದು ಕರೆಯಲಾಗುತ್ತದೆ.

forward linkage effect: ಮುಂಜೋಡಣೆ ಪರಿಣಾಮ; ಮುನ್ನಡೆ ಸಂಪರ್ಕ ಪರಿಣಾಮ. ಉತ್ಪನ್ನ ಸರಣಿಯಲ್ಲಿ ಒಂದು ಹಂತದ ಉದ್ಯಮವು ಮುಂದಿನ ಹಂತಗಳ ಉದ್ಯಮಗಳ ವಿಸ್ತರಣೆಗೆ ಕಾರಣವಾಗುವುದು.

forward planning: ಮುಂದಣ ಯೋಜನೆ. ಭವಿಷ್ಯದ ಕಾರ್ಯ ನಿರ್ವಹಣೆಯನ್ನು ರೂಪಿಸಿಕೊಳ್ಳುವುದು.

forward policy: ಅಭಿವೃದ್ಧಿ ನೀತಿ.

forward rate: ಮುಂದಣ ದರ. ಭವಿಷ್ಯದಲ್ಲಾಗುವ ಬಟವಾಡೆಯ ಬೆಲೆಯನ್ನು ತೆರಬೇಕಾದ ದರ.

forward tax shifting: ತೆರಿಗೆಯ ಮುನ್ನಡೆಯ ವರ್ಗಾವಣೆ. ಒಬ್ಬ ಉತ್ಪಾದಕನು ಅನುಭೋಗಿಗೆ ಮತ್ತು ಒಬ್ಬ ಮಾರಾಟಗಾರನು ಗ್ರಾಹಕನಿಗೆ ವರ್ಗಾಯಿಸಬಹುದಾದ ತೆರಿಗೆ.

forward trading: ಮುಂದಣ ವ್ಯಾಪಾರ. ಪೇಟೆಯಲ್ಲಿ ವಿದೇಶೀ ವಿನಿಮಯದ ಮಾರಾಟ ಮತ್ತು ಕೊಳ್ಳುವಿಕೆ.

fossil: ಪಳೆಯುಳಿಕೆ. ತಲೆಬುರಡೆ, ಅಸ್ಥಿಪಂಜರ, ಮೂಳೆ ಇತ್ಯಾದಿ ಜೈವಿಕ ವಸ್ತುಗಳು ಭೂಮಿಯಲ್ಲಿ ಹೂತು ಹೋದಾಗ ಕಾಲಾನುಕ್ರಮದಲ್ಲಿ ಶಿಲಾರೂಪ ಹೊಂದುವುದನ್ನು ಪಳೆಯುಳಿಕೆ ಎನ್ನಲಾಗುತ್ತದೆ.

fossilized concept: ಪಳೆಯುಳಿಕೆಯ ಪರಿಕಲ್ಪನೆ.

foster care: ಪೋಷಕ ರಕ್ಷಣೆ.

foster home: ಪೋಷಕ ಗೃಹ.

foster parents: ಪೋಷಕ ತಂದೆ ತಾಯಂದಿರು.

foundation sacrifice: ನೋಡಿ: building sacrifice.

foundational training: ಮೂಲ ತರಬೇತಿ.

foundig father: ಸಂಸ್ಥಾಪಕ ಜನಕ.

four sector model: ನಾಲ್ಕು ವಲಯ ಮಾದರಿ. ಮಹಲ್‌ನೊಬಿಸ್‌ರವರು ಪ್ರತಿಪಾದಿಸಿದ ಈ ಸಿದ್ಧಾಂತದಲ್ಲಿ ಬಂಡವಾಳ ಸರಕುಗಳು, ಕಾರ್ಖಾನೆಗಳು, ಗುಡಿಕೈಗಾರಿಕೆಗಳು ಹಾಗೂ ಸೇವೆಗಳೆಂಬುದಾಗಿ ನಾಲ್ಕು ಉತ್ಪಾದನಾ ಕ್ಷೇತ್ರಗಳನ್ನು ಗುರುತಿಸಿದ್ದಾರೆ.

fourth world: ನಾಲ್ಕನೇ ಜಗತ್ತು. ಆಫ್ರಿಕದ ಉಪ-ಸಹರಾ ಪ್ರದೇಶ, ಏಶ್ಯಾದ ಅತಿ ಜನಸಂಖ್ಯೆಯುಳ್ಳ ದೇಶಗಳಾದ ಬಾಂಗ್ಲಾದೇಶ, ಪಾಕಿಸ್ಥಾನ ಹಾಗೂ ಭಾರತವು ಕಡಿಮೆ ತಲಾದಾಯ, ಕಡಿಮೆ ಉತ್ಪಾದನಾ ಸಾಮರ್ಥ್ಯ ಹಾಗೂ ಹೆಚ್ಚು ಅನಕ್ಷರಸ್ಥರಿರುವ

ದೇಶಗಳಾದುದರಿಂದ ಇವು ನಾಲ್ಕನೇ ಜಗತ್ತು ಎನಿಸಿವೆ.

fragility: ಭಂಗುರತೆ; ಅದೃಢತೆ.

fragmentation: ಛಿದ್ರ ಗೊಳಿಸುವಿಕೆ; ತುಂಡು ತುಂಡು ಮಾಡುವಿಕೆ.

fragmentation of holdings: ಹಿಡುವಳಿಗಳ ಛಿದ್ರೀಕರಣ. ತಂದೆಯ ಆಸ್ತಿ ಯನ್ನು ಮಕ್ಕಳು ಪಾಲು ಮಾಡಿಕೊಳ್ಳುವುದರ ಮೂಲಕ ಅಥವಾ ಸಾಲ ತೀರಿಸುವು ದಕ್ಕಾಗಿ ತುಂಡು ಮಾಡಿ ಆಸ್ತಿಯನ್ನು ಮಾರುವುದರ ಮೂಲಕ ಹಿಡುವಳಿಗಳ ಛಿದ್ರೀಕರಣ ಸಂಭವಿಸುತ್ತದೆ.

fragments of ancient poetry: ಪ್ರಾಚೀನ ಕಾವ್ಯಖಂಡಗಳು.

frame of reference: ಆಧಾರ ವಿಷಯ. ಉಲ್ಲೇಖನೀಯ ಚೌಕಟ್ಟು.

franchise: ಮತಾಧಿಕಾರ.

fraternal polyandry: ಸಹೋದರ ಬಹುಪತಿತ್ವ; ಭ್ರಾತೃತ್ವೀಯ ಬಹುಪತಿತ್ವ. ಒಬ್ಬಾಕೆಯನ್ನು ಒಂದು ಮನೆಯ ಸಹೋದರರೆಲ್ಲರೂ ಮದುವೆಯಾಗುವುದು.

fraternal twins: ಸೋದರಾವಳಿಗಳು.

fraternity: ಭ್ರಾತೃತ್ವ; ಸೋದರ ಮನೋಭಾವನೆ.

fraudulent action: ಮೋಸದ ಕ್ರಮ; ಕಪಟ ಕ್ರಮ.

free alongside ship: ಹಡಗಿನವರೆಗಿನ ಉಚಿತ ಸಾಗಾಟ. ರಫ್ತು ಮಾಡುವ ಸರಕನ್ನು ಹಡಗಿನವರೆಗೆ ಉಚಿತವಾಗಿ ಸಾಗಿಸುವ ಒಂದು ಒಪ್ಪಂದ.

free association method: ಮುಕ್ತ ವಿಚಾರ ಸರಣಿಯ ವಿಧಾನ. ಮನೋಚಿಕಿತ್ಸೆಯ ಒಂದು ವಿಧಾನ. ಈ ವಿಧಾನವು ಚಿಕ್ಕಂದಿನಿಂದ ಹಿಡಿದು ಅದುವರೆಗಿನ ಅಸಮರ್ಪಕ ಭಾವಪ್ರತಿಕ್ರಿಯೆಗಳ ಬೆಳವಣಿಗೆಯನ್ನು ಗುರುತಿಸುವ ಪ್ರಯತ್ನವಾಗಿದೆ.

free capital: ಉಚಿತ ಬಂಡವಾಳ; ಮುಕ್ತ ಬಂಡವಾಳ.

free economy: ಮುಕ್ತ ಆರ್ಥಿಕತೆ.

free enterprise: ನೋಡಿ: laissezfaire policy.

free enterprise economy: ನೋಡಿ: free market economy.

free exchange market: ಮುಕ್ತ ವಿನಿಮಯ ಮಾರುಕಟ್ಟೆ. ಅನಿರ್ಬಂಧಿತ ವಿನಿಮಯ ಮಾರುಕಟ್ಟೆ.

free farm market: ಮುಕ್ತ ವ್ಯವಸಾಯ ಮಾರುಕಟ್ಟೆ; ಕೃಷಿ ವಸ್ತುಗಳ ಮುಕ್ತ ಮಾರುಕಟ್ಟೆ.

free floating aggression: ಉಚ್ಛೃಂಖಲ ಆಕ್ರಮಣ. ಆಕ್ರಮಣಕಾರಿ ಪ್ರವೃತ್ತಿಯ ಕಾರಣಗಳು ಸ್ಪಷ್ಟವಾಗಿಲ್ಲದಿದ್ದಾಗ ಹಾಗೂ ನಿರ್ದಿಷ್ಟ ವ್ಯಕ್ತಿ ಅಥವಾ ವಸ್ತುಗಳ ಮೇಲೆ ಮಾತ್ರ ಈ ಪ್ರವೃತ್ತಿ ಕೇಂದ್ರಿಕೃತವಾಗದಿದ್ದಾಗ ವ್ಯಕ್ತಿ ತನ್ನ ಕೋಪ ನಿರಾಶೆ, ವೈರತ್ವ ಇವುಗಳನ್ನು ಯಾವುದೇ ಹೊಸವ್ಯಕ್ತಿ ಅಥವಾ ವಸ್ತುವಿನ ಮೇಲೆ ಯಾವುದೇ ಕ್ಷಣದಲ್ಲೂ ತೋರಿಸಲು ತಯಾರಿರುವಂಥ ಸ್ಥಿತಿ.

free floating anxiety: ಹಿಡಿತವಿಲ್ಲದ ಉದ್ವೇಗ. (ಆತಂಕಭಾವ).

free floating fear: ಹಿಡಿತಕ್ಕೊಳಪಡದ ಭಯ.

free good: ಪುಕ್ಕಟೆ ಸರಕು; ಉಚಿತ ಸರಕು. ಉತ್ಪಾದನಾ ವೆಚ್ಚವನ್ನು ಹೊಂದಿ ರದ ಮತ್ತು ಕೊರತೆಯಿಲ್ಲದಿರುವ ಬೆಲೆ ರಹಿತ ಸರಕುಗಳು. ಉದಾ: ಗಾಳಿ, ಸೂರ್ಯನ ಬೆಳಕು ಇತ್ಯಾದಿ.

free imagination: ಸ್ವಚ್ಛಂದ ಕಲ್ಪನೆ; ಮುಕ್ತ ಕಲ್ಪನೆ.

free legal aid: ಉಚಿತ ಕಾನೂನು ನೆರವು.

free market: ಮುಕ್ತ ಮಾರುಕಟ್ಟೆ. ವಸ್ತುಗಳ ಬೇಡಿಕೆ ಮತ್ತು ಪೂರೈಕೆಗಳು ಯಾವುದೇ ನಿಯಂತ್ರಣಕ್ಕೊಳಪಟ್ಟಿರದಿರುವ ಮಾರುಕಟ್ಟೆ

free market economy: ಮುಕ್ತ ಮಾರುಕಟ್ಟೆ ಅರ್ಥವ್ಯವಸ್ಥೆ. ಮುಕ್ತ ಮಾರುಕಟ್ಟೆಯಲ್ಲಿ ಸಂಪನ್ಮೂಲಗಳ ಹಂಚಿಕೆಯು ಕೇವಲ ಪೂರೈಕೆ ಮತ್ತು ಬೇಡಿಕೆಗಳಿಂದ ನಿರ್ಧರಿಸಲ್ಪಡುವ ಅರ್ಥವ್ಯವಸ್ಥೆ.

free market mechanism: ಮುಕ್ತ ಮಾರುಕಟ್ಟೆ ತಂತ್ರ.

free on board: ಮುಕ್ತ ಸರಕು ಹೇರಿಕೆ. ಸರಕುಗಳನ್ನು ಹಡಗಿಗೆ ಹೇರುವುದು ಸೇರಿದಂತೆ ಅಲ್ಲಿಯವರೆಗಿನ ಎಲ್ಲಾ ವೆಚ್ಚಗಳನ್ನು ಮಾರಾಟಗಾರನೇ ಭರಿಸುವುದು.

free society: ಮುಕ್ತ ಸಮಾಜ.

free state of mind: ಮನಸ್ಸಿನ ಮುಕ್ತಾವಸ್ಥೆ.

free trade : ಮುಕ್ತ ವ್ಯಾಪಾರ. ಸರಕಾರದ ಯಾವುದೇ ರೀತಿಯ ಹಸ್ತಕ್ಷೇಪವಿಲ್ಲದೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸರಕು ಹಾಗೂ ಸೇವೆಗಳು ಮುಕ್ತವಾಗಿ ಪ್ರವಹಿಸುವ ಸ್ಥಿತಿ.

free trade policy: ಮುಕ್ತ ವ್ಯಾಪಾರ ನೀತಿ. ವ್ಯಾಪಾರದ ಮೇಲೆ ಯಾವುದೇ ನಿರ್ಬಂಧವಿಲ್ಲದೆ ಇರುವ ಧೋರಣೆ.

free will: ಅನಿರ್ಬಂಧಿತ ಇಚ್ಛೆ.

freedmen's bureau: ವಿಮೋಚಿತರ ಕಛೇರಿ.

freedom: ಸ್ವಾತಂತ್ರ್ಯ.

freedom of assembly: ಸಭೆ ಸೇರುವ ಸ್ವಾತಂತ್ರ್ಯ.

freedom of conscience: ಆತ್ಮ ಸಾಕ್ಷಿಯ ಸ್ವಾತಂತ್ರ್ಯ.

freedom of enterprise: ಉದ್ಯಮ ಸ್ವಾತಂತ್ರ್ಯ. ಯಾವುದೇ ಉದ್ಯಮವನ್ನು ಕೈಗೊಳ್ಳುವ ಸ್ವಾತಂತ್ರ್ಯ.

freedom of expression: ಅಭಿವ್ಯಕ್ತಿ ಸ್ವಾತಂತ್ರ್ಯ.

freedom of religion: ಧಾರ್ಮಿಕ ಸ್ವಾತಂತ್ರ್ಯ. ಎಲ್ಲಾ ಧಾರ್ಮಿಕ ಪಂಗಡಗಳ ಜನರಿಗೂ ತಮ್ಮದೇ ಆದ ಧರ್ಮವನ್ನು ಪರಿಪಾಲಿಸಲು ಸಂವಿಧಾನದ ಮೂಲಕ ಕೊಡಲ್ಪಟ್ಟಿರುವ ಹಕ್ಕು.

freedom of residence: ಸ್ವತಂತ್ರ ವಾಸದ ಹಕ್ಕು. ದೇಶದ ಯಾವುದೇ ಭಾಗದಲ್ಲಿ ಯಾದರೂ ನೆಲೆಸುವ ಹಕ್ಕು.

freedom of speech: ವಾಕ್‌ಸ್ವಾತಂತ್ರ್ಯ.

frenzied anxiety: ಭ್ರಮಾವೇಶಪೂರ್ಣ ಕಳವಳ.

frequency distribution: ಆವೃತ್ತಿ ವಿತರಣೆ.

fret: ಕಲ್ಲಿನ ಕಂಡಿ; ಜಾಲಂದ್ರ.

fretfulness: ಚಿತ್ತಕ್ಷೋಭೆ; ಪರಿತಾಪ.

frictional unemployment: ಘರ್ಷಣಾತ್ಮಕ ನಿರುದ್ಯೋಗ; ಶ್ರಮಕ್ಕೆ ಪರಿಪೂರ್ಣ ಚಾಲನೆ ಇಲ್ಲದೆ ಜನರು ತಾತ್ಕಾಲಿಕವಾಗಿ ಕೆಲಸದಿಂದ ಹೊರಗೆಸೆಯಲ್ಪಟ್ಟರೆ ಸಂಭವಿಸುವ ತಾತ್ಕಾಲಿಕ ನಿರುದ್ಯೋಗ.

frieze: ಚಿತ್ರಪಟ್ಟಿಕೆ.

fright: ದಿಗಿಲು; ಗಾಬರಿ.

frigidity: ಉತ್ಸಾಹಶೂನ್ಯತೆ; ಕಾಮೋದ್ರೇಕ ರಾಹಿತ್ಯ. ಮಾನಸಿಕ ಕಾರಣ ಗಳಿಂದ ಉಂಟಾಗುವ ಲೈಂಗಿಕ ಅನಾಸಕ್ತಿ. ಇದನ್ನು ಹೆಚ್ಚಾಗಿ ಹೆಂಗಸರ ಲೈಂಗಿಕ ಸಮಸ್ಯೆಗಳ ಸಂದರ್ಭದಲ್ಲಿ ಹೇಳಲಾಗಿದೆ.

fringe benefit: ಅಲ್ಪಪ್ರಮಾಣದ ಸವಲತ್ತು; ಕಿಂಚಿತ್ ಸೌಲಭ್ಯ. ಸರಕಾರಿ ನೌಕರರಲ್ಲಿ ದಕ್ಷತೆಯನ್ನು ಹೆಚ್ಚಿಸುವ ಉದ್ದೇಶದಿಂದ ನೀಡುವ ಹೆಚ್ಚುವರಿ ರಜೆ, ತುಟ್ಟಿಭತ್ಯೆ, ಪ್ರಯಾಣ ಭತ್ಯೆ, ವಸತಿ ಭತ್ಯೆ ಮುಂತಾದ ವೇತನೇತರ ಸೌಲಭ್ಯಗಳು.

fringe of consciousness: ಜಾಗ್ರತಾವಸ್ಥೆಯ ಅಂಚು.

fringe village: ನಗರದಂಚಿನ ಹಳ್ಳಿ. ನಗರದ ಹತ್ತಿರವಿದ್ದು ನಗರ ಲಕ್ಷಣಗಳಿಂದ ಪ್ರಭಾವಿತವಾಗಿರುವ ಗ್ರಾಮ.

frozen Hindu law: ಘನೀಭೂತ ಹಿಂದೂ ಕಾನೂನು.

frustration: ಆಶಾಭಂಗ; ಭಗ್ನ ಮನ.

frustration aggression: ಆಶಾಭಂಗಿತ ಆಕ್ರಮಣ.

fugue: ವಿಸ್ಮರಣೆ. ಈ ಸಂದರ್ಭದಲ್ಲಿ ವ್ಯಕ್ತಿಯು ವಿವೇಚನಾತ್ಮಕವಾಗಿ ಎಂಬಂತೆ ವರ್ತಿಸುತ್ತಾನೆ. ಆದರೆ ತನ್ನ ವರ್ತನೆಗಳ ಬಗ್ಗೆ ಮರೆವು ಹೊಂದಿರುತ್ತಾನೆ.

full autonamy: ಪೂರ್ಣ ಸ್ವಾಯತ್ತತೆ.

full bodied coin: ಪರಿಪೂರ್ಣ ನಾಣ್ಯ. ನೋಡಿ: full bodied money.

full bodied money: ಪರಿಪೂರ್ಣ ಹಣ. ಆಂತರಿಕ ಮೌಲ್ಯವು ಮುದ್ರಿತ ಮೌಲ್ಯಕ್ಕೆ ಸರಿಯಾಗಿದ್ದಲ್ಲಿ ಆ ಹಣವು ಪರಿಪೂರ್ಣ ಹಣವೆನಿಸುತ್ತದೆ.

full cost: ಪೂರ್ಣ ವೆಚ್ಚ. ಸದವಕಾಶ ವೆಚ್ಚ ಮತ್ತು ಸಾಮಾನ್ಯ ಲಾಭಗಳನ್ನೊಳಗೊಂಡಿರುವ ವೆಚ್ಚ.

full employment: ಪೂರ್ಣಉದ್ಯೋಗ.

full employment of resource: ಸಂಪನ್ಮೂಲದ ಸಂಪೂರ್ಣ ಬಳಕೆ.

full equilibrium: ಪೂರ್ಣ ಸಮತೋಲನ.

function: ಕಾರ್ಯ. ಒಂದು ವ್ಯವಸ್ಥೆಯೊಳಗೆ ಒಂದು ಘಟಕದ ಅಸ್ತಿತ್ವ ಹಾಗೂ ಕಾರ್ಯವು ಇತರ ಘಟಕಗಳ ಮೇಲೆ ಬೀರುವ ಪರಿಣಾಮ.

function of myth: ಪುರಾಣದ ಕಾರ್ಯ.

functional: ಕಾರ್ಯಾತ್ಮಕ.

functional activity: ಕಾರ್ಯಾತ್ಮಕ ಚಟುವಟಿಕೆ. ಒಂದು ಘಟಕ ಅಥವಾ ಸಂಸ್ಥೆಯು ಯಾವ ಉದ್ದೇಶಕ್ಕಾಗಿ ಅಸ್ತಿತ್ವದಲ್ಲಿದೆಯೋ ಅದನ್ನು ಸಾಧಿಸುವ ಕಾರ್ಯ ಚಟುವಟಿಕೆಗಳು.

functional analysis: ಕಾರ್ಯಾತ್ಮಕ ವಿಶ್ಲೇಷಣೆ.

functional anthropology: ಕಾರ್ಯಾತ್ಮಕ ಮಾನವಶಾಸ್ತ್ರ. ಕಾರ್ಯಾತ್ಮಕ ಸೈದ್ಧಾಂತಿಕ ನೆಲೆಯಲ್ಲಿ ಸಮೂಹ ಸಂಬಂಧಗಳನ್ನು ಅಧ್ಯಯನ ಮಾಡುವ ಮಾನವಶಾಸ್ತ್ರದ ವಿಭಾಗ.

functional autonomy: ಕಾರ್ಯಾತ್ಮಕ ಸ್ವಾತಂತ್ರ್ಯ. ಕಾರ್ಯನಿರ್ವಹಣಾ ಸ್ವಯಮಾಧಿಕಾರ.

functional bureaucrat: ಕಾರ್ಯನಿರ್ವಾಹಕ ಅಧಿಕಾರಿ.

functional contrast: ಕಾರ್ಯಾತ್ಮಕ ವೈದೃಶ್ಯ.

functional definition: ಕಾರ್ಯಾತ್ಮಕ ನಿರೂಪಣೆ; ಕಾರ್ಯಾತ್ಮಕ ನಿರ್ವಚನ.

functional dependence: ಕಾರ್ಯಾತ್ಮಕ ಅವಲಂಬನೆ.

functional finance: ಕಾರ್ಯಾತ್ಮಕ ಹಣಕಾಸು.

functional folklore: ಕಾರ್ಯಾತ್ಮಕ ಜಾನಪದ; ಕಾರ್ಯಶೀಲ ಜಾನಪದ.

functional group: ಕಾರ್ಯಾತ್ಮಕ ಸಮೂಹ.

functional imperative: ಕಾರ್ಯಾತ್ಮಕ ಅಗತ್ಯತೆ. ಯಾವುದೇ ಸಾಮಾಜಿಕ ವ್ಯವಸ್ಥೆಯ ಉಳಿಯುವಿಕೆಗೆ ಅವಶ್ಯಕವಾದ ಸಾಮಾನ್ಯೀಕೃತ ಕಾರ್ಯಾತ್ಮಕ ಅಗತ್ಯತೆ. ಉದಾ: ಪರಿಸರಕ್ಕೆ ಹೊಂದಿಕೊಳ್ಳುವುದು, ಘರ್ಷಣೆ ಹಾಗೂ ಬಿಗುವುಗಳನ್ನು ನಿಯಂತ್ರಣದಲ್ಲಿರಿಸುವುದು.

functional integration: ಕಾರ್ಯಾತ್ಮಕ ಸಮಗ್ರತೆ. ವಿಶೇಷ ಪರಿಣತ ಅಂಶಗಳ ಅಂತರ ಅವಲಂಬನೆಯ ಮೇಲೆ ಆಧಾರಿತವಾದ ಏಕತೆ ಹಾಗೂ ಸಾಮರಸ್ಯ.

functional literacy: ಕಾರ್ಯಾತ್ಮಕ ಸಾಕ್ಷರತೆ.

functional planning: ಕಾರ್ಯಾತ್ಮಕ ಯೋಜನೆ. ಪೂರ್ಣೋದ್ಯೋಗ ಮತ್ತು ಸ್ಥಿಮಿತಯುತ ಬೆಳವಣಿಗೆಯ ಉದ್ದೇಶಗಳಿಗಾಗಿ ಮುಂದುವರೆದ ರಾಷ್ಟ್ರಗಳು ಅನುಸರಿಸುವ ಯೋಜನೆ.

functional pre-requisite: ಕಾರ್ಯಾತ್ಮಕ ಮೂಲಾವಶ್ಯಕತೆ.

functional psychology: ಕಾರ್ಯಾತ್ಮಕ ಮನೋವಿಜ್ಞಾನ.

functional psychosis: ಕಾರ್ಯಾತ್ಮಕ ಮನೋವಿಕ್ಷಿಪ್ತಿ.

functional relationship: ಕಾರ್ಯಾತ್ಮಕ (ಕಾರ್ಯನಿಯೋಜಿತ) ಸಂಬಂಧ. ಶ್ರಮ ವಿಭಜನೆಯಿಂದ ಉಂಟಾಗುವ ಪರಸ್ಪರ ಅವಲಂಬನೆಯನ್ನು ಆಧರಿಸಿರುವ ಸಾಮಾಜಿಕ ಸಂಬಂಧ.

functional representation: ವೃತ್ತಿ ಪ್ರಾತಿನಿಧ್ಯ; ಕಾರ್ಯಾತ್ಮಕ ಪ್ರಾತಿನಿಧ್ಯ.

functional requisite: ಕಾರ್ಯಾತ್ಮಕ ಅವಶ್ಯಕತೆ. ಸಾಮಾಜಿಕ ವ್ಯವಸ್ಥೆಯ ಉಳಿವಿಗೆ ಅವಶ್ಯಕವಾದ ಸ್ಥಿತಿ. ನೋಡಿ: functional prerequisites.

functional school: ಕಾರ್ಯಾತ್ಮಕ ಪಂಥ.

functional song: ಕಾರ್ಯಾತ್ಮಕ ಗೀತೆ.

functional specialization: ವೃತ್ತಿ ಪ್ರಾವೀಣ್ಯತೆ; ಕಾರ್ಯಕುಶಲತೆ.

functional status: ಕಾರ್ಯಾತ್ಮಕ ಸ್ಥಾನಮಾನ. ಅಧಿಕಾರ ಅಥವಾ ಘನತೆ-ಗೌರವಗಳಿಗೆ ಒತ್ತುಕೊಡದೆ ಒಂದು ಗುಂಪಿನಲ್ಲಿ ಕೆಲಸದ ಆಧಾರದ ಮೇಲೆ ಕೊಡುವ ಸ್ಥಾನಮಾನ.

functional system: ಕಾರ್ಯಾತ್ಮಕ ವ್ಯವಸ್ಥೆ.

functional theory: ಕಾರ್ಯವಾದದ ಸಿದ್ಧಾಂತ; ಕಾರ್ಯಾತ್ಮಕ ಸಿದ್ಧಾಂತ.

functionalism: ಕಾರ್ಯವಾದ; ಕಾರ್ಯ ತತ್ತ್ವ ಪಂಥ. ಸಾಮಾಜಿಕ-ಸಾಂಸ್ಕೃತಿಕ ವ್ಯವಸ್ಥೆಯಲ್ಲಿ ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಗತಿಗಳು ನಡೆಸುವ ಕಾರ್ಯಗಳ ಬಗೆಗೆ ವಿಶ್ಲೇಷಣೆ.

functionalist: ಕಾರ್ಯವಾದಿ.

functions of the state: ರಾಜ್ಯದ ಕಾರ್ಯಗಳು; ರಾಜ್ಯವು (ಸರಕಾರವು) ಜನರ ಅಭಿವೃದ್ಧಿಗೋಸ್ಕರ ಮಾಡಬೇಕಾಗಿರುವ ಉಪಯುಕ್ತ ಕಾರ್ಯಗಳು.

fund character: ನಿಧಿ ಗುಣ.

fundamental democracy: ಮೂಲಭೂತ ಪ್ರಜಾಪ್ರಭುತ್ವ.

fundamental disequilibrium: ಮೂಲಭೂತ ಅಸಮತೋಲನ.

fundamental law: ಮೂಲಭೂತ ಕಾನೂನು.

fundamental principle: ಮೂಲಭೂತ ತತ್ತ್ವ.

fundamental right: ಮೂಲಭೂತ ಹಕ್ಕು; ಮೂಲಾಧಿಕಾರ. ಪ್ರಜೆಗಳ ವ್ಯಕ್ತಿತ್ವದ ವಿಕಾಸವನ್ನು ಗಮನದಲ್ಲಿರಿಸಿ ಸಂವಿಧಾನದಲ್ಲಿ ಒದಗಿಸಲಾದ ಮೂಲಭೂತ ಹಕ್ಕುಗಳು. ಅವುಗಳು ಯಾವುವೆಂದರೆ ೧. ಸಮಾನತೆಯ ಹಕ್ಕು. ೨. ಸ್ವಾತಂತ್ರ್ಯದ ಹಕ್ಕು. ೩. ಶೋಷಣೆಯ ವಿರುದ್ಧದ ಹಕ್ಕು. ೪. ಧಾರ್ಮಿಕ ಹಕ್ಕು. ೫. ಸಾಂಸ್ಕೃತಿಕ ಮತ್ತು ವಿದ್ಯಾಭ್ಯಾಸದ ಹಕ್ಕು. ೬. ಸಂವಿಧಾನಾತ್ಮಕ ಪರಿಹಾರಗಳ ಹಕ್ಕು.

fundamental rule: ಮೂಲಭೂತ ನಿಯಮ

fundamental value: ಮೂಲಭೂತ ಮೌಲ್ಯ.

fundamentalism: ಮೂಲಭೂತ ವಾದ.

funded debt: ದೀರ್ಘಕಾಲಾವಧಿಯ ಸಾಲ. ನಿರ್ದಿಷ್ಟ ಯೋಜನೆಗೆಂದೇ ಪಡೆಯುವ ದೀರ್ಘಾವಧಿ ಸಾಲ.

funeral fire: ಚಿತಾಗ್ನಿ.

funeral murder: ಹತ್ಯಾ ಶವಸಂಸ್ಕಾರ. ಈಜಿಪ್ಟ್‌ನಲ್ಲಿ ಶವಸಂಸ್ಕಾರದ ಜತೆ ಒಬ್ಬ ಗುಲಾಮನನ್ನು ಕೊಂದು ಜೊತೆಗೆ ಹೂಳುತ್ತಿದ್ದರು. ಮರಣಾನಂತರದ ಲೋಕದಲ್ಲಿ ಸೇವಕ ಸಿಗಲೆಂದು ಈ ರೀತಿ ಮಾಡುತ್ತಿದ್ದರು.

funeral pit: ಶವಗುಳಿ.

funeral procession: ಶವ ಮೆರವಣಿಗೆ.

funeral pyre: ಚಿತೆ.

funeral rites: ಅಂತ್ಯಸಂಸ್ಕಾರ.

furores: ಕ್ಷಣಿಕ ಆವೇಗ; ಸ್ಫೋಟ.

fury: ರೋಷಾವೇಶ.

fusion process: ಒಗ್ಗೂಡುವಿಕೆಯ ಪ್ರಕ್ರಿಯೆ; ಏಕೀಭವನದ ಕ್ರಿಯೆ. ಸಮಾಜೀಕರಣ ಹಾಗೂ ವೈಯಕ್ತೀಕರಣದಂಥ ಎರಡು ವಿಭಿನ್ನ ಕ್ರಿಯೆಗಳು ಒಂದು ಸಂಘಟನೆಯಲ್ಲಿ

ಒಂದೇ ಸಮಯದಲ್ಲಿ ನಡೆಯುವ ಪ್ರಕ್ರಿಯೆ.

future oriented folklore: ಭವಿಷ್ಯಾಭಿಮುಖಿ ಜಾನಪದ.

future shock : ಭವಿಷ್ಯದ ಆಘಾತ.

G

gallop poll: ಭರದಿಂದ ಅಭಿಪ್ರಾಯ ಸಂಗ್ರಹಣೆ. ಚುನಾವಣೆ ಇತ್ಯಾದಿ ಯಾವುದೇ ವಿಶಿಷ್ಟ ವಿಷಯಗಳಿದ್ದಾಗ ತಕ್ಷಣದ ಸಾರ್ವಜನಿಕ ಅಭಿಪ್ರಾಯ ಸಂಗ್ರಹಣೆ. ಇದು ಹೆಚ್ಚು ವೈಜ್ಞಾನಿಕವಾದುದಾಗಿರುವುದಿಲ್ಲ.

galloping inflation: ನಾಗಾಲೋಟದ ಹಣದುಬ್ಬರ. ಎಲ್ಲಾ ನಿಯಂತ್ರಣದ ವಿಧಿವಿಧಾನಗಳನ್ನು ಮೀರಿ ಬೆಲೆಗಳ ದರಗಳು ಏರುತ್ತಿರುವ ಸನ್ನಿವೇಶ.

gallantry award: ಶೌರ್ಯ ಪ್ರಶಸ್ತಿ.

gamblers anonymous: ಜೂಜುಗಾರರ ಅನಾಮಧೇಯ ಸಂಘಟನೆ.

gambling: ಜೂಜು; ಜೂಜಾಟ.

game riddle: ಆಟದ ಒಗಟು.

game theory: ಕ್ರೀಡಾ ಸಿದ್ಧಾಂತ. ವ್ಯಕ್ತಿಯು ಸ್ಪರ್ಧಾತ್ಮಕ ಅಥವಾ ಸಮರ ಸನ್ನಿವೇಶಗಳಲ್ಲಿ ಅನುಸರಿಸಬೇಕಾದ ಸೂಕ್ತ ಕಾರ್ಯವಿಧಾನಗಳು ಯಾವುವೆಂಬುದನ್ನು ಸಂಖ್ಯಾತ್ಮಕ ಆಟದ ಮೂಲಕ ಆಯ್ದುಕೊಳ್ಳುವ ವಿಧಾನ.

Gandhian socialism: ಗಾಂಧೀ ಸಮಾಜವಾದ, ಗಾಂಧೀಜಿಯವರ ದೃಷ್ಟಿಯ ಸಮಾಜವಾದ.

gang: ತಂಡ; ಠೋಳಿ. ಸ್ನೇಹಾಚಾರಕ್ಕೆ ಆಟವಾಡಲು ಅಥವಾ ಇನ್ನಾವುದೇ ಚಟುವಟಿಕೆಗಳಿಗಾಗಿ ತನ್ನಿಂದ ತಾನೇ ರಚಿತವಾಗುವ ಹದಿವಯಸ್ಸಿನ ಜನರ ಪ್ರಾಥಮಿಕ ನಿಕಟ ಗುಂಪು. ಇದು ಹೆಚ್ಚಾಗಿ ನಗರ ಪ್ರದೇಶಗಳಲ್ಲಿ ಕಂಡುಬರುತ್ತದೆ. ಇಂತಹ ಕೆಲವು ಗುಂಪುಗಳು ಕಾನೂನು ಬಾಹಿರ ಚಟುವಟಿಕೆ ಗಳಲ್ಲೂ ತೊಡಗಿರುತ್ತವೆ.

gangsterism: ಪುಂಡುಗಾರಿಕೆ. ಗೂಂಡಾಗಿರಿ, ಸುಲಿಗೆ, ಬ್ಲಾಕ್‌ಮೇಲ್, ಕೊಲೆ ಇವೇ ಮೊದಲಾದವುಗಳನ್ನು ಒಳಗೊಂಡ ಸಂಘಟಿತ ಅಪರಾಧೀ ಚಟುವಟಿಕೆ.

ganser syndrome: ಸಮೀಪ ಸ್ಮೃತಿ. ಹಿಸ್ಟೀರಿಯಾ ರೋಗಿಗಳಲ್ಲಿ ಮತ್ತು ಕೆಲವೊಮ್ಮೆ ಖೈದಿಗಳಲ್ಲಿ ಕಾಣಿಸುವ ತೊಂದರೆ. ರೋಗಿ ಸರಳವಾದ ಪ್ರಶ್ನೆಗಳನ್ನು ಅರ್ಥ ಮಾಡಿಕೊಂಡರೂ ತಪ್ಪಾಗಿ ಉತ್ತರಿಸುತ್ತಾನೆ. ಉದಾ: ವಾರಕ್ಕೆ ಆರು ದಿನಗಳು. ಕುರ್ಚಿಗೆ ಮೂರು ಕಾಲುಗಳು. ಇತ್ಯಾದಿ.

gargoyle: ಹರ್ನಾಳಿಗೆ. ಮಾಡಿನ ನೀರು ಗೋಡೆಗೆ ತಾಗದಂತೆ ಮಾಡಿದ ವಿಕಟಾಕೃತಿಯ ದೋಣಿಮುಖದ ರಚನೆ.

garnishee order: ಪಾವತಿ ಪ್ರತಿಬಂಧ ಆದೇಶ. ನ್ಯಾಯಾಲಯದಲ್ಲಿ ದಾವೆಗೆ ಗುರಿಯಾಗಿರುವ ಋಣಿಯೊಬ್ಬನ ಮೇಲಣ ದಾವೆಯು ಇತ್ಯರ್ಥವಾಗುವವರೆಗೆ ಅವನಿಗೆ ಸಲ್ಲಬೇಕಾದ ಹಣವನ್ನು ಪಾವತಿ ಮಾಡಕೂಡದೆಂದು ಹಣ ಸಲ್ಲಿಸಬೇಕಾದ ವ್ಯಕ್ತಿ ಅಥವಾ ಸಂಸ್ಥೆಗೆ ನ್ಯಾಯಾಲಯ ನೀಡುವ ಆದೇಶ.

garrison state: ರಕ್ಷಕ ಸೈನ್ಯವುಳ್ಳ ರಾಜ್ಯ.

gate keeping process: ದ್ವಾರ ಪ್ರವೇಶ ಪ್ರಕ್ರಿಯೆ. ಒಂದು ಸಮೂಹದ ಜನರು

ಯಾವನೇ ವ್ಯಕ್ತಿಯ ಅಧಿಕಾರ, ಸ್ಥಾನಮಾನ ಹಾಗೂ ವಿಶೇಷಾಧಿಕಾರ ಪಡೆಯಲು ಬೇಕಾಗಿರುವ ಅರ್ಹತೆಯ ಕುರಿತು ನಿರ್ಣಯ ತೆಗೆದುಕೊಳ್ಳುವ ಪ್ರಕ್ರಿಯೆ.

gatophobia: ಮಾರ್ಜಾಲ ಭಯ. ಬೆಕ್ಕನ್ನು ಕಂಡಾಗ ಭಯ ಅಥವಾ ತಿರಸ್ಕಾರ ಉಂಟಾಗುವುದು.

gay: ಆನಂದೋಲ್ಲಾಸ. ಸಲಿಂಗ ಕಾಮುಕರಿಗೆ ಅನ್ವಯಿಸುವ ಸಂಕೇತ ಪದ.

gay disposition: ಆನಂದ ಪ್ರವೃತ್ತಿ.

Gayathri: ಗಾಯತ್ರಿ; ಋಗ್ವೇದದ ಒಂದು ಪವಿತ್ರ ಮಂತ್ರ; ವೈದಿಕ ಧರ್ಮದ ಒಂದು ದೇವತೆ.

gazette: ರಾಜ್ಯ ಪ್ರಪತ್ರ. ಪ್ರತಿಯೊಂದು ಸರಕಾರವು ತನ್ನ ಕಾರ್ಯಚಾರಣೆಗಳ ಬಗ್ಗೆ ಸಾರ್ವಜನಿಕರು ಹಾಗೂ ಸರಕಾರಿ ನೌಕರರಿಗೆ ತಿಳಿಯಪಡಿಸುವ ಸಾಧನ (ವಿಧಾನ).

gemeinschaft: ಪ್ರಾಥಮಿಕ ಸಂಬಂಧ ಸಮೂಹ. ಕುಲ ಸಮೂಹ ಹಾಗೂ ನಿಕಟ ವೈಯಕ್ತಿಕ ಸ್ನೇಹದ ಆಧಾರದ ಮೇಲೆ ಸಾಮಾಜಿಕ ಸಂಬಂಧಗಳು, ಸಮುದಾಯ ಭಾವನೆಗಳು ಇರುವಂಥ ಸಮಾಜ; ಪರಸ್ಪರ ಸಹಕಾರದ ಉದ್ದೇಶಕ್ಕಾಗಿ ನೈಸರ್ಗಿಕ ಇಚ್ಛೆಯಿಂದಾದ ಗುಂಪು.

gender differentiation : ಲಿಂಗ ಭೇದ.

gender identity: ಲಿಂಗ ಅನನ್ಯತೆ.

gender ideology : ಲಿಂಗ ತತ್ವಾದರ್ಶ.

gender roles: ಲಿಂಗ ಪಾತ್ರಗಳು. ಗಂಡಸರಿಗೆ ಅಥವಾ ಹೆಂಗಸರಿಗೆ ಅವರವರ ನಡತೆಯ ಬಗ್ಗೆ ಆಯಾ ಸಮುದಾಯದಲ್ಲಿ ನಿರ್ದೇಶಿಸಲ್ಪಟ್ಟಿರುವ ಪಾತ್ರಗಳು.

geneological tale: ವಾಂಶಿಕ ಕತೆ; ವಂಶ ಬೆಳೆದು ಬಂದ ಕತೆ.

geneology: ವಂಶಾವಳಿ; ವಂಶವೃಕ್ಷ.

general agreement: ಸಾರ್ವತ್ರಿಕ ಒಪ್ಪಂದ. ಅಂತಾರಾಷ್ಟ್ರೀಯ ನೆಲೆಯಲ್ಲಿ ವಿಶ್ವಸಂಸ್ಥೆಯಿಂದ ರೂಪಿತವಾಗುವ ವ್ಯಾಪಾರ ಒಪ್ಪಂದ. ಉದಾ: ಸುಂಕ ಮತ್ತು ವ್ಯಾಪಾರದ ಮೇಲಿನ ಸಾರ್ವತ್ರಿಕ ಒಪ್ಪಂದ.

general assembly: ಸಾಮಾನ್ಯ ಸಭೆ.

general average loss : ಸಾಮಾನ್ಯ ಕ್ಷತಿ; ಸಾರ್ವತ್ರಿಕ ನಷ್ಟ. ಹಡಗಿನ ಸಮಸ್ತ ಸಂಪತ್ತನ್ನು ರಕ್ಷಿಸಲು ಸ್ವಲ್ಪಾಂಶ ಸರಕುಗಳನ್ನು ತ್ಯಾಗ ಮಾಡಬೇಕಾಗಿ ಬಂದರೆ ಅದನ್ನು ಸಾರ್ವತ್ರಿಕ ನಷ್ಟವೆಂದು ಪರಿಗಣಿಸಿ ಇತರ ಸರಕುಗಳ ಮಾಲೀಕರೆಲ್ಲ ಭರಿಸಬೇಕಾಗುತ್ತದೆ. ಈ ಮೊಬಲಗನ್ನು ತಮ್ಮ ವಿಮಾ ಕಂಪೆನಿಗಳಿಂದ ಕೇಳಿಕೆ ಸಲ್ಲಿಸಿ ಪಡೆಯಬಹುದಾಗಿದೆ.

general constituency: ಸಾಮಾನ್ಯ ಮತಕ್ಷೇತ್ರ.

general council: ಸಾಮಾನ್ಯ ಮಂಡಳಿ.

general election: ಸಾರ್ವತ್ರಿಕ ಚುನಾವಣೆ.

general equilibrium: ಸಾರ್ವತ್ರಿಕ ಸಮತೋಲನ; ಸಾಮಾನ್ಯ ಸಮತೋಲನ. ಯಾವುದೇ ಮಾರುಕಟ್ಟೆಯಲ್ಲಿ ಅಧಿಕ ಬೇಡಿಕೆ ಅಥವಾ ಅಧಿಕ ಪೂರೈಕೆ ಇರದಿರುವ, ಅಂತರ್ ಸಂಬಂಧೀ ಮಾರುಕಟ್ಟೆಗಳಲ್ಲಿನ ಸಮತೋಲನ ಸನ್ನಿವೇಶ.

general equilibrium analysis: ಸಾರ್ವತ್ರಿಕ ಸಮತೋಲನ ವಿಶ್ಲೇಷಣೆ.

ಒಟ್ಟು ಅರ್ಥವ್ಯವಸ್ಥೆಯಲ್ಲಿ ಚಲಕಗಳ ನಡುವಿನ ಅಂತರಕ್ರಿಯೆಯ ಕುರಿತಾಗಿ ಮಾಡುವ ವಿಶ್ಲೇಷಣೆ.

general fund: ಸಾಮಾನ್ಯನಿಧಿ.

general law: ಸಾಮಾನ್ಯ ಕಾಯ್ದೆ.

general lien: ಸಾಮಾನ್ಯ ಸ್ವಾಧೀನತಾ ಹಕ್ಕು.

general partners: ಸಾಮಾನ್ಯ ಪಾಲುದಾರರು. ಸಂಸ್ಥೆಯ ಆಡಳಿತ ವ್ಯವಸ್ಥೆಯಲ್ಲಿ ಸಮಾನ ಹಕ್ಕು ಅವಕಾಶಗಳಿರುವ ಪಾಲುದಾರರು.

general principles of law: ಶಾಸನದ ಸಾಮಾನ್ಯ ತತ್ವಗಳು.

general psychology: ಸಾಮಾನ್ಯ ಮನೋವಿಜ್ಞಾನ.

general rate: ಸಾರ್ವತ್ರಿಕ ದರ.

general sociology: ಸಾಮಾನ್ಯ ಸಮಾಜಶಾಸ್ತ್ರ.

general status: ಸಾಮಾನ್ಯ ಸ್ಥಾನಮಾನ.

general tariff: ಸಾರ್ವತ್ರಿಕ ಸುಂಕ. ಸ್ವದೇಶೀ ಕೈಗಾರಿಕೆಗಳಿಗೆ ರಕ್ಷಣೆ ನೀಡಲು ಆಮದುಗಳ ಮೇಲೆ ಹೇರಲಾಗುವ ಸುಂಕ.

general term: ಸಾಮಾನ್ಯ ನಿಯಮ.

general theroy: ಸಾಮಾನ್ಯ ಸಿದ್ಧಾಂತ.

general utility service: ಸಾಮಾನ್ಯ ಉಪಯುಕ್ತ ಸೇವೆ.

general welfare: ಸಾರ್ವತ್ರಿಕ ಕಲ್ಯಾಣ (ಯೋಗಕ್ಷೇಮ).

general well being: ಸಾರ್ವಜನಿಕ ಹಿತ; ಸರ್ವರ ಹಿತ.

general will: ಸಾರ್ವತ್ರಿಕ ಇಚ್ಛೆ; ಸಾರ್ವತ್ರಿಕ ಸಂಕಲ್ಪ; ಸಾಮಾನ್ಯ ಸಂಕಲ್ಪ.

generalization: ಸಾಮಾನ್ಯೀಕರಣ. ಹಲವಾರು ಅವಲೋಕನಗಳ ನಂತರ ಒಂದು ಸಾಮಾನ್ಯ ತೀರ್ಮಾನಕ್ಕೆ ಬರುವುದು.

generalized marital exchange: ಸಾರ್ವತ್ರಿಕ ವಿವಾಹ ವಿನಿಮಯ. ಮೂರು ಅಥವಾ ಹೆಚ್ಚಿನ ಗುಂಪುಗಳಲ್ಲಿ ವೃತ್ತೀಯ ಕ್ರಮದಲ್ಲಿ ಮದುವೆಯಾಗುವುದು. ಉದಾ: A, B, C, ಮತ್ತು D ಗುಂಪುಗಳಲ್ಲಿ A ಯ ಹುಡುಗ B ಗುಂಪಿನಿಂದ, B ಯ ಹುಡುಗ C ಗುಂಪಿನಿಂದ C ಯ ಹುಡುಗ D ಗುಂಪಿನಿಂದ ಹಾಗೂ D ಯ ಹುಡುಗ A ಗುಂಪಿನಿಂದ ವಿವಾಹವಾಗುವುದರ ಮೂಲಕ ನಡೆಯುವ ಚಕ್ರೀಯ ವಿವಾಹ ವಿನಿಮಯ.

generalized others: ಸಾಮಾನ್ಯೀಕೃತ ಇತರರು.

generalized response: ಸಾಮಾನ್ಯೀ ಕೃತ ಪ್ರತಿಕ್ರಿಯೆ (ಪ್ರತಿವರ್ತನೆ).

generation: ಪೀಳಿಗೆ; ತಲೆಮಾರು.

generation equivalence: ಸಮ ಪೀಳಿಗೆ. ಬೇರೆ ಬೇರೆ ವಂಶವಾಹಿಗೆ ಸಂಬಂಧಿಸಿದ್ದರೂ ಒಂದೇ ತಲೆಮಾರಿಗೆ ಸೇರಿದ ಸಂಬಂಧಿಗಳಿಗೆ ಏಕರಕ್ತ ಸಂಬಂಧಿಗಳೆಂದು ನೀಡುವ ಸ್ಥಾನಮಾನ.

generation gap: ತಲೆಮಾರುಗಳ ಅಂತರ.

generation life table: ಪೀಳಿಗೆಯ ಆಯುಷ್ಯ ಕೋಷ್ಟಕ.

generational mobility: ಪೀಳಿಗೆಯ ಸಂಚಲನೆ (ಸಂಚರಣೆ). ಒಂದು ತಲೆಮಾರಿನವರು ತನ್ನ ಹಿಂದಿನ ತಲೆಮಾರಿನವರಿಗಿಂತ

ಭಿನ್ನವಾದ ಹಾಗೂ ಬದಲಾದ ಸ್ಥಾನಮಾನ ಗಳನ್ನು ಹೊಂದುವ ಸಾಮಾಜಿಕ ಚಲನೆ.

generative function: ಉತ್ಪಾದಕ ಕಾರ್ಯ.

generic image: ಮೂಲ ಬಿಂಬ.

genesis: ಉತ್ಪತ್ತಿ; ಉದ್ಭವ.

genetic: ವಂಶವಾಹಿ ಅನುವಂಶೀಯತೆಗೆ ಸಂಬಂಧಿ ಸಿದ ವಿಷಯ.

genetic aggregate: ಹುಟ್ಟಿನಿಂದಲೇ ಒಟ್ಟಿಗೆ ವಾಸಿಸುವ ವ್ಯಕ್ತಿಗಳು. ಒಳ ಸಮೂಹದ ಮದುವೆಯಿಂದಾಗಿ ಒಂದೇ ರಕ್ತ ಹಂಚಿಕೊಂಡ ಸದಸ್ಯರ ಸಮೂಹ.

genetic dominance: ವಂಶವಾಹಿಯ ಪ್ರಾಬಲ್ಯ.

genetic drift: ತಳಿ ದಿಕ್ಚ್ಯುತಿ. ಜೀವಿಗಳ ಪ್ರಸರಣದಲ್ಲಿ, ವಿಶೇಷತಃ ಸಾಂಖ್ಯಿಕವಾಗಿ ಕಡಿಮೆ ಇರುವ ಗುಂಪು ಅಥವಾ ಜನಾಂಗ ಗಳಲ್ಲಾಗುವ ಏರಿಳಿತದ ಸ್ವರೂಪ.

genetic factor: ಜೀವೋತ್ಪತ್ತ್ಯಾತ್ಮಕ ಅಂಶ; ತಳಿ ಆಧಾರಿತ ಅಂಶ.

genetic group: ತಳಿ ಆಧಾರಿತ ಗುಂಪು; ಅನುವಂಶಿಕ ಸಮೂಹ. ಸಾಮಾನ್ಯ ಸಂತತಿಯ ಮೂಲಕ ಆದ ವ್ಯಕ್ತಿಗಳ ಗುಂಪು. ಇಂತಹ ಗುಂಪಿನಲ್ಲಿ ವಿವಾಹ, ದತ್ತು ಮುಂತಾದ ಕ್ರಮಗಳಿಂದ ಬಂದು ಸೇರಿದವರು ಸದಸ್ಯರಾಗುವುದಿಲ್ಲ.

genetic isolation: ಜೀವೋತ್ಪತ್ತ್ಯಾತ್ಮಕ ಪೃಥಃಕರಣ; ವಂಶವಾಹಿಯ ಪ್ರತ್ಯೇಕತೆ.

genetic method: ಜೀವೋತ್ಪತ್ತ್ಯಾತ್ಮಕ ವಿಧಾನ.

genetic psychology: ಅನುವಂಶೀಯತೆಯ ಮನಶ್ಶಾಸ್ತ್ರ; ತಳಿ ಮನಶ್ಶಾಸ್ತ್ರ; ಉತ್ಪತ್ತಿ ಮನೋವಿಜ್ಞಾನ.

genetics: ಸಂತತಿಶಾಸ್ತ್ರ; ತಳಿಶಾಸ್ತ್ರ. ಅನುವಂಶೀಯತೆಯನ್ನು ಅಭ್ಯಸಿಸುವ ಜೀವ ಶಾಸ್ತ್ರದ ವಿಭಾಗ.

genetic theory of race: ಜನಾಂಗದ ತಳಿ ಸಿದ್ಧಾಂತ. ವಂಶವಾಹಿ ರಚನೆಯ ಆಧಾರದ ಮೇಲೆ ಜನಾಂಗಗಳ ವರ್ಗೀಕರಣ.

genius: ಮಹಾಪ್ರಭಾವಶಾಲಿ; ಪ್ರತ್ಯುತ್ಪನ್ನ ಮತಿ.

genocide: ಜನಾಂಗ ಹತ್ಯೆ. ಜನಾಂಗೀಯ, ರಾಷ್ಟ್ರೀಯ ಅಥವಾ ಇತರ ಕಾರಣ ಗಳಿಗಾಗಿ ಜನಸಮುದಾಯದ ಒಂದು ಭಾಗವನ್ನು ನಿರ್ನಾಮ ಮಾಡುವುದು. ಎರಡನೇ ಮಹಾಯುದ್ಧದ ಕಾಲದಲ್ಲಿ (೧೯೩೯-೧೯೪೫) ಹಿಟ್ಲರ್‌ನ ಸೈನಿಕರು ಆಕ್ರಮಿತ ಪ್ರದೇಶಗಳಲ್ಲಿ ಸಾಮೂಹಿಕ ಪ್ರಮಾಣದಲ್ಲಿ ಜನಾಂಗ ಹತ್ಯೆಯ ಅಪರಾಧ ಗಳನ್ನು ಮಾಡಿದರು.

genogenic factor: ವಂಶವಾಹಿ ಜನ್ಯಕಾರಕಾಂಶ.

genotype: ತಳಿಗುಂಪು ವಿಧಾನ; ಅನುವಂಶೀಯ ಪ್ರಕಾರ. ವ್ಯಕ್ತಿಯ ವಂಶ ವಾಹಿಯ ರಚನೆ.

genre: ರೂಪ; ಬಗೆ.

gens: ಕುಲಮೂಲ. ರೋಮನ್ ಬುಡ ಕಟ್ಟುಗಳಲ್ಲಿ ಪಿತೃವಂಶೀಯ ಮೂಲ ವನ್ನು ಗುರುತಿಸುವ ಹೊರಬಾಂಧವ್ಯ ವಿವಾಹ ಪದ್ಧತಿಯನ್ನು ಅನುಸರಿಸುವ ರಕ್ತ ಸಂಬಂಧೀ ಗುಂಪುಗಳು. ಇವರಿಗೆ ಕುಲ ನಾಮ, ಭೂಮಿ, ಪೂಜಾಕ್ರಮ ಮತ್ತು ಸ್ಮಶಾನ ಒಂದೇ ಆಗಿತ್ತು.

gentlemen's agreement: ಕುಲೀನರ ಒಪ್ಪಂದ. ಬೆಲೆಯ ಸಮರಗಳು ಮತ್ತು ಇನ್ನಿತರ ರೀತಿಯ ಘರ್ಷಣೆಗಳನ್ನು ತಪ್ಪಿಸಲು ಕಾರ್ಖಾನೆಗಳು ಬೆಲೆ ನಿರ್ಧರಿಸಲು ಮಾಡಿ ಕೊಳ್ಳುವ ಮೌಖಿಕ ಒಪ್ಪಂದವನ್ನು ಕುಲೀನರ ಒಪ್ಪಂದ ಎಂದು ಕರೆಯಲಾಗುತ್ತದೆ.

geo-centric theory: ಭೂಕೇಂದ್ರ ಸಿದ್ಧಾಂತ.

geo-chronolog: ಭೂಕಾಲಾನುಕ್ರಮಣ ಶಾಸ್ತ್ರ; ಭೂಗರ್ಭ ಕಾಲಗಣನೆ.

geo cultural study: ಭೂ ಸಾಂಸ್ಕೃತಿಕ ಅಧ್ಯಯನ.

geographic determinism: ಭೌಗೋಳಿಕ ನಿಯತಿವಾದ. ಭೌಗೋಳಿಕ ಅಂಶಗಳು ಸಂಸ್ಕೃತಿಯನ್ನು ನಿರ್ಧರಿಸುತ್ತವೆ ಹಾಗೂ ಮಾನವ ಸಮಾಜದಲ್ಲಿನ ಬದಲಾವಣೆಗೆ ಭೌಗೋಳಿಕ ಪರಿಸರದ ಬದಲಾವಣೆಯೇ ಕಾರಣವೆಂಬ ವಾದ.

geographic distribution: ಭೌಗೋಳಿಕ ಹಂಚಿಕೆ.

geographic mobility: ಭೌಗೋಳಿಕ ಸಂಚಲನೆ (ಸಂಚರಣೆ).

geographical environment: ಭೌಗೋಳಿಕ ಪರಿಸರ.

geographical location: ಭೌಗೋಳಿಕ ನೆಲೆ. ನೆರೆ ರಾಜ್ಯ ಅಥವಾ ರಾಷ್ಟ್ರವು ವಿಶ್ವದ ಯಾವ ಭೂಭಾಗದಲ್ಲಿ ನೆಲೆಸಿದೆ ಎಂದು ನಿರ್ಧರಿಸುವುದು.

geographical price differential: ಭೌಗೋಳಿಕ ಬೆಲೆ ವ್ಯತ್ಯಾಸ. ಉತ್ಪಾದನೆಯ ಸ್ಥಳದಿಂದ ಭೌಗೋಳಿಕ ದೂರ ಹಾಗೂ ಸಾಗಾಟ ವೆಚ್ಚಗಳ ಪರಿಣಾಮದಿಂದ ಬೆಲೆಗಳಲ್ಲಾಗುವ ವ್ಯತ್ಯಾಸ.

geographical representation: ಪ್ರಾದೇಶಿಕ ಪ್ರಾತಿನಿಧ್ಯ.

geographical school of sociology: ಭೌಗೋಳಿಕ ಸಮಾಜಶಾಸ್ತ್ರದ ವಿಚಾರ ಪಂಥ.

geography: ಭೂಗೋಳ ಶಾಸ್ತ್ರ.

geography of population: ಜನ ಸಂಖ್ಯಾ ಭೂಗೋಳಶಾಸ್ತ್ರ. ಜನ ಸಂಖ್ಯೆಯ ಅಂಶಗಳನ್ನು ಅವುಗಳ ಪ್ರಸ್ತುತ ಪರಿಸರ, ಸಂದರ್ಭದಲ್ಲಿನ ವರ್ಣನೆ ಮಾಡುವುದಲ್ಲದೇ ಅವುಗಳ ಕಾರಣ ವೈಶಿಷ್ಟ್ಯ ಮತ್ತು ಪರಿಣಾಮಗಳ ಅಧ್ಯಯನ.

geology: ಭೂಗರ್ಭಶಾಸ್ತ್ರ; ಭೂವಿಜ್ಞಾನ.

geometric mean: ಜ್ಯಾಮಿತಿ ಸರಾಸರಿ.

geometrical proportion: ಜ್ಯಾಮಿತಿ ಪ್ರಮಾಣ.

geo- politics: ಭೂ ರಾಜಕೀಯ. ಅಂತಾರಾಷ್ಟ್ರೀಯ ರಾಜಕೀಯದ ವಿಶ್ಲೇಷಣೆಗೆ ಮಾನವ ಭೂಗೋಳಶಾಸ್ತ್ರದ ಅನ್ವಯಿಕತೆ.

geo-type: ಜೈವಿಕ ವಿಧ. ಭೌಗೋಳಿಕ ಸ್ಥಳೀಕರಣವು ಪ್ರಮುಖ ಲಕ್ಷಣವಾಗಿರುವ ಜೀವಿಗಳ ವಿಧ.

geriatrics: ಜರಾರೋಗ ಚಿಕಿತ್ಸಾಶಾಸ್ತ್ರ.

geronticide: ವೃದ್ಧರ ಹತ್ಯೆ; ಬರಗಾಲದ ಸಮಯದಲ್ಲಿ ಕೆಲವೊಂದು ಆದಿವಾಸಿ ಗುಂಪುಗಳು ತಮ್ಮ ಹಿರಿಯ ತಲೆಮಾರಿನವರನ್ನು ಸಾಯಲು ಬಿಡುವುದು.

gerontocracy: ವೃದ್ಧರ ಪ್ರಭುತ್ವ.

gerontology: ವಾರ್ಧಕ್ಯ ಶಾಸ್ತ್ರ.

gerontomorphic: ವೃದ್ಧಾಪ್ಯ ಶಾರೀರಿಕ ಲಕ್ಷಣ.

gesellschaft: ಮಾಧ್ಯಮಿಕ ಸಂಬಂಧ ಸಮೂಹ. ಮಾಧ್ಯಮಿಕ ಸಂಬಂಧಗಳೇ ಪ್ರಾಮುಖ್ಯ ಆಗಿದ್ದು ಸಾಮಾಜಿಕ ಸಂಬಂಧಗಳು ಔಪಚಾರಿಕ ಹಾಗೂ ಅವೈಯಕ್ತಿಕವಾಗಿರುವ ಸಮಾಜ.

gestalt: ಸಮಗ್ರಾಕೃತಿ. ಭಾಗಗಳ ಮೂಲಕ ಲಕ್ಷಣಗಳನ್ನು ಗುರುತಿಸಲಾಗದಷ್ಟು ಭೌತಿಕ, ಮಾನಸಿಕ ಎರಕಗೊಂಡ ಸಮಗ್ರತೆ.

gestalt psychology: ಸಮಗ್ರಾಕೃತಿ ಮನೋವಿಜ್ಞಾನ. ಮಾನಸಿಕ ಪ್ರತಿಕ್ರಿಯೆಗಳು ಅವಿಚ್ಛಿನ್ನವಾದ ಬದುಕಿನ ಸಮಗ್ರ ವಿನ್ಯಾಸದಿಂದ ರೂಪುಗೊಳ್ಳುತ್ತವೆಂಬ ವಾದ.

gestation period: ಗರ್ಭಾವಧಿ ಕಾಲ; ಉತ್ಪಾದನಾ ಅವಧಿ. ಯಾವುದೇ ಒಂದು ಉದ್ಯಮವು ಸ್ಥಾಪನೆಯಾಗಿ ಅದು ತನ್ನ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆಗೊಳಿಸುವವರೆಗಿನ ಅವಧಿ.

gestural theory: ಸಂಜ್ಞಾ ಸಿದ್ಧಾಂತ. ಭಾಷೆಯು ಸನ್ನೆ ಅಥವಾ ಸಂಜ್ಞೆಗಳಿಂದ ಬೆಳವಣಿಗೆ ಹೊಂದಿತು ಎಂಬ ಸಿದ್ಧಾಂತ.

gesture: ಕೈಸನ್ನೆ; ಕಣ್ಣುಸನ್ನೆ; ಹಾವಭಾವ. ಶರೀರದ ಅವಯವಗಳ ಚಲನೆಯ ಮೂಲಕ ನಡೆಸುವ ಸಂವಾದ. ತನ್ನ ಭಾಷಾ ಹಿನ್ನೆಲೆಯಿಂದ ಬಂದ ವ್ಯಕ್ತಿಗಳು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಈ ಕ್ರಮ ಅನುಸರಿಸುತ್ತಾರೆ.

ghetto: ಘೆಟ್ಟೋ; ಕೊಳೆಗೇರಿ; ಗುಂಪುವಾಸ್ತವ್ಯ. ಯಾವುದೇ ನಗರವೊಂದರ ನಿಶ್ಚಿತ ಭಾಗವೊಂದರ ಜನಸಂಖ್ಯೆಯಲ್ಲಿ ನಿರ್ದಿಷ್ಟ ಕುಲದ ಜನರು ಕೇಂದ್ರಿತವಾಗಿರುವ ಪ್ರದೇಶ. ಐತಿಹಾಸಿಕವಾಗಿ ಇದು ಯಹೂದಿ ಸಮುದಾಯಗಳಿಗೆ ಮಾತ್ರ ಅನ್ವಯವಾಗುತ್ತಿತ್ತು. ಆದರೆ ಈಗ ಇದು ನಿಗ್ರೋ ಮತ್ತಿತರ ಜನಸಮುದಾಯಗಳಿಗೆ ಅನ್ವಯವಾಗುತ್ತದೆ.

ghost: ಭೂತ; ಪ್ರೇತ. ಜಾನಪದದಲ್ಲಿ ಮನುಷ್ಯರ ಇಂದ್ರಿಯಗಳ ಅರಿವಿಗೆ ಬರುತ್ತದೆ ಎಂದು ನಂಬಲಾಗುವ ಮೃತ ವ್ಯಕ್ತಿಗಳ ಆತ್ಮ.

ghost dance: ಭೂತ ಕುಣಿತ; ದೆವ್ವದ ಕುಣಿತ. ಮೃತರನ್ನು ಒಲಿಸಿಕೊಳ್ಳಲು ಅಥವಾ ಭೂತೋಚ್ಚಾಟನೆ ಮಾಡಲು ಮಾಡುವ ನೃತ್ಯ.

ghost marriage: ಪ್ರೇತ ವಿವಾಹ. ಕೆಲವೊಂದು ಆದಿವಾಸಿ ಗುಂಪುಗಳಲ್ಲಿ ಮಡಿದವನಿಗೆ ಪುತ್ರಸಂತಾನವಿಲ್ಲದಿದ್ದರೆ, ಆತನ ಪ್ರೇತದ ಹೆಸರಿನಲ್ಲಿ ಇನ್ನೊಬ್ಬರೊಂದಿಗೆ ಕೂಡಿ ಮಗು ಪಡೆಯುವ ವಿಧಾನ.

ghost soul: ಭೂತಾತ್ಮ.

giantism: ರಾಕ್ಷಸತನ; ಬೃಹದಾಕಾರತೆ. ಅಸಾಧಾರಣ ಸಾಮರ್ಥ್ಯ ಮತ್ತು ಗಾತ್ರ ಹೊಂದಿರುವ ಸ್ಥಿತಿ. ಈ ಪದವು ಮನುಷ್ಯರಿಂದ ಬಲಿಷ್ಠರಾದ, ಆದರೆ ದೇವರಷ್ಟು ಬಲಿಷ್ಠರಲ್ಲದ ಪೌರಾಣಿಕ ಪಾತ್ರಗಳನ್ನು ಗುರುತಿಸಲು ಬಳಕೆಗೆ ಬಂತು.

giffen good: ಗಿಫಿನ್ ಸರಕು. ಹೆಚ್ಚಿನ ಬೆಲೆಯಲ್ಲಿ ಬೇಡಿಕೆಯು ಹೆಚ್ಚಾಗಬಹುದಾದ ಮತ್ತು ಕಡಿಮೆ ಬೆಲೆಯಲ್ಲಿ ಬೇಡಿಕೆಯು ಕಡಿಮೆಯಾಗಬಹುದಾದ ಸ್ವಭಾವವನ್ನು ಹೊಂದಿರುವ ಸರಕುಗಳು. ಸರಕುಗಳ ಬೇಡಿಕೆಯ ಈ ವಿಶಿಷ್ಟತೆಯು ಗಿಫಿನ್ ಎಂಬ ಅರ್ಥಶಾಸ್ತ್ರಜ್ಞರಿಂದ ಗುರು

ತಿಸಲ್ಪಟ್ಟಿತು. ಬೇಡಿಕೆ ಸಿದ್ಧಾಂತಕ್ಕೆ ಅಪವಾದ ವಾಗಿ ಇದನ್ನು ವಿವರಿಸಲಾಗಿದೆ.

giffen paradox: ಗಿಫನ್ನರ ವಿರೋಧಾಭಾಸ. ಬೆಲೆ ಹೆಚ್ಚಾದಾಗ ಬೇಡಿಕೆ ಹೆಚ್ಚಾಗುವ ಮತ್ತು ಬೆಲೆ ಕಡಿಮೆಯಾದಾಗ ಬೇಡಿಕೆ ಕಡಿಮೆಯಾಗುವ ಸನ್ನಿವೇಶಗಳನ್ನು ಗಿಫನ್ನರ ವಿರೋಧಾಭಾಸವೆಂದು ಕರೆಯಲಾಗುತ್ತದೆ.

gift cheque: ಕಾಣಿಕೆ ಚೆಕ್ಕು; ಕಾಣಿಕೆ ಧನಾದೇಶ.

gift exchange: ಉಡುಗೊರೆ ವಿನಿಮಯ. ಪರಸ್ಪರವಾಗಿ ಉಡುಗೊರೆಗಳನ್ನು ಕೊಟ್ಟುಕೊಳ್ಳುವುದು.

gift relationship: ಕಾಣಿಕೆ ಸಂಬಂಧ.

gift tax: ಉಡುಗೊರೆ ತೆರಿಗೆ.

gifted child: ಪ್ರತಿಭಾಶಾಲಿ ಮಗು.

gilded age: ಗಿಲೀಟಿನ ಅಥವಾ ಬೆಡಗಿನ ಯುಗ. ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಅಮೇರಿಕ ಒಕ್ಕೂಟ ಸರ್ಕಾರವು ಸುಭದ್ರವಾಗಿದ್ದ ಕಾರಣ ಅದನ್ನು ಬೆಡಗಿನ ಯುಗ ಎಂದು ಕರೆಯಲಾಗಿದೆ.

gilded gesso and graffitos: ಗಿಲೀಟಿನ ಸುಣ್ಣದ ಗಾರೆ ಮತ್ತು ಇತರ ರೇಖಾ ಚಿತ್ರಗಳು.

gilt edged securities: ಸರಕಾರೀ ಭದ್ರತಾ ಪತ್ರಗಳು. ಸಾಮಾನ್ಯವಾಗಿ ಸುರಕ್ಷಿತವೆಂದು ಪರಿಗಣಿಸಲಾದ ಸರಕಾರಿ ಭದ್ರತಾ ಪತ್ರಗಳು.

gini co-efficient: ಗಿನಿಯುವರ ಗುಣಾಂಕ. ಸಂಖ್ಯಾಶಾಸ್ತ್ರದಲ್ಲಿ ವಿಚಲನ ಮಾಪಕಗಳಲ್ಲಿ ಒಂದು ವೈಯಕ್ತಿಕ ಆದಾಯದಂತಹ ಆವರ್ತೀ ಹಂಚಿಕೆಯಲ್ಲಿರುವ ಅಸಮಾನತೆಯ ಮಟ್ಟವನ್ನು ತೋರಿಸುವ ಲೋರೆನ್ಸ್ ರೇಖೆಯನ್ನು ಧರಿಸಿದ ಗುಣಾಂಕ.

girdle: ನಡುಪಟ್ಟಿ; ಸೊಂಟಪಟ್ಟಿ.

girosystem: ಗಿರೋ ವ್ಯವಸ್ಥೆ. ಲಿಖಿತ ಮಾಹಿತಿಗಳನ್ನು ಪಡೆಯುವುದರ ಮೂಲಕ ಬ್ಯಾಂಕು ಅಥವಾ ಅಂಚೆ ಕಛೇರಿಗಳು ಹಣವನ್ನು ಒಂದು ಖಾತೆಯಿಂದ ಇನ್ನೊಂದು ಖಾತೆಗೆ ವರ್ಗಾಯಿಸುವ ವ್ಯವಸ್ಥೆ.

glacial: ಹಿಮಯುಗಕ್ಕೆ ಸಂಬಂಧಿಸಿದ.

glatochronology: ಭಾಷಾಕಾಲಕ್ರಮ ವಿಜ್ಞಾನ.

glittering generality: ಆಕರ್ಷಕ ಸಾರ್ವತ್ರಿಕತೆ. ವಿಚಾರಗಳ ನೈಜತೆಯು ಅಸ್ಪಷ್ಟ ವಿದ್ದಾಗ ಅವುಗಳು ಅದ್ಭುತವೆಂದು ಹೇಳುವ ಪ್ರಚಾರ ತಂತ್ರ.

global quota: ಜಾಗತಿಕ ಕೋಟಾ. ಒಂದು ನಿರ್ದಿಷ್ಟ ಅವಧಿಯಲ್ಲಿ ರಾಷ್ಟ್ರವೊಂದು ಬೇರೆ ಬೇರೆ ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುವ ಸರಕುಗಳ ಪ್ರಮಾಣ ನಿರ್ಣಯ.

globalization: ಜಾಗತೀಕರಣ.

glorious revolution: ಮಹಾಕ್ರಾಂತಿ. ೧೬೮೮-೮೯ರಲ್ಲಿ ಬ್ರಿಟನ್‌ನಲ್ಲಿ ನಡೆದ ರಕ್ತರಹಿತ ಕ್ರಾಂತಿ. ಈ ಕ್ರಾಂತಿಯಿಂದ ಎರಡನೇ ಜೇಮ್ಸ್‌ನನ್ನು ಕೆಳಗಿಳಿಸಲಾಯಿತು.

glossolalia: ಒಗಟು ಭಾಷೆ. ಪವಿತ್ರ ಅಥವಾ ಪಿಶಾಚಿ ದೇವತೆಯು ವ್ಯಕ್ತಿಯೊಬ್ಬನ ಮೂಲಕ ನಮಗೆ ತಿಳಿಯದ ಭಾಷೆಯಲ್ಲಿ ಮಾತಾಡುವುದು.

gnosticism: ಪ್ರಜ್ಞಾನವಾದ; ಆಧ್ಯಾತ್ಮ ರಹಸ್ಯವಿದ್ಯೆ.

goal: ಗುರಿ; ಲಕ್ಷ್ಯ; ಧ್ಯೇಯ.

goal activity: ಧ್ಯೇಯ ಸಾಧನಾ ಕಾರ್ಯ.

goal directed society: ಗುರಿ ನಿರ್ದೇಶಿತ ಸಮಾಜ. ಧ್ಯೇಯ ನಿರ್ಧಾರಿತ ಸಮಾಜ.

goal displacement: ಧ್ಯೇಯ ಪಲ್ಲಟ.

goal gradient: ಧ್ಯೇಯ ಪ್ರವಣತೆ. ಧ್ಯೇಯ ಅಥವಾ ಗುರಿಗಳಲ್ಲಿ ಪ್ರಸ್ತುತ ನೆಲೆಯಿಂದ ಉಂಟಾಗುವ ಏರು ಅಥವಾ ಇಳುಕಲಿನ ಪ್ರಮಾಣ.

goal setting: ಗುರಿ ನಿರ್ಧರಿಸುವಿಕೆ.

gola: ಮಂಡಿ; ಮಳಿಗೆ; ಉಗ್ರಾಣ.

gold bullion standard: ಚಿನ್ನದ ಗಟ್ಟಿ ಪ್ರಮಿತಿ. ಕೇಂದ್ರೀಯ ಬ್ಯಾಂಕು ನೋಟು ಗಳನ್ನು ಚಿನ್ನದ ಗಟ್ಟಿಯ ರೂಪಕ್ಕೆ ಮಾತ್ರ ಪರಿವರ್ತಿಸಲು ಬದ್ಧವಾಗಿರುವ ಸ್ಥಿತಿ.

gold exchange standard: ಚಿನ್ನದ ವಿನಿಮಯ ಪ್ರಮಿತಿ. ಒಂದು ಕೇಂದ್ರೀಯ ಬ್ಯಾಂಕು ನೀಡುವ ನೋಟುಗಳಿಗೆ ಪ್ರತಿ ಯಾಗಿ ಇಡಬೇಕಾದ ಮೀಸಲನ್ನು ಸಂಪೂರ್ಣವಾಗಿ ಚಿನ್ನದ ರೂಪದಲ್ಲಿ ಇಡಬೇಕಾದ್ದಲ್ಲದೇ ಸುವರ್ಣ ಪ್ರಮಿತಿಯಿರುವ ಇನ್ನೊಂದು ದೇಶದ ವಿದೇಶೀ ವಿನಿಮಯವನ್ನು ಭಾಗಶಃ ಮೀಸಲಾಗಿ ಇಡಬಹುದಾಗಿರುವ ಸ್ಥಿತಿ.

gold export point: ಚಿನ್ನದ ರಫ್ತು ಬಿಂದು.

gold import point: ಚಿನ್ನದ ಆಮದು ಬಿಂದು.

gold point: ಚಿನ್ನದ ಬಿಂದು.

gold standard: ಚಿನ್ನದ ಪ್ರಮಿತಿ. ಕೇಂದ್ರಿಯ ಬ್ಯಾಂಕು ಚಿನ್ನವನ್ನು ನಿಗದಿ ಯಾದ ಬೆಲೆಯಲ್ಲಿ ಯಾವುದೇ ಕರೆನ್ಸಿ ಯೊಂದಿಗೆ ವಿನಿಮಯ ಮಾಡಲು ಬದ್ಧ ವಾಗಿರುವುದು.

goldar: ಉಗ್ರಾಣ ಹೊಂದಿರುವ ರಖಂ ವ್ಯಾಪಾರಿ.

golden mean: ಸ್ವರ್ಣ ಮಧ್ಯಮ ಮಾರ್ಗ. ಧೈರ್ಯ, ನ್ಯಾಯ, ಸೌಮ್ಯತೆ, ಸಭ್ಯತೆ, ವೈಚಾರಿಕ ಮನೋಭಾವ ಮುಂತಾ ದವುಗಳ ಮೂಲಕ ಸುಖವನ್ನು ಪಡೆ ಯುವುದೇ ಉತ್ತಮವಾದ ಮಾರ್ಗ ಎಂಬ ಅರಿಸ್ಟಾಟಲ್‌ನ ಅಭಿಪ್ರಾಯ.

golden temple: ಸುವರ್ಣ ಮಂದಿರ; ಸಿಖ್ಖರ ಪವಿತ್ರ ಮಂದಿರ. ಇದು ಪಂಜಾಬಿನ ಅಮೃತಸರದಲ್ಲಿ ಐದನೇ ಸಿಖ್ಖರ ಗುರು ಅರ್ಜುನಸಿಂಗ್‌ನಿಂದ ನಿರ್ಮಿಸಲ್ಪಟ್ಟಿತು.

good blood: ಉತ್ತಮ (ಶುದ್ಧ) ರಕ್ತ. ಉತ್ತಮ ಕೌಟುಂಬಿಕ ಹಿನ್ನಲೆಯುಳ್ಳ ವ್ಯಕ್ತಿಗಳು ಪಡೆಯುತ್ತಾರೆ ಎನ್ನಲಾಗುವ ಕಾಲ್ಪನಿಕ ರಕ್ತ. ಈ ನಂಬಿಕೆಯಂತೆ ವ್ಯಕ್ತಿಯ ವಿಧಿಯು (ಅದೃಷ್ಟವು) ಆತನ ರಕ್ತದಿಂದ ನಿರ್ಧಾರಿತವಾಗುತ್ತದೆ.

good leadership: ಯೋಗ್ಯ ನಾಯಕತ್ವ; ಉತ್ತಮ ನಾಯಕತ್ವ.

good polity: ಉತ್ತಮ ರಾಜ್ಯಾಂಗ.

good will: ವಿಶ್ವಾಸಾರ್ಹತೆ. ಒಂದು ವ್ಯಾಪಾರದಲ್ಲಿ ನಿವ್ವಳ ಆಸ್ತಿಮೌಲ್ಯದ ಆಧಾರದ ಮೇಲೆ ಅಂದಾಜಿಸಲಾದ ಅದರ ವಿಶ್ವಾಸಾರ್ಹತೆಯ ಮೌಲ್ಯ.

goods: ಸರಕುಗಳು.

goods intervention: ಸರಕು ಹಸ್ತಕ್ಷೇಪ.

gospel: ಸುವಾರ್ತೆ. ಕ್ರಿಸ್ತನು ಉಪದೇಶಿಸಿದ ಸುವಾರ್ತೆ; ಒಸಗೆ ನುಡಿ; ಕ್ರೈಸ್ತವೇದ. ಕ್ರಿಸ್ತನ ಮತ್ತು ಆತನ ಧರ್ಮ ಪ್ರವರ್ತಕರ ಮತ ತತ್ವ.

gotra: ಗೋತ್ರ. ಕುಲವನ್ನು ನಿರ್ಧರಿಸುವ ಋಷಿಮೂಲ.

governing body: ಕಾರ್ಯನಿರ್ವಾಹಕ ಮಂಡಳಿ.

government: ಸರಕಾರ. ರಾಜ್ಯದ ಆಡಳಿತ ಗುರಿಗಳನ್ನು ಈಡೇರಿಸಲು ರೂಪಿಸಲಾದ ಆಡಳಿತ ಸಂಸ್ಥೆ. ಸರಕಾರವು ರಾಜ್ಯದ ನಿಯೋಗಿಯಾಗಿ ಕೆಲಸ ಮಾಡುತ್ತದೆ.

government bill: ಸರಕಾರಿ ಮಸೂದೆ.

government bond: ಸರಕಾರೀ ಬಾಂಡು; ಸರಕಾರಿ ವಿಕ್ರಯಪತ್ರ.

government budget: ಸರಕಾರೀ ಮುಂಗಡಪತ್ರ.

government corporation: ಸರಕಾರಿ ನಿಗಮ.

government department: ಸರಕಾರಿ ಇಲಾಖೆ.

government monopoly: ಸರಕಾರದ ಏಕಸ್ವಾಮ್ಯ.

government of units: ಘಟಕಗಳ ಸರಕಾರ. ಸಂಯುಕ್ತ ರಾಜ್ಯ ಪದ್ಧತಿ ಯಲ್ಲಿಯ ಒಕ್ಕೂಟದ ಘಟಕ ರಾಜ್ಯಗಳು ಅಥವಾ ಸರಕಾರಗಳು.

government price regulation: ಸರಕಾರಿ ಬೆಲೆ ನಿಯಂತ್ರಣ.

government securities: ಸರಕಾರಿ ಭದ್ರತಾ ಪತ್ರಗಳು.

government service: ಆಡಳಿತ ಸೇವೆ; ಸರಕಾರಿ ಸೇವೆ.

governor: ರಾಜ್ಯಪಾಲ. ಪ್ರತಿಯೊಂದು ರಾಜ್ಯದ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ.

grace period: ರಿಯಾಯಿತಿ ಕಾಲಾವಧಿ; ಕೃಪಾ ಅವಧಿ.

gradation: ಶ್ರೇಣೀಕರಣ.

graded society: ಶ್ರೇಣೀಕೃತ ಸಮಾಜ.

grading of race: ಜನಾಂಗ ಶ್ರೇಣೀಕರಣ.

gradual evolutionary method: ಕ್ರಮೇಣ ವಿಕಾಸ ವಿಧಾನ.

gradual income parity: ಆದಾಯ ಗಳ ನಡುವೆ ಕ್ರಮಬದ್ಧ ಸಮತೆ.

gradualism: ಕ್ರಮೇಣವಿಕಾಸ ಸಿದ್ಧಾಂತ. ಗುರಿ ಈಡೇರಿಕೆಗಾಗಿ ಹಂತಹಂತವಾಗಿ ಮುಂದುವರಿಯುವುದು.

graffite: ಚಿಹ್ನೆ ಸಂಕೇತ. ಮಡಕೆ ಅಥವಾ ಫಲಕಗಳ ಮೇಲೆ ಗೀರಿದ ಚಿತ್ರ. ಇಂತಹ ಗೀರಿದ ಚಿಹ್ನೆಗಳು ವಿಶೇಷವಾಗಿ ಹರಪ್ಪ ಸಂಸ್ಕೃತಿಯ ಒಂದು ಪ್ರಕಾರದ ಗಡಿಗೆ, ಮಡಿಕೆಗಳ ಮೇಲೂ ಹಾಗೂ ದಕ್ಷಿಣ ಭಾರತದ ಬೃಹತ್ ಶಿಲಾಸಂಸ್ಕೃತಿಯ ಮಡಿಕೆಗಳ ಮೇಲೂ ಇದೆ.

gramdam movement: ಗ್ರಾಮದಾನ ಚಳುವಳಿ.

grand alliance: ಮಹಾಮೈತ್ರಿಕೂಟ. ಪ್ರಧಾನ ಶಕ್ತಿಗಳು ಒಂದುಗೂಡಿ ಮಾಡಿ ಕೊಂಡ ಮೈತ್ರಿ.

grand electors: ಮಹಾ ಮತದಾರರು. ಫ್ರೆಂಚ್ ಸಂಸತ್ತಿನ ಮೇಲ್ಮನೆ (ಸೆನೆಟ್) ಅಪ್ರತ್ಯಕ್ಷ ಚುನಾವಣಾ ಪದ್ಧತಿಯಿಂದ ಆರಿಸಲ್ಪಡುತ್ತದೆ. ಈ ಸೆನೆಟ್‌ನ ಸದಸ್ಯರನ್ನು ಆಯ್ಕೆ ಮಾಡುವ ಮತದಾರರನ್ನು (ಮತ

ದಾರರ ಸಮೂಹವನ್ನು) ಮಹಾಮತದಾರರು ಎನ್ನುತ್ತಾರೆ.

grand monarchy: ವೈಭವಪೂರ್ಣ ರಾಜಪ್ರಭುತ್ವ.

grand theory: ಬೃಹತ್ ಸಿದ್ಧಾಂತ.

grandiose ideas: ಭವ್ಯತಾ ಭಾವಗಳು.

grandiosity: ಅಹಂ ವಿಭವತೆ.

grants in aid: ಸಹಾಯಧನ; ಅನುದಾನ. ಕೇಂದ್ರ ಸರಕಾರವು ರಾಜ್ಯಗಳಿಗೆ ಅಥವಾ ರಾಜ್ಯಸರಕಾರವು ಸ್ಥಳೀಯ ಸಂಸ್ಥೆಗಳಿಗೆ ಅವುಗಳ ಕಾರ್ಯಾಚರಣೆಯನ್ನು ಸುಗಮವಾಗಿ ನಡೆಸಲು ಅನುಕೂಲವಾಗುವಂತೆ ನೀಡುವ ಸಹಾಯಧನ ಅಥವಾ ಅನುದಾನ.

grants of fund: ಅನುದಾನ ನಿಧಿ.

graphic rating scale system: ರೇಖಾಮಾನ ಪಟ್ಟಿ ಪದ್ಧತಿ. ಆಲೇಖಿಯ ಪದನಿಶ್ಚಯ ಪ್ರಣಾಳಿ. ಈ ಪದ್ಧತಿಯಲ್ಲಿ ವ್ಯಕ್ತಿಗಳ ಆಡಳಿತ ಮತ್ತು ಇತರ ಅರ್ಹತೆಗಳ ಬೆಲೆ ಕಟ್ಟಲು ಅನ್ವಯಿಸಲಾಗುತ್ತದೆ.

graphical method: ನಕ್ಷಾ ವಿಧಾನ; ನಕ್ಷಾ ನಿರೂಪಣೆ.

graphology: ಹಸ್ತಲೇಖ ವಿಜ್ಞಾನ.

graphomania: ಲೇಖನೋನ್ಮಾದ.

gratification: ಸಂತೃಪ್ತಿ.

grave goods: ಗೋರಿಯ ಸರಕುಗಳು. ಶವಗುಣಿಯಲ್ಲಿಡುವ ವ್ಯಕ್ತಿ ಸಂಬಂಧೀ ವಸ್ತುಗಳು. ಉದಾ: ಈಜಿಪ್ಟ್‌ನಲ್ಲಿ ದೊರೆಗಳನ್ನು ಹೂಳುವಾಗ ಅವರು ಉಪಯೋಗಿಸುತ್ತಿದ್ದ ವಸ್ತುಗಳನ್ನು ಶವದೊಂದಿಗೆ ಇರಿಸಿ ನಂತರ ಪಿರಮಿಡ್ಡುಗಳನ್ನು ಕಟ್ಟಲಾಗುತ್ತಿತ್ತು.

gravel beds of river terraces: ನದಿ ದಂಡೆಯಲ್ಲಿನ ಮರಳಿನ ಪದರಗಳು.

great depression: ಮಹಾ ಇಳಿಕೆ; ಮಹಾ ಆರ್ಥಿಕ ಬಿಕ್ಕಟ್ಟು. ಕ್ರಿ.ಶ. ೧೯೩೦ರಲ್ಲಿ ಇದು ಪ್ರಪಂಚದಾದ್ಯಂತ ಸಂಭವಿಸಿದೆ.

great divide: ಮಹಾವಿಭಜನೆ. ಜನಸಂಖ್ಯಾ ಶಾಸ್ತ್ರದಲ್ಲಿ ವಿಶ್ಲೇಷಿಸಲಾಗಿರುವಂತೆ ಭಾರತದ ಜನಸಂಖ್ಯಾ ಬೆಳವಣಿಗೆಯಲ್ಲಿ ೧೯೨೦ರ ಸುಮಾರಿಗೆ ಕಂಡುಬಂದ ಜನಸಂಖ್ಯಾ ಕುಸಿತ.

great granary: ಧಾನ್ಯಸಂಗ್ರಹ ಮಹಾಕಣಜ. ಮೊಹಂಜೋದಾರೋ, ಹರಪ್ಪ ನಾಗರಿಕತೆಗಳಲ್ಲಿ ಇಂತಹ ಕಣಜಗಳಿದ್ದವು.

great leap forward: ಮುನ್ನಡೆಯ ಮಹಾಜಿಗಿತ. ೧೯೫೮ರಲ್ಲಿ ಉತ್ಪಾದನೆಯ ಹೆಚ್ಚಳಕ್ಕಾಗಿ ಚೀನಾದಲ್ಲಿ ಜಾರಿಗೆ ತರಲಾದ ಯೋಜನೆ.

great magnacarta: ಮಹಾಸನದು. ೧೨೧೫ರಲ್ಲಿ ಇಂಗ್ಲೆಂಡಿನ ರಾಜ ಇಮ್ಮಡಿ ಜಾನ್ ಸಹಿಮಾಡಿ ಹೊರಡಿಸಿದ ಮಹಾಸನದು. ಇವನ ಐಶಾರಾಮದ ತುಚ್ಛ ಕ್ರೂರತನದ ನಡತೆಯನ್ನು ತಡೆಯಲಾರದೆ ಜನರು ತಮ್ಮ ಹಕ್ಕುಗಳ ರಕ್ಷಣೆಗೆ ಒತ್ತಾಯ ಮಾಡಿ ಈ ಸನದನ್ನು ಹೊರಡಿಸುವಂತೆ ಮಾಡಿದರು.

great power: ಬೃಹತ್ ರಾಷ್ಟ್ರ; ಪ್ರಬಲ ರಾಷ್ಟ್ರ.

great power chauvinism: ಬಲಾಢ್ಯ ದೇಶಗಳ ರಾಷ್ಟ್ರೀಯ ದುರಭಿಮಾನ. ಮಹಾನ್ ರಾಷ್ಟ್ರಗಳೆಂದು ಕರೆಯಲ್ಪಡುವ ದೇಶಗಳ ಆಳುವ ವರ್ಗಗಳು ಬೆಳೆಸಿ

ಕೊಳ್ಳುವ ಅತೀ ಸ್ವಾಭಿಮಾನದ ಭಾವನೆ. ಇತರ ದೇಶಗಳನ್ನು ಮರ್ದಿಸಿ ಅಪಮಾನಗೊಳಿಸುವುದರಲ್ಲಿ, ಅವುಗಳ ಸ್ವಾತಂತ್ರ್ಯ ಹರಣ ಮಾಡುವುದರಲ್ಲಿ ಮತ್ತು ಮರ್ದಿತ ಜನತೆಯ ಬಗ್ಗೆ ದ್ವೇಷ ಭಾವನೆಯನ್ನು ಹುಟ್ಟಿಸುವುದರಲ್ಲಿ ಅದು ವ್ಯಕ್ತವಾಗುತ್ತದೆ.

great schism: ಮಹಾ ಒಡಕು.

great tradition: ಬೃಹತ್ ಪರಂಪರೆ. ಒಂದು ಪ್ರದೇಶದಲ್ಲಿ ವಿಶಾಲವಾಗಿ ಹಬ್ಬಿರುವ ಪುರಾಣಗಳು, ನಂಬಿಕೆಗಳು, ಆಚರಣೆಗಳು, ಧಾರ್ಮಿಕ ಜೀವನ ದೃಷ್ಟಿ ಇತ್ಯಾದಿಗಳು. ಉದಾ: ಭಾರತದಲ್ಲಿ ರಾಮಾಯಣ, ಮಹಾಭಾರತ, ಕರ್ಮಸಿದ್ಧಾಂತ.

great wall of China: ಚೀನಾದ ಮಹಾಗೋಡೆ.

greater ideology: ಬೃಹತ್ ವಿಚಾರ. ವಿಶಾಲ ವ್ಯಾಪ್ತಿಯುಳ್ಳ ವಿಚಾರಧಾರೆ.

green belt town: ಉದ್ಯಾನ ನಗರ.

green funeral: ಅಂತಿಮ ಸಂಸ್ಕಾರ. ನೀಲಗಿರಿ ಬೆಟ್ಟದ ಬಡಗ ಬುಡಕಟ್ಟಿನ ಜನರು ತಮ್ಮ ಭಾಷೆಯಲ್ಲಿ ಅಂತಿಮ ಸಂಸ್ಕಾರಕ್ಕೆ 'ಹಸೆಕೆಡು' ಎನ್ನುತ್ತಾರೆ. ಇದೇ ಶಬ್ದಕ್ಕೆ ಸಮಾಂತರ ಪದವಾಗಿ ಇಂಗ್ಲೀಷ್‌ನಲ್ಲಿ green funeral ಎಂದು ಬಳಕೆಯಾಗಿದೆ.

green revolution: ಹಸಿರು ಕ್ರಾಂತಿ.

gregarious instinct: ಸಂಘಶೀಲತೆ. ಸಮಾಜಶೀಲತೆ. ಸಹವಾಸ ಪ್ರಿಯತೆಯ ಮೂಲ ಪ್ರವೃತ್ತಿ.

gregariousness: ಸಾಮುದಾಯಿಕತೆ. ಪರಸ್ಪರ ಒಡನಾಟ ಹಾಗೂ ಸಂಪರ್ಕ ಇಟ್ಟುಕೊಳ್ಳಬೇಕೆಂಬ ಜನರ ಪ್ರವೃತ್ತಿ ಹಾಗೂ ಇಚ್ಛೆ.

grid layout: ದಾಖಲಾತಿಗೆ ಅನುಕೂಲವಾಗುವಂತೆ ಉತ್ಪನ್ನದ ನಿವೇಶನವನ್ನು ನಿರ್ದಿಷ್ಟ ಚೌಕಟ್ಟುಗಳಾಗಿ ವಿಭಾಗಿಸುವ ತಂತ್ರ.

grief reaction: ದುಃಖ ಪ್ರತಿಕ್ರಿಯೆ. ದೀರ್ಘಕಾಲದವರೆಗೆ ತೀವ್ರ ದುಃಖ ಅನುಭವಿಸುವುದರಿಂದ ಉಂಟಾಗುವ ಖಿನ್ನತೆ.

grievance procedure: ಕಷ್ಟ ನಿವೇದನಾ ಕ್ರಮ.

griva: ಕಲಶವನ್ನೊಳಗೊಂಡಂತೆ ಇರುವ ಶಿಖರದ ಕುತ್ತಿಗೆ ಭಾಗ.

gross barter terms of trade: ಒಟ್ಟು ಸಾಟಿ ವ್ಯಾಪಾರ ಷರತ್ತುಗಳು. ಒಂದು ನಿರ್ದಿಷ್ಟ ಅವಧಿಯಲ್ಲಿ ಆಮದು ಮಾಡಿಕೊಳ್ಳಲಾದ ಮತ್ತು ರಫ್ತು ಮಾಡಲಾದ ವಸ್ತುಗಳ ಪ್ರಮಾಣ.

gross debt: ಒಟ್ಟು ಸಾಲ (ಋಣ). ಸಾರ್ವಜನಿಕ ಪ್ರಾಧಿಕಾರದ ಸಮಗ್ರ ಸಾಲ.

gross domestic capital formation: ಒಟ್ಟು ಆಂತರಿಕ ಬಂಡವಾಳ ಸಂಚಯನ.

gross domestic product: ಆಂತರಿಕ ಉತ್ಪನ್ನ. ಅರ್ಥವ್ಯವಸ್ಥೆಯೊಂದರಲ್ಲಿ ನಿರ್ದಿಷ್ಟ ಅವಧಿಯಲ್ಲಿ ಉತ್ಪಾದಿಸಲ್ಪಡುವ ಸರಕು ಹಾಗೂ ಸೇವೆಗಳ ಒಟ್ಟು ಮೌಲ್ಯ. ಬೇರೆ ದೇಶಗಳಿಂದ ಬರುವ ಆದಾಯವನ್ನು ಇದರಲ್ಲಿ ಸೇರಿಸುವುದಿಲ್ಲ.

gross egoistic hedonism: ಸ್ಥೂಲ ಸ್ವಸುಖವಾದ.

gross income: ಒಟ್ಟು ವರಮಾನ.

gross materialism: ವಿಷಯಾ ಲೋಲುಪ ಭೌತಿಕವಾದ.

gross national expenditure: ಒಟ್ಟು ರಾಷ್ಟ್ರೀಯ ವೆಚ್ಚ.

gross national product (G.N.P): ಒಟ್ಟು ರಾಷ್ಟ್ರಿಯ ಉತ್ಪನ್ನ. ವಿದೇಶೀ ಹೂಡಿಕೆಯಿಂದ ಬರುವ ಆದಾಯವೂ ಸೇರಿದಂತೆ ಒಂದು ದೇಶದಲ್ಲಿ ಒಂದು ನಿರ್ದಿಷ್ಟ ಅವಧಿಯಲ್ಲಿ ಉತ್ಪಾದಿಸಲಾಗುವ ಎಲ್ಲಾ ಸರಕು ಮತ್ತು ಸೇವೆಗಳ ಒಟ್ಟು ಮೌಲ್ಯ.

gross national product per capital: ತಲಾ ರಾಷ್ಟ್ರೀಯ ಒಟ್ಟು ಉತ್ಪನ್ನ.

gross private domestic investment: ಒಟ್ಟು ಖಾಸಗಿ ಆಂತರಿಕ ಹೂಡಿಕೆ.

gross profit: ಒಟ್ಟು ಲಾಭ. ಒಟ್ಟು ಆದಾಯ ಮತ್ತು ಒಟ್ಟು ವೆಚ್ಚಗಳ ವ್ಯತ್ಯಾಸ.

gross reproduction rate: ಸ್ಥೂಲ ಸಂತಾನೋತ್ಪತ್ತಿ ದರ.

gross social product: ಒಟ್ಟು ಸಾಮಾಜಿಕ ಉತ್ಪನ್ನ. ನೋಡಿ: gross national product.

ground plan: ತಳ ವಿನ್ಯಾಸ; ಪಾದ ವಿನ್ಯಾಸ; ಭೂನಕ್ಷೆ.

grounded theory: ತಲಸ್ಪರ್ಶಿ ಸಿದ್ಧಾಂತ.

group: ಸಮೂಹ; ಗುಂಪು.

group accommodation: ಸಮೂಹ ಸಮಂಜನ. ಪರಸ್ಪರ ಅಂತಃಕ್ರಿಯೆಯುಳ್ಳ ಸಮೂಹಗಳು ತಮ್ಮ ಸಂಘಟನೆ, ಪಾತ್ರ ಅಥವಾ ಸ್ಥಾನಮಾನಗಳಿಗೆ ಹೊಂದಿ ಕೊಳ್ಳುವ ಪ್ರಕ್ರಿಯೆ.

group affiliation: ಸಮೂಹ ಸಂಬಂಧ.

group behaviour: ಸಮೂಹ ವರ್ತನೆ.

group centred: ಸಮೂಹ ಕೇಂದ್ರಿತ.

group change: ಸಮೂಹ ಬದಲಾವಣೆ.

group cohesiveness: ನೋಡಿ: social cohesion.

group collaboration: ಸಮೂಹ ಸಹಯೋಗ.

group composition: ಸಮೂಹ ರಚನೆ.

group conflict: ಸಮೂಹ ಘರ್ಷಣೆ; ಗುಂಪು ಘರ್ಷಣೆ.

group consciousness: ಸಮೂಹ ಪ್ರಜ್ಞೆ; ಗುಂಪಿನ ಪ್ರಜ್ಞೆ.

group contagion: ನೋಡಿ: social contagion.

group control: ಸಮೂಹ ನಿಯಂತ್ರಣ.

group counselling: ಸಮೂಹ ಪರಾಮರ್ಶೆ; ಸಮೂಹ ಉಪಬೋಧನೆ.

group dance: ಸಮೂಹ ನೃತ್ಯ. ಲಯಕ್ಕನುಗುಣವಾಗಿ ಶರೀರ ಮತ್ತು ಪಾದಗಳ ಚಲನೆ. ಇದೊಂದು ಸಹಕಾರ ಯುತ ಸಾಂಘಿಕ ಕಲೆ. ಮಾನವ ನಾಗರಿಕತೆಯ ಎಲ್ಲ ಹಂತಗಳಲ್ಲಿಯೂ ಮತ್ತು ದೇಶಗಳಲ್ಲಿಯೂ ನೃತ್ಯ ಅಸ್ತಿತ್ವ ದಲ್ಲಿದ್ದಿತು. ಇದು ಮಾನವರ ಅತ್ಯಂತ ಪುರಾತನವಾದ ಕಲಾ ಮಾಧ್ಯಮ.

group decision: ಸಮೂಹ ನಿರ್ಧಾರ; ಸಮೂಹ ಸಂಕಲ್ಪ.

group difference: ಸಮೂಹ ಭೇದ.

group discrimination: ಗುಂಪು ವ್ಯತ್ಯಯ; ಸಮೂಹ ತಾರತಮ್ಯ. ಅನು

ಭೋಗಿಗಳನ್ನು ವಿಭಿನ್ನ ಗುಂಪುಗಳಾಗಿ ವಿಂಗಡಿಸಿ ಬೇರೆ ಬೇರೆ ರೀತಿಯ ಬೆಲೆಗಳನ್ನು ವಿಧಿಸುವುದು.

group discussion: ಸಮೂಹ ಸಮಾಲೋಚನೆ.

group discussion technique: ಸಮೂಹ ಸಮಾಲೋಚನಾ ತಂತ್ರ.

group dynamics: ಸಮೂಹ ಚಲನ ಶೀಲತೆ. ಸಮೂಹ ಹಾಗೂ ಅದರ ಪರಿಸರದ ನಡುವಿನ ಅಂತರ ಸಂಬಂಧ ಹಾಗೂ ಇತರ ಸಮೂಹಗಳ ನಡುವಿನ ಸಂಬಂಧಗಳ ಅಧ್ಯಯನ.

group equilibrium: ಗುಂಪು ಸಮ ತೋಲನ. ದೀರ್ಘಕಾಲದಲ್ಲಿ ಕೈಗಾರಿಕೆಯ ಅಥವಾ ಸಮಸ್ತ ಉದ್ಯಮಗಳ ಸಮತೋಲನ ಸ್ಥಿತಿ.

group expectation: ನೋಡಿ: role expectation.

group factor: ಸಮೂಹ ಕಾರಕಾಂಶ.

group factor theory: ಸಮೂಹ ಕಾರಕ ಸಿದ್ಧಾಂತ.

group feeling: ಸಮೂಹ ಭಾವನೆ.

group goal: ಸಮೂಹ ಧ್ಯೇಯ.

group guidance: ಸಮೂಹ ಮಾರ್ಗ ದರ್ಶನ.

group harmony: ಸಮೂಹ ಸಾಮ ರಸ್ಯ.

group identification: ಸಮೂಹ ದೊಡನೆ ಗುರುತಿಸಿಕೊಳ್ಳುವಿಕೆ. ಸಮೂಹದ ನಿರೀಕ್ಷೆಗಳು, ನಿಯಮಗಳು, ಮೌಲ್ಯಗಳು ಹಾಗೂ ಗುರಿಗಳು ಇವೆಲ್ಲವನ್ನೂ ವ್ಯಕ್ತಿಯು ತನ್ನದಾಗಿಸಿಕೊಂಡು ಅವನ್ನು ತನ್ನ ಸಾಮಾಜಿಕ ವ್ಯಕ್ತಿತ್ವದಲ್ಲಿ ಅಂತರ್ಗತ ಗೊಳಿಸುವುದರಿಂದಾಗಿ ಸಮೂಹದಲ್ಲಿ ಗುರುತಿಸಲ್ಪಡುವಿಕೆ.

group ideology: ಸಮೂಹ ಭಾವ; ಸಮಷ್ಟಿ ಭಾವ.

group interest: ಸಮೂಹಾಭಿರುಚಿ.

group interview: ಸಮೂಹ ಸಂದರ್ಶನ.

group marriage: ಗುಂಪು ವಿವಾಹ. ಒಂದು ಗಂಡಸರ ಗುಂಪು ಇನ್ನೊಂದು ಹೆಂಗಸರ ಗುಂಪನ್ನು ವಿವಾಹವಾಗುವುದು.

group membership: ಸಮೂಹ ಸದಸ್ಯತ್ವ.

group mind: ಸಮೂಹ ಮನಸ್ಸು. ಒಂದು ಸಮೂಹದ ಸದಸ್ಯರ ವರ್ತನೆಯ ಮೇಲೆ ಪ್ರಭಾವ ಬೀರುವ ಸಮಷ್ಟಿ ಚೇತನ ಅಥವಾ ಮನಸ್ಸು.

group morale: ಸಮೂಹ ನೈತಿಕತೆ.

group mores: ಸಮೂಹ ಲೋಕನೀತಿ.

group norms: ಸಮೂಹ ಪ್ರಮಾಣಕ ಗಳು.

group opinion: ಸಮೂಹ ಮತ; ಸಮೂಹ ಅಭಿಪ್ರಾಯ.

group persistence: ಸಮೂಹ ಸ್ಥಿರತೆ.

group pressure: ಸಮೂಹದ ಒತ್ತಡ.

group process: ಸಮೂಹ ಪ್ರಕ್ರಿಯೆ.

group properties: ಸಮೂಹ ಗುಣಧರ್ಮಗಳು.

group psyche: ಸಮೂಹ ಮನಸ್ಸು.

group psychotherapy: ಸಮೂಹ ಮನೋಚಿಕಿತ್ಸೆ. ಈ ಚಿಕಿತ್ಸಾ ವಿಧಾನದಲ್ಲಿ ೧೫ ರಿಂದ ೨೦ರಷ್ಟು ರೋಗಿಗಳನ್ನು ಒಟ್ಟಿಗೆ

ಸೇರಿಸಿ, ಅವರ ಸಮಸ್ಯೆಗಳನ್ನು ಚರ್ಚಿಸಲು ಮುಕ್ತ ಸರಣಿಯಿಂದ ಮಾತನಾಡಲು ಅವಕಾಶ ಮಾಡಿಕೊಡಲಾಗುತ್ತದೆ. ಇಲ್ಲಿ ಮನೋವೈದ್ಯನು ತಂಡದ ಮುಂದಾಳಾಗಿ ಕೆಲಸ ಮಾಡುತ್ತಾನೆ.

group psychology: ಸಮೂಹ ಮನೋವೃತ್ತಿ; ಸಮೂಹ ಮನೋವಿಜ್ಞಾನ.

group relation: ಸಮೂಹ ಸಂಬಂಧ.

group rhythm: ಸಾಮೂಹಿಕ ಮಿಡಿತ.

group solidarity: ಸಾಮೂಹಿಕ ಐಕ್ಯಮತ್ಯ.

group standard: ಸಮೂಹದ ಆದರ್ಶ; ಸಮೂಹದ ಪ್ರಮಾಣಕ.

group structure: ಸಮೂಹ ರಚನೆ.

group task orientation: ಸಮೂಹ ಕಾರ್ಯ ದಿಗ್ದರ್ಶನ.

group therapy: ಸಮೂಹ ಚಿಕಿತ್ಸೆ.

group think: ಸಮೂಹ ನಿರ್ಣಯ. ಸಮೂಹ ನಿರ್ಣಯದಲ್ಲಿ ವ್ಯಕ್ತಿಯ ವೈಯಕ್ತಿಕ ಆಸಕ್ತಿಗಳು ನಗಣ್ಯವಾಗಿರುತ್ತವೆ.

group unanimity: ಸಮೂಹದ ಒಮ್ಮತ; ಸಾಮೂಹಿಕ ಒಮ್ಮತ.

group work: ವೃಂದಗತ ಕಾರ್ಯ; ಸಮೂಹ ಕಾರ್ಯ.

grouping: ವಿಭಾಗೀಕರಣ.

growth definition: ಬೆಳವಣಿಗೆ ಆಧಾರಿತ ವ್ಯಾಖ್ಯೆ; ಅಭಿವೃದ್ಧಿ ಪ್ರಧಾನ ವ್ಯಾಖ್ಯೆ.

growth model: ಬೆಳವಣಿಗೆ ಮಾದರಿ. ಸಮತೋಲಿತ ಬೆಳವಣಿಗೆಗಳ ದರವನ್ನು ವಿವಿಧ ಪ್ರಕಾರಗಳಿಂದ ಅಧ್ಯಯನ ಮಾಡುವ ಮಾದರಿ.

growth of pan-Americanism: ವಿಶಾಲ ಅಮೇರಿಕತ್ವ ನೀತಿಯ ಬೆಳವಣಿಗೆ.

growth period: ಬೆಳವಣಿಗೆಯ ಕಾಲ; ಬೆಳವಣಿಗೆಯ ಅವಧಿ.

growth rate: ಬೆಳವಣಿಗೆಯ ದರ.

growth theory: ಬೆಳವಣಿಗೆಯ ಸಿದ್ಧಾಂತ. ಅರ್ಥವ್ಯವಸ್ಥೆಯಲ್ಲಿ ಆರ್ಥಿಕ ಬೆಳವಣಿಗೆಯ ದರವನ್ನು ವಿವರಿಸುವ ಮಾದರಿಗಳನ್ನು ಅಭಿವೃದ್ಧಿಪಡಿಸುವ ಸಿದ್ಧಾಂತ.

growth with stability: ಸ್ಥಿಮಿತತೆಯಿಂದ ಕೂಡಿದ ಬೆಳವಣಿಗೆ.

guarantee of third party: ಮೂರನೇ ಪಕ್ಷದ ಜಾಮೀನು.

guard of honour: ಗೌರವ ರಕ್ಷೆ.

guardian: ಪ್ರಜಾಪಾಲಕ; ರಕ್ಷಕ.

guardian of law: ಕಾನೂನು ರಕ್ಷಕ (ಸಂರಕ್ಷಕ). ಪ್ಲೇಟೋನ ಆದರ್ಶ ರಾಜ್ಯ ವಿವರಣೆಯಂತೆ ಚುನಾಯಿತಗೊಂಡು ರಾಷ್ಟ್ರಾಡಳಿತ ನಡೆಸುವವರು ರಾಷ್ಟ್ರದ ಕಾಯಿದೆಯ ರಕ್ಷಕರಾಗಿರುತ್ತಾರೆ.

guardian of rights: ಹಕ್ಕುಗಳ ಘೋಷಕ (ರಕ್ಷಕ). ಪೌರರಿಗೆ ಸಂವಿಧಾನದಲ್ಲಿ ಕೊಡಲ್ಪಟ್ಟ ಮೂಲಭೂತ ಹಕ್ಕುಗಳಿಗೆ ಯಾವುದೇ ಚ್ಯುತಿಬಾರದ ಹಾಗೆ ಅದನ್ನು ರಕ್ಷಣೆ ಮಾಡುವುದು. ಉದಾ: ಭಾರತ, ಅಮೇರಿಕ ಮುಂತಾದ ರಾಷ್ಟ್ರಗಳಲ್ಲಿ ನ್ಯಾಯಾಂಗವು ಮೂಲಭೂತ ಹಕ್ಕುಗಳ ರಕ್ಷಣೆ ಮಾಡುವುದು.

guardian spirit: ರಕ್ಷಣಾ ಚೇತನ. ಕನಸು ಅಥವಾ ದೈವ ಪ್ರತೀಕಾರದಿಂದ ಗಳಿಸಲ್ಪಟ್ಟ ವೈಯಕ್ತಿಕ ರಕ್ಷಣಾತ್ಮಕ ಶಕ್ತಿ.

guerilla movement: ಗೆರಿಲ್ಲಾ ಚಳುವಳಿ. ವಿದೇಶೀ ಆಕ್ರಮಣಕಾರರ ಸೇನೆಗಳ ಮತ್ತು ಆಡಳಿತಗಾರರ ವಿರುದ್ಧ ವಾಗಿ ಅಥವಾ ದೇಶೀ ಮರ್ದಕರ ವಿರುದ್ಧ ವಾಗಿ ಜನತೆ ನಡೆಸುವ ಹೋರಾಟದ ಒಂದು ರೂಪ. ಸಶಸ್ತ್ರ ಸಮರದ ಮೂಲಕ ವಿಧ್ವಂಸ ಮತ್ತು ಬುಡಮೇಲು ಮಾಡುವ ಕಾರ್ಯಾಚರಣೆಗಳು ಹಾಗೂ ತಮ್ಮ ಸಾಮಾಜಿಕ-ರಾಜಕೀಯ ಬೇಡಿಕೆಗಳ ಈಡೇರಿಕೆಗಳಿಗಾಗಿ ಹೋರಾಡುವಂತೆ ಜನರನ್ನು ಪ್ರೇರೇಪಿಸಲು ನಡೆಸುವ ಪ್ರಕ್ಷೋಭೆ -ಇವು ಅದರ ಪ್ರಧಾನ ರೂಪಗಳಾಗಿರುತ್ತವೆ.

guerilla warfare: ಗೆರಿಲ್ಲಾ ಯುದ್ಧ ತಂತ್ರ; ತುಂಡು ಕಾಳಗ; ಕಿರುಕಾಳಗ; ಬೆಟ್ಟ ಗುಡ್ಡಗಳಲ್ಲಿ ಯುದ್ಧ ಮಾಡುವುದು.

guidance: ಮಾರ್ಗದರ್ಶನ.

guidance technique: ಸಲಹಾ ತಂತ್ರ.

guided democracy: ನಿರ್ದೇಶಿತ ಪ್ರಜಾಪ್ರಭುತ್ವ; ಮಾರ್ಗದರ್ಶಿ ಪ್ರಜಾ ಪ್ರಭುತ್ವ.

guided interview: ನಿರ್ದೇಶಿತ ಸಂದರ್ಶನ. ಸಂದರ್ಶಕನು ತಾನು ಮೊದಲೇ ತಯಾರಿಸಿಟ್ಟುಕೊಂಡ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವ ಸಂದರ್ಶನ.

guided urbanization: ನಿರ್ದೇಶಿತ ನಗರೀಕರಣ.

guild socialism: ವೃತ್ತಿಸಂಘ ಸಮಾಜ ವಾದ.

guild system: ವೃತ್ತಿಸಂಘ ವ್ಯವಸ್ಥೆ.

guilt feeling: ಅಪರಾಧಿ ಭಾವನೆ.

gynaecocracy : ಸ್ತ್ರೀಪ್ರಭುತ್ವ.

gynephobia: ಸ್ತ್ರೀ ಭೀತಿ. ಹೆಂಗಸರ ಬಗೆಗೆ ಭೀತಿ.

gypsy: ಅಲೆಮಾರಿ. ಯುರೋಪ್ ಮತ್ತು ಹಿಮಾಲಯ ಪರ್ವತದ ಸಮಾಂತರ ಪ್ರದೇಶಗಳಲ್ಲಿರುವ, ಅಲ್ಲಿಂದ ಉತ್ತರ ಮತ್ತು ಪಶ್ಚಿಮ ದಿಕ್ಕಿಗೆ ಸಂಚರಿಸುವ ಸಾಂಪ್ರದಾಯಿಕ ಅಲೆಮಾರಿ ಅಲ್ಪಸಂಖ್ಯಾತ ಗುಂಪು.

H

habeas corpus: ಬಂಧೀ ಪ್ರತ್ಯಕ್ಷೀ ಕರಣ; ಹೇಬಿಯಸ್ ಕಾರ್ಪಸ್. ಒಬ್ಬ ವ್ಯಕ್ತಿಯು ಬಲತ್ಕಾರವಾಗಿ ಅಥವಾ ಕಾನೂನುಬಾಹಿರವಾಗಿ ಬಂಧಿಸಲ್ಪಟ್ಟಾಗ ಆ ವ್ಯಕ್ತಿಯನ್ನು ಕೂಡಲೇ ಬಂಧನದಿಂದ ಬಿಡುಗಡೆಗೊಳಿಸಲು ನ್ಯಾಯಾಲಯ ಕೊಡುವ ಆಜ್ಞೆ.

habit: ಅಭ್ಯಾಸ; ರೂಢಿ.

habit formation: ಅಭ್ಯಾಸ ರೂಪಣ.

habit interference: ಅಭ್ಯಾಸ ವ್ಯತಿಕರಣ; ಅಭ್ಯಾಸದ ಅಡ್ಡಿ; ಅಭ್ಯಾಸದ ತೊಡಕು. ಹಳೆಯ ಅಭ್ಯಾಸಗಳು ಹೊಸ ವಿಷಯಗಳನ್ನು ಕಲಿಯಲು ಅಡ್ಡಿಯಾಗುವುದು.

habitat: ವಾಸಸ್ಥಾನ.

habitation area: ಜನವಸತಿ ಪ್ರದೇಶ; ನಿವಾಸ ಪ್ರದೇಶ. ಯಾವುದೇ ಗುಂಪು ಜೀವನದ ಪ್ರಾಥಮಿಕ ಕ್ರಿಯೆಗಳಲ್ಲಿ ತೊಡಗಿಸಿಕೊಳ್ಳಬಹುದಾದ ಭೌಗೋಳಿಕ ಪ್ರದೇಶ.

habitual criminal: ರೂಢಿಗತ ಅಪರಾಧಿ.

habituation: ಅಭ್ಯಾಸಗತ ಸ್ವಭಾವ.

haemophobia: ರಕ್ತಸ್ರಾವ ಭೀತಿ.

hairiness of the body: ಮೈಮೇಲೆ ರೋಮಯುಕ್ತತೆ.

half blood: ಅರೆ ರಕ್ತ. ಎರಡು ವಿಭಿನ್ನ

ಜನಾಂಗ ಅಥವಾ ಜಾತಿಗಳ ತಂದೆ ತಾಯಿಗಳಿಗೆ ಜನಿಸಿದ ಶಿಶು. ಸಾಮಾನ್ಯವಾಗಿ ಹಾಗೆ ಜನಿಸಿದವರು ತಮ್ಮ ಹೆತ್ತವರಲ್ಲಿ ಕೆಳ ಜನಾಂಗದ ಅಥವಾ ಜಾತಿಯ ಸ್ಥಾನ ಮಾನಗಳನ್ನು ಪಡೆಯುತ್ತಾರೆ.

half breed: ಅರೆತಳಿ. ತಂದೆ ಮತ್ತು ತಾಯಿ ಬೇರೆ ಬೇರೆ ಜನಾಂಗದವರಾಗಿದ್ದು ಅವರಿಗೆ ಜನಿಸುವ ಮಕ್ಕಳು. ನೋಡಿ: half blood.

half marriage: ಅರೆವಿವಾಹ. ಯುರೋಪ್ ಜನಾಂಗದಲ್ಲಿ ಸಂಪೂರ್ಣ ವಧುದಕ್ಷಿಣೆ ಕೊಡದೆ ನಡೆಸುವ ವಿವಾಹ.

half medallion: ಅರ್ಧ ಪದ್ಮ(ಚಕ್ರ) ವಿನ್ಯಾಸ.

half sibling: ಮಲ ಸಹೋದರ.

hali: ಕೃಷಿ ಕಾರ್ಮಿಕ; ಕೃಷಿ ಕ್ಷೇತ್ರದ ಜೀತದಾಳು.

haliya: ಉಳುವವ; ಕೃಷಿ ಕಾರ್ಮಿಕ.

hallucination: ಹುಸಿಕಲ್ಪನೆ; ಭ್ರಮೆ.

hallucinatory image: ವಿಭ್ರಮಾತ್ಮಕ ಬಿಂಬ.

hallucinogen: ವಿಭ್ರಮೋತ್ಪಾದಕ.

hallucinosis: ವಿಭ್ರಮಿತ ಮನೋವಿಕೃತಿ.

halo effect: ಪ್ರಭಾವಲಯ ಪರಿಣಾಮ; ಪರಿವೇಷ ಪ್ರಭಾವ. ಸಂಶೋಧಕನು ಅಧ್ಯಯನ ಕಾಲದಲ್ಲಿ ವ್ಯಕ್ತಿಗಳನ್ನು ಗಮನಿಸುವಾಗಿನ ಎಲ್ಲಾ ಅನುಭವಗಳೂ ಆತನ ಸಂಶೋಧನಾ ವರದಿಯ ಮೇಲೆ ಪ್ರಭಾವ ಬೀರುವಿಕೆ.

hamito semitic: ಹೆಮೆಟಿಕ್ ಮತ್ತು ಸೆಮೆಟಿಕ್ ಮೂಲಗಳ ಮಿಶ್ರ ಜನಾಂಗ.

Hammurabi's code: ಹಮ್ಮುರಬಿಯ ಶಾಸನ. ಬ್ಯಾಬಿಲೋನಿಯಾದ ಅಮೂರೈಟ್ಸ್ ವಂಶದ ೬ನೇ ದೊರೆ ಹಮ್ಮೂರಬಿ ಕ್ರಿ.ಪೂ. ೧೭೮೨-೧೭೫೦ರಲ್ಲಿ ರಚಿಸಿದ ಶಾಸನಸಂಹಿತೆ.

handicraft economy: ಕರಕುಶಲ ಆರ್ಥಿಕತೆ; ಗೃಹಕೈಗಾರಿಕಾ ಆರ್ಥಿಕತೆ. ಮಾನವ ಶ್ರಮವನ್ನು ಗೃಹಕೈಗಾರಿಕೆಗೆ ಅಳವಡಿಸುವುದರ ಮೂಲಕ ಹೆಚ್ಚು ಆರ್ಥಿಕ ಬೆಂಬಲ ಪಡೆದಿರುವ ಸಮುದಾಯ.

Hansen's law: ಹ್ಯಾನ್ಸನ್ನನ ನಿಯಮ. ಮೂರನೇ ಪೀಳಿಗೆಯ ಆಸಕ್ತಿಯ ನಿಯಮ. ಮಗನು ಮರೆಯಲಿಚ್ಛಿಸುವ ಮೂಲ ಸಾಂಸ್ಕೃತಿಕ ಅಂಶಗಳನ್ನು ಮೊಮ್ಮಗನು ನೆನಪಿನಲ್ಲಿ ಉಳಿಸಿಕೊಳ್ಳಲು ಇಚ್ಛಿಸುತ್ತಾನೆಂಬ ಸಿದ್ಧಾಂತ.

hara-kiri: ಹಾರ್‍ರಾ-ಕಿರಿ; ಕಿಬ್ಬೊಟ್ಟೆ ಸೀಳಿ ಆತ್ಮಹತ್ಯೆ ಮಾಡಿಕೊಳ್ಳುವ ಪದ್ಧತಿ. ಇದು ಜಪಾನಿನ ವಿಧಿಬದ್ಧ ಆತ್ಮಹತ್ಯೆ. ಮೇಲ್ವರ್ಗದ ಜನರು ಅವಮಾನ ಸಹಿಸದಾದಾಗ ಅಥವಾ ಮರಣದಂಡನೆಗೆ ಗುರಿಯಾದಾಗ ಬಳಸುತ್ತಿದ್ದ ಆತ್ಮಹತ್ಯೆಯ ವಿಧಾನ. ಅಪರೂಪವಾಗಿ ಈಗಲೂ ಆಚರಣೆಯಲ್ಲಿದೆ ಎನ್ನಲಾಗುತ್ತದೆ.

harbouring an offender: ಅಪರಾಧಿಗೆ ಆಶ್ರಯ ನೀಡುವಿಕೆ.

hard credit : ಪ್ರಬಲ ಸಾಲ. ಕಷ್ಟಪಟ್ಟು ಪಡೆವ ಸಾಲ. ಹೆಚ್ಚಿನ ಬಡ್ಡಿ ಹಾಗೂ ವಿನಿಮಯ ದರ ನೀಡಿ ಪಡೆವ ಸಾಲ.

hard currency: ಪ್ರಬಲ ಹಣ. ಅಂತಾರಾಷ್ಟ್ರೀಯ ವ್ಯವಹಾರದಲ್ಲಿ ಎಲ್ಲ ರಾಷ್ಟ್ರಗಳು ಬಯಸುವ ಹಾಗೂ ಬೇಡಿಕೆಯು

ಅತ್ಯಧಿಕವಾಗಿರುವ ಕರೆನ್ಸಿ. ಉದಾ: ಡಾಲರ್, ಪೌಂಡ್.

hardware: ಗುರುವರ. ಗಣಕ ಯಂತ್ರದ ಪ್ರಧಾನ ಭಾಗ.

Harijan: ಹರಿಜನ. ಗಾಂಧೀಜೀಯವರು ಅಸ್ಪೃಶ್ಯರಿಗೆ ಪ್ರಚುರಪಡಿಸಿದ ಹೆಸರು.

harmful diversion: ಹಾನಿಕಾರಕ ಗತಿಬದಲಾವಣೆ. ಅಗತ್ಯ ವಸ್ತುಗಳ ಉತ್ಪಾದನೆಯ ಮೇಲೆ ತೆರಿಗೆ ವಿಧಿಸುವುದ ರಿಂದಾಗಿ ಅನುಭೋಗ ಕುಂಠಿತವಾಗಿ ಸಂಪನ್ಮೂಲಗಳು ಬೇರೆ ಉದ್ಯಮಗಳಿಗೆ ಗತಿಬದಲಾಯಿಸುವ ಪ್ರಕ್ರಿಯೆ. ಹೀಗಾದಾಗ ಅಗತ್ಯದ ವಸ್ತುಗಳು ಜನರಿಗೆ ದೊರಕ ದಂತಾಗುತ್ತದೆ.

harmonic mean: ಸಮರಸವಾದ ಸರಾಸರಿ.

harmonious adjustment: ಸಾಮ ರಸ್ಯಪೂರ್ಣ ಹೊಂದಾಣಿಕೆ.

harmonious function: ಸಾಮರಸ್ಯ ಕಾರ್ಯ; ಸುಸಂಗತ ಕಾರ್ಯ.

harmony of interest: ಹಿತಾಸಕ್ತಿಯ ಹೊಂದಿಕೆ.

Herod-Domar model: ಹೆರೋಡ್-ಡೋಮರನ ಮಾದರಿ. ಆರ್ಥಿಕ ಬೆಳ ವಣಿಗೆಯ ಒಂದು ಸಿದ್ಧಾಂತ. ಒಂದು ಅರ್ಥ ವ್ಯವಸ್ಥೆಯು ಸಮತೂಕದ ಬೆಳವಣಿಗೆಯ ಸ್ವಾಭಾವಿಕ ಪ್ರವೃತ್ತಿಯನ್ನು ಹೊಂದಿರು ವುದಿಲ್ಲವೆಂದು ಈ ಸಿದ್ಧಾಂತ ತಿಳಿಯಪಡಿಸು ತ್ತದೆ.

harvest festival: ಸುಗ್ಗಿಯ ಹಬ್ಬ. ಬೆಳೆಯ ಸಂಗ್ರಹಣೆಯ ನಂತರ ಮಾಡ ಲಾಗುವ ಹಬ್ಬ.

haves and havenots: ಉಳ್ಳವರು ಮತ್ತು ಇಲ್ಲದವರು. ಆರ್ಥಿಕ ಹಂಚಿಕೆಯಲ್ಲಾಗುವ ಅಸಮಾನತೆಯಿಂದಾಗಿ ಉಂಟಾಗುವ ಶ್ರೀಮಂತ ಮತ್ತು ಬಡ ವರ್ಗ.

Hawthrone studies: ಹಾಥ್ರೋನ್ ಅಧ್ಯಯನಗಳು. ಕಾರ್ಮಿಕ ಸಮೂಹಗಳ ಕ್ಷೇತ್ರ ಅಧ್ಯಯನವನ್ನು ಹಾಥ್ರೋನ್‌ನಲ್ಲಿ (ಚಿಕಾಗೋ) ೧೯೨೪ ರಿಂದ ೧೯೩೩ರ ಅವಧಿಯಲ್ಲಿ ನಡೆಸಲಾಯಿತು. ಈ ಅಧ್ಯಯ ನವು ಔದ್ಯೋಗಿಕ ಸಮಾಜಶಾಸ್ತ್ರ ಹಾಗೂ ಸಂಘಟನಾ ಸಿದ್ಧಾಂತದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

hazardous act: ಅಪಾಯಕಾರಿ ಕ್ರಮ; ಅಪಾಯಕಾರಿ ಕಾನೂನು.

head hunting: ಶಿರಬೇಟೆ. ಮಾನವನ ಶಿರಕ್ಕಾಗಿ ಬೇಟೆಯಾಡುವುದು.

head quarters: ಕೇಂದ್ರ ಕಾರ್ಯಸ್ಥಾನ.

head man: ಮುಖಂಡ; ಮುಖ್ಯಸ್ಥ; ಗೌಡ.

head of department: ಇಲಾಖಾ ಮುಖ್ಯಸ್ಥ.

headship: ನಾಯಕತ್ವ; ಮುಖ್ಯಸ್ಥಾನ.

health adjustment: ಆರೋಗ್ಯದ ಹೊಂದಾಣಿಕೆ.

health education: ಆರೋಗ್ಯ ಶಿಕ್ಷಣ.

heavy industrialization: ಬೃಹತ್ ಕೈಗಾರಿಕೋದ್ಯಮ.

heavy industry: ಬೃಹತ್ ಕೈಗಾರಿಕೆ; ಘನ ಉದ್ದಿಮೆ.

heavy industry argument: ಬೃಹತ್ ಕೈಗಾರಿಕಾವಾದ. ಬೃಹತ್ ಕೈಗಾರಿಕೆಗಳಿಲ್ಲ ದಿದ್ದರೆ ರಾಷ್ಟ್ರಗಳ ಅಭಿವೃದ್ಧಿಯು ಸ್ವಯಂ

ಚಾಲಿತವೂ, ಸ್ವಯಂಸ್ಫೂರ್ತಿಯುತವೂ ಆಗ ಲಾರದೆಂಬ ವಾದ.

heavy industry strategy: ಬೃಹತ್ ಕೈಗಾರಿಕಾ ಯುಕ್ತಿ.

hebephrenia: ತಾರುಣ್ಯ ಚಿತ್ತ ವಿಕೃತಿ. ಕ್ಷುಲ್ಲಕ ಇಚ್ಛೆ. ಈ ರೋಗಿಗಳು ಕ್ಷುಲ್ಲಕ ವಾದ ಮತ್ತು ಗಾಂಭೀರ್ಯವಿಲ್ಲದ ರೀತಿ ಯಲ್ಲಿ ಮುಗುಳು ನಗುತ್ತ ಇಲ್ಲವೆ ಹಲ್ಲು ಕಿರಿಯುತ್ತ ಮುಖದಲ್ಲಿ ಬಗೆಬಗೆಯ ಹಾವಭಾವ ವ್ಯಕ್ತಪಡಿಸುತ್ತಾರೆ.

hebephrenic reaction: ತಾರುಣ್ಯ ಚಿತ್ತ ವಿಕೃತಿ ಪ್ರತಿಕ್ರಿಯೆ.

hebephrenic schizophrenia: ತಾರುಣ್ಯ ಚಿತ್ತ ಸಾದೃಶ್ಯ ಮನೋವಿದಳನ.

hebephrenic type: ತಾರುಣ್ಯ ಚಿತ್ತ ವಿಕೃತಿ ಪ್ರರೂಪ; ಕ್ಷುಲ್ಲಕ ಇಚ್ಛಿತ. ಮುಖ್ಯ ಚಿಹ್ನೆಗಳು, ಬರಿತೋರಿಕೆಯ ಭಾವನೆಗಳು, ಮಕ್ಕಳಾಟಿಕೆಯ ಕ್ಷುಲ್ಲಕತನ, ಅಸಂಬದ್ಧ ವಾದ ಭ್ರಾಂತಿ, ವಿಭ್ರಾಂತಿಗಳು, ಅಧ್ವಾನದ ಮಾತು, ವ್ಯಕ್ತಿತ್ವದ ತೀವ್ರ ವಿಸಂಘಟನೆ.

Heckscher-Ohlin principle: ಹೆಕ್ಸರ್ ಓಹ್ಲಿನ್ ತತ್ತ್ವ. ಒಂದು ರಾಷ್ಟ್ರವು ಅಲ್ಲಿ ಹೇರಳವಾಗಿ ಲಭ್ಯವಿರುವ ಸಂಪನ್ಮೂಲ ವನ್ನು ಆಧರಿಸಿ ತಯಾರಿಸುವ ಸರಕುಗಳನ್ನು ರಫ್ತುಮಾಡಬಹುದು ಎಂಬುದನ್ನು ವಿವರಿಸುವ ನಿಯಮ.

hedonia: ಉಲ್ಲಾಸಾತಿರೇಕ; ಆನಂದಾ ತಿರೇಕ.

hedonic feeling: ಉಲ್ಲಾಸ ಭಾವನೆ; ಸುಖ ಭಾವನೆ.

hedonism: ವಿಲಾಸವಾದ. ಸುಖವೇ ಮುಖ್ಯ ಸಾಧನವೆಂಬ ತತ್ತ್ವ. ಸುಖ ಸಂತೋಷವೇ ಜೀವನದ ಪರಮಗುರಿ ಎಂಬ ನಂಬಿಕೆಯನ್ನು ಹೊಂದಿರುವ ತತ್ತ್ವ.

hegemonism: ಅಧಿನಾಯಕತ್ವವಾದ; ಒಂದು ದೇಶವು ಇತರ ದೇಶಗಳ ಮೇಲೆ ತನ್ನ ನಾಯಕತ್ವವನ್ನು ಹಾಗೂ ಸ್ವಹಿತಾಸಕ್ತಿ ಗಳನ್ನು ಹೊರಿಸುವ ನೀತಿ.

hegemony: ಪ್ರಾಬಲ್ಯ. ಸಂಯುಕ್ತ ರಾಜ್ಯ ದಲ್ಲಿ ಒಂದರ ಅಧಿನಾಯಕತ್ವ. ಆಧುನಿಕ ಕಾಲದಲ್ಲಿ ಈ ಶಬ್ದವನ್ನು ವರ್ಗಪ್ರಾಬಲ್ಯಕ್ಕೆ ಬಳಸಲಾಗುತ್ತದೆ. ನೋಡಿ: class hegemony.

hegemony of the proletariat: ಕಾರ್ಮಿಕ ವರ್ಗದ ಅಧಿನಾಯಕತ್ವ. ಸಮಾಜ ವಾದಿ ಕ್ರಾಂತಿಯ ವಿಜಯದ ನಂತರ ಸಮಾಜದ ಮತ್ತು ಕಮ್ಯೂನಿಸಮ್‌ನ ನಿರ್ಮಾಣ ಕಾರ್ಯದಲ್ಲಿ ಇತರ ಸಾಮಾಜಿಕ ವರ್ಗಗಳ ಮೇಲೆ ಕಾರ್ಮಿಕ ವರ್ಗವು ವಹಿಸುವ ನೇತೃತ್ವವನ್ನು ಕಾರ್ಮಿಕ ವರ್ಗದ ಅಧಿನಾಯಕತ್ವವೆನ್ನಲಾಗಿದೆ.

heir apparent: ಪ್ರತ್ಯಕ್ಷ ಅಥವಾ ನೇರ ವಾರುಸುದಾರ; ಪ್ರತ್ಯಕ್ಷ ಉತ್ತರಾಧಿಕಾರಿ.

heir presumptive: ಸಂಭಾವ್ಯ ಉತ್ತರಾ ಧಿಕಾರಿ.

helio-centric theory: ಸೂರ್ಯ ಕೇಂದ್ರ ಸಿದ್ಧಾಂತ.

Hellenese: ಹಲ್ಲೆನಿಯನ್ನರು. ಡ್ಯಾನೂಬ್ ನದೀ ಪ್ರದೇಶದಿಂದ ಕ್ರೀಟನ್ ನಾಗರಿಕತೆಯ ಜನ್ಮಭೂಮಿಯಾದ ಬಾಲ್ಕನ್ ಪ್ರಸ್ಥಭೂಮಿ ಯಲ್ಲಿ ಸುಮಾರು ಕ್ರಿ.ಪೂ. ಹದಿನಾರನೇ ಶತಮಾನದಿಂದ ಬಂದು ನೆಲೆಸಿದ

ಅಚೆಯನ್ನರು, ಅಯೋನಿಯನ್ನರು, ಮತ್ತು ಡೋರಿಯನ್ನರು ಇವರನ್ನು ಒಟ್ಟಿಗೆ ಹೆಲೆನೆಸ್ ಎಂದು ಕರೆಯಲಾಗಿದೆ.

hellonic: ಹೆಲನಿಕ್. ರೋಮನ್-ಯುನಾನಿ ಸಂಸ್ಕೃತಿಗೆ ಸೇರಿದ ಇಂಡೋ ಐರೋಪ್ಯ ಭಾಷಾ ಕುಟುಂಬ.

helot: ಗುಲಾಮ; ದಾಸ; ಒಂದು ತರಗತಿಯ ಸ್ವತಂತ್ರನಲ್ಲದ ಉಳುಮೆಯ ಜೀತಗಾರ. ಪ್ರಾಚೀನ ಸ್ಪಾರ್ಟಾ ರಾಜ್ಯದಲ್ಲಿ ಸ್ವತಂತ್ರ ಪ್ರಜೆ ಮತ್ತು ಗುಲಾಮರ ಮಧ್ಯದ ದರ್ಜೆಯಲ್ಲಿದ್ದವ.

helper spirit: ಸಹಾಯಕ ಪ್ರೇತಾತ್ಮ.

hematophobia: ರಕ್ತಭೀತಿ. ರಕ್ತ ಕಂಡರೆ ಉಂಟಾಗುವ ಭೀತಿ.

hemisphere unity: ಖಂಡಗಳ ಏಕತೆ.

henotheism: ಏಕಮಹಾದೇವೋಪಾಸನೆ. ಅನೇಕ ದೇವ-ದೇವತೆಗಳ ಅಂಶ ಒಂದು ದೇವರಲ್ಲಿ ಇದೆ ಎಂಬ ವಾದ. ಉದಾ: ಸರ್ವಾಯುಧ ಸಂಪನ್ನ ದುರ್ಗೆ.

herd instinct: ಹಿಂಡು ಪ್ರವೃತ್ತಿ. ಗುಂಪು ಗುಂಪಾಗಿ ವಾಸಿಸಬೇಕೆನ್ನುವ ಸಾಮಾಜಿಕ ಮೂಲಪ್ರವೃತ್ತಿ.

herd psychology: ಸಂಘಮನೋ ವಿಜ್ಞಾನ.

hereditary autocracy: ಅನುವಂಶಿಕ ನಿರಂಕುಶತೆ.

hereditary executive: ಅನುವಂಶಿಕ ಕಾರ್ಯಾಧಿಕಾರಿ.

hereditary government: ಅನು ವಂಶಿಕ ಸರಕಾರ.

hereditary potential: ಅನುವಂಶಿಕ ಅಂತಃಸತ್ವ.

hereditary right: ವಂಶಪಾರಂಪರ್ಯ ಹಕ್ಕು.

hereditary trait: ಅನುವಂಶೀಯ ವಿಶಿಷ್ಟಗುಣ.

hereditary transmission: ಅನುವಂಶಿಕ ರವಾನೆ; ಅನುವಂಶಿಕ ಸಾಗಾಟ.

heredity: ಅನುವಂಶೀಯತೆ; ಅನುವಂಶಿಕತೆ.

heritage: ಬಳುವಳಿ; ಪರಂಪರೆ.

hermaphrodites: ಶಿಖಂಡಿಗಳು. ಅತ್ತ ಗಂಡೂ ಅಲ್ಲದ ಇತ್ತ ಹೆಣ್ಣೂ ಅಲ್ಲದ (ಪುನರುತ್ಪಾದನಾ ರಚನೆಯಲ್ಲಿ ದೋಷವಿರುವಂತಹ) ವ್ಯಕ್ತಿಗಳು.

hermeneutics: ಅರ್ಥವಿವರಣಾ ಶಾಸ್ತ್ರ; ವ್ಯಾಖ್ಯಾನ ವಿಧಾನ.

hero cult: ವೀರಾರಾಧನೆ. ಮೃತ ವೀರರ ಅಥವಾ ಅವರ ಆತ್ಮದ ಆರಾಧನಾ ಸಂದರ್ಭದಲ್ಲಿ ನಡೆಸುವ ಆಚರಣೆಗಳು.

hero stone: ವೀರಗಲ್ಲು. ಯುದ್ಧ, ತುರುಕಾಳಗ, ಬೇಟೆಗಳಲ್ಲಿ ಹೋರಾಡಿ ಮಡಿದ ವೀರನ ಸ್ಮಾರಕ ಶಿಲ್ಪ.

hero tale: ವೀರಗಾಥೆ.

hero worship: ವೀರಪೂಜೆ; ನಾಯಕ ಪೂಜೆ. ದೈವಿಕ ಶಕ್ತಿಯನ್ನು ಹೊಂದಿದ್ದರು ಎಂದು ಭಾವಿಸಲಾದ ಅಥವಾ ತಮ್ಮ ಪಂಗಡದ ಜನರಿಗೆ ವಿಶೇಷಸೇವೆ ಸಲ್ಲಿಸಿದ ವ್ಯಕ್ತಿಗಳ ಪೂಜೆ.

heroic age: ಯೋಧ ಯುಗ; ಯೋಧ ಪ್ರಾಧಾನ್ಯ ಕಾಲ.

heroic assumption: ವೀರೋಚಿತ ಕಲ್ಪನೆ. ಗುಂಪು ಸಮತೋಲನವನ್ನು

ವಿವರಿಸಲು ಚೇಂಬರ್ಲಿನ್ ಪ್ರತಿಪಾದಿಸಿದ ಕೆಲವು ಕಲ್ಪನೆಗಳು.

heroic ballad: ಜನಪದವೀರ ಲಾವಣಿ.

heroic protector: ವೀರ ಸಂರಕ್ಷಕ.

hetaerism: ೧. ಪ್ರಾಚೀನ ಗ್ರೀಕ್‌ನಲ್ಲಿ ಪ್ರಚಲಿತವಿದ್ದ ಒಂದು ಬಗೆಯ ದೇವದಾಸಿ ಪದ್ಧತಿ. ೨. ಪ್ರಾಚೀನ ಕಾಲದಲ್ಲಿ ಬಳಕೆಯಲ್ಲಿತ್ತೆನ್ನಲಾದ ಸಾಮುದಾಯಿಕ ವಿವಾಹ ಪದ್ಧತಿ.

hetero chromosomes: ವಿಭಿನ್ನ ಜೀವಾಣುಗಳು. ಲಿಂಗ ನಿರ್ಧಾರದಲ್ಲಿ ಪಾತ್ರ ವಹಿಸುವ ವಿಭಿನ್ನ ಜೀವಾಣುಗಳು.

hereto sexuality: ಭಿನ್ನ ಲಿಂಗಿಗಳ ಲೈಂಗಿಕ ಸಂಬಂಧ.

heterogamy: ಭಿನ್ನಗಮನ; ಮಿಶ್ರ ವಿವಾಹ. ಸಾಂಸ್ಕೃತಿಕ ಹಿನ್ನೆಲೆ, ಜನಾಂಗ, ಸಾಮಾಜಿಕ ವರ್ಗ, ಧರ್ಮ ಅಥವಾ ವ್ಯಕ್ತಿತ್ವದಲ್ಲಿ ಭಿನ್ನತೆಯುಳ್ಳ ಇಬ್ಬರು ವ್ಯಕ್ತಿಗಳ ನಡುವಿನ ಮದುವೆ.

heterogeneity: ವಿಜಾತೀಯತೆ; ಭಿನ್ನ ರೂಪತೆ.

heteronomous family: ಬಹುವೃತ್ತಿಯಾಧಾರಿತ ಕುಟುಂಬ. ಯಾವುದಾದರೊಂದು ನಿಶ್ಚಿತ ಆರ್ಥಿಕ ಮೂಲವಿಲ್ಲದ ಕುಟುಂಬದ ಸದಸ್ಯರು ವಿಭಿನ್ನ ವೃತ್ತಿಯಲ್ಲಿ ಸೇರಿಕೊಂಡು ತಮ್ಮ ಆರ್ಥಿಕ ನೆಲೆಯನ್ನು ಸಾಧಿಸುವ ಕುಟುಂಬ.

hetero psychological ethics: ವಿಭಿನ್ನ ಮಾನಸಿಕ ನೀತಿ.

heteroscedasticity: ವಿಭಿನ್ನ ಚಲ ವಿತರಣ ಮಾಪನ. ಗಣಿತೀಯ ಅರ್ಥಶಾಸ್ತ್ರದಲ್ಲಿ ವಿವಿಧ ಚಲಗಳ ನಡುವಣ ವಿತರಣೆಯನ್ನು ಪರೀಕ್ಷಿಸುವ ವಿಧಾನ.

heterosexual: ಭಿನ್ನ ಲಿಂಗಕಾಮ. ಉದಾ:ಗಂಡು-ಹೆಣ್ಣಿನ ಲೈಂಗಿಕ ಸಂಬಂಧ. ಇದು ಸಹಜ ಕಾಮ. ನೋಡಿ: ವಿರುದ್ಧ ಪ್ರವೃತ್ತಿಯ homosexual.

heterosexual interest: ಭಿನ್ನ ಲಿಂಗ ಕಾಮಾಭಿರುಚಿ.

heterosexuality: ವಿಲಿಂಗ ಕಾಮ. ಮನೋಲೈಂಗಿಕತೆಯ ಬೆಳವಣಿಗೆಯ ಪ್ರಬುದ್ಧಾವಸ್ಥೆ; ವಿರುದ್ಧ ಲಿಂಗದ ವ್ಯಕ್ತಿಯಲ್ಲಿ ಲೈಂಗಿಕ ಆಸಕ್ತಿಯನ್ನು ತಳೆಯುವುದು.

heuristic assumption: ತಾತ್ಕಾಲಿಕ ಉಪಯುಕ್ತ ಊಹನೆ.

heuristic method: ಸತ್ಯಾನ್ವೇಷಣಾ ವಿಧಾನ.

heuristics: ಅನ್ವೇಷಣಾ ಕಲೆ. ಇತಿಹಾಸದ ಮೂಲಾಧಾರಗಳನ್ನು ಕಂಡುಹಿಡಿಯುವುದಕ್ಕಾಗಿ ದಾಖಲೆಗಳನ್ನು ಅರಸಿ ಸಂಗ್ರಹಿಸುವ ಕಲೆ.

hidden curriculum: ಸುಪ್ತ ಪಾಠ ಪಟ್ಟಿ; ಔಪಚಾರಿಕ ಶಿಕ್ಷಣದಲ್ಲಿ ಒಳ ಗೊಳ್ಳದ, ಆದಾಗ್ಯೂ ಶಾಲೆಯಲ್ಲಿ ಕಲಿಯಲ್ಪಡುವ ನಡತೆ ಅಥವಾ ವರ್ತನೆಯ ವಿಷಯಗಳು. ಉದಾ: ಶಾಲೆಯಲ್ಲಿ ಲಿಂಗ ಭೇದದ ಅವಧಾನ.

hidden memories: ಸುಪ್ತ ನೆನಪುಗಳು.

hierarchical duality: ಶ್ರೇಣೀಕೃತ ದ್ವಂದ್ವ.

hierarchical order: ಏಣಿಶ್ರೇಣಿ ವ್ಯವಸ್ಥೆ.

hierarchical principle: ಏಣಿ ಶ್ರೇಣಿಯ ತತ್ತ್ವ.

hierarchical status: ಶ್ರೇಣೀಕೃತ ಅಂತಸ್ತು.

hierarchy: ಏಣಿಶ್ರೇಣಿ ಪದ್ಧತಿ. ಒಂದು ಆಡಳಿತ ವ್ಯವಸ್ಥೆಯಲ್ಲಿ ಕಾರ್ಯ ನಿರ್ವಹಿಸುವ ವ್ಯಕ್ತಿಗಳನ್ನು ಅವರ ಜವಾಬ್ದಾರಿ ಹಾಗೂ ಕರ್ತವ್ಯಗಳಿಗೆ ಅನುಸಾರವಾಗಿ ವರ್ಗೀಕರಿಸುವುದು.

hierarchy of motives: ಅಂತಃಪ್ರೇರಕಗಳ ಏಣಿಶ್ರೇಣಿ.

hierarchy of needs: ಅಗತ್ಯಗಳ ಏಣಿ ಶ್ರೇಣಿ ಕ್ರಮ. ಅಗತ್ಯಾನುಕ್ರಮ ಏಣಿ ಶ್ರೇಣಿ. ಮಾನವನ ಅವಶ್ಯಕತೆಗಳನ್ನು ಆದ್ಯತೆಯ ಆಧಾರದ ಮೇಲೆ ಶ್ರೇಣೀಕರಿಸುವ ಸಿದ್ಧಾಂತ.

hierarchy of sciences: ವಿಜ್ಞಾನಗಳ ಏಣಿಶ್ರೇಣಿ.

hierarchy of values: ಮೌಲ್ಯಾನು ಕ್ರಮ ಏಣಿಶ್ರೇಣಿ.

hierocracy: ಪುರೋಹಿತ ಪ್ರಭುತ್ವ.

hieroglyph: ಗೂಢ ಲಿಪಿ; ಪವಿತ್ರ ಬರಹ; ಪುರಾತನ ಈಜಿಪ್ಟಿಯನ್ ಚಿತ್ರ ಬರವಣಿಗೆ (ವಸ್ತು ಚಿತ್ರ). ಕ್ರಿ.ಪೂ.೨೦೦೦ ದಿಂದ ಕ್ರಿ.ಶ.೪ನೇ ಶತಮಾನದವರೆಗೆ ಬಳಕೆಯಲ್ಲಿದ್ದ ಅತ್ಯಂತ ಪುರಾತನ ಈಜಿಪ್ಟಿಯನ್ ಚಿತ್ರಬರವಣಿಗೆ. ಹೆಚ್ಚಾಗಿ ಪುರೋಹಿತ ವರ್ಗವು ಈ ಲಿಪಿಯನ್ನು ಬಳಸುತ್ತಿದ್ದುದರಿಂದ ಇದನ್ನು ಹೈರೋಲಿಪಿ ಎಂದು ಕರೆಯಲಾಗಿದೆ.

hierology: ಪವಿತ್ರ ಶಾಸ್ತ್ರ; ಪವಿತ್ರ ಸಾಹಿತ್ಯ.

high cost: ಅಧಿಕ ವೆಚ್ಚ; ಉನ್ನತ ವೆಚ್ಚ.

high court: ರಾಜ್ಯದ ಉಚ್ಚ ನ್ಯಾಯಾಲಯ.

high multiplier: ಉನ್ನತ ಗುಣಕ.

high trust system: ಪೂರ್ಣ ವಿಶ್ವಾಸಾರ್ಹತೆಯ ಪದ್ಧತಿ. ಸಂಘಟನೆ ಹಾಗೂ ಕೆಲಸದ ಪರಿಸರದಲ್ಲಿ ಜನರಿಗೆ ಕೆಲಸದ ಬಗ್ಗೆ ಹೆಚ್ಚಿನ ಸ್ವಾತಂತ್ರ್ಯ ಹಾಗೂ ನಿಯಂತ್ರಣ ಇರುವಿಕೆ.

high yielding variety (HYV) : ಅಧಿಕ ಇಳುವರಿ ತಳಿ.

higher clergy: ಮೇಲ್ದರ್ಜೆಯ ಪುರೋಹಿತ.

higher education: ಉನ್ನತ ಶಿಕ್ಷಣ. ಶಾಲಾ ಹಂತಕ್ಕಿಂತ ಮೇಲೆ ಕಾಲೇಜು ವಿಶ್ವವಿದ್ಯಾಲಯಗಳಲ್ಲಿನ ಶಿಕ್ಷಣ.

higher mental process: ಉಚ್ಚ ಮಾನಸಿಕ ಪ್ರಕ್ರಿಯೆ.

higher motives: ಉಚ್ಚ ಅಂತಃಪ್ರೇರಕಗಳು.

hightened irritability: ವಿಕೋಪಕ್ಕೇರಿದ ಕೆರಳಿಸುವಿಕೆ.

hijira era: ಹಿಜಿರಾ ಶಕೆ; ಇದು ಕ್ರಿ.ಶ. ೬೨೨ ಜುಲೈ ೧೫ ರಿಂದ ಆರಂಭಗೊಂಡಿತು. ಪೈಗಂಬರರು ಜೀವರಕ್ಷಣೆಗಾಗಿ ಮೆಕ್ಕಾದಿಂದ ಮದೀನಾಕ್ಕೆ ಹೋದ ದಿನ. (ಹಿಜಿರಾ= ವಲಸೆ).

hill tribes: ಗಿರಿಜನರು. ಗುಡ್ಡಗಾಡು ಬುಡಕಟ್ಟುಗಳು.

Hindu Pad Padshahi: ಹಿಂದೂ ಪದ್

ಪದಶಾಹಿ. ಎರಡನೇ ಪೇಶ್ವೆ ಬಾಜಿರಾವ್‌ನ ಗುರಿ ಮತ್ತು ಮುದ್ರಾ ವಾಕ್ಯ. ಅಂದರೆ ಭಾರತದಲ್ಲಿ ಮಹಮ್ಮದರ ಆಡಳಿತವನ್ನು ಅಳಿಸುವುದಕ್ಕಾಗಿ ಭಾರತದ ಎಲ್ಲಾ ಹಿಂದೂ ಅರಸರ ಸಂಯೋಜನೆಯ ಉದ್ದೇಶವನ್ನು ಸೂಚಿಸುವ ಪದಪುಂಜ.

Hinduism: ಹಿಂದೂ ಧರ್ಮ.

hinterland: ಹಿನ್ನಾಡು.

hire and fire system: ನೇಮಕಾತಿ ಮತ್ತು ಉಚ್ಚಾಟನಾ ಪದ್ಧತಿ. ತನ್ನ ವೈಯಕ್ತಿಕ ವಿವೇಚನಾ ಶಕ್ತಿಯನ್ನು ಬಳಸಿಕೊಂಡು ನೇಮಕಾಧಿಕಾರಿಯು ಅಭ್ಯರ್ಥಿಗಳ ಅರ್ಹತೆಯ ಮೇಲೆ ಸೂಕ್ತ ವ್ಯಕ್ತಿಯನ್ನು ನೇಮಿಸಿಕೊಳ್ಳುವುದು. ಆತ ಅದಕ್ಷ ಅಥವಾ ನಿರುಪಕಾರಿ ಎಂಬ ಭಾವನೆ ನೇಮಕಾಧಿಕಾರಿಗೆ ಬಂದಾಗ ಕೆಲಸದಿಂದ ತೆಗೆಯುವುದು.

historic-geographic method of folklore: ಜಾನಪದ ಚಾರಿತ್ರಕ ಭೌಗೋಳಿಕ ವಿಧಾನ. ಪ್ರತಿಯೊಂದು ಜಾನಪದ ಕಥೆಗೂ ತನ್ನದೇ ಆದ ಇತಿಹಾಸವಿದೆ ಮತ್ತು ಆ ಕಾರಣದಿಂದ, ವಿಸ್ತೃತ ಸಾಮಾನ್ಯೀ ಕರಣ ನಡೆಸುವ ಮೊದಲು ಅವುಗಳ ಸಾಂದರ್ಭಿಕ ಅಧ್ಯಯನ ನಡೆಸಬೇಕು ಎಂಬ ಜಾನಪದ ಅಧ್ಯಯನ ಮಾದರಿ.

historical approach: ಐತಿಹಾಸಿಕ ದೃಷ್ಟಿಕೋನ. ಐತಿಹಾಸಿಕ ಹಿನ್ನಲೆಯನ್ನಾಧರಿಸಿದ ಅಧ್ಯಯನ ವಿಧಾನ.

historical background: ಐತಿಹಾಸಿಕ ಹಿನ್ನೆಲೆ.

historical baggage: ಐತಿಹಾಸಿಕ ಹೊರೆ.

historical constitution: ಚಾರಿತ್ರಿಕ ಸಂವಿಧಾನ.

historical context: ಐತಿಹಾಸಿಕ ಸಂದರ್ಭ.

historical cost: ಚಾರಿತ್ರಿಕ ವೆಚ್ಚ; ಮೂಲ ವೆಚ್ಚ. ಭೂತಕಾಲದಲ್ಲಿ ಕೊಂಡುಕೊಂಡ ಯಂತ್ರೋಪಕರಣ ಅಥವಾ ವಸ್ತುವೊಂದರ ಮೂಲಬೆಲೆ.

historical culture: ಐತಿಹಾಸಿಕ ಸಂಸ್ಕೃತಿ.

historical demography: ಐತಿಹಾಸಿಕ ಜನಸಂಖ್ಯಾಶಾಸ್ತ್ರ. ಜನಸಂಖ್ಯೆಯ ಚರಿತ್ರೆಯಿಂದ ಭಿನ್ನವಾದ, ಹಿಂದಣ ಜನಸಂಖ್ಯೆಯ ಸಂಖ್ಯಾತ್ಮಕ ಅಧ್ಯಯನ. ಜನಸಂಖ್ಯಾ ಬದಲಾವಣೆಗೆ ಹಾಗೂ ಅದರ ಕಾರಣಗಳ ಕುರಿತ ಐತಿಹಾಸಿಕ ಅಧ್ಯಯನ.

historical factor: ಐತಿಹಾಸಿಕ ಅಂಶ.

historical geographical method: ಚಾರಿತ್ರಿಕ ಭೌಗೋಳಿಕ ವಿಧಾನ. ನೋಡಿ: historic geographic method of folklore.

historical geography: ಚಾರಿತ್ರಿಕ ಭೂವಿವರಣಾ ಶಾಸ್ತ್ರ. ಪ್ರಾಚೀನಕಾಲದಿಂದ ಇಲ್ಲಿಯವರೆಗೆ ಬೇರೆ ಬೇರೆ ದೇಶಗಳ ವಿಕಾಸದ ಬಗ್ಗೆ ತಿಳಿಸುವ ಶಾಸ್ತ್ರ.

historical legends: ಚಾರಿತ್ರಿಕ ಐತಿಹ್ಯಗಳು.

historical materialism: ಐತಿಹಾಸಿಕ ಭೌತವಾದ. ಸಾಮಾಜಿಕ ಬೆಳವಣಿಗೆಯ ಸಾರ್ವತ್ರಿಕ ನಿಯಮಗಳನ್ನು ಅಧ್ಯಯನ ಮಾಡುವ ಶಾಸ್ತ್ರ. ಸಮಾಜದ ಬೆಳವಣಿಗೆಯು ನಿರ್ದಿಷ್ಟವಾದ ಐತಿಹಾಸಿಕ

ನಿಯಮಗಳಿಗನುಸಾರವಾಗಿ ಆಗುತ್ತದೆ ಮತ್ತು ನಿಜವಾದ ಇತಿಹಾಸ ನಿರ್ಮಾಪಕರು ದುಡಿಯುವ ಜನರಾಗಿರುತ್ತಾರೆ ಎನ್ನುವ ನಿಲುವು ಇಲ್ಲಿ ಪ್ರತಿಪಾದಿಸಲ್ಪಟ್ಟಿದೆ.

historical method: ಚಾರಿತ್ರಿಕ ವಿಧಾನ; ಐತಿಹಾಸಿಕ ವಿಧಾನ.

historical school: ಚಾರಿತ್ರಿಕ ಪಂಥ.

historical school of law: ಕಾನೂನಿನ ಐತಿಹಾಸಿಕ ಪಂಥ.

historical society: ಐತಿಹಾಸಿಕ ಸಮಾಜ.

historical sociology: ಐತಿಹಾಸಿಕ ಸಮಾಜಶಾಸ್ತ್ರ.

historical specificity: ಐತಿಹಾಸಿಕ ನಿರ್ದಿಷ್ಟತೆ.

historical theory of rights: ಹಕ್ಕುಗಳ ಐತಿಹಾಸಿಕ ಸಿದ್ಧಾಂತ.

historicism : ಐತಿಹಾಸಿಕತಾವಾದ.

historicity: ಐತಿಹಾಸಿಕತೆ.

historiography: ಇತಿಹಾಸ ಲೇಖನ.

history of civilization: ನಾಗರಿಕತೆಯ ಇತಿಹಾಸ.

hoarding: ಕೂಡಿಡುವುದು; ಬಚ್ಚಿಡುವುದು.

hoarding instinct: ಸಂಗ್ರಹಬುದ್ಧಿಯ ಮೂಲ ಪ್ರವೃತ್ತಿ.

holding company: ಸೂತ್ರಧಾರಿ ಕಂಪೆನಿ. ಒಂದು ಕಂಪೆನಿಯು ಇತರ ಒಂದು ಅಥವಾ ಹಲವಾರು ಕಂಪೆನಿಗಳನ್ನು ನಿಯಂತ್ರಿಸುತ್ತಿದ್ದರೆ, ಅದರ ಶೇರು ಬಂಡವಾಳದಲ್ಲಿ ಅರ್ಧಕ್ಕಿಂತ ಹೆಚ್ಚು ಭಾಗವನ್ನು ಹೊಂದಿದ್ದರೆ ಆ ಕಂಪೆನಿಯು ಸೂತ್ರಧಾರಿ ಕಂಪೆನಿಯೆಂದೆನಿಸುತ್ತದೆ.

holistic assessment: ಸಮಗ್ರ ಮೌಲ್ಯ ನಿರ್ಧಾರಣ.

holistic culture: ಸಮಗ್ರ ಸಂಸ್ಕೃತಿ; ಮಾನವ ಕುಲದ ಸಂಸ್ಕೃತಿ.

holistic meaning: ಸಮಗ್ರ ಅರ್ಥ.

holistic view: ಸಮಗ್ರ ದೃಷ್ಟಿ.

holism: ಸಮಗ್ರತಾವಾದ.

holy alliance: ಪವಿತ್ರ ಮೈತ್ರಿ; ಧಾರ್ಮಿಕ ಮೈತ್ರಿಕೂಟ.

Holy Mass: ದಿವ್ಯಪೂಜೆ. ಪ್ರಾರ್ಥನಾ ಗೃಹಗಳಲ್ಲಿ ನಡೆಸುವ ಪವಿತ್ರ ಸಾಮೂಹಿಕ ಪೂಜೆ.

home economics: ಗೃಹ ಅರ್ಥಶಾಸ್ತ್ರ.

home government: ಗೃಹ ಸರಕಾರ.

homelessness: ವಸತಿ ಹೀನತ್ವ. ಸಮರ್ಪಕ ವಸತಿ ವ್ಯವಸ್ಥೆ ಇಲ್ಲದಿರುವಂತಹ ಸ್ಥಿತಿ.

home market argument: ದೇಶೀಯ ಮಾರುಕಟ್ಟೆ ವಾದ. ರಕ್ಷಣಾ ನೀತಿಯನ್ನು ಅನುಷ್ಠಾನಕ್ಕೆ ತಂದು ಸರಕಾರವು ಆಮದನ್ನು ಕಡಿತಗೊಳಿಸಿದರೆ ದೇಶದೊಳಗೆ ದೇಶೀಯ ವಸ್ತುಗಳ ವ್ಯಾಪಾರಕ್ಕೆ ಪ್ರೋತ್ಸಾಹ ದೊರೆಯುತ್ತದೆಂಬ ವಾದ.

homeopathic magic: ನೋಡಿ: imitative magic.

homeostasis: ಸಹಜ ಸ್ಥಿತಿ. ಹೊರ ತೊಂದರೆಗಳಿಗೆ ಹೊಂದಿಕೊಂಡು ಮೊದಲಿನ ಸ್ಥಿರ ಸ್ಥಿತಿಸ್ಥಾಪಕತ್ವಕ್ಕೆ ಬರುವಂತಹ ಪ್ರಕ್ರಿಯೆ.

home sickness: ಮನೆ ನೆನಪಿನ ದುರ್ಬಲತೆ. ಮನೆಬಿಟ್ಟು ದೂರವಿದ್ದಾಗ ಮನೆಯವರ ನೆನಪಾಗಿ ಆಗಾಗ ಮನೆಗೆ ಹೋಗುವಿಕೆ.

ಹಾಸ್ಟೆಲುಗಳಲ್ಲಿರುವ ವಿದ್ಯಾರ್ಥಿಗಳಲ್ಲಿ ಇದು ಹೆಚ್ಚಾಗಿ ಕಂಡುಬರುತ್ತದೆ.

homicide: ನರಹತ್ಯೆ.

homiletic ballad: ಧರ್ಮಶ್ರವಣ ಲಾವಣಿ. ಕಥನ ಕವನದಲ್ಲಿ ತಾನು ಮಾಡಿದ ಪಾಪಗಳ ಬಗ್ಗೆ ಹೇಳುವುದರ ಮೂಲಕ ಕೇಳುಗರಿಗೆ ಎಚ್ಚರಿಕೆ ನೀಡುವುದು.

homing instinct: ಗೃಹಾಗಮನ ಮೂಲ ಪ್ರವೃತ್ತಿ. ನೋಡಿ: home sickness.

homing tendency: ನೋಡಿ: homing instinct.

hominid: ಹೋಮಿನಿಡ್. ಮಾನವನನ್ನು ಹೋಲುವ ಒಂದು ಪಳೆಯುಳಿಕೆ.

hominism: ವ್ಯಾವಹಾರಿಕ ವಾದ.

homo economicus: ಆರ್ಥಿಕ ಮನುಷ್ಯ; ಸ್ವಂತ ಆಸ್ತಿ ಮತ್ತು ಆರ್ಥಿಕತೆ ಇರುವಾತ.

homogamy: ಸಮೈಕ್ಯ ವಿವಾಹ. ಸಾಮಾಜಿಕ, ಮಾನಸಿಕ ಮತ್ತು ಶಾರೀರಿಕ ಗುಣಗಳಲ್ಲಿ ಸಮಾನತೆ ಇರುವವರ ನಡುವೆ ಜರುಗುವ ಮದುವೆ.

homogeneity: ಸ್ವಜಾತೀಯತೆ; ಏಕರೂಪತೆ.

homogeneous: ಸಮೈಕ್ಯ; ಏಕರೂಪದ.

homogeneous group: ಏಕರೂಪೀ ಸಮೂಹ.

homogeneous society: ಏಕರೂಪೀ ಸಮಾಜ.

homogenetic: ಒಂದೇ ತಳಿಯ; ಒಂದೇ ವಂಶದ.

homo heidel bergensis: ಹೈಡಲ್ ಬರ್ಗ್‌ನ್ ಮೂಲದ ಮಾನವ.

homology: ಅನುರೂಪತೆ; ಏಕಸಾಮ್ಯತೆ. ಪ್ರಾಣಿ ಜಗತ್ತಿನ ಸಂಬಂಧಗಳು ಮೂಲ ರಚನಾತ್ಮಕ ಹಾಗೂ ವಿಕಾಸಾತ್ಮಕ ಸಾದೃಶ್ಯಗಳ ಮೇಲೆ ಅವಲಂಬಿಸಿದೆಯೆಂಬ ವಾದ.

homo modjokertensis: ಜಾವಾ ಪ್ರಾಂತ್ಯದ ಮೂಲ ಮಾನವ.

homo mousterienses: ನೋಡಿ: homoneanderthalensis.

homo neanderthalensis: ನಿಯಾಂಡರ್‌ಥಾಲ್ ಪ್ರದೇಶದ ಮೂಲ ಮಾನವ. ನಿಯಾಂಡರ್ ಥಾಲ್ ಮನುಷ್ಯ ರಲ್ಲಿ ನಾಲ್ಕು ಪ್ರಭೇದಗಳಿವೆ. ರೊಡೇಷಿನ್, ಮೌಸ್ಟೇರಿಯನ್, ಈರಿಂಗ್‌ಡಾರ್ಪ್ ಮತ್ತು ಆಧುನಿಕ ಮಾನವಲಕ್ಷಣಗಳುಳ್ಳ ಮನುಷ್ಯ ಗುಂಪು.

homo rhodesiensis: ನೋಡಿ: homo neanderthalensis.

homo sapiens: ಇಂದಿನ ಮಾನವ. ಮಾನವ ಜೀವಿಯ ವಿಕಾಸದಲ್ಲಿ ತೀರಾ ಇತ್ತೀಚಿನ ರೂಪದಲ್ಲಿರುವ ಬೌದ್ಧಿಕ ಚಿಂತನೆಯ ಸಾಮರ್ಥ್ಯವುಳ್ಳ ಮನುಷ್ಯ.

homosexual neurosis: ಸಲಿಂಗ ಕಾಮ ವಿಕಾರ.

homosexuality: ಸಲಿಂಗ ರತಿ.

homo wadjakensis: ವಾಡ್‌ಜಾಕೇನಿಪಿಯನ್ ಮೂಲದ ಮಾನವ. ಎರಡು ತಲೆಬುರುಡೆಗಳಿಂದ ಪ್ರತಿನಿಧಿಸಲ್ಪಡುವ ಮನುಷ್ಯ ಪಳೆಯುಳಿಕೆ.

homozygosity: ಸಮಾನತೆಯುಳ್ಳ ಬೀಜಾಣುಸ್ಥಿತಿ.

horizontal amalgamation: ಸಮಾನಾಂತರ ಕ್ರೋಢೀಕರಣ.

horizontal combination: ಸಮಾನಾಂತರ ಸಂಯೋಗ.

horizontal excavation: ಸಮತಲ ಭೂ ಅಗೆತ; ವಿಸ್ತೃತ ಪುರಾತತ್ವ; ಉತ್ಖನನ.

horizontal group: ಸಮಾನಾಂತರ ಸಮೂಹ. ಏಕರೂಪದ ಸಾಮಾಜಿಕ ಸ್ತರದಿಂದ ಆದ ಸಾಮಾಜಿಕ ಗುಂಪು.

horizontal integration: ಸಮಾನಾಂತರ ಸಂಯೋಜನೆ.

horizontal mobility: ಸಮಾನಾಂತರ ಸಂಚರಣೆ.

horizontal occupation move ment: ಸಮಾನಾಂತರ ಔದ್ಯೋಗಿಕ ಗತಿ ಶೀಲತೆ. ವ್ಯಕ್ತಿಯ ವೃತ್ತಿಯಲ್ಲಿ ಬದಲಾವಣೆ ಆದರೂ ಆತನ ಆರ್ಥಿಕ ಮತ್ತು ಸಾಮಾಜಿಕ ಸ್ಥಾನಮಾನದಲ್ಲಿ ಬದಲಾವಣೆ ಆಗದಿರುವಿಕೆ.

horizontal social distance: ಸಮಾನಾಂತರ ಸಾಮಾಜಿಕ ಅಂತರ. ಸಮಾನಶ್ರೇಣಿಯ ಸಾಮಾಜಿಕ ಸ್ಥಾನಮಾನದ ವ್ಯಕ್ತಿಗಳ ಅಥವಾ ಗುಂಪುಗಳ ನಡುವಿನ ಸಾಮಾಜಿಕ ಅಂತರ.

horizontal social mobility: ಸಮಾನಾಂತರ ಸಾಮಾಜಿಕ ಚಲನೆ. ಒಬ್ಬ ವ್ಯಕ್ತಿಯು ಒಂದು ಉದ್ಯೋಗ ಅಥವಾ ಸ್ಥಾನದಿಂದ ವರ್ಗಾವಣೆ ಹೊಂದಿ ಇನ್ನೊಂದು ಉದ್ಯೋಗ ಅಥವಾ ಸ್ಥಾನ ದಲ್ಲಿ ಸೇರಿದಾಗ ಆತನ ಸಾಮಾಜಿಕ ಸ್ಥಾನಮಾನದಲ್ಲಿ ವ್ಯತ್ಯಾಸವಾಗದಿರುವ ಚಲನೆಯೇ ಸಮಾನಾಂತರ ಸಾಮಾಜಿಕ ಸಂಚರಣೆ.

horizontal solidarity: ಸಮಾನಾಂತರ ಐಕ್ಯಮತ.

horizontal unity: ಅಕ್ಷ ಐಕ್ಯತೆ.

horizontally extended family: ಸಮಾನಾಂತರ ವಿಸ್ತೃತ ಕುಟುಂಬ.

hormic energy: ಪ್ರವರ್ತಕ ಶಕ್ತಿ.

hospitality prostitution: ಆತಿಥ್ಯ ವೇಶ್ಯಾವಾಟಿಕೆ. ವ್ಯವಹಾರ ಕುದುರಿಸಲು ದೊಡ್ಡ ಕಂಪೆನಿಗಳು ಅಧಿಕಾರಿಗಳಿಗೆ ಆತಿಥ್ಯ ನೀಡುವ ನೆಪದಲ್ಲಿ ಒದಗಿಸುವ ವೇಶ್ಯಾವಾಟಿಕೆ.

hospitality wife: ನೋಡಿ: hos pitality prostitution.

household: ಮನೆ.

house of commons: ಸಾಮಾನ್ಯರ ಸಭೆ. ಇಂಗ್ಲೆಂಡಿನ ಶಾಸಕಾಂಗದ ಕೆಳಮನೆ.

house of lords: ಮಹನೀಯರ ಸಭೆ. ಇಂಗ್ಲೆಂಡ್‌ನ ಶಾಸಕಾಂಗದ ಮೇಲ್ಮನೆ.

house of people: ಲೋಕಸಭೆ. ಭಾರತದ ಸಂಸತ್ತಿನ ಕೆಳಮನೆ.

house of representatives: ಪ್ರತಿನಿಧಿ ಸದನ. ಅಮೇರಿಕಾ ಶಾಸಕಾಂಗದ ಕೆಳಮನೆ.

housing co-operative: ಗೃಹ ನಿರ್ಮಾಣ ಸಹಕಾರೀ ಸಂಸ್ಥೆ.

human abilities: ಮಾನವ ಶಕ್ತಿ ಸಾಮರ್ಥ್ಯಗಳು.

human capital: ಮಾನವ ಬಂಡವಾಳ; ಮಾನವ ಸಂಪತ್ತು. ೧. ಶ್ರಮಿಕ ವರ್ಗದಲ್ಲಿ (ಮಾನವರಲ್ಲಿ) ಅಡಕವಾಗಿರುವ ತಿಳುವಳಿಕೆ ಮತ್ತು ಬುದ್ಧಿ ಶಕ್ತಿ ಸಾಮರ್ಥ್ಯಗಳು. ೨. ಭವಿಷ್ಯದ ಲಾಭದ ದೃಷ್ಟಿಯಿಂದ ಮಗುವಿನ

ವಿದ್ಯಾಭ್ಯಾಸ ಹಾಗೂ ತರಬೇತಿಗಾಗಿ ಮಾಡುವ ವೆಚ್ಚ.

human counter part: ಮಾನವ ಪ್ರತಿರೂಪ.

human development index: ಮಾನವ ಅಭಿವೃದ್ಧಿ ಸೂಚ್ಯಂಕ.

human ecology: ಮಾನವ (ಜೀವ) ಪರಿಸರ ಶಾಸ್ತ್ರ. ಮಾನವ ಹಾಗೂ ಪರಿಸರದ ನಡುವಿನ ಸಂಬಂಧದ ಕುರಿತ ಅಧ್ಯಯನ.

human engineering: ಮಾನವ ತಂತ್ರ ಜ್ಞಾನ; ಮಾನವ ಯಂತ್ರಶಿಲ್ಪ; ಮಾನವಶಕ್ತಿ ವ್ಯವಸ್ಥಾ ವಿಜ್ಞಾನ.

human experience: ಮಾನವಾನು ಭವ; ಮನುಷ್ಯನ ಅನುಭವ.

human geography: ಮಾನವ ಭೂಗೋಳಶಾಸ್ತ್ರ. ಮಾನವ ಮತ್ತು ಭೂ ಪ್ರದೇಶದ ಪರಸ್ಪರ ಸಂಬಂಧದ ಕುರಿತ ಅಧ್ಯಯನ. ಭೌತಿಕ ಪರಿಸರ ಹಾಗೂ ಮಾನವ ಸಂಸ್ಕೃತಿಯ ನಡುವಿನ ಸಂಬಂಧದ ಕುರಿತ ಅಧ್ಯಯನ.

human intelligence: ಮಾನವ ಬುದ್ಧಿ ಸಾಮರ್ಥ್ಯ; ಮಾನವ ಬುದ್ಧಿಶಕ್ತಿ.

human investment: ಮಾನವ ಸಂಪನ್ಮೂಲ ಹೂಡಿಕೆ. ಮಾನವನ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ವಿದ್ಯಾಭ್ಯಾಸ, ಸಂಶೋಧನೆ, ಆರೋಗ್ಯ ಇತ್ಯಾದಿಗಳ ಮೇಲೆ ಸಮಾಜದಲ್ಲಿ ಹೂಡುವ ಬಂಡವಾಳ.

human mind: ಮಾನವ ಮನಸ್ಸು; ಮಾನವ ಮನ.

human motives: ಮಾನವನ ಅಂತಃ ಪ್ರೇರಣೆಗಳು.

human nature: ಮಾನವ ಸ್ವಭಾವ.

human autogamy: ಮಾನವದೇಹ ವಿಕಾಸಶಾಸ್ತ್ರ. ಮಾನವ ದೇಹ ರಚನೆಯ ಬೆಳವಣಿಗೆ ಮತ್ತು ಅಭಿವೃದ್ಧಿಯ ಅಧ್ಯಯನ. ಇದು ಜೀವರಚನೆಯ ಇತಿಹಾಸದಲ್ಲಿ ಆದ ಭೌತಿಕ ಬದಲಾವಣೆಗಳ ವಿವರಣೆ ನೀಡುತ್ತದೆ.

human paleontology: ಮಾನವ ಪಳೆಯುಳಿಕೆ ಅಧ್ಯಯನ ಶಾಸ್ತ್ರ. ಹಳೆಯ ಅಸ್ಥಿಪಂಜರಗಳ ಆಧಾರದ ಮೇಲೆ ಮಾನವನ ಪ್ರಾರಂಭಿಕ ಬೆಳವಣಿಗೆಯನ್ನು ಅಧ್ಯಯನ ಮಾಡುವ ವಿಜ್ಞಾನ.

human pathology: ಮಾನವ ರೋಗವಿಜ್ಞಾನ.

human psychology: ಮಾನವ ಮನಶ್ಶಾಸ್ತ್ರ; ಮಾನವ ಮನಸ್ಸು.

human relations area file: ಮಾನವ ಸಂಸ್ಕೃತಿಗಳ ವಿಶ್ವದಾಖಲೆ. ಪ್ರಪಂಚದಾದ್ಯಂತದ ಅನೇಕಾನೇಕ ಸಂಸ್ಕೃತಿಗಳ ಪ್ರಾದೇಶಿಕ ಸಮೀಕ್ಷೆ ನಡೆಸಿ ಪ್ರಕಟಿಸಿರುವ ದಾಖಲೆ.

human relation movement: ಮಾನವೀಯ ಸಂಬಂಧಗಳ ಚಳವಳಿ. ಪಾಶ್ಚಿಮಾತ್ಯ ಬಂಡವಾಳಶಾಹಿ ಸಮಾಜಗಳ ಮೇಲೆ ಆಳವಾಗಿ ಹಾಗೂ ಐತಿಹಾಸಿಕವಾಗಿ ಅಚ್ಚೊತ್ತಿದಂಥ ಸಾಮಾಜಿಕ ಚಳವಳಿ.

human resource: ಮಾನವ ಸಂಪನ್ಮೂಲ.

human resource development: ಮಾನವ ಸಂಪನ್ಮೂಲ ಅಭಿವೃದ್ಧಿ.

human rights: ಮಾನವ ಹಕ್ಕುಗಳು.

human sacrifice: ಮಾನವ ಬಲಿ. ಸಮುದಾಯದ ಹಿತದೃಷ್ಟಿಯಿಂದ ವ್ಯಕ್ತಿಗಳನ್ನು ಬಲಿಕೊಡುವ ಸಂಪ್ರದಾಯ.

human values: ಮಾನವೀಯ ಮೌಲ್ಯಗಳು.

humane conditions: ದಯಾಪರ ಸ್ಥಿತಿಗಳು; ಮಾನವೀಯ ಸ್ಥಿತಿಗಳು.

humanism: ಮಾನವತಾವಾದ.

humanist movement: ಮಾನವೀಯತಾ ಚಳುವಳಿ.

humanistic approach: ಮಾನವೀಯ ದೃಷ್ಟಿಕೋನ.

humanists: ಮಾನವತಾವಾದಿಗಳು.

humanitarian: ಮಾನವೀಯತೆಯ.

humanitarianism: ಮಾನವೀಯತಾವಾದ.

humanities: ಮಾನವಿಕ ಶಾಸ್ತ್ರಗಳು. ಮಾನವ ಜೀವನ, ವರ್ತನೆ ಹಾಗೂ ಅನುಭವಗಳನ್ನು ಅಭ್ಯಸಿಸುವ ವಿಜ್ಞಾನ. ಉದಾ: ತತ್ವಶಾಸ್ತ್ರ , ಧರ್ಮಶಾಸ್ತ್ರ, ಚರಿತ್ರೆ, ಸಾಹಿತ್ಯ, ಸಂಗೀತ, ಕಲೆ ಇತ್ಯಾದಿ.

humanity: ಮಾನವತೆ; ಮಾನವೀಯತೆ.

hunger pangs: ಹಸಿವು ಯಾತನೆಗಳು; ಹಸಿವು ಪೀಡೆಗಳು.

hunter-gatherer stage: ಶಬರ ಸಂಗ್ರಾಹಕ ಹಂತ. ಪ್ರಾಣಿಗಳ ಬೇಟೆ ಅಥವಾ ಮೀನು ಹಿಡಿಯುವುದು ಅಥವಾ ಕಾಡುಹಣ್ಣುಗಳನ್ನು ಸಂಗ್ರಹಿಸುವುದು ಮುಂತಾದ ಜೀವನೋಪಾಯ ಮಾರ್ಗಗಳನ್ನು ಹೊಂದಿರುವ ಜನರು. ಇವರು ಕೃಷಿ ಅಥವಾ ಪಶುಸಂಗೋಪನೆಯಲ್ಲಿ ತೊಡಗಿರುವುದಿಲ್ಲ.

hunting magic: ಬೇಟೆ ಮಾಟ. ಬೇಟೆಗೆ ಸಂಬಂಧಿಸಿದ ಮಾಟವಿದ್ಯೆ. ಬೇಟೆಗೆ ಹೊರಡುವ ಮೊದಲು ಅದನ್ನು ಯಶಸ್ವಿಗೊಳಿಸುವಂತೆ ಅಭೌತಿಕ ಶಕ್ತಿಗಳನ್ನು ಸಮಾಧಾನಪಡಿಸುವುದು.

hunting social system: ಬೇಟೆಗಾರ ಸಮಾಜ; ಬೇಟೆಯ ಸಾಮಾಜಿಕ ವ್ಯವಸ್ಥೆ.

hunting stage: ಬೇಟೆಯಾಡುವ ಹಂತ. ನಾಗರಿಕತೆಯ ಪೂರ್ವದ ಹಂತ.

hybridization: ಮಿಶ್ರ ತಳೀಕರಣ. ಮಿಶ್ರತಳಿ ಅಭಿವೃದ್ಧಿ ಮಾಡುವ ಪ್ರಕ್ರಿಯೆ.

hydrophobia: ಜಲಭಯ.

hylozoistic theory: ದ್ರವ್ಯಚೇತನ ವಾದ.

hyper activity: ಅತಿ ಚಟುವಟಿಕೆ.

hyper function: ಅತಿ ಕಾರ್ಯ; ಅತಿ ಕಾರ್ಯಕಲಾಪ.

hypergamy: ಅನುಲೋಮ ವಿವಾಹ; ಊರ್ಧ್ವ ವಿವಾಹ. ತನ್ನದಕ್ಕಿಂತ ಮೇಲಿನ ಸ್ಥಾನದ ಗುಂಪಿನಲ್ಲಿ ವಿವಾಹವಾಗುವುದು. ಕೆಳಜಾತಿಯ ಹುಡುಗಿ ಮೇಲ್ಜಾತಿಯ ಹುಡುಗನನ್ನು ಮದುವೆಯಾಗುವ ಪ್ರಾಚೀನ ಭಾರತದ ಅಂತರ್ಜಾತೀಯ ವಿವಾಹ ಪದ್ಧತಿ.

hyper-inflation: ನಾಗಾಲೋಟದ ಹಣದುಬ್ಬರ. ಹಣದುಬ್ಬರದ ದರದಲ್ಲಿ ತೀವ್ರ ಬೆಳವಣಿಗೆಯುಂಟಾಗಿ ಹಣಕ್ಕೆ ಪರ್ಯಾಯವಾಗಿ ಸಾಟಿ ವ್ಯವಹಾರ ಅಥವಾ ವಿದೇಶೀ ಕರೆನ್ಸಿಗಳ ಬಳಕೆಯಾಗುವಷ್ಟರ ಮಟ್ಟಿಗೆ ಹಣದ ಮೌಲ್ಯದಲ್ಲಿ ಕಡಿತವುಂಟಾಗುವ ಸ್ಥಿತಿ.

hyper-kinesis: ಅತಿವರ್ತನೆ; ವಿಪರೀತ ಗತಿಶೀಲತೆ. ತೀವ್ರ ಚಟುವಟಿಕೆ ಮತ್ತು ಚಡಪಡಿಕೆ. ಮಕ್ಕಳಲ್ಲಿ ಕಾಣಿಸುವ ವರ್ತನೆಯ ತೊಂದರೆ.

hypermnesia: ಅತಿಸ್ಮರಣೆ.

hypermorph: ಮಾನವನ ಅತ್ಯುನ್ನತ ರೂಪ. ಮಾನವನ ಬೆಳವಣಿಗೆಯ ಕ್ರಮ ದಲ್ಲಿ ಅತೀ ಹೆಚ್ಚಿನ ಸ್ಥಾನ ಹೊಂದಿದ ಪ್ರಕಾರ. ಉದಾ: ಮೆಡಿಟರೇನಿಯನ್ ಜನಾಂಗ.

hyper sensitivity: ಅತಿ ಸಂವೇದನೆ.

hyper tension: ಅತೀವ ಉದ್ವೇಗ.

hypnogogic: ಮಂಪರು ಸ್ಥಿತಿ.

hypnogogic image: ಸಮ್ಮೋಹ ನೀಯ ಬಿಂಬ.

hypnoanalysis: ಸಮ್ಮೋಹನಾ ವಿಶ್ಲೇಷಣೆ; ವಶ್ಯ ವಿಶ್ಲೇಷಣೆ. ಮನೋ ವಿಶ್ಲೇಷಣದ ಉಪಬಗೆಯಾಗಿ ಮನೋ ಚಿಕಿತ್ಸೆಯಲ್ಲಿ ವಶ್ಯಸುಪ್ತಿಯನ್ನು ಬಳಸುವುದು.

hypnology: ಸಮ್ಮೋಹನಾ ಶಾಸ್ತ್ರ.

hypnosis: ವಶ್ಯಸುಪ್ತಿ; ಸಮ್ಮೋಹನ ವಿಧಾನ. ಕೃತಕವಾಗಿ ಮಾಡಿಸಿದಂತಹ ಮೈಮರೆವಿನ ಸ್ಥಿತಿ. ಇದರ ಮುಖ್ಯ ಲಕ್ಷಣವೆಂದರೆ ಅನುಮೋದನೀಯತೆ. ಈ ಅವಸ್ಥೆಯಲ್ಲಿ ಕೆಲವು ಪರಿಮಿತಿಗಳಲ್ಲಿ ವ್ಯಕ್ತಿಯು ಚಿಕಿತ್ಸಕ ಹೇಳುವುದನ್ನೆಲ್ಲಾ ಕೇಳುತ್ತಾನೆ, ಯಾಂತ್ರಿಕವಾಗಿ ಅನುಸರಿಸುತ್ತಾನೆ.

hypnotherapy: ಸಮ್ಮೋಹನಾ ಚಿಕಿತ್ಸೆ.

hypnotic sleep: ಸಮ್ಮೋಹಿತ ನಿದ್ರೆ.

hypnotic suggestion: ಸಮ್ಮೋಹಿತ ಸೂಚನೆ.

hypnotisation: ಸಮ್ಮೋಹನೀಕರಣ.

hypnotism: ಸಮ್ಮೋಹನ ವಿದ್ಯೆ; ಸಮ್ಮೋಹನಿಕೆ.

hypoactivity: ಮಂದಕ್ರಿಯೆ; ಅಲ್ಪ ಕ್ರಿಯೆ.

hypochondria: ರೋಗಭೀತಿ ವಿಕೃತಿ; ಬೇನೆ ವಿಭ್ರಮಾ ವಿಕೃತಿ.

hypochondriac: ರೋಗ ವಿಭ್ರಾಂತ.

hypochondriasis: ರೋಗಾತಂಕ. ಆರೋಗ್ಯದ ಬಗೆಗೆ ಅತಿ ಕಾಳಜಿ ವಹಿಸುವ, ಯಾವಾಗಲೂ ಒಂದಲ್ಲ ಒಂದು ವಿಧದ ರೋಗವಿದೆಯೆಂಬ ಭಯದಿಂದ ವರ್ತಿಸುವ ಮನೋಬೇನೆ.

hypochondrical delusion: ರೋಗ ಭ್ರಾಂತಿ. ತನಗೇನೋ ವಿಚಿತ್ರ ವ್ಯಾಧಿ ತಗಲಿದೆಯೆಂಬ ಭ್ರಾಂತಿ.

hypocrisy: ಕಪಟಾಚರಣೆ; ಹೇಳುವುದೊಂದು ಮಾಡುವುದೊಂದು ಎಂಬ ಮೋಸದ ವರ್ತನೆ.

hypogamy: ಪ್ರತಿಲೋಮ ವಿವಾಹ. ಮೇಲ್ಜಾತಿಯ ಹುಡುಗಿ ಕೆಳಜಾತಿಯ ಹುಡುಗನನ್ನು ವಿವಾಹವಾಗುವಂತಹ ಪ್ರಾಚೀನ ಭಾರತದ ಅಂತರ್ಜಾತೀಯ ವಿವಾಹ.

hypomania: ಸೌಮ್ಯ ಉನ್ಮಾದ; ಅಲ್ಪೋನ್ಮಾದ.

hypomorph: ಮಾನವನ ಅನಭಿವೃದ್ಧ ರೂಪ. ಮಾನವ ಬೆಳವಣಿಗೆಯ ಕ್ರಮದಲ್ಲಿ ಅತೀಕಡಿಮೆ ಸ್ಥಾನ ಹೊಂದಿದ ಪ್ರಕಾರ. ಉದಾ: ನಿಗ್ರಿಟೋ ಜನಾಂಗ.

hypophonia: ಮಂದ ಸ್ಮರಣೆ; ಮಂದ ಶ್ರವಣ.

hypothecation: ಒತ್ತೆಇಡುವುದು. ಬ್ಯಾಂಕ್ ವ್ಯವಹಾರದಲ್ಲಿ ಸರಕಿನ ಅಥವಾ ಸೊತ್ತಿನ ಮೇಲೆ ಸಾಲಿಗನಿಗೆ ಸಾಲಗಾರ ನೀಡುವ ಹಕ್ಕಿನ ಒಪ್ಪಂದ.

hypothesis: ಅನುಮಾನ; ಆಧಾರ ಪ್ರಮೇಯ; ಪ್ರಾಕ್ ಕಲ್ಪನೆ; ಊಹನೆ. ಸಂಶೋಧನೆಯು ಆರಂಭಗೊಳ್ಳುವ ಹಂತದಲ್ಲಿ ಸಂಶೋಧಕನು ಎದುರಿಸುವ ಸಂಗತಿಗಳ ನಡುವಿನ ಸಂಬಂಧಗಳ ಊಹಾತ್ಮಕ ಸಮಸ್ಯೆ.

hypothesis of minimum cost: 'ಕನಿಷ್ಠ ವೆಚ್ಚ'ದ ಪ್ರಾಕ್ ಕಲ್ಪನೆ.

hypothesis of minimum equation: ಕನಿಷ್ಠ ಸಮೀಕರಣದ ಪ್ರಾಕ್‌ಕಲ್ಪನೆ.

hypothetical construct: ಪ್ರಾಕ್ ಕಲ್ಪನಾ ಸಂರಚನೆ.

hypothetical historical reconstruction: ಪ್ರಾಕ್‌ಕಾಲ್ಪನಿಕ ಐತಿಹಾಸಿಕ ಪುನರ್ರಚನೆ.

hysteria: ಹಿಸ್ಟೀರಿಯಾ; ಉನ್ಮಾದ ರೋಗ, ಇಂದ್ರಿಯ ಸುಪ್ತಿ, ಸೆಳವು ಮೊದಲಾದ ಲಕ್ಷಣಗಳುಳ್ಳ ನೀತಿಶಕ್ತಿಯನ್ನೂ ಬುದ್ಧಿಶಕ್ತಿಯನ್ನೂ ಕ್ಷೋಭೆಗೊಳಿಸುವ, ನರವ್ಯೂಹದ ಕಾರ್ಯಕ್ರಮವನ್ನು ಭಂಗ ಪಡಿಸುವ, ಮುಖ್ಯವಾಗಿ ಹೆಂಗಸರ ಒಂದು ಉನ್ಮಾದ ರೋಗ.

hysterical anesthesia: ಉನ್ಮಾದಾತ್ಮಕ ಸಂವೇದನಾ ಶೂನ್ಯತೆ.

hysterical condition: ಉನ್ಮಾದ ರೋಗಾವಸ್ಥೆ.

hysterical fits: ಉನ್ಮಾದ ಮೂರ್ಛೆ; ಉನ್ಮಾದ ಸೆಳವು.

hysterical mutism: ಉನ್ಮಾದ ಮೂಕತೆ.

hysterogenic: ಉನ್ಮಾದ ರೋಗ ಜನ್ಯ.

hysterogeny: ಉನ್ಮಾದ ರೋಗ ಕರಣ.

I

iatrogenesis: ವೈದ್ಯಮೂಲ ಆಪತ್ತು. ವೈದ್ಯರ ನಿರ್ಲಕ್ಷ್ಯದಿಂದಾಗಿ ಸಂಭವಿಸುವ ಗಂಡಾಂತರ.

idea: ಕಲ್ಪನೆ; ವಿಚಾರ; ಭಾವನೆ.

idea of justice: ನ್ಯಾಯದ ಕಲ್ಪನೆ.

idea of reference: ಉಲ್ಲೇಖದ ವಿಚಾರ.

idea of relation: ಸಂಬಂಧ ಭಾವನೆ.

ideal: ಆದರ್ಶ; ಧ್ಯೇಯ.

ideal progress: ಆದರ್ಶಯುತ ಪ್ರಗತಿ.

ideal self: ಆದರ್ಶಾತ್ಮ; ಮಾದರಿ ಸ್ವಂತಿಕೆ.

ideal society: ಆದರ್ಶ ಸಮಾಜ.

ideal state: ಆದರ್ಶ ರಾಜ್ಯ.

ideal theory: ಆದರ್ಶ ಸಿದ್ಧಾಂತ.

ideal type: ಆದರ್ಶ ಪ್ರರೂಪ; ಆದರ್ಶ ನಮೂನೆ.

idealism: ಆದರ್ಶವಾದ; ಧ್ಯೇಯವಾದ.

idealistic culture: ಆದರ್ಶ ಪ್ರಧಾನ ಸಂಸ್ಕೃತಿ.

idealistic theory: ಆದರ್ಶಪ್ರಧಾನ ಸಿದ್ಧಾಂತ.

idealistic theory of rights: ಹಕ್ಕುಗಳ ಆದರ್ಶ ಪ್ರಧಾನ ಸಿದ್ಧಾಂತ.

ideation: ಆದರ್ಶ ಕಲ್ಪನೆ.

ideational activity: ಆದರ್ಶಾತ್ಮಕ ಕ್ರಿಯೆ.

ideational attitude: ಆದರ್ಶಾತ್ಮಕ ಮನೋವೃತ್ತಿ.

ideational learning: ಆದರ್ಶಾತ್ಮಕ ಕಲಿಕೆ.

ideational mental development: ಆದರ್ಶಾತ್ಮಕ ಮನೋವಿಕಾಸ.

ideational culture: ಆದರ್ಶಾತ್ಮಕ ಸಂಸ್ಕೃತಿ.

ideational process: ಆದರ್ಶಾತ್ಮಕ ಪ್ರಕ್ರಿಯೆ.

identical: ಅನನ್ಯ; ಸಮರೂಪಿ.

identical twins: ಸಮರೂಪದ ಅವಳಿಗಳು; ಅನನ್ಯ ಅವಳಿಗಳು.

identificational contrast: ಅಭಿನಿರ್ಧಾರಿತ ವೈದೃಶ್ಯ.

identity: ಅನನ್ಯತೆ.

identity crisis: ಅನನ್ಯತೆಯ ತುಮುಲ; ತನ್ನತನದ ಸಂದಿಗ್ಧತೆ.

identity of ends: ಗುರಿಗಳ ಅನನ್ಯತೆ.

ideography: ಭಾವಲಿಪಿ; ರೇಖಾ ಸಂಕೇತಗಳ ಮೂಲಕ ಭಾವ ನಿರೂಪಣೆ ಮಾಡುವ ಶಾಸ್ತ್ರ.

ideological correlation: ತಾತ್ವಿಕ ಸಹಸಂಬಂಧ.

ideological outlook: ಆದರ್ಶವಾದಿ ದೃಷ್ಟಿಕೋನ.

ideological struggle: ವೈಚಾರಿಕ ಹೋರಾಟ. ಉದಾ: ಸಮಾಜವಾದ ಮತ್ತು ಬಂಡವಾಳವಾದದ ಬೆಂಬಲಿಗರ ನಡುವಿನ ತಾತ್ವಿಕ ವಿರೋಧ.

ideological warfare: ಆದರ್ಶಗಳ ಯುದ್ಧ; ಆದರ್ಶಗಳಿಗಾಗಿ ಯುದ್ಧ.

ideology: ಸೈದ್ಧಾಂತಿಕ ತತ್ತ್ವ; ಆದರ್ಶ ವಿಚಾರ. ಮಾನವನ ಭಾವನೆಗಳನ್ನು ಶಮನಗೊಳಿಸುವ ಅಥವಾ ಉದ್ರೇಕಿಸುವ ವಿಚಾರಗಳು.

ideomotor action: ವಿಚಾರಚಾಲಿತ ಕ್ರಿಯೆ.

ideo-psychological ethics: ಆದರ್ಶ ಮಾನಸಿಕ ನೀತಿ.

idiocy: ಅತಿಮೂಢತೆ; ಬುದ್ಧಿಮಾಂದ್ಯದ ಕನಿಷ್ಟ ಮಟ್ಟ; ಮಾನಸಿಕವಾಗಿ ಮೂರು ವರ್ಷಕ್ಕಿಂತ ಹೆಚ್ಚು ಬೆಳೆಯದ ಬುದ್ಧಿಮಟ್ಟ.

idiot: ಜಡಬುದ್ಧಿಯ ಮಂದಮತಿ.

idiot savants: ಜಡ ಪ್ರಾಜ್ಞರು. ವಿಶೇಷ ಪ್ರಾಜ್ಞತೆ ಇದ್ದೂ ಕ್ರಿಯಾಶೀಲರಲ್ಲದವರು.

idle balance: ಜಡ ಶಿಲ್ಕು. ಚಲಾವಣೆಯಲ್ಲಿಲ್ಲದ ಕೂಡಿಹಾಕಿದ ಸ್ಥಿರ ಹಣ.

idle money: ಉಪಯೋಗಿಸಿಲ್ಲದಿರುವ ಹಣ; ಯಾವುದರಲ್ಲೂ ವಿನಿಯೋಜಿತವಾಗಿರದ ಹಣ. ನೋಡಿ: inactive money.

idolatry: ಮೂರ್ತಿಪೂಜೆ; ವಿಗ್ರಹಾರಾಧನೆ.

ignoratio elenchi: ಅಸಂಗತ ನಿರ್ಣಯ; ಅಸಂಬದ್ಧವಾದ.

ijara: ಕಂದಾಯದ ಹೊಲ.

ilaqa: ವಿಂಗಡಿತ ಭೂಮಿ; ಭೂ ಕ್ಷೇತ್ರ.

ill will: ದ್ವೇಷ; ಕೆಟ್ಟ ಭಾವನೆ.

illegal: ಕಾನೂನು ಬಾಹಿರ.

illegal marriage: ಕಾನೂನುಬಾಹಿರ ವಿವಾಹ.

illegitimacy: ಕಾನೂನು ಬಾಹಿರತೆ.

illicit: ನಿಷಿದ್ಧ.

illiquidity: ದ್ರವಹೀನತೆ. ಆಸ್ತಿಗಳು ಸುಲಭವಾಗಿ ಮತ್ತು ಶೀಘ್ರವಾಗಿ ಹಣದ ರೂಪಕ್ಕೆ ಬದಲಾಗಲಾರದ ಸ್ಥಿತಿ.

illiteracy: ಅನಕ್ಷರತೆ.

illumined mind: ಜ್ಯೋತಿರ್ಮನ; ಜ್ಞಾನದಿಂದ ಬೆಳಗಿದ ಮನಸ್ಸು.

illusion: ಭ್ರಮೆ. ವಸ್ತುವನ್ನು ತಪ್ಪಾಗಿ ಗ್ರಹಿಸುವುದು. ದೋಷಪೂರ್ಣ ಇಂದ್ರಿಯ ಜ್ಞಾನ. ಉದಾ: ಹಗ್ಗವನ್ನು ಹಾವೆಂದು ಭಾವಿಸುವುದು.

illustrative method: ದೃಷ್ಟಾಂತ ವಿಧಾನ.

image: ಬಿಂಬ; ಪ್ರತಿಬಿಂಬ.

imageless thought: ಬಿಂಬರಹಿತ ವಿಚಾರ.

imagery: ಬಿಂಬಾವಳಿ.

imaginative child: ಕಾಲ್ಪನಿಕ ಮಗು.

imaginative construct: ಕಾಲ್ಪನಿಕ ನಿರ್ಮಿತಿ; ಕಾಲ್ಪನಿಕ ರಚನೆ.

imaginative play: ಕಾಲ್ಪನಿಕ ಕ್ರೀಡೆ.

imam: ಮುಸ್ಲಿಂ ಧರ್ಮಗುರು. ಮಸೀದಿಯಲ್ಲಿ ಪ್ರಾರ್ಥನೆಯ ನೇತೃತ್ವ ವಹಿಸುವ ವ್ಯಕ್ತಿ.

imbecile: ಅಲ್ಪಮತಿ; ಮಂಕುಬುದ್ಧಿ.

imitation: ಅನುಕರಣೆ. ಮಗುವಿನ ಸಮಾಜೀಕರಣದಲ್ಲಿ ಪ್ರಧಾನವಾದ ಪ್ರಕ್ರಿಯೆ.

imitation effect: ಅನುಕರಣೆಯ ಪರಿಣಾಮ.

imitative art: ಅನುಕರಣಾ ಕಲೆ; ಅನುಕೃತಿ ಕಲೆ.

imitative impulse: ಅನುಕರಣಾತ್ಮಕ ಆವೇಗ.

imitative magic: ಅನುಕರಣಾತ್ಮಕ ಮಾಟವಿದ್ಯೆ. ವ್ಯಕ್ತಿ ಅಥವಾ ವಸ್ತುವಿನ ಸಂಕೇತದ ಮೇಲೆ ಮಾಡಲಾಗುವ ಕ್ರಿಯೆ ಗಳು ನೈಜವಸ್ತುವಿನ ಮೇಲೆ ಪರಿಣಾಮ ಬೀರುತ್ತವೆಂದು ನಂಬಲಾಗುವ ಮಾಟ.

immaturation: ಅಪಕ್ವತೆ.

immature personality: ಅಪಕ್ವ ವ್ಯಕ್ತಿತ್ವ.

immediate cause: ಪ್ರತ್ಯಕ್ಷ ಕಾರಣ; ತತ್‌ಕ್ಷಣದ ಕಾರಣ.

immediate inference: ಪ್ರತ್ಯಕ್ಷ ಅನುಮಾನ.

immigration: ದೇಶೀಯ ವಲಸೆ; ಒಳ ವಲಸೆ.

immoral motive: ಅನೈತಿಕ ಅಂಶ ಪ್ರೇರಕ.

immovable property: ಸ್ಥಿರಾಸ್ತಿ; ಸ್ಥಿರ ಸೊತ್ತು.

immunity: ೧. ವಿನಾಯತಿ. ತೆರಿಗೆ, ದಂಡನೆ ಇತ್ಯಾದಿಗಳಿಂದ ವಿನಾಯಿತಿ ಪಡೆಯುವಿಕೆ. ೨. ನಿರೋಧ ಶಕ್ತಿ. ಕಾಯಿಲೆಗಳು ತಾಗದಂತೆ ರೋಗನಿರೋಧಕ ಶಕ್ತಿ ಹೊಂದಿರುವಿಕೆ.

immunology: ಸೋಂಕು ರಕ್ಷಾಶಾಸ್ತ್ರ. ಸೋಂಕು ತಟ್ಟದಿರುವುದರ ಕಾರಣಗಳನ್ನು ವಿಚಾರ ಮಾಡುವ ಶಾಸ್ತ್ರ.

impact of taxation: ತೆರಿಗೆಯ ಆಘಾತ; ತೆರಿಗೆಯ ಅಂತಿಮ ಹೊರೆ.

impartial: ನಿಷ್ಪಕ್ಷಪಾತಿಕ.

impeachment: ಮಹಾಭಿಯೋಗ; ಪದಚ್ಯುತಿಗೊಳಿಸುವಿಕೆ.

imperfect competition: ಅಪರಿಪೂರ್ಣ ಪೈಪೋಟಿ. ನೋಡಿ: monopolistic competition.

imperfect market: ಅಪರಿಪೂರ್ಣ ಪೈಪೋಟಿ ಇರುವ ಮಾರುಕಟ್ಟೆ.

imperial cadet corps: ಸಾಮ್ರಾಜ್ಯದ ರಕ್ಷಣಾ ಪಡೆ.

imperial conference: ಸಾಮ್ರಾಜ್ಯ ಸಮ್ಮೇಳನ.

imperial government: ಸಾಮ್ರಾಜ್ಯ ಶಾಹಿ ಸರಕಾರ.

imperial theory: ಸಾಮ್ರಾಜ್ಯಶಾಹಿ ಸಿದ್ಧಾಂತ.

imperialism: ಸಾಮ್ರಾಜ್ಯಶಾಹಿತ್ವ; ಸಾಮ್ರಾಜ್ಯಶಾಹಿ ವ್ಯವಸ್ಥೆ.

imperialist reformer: ಸಾಮ್ರಾಜ್ಯ ವಾದೀ ಸುಧಾರಕ.

impersonal: ಅವ್ಯೆಯಕ್ತಿಕ.

impersonal good: ಅವ್ಯೆಯಕ್ತಿಕ ಸರಕು. ಇತರರಿಗೆ ವರ್ಗಾಯಿಸಲು ಸಾಧ್ಯವಿರುವ ಸರಕು. ಉದಾ: ದೂರ ದರ್ಶನ, ಮೇಜು, ಕುರ್ಚಿ ಇತ್ಯಾದಿ ವಸ್ತುಗಳು.

impersonal relations: ಅವ್ಯೆಯಕ್ತಿಕ ಸಂಬಂಧಗಳು.

impersonalizatio: ಅವ್ಯೆಯಕ್ತೀಕರಣ. ನೋಡಿ: formal relation.

impersonation: ಪರವೇಷಧಾರಣೆ.

implementation: ಜಾರಿಗೊಳಿಸುವಿಕೆ.

implicit cost: ಅಡಕ ವೆಚ್ಚ. ಲೆಕ್ಕದಲ್ಲಿ ಸೇರದ ಮತ್ತು ನಗದು ರೂಪ ತಾಳದ ವೆಚ್ಚ.

implicit culture: ಅವ್ಯಕ್ತ ಸಂಸ್ಕೃತಿ; ಅಂತರ್ನಿಹಿತ ಸಂಸ್ಕೃತಿ.

implicit end: ಧ್ವನಿತ ಗುರಿ; ಪರೋಕ್ಷ ಗುರಿ; ವ್ಯಕ್ತವಾಗದ ಗುರಿ.

implicit faith: ಅಂತರ್ನಿಹಿತ ಶ್ರದ್ಧೆ.

implicit ideas: ಅಡಕ ವಿಚಾರಗಳು; ವ್ಯಕ್ತಪಡದ ವಿಚಾರಗಳು.

implicit law: ಧ್ವನಿತ ಕಾನೂನು.

implicit personality theory: ಅವ್ಯಕ್ತ ವ್ಯಕ್ತಿತ್ವ ಸಿದ್ಧಾಂತ; ನಿಹಿತ ವ್ಯಕ್ತಿತ್ವ ಸಿದ್ಧಾಂತ.

implicit recognition: ಅಸ್ಪಷ್ಟ ಅಭಿಜ್ಞಾನ; ಅಸ್ಪಷ್ಟ ಗುರುತಿಸುವಿಕೆ.

implicit value: ಅವ್ಯಕ್ತ ಮೌಲ್ಯ.

implied acceptance: ನಿಹಿತ ಒಪ್ಪಿಗೆ; ಅಡಕವಾಗಿರುವ ಒಪ್ಪಿಗೆ.

import: ಆಯಾತ; ಆಮದು.

import duty: ಆಮದು ಸುಂಕ; ಆಯಾತ ಸುಂಕ.

import-export gap: ಆಯಾತ-ನಿರ್ಯಾತ ಅಂತರ; ಆಮದು ರಫ್ತು ಅಂತರ.

import export regulation: ಆಮದು-ರಫ್ತು ನಿರ್ಬಂಧ.

import licence: ಆಮದು ಪರವಾನಿಗೆ; ಆಯಾತ ಪರವಾನಿಗೆ. ಯಾವುದೇ ಸರಕನ್ನು ಆಮದು ಮಾಡಿಕೊಳ್ಳಲು ಸರಕಾರ ನೀಡುವ ಪರವಾನಿಗೆ.

import monopoly: ಆಮದು ಏಕಸ್ವಾಮ್ಯ; ಆಯಾತ ಏಕಸ್ವಾಮ್ಯ.

import prohibition: ಆಮದು ನಿಷೇಧ; ಆಯಾತ ನಿಷೇಧ.

import quota: ಆಮದು ಕೋಟಾ; ಆಯಾತ ದೇಯಾಂಶ. ಒಂದು ನಿಶ್ಚಿತ ಅವಧಿಯಲ್ಲಿ ಸರ್ಕಾರದ ಆದೇಶದಂತೆ ಆಮದು ಮಾಡಿಕೊಳ್ಳಬಹುದಾದ ಯಾವುದೇ ಸರಕಿನ ಪ್ರಮಾಣ.

import restriction: ಆಮದು ನಿರ್ಬಂಧನೆ; ಆಯಾತ ನಿರ್ಬಂಧನೆ.

import saving industry: ಆಮದು ಉಳಿಸುವ ಉದ್ಯಮ.

import substitution: ಆಮದು ಪ್ರತಿನಿದಾನ. ಆಮದು ಮಾಡಿಕೊಳ್ಳಬಹುದಾದ ಸರಕಿಗೆ ಬದಲಾಗಿ ಸ್ವದೇಶದಲ್ಲೇ ಅಂಥದೇ ಸರಕನ್ನು ತಯಾರಿಸಿ ಬಳಸುವುದು.

import tariff: ಆಮದು ಕರ.

import tax: ಆಮದು ತೆರಿಗೆ.

importer: ಆಯಾತದಾರ; ಆಮದು ಗಾರ.

imposter: ವಂಚಕ.

impotence: ನಪುಂಸತ್ವ; ಷಂಡತ್ವ; ನಿರ್ವೀರ್ಯತೆ.

impotency: ಲೈಂಗಿಕ ದುರ್ಬಲತೆ. ಗಂಡಸರಲ್ಲಿ ಉಂಟಾಗುವ ಲೈಂಗಿಕ ಅಸಾಮರ್ಥ್ಯ.

imprescriptibility: ಅನಿರ್ಬಾಧಿತತೆ, ಕಾನೂನಿನ ಮೇರೆಗೆ ಯಾರೂ ಕಿತ್ತುಕೊಳ್ಳಲಾಗದ.

imprisonment: ಕಾರಾವಾಸ; ಬಂಧನ.

imprisonment for life: ಜೀವಾವಧಿ ಶಿಕ್ಷೆ.

impulse: ಆವೇಗ.

impulsive action: ಆವೇಗಪರ ಕ್ರಿಯೆ. ಐಚ್ಛಿಕ ನಿರ್ದೇಶನ ಅಥವಾ ಗುರಿಯ ಬಗ್ಗೆ ಪೂರ್ವಭಾವಿ ಕಲ್ಪನೆ ಇಲ್ಲದೆ ಮಾಡುವ ಕ್ರಿಯೆ.

impulsive obsession: ಆವೇಗದ ಹಂಬಲ; ಉತ್ಕಟವಾದ ಬಯಕೆ.

impulsive personality: ಆವೇಗದ ವ್ಯಕ್ತಿತ್ವ; ಆವೇಗಶೀಲ ವ್ಯಕ್ತಿತ್ವ.

impulsiveness: ದುಡುಕು ವರ್ತನೆ, ಪರಿಣಾಮವೇನಾದೀತೆಂದು ಯೋಚಿಸದೆ ಮನಸ್ಸಿಗೆ ತೋಚಿದಂತೆ ವರ್ತಿಸುವುದು.

inactive money: ನಿಷ್ಕ್ರಿಯ ಹಣ; ಕ್ರಿಯಾಶೀಲವಲ್ಲದ ಹಣ. ಯಾವುದೇ ಠೇವಣಿ ಅಥವಾ ಹೂಟೆಗಳಲ್ಲಿ, ಉತ್ಪಾದನಾ ಚಟುವಟಿಕೆಗಳಲ್ಲಿ ನಿಯೋಜಿತ ವಾಗಿರದ ಹಣ. ನೋಡಿ: idle money.

inadequate personality: ಅಪಕ್ವ ವ್ಯಕ್ತಿತ್ವ; ದುರ್ಬಲವ್ಯಕ್ತಿತ್ವ. ಸಾಮಾಜಿಕ ವಾಗಿ ಹೊಂದಿಕೊಳ್ಳಲಾರದ, ಅಸಹಜ ವಾದ ಭಾವುಕತೆ ಇರುವ ದುರ್ಬಲ ವ್ಯಕ್ತಿತ್ವ.

inadequate representation: ಅಸಮರ್ಪಕ ಪ್ರಾತಿನಿಧ್ಯ.

inalienable: ಪರಭಾರೆ ಮಾಡಲಾಗದ.

inamdar: ಇನಾಮುದಾರ. ರಾಜನಿಂದ ಅಥವಾ ಸರಕಾರದಿಂದ ಇನಾಮು (ಬಹುಮಾನ) ರೂಪದಲ್ಲಿ ಭೂಮಿ ಪಡೆದು ಭೂಮಾಲಿಕನಾದವ. ಇಂತಹ ಭೂಮಿಗೆ ತೆರಿಗೆ ಇದ್ದಿಲ್ಲ.

inanimate: ಜಡ; ಜೀವರಹಿತ.

inarticulate feeling: ಅವ್ಯಕ್ತ ಭಾವನೆ; ಹೇಳಲಾಗದ ಭಾವನೆ.

inborn tendency: ಜನ್ಮ ಜಾತ ಪ್ರವೃತ್ತಿ.

inbreeding: ಸಮೀಪ ತಳಿವೃದ್ಧಿ. ಕೇವಲ ಹತ್ತಿರ ಸಂಬಂಧಿಕರೊಳಗೇ ವಿವಾಹ ಸಂಬಂಧವನ್ನು ಬೆಳೆಸುತ್ತಾ ಹೋಗುವಿಕೆ.

inca: ಇಂಕಾ. ದಕ್ಷಿಣ ಅಮೇರಿಕನ್ ಇಂಡಿಯನ್ನರ ಒಂದು ಸಮುದಾಯ.

in-camera-hearing: ರಹಸ್ಯ ನ್ಯಾಯ ವಿಚಾರಣೆ.

in camera meeting: ಗುಪ್ತ ಸಭೆ. ಬಹು ಮುಖ್ಯವಾದ ವಿಷಯದ ಬಗ್ಗೆ ನಿರ್ಣಯ ತೆಗೆದುಕೊಳ್ಳಬೇಕಾಗಿರುವಾಗ ಗುಪ್ತವಾಗಿ ನಡೆಸುವ ಸಭೆ. ಈ ಸಭೆಯಲ್ಲಿ ನಡೆದ ಚರ್ಚೆ ಹಾಗೂ ತೆಗೆದುಕೊಂಡ ನಿರ್ಣಯಗಳ ವಿವರಗಳು ಸಾರ್ವಜನಿಕರಿಗೆ ತಿಳಿದಿರುವುದಿಲ್ಲ.

incapacity: ಅಸಮರ್ಥತೆ; ಅನರ್ಹತೆ.

incarnation: ಅವತಾರ.

incest: ಅಗಮ್ಯಗಮನ. ನೇರ ರಕ್ತ ಸಂಬಂಧಿಗಳಲ್ಲಿ ಹಾಗೂ ವಿವಾಹ ಸಂಬಂಧ ನಿಷೇಧಿತರ ಮಧ್ಯೆ ಲೈಂಗಿಕ ಸಂಪರ್ಕ. ಇದು ತಂದೆ-ಮಗಳು, ತಾಯಿ- ಮಗ, ನೇರ ಸೋದರ ಸಂಬಂಧಿಗಳಲ್ಲದೆ, ಮಲತಾಯಿ-ಮಕ್ಕಳು, ಮಲತಂದೆ-ಮಕ್ಕಳು ಹಾಗೂ ಮಲಸಹೋದರ-ಸಹೋದರಿಯರ ನಡುವಿನ ಲೈಂಗಿಕ ಸಂಬಂಧವನ್ನೂ ಒಳಗೊಳ್ಳುತ್ತದೆ.

incest barrier: ಅಗಮ್ಯ ಗಮನ ಪ್ರತಿಬಂಧಕ; ಸ್ವಗೋತ್ರ ರತಿ ಪ್ರತಿಬಂಧಕ.

incest taboo: ಅಗಮ್ಯಗಮನ ನಿಷೇಧ. ನೇರ ರಕ್ತಸಂಬಂಧಿಗಳ ಮಧ್ಯೆ ವಿವಾಹ ನಿಷೇಧ.

incestuous: ಅಗಮ್ಯ ಗಮನಾತ್ಮಕ. ನೋಡಿ : incest.

incidence of tax: ತೆರಿಗೆಯ ಅಂತಿಮ ನೆಲೆ; ತೆರಿಗೆಯ ಅಧಿಪಾತ. ತೆರಿಗೆಯ ಭಾರದ ಅಂತಿಮ ನೆಲೆ.

incidence of taxation: ತೆರಿಗೆಯ ಅಂತಿಮ ಹೊರೆ.

incidental correlation: ಪ್ರಾಸಂಗಿಕ ಸಹಸಂಬಂಧ.

incisive case study: ವ್ಯಕ್ತಿ ಸಂಗತಿಯ ಸೂಕ್ಷ್ಮ ಅಧ್ಯಯನ.

inclusive mind: ಸರ್ವಗ್ರಾಹಿ ಚೇತನ.

income consumption curve: ಆದಾಯ ಅನುಭೋಗದ ರೇಖೆ. ಆದಾಯ ಮತ್ತು ಅನುಭೋಗದ ನಡುವಿನ ಸಂಬಂಧವನ್ನು ತೋರಿಸುವ ರೇಖೆ.

income demand: ಆದಾಯ ಬೇಡಿಕೆ. ವ್ಯಕ್ತಿಯ ಆದಾಯವನ್ನವಲಂಬಿಸಿರುವ ಬೇಡಿಕೆ.

income effect: ಆದಾಯದ ಪರಿಣಾಮ. ವಸ್ತುವಿನ ಬೆಲೆಯಲ್ಲಿ ಬದಲಾವಣೆಯುಂಟಾಗುವುದರಿಂದ ವ್ಯಕ್ತಿಯ ಕೊಂಡುಕೊಳ್ಳುವ ಶಕ್ತಿಯಲ್ಲಿ ವ್ಯತ್ಯಾಸ ಉಂಟಾಗಿ, ವಸ್ತುವಿನ ಬೇಡಿಕೆಯ ಮೇಲೆ ಉಂಟಾಗುವ ಪರಿಣಾಮ.

income elasticity of demand: ಬೇಡಿಕೆಯ ಆದಾಯ ಸ್ಥಿತಿಸ್ಥಾಪಕತೆ. ವಸ್ತುಗಳ ಬೆಲೆಯು ಸ್ಥಿರವಾಗಿದ್ದು ವ್ಯಕ್ತಿಯ ಆದಾಯದ ಬದಲಾವಣೆಯ ಪರಿಣಾಮವಾಗಿ, ಸರಕುಗಳ ಬೇಡಿಕೆಯ ಪ್ರಮಾಣದಲ್ಲಿ ಉಂಟಾಗುವ ಬದಲಾವಣೆಯ ನಿಷ್ಪತ್ತಿ.

income method: ಆದಾಯ (ವರಮಾನ) ಪದ್ಧತಿ; ರಾಷ್ಟ್ರೀಯ ಆದಾಯದ ಗಣನೆಯ ಒಂದು ವಿಧಾನ.

income multiplier: ಆದಾಯ ಗುಣಕ. ಹೂಟೆಯು ಅಧಿಕವಾದಾಗ ಒಟ್ಟು ವರಮಾನವು ಎಷ್ಟು ಪಟ್ಟು ಅಧಿಕವಾಗುತ್ತದೆಂಬುದನ್ನು ವಿವರಿಸುವ ಗುಣಕ.

income tax: ಆದಾಯ ತೆರಿಗೆ; ವರಮಾನ ತೆರಿಗೆ.

income theory: ಆದಾಯ ಸಿದ್ಧಾಂತ. ಸಂದಾಯ ಶಿಲ್ಕಿನಲ್ಲಿನ ಅಸಮತೋಲನವನ್ನು ಸಾಪೇಕ್ಷ ಆದಾಯದ ಬದಲಾವಣೆಗಳ ಮೂಲಕ ವಿವರಿಸುವ ಸಿದ್ಧಾಂತ.

incompatibility: ಅಸಮಂಜಸತೆ.

incompatible thoughts: ಅಸಮಂ ಜಸ ಆಲೋಚನೆಗಳು.

inconsistent: ಅಸಂಗತ.

inconvertible money: ಅಪರಿವರ್ತನೀಯ ಹಣ. ಕರೆನ್ಸಿ ನೋಟುಗಳನ್ನು ಚಿನ್ನದ ರೂಪಕ್ಕೆ ಪರಿವರ್ತಿಸಲು ಅಥವಾ ಸಮಮೌಲ್ಯದ ಚಿನ್ನದೊಂದಿಗೆ ವಿನಿಮಯಿಸಲು ಸಾಧ್ಯವಿಲ್ಲದಿರುವಂತಹ ಕರೆನ್ಸಿ.

increasing cost condition: ಏರುತ್ತಿರುವ ವೆಚ್ಚ ಪರಿಸ್ಥಿತಿ.

increment: ವೇತನ ಬಡತಿ; ಏರಿಕೆ.

incremental concept: ಹೆಚ್ಚಳದ ಪರಿಕಲ್ಪನೆ. ವೆಚ್ಚ ಮತ್ತು ಆದಾಯಗಳ ಮೇಲೆ ಪರ್ಯಾಯ ನಿರ್ಧಾರಗಳ ಪರಿಣಾಮವನ್ನು ಅಂದಾಜಿಸುವುದನ್ನೊಳಗೊಂಡಿರುವ ಪರಿಭಾವನೆ. ಇದು ಬೆಲೆ ಉತ್ಪಾದನೆ, ಹೂಟೆ ಇತ್ಯಾದಿಗಳಲ್ಲಿನ ಬದಲಾವಣೆಯಿಂದ ಒಟ್ಟು ವೆಚ್ಚ ಮತ್ತು ಆದಾಯಗಳಿಗೆ ಮಹತ್ವ ನೀಡುತ್ತದೆ.

incremental cost: ಹೆಚ್ಚಳದ ವೆಚ್ಚ; ಅಧಿಕ್ಯತಾ ವೆಚ್ಚ. ಉದ್ಯಮದ ವ್ಯವಹಾರ ಚಟುವಟಿಕೆಗಳು ಬದಲಾಗುವುದರಿಂದ ಉಂಟಾಗುವ ಸೀಮಾಂತ ಉತ್ಪನ್ನದೊಡನೆ ಸಂಬಂಧ ಹೊಂದಿರುವ ಒಟ್ಟು ಅಧಿಕ ವೆಚ್ಚ.

incubus: ಭಯಂಕರ ಕನಸು; ಸ್ವಪ್ನ ಪಿಶಾಚಿ.

indebtedness: ಋಣಬಾಧೆ ; ಋಣಗ್ರಸ್ತತೆ. ನೋಡಿ : intergenerational bondage.

indecision: ಅನಿಶ್ಚಿತತೆ.

indefinite period: ಅನಿಶ್ಚಿತ ಅವಧಿ.

indemnity bond: ನಷ್ಟ ಪರಿಹಾರ ಪತ್ರ.

independence of the judiciary: ನ್ಯಾಯಾಂಗ ಸ್ವಾತಂತ್ರ್ಯ. ಸರಕಾರದ ಇತರ ಅಂಗಗಳಿಂದ ಸಂಪೂರ್ಣ ಸ್ವತಂತ್ರವಾಗಿ ರುವ ನ್ಯಾಯಾಂಗ. ನ್ಯಾಯಾಧೀಶರು ಪಕ್ಷಪಾತವಿಲ್ಲದೆ ಹಾಗೂ ನಿರ್ಭಯದಿಂದ ಕೆಲಸ ಮಾಡಲು ಇದು ಪೂರಕವಾಗುತ್ತದೆ.

independent and integrated judiciary: ಸ್ವತಂತ್ರ ಮತ್ತು ಏಕೀಕೃತ ನ್ಯಾಯಾಂಗ.

independent judiciary: ಸ್ವತಂತ್ರ ನ್ಯಾಯಾಂಗ.

independent variable: ಸ್ವತಂತ್ರ ಪರಿವರ್ತಕ (ಚಲಕ).

indeterminate equation: ಅನಿರ್ದಿಷ್ಟ ಸಮೀಕರಣ.

indeterminate sentence: ಅನಿಶ್ಚಿತ ಅವಧಿಯ ಶಿಕ್ಷೆ.

index analysis: ಸೂಚ್ಯಂಕ ವಿಶ್ಲೇಷಣೆ.

index differentiation: ಸೂಚ್ಯಂಕ ವಿಭೇದನ.

index number: ಸೂಚ್ಯಂಕ.

index of aging: ವಯೋ ಸೂಚ್ಯಂಕ.

Indian Administrative Service: ಭಾರತೀಯ ಆಡಳಿತ ಸೇವೆ.

Indian chronicals: ಭಾರತೀಯ ಐತಿಹಾಸಿಕ ವೃತ್ತಾಂತಗಳು.

Indian exchange market: ಭಾರತೀಯ ವಿನಿಮಯ ಮಾರುಕಟ್ಟೆ.

Indian historical records: ಭಾರತೀಯ ಐತಿಹಾಸಿಕ ದಾಖಲೆಗಳು.

Indian legislative assembly: ಭಾರತೀಯ ಶಾಸನ ಸಭೆ.

Indian National Army: ಭಾರತೀಯ ರಾಷ್ಟ್ರೀಯ ಸೇನೆ. ಸುಭಾಷ್‌ಚಂದ್ರ ಬೋಸರು ಸಂಘಟಿಸಿದ ಆಜಾದ್ ಹಿಂದ್ ಫೌಜಿನ ಆಂಗ್ಲ ಹೆಸರು. ಇದನ್ನು ಸಂಕ್ಷಿಪ್ತವಾಗಿ ಐ.ಎನ್.ಎ. ಎಂದು ಕರೆಯಲಾಗುತ್ತದೆ.

Indian National Congress: ಭಾರತೀಯ ರಾಷ್ಟ್ರೀಯ ಕಾಂಗ್ರೆಸ್.

Indian peace keeping force: ಭಾರತೀಯ ಶಾಂತಿಪಾಲನಾ ಪಡೆ. ಶ್ರೀಲಂಕಾದ ತಮಿಳು ಉಗ್ರಗಾಮಿಗಳ ಉಪಟಳ ಹತ್ತಿಕ್ಕಲು ರಾಜೀವ್-ಜಯವರ್ಧನೆ ಒಪ್ಪಂದದನ್ವಯ ಶ್ರೀಲಂಕಾಕ್ಕೆ ಕಳುಹಿಸಲಾದ ಸೇನಾಪಡೆ. ಇದು ೨೯ ಜುಲೈ ೧೯೮೭ರಿಂದ ೨೪ ಮಾರ್ಚ್ ೧೯೯೦ ರವರೆಗೆ ಶ್ರೀಲಂಕಾದಲ್ಲಿತ್ತು.

Indian penal code: ಭಾರತೀಯ ದಂಡ ಸಂಹಿತೆ; ಭಾರತದ ಶಿಕ್ಷಾ ಶಾಸನ.

Indian renaissance: ಭಾರತೀಯ ಪುನರುತ್ಥಾನ.

Indian socialism: ಭಾರತೀಯ ಸಮಾಜವಾದ.

Indian states: ಭಾರತೀಯ ಸಂಸ್ಥಾನಗಳು; ಭಾರತೀಯ ಪ್ರಾಂತ್ಯಗಳು.

Indianisation: ಭಾರತೀಕರಣ; ದೇಶೀಕರಣ.

indicative planning: ಸೂಚಿತ ಯೋಜನೆ.

indifference curve: ಔದಾಸೀನ್ಯ ರೇಖೆ; ಉಪೇಕ್ಷಿತ ರೇಖೆ. ಅನುಭೋಗಿಗೆ ತೃಪ್ತಿ ಕೊಡುವ ಎರಡು ವಸ್ತುಗಳ ವಿಭಿನ್ನ ಸಂಯೋಜನೆಗಳನ್ನು ಪ್ರತಿನಿಧಿಸುವ ರೇಖೆ.

indifference curve analysis: ಔದಾಸೀನ್ಯ ರೇಖಾ ವಿಶ್ಲೇಷಣೆ; ಉಪೇಕ್ಷಿತ ರೇಖಾ ವಿಶ್ಲೇಷಣೆ.

indifferent attitude: ಔದಾಸೀನ್ಯ ಮನೋವೃತ್ತಿ.

indigenous banker: ದೇಶೀಯ ಬ್ಯಾಂಕರ್.

indirect consumption: ನೇರವಲ್ಲದ ಅನುಭೋಗ; ಪರೋಕ್ಷ ಅನುಭೋಗ. ನಮಗೆ ತೃಪ್ತಿಕೊಡಬಲ್ಲ ಅನುಭೋಗಿ ಸರಕುಗಳನ್ನು ಉತ್ಪಾದಿಸುವ ಯಂತ್ರಗಳ ಪರೋಕ್ಷ ಅನುಭೋಗ. ಉದಾ: ಬಟ್ಟೆ ಹೊಲಿಯುವ ಯಂತ್ರ.

indirect co-operation: ಅಪ್ರತ್ಯಕ್ಷ ಸಹಕಾರ; ಪರೋಕ್ಷ ಸಹಕಾರ.

indirect cost: ಪರೋಕ್ಷ ವೆಚ್ಚ. ಯಾವುದೇ ಉತ್ಪಾದನಾ ಪ್ರಕ್ರಿಯೆಯಲ್ಲಿ ಸಂಭವಿಸುವ ಗುರುತಿಸಲಿಕ್ಕಾಗದ ವೆಚ್ಚ.

indirect dating: ಪರೋಕ್ಷ ಕಾಲ

ನಿರ್ಧಾರ. ಒಂದು ವಸ್ತುವಿಗೆ ಇತರ ವಸ್ತುಗಳೊಂದಿಗೆ ಇರುವ ಸಂಪರ್ಕದ ಅಧ್ಯಯನದ ಮೂಲಕ ಆ ವಸ್ತುವಿನ ಕಾಲಗಣನೆ ಮಾಡುವುದು.

indirect demand: ಪರೋಕ್ಷ ಬೇಡಿಕೆ.

indirect democracy: ಪರೋಕ್ಷ ಪ್ರಜಾಪ್ರಭುತ್ವ; ಪ್ರತಿನಿಧಿ ಪ್ರಜಾಪ್ರಭುತ್ವ. ಜನರು ನೇರವಾಗಿ ಸರಕಾರದ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸದೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸಿಕೊಡುವುದರ ಮೂಲಕ ಪರೋಕ್ಷವಾಗಿ ಸರಕಾರದ ಕಾರ್ಯಚಟುವಟಿಕೆಗಳ ಮೇಲೆ ಹಿಡಿತ ಇಟ್ಟುಕೊಳ್ಳುವುದು.

indirect election: ಪರೋಕ್ಷ ಚುನಾವಣೆ. ಅಪ್ರತ್ಯಕ್ಷ ಚುನಾವಣೆ. ಈ ಚುನಾವಣಾ ಪದ್ಧತಿಯಲ್ಲಿ ಜನರು ತಮ್ಮ ಪ್ರತಿನಿಧಿಗಳನ್ನು (ರಾಷ್ಟ್ರನಾಯಕರನ್ನು) ನೇರವಾಗಿ ಆಯ್ಕೆ ಮಾಡುವುದಿಲ್ಲ. ಈ ಪದ್ಧತಿಯಲ್ಲಿ ಮತದಾರರು ವಿಶೇಷ ಮತದಾರರ ವರ್ಗವನ್ನು ಆಯ್ಕೆ ಮಾಡುತ್ತಾರೆ. ಆ ನಂತರ ಈ ವಿಶೇಷ ಮತದಾರ ವರ್ಗದವರು ಆಡಳಿತ ನಡೆಸುವವರನ್ನು ಹಾಗೂ ಶಾಸಕಾಂಗಕ್ಕೆ ಪ್ರತಿನಿಧಿಗಳನ್ನು ಆಯ್ಕೆಮಾಡುತ್ತಾರೆ. ಉದಾ: ಅಮೇರಿಕಾ ಮತ್ತು ಭಾರತದ ಅಧ್ಯಕ್ಷೀಯ ಚುನಾವಣೆ.

indirect group effort: ಪರೋಕ್ಷ ಸಂಘಶ್ರಮ.

indirect individual effort: ಪರೋಕ್ಷ ವೈಯಕ್ತಿಕ ಶ್ರಮ.

indirect tax: ಪರೋಕ್ಷ ತೆರಿಗೆ. ಉದಾ: ಸರಕುಗಳ ಮೇಲಿನ ತೆರಿಗೆ.

indirect verification: ಪರೋಕ್ಷ ಪರಿಶೀಲನೆ.

individual: ವ್ಯಕ್ತಿ; ವ್ಯಷ್ಟಿ.

individual action: ವೈಯಕ್ತಿಕ ಕ್ರಿಯೆ.

individual adaptation: ನೋಡಿ: individual adjustment.

individual adjustment: ವ್ಯಕ್ತಿಗತ ಹೊಂದಾಣಿಕೆ.

individual ascendancy: ವೈಯಕ್ತಿಕ ಅಭ್ಯುದಯ.

individual attitude: ವೈಯಕ್ತಿಕ ಮನೋಧರ್ಮ.

individual authorship: ವ್ಯಷ್ಟಿ ಸ್ವಾಮ್ಯ.

individual behaviour: ವ್ಯಕ್ತಿಗತ ವರ್ತನೆ; ಖಾಸಗೀ ವರ್ತನೆ.

individual character: ವ್ಯಕ್ತಿಗತ ನಡತೆ.

individual consent: ವೈಯಕ್ತಿಕ ಒಪ್ಪಿಗೆ.

individual context: ವೈಯಕ್ತಿಕ ಸಂದರ್ಭ.

individual correlation: ವೈಯಕ್ತಿಕ ಸಹಸಂಬಂಧ.

individual crime: ವ್ಯಕ್ತಿಗತ ಅಪರಾಧ.

individual counselling: ವ್ಯಕ್ತಿಗತ ಮಾರ್ಗದರ್ಶನ; ವ್ಯಕ್ತಿಗತ ಉಪಬೋಧನೆ.

individual cult: ಆತ್ಮಾರಾಧನೆ. ಪ್ರತಿಯೊಬ್ಬ ವ್ಯಕ್ತಿಗೂ ಆತ್ಮಸಹಾಯಕ ಅಥವಾ ರಕ್ಷಕ ಆತ್ಮ ಇರುತ್ತದೆ ಎಂಬ ಪಂಥ.

individual differences: ವೈಯಕ್ತಿಕ ಭಿನ್ನತೆಗಳು.

individual disorganization: ವೈಯಕ್ತಿಕ ವಿಘಟನೆ.

individual family: ವಿಭಕ್ತ ಕುಟುಂಬ; ವೈಯಕ್ತಿಕ ಕುಟುಂಬ.

individual isolation: ವೈಯಕ್ತಿಕ ನಿಸ್ಸಂಗತ್ವ; ವ್ಯಕ್ತಿಗತ ಏಕಾಂತ.

individual liberty: ವ್ಯಕ್ತಿ ಸ್ವಾತಂತ್ರ್ಯ.

individual mobility: ವ್ಯಕ್ತಿಗತ ಚಲನೆ.

individual ownership: ವೈಯಕ್ತಿಕ ಒಡೆತನ.

individual proprietorship: ಏಕವ್ಯಕ್ತಿ ಯಜಮಾನ ಸಂಸ್ಥೆ.

individual psychograph: ವ್ಯಷ್ಟಿ ಮನೋಲೇಖ.

individual psychology: ವೈಯಕ್ತಿಕ ಮನಶ್ಶಾಸ್ತ್ರ; ವ್ಯಕ್ತಿ ಮನೋವಿಜ್ಞಾನ.

individual psychotherapy: ವೈಯಕ್ತಿಕ ಮನೋಚಿಕಿತ್ಸೆ.

individual reorganization: ವ್ಯಕ್ತಿಯ ಪುನರ್ ಸಂಘಟನೆ.

individual representation: ವೈಯಕ್ತಿಕ ಪ್ರಾತಿನಿಧ್ಯ; ಸ್ವತ: ಪ್ರತಿನಿಧಿ ಸುವಿಕೆ.

individual research: ವೈಯಕ್ತಿಕ ಸಂಶೋಧನೆ. ವೈಯಕ್ತಿಕ ಆಸಕ್ತಿಯಿಂದ ವ್ಯಕ್ತಿಯು ನಡೆಸುವ ಸಂಶೋಧನೆ.

individual responsibility: ವೈಯಕ್ತಿಕ ಹೊಣೆಗಾರಿಕೆ.

individaul rights: ವೈಯಕ್ತಿಕ ಹಕ್ಕುಗಳು.

individualism: ವ್ಯಕ್ತಿ ಸಿದ್ಧಾಂತ; ವ್ಯಕ್ತಿವಾದ. ವ್ಯಕ್ತಿಯ ಹಕ್ಕುಗಳು ನಿರುಪಾಧಿಕವೆಂದು ಭಾವಿಸುವ ಮತ್ತು ಸಮಾಜಕ್ಕೆದುರಾಗಿ ಅವನನ್ನು ಎತ್ತಿ ಹಿಡಿಯುವ ಒಂದು ಬಗೆಯ ಆಧುನಿಕ ದೃಷ್ಟಿಕೋನ. ಪರಮಾವಧಿ ವ್ಯಕ್ತಿ ಸ್ವಾತಂತ್ರ್ಯ ಮತ್ತು ಅಲ್ಪತಮವಾದ ರಾಜ್ಯ ನಿಯಂತ್ರಣ ಇರಬೇಕೆಂದು ವ್ಯಕ್ತಿವಾದವು ಪ್ರತಿಪಾದಿಸುತ್ತದೆ.

individualist: ವ್ಯಕ್ತಿವಾದಿ.

individualistic theory: ವ್ಯಕ್ತಿ ಸಿದ್ಧಾಂತ.

individuality: ವೈಯಕ್ತಿಕತೆ.

individualization: ವೈಯಕ್ತೀಕರಣ.

individualized demand: ವೈಯಕ್ತೀಕೃತ ಬೇಡಿಕೆ.

individualized leadership: ವ್ಯಕ್ತಿ ಪ್ರಧಾನ ನೇತೃತ್ವ.

individuation: ವ್ಯಕ್ತೀಕರಣ, ವ್ಯಷ್ಟೀಕರಣ.

indivisibility: ಅವಿಭಾಜ್ಯತೆ.

Indo-Aryan race: ಇಂಡೋ-ಆರ್ಯನ ಜನಾಂಗ. ಪೂರ್ವ ಪಂಜಾಬ್, ರಾಜಸ್ಥಾನ ಮತ್ತು ಕಾಶ್ಮೀರ ಕೊಳ್ಳದಲ್ಲಿ ವಾಸಿಸುವ ಜನರು.

Indo-Islamic art: ಹಿಂದೂ-ಇಸ್ಲಾಮಿಕ್ ಕಲೆ. ಹಿಂದೂ ಮುಸ್ಲಿಂ ಮಿಶ್ರ ಮಾದರಿಯ ವಾಸ್ತುಶಿಲ್ಪ ಮತ್ತು ಕಲೆ.

indoctrinated attitude : ಪ್ರೇರಿತ ಮನೋಭಾವ; ಬೋಧಿತ ಮನೋಭಾವ. ಇನ್ನೊಬ್ಬರಿಂದ ಪ್ರಭಾವಿತರಾಗಿ ಪಡೆದ ಮನೋಭಾವ.

indoctrination: ಬೋಧನೆ. ಯಾವುದೇ ವಿಚಾರವನ್ನು ತರ್ಕಾತೀತವಾಗಿ ಗ್ರಹಿಸುವಂತೆ ಬೋಧಿಸುವಿಕೆ.

induced abortion: ಪ್ರೇರಿತ ಗರ್ಭಪಾತ.

induced consumption: ಪ್ರೇರಿತ

ಅನುಭೋಗ. ವರಮಾನದ ಹೆಚ್ಚಳದಿಂದ ಅನುಭೋಗದಲ್ಲಿ ಉಂಟಾಗುವ ಹೆಚ್ಚಳ.

induced context: ಪ್ರೇರಿತ ಸಂದರ್ಭ.

induced emotion: ಪ್ರೇರಿತ ಸಂವೇಗ.

induced hallucination: ಪ್ರೇರಿತ ವಿಭ್ರಮೆ.

induced investment: ಪ್ರೇರಿತ ಹೂಡಿಕೆ (ಹೂಟಿ).

induction: ಅನುಗಮನ. ಒಂದು ಅಥವಾ ಕೆಲವೇ ಘಟಕಗಳ ಅಧ್ಯಯನ ನಡೆಸಿ ಅದರ ಫಲಿತಾಂಶವನ್ನು ಅಥವಾ ಸಿದ್ಧಾಂತವನ್ನು ಇಡೀ ವ್ಯವಸ್ಥೆಗೆ ಆರೋಪಿಸುವಿಕೆ.

inductive ability: ಅನುಗಮನಾತ್ಮಕ ಸಾಮರ್ಥ್ಯ.

inductive leap: ಅನುಗಮನ ನೆಗೆತ.

inductive method: ಅನುಗಮನ ವಿಧಾನ. ಅರ್ಥಶಾಸ್ತ್ರವನ್ನು ಐತಿಹಾಸಿಕ ಘಟನೆಗಳ ಆಧಾರದ ಮೇಲೆ ಅಧ್ಯಯನ ಮಾಡಿ ನಿಯಮಗಳನ್ನು ರೂಪಿಸುವುದು.

inductive psychology: ಅನುಗಮನಾತ್ಮಕ ಮನೋವಿಜ್ಞಾನ.

inductive statistics: ಅನುಗಮನ ಸಂಖ್ಯಾಶಾಸ್ತ್ರ.

indulgence: ತೊಡಗಿಕೊಳ್ಳುವಿಕೆ.

Indus valley civilization: ಸಿಂಧೂ ಕಣಿವೆಯ ನಾಗರಿಕತೆ.

industrial arbitration: ಕೈಗಾರಿಕಾ ಮಧ್ಯಸ್ಥಿಕೆ. ಐಚ್ಛಿಕ ಯಾ ಕಡ್ಡಾಯ ಮಧ್ಯಸ್ಥಿಕೆಯ ಮೂಲಕ ಕೈಗಾರಿಕಾ ಜಗಳಗಳ ಪರಿಹಾರ.

industrial area: ಕೈಗಾರಿಕಾ ಪ್ರದೇಶ.

industrial bank: ಕೈಗಾರಿಕಾ ಬ್ಯಾಂಕ್.

industrial capital: ಕೈಗಾರಿಕಾ ಬಂಡವಾಳ.

industrial capitalism: ಔದ್ಯಮಿಕ ಬಂಡವಾಳಶಾಹಿತ್ವ.

industrial city: ಕೈಗಾರಿಕಾ ಪಟ್ಟಣ; ಕೈಗಾರಿಕಾ ನಗರ; ಔದ್ಯಮಿಕ ನಗರ. ವಿವಿಧ ರೀತಿಯ ಕೈಗಾರಿಕೆಗಳು ಕೇಂದ್ರೀಕೃತವಾಗಿರುವ ಪಟ್ಟಣ.

industrial conflict: ಕೈಗಾರಿಕಾ ಸಂಘರ್ಷ.

industrial democracy: ಕೈಗಾರಿಕಾ ಪ್ರಜಾಪ್ರಭುತ್ವ.

industrial development: ಕೈಗಾರಿಕಾ ಅಭಿವೃದ್ಧಿ.

industrial dispute: ಕೈಗಾರಿಕಾ ವಿವಾದ. ಕೈಗಾರಿಕಾ ರಂಗದಲ್ಲಿ ಮಾಲಿಕರ ಮತ್ತು ಕಾರ್ಮಿಕರ ನಡುವೆ ನಡೆಯುವ ವಿವಿಧ ರೀತಿಯ ವಿವಾದಗಳು.

industrial estate: ಕೈಗಾರಿಕಾ ನಿವೇಶನ.

industrial evolution: ಕೈಗಾರಿಕಾ ವಿಕಾಸ; ಔದ್ಯಮಿಕ ವಿಕಸನ.

industrial fatigue: ಕೈಗಾರಿಕಾ ದಣಿವು; ಔದ್ಯಮಿಕ ಆಯಾಸ.

industrial finance: ಕೈಗಾರಿಕಾ ಹಣಕಾಸು.

industrial fluctuation: ಕೈಗಾರಿಕಾ ಏರಿಳಿತ.

industrial group: ಔದ್ಯಮಿಕ ಸಮೂಹ.

industrial injury: ಕೈಗಾರಿಕಾ ಅಪಘಾತ.

industrial licensing system: ಕೈಗಾರಿಕಾ ಪರವಾನಗಿ ವ್ಯವಸ್ಥೆ.

industrial organization: ಕೈಗಾರಿಕಾ ಸಂಘಟನೆ.

industrial policy: ಕೈಗಾರಿಕಾ ನೀತಿ.

industrial psychology: ಕೈಗಾರಿಕಾ ಮನಶ್ಶಾಸ್ತ್ರ; ಔದ್ಯಮಿಕ ಮನಶ್ಶಾಸ್ತ್ರ.

industrial recreation: ಔದ್ಯಮಿಕ ಮನರಂಜನೆ.

industrial relation: ಔದ್ಯಮಿಕ ಸಂಬಂಧ.

industrial reserve army: ಕೈಗಾರಿಕಾ ಮೀಸಲು ಪಡೆ.

industrial resource: ಕೈಗಾರಿಕಾ ಸಂಪನ್ಮೂಲ.

industrial revolution: ಕೈಗಾರಿಕಾ ಕ್ರಾಂತಿ.

industrial sociology: ಔದ್ಯಮಿಕ ಸಮಾಜಶಾಸ್ತ್ರ ; ಕೈಗಾರಿಕಾ ಸಮಾಜಶಾಸ್ತ್ರ.

industrial social system: ಔದ್ಯಮಿಕ ಸಾಮಾಜಿಕ ವ್ಯವಸ್ಥೆ.

industrial society: ಕೈಗಾರಿಕಾ ಸಮಾಜ.

industrial stage: ಕೈಗಾರಿಕಾ ಹಂತ; ಔದ್ಯಮಿಕ ಹಂತ.

industrial training: ಔದ್ಯಮಿಕ ತರಬೇತಿ; ಕೈಗಾರಿಕಾ ತರಬೇತಿ.

industrial tribunal: ಕೈಗಾರಿಕಾ ಟ್ರಿಬ್ಯುನಲ್; ಕೈಗಾರಿಕಾ ಪಂಚಾಯಿತಿ.

industrial unemployment: ಕೈಗಾರಿಕಾ ನಿರುದ್ಯೋಗ; ಔದ್ಯಮಿಕ ನಿರು ದ್ಯೋಗ.

industrial union: ಕೈಗಾರಿಕಾ ಸಂಘಟನೆ.

industrial unrest: ಔದ್ಯಮಿಕ ಅಶಾಂತಿ.

industrial village: ಕೈಗಾರಿಕಾ ಗ್ರಾಮ. ವ್ಯವಸಾಯ ಪ್ರದೇಶಗಳಿಂದ ಸುತ್ತುವರಿದಿರುವ ಕೈಗಾರಿಕಾ ಕೇಂದ್ರಗಳಲ್ಲಿ ಗ್ರಾಮೀಣ ನಿವಾಸಿಗಳು ಕಾರ್ಮಿಕ ವೃತ್ತಿಯನ್ನನುಸರಿಸುವ ಗ್ರಾಮ.

industrialism: ಕೈಗಾರಿಕತ್ವ.

industrialization: ಕೈಗಾರಿಕೀಕರಣ.

industry: ಕೈಗಾರಿಕೆ; ಉದ್ದಿಮೆ. ಸಾಮಾಗ್ರಿಗಳ ಉತ್ಪಾದನಾ ಘಟಕ.

ineffability: ಅನಿರ್ವಚನೀಯತೆ; ವರ್ಣನಾತೀತತೆ.

inelasticity: ಸ್ಥಿತಿಸ್ಥಾಪಕರಹಿತತೆ.

inequality of income and wealth: ಆದಾಯ ಮತ್ತು ಸಂಪತ್ತಿನ ಅಸಮಾನತೆ.

inexplicit cost: ಅವ್ಯಕ್ತ ವೆಚ್ಚ. ನೋಡಿ: indirect cost.

inexpressive temperament: ಅನಭಿವ್ಯಕ್ತ ಚಿತ್ತ ಪ್ರಕೃತಿ.

infallibility decree: ಧಾರ್ಮಿಕ ಪರಮಾಧಿಕಾರ ಶಾಸನ. ಷೇಕ್ ಮುಬಾರಕನು ಅಕ್ಬರನ ಆಜ್ಞೆಯ ಪ್ರಕಾರ ಧಾರ್ಮಿಕ ಪರಮಾಧಿಕಾರ ಶಾಸನವನ್ನು ಸಿದ್ಧಪಡಿಸಿ ಅದರ ಮೂಲಕ ಎಲ್ಲಾ ಧಾರ್ಮಿಕ ವಿಷಯಗಳಲ್ಲಿ ಅಕ್ಬರನಿಗೆ ಪರಮಾಧಿಕಾರ ಕೊಡಲ್ಪಟ್ಟಿದೆಯೆಂದು ಘೋಷಿಸಿದನು.

infallible: ತಪ್ಪದ; ಖಂಡಿತವಾದ.

infant behaviour: ಶಿಶು ವರ್ತನೆ.

infant death rate: ಶಿಶು ಮರಣದರ. ಪ್ರತಿ ಒಂದು ಸಾವಿರಕ್ಕೆ ಒಂದು ವರ್ಷದೊಳಗಿನ ಮಕ್ಕಳ ವಾರ್ಷಿಕ ಮರಣದರ.

infant exposure: ಶಿಶುವಿನ ತೋರಿಡುವಿಕೆ. ಎಳೆಯ ಶಿಶುಗಳನ್ನು ಬಳಕೆಯಲ್ಲಿಲ್ಲದ ಎತ್ತರ ಪ್ರದೇಶಗಳಲ್ಲಿ ಮಳೆ, ಬಿಸಿಲು, ಗಾಳಿಗೆ ಒಡ್ಡುವುದರ ಮೂಲಕ ಕೊಲ್ಲುವುದು ಅಥವಾ ಶಿಶುಗಳ ಶವಗಳನ್ನು ಅಂತಹ ಸ್ಥಳಗಳಲ್ಲಿ ಎಸೆದು ಮಾಂಸಾಹಾರಿ ಪ್ರಾಣಿ ಪಕ್ಷಿಗಳಿಗೆ ಸಿಕ್ಕುವಂತೆ ಮಾಡುವುದು.

infant industry: ಶೈಶವಾವಸ್ಥೆಯ ಕೈಗಾರಿಕೆ.

infant mortality: ಶಿಶು ಮರಣ.

infant psychology: ಶಿಶು ಮನೋವಿಜ್ಞಾನ.

infanticide: ಶಿಶುಹತ್ಯೆ. ಶಿಶುಗಳನ್ನು ಜನನದ ಸಮಯದಲ್ಲಿ ಕೊಲ್ಲುವ ಪದ್ಧತಿ. ಪೊಲಿನೇಶಿಯನ್ನರಲ್ಲಿ ಈಗಲೂ ಈ ಪದ್ಧತಿ ಪ್ರಚಲಿತವಿದೆಯೆನ್ನಲಾಗಿದೆ. ನೋಡಿ : female infanticide.

infantile amnesia: ಶಿಶುಗಳ ವಿಸ್ಮರಣಾ ರೋಗ.

infantile attachment: ಶಿಶುಸದೃಶ ಅನುರಕ್ತಿ.

infantile dementia: ಬಾಲ್ಯ ಮನೋಹ್ರಾಸ. ಬಾಲ್ಯದಲ್ಲಿ ಉಂಟಾಗುವ ಮನೋಹ್ರಾಸ.

infantile reaction: ಶಿಶು ಸದೃಶ ಪ್ರತಿಕ್ರಿಯೆ.

infantile sexuality: ಶೈಶವ ಲೈಂಗಿಕತೆ; ಶೈಶವ ಕಾಮ.

infantilism: ಶಿಶುತ್ವ; ಶಿಶುಪ್ರಾಯತೆ. ಮನಸ್ಸಿನ ಅಥವಾ ಶರೀರದ ಬೆಳವಣಿಗೆ ಸಾಕಷ್ಟು ಇಲ್ಲದಿರುವುದು.

infantilization: ಶಿಶುಶರೀರ ಸಂಕೋಚನ. ಶೈಶವಾವಸ್ಥೆಯಲ್ಲಿ ಮಗುವಿನ ಅವಯವಗಳ ಬೆಳವಣಿಗೆಯ ಸ್ಥಗಿತತೆ.

inference: ಊಹನೆ; ತರ್ಕಿಸುವಿಕೆ.

inferiority complex: ಕೀಳರಿಮೆ. ನೋಡಿ: inferiority feeling.

inferiority feeling: ಕೀಳರಿಮೆಯ ಮನೋಭಾವ. ಇದು ಒಂದು ತರಹದ ಆತ್ಮ ವಿಮರ್ಶೆ. ಸಾಮಾನ್ಯವಾಗಿ ಇದರಲ್ಲಿ ಸಮಾಜ ತನ್ನನ್ನು ತಿರಸ್ಕರಿಸಬಹುದೆಂದು ಭಯ ಅಡಕವಾಗಿರುತ್ತದೆ. ಅನೇಕ ಬಾರಿ ಹೆಚ್ಚು ಕಷ್ಟಪಟ್ಟು ವಿಧವಿಧವಾಗಿ ಪ್ರಯತ್ನ ಪಟ್ಟರೂ ಉದ್ದೇಶ ಸಫಲವಾಗದೇ ಹೋದಾಗ ಮತ್ತು ಬದಲೀ ಉದ್ದೇಶಗಳು ದೊರಕದೇ ಹೋದಾಗ ಅಥವಾ ಒಪ್ಪಿಗೆಯಾಗದೇ ಹೋದಾಗ ಅನೇಕರು ತಾವು ಅಸಹಾಯಕರು, ಅಸಮರ್ಥರು ಎಂಬ ಭಾವನೆಯನ್ನು ಬೆಳೆಸಿಕೊಳ್ಳುತ್ತಾರೆ.

infidelity: ದಾಂಪತ್ಯ ದ್ರೋಹ. ಗಂಡನು ಹೆಂಡತಿಗೆ ಅಥವಾ ಹೆಂಡತಿಯು ಗಂಡನಿಗೆ ತಿಳಿಯದಂತೆ ಅನ್ಯರೊಡನೆ ಲೈಂಗಿಕ ಸಂಪರ್ಕ ಏರಿಸಿಕೊಳ್ಳುವಿಕೆ.

infinite elasticity: ಅನಂತ ಸ್ಥಿತಿ ಸ್ಥಾಪಕತ್ವ.

infinite population: ಅಪರಿಮಿತ ಜನಸಂಖ್ಯೆ; ಅಧಿಕ ಜನಸಂಖ್ಯೆ.

infinite power of thought: ಜ್ಞಾನದ ಅನಂತ ಶಕ್ತಿ.

inflammatory speech: ಉದ್ರೇಕಕರ ಭಾಷಣ.

inflation: ಅತಿ ಪ್ರಸರಣ; ಹಣದುಬ್ಬರ.

ಸರಕುಗಳ ಬೆಲೆಗಳು ಅವಿರತವಾಗಿ ಏರುತ್ತಿರುವ ಸನ್ನಿವೇಶ.

inflation accounting: ಹಣದುಬ್ಬರ ಗಣತಿ.

inflation financing: ಹಣದುಬ್ಬರ ಧನಪೂರೈಕೆ.

inflationary bias: ಹಣದುಬ್ಬರ ಪ್ರವೃತ್ತಿ; ಅತಿಪ್ರಸರಣದೊಲವು.

inflationary gap: ಹಣದುಬ್ಬರ ಅಂತರ. ಪೂರ್ಣ ಉದ್ಯೋಗದ ಸ್ಥಿತಿಯಲ್ಲಿ ಒಂದು ಅರ್ಥವ್ಯವಸ್ಥೆಯು ಉತ್ಪಾದಿಸಬಹುದಾದ ಸರಕು ಹಾಗೂ ಸೇವೆಗಳಿಗಿಂತ ಅವುಗಳ ಬೇಡಿಕೆಯು ಹೆಚ್ಚಿರುವ ಸ್ಥಿತಿ.

inflexible conservatism: ದೃಢ ಸಂಪ್ರದಾಯತ್ವ. ಯಾವುದೇ ಹೊಂದಾ ಣಿಕೆಗೆ ಸಿದ್ಧನಿಲ್ಲದೆ ಪೂರ್ವ ಸಂಪ್ರದಾಯಗಳನ್ನು ಪಾಲಿಸಿಕೊಂಡು ಬರುವಿಕೆ.

informal control: ಅನೌಪಚಾರಿಕ ನಿಯಂತ್ರಣ.

informal co-optation: ಅನೌಪಚಾರಿಕ ಸಹಆಯ್ಕೆ. ಹೊಸ ನಾಯಕರು ಔಪಚಾರಿಕ ಗುರುತಿಸುವಿಕೆ ಇಲ್ಲದಿದ್ದಾಗ್ಯೂ ಸಂಘಟನೆಯ ಅಧಿಕಾರವನ್ನು ಹಂಚಿಕೊಳ್ಳುವುದು.

informal economy: ಅನೌಪಚಾರಿಕ ಆರ್ಥಿಕತೆ. ಸಂಪ್ರದಾಯಬದ್ಧ ಸಂಬಳದ ಕೆಲಸದ ಹೊರತಾಗಿ ನಡೆಸುವ ಆರ್ಥಿಕ ವ್ಯವಹಾರಗಳು.

informal education: ಅನೌಪಚಾರಿಕ ಶಿಕ್ಷಣ. ಆಧುನಿಕ ಶಾಲೆಗಳ ಹೊರಗೆ ಗುರುಕುಲ, ಮನೆ, ಸಮುದಾಯ ಹಾಗೂ ಸಮವಯಸ್ಕರ ಗುಂಪುಗಳಲ್ಲಿ ಪಡೆಯುವ ಶಿಕ್ಷಣ.

informal group: ಅನೌಪಚಾರಿಕ ಸಮೂಹ. ಉದಾ: ಕುಟುಂಬ; ಸಮವಯಸ್ಕರ ಗುಂಪು.

informal mean: ಅನೌಪಚಾರಿಕ ಸಾಧನ.

informal mehtod: ಅನೌಪಚಾರಿಕ ವಿಧಾನ.

informal organization: ಅನೌಪಚಾರಿಕ ಸಂಘಟನೆ; ಉದಾ: ಕುಟುಂಬ, ಗ್ರಾಮ, ಸಮವಯಸ್ಕರ ಬಳಗ ಇತ್ಯಾದಿ.

informal rank: ಅನೌಪಚಾರಿಕ ಶ್ರೇಣಿ.

informal rationing: ಅನೌಪಚಾರಿಕ ಪಡಿತರ ಪದ್ಧತಿ.

informal relation: ಅನೌಪಚಾರಿಕ ಸಂಬಂಧ.

informal sanction: ಅನೌಪಚಾರಿಕ ನಿರ್ಬಂಧ; ಅನೌಪಚಾರಿಕ ಅನುಮತಿ.

informal status: ಅನೌಪಚಾರಿಕ ಸ್ಥಾನಮಾನ.

informal structure: ಅನೌಪಚಾರಿಕ ರಚನೆ.

informant: ಮಾಹಿತಿಕಾರ; ವಕ್ತೃ.

information exchange: ಮಾಹಿತಿ ವಿನಿಮಯ.

information society: ಮಾಹಿತಿ ಸಮಾಜ.

information technology: ಮಾಹಿತಿ ತಂತ್ರಜ್ಞಾನ. ವಿಷಯಗಳನ್ನು ಒದಗಿಸುವ ತಂತ್ರಜ್ಞಾನ.

information theory: ಮಾಹಿತಿ ಸಿದ್ಧಾಂತ.

infrastructure: ಅಂತಾರಚನೆ. ಕಾರ್ಯ

ನಿರ್ವಹಣೆಗೆ ಅಗತ್ಯವಿರುವ ವ್ಯವಸ್ಥೆ. ಇದರಲ್ಲಿ ಕಟ್ಟಡ, ಪೀಠೋಪಕರಣ ಹಾಗೂ ಇತರ ಎಲ್ಲಾ ಸಲಕರಣೆಗಳೂ ಸೇರಿರುತ್ತವೆ.

infringement: ಕಾನೂನು ಉಲ್ಲಂಘನೆ; ಅತಿಕ್ರಮಣ.

infusion curriculum: ಸಮ್ಮಿಶ್ರ ಪಠ್ಯಕ್ರಮ.

ingredient of reinforcement: ಪುಷ್ಟೀಕರಣದ ಘಟಕಾಂಶ.

in-group: ಒಳಸಮೂಹ. ಉದಾ: ಕುಟುಂಬ, ಗೆಳೆಯರ ಗುಂಪು.

inhabitant: ನಿವಾಸಿ.

inherent contradiction: ಅಂತರ್ಗತ ವಿರೋಧೋಕ್ತಿ.

inherent interest: ಸ್ವಾಭಾವಿಕ (ಅಂತರ್ಗತ) ಅಭಿರುಚಿ.

inherent value: ಅಂತರ್ಗತ ಮೌಲ್ಯ.

inheritable property: ಉತ್ತರಾಧಿಕಾರದ ಆಸ್ತಿ; ವಂಶಹಕ್ಕಿನ ಆಸ್ತಿ. ಉತ್ತರಾಧಿಕಾರದಿಂದ ವಹಿಸಿಕೊಳ್ಳಬಹುದಾದ ಆಸ್ತಿ.

inheritance: ಉತ್ತರಾಧಿಕಾರ; ವಂಶ ಪಾರಂಪರ್ಯ; ಪಿತ್ರಾರ್ಜಿತ. ಮಾತೃವಂಶೀಯ, ಪಿತೃವಂಶೀಯ ಮೂಲದಿಂದ ಬರುವ ಆಸ್ತಿಯ ಹಕ್ಕು.

inheritance law: ಉತ್ತರಾಧಿಕಾರದ ಕಾನೂನು; ವಾರಸು ಕಾನೂನು.

inheritance tax: ಅನುವಂಶೀ ತೆರಿಗೆ. ಒಬ್ಬ ವ್ಯಕ್ತಿಯು ಸತ್ತ ನಂತರ ಆತನ ಸಂಪತ್ತಿನ ವರ್ಗಾವಣೆಯ ಮೇಲೆ ಮತ್ತು ಸಾವಿನ ಏಳು ವರುಷಗಳ ಮೊದಲು ಆತನು ಮಾಡಿದ ಕೊಡುಗೆಗಳ ಮೇಲೆ ವಿಧಿಸುವ ತೆರಿಗೆ.

inherited character: ವಂಶಾನುಗತ ಲಕ್ಷಣ.

inhibition: ಅವರೋಧ; ಹಿಂಜರಿಕೆ. ಒಂದು ಕಾರ್ಯ ಅಸಾಧ್ಯವಾದುದೆಂದು ಸಹಜವಾಗಿಯೋ, ಪ್ರೇರಣೆಯಿಂದಲೋ ಹಿಂಜರಿಯುವ ಪ್ರವೃತ್ತಿ.

inhibitive group: ಅವರೋಧಕ ಸಮೂಹ.

inhumation: ಶವಹೂಳುವಿಕೆ; ಶವ ಸಂಸ್ಕಾರ.

initial data: ಪ್ರಾರಂಭಿಕ ಮಾಹಿತಿ; ಆದ್ಯ ಮಾಹಿತಿ.

initial interview: ಪ್ರಾರಂಭಿಕ ಸಂದರ್ಶನ.

initiation rite: ದೀಕ್ಷಾ ವಿಧಿ.

initiation rituals: ಪ್ರಾರಂಭಿಕ ಕ್ರಿಯಾ ವಿಧಿಗಳು. ನೋಡಿ: rites de passage.

initiative: ಉಪಕ್ರಮಣ; ಪ್ರಜಾ ನಿರ್ದೇಶನ. ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಪ್ರಚಲಿತವಿರುವ ನೇರ ಪ್ರಜಾಪ್ರಭುತ್ವದ ಸಾಧನಗಳಲ್ಲಿ ಒಂದು.

initiative petition: ಉಪಕ್ರಮಣ ಮನವಿ.

injunction: ತಡೆಯಾಜ್ಞೆ. ಅಧಿಕಾರ ಪೂರ್ವಕವಾಗಿ ನೀಡಿದ ತಡೆಯಾಜ್ಞೆ.

inland water transport: ಆಂತರಿಕ ಜಲ ಸಾರಿಗೆ.

inlay work: ಕಂತಣೆ ಕೆಲಸ. ಕೊರೆದ ಭಾಗದಲ್ಲಿ ಬೇರೆ ವಸ್ತುಗಳನ್ನು ತುಂಬಿಸುವ ಕೌಶಲಪೂರ್ಣ ಕಲೆ.

innate: ಜನ್ಮಜಾತ; ಸಹಜ.

innate ability: ಜನ್ಮಜಾತ ಸಾಮರ್ಥ್ಯ.

innate basis: ಜನ್ಮಜಾತ ಆಧಾರ.

innate behaviour: ಜನ್ಮಜಾತ ವರ್ತನೆ.

innate capacities: ಜನ್ಮಜಾತ ಸಾಮರ್ಥ್ಯಗಳು.

innate character: ಜನ್ಮಜಾತ ಗುಣ ಲಕ್ಷಣ.

innate disposition: ಜನ್ಮಜಾತ ಪ್ರವೃತ್ತಿ.

innate drive: ಮೂಲ ಪ್ರೇರಣೆ; ಜನ್ಮ ಜಾತ ಪ್ರೇರಣೆ.

innate faculties: ಜನ್ಮಜಾತ ಸಹಜ ಶಕ್ತಿಗಳು.

innate mental ability: ಜನ್ಮಜಾತ ಮಾನಸಿಕ ಶಕ್ತಿ.

innate temperament: ಜನ್ಮಜಾತ ಸ್ವಭಾವ.

inner cabinet: ಆಂತರಿಕ ಕ್ಯಾಬಿನೆಟ್; ಒಳ ಕ್ಯಾಬಿನೆಟ್. ಪ್ರಧಾನ ಮಂತ್ರಿಯ ಅಥವಾ ಮುಖ್ಯಮಂತ್ರಿಯ ನಂಬಿಕೆಗೆ ಅರ್ಹರಾದ ಕೆಲವು ಆಪ್ತ ಸಚಿವರುಗಳ ಗುಂಪು.

inner circle: ಆಂತರಿಕ ವರ್ತುಲ.

inner-city: ನಗರ ಕೇಂದ್ರ; ಒಳನಗರ.

inner directed society: ಅಂತರ್ ನಿರ್ದೇಶಿತ ಸಮಾಜ. ತನ್ನ ಸದಸ್ಯರಲ್ಲಿ ಆ ಸಮಾಜದ ಗುರಿಗಳನ್ನು ಅಂತರ್ಗತ ಗೊಳಿಸಿ ಕೊಳ್ಳುವ ಸಾಮಾಜಿಕ ಗುಣಲಕ್ಷಣಗಳನ್ನು ಬೆಳೆಸುವ ಸಮಾಜ.

inner dynamics: ಅಂತರ್ ಚಲನ ಶೀಲತೆ.

inner party democracy: ಪಕ್ಷ ದೊಳಗಿನ ಆಂತರಿಕ ಪ್ರಜಾಪ್ರಭುತ್ವ. ಪಕ್ಷದ ನೀತಿಯನ್ನು ನಿರೂಪಿಸಿ ಅದನ್ನು ಕಾರ್ಯಗತ ಮಾಡುವುದರಲ್ಲಿ ಮತ್ತು ಅದರ ನಾಯಕ ರನ್ನು ಆಯ್ಕೆ ಮಾಡುವುದರಲ್ಲಿ ಪಕ್ಷದ ಸದಸ್ಯರುಗಳ ವ್ಯಾಪಕವಾದ ಭಾಗವಹಿಸುವಿಕೆ.

innovation: ಆವಿಷ್ಕಾರ; ನವೀಕರಣ. ಹೊಸದನ್ನು ಜಾರಿಗೆ ತರುವುದು.

innovation centre: ನವೀನತಾ ಕೇಂದ್ರ; ಆವಿಷ್ಕಾರ ಕೇಂದ್ರ.

innovation theory of profit: ಲಾಭದ ಆವಿಷ್ಕಾರ ಸಿದ್ಧಾಂತ. ಉತ್ಪಾದನಾ ಪ್ರಕ್ರಿಯೆಯಲ್ಲಿ ನಡೆಯುವ ಅನೇಕ ಸಂಶೋಧನೆಗಳಿಂದಾಗಿ ಲಾಭ ಉಂಟಾಗು ತ್ತದೆನ್ನುವ ಸಿದ್ಧಾಂತ.

inordinate delay: ಅತಿಯಾದ ವಿಳಂಬ.

inorganic environment: ಅಜೈವಿಕ ಪರಿಸರ.

inorganic science: ನಿರವಯವ ವಿಜ್ಞಾನ. ಅಜೈವಿಕ ವಸ್ತುಗಳಿಗೆ ಸಂಬಂಧಿ ಸಿದ ಮುಖ್ಯವಾಗಿ ಖನಿಜ ವಸ್ತುಗಳಿಗೆ ಸಂಬಂಧಿಸಿದ ರಸಾಯನ ವಿಜ್ಞಾನ.

in-programme evaluation: ಕಾರ್ಯಕ್ರಮ ಅವಧಿಯಲ್ಲಿ ಮೌಲ್ಯ ಮಾಪನ.

input: ಆದಾನ; ಉತ್ಪಾದನಾಂಗ; ಒಳ ಹರಿವು.

input co-efficient: ಆದಾನ ಗುಣಾಂಕ.

input cost: ಆದಾನ ವೆಚ್ಚ.

input factor: ಆದಾನ ಘಟಕ.

input message: ಆದಾನ ಸಂದೇಶ.

input output analysis: ಆದಾನ ವಿದಾನ ವಿಶ್ಲೇಷಣೆ.

input output table: ಆದಾನ-ವಿದಾನ ಕೋಷ್ಟಕ.

inquiry approach: ಅನ್ವೇಷಣಾ ಮಾರ್ಗ.

inquisition: ಧರ್ಮಪಂಚಾಯಿತಿ.

inquisitive disposition: ಶೋಧನಾ ಸ್ವಭಾವ; ಶೋಧನಾ ಚಿತ್ತವೃತ್ತಿ.

insane criminal: ಬುದ್ಧಿಭ್ರಮಣೆ ಹೊಂದಿದ ಅಪರಾಧಿ. ಮತಿವಿಕಲ ಅಪರಾಧಿ.

insanity: ಚಿತ್ತವಿಕಲತೆ; ಬುದ್ಧಿಭ್ರಮಣೆ.

inscription: ಕೆತ್ತಿದ ಲೇಖನ; ಶಿಲಾಲೇಖ. ಪ್ರಾಚೀನ ಇತಿಹಾಸದ ಮಾಹಿತಿ ಮೂಲಗಳಲ್ಲಿ ಶಿಲಾಲೇಖಗಳು ಪ್ರಧಾನವಾದುವು.

insecurity: ಅರಕ್ಷಿತತೆ; ಅಭದ್ರತೆ.

insensibility: ಸಂವೇದನಾಹೀನತೆ; ಸಂವೇದನಾಶೂನ್ಯತೆ.

in service training: ಸೇವಾವಧಿ ತರಬೇತಿ. ಹೊಸದಾಗಿ ನೇಮಕಗೊಂಡ ಅಭ್ಯರ್ಥಿಗೆ ಸೇವಾ ಅವಧಿಯಲ್ಲಿ ಕೊಡುವ ತರಬೇತಿ.

insight: ಸೂಕ್ಷ್ಮಪರಿಜ್ಞಾನ; ಒಳನೋಟ; ಆತ್ಮಜ್ಞಾನ. ತನ್ನ ನ್ಯೂನತೆಗಳು ಮತ್ತು ಸಮಸ್ಯೆಗಳನ್ನು ವಸ್ತುನಿಷ್ಠವಾಗಿ ಅರ್ಥ ಮಾಡಿಕೊಳ್ಳುವುದು.

insolvency: ದಿವಾಳಿತನ.

insomnia: ನಿದ್ರಾಹೀನತೆ; ಅನಿದ್ರಾ ರೋಗ.

inspection certificate: ಪರಿಶೀಲನಾ ಪ್ರಮಾಣಪತ್ರ.

inspection report: ತನಿಖೆಯ ವರದಿ.

inspirational group therapy: ಸಮೂಹೋತ್ತೇಜನಾತ್ಮಕ ಚಿಕಿತ್ಸೆ.

instability: ಚಂಚಲತೆ; ಅಸ್ಥಿರತೆ. ಭಾವ, ವಿಚಾರ, ವರ್ತನೆಗಳಲ್ಲಿ ಉಂಟಾಗುವ ಚಂಚಲತೆ.

instability of income: ಆದಾಯದ ಅನಿಶ್ಚಿತತೆ.

instability of temper: ಚಿತ್ತವೃತ್ತಿಯ ಅಸ್ಥಿರತೆ.

instantaneous action: ತುರ್ತು ಕ್ರಮ.

instinct : ಮೂಲ ಪ್ರವೃತ್ತಿ; ಹುಟ್ಟುಗುಣ; ಸಹಜ ಪ್ರವೃತ್ತಿ.

instinct for combination: ಒಂದುಗೂಡುವಿಕೆಯ ಪ್ರವೃತ್ತಿ; ಸಂಯೋಜನೆಯ ಪ್ರವೃತ್ತಿ; ಸಾಹಚರ್ಯದ ಪ್ರವೃತ್ತಿ.

instinct for group persistence: ಸಮೂಹ ನಿರಂತರತೆಯ ಮೂಲಪ್ರವೃತ್ತಿ.

instinct of acquisition: ಗಳಿಸುವ ಪ್ರವೃತ್ತಿ.

instinct of combat: ಘರ್ಷಣಾ ಪ್ರವೃತ್ತಿ.

instinct of curiosity: ಕುತೂಹಲ ಪ್ರವೃತ್ತಿ.

instinct of flight: ಪಲಾಯನ ಪ್ರವೃತ್ತಿ.

instinct of repulsion: ಜಿಗುಪ್ಸಾ ಪ್ರವೃತ್ತಿ.

instinct of self assertion: ಸ್ವಪ್ರತಿಪಾದನಾ ಪ್ರವೃತ್ತಿ. ತನ್ನ ತನವನ್ನು ನಿರ್ಧಾರಾತ್ಮಕವಾಗಿ ಛಾಪಿಸುವುದು.

instinct theory: ಮೂಲಪ್ರವೃತ್ತಿ ಸಿದ್ಧಾಂತ.

instinctive behaviour: ಮೂಲ ಪ್ರೇರಣಾತ್ಮಕ ವರ್ತನೆ.

instinctive impulse: ಮೂಲ ಪ್ರೇರಣಾತ್ಮಕ ಆವೇಗ.

institutes of Manu: ಮನುವಿನ ನಿಯಮಗಳು. ಹಿಂದೂ ಧರ್ಮಶಾಸ್ತ್ರದಲ್ಲಿ ಅತಿಮುಖ್ಯವಾದುದು.

institution: ಸಂಸ್ಥೆ. ಸಂಘಟಿತ ಸಾಮಾಜಿಕ ಸಮೂಹ.

institutional adjustment: ಸಾಂಸ್ಥಿಕ ಹೊಂದಾಣಿಕೆ; ಸಾಂಸ್ಥಿಕ ಸಮಾಯೋಜನೆ. ಸಂಸ್ಥೆಯ ಸಾಂಪ್ರದಾಯಿಕ ಕಾರ್ಯ ಹಾಗೂ ಸಂಬಂಧಗಳನ್ನು ನವೀಕರಿಸುವುದು.

institutional agency: ಸಾಂಸ್ಥಿಕ ನಿಯೋಗಿ. ನಿರ್ದಿಷ್ಟ ಸಾಂಸ್ಥಿಕ ಕಾರ್ಯಗಳನ್ನು ಮಾಡುವ ಸಂಘಟಿತ ಸಮೂಹ.

institutional change: ಸಾಂಸ್ಥಿಕ ಪರಿವರ್ತನೆ.

institutional discrimination: ಸಾಂಸ್ಥಿಕ ತಾರತಮ್ಯ.

institutional family: ಸಾಂಸ್ಥಿಕ ಕುಟುಂಬ. ಸಾಂಪ್ರದಾಯಿಕ ನಿಯಮಗಳಿಗೆ ಬದ್ಧತೆಯುಳ್ಳ ಕುಟುಂಬ.

institutional frustration: ಸಾಂಸ್ಥಿಕ ಆಶಾಭಂಗ.

institutional growth: ಸಾಂಸ್ಥಿಕ ಬೆಳವಣಿಗೆ.

institutional order: ಸಾಂಸ್ಥಿಕ ಕ್ರಮ. ಕಾನೂನು ಮತ್ತು ನಿಯಮಾನುಸಾರ ಕೈಗೊಳ್ಳುವ ಕ್ರಮ.

institutional pattern: ಸಾಂಸ್ಥಿಕ ವಿನ್ಯಾಸ. ಒಂದು ಸಮಾಜದಲ್ಲಿ ಸಾಮಾಜಿಕ ಸಂದರ್ಭವೊಂದರಲ್ಲಿ ನಿರೀಕ್ಷಿತ ಹಾಗೂ ನ್ಯಾಯಯುತ ವರ್ತನಾ ವಿಧಾನಗಳನ್ನು ವಿವರಿಸುವ ಸಾಮಾಜಿಕ ನಿಯಮಗಳ ಅಂತರ ಸಂಬಂಧಿತ ಮಾದರಿ.

institutional planning: ಸಾಂಸ್ಥಿಕ ಯೋಜನೆ.

institutional racism: ಸಾಂಸ್ಥಿಕ ಜನಾಂಗೀಯತೆ. ಒಂದು ಸಮಾಜದ ಜನಾಂಗೀಯ ಗುಂಪಿನ ಜನರು ಇನ್ನೊಂದು ಜನಾಂಗೀಯ ಗುಂಪಿನ ನಿಯಂತ್ರಣಕ್ಕೊಳಪಟ್ಟ ಸಂಸ್ಥೆಯಿಂದ ಶೋಷಿಸಲ್ಪಡುವುದು.

institutional responsibility: ಸಾಂಸ್ಥಿಕ ಜವಾಬ್ದಾರಿ. ತಾನು ಕೆಲಸ ಮಾಡುತ್ತಿರುವ ಸಂಸ್ಥೆಗೆ ಒಳ್ಳೆಯ ಹೆಸರು ಬರಬೇಕು ಮತ್ತು ಆ ಸಂಸ್ಥೆ ಚಿರಕಾಲ ಅಸ್ತಿತ್ವದಲ್ಲಿರಬೇಕು ಎಂಬ ಆಕಾಂಕ್ಷೆಗೆ ಬದ್ಧವಾಗಿ ದುಡಿಯುವುದು.

institutional service: ಸಾಂಸ್ಥಿಕ ಸೇವೆ.

institutional specialization: ಸಾಂಸ್ಥಿಕ ವಿಶೇಷತೆ. ಸಂಕೀರ್ಣ ಸಮಾಜಗಳಲ್ಲಿ ಪ್ರತಿಯೊಂದು ಸಾಮಾಜಿಕ ಸಂಸ್ಥೆಯೂ ವಿಶೇಷ ಕಾರ್ಯನಿರ್ವಹಿಸುತ್ತಿದ್ದು ಬೇರೆ ಸಾಮಾಜಿಕ ಸಂಸ್ಥೆಗಳಿಂದ ವಿಭಿನ್ನವಾಗಿರುವಿಕೆ.

institutionalization: ಸಾಂಸ್ಥೀಕರಣ. ನಿಯಮಗಳು, ಕಾನೂನುಗಳು, ಪದ್ಧತಿಗಳು, ಆಚರಣೆಗಳ ಮೇಲೆ ಆಧಾರಿತವಾಗಿರುವ ಸಾಮಾಜಿಕ ಅಂತರಕ್ರಿಯೆಯ ಪ್ರಕ್ರಿಯೆ.

institutionalized deviance:

ಸಂಸ್ಥೀಕರಣಗೊಂಡ ಅಪವರ್ತನೆ. ಸ್ಥಾಪಿತ ಸಾಮಾಜಿಕ ಪ್ರಮಾಣಗಳನ್ನು ಒಂದು ನಿರ್ದಿಷ್ಟ ಸಾಂಸ್ಥಿಕ (ವಿಧಿಬದ್ಧ) ರೀತಿಯಲ್ಲಿ ಅಪವರ್ತಿಸುವುದು ಹಾಗೂ ಈ ಕ್ರಿಯೆಯ ಸಹಿಸಿಕೊಳ್ಳುವಿಕೆಯಿಂದಾಗಿ ಇದು ಸಂಸ್ಕೃತಿಯ ಒಂದು ಭಾಗವಾಗಿ ಬಿಡುವುದು. ಉದಾ: ಲಂಚಕೋರತನ, ಸ್ವಜನ ಪಕ್ಷಪಾತ, ಜೂಜು, ವೇಶ್ಯಾವಾಟಿಕೆ ಇತ್ಯಾದಿ.

institutionalized social norm: ಸಾಂಸ್ಥೀಕರಣಗೊಂಡ ಸಾಮಾಜಿಕ ನಿಯಮ. ಸಾಮಾಜಿಕ ವ್ಯವಸ್ಥೆ ಅಥವಾ ಸಮಾಜದೊಳಗೆ ಸಾರ್ವತ್ರಿಕವಾಗಿ ಅಂಗೀಕರಿಸಲ್ಪಟ್ಟ ಸಾಮಾಜಿಕ ನಿಯಮ.

instrument of accession: ಅಧಿಕಾರ ವಹಿಸಿಕೊಳ್ಳುವ ಪತ್ರ.

instrument of instructions: ನಿರ್ದೇಶನಗಳ ಸಾಧನ.

instrumental behaviour: ಸಾಧಕ ವರ್ತನೆ; ನೈಮಿತ್ತಿಕ ವರ್ತನೆ; ಕಾರಣಾತ್ಮಕ ವರ್ತನೆ.

instrumentalism: ನಿಮಿತ್ತವಾದ; ಸಾಧನವಾದ.

insulin shock therapy: ಇನ್ಸುಲಿನ್ ವಿದ್ಯುದ್ಘಾತ ಚಿಕಿತ್ಸೆ.

insurgent: ಬಂಡಾಯಗಾರ.

intake policy: ಸ್ವೀಕಾರ ಧೋರಣೆ; ಪ್ರವೇಶ ಧೋರಣೆ.

intangible factor: ಅಗೋಚರ ಅಂಶ.

integral education: ಸಮಗ್ರ ಶಿಕ್ಷಣ.

integrated approach: ಸಂಯೋಜನಾ ಸಮೀಪನ; ಸಮಗ್ರ ಸಮೀಪನ.

integrated economy: ಸಂಯೋಜಿತ ಆರ್ಥಿಕತೆ.

integrated education: ಸಮಗ್ರ ಶಿಕ್ಷಣ.

integrated judicial system: ಏಕೀಕೃತ ನ್ಯಾಯಾಂಗ ವ್ಯವಸ್ಥೆ; ಸುವ್ಯವಸ್ಥಿತ ನ್ಯಾಯಾಂಗ ಪದ್ಧತಿ.

integrated pattern: ಸಂಯೋಜಿತ ವಿನ್ಯಾಸ.

integration: ವಿಲೀನೀಕರಣ; ಸಂಯೋಜನೆ; ಸಮನ್ವಯ.

integration of differentiated labour: ಭಿನ್ನ ಕಾರ್ಯಗಳ ಸಮನ್ವಯ.

integration of industry: ಕೈಗಾರಿಕೆಗಳ ಸಂಯೋಜನೆ.

integrity: ಸಮಗ್ರತೆ; ದೃಢತೆ.

intellectual activity: ಬೌದ್ಧಿಕ ಚಟುವಟಿಕೆ.

intellectual aristocracy: ಬೌದ್ಧಿಕ ಶ್ರೀಮಂತಿಕೆ.

intellectual curiosity: ಬೌದ್ಧಿಕ ಕುತೂಹಲ.

intellectual growth: ಬೌದ್ಧಿಕ ಬೆಳವಣಿಗೆ.

intellectual labour: ಬೌದ್ಧಿಕ ಶ್ರಮ.

intellectual maturity: ಬೌದ್ಧಿಕ ಪರಿಪಕ್ವತೆ.

intellectual property: ಬೌದ್ಧಿಕ ಆಸ್ತಿ.

intellectualism: ಬೌದ್ಧಿಕತೆ; ಪ್ರಜ್ಞಾ ಪ್ರಾಧಾನ್ಯವಾದ.

intellectualization: ಬೌದ್ಧೀಕರಣ.

intelligence: ಬುದ್ಧಿಶಕ್ತಿ; ಬುದ್ಧಿಮತ್ತೆ.

intelligence measurement: ಬುದ್ಧಿ ಶಕ್ತಿಯ ಅಳತೆ; ಬುದ್ಧಿ ಶಕ್ತಿ ಮಾಪನ.

intelligence quotient (I.Q): ಬುದ್ಧಿ ಮತ್ತೆಯ (ಬುದ್ಧಿಶಕ್ತಿಯ) ಪ್ರಮಾಣ; ಬುದ್ಧಿ ಶಕ್ತಿಯ ತುಲನಾತ್ಮಕ ಸೂಚಿ. ವ್ಯಕ್ತಿಯ ಮಾನಸಿಕ ವಯಸ್ಸನ್ನು ಆತನ ನಿಜವಾದ ವಯಸ್ಸಿನಿಂದ ಭಾಗಿಸಿ ಬರುವುದನ್ನು ನೂರ ರಿಂದ ಗುಣಿಸಿ ಪಡೆಯುವ ಅಂಕೆ.

intelligence ratio (I.R): ಬುದ್ಧಿ ಶಕ್ತಿಯ ಅನುಪಾತ; ಬುದ್ಧಿಶಕ್ತಿಯ ಪ್ರಮಾಣ.

intelligence scale: ಬುದ್ಧಿಶಕ್ತಿ ಪ್ರಣಾಲಿ.

intelligence test: ಪ್ರಾವೀಣ್ಯತಾ ಪರೀಕ್ಷೆ; ಬೌದ್ಧಿಕ ಪರೀಕ್ಷೆ.

intelligentia: ಬುದ್ಧಿಜೀವಿಗಳು.

intemperate drinking: ಅತಿಪಾನೀ ಯತೆ.

intended investment: ಉದ್ದೇಶಿತ ಹೂಟೆ; ಉದ್ದೇಶಿತ ಹೂಡಿಕೆ.

intended saving: ಉದ್ದೇಶಿತ ಉಳಿತಾಯ.

intensive cultivation: ತೀವ್ರ ಸಾಗುವಳಿ; ಪರಿಣಾಮಕಾರಿ ಬೇಸಾಯ.

intention: ಇಂಗಿತ; ಆಶಯ.

inter action: ಅಂತರ್ ಕ್ರಿಯೆ.

inter alia: ಜೊತೆಜೊತೆಯಾಗಿ; ಇತರ ವಿಷಯಗಳ ಜೊತೆಯಲ್ಲಿ.

inter class conflict: ಅಂತರ್ ವರ್ಗ ಕಲಹ; ವರ್ಗಾಂತರ್ಗತ ಕಲಹ.

inter caste: ಅಂತರ್ ಜಾತೀಯ.

inter-communication: ಪರಸ್ಪರ ಸಂಪರ್ಕ; ಅಂತರ್‌ಸಂಪರ್ಕ.

inter connected undertaking: ಅಂತರ-ಸಂಬಂಧೀ ಉದ್ಯಮ.

inter dependence: ಪರಸ್ಪರಾವಲಂಬನೆ; ಆಂತರಿಕ ಅವಲಂಬನೆ.

inter-dependent analysis: ಪರಸ್ಪರಾ ವಲಂಬಿ ವಿಶ್ಲೇಷಣೆ.

interdiction: ಬಹಿಷ್ಕಾರ ಶಿಕ್ಷೆ. ಅಧಿಕಾರ ಪೂರ್ವಕವಾದ ನಿಷೇಧ.

inter-disciplinary: ಅಂತರ್-ಶಾಸ್ತ್ರೀಯ; ಅಂತರ್‌ಶಿಸ್ತೀಯ.

inter-familial exchange marriage: ಅಂತರ್-ಕೌಟುಂಬಿಕ ವಿನಿಮಯ ವಿವಾಹ; ಚಾಟುವಿವಾಹ. ತನ್ನ ಸಹೋದರ ನನ್ನು/ಸಹೋದರಿಯನ್ನು ವಿವಾಹವಾದ ವ್ಯಕ್ತಿಯ ಸಹೋದರನನ್ನು/ಸಹೋದರಿ ಯನ್ನು ವಿವಾಹವಾಗುವುದು.

inter-generational bondage: ಅಂತರ್ ತಲೆಮಾರಿನ ದಾಸ್ಯ. ಬಡವರು ಶ್ರೀಮಂತರ ಸಾಲದ ಋಣದಲ್ಲಿ ಬಿದ್ದು ಆ ಸಾಲ ಒಂದು ಪೀಳಿಗೆಯಲ್ಲಿ ಮುಗಿಯದೆ ನಿರಂತರ ಮುಂದುವರಿಯುತ್ತಿದ್ದು ಸಾಲ ತೀರಿಸುವಿಕೆಗಾಗಿ ದಾಸ್ಯತ್ವವನ್ನು ಒಪ್ಪಿಕೊಳ್ಳು ವುದು.

inter-generational mobitiy: ನೋಡಿ: generational mobility.

inter-governmental loan: ಅಂತರ್ - ಸರಕಾರೀ ಸಾಲ.

inter-group relation: ಅಂತರ್ ಸಮೂಹ ಸಂಬಂಧ. ಸಹಬಾಳ್ವೆ ಅಥವಾ

ಸಂಘರ್ಷ ಇತ್ಯಾದಿಗಳಿಂದಾಗಿ ಜನಾಂಗೀಯ, ಧಾರ್ಮಿಕ ಅಥವಾ ಕುಲ ಸಂಬಂಧೀ ಗುಂಪುಗಳ ನಡುವಿನ ಸಂಪರ್ಕ.

inter group work: ಅಂತರ್ ಸಮೂಹ ಕಾರ್ಯ.

inter-industry relationship: ಅಂತರ್-ಕೈಗಾರಿಕಾ ಸಂಬಂಧ; ಕೈಗಾರಿಕೆಗಳ ಪರಸ್ಪರ ಸಂಬಂಧ.

inter-locking hierarchy: ಅಂತರ್ ಬಂಧಿತ ಶ್ರೇಣಿ ವ್ಯವಸ್ಥೆ.

inter-marriage: ಅಂತರ್ ವಿವಾಹ, ವಿಭಿನ್ನ ಧಾರ್ಮಿಕ, ಜನಾಂಗೀಯ ಅಥವಾ ಕುಲಸಂಬಂಧೀ ಹಿನ್ನಲೆಯುಳ್ಳ ವ್ಯಕ್ತಿಗಳ ನಡುವೆ ಮದುವೆ.

inter-mediate culture: ಮಧ್ಯವರ್ತಿ ಸಂಸ್ಕೃತಿ. ಎರಡು ವಿಭಿನ್ನ ಸಂಸ್ಕೃತಿಗಳ ನಡುವೆ ಸಂಪರ್ಕ ಮತ್ತು ಸಂವಹನ ಹೊಂದಿರುವ ಸಂಸ್ಕೃತಿ.

inter-mediate goods: ಮಧ್ಯವರ್ತಿ (ಮಾಧ್ಯಮಿಕ) ಸರಕುಗಳು.

inter-mediate technology: ಮಾಧ್ಯಮಿಕ ತಾಂತ್ರಿಕತೆ.

inter-mediate treatment: ಮಧ್ಯಂತರ ಚಿಕಿತ್ಸೆ. ೧೯೬೯ರ ಮಕ್ಕಳ ಕಾಯ್ದೆಯ ಪ್ರಕಾರ ಬಾಲನ್ಯಾಯಾಲಯಗಳಿಗೆ ಮೇಲ್ವಿಚಾರಣೆಯ ಜತೆಗೇ ಮಧ್ಯಂತರ ಚಿಕಿತ್ಸೆಯ ಅಧಿಕಾರವೂ ಸಿಕ್ಕಿತು. ಜೈಲಿನ ರಕ್ಷಣೆ ಹಾಗೂ ಮನೆ ಯಲ್ಲೇ ಮೇಲ್ವಿಚಾರಣೆ ಇವೆರಡರ ಮಧ್ಯದ ಸಂದರ್ಭಗಳಲ್ಲಿ ಕೊಡುವ ಚಿಕಿತ್ಸೆ.

inter-parliamentary union: ಅಂತರ್ ಸಂಸದೀಯ ಒಕ್ಕೂಟ.

inter-personal relationship: ಅಂತರ್ ವ್ಯಕ್ತಿ ಸಂಬಂಧ. ಸಾಮಾಜಿಕ ಅಂತರ್ ಕ್ರಿಯೆಯಿಂದ ಉಂಟಾಗುವ ವ್ಯಕ್ತಿಗತ ಸಂಬಂಧ.

inter-personal response trait: ಅಂತರ್ ವ್ಯಕ್ತಿ ಪ್ರತಿಕ್ರಿಯಾಗುಣ.

inter-regional migration: ಅಂತರ್ ಪ್ರಾದೇಶಿಕ ವಲಸೆ.

inter-regional trade: ಅಂತರ್ ಪ್ರಾದೇಶಿಕ ವ್ಯಾಪಾರ.

inter se: ಪರಸ್ಪರ.

inter-sexuality: ಲಿಂಗ ಮಿಶ್ರತೆ. ಪ್ರಾಥಮಿಕ ಹಾಗೂ ಮಾಧ್ಯಮಿಕ ಲೈಂಗಿಕ ಗುಣಲಕ್ಷಣಗಳನ್ನು ಪ್ರತ್ಯೇಕಿಸಲಾಗದಷ್ಟು ಏಕೀಭವಿಸಿರುವ ಸ್ತ್ರೀ-ಪುರುಷ ಮಿಶ್ರ ಲಕ್ಷಣಗಳು.

inter-sibling rivalry: ಸೋದರ ರೊಳಗೆ ಪ್ರತಿಸ್ಪರ್ಧೆ; ಒಡಹುಟ್ಟಿದವರ ನಡುವಿನ ಪ್ರತಿಸ್ಪರ್ಧೆ.

inter state relation: ಅಂತರ್ ರಾಜ್ಯ ಸಂಬಂಧ.

inter stimulation: ಪರಸ್ಪರ ಉತ್ತೇಜನ; ಪರಸ್ಪರ ಪ್ರಚೋದನೆ.

interaction: ಅಂತರ್‌ಕ್ರಿಯೆ.

interactional analysis: ಅಂತರ್ ಕ್ರಿಯೆಯ ವಿಶ್ಲೇಷಣೆ.

interactionism: ಅನ್ಯೋನ್ಯ ಕ್ರಿಯಾವಾದ; ಪರಸ್ಪರ ಕ್ರಿಯಾವಾದ; ಅಂತರ್ ಕ್ರಿಯಾವಾದ.

interactionist perspective: ಅಂತರ್ ಕ್ರಿಯಾತ್ಮಕ ದೃಷ್ಟಿಕೋನ.

interest: ಆಸಕ್ತಿ; ಅಭಿರುಚಿ; ಬಡ್ಡಿ. ಉತ್ಪಾದನಾ ಘಟಕಗಳಲ್ಲಿ ಒಂದಾದ ಬಂಡವಾಳಕ್ಕೆ ಸಿಗುವ ಪ್ರತಿಫಲ.

interest group: ಆಸಕ್ತ ಸಮೂಹ; ಸ್ವಹಿತಾಸಕ್ತ ಗುಂಪು. ನಿರ್ದಿಷ್ಟ ಉದ್ದೇಶಗಳನ್ನು ಇಟ್ಟುಕೊಂಡು ಅದನ್ನು ಸಾಧಿಸುವರೇ ಸಂಘಟಿತವಾದ ಸಮೂಹ.

interest maturity: ಅಭಿರುಚಿ ಪರಿಪಕ್ವತೆ.

interest measurement: ಅಭಿರುಚಿಯ ಅಳತೆ; ಅಭಿರುಚಿ ಮಾಪನ.

interest pattern: ಅಭಿರುಚಿ ವಿನ್ಯಾಸ.

interest rate: ಬಡ್ಡಿದರ.

interest receipt: ಬಡ್ಡಿ ರಶೀದಿ.

interest of social class: ಸಾಮಾಜಿಕ ವರ್ಗಗಳ ಹಿತಾಸಕ್ತಿ.

interference theory: ಮಧ್ಯಪ್ರವೇಶ ಸಿದ್ಧಾಂತ.

interim government: ತಾತ್ಕಾಲಿಕ ಸರಕಾರ. ಸ್ಥಿರ ಸರಕಾರವೊಂದು ಸ್ಥಾಪನೆಯಾಗುವವರೆಗೆ ಕಾರ್ಯನಿರತ ಸರಕಾರ.

interim order: ಮಧ್ಯಕಾಲೀನ ಆದೇಶ.

intermittent reinforcement: ಮರುಕಳಿಸುವ ಪುನರ್ಬಲನ.

internal arrangement: ಆಂತರಿಕ ವ್ಯವಸ್ಥೆ; ಸ್ಥಳೀಯ ಏರ್ಪಾಡು.

internal autonomy: ಆಂತರಿಕ ಸ್ವಾಯತ್ತತೆ.

internal colonization: ಆಂತರಿಕ ವಸಾಹತೀಕರಣ.

internal consistency: ಆಂತರಿಕ ಸ್ಥಾಯಿತ್ವ.

internal debt: ಆಂತರಿಕ ಸಾಲ.

internal diseconomies: ಆಂತರಿಕ ಅಪವ್ಯಯಗಳು.

internal disturbance: ಆಂತರಿಕ ಗಲಭೆ

internal economies: ಆಂತರಿಕ ಮಿತವ್ಯಯಗಳು.

internal emergency: ಆಂತರಿಕ ತುರ್ತುಪರಿಸ್ಥಿತಿ. ಆಂತರಿಕವಾಗಿ ಉದ್ಭವಿಸುವ ಸಮಸ್ಯೆಗಳನ್ನು ಎದುರಿಸಲು ಘೋಷಿಸುವ ತುರ್ತುಪರಿಸ್ಥಿತಿ.

internal equilibrium: ಆಂತರಿಕ ಸಮತೋಲನ. ಶ್ರಮದ ಪೂರೈಕೆಯ ಹೆಚ್ಚಳಕ್ಕೆ ಸಮಾನವಾದ ಹೆಚ್ಚಳವು ಬಂಡವಾಳದ ಪೂರೈಕೆಯಲ್ಲೂ ಉಂಟಾಗುವ ಸ್ಥಿತಿ.

internal frustration: ಆಂತರಿಕ ಆಶಾಭಂಗ.

internal marginality: ಆಂತರಿಕ ಸೀಮಾಂತತೆ.

internal migration: ಆಂತರಿಕ ವಲಸೆ.

internal motivation: ಆಂತರಿಕಾಭಿಪ್ರೇರಣೆ; ಒಳ ಪ್ರೇರಣೆ.

internal policy: ಆಂತರಿಕ ನೀತಿ. ಒಂದು ರಾಜ್ಯದಲ್ಲಿರುವ ವರ್ಗಗಳು, ಸಾಮಾಜಿಕ ಸಮುದಾಯಗಳು ಮತ್ತು ಜನಾಂಗಗಳ ನಡುವಣ ಸಂಬಂಧಗಳನ್ನು ವ್ಯಕ್ತಗೊಳಿಸುವ ನೀತಿ.

internal publicity: ಆಂತರಿಕ ಪ್ರಚಾರ.

internal rate of return: ಆಂತರಿಕ ಪ್ರತಿಫಲ ದರ.

internal relationship: ಆಂತರಿಕ ಸಂಬಂಧ; ಒಳ ಸಂಬಂಧ.

internal self: ಆಂತರಿಕ ಅಹಂ; ಅಂತರಾತ್ಮ.

internal sense: ಆಂತರಿಕ ಸಂವೇದನೆ; ಅಂತರ್ ಸಂವೇದನೆ.

internal sovereignty: ಆಂತರಿಕ ಪರಮಾಧಿಕಾರ.

internal stimulation: ಆಂತರಿಕ ಪ್ರಚೋದನೆ; ಒಳಪ್ರಚೋದನೆ.

internal system: ಆಂತರಿಕ ವ್ಯವಸ್ಥೆ. ಸಮೂಹ ಚಟುವಟಿಕೆಗಳ ಸಂಘಟನೆ.

internal trait: ಆಂತರಿಕ ಲಕ್ಷಣ.

internalised role: ಅಂತರ್ಗತಗೊಳಿಸಿಕೊಂಡ ಪಾತ್ರ; ಅಂತರ್ಗತ ಪಾತ್ರ; ಅಂತಸ್ಥಿತ ಪಾತ್ರ.

internalization of the norms: ನಿಯಮಗಳ ಅಂತರ್ಗತೀಕರಣ.

internalization process: ಅಂತರ್ಗತೀಕರಣ ಪ್ರಕ್ರಿಯೆ.

international: ಅಂತಾರಾಷ್ಟ್ರೀಯ; ಅಂತರ್-ರಾಷ್ಟ್ರೀಯ.

international assistance: ಅಂತಾರಾಷ್ಟ್ರೀಯ ನೆರವು.

international comity: ಅಂತಾರಾಷ್ಟ್ರೀಯ ಸೌಹಾರ್ದತೆ.

international conflict: ಅಂತಾರಾಷ್ಟ್ರೀಯ ಘರ್ಷಣೆ.

international co-operation: ಅಂತಾರಾಷ್ಟ್ರೀಯ ಸಹಕಾರ.

international court of justice: ಅಂತಾರಾಷ್ಟ್ರೀಯ ನ್ಯಾಯಾಲಯ; ವಿಶ್ವ ನ್ಯಾಯಾಲಯ; ಜಾಗತಿಕ ನ್ಯಾಯಾಲಯ.

international demonstration effect: ಅಂತಾರಾಷ್ಟ್ರೀಯ ಪ್ರದರ್ಶನ ಪರಿಣಾಮ.

international division of labour: ಅಂತಾರಾಷ್ಟ್ರೀಯ ಶ್ರಮವಿಭಜನೆ. ಜಾಗತಿಕ ಆರ್ಥಿಕತೆಯಲ್ಲಿ ವಿವಿಧ ದೇಶಗಳು ವಿವಿಧ ಆರ್ಥಿಕ ಚಟುವಟಿಕೆಗಳಲ್ಲಿ ವಿಶೇಷ ಪ್ರಾವೀಣ್ಯವನ್ನು ಪಡೆದಿರುತ್ತವೆ ಹಾಗೂ ಒಂದಕ್ಕೊಂದು ಅಂತರ್-ಸಂಬಂಧವುಳ್ಳವಾಗಿವೆ.

international economic order: ಅಂತಾರಾಷ್ಟ್ರೀಯ ಆರ್ಥಿಕ ವ್ಯವಸ್ಥೆ.

international export agreement: ಅಂತಾರಾಷ್ಟ್ರೀಯ ರಫ್ತು ಒಪ್ಪಂದ.

international finance: ಅಂತಾರಾಷ್ಟ್ರೀಯ ಹಣಕಾಸು.

international folkloristics: ಅಂತಾರಾಷ್ಟ್ರೀಯ ಜನಪದ ವಿಜ್ಞಾನ.

international labour organisa- tion (ILO): ಅಂತಾರಾಷ್ಟ್ರಿಯ ಕಾರ್ಮಿಕ ಸಂಸ್ಥೆ. ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳಲ್ಲಿ ಕಾರ್ಮಿಕರ ಸ್ಥಿತಿಗತಿಗಳನ್ನು ಸುಧಾರಿಸುವುದು, ಅವರ ಜೀವನ ಮಟ್ಟವನ್ನು ಉತ್ತಮಗೊಳಿಸುವುದು ಮತ್ತು ಆರ್ಥಿಕ ಹಾಗೂ ಸಾಮಾಜಿಕ ಭದ್ರತೆಯನ್ನು ದೃಢಗೊಳಿಸುವುದು ಮುಂತಾದ ಉದ್ದೇಶಗಳಿಂದ ೧೯೭೬ರಲ್ಲಿ ಸ್ಥಾಪಿಸಲಾದ ವಿಶ್ವಸಂಸ್ಥೆಯ ಸಹಾಯಕ ಸಂಸ್ಥೆ.

international law: ಅಂತಾರಾಷ್ಟ್ರೀಯ ಕಾನೂನು; ಅಂತಾರಾಷ್ಟ್ರೀಯ ಕಾಯಿದೆ.

ರಾಷ್ಟ್ರರಾಷ್ಟ್ರದೊಳಗಿನ ಸಂಬಂಧಗಳನ್ನು ಸಾರ್ವತ್ರಿಕ ಮತ್ತು ಏಕರೀತಿಯಲ್ಲಿ ನಿಯಂತ್ರಿಸುವ ಕಾನೂನು.

international law approach: ಅಂತಾರಾಷ್ಟ್ರೀಯ ಕಾನೂನಿನ ದೃಷ್ಟಿಕೋನ; ಅಂತಾರಾಷ್ಟ್ರೀಯ ಶಾಸನ ಸಮೀಪನ. ಅಂತಾರಾಷ್ಟ್ರೀಯ ಕಾನೂನು ಅಂತಾರಾಷ್ಟ್ರೀಯ ವ್ಯವಸ್ಥೆಯನ್ನು ನಿರ್ಧರಿಸುವ ಒಂದು ಮುಖ್ಯ ಅಂಶವೂ, ಅಂತಾರಾಷ್ಟ್ರೀಯ ಸಂಬಂಧಗಳನ್ನು ಅರ್ಥೈಸುವ ಸಾಧನವೂ ಆಗಿದೆ ಎಂಬ ದೃಷ್ಟಿಕೋನ.

international law method: ಅಂತಾರಾಷ್ಟ್ರೀಯ ಕಾನೂನು ವಿಧಾನ. ಅಂತಾರಾಷ್ಟ್ರೀಯ ಸಂಬಂಧಗಳ ಅಧ್ಯಯನದ ವಿಧಾನಗಳಲ್ಲಿ ಒಂದು. ವಿವಿಧ ರಾಷ್ಟ್ರಗಳ ನಡುವಿನ ಭಿನ್ನಾಭಿಪ್ರಾಯ, ದ್ವೇಷಗಳನ್ನು ಹೋಗಲಾಡಿಸಲು ಸರ್ವಸಮ್ಮತವಾಗಿರುವ ಸಂಧಾನ ಮಾರ್ಗವನ್ನು ಅನುಸರಿಸುವ ಅನಿವಾರ್ಯವನ್ನು ಈ ವಿಧಾನ ತಿಳಿಸುತ್ತದೆ. ಸಂಧಾನಕ್ಕೆ ಅಂತಾರಾಷ್ಟ್ರೀಯ ಕಾನೂನು ತಳಹದಿಯನ್ನು ಒದಗಿಸುತ್ತದೆ.

international law of peace: ಅಂತಾರಾಷ್ಟ್ರೀಯ ಶಾಂತಿ ಕಾನೂನು.

international law of war: ಅಂತಾರಾಷ್ಟ್ರೀಯ ಸಮರ ಶಾಸನ.

international legislation: ಅಂತಾರಾಷ್ಟ್ರೀಯ ಶಾಸನ. ವಿಶ್ವಸಂಸ್ಥೆಯಂತಹ ಜಾಗತಿಕ ಸಂಸ್ಥೆಗಳು ರೂಪಿಸುವ ಶಾಸನ.

international liquidity: ಅಂತಾರಾಷ್ಟ್ರೀಯ ದ್ರವ್ಯತೆ.

international organizational approach: ಅಂತಾರಾಷ್ಟ್ರೀಯ ಸಾಂಘಿಕ ದೃಷ್ಟಿಕೋನ; ಅಂತಾರಾಷ್ಟ್ರೀಯ ಸಾಂಘಿಕ ಸಮೀಪನ. ವಿವಿಧ ಅಂತಾರಾಷ್ಟ್ರೀಯ ಸಂಘಸಂಸ್ಥೆಗಳಲ್ಲಿ ರಾಷ್ಟ್ರಗಳ ನಡತೆಯ ಅಧ್ಯಯನ ಹಾಗೂ ಅಂತಾರಾಷ್ಟ್ರೀಯ ಸಂಘಸಂಸ್ಥೆಗಳು ರಾಷ್ಟ್ರಗಳ ಮೇಲೆ ಚಲಾಯಿಸುವ ನಿಯಂತ್ರಣದ ಅಧ್ಯಯನದ ಮೂಲಕ ರಾಜ್ಯ, ರಾಜ್ಯಗಳ ನಡುವಣ ಸಂಬಂಧವನ್ನು ಅರ್ಥಮಾಡಿಕೊಳ್ಳುವ ವಿಧಾನ.

international politics: ಅಂತಾರಾಷ್ಟ್ರೀಯ ರಾಜಕಾರಣ.

international recognition: ಅಂತಾರಾಷ್ಟ್ರೀಯ ಮಾನ್ಯತೆ.

international relation: ಅಂತಾರಾಷ್ಟ್ರೀಯ ಬಾಂಧವ್ಯ; ಅಂತಾರಾಷ್ಟ್ರೀಯ ಸಂಬಂಧ.

international settlement: ಅಂತಾರಾಷ್ಟ್ರೀಯ ಪರಿಹಾರ.

international specialisation: ಅಂತಾರಾಷ್ಟ್ರೀಯ ವೈಶಿಷ್ಟ್ಯ.

international terms of trade: ಅಂತಾರಾಷ್ಟ್ರೀಯ ವ್ಯಾಪಾರ ಕರಾರುಗಳು.

international trade: ಅಂತಾರಾಷ್ಟ್ರೀಯ ವ್ಯಾಪಾರ.

international tribunal: ಅಂತಾರಾಷ್ಟ್ರೀಯ ನ್ಯಾಯಮಂಡಳಿ.

international wealth: ಅಂತಾರಾಷ್ಟ್ರೀಯ ಸಂಪತ್ತು.

internationalism: ಅಂತಾರಾಷ್ಟ್ರೀಯತೆ.

interoceptive system: ಅಂತರ್ ಸಂವೇದೀ ವ್ಯವಸ್ಥೆ.

interpellation: ಅಡ್ಡಪ್ರಶ್ನೆಯ ಪದ್ಧತಿ; ಖಾತೆಗಳ ಬಗ್ಗೆ ಪ್ರಶ್ನೆಗಳನ್ನು ಕೇಳುವ ಅಧಿಕಾರ.

interpretation of constitution: ಸಂವಿಧಾನದ ಅರ್ಥವಿವರಣೆ. ರಾಷ್ಟ್ರದ ನ್ಯಾಯಾಂಗವು ಸಂವಿಧಾನದ ಅರ್ಥವಿವರಣೆ ಕೊಡುವುದರ ಮೂಲಕ ಶಾಸಕಾಂಗವು ನಿರ್ಮಿಸಿದ ಕಾನೂನು ಸಂವಿಧಾನಬದ್ಧ ವಾಗಿದೆಯೋ ಇಲ್ಲವೋ ಎಂಬುದನ್ನು ನಿರ್ಧರಿಸುವಿಕೆ.

interpretation of law: ಕಾಯ್ದೆಯ ವಿವರಣೆ; ಶಾಸನದ ಅರ್ಥವಿವರಣೆ.

interpretative sociology: ವಿವರಣಾ ತ್ಮಕ ಸಮಾಜಶಾಸ್ತ್ರ; ಅರ್ಥ ನಿರೂಪಣೆಯ ಸಮಾಜಶಾಸ್ತ್ರ.

interpretative method: ವಿವರಣಾ ತ್ಮಕ ವಿಧಾನ. ಸಾಮಾಜಿಕ ಅಂತರ ಕ್ರಿಯೆ ಹಾಗೂ ಸಾಮಾಜಿಕ ಪಾತ್ರ ನಿರ್ವ ಹಣೆಯಲ್ಲಿ ಪಡೆದ ವೈಯಕ್ತಿಕ ಜ್ಞಾನ ಹಾಗೂ ಒಳನೋಟವನ್ನು ಇತರರ ಸಾಮಾಜಿಕ ವರ್ತನೆಯನ್ನು ಅರಿಯು ವಲ್ಲಿ ಒಂದು ಉಪಕರಣವಾಗಿ ಬಳಸುವುದು.

interstitial area: ನೋಡಿ: zone in transition.

interval scale: ಅಂತರ ಮಾಪಕ. ಪ್ರತಿ ಸಂಖ್ಯೆಯ ನಡುವಿನ ಅಂತರದ ಮಾಪಕ.

interventionism: ಹಸ್ತಕ್ಷೇಪವಾದ. ೧. ಇನ್ನೊಂದು ಸಾರ್ವಭೌಮ ರಾಷ್ಟ್ರದ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುವುದು. ೨. ಕೈಗಾರಿಕೆಗಳ ರಾಷ್ಟ್ರೀಕರಣದ ಮೂಲಕ ದೇಶದ ಆರ್ಥಿಕ ಚಟುವಟಿಕೆ ಗಳನ್ನು ಸರಕಾರ ನಿಯಂತ್ರಿಸುವುದು ಅಥವಾ ಪ್ರಭಾವಿಸುವುದು.

interview: ಸಂದರ್ಶನ. ಸಂಶೋಧಕ ಹಾಗೂ ವಕ್ತೃವಿನ ನಡುವೆ ಮಾಹಿತಿ ಸಂಗ್ರ ಹಣೆಗಾಗಿ ನಡೆಯುವ ಸಂಭಾಷಣೆ.

interview aids: ಸಂದರ್ಶನೋಪಕರಣ ಗಳು; ಸಂದರ್ಶನ ಸಾಧನಗಳು.

interview guide: ಸಂದರ್ಶನ ಕೈಪಿಡಿ. ಅನಿರ್ದೇಶಿತ ಸಂದರ್ಶನಗಳಲ್ಲಿ ಸಂದರ್ಶ ಕನು ಸಂಗ್ರಹಿಸಬೇಕಾದ ಮಾಹಿತಿಗಳ ಪ್ರಶ್ನಾಪಟ್ಟಿ.

interview method: ಸಂದರ್ಶನ ವಿಧಾನ.

interview schedule: ಸಂದರ್ಶನ ಅನುಸೂಚಿ. ಸಂದರ್ಶಕನು ವಕ್ತೃವನ್ನು ಪ್ರಶ್ನಿಸಲು ಉಪಯೋಗಿಸುವ ಪ್ರಶ್ನೆಗಳ ಪಟ್ಟಿ. ಸಂದರ್ಶಕನು ಪ್ರಶ್ನೆಗಳನ್ನು ತಾನೇ ಕೇಳಿ ಅದರ ಉತ್ತರಗಳನ್ನು ತಾನೇ ಬರೆ ದಿಟ್ಟುಕೊಳ್ಳುತ್ತಾನೆ. ಪ್ರಶ್ನಾವಳಿಯಲ್ಲಾದರೆ ವಕ್ತೃವೇ ಉತ್ತರ ಬರೆಯಬೇಕು.

interview therapy: ಸಂದರ್ಶನ ಚಿಕಿತ್ಸೆ.

interviewee: ಸಂದರ್ಶನಾರ್ಥಿ.

interviewer: ಸಂದರ್ಶಕ.

intolerance: ಅಸಹಿಷ್ಣುತೆ.

intoxicants: ಮಾದಕ ಪದಾರ್ಥಗಳು.

intoxication psychosis: ಮತ್ತತಾ ಮನೋವಿಕ್ಷಿಪ್ತಿ; ಮದ ಮನೋವಿಕ್ಷಿಪ್ತಿ.

intractability: ಪಳಗಿಸಲಾಗದ; ಸುಲಭ ವಾಗಿ ಬಗೆಹರಿಸಲಾಗದ; ಹಠಮಾರಿಯಾದ.

intra-generational mobility: ಪೀಳಿಗೆಯೊಳಗಿನ ಚಲನೆ.

intra-personal conflict: ವ್ಯಕ್ತಿ

ಯಂತರ್ಗತ ಸಂಘರ್ಷ. ವ್ಯಕ್ತಿಯ ವ್ಯಕ್ತಿತ್ವದೊಳಗಿನ ವಿಭಿನ್ನಾಂಶಗಳ ನಡುವಿನ ಘರ್ಷಣೆ.

intra-psychic conflict: ಅಂತರ್ಮಾನಸಿಕ ಒಳನೋಟ; ಅಂತರ್ಮನೋ ದ್ವಂದ್ವ.

intra vires: ವಿಧಿವತ್ತಾಗಿ.

intrinsic: ಮೂಲ; ಅಂತಸ್ಥ.

intrinsic cause: ಆಂತರಿಕ ಕಾರಣ; ಮೂಲ ಕಾರಣ.

intrinsic motivation: ಅಂತರ್ಗತ ಪ್ರೇರಣೆ; ಅಂತಃಪ್ರೇರಣೆ

intropunitive: ಸ್ವಶಿಕ್ಷಾತ್ಮಕ; ಆತ್ಮಶಿಕ್ಷಾತ್ಮಕ.

intropunitiveness: ಸ್ವಶಿಕ್ಷಾಭಾವ.

introspection: ಅಂತರಾವಲೋಕನ; ಆತ್ಮಾವಲೋಕನ.

introspectionism: ಅಂತರಾವಲೋಕನವಾದ.

introspective method: ಅಂತರಾವಲೋಕನ ವಿಧಾನ.

introspective psychology: ಅಂತರಾವಲೋಕನ ಮನೋವಿಜ್ಞಾನ.

introspective record: ಅಂತರಾವಲೋಕಾತ್ಮಕ ದಾಖಲೆ.

introversion: ಅಂತರ್ಮುಖತೆ.

introvert: ಅಂತರ್ಮುಖಿ. ಯಾರೊಂದಿಗೂ ಬೆರೆಯದೆ ಸಾಮಾಜಿಕ ಸಂಬಂಧಗಳನ್ನು ದೂರೀಕರಿಸಿ ನಿರ್ಭಾವದಿಂದಿರುವವರು.

introvert temperament: ಅಂತರ್ಮುಖೀ ಸ್ವಭಾವ, ಅಂತರ್ಮುಖೀ ಮನಃಪ್ರವೃತ್ತಿ.

intuition: ಸಹಜ ಜ್ಞಾನ; ಅಂತರ್‌ಬೋಧೆ; ಅಂತಃಪ್ರಜ್ಞೆ.

intuitionalism: ಅಂತರ್‌ದೃಷ್ಟಿವಾದ; ಸಹಜ ಜ್ಞಾನವಾದ, ಸತ್ಯಾನುಭವವು ಅಂತರ್ಬೋಧೆಯಿಂದಲೇ ಆಗುವುದೆಂಬ ವಾದ.

intuitionism: ನೋಡಿ: intuitionalism.

intuitive thought: ಅಂತರ್ಬೋಧ ವಿಚಾರ.

invalidation of proceedings: ನಡವಳಿಯನ್ನು ಅಸಿಂಧುವಾಗಿಸುವುದು.

invention: ಆವಿಷ್ಕಾರ; ಶೋಧ.

inverse correlation: ವಿಲೋಮ ಸಹಸಂಬಂಧ.

inverse matrix: ವಿಪರ್ಯ ಮಾತೃಕೆ; ವಿಲೋಮ ಮಾತೃಕೆ.

inverse ratio: ವಿಲೋಮ ಪ್ರಮಾಣ.

inverse variation: ವಿಲೋಮ ಪರಿವರ್ತನೆ.

inversion: ವಿಪರ್ಯಾಯ; ವಿಪರಿ ವರ್ತನ.

inverted speech: ವಿರೋಧಾಭಾಸದ ಮಾತು. ವಾಗ್ಮಿಯು ಹೇಳಬೇಕಾದದ್ದಕ್ಕಿಂತ ವಿರುದ್ಧವಾದುದನ್ನು ಹೇಳುವ ಹೇಳಿಕೆ.

inverted vision: ವ್ಯತ್ಯಸ್ತ ದೃಷ್ಟಿ.

investment: ಹೂಡಿಕೆ; ಹೂಟೆ.

investment criterion: ಹೂಟೆಯ ಮಾಪಕ; ಹೂಡಿಕೆಯ ಮಾನದಂಡ.

investment demand: ಹೂಡಿಕೆ ಬೇಡಿಕೆ; ಹೂಟೆಬೇಡಿಕೆ.

investment expenditure: ಹೂಡಿಕೆ (ಹೂಟೆ) ವೆಚ್ಚ.

investment function: ಹೂಡಿಕೆ (ಹೂಟೆ) ಕಾರ್ಯ. ಆದಾಯ ಮತ್ತು ಹೂಡಿಕೆಗಳ ನಡುವಿನ ಕಾರ್ಯಾತ್ಮಕ ಸಂಬಂಧ.

investment incentive: ಹೂಡಿಕೆ ಉತ್ತೇಜಕ.

investment multiplier: ಹೂಡಿಕೆ (ಹೂಟೆ) ಗುಣಕ. ಹೂಡಿಕೆಯಲ್ಲಿನ ಹೆಚ್ಚಳದಿಂದಾಗಿ ಆದಾಯದ ಮೇಲಾಗುವ ಪರಿಣಾಮ.

investment trust: ಹೂಡಿಕೆ ನ್ಯಾಸ.

invisible account: ಅಗೋಚರ ಲೆಕ್ಕ.

invisible export: ಅಗೋಚರ ರಫ್ತು; ಲೆಕ್ಕಕ್ಕೆ ಸಿಗದ ನಿರ್ಯಾತ.

invisible good: ಅಗೋಚರ ಸರಕು. ಉದಾ:ಸಾರಿಗೆ ಸಂಸ್ಥೆಗಳ ಸೇವೆ. ವಿಮಾ ಸಂಸ್ಥೆ ಮತ್ತು ಬ್ಯಾಂಕುಗಳ ಸೇವೆ.

invisible hand: ಅಗೋಚರ ಹಸ್ತ. ಆಡಂಸ್ಮಿತ್‌ನ ಒಂದು ಪ್ರಮುಖ ಪರಿ ಕಲ್ಪನೆ. ಪ್ರತಿಯೊಬ್ಬ ವ್ಯಕ್ತಿಯು ತನ್ನ ಏಳಿಗೆಗಾಗಿ ಪ್ರಯತ್ನಿಸುವುದರಿಂದ ಒಟ್ಟು ಸಮಾಜವು ಅಭಿವೃದ್ಧಿಯನ್ನು ಹೊಂದುತ್ತದೆ ಎಂಬ ಭಾವನೆ.

invisible religion: ಅದೃಶ್ಯ ಧರ್ಮ. ಧರ್ಮವನ್ನು ಧಾರ್ಮಿಕ ಸಂಸ್ಥೆಗಳಲ್ಲಿ ಮಾತ್ರ ಗುರುತಿಸುವುದಲ್ಲ. ಬದಲಾಗಿ ಮಾನವನು ತನ್ನ ಉತ್ಕೃಷ್ಟ ಜೈವಿಕ ಸ್ವಭಾವದಲ್ಲೂ ದೈವಭೀರುವಾಗಿರುತ್ತಾನೆ ಎನ್ನುವ ಧರ್ಮ.

involuntary association: ಅನೈಚ್ಛಿಕ ಸಂಘ.

involuntary reaction: ಅನೈಚ್ಛಿಕ ಪ್ರತಿಕ್ರಿಯೆ.

involuntary savings: ಅನೈಚ್ಛಿಕ ಉಳಿತಾಯ.

involuntary unemployment: ಅನೈಚ್ಛಿಕ ನಿರುದ್ಯೋಗ. ವ್ಯಕ್ತಿಗಳು ಉದ್ಯೋಗ ಮಾಡುವ ಸಾಮರ್ಥ್ಯವನ್ನು ಹೊಂದಿದ್ದು ಉದ್ಯೋಗವನ್ನು ಬಯಸಿದಾಗಲೂ ಅವರಿಗೆ ಉದ್ಯೋಗ ದೊರೆಯದಿರುವ ಸ್ಥಿತಿ.

involution: ಜಟಿಲತೆ.

involution evolution: ಜಟಿಲ ವಿಕಾಸ; ವಿಕಾಸದ ಜಟಿಲತೆ.

involutional melancholia: ಜಟಿಲ ವಿಷಣ್ಣತೆ; ಒಂದು ಬಗೆಯ ಭಾವವಿಕಾರ; ಅಪವಿಕಾಸ ಚಿಂತಾರೋಗ; ಅಂತರ್ವಲಿತ ವಿಷಣ್ಣತೆ. ಈ ರೋಗದ ಮುಖ್ಯ ಚಿಹ್ನೆ ರೋಗಿ ತಾನು ಕ್ಷಮಾರ್ಹ ಕೂಡ ಅಲ್ಲದ ಮಹಾಪಾಪ ಮಾಡಿದ್ದೇನೆ, ತನ್ನನ್ನು ಅದಕ್ಕಾಗಿ ಶಿಕ್ಷಿಸಬೇಕು ಎಂಬ ಭ್ರಾಂತಿ ಯಲ್ಲಿರುತ್ತಾನೆ. ರೋಗಿ ಹೆಚ್ಚು ಅಶಾಂತ ನಾಗಿ ಕಳವಳದಿಂದ ಕೂಡಿ, ಆತ್ಮನಿಂದಕ ನಾಗಿರುತ್ತಾನೆ. ಸಾಧಾರಣವಾಗಿ ೪೦ ರಿಂದ ೬೦ ವರ್ಷ ವಯಸ್ಸಿನವರಲ್ಲಿ ಕಂಡುಬರುವ ಕಾರಣ ಗೊತ್ತಿಲ್ಲದ ಮನೋವಿಕೃತಿ.

involutional psychotic reaction: ಅರಳು-ಮರಳು. ಮಧ್ಯವಯಸ್ಸು ದಾಟಿ, ಮುಪ್ಪಿಗೆ ಕಾಲಿಡುವ ಕಾಲದಲ್ಲಿ ಬರುವ ಭಾವ ವೈಪರೀತ್ಯಗಳನ್ನು ಈ ವಿಭಾಗಕ್ಕೆ ಸೇರಿಸುತ್ತಾರೆ. ಇಳಿವಯಸ್ಸಿನಲ್ಲಿ ಬರುವ ವಿಷಾದ, ಸಂಭ್ರಾಂತಿ ಮನೋವಿಕೃತಿ.

inward strain: ಆಂತರಿಕ ಆಯಾಸ; ಅಂತರ್ಗತ ಒತ್ತಡ.

ipso facto: ವಸ್ತುಸ್ಥಿತಿಗನುಗುಣವಾಗಿ; ಈ ಕಾರಣದಿಂದ; ಅದೇ ಸಂಬಂಧದಿಂದ.

ipso jure: ವಿಧಿಗನುಗುಣವಾಗಿ, ಕಾನೂನು ಬದ್ಧವಾಗಿ.

ipsum esse subsistens: ದೇವರ ಸ್ವತ: ಸಿದ್ಧ ಅಸ್ತಿತ್ವ.

iron age: ಕಬ್ಬಿಣ ಯುಗ.

iron law of wages: ಕೂಲಿಯ ಗಡಸು ನಿಯಮ; ಕೂಲಿಯ ನಿರ್ದಾಯಿ ನಿಯಮ.

irrational reaction: ವಿಚಾರಹೀನ ಪ್ರತಿಕ್ರಿಯೆ.

irrationality: ವಿಚಾರ ಹೀನತೆ; ವಿವೇಕ ಹೀನತೆ; ವಿವೇಚನಾ ಶೂನ್ಯತೆ.

irredeemable debt: ವಾಪಸ್ಸು ಮಾಡಲಾಗದ ಸಾಲ.

irrevocable: ಹಿಂತೆಗೆದುಕೊಳ್ಳಲಾಗದ.

irrevocable letter of credit: ರದ್ದು ಮಾಡಲಾಗದ ಪತ್ತಿನ (ಸಾಲದ) ಪತ್ರ. ಬ್ಯಾಂಕರನಿಂದ ಪಾವತಿ ದೃಢೀಕೃತವಾದ ಸಾಲದ ಪತ್ರ.

irritability: ಕೋಪೋದ್ರೇಕ. ಕೋಪ ದಿಂದ ಕೂಡಿದ ಚಡಪಡಿಕೆ.

irritant: ಪ್ರಕ್ಷೋಭನಕಾರಿ; ಉದ್ರೇಕಕಾರಿ.

irritation: ಸಿಡಿಮಿಡಿಗೊಳ್ಳುವುದು; ಉದ್ರೇಕಗೊಳ್ಳುವುದು.

islands of autonomy: ಸ್ವಾಯತ್ತತೆಯ ನಡುಗಡ್ಡೆಗಳು. ಅಮೇರಿಕಾದಲ್ಲಿರುವ ಸ್ವತಂತ್ರ ನಿಯಂತ್ರಣಾಧಿಕಾರದ ಆಯೋಗಗಳು. ಸರಕಾರದ ಅಂಗಗಳ ನಿಯಂತ್ರಣ ದಿಂದ ಸ್ವತಂತ್ರವಾಗಿದ್ದುಕೊಂಡು ಕಾರ್ಯ ನಿರ್ವಹಿಸುವುದರಿಂದ ಅವುಗಳನ್ನು ಸ್ವಾಯುತ್ತತೆಯ ನಡುಗಡ್ಡೆಗಳು ಎಂದು ಕರೆಯಲಾಗುತ್ತದೆ. ಈ ಆಯೋಗಗಳು ಸರಕಾರದ ನಾಲ್ಕನೇ ಅಂಗ ಎಂದು ಹೆಸರು ಪಡೆದಿವೆ.

iso-cost curve: ಸಮ-ವೆಚ್ಚ ರೇಖೆ; ಸಮಬೆಲೆ ರೇಖೆ. ನಿಗದಿತ ಹಣದ ಪ್ರಮಾಣ ದಲ್ಲಿ ಖರೀದಿಸಬಹುದಾದ ಸಂಪನ್ಮೂಲಗಳ ಆದ್ಯ ಸಂಯೋಜನೆಗಳನ್ನು ತೋರಿಸುವ ರೇಖೆ.

isocracy: ಸಮಾನಾಧಿಕಾರ ಪ್ರಭುತ್ವ; ಎಲ್ಲಾ ಜನರೂ ಸಮಾನ ರಾಜ್ಯಾಧಿಕಾರ ಪಡೆದಿರುವ ಸರ್ಕಾರ ಪದ್ಧತಿ.

isolated exchange: ಪ್ರತ್ಯೇಕಿತ ವಿನಿಮಯ.

isolation: ಪ್ರತ್ಯೇಕತೆ; ನಿಸ್ಸಂಗತ್ವ; ಒಂಟಿತನ. ಒಂದು ಗುಂಪನ್ನು ಅದೇ ಲಕ್ಷಣಗಳ ಇತರ ಗುಂಪಿನಿಂದ ಬೇರ್ಪ ಡಿಸುವುದು ಅಥವಾ ಒಬ್ಬ ವ್ಯಕ್ತಿಯನ್ನು ಆತನ ಸಂಗಡ ದಿಂದ ಬೇರ್ಪಡಿಸುವುದು.

isolation method: ಪ್ರತ್ಯೇಕತಾ ವಿಧಾನ.

isometric map: ಸಮಾನ ಘಟಕ ವೈಪರೀತ್ಯ ನಕಾಶೆ. ಭೌಗೋಳಿಕ ಪ್ರದೇಶ ದಲ್ಲಿ ಯಾವುದಾದರೊಂದು ಪರಿವರ್ತಕದ ಸಂಭವನೀಯತೆಯಲ್ಲಿ ಕಂಡುಬರುವ ವೈಪರೀತ್ಯಗಳ ನಕಾಶೆ. ಉದಾ: ಜನನ ಪ್ರಮಾಣದಲ್ಲಿ ತೋರುವ ವೈಪರೀತ್ಯಗಳು.

isomorphism: ಸಮರೂಪ ವಾದ; ಸಮಾನಾಕೃತಿತ್ವ.

iso-product curve: ಸಮ ಉತ್ಪನ್ನ ರೇಖೆ; ಸಮಾನ ಉತ್ಪನ್ನರೇಖೆ. ಒಂದೇ ರೀತಿಯ ಉತ್ಪನ್ನಗಳನ್ನು ಉತ್ಪಾದಿಸುವ

ಉತ್ಪಾದನಾ ಘಟಕಗಳ ವಿವಿಧ ಸಂಯೋಜನೆಯನ್ನು ತೋರಿಸುವ ನಕ್ಷಾರೂಪದ ವಿವರಣೆ.

issue: ಸಮಸ್ಯೆ; ಸಂಗತಿ; ಶಿಶು.

isthmian: ಭೂಸಂಧಿ; ಎರಡು ದೊಡ್ಡ ಭೂಖಂಡಗಳ ನಡುವೆ ಅಥವಾ ಎರಡು ದೊಡ್ಡ ಸಮುದ್ರಗಳ ನಡುವೆ ಇರುವ ಇಕ್ಕಟ್ಟಾದ ಭೂಭಾಗವೇ ಭೂಸಂಧಿ.

isthmian location: ಭೂಸಂಧಿ ಸ್ಥಾನ. ಭೂಸಂಧಿಯ ಸಮೀಪ ಇರುವ ಸ್ಥಾನ.

item analysis: ಅಂಶ ವಿಶ್ಲೇಷಣೆ.

J

jagati: ದೇಗುಲದ ಸುತ್ತಲಿರುವ ಎತ್ತರದ ಜಗಲಿ.

jagir: ಜಹಗೀರು. ರಾಜ್ಯದ ಪ್ರಜೆಗೆ ನಿರ್ದಿಷ್ಟ ಅವಧಿಗೆ ಆಡಳಿತಾಧಿಕಾರದೊಡನೆ ನೀಡಿದ ನಿರ್ದಿಷ್ಟ ಕಂದಾಯವುಳ್ಳ ಭೂಮಿ.

jagir system: ಜಾಗೀರ್ ಪದ್ಧತಿ. ಅರಸನು ತನ್ನ ಆಪ್ತರಿಗೆ, ಸೇನಾಮುಖ್ಯರಿಗೆ, ಬ್ರಾಹ್ಮಣರಿಗೆ, ಪಂಡಿತರಿಗೆ ಹೀಗೆ ತನ್ನ ಇಷ್ಟಕ್ಕೆ ಅರ್ಹರೆನಿಸಿದವರಿಗೆ ನೀಡಿದ ಉಂಬಳಿ ಭೂಮಿ.

jagirdar: ಜಾಗೀರುದಾರ; ಜಾಗೀರು ಹೊಂದಿರುವವ.

jail folklore: ಸೆರೆಮನೆ ಜಾನಪದ.

jajmani system: ಜಜ್‌ಮಾನಿ ವ್ಯವಸ್ಥೆ (ಪದ್ಧತಿ). ಉತ್ತರ ಭಾರತದ ಕೃಷಿಕರು ತಮ್ಮ ಕೃಷಿಕಾರ್ಯಗಳಿಗೆ ಅಗತ್ಯವಾದ ಕಮ್ಮಾರ, ಬಡಗಿ ಮುಂತಾದ ವಿವಿಧ ಕಸುಬುದಾರರಿಗೆ ಧಾನ್ಯರೂಪದಲ್ಲಿ ಸಂಭಾವನೆ ನೀಡುವುದರ ಮೂಲಕ ಪರಸ್ಪರಾವಲಂಬನೆ ಬೆಳೆಸಿಕೊಂಡ ಪದ್ಧತಿ. ಇದು ಕರ್ನಾಟಕದ 'ಆಯಾ' ಪದ್ಧತಿಯನ್ನು ಹೋಲುತ್ತದೆ.

jama: ಜಮಾ; ಒಟ್ಟು ಮೊತ್ತ; ಒಟ್ಟು ಭೂಕಂದಾಯ.

jamabandi: ಜಮಾಬಂದಿ. ಗ್ರಾಮದ/ಜಿಲ್ಲೆಯ ನಿರ್ದಿಷ್ಟ ಭೂಮಿಯ ಕಂದಾಯ ಮೊತ್ತದ ನಿಷ್ಕರ್ಷೆ ಮತ್ತು ವಸೂಲಿ.

jargon: ವಿಶಿಷ್ಟ ಪದ ಪ್ರಯೋಗ. ವ್ಯಾಪಾರಿ ಅಥವಾ ವೃತ್ತಿಪರ ಗುಂಪುಗಳು ಬಳಸುವ ವಿಶಿಷ್ಟ ಪದಗಳು.

jatakas: ಜಾತಕಗಳು; ಬುದ್ಧನ ಜನ್ಮ ಕಥೆಗಳು. ಇವು ಬುದ್ಧನ ಕಾಲದಲ್ಲಿನ ಭಾರತದ ರಾಜಕೀಯ, ಸಾಮಾಜಿಕ ಸ್ಥಿತಿಗತಿಗಳ ವಿವರಣೆಯನ್ನು ನೀಡುತ್ತವೆ.

jhajiya: ಝುಜಿಯಾ; ತಲೆಗಂದಾಯ. ಭಾರತ ಹಾಗೂ ಮುಸ್ಲಿಂ ರಾಷ್ಟ್ರಗಳಲ್ಲಿ ಮುಸ್ಲಿಂ ರಾಜರಿಗೆ ಮುಸ್ಲಿಮೇತರ ಪ್ರಜೆಗಳು ಕೊಡಬೇಕಾಗಿದ್ದ ಕರ. ಭಾರತದಲ್ಲಿ ಕ್ರಿ.ಶ. ೭೧೦-೭೧೩ರಲ್ಲಿ ಸಿಂಧ್‌ಪ್ರಾಂತ್‌ದಲ್ಲಿ ಮಹಮದ್ ಬಿನ್ ಕಾಸಿಂ ಆರಂಭಿಸಿದನು.

jihad: ಇಸ್ಲಾಂ ಧರ್ಮಯುದ್ಧ. ಮುಸ್ಲಿಮೇತರರನ್ನು ಮುಸ್ಲಿಂ ಮತಕ್ಕೆ ಪರಿ ವರ್ತಿಸಲು ನಡೆಸುವ ಧಾರ್ಮಿಕ ಯುದ್ಧ.

jina: ಜಿನ. ಇಂದ್ರಿಯಗಳನ್ನು ಜಯಿಸಿದವನು.

jizya: ಜಿಝ್ಯಾ, ತಲೆಗಂದಾಯ. ನೋಡಿ: jhajiya.

job analysis: ವೃತ್ತಿ ವಿಶ್ಲೇಷಣೆ.

job attitude: ವೃತ್ತಿ ಮನೋಭಾವ; ವೃತ್ತ್ಯಭಿವೃತ್ತಿ.

job classification: ವೃತ್ತಿ ವರ್ಗೀಕರಣ; ಕೆಲಸದ ವರ್ಗೀಕರಣ.

job efficiency: ಕಾರ್ಯ ದಕ್ಷತೆ.

job psychograph: ಕೆಲಸದ ಮನೋಲೇಖ.

job requirements: ಕಾರ್ಯಾರ್ಹತೆಗಳು.

job rotation: ಕೆಲಸದ ಚಕ್ರ; ಕಾರ್ಯಚಕ್ರ.

job satisfaction: ಕೆಲಸದ ಸಂತೃಪ್ತಿ; ಕಾರ್ಯ ಸಂತೃಪ್ತಿ.

job security: ನೌಕರಿಯ ಭದ್ರತೆ.

job sensation: ಕೆಲಸದ ಸಂವೇದನೆ.

joint conjugal roles: ಜಂಟಿ ದಾಂಪತ್ಯ ಪಾತ್ರಗಳು.

joint cost: ಸಂಯುಕ್ತ ವೆಚ್ಚ; ಜಂಟಿ ವೆಚ್ಚ. ಎರಡು ಅಥವಾ ಎರಡಕ್ಕಿಂತ ಹೆಚ್ಚು ಸರಕುಗಳ ಏಕಕಾಲಿಕ ಉತ್ಪಾದನೆಗೆ ತಗಲುವ ಪ್ರತ್ಯೇಕಿಸಲಾಗದ ವೆಚ್ಚ.

joint cultivation: ಸಂಯುಕ್ತ ಸಾಗುವಳಿ (ವ್ಯವಸಾಯ). ಜಂಟಿ ವ್ಯವಸಾಯ.

joint demand: ಸಂಯುಕ್ತ ಜಂಟಿ ಬೇಡಿಕೆ. ಪರಸ್ಪರ ಪೂರಕ ವಸ್ತುಗಳಿಗಿರುವ ಬೇಡಿಕೆ. ಉದಾ: ಬ್ರೆಡ್ ಮತ್ತು ಬೆಣ್ಣೆಯ ಬೇಡಿಕೆ.

joint family: ಅವಿಭಕ್ತ ಕುಟುಂಬ; ಕೂಡು ಕುಟುಂಬ. ಒಂದೇ ಮನೆಯಲ್ಲಿ ವಾಸಿಸುತ್ತಿದ್ದು ಒಂದೇ ಒಲೆಯ ಅಡಿಗೆಯೂಟ ಸೇವಿಸುತ್ತಿದ್ದು, ಕುಟುಂಬದ ಆಸ್ತಿಯ ಮೇಲೆ ಸಮಾನ ಒಡೆತನವನ್ನು ಹೊಂದಿದ್ದು ಪೂಜಾ ಕಾರ್ಯಗಳಲ್ಲಿ ಸಾಮೂಹಿಕವಾಗಿ ಪಾಲ್ಗೊಳ್ಳುತ್ತಿದ್ದು ಮೂರು ನಾಲ್ಕು ಪೀಳಿಗೆಗಳಿಗೆ ಸೇರಿದ ಒಂದೇ ರಕ್ತಸಂಬಂಧ ಹೊಂದಿದ ಸಮೂಹ.

joint farming society: ಸಂಯುಕ್ತ ಬೇಸಾಯ ಸಂಘ. ಜಂಟಿ ವ್ಯವಸಾಯ ಸಂಘ.

joint habitation: ಸಹವಾಸ್ತವ್ಯ.

joint product: ಸಂಯುಕ್ತ ಉತ್ಪನ್ನ; ಜಂಟಿ ಉತ್ಪನ್ನ. ಒಂದೇ ಪ್ರಕ್ರಿಯೆಯಿಂದ ಅಥವಾ ವಸ್ತುವಿನಿಂದ ಎರಡು ಅಥವಾ ಎರಡಕ್ಕಿಂತ ಹೆಚ್ಚು ವಸ್ತುಗಳ ಉತ್ಪಾದನೆ. ಉದಾ: ಕುರಿಯಿಂದ ಉಣ್ಣೆ ಮತ್ತು ಮಾಂಸದ ಉತ್ಪಾದನೆ.

joint secretary: ಸಹಕಾರ್ಯದರ್ಶಿ.

joint sector: ಸಂಯುಕ್ತ (ಜಂಟಿ) ವಲಯ.

joint session: ಜಂಟಿ ಅಧಿವೇಶನ. ಉದಾ: ಭಾರತದ ಸಂಸತ್ತಿನ ಎರಡೂ ಸದನಗಳ ನಡುವೆ ಭಿನ್ನಾಭಿಪ್ರಾಯ ಉಂಟಾದಾಗ ಆ ಭಿನ್ನಾಭಿಪ್ರಾಯವನ್ನು ಬಗೆಹರಿಸಲು ಸಂವಿಧಾನದ ಪ್ರಕಾರ ರಾಷ್ಟ್ರಪತಿಯು ಕರೆಯುವ ಎರಡೂ ಸದನಗಳ ಜಂಟಿ ಅಧಿವೇಶನ.

joint sitting: ಜಂಟಿ ಸಭೆ; ದ್ವಿಸದನ ಪದ್ಧತಿಯ ಶಾಸಕಾಂಗದ ಎರಡೂ ಸದನಗಳು ಒಟ್ಟಿಗೆ ಸೇರಿ ನಡೆಸುವ ಸಭೆ (ಅಧಿವೇಶನ).

joint stock company: ಜಂಟಿ ಬಂಡವಾಳ ಸಂಸ್ಥೆ; ಸಂಯುಕ್ತ ಬಂಡವಾಳ ಸಂಸ್ಥೆ. ಸ್ವಪ್ರೇರಣೆಯಿಂದ ಹಲವರು ಕಲೆತು ಸಮಮೌಲ್ಯದ ಶೇರುಗಳ ರೂಪದಲ್ಲಿ ಬಂಡವಾಳ ಹೂಡಿ ಒಂದೇ ಹೆಸರು ಹಾಗೂ ಒಂದೇ ಮುದ್ರೆಯನ್ನು ಹೊಂದಿ ಲಾಭ

ದಾಯಕ ಉದ್ಯಮದಲ್ಲಿ ತೊಡಗಿ ರುವ ಸಂಸ್ಥೆ. ಇದರ ಲಾಭಾಂಶವು ಸದಸ್ಯರು ಹೊಂದಿರುವ ಶೇರುಗಳಿಗೆ ಅನುಗುಣವಾಗಿ ಹಂಚಲ್ಪಡುತ್ತದೆ.

joint supply: ಸಂಯುಕ್ತ ಪೂರೈಕೆ; ಜಂಟಿ ಪೂರೈಕೆ.

joint venture: ಜಂಟಿ ಉದ್ಯಮ; ಸಂಯುಕ್ತ ಉದ್ಯಮ. ಒಂದು ಯೋಜನೆಯಲ್ಲಿ ಎರಡು ಸಂಸ್ಥೆಗಳು ಭಾಗಶಃ ನಿಯಂತ್ರಣವನ್ನು ಹೊಂದಿದ್ದು ಹೂಡಿಕೆ ಮಾಡುವ ಒಂದು ವ್ಯಾವಹಾರಿಕ ವ್ಯವಸ್ಥೆ.

joke tale: ವಿನೋದ ಕತೆ.

joking relationship: ವಿನೋದ ಸಂಬಂಧ; ನಗೆಚಾಟಿ ಸಂಬಂಧ. ಉದಾ: ಸೋದರ ಮಾವ-ಸೋದರಳಿಯರ ನಡುವಿನ ಛೇಡಿಸುವ ಸಂಬಂಧ. ಈ ಸಂಬಂಧವು ಹೆಚ್ಚು ಮುಕ್ತವಾಗಿದ್ದು ಮಾತುಗಳಲ್ಲಿ ಲೈಂಗಿಕ ಹಾಸ್ಯವೂ ಸೇರಿರುತ್ತದೆ. ಕೆಲವು ಬುಡಕಟ್ಟುಗಳಲ್ಲಿ ಇದು ಸ್ತ್ರೀ ಪುರುಷರ ಮಧ್ಯೆಯೂ ಇರುತ್ತದೆ. ನೋಡಿ: privileged disrespect.

jot, jote, jhote: ಬೇಸಾಯಗಾರನ ಗೇಣಿಯ ಅವಧಿ; ಬೇಸಾಯಗಾರ ನೀಡುವ ಗೇಣಿ ಅಥವಾ ಕಂದಾಯ.

jotedar: ಸರಕಾರ ಅಥವಾ ಜಮೀನುದಾರನಿಂದ ನೇರವಾಗಿ ಭೂಮಿ ಹೊಂದಿರುವಾತ.

journalism: ಪತ್ರಿಕೋದ್ಯಮ.

judge made law: ನ್ಯಾಯಾಧೀಶ ನಿರ್ಮಿತ ಕಾನೂನು. ಇಂಗ್ಲೆಂಡಿನಲ್ಲಿ ನ್ಯಾಯಾಧೀಶರು ತಮ್ಮ ಸ್ವಂತ ವಿವೇಚನೆಯಿಂದ ಬದಲಾದ ಪರಿಸ್ಥಿತಿಗೆ ತಕ್ಕಂತೆ ಕಾನೂನುಗಳನ್ನು ಅರ್ಥೈಸಿ ಜಾರಿಯಲ್ಲಿ ತರುವುದು.

judgement: ನ್ಯಾಯನಿರ್ಣಯ; ನ್ಯಾಯ ತೀರ್ಮಾನ.

judgement debtor: ತೀರ್ಮಾನಿತ ಸಾಲಗಾರ. ಮೊಬಲಗೊಂದನ್ನು ಇನ್ನೊಬ್ಬರಿಗೆ ಪಾವತಿ ಮಾಡಬೇಕೆಂದು ನ್ಯಾಯಾಲಯ ಯಾರಿಗೆ ಆಜ್ಞೆ ಮಾಡಿದೆಯೋ ಆ ವ್ಯಕ್ತಿ.

judgement test: ನಿರ್ಣಯ ಪರೀಕ್ಷಣ.

judgementation: ಮೌಲ್ಯ ಉನ್ಮುಖತೆ.

judiciable: ವಿಚಾರಣಾರ್ಹವಾಗಿರುವ.

judicial authority: ನ್ಯಾಯಿಕ ಪ್ರಾಧಿಕಾರ.

judicial award: ನ್ಯಾಯಾಲಯ ನಿರ್ಣಯ; ಕೋರ್ಟು ನಿರ್ಣಯ.

judicial commissioner: ನ್ಯಾಯಿಕ ಆಯುಕ್ತ; ನ್ಯಾಯಾಂಗ ಆಯುಕ್ತ. ಕೇಂದ್ರಾಡಳಿತ ಪ್ರದೇಶಗಳ ಪ್ರಮುಖ ನ್ಯಾಯಾಲಯಗಳ ಮುಖ್ಯ ನ್ಯಾಯಾಧೀಶ.

judicial control: ನ್ಯಾಯಿಕ ನಿಯಂತ್ರಣ; ನ್ಯಾಯಾಂಗ ನಿಯಂತ್ರಣ. ಆಡಳಿತಾಧಿಕಾರಿಗಳು ಕೈಗೊಳ್ಳುವ ವಿವಿಧ ಕ್ರಮಗಳು ಶಾಸನಬದ್ಧವಾಗಿವೆಯೇ ಎಂಬುದನ್ನು ಖಾತರಿಪಡಿಸಿಕೊಂಡು, ಪೌರರ ಹಕ್ಕು ಮತ್ತು ಸ್ವಾತಂತ್ರ್ಯವನ್ನು ರಕ್ಷಿಸುವುದೇ ನ್ಯಾಯಾಂಗ ನಿಯಂತ್ರಣ.

judicial decision: ನ್ಯಾಯಾಂಗ ನಿರ್ಣಯ; ನ್ಯಾಯಾಂಗ ನಿರ್ಧಾರ.

judicial enquiry: ನ್ಯಾಯಾಂಗ ವಿಚಾರಣೆ.

judicial function: ನ್ಯಾಯಿಕ ಪ್ರಕಾರ್ಯ; ನ್ಯಾಯಾಂಗ ಕಾರ್ಯ.

judicial interpretation: ನ್ಯಾಯಾಂಗದ ವ್ಯಾಖ್ಯೆ.

judicial method: ನ್ಯಾಯಾಂಗ ವಿಧಾನ.

judicial power: ನ್ಯಾಯಾಂಗಾಧಿಕಾರ, ನ್ಯಾಯಿಕ ಅಧಿಕಾರ.

judicial proceeding: ನ್ಯಾಯಾಂಗ ಕಾರ್ಯಕಲಾಪ, ನ್ಯಾಯಿಕ ವ್ಯವಹಾರ.

judicial remedies: ನ್ಯಾಯಾಂಗ ನಿವಾರಣೋಪಾಯಗಳು.

judicial review: ನ್ಯಾಯಾಂಗ ಮರುಪರಿಶೀಲನೆ. ೧.ಶಾಸಕಾಂಗ ರೂಪಿಸಿದ್ದ ಕಾನೂನು ಸಂವಿಧಾನಬದ್ಧವಾಗಿದೆಯೋ ಇಲ್ಲವೋ ಎಂಬುದನ್ನು ನಿರ್ಧರಿಸುವ ನ್ಯಾಯಾಂಗದ ಅಧಿಕಾರ. ೨. ಶಾಸನಗಳ, ನಿಯಮಗಳ ಇಲ್ಲವೇ ಸರಕಾರದ ಅಂಗಗಳಾದ ಶಾಸಕಾಂಗ ಅಥವಾ ಕಾರ್ಯಾಂಗದ ಕಾರ್ಯಾಚರಣೆಗಳ ಸಂವಿಧಾನಬದ್ಧತೆಯನ್ನು ನಿರ್ಧರಿಸುವ ನ್ಯಾಯಾಂಗದ ಅಧಿಕಾರ.

judicial separation: ಕಾನೂನು ನಿರ್ದೇಶಿತ ಬೇರ್ಪಡಿಕೆ.

judicial settlement: ನ್ಯಾಯಾಂಗ ನಿರ್ಣಯ. ವಿವಾದಗಳನ್ನು ಕಾನೂನುಗಳ ಆಧಾರದ ಮೇಲೆ ಬಗೆಹರಿಸುವುದು.

judicial supremacy: ನ್ಯಾಯಾಂಗ ಶ್ರೇಷ್ಠತೆ.

judicial system: ನ್ಯಾಯಾಂಗ ವ್ಯವಸ್ಥೆ.

judiciary: ನ್ಯಾಯಾಂಗ. ನ್ಯಾಯ ನೀಡಿಕೆ, ನ್ಯಾಯ ವಿಮರ್ಶೆ, ನ್ಯಾಯಾಂಗ ತನಿಖೆ ಹಾಗೂ ವಿಶಿಷ್ಟ ಸಂದರ್ಭಗಳಲ್ಲಿ ಸರಕಾರಕ್ಕೆ ಸಲಹೆ ನೀಡುವುದು ಹಾಗೂ ಸಂವಿಧಾನ ಮತ್ತು ಪ್ರಜೆಗಳ ಹಕ್ಕುಗಳ ಸಂರಕ್ಷಣೆಯ ಕಾರ್ಯವನ್ನು ನಿರ್ವಹಿಸುವ ಸರಕಾರದ ಪ್ರಮುಖ ಅಂಗ.

jungle law: ಅರಣ್ಯ ಕಾನೂನು.

junior levirate: ಕಿರಿಯ ನಿಯೋಗ ಪದ್ಧತಿ. ತಮ್ಮನು ಮೃತ ಅಣ್ಣನ ಹೆಂಡತಿಯನ್ನು ಮದುವೆಯಾಗುವ ಪದ್ಧತಿ.

junior right: ಕಿರಿಯನ ಹಕ್ಕು. ಸಹೋದರರಲ್ಲಿ ಅತ್ಯಂತ ಕಿರಿಯವನು ಆಸ್ತಿಯ ಹಕ್ಕನ್ನು ಹೊಂದಿರುವಿಕೆ.

junior sororate: ಸತಿ ಸಹೋದರಿ ವಿವಾಹ. ಹೆಂಡತಿಯಲ್ಲಿ ಮಕ್ಕಳಾಗದಿದ್ದಾಗ ಅಥವಾ ಆಕೆ ತೀರಿಕೊಂಡಾಗ ಆಕೆಯ ತಂಗಿಯೊಂದಿಗೆ ವಿವಾಹ ಜರಗುತ್ತಿದ್ದ ಪದ್ಧತಿ.

junta: ಜಂಟಾ. ಯಾವುದೇ ಒಂದು ದೇಶದಲ್ಲಿ ಫ್ಯಾಸಿಸ್ಟ್ ಸರ್ವಾಧಿಕಾರವನ್ನು ಸ್ಥಾಪಿಸಿ ಭೀಕರ ರಕ್ತಪಾತ, ಸಾಮೂಹಿಕ ಬಂಧನಗಳು, ಕಮ್ಯೂನಿಸ್ಟರನ್ನು ಮತ್ತು ಇತರ ಪುರೋಗಾಮಿಗಳನ್ನು ಕಾರಾಗೃಹಗಳಲ್ಲಿ ಹಾಗೂ ಚಿತ್ರಹಿಂಸಾಶಿಬಿರಗಳಲ್ಲಿ ಸ್ಥಾನಬದ್ಧತೆಯಲ್ಲಿಡುವುದು ಮತ್ತು ಕೊಲೆಗೈಯುವುದು ಇವೇ ಮೊದಲಾದ ಘೋರ ಕೃತ್ಯಗಳನ್ನು ಮಾಡುತ್ತಾ ಆಡಳಿತ ನಡೆಸುವ ಪ್ರತಿಗಾಮಿ ಭಯೋತ್ಪಾದಕ ಕೂಟಗಳನ್ನು ವಿವರಿಸಲು ವ್ಯಾಪಕವಾಗಿ ಬಳಸುವ ಪದ.

juridical approach: ನ್ಯಾಯಿಕ ದೃಷ್ಟಿಕೋನ; ನ್ಯಾಯಿಕ ಸಮೀಪನ.

jurisdiction: ಕಾರ್ಯವ್ಯಾಪ್ತಿ; ಅಧಿಕಾರ ವ್ಯಾಪ್ತಿ; ನ್ಯಾಯಾಧಿಕಾರ.

jurisprudence: ನ್ಯಾಯಶಾಸ್ತ್ರ.

jury: ನ್ಯಾಯ ನಿರ್ಣಾಯಕ; ನ್ಯಾಯದರ್ಶಿ ಮಂಡಲ. ಇಂಗ್ಲೆಂಡಿನ ನ್ಯಾಯಾಂಗ ವ್ಯವಸ್ಥೆಯಲ್ಲಿ ನ್ಯಾಯದರ್ಶಿಗಳು ಪ್ರಮುಖ ಪಾತ್ರ ವಹಿಸುತ್ತಾರೆ. ನ್ಯಾಯ ವಿಚಾರಣೆಯ ಸಂದರ್ಭದಲ್ಲಿ ನ್ಯಾಯದರ್ಶಿಗಳ ಸಲಹೆಯನ್ನು ಕೇಳಲಾಗುತ್ತದೆ.

jus civile: ಪ್ರಜೆಗಳಿಗೆ ಮಾತ್ರ ಅನ್ವಯಿಸುವ.

jus gentium: ಅಧೀನ ರಾಷ್ಟ್ರಗಳ ಜನಾಂಗಗಳಿಗೆ ಅನ್ವಯಿಸುವ ಕಾನೂನು.

jus jantium: ಕುಲೀನರ ಕಾನೂನು.

jus naturae: ನೋಡಿ: jus naturale.

jus naturale: ಸ್ವಾಭಾವಿಕ ನಿಯಮ.

justice of peace: ಶಾಂತಿಪಾಲಕ ನ್ಯಾಯಾಧೀಶ; ಗೌರವ ನ್ಯಾಯಾಧಿಪತಿ. ಇಂಗ್ಲೆಂಡಿನ ಅತ್ಯಂತ ಕೆಳಗಿನ ಫೌಜದಾರಿ ನ್ಯಾಯಾಲಯಗಳು ಕ್ಷುಲ್ಲಕ ಸ್ವರೂಪದ ಅಪರಾಧಗಳ ವಿಚಾರಣೆ ಮಾಡುತ್ತವೆ. ಈ ಕೆಲಸ ಕೆಲವೊಮ್ಮೆ ಗೌರವ ನ್ಯಾಯಾಧೀಶರಿಂದ (ವೇತನ ಪಡೆಯದೆ ಕೆಲಸ ಮಾಡುವ ನ್ಯಾಯಾಧೀಶರು) ನಡೆಯುತ್ತದೆ.

justiciable: ನ್ಯಾಯ ವಿಚಾರಣಾರ್ಹವಾಗಿರುವ.

justiciable reason: ಸಮರ್ಥನೀಯ ಕಾರಣ.

justiciable right: ನ್ಯಾಯಬದ್ಧ ಹಕ್ಕು.

justification: ಔಚಿತ್ಯ; ಸಮರ್ಥನೆ.

juvenile: ಬಾಲಕ/ಕಿ. ಎಳೆಯ ಪ್ರಾಯದವರು.

juvenile correction: ಬಾಲ ಸುಧಾ ರಣೆ. ಬಾಲಾಪರಾಧಿಗಳಿಗೆ ಶಿಕ್ಷಣ ಹಾಗೂ ಉದ್ಯೋಗ ತರಬೇತಿ ನೀಡಿ ಸುಧಾರಣೆಗೊಳಿಸುವಿಕೆ.

juvenile court: ಬಾಲ ನ್ಯಾಯಾಲಯ, ಬಾಲಾಪರಾಧಿ ನ್ಯಾಯಾಲಯ.

juvenile crime: ಬಾಲಾಪರಾಧ.

juvenile delinquency: ಬಾಲಾ ಪರಾಧ. ಆಯಾ ದೇಶದ ಕಾನೂನಿನಂತೆ ನಿರ್ದಿಷ್ಟ ವಯಸ್ಸಿಗಿಂತ ಕೆಳಗಿನ ಮಕ್ಕಳ ಅಪರಾಧ.

juvenile delinquent: ಬಾಲಾಪರಾಧಿ.

juvenile probation: ಬಾಲಾಪರಾಧಿ ಗಳ ಪರಿವೀಕ್ಷಣೆ.

juvenile problems: ಬಾಲ ಸಮಸ್ಯೆ ಗಳು; ಕೌಮಾರ್ಯ ಸಮಸ್ಯೆಗಳು.

K

kamiya: ಜೀತದಾಳು; ಕೆಲಸದಾಳು; ಜೀತಗಾರ.

karma: ಕರ್ಮ; ಕರ್ಮ ಸಿದ್ಧಾಂತ. ಅವರವರ ಕರ್ಮಗಳಿಗೆ (ಕೆಲಸಗಳಿಗೆ) ತಕ್ಕಂತೆ ಫಲ ದೊರೆಯುತ್ತದೆಂಬ ನಂಬಿಕೆ.

karnam: ಗ್ರಾಮ ಕರಣಿಕ.

kaulnam: ಕೌಲುನಾಮಾ. ಕಂದಾಯ ಪಾವತಿದಾರರಿಗೆ ನೀಡುವ ಲಿಖಿತ ದಾಖಲೆ.

key industry: ಪ್ರಮುಖ ಕೈಗಾರಿಕೆ (ಉದ್ದಿಮೆ). ದೇಶದ ಇತರ ಕೈಗಾರಿಕೆಗಳಿಗೂ, ಇಡೀ ಅರ್ಥ ವ್ಯವಸ್ಥೆಗೂ ಮುಖ್ಯವೆನಿಸುವ ಕೈಗಾರಿಕೆ.

khaji: ಖಾಜಿ; ಮುಸ್ಲಿಂ ಕಾಯಿದೆ ಪರಿಣತ.

khalsa: ಖಾಲ್ಸಾ. ೧. ದಿಲ್ಲಿ ಸುಲ್ತಾನರಲ್ಲಿ ಭೂಕಂದಾಯ ಪದ್ಧತಿಗೆ ಬಳಸಲಾಗುತ್ತಿದ್ದ ಪದ. ೨. ಸಿಖ್ಖರ ಮಿಲಿಟರಿ ದೇವಾಧಿಪತ್ಯ.

khalsa land: ಖಾಲ್ಸಾ ಭೂಮಿ. ರಾಜ್ಯ ಸರಕಾರ ನೇರವಾಗಿ ಹೊಂದಿರುವ ಮತ್ತು ನಿರ್ವಹಣೆ ಮಾಡುವ ಭೂಮಿ.

kham: ಕಾಮ್. ಇಂಡೋ-ಮುಸ್ಲಿಂ ರಾಜ್ಯ ವ್ಯವಸ್ಥೆಯಲ್ಲಿನ ಕಂದಾಯದ ಮೂಲ.

kharaj: ತೆರಿಗೆ ಭೂಕಂದಾಯ.

kharosti: ಖರೋಷ್ಠಿ ಲಿಪಿ. ಆರ್ಯ ಮೇಯಕ್‌ನಿಂದ ಬಂದ ವಾಯವ್ಯ ಭಾರತ ದಲ್ಲಿ ಬಳಸಲಾದ ಒಂದು ಲಿಪಿ.

khata: ಖಾತೆ. ಒಡೆತನದಲ್ಲಿರುವ ಪ್ರತಿ ಭೂಮಿಯ ಲೆಕ್ಕಚಾರ ನಮೂದಿಸಿರುವ ದಾಖಲೆ.

khiraj: ನೋಡಿ: Kharaj.

khudkasht: ಸ್ವಂತ ಬೇಸಾಯ. ಭೂ ಮಾಲಿಕನೇ ಸ್ವತಃ ವ್ಯವಸಾಯ ಮಾಡು ವುದು.

kibbutizim: ಕಿಬುಟ್ಸಿ ಸಹಕಾರಿ ಸಮು ದಾಯ. ಇಸ್ರೇಲಿನಲ್ಲಿ ಸಹಕಾರಿ ತತ್ವದ ಆಧಾರದ ಮೇಲೆ ಉತ್ಪಾದನಾ ಕಾರ್ಯವನ್ನು ಮಾಡುವ ಸಮುದಾಯಗಳು. ಇಲ್ಲಿ ಸಂಪತ್ತು ಹಾಗೂ ಆದಾಯದ ಅಸಮಾನ ತೆಯು ಕನಿಷ್ಠವಾಗಿಡಲ್ಪಟ್ಟಿದೆ.

kin: ರಕ್ತ ಸಂಬಂಧಿ. ತನ್ನದೇ ರಕ್ತಕ್ಕೆ ಸೇರಿದ ಸಂಬಂಧಿ- ತಂದೆ, ತಾಯಿ ಸೋದರ ಸೋದರಿ ಇತ್ಯಾದಿ. ರಕ್ತ ಸಂಬಂಧದ ಗುರುತಿಸು ವಿಕೆಯು ಸಾಂಸ್ಕೃತಿಕ ಕಟ್ಟುಪಾಡಿಗೊಳ ಪಟ್ಟಿರುತ್ತದೆ.

kin group: ಕಳ್ಳು ಬಳ್ಳಿ ಸಮೂಹ. ರಕ್ತ ಸಂಬಂಧದ ಮೇಲೆ ಆಧಾರಿತವಾಗಿರುವ ಸಾಮಾಜಿಕ ಸಂಘಟನೆ.

kinaesthetic sensation: ಸ್ನಾಯು ಚಲನವಲನ ಸಂವೇದನೆ.

kinder garten: ಶಿಶು ವಿಹಾರ.

kindred: ಸಾರೂಪ್ಯತೆ.

kindred group: ವಂಶೀಯ ಸಮೂಹ ಸಾರೂಪ್ಯ ಸಮೂಹ.

kindred system: ವಂಶೀಯ ವ್ಯವಸ್ಥೆ.

king-in-parliament: ಅರಸನನ್ನೊಳ ಗೊಂಡ ಸಂಸತ್ತು. ಇಂಗ್ಲೇಂಡಿನ ಅರಸನು ಸಂಸತ್ತಿನ ಕಾರ್ಯ ಚಟುವಟಿಕೆಗಳಿಗೆ (ಕಾನೂನು ರೂಪಿಸುವಲ್ಲಿ ಪಾತ್ರವಹಿಸು ವುದು) ಸಂಬಂಧಪಟ್ಟಿರುವುದರಿಂದ ಇಂಗ್ಲೇಂಡಿನ ಪಾರ್ಲಿಮೆಂಟನ್ನು ಅರಸ ನನ್ನೊಳಗೊಂಡ ಸಂಸತ್ತು ಎನ್ನಲಾಗುತ್ತದೆ.

king of dominion: ಸ್ವಾಯತ್ತ ರಾಜ್ಯ ಗಳ ಅರಸ.

kingly order: ರಾಜಶಾಹಿ ಪ್ರಕ್ರಮ. ರಾಜನಿಂದ ಆಡಳಿತ ನಡೆಸಲ್ಪಡುವ ರಾಜ ಕೀಯ ವ್ಯವಸ್ಥೆ.

kingship: ರಾಜಪ್ರಭುತ್ವ

kinky demand curve: ಕೊಂಕು (ತಿರುಚಿದ) ಬೇಡಿಕೆ ರೇಖೆ. ಬಹುಜನ ಸ್ವಾಮ್ಯವಿರುವ ಸಂದರ್ಭದಲ್ಲಿ ಬೇಡಿಕೆ ಯಲ್ಲಿ ಅನಿರ್ದಿಷ್ಟತೆಯುಂಟಾಗಿ ಬೇಡಿ ಕೆಯ ರೇಖೆಯು ತೀಕ್ಷ್ಣವಾಗಿ ಬಾಗುತ್ತದೆ. ಕಾರ್ಖಾನೆಗಳ ಬೆಲೆ ಕಡಿತದ ಪ್ರವೃತ್ತಿ ಯಿಂದಾಗಿ ಉಂಟಾಗುವ ಈ ಬಾಗಿದ ರೇಖೆ

ಗಳನ್ನು ಕೊಂಕುಬೇಡಿಕೆ ರೇಖೆ ಎನ್ನಲಾಗುತ್ತಿದೆ.

kinship: ಬಂಧುತ್ವ; ಕಳ್ಳುಬಳ್ಳಿ; ರಕ್ತ ಸಂಬಂಧ. ಸಾಂಸ್ಕೃತಿಕವಾಗಿ ವ್ಯಾಖ್ಯಾನಿಸಲ್ಪಟ್ಟ ಕೌಟುಂಬಿಕ ಸಂಬಂಧದ ಮೇಲೆ ಆಧಾರಿತವಾಗಿರುವ ಸಾಮಾಜಿಕ ಸಂಬಂಧ.

kinship bond: ಕರುಳು ಬಳ್ಳಿ ಸಂಬಂಧ, ಕಳ್ಳುಬಳ್ಳಿ ಬಳಗ.

kinship institution: ನೋಡಿ: family.

kinship order: ನೋಡಿ: family.

kinship roles: ಕಳ್ಳುಬಳ್ಳಿಯ ಪಾತ್ರಗಳು; ಬಂಧುತ್ವದ ಪಾತ್ರಗಳು.

kinship system: ಬಾಂಧವ್ಯ ವ್ಯವಸ್ಥೆ; ರಕ್ತ ಸಂಬಂಧೀ ವ್ಯವಸ್ಥೆ.

kinship term: ರಕ್ತ ಸಂಬಂಧೀ ಪದ; ಬಂಧುತ್ವದ ಪಾರಿಭಾಷಿಕ ಪದ. ರಕ್ತ ಸಂಬಂಧಿಗಳನ್ನು ಸಂಬೋಧಿಸಲು ಬಳಸುವ ಪದ.

kinship usage: ಬಂಧುತ್ವದ ರೂಢಿ; ಬಂಧುತ್ವದ ನಡೆನಡಾವಳಿ; ಬಂಧುತ್ವದ ಬಳಕೆ.

kista: ಭೂಕಂದಾಯ.

kitchen cabinet: ಆಪ್ತಾಲೋಚನಾ (ಮಂತ್ರಾಲೋಚನಾ) ಸಂಪುಟ. ಪ್ರಧಾನ ಮಂತ್ರಿಯೊಡನೆ ತೀರಾ ಆತ್ಮೀಯವಾಗಿರುವ ಮಂತ್ರಿಗಳ ಕೂಟ.

kitchen refuse: ಅಡುಗೆ ಮನೆ ಅವಶೇಷ. ಪುರಾತನ ಮನುಷ್ಯರಿಂದ ತಿನ್ನಲ್ಪಟ್ಟ ಪ್ರಾಣಿಗಳ ಎಲುಬುಗಳ ಅವಶೇಷ.

klallam society: ಒಂದು ಗೌಪ್ಯ ಸಮಾಜ.

kleptomania: ಚೌರ್ಯೋನ್ಮಾದ. ಸ್ವಯಂನಿಯಂತ್ರಣವಿಲ್ಲದೆ ಕದಿಯುವ ಗೀಳು ಮತ್ತು ಚಟ. ಕದ್ದ ವಸ್ತು ವ್ಯಕ್ತಿಯ ಉಪಯೋಗಕ್ಕೆ ಬರುವುದಿಲ್ಲವಾದರೂ ಕದಿಯುವ ಚಟ ಬಿಡುವುದಿಲ್ಲ.

kleptomaniac: ಚೌರ್ಯಾಸಕ್ತ.

kosher food: ಕ್ರಮಬದ್ಧವಾದ ಆಹಾರ; ಸಾಚಾ ಆಹಾರ.

kshatriya: ಕ್ಷತ್ರಿಯ. ಹಿಂದೂ ಸಮಾಜದ ನಾಲ್ಕು ವರ್ಣಗಳಲ್ಲಿ ಎರಡನೆಯ ಸ್ಥಾನದಲ್ಲಿರುವ ರಾಜತ್ವದ ಹಕ್ಕುಳ್ಳ ವರ್ಣ ವಿಭಾಗ.

kula system: ಕುಳ ಪದ್ಧತಿ. ನ್ಯೂಗಿನಿ ಆದಿವಾಸಿಗಳಲ್ಲಿ ಚಕ್ರಾಕಾರವಾಗಿ ವಸ್ತುಗಳ ವಿನಿಮಯ ಪದ್ಧತಿ.

kymograph: ಶರೀರ ಚಲನವಲನಾ ಲೇಖಿ.

L

labelling theory: ನಾಮ ಪಟ್ಟಿಯ ಸಿದ್ಧಾಂತ. ಅಪಮಾರ್ಗೀ ವರ್ತನೆಯ ಅಧ್ಯಯನದ ಈ ಸಿದ್ಧಾಂತದ ಪ್ರಕಾರ ಕೆಲವು ವ್ಯಕ್ತಿಗಳು ಅಪಮಾರ್ಗಿಗಳಾಗಲು ರಾಜಕೀಯ ಅಧಿಕಾರಿಗಳು ಹಾಗೂ ಇತರರು ಅವರಿಗೆ ನಾಮಪಟ್ಟಿ ಅಥವಾ ಕೆಟ್ಟ ಹೆಸರು ಕೊಡುವುದೇ ಕಾರಣ.

laboratory culture: ಪ್ರಯೋಗ ಶಾಲಾ ಸಂಸ್ಕೃತಿ.

laboratory experiment: ಪ್ರಯೋಗಾಲಯ ಪರೀಕ್ಷೆ.

laboratory learning: ಪ್ರಯೋಗ ಶಾಲಾ ಕಲಿಕೆ.

laboratory method: ಪ್ರಯೋಗ ಶಾಲಾ ವಿಧಾನ.

labour: ಶ್ರಮ; ಕಾರ್ಮಿಕ. ಉತ್ಪಾದನೆಯ ಮೂಲಭೂತ ಅಂಶಗಳಲ್ಲೊಂದು. ಇನ್ನುಳಿದವು ಭೂಮಿ (land), ಬಂಡವಾಳ (capital) ಮತ್ತು ಸಂಘಟನೆ (organization).

labour cost of production: ಶ್ರಮ ಉತ್ಪಾದನಾ ವೆಚ್ಚ. ಒಂದು ವಸ್ತುವಿನ ಉತ್ಪಾದನೆಗೆ ತಗಲುವ ಶ್ರಮದ ವೆಚ್ಚ.

labour court: ಕಾರ್ಮಿಕ ನ್ಯಾಯಾಲಯ.

labour economies: ಶ್ರಮದ ಮಿತ ವ್ಯಯಗಳು. ಶ್ರಮವಿಭಜನೆಯ ಮೂಲಕ ಉತ್ಪಾದನೆಯು ಹೆಚ್ಚುವುದರಿಂದ ಉಂಟಾಗುವ ಅನುಕೂಲತೆಗಳು.

labour force: ಶ್ರಮಿಕ ವರ್ಗ.

labour grades: ದುಡಿಮೆಯ ಶ್ರೇಣಿಗಳು.

labour intensive technology: ಶ್ರಮ ಸಾಂದ್ರ (ಆಧಾರಿತ) ತಾಂತ್ರಿಕತೆ. ಶ್ರಮ ಬಾಹುಳ್ಯದ ತಾಂತ್ರಿಕತೆ. ಉತ್ಪಾದನಾ ಪ್ರಕ್ರಿಯೆಯಲ್ಲಿ ಶ್ರಮವು ಇತರ ಉತ್ಪಾದನಾಂಶಗಳಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸಲ್ಪಡುವುದು.

labour legislation: ಕಾರ್ಮಿಕ ಕಾಯಿದೆ (ಶಾಸನ).

labour market : ಶ್ರಮದ ಮಾರುಕಟ್ಟೆ. ಶ್ರಮದ ಪೂರೈಕೆ ಹಾಗೂ ಬೇಡಿಕೆಗಳ ಸಂದರ್ಭದಲ್ಲಿ ಕೂಲಿ, ವೇತನ ಮತ್ತು ಉದ್ಯೋಗಗಳ ಸ್ಥಿತಿಗತಿಗಳು ನಿರ್ಣಯಿಸಲ್ಪಡುವ ಮಾರುಕಟ್ಟೆ.

labour of franchise: ಮತದಾನ ಕಾರ್ಯ.

labour party: ಕೂಲಿಕಾರ ಪಕ್ಷ. ಇಂಗ್ಲೇಂಡಿನ ಪ್ರಮುಖ ರಾಜಕೀಯ ಪಕ್ಷ.

labour power: ಶ್ರಮ ಸಾಮರ್ಥ್ಯ; ಕಾರ್ಮಿಕ ಶಕ್ತಿ.

labour process: ಕಾರ್ಮಿಕ ಪ್ರಕ್ರಿಯೆ. ಮಾನವ ಸಾಮರ್ಥ್ಯವು ಉತ್ತಮ ಉತ್ಪಾದನೆ ಅಥವಾ ಸೇವೆಯಲ್ಲಿ ಫಲಿತಗೊಳ್ಳುವ ಒಂದು ಸಂಘಟಿತ ವ್ಯವಸ್ಥೆಯ ಚಟುವಟಿಕೆ.

labour saving invention: ಶ್ರಮ ಮಿತವ್ಯಯದ ಆವಿಷ್ಕಾರ.

labour theory of value: ಮೌಲ್ಯದ ಶ್ರಮ ಸಿದ್ಧಾಂತ. ಒಂದು ವಸ್ತುವಿನ ಮೌಲ್ಯವು ಅದನ್ನು ಉತ್ಪಾದಿಸಲು ಅವಶ್ಯಕವಾದ ಶ್ರಮದ ಪ್ರಮಾಣವನ್ನು ಅವಲಂಬಿಸಿದೆ.

labour time: ಶ್ರಮ ಸಮಯ.

labour tribunal: ಕಾರ್ಮಿಕ ನ್ಯಾಯ ಮಂಡಳಿ.

labour union: ಕಾರ್ಮಿಕ ಸಂಘ.

labour welfare: ಕಾರ್ಮಿಕ ಕಲ್ಯಾಣ.

labour welfare service: ಕಾರ್ಮಿಕ ಕಲ್ಯಾಣಸೇವೆ.

laffer curve: ಲ್ಯಾಫರ್ ರೇಖೆ. ಸರಕಾರದ ತೆರಿಗೆ ದರ ಮತ್ತು ಅದರಿಂದ ಬರುವ ವಿವಿಧ ಆದಾಯಗಳನ್ನು ವ್ಯಕ್ತಪಡಿಸುವ ರೇಖೆ.

lagrange multiplier: ಲೆಗ್ರಾಂಜ್ ಗುಣಕ. ಒಂದು ಪರಿವರ್ತಕದ ಆದರ್ಶ ಮೌಲ್ಯವನ್ನು ಯಾವುದಾದರೂ ಮಿತಿಗೊಳಪಟ್ಟು ಗಣತಿ ಮಾಡುವುದರ ಮೂಲಕ ಇನ್ನೊಂದು ಪರಿವರ್ತಕವನ್ನು ಗರಿಷ್ಠ ಅಥವಾ ಕನಿಷ್ಠಗೊಳಿಸುವ ವಿಧಾನ.

laissez-faire leadership: ನಿರಾತಂಕ ನಾಯಕತ್ವ.

laissez-faire policy: ಮುಕ್ತ ಆರ್ಥಿಕ ನೀತಿ. ಆರ್ಥಿಕ ಚಟುವಟಿಕೆಗಳಲ್ಲಿ ಸರಕಾರದ ಹಸ್ತಕ್ಷೇಪವಿರದಿರುವಿಕೆ.

lalophobia: ವಾಗ್ಭೀತಿ; ಭಾಷಣ ಭೀತಿ. ಮಾತನಾಡಲು ಹೆದರಿಕೊಳ್ಳುವುದು.

land ceiling: ಭೂಮಿತಿ. ಭೂ ಸುಧಾರಣೆಯ ಶಾಸನದಲ್ಲಿ ಸೇರಿದ ನಿಯಮ. ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಕೃಷಿ ಭೂಮಿಯು ನಿರ್ದಿಷ್ಟ ಮಿತಿಗಿಂತ ಹೆಚ್ಚು ಯಾವನೇ ಒಬ್ಬನ ಖಾಸಗೀ ಮಾಲಕತ್ವದಲ್ಲಿ ಇರಬಾರದೆಂದು ಸರಕಾರವು ವಿಧಿಸಿದ ಭೂಮಿತಿ.

land locked state: ಭೂ ಆವರಿತ ರಾಷ್ಟ್ರ; ಭೂ ಪರಿವೇಷ್ಟಿತ ರಾಷ್ಟ್ರ. ಸಮುದ್ರ ಮಾರ್ಗದ ಕೊರತೆಯನ್ನು ಹೊಂದಿರುವ ರಾಷ್ಟ್ರ.

land lord: ಭೂ ಮಾಲಿಕ; ಜಮೀನು ದಾರ.

land lordism: ಭೂಮಾಲಕತ್ವ. ಅತಿ ಹೆಚ್ಚು ಪ್ರಮಾಣದಲ್ಲಿ ಭೂ ಒಡೆತನವನ್ನು ಹೊಂದಿರುವುದು. ಉದಾ: ಜಮೀನುದಾರಿ ಪದ್ಧತಿ.

land mark: ಪ್ರಮುಖ ಘಟನೆ; ಮೈಲಿಗಲ್ಲು.

land reform: ಭೂ ಸುಧಾರಣೆ. ಭೂ ಹಿಡುವಳಿಗಳ ಒಡೆತನ ಹಾಗೂ ಉಪಯೋಗಗಳಲ್ಲಿರುವ ಅಸಮಾನತೆಗಳನ್ನು ಹೋಗಲಾಡಿಸಿ ಸಾಮಾಜಿಕ ನ್ಯಾಯ ಹಾಗೂ ಕೃಷಿ ಅಭಿವೃದ್ಧಿಯನ್ನು ಸಾಧಿಸುವುದಕ್ಕಾಗಿ ಗೇಣಿಪದ್ಧತಿಯ ರದ್ದತಿ ಹಾಗೂ ಭೂಮಿತಿ ಶಾಸನವನ್ನೊಳಗೊಂಡ ಕಾನೂನು. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಯಾಂತ್ರೀಕರಣ ಮತ್ತು ವೈಜ್ಞಾನಿಕ ವಿಧಾನಗಳಿಂದ ಕೃಷಿಯ ಸುಧಾರಣೆ ಮಾಡಿ ಹೆಚ್ಚಿನ ಉತ್ಪಾದನೆ ಗಳಿಸುವುದನ್ನು ಭೂ ಸುಧಾರಣೆ ಎನ್ನಲಾಗುತ್ತದೆ.

land resource: ಭೂಸಂಪತ್ತು.

land revenue: ಭೂಕಂದಾಯ.

land tenancy: ಭೂಗೇಣಿ ಪದ್ಧತಿ.

land tenure system: ಭೂಹಿಡುವಳಿ ಪದ್ಧತಿ.

language behaviour: ಭಾಷಾ ವರ್ತನೆ.

language boundary: ಭಾಷಾ ಗಡಿ. ಒಂದು ನಿರ್ದಿಷ್ಟ ಭಾಷೆಯನ್ನು ಆಡುವ ಜನರು ವಾಸಿಸುವ ಪ್ರದೇಶದ ಸುತ್ತ ಎಳೆಯಲಾದ ಕಾಲ್ಪನಿಕ ರೇಖೆ.

language games: ಭಾಷಾ ಕ್ರೀಡೆಗಳು. ಉದಾ : ಶಬ್ದಬಂಡಿ, ಪದ್ಯಬಂಡಿ ಇತ್ಯಾದಿ.

laparoscopic sterilisation: ಉದರದರ್ಶಕ ಸಂತಾನಹರಣ ಶಸ್ತ್ರಚಿಕಿತ್ಸೆ.

large scale farming: ಬೃಹತ್ ಪ್ರಮಾಣದ ಕೃಷಿ.

large scale industry: ಬೃಹತ್ ಪ್ರಮಾಣದ ಕೈಗಾರಿಕೆ.

large scale production: ಬೃಹತ್ ಪ್ರಮಾಣದ ಉತ್ಪಾದನೆ.

larger text: ಬೃಹತ್ ಪಠ್ಯ. ನೋಡಿ: text.

laterally extended family: ಪಾರ್ಶ್ವ ವಿಸ್ತೃತ ಕುಟುಂಬ.

latency: ಅಗೋಚರತೆ. ಸುಪ್ತ ಕ್ರಿಯಾತ್ಮಕತೆ. ಕ್ರಿಯಾತ್ಮಕತೆಯು ಸುಪ್ತವಾಗಿ

ರುವಿಕೆ. ಉದಾ: ಏಳರಿಂದ ಹದಿನಾರು ವರ್ಷದೊಳಗಿನ ಹುಡುಗ ಹುಡುಗಿಯರು ಪರಸ್ಪರವಾಗಿ ಹೊಂದಿರುವ ಭಾವನೆಗಳು ಸುಪ್ತವಾಗಿದ್ದು ಬಹಿರಂಗವಾಗಿ ವಿರೋಧ ಪ್ರಕಟಿಸುತ್ತಾರೆ.

latency of response: ಪ್ರತಿಕ್ರಿಯೆಯ ಅಗೋಚರತೆ.

latency period: ಅವ್ಯಕ್ತ ಸ್ಥಿತಿಯ ಕಾಲ. ಭಾವನೆಗಳು ಅಥವಾ ವಿಚಾರಗಳು ವ್ಯಕ್ತಿತ್ವದಲ್ಲಿ ಮೇಲ್ನೋಟಕ್ಕೆ ಕಾಣಿಸದೆ ಹುದುಗಿರುವ ಅವಧಿ. ಇದು ಮಗುವಿನ ಸುಮಾರು ೭ ವರ್ಷದಿಂದ ೧೪ ವರ್ಷಗಳವರೆಗೆ ಇರುತ್ತದೆ.

latent: ಅಪ್ರಕಟಿತ; ಅಗೋಚರ.

latent and manifest conseque nces: ಅಪ್ರಕಟಿತ ಹಾಗೂ ಪ್ರಕಟಿತ ಪರಿಣಾಮಗಳು.

latent condition: ಅವ್ಯಕ್ತ ಸ್ಥಿತಿ.

latent consequence: ನೋಡಿ: latent function.

latent content: ಅವ್ಯಕ್ತ ಗುಣ; ಅವ್ಯಕ್ತ ವಿಷಯ.

latent dream thoughts: ಅವ್ಯಕ್ತ ಸ್ವಪ್ನ ವಿಚಾರಗಳು.

latent excitement: ಅವ್ಯಕ್ತ ಉತ್ತೇಜನ.

latent function: ಸುಪ್ತಕಾರ್ಯ. ಉದ್ದೇಶಿತವಲ್ಲದ ಹಾಗೂ ಮೇಲ್ನೋಟಕ್ಕೆ ತೋರದ ಹಾಗೂ ಪರೋಕ್ಷ ಕಾರ್ಯಾತ್ಮಕ ಸಂಬಂಧ.

latent learning: ಅಂತರ್ಗತ ಕಲಿಕೆ.

latent sexuality: ಸುಪ್ತ ಕಾಮಾವಸ್ಥೆ; ಸುಪ್ತ ಲೈಂಗಿಕತೆ.

latent social identity: ಅಪ್ರತ್ಯಕ್ಷ ಸಾಮಾಜಿಕ ಗುರುತು.

latent structure analysis: ಅಪ್ರತ್ಯಕ್ಷ (ಅಪ್ರಕಟಿತ) ರಚನಾ ವಿಶ್ಲೇಷಣೆ. ಅಪ್ರತ್ಯಕ್ಷ ಸಾಮಾಜಿಕ ಗುರುತಿಸುವಿಕೆ.

latent tendency: ಅವ್ಯಕ್ತ ಪ್ರವೃತ್ತಿ.

latent variable: ಅವ್ಯಕ್ತಚಲ (ಪರಿವರ್ತಕ). ಗಣತಿಗೊಳಪಡಿಸಲಾಗದ ಆದರೆ ಆರ್ಥಿಕ ವಿಶ್ಲೇಷಣೆಯಲ್ಲಿ ಸಹಾಯಕವಾಗುವ ಚಲ.

later adolescence: ಉತ್ತರ ತಾರುಣ್ಯ. ತಾರುಣ್ಯಾವಸ್ಥೆಯ ಕೊನೆಯ ಹಂತ.

lateral inheritance: ನೋಡಿ: collateral inheritance.

lateral integration: ಪಾರ್ಶ್ವಸ್ಥ ಕ್ರೋಢೀಕರಣ.

lateral mobility: ಪಾರ್ಶ್ವಸ್ಥ ಚಲನೆ. ದೇಶದ ಒಂದು ಪ್ರದೇಶದಿಂದ ಇನ್ನೊಂದಕ್ಕೆ ಅಥವಾ ಹೊರದೇಶಗಳಿಗೆ ಜನರ ಚಲನೆ.

latitudinal location: ಅಕ್ಷಾಂಶಿಕ ಸ್ಥಾನ. ಯಾವುದಾದರೊಂದು ಪ್ರದೇಶದ ಅಥವಾ ದೇಶದ ವಾಯುಗುಣವನ್ನು ನಿರ್ದೇಶಿಸುವುದು.

lati-vertically extended family: ಸಮಾನಾಂತರ ಮತ್ತು ಲಂಬಾತ್ಮಕ ವಿಸ್ತೃತ ಕುಟುಂಬ.

laughter instinct: ಹಾಸ್ಯ ಮೂಲ ಪ್ರವೃತ್ತಿ.

lavani: ಲಾವಣಿ. ಇಂಗ್ಲೀಷ್‌ನ ಬ್ಯಾಲೆಡ್‌ಗೆ ಸಂವಾದಿಯಾಗಿ ಲಾವಣಿ ಎಂಬ ಪದವನ್ನು ಬಳಸಿರುವುದುಂಟು. ಆದರೆ ಅದು

ಸರಿಯಲ್ಲ ಎಂಬ ಅಭಿಪ್ರಾಯವಿದೆ. ಕರ್ನಾಟಕದ ಸಂಪ್ರದಾಯದಂತೆ ಲಾವಣಿ ಕಥನ ಕವನವಲ್ಲ. ಅದು ಪ್ರಕೃತಿ ಮತ್ತು ಪುರುಷಶಕ್ತಿ ಹೆಚ್ಚಳ ಕುರಿತ ಸ್ವಾರಸ್ಯ ಪೂರ್ಣ ಸಂವಾದ ಮಾತ್ರ.

law: ಕಾನೂನು; ಶಾಸನ.

law and order: ಕಾನೂನು ಮತ್ತು ಸುವ್ಯವಸ್ಥೆ.

law giver: ನ್ಯಾಯದಾತ; ನ್ಯಾಯಾ ಧೀಶ.

law lords of appeal: ಮೇಲ್ಮನವಿಯ ನ್ಯಾಯಾಧಿಪತಿಗಳು.

law making process: ಶಾಸನ ರಚನೆಯ ವಿಧಾನ; ಕಾನೂನು ರಚನಾ ವಿಧಾನ.

law of causation: ಕಾರ್ಯ-ಕಾರಣ ನಿಯಮ.

law of constant returns: ಸ್ಥಿರ ಪ್ರತಿಫಲ ನಿಯಮ. ಉತ್ಪಾದನೆಯ ಪ್ರಮಾಣದ ಹೆಚ್ಚಳ ಅಥವಾ ಕಡಿತದಿಂದಾಗಿ ಉತ್ಪಾದನಾ ವೆಚ್ಚದಲ್ಲಿ ಯಾವುದೇ ಬದಲಾವಣೆ ಆಗದಿರುವ ಸ್ಥಿತಿ. ಅರ್ಥಾತ್ ಹೆಚ್ಚು ಉತ್ಪಾದನೆಗೆ ಹೆಚ್ಚು ವೆಚ್ಚ ಹಾಗೂ ಕಡಿಮೆ ಉತ್ಪಾದನೆಗೆ ಕಡಿಮೆ ವೆಚ್ಚ ತಗಲುತ್ತದೆ.

law of constitution: ಸಾಂವಿಧಾನಿಕ ಶಾಸನ; ಸಂವಿಧಾನದ ಕಾಯಿದೆ.

law of contagion: ಸೋಂಕು ನಿಯಮ; ಸಂಪರ್ಕ ನಿಯಮ. ಮಾಟ ಮಾಡುವಾಗ, ಸಂಪರ್ಕ ಹೊಂದುವ ವಸ್ತುಗಳು ಇನ್ನೊಂದು ವಸ್ತುವಿನೊಡನೆ ಸಂಪರ್ಕ ಹೊಂದಿ ಬೇಕಾದ ಪರಿಣಾಮ ಬೀರಬಲ್ಲವು ಎಂಬ ನಿಯಮ.

law of contradiction: ವ್ಯಾಘಾತ ನಿಯಮ; ಪ್ರತಿಷೇಧ ನಿಯಮ.

law of effect: ಪರಿಣಾಮದ ನಿಯಮ.

law of decreasing cost: ಇಳಿಮುಖ ವೆಚ್ಚದ ನಿಯಮ. ಒಂದು ಉದ್ಯಮದ ಒಟ್ಟು ಉತ್ಪನ್ನವು ಹೆಚ್ಚುತ್ತಾ ಹೋದಂತೆ ಸರಾಸರಿ ವೆಚ್ಚವು ಇಳಿಮುಖವಾಗುವ ಸನ್ನಿವೇಶ.

law of demand: ಬೇಡಿಕೆಯ ನಿಯಮ. ಬೆಲೆ ಮತ್ತು ಬೇಡಿಕೆಗಳ ಪರಸ್ಪರ ಸಂಬಂಧವನ್ನು ವಿವರಿಸುವ ನಿಯಮ.

law of diminishing marginal rate of substitution: ಇಳಿಮುಖ ಸೀಮಾಂತ ಪ್ರತಿನಿದಾನ ದರದ ನಿಯಮ. ಅನುಭೋಗಿಯು ನಿಗದಿತ ಆದಾಯದಲ್ಲಿ ಒಂದು ವಸ್ತುವಿನ ಅನುಭೋಗವನ್ನು ಹೆಚ್ಚಿಸುವಾಗ ಅದರ ಪರ್ಯಾಯ ವಸ್ತುವಿನ ಬಳಕೆಯನ್ನು ಕಡಿಮೆಗೊಳಿಸುವುದರ ಮೂಲಕ ಗರಿಷ್ಠ ತೃಪ್ತಿಯನ್ನು ಪಡೆಯಲು ಯತ್ನಿಸುತ್ತಾನೆಂಬುದನ್ನು ವಿವರಿಸುವ ನಿಯಮ.

law of diminishing marginal utility: ಇಳಿಮುಖ ಸೀಮಾಂತ ತುಷ್ಟಿಗುಣ ನಿಯಮ. ಒಂದು ವಸ್ತುವನ್ನು ಅವಿರತವಾಗಿ ಅನುಭೋಗಿಸುತ್ತಾ ಹೋದಂತೆ ಅದರಿಂದ ಸಿಗುವ ತುಷ್ಟಿಗುಣ ಕಡಿಮೆಯಾಗುತ್ತಾ ಹೋಗುತ್ತದೆಂಬ ನಿಯಮ.

law of equi-marginal utility: ಸಮಸೀಮಾಂತ ತುಷ್ಟಿಗುಣದ ನಿಯಮ. ಅನುಭೋಗಿಯು ತನ್ನ ಆದಾಯವನ್ನು ವಿಭಿನ್ನ ವಸ್ತುಗಳ ಮೇಲೆ ವ್ಯಯಿಸಿ ಗರಿಷ್ಠ ತೃಪ್ತಿಯನ್ನು ಪಡೆಯಲು, ಆ ವಸ್ತುಗಳ

ಅಂಚಿನ ತುಷ್ಟಿಗುಣಗಳು ಅವುಗಳ ಬೆಲೆ ಗಳಿಗೆ ಸಮವಾಗುವಂತೆ ವ್ಯಯಿಸುತ್ತಾನೆ ಎಂಬುದನ್ನು ವಿವರಿಸುವ ನಿಯಮ.

law of extradition: ಪ್ರತ್ಯರ್ಪಣ ಶಾಸನ. ತಲೆತಪ್ಪಿಸಿಕೊಂಡು ಬಂದು ಅಡಗಿ ಕೊಂಡಿರುವ ಪರದೇಶದ ಪ್ರಜೆಯನ್ನು ಆ ದೇಶದ ಸೂಕ್ತ ಅಧಿಕಾರಿಯ ವಶಕ್ಕೆ ಒಪ್ಪಿ ಸುವ ಕಾನೂನು.

law of hypothesis: ಪ್ರಾಕ್‌ಕಲ್ಪನಾ ನಿಯಮ.

law of identity: ಐಕ್ಯ ನಿಯಮ.

law of increasing cost: ಏರಿಕೆಯ ವೆಚ್ಚದ ನಿಯಮ. ಒಂದು ಉದ್ಯಮದ ಒಟ್ಟು ಉತ್ಪನ್ನವು ಹೆಚ್ಚುತ್ತಾ ಹೋದಂತೆ ಸರಾಸರಿ ವೆಚ್ಚವು ಏರುತ್ತಾ ಹೋಗುವ ಸನ್ನಿವೇಶ.

law of increasing returns: ಏರಿ ಕೆಯ ಪ್ರತಿಫಲ ನಿಯಮ. ಉತ್ಪಾದನೆ ಯಲ್ಲಿ ಬಂಡವಾಳ ಮತ್ತು ಶ್ರಮಗಳ ಬಳಕೆ ಹೆಚ್ಚಾದಂತೆ ಉತ್ಪಾದನಾ ಸಾಮರ್ಥ್ಯವು ಹೆಚ್ಚಾಗಿ ಉತ್ಪನ್ನವು ಏರಿಕೆಯ ಪ್ರಮಾಣ ದಲ್ಲಿ ಹೆಚ್ಚುತ್ತದೆ ಮತ್ತು ಸರಾಸರಿ ವೆಚ್ಚವು ಕಡಿಮೆಯಾಗುತ್ತದೆನ್ನುವುದನ್ನು ವಿವರಿಸುವ ನಿಯಮ.

law of Karma: ಕರ್ಮ ಸಿದ್ಧಾಂತ.

law of learning: ಕಲಿಕೆಯ ನಿಯಮ.

law of maximum satisfaction: ಗರಿಷ್ಠ ತೃಪ್ತಿಯ ನಿಯಮ. ಸಮ ಸೀಮಾಂತ ತುಷ್ಟಿಗುಣವನ್ನು ಈ ರೀತಿಯಾಗಿಯೂ ಕರೆಯಲಾಗುತ್ತದೆ. ಕಾರಣ ಅನುಭೋ ಗಿಯು ತಾನು ಸೇವಿಸುವ ಎಲ್ಲಾ ವಸ್ತುಗಳಿಂದಲೂ ಪರಮಾವಧಿ ತೃಪ್ತಿಯನ್ನು ಪಡೆಯಲು ಇಚ್ಛಿಸುತ್ತಾನೆ.

law of nations: ರಾಷ್ಟ್ರಗಳ ಕಾನೂನು. ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ರಾಷ್ಟ್ರ-ರಾಷ್ಟ್ರಗಳ ನಡುವಿನ ಸಂಬಂಧಗಳನ್ನು ನಿರ್ಧ ರಿಸುವ ಕಾನೂನು. ನೋಡಿ: internatio nal law.

law of protective discrimination: ದಲಿತ ರಕ್ಷಕ ಕಾನೂನು. ಭಾರತದ ಸಂವಿಧಾನದಲ್ಲಿ ಹಿಂದುಳಿದ ವರ್ಗ ಹಾಗೂ ಹರಿಜನ ಮತ್ತು ಗಿರಿಜನರಿಗೆ ಮೀಸಲು ನೀತಿಯ ಮೂಲಕ ರಕ್ಷಣೆ ಒದಗಿಸುವ ಶಾಸನ.

law of reinforcement: ಪುನರ್ಬಲನ ನಿಯಮ.

law of returns: ಪ್ರತಿಫಲದ ನಿಯಮ. ವೆಚ್ಚ ಮತ್ತು ಉತ್ಪನ್ನದ ನಡುವಿನ ಉತ್ಪಾ ದನಾ ಕಾರ್ಯಕ್ಕೆ ಸಂಬಂಧಿಸಿದ ನಿಯಮ ಗಳು. ಈ ನಿಯಮಗಳನ್ನು 'ಉತ್ಪಾದನೆಯ ನಿಯಮಗಳು' ಎಂದೂ, 'ವೆಚ್ಚದ ನಿಯಮ ಗಳು' ಎಂದೂ ಕರೆಯಲಾಗುತ್ತದೆ.

law of similarity: ಸಾದೃಶ್ಯ ನಿಯಮ.

law of succession: ಉತ್ತರಾಧಿಕಾರದ ನಿಯಮ; ಉತ್ತರಾಧಿಕಾರದ ಶಾಸನ.

law of supply: ಪೂರೈಕೆಯ ನಿಯಮ. ಬೆಲೆ ಮತ್ತು ಪೂರೈಕೆಗಳ ಪರಸ್ಪರ ಸಂಬಂಧ ವನ್ನು ವಿವರಿಸುವ ನಿಯಮ.

law of variable proportion: ವ್ಯತ್ಯಾಸಾತ್ಮಕ ಅನುಪಾತದ ನಿಯಮ. ಈ ನಿಯಮದ ಪ್ರಕಾರ ಉಳಿದೆಲ್ಲಾ ಉತ್ಪಾ ದನಾಂಗಗಳನ್ನು ಸ್ಥಿರವಾಗಿಟ್ಟು ಯಾವು

ದಾದರೊಂದು ಉತ್ಪಾದನಾಂಗವನ್ನು ಹೆಚ್ಚಿಸುತ್ತಾ ಹೋದರೆ ಒಟ್ಟು ಉತ್ಪಾದನೆಯು ಪ್ರಾರಂಭದಲ್ಲಿ ಒಂದು ಹಂತದವರೆಗೆ ಏರಿಕೆಯ ಪ್ರಮಾಣದಲ್ಲಿಯೂ ಅನಂತರ ಇಳಿಮುಖ ಪ್ರಮಾಣದಲ್ಲಿಯೂ ಹೆಚ್ಚಾಗುತ್ತಾ ಹೋಗುತ್ತದೆ.

law society: ಕಾನೂನು ಸಮಾಜ. ಇಂಗ್ಲೇಂಡ್‌ನಲ್ಲಿರುವ ಸಾರ್ವಜನಿಕ ಉಪಯೋಗ ಆಯೋಗ ಪದ್ಧತಿಯಲ್ಲಿನ ಒಂದು ವಿಧ.

leadership: ನಾಯಕತ್ವ.

leading indicator method: ಪ್ರಮುಖ ಸೂಚಕ ವಿಧಾನ. ಬೇಡಿಕೆ ಯನ್ನು ಅಂದಾಜಿಸಲು ಸಹಾಯಕವಾಗುವ ಸಂಖ್ಯಾ ವಿಧಾನ.

leading sector: ಮುಂಚೂಣಿ ವಲಯ.

League of Nations: ರಾಷ್ಟ್ರಗಳ ಸಂಘ. ಪ್ರಥಮ ಪ್ರಪಂಚ ಯುದ್ಧದ ನಂತರ ವಿಶ್ವ ಶಾಂತಿಯನ್ನು ಕಾಪಾಡಿಕೊಂಡು ಬರುವ ಉದ್ದೇಶದಿಂದ ವರ್ಸೈಲ್ಸ್ ಒಪ್ಪಂದದ (೧೯೧೯) ಪ್ರಕಾರ ಸ್ಥಾಪಿಸಲ್ಪಟ್ಟ ಸಂಸ್ಥೆ.

learning by insight: ಒಳನೋಟದ ಕಲಿಕೆ.

learning by mass response: ಸಮೂಹ ಪ್ರತಿಕ್ರಿಯಾರೂಪದ ಕಲಿಕೆ.

learning capacity: ಕಲಿಕಾ ಸಾಮರ್ಥ್ಯ.

learning curve: ಕಲಿಕೆಯ ವಕ್ರರೇಖೆ.

learning experience: ಕಲಿಕೆಯ ಅನುಭವ.

learning outcomes: ಕಲಿಕೆಯ ಪರಿಣಾಮಗಳು.

learning period: ಕಲಿಕೆಯ ಅವಧಿ.

learning process: ಕಲಿಕೆಯ ಪ್ರಕ್ರಿಯೆ.

learning theory: ಕಲಿಕೆಯ ಸಿದ್ಧಾಂತ. ಕಲಿಕೆಯು ಪ್ರಚೋದನೆ ಮತ್ತು ಪ್ರತಿಕ್ರಿಯೆಯ ಪರಸ್ಪರ ಸಂಬಂಧದ ಪರಿಣಾಮವಾಗಿದೆ ಎನ್ನುವ ಸಿದ್ಧಾಂತ.

learning unit: ಕಲಿಕೆಯ ಘಟಕ.

lease: ಗುತ್ತಿಗೆ; ಗೇಣಿ. ಒಬ್ಬನ ಸೊತ್ತನ್ನು (ಆಸ್ತಿ ಯನ್ನು) ಒಂದು ನಿರ್ದಿಷ್ಟ ಅವಧಿಗೆ ನಿಶ್ಚಿತ ಬಾಡಿಗೆ ದರದಲ್ಲಿ ಮತ್ತೊಬ್ಬನಿಗೆ ಅನುಭವಿಸಲು ಅನುವು ಮಾಡಿಕೊಡುವ ಆಸ್ತಿಯ ಒಡೆಯ ಮತ್ತು ಗುತ್ತಿಗೆ ಪಡೆಯುವವನ ನಡುವೆ ನಡೆಯುವ ಒಪ್ಪಂದ.

leased area: ಗುತ್ತಿಗೆ ಪ್ರದೇಶ.

least cost combination: ಕನಿಷ್ಠ ವೆಚ್ಚ ಸಂಯೋಜನೆ. ಗರಿಷ್ಟ ಲಾಭಗಳಿಕೆಯ ಉದ್ದೇಶದಿಂದ ಕನಿಷ್ಠ ವೆಚ್ಚದಲ್ಲಿ ಅತಿ ಹೆಚ್ಚು ಉತ್ಪಾದನಾ ಸಾಮರ್ಥ್ಯವನ್ನು ಹೊಂದಿರುವ ಉತ್ಪಾದನಾಂಗಗಳ ಸಂಯೋಜನೆ.

least cost output level: ಕನಿಷ್ಠ ವೆಚ್ಚ ಉತ್ಪನ್ನ ಮಟ್ಟ.

least square method: ಕನಿಷ್ಠ ವರ್ಗ ಮೂಲ ವಿಧಾನ.

leave taking formula: ಬೀಳ್ಕೊಡುಗೆ ಸೂತ್ರ.

lebensraum: ರಾಜಕೀಯ-ಆರ್ಥಿಕ ವಿಸ್ತರಣಾ ಕ್ಷೇತ್ರ. ಸದಾ ವಿಸ್ತರಿಸುವ ಜನಜೀವನ ಪ್ರದೇಶ. ಜರ್ಮನಿಯ ಸಾಮ್ರಾಜ್ಯಶಾಹಿ ಪರಿಕಲ್ಪನೆ.

left communists: ಎಡ ಕಮ್ಯೂನಿಸ್ಟರು. ೧೯೧೮ರಲ್ಲಿ ರಶಿಯನ್ ಕಮ್ಯೂನಿಸ್ಟ್ ಪಾರ್ಟಿಯಲ್ಲಿ (ಬೋಲ್ಶೆವಿಕರು) ರೂಪುಗೊಂಡಿದ್ದ ಒಂದು ಭಿನ್ನಮತೀಯ ತಂಡ.

left democratic front: ವಾಮ ಪಂಥೀಯ ಪ್ರಜಾಸತ್ತಾತ್ಮಕ ರಂಗ; ಎಡ ಪಂಥೀಯ ಪ್ರಜಾಸತ್ತಾತ್ಮಕ ರಂಗ.

leftist party: ವಾಮಪಂಥೀಯ ಪಕ್ಷ; ಎಡಪಂಥೀಯ ಪಕ್ಷ.

leftists: ಎಡಪಂಥೀಯರು.

legacy: ಪೂರ್ವಾರ್ಜಿತ. ಹಿಂದಿನವರಿಂದ ಪರಂಪರೆಯಾಗಿ ಬಂದಿರುವ ವಸ್ತು ಯಾ ಭಾವರೂಪವಾದ ಸೊತ್ತುಗಳು.

legal: ಕಾನೂನು ರೀತಿಯ.

legal action: ಕಾನೂನು ಕ್ರಮ.

legal authority: ಶಾಸನೀಯ ಅಧಿಕಾರ; ಶಾಸನಾತ್ಮಕ ಅಧಿಕಾರ. ನಿರ್ದಿಷ್ಟ ಸ್ಥಾನ ಮಾನದಲ್ಲಿ ನಿರ್ವಹಿಸಬೇಕಾದ ಶಾಸನಬದ್ಧ ಅಧಿಕಾರ.

legal background approach: ಕಾನೂನು ಹಿನ್ನೆಲೆಯ ಸಮೀಪನ; ಕಾನೂನಿನ ಹಿನ್ನೆಲೆ ಆಧಾರಿತ ದೃಷ್ಟಿಕೋನ.

legal cruelty: ಕಾನೂನಿನ ಕ್ರೌರ್ಯ. ಕೇವಲ ತಾರ್ಕಿಕ ಹಾಗೂ ತಾಂತ್ರಿಕ ಕಾರಣ ಗಳಿಂದಾಗಿ ಮಾನವೀಯತೆಗೆ ಬೆಲೆ ನೀಡದ ನ್ಯಾಯ ತೀರ್ಮಾನಗಳ ಪರಿಣಾಮವು ಕಾನೂನಿನ ಕ್ರೌರ್ಯವೆನಿಸುತ್ತದೆ.

legal duties: ಶಾಸನ ಬದ್ಧ ಕರ್ತವ್ಯ ಗಳು. ಕಾನೂನಿನ ದೃಷ್ಟಿಯಲ್ಲಿ ವ್ಯಕ್ತಿಯು ಮಾಡಲೇ ಬೇಕಾದ ಕರ್ತವ್ಯಗಳು.

legal fiction: ಕಾನೂನು ನಿರ್ಮಿತ ಮಿಥ್ಯೆ. ವಾಸ್ತವದಲ್ಲಿ ಸುಳ್ಳಾದರೂ ಕೇವಲ ತರ್ಕ, ವಾದಗಳ ಆಧಾರದಲ್ಲಿ ನಿಲ್ಲಿಸಿದ ಸಂಗತಿ.

legal guardian: ಕಾನೂನು ರೀತ್ಯಾ (ಮಾನ್ಯ) ಪಾಲಕ.

legal monopoly: ಕಾನೂನು ಏಕ ಸ್ವಾಮ್ಯ; ಶಾಸನಬದ್ಧ (ನ್ಯಾಯಬದ್ಧ) ಏಕ ಸ್ವಾಮ್ಯ. ಏಕಸ್ವಾಮ್ಯಾಧಿಕಾರವು ಕಾನೂನಿನ ರಕ್ಷಣೆ ಗೊಳಪಟ್ಟಾಗ ಅದನ್ನು ಕಾನೂನುಬದ್ಧ ಏಕಸ್ವಾಮ್ಯ ಎಂದು ಕರೆಯಲಾಗುತ್ತದೆ. ಉದಾ: ಗ್ರಂಥಸ್ವಾಮ್ಯ, ವ್ಯಾಪಾರಿ ಚಿಹ್ನೆ.

legal proceeding: ಕಾನೂನು ಕ್ರಮ.

legal psychology: ಕಾಯಿದೆ ಮನೋ ವಿಜ್ಞಾನ.

legal rights: ಕಾನೂನು ಬದ್ಧ ಹಕ್ಕುಗಳು; ಶಾಸನಬದ್ಧ ಹಕ್ಕುಗಳು.

legal sanction: ಕಾನೂನುಬದ್ಧ ಅನು ಮೋದನೆ; ಕಾನೂನಿನ ನಿರ್ಬಂಧ.

legal sovereignty: ಶಾಸನಬದ್ಧ ಪರ ಮಾಧಿಕಾರ.

legal status: ವಿಧಿಮಾನ್ಯ ಸ್ಥಾನಮಾನ; ಕಾನೂನುಬದ್ಧ ಸ್ಥಾನಮಾನ.

legal tender money: ಶಾಸನ (ಕಾನೂನು) ಬದ್ಧ ಹಣ. ಇದು ಶಾಸನದ ಬೆಂಬಲ ಪಡೆದ ಹಣವಾಗಿದ್ದು ಯಾರೂ ತಿರಸ್ಕರಿಸುವಂತಿಲ್ಲ. ಉದಾ: ಭಾರತದಲ್ಲಿ ರೂಪಾಯಿಯು ಶಾಸನಬದ್ಧ ಹಣ.

legal theory of rights: ಹಕ್ಕುಗಳ ಕಾನೂನುಬದ್ಧ ಸಿದ್ಧಾಂತ. ಈ ಸಿದ್ಧಾಂತದ ಪ್ರಕಾರ ನಿರಂಕುಶಾಧಿಕಾರ ಪಡೆದಿರುವ ರಾಜ್ಯವು ಹಕ್ಕುಗಳ ಉಗಮಸ್ಥಾನವಾಗಿದೆ. ಆದ್ದರಿಂದ ಹಕ್ಕುಗಳು ಸ್ವಾಭಾವಿಕವಾಗಿ ಬಂದಿರದೆ ಕೃತಕವಾಗಿ ಸೃಷ್ಟಿಸಲ್ಪಟ್ಟಿವೆ ಯೆಂದು ಪ್ರತಿಪಾದಿಸಲಾಗಿದೆ.

legal theory of sovereignty: ಪರ ಮಾಧಿಕಾರದ ನ್ಯಾಯಬದ್ಧ ಸಿದ್ಧಾಂತ.

ಪರಮಾಧಿಕಾರದ ಏಕತಾ ಸಿದ್ಧಾಂತವನ್ನು ಪರಮಾಧಿಕಾರದ ನ್ಯಾಯಬದ್ಧ ಸಿದ್ಧಾಂತ ವೆಂದು ಕರೆಯಲಾಗುತ್ತದೆ. ನೋಡಿ: monistic theory of sovereignty.

legalists: ಕಾನೂನುವಾದಿಗಳು. ಕ್ರಿ.ಶ. ೬೦೪ರಲ್ಲಿ ಚೀನಾದಲ್ಲಿ ಹುಟ್ಟಿಕೊಂಡ ಒಂದು ಪಂಥ.

legend: ದಂತಕಥೆ; ಅಲೇಖ; ನಾಣ್ಯದ ಮೇಲಣ ಬರಹ (ಐತಿಹ್ಯ).

legendary tale: ಐತಿಹ್ಯ ಕತೆ.

legion: ಲಿಜನ್; ಸೈನ್ಯದಳ. ಜನರ ದೊಡ್ಡ ಗುಂಪು. ಪುರಾತನ ರೋಮನ್ ಸೈನ್ಯದಲ್ಲಿ ೩೦೦೦-೬೦೦೦ ಪದಾತಿಗಳೂ, ಸುಮಾರು ೩೦೦ ಅಶ್ವ ಸೈನ್ಯವೂ ಇರುತ್ತಿದ್ದ ದಳ.

legislation: ಶಾಸನ.

legislation of the budget: ಮುಂಗಡ ಪತ್ರದ ಶಾಸನ. ಶಾಸಕಾಂಗದ ಸದಸ್ಯರು ತೆರಿಗೆ ವಿಧಿಸುವ ಸಂಬಂಧವಾಗಿ ಮತ್ತು ವೆಚ್ಚಕ್ಕೆ ಸಂಬಂಧಿಸಿದ ಹಾಗೆ ತಮ್ಮ ಅಂತಿಮ ನಿರ್ಣಯವನ್ನು ನೀಡುವುದು.

legislative assembly: ಶಾಸನ ಸಭೆ; ವಿಧಾನ ಸಭೆ. ಭಾರತದ ಪ್ರತಿಯೊಂದು ರಾಜ್ಯವೂ ತನ್ನದೇ ಆದ ಶಾಸಕಾಂಗವನ್ನು ಹೊಂದಿದ್ದು, ಈ ಶಾಸಕಾಂಗದ ಕೆಳಸದನ ವನ್ನು ವಿಧಾನಸಭೆ ಅಥವಾ ಶಾಸನಸಭೆ ಎಂದು ಕರೆಯಲಾಗುವುದು.

legislative body: ಶಾಸಕಾಂಗ. ಚುನಾ ವಣೆಗಳಲ್ಲಿ ಜನರಿಂದ ಆಯ್ಕೆಯಾದ ಸದಸ್ಯ ರನ್ನು ಹೊಂದಿ ದೇಶದ ಆಡಳಿತವನ್ನು ನಡೆಸಿ ಕೊಂಡು ಹೋಗಲು ಅಗತ್ಯವಾದ ಕಾನೂನು ಗಳನ್ನು ರೂಪಿಸುವ ಸರಕಾರದ ಪ್ರಮುಖ ಅಂಗ.

legislative business: ಶಾಸಕಾಂಗದ ಕಾರ್ಯಗಳು.

legislative control: ಶಾಸಕಾಂಗದ ನಿಯಂತ್ರಣ.

legislative council: ವಿಧಾನ ಪರಿ ಷತ್ತು. ದ್ವಿಸದನ ಪದ್ಧತಿಯ ತತ್ವವನ್ನು ಆಧರಿಸಿ ರಚಿತವಾಗಿರುವ ರಾಜ್ಯ ಶಾಸಕಾಂಗದ ಮೇಲಿನ ಸದನ.

legislative court: ಶಾಸಕಾಂಗದ ನ್ಯಾಯಾಲಯ. ರಾಷ್ಟ್ರದ ಶಾಸನಗಳ ಪ್ರಕಾರ ಸ್ಥಾಪಿತವಾಗುವ ವ್ಯವಸ್ಥೆಯ ಎರಡು ಬಗೆಯ ನ್ಯಾಯಾಲಯಗಳಲ್ಲೊಂದು (ಒಂದು-ಶಾಸನೀಯ ನ್ಯಾಯಾಲಯ, ಇನ್ನೊಂದು-ಸಂವಿಧಾನಾತ್ಮಕ ನ್ಯಾಯಾಲಯ). ಶಾಸ ನೀಯ ನ್ಯಾಯಾಲಯಗಳು ಪಾರ್ಲಿ ಮೆಂಟಿನ ಶಾಸನಗಳ ಮೂಲಕ ರಚಿತವಾದ ನ್ಯಾಯಾಲಯಗಳಾಗಿವೆ. ಪಾರ್ಲಿಮೆಂಟ್ ರೂಪಿಸಿದ ಶಾಸನಗಳನ್ನು ಕಾರ್ಯಾಚರಣೆಗೆ ತರುವಲ್ಲಿ ಸಹಾಯಕವಾಗಲೆಂದು ಇಂತಹ ನ್ಯಾಯಾಲಯಗಳನ್ನು ಸ್ಥಾಪಿಸಲಾಗುತ್ತದೆ.

legislative function: ಶಾಸನೀಯ ಕಾರ್ಯ. ಶಾಸನ ಸಮ್ಮತವಾಗಿ ಮಾಡ ಬೇಕಾಗಿರುವ ಕಾರ್ಯ.

legislative power: ಶಾಸನಾಧಿಕಾರ; ಶಾಸನ ರಚನಾಧಿಕಾರ. ಶಾಸನ ರಚನೆಗೆ ಸಂಬಂಧಿಸಿದ ಅಧಿಕಾರ.

legislative procedure: ಶಾಸನ ರಚನಾ ವಿಧಾನ.

legislature: ನೋಡಿ: legislative body.

legislature party: ಶಾಸಕಾಂಗ ಪಕ್ಷ.

ಶಾಸಕಾಂಗದಲ್ಲಿ ಸದಸ್ಯರನ್ನು ಹೊಂದಿರುವ ಪಕ್ಷ.

legitimacy: ಶಾಸನೀಯ ಸಿಂಧುತ್ವ.

legitimate child: ಶಾಸನಬದ್ಧ ಶಿಶು. ವೈವಾಹಿಕ ಸಂಬಂಧ ಹೊಂದಿದ ದಂಪತಿಗಳ ಶಿಶು.

legitimate claim: ನ್ಯಾಯಬದ್ಧ ಹಕ್ಕು.

legitimate purpose: ನ್ಯಾಯಸಮ್ಮತ ಉದ್ದೇಶ.

legitimation crisis: ನ್ಯಾಯ ಸಮ್ಮತ ವಿಷಮಸ್ಥಿತಿ (ಸಂಧಿಕಾಲ). ಸರ್ಕಾರವು ಪ್ರಜೆಗಳನ್ನು ಸರಿಯಾದ ರೀತಿಯಲ್ಲಿ ಪಾಲಿಸಲು ಅರ್ಥಾತ್ ಉತ್ತಮ ಆಡಳಿತವನ್ನು ಕೊಡಲು ಅಸಮರ್ಥವಾಗುವಂಥ ಪರಿಸ್ಥಿತಿ.

legitimization: ನ್ಯಾಯ ಸಮ್ಮತಗೊಳಿಸುವಿಕೆ.

legitimizing aspect: ನ್ಯಾಯ ಸಮ್ಮತಗೊಳಿಸುವ ಅಂಶ.

leisure: ವಿರಾಮ; ವಿಶ್ರಾಂತಿ.

leniency error: ಉದಾರತಾ ದೋಷ; ಸಹನಾ ಗುಣದೋಷ.

leopard society: ಚಿರತೆ ಸಮಾಜ. ಪಶ್ಚಿಮ ಆಫ್ರಿಕದ ಒಂದು ಗುಪ್ತ ಸಮಾಜ. ಅಪರಾಧಿಗಳನ್ನು ಕೊಲ್ಲಲು ಇಲ್ಲಿ ಕಬ್ಬಿಣದ ಉಗುರುಗಳನ್ನು ಬಳಸುತ್ತಿದ್ದರೆಂಬ ನಂಬಿಕೆ ಇದೆ.

lesbianism: ಹೆಂಗಸರಲ್ಲಿ ಸಲಿಂಗ ರತಿ.

less elastic demand: ಕಡಿಮೆ ಸ್ಥಿತಿ ಸ್ಥಾಪಕತ್ವದ ಬೇಡಿಕೆ. ಬೇಡಿಕೆಯಲ್ಲಿನ ವ್ಯತ್ಯಾಸದ ಪ್ರಮಾಣವು ಬೆಲೆಯಲ್ಲಿನ ವ್ಯತ್ಯಾಸದ ಪ್ರಮಾಣಕ್ಕಿಂತ ಕಡಿಮೆಯಾಗಿದ್ದರೆ ಅಂತಹ ಬೇಡಿಕೆಯು ಕಡಿಮೆ ಸ್ಥಿತಿ ಸ್ಥಾಪಕತ್ವವನ್ನು ಹೊಂದಿರುವುದು.

less elastic supply: ಕಡಿಮೆ ಸ್ಥಿತಿ ಸ್ಥಾಪಕತ್ವದ ಪೂರೈಕೆ. ಬೆಲೆಯಲ್ಲಿ ಬಹಳಷ್ಟು ಬದಲಾವಣೆಯಾದಾಗ ಪೂರೈಕೆಯಲ್ಲಿ ಬಹಳ ಕಡಿಮೆ ಬದಲಾವಣೆ ಯಾದರೆ ಅಂತಹ ಪೂರೈಕೆಗೆ ಕಡಿಮೆ ಸ್ಥಿತಿ ಸ್ಥಾಪಕತ್ವವಿರುವ ಪೂರೈಕೆ ಎಂದು ಕರೆಯಲಾಗುತ್ತದೆ.

lethargy: ಜಡತ್ವ; ನಿದ್ದೆಯ ಮಂಪರು. ನಿರುತ್ಸಾಹ ಹಾಗೂ ನಿಷ್ಕ್ರಿಯತೆಗಳಿಂದ ಕೂಡಿದ ಸ್ಥಿತಿ.

letter of authority: ಅಧಿಕಾರ ಪತ್ರ.

letter of credence: ರಾಯಭಾರಿ ಪರಿಚಯ ಪತ್ರ.

letter of credit : ಪತ್ತಿನ ಪತ್ರ; ಉದ್ದರಿ ಪತ್ರ.

letter of manumission: ಬಿಡುಗಡೆಯ ರಾಯಸ ಪತ್ರ; ಗುಲಾಮಗಿರಿಯಿಂದ ವಿಮೋಚನೆಗೊಂಡಿರುವುದಕ್ಕೆ ಸಂಬಂಧಿಸಿದ ರಾಯಸ ಪತ್ರ.

levels of consciousness: ಪ್ರಜ್ಞೆಯ ಹಂತಗಳು. ಉದಾ: ಚೇತನ, ಕೆಳಚೇತನ ಮತ್ತು ಅಚೇತನ.

leverage effect: ಸನ್ನೆಯ ಪರಿಣಾಮ. ಗುಣಕ ಮತ್ತು ವೇಗೋತ್ಕರ್ಷಗಳ ಸಂಯುಕ್ತ ಪರಿಣಾಮ.

levirate: ನಿಯೋಗ. ಮೃತ ಸಹೋದರನ ಹೆಂಡತಿಯನ್ನು ವಿವಾಹವಾಗುವ ಹಕ್ಕು.

liability: ಜವಾಬ್ದಾರಿ; ಹೊಣೆಗಾರಿಕೆ; ಪಾವತಿ ಮಾಡಬೇಕಾದ ಮೊಬಲಗು.

liaison: ಮಧ್ಯವರ್ತಿ.

liberal age: ಉದಾರ ಯುಗ.

liberal education: ಉದಾರ ಶಿಕ್ಷಣ.

liberal feminists: ಉದಾರ ಸ್ತ್ರೀ ಸ್ವಾತಂತ್ರ್ಯವಾದಿಗಳು.

liberal humanitarianism: ಉದಾರ ಮಾನವೀಯತೆ.

liberal idealism: ಉದಾರ ಆದರ್ಶ ವಾದ.

liberal interpretation: ಉದಾರ ವ್ಯಾಖ್ಯೆ.

liberal party: ಉದಾರವಾದಿ ಪಕ್ಷ. ಇಂಗ್ಲೆಂಡಿನ ರಾಜಕೀಯದಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದ್ದ ಪಕ್ಷ.

liberal reformist: ಉದಾರ ಸುಧಾರಣಾವಾದಿ.

liberalism: ಉದಾರವಾದ; ಉದಾರ ರಾಜನೀತಿ. ಬೂರ್ಷುವಾ ಪಾರ್ಲಿಮೆಂಟರಿ ವ್ಯವಸ್ಥೆಗೆ, ಬೂರ್ಷುವಾ ಸ್ವಾತಂತ್ರ್ಯಗಳಿಗೆ ಮತ್ತು ಬಂಡವಾಳಶಾಹಿ ಉದ್ಯಮಗಳಿಗೆ ಮುಕ್ತ ಅವಕಾಶವಿರಬೇಕು ಎನ್ನುವುದಕ್ಕೆ ಬೆಂಬಲ ನೀಡುವವರನ್ನು ಒಂದುಗೂಡಿಸುವ ಒಂದು ರಾಜಕೀಯ ಮತ್ತು ವೈಚಾರಿಕ ಪ್ರವೃತ್ತಿ.

liberalization: ಉದಾರವಾದಿ ನೀತಿ; ಮುಕ್ತ ಆರ್ಥಿಕ ನೀತಿ.

liberator: ವಿಮೋಚಕ.

libertine: ಕಾಮುಕ.

liberty: ಸ್ವಾತಂತ್ರ್ಯ.

liberty of action: ಕ್ರಿಯಾ ಸ್ವಾತಂತ್ರ್ಯ.

libido: ಲಿಬಿಡೋ; ಕಾಮವಾಂಛೆ; ಅತಿ ಕಾಮುಕತೆ; ಅತಿ ಲೈಂಗಿಕತೆ. ಕಾಮ ಒತ್ತಡಕ್ಕೆ ಮತ್ತು ಅದು ಎಲ್ಲಾ ಬಗೆಯ ಪ್ರೀತಿಯಲ್ಲೂ ಅಭಿವ್ಯಕ್ತಿ ಪಡೆಯುವುದಕ್ಕೆ ಸಂಬಂಧಪಟ್ಟ ಮನೋವಿಶ್ಲೇಷಣೆಯ ಒಂದು ಕಲ್ಪನೆ.

libido development: ಕಾಮವಾಂಛೆಯ ಬೆಳವಣಿಗೆ.

libido object: ಕಾಮವಾಂಛೆಯ ವಸ್ತು; ಕಾಮ ವಿಷಯ.

licence fee: ಪರವಾನಗಿ ಶುಲ್ಕ.

lie detection: ಅನೃತಶೋಧ. ಸುಳ್ಳನ್ನು ಕಂಡುಹಿಡಿಯುವುದು.

lie detector: ಅನೃತದರ್ಶಿ. ಆಪಾದಿತನ ಸತ್ಯಸಂಧತೆಯನ್ನು ಪರೀಕ್ಷಿಸುವ ತಂತ್ರ.

lien: ಸ್ವಾಧೀನತಾ ಹಕ್ಕು. ಕೆಲವು ನಿಶ್ಚಿತ ಶಾಸನಬದ್ಧ ಬೇಡಿಕೆಗಳ ಪೂರೈಕೆಯವರೆಗೆ (ಉದಾ: ಋಣ ತೀರುವಿಕೆ) ಇನ್ನೊಬ್ಬನ ಸೊತ್ತನ್ನು ಹೊಂದಿರಲು ಹಕ್ಕು.

life chances: ಜೀವನದ ಅನಿಶ್ಚಿತತೆ; ಜೀವನದ ಅವಕಾಶಗಳು.

life cycle: ಜೀವನ ಚಕ್ರ. ಶೈಶವ, ಬಾಲ್ಯ, ಕೌಮಾರ್ಯ, ತಾರುಣ್ಯ ವೃದ್ಧಾಪ್ಯ ಹೀಗೆ ವ್ಯಕ್ತಿಯ ಜೀವನದ ವಿವಿಧ ಹಂತಗಳು.

life expectancy: ಆಯುರ್ಮಾನ; ಆಯುಷ್ಯ.

life force: ಜೀವ ಶಕ್ತಿ.

life instinct : ಜೀವನ ಮೂಲ ಪ್ರವೃತ್ತಿ.

life insurance: ಜೀವ ವಿಮೆ.

life organization: ಜೀವನ ಸಂಘಟನೆ. ವ್ಯಕ್ತಿಯು ತನ್ನ ಸಾಮಾಜಿಕ ಅನುಭವದಿಂದ ಪಡೆದ ಮನೋವೃತ್ತಿ ಹಾಗೂ ಮೌಲ್ಯಗಳಿಂದ ರೂಪಿಸಿಕೊಳ್ಳುವ ಸ್ವಪರಿಕಲ್ಪನೆ,

ಸಾಮಾಜಿಕ ಸ್ಥಾನಮಾನ ಹಾಗೂ ಪಾತ್ರ ವರ್ತನೆ.

life partner: ಜೀವನ ಸಂಗಾತಿ.

life religion: ಜೀವನ ಧರ್ಮ.

life sentence: ಜೀವಾವಧಿ ಶಿಕ್ಷೆ.

life space: ಜೀವನ ಪರಿವೇಶ.

life span: ಜೀವಿತಾವಧಿ; ಜೀವಿತ ವಿಸ್ತಾರ.

life style: ಜೀವನ ವೈಶಿಷ್ಟ್ಯ; ಜೀವನ ರೀತಿ.

life table: ಆಯುಕೋಷ್ಟಕ. ಒಂದು ನಿರ್ದಿಷ್ಟ ಜನಸಂಖ್ಯೆಯಲ್ಲಿ ಒಂದು ನಿರ್ದಿಷ್ಟ ಸಮಯದಲ್ಲಿ ಮರಣದರ ಹಾಗೂ ಆಯುರ್ಮಾನವನ್ನು ವಯೋ ಲಿಂಗ ಆಧಾರ ದಲ್ಲಿ ಹೇಳುವ ಸಂಖ್ಯಾ ಶಾಸ್ತ್ರೀಯ ಕೋಷ್ಟಕ.

like interest: ಸಮಾನಾಸಕ್ತಿ.

likeness: ಹೋಲಿಕೆ.

likeness and difference: ಹೋಲಿಕೆ ಮತ್ತು ಭೇದ. ಸಮಾಜದ ಒಂದು ಲಕ್ಷಣ.

limitation of armament: ಶಸ್ತ್ರಾಸ್ತ್ರ ನಿಯಂತ್ರಣ. ಯುದ್ಧದ ಪರಿಹಾರ ಮಾರ್ಗ ಗಳಲ್ಲೊಂದು. ವಿಶ್ವದಲ್ಲಿ ಶಾಂತಿಯನ್ನು ಸ್ಥಾಪನೆ ಮಾಡುವುದಕ್ಕಾಗಿ ರಾಷ್ಟ್ರಗಳು ತಮ್ಮ ಶಸ್ತ್ರಾಸ್ತ್ರ ಸಂಗ್ರಹದ ಪ್ರಮಾಣವನ್ನು ಕಡಿಮೆ ಗೊಳಿಸುವ ಪ್ರಕ್ರಿಯೆ.

limited democracy: ಸೀಮಿತ ಪ್ರಜಾಸತ್ತೆ.

limited franchise: ಸೀಮಿತ ಮತ ದಾನ. ಮತದಾನವು ಸಾರ್ವತ್ರಿಕವಾಗಿರದೆ ಕೆಲವೊಂದು ಜನರಿಗಷ್ಟೇ ಮಿತಿಗೊಳಿಸಲ್ಪ ಟ್ಟಿರುವುದು. ಉದಾ: ಬಂಡವಾಳ ದಾರರಿಗೆ, ಧನಿಕರಿಗೆ, ಹಿಂದಿನ ಅರಸು ಮನೆತನದವರಿಗೆ, ಪಾದ್ರಿಗಳಿಗೆ.

limited government: ಸೀಮಿತ ಸರಕಾರ; ಮಿತ ಸರಕಾರ.

limited legal tender money: ಮಿತ ಶಾಸನಬದ್ಧ ಹಣ. ಇದು ಶಾಸನದ ಬೆಂಬಲ ಪಡೆದ ಹಣವಾಗಿದ್ದು ನಿರ್ದಿಷ್ಟ ಉದ್ದೇಶ ಗಳಿಗಾಗಿ ಮಾತ್ರ ಉಪಯೋಗಿಸಲ್ಪಡುತ್ತದೆ.

limited liability farming enter prise: ಮಿತ ಹೊಣೆಗಾರಿಕೆ ಕೃಷಿ ಉದ್ಯಮ.

limited monarchy: ಸೀಮಿತ ರಾಜ ಪ್ರಭುತ್ವ; ಸೀಮಿತ ಅರಸೊತ್ತಿಗೆ. ರಾಜ ಪ್ರಭುತ್ವದ ಅಧಿಕಾರಗಳು ಸೀಮಿತ ವಾಗಿರುವುದು. ಇಲ್ಲಿ ಜನರ ಇಚ್ಛೆಗೆ ಮನ್ನಣೆಯಿದ್ದು ರಾಜನು ಜನರ ಇಚ್ಛೆಗೆ ಸರಿಯಾಗಿ ಆಡಳಿತ ನಡೆಸುವುದು.

limited monopoly: ಸೀಮಿತ ಏಕ ಸ್ವಾಮ್ಯ. ಪ್ರತ್ಯಕ್ಷವಾಗಿ ಅಥವಾ ಪರೋಕ್ಷ ವಾಗಿ ಸರಕಾರದ ನಿಯಂತ್ರಣದಲ್ಲಿರಬಹು ದಾದ ಇಲ್ಲವೇ ಗ್ರಾಹಕರ ನಿಯಂತ್ರಣದಲ್ಲಿ ರಬಹುದಾದ ಏಕಸ್ವಾಮ್ಯ.

limited planning: ಸೀಮಿತ ಯೋಜನೆ.

line agency: ಆಡಳಿತ ನಿರ್ವಹಣಾ ಸಿಬ್ಬಂದಿ ವರ್ಗ. ಪ್ರಜೆಗಳಿಗೆ ಅಗತ್ಯವಾದ ಸೇವೆಗಳನ್ನು ಒದಗಿಸುವ ಅಥವಾ ಕ್ಷೇತ್ರ ಗಳಲ್ಲಿ ಪ್ರಜೆಗಳ ಕಾರ್ಯಗಳನ್ನು ನಿಯಂತ್ರಿ ಸುವ ಆಡಳಿತ ಸಿಬ್ಬಂದಿ ವರ್ಗ.

line function: ಆಡಳಿತ ನಿರ್ವಹಣಾ ಕಾರ್ಯ; ಅವಶ್ಯಕ ಸಾರ್ವಜನಿಕ ಸೇವೆ. ಸಾರ್ವಜನಿಕ ಅಗತ್ಯದ ಸೇವೆಗಳಾದ ಕಾನೂನು ವ್ಯವಸ್ಥೆ, ವಿದ್ಯೆ, ಸಾರ್ವಜನಿಕ

ಆರೋಗ್ಯ ಮತ್ತು ವ್ಯವಸಾಯ, ಲೋಕೋಪಯೋಗಿ ಕಾರ್ಯಗಳು, ಸಾರ್ವಜನಿಕ ಭದ್ರತೆ, ನ್ಯಾಯ ರಕ್ಷಣೆ ಇವು ಸಾರ್ವಜನಿಕರಿಗೆ ಆಡಳಿತ ವ್ಯವಸ್ಥೆಯು ಒದಗಿಸಿಕೊಡಬೇಕಾಗಿರುವ ಅಗತ್ಯದ ಸೇವೆಗಳು.

line official: ನೋಡಿ: middle management.

line organization: ರೇಖಾಡಳಿತ; ಶ್ರೇಣೀಕೃತ ಆಡಳಿತ.

line of protection: ರಕ್ಷಣಾ ರೇಖೆ.

lineage: ವಂಶಾವಳಿ. ಏಕವಂಶೀಯ (ಮಾತೃವಂಶೀಯ ಅಥವಾ ಪಿತೃವಂಶೀಯ) ಸಂಬಂಧದಿಂದುಟಾಗುವ ರಕ್ತ ಸಂಬಂಧದ ಸಮೂಹ. ಇದು ಏಕಸ್ಥಾನೀಯ ಅಥವಾ ಬಹುಸ್ಥಾನೀಯವಾಗಿದ್ದು, ಅನೇಕ ತಲೆಮಾರುಗಳಿಂದ ಬೆಳೆದು ಬಂದಿರುತ್ತದೆ.

lineage group: ವಂಶಾವಳಿ ಸಮೂಹ (ಗುಂಪು). ವಂಶ ಅಥವಾ ಮನೆತನದ ಸದಸ್ಯರನ್ನು ಹೊಂದಿರುವ ಸಾಮಾಜಿಕ ಗುಂಪು.

lineal evolution: ರೇಖಾತ್ಮಕ ವಿಕಾಸ. ಪ್ರತೀ ಸಮಾಜದ ಸಾಂಸ್ಕೃತಿಕ ಬೆಳವಣಿಗೆಯು ಇತರ ಎಲ್ಲಾ ಸಮಾಜಗಳೊಂದಿಗೆ ಸಮಾಂತರವಾಗಿದೆ ಎಂಬ ಸಿದ್ಧಾಂತ.

lineal inheritance: ವಂಶೀಯ ಉತ್ತರಾಧಿಕಾರ.

lineal kinship: ವಂಶವಾಹಿ ರಕ್ತ ಸಂಬಂಧ. ವಂಶಾವಳಿ ಅಥವಾ ವಂಶರೇಖೆಗಳಿಂದ ಜೋಡಿಸಲ್ಪಟ್ಟಿರುವ ರಕ್ತಸಂಬಂಧ.

linear: ಏಕರೇಖಾತ್ಮಕ; ಏಕವಂಶೀಯ.

linear concept of time: ಸರಳ ರೇಖಾತ್ಮಕ ಕಾಲದ ಪರಿಕಲ್ಪನೆ.

linear correlation: ಸರಳ ರೇಖಾತ್ಮಕ ಸಹಸಂಬಂಧ.

linear equation: ಸರಳ ಸಮೀಕರಣ; ಸರಳ ರೇಖೆ ಬಿಂಬಕ ಸಮೀಕರಣ.

linear function: ಸರಳ ರೇಖೆ ಕಾರ್ಯ. ಚಲನೆಗಳ ಸಂಬಂಧವನ್ನು ನಕ್ಷೆಯ ಮೇಲೆ ಮೂಡಿಸಿದಾಗ ಅವು ಸರಳರೇಖೆಯಲ್ಲಿ ವ್ಯಕ್ತವಾದರೆ ಅದು ಸರಳರೇಖೆ ಕಾರ್ಯವೆನಿಸುತ್ತದೆ.

linear perspective: ರೇಖಾತ್ಮಕ ದೃಷ್ಟಿಕೋನ.

linear programming: ಸರಳರೇಖಾ ಬಿಂಬಕ ಕಾರ್ಯಾಚರಣೆ.

linear regression: ರೇಖಾತ್ಮಕ ಪ್ರತಿಗಮನ; ರೇಖಾತ್ಮಕ ಹಿಂಚಲನೆ.

linear relationship: ನೋಡಿ : linear correlation.

linear trend: ರೇಖಾತ್ಮಕ ಒಲವು; ರೇಖಾತ್ಮಕ ಪ್ರವೃತ್ತಿ.

linear trend equation: ರೇಖಾ ಸಂಬಂಧೀ ಸಮೀಕರಣ.

linearity: ಏಕಮುಖಾತ್ಮಕತೆ.

lingua franca: ಬಳಕೆಯ ಭಾಷೆ.

linguistic anthropology: ಭಾಷಾ ಮಾನವಶಾಸ್ತ್ರ.

linguistic borrowing: ಭಾಷಾಸ್ವೀಕರಣ. ಮೂಲ ಸಂಪ್ರದಾಯಕ್ಕಿಂತ ಭಿನ್ನವಾದ ಭಾಷಾ ಲಕ್ಷಣಗಳನ್ನು ಸ್ವೀಕರಿಸುವುದು.

linguistic atlas: ನೋಡಿ : dialect atlas.

linguistic change: ಭಾಷಾ ಪರಿವರ್ತನೆ. ಭಾಷೆಗಳ ರಚನಾ ಕ್ರಮದಲ್ಲಿ ಒಳ ಮತ್ತು ಹೊರ ಒತ್ತಡಗಳ ಪರಿಣಾಮಗಳಿಂದ ಉಂಟಾಗುವ ಬದಲಾವಣೆ.

linguistic drift: ಭಾಷಾ ದಿಕ್ಚ್ಯುತಿ. ಹಲವಾರು ವರ್ಷಗಳ ನಂತರ ಒಂದು ಭಾಷೆಯಲ್ಲಿ ಆಗುವ ಬದಲಾವಣೆ.

linguistic family: ಭಾಷಾ ಕುಟುಂಬ. ಒಂದೇ ಮೂಲದ ಎರಡು ಅಥವಾ ಮೂರು ಭಾಷೆಗಳ ಗುಂಪು.

linguistic geography: ಭಾಷಾ ಭೂಗೋಳ ಶಾಸ್ತ್ರ. ಭಾಷೆಯ ಪ್ರಾಂತೀಯತೆಯ ಲಕ್ಷಣಗಳು ಮತ್ತು ಭೌಗೋಳಿಕ ಹಂಚಿಕೆಯ ಅಧ್ಯಯನ.

linguistic minorities: ಭಾಷಾ ಅಲ್ಪಸಂಖ್ಯಾತರು.

linguistic state: ಭಾಷಾವಾರು ರಾಜ್ಯ.

linguistic stock: ಭಾಷಾ ಸಮೂಹ. ಪರಸ್ಪರ ಸಂಬಂಧಿತ ಆದರೆ ಅಂತಹ ಬೇರೆ ಪಂಗಡಗಳಿಗೆ ಸಂಬಂಧವಿಲ್ಲದ ಭಾಷೆಗಳ ಸಮೂಹ.

linguistic type: ಭಾಷಿಕ ಬಗೆ.

linguistic typology: ಭಾಷಾ ಪ್ರಭೇದ.

linkage effect: ಸಂಪರ್ಕ ಪರಿಣಾಮ. ಯಾವುದೇ ಉದ್ಯಮ ಕೇಂದ್ರವು ಇತರ ಉದ್ಯಮಕೇಂದ್ರಗಳ ನಡುವೆ ಕೊಂಡಿಯಂತೆ ಕಾರ್ಯನಿರ್ವಹಣೆ ಮಾಡುವುದರಿಂದಾಗಿ ಉಂಟಾಗುವ ಪರಿಣಾಮ.

liquid asset: ನಗದು ಸ್ವತ್ತು. ಸುಲಭವಾಗಿ ನಗದುರೂಪಕ್ಕೆ ಪರಿವರ್ತಿಸಬಹುದಾದ ಆಸ್ತಿಗಳು. ಉದಾ. ಶೇರು, ಡಿಬೆಂಚರ್.

liquidation: ಅವಸಾಯನ. ಕಂಪೆನಿಯು ದಿವಾಳಿಯಾದಾಗ ನ್ಯಾಯಾಲಯದ ಆಜ್ಞೆಯ ಪ್ರಕಾರ ಅದರ ಶೇರುದಾರರು ಮತ್ತು ಸಾಲಗಾರರೊಡನೆ ಆ ಕಂಪೆನಿಯ ವ್ಯವಹಾರಗಳನ್ನು ಮುಕ್ತಾಯಗೊಳಿಸುವುದು.

liquidation of debt: ಸಾಲ ತೀರಿಸುವುದು; ಋಣ ಸಮಾಪ್ತಿ.

liquidator: ಅವಸಾಯಕ. ಕಂಪೆನಿಯ ಅವಸಾಯನ (liquidation) ಕಾರ್ಯವನ್ನು ನಿರ್ವಹಿಸಲು ನೇಮಿಸಲ್ಪಟ್ಟ ಅಧಿಕಾರಿ.

liquidity preference: ನಗದು ಹಣದೊಲವು. ಜನರು ತಮ್ಮಲ್ಲಿರುವ ಸಂಪತ್ತನ್ನು ಇತರ ಆಸ್ತಿಗಳ ರೂಪದಲ್ಲಿಟ್ಟುಕೊಳ್ಳುವುದಕ್ಕಿಂತ, ನಗದು (ಹಣದ) ರೂಪದಲ್ಲಿಯೇ ಇಟ್ಟುಕೊಳ್ಳಲು ಬಯಸುವ ಪ್ರವೃತ್ತಿ.

liquidity preference theory of interest: ನಗದು ಹಣದೊಲವಿನ ಬಡ್ಡಿ ಸಿದ್ಧಾಂತ.

liquidity trap: ದ್ರವ್ಯದೊಲವಿನ ಬಲೆ. (ಬಡ್ಡಿಯ ದರವು ox ಅಕ್ಷಕ್ಕೆ ಸಮಾನವಾಗಿರುವ ಸ್ಥಿತಿ). ಜನರು ಸಾಲಪತ್ರ (bond)ಗಳನ್ನು ಹೊಂದಿರಲು ಬಯಸದೆ ನಗದು ಹಣವನ್ನೇ ಹೊಂದಲು ಬಯಸುವಷ್ಟರ ಮಟ್ಟಿಗೆ ಬಡ್ಡಿಯ ದರವು ಕೆಳಮಟ್ಟದಲ್ಲಿರುವ ಸ್ಥಿತಿ.

literacy: ಅಕ್ಷರತೆ; ಸಾಕ್ಷರತೆ.

literary riddle: ಗ್ರಾಂಥಿಕ ಒಗಟು.

literary socialism: ಸಾಹಿತ್ಯಕ ಸಮಾಜ ವಾದ. ಕ್ರಾಂತಿ ತರುವ ವಿಪ್ಲವ, ಅಶಾಂತಿ, ಅನಿಶ್ಚಿತತೆಗಳನ್ನು ವಿರೋಧಿಸಿ ಹೋರಾಟಕ್ಕೆ ಬದಲಾಗಿ ಮನ ಒಲಿಸಿಕೊಳ್ಳುವುದರ ಮೂಲಕ ಸಮಾಜ ಸುಧಾರಣೆಯನ್ನು ತರಬೇಕು ಎನ್ನುವ ಸಮಾಜವಾದ.

literary tale: ಗ್ರಾಂಥಿಕ ಕತೆ.

literary type: ಸಾಹಿತ್ಯಿಕ ಬಗೆ.

little tradition: ಚಿಕ್ಕ ಪರಂಪರೆ; ಸೀಮಿತ ಪರಂಪರೆ. ಗ್ರಾಮೀಣವಾಗಿ ಅಥವಾ ಪ್ರಾದೇಶಿಕವಾಗಿ ಸೀಮಿತ ಗೊಂಡಿರುವ ಸ್ಥಳೀಯ ನಂಬಿಕೆಗಳು, ಆಚಾರ ವಿಧಿಗಳು, ಸ್ಥಳಪುರಾಣಗಳು, ಪೂಜಾ ವಿಧಾನಗಳು ಇತ್ಯಾದಿಗಳು.

living standard: ಜೀವನ ಮಟ್ಟ.

loan capital: ಸಾಲ ಬಂಡವಾಳ.

loanable fund: ಸಾಲ ನಿಧಿ. ಸಾಲ ನೀಡ ಬಹುದಾದ ನಿಧಿ. ಹಣಕಾಸು ಮಾರು ಕಟ್ಟೆಯಲ್ಲಿ ಸಾಲ ನೀಡಲು ದೊರೆಯುವ ಹಣ.

lobby: ಪ್ರಭಾವ ವಲಯ. ಸರಕಾರದ ಕಾರ್ಯಚಟುವಟಿಕೆಗಳ ಮೇಲೆ (ಉದಾ: ಕಾನೂನು ರಚನೆ) ಪ್ರಭಾವ ಬೀರುವ ಕೆಲವು ನಿರ್ದಿಷ್ಟ ಅಥವಾ ವಿಶೇಷ ಆಸಕ್ತಿಗಳನ್ನು ಹೊಂದಿರುವ ಜನರ ಗುಂಪು.

local area: ಸ್ಥಳೀಯ ಕ್ಷೇತ್ರ.

local authority: ಸ್ಥಳೀಯ ಪ್ರಾಧಿಕಾರ.

local autonomy: ಸ್ಥಾನಿಕ ಸ್ವಾಯತ್ತತೆ; ಸ್ಥಳೀಯ ಸ್ವಾತಂತ್ರ್ಯ. ಸ್ಥಾನಿಕ ಅಥವಾ ಸ್ಥಳೀಯ ಘಟಕಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸುವುದು.

local board: ಪ್ರಾದೇಶಿಕ ಮಂಡಳಿ; ಸ್ಥಳೀಯ ಮಂಡಳಿ.

local body: ಸ್ಥಾನಿಕ ಆಡಳಿತಾಂಗ.

local cluster: ಸ್ಥಳೀಯ ಗುಂಪು ; ಸ್ಥಳೀಕ ಗುಂಪು.

local council: ಸ್ಥಳೀಯ ಪರಿಷತ್ತು.

local elites: ಸ್ಥಳೀಯ ಗಣ್ಯರು; ಸ್ಥಳೀಯ ಪ್ರತಿಷ್ಠಿತ ವ್ಯಕ್ತಿಗಳು.

local exogamy: ಸ್ಥಳೀಯ ಹೊರ ವಿವಾಹ. ಸ್ಥಳೀಯ ಸಮುದಾಯದ ಪರಿಧಿಯ ಹೊರಗಿನಿಂದ ವಿವಾಹ ಸಂಬಂಧಿಗಳನ್ನು ಆಯ್ದುಕೊಳ್ಳುವುದು.

local government: ಸ್ಥಳೀಯ ಸರಕಾರ.

local group: ಸ್ಥಳೀಯ ಗುಂಪು.

local knowledge: ಸ್ಥಳೀಯ ಜ್ಞಾನ.

local leader: ಸ್ಥಳೀಯ ನಾಯಕ.

local legend: ಸ್ಥಳೀಯ ದಂತಕಥೆ; ಸ್ಥಳೀಯ ಐತಿಹ್ಯ. ನಿರ್ದಿಷ್ಟ ಪ್ರದೇಶದ ಸುತ್ತ ಹೆಣೆಯಲಾಗಿರುವ ದಂತಕಥೆ (ಪುರಾಣ). ಸ್ಥಳನಾಮ ಅಥವಾ ಅದರ ಅರ್ಥ ತಿಳಿಯಲು ಸ್ಥಳೀಯ ಪುರಾಣ ಸಹಾಯ ಮಾಡುತ್ತದೆ.

local self government: ಸ್ಥಳೀಯ ಸ್ವಯಂ ಸರಕಾರ; ಸ್ಥಾನಿಕ ಸ್ವಯಂ ಸರಕಾರ. ಸ್ಥಳೀಯ ಜನತೆಯ ಆಶೋತ್ತರ ಮತ್ತು ಕಲ್ಯಾಣವನ್ನು ಸಾಧಿಸುವ ಮತ್ತು ಸ್ಥಳೀಯ ಸಮಸ್ಯೆಗಳನ್ನು ಬಗೆಹರಿಸುವ ಉದ್ದೇಶ ದಿಂದ ಸ್ಥಾಪಿಸಲಾಗುವ ಸದಸ್ಯರ ಪಂಚಾ ಯತು.

local taxation: ಪ್ರಾದೇಶಿಕ (ಸ್ಥಳೀಯ) ತೆರಿಗೆ.

localism: ಸ್ಥಳೀಯತೆ. ನಿರ್ದಿಷ್ಟ ಭೌತಿಕ ಪ್ರದೇಶ ಅಥವಾ ಸಮುದಾಯಕ್ಕೆ ಸೀಮಿತವಾಗಿರುವಿಕೆ.

locality: ಭೂಭಾಗ; ನೆಲೆ.

locality group: ನೋಡಿ: territorial group.

locality memory: ಸ್ಥಾನ ಸ್ಮರಣೆ; ಸ್ಥಳ ಸ್ಮರಣೆ.

localization: ಸ್ಥಳೀಕರಣ.

localized amnesia: ಸ್ಥಾನೀಯ ವಿಸ್ಮರಣೆ.

localized sensation: ಸ್ಥಾನೀಯ ಸಂವೇದನೆ.

location of sovereignty: ಪರಮಾಧಿಕಾರದ ನೆಲೆ.

location theory: ಸ್ಥಳೀಕರಣ ಸಿದ್ಧಾಂತ. ಉತ್ಪಾದಕರು ಮಾರುಕಟ್ಟೆ ಹಾಗೂ ಇತರ ಅಂಶಗಳನ್ನು ಪರಿಗಣಿಸಿ ಕೃಷಿ ಭೂಮಿ ಅಥವಾ ಉದ್ದಿಮೆ ಸ್ಥಾಪಿಸಲು ಸ್ಥಳಗಳನ್ನು ಆಯ್ದುಕೊಳ್ಳುತ್ತಾರೆಂದು ವಿವರಿಸುವ ಸಿದ್ಧಾಂತ.

lockout: ಬೀಗಮುದ್ರೆ. ತಾವು ವಿಧಿಸಿದ ಷರತ್ತು ಅಥವಾ ನಿಬಂಧನೆಗಳನ್ನು ಕಾರ್ಮಿಕರು ಒಪ್ಪಿಕೊಂಡ ಹೊರತು ಅವರನ್ನು ಕೆಲಸದಲ್ಲಿ ತೊಡಗಿಸಲು ಉದ್ಯೋಗದಾತರು ನಿರಾಕರಿಸಿ, ತಮ್ಮ ಕಾರ್ಖಾನೆಯನ್ನು ತಾತ್ಕಾಲಿಕವಾಗಿ ಮುಚ್ಚಿಬಿಡುವುದು.

logic of consistency: ವಿಚಾರ ಸಾಂಗತ್ಯ ತರ್ಕ.

logic of sentiments: ಭಾವನೆಗಳ ತರ್ಕ.

logical construct: ತಾರ್ಕಿಕ ಸಂರಚನೆ; ತಾರ್ಕಿಕ ರಚನೆ.

logical empiricism: ತಾರ್ಕಿಕ ಅನುಭವಜನ್ಯ ಜ್ಞಾನವಾದ; ತಾರ್ಕಿಕ ಪ್ರಯೋಗ ಪ್ರಧಾನ ಮಾರ್ಗ.

logical oppositions: ತಾರ್ಕಿಕ ವಿರುದ್ಧಗಳು.

logical positivism: ತಾರ್ಕಿಕ ವೈಜ್ಞಾನಿಕ ವಾದ; ತಾರ್ಕಿಕ ಇಂದ್ರಿಯಾನುಭವ ವಾದ.

logical thinking: ತರ್ಕಬದ್ಧ ಚಿಂತನೆ.

logical validity: ತಾರ್ಕಿಕ ಸಪ್ರಮಾಣತೆ.

Lok Sabha: ಲೋಕಸಭೆ. ಭಾರತದ ಸಂಸತ್ತಿನ ಕೆಳಸದನ. ಇದರ ಸದಸ್ಯರನ್ನು ಜನರೇ ನೇರವಾಗಿ ಚುನಾಯಿಸುತ್ತಾರೆ.

Lombrosian theory: ಲೊಂಬ್ರೋಸನ ಸಿದ್ಧಾಂತ. ವ್ಯಕ್ತಿಯ ಶಾರೀರಿಕ ಲಕ್ಷಣಗಳಿಂದ ಆತನ ಅಪರಾಧೀ ಪ್ರವೃತ್ತಿಯನ್ನು ತಿಳಿಯಬಹುದು ಹಾಗೂ ಅಪರಾಧೀ ವರ್ತನೆಯು ಜೈವಿಕ ಕಾರಣಗಳಿಂದಾಗಿ ಉಂಟಾಗುವುದೇ ವಿನಾಃ ಸಾಮಾಜಿಕ, ಮಾನಸಿಕ ಅಥವಾ ಪರಿಸರದ ಅಂಶಗಳಿಂದ ಪ್ರೇರೇಪಿಸಲ್ಪಡುವುದಿಲ್ಲ ಎಂದು ಪ್ರತಿಪಾದಿಸಿದ ಲೊಂಬ್ರೋಸ್‌ನ ಸಿದ್ಧಾಂತ.

long house: ದೀರ್ಘಗೃಹ. ಇರಾಕ್ವೀಸ್, ಅಮೆರಿಕನ್, ಇಂಡಿಯನ್ ಬುಡಕಟ್ಟಿಗೆ ಸೇರಿದ ಜನರ ಒಂದೇ ಸೂರು ಇರುವ ಉದ್ದನೆ ಮನೆ.

long period supply: ದೀರ್ಘಾವಧಿಯ ಪೂರೈಕೆ.

long-run cost: ದೀರ್ಘಾವಧಿ ವೆಚ್ಚ.

long run demand: ದೀರ್ಘಾವಧಿ ಬೇಡಿಕೆ.

long run dynamic analysis: ದೀರ್ಘಾವಧಿ ಚಲನಾತ್ಮಕ ವಿಶ್ಲೇಷಣೆ.

long run equilibrium: ದೀರ್ಘಾವಧಿ ಸಮತೋಲನ.

long run income: ದೀರ್ಘಾವಧಿ ಆದಾಯ (ವರಮಾನ).

long term debt: ದೀರ್ಘಕಾಲಿಕ ಸಾಲ.

long term plan: ದೀರ್ಘಾವಧಿ ಯೋಜನೆ.

longevity of life: ಆಯುಷ್ಯ; ಜೀವಿತಾವಧಿ.

longitudinal development: ಲಂಬಾತ್ಮಕ ವಿಕಾಸ.

longitudinal section: ನೀಳ ವಿಭಾಗ.

longitudinal study: ಕಾಲವ್ಯಾಪ್ತಿ ಅಧ್ಯಯನ. ಸುದೀರ್ಘ ಕಾಲಾಧಾರಿತವಾಗಿ ಸಂಗತಿಗಳ ಅಧ್ಯಯನ.

looking taboo: ದೃಷ್ಟಿ ನಿಷೇಧ; ನೋಡುವ ನಿಷೇಧ. ಕೆಲವೊಂದು ವಸ್ತುಗಳನ್ನು ದೃಷ್ಟಿಸಿದರೆ ಅದು ಕಳೆದು ಹೋಗುತ್ತದೆಂಬ ನಂಬಿಕೆ.

looking glass self : ಬಿಂಬಿತ ಸ್ವಪ್ರಜ್ಞೆ. ವ್ಯಕ್ತಿಯು ಬೆಳೆಸಿಕೊಳ್ಳುವ ಸ್ವಪ್ರಜ್ಞೆಯ ಪ್ರಕ್ರಿಯೆಯ ಕುರಿತಾಗಿ ಸಿ.ಯೆಚ್.ಕೂಲಿಯವರು ಪ್ರತಿಪಾದಿಸಿದ ಸಿದ್ಧಾಂತ.

lopsided development: ಅಸಮತೋಲನ ಬೆಳವಣಿಗೆ.

loquacity: ವಾಚಾಳಿತನ.

Lord Chamberlain: ದರ್ಬಾರು ಬಕ್ಷಿ. ಇಂಗ್ಲೆಂಡಿನ ಅರಸುಮನೆತನದ ಹಿರಿಯ ಸದಸ್ಯ. ರಾಜ ಮನೆತನದ ಔಪಚಾರಿಕ ಚಟುವಟಿಕೆಗಳಿಗೆ ಅವನು ಜವಾಬ್ದಾರನಾಗಿರುತ್ತಾನೆ.

Lord Chancellor: ಲಾರ್ಡ್ ಛಾನ್ಸಲರ್. ಬ್ರಿಟಿಷ್ ಸಂಸತ್ತಿನ ಮೇಲ್ಮನೆಯ ಕಾರ್ಯಕಲಾಪಗಳನ್ನು ನಡೆಸಿಕೊಂಡು ಬರುವವ.

Lords of justices of appeal: ಮೇಲ್ಮನವಿ ನ್ಯಾಯಾಲಯದ ನ್ಯಾಯಾಧೀಶರು. ಇಂಗ್ಲೆಂಡ್‌ನ 'ಆಸ್ಥಾನಿಕ ಆಪ್ತ ಮಂಡಲಿ'ಯ ಸದಸ್ಯರು.

lorenz curve: ಲೋರೆನ್ಸ್ ರೇಖೆ. ಆದಾಯದ ಹಂಚಿಕೆಯಲ್ಲಿನ ಅಸಮಾನತೆ ಯನ್ನು ಸಂಖ್ಯಾಶಾಸ್ತ್ರದಲ್ಲಿ ರೇಖಾಚಿತ್ರದ ಮೂಲಕ ತೋರಿಸುವ ರೇಖೆ.

losp vax process: ಕರಗಿದ ಮೇಣ ದಿಂದ ಅಚ್ಚು ಮಾಡುವ ಪದ್ಧತಿ.

loss soul: ಆತ್ಮದ ನಾಶ. ಒಂದು ಸಂಸ್ಕೃತಿಗೆ ಸೇರಿದ ಜನರು ತಮ್ಮ ಸಂಸ್ಕೃತಿಯನ್ನೆಲ್ಲಾ ಕಳೆದುಕೊಂಡಾಗ ಅವರಲ್ಲಿ ಉಂಟಾಗುವ ಸತ್ವಹೀನತೆ.

love of superiority: ಶ್ರೇಷ್ಠತೆಯ ವ್ಯಾಮೋಹ.

low born: ಅಂತ್ಯಜರು.

low income group: ಕಡಿಮೆ ವರಮಾನವುಳ್ಳ ಗುಂಪು.

low interest debt policy: ಕಡಿಮೆ ಬಡ್ಡಿಯ ಸಾಲದ ನೀತಿ.

low level consumption trap: ಕೆಳಮಟ್ಟದ ಅನುಭೋಗದ ಬಲೆ.

low level income equilibrium trap: ಕಡಿಮೆ ಮಟ್ಟದ ಆದಾಯದ ಸಮತೋಲನದ ಬಲೆ. ತಲಾ ವರಮಾನವೂ ಆರ್ಥಿಕ ಜೀವನ ಮಟ್ಟವೂ ಅತ್ಯಂತ ಕೆಳ ಮಟ್ಟದಲ್ಲಿದ್ದು, ಅವು ಮೇಲೇರುವ ಸೂಚನೆಗಳಿಲ್ಲದಿರುವ ಸ್ಥಿತಿ.

low productivity employment: ಕೆಳಮಟ್ಟದ ಉತ್ಪನ್ನತೆಯ ಉದ್ಯೋಗ.

low stationary stage: ಕೆಳ ಸ್ಥಿರ ಹಂತ; ಕಡಿಮೆ ಸ್ಥಿರ ಹಂತ.

lower class: ಕೆಳವರ್ಗ.

lower middle class: ಕೆಳ ಮಧ್ಯಮ ವರ್ಗ.

lower palaeolithic: ಕೆಳಗಣ ಹಳೆಯ ಶಿಲಾಯುಗ.

lower social class: ಕೆಳ ಸಾಮಾಜಿಕ ವರ್ಗ.

lower upper class: ಕೆಳ ಉನ್ನತ ವರ್ಗ.

loyalists: ರಾಜನಿಷ್ಠರು; ನಿಷ್ಠಾವಂತರು.

lumpen proletariat: ಕುಲಗೆಟ್ಟ ಕಾರ್ಮಿಕರು; ವರ್ಗಭ್ರಷ್ಟ ಶ್ರಮಜೀವಿಗಳು. ವರ್ಗ ವಿಭಜಿತ ಸಮಾಜದಲ್ಲಿರುವ ವರ್ಗ ಭ್ರಷ್ಟರ ಒಂದು ಸ್ತರ (ಭಿಕ್ಷುಕರು, ಸೋಮಾರಿಗಳು, ಅಲೆಮಾರಿಗಳು, ಅಪರಾಧಿಗಳು ಮೊದಲಾದವರು). ಭಿಕ್ಷೆ ಬೇಡುವುದು, ಮೋಸ, ಕಳ್ಳತನ, ಸೂಳೆಗಾರಿಕೆ ಮೊದಲಾದುವೇ ಅವರ ಜೀವನ. ಅವರಲ್ಲಿ ಸಂಘಟಿತ ರಾಜಕೀಯ ಹೋರಾಟ ಮಾಡುವ ಸಾಮರ್ಥ್ಯವಿರುವುದಿಲ್ಲ. ಲುಂಪನ್ ಮೂಲತಃ ಜರ್ಮನ್ ಪದ.

lunacity: ಉನ್ಮತ್ತ ಹುಚ್ಚು.

lunacy: ಮತಿಭ್ರಮಣೆ.

lunar calendar: ಚಾಂದ್ರಮಾನ ಪಂಚಾಂಗ.

lunatic: ಮತಿಭ್ರಮಿತ ಹುಚ್ಚ; ಉನ್ಮತ್ತ.

lunatic asylum: ಮತಿಭ್ರಮಿತ ರಾಶ್ರಯ.

lunatic criminal: ಮತಿ ಭ್ರಮಿತ ಅಪರಾಧಿ.

lust: ಕಾಮುಕತೆ; ಕಾಮತೃಷೆ; ಆಸೆ.

lust murder: ಕಾಮಾಂಧತಾ ಹತ್ಯೆ.

lustration: ಸಮಾರಂಭಿಕ ಶುದ್ಧೀಕರಣ.

luxury good: ವಿಲಾಸೀ ವಸ್ತು.

lymphatic temperament: ಶಾಂತ ಸ್ವಭಾವ; ನಿರ್ಭಾವ ಸ್ವಭಾವ.

lynching mob: ಹಿಂಸಾಚಾರೀ ಉದ್ರಿಕ್ತ ಸಮೂಹ (ಜನಜಂಗುಳಿ).

lyssophobia: ಮತಿಭ್ರಮಣ ಭೀತಿ; ಹುಚ್ಚನಾದೆನೆಂಬ ಭೀತಿ.

M

machinery of government: ಆಡಳಿತ ಯಂತ್ರ. ನೋಡಿ: bureaucracy.

macro cosmic: ವಿಸ್ತೃತ ವಿಶ್ವದ.

macro demography: ವಿಸ್ತೃತ ಜನಸಂಖ್ಯಾಶಾಸ್ತ್ರ. ಅಂತಾರಾಷ್ಟ್ರೀಯ ಪ್ರದೇಶಗಳು, ದೇಶಗಳು, ಬುಡಕಟ್ಟುಗಳು, ರಾಜ್ಯಗಳು, ಪಟ್ಟಣಗಳು ಹೀಗೆ ವಿವಿಧ ಸಮಾಜಗಳ, ಸಮುದಾಯಗಳ ಜನಸಂಖ್ಯಾ ಲಕ್ಷಣಗಳ ಹಾಗೂ ಒಲವುಗಳ ಕುರಿತ ವಿಸ್ತೃತ ಅಧ್ಯಯನ

macro economics: ವಿಸ್ತೃತ ಅರ್ಥಶಾಸ್ತ್ರ. ಒಟ್ಟು ಉತ್ಪನ್ನ, ಒಟ್ಟು ವೆಚ್ಚ, ಹೂಟೆ, ಸರಾಸರಿ ಬೆಲೆಗಳು ಹಾಗೂ ಬಡ್ಡಿ

ದರ ಮುಂತಾದವುಗಳನ್ನು ಅಧ್ಯಯನ ಮಾಡಿ, ಈ ಸಮಗ್ರ ಆರ್ಥಿಕ ಅಂಶಗಳು ಒಂದನ್ನೊಂದು ಹೇಗೆ ಪ್ರಭಾವಿಸುತ್ತವೆ ಹಾಗೂ ಒಟ್ಟು ಆರ್ಥಿಕ ವ್ಯವಸ್ಥೆಯ ಮೇಲೆ ಅವುಗಳ ಪರಿಣಾಮ ಏನು ಇತ್ಯಾದಿಗಳನ್ನು ಅಧ್ಯಯನ ಮಾಡುವ ಅರ್ಥಶಾಸ್ತ್ರದ ವಿಭಾಗ.

macro-functionalism: ವಿಸ್ತೃತ ಕಾರ್ಯಾತ್ಮಕವಾದ. ಬೃಹತ್ ಪ್ರಮಾಣದ ಸಾಮಾಜಿಕ ವ್ಯವಸ್ಥೆಗಳ ಕಾರ್ಯಾತ್ಮಕ ವಿಶ್ಲೇಷಣೆಗೆ ಹೆಚ್ಚಿನ ಒತ್ತು ಕೊಡುವ ಸಮಾಜ ಶಾಸ್ತ್ರೀಯ ಸಿದ್ಧಾಂತ.

macro level: ವಿಸ್ತೃತಮಟ್ಟ.

macro sociology: ವಿಸ್ತೃತ ಸಮಾಜ ಶಾಸ್ತ್ರ. ಬೃಹತ್ ಸಾಮಾಜಿಕ ವ್ಯವಸ್ಥೆಗಳ ಹಾಗೂ ಈ ವ್ಯವಸ್ಥೆಗಳ ನಡುವಿನ ಆಂತರಿಕ ಸಂಬಂಧದ ಅಧ್ಯಯನ.

macro structure: ವಿಸ್ತೃತ ರಚನೆ; ಬೃಹತ್ ರಚನೆ.

macro theory of distribution: ವಿಸ್ತೃತ ವಿತರಣಾ ಸಿದ್ಧಾಂತ. ರಾಷ್ಟ್ರೀಯ ಆದಾಯವು ಸಮಗ್ರ ಆರ್ಥಿಕತೆಯ ಎಲ್ಲಾ ಉತ್ಪಾದನಾಂಗಗಳಿಗೆ ಹೇಗೆ ಹಂಚಲ್ಪಡುತ್ತದೆಯೆಂಬುದನ್ನು ವಿವರಿಸುವ ಸಿದ್ಧಾಂತ.

macro cosmic: ವಿಸ್ತೃತ ವಿಶ್ವದ.

magic: ಮಂತ್ರವಿದ್ಯೆ; ಮಾಟ. ಪ್ರಕೃತಿಯನ್ನೂ, ಭೂತಪ್ರೇತಾದಿಗಳನ್ನೂ ರಹಸ್ಯ ರೀತಿಯಲ್ಲಿ ಅಧೀನದಲ್ಲಿಟ್ಟುಕೊಂಡು ಘಟನೆಗಳ ಗತಿಯನ್ನು ಮಾರ್ಪಡಿಸಲಾಗುವುದೆಂಬ ಮಿಥ್ಯೆಯ ಮಂತ್ರವಿದ್ಯೆ.

magic number: ಮಾಂತ್ರಿಕ ಸಂಖ್ಯೆ. ಸೃಷ್ಟಿಯ ನಿಗೂಢತೆ ಮತ್ತು ದೈವಿಕ ಗೋಪ್ಯತೆ ಇತ್ಯಾದಿಗಳ ಸಂಕೇತವಾದ ಮಾಂತ್ರಿಕಶಕ್ತಿ ಇದೆ ಎಂದು ಭಾವಿಸಲಾಗುವ ಸಂಖ್ಯೆ.

magic object: ಮಾಂತ್ರಿಕ ವಸ್ತು.

magic tale: ಮಾಂತ್ರಿಕ ಕತೆ.

magician: ಮಾಂತ್ರಿಕ; ಮಾಟಗಾರ; ಜಾದೂಗಾರ.

magico-religious: ಮಾಂತ್ರಿಕ-ಧಾರ್ಮಿಕ; ಮಾಟ ಹಾಗೂ ಧರ್ಮ ಸೇರಿದ.

mahakshatrapa: ಮಹಾಕ್ಷತ್ರಪ; ಮಹಾಮಂಡಲಾಧಿಪತಿ. ಕ್ರಿಸ್ತಶಕದ ಆರಂಭಿಕ ಶತಮಾನಗಳಲ್ಲಿ ವಾಯವ್ಯದ ರಾಜರು ಇಟ್ಟುಕೊಂಡ ಬಿರುದು.

mahalwari system: ಮಹಾಲ್ವಾರಿ ಪದ್ಧತಿ.

mahar: ನೋಡಿ: mehar.

maharajadhiraja: ಮಹಾರಾಜಾಧಿರಾಜ; ಸಾಮ್ರಾಟರ ಬಿರುದು.

mahasammata: ಮಹಾಸಮ್ಮತ; ಮಹಾಚುನಾಯಿತ. ಸರಕಾರದ ಮೂಲವು ಸಾಮಾಜಿಕ ಒಡಂಬಡಿಕೆಯಾಗಿತ್ತೆಂಬ ಬೌದ್ಧ ತತ್ವದ ಆಧಾರದ ಮೇಲೆ ರಾಜನೆಂದು ಚುನಾಯಿತನಾದ ವ್ಯಕ್ತಿಯನ್ನು ಸೂಚಿಸುತ್ತದೆ.

maha samantha: ಮಹಾಸಾಮಂತ; ಮಾಂಡಲಿಕ.

maha senapathi: ಮಹಾಸೇನಾಪತಿ; ಮುಖ್ಯ ಸೇನಾನಿ.

maha tasib: ಮಹಾತಾಸಿಬ್. ಸುಲ್ತಾನರ ಕಾಲದ ಪುರಸಭೆಯ ರಕ್ಷಕರ ಮುಖ್ಯಸ್ಥ.

mahayana: ಮಹಾಯಾನ. ಕನಿಷ್ಕನ

ಕಾಲದಲ್ಲಿ ಹುಟ್ಟಿಕೊಂಡ ಬೌದ್ಧಧರ್ಮದ ಪಂಥ.

mailed questionnaire: ಅಂಚೆ ಪ್ರಶ್ನಾವಳಿ.

mainism: ನೋಡಿ: animatism.

maintenance: ಜೀವನಾಂಶ.

maintenance cost: ನಿರ್ವಹಣಾ ವೆಚ್ಚ.

majority: ವಯಸ್ಕತನ; ಬಹುಮತ.

majority opinion: ಬಹುಸಂಖ್ಯಾಕ ಅಭಿಪ್ರಾಯ.

majority party: ಬಹುಸಂಖ್ಯಾತ ಪಕ್ಷ. ಶಾಸಕಾಂಗದಲ್ಲಿ ಬಹುಮತ ಪಡೆದು ಸರಕಾರ ರಚಿಸಲು ಶಕ್ತವಾಗಿರುವ ಪಕ್ಷ.

majority principle: ಬಹುಮತ ತತ್ವ. ಇಂದಿನ ಪ್ರತಿನಿಧಿ ಪದ್ಧತಿಯ ಪ್ರಜಾಪ್ರಭುತ್ವದಲ್ಲಿ ಬಹುಮತ ಪಡೆದ ಪಕ್ಷವು ಆಡಳಿತವನ್ನು ನಡೆಸುವುದು ಎಂಬ ತತ್ವ.

majority rule: ಬಹುಮತಾಡಳಿತ; ಬಹುಮತದ ಆಡಳಿತ.

majority vote: ಬಹುಮತ.

makara torana: ಮಕರ ತೋರಣ. ಮೊಸಳೆ ಬಾಯಿಯ ಆಕೃತಿಯಿಂದ ಹೊರಟ ಅಲಂಕಾರಿಕ ತೋರಣ. ಇದು ಬಾಗಿಲುವಾಡದ ಮೇಲಿರುತ್ತದೆ.

maladaptation: ವಿಸಮಾಯೋಜನೆ; ಅಸಮರ್ಪಕ ಹೊಂದಾಣಿಕೆ.

maladjusted individual: ಹೊಂದಾಣಿಕೆಯಿಲ್ಲದ ವ್ಯಕ್ತಿ.

maladjustment: ಅಪಹೊಂದಾಣಿಕೆ; ಸರಿಹೊಂದದಿರುವಿಕೆ. ವ್ಯಕ್ತಿ ಅಥವಾ ಸಮೂಹವು ಪ್ರಚಲಿತ ಮಾನಸಿಕ, ಸಾಮಾಜಿಕ ಅಥವಾ ಸಾಂಸ್ಕೃತಿಕ ಪ್ರಮಾಣಾದರ್ಶಗಳಿಗೆ ಹೊಂದಿಕೊಳ್ಳುವ ಅಸಾಮರ್ಥ್ಯ ಅಥವಾ ಅನಿಚ್ಛೆ. ನೋಡಿ: maladaptation.

maladjustment of personality: ವ್ಯಕ್ತಿತ್ವದ ಅಸಮಾಯೋಜನೆ.

male chauvinism: ಪುರುಷಾಭಿಮಾನ. ಪುರುಷರಿಗೆ ಸ್ತ್ರೀಯರಿಗಿಂತ ತಾವೇ ಶ್ರೇಷ್ಠರೆಂಬ ವಿಶೇಷಾಭಿಮಾನ.

malfeasance: ದುಷ್ಕೃತ್ಯ; ಅಧಿಕಾರದ ದುರ್ವರ್ತನೆ. ಸರಕಾರಿ ಅಧಿಕಾರಿಯು ಉದ್ದೇಶಪೂರ್ವಕವಾಗಿ ಆಡಳಿತಾಧಿಕಾರದ ದುರುಪಯೋಗ ಮಾಡುವುದು.

malicious act: ದುರುದ್ದೇಶಪೂರ್ಣ ಕೆಲಸ; ದುರಾಚರಣೆಯ ಕಾರ್ಯ.

malnutrition: ಅಪೌಷ್ಟಿಕತೆ.

mal-observation: ನ್ಯೂನಾವಲೋಕನ.

mal-practice: ದುರಾಚಾರ; ತಪ್ಪು ಕೆಲಸ.

Malthusian theory: ಮಾಲ್ಥಸನ ಸಿದ್ಧಾಂತ. ಜನಸಂಖ್ಯೆಯು ರೇಖಾಗಣಿತದ ಪ್ರಮಾಣದಲ್ಲಿಯೂ, ಆಹಾರಪೂರೈಕೆಯು ಅಂಕಗಣಿತದ ಪ್ರಮಾಣದಲ್ಲಿಯೂ ಏರುತ್ತದೆಂಬ ಸಿದ್ಧಾಂತ.

mammalia: ಸಸ್ತನಿ ವರ್ಗ.

mammalian society: ಸಸ್ತನಿ ಪ್ರಾಣಿ ಸಮಾಜ.

man-day: ಮಾನವ ದಿನ.

man-land ratio: ನೋಡಿ: density of population.

man power planning: ಮಾನವ ಶಕ್ತಿಯೋಜನೆ. ಸರಿಯಾದ ಯೋಜನೆಯ

ಮೂಲಕ ಜನಶಕ್ತಿಯ ಪ್ರಯೋಜನವನ್ನು ಪಡೆಯುವ ಪ್ರಯತ್ನಗಳು.

mana: ಅಲೌಕಿಕ ಶಕ್ತಿ ಅಥವಾ ಪ್ರಭಾವ. ನೋಡಿ: manaism.

managed currency system: ವ್ಯವಸ್ಥಿತ ಕರೆನ್ಸಿ ಪದ್ಧತಿ.

management: ನಿರ್ವಹಣೆ; ನಿರ್ವಹಣಾಂಗ. ನಿರ್ಧರಿಸಿದ ಗುರಿಗಳನ್ನು ಸಾಧಿಸುವ ಕಾರ್ಯಗಳಿಗೆ ನಿರ್ದೇಶನ ಹಾಗೂ ಮಾರ್ಗದರ್ಶನ ನೀಡುವ ಕಾರ್ಯ ವಿಧಾನ.

managerial class: ವ್ಯವಸ್ಥಾಪಕ ವರ್ಗ.

managerial director: ವ್ಯವಸ್ಥಾಪಕ ನಿರ್ದೇಶಕ.

managerial economics: ನಿರ್ವಹಣಾ ಅರ್ಥಶಾಸ್ತ್ರ.

managerial economies: ನಿರ್ವಹಣಾ ಮಿತವ್ಯಯ. ಬೃಹತ್ ಪ್ರಮಾಣದ ಉತ್ಪಾದನೆಯಲ್ಲಿ ಕಾರ್ಖಾನೆಯನ್ನು ಹಲವು ವಿಭಾಗಗಳಾಗಿ ವಿಂಗಡಿಸಿ ಪ್ರತಿಯೊಂದ ಕ್ಕೂ ಆಡಳಿತ ಸಹಾಯಕರನ್ನು ನೇಮಿಸಿ ಕಡಿಮೆ ಮಹತ್ವದ ಕೆಲಸಗಳನ್ನು ಅವರಿಗೆ ವಹಿಸಿಕೊಟ್ಟು ವ್ಯವಸ್ಥಾಪಕನು ಅಧಿಕ ಮಹತ್ವದ ಕೆಲಸಗಳನ್ನು ಮಾತ್ರ ತನಗಾಗಿ ಉಳಿಸಿಕೊಂಡು ಕಾರ್ಯ ನಿರ್ವಹಣೆಯಲ್ಲಿ ಸಾಧಿಸುವ ಮಿತವ್ಯಯ.

managerial view: ವ್ಯವಸ್ಥಾಪನಾ ದೃಷ್ಟಿಕೋನ; ನಿರ್ವಾಹಕರ ದೃಷ್ಟಿಕೋನ.

managerial work: ವ್ಯವಸ್ಥಾಪನಾ ಕಾರ್ಯ; ನಿರ್ವಹಣಾ ಕಾರ್ಯ.

manaism: ಮಾನಾ ತತ್ವ. ಒಳ್ಳೆಯ ಅಥವಾ ಕೆಟ್ಟ ಪರಿಣಾಮವುಂಟುಮಾಡುವ ವಿಶೇಷವಾದ ಅತಿಮಾನುಷತೆ ಇರುವ ಶಕ್ತಿಸ್ವರೂಪದ ನಂಬಿಕೆ. ಉದಾ: ರಕ್ತದ ವಿಶಿಷ್ಟ ಶಕ್ತಿಯ ನಂಬಿಕೆ. ಕೆಲವೊಂದು ಆದಿವಾಸಿ ಜನಾಂಗಗಳಲ್ಲಿ ರಕ್ತದ ಸಂಪರ್ಕದಿಂದ ಹಾನಿಯುಂಟಾಗಬಹುದೆಂಬ ಭಯದಿಂದ ಸಾಂದರ್ಭಿಕವಾಗಿ ಅಸ್ಪೃಶ್ಯತೆಯ ಆಚರಣೆ.

mandala: ಮಂಡಲ. ಒಂದು ಆಡಳಿತ ಘಟಕ.

mandamus: ನ್ಯಾಯಿಕ ಪರಮಾದೇಶ; ಪರಮಾದೇಶ. ೧. ನ್ಯಾಯಾಲಯವು ಆಡಳಿತ ಸಂಸ್ಥೆ, ಆಡಳಿತಾಧಿಕಾರಿ ಅಥವಾ ಅಧೀನ ನ್ಯಾಯಾಲಯಕ್ಕೆ ನಿರ್ದಿಷ್ಟ ಕರ್ತವ್ಯಗಳನ್ನು ನಿರ್ವಹಿಸುವಂತೆ ನೀಡುವ ಆದೇಶ. ೨. ಸರ್ವೋಚ್ಚ ನ್ಯಾಯಾಲಯವು ಕೆಳಗಿನ ನ್ಯಾಯಾಲಯಗಳಿಗೆ ಕಳಿಸುವ ಆಜ್ಞಾ ಪತ್ರ.

mandate: ಕಾನೂನಿನಾಧಾರಿತ ಆದೇಶ, ನ್ಯಾಯಾಸ್ಥಾನದ ಆಜ್ಞೆ.

mandate convention: ಆಜ್ಞಪ್ತ ಸಂಪ್ರದಾಯ. ಅಧಿಕಾರಾರೂಢ ಪಕ್ಷವೊಂದು ತನ್ನ ಚುನಾವಣಾ ಪ್ರಣಾಳಿಕೆಗೆ ವ್ಯತಿರಿಕ್ತವಾದ ಧೋರಣೆಯನ್ನವಲಂಬಿಸಬೇಕಾದಾಗ ಸೂಕ್ತ ಬೆಂಬಲ ಗಳಿಸುವ ದೃಷ್ಟಿಯಿಂದ ಪ್ರಜಾಭಿಪ್ರಾಯ ಸಂಗ್ರಹಣೆಗಾಗಿ ಚುನಾವಣೆಯನ್ನು ಘೋಷಿಸಿ ಮತ್ತೆ ಆಯ್ಕೆಗೊಂಡರೆ ತನ್ನ ಧೋರಣೆಗಳಿಗೆ ಪ್ರಜೆಗಳ ಒಪ್ಪಿಗೆ ಪಡೆದಂತಾಗುತ್ತದೆ. ಇದು ಇಂಗ್ಲೇಂಡ್‌ನಲ್ಲಿ ಒಂದು ಸಂಪ್ರದಾಯವಾಗಿ ಬೆಳೆದು ಬಂದಿದೆ.

mandate system: ಆಜ್ಞಪ್ತ ವ್ಯವಸ್ಥೆ.

mandatory convention: ನೋಡಿ : mandate convention

mandatory injunction: ಆಜ್ಞಪ್ತ ತಡೆಯಾಜ್ಞೆ.

mandatory provisions: ಕಡ್ಡಾಯ ನಿಯಮಗಳು; ಕಟ್ಟಾಜ್ಞೆಯ ಉಪಬಂಧಗಳು.

mandatory state: ಆಜ್ಞಾಪಕ ರಾಷ್ಟ್ರ. ಕಾನೂನು ಬದ್ಧತೆಗೊಳಪಡುವ ಅಂದರೆ ಆಜ್ಞೆ ಕೊಡುವ ಅಧಿಕಾರವುಳ್ಳ ರಾಷ್ಟ್ರ.

mandatory system: ಅಜ್ಞಾಪಕ ವ್ಯವಸ್ಥೆ; ಕಾನೂನು ವಿಧಿಸುವ ವ್ಯವಸ್ಥೆ.

manes: ಆತ್ಮ. ಪಿತೃ ಇಲ್ಲವೆ ಸತ್ತ ಹಿರಿಯರ ಆತ್ಮಗಳು.

mangoloid trait: ಮಂಗೋಲಿಯನ್ನರ ಭೌತಿಕ ಲಕ್ಷಣ. ನೆಟ್ಟನೆಯ ನೀಳವಾದ ಕೂದಲು, ಉಬ್ಬಿದ ಕೆನ್ನೆಯ ಮೂಳೆಗಳು, ಹಳದಿ ಬಣ್ಣದ ಚರ್ಮ, ಕುಳ್ಳನೆಯ ಒತ್ತಾದ ಮೈಕಟ್ಟು ಇವು ಮಂಗೋಲಿ ಯನ್ನರ ಲಕ್ಷಣಗಳಾಗಿವೆ.

manhi: ಮಾನ್ಹಿ. ವ್ಯವಹಾರಗಳ ವಿವರ ಸಂಗ್ರಹಿಸುವ ಅಧಿಕಾರಿ. ಅಲ್ಲಾವುದ್ದೀನ್ ಇಂತಹ ಅಧಿಕಾರಿಯನ್ನು ನೇಮಿಸಿದ್ದ.

manhood: ಪ್ರೌಢಾವಸ್ಥೆ.

mania: ಉನ್ಮಾದ; ಗೀಳು.

mania phobia: ನೋಡಿ: lysso phobia.

manic depression: ಸಮಾಜ ಘಾತಕ ಮಾನಸಿಕ ಸ್ಥಿತಿ. ಭಾವೋದ್ವೇಗದ ಸುಖದುಃಖದ ಏರಿಳಿತಗಳಲ್ಲಿ ಕಂಡುಬರುವ ಮಾನಸಿಕ ಸ್ಥಿತಿ.

manic-depressive cycle: ಉನ್ಮಾದ-ವಿಷಣ್ಣತಾ ಚಕ್ರ.

manic-depressive psychosis (MDP): ಉನ್ಮಾದ ವಿಷಾದ ಮನೋವಿಕೃತಿ. ಇಲ್ಲಿ ಉನ್ಮಾದ ಅಥವಾ ವಿಷಾದ ಭಾವನೆಯ ತೀವ್ರತೆಗಳೇ ಮುಖ್ಯ ಲಕ್ಷಣ. ಇದೊಂದು ಭಾವನಾತ್ಮಕ ಮನೋವಿಕೃತಿ. ರೋಗಿ ಅತೀ ಚಟುವಟಿಕೆಯಿಂದ ಕೂಡಿ ವಿಪರೀತ ಮಾತನಾಡುತ್ತಾನೆ.

manic-depressive reaction: ಉನ್ಮಾದ ವಿಷಣ್ಣತಾ ಪ್ರತಿಕ್ರಿಯೆ.

manic excitement: ಉನ್ಮಾದೋತ್ತೇಜನ; ಉನ್ಮಾದೋತ್ಸವ.

manic phase: ಉನ್ಮತ್ತ ಸ್ಥಿತಿ.

manic reaction: ಉನ್ಮಾದ ಪ್ರತಿ ಕ್ರಿಯೆ.

manic state: ಉನ್ಮಾದಾವಸ್ಥೆ.

manic stupor: ಉನ್ಮಾದ ಜಡತೆ; ಉನ್ಮಾದ ಮಾಂದ್ಯ.

manifest anxiety scale: ವ್ಯಕ್ತಾತಂಕ ಪ್ರಣಾಲಿ; ಪ್ರಕಟಿತ ಕಳವಳ ಪ್ರಣಾಲಿ.

manifest consequence: ನೋಡಿ: manifest function.

manifest content: ವ್ಯಕ್ತ ವಿಷಯ.

manifest dream content: ವ್ಯಕ್ತ ಸ್ವಪ್ನ ವಿಷಯ.

manifest function: ಪ್ರಕಟಿತ ಕಾರ್ಯ. ಗುರುತಿಸಲ್ಪಡುವ ಕಾರ್ಯಾತ್ಮಕ ಸಂಬಂಧ.

manifest interest: ಪ್ರಕಟಿತ ಆಸಕ್ತಿ; ವ್ಯಕ್ತ ಆಸಕ್ತಿ.

manifest social identity: ಪ್ರಕಟಿತ ಸಾಮಾಜಿಕ ಅನನ್ಯತೆ.

manifestation: ವ್ಯಕ್ತ ಅಸ್ತಿತ್ವ; ಅಭಿವ್ಯಕ್ತಿ; ಪ್ರಕಟಣೆ.

manifesto: ಪ್ರಣಾಳಿಕೆ; ಕಾರ್ಯಕ್ರಮ ಗಳ ಘೋಷಣಾ ಪತ್ರ. ೧. ರಾಜಕೀಯ ಪಕ್ಷದ ಧ್ಯೇಯ ಧೋರಣೆಗಳು, ಗುರಿಗಳು, ಯೋಜನೆಗಳು ಹಾಗೂ ಕಾರ್ಯಕ್ರಮಗಳ ಪ್ರಕಟಿತ ಘೋಷಣೆ. ೨. ಒಂದು ಚಳವಳಿಯ ಇಲ್ಲವೇ ಗುಂಪಿನ ಗುರಿಗಳನ್ನು ಕುರಿತ ಮೂಲಭೂತ ಮಾರ್ಗದರ್ಶಿ ಪ್ರಣಾಳಿಕೆ. (ಉದಾ: ಕಾರ್ಲ್‌ಮಾರ್ಕ್ಸ್ ಮತ್ತು ಏಂಗೆಲ್ಸ್‌ರಿಂದ ಪ್ರಕಟಣೆಗೊಂಡ ಕಮ್ಯುನಿಸ್ಟ್ ಮ್ಯಾನಿಫೆಸ್ಟೋ).

manigramam: ಮಣಿಗ್ರಾಮಮ್; ವರ್ತಕರ ಒಂದು ವೃತ್ತಿ ಸಂಘ.

manipulation: ಕೈಚಳಕ. ಕೌಶಲ್ಯಯುತವಾಗಿ ಕಾರ್ಯಸಾಧನೆ ಮಾಡುವಿಕೆ.

manism: ಮೃತರ ಆತ್ಮಪೂಜೆ.

manners: ಸಭ್ಯತೆ; ಸದ್ವರ್ತನೆಗಳು.

manor: ಮ್ಯಾನರ್; ಜಾಗೀರು. ಯುರೋಪಿನ ಊಳಿಗಮಾನ್ಯ ಸಮಾಜ ದಲ್ಲಿ ಪ್ರಚಲಿತವಿದ್ದ ಜಾಗೀರು.

manor house: ಗುತ್ತಿನ ಮನೆ; ಜಹಗೀರುದಾರನ ಭವನ.

manorial system: ಜಹಗೀರ್ ಪದ್ಧತಿ.

mantic: ಭವಿಷ್ಯ ಜ್ಞಾನದ; ಕಣಿಯ.

manumission: ಗುಲಾಮಗಿರಿಯಿಂದ ಬಿಡುಗಡೆ; ಜೀತಮುಕ್ತಿ.

manus: ಪುರುಷ ಪ್ರಧಾನ ಕಲ್ಪನೆ. ರೋಮನ್ ಕಾನೂನಿನಂತೆ ಹೆಂಡತಿಯ ಮೇಲೆ ಪ್ರಧಾನತೆಯ ಭಾವನೆಯಿಂದ ಗಂಡನು ನಡೆಸುವ ಅಧಿಕಾರ.

marasmus: ದೇಹಕ್ಷಯ; ಮೈಸವೆತ.

marchen: ಕಟ್ಟುಕತೆ. ಇದನ್ನು ಇಂಗ್ಲೀಷಿನ folk tale ಪದಕ್ಕೆ ಸಂವಾದಿಯಾಗಿ ಬಳಸಬಹುದು. ಗದ್ಯ ಕಥನಗಳಲ್ಲಿ ಪುರಾಣ ಮತ್ತು ಐತಿಹ್ಯಗಳನ್ನು ಬಿಟ್ಟು ಉಳಿದೆಲ್ಲಾ ಪ್ರಕಾರಗಳನ್ನೂ ಇದು ಒಳಗೊಳ್ಳುತ್ತದೆ. ಅದ್ಭುತ ಕತೆ, ವಿನೋದ ಕತೆ, ಕಿನ್ನರ ಕತೆ, ಪ್ರಾಣಿ ಕತೆ ಇತ್ಯಾದಿಗಳೆಲ್ಲವನ್ನು ಇದು ಸೇರಿಸಿಕೊಳ್ಳುತ್ತದೆ.

margin of consciousness: ಪ್ರಬುದ್ಧ ಚೇತನದ ಅಂಚು.

marginal: ಅಂಚಿನ; ಸೀಮಾಂತ.

marginal acculturation: ಸೀಮಾಂತ ಸಂಸ್ಕೃತಿ ಗ್ರಹಣ.

marginal analysis: ಸೀಮಾಂತ ವಿಶ್ಲೇಷಣೆ. ಆರ್ಥಿಕ ಚಲನಗಳಲ್ಲಿ ಉಂಟಾಗುವ ಸೀಮಾಂತ ಬದಲಾವಣೆಗಳ ನಡುವಿನ ಸಂಬಂಧಗಳ ಕುರಿತಾದ ವಿಶ್ಲೇಷಣೆ.

marginal area: ಅಂಚಿನ ಕ್ಷೇತ್ರ; ಸ್ಥಿತ್ಯಂತರ ಕ್ಷೇತ್ರ. ಎರಡು ಸಂಸ್ಕೃತಿಗಳು ಕೂಡುವ ಕ್ಷೇತ್ರ. ಇಂಥ ಪ್ರದೇಶಕ್ಕೆ 'ಸ್ಥಿತ್ಯಂತರ ಪ್ರದೇಶ'ವೆಂದೂ ಕರೆಯುತ್ತಾರೆ.

marginal benefit: ಸೀಮಾಂತ ಪ್ರಯೋಜನ.

marginal capital output ratio: ಸೀಮಾಂತ ಬಂಡವಾಳ ಉತ್ಪನ್ನ ನಿಷ್ಪತ್ತಿ. ನಿವ್ವಳ ಹೂಟೆ ಮೌಲ್ಯವನ್ನು ನಿವ್ವಳ ರಾಷ್ಟ್ರೀಯ ವರಮಾನದಿಂದ ಭಾಗಿಸಿದಾಗ ಬರುವ ಅಂಶ.

marginal consciousness: ಅಂಚಿನ ಪ್ರಜ್ಞಾ ಸ್ಥಿತಿ; ಪ್ರಬುದ್ಧ ಚೇತನದ ಅಂಚು ಪ್ರಜ್ಞೆ.

marginal contrast: ಅಂಚಿನ ವೈದೃಶ್ಯ; ಸೀಮಾಂತ ವೈದೃಶ್ಯ.

marginal cost: ಸೀಮಾಂತ ವೆಚ್ಚ. ಸೀಮಾಂತ ಉತ್ಪನ್ನಕ್ಕೆ ತಗಲುವ ಉತ್ಪಾದನಾ ವೆಚ್ಚ.

marginal cost curve: ಸೀಮಾಂತ ವೆಚ್ಚದ ರೇಖೆ.

marginal cost pricing: ಸೀಮಾಂತ ವೆಚ್ಚ ಬೆಲೆ ನಿರ್ಣಯ. ಯಾವುದೇ ಸರಕಿನ ಬೆಲೆ ನಿರ್ಣಯ ಮಾಡುವಾಗ ಆ ಸರಕಿನ ಒಂದು ಹೆಚ್ಚುವರಿ ಘಟಕವನ್ನು ಉತ್ಪಾದಿಸಲು ತಗಲುವ ವೆಚ್ಚಕ್ಕೆ ಸಮವಾಗಿ ಬೆಲೆಯನ್ನು ನಿಗದಿಪಡಿಸುವುದು.

marginal culture: ಅಂಚಿನ ಸಂಸ್ಕೃತಿ. ನೋಡಿ : marginal area.

marginal dwellers: ಅಂಚಿನ ವಾಸಿಗಳು. ಬಡತನದ ರೇಖೆಯ ಸಮೀಪ ಇರುವವರು.

marginal efficiency of capital: ಬಂಡವಾಳದ ಸೀಮಾಂತ ದಕ್ಷತೆ. ಹೆಚ್ಚುವರಿ ಬಂಡವಾಳದ ಹೂಡಿಕೆಯಿಂದ ನಿರೀಕ್ಷಿಸಬಹುದಾದ ಪ್ರತಿಫಲ.

marginal farmer: ಅಂಚಿನ ರೈತ; ಅತೀ ಸಣ್ಣ ರೈತ.

marginal group: ಅಂಚಿನ ಸಮೂಹ. ತನ್ನ ಕೆಲವು ಸಂಪ್ರದಾಯಗಳನ್ನು ಹಾಗೂ ಪ್ರತ್ಯೇಕ ಅಸ್ಮಿತೆಯನ್ನು ಕಳಕೊಂಡು ತಾನು ಸ್ವೀಕರಣಗೊಳ್ಳುವ ಗುಂಪಿನ ಮೌಲ್ಯ ಗಳನ್ನು ಆಂಶಿಕವಾಗಿ ಸ್ವೀಕರಿಸಿರುವ ಸಾಂಸ್ಕೃತಿಕ ಗುಂಪು.

marginal land: ಅತಿ ಸಣ್ಣ ಭೂಮಿ; ತುಂಡು ಭೂಮಿ.

marginal man: ಅಂಚಿನ ಮಾನವ; ಸೀಮಾಂತ ಮಾನವ; ಬಡ ವ್ಯಕ್ತಿ. ಎರಡು ಪ್ರತ್ಯೇಕ ಗುಣ ಲಕ್ಷಣಗಳುಳ್ಳ ಸಂಸ್ಕೃತಿಗಳಲ್ಲಿ ಸಿಲುಕಿದವನು. ಎರಡಕ್ಕೂ ಅವನ ನಿಷ್ಠೆ, ಬದ್ಧತೆ ಅಷ್ಟಕಷ್ಟೆ. ಅವು ಕೂಡಾ ಅವನನ್ನು ಸಂಪೂರ್ಣ ಸ್ವೀಕರಿಸಿರದ ಸಂದಿಗ್ಧ ಸ್ಥಿತಿ.

marginal physical product: ಸೀಮಾಂತ ಭೌತಿಕ ಉತ್ಪನ್ನ. ಒಂದು ಉತ್ಪಾದನೆಯ ಪ್ರಕ್ರಿಯೆಯಲ್ಲಿ ಘಟಕಗಳನ್ನು ಹೆಚ್ಚಿಸುವುದರಿಂದ ಉತ್ಪನ್ನದಲ್ಲಾಗುವ ಒಟ್ಟು ಹೆಚ್ಚಳ.

marginal private product: ಸೀಮಾಂತ ಖಾಸಗಿ ಉತ್ಪನ್ನ.

marginal product: ಸೀಮಾಂತ ಉತ್ಪನ್ನ. ನೋಡಿ : marginal physical product.

marginal productivity theory: ಸೀಮಾಂತ ಉತ್ಪಾದನೆಯ ಸಿದ್ಧಾಂತ. ಉತ್ಪಾದನಾ ಅಂಶಗಳ ಬೆಲೆಯು ಅವುಗಳ ಸೀಮಾಂತ ಉತ್ಪಾದಕತೆಯನ್ನು ಅವಲಂಬಿಸಿದೆ ಎಂಬುದನ್ನು ವಿವರಿಸುವ ಸಿದ್ಧಾಂತ.

marginal productivity theory of distribution: ಹಂಚಿಕೆಯ ಸೀಮಾಂತ ಉತ್ಪಾದಕತೆಯ ಸಿದ್ಧಾಂತ. ನೋಡಿ: marginal productivity theory.

marginal productivity theory of wage: ಕೂಲಿಯ ಸೀಮಾಂತ ಉತ್ಪಾದಕತೆಯ ಸಿದ್ಧಾಂತ. ಸೀಮಾಂತ ಉತ್ಪಾ

ದಕತೆಯನ್ನು ಅವಲಂಬಿಸಿಕೊಂಡು ಕೂಲಿಯನ್ನು ನಿರ್ಧರಿಸುವುದು.

marginal propensity to consume: ಸೀಮಾಂತ ಅನುಭೋಗ ಪ್ರವೃತ್ತಿ. ವ್ಯಕ್ತಿಯ ಆದಾಯದ ಏರಿಕೆಯಿಂದಾಗಿ ಆತನ ಅನುಭೋಗ ವೆಚ್ಚದಲ್ಲಾಗುವ ಬದಲಾವಣೆಯನ್ನು ಇದು ಸೂಚಿಸುತ್ತದೆ.

marginal propensity to import: ಆಮದಿನ (ಆಯಾತದ) ಸೀಮಾಂತ ಪ್ರವೃತ್ತಿ.

marginal propensity to save: ಉಳಿತಾಯದ ಸೀಮಾಂತ ಪ್ರವೃತ್ತಿ. ವ್ಯಕ್ತಿಯ ಆದಾಯದಲ್ಲಿನ ಏರಿಕೆಯಿಂದಾಗಿ ಉಳಿತಾಯದ ಮೇಲೆ ಉಂಟಾಗುವ ಪರಿಣಾಮ.

marginal purchase: ಸೀಮಾಂತ ಖರೀದಿ.

marginal rate of substitution: ಸೀಮಾಂತ ಪ್ರತಿನಿದಾನ ದರ. ಅಧಿಕ ಪ್ರಮಾಣದಲ್ಲಿರುವ ಒಂದು ವಸ್ತುವು ಅಲ್ಪ ಪ್ರಮಾಣದಲ್ಲಿ ಲಭ್ಯವಿರುವ ಇನ್ನೊಂದು ವಸ್ತುವಿನೊಂದಿಗೆ ಪ್ರತಿನಿದಾನಗೊಳ್ಳುವ ದರ.

marginal revenue: ಸೀಮಾಂತ ಆದಾಯ. ಉತ್ಪನ್ನಗಳ ಮಾರಾಟ ಪ್ರಮಾಣದಲ್ಲಿ ಸ್ವಲ್ಪ ಬದಲಾವಣೆಯಿಂದಾಗಿ ಉದ್ಯಮದ ಒಟ್ಟು ಆದಾಯದಲ್ಲಾಗುವ ಹೆಚ್ಚಳ.

marginal saving income ratio: ಸೀಮಾಂತ ಉಳಿತಾಯ ಆದಾಯ ಅನುಪಾತ.

marginal social net product: ಸೀಮಾಂತ ಸಾಮಾಜಿಕ ನಿವ್ವಳ ಉತ್ಪನ್ನ. ನಿರ್ದಿಷ್ಟ ಸ್ಥಳ ಅಥವಾ ಬಳಕೆಯಲ್ಲಿನ ಸಂಪನ್ಮೂಲಗಳ ಸೀಮಾಂತ ಹೆಚ್ಚಳವುಂಟು ಮಾಡುವ ಯಾವುದೇ ರೀತಿಯ ಭೌತಿಕ ಸರಕು ಮತ್ತು ಸೇವೆಗಳ ಒಟ್ಟು ಪ್ರಮಾಣದ ನಿವ್ವಳ ಉತ್ಪನ್ನ.

marginal social product: ಸೀಮಾಂತ ಸಾಮಾಜಿಕ ಉತ್ಪನ್ನ.

marginal tax rate: ಸೀಮಾಂತ ತೆರಿಗೆ ದರ.

marginal technical rate of substitution: ಸೀಮಾಂತ ತಾಂತ್ರಿಕ ಪ್ರತಿನಿದಾನ ದರ.

marginal utility: ಸೀಮಾಂತ ತುಷ್ಟಿಗುಣ. ಸರಕೊಂದರ ಅನುಭೋಗದ ಅಲ್ಪ ಪ್ರಮಾಣದ ಹೆಚ್ಚಳದಿಂದಾಗಿ ಅನುಭೋಗಿಯು ಪಡೆಯುವ ತೃಪ್ತಿಯಲ್ಲುಂಟಾಗುವ ಹೆಚ್ಚಳ.

marginal value product: ಸೀಮಾಂತ ಮೌಲ್ಯ ಉತ್ಪನ್ನ. ಉತ್ಪಾದನಾ ಅಂಶಗಳ ಒಂದು ಹೆಚ್ಚುವರಿ ಘಟಕವನ್ನು ಅಳವಡಿಸಿಕೊಳ್ಳುವುದರಿಂದ ಉಂಟಾಗುವ ಉತ್ಪನ್ನದ ಮಾರುಕಟ್ಟೆ ಮೌಲ್ಯ.

marginal votes: ಅಂಚಿನ ಮತಗಳು. ತೀವ್ರ ಸ್ಪರ್ಧೆ ಇದ್ದಾಗ ಗೆದ್ದ ಅಭ್ಯರ್ಥಿಯು ಅತೀ ಕಡಿಮೆ ಅಂತರದ ಮತಗಳಿಂದ ಜಯಗಳಿಸಿದರೆ ಈ ಅಂತರವನ್ನು ಸೂಚಿಸುವ ಮತಗಳು ಅಂಚಿನ ಮತಗಳಾಗಿವೆ.

marital abstinence: ರತಿವರ್ಜನೆ; ವಿವಾಹ ವರ್ಜನೆ. ೧. ಮದುವೆಯ ಬಳಿಕವೂ ಲೈಂಗಿಕ ಕ್ರಿಯೆಯಲ್ಲಿ ತೊಡಗದೆ ಇರುವುದು. ೨. ತನ್ನ ಕುಟುಂಬವನ್ನು

ಸಲಹುವ ಶಕ್ತಿ ಬರುವವರೆಗೆ (ಅರ್ಥಾತ್ ಆದಾಯ ಹೆಚ್ಚಾಗುವವರೆಗೆ)ಮದುವೆಯನ್ನು ಮುಂದೂಡುವುದು. ಇದನ್ನು ಮಾಲ್ತಸನ 'ಇಂದ್ರಿಯ ನಿಗ್ರಹ' ಸಿದ್ಧಾಂತ ದಲ್ಲಿ ಪ್ರಸ್ತಾಪಿಸಲಾಗಿದೆ. ೩. ಸಂತಾನೋತ್ಪತ್ತಿಗಾಗಿ ಮಾತ್ರ ಲೈಂಗಿಕ ಕ್ರಿಯೆಯಲ್ಲಿ ತೊಡಗುವುದು. ಉಳಿದಂತೆ ಲೈಂಗಿಕ ಸಂಯಮ ವಹಿಸುವುದು.

marital adjustment: ವೈವಾಹಿಕ ಹೊಂದಾಣಿಕೆ.

marital conflict: ದಾಂಪತ್ಯ ವಿರಸ.

market area: ಮಾರುಕಟ್ಟೆ ಪ್ರದೇಶ.

market forces: ಮಾರುಕಟ್ಟೆ ಶಕ್ತಿಗಳು. ಮುಕ್ತಮಾರುಕಟ್ಟೆ ಅರ್ಥವ್ಯವಸ್ಥೆಯಲ್ಲಿ ವಸ್ತುಗಳ ಬೆಲೆಯನ್ನು ನಿರ್ಧರಿಸುವ ಅಂಶ ಗಳು.

market mechanism: ಮಾರುಕಟ್ಟೆ ತಂತ್ರ.

market period: ಅತ್ಯಂತ ಅಲ್ಪಾವಧಿ ಮಾರುಕಟ್ಟೆ.

market power: ಮಾರುಕಟ್ಟೆ ಶಕ್ತಿ. ನಿರ್ದಿಷ್ಟ ಮಾರುಕಟ್ಟೆಯೊಂದರಲ್ಲಿ ಉತ್ಪನ್ನ ಹಾಗೂ ಬೆಲೆಗಳ ಮೇಲೆ ಒಂದು ಉದ್ಯಮವು ಬೀರುವ ಪ್ರಭಾವ.

market price: ಮಾರುಕಟ್ಟೆ ಬೆಲೆ. ಅಲ್ಪಾವಧಿಯಲ್ಲಿ ಮಾರುಕಟ್ಟೆಯೊಂದರಲ್ಲಿ ವಸ್ತುವಿನ ಬೇಡಿಕೆ ಮತ್ತು ಪೂರೈಕೆಗಳಿಗೆ ಅನುಗುಣವಾಗಿ ನಿರ್ಧಾರವಾಗುವ ಬೆಲೆ.

market structure: ಮಾರುಕಟ್ಟೆ ರಚನೆ. ಮಾರುಕಟ್ಟೆಯಲ್ಲಿ ಸ್ಪರ್ಧೆ ಮತ್ತು ಬೆಲೆ ನಿರ್ಣಯದ ಮೇಲೆ ಪ್ರಭಾವ ಬೀರುವ ಮಾರುಕಟ್ಟೆಯ ಸಂಘಟನಾತ್ಮಕ ರಚನೆ.

market supply: ಮಾರುಕಟ್ಟೆ ಪೂರೈಕೆ.

marketable security: ವಿಕ್ರಯಸಾಧ್ಯ ಭದ್ರತಾಪತ್ರ.

marketing co-operative: ಮಾರು ಕಟ್ಟೆ ಸಹಕಾರಿ ಸಂಸ್ಥೆ.

marketing economies: ಮಾರುಕಟ್ಟೆ ಮಿತವ್ಯಯಗಳು.

marketing federation: ಮಾರುಕಟ್ಟೆ ಒಕ್ಕೂಟ.

marketing orientation: ಮಾರು ಕಟ್ಟೆಯ ಒಲವು. ಮಾರುಕಟ್ಟೆಯ ಮೌಲ್ಯ ಗಳಿಗೆ ಹೊಂದಾಣಿಕೆಯನ್ನು ಮಾಡಿಕೊಳ್ಳು ವಂತಹ ವ್ಯಕ್ತಿತ್ವ. ಇತರರನ್ನು ಯಾವಾ ಗಲೂ ಆಕರ್ಷಿಸಬೇಕೆಂಬ ಪ್ರಬಲ ಬಯಕೆ ಯುಳ್ಳ ವ್ಯಕ್ತಿಗಳು ತಮ್ಮ ವರ್ತನೆ ಹಾಗೂ ದೃಷ್ಟಿಕೋನಗಳನ್ನು ಮಾರುಕಟ್ಟೆಯ ಸಮಕಾಲೀನ ಮೌಲ್ಯಗಳಿಗೆ ಹೊಂದಿ ಕೊಳ್ಳುವಂತೆ ಬದಲಾಯಿಸುತ್ತಾ ಹೋಗುವ ಪ್ರವೃತ್ತಿ.

marketing problem: ಮಾರುಕಟ್ಟೆ ಸಮಸ್ಯೆ.

marks of behaviour: ವರ್ತನೆಯ ಲಕ್ಷಣಗಳು; ವರ್ತನೆಯ ಚಿಹ್ನೆಗಳು.

marriage: ಮದುವೆ ; ವಿವಾಹ.

marriage bureau: ವಿವಾಹ ಕಾರ್ಯಾಲಯ; ವಿವಾಹ ವೇದಿಕೆ.

marriage by capture: ಅಪಹರಣ ವಿವಾಹ. ಅಪೇಕ್ಷೆ ಪಟ್ಟ ಯುವತಿಯನ್ನು ಹೊತ್ತೊಯ್ದು ಅಪಹರಿಸಿ ವಿವಾಹವಾಗು ವುದು.

marriage by consent: ಒಪ್ಪಿತ ವಿವಾಹ.

ಹುಡುಗಿಯ ಒಪ್ಪಿಗೆ ಪಡೆದು ಆಗುವ ವಿವಾಹ.

marriage by exchange: ಕೊಟ್ಟು ತರುವ ವಿವಾಹ; ಎದುರ್ಹೆಣ್ಣು ವಿವಾಹ. ತನ್ನ ಸಹೋದರಿಯನ್ನು ವಿವಾಹ ಮಾಡಿ ಕೊಡುವವನ ಸಹೋದರಿಯನ್ನು ವಿವಾಹ ವಾಗುವುದು. ಹೆಣ್ಣು ಕೊಡುವುದಕ್ಕಾಗಿ ಹೆಣ್ಣು ತರುವ ಒಪ್ಪಂದದ ಮೇಲೆ ಜರುಗುವ ವಿವಾಹ.

marriage by intrusion: ಆಕ್ರಮ ಪ್ರವೇಶ ವಿವಾಹ. ಆದಿವಾಸಿಗಳಲ್ಲಿ ಕನ್ಯೆಯು ತಾನು ಬಯಸಿದ ಯುವಕನನ್ನು ಮದುವೆ ಯಾಗುವುದರಲ್ಲಿ ಯಶಸ್ವಿಯಾಗದಿದ್ದರೆ ಆತನ ಮನೆಗೆ ಆಕ್ರಮವಾಗಿ ಪ್ರವೇಶಿಸಿ, ಮನೆಯವರ ಚಿತ್ರಹಿಂಸೆಯನ್ನು ಸಹಿಸಿ, ಮನೆಯವರ ಮನಗೆದ್ದು ಆಗುವ ವಿವಾಹ.

marriage by purchase: ವಿಕ್ರಯ ವಿವಾಹ. ಸಾಕಷ್ಟು ವಧುದಕ್ಷಿಣೆ ನೀಡಿ ಹುಡುಗಿಯ ತಂದೆ, ತಾಯಿ, ನೆಂಟರನ್ನು ಹಣದಿಂದ ತೃಪ್ತಿಪಡಿಸಿ ವಧುವನ್ನು ತಂದು ಜರಗುವ ವಿವಾಹ.

marriage by service: ಸೇವಾ ವಿವಾಹ. ವಿವಾಹವಾಗಬಯಸಿದ ಹೆಣ್ಣಿನ ಮನೆ ಯಲ್ಲಿ ಕೆಲಸಕ್ಕೆ ಸೇರಿ ಭಾವೀ ಅತ್ತೆ ಮಾವಂದಿರ ಸೇವೆ ಮಾಡುವುದರ ಮೂಲಕ ಕನ್ಯಾ ಶುಲ್ಕವನ್ನು (ವಧು ದಕ್ಷಿಣೆಯನ್ನು) ತೀರಿಸಿ ವಿವಾಹವಾಗುವುದು.

marriage by trial: ಪರೀಕ್ಷಾ ವಿವಾಹ. ೧. ಅರ್ಹತಾ ಪರೀಕ್ಷೆಯ ನಂತರ ವಿವಾಹ. ಉದಾ: ವಿವಾಹಾಕಾಂಕ್ಷಿಯಾದ ಯುವಕನು ತನ್ನ ಶೌರ್ಯ ಸಾಹಸಗಳನ್ನು ಎಲ್ಲರೆದುರು ಪ್ರದರ್ಶಿಸಿ, ನಂತರ ತನಗಿಷ್ಟವಾದ ಕನ್ಯೆ ಯನ್ನು ಮದುವೆಯಾಗುವುದು. ವೀರ ಶುಲ್ಕದ ಸ್ವಯಂವರ. ೨. ವಿವಾಹೇಚ್ಛೆಗಳಾದ ಯುವಕ ಯುವತಿ ಜೊತೆಯಾಗಿ ವಾಸಿಸುತ್ತಾ ಪರಸ್ಪರ ಹೊಂದಾಣಿಕೆ ಸಾಧ್ಯವೆಂದು ಕಂಡು ಬಂದ ಬಳಿಕವೇ ಆಗುವ ವಿವಾಹ.

marriage counselling: ವೈವಾಹಿಕ ಮಾರ್ಗದರ್ಶನ; ವಿವಾಹ ಪರಾಮರ್ಶೆ; ವಿವಾಹ ಉಪಬೋಧನೆ.

marriage rate: ವಿವಾಹ ದರ. ಒಂದು ವರ್ಷದಲ್ಲಿ ಪ್ರತಿ ಸಾವಿರ ಜನಸಂಖ್ಯೆಯಲ್ಲಿ ಜರಗುವ ವಿವಾಹಗಳ ಸಂಖ್ಯೆ.

marriage riddle: ಮದುವೆ ಒಗಟು.

marriage rite: ವಿವಾಹ ಸಂಸ್ಕಾರ. ವಿವಾಹ ಸಂಸ್ಕಾರದಲ್ಲಿ ನಡೆಯುವ ಆಚರಣೆ.

marshy land: ಜವುಗು ಭೂಮಿ.

martial law: ಸೈನಿಕಾಡಳಿತ; ಲಷ್ಕರಿ ಶಾಸನ. ಜನರಿಂದ ಆಯ್ಕೆಯಾದ ಸರಕಾರದ ಬದಲಾಗಿ ರಾಷ್ಟ್ರದ ಅಧಿಕಾರವು ಸೇನೆಯ ಕೈಯಲ್ಲಿರುವುದು. ಉದಾ: ಪಾಕಿಸ್ತಾನದಲ್ಲಿ ಅನೇಕ ಬಾರಿ ಹೀಗಾಗಿದೆ.

martial law court: ಸೈನಿಕಾಡಳಿತದ ನ್ಯಾಯಾಲಯ; ಮಿಲಿಟರಿ ನ್ಯಾಯಾಲಯ.

Marxian theory of stratification: ಮಾರ್ಕ್ಸ್‌ನ ಸ್ತರವಿನ್ಯಾಸದ ಸಿದ್ಧಾಂತ. ಉತ್ಪಾದನೆ, ವಿತರಣೆ ಮುಂತಾದ ಆರ್ಥಿಕ ಅಂಶಗಳ ಆಧಾರದ ಮೇಲೆ ಅಧಿಕಾರ, ಸ್ಥಾನಮಾನ, ಜೀವನ ವಿಧಾನ ಮುಂತಾ ದವುಗಳು ನಿರ್ಧರಿಸಲ್ಪಡುತ್ತವೆ ಎಂಬ ಸಿದ್ಧಾಂತ.

Marxism: ಮಾರ್ಕ್ಸ್‌ವಾದ.

masculine protest: ಪುರುಷ ಪ್ರತಿಭಟನೆ.

masculinity proportion: ಪುರುಷ ಪ್ರಮಾಣ. ಒಂದು ದೇಶ ಅಥವಾ ಪ್ರದೇಶದ ಜನಸಂಖ್ಯೆಯಲ್ಲಿರುವ ಪುರುಷರ ಪ್ರಮಾಣ.

masculinization: ಗಂಡುತನ ಬೆಳೆಸುವುದು.

masochism: ಸ್ವಪೀಡನ ರತಿ. ಸ್ವಯಂ ನೋವನ್ನು ಅನುಭವಿಸುವುದರಿಂದ ಲೈಂಗಿಕ ತೃಪ್ತಿ ಹೊಂದುವ ಕಾಮ ವಿಕಾರ.

masochist: ಸ್ವಪೀಡನ ಕಾಮಿ; ಸ್ವಯಂ ಪೀಡನಾನುರಕ್ತ.

mass: ಜನ ಸಮೂಹ.

mass action: ಸಮೂಹ ಕ್ರಿಯೆ; ಸಂಕಲಿತ ಕ್ರಿಯೆ.

mass behaviour: ಸಮೂಹ ವರ್ತನೆ; ಸಾಮೂಹಿಕ ವರ್ತನೆ.

mass communication: ಸಮೂಹ ಸಂಪರ್ಕ; ಸಮೂಹ ಸಂವಹನ. ಉದಾ: ದೂರದರ್ಶನ, ರೇಡಿಯೋ, ವಾರ್ತಾ ಪತ್ರಿಕೆಗಳು ಇತ್ಯಾದಿ.

mass culture: ಸಮೂಹ ಸಂಸ್ಕೃತಿ.

mass education: ಸಮೂಹ ಶಿಕ್ಷಣ.

mass hysteria: ಸಾಮೂಹಿಕ ಉನ್ಮಾದ ರೋಗ.

mass insurrection: ಸಾಮೂಹಿಕ ವಿಪ್ಲವ; ಜನತಾ ವಿಪ್ಲವ

mass madness: ಸಾಮೂಹಿಕ ಹುಚ್ಚು. ಸಮೂಹವರ್ತನಾ ವಿಕಲ್ಪ.

mass media: ಸಮೂಹ ಮಾಧ್ಯಮ. ಜನರಿಗೆ ವಿವಿಧ ಕ್ಷೇತ್ರಗಳಲ್ಲಿ ಜ್ಞಾನವನ್ನು ಒದಗಿಸಿಕೊಡುವ ಸಂಪರ್ಕ ಮಾಧ್ಯಮ ಗಳು. ಉದಾ ಚಲನಚಿತ್ರ. ದೂರದರ್ಶನ, ರೇಡಿಯೋ, ಧ್ವನಿಮುದ್ರಿಕೆಗಳು ಇತ್ಯಾದಿ.

mass movement: ಜನಾಂದೋಲನ. ಯಾವುದೇ ಪೂರ್ವ ನಿಶ್ಚಿತ ಯೋಜನೆಗಳಿಲ್ಲದೆ ಬೃಹತ್ ಪ್ರಮಾಣದಲ್ಲಿ ಜನರು ಸ್ವಯಂ ಪ್ರೇರಣೆಯಿಂದ ಒಂದು ಸಾಮಾನ್ಯ ಉದ್ದೇಶಕ್ಕಾಗಿ ಆಂದೋಲನ ನಡೆಸುವುದು. ಉದಾ. ಸಮೂಹ ವಲಸೆ, ರಾಜಕೀಯ ಧಾರ್ಮಿಕ ಚಳುವಳಿ.

mass production: ವಿಪುಲ ಉತ್ಪಾದನೆ; ಅತ್ಯಂತ ಹೆಚ್ಚಿನ ಉತ್ಪಾದನೆ.

mass society: ಸಮೂಹ ಸಮಾಜ. ಸಮೂಹ ವರ್ತನೆ ಹಾಗೂ ಸಮೂಹ ಸಂಸ್ಕೃತಿಯ ಪ್ರಾಧಾನ್ಯತೆಯಿರುವ ಆಧುನಿಕ ರಾಜಕೀಯ ಸಾಮಾಜಿಕ ಘಟಕಗಳು. ಉದಾ: ರಾಷ್ಟ್ರಗಳು.

mass suggestion: ಗುಂಪು ಭಾವ ಪ್ರೇರಣೆ.

massed repetition: ಸಮೂಹ ಜನ್ಯ ಪುನಶ್ಚರಣೆ.

master craftsman: ಕರಕುಶಲಿಗರ ಒಡೆಯ. ವೃತ್ತಿಪರರ ಯಜಮಾನ.

material alteration: ಭೌತಿಕ ಬದಲಾವಣೆ.

material culture: ಭೌತ ಸಂಸ್ಕೃತಿ; ವಸ್ತುಜನ್ಯ ಸಂಸ್ಕೃತಿ. ಮಾನವನಿಂದ ನಿರ್ಮಿತವಾದ ಎಲ್ಲಾ ಭೌತವಸ್ತುಗಳು.

material definition: ಭೌತಿಕ ನಿರ್ವಚನ; ಭೌತಿಕ ವ್ಯಾಖ್ಯೆ.

material good: ಭೌತಿಕ ಸರಕು.

material historical sources: ಭೌತಿಕ ಐತಿಹಾಸಿಕ ಆಕರಗಳು. ಉದಾ. ಕಲ್ಲಿನ ಕೈಕೊಡಲಿ, ಆದಿಮಾನವರು ಗುಹೆಯ ಗೋಡೆಯ ಮೇಲೆ ರಚಿಸಿದ ಚಿತ್ರ ಇತ್ಯಾದಿ.

material psychology: ವಾಸ್ತವಿಕ ಮನೋವಿಜ್ಞಾನ.

material rewards: ವಸ್ತುರೂಪದ ಬಹುಮಾನಗಳು; ಭೌತಿಕ ಬಹುಮಾನಗಳು.

material wealth: ಭೌತಿಕ ಸಂಪತ್ತು.

materialism: ಭೌತಿಕವಾದ; ಭೌತ ವಾದ; ವಸ್ತುವಾದ. ವಸ್ತುವು ಪ್ರಾಥಮಿಕವೂ ಇಂದ್ರಿಯಾನುಭವದ ಮೂಲವೂ ಆಗಿದ್ದು, ಪ್ರಜ್ಞೆ ಮತ್ತು ಚಿಂತನೆಗಳು ಅದರಿಂದ ವ್ಯುತ್ಪನ್ನವಾದವು ಗಳೆಂದೂ, ಅನುಷಂಗಿಕವಾದವುಗಳೆಂದೂ ಪ್ರತಿಪಾದಿಸುವ ತತ್ವ.

materialistic culture: ಭೌತವಾದಿ ಸಂಸ್ಕೃತಿ.

materialistic interpretation of history: ನೋಡಿ: histrorical materialism.

materialistic socialism: ಭೌತವಾದಿ ಸಮಾಜವಾದ. ಎಲ್ಲಾ ಸಂಕಷ್ಟಗಳಿಗೂ ಅಸಮಾನತೆಯ ಸಂಕೇತಗಳಾಗಿ ನಿಂತಿರುವ ಖಾಸಿಗಿ ಆಸ್ತಿ ಮತ್ತು ಒಡೆತನ ಇವುಗಳೇ ಕಾರಣ ಎಂದು ಪ್ರತಿಪಾದಿಸುವ ವಿಚಾರಧಾರೆ.

materialistic view point: ಭೌತವಾದದ ದೃಷ್ಟಿಕೋನ.

material's diplomacy: ಸರಕುಗಳ ರಾಯಭಾರ. ಒಂದು ದೇಶದ ನೈಸರ್ಗಿಕ ಸಂಪತ್ತು ಮತ್ತು ಕಚ್ಚಾ ಸರಕು ಆ ದೇಶದ ಆಂತರಿಕ ನೀತಿ ಮತ್ತು ಹೊರದೇಶ ಗಳೊಡನೆ ಹೊಂದಬಹುದಾದ ಸಂಬಂಧಗಳ ಮೇಲೆ ಆಗಾಧ ಪರಿಣಾಮವನ್ನು ಬೀರುತ್ತದೆ. ಈ ದೃಷ್ಟಿಯಿಂದ ಕಚ್ಚಾ ಮಾಲು ದೊರೆಯುವ ಸ್ಥಳದ ದೂರ ಹಾಗೂ ಅವು ದೊರೆಯಬಹುದಾದ ಪ್ರಮಾಣಗಳನ್ನು ನಿರ್ಧರಿಸುವ ಕಾರ್ಯಕ್ಕೆ ಸರಕುಗಳ ರಾಯಭಾರ ಎನ್ನಲಾಗುತ್ತದೆ.

maternal behaviour: ತಾಯ್ತನದ ವರ್ತನೆ.

maternal deprivation: ಮಾತೃ ವಾತ್ಸಲ್ಯದ ಕೊರತೆ. ಇದರಿಂದ ಮಗುವಿಗೆ ಭಾವನೆಯ ಭದ್ರತೆಯಿಲ್ಲದೆ ಮಾನಸಿಕ ದುರ್ಬಲತೆ ಉಂಟಾಗುವುದು.

maternal drive: ತಾಯ್ತನದ ಚೋದನೆ.

maternal family: ಮಾತೃಮೂಲ ಕುಟುಂಬ. ರಕ್ತ ಸಂಬಂಧವು ಮಾತೃ ಮೂಲದಿಂದ ಗುರುತಿಸಲ್ಪಡುವ ಕುಟುಂಬ. ನೋಡಿ: matriarchal family.

maternal instinct: ಮಾತೃ ಪ್ರವೃತ್ತಿ.

maternal mortality: ಮಾತೃ ಮರಣ; ಮಾತೃ ಮೃತ್ಯತೆ.

maternal motive: ಮಾತೃ ಭಾವಾಭಿಪ್ರೇರಣೆ.

maternal psychology: ತಾಯ್ತನದ ಮನೋವಿಜ್ಞಾನ.

mathematical deductive method: ಗಣಿತಾತ್ಮಕ ನಿಗಮನ ವಿಧಾನ.

mathematical economics: ಗಣಿತಾತ್ಮಕ ಅರ್ಥಶಾಸ್ತ್ರ.

mathematical statistics: ಗಣಿತಾತ್ಮಕ ಸಂಖ್ಯಾಶಾಸ್ತ್ರ.

mating relationship: ಸಂಗಾತಿಗಳ ಸಂಬಂಧ.

matriarchal family: ಮಾತೃ ಪ್ರಧಾನ ಕುಟುಂಬ. ತಾಯಿಯು ಕುಟುಂಬದ ಮುಖ್ಯಸ್ಥೆಯಾಗಿರುವ ಕುಟುಂಬ ವ್ಯವಸ್ಥೆ.

matriarchal joint family: ಮಾತೃ ಪ್ರಧಾನ ಅವಿಭಕ್ತ ಕುಟುಂಬ.

matriarchy: ನೋಡಿ: matriarchal family.

matricentric family: ಮಾತೃ ಕೇಂದ್ರಿತ ಕುಟುಂಬ. ತಂದೆಯ ಸ್ಥಾನ ಗೌಣವಾಗಿದ್ದು, ತಾಯಿಯೇ ಕುಟುಂಬದ ಪ್ರಾಮುಖ್ಯ ಕೇಂದ್ರ ವ್ಯಕ್ತಿಯಾಗಿರುವ ಕುಟುಂಬ.

matrilineal descent: ಮಾತೃ ವಂಶೀಯ ವಂಶಾವಳಿ. ಹೆಣ್ಣು ಸಂತತಿ ಯಿಂದ ಉತ್ತರಾಧಿಕಾರ ಹಾಗೂ ವಂಶವನ್ನು ನಿರ್ಧರಿಸುವ ಕ್ರಮ.

matrilineal family: ಮಾತೃ ವಂಶೀಯ ಕುಟುಂಬ. ಹೆಣ್ಣುಮಕ್ಕಳ ಮೂಲಕ ಕುಟುಂಬದ ಉತ್ತರಾಧಿಕಾರ ಮತ್ತು ವಂಶಾವಳಿಯನ್ನು ನಿರ್ಧರಿಸುವ ಕುಟುಂಬ.

matrilineal kinship: ಮಾತೃ ವಂಶೀಯ ರಕ್ತ ಸಂಬಂಧ; ಮಾತೃ ವಂಶೀಯ ಕಳ್ಳುಬಳ್ಳಿ. ತಾಯಿಯ ಮೂಲಕ ಗುರುತಿಸಲ್ಪಡುವ ರಕ್ತಸಂಬಂಧ.

matriliny: ಮಾತೃವಂಶೀಯತೆ. ತಾಯಿ ಯಿಂದ ಮಕ್ಕಳ ವಂಶವನ್ನು ಗುರುತಿಸುವ ವಿಧಾನ.

matrilocal family: ಮಾತೃ ಸ್ಥಾನೀಯ ಕುಟುಂಬ. ಮದುವೆಯಾದ ಬಳಿಕ ದಂಪತಿಗಳು ಹೆಂಡತಿಯ ಮನೆಯಲ್ಲೇ ವಾಸಿಸುವಂಥ ಸಂಪ್ರದಾಯವಿರುವ ಕುಟುಂಬ.

matrilocal residence: ಮಾತೃ ಸ್ಥಾನೀಯ ವಾಸ್ತವ್ಯ.

matrimonial dispute: ವೈವಾಹಿಕ ಕಲಹ; ವೈವಾಹಿಕ ಭಿನ್ನಾಭಿಪ್ರಾಯ.

matrimonial house: ವಿವಾಹ ಗೃಹ.

matrimonial offence: ವೈವಾಹಿಕ ಅಪರಾಧ; ವಿವಾಹ ಸಂಬಂಧೀ ಅಪರಾಧ.

matrimonial relief: ವೈವಾಹಿಕ ಪರಿಹಾರ.

matrimonial rights: ವೈವಾಹಿಕ ಹಕ್ಕುಗಳು.

matri-patri local residence: ಮಾತೃ-ಪಿತೃ ಸ್ಥಾನೀಯ ವಾಸ್ತವ್ಯ. ವಿವಾಹದ ಕೆಲಕಾಲ ಹೆಂಡತಿಯ ತಾಯಿ ಮನೆಯಲ್ಲಿ ವಾಸಮಾಡಿ, ನಂತರ ಗಂಡನ ತಂದೆಮನೆಯಲ್ಲಿ ವಾಸಿಸುವ ಪದ್ಧತಿ.

matripotestal: ಮಾತೃ ಅಧಿಕಾರ. ತಾಯಿ ಅಥವಾ ಅಜ್ಜಿಯ (ತಾಯಿಯ ತಾಯಿಯ) ಕುಟುಂಬದಲ್ಲಿ ಅಧಿಕಾರವನ್ನು ಚಲಾಯಿಸುವುದು.

matrix: ಮಾತೃಕೆ. ಅಡ್ಡ ಅಥವಾ ನೀಟ ಸಾಲುಗಳಲ್ಲಿ ವ್ಯವಸ್ಥಿತಗೊಳಿಸಲಾದ ಸಂಖ್ಯೆಗಳ ರಚನೆ.

matronymic family: ಮಾತೃ ವಂಶಾವಳಿಯ ಕುಟುಂಬ. ಮಕ್ಕಳು ತಾಯಿಯ ವಂಶಾವಳಿಯ ಹೆಸರನ್ನು ಹೊಂದಿರುವಂಥ ಕುಟುಂಬ.

maturation: ವಿಕಸನ; ಬೆಳವಣಿಗೆ; ಪಕ್ವತೆ.

maturation hypothesis: ಪರಿಪಕ್ವನ ಪ್ರಾಕ್‌ಕಲ್ಪನೆ; ವಿಕಸನದ (ಬೆಳವಣಿಗೆಯ) ವಿವಿಧ ಹಂತಗಳ ಪರಿಕಲ್ಪನೆ. ಅನುಭವ, ಕಲಿಕೆ ಮತ್ತು ಸಮಾಜೀಕರಣ ಪ್ರಕ್ರಿಯೆಗಳಿಂದಲ್ಲದೆ, ವ್ಯಕ್ತಿಯ ದೈಹಿಕ ಪಕ್ವತೆಯಿಂದ (ಶೈಶವದಿಂದ ತಾರುಣ್ಯದವರೆಗೆ) ಆತನ ವರ್ತನಾ ವಿನ್ಯಾಸಗಳನ್ನು ಚೆನ್ನಾಗಿ ವಿವರಿಸಬಹುದೆಂಬ ಪ್ರಾಕ್‌ಕಲ್ಪನೆ.

maturing society: ಪಕ್ವತೆ ಹೊಂದುತ್ತಿರುವ ಸಮಾಜ. ರಾಸ್ಟೋ ವಿವರಿಸಿದ ಆರ್ಥಿಕ ವಿಕಾಸದ ಐದು ಹಂತಗಳಲ್ಲಿ ನಾಲ್ಕನೆಯದ್ದು. ಉಳಿದವು: ಒಂದನೇ ಹಂತ -traditional society; ಎರಡನೇ ಹಂತ -transitional society; ಮೂರನೇ ಹಂತ - take off into self sustained stage ಐದನೇ ಹಂತ -the age of high mass-consumption.

maturing stage: ಪಕ್ವತೆ ಹೊಂದುತ್ತಿರುವ ಹಂತ. ನೋಡಿ: maturing society.

maturity: ಪರಿಪಕ್ವತೆ.

maxim of mental hygiene: ಮಾನಸಿಕ ಆರೋಗ್ಯದ ನಿಯಮಗಳು.

maximum rate of investment: ಗರಿಷ್ಠ ಹೂಡಿಕೆ ದರ. ಒಟ್ಟು ವರಮಾನದಲ್ಲಿ ಜೀವನಾಧಾರಕ್ಕೆ ಅವಶ್ಯಕವಾಗುವಷ್ಟನ್ನು ಬಿಟ್ಟು ಬಂಡವಾಳವಾಗಿ ಹೂಡಲು ಲಭ್ಯವಿರುವ ವರಮಾನದ ಪ್ರಮಾಣ.

maximum sensation: ಮಹತ್ತಮ ಸಂವೇದನೆ; ಗರಿಷ್ಠ ಸಂವೇದನೆ.

maximum social benefit: ಗರಿಷ್ಠ ಸಾಮಾಜಿಕ ಲಾಭ.

maximum social marginal productivity of capital: ಬಂಡವಾಳದ ಗರಿಷ್ಠ ಸಾಮಾಜಿಕ ಸೀಮಾಂತ ಉತ್ಪಾದಕತೆ.

maximum taxable capacity: ಗರಿಷ್ಠ ತೆರಿಗೆ ಸಾಮರ್ಥ್ಯ.

maya: ೧. ಮಾಯಾ. ಮಧ್ಯ ಅಮೇರಿಕದ ಯುಕಾಟನ್ ಪ್ರಾಂತ್ಯದಲ್ಲಿ ಹಿಂದೆ ಪ್ರಚಲಿತವಿದ್ದ ಸುಧಾರಿತ ನಾಗರಿಕತೆ. ೨. ಮಾಯೆ. ಹಿಂದೂ ತತ್ವಶಾಸ್ತ್ರದಲ್ಲಿ ಪ್ರತಿಪಾದಿತವಾದ ಮಾಯಾವಾದ.

mayor: ನಗರಸಭಾಧ್ಯಕ್ಷ; ಮೇಯರ್. ನಗರದ ಚುನಾಯಿತ ಆಡಳಿತ ಮುಖ್ಯಸ್ಥ.

mean: ಸರಾಸರಿ.

mean deviation: ಸರಾಸರಿ ವ್ಯತಿಕಲನ.

mean difference: ಸರಾಸರಿ ವ್ಯತ್ಯಾಸ.

mean score: ಸರಾಸರಿ ಪ್ರಾಪ್ತಾಂಕ.

mean standard deviation method: ಸರಾಸರಿ ಪ್ರಮಾಣ ವಿಚಲನ ವಿಧಾನ.

meaningful adequacy: ಅರ್ಥ ಪೂರ್ಣ ಪರಿಪೂರ್ಣತೆ.

means of communication: ಸಂಪರ್ಕ ಮಾಧ್ಯಮ. ನೋಡಿ : mass media.

measurement: ಅಳತೆ; ಮಾಪನ.

measures of dispersion: ವಿಕ್ಷೇಪಣದ ಮಾಪನಗಳು; ಚದರಿಕೆಯ ಪರಿಮಾಣ.

measures of reliability: ವಿಶ್ವಾಸನೀಯತೆಯ ಮಾಪನಗಳು.

mechanical ability: ಯಾಂತ್ರಿಕ ಸಾಮರ್ಥ್ಯ.

mechanical intelligence: ಯಾಂತ್ರಿಕ ಬುದ್ಧಿಶಕ್ತಿ.

mechanical labour: ಯಾಂತ್ರಿಕ ಶ್ರಮ.

mechanical materialism: ಯಾಂತ್ರಿಕ ಭೌತವಾದ.

mechanical reflex: ಯಾಂತ್ರಿಕ ಪ್ರತಿಕ್ಷೇಪ.

mechanical social system: ಯಾಂತ್ರಿಕ ಸಾಮಾಜಿಕ ವ್ಯವಸ್ಥೆ.

mechanical society: ಯಾಂತ್ರಿಕ ಸಮಾಜ. ಸಾಮಾಜಿಕ ಅಂತರ್‌ಕ್ರಿಯೆಗಳು ಯೋಚನಾ ವಿಧಾನವನ್ನವಲಂಬಿಸದೆ ಸಹಜವಾಗಿ ಯಾಂತ್ರಿಕವಾಗಿ ಜರಗುವುದು. ಇದು ಸರಳ ಸಮುದಾಯಗಳ ಒಂದು ಲಕ್ಷಣವಾಗಿದೆ.

mechanical solidarity: ಯಾಂತ್ರಿಕ ಐಕ್ಯತೆ. ಮೌಲ್ಯಗಳು ಮತ್ತು ವರ್ತನೆಗಳ ಏಕರೂಪತೆ, ಬಿಗಿ ಸಾಮಾಜಿಕ ನಿರ್ಬಂಧ, ಸಂಪ್ರದಾಯ ಶರಣತೆ ಹಾಗೂ ಕಳ್ಳುಬಳ್ಳಿ ಸಂಬಂಧ ಇವುಗಳ ಮೇಲೆ ನಿಂತಿರುವ ಸಮಾಜದ ಐಕ್ಯತೆ. ಸರಳ ಶ್ರಮವಿಭಜನೆ, ಸಾಮಾಜಿಕ ಪಾತ್ರಗಳು ಸೀಮಿತವಾಗಿದ್ದು ವೈಯಕ್ತಿಕತೆಗೆ ಅವಕಾಶವಿಲ್ಲದಿರುವಂಥ ಸಣ್ಣ ಅನಕ್ಷರಸ್ಥ ಸಮಾಜಗಳಲ್ಲಿ ಈ ಬಗೆಯ ಐಕ್ಯತೆಯನ್ನು ಕಾಣಬಹುದು.

mechanism of adjustment: ಹೊಂದಾಣಿಕೆಯ ತಂತ್ರ.

mechanistic analogy: ಯಾಂತ್ರಿಕ ಸಾದೃಶ್ಯತೆ. ಸಾಮಾಜಿಕ ಸಂಬಂಧಗಳು ಯಾಂತ್ರಿಕವಾಗಿ ಮುಂದುವರಿದುಕೊಂಡು ಬರುತ್ತವೆಂಬ ಪರಿಕಲ್ಪನೆ.

mechanistic approach: ಯಾಂತ್ರಿಕ ದೃಷ್ಟಿಕೋನ. ಆಡಳಿತ ವ್ಯವಸ್ಥೆಯು ಒಂದು ಯಂತ್ರವಾಗಿದ್ದು ಅದರಲ್ಲಿ ಕಾರ್ಯ ನಿರ್ವಹಿಸುವ ವ್ಯಕ್ತಿ ಆ ಯಂತ್ರದ ಒಂದು ಭಾಗ ಎನ್ನುವ ದೃಷ್ಟಿಕೋನ. ಇಲ್ಲಿ ನೀತಿ ನಿಯಮಗಳಿಗೆ ಹೆಚ್ಚಿನ ಮಹತ್ವ ನೀಡಿ ಮಾನವರ ಭಾವನೆಗಳು ಮತ್ತು ಪರಸ್ಪರ ಸಂಬಂಧಗಳನ್ನು ನಿರ್ಲಕ್ಷಿಸಲಾಗುವುದು.

mechanization: ಯಾಂತ್ರೀಕರಣ.

mechanization of agriculture: ವ್ಯವಸಾಯದ ಯಾಂತ್ರೀಕರಣ.

mechanization frosting: ಯಾಂತ್ರಿಕ ಅನಾದರಣೆ. ತಾಯಿ ಮಗುವಿನ ನಡುವೆ ಉತ್ಸಾಹಶೂನ್ಯವಾದ ಶೀತಲ ಸಂಬಂಧ.

median: ಮಧ್ಯಕ.

median deviation: ಮಧ್ಯಕ ವ್ಯತಿ ಕಲನ.

median score: ಮಧ್ಯ ಪ್ರಾಪ್ತಾಂಕ.

mediate inference: ಮಧ್ಯಮಾನು ವರ್ತಿ ಊಹನೆ.

mediation: ಮಧ್ಯಸ್ಥಿಕೆ.

mediator: ಮಧ್ಯಸ್ಥಿಕೆದಾರ; ಮಧ್ಯ ವರ್ತಿ.

medical psychology: ವೈದ್ಯಕೀಯ ಮನಶ್ಶಾಸ್ತ್ರ.

medical sociology: ವೈದ್ಯಕೀಯ ಸಮಾಜಶಾಸ್ತ್ರ.

medicine song: ಔಷಧೀಯ ಗೀತೆ. ಉಪಶಮನಕಾರೀ ಹಾಡು.

medieval metaphysical stage: ಮಧ್ಯಕಾಲೀನ ತತ್ತ್ವಾದರ್ಶಗಳ ಹಂತ. ಆಧುನಿಕ ವೈಜ್ಞಾನಿಕ ಚಿಂತನೆಯ ಯುಗಕ್ಕಿಂತ ಮೊದಲು ತತ್ತ್ವಾದರ್ಶಗಳ ಪ್ರಾಧಾನ್ಯ ಹೆಚ್ಚಿದ್ದ ಮಧ್ಯಕಾಲೀನ ಯುಗ.

mediopolis: ಮಧ್ಯಮ ನಗರ. ಸಣ್ಣ ಪೇಟೆಯೂ ಅಲ್ಲದ, ದೊಡ್ಡ ಪಟ್ಟಣವೂ ಆಗಿರದ ಮಧ್ಯಮ ಗಾತ್ರದ ನಗರ.

meditation device: ಧ್ಯಾನ ತಂತ್ರ.

meek disposition: ನಮ್ರ ಚಿತ್ತವೃತ್ತಿ.

megalith: ಬೃಹತ್ ಶಿಲಾರಚನೆ.

megalithic age: ಬೃಹತ್ ಶಿಲಾಯುಗ; ಕಬ್ಬಿಣ ಯುಗ.

megalomania: ಮಹತೋನ್ಮಾದ.

megalopolis: ಬೃಹನ್ನಗರ; ಬೃಹತ್ ಮಹಾನಗರ.

mehar (mahar): ಸ್ತ್ರೀಧನ. ಮುಸ್ಲಿಂ ವಿವಾಹ ಸಂಪ್ರದಾಯದಲ್ಲಿ ಗಂಡು ಹೆಣ್ಣಿಗೆ ನೀಡುವ ಧನ. ಇದು ಅವಳದ್ದೇ ಸೊತ್ತು.

melancholia: ವಿಷಣ್ಣತೆ; ಖಿನ್ನತೆ; ಚಿಂತಾರೋಗ.

melancholic temperament: ವಿಷಣ್ಣತಾ ಚಿತ್ತಪ್ರಕೃತಿ.

member of parliament: ಸಂಸತ್ ಸದಸ್ಯ; ಪಾರ್ಲಿಮೆಂಟ್ ಸದಸ್ಯ.

member states: ಸದಸ್ಯ ರಾಜ್ಯಗಳು.

membership group: ಸದಸ್ಯತ್ವದ ಸಮೂಹ (ಗುಂಪು).

memoir: ಆತ್ಮಕಥೆ; ಆತ್ಮಚರಿತ್ರೆ; ನೆನಪುಗಳ ಸಂಗ್ರಹ.

memoranda: ಜ್ಞಾಪನಪತ್ರಿಕೆ; ಮನವಿಪತ್ರ; ನಿಯಮಾವಳಿ.

memorandum of association: ಸಂಘದ ನಿಯಮಾವಳಿ.

memorandum of deposit: ಠೇವಣಿಯ ಜ್ಞಾಪನಪತ್ರ.

memorandum of objections: ಆಕ್ಷೇಪಗಳ ಜ್ಞಾಪನಪತ್ರ.

memorization: ಸ್ಮೃತಿಧಾರಣ; ನೆನಪಿಟ್ಟುಕೊಳ್ಳುವುದು; ಜ್ಞಾಪಕದಲ್ಲಿಟ್ಟುಕೊಳ್ಳುವುದು.

memory: ಸ್ಮೃತಿ; ನೆನಪು; ಸ್ಮರಣೆ.

memory after image: ಸ್ಮರಣಾನುಬಿಂಬ.

memory apparatus: ಸ್ಮೃತಿ ಪ್ರಯೋಗ ಪರಿಕರ.

memory disorder: ಅಸ್ಪಸ್ಥ ಸ್ಮೃತಿ; ಜ್ಞಾಪಕಶಕ್ತಿಯ ತಾರುಮಾರು.

memory level: ಸ್ಮೃತಿ ಸ್ತರ; ಸ್ಮೃತಿ ಮಟ್ಟ.

memory materials: ಸ್ಮರಣ ಸಾಮಗ್ರಿಗಳು.

memory quotient: ಸ್ಮರಣ ಲಬ್ಧ.

memory screen: ಸ್ಮರಣೆಯ ತೆರೆ.

memory span test: ಸ್ಮೃತಿ ವಿಸ್ತಾರ ಪರೀಕ್ಷೆ.

memory test: ಸ್ಮರಣ ಪರೀಕ್ಷೆ.

memory time: ಸ್ಮೃತಿಯ ಕಾಲ.

memory trace: ಸ್ಮೃತಿಯ ಸುಳುಹು.

memory training: ಸ್ಮೃತಿ ತರಬೇತಿ.

menarche: ಮೈ ನೆರೆಯುವುದು. ಹೆಣ್ಣಿನ ಪ್ರಥಮ ಮುಟ್ಟು. ಇದರೊಂದಿಗೆ ಹಲವರಲ್ಲಿ ಉದ್ವಿಗ್ನತೆ, ಭಯ, ಖಿನ್ನತೆ ಮುಂತಾದ ಮಾನಸಿಕ ತೊಂದರೆಗಳು ಉಂಟಾಗಬಹುದು.

menhir: ಸ್ಮಾರಕ ಶಿಲಾಸ್ತಂಭ (ಶವ ಸಂಸ್ಕಾರಕ್ಕೆ ಸಂಬಂಧಿಸಿದ್ದು).

menopause: ರಜೋನಿವೃತ್ತಿ; ಮುಟ್ಟು

ನಿಲ್ಲುವುದು. ಹಲವರಲ್ಲಿ ಆಗ ಮಾನಸಿಕ ತೊಂದರೆ ಕಾಣಿಸುವುದು.

menopausal reaction: ರಜೋ ನಿವೃತ್ತಿ ಪ್ರತಿಕ್ರಿಯೆ. ಮುಟ್ಟುನಿಂತ ಅನಂ ತರದ ವರ್ತನೆ.

meno house: ಪುರುಷರ ವಾಸಗೃಹ. ಪುರಾತನ ಬುಡಕಟ್ಟು ಸಮಾಜಗಳಲ್ಲಿ ಕಂಡುಬರುತ್ತಿದ್ದ ಅವಿವಾಹಿತ ಗಂಡಸರು ವಾಸಮಾಡುತ್ತಿದ್ದ ಕಟ್ಟಡ.

mental aberration: ಮನೋಭ್ರಂಶ; ಚಿತ್ತಾಪಗತಿ; ಮಾನಸಿಕ ವಿಪಥನ.

mental ability: ಮಾನಸಿಕ ಶಕ್ತಿ; ಚಿತ್ತ ಸಾಮರ್ಥ್ಯ.

mental abnormality: ಮಾನಸಿಕ ವಿಪರೀತತೆ; ಬೌದ್ಧಿಕ ಅತಿರೇಕ.

mental action: ಮಾನಸಿಕ ಕ್ರಿಯೆ.

mental activity: ಮಾನಸಿಕ ಚಟುವಟಿಕೆ.

mental affliction: ಮನಃಕ್ಲೇಶ, ಮನೋವ್ಯಥೆ.

mental age: ಮಾನಸಿಕ ಆಯು; ಮಾನಸಿಕ ವಯಸ್ಸು.

mental agony: ಮಾನಸಿಕ ವೇದನೆ.

mental alienation: ಮಾನಸಿಕ ಪರಕೀಯ ಪ್ರಜ್ಞೆ; ಬುದ್ಧಿ ವಿಕಲ್ಪ.

mental anguish: ಮನೋವ್ಯಥೆ.

mental attitude theory: ಮಾನಸಿಕ ಮನೋವೃತ್ತಿ ಸಿದ್ಧಾಂತ.

mental behaviour: ಮಾನಸಿಕ ವರ್ತನೆ.

mental catharsis: ಭಾವಶುದ್ಧೀಕರಣ; ಚಿತ್ತಶುದ್ಧಿ.

mental chaos: ಮಾನಸಿಕ ಗೊಂದಲ ಸ್ಥಿತಿ.

mental condition: ಮಾನಸಿಕ ಸ್ಥಿತಿ; ಚಿತ್ತ ಸ್ಥಿತಿ.

mental conflict: ಮಾನಸಿಕ ತುಮುಲ; ಮಾನಸಿಕ ತಿಕ್ಕಾಟ; ಮಾನಸಿಕ ಸಂದಿಗ್ಧತೆ; ಮಾನಸಿಕ ಒಳತೋಟಿ. ಹತಾಶೆ ಅಥವಾ ಪರಸ್ಪರ ವಿರುದ್ಧವಾದ ಬಯಕೆಗಳ ತಿಕ್ಕಾಟ ದಿಂದ ಹುಟ್ಟಿಕೊಳ್ಳುವ ತಾಪದಾಯಕವಾದ ಮನಃಸ್ಥಿತಿ.

mental defect: ಮಾನಸಿಕ ದೋಷ.

mental deficiency: ಬುದ್ಧಿಹೀನತೆ; ಅಲ್ಪಬುದ್ಧಿ; ಮಾನಸಿಕ ನ್ಯೂನತೆ. ಮಾನಸಿಕ ಬೆಳವಣಿಗೆಯು ಸರಾಸರಿ ಮಟ್ಟಕ್ಕಿಂತ ಕಡಿಮೆ ಯಾಗಿರುವಿಕೆ. ಮುಖ್ಯ ಲಕ್ಷಣಗಳೆಂದರೆ ಕಡಿಮೆ ಬುದ್ಧಿಶಕ್ತಿ ಮತ್ತು ಸಾಮಾಜಿಕ ಅಸಾಮರ್ಥ್ಯತೆ.

mental deformity: ಮಾನಸಿಕ ವಿಕಾರ; ಮಾನಸಿಕ ವಿರೂಪ.

mental derangement: ಮನೋ ವಿಕೃತಿ; ಮತಿಭ್ರಮಣೆ.

mental deterioration: ಬುದ್ಧಿ ಕ್ಷೀಣತೆ; ಮಾನಸಿಕ ಕ್ಷೀಣತೆ; ಮನೋಹ್ರಾಸ. ಮಾನಸಿಕ ಸಾಮರ್ಥ್ಯಗಳು ಮತ್ತು ಭಾವನೆ ಗಳು ದಿನದಿನಕ್ಕೆ ಹೆಚ್ಚು ಹೆಚ್ಚು ಹದ ಗೆಡುತ್ತಾ ಹೋಗುವುದು.

mental discipline: ಮಾನಸಿಕ ಶಿಸ್ತು; ಮಾನಸಿಕ ನಿಯಮಬದ್ಧತೆ; ಮಾನಸಿಕ ಅನುಶಾಸನ.

mental disease: ಮನೋರೋಗ.

mental disorder: ಮಾನಸಿಕ ಅಸ್ವಸ್ಥತೆ.

mental disposition: ಮನಃಪ್ರವೃತ್ತಿ; ಮಾನಸಿಕ ಪ್ರವೃತ್ತಿ.

mental energy: ಮಾನಸಿಕ ಶಕ್ತಿ.

mental evolution: ಮಾನಸಿಕ ವಿಕಾಸ.

mental experiment: ಮಾನಸಿಕ ಪ್ರಯೋಗ.

mental faculty: ಮಾನಸಿಕ ಶಕ್ತಿ; ಮನಶ್ಶಕ್ತಿ.

mental fatigue: ಮಾನಸಿಕ ಬಳಲಿಕೆ.

mental function: ಮಾನಸಿಕ ಕಾರ್ಯ.

mental growth: ಮಾನಸಿಕ ವೃದ್ಧಿ; ಮಾನಸಿಕ ಬೆಳವಣಿಗೆ.

mental handicap: ಮಾನಸಿಕ ವಿಕಲತೆ.

mental health: ಮಾನಸಿಕ ಆರೋಗ್ಯ.

mental health hazard: ಮಾನಸಿಕ ಆರೋಗ್ಯದ ಅಪಾಯ.

mental health institute: ಮಾನಸಿಕ ಆರೋಗ್ಯ ಕೇಂದ್ರ.

mental health service: ಮಾನಸಿಕ ಆರೋಗ್ಯ ಸೇವೆ.

mental homogeneity: ಮಾನಸಿಕ ಏಕರೂಪತೆ.

mental hygiene: ಮಾನಸಿಕ ಆರೋಗ್ಯ. ಇದು ಮುಖ್ಯವಾಗಿ ಒಂದು ಶೈಕ್ಷಣಿಕ ಕಾರ್ಯಕ್ರಮ. ಇದರ ಉದ್ದೇಶಗಳು: ೧. ಮನೋಬೇನೆಗಳ ಚಿಕಿತ್ಸೆ ಮತ್ತು ಅವುಗಳನ್ನು ತಡೆಗಟ್ಟುವುದು. ೨. ಸಾಧ್ಯವಾದಷ್ಟು ಹೆಚ್ಚು ಸಾಮರ್ಥ್ಯ ಮತ್ತು ಸೌಖ್ಯವನ್ನು ಸಾಧಿಸಲು ಪರಿಪೂರ್ಣ ವ್ಯಕ್ತಿತ್ವವನ್ನು ಬೆಳೆಸುವುದು-ಇವುಗಳನ್ನು ಕುರಿತ ಶೈಕ್ಷಣಿಕ ಕಾರ್ಯಕ್ರಮ.

mental illness: ಮನೋರೋಗ; ಮಾನಸಿಕ ಅಸ್ವಸ್ಥತೆ.

mental imagery: ಮನೋಬಿಂಬ ಪ್ರವಾಹ; ಮಾನಸಿಕ ಬಿಂಬಾವಳಿ.

mental images: ಮಾನಸಿಕ ಚಿತ್ರಗಳು; ಮನೋಬಿಂಬಗಳು; ಚಿತ್ತ ಪ್ರತಿಮೆಗಳು.

mental infirmity: ಮಾನಸಿಕ ದೌರ್ಬಲ್ಯ.

mental life: ಬುದ್ಧಿಯ ಸ್ವಭಾವ.

mental liveliness: ಮಾನಸಿಕ ಉಲ್ಲಾಸ; ಮನೋಲ್ಲಾಸ.

mental maladjustment: ಮಾನಸಿಕ ಅಸಮಾಯೋಜನೆ.

mental maturity: ಮಾನಸಿಕ ಪರಿಪಕ್ವತೆ.

mental measurement: ಮಾನಸಿಕ ಮಾಪನ; ಮನೋಮಾಪನ; ಮಾನಸಿಕ ಅಳತೆ.

mental mechanisms: ಮನೋತಂತ್ರಗಳು; ಮನೋರಕ್ಷಣಾ ತಂತ್ರಗಳು. ಅನೇಕ ಬಗೆಯ ಆತ್ಮರಕ್ಷಣೆಯ ಮತ್ತು ಪಲಾಯನ ಮಾಡುವ ಮಾನಸಿಕ ವಿಧಾನಗಳು. ಇವು ವ್ಯಕ್ತಿ ತನ್ನ ನಿರಾಶಾದಾಯಕ ಸ್ಥಿತಿಗೆ, ಮಾನಸಿಕ ತುಮುಲಕ್ಕೆ ಹೊಂದಿಕೊಳ್ಳುವಂತೆ ಮಾಡುತ್ತವೆ. ಉದಾ: ಹಗಲುಗನಸುಗಳು; ತಾರ್ಕಿಕ ಸೋಗು.

mental mobility: ಮಾನಸಿಕ ಗತಿ ಶೀಲತೆ.

mental morbidity: ಮನೋರೋಗ ವ್ಯಾಪನೆ.

mental oscillation: ಮನೋರೋಗ ಹೊಯ್ದಾಟ.

mental pathology: ಮನೋವಿಕೃತಿ ವಿಜ್ಞಾನ.

mental process : ಮಾನಸಿಕ ಪ್ರಕ್ರಿಯೆ.

mental projection: ಮಾನಸಿಕ ಪ್ರಕ್ಷೇಪಣ.

mental reaction theory: ಮಾನಸಿಕ ಪ್ರತಿಕ್ರಿಯಾ ಸಿದ್ಧಾಂತ.

mental retardation: ಬುದ್ಧಿ ಮಾಂದ್ಯತೆ; ಮಾನಸಿಕ ವಿಲಂಬನ.

mental set: ಮಾನಸಿಕ ಸಿದ್ಧಸ್ಥಿತಿ; ಮಾನಸಿಕ ಲಕ್ಷ್ಯ.

mental shock: ಮನೋಘಾತ; ಮನೋವಿದ್ಯುತ್ಘಾತ.

mental stability: ಮಾನಸಿಕ ದೃಢತೆ; ಚಿತ್ತಸ್ಥೈರ್ಯ.

mental stress: ಮಾನಸಿಕ ಒತ್ತಡ.

mental structure: ಮಾನಸಿಕ ರಚನೆ; ಮಾನಸಿಕ ಸ್ವರೂಪ.

mental symptoms: ಮಾನಸಿಕ ಚಿಹ್ನೆಗಳು. ವಿಕ್ಷಿಪ್ತ ಮನೋವೃತ್ತಿಯ ಚಿಹ್ನೆಗಳು.

mental telepathy: ಮಾನಸಿಕ ಭಾವ ವಿತರಣೆ; ಅನ್ಯಮನ ಸ್ಪರ್ಶನ.

mental test: ಮಾನಸಿಕ ಪರೀಕ್ಷೆ.

mental therapy: ಮಾನಸಿಕ ಚಿಕಿತ್ಸೆ.

mental topography: ಮಾನಸಿಕ ಕ್ಷೇತ್ರವರ್ಣನೆ.

mental treatment: ಮಾನಸಿಕ ಚಿಕಿತ್ಸೆ.

mental variation: ಮಾನಸಿಕ ವೈಪರೀತ್ಯ.

mentally retarded child: ಮಾನಸಿಕವಾಗಿ ಹಿಂದುಳಿದ ಮಗು.

mentifacts: ಭಾವನಾವಸ್ತುಗಳು. ಧರ್ಮ, ಕಲೆ, ಭಾಷೆ ಇತ್ಯಾದಿಗಳು.

mercandise: ವ್ಯಾಪಾರದ ಸರಕು.

mercantilism:ವಾಣಿಜ್ಯವಾದ; ವಾಣಿಜ್ಯ ಪಂಥ; ವ್ಯಾಪಾರ ಸಿದ್ಧಾಂತ.

mercenary soldiers: ಕೂಲಿ ಸಿಪಾಯಿಗಳು; ಹಣಕ್ಕಾಗಿ ಹೋರಾಡುವ ಯೋಧರು.

merchant capitalism: ವ್ಯಾಪಾರೀ ಬಂಡವಾಳಶಾಹಿತ್ವ.

merchant guild: ವ್ಯಾಪಾರಿ ವೃತ್ತಿ ಸಂಘ; ವರ್ತಕಸಂಘ.

merger: ಒಂದಾಗುವಿಕೆ. ಒಪ್ಪಂದದ ಮೂಲಕ ಎರಡು ಸಂಸ್ಥೆಗಳು ಒಂದಾಗುವುದು. ಆಗ ದುರ್ಬಲ ಸಂಸ್ಥೆಯು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತದೆ.

merry disposition: ಉಲ್ಲಾಸ ಪ್ರವೃತ್ತಿ.

merry tale: ಹಾಸ್ಯ ಕತೆ; ವಿನೋದ ಕತೆ. ಇದು ಸ್ವಭಾವತಃ ಚಿಕ್ಕದಾಗಿದ್ದು ಹಾಸ್ಯಮಯವಾಗಿರುತ್ತದೆ. ಹಾಸ್ಯದ ಮೂಲ ಸೂತ್ರದ ಮೂಲಕ ಘಟನೆಗಳು ಸಂಯೋಜಿತವಾಗಿರುತ್ತವೆ. ಸಾಮಾನ್ಯವಾಗಿ ಪೆದ್ದರ ವರ್ತನೆ, ಆಂಗಿಕ ದೋಷ, ಜಿಪುಣತನ, ವಂಚಕತನಗಳನ್ನು ಅತಿಯಾಗಿ ಉತ್ಪ್ರೇಕ್ಷಿಸಿರುವುದು ಇಲ್ಲಿ ಕಂಡುಬರುತ್ತದೆ.

mesmerism: ಸಮ್ಮೋಹನ ವಿದ್ಯೆ; ಸಮ್ಮೋಹನಿಕೆ.

meso-cephalic: ಮಧ್ಯಮ ಗಾತ್ರದ ತಲೆಬುರುಡೆ.

mesolithic: ಮಧ್ಯಶಿಲಾಯುಗ. ಹಳೆಯ-ಹೊಸ ಶಿಲಾಯುಗದ ಸಂಧಿ (ಮಧ್ಯಕಾಲ).

mesoprosopic: ಮಧ್ಯಮ ಗಾತ್ರದ ಮುಖ.

messiah: ಯುಗ ಪ್ರವರ್ತಕ; ಏಸುಕ್ರಿಸ್ತ.

messianic movement: ದೇವ ದೌತ್ಯ ಚಳವಳಿ; ಯುಗ ಪ್ರವರ್ತನ ಚಳವಳಿ. ಮುಂದೆ ಧರ್ಮಪ್ರಚಾರಕ ಅಥವಾ

ಉದ್ಧಾರಕ ಬರುತ್ತಾನೆನ್ನುವ ನಂಬಿಕೆ ಇಟ್ಟು ಕೊಂಡಂತಹ ಧಾರ್ಮಿಕ ಚಳವಳಿ.

meta-anthropology: ಆಧ್ಯಾತ್ಮ ಮಾನವಶಾಸ್ತ್ರ.

meta folklore: ಅಧಿಜಾನಪದ.

metabolism: ಜೀವದ್ರವ್ಯ ಪರಿಣಾಮ. ದೇಹಪೋಷಕದ್ರವ್ಯವು ಜೀವಿಯ ದೇಹ ಭಾಗವಾಗಿ ಮಾರ್ಪಡುವಿಕೆ.

meta age: ಲೋಹಯುಗ.

metallic money: ಲೋಹದ ಹಣ.

metamorphosis: ರೂಪಾಂತರ. ಯಕ್ಷಿಣಿಯ ಮೂಲಕ ರೂಪ ಪರಿವರ್ತನೆ; ಮಾಯ ವಿದ್ಯೆಯಿಂದ ರೂಪಾಂತರ ಹೊಂದುವುದು.

metaphysical behaviour: ಆಧ್ಯಾತ್ಮ ಶಾಸ್ತ್ರೀಯ ವರ್ತನವಾದ.

metaphysical disquisitions: ಆಧ್ಯಾತ್ಮಿಕ ವ್ಯಾಖ್ಯಾನಗಳು.

metaphysical theory: ಆಧ್ಯಾತ್ಮಿಕ ಸಿದ್ಧಾಂತ.

metaphysics: ಆಧ್ಯಾತ್ಮಿಕ ಅತಿಭೌತ ಶಾಸ್ತ್ರ.

metapsychology: ಆಧ್ಯಾತ್ಮಿಕ ಮನೋ ವಿಜ್ಞಾನ.

metapsychosis: ಅತಿಮನೋವಿಕ್ಷಿಪ್ತಿ.

metasociology: ಆಧ್ಯಾತ್ಮ ಸಮಾಜ ಶಾಸ್ತ್ರ. ಸಾಮಾಜಿಕ ಜೀವನದ ಬಗ್ಗೆ ಪ್ರಮೇಯ, ತತ್ವ ಹಾಗೂ ಸಾಮಾನ್ಯೀಕರಣ ಗಳನ್ನು ತಯಾರಿಸುವ ಬಗ್ಗೆ ಆಸಕ್ತಿ ಹೊಂದದೆ ಸಮಾಜಶಾಸ್ತ್ರೀಯ ಪರಿಶೀಲನೆ ಯಲ್ಲಿ ಬಳಸಲಾಗುವ ವಿಧಾನಗಳು ಹಾಗೂ ಆ ಪರಿಶೀಲನೆಯಲ್ಲಿ ಉಪಯೋಗಿಸುವ ತರ್ಕದ ಬಗ್ಗೆ ಹೆಚ್ಚಿನ ಆಸಕ್ತಿ ಹೊಂದಿರುವ ಸಮಾಜಶಾಸ್ತ್ರದ ಒಂದು ಅಂಗ.

metem psychosis: ದೇಹಾಂತರ ಪ್ರವೇಶ; ಪರಕಾಯ ಪ್ರವೇಶ. ಮೃತನ ಆತ್ಮವು ತನ್ನದೇ ಗುಂಪಿನ ವ್ಯಕ್ತಿ ಅಥವಾ ಬೇರೆ ಪ್ರಾಣಿಯ ಶರೀರವನ್ನು ಪ್ರವೇಶಿ ಸುವುದು.

method of analogy: ಸಾದೃಶ್ಯ ಪದ್ಧತಿ; ಹೋಲಿಕೆ ಪದ್ಧತಿ.

method of concomitant variation: ಸಹಪರಿವರ್ತನ ಪದ್ಧತಿ.

method of minimal change: ಕನಿಷ್ಠ ಪರಿವರ್ತನ ವಿಧಾನ.

method of residue: ಅವಶಿಷ್ಠ ಪದ್ಧತಿ; ಉಳಿಕೆ ಪದ್ಧತಿ.

methodological atheism: ವೈಧಾನಿಕ ನಾಸ್ತಿಕತೆ. ಧರ್ಮ-ಅರ್ಥದ ವೈಜ್ಞಾನಿಕ ಅಧ್ಯಯನ. ಇದರ ಪ್ರಕಾರ ಧರ್ಮವು ಮಾನವ ರಚಿತ ಕಲ್ಪನೆಯಾಗಿದೆ.

methodological essentialism: ವೈಧಾನಿಕ ಅವಶ್ಯಕತೆ. ವಸ್ತುಗಳ ನೈಜ ಸ್ವರೂಪವನ್ನು ಕಂಡುಹಿಡಿಯುವ ಹಾಗೂ ವಿವರಿಸುವ ಕೆಲಸವು ವಿಜ್ಞಾನದ್ದಾಗಿದೆ ಎಂಬ ವಾದ.

methodological nominalism: ನೋಡಿ: methodological essen tialism.

methodology: ಅಧ್ಯಯನ ಪದ್ಧತಿ; ಅಧ್ಯಯನ ವಿಧಾನ.

metronome: ಸ್ಪಂದನಮಾಪಿ.

metronymic system: ಮಾತೃವಂಶಾ

ವಳಿಯ ವ್ಯವಸ್ಥೆ. ನೋಡಿ: matronymic family.

metropolis: ಮಹಾನಗರ.

metropolitan city: ನೋಡಿ: metropolis.

metropolitan community: ಮಹಾ ನಗರ ಸಮುದಾಯ.

metropolitan district: ಮಹಾನಗರ ಜಿಲ್ಲೆ.

metropolitan economy: ಮಹಾ ನಗರ ಅರ್ಥವ್ಯವಸ್ಥೆ.

metropolitan region: ಮಹಾನಗರ ಪ್ರದೇಶ.

mezzo segregation: ಲಿಂಗ ಭೇದ. ದಿನವಹಿ ಜೀವನದಲ್ಲಿ ಆಚರಿಸುವ ಸ್ತ್ರೀ ಪುರುಷ ಪ್ರತ್ಯೇಕತೆ. ಉದಾ : ಬಸ್ ಹಾಗೂ ರೈಲ್ವೇ ನಿಲ್ದಾಣಗಳಲ್ಲಿ ಗಂಡಸರಿಗೆ-ಹೆಂಗಸರಿಗೆ ಪ್ರತ್ಯೇಕ ಕಾಯುವ ಕೊಠಡಿಗಳು.

micro demography: ಸೂಕ್ಷ್ಮ ಜನಸಂಖ್ಯಾಶಾಸ್ತ್ರ. ವ್ಯಕ್ತಿಗಳು, ಸಣ್ಣ ಗುಂಪು ಅಥವಾ ಸಮೂಹಗಳು, ನೆರೆಹೊರೆ ಇತ್ಯಾದಿಗಳ ಬಗೆಗೆ, ಮುಖ್ಯವಾಗಿ ವ್ಯಕ್ತಿಗತ ವರ್ತನೆಗಳ ಕುರಿತ ಅಧ್ಯಯನ.

micro dynamics: ಸೂಕ್ಷ್ಮ ಚಲನ ಶಾಸ್ತ್ರ.

micro economics: ಸೂಕ್ಷ್ಮ ಅರ್ಥಶಾಸ್ತ್ರ; ಅಂಶಲಕ್ಷಿ ಅರ್ಥಶಾಸ್ತ್ರ.

micro-evolution: ಸೂಕ್ಷ್ಮ ವಿಕಾಸ.

micro-functionalism: ಸೂಕ್ಷ್ಮ ಕಾರ್ಯಾತ್ಮಕವಾದ. ಸೂಕ್ಷ್ಮ ಸಾಮಾಜಿಕ ಅಂಶಗಳ ಕಾರ್ಯಾತ್ಮಕತೆಯ ಬಗ್ಗೆ ಹೆಚ್ಚಿನ ವಿಶ್ಲೇಷಣೆ ನಡೆಸುವ ಸಮಾಜ ಶಾಸ್ತ್ರೀಯ ಸೈದ್ಧಾಂತಿಕ ಒಲವು.

micro-level: ಸೂಕ್ಷ್ಮ ಮಟ್ಟ

microlithic: ಸೂಕ್ಷ್ಮ ಶಿಲಾಯುಗ.

micro-order: ಸೂಕ್ಷ್ಮ ಕ್ರಮ; ಸೂಕ್ಷ್ಮ ವ್ಯವಸ್ಥೆ.

micro-sociology: ಸೂಕ್ಷ್ಮ ಸಮಾಜ ಶಾಸ್ತ್ರ. ಸಣ್ಣ ಸಮೂಹಗಳ ಅಧ್ಯಯನ.

microstatics: ಸೂಕ್ಷ್ಮ ಸ್ಥಿತಿಶಾಸ್ತ್ರ.

microstructure: ಸೂಕ್ಷ್ಮ ರಚನೆ.

micro teaching: ಸೂಕ್ಷ್ಮ ಬೋಧನೆ.

middle class: ಮಧ್ಯಮ ವರ್ಗ.

middle man: ಮಧ್ಯವರ್ತಿ.

middle management: ಮಧ್ಯಮ ನಿರ್ವಾಹಕ ಹಂತ; ಆಡಳಿತ ವ್ಯವಸ್ಥೆಯ ಮಧ್ಯಹಂತ; ಮಧ್ಯಮ ನಿರ್ವಹಣೆ. ಮಧ್ಯಮ ಶಕ್ತಿ ರಾಷ್ಟ್ರಗಳು ಹೊಂದಿರುವ ರಾಷ್ಟ್ರೀಯ ಸಂಪನ್ಮೂಲಗಳು ಹಾಗೂ ಶಕ್ತಿಯ ಆಧಾರದ ಮೇಲೆ ಪ್ರಪಂಚದ ವಿವಿಧ ರಾಷ್ಟ್ರಗಳನ್ನು ವಿವಿಧ ಮಟ್ಟದ ಶಕ್ತಿ ಗಳಾಗಿ ವಿಂಗಡಿಸಿರುತ್ತಾರೆ. ಪ್ರಬಲ ಶಕ್ತ ರಾಷ್ಟ್ರಗಳ ನಂತರ ಮಧ್ಯಮ ಶಕ್ತಿಯ ರಾಷ್ಟ್ರಗಳು ಮನ್ನಣೆ ಪಡೆಯುತ್ತವೆ.

middle range theory: ಅಪೂರ್ಣ ಸಿದ್ಧಾಂತ; ಸಿದ್ಧಾಂತದ ಹಂತದಲ್ಲಿರುವ ಮಧ್ಯಮ ಹಂತದ ವಿವರಣೆ.

middle social class: ಮಧ್ಯಮ ಸಾಮಾಜಿಕ ವರ್ಗ.

middle strata: ಮಧ್ಯಮ ಸ್ತರಗಳು. ಬೂರ್ಷ್ವಾಸಿ ಮತ್ತು ಶ್ರಮಜೀವಿಗಳ

ನಡುವೆ ಮಧ್ಯಮ ಸ್ಥಾನದಲ್ಲಿರುವ ವರ್ಗಗಳು ಮತ್ತು ಸಾಮಾಜಿಕ ಗುಂಪುಗಳು.

middle town: ಮಧ್ಯಮ ಗಾತ್ರದ ನಗರ.

mid-night appointments: ಮಧ್ಯ ರಾತ್ರಿಯ ನೇಮಕಗಳು.

mid-term planning: ಮಧ್ಯಕಾಲೀನ ಯೋಜನೆ.

migrant worker: ವಲಸೆ ಕಾರ್ಮಿಕ.

migration: ವಲಸೆ.

migration hypothesis: ವಲಸೆ ಪ್ರಾಕ್‌ಕಲ್ಪನೆ. ತಾನಿದ್ದ ಸಮುದಾಯದ ತಳ್ಳುವ ಅಂಶ (push factor)ಗಳಿಂದ ಮತ್ತು ತಾನು ಸೇರುವ ಸಮುದಾಯದ ಸೆಳೆಯುವ ಅಂಶ (pull factor)ಗಳಿಂದ ವ್ಯಕ್ತಿ ವಲಸೆ ಹೋಗುತ್ತಾನೆ ಎಂಬ ಕಲ್ಪನೆ.

migration of capital: ಬಂಡವಾಳದ ವಲಸೆ.

migrational theory: ವಲಸೆ ಸಿದ್ಧಾಂತ.

migratory legend: ವಲಸೆ ಬಂದ ದಂತಕಥೆ.

migratory temperament: ಪರಿಭ್ರಮಣಾ ಚಿತ್ತಪ್ರಕೃತಿ.

militant attitude: ಹೋರಾಟದ ಮನೋವೃತ್ತಿ; ಜಗಳಗಂಟ ಮನೋವೃತ್ತಿ.

militant minorities: ಹೋರಾಟ ಪ್ರವೃತ್ತಿಯ ಅಲ್ಪಸಂಖ್ಯಾತರು.

militarism: ಸೈನಿಕವಾದ; ಯುದ್ಧ ಮನಸ್ಕತೆ. ಜನರ ಪ್ರತಿಭಟನೆಯನ್ನು ಹತ್ತಿಕ್ಕುವ ಗುರಿಯಿಂದ ಹಾಗೂ ದೇಶ ವಿಸ್ತರಣೆಗಾಗಿ ಯುದ್ಧ ನಡೆಸುವ ಉದ್ದೇಶದಿಂದ ರಾಜ್ಯ ಅಥವಾ ಆಡಳಿತಶಾಹಿಯು ತನ್ನ ಸೈನಿಕ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳುವಿಕೆ.

military-industrial complex: ಸೈನ್ಯ ಉದ್ದಿಮೆ ನಂಟು. ವ್ಯಾಪಾರಿ ಉದ್ದಿಮೆಗಳು ಹಾಗೂ ಸೈನಿಕ ದಳದವರ ನಡುವೆ ಶಸ್ತ್ರಾಸ್ತ್ರಗಳ ಉತ್ಪಾದನೆಯನ್ನು ಕುರಿತು ಸಮಾನ ಆಸಕ್ತಿಯಿಂದ ಉಂಟಾಗುವ ನಂಟು.

military institution: ಸೈನಿಕ ಸಂಸ್ಥೆ.

military intervention: ಸೈನ್ಯದ ಮಧ್ಯಪ್ರವೇಶ. ಸರ್ಕಾರದ ಪ್ರಭುತ್ವದಲ್ಲಿ ಸೈನ್ಯದ ಬಳಕೆ ಹೆಚ್ಚಾಗುವಿಕೆ.

military nationalism: ಸೈನಿಕ ರಾಷ್ಟ್ರೀಯತೆ. ರಾಷ್ಟ್ರದ ಸೈನಿಕ ಶಕ್ತಿಯನ್ನು ಬಲಗೊಳಿಸುವ ಧೋರಣೆ. ಇದನ್ನು ಉಗ್ರ ರಾಷ್ಟ್ರೀಯತೆ ಎನ್ನಲಾಗುತ್ತದೆ.

military order: ಸೈನ್ಯಾಡಳಿತ ವ್ಯವಸ್ಥೆ.

military power: ಸೈನಿಕ ಶಕ್ತಿ; ಸೇನಾ ಶಕ್ತಿ. ಒಂದು ರಾಷ್ಟ್ರದ ಸೇನೆಯ ಸಂಘಟನೆ, ಆಧುನೀಕರಣ, ತಾಂತ್ರಿಕ ಪರಿಣತಿ ಹಾಗೂ ಆಯುಧ ಸಂಗ್ರಹಗಳ ಒಟ್ಟು ಪರಿಕಲ್ಪನೆ.

military society: ಸೈನಿಕ ಸಮಾಜ.

military tribunal: ಸೈನಿಕ ನ್ಯಾಯ ಮಂಡಳಿ.

millenarian movement: ಸಹಸ್ರ ಮಾನ ಚಳುವಳಿ. ನೋಡಿ millennial movement.

millennial movement: ನವ ಮನ್ವಂತರದ ಚಳವಳಿ; ಸುಯುಗದ ಚಳವಳಿ. ಅತೀತ ಶಕ್ತಿಗಳಿಂದ ಅಥವಾ ಪವಾಡ ಸದೃಶ ಶಕ್ತಿಗಳಿಂದ ಬದಲಾವಣೆಯ ಧರ್ಮ

ಯುಗ ತರಬೇಕೆನ್ನುವ ಚಳವಳಿ.

mimetic expression : ಅನುಕರಣೀಯ ಅಭಿವ್ಯಕ್ತಿ.

mind-body relation: ಮನಃ ಶರೀರ ಸಂಬಂಧ.

mind cure: ಮನೋರೋಗ ಪರಿಹಾರ.

mind set: ನೋಡಿ: mental set.

mind training: ಮನ ತರಬೇತಿ.

mini society: ಸೂಕ್ಷ್ಮ ಸಮಾಜ; ಕಿರು ಸಮಾಜ.

miniature: ಸೂಕ್ಷ್ಮ ಪ್ರತಿರೂಪ.

miniature painting: ಸೂಕ್ಷ್ಮಾಕಾರ ಚಿತ್ರಕಲೆ.

miniature theory: ನೋಡಿ: middle range theory.

minimum cash reserve: ಕನಿಷ್ಠ ನಗದು ಮೀಸಲು. ಭಾರತದ ಎಲ್ಲಾ ಶೆಡ್ಯೂಲ್ಡ್ ಬ್ಯಾಂಕುಗಳು ತಮ್ಮ ಚಾಲ್ತಿ ಠೇವಣಿ ಮತ್ತು ಮುದ್ದತಿ ಠೇವಣಿಗಳಿಂದ ಭಾರತದ ರಿಸರ್ವ್‌ಬ್ಯಾಂಕ್‌ನಲ್ಲಿ ಕಾಯಿದೆ ಪ್ರಕಾರ ನಿಗದಿಸಲ್ಪಟ್ಟಷ್ಟು ಠೇವಣಿ ಇಡಬೇಕಾದ ಶತಾಂಶ ಮೊತ್ತ.

minimum liquidity ratio: ಕನಿಷ್ಠ ದ್ರವ್ಯತ್ವ ನಿಷ್ಪತ್ತಿ (ಅನುಪಾತ). ೧೯೪೯ ರ ಬ್ಯಾಂಕಿಂಗ್ ನಿಯಂತ್ರಣ ಕಾಯಿದೆಯ ೨೪ನೇ ಕಲಮಿನ ಪ್ರಕಾರ ಪ್ರತಿಯೊಂದು ವಾಣಿಜ್ಯ ಬ್ಯಾಂಕು ತನ್ನ ಎಲ್ಲಾ ಠೇವಣಿಗಳ ಶೇಕಡಾ ೨೪ಕ್ಕೆ ಕಡಿಮೆ ಇಲ್ಲದಷ್ಟು ಹೊಂದಿರಬೇಕಾದ ದ್ರವ್ಯತ್ವ ಪ್ರಮಾಣ. ಇದನ್ನು ೧೯೮೧ ರಿಂದ ಶೇಕಡಾ ೩೫ಕ್ಕೆ ಏರಿಸಲಾಗಿದೆ.

minimum needs programme: ಕನಿಷ್ಠ ಅವಶ್ಯಕತೆಗಳನ್ನು ಪೂರೈಸುವ ಕಾರ್ಯಕ್ರಮ.

minimum price fixation: ಕನಿಷ್ಠ ಬೆಲೆ ನಿಗದಿ.

minimum rate of investment: ಕನಿಷ್ಠ ಹೂಟೆ ದರ. ಜನಸಂಖ್ಯೆ ಬೆಳೆಯುತ್ತಿರುವ ಸಂದರ್ಭದಲ್ಲಿ ತಲಾ ವರಮಾನವು ಇಳುವರಿಯಾಗದಂತೆ ನೋಡಿಕೊಳ್ಳಬಲ್ಲ ಹೂಟೆದರ.

minimum reserve system: ಕನಿಷ್ಠ ಮೀಸಲು ಪದ್ಧತಿ. ನೋಟುಗಳನ್ನು ಚಲಾವಣೆಗೆ ತರುವಾಗ ಅವುಗಳ ಮೊತ್ತಕ್ಕೆ ನಿರ್ದಿಷ್ಟ ಪ್ರಮಾಣದಲ್ಲಿ ರಿಸರ್ವ್‌ಬ್ಯಾಂಕ್ ಚಿನ್ನದ ಗಟ್ಟಿ, ಚಿನ್ನದ ನಾಣ್ಯ ಇತ್ಯಾದಿ ಆಸ್ತಿಗಳನ್ನು ಆಧಾರವಾಗಿಡುವ ಪದ್ಧತಿ.

minimum structural unit: ಕನಿಷ್ಠತಮ ರಾಚನಿಕ ಘಟಕ.

minimum taxation: ಕನಿಷ್ಠ ತೆರಿಗೆ.

minimum unit: ಕನಿಷ್ಠತಮ ಘಟಕ.

minimum wage: ಕನಿಷ್ಠ ಕೂಲಿ.

minister of interior: ಆಂತರಿಕ ಮಂತ್ರಿ; ಒಳಾಡಳಿತ ಮಂತ್ರಿ.

minister of state: ರಾಜ್ಯ ಸಚಿವ. ಕ್ಯಾಬಿನೆಟ್ ಸಚಿವರಿಗಿಂತ ಕೆಳಗಿನ ಹಂತದ ಆದರೆ ಸ್ವತಂತ್ರ ಖಾತೆಯ ನಿರ್ವಹಣೆ ಹೊಂದಿರುವ ಕೇಂದ್ರ ಸರಕಾರದ ಮಂತ್ರಿ.

minister without portfolio: ಇಲಾಖಾರಹಿತ ಸಚಿವ (ಮಂತ್ರಿ).

ministerial responsibility: ಸಚಿವ ಸಂಪುಟದ ಜವಾಬ್ದಾರಿ; ಸಚಿವರ ಹೊಣೆಗಾರಿಕೆ. ಇದು ಕ್ಯಾಬಿನೆಟ್ ಪದ್ಧತಿಯ

ಸರಕಾರದ ಮುಖ್ಯ ತತ್ವ. ಈ ತತ್ವದ ಪ್ರಕಾರ ಮಂತ್ರಿಮಂಡಲವು ತಾನು ಕೈಗೊಂಡ ಕ್ರಮಗಳಿಗೆ ಪಾರ್ಲಿಮಂಟಿಗೂ ಮತ್ತು ತನ್ಮೂಲಕ ದೇಶದ ಜನತೆಗೂ ಉತ್ತರ ದಾಯಿಯಾಗಿರುವುದು.

ministry: ಮಂತ್ರಿಮಂಡಲ; ಮಂತ್ರಿ ಶಾಖೆ.

minor: ಅಪ್ರಾಪ್ತ ವಯಸ್ಕ.

minorities: ಅಲ್ಪಸಂಖ್ಯಾತರು.

minority community: ಅಲ್ಪ ಸಂಖ್ಯಾತ ಸಮುದಾಯ.

minority group: ಅಲ್ಪಸಂಖ್ಯಾತ ಸಮೂಹ.

minority opinion: ಅಲ್ಪಸಂಖ್ಯಾತರ ಅಭಿಪ್ರಾಯ.

minorioty representation: ಅಲ್ಪ ಸಂಖ್ಯಾತರ ಪ್ರಾತಿನಿಧ್ಯ.

mint: ಟಂಕಸಾಲೆ.

mint-par of exchange: ಟಂಕ ಸಮಾನತೆ ವಿನಿಮಯ. ಎರಡು ರಾಷ್ಟ್ರಗಳ ಪೂರ್ಣ ಲೋಹಭರಿತ ನಾಣ್ಯಗಳ ಚಿನ್ನದ ಅಂಶದ ಆಧಾರದ ಮೇಲೆ ನಿಗದಿಮಾಡಲಾಗುವ ಅಂತಾರಾಷ್ಟ್ರೀಯ ವಿನಿಮಯ ದರ.

mint-par value theory: ಟಂಕ ಮೌಲ್ಯ ಸಮಾನತೆ ಸಿದ್ಧಾಂತ. ಚಿನ್ನ ಅಥವಾ ಬೆಳ್ಳಿಯ ಲೋಹ ಪ್ರಮಿತಿ ಹೊಂದಿರುವ ದೇಶಗಳ ಹಣದ ವಿನಿಮಯ ದರದ ಏರಿಳಿತಗಳ ಮಿತಿಗಳನ್ನು ನಿರ್ಧರಿಸುವ ಸಿದ್ಧಾಂತ.

mint rate: ಟಂಕ ದರ.

minus factor: ವ್ಯವಕಲನ ಅಂಶ; ಋಣಾತ್ಮಕ ಅಂಶ.

minute book: ದಿನವಹಿ ಟಿಪ್ಪಣಿ; ನಡವಳಿಕೆ ಪುಸ್ತಕ.

miocene: ಮಧ್ಯ ಜೀವಯುಗ.

mir: ಪರಗಣ.

misappropriation: ದುರ್ವಿನಿಯೋಗ.

miscegenation: ಭಿನ್ನ ಜನಾಂಗಗಳ ಸಂಕರ ; ಜಾತಿ ಸಂಕರ. ಬಿಳಿಯರು ನೀಗ್ರೊ ಗಳೊಡನೆ ಹೊಂದುವ ಲೈಂಗಿಕ ಸಂಪರ್ಕ.

misconception: ತಪ್ಪುಗ್ರಹಿಕೆ; ಅಪ ಕಲ್ಪಿತ ಭಾವ.

misfeasance: ಅಧಿಕಾರ ಅತಿಕ್ರಮ. ಒಬ್ಬನು ನ್ಯಾಯಾನುಗುಣವಾಗಿ ಮಾಡಲು ಅಧಿಕಾರವುಳ್ಳ ಕಾರ್ಯವನ್ನು ಅನುಚಿತ ವಾಗಿ, ಕೆಡುಕಾಗುವಂತೆ ಮಾಡುವುದು. ನೋಡಿ: malfeasance.

misogamy: ವಿವಾಹ ದ್ವೇಷ.

misogyny: ಸ್ತ್ರೀ ದ್ವೇಷ.

misophobia: ಸ್ತ್ರೀ ಭೀತಿ.

missing link: ತಪ್ಪಿದ ಕೊಂಡಿ. ಜೀವ ವಿಕಾಸ ಸಿದ್ಧಾಂತದ ವಿವರಣೆಯಲ್ಲಿ ಮಂಗನ ಬಳಿಕ ಮಾನವ ಜೀವಿಯ ಉಗಮದ ಮೊದಲು ಒಂದು ಮಾನವಾಕಾರದ ಜೀವಿ ಯಿದ್ದಿರಬೇಕೆಂದೂ, ಸಂಶೋಧನೆಗೆ ಸಿಕ್ಕದಿ ರುವ ಅದು ಕಳೆದುಹೋಗಿರ ಬೇಕೆಂದೂ ಭಾವಿಸಲಾಗಿದೆ. ಇದು ಮಂಗ ಮಾನವರ ನಡುವಿನ ತಪ್ಪಿಹೋದ ಕೊಂಡಿ.

misuse of power: ಅಧಿಕಾರದ ದುರು ಪಯೋಗ.

mixed economy: ಮಿಶ್ರ ಆರ್ಥಿಕತೆ; ಮಿಶ್ರ ಅರ್ಥವ್ಯವಸ್ಥೆ. ಆರ್ಥಿಕ ಚಟುವಟಿಕೆಗಳಲ್ಲಿ

ಖಾಸಗಿ ಮತ್ತು ಸಾರ್ವಜನಿಕ ವಲಯಗಳೆರಡೂ ಪಾಲ್ಗೊಳ್ಳಬಹುದಾದ ಅರ್ಥ ವ್ಯವಸ್ಥೆ.

mixed government: ಸಮ್ಮಿಶ್ರ ಸರಕಾರ. ನೋಡಿ: coalition gover nment.

mixed joint company system: ಮಿಶ್ರ ಸಂಯುಕ್ತ ಕಂಪೆನಿ ಪದ್ಧತಿ. ಈ ರೀತಿಯ ಕಂಪೆನಿಯಲ್ಲಿ ಸಾರ್ವಜನಿಕ ಮತ್ತು ಖಾಸಗಿ ಸ್ವಾಮಿತ್ವ ಮತ್ತು ನಿಯಂತ್ರಣಗಳ ಮಿಶ್ರಣ ವಿರುತ್ತದೆ. ಈ ಕಂಪೆನಿಗಳಲ್ಲಿ ಸರಕಾರ ಬಂಡವಾಳ ಪತ್ರದ ಬಹುಪಾಲು ಅಥವಾ ನಿಯಂತ್ರಣದ ಭಾಗವನ್ನು ತನ್ನ ಸ್ವಾಧೀನದಲ್ಲೇ ಇಟ್ಟುಕೊಳ್ಳುತ್ತದೆ. ಉಳಿದ ಭಾಗ ಖಾಸಗಿ ಹಣ ತೊಡಗಿಸುವವರ ವಶದಲ್ಲಿರುತ್ತದೆ.

mixed manic-depressive rea ction: ಮಿಶ್ರ ಉನ್ಮಾದ ವಿಷಣ್ಣತಾ ಪ್ರತಿಕ್ರಿಯೆ.

mixed mental state: ಸಮ್ಮಿಶ್ರ ಮನಃಸ್ಥಿತಿ.

mixed terminology: ಮಿಶ್ರ ಪದಮಾಲೆ. ವಿಂಗಡಣಾತ್ಮಕ ಮತ್ತು ನಿರ್ದಿಷ್ಟಾತ್ಮಕ ಪದಗಳ ಮೂಲಕ ಬಂಧುತ್ವವನ್ನು ವಿವರಿಸುವ ಪದಮಾಲ.

mneme: ಸ್ಮರಣಾಧಾರ.

mnemonic system: ಸ್ಮೃತಿ ಸಹಾಯಕ ವ್ಯವಸ್ಥೆ.

mob: ಉದ್ರಿಕ್ತ ಗುಂಪು; ದೊಂಬಿ; ಜನಜಂಗುಳಿ.

mob behaviour: ದೊಂಬಿ ವರ್ತನೆ; ಉದ್ರಿಕ್ತ ಸಮೂಹ ವರ್ತನೆ.

mob democracy: ದೊಂಬಿ ಪ್ರಜಾಪ್ರಭುತ್ವ.

mob mind: ಉದ್ರಿಕ್ತ ಸಮೂಹಮನ.

mob mindedness: ಉದ್ರಿಕ್ತ ಸಮೂಹ ಮನೋವೃತ್ತಿ.

mob psychology: ದೊಂಬಿ ಮನೋವಿಜ್ಞಾನ.

mobile open class society: ಸಂಚಲಿತ ಮುಕ್ತ ವರ್ಗ ಸಮಾಜ. ಮುಕ್ತ ವರ್ಗ ಸಮಾಜದಲ್ಲಿ ವ್ಯಕ್ತಿಗಳ ಸಾಮಾಜಿಕ ಚಲನೆಗೆ ಹೆಚ್ಚು ಅವಕಾಶವಿರುವುದರಿಂದ ಅದು ಹೆಚ್ಚು ಚಲನಶೀಲವಾದ ಸಮಾಜ.

mobile society: ಗತಿಶೀಲ ಸಮಾಜ.

mobility: ಚಲನೆ; ಸಂಚರಣೆ.

mobility drive: ಚಲನಾ ಚೋದನೆ; ಚಲನೆಯ ಪ್ರೇರಣೆ.

mobility of capital: ಬಂಡವಾಳದ ಸಂಚಲನೆ. ಹೂಡಿಕೆ ನಿಧಿಗಳು ಅಂತಾರಾಷ್ಟ್ರೀಯ ಗಡಿಗಳನ್ನು ಮೀರಿ ಚಲಿಸಲು ಹೊಂದಿರುವ ಸಾಮರ್ಥ್ಯ.

mobility of labour: ಶ್ರಮದ ಸಂಚಲನೆ. ಕಾರ್ಮಿಕರು ವಿಭಿನ್ನ ವೃತ್ತಿ ಮತ್ತು ಪ್ರದೇಶಗಳ ನಡುವೆ ಚಲಿಸಲು ಹೊಂದಿರುವ ಸಾಮರ್ಥ್ಯ.

mobocracy: ದೊಂಬಿ ಪ್ರಭುತ್ವ. ಹಲವು ಜನರ ಗುಂಪಿನಲ್ಲಿ ರಾಜಕೀಯ ಅಧಿಕಾರ ಇರುವುದು.

mock fight: ಅಣಕ ಯುದ್ಧ.

mock funeral: ಅಣಕ ಶವಸಂಸ್ಕಾರ. ಸರ್ಪ, ಮಿಡತೆ, ಶಲಭಗಳಂತಹ ಮಾನವೇತರ ಪ್ರಾಣಿಗಳಿಗೆ ನಡೆಸುವ ಶವಸಂಸ್ಕಾರ.

modal: ವಿಧಿತ ಕ್ರಮ.

modal personality: ವಿಧಿತ ವ್ಯಕ್ತಿತ್ವ. ಇನ್ನೊಬ್ಬರ ಮಾರ್ಗದರ್ಶನ, ಅವರ ಇಚ್ಛೆ, ಅನಿಚ್ಛೆಗಳಿಗನುಸಾರವಾಗಿ ರೂಪಿತವಾದ ವ್ಯಕ್ತಿತ್ವ.

mode of adjustment: ಹೊಂದಾಣಿಕೆಯ ರೀತಿ.

mode of consciousness: ಪ್ರಜ್ಞಾರೀತಿ.

mode of emotional experience: ಸಂವೇಗಾನುಭವದ ರೀತಿ.

mode of life: ಜೀವನ ರೀತಿ; ಜೀವನ ಕ್ರಮ.

mode of production: ಉತ್ಪಾದನಾ ಕ್ರಮ; ಉತ್ಪಾದನಾ ವಿಧಾನ. ಪರಸ್ಪರ ಸಂಬಂಧ ಹೊಂದಿರುವ ಮತ್ತು ಪರಸ್ಪರಾವಲಂಬಿಯಾಗಿರುವ ಉತ್ಪಾದನಾ ಶಕ್ತಿಗಳ ಮತ್ತು ಉತ್ಪಾದನಾ ಸಂಬಂಧಗಳ ಮೊತ್ತವೇ ಉತ್ಪಾದನಾ ವಿಧಾನ.

model: ಪ್ರತಿರೂಪ; ಮಾದರಿ.

moderate democracy: ಮಂದಗಾಮಿ ಪ್ರಜಾಪ್ರಭುತ್ವ.

moderate leader: ಮಿತವಾದಿ ನಾಯಕ. ಸಾರ್ವಜನಿಕ ಹಿತಾಸಕ್ತಿಯ ಪ್ರತಿಭಟನೆ ಅಥವಾ ರಾಜಕೀಯ ಹೋರಾಟಗಳಲ್ಲಿ ಹಿಂಸಾತ್ಮಕ ಉಗ್ರವಾದಿ ತತ್ವದ ಬದಲು ಸಮಜಾಯಿಸಿಕೆ ಹಾಗೂ ಮನ ಒಲಿಸುವಿಕೆಯ ಮೃದುಮಾರ್ಗವನ್ನು ಅನುಸರಿಸುವ ನಾಯಕ.

moderates: ಮಂದಗಾಮಿಗಳು; ಮಿತವಾದಿಗಳು; ಸೌಮ್ಯವಾದಿಗಳು. ೧೯೦೭ರಲ್ಲಿ ಗುಜರಾತ್‌ನಲ್ಲಿ ಜರಗಿದ ಅಧಿವೇಶನದಲ್ಲಿ ಕಾಂಗ್ರೆಸ್ ಪಕ್ಷವು ಸೌಮ್ಯವಾದಿಗಳು ಮತ್ತು ಉಗ್ರವಾದಿಗಳು ಎಂಬ ಎರಡು ಬಣಗಳಾಗಿ ಒಡೆಯಿತು. ನೋಡಿ: extremists.

moderation: ಮಿತವಾದ; ಸಂಧಾನ; ಮಧ್ಯಸ್ಥಿಕೆ.

modern age: ಆಧುನಿಕ ಯುಗ.

modern technology: ಆಧುನಿಕ ತಂತ್ರಜ್ಞಾನ.

modern theory of distribution: ಆಧುನಿಕ ವಿತರಣಾ ಸಿದ್ಧಾಂತ.

modern theory of interest: ಬಡ್ಡಿಯ ಆಧುನಿಕ ಸಿದ್ಧಾಂತ.

modern theory of profit: ಲಾಭದ ಆಧುನಿಕ ಸಿದ್ಧಾಂತ.

modern theory of rent: ಗೇಣಿಯ ಆಧುನಿಕ ಸಿದ್ಧಾಂತ.

modern theory of wage: ಕೂಲಿಯ ಆಧುನಿಕ ಸಿದ್ಧಾಂತ.

modernization: ಆಧುನೀಕರಣ.

modernization of tradition: ಸಂಪ್ರದಾಯದ ಆಧುನೀಕರಣ.

modes of individual adaptation: ವ್ಯಕ್ತಿ ಹೊಂದಾಣಿಕೆಯ ಕ್ರಮಗಳು. ನೋಡಿ: retreatism, ritualism, conformity.

modulated disposition: ಮಾರ್ಪಟ್ಟ ಮನೋಧರ್ಮ. ಚತುರತೆಯಿಂದ ಮಾರ್ಪಡಿಸಲ್ಪಟ್ಟ ಪ್ರವೃತ್ತಿ (ಮನೋಧರ್ಮ)

module production plant: ಬಿಡಿಭಾಗಗಳ ಉತ್ಪಾದನಾ ಘಟಕ. ನಗರ ಪ್ರದೇಶಗಳಲ್ಲಿ ಬಿಡಿಭಾಗಗಳನ್ನು ಒಂದೆಡೆ

ತಯಾರಿಸಲಾಗುತ್ತದೆ ಮತ್ತು ಅದರ ಒಟ್ಟು ರೂಪವನ್ನು ಬೇರೆಲ್ಲಾದರೂ ಹೊಂದಿಸಲಾಗುತ್ತದೆ.

modus operandi: ಕಾರ್ಯದ ರೀತಿ; ವರ್ತನಾ ರೀತಿ; ಕ್ರಿಯಾ ವಿಧಾನ.

mohar: ಮೊಹರು. ಸುಲ್ತಾನರ ಕಾಲದಲ್ಲಿ ಚಲಾವಣೆಯಲ್ಲಿದ್ದ ನಾಣ್ಯ.

moiety: ಬುಡಕಟ್ಟಿನ ಏಕಾಂಶ. ಕೇವಲ ಸಂಬಂಧಿಗಳೇ ವಾಸವಾಗಿರುವ ಗ್ರಾಮ, ಹಟ್ಟಿ ಅಥವಾ ಕೊಪ್ಪ.

moiety organization: ಬುಡಕಟ್ಟಿನ ಏಕಾಂಶಗಳ ಸಂಘಟನೆ.

moksha: ಮೋಕ್ಷ; ಮುಕ್ತಿ. ಹಿಂದೂ ಜೀವನದ ನಾಲ್ಕು ಪುರುಷಾರ್ಥಗಳಲ್ಲೊಂದು.

molar behaviour: ಸಮಗ್ರ ವರ್ತನೆ.

monadistic theory: ಮೂಲಘಟಕ ಸಿದ್ಧಾಂತ.

monarchical constitution: ರಾಜಸತ್ತಾತ್ಮಕ ಸಂವಿಧಾನ. ಅರಸೊತ್ತಿಗೆಯ ಸಂವಿಧಾನ.

monarchical government: ಅರಸೊತ್ತಿಗೆಯ ಸರಕಾರ.

monarchy: ರಾಜಪ್ರಭುತ್ವ; ಅರಸೊತ್ತಿಗೆ. ಸರಕಾರದ ಒಂದು ರೂಪ. ಅದರಲ್ಲಿ ಅನುವಂಶಿಕ ರಾಜನೊಬ್ಬ ರಾಜ್ಯಾಧಿಪತಿಯಾಗಿರುತ್ತಾನೆ. ಈ ವ್ಯವಸ್ಥೆಯಲ್ಲಿ ನಿರಂಕುಶ ರಾಜಸತ್ತೆ ಮತ್ತು ಸಂವಿಧಾನಾತ್ಮಕ ರಾಜಸತ್ತೆ ಹೀಗೆ ಎರಡು ವಿಧಗಳಿವೆ.

monastry: ಮಠ; ಬೌದ್ಧ ಭಿಕ್ಷುಗಳ ವಿಹಾರ.

monetary base: ಹಣಕಾಸು ಮೂಲ. ಅರ್ಥವ್ಯವಸ್ಥೆಯೊಂದರಲ್ಲಿ ದ್ರವ ರೂಪದಲ್ಲಿರುವ ಹಣಕಾಸು. ನೋಟು ಹಾಗೂ ನಾಣ್ಯಗಳ ರೂಪದಲ್ಲಿರುವ ಹಣ.

monetary control: ಹಣಕಾಸು ನಿಯಂತ್ರಣ.

monetary expansion: ಹಣಕಾಸು ವಿಸ್ತರಣೆ.

monetary measure: ಹಣಕಾಸಿನ ಕ್ರಮ. ಹಣದ ಪ್ರಮಾಣ ಮತ್ತು ಚಲಾವಣೆಗಳನ್ನು ನಿಯಂತ್ರಿಸಲು ಭಾರತದ ರಿಸರ್ವ್ ಬ್ಯಾಂಕು ಕೈಗೊಳ್ಳುವ ಕ್ರಮಗಳು.

monetary policy: ಹಣಕಾಸು ನೀತಿ.

monetary theory: ಹಣಕಾಸು ಸಿದ್ಧಾಂತ.

monetization: ನಾಣ್ಯೀಕರಣ.

money: ಹಣ.

money bill: ಹಣಕಾಸು ಮಸೂದೆ. ಹಣಕಾಸಿನ ವ್ಯವಹಾರಕ್ಕೆ ಸಂಬಂಧಪಟ್ಟ ಮಸೂದೆ.

money burden of tax: ತೆರಿಗೆಯ ಆರ್ಥಿಕ ಹೊರೆ.

money centered relation: ಧನ ಕೇಂದ್ರಿತ ಸಂಬಂಧ. ಹಣದ ವ್ಯವಹಾರದ ಸುತ್ತ ಹೆಣೆದ ಸಂಬಂಧ.

money cost: ಹಣರೂಪೀ ವೆಚ್ಚ.

money economy: ಹಣ ಆಧಾರಿತ ಅರ್ಥ ವ್ಯವಸ್ಥೆ.

money hoarding: ಹಣದ ಬಚ್ಚಿಡುವಿಕೆ.

money illusion: ಹಣದ ಭ್ರಮೆ. ಹಣದ ಮುಖಬೆಲೆ ಮತ್ತು ನೈಜಬೆಲೆಯ ಬದ

ಲಾವಣೆಗಳನ್ನು ಅರ್ಥೈಸುವಲ್ಲಿ ಉಂಟಾಗುವ ಗೊಂದಲ.

money in circulation: ಚಲಾವಣೆಯಲ್ಲಿರುವ ಹಣ.

money lender: ಸಾಹುಕಾರ. ಬಡ್ಡಿಗೆ ಹಣವನ್ನು ಸಾಲವಾಗಿ ಕೊಡುವಾತ. ಗ್ರಾಮೀಣ ಅರ್ಥವ್ಯವಸ್ಥೆಯಲ್ಲಿ ಇವರು ಪ್ರಧಾನ ಶೋಷಕರಾಗಿದ್ದರು.

money supply: ಹಣದ ಪೂರೈಕೆ. ಅರ್ಥವ್ಯವಸ್ಥೆಯೊಂದರಲ್ಲಿ ಲಭ್ಯವಿರುವ ಸರಕು ಅಥವಾ ಸೇವೆಗಳೊಂದಿಗೆ ಮುಕ್ತ ವಾಗಿ ವಿನಿಮಯಗೊಳ್ಳಬಹುದಾದ ಹಣ.

money wage: ಹಣರೂಪೀ ಕೂಲಿ. ಹಣದ ರೂಪದಲ್ಲಿ ಕೊಡುವ ಕೂಲಿ. ಹಿಂದಿನ ಕಾಲದಲ್ಲಿ ಕೂಲಿಯು ವಸ್ತು ರೂಪದಲ್ಲಿ ಕೊಡಲಾಗುತ್ತಿದ್ದುದು ಮುಂದೆ ಭಾಗಶಃ ಹಣದ ರೂಪಕ್ಕೆ ಬದಲಾವಣೆಗೊಂಡು ನಂತರ ಪೂರ್ತಿಯಾಗಿ ಹಣ ರೂಪಕ್ಕೆ ಪರಿವರ್ತನೆಗೊಂಡಿರುವ ಕೂಲಿ ಅಥವಾ ವೇತನ.

monism: ಏಕತ್ವ; ಅದ್ವೈತ ವಾದ.

monistic theory of sovereignty: ಏಕತ್ವ ಸಿದ್ಧಾಂತ; ಏಕಾತ್ಮಕ ಸಿದ್ಧಾಂತ; ಪರಮಾಧಿಕಾರದ ಏಕತ್ವ ಸಿದ್ಧಾಂತ. ರಾಜ್ಯದ ಪರಮಾಧಿಕಾರವು ನಿರಂಕುಶವಾದುದು, ಅವಿಭಾಜ್ಯವಾದುದು ಮತ್ತು ಅವರ್ಗೀಯವಾದುದು ಎಂಬ ಪ್ರತಿಪಾದನೆ.

monitoring: ನಿಯಂತ್ರಣ; ನಿರ್ದೇಶನ. ಒಂದು ಕಾರ್ಯದ ಮುನ್ನಡೆಸುವಿಕೆಯಲ್ಲಿ ವಹಿಸುವ ನಾಯಕತ್ವ ಮತ್ತು ನಿರ್ದೇಶನ.

monk: ಭಿಕ್ಷು ಸನ್ಯಾಸಿ.

monogamous family: ಏಕಗಮನ ಕುಟುಂಬ; ಏಕಪತ್ನಿ/ ಪತಿ ಕುಟುಂಬ. ಒಬ್ಬ ವ್ಯಕ್ತಿಗೆ ಒಬ್ಬನೇ ಜೀವನ ಸಂಗಾತಿ ಇರುವ ಕುಟುಂಬ.

monogamous marriage: ಏಕಗಮನ ವಿವಾಹ; ಏಕ ವಿವಾಹ.

monogamy: ಏಕಸಂಗಾತಿ ವಿವಾಹ.

monogenesis of speech: ಏಕಮೂಲ ಭಾಷೆ. ಏಕಮೂಲದಿಂದ ಭಾಷೆಗಳ ಉಗಮ ಎಂಬ ಕಲ್ಪನೆ.

monogenetic theory: ಏಕಮೂಲ ಸಿದ್ಧಾಂತ.

monogenetic hypothesis: ಏಕ ಮೂಲ ಪ್ರಾಕ್‌ಕಲ್ಪನೆ. ಮಾನವ ಜನಾಂಗ ಗಳೆಲ್ಲವೂ ಒಂದೇ ಪಿತೃ ಮೂಲದಿಂದ ಹಾಗೂ ಒಂದು ಭೌಗೋಳಿಕ ಪ್ರದೇಶದಿಂದ ಪ್ರಾರಂಭವಾಗಿದೆ ಎಂಬ ಪ್ರಾಕ್ ಕಲ್ಪನೆ.

monolatry: ಇಷ್ಟದೇವತಾ ಪೂಜೆ. ಅನೇಕ ದೇವರ ಅಸ್ತಿತ್ವದಲ್ಲಿ ನಂಬಿಕೆಯಿದ್ದರೂ ತನ್ನ ಇಷ್ಟದ ಒಂದೇ ದೇವರನ್ನು ಆರಾಧಿಸುವ ಪದ್ಧತಿ.

monolith: ಅಖಂಡ ಶಿಲೆ; ಅಭಿನ್ನ ಶಿಲೆ.

monolithic: ಏಕಶಿಲಾ; ಅಖಂಡ ಶಿಲೆಯ.

monomania: ಏಕೋನ್ಮಾದ. ಯಾವುದೇ ಒಂದು ನಿರ್ದಿಷ್ಟ ವಸ್ತುವಿನ ಬಗ್ಗೆ ಅತಿಯಾದ ಹಾಗೂ ಅವಿವೇಕದಿಂದ ಕೂಡಿದ ಅಪೇಕ್ಷೆ ಅಥವಾ ಹುಚ್ಚು ಇರುವಿಕೆ.

monometallism: ಏಕಲೋಹ ನಾಣ್ಯ ಪ್ರಮಿತಿ. ಯಾವುದಾದರೂ ಒಂದೇ ಲೋಹದ, ಹೆಚ್ಚಾಗಿ ಚಿನ್ನದ ಅಥವಾ

ಬೆಳ್ಳಿಯ, ನಾಣ್ಯವನ್ನು ಚಲಾವಣೆಗೆ ತಂದಿರುವುದು.

monophobia: ಏಕಾಂತ ಭೀತಿ.

monopolistic competition: ಏಕಸ್ವಾಮ್ಯಯುತ ಪೈಪೋಟಿ. ಕೈಗಾರಿಕಾ ಕ್ಷೇತ್ರದಲ್ಲಿ ಹಲವಾರು ಉದ್ಯಮಗಳು ಪರಸ್ಪರ ಪರ್ಯಾಯವಾಗಬಲ್ಲಂತಹ ವಸ್ತುಗಳನ್ನು (ಉದಾ: ಸಾಬೂನು) ಉತ್ಪಾದಿಸುವುದರ ಮೂಲಕ ಮಾರುಕಟ್ಟೆಯಲ್ಲಿ ಉಂಟಾಗುವ ಸ್ಪರ್ಧೆ.

monopolistic market: ಏಕಸ್ವಾಮ್ಯಯುತ ಮಾರುಕಟ್ಟೆ.

monopoly: ಏಕಸ್ವಾಮ್ಯ. ಒಂದು ಮಾರುಕಟ್ಟೆಯಲ್ಲಿ ಒಂದು ವಸ್ತುವಿನ ಸಂಪೂರ್ಣ ನಿಯಂತ್ರಣವು ಒಬ್ಬ ವ್ಯಕ್ತಿ ಅಥವಾ ಸಂಸ್ಥೆಗೆ ಅಧೀನವಾಗಿರುವ ಪರಿಸ್ಥಿತಿ.

monopoly market: ಏಕಸ್ವಾಮ್ಯ ಮಾರುಕಟ್ಟೆ. ನೋಡಿ: monopoly.

monopoly of the people: ಸಾರ್ವಜನಿಕ ಒಡೆತನ. ಪ್ರಜಾಪ್ರಭುತ್ವದಲ್ಲಿ ಸರಕಾರದ ಅಧಿಕಾರವು ಒಂದು ನಿರ್ದಿಷ್ಟ ವರ್ಗದವರ ಸೊತ್ತಾಗದೆ ಅದು ಸಮಸ್ತ ಜನತೆಯ ಅಥವಾ ಸಾರ್ವಜನಿಕರ ಸ್ವತ್ತಾಗಿರುವಿಕೆ.

monopoly price: ಏಕಸ್ವಾಮ್ಯ ಬೆಲೆ.

monopsony: ಏಕಗ್ರಾಹಕ ಮಾರುಕಟ್ಟೆ; ಕೊಳ್ಳುವವರ ಏಕಸ್ವಾಮ್ಯ.

monopsychism: ಏಕಚಿತ್ತವಾದ.

monotheism: ಏಕದೇವತಾರಾಧನೆ; ಏಕೇಶ್ವರವಾದ.

monotheistic doctrine: ನೋಡಿ: monotheism.

monotonic sequence: ಏಕರೀತಿಯ ಅನುಕ್ರಮ; ವೈವಿಧ್ಯವಿಹೀನ ಅನುಕ್ರಮ.

monotonous: ಬೇಸರಿಕೆಯ ವೈವಿಧ್ಯತೆಯಿಲ್ಲದೆ ಒಂದೇ ರೀತಿಯ ಕೆಲಸದಿಂದ ಉಂಟಾಗುವ ಬೇಸರಿಕೆ.

monotony: ಏಕರೀತಿಯ.

monotypical evolution: ಒಂದೇ ರೀತಿಯ ವಿಕಾಸ. ನಿರ್ದಿಷ್ಟ ಜೀವಿಗಳಲ್ಲಿ ಒಂದೇ ಸಲ ನಡೆದ ವಿಕಾಸದ ಪ್ರಕ್ರಿಯೆ.

monozygotic: ಏಕಯುಗ್ಮ.

mansoon session: ಮಳೆಗಾಲದ ಅಧಿವೇಶನ. ಭಾರತದ ಸಂಸತ್ತಿನ ಅಧಿವೇಶನ ವರ್ಷಕ್ಕೆ ಮೂರು ಬಾರಿ ನಡೆಯುತ್ತದೆ. ಬಜೆಟ್ ಅಧಿವೇಶನ, ಮಳೆಗಾಲದ ಅಧಿವೇಶನ ಮತ್ತು ಚಳಿಗಾಲದ ಅಧಿವೇಶನ. ಮಳೆಗಾಲದ ಅಧಿವೇಶನವು ಜುಲೈ-ಆಗಸ್ಟ್ ತಿಂಗಳಲ್ಲಿ ಜರಗುತ್ತದೆ.

mood: ಭಾವಸ್ಥಿತಿ; ಚಿತ್ತಸ್ಥಿತಿ.

moodiness: ದುಗುಡಭಾವ; ದುಮ್ಮಾನ.

moral adjustment: ನೈತಿಕ ಹೊಂದಾಣಿಕೆ.

moral argument: ನೈತಿಕ ವಾದ.

moral attitude: ನೈತಿಕ ಭಾವ; ನೈತಿಕಾಭಿವೃತ್ತಿ.

moral code: ನೀತಿ ಸಂಹಿತೆ.

moral consensus: ನೈತಿಕ ಒಮ್ಮತಾಭಿಪ್ರಾಯ.

moral courage: ನೈತಿಕ ಧೈರ್ಯ.

moral crusade: ನೈತಿಕ ಯುದ್ಧ. ಸಮಾಜದ ಮೂಲಭೂತ ನೈತಿಕತೆಯನ್ನು ವಿರೋಧಿಸುವಂತಹ ಸಾಮಾಜಿಕ ಚಳವಳಿ.

moral degeneration: ನೈತಿಕ ಅವ ನತಿ.

moral dilemma: ನೈತಿಕ ಇಕ್ಕಟ್ಟು (ಪೇಚು).

moral duty: ನೈತಿಕ ಕರ್ತವ್ಯ. ರಾಷ್ಟ್ರದ ಪ್ರಜೆಯು ನೈತಿಕ ದೃಷ್ಟಿಯಿಂದ ಮಾಡ ಬೇಕಾದ ಕರ್ತವ್ಯ.

moral faith: ನೈತಿಕ ಶ್ರದ್ಧೆ.

moral guidance: ನೈತಿಕ ಮಾರ್ಗ ದರ್ಶನ.

moral imbecility: ನೈತಿಕ ದಡ್ಡತನ.

moral insanity: ನೈತಿಕ ಹುಚ್ಚು.

moral judgement: ನೈತಿಕ ನಿರ್ಣಯ.

moral neutrality: ನೈತಿಕ ತಾಟಸ್ಥ್ಯ.

moral norms: ನೈತಿಕ ನಿಯಮಗಳು; ನೈತಿಕ ಪ್ರಮಾಣಕಗಳು.

moral obligation: ನೈತಿಕ ಬಾಧ್ಯತೆ; ನೈತಿಕ ಹೊಣೆ.

moral organism: ನೈತಿಕ ಜೀವ. ರಾಜ್ಯವು ಒಂದು ನೈತಿಕ ಜೀವ ಘಟಕ ಎನ್ನುವ ಆದರ್ಶವಾದಿಗಳ ಪರಿಕಲ್ಪನೆ.

moral panic: ನೈತಿಕ ಭಯ. ಅಪ ಮಾರ್ಗೀ ವರ್ತನೆ ಅಥವಾ ಒಂದು ಸಾಮಾ ಜಿಕ ಸಮಸ್ಯೆಯ ಬಗೆಗಿನ ನೈತಿಕ ಭಯ.

moral persuation: ನೈತಿಕ ಮನವೊಲಿಸಿ ಕೊಳ್ಳುವಿಕೆ.

moral phenomena: ನೈತಿಕ ಸಂಗತಿ ಗಳು.

moral restraint: ನೈತಿಕ ನಿಗ್ರಹ; ನೈತಿಕ ಸಂಯಮ; ನೈತಿಕ ನಿರ್ಬಂಧ.

moral rights: ನೈತಿಕ ಹಕ್ಕುಗಳು.

moral sanction: ನೈತಿಕ ಅನು ಮೋದನೆ; ನೈತಿಕ ನಿರ್ಬಂಧ.

moral sense theory: ನೈತಿಕ ಸಂವೇದನಾ ಸಿದ್ಧಾಂತ.

moral sentiment: ನೈತಿಕ ಭಾವನೆ.

moral socialism: ನೈತಿಕ ಸಮಾಜ ವಾದ. ಕ್ರಾಂತಿ ತರುವ ವಿಪ್ಲವ, ಅಶಾಂತಿ, ಅನಿಶ್ಚಿತ ತೆಗಳನ್ನು ವಿರೋಧಿಸಿ ಹೋರಾಟಕ್ಕೆ ಬದ ಲಾಗಿ ಮನ ಒಲಿಸಿಕೊಳ್ಳುವುದರ ಮೂಲಕ ಸಮಾಜಸುಧಾರಣೆಯನ್ನು ತರಬೇಕು ಎನ್ನುವ ಭಾವುಕವಾದ.

moral standard: ನೈತಿಕ ಮಟ್ಟ.

moral statement: ನೈತಿಕ ಹೇಳಿಕೆ.

moral suasion: ನೈತಿಕ ಪ್ರೇರಣೆ (ಒತ್ತಡ). ಸಾಲನಿಯಂತ್ರಣಕ್ಕೆ ಅನುಸರಿಸಬಹುದಾದ ನೀತಿಗಳಲ್ಲೊಂದು.

moral system: ನೈತಿಕ ವ್ಯವಸ್ಥೆ.

moral training: ನೈತಿಕ ತರಬೇತಿ. ನೈತಿಕ ಶಿಕ್ಷಣ.

moral turpitude: ನೈತಿಕ ಪತನ.

moral value: ನೈತಿಕ ಮೌಲ್ಯ.

moral view point: ನೈತಿಕ ದೃಷ್ಟಿ ಕೋನ.

morale: ನೈತಿಕ ಸ್ಥಿತಿ; ಮನೋಸ್ಥೈರ್ಯ. ಧೈರ್ಯ, ಸ್ಥೈರ್ಯ, ಶಿಸ್ತು, ಭರವಸೆ ಇವು ಗಳಿಗೆ ಸಂಬಂಧಿಸಿದ ನೈತಿಕ ಸ್ಥಿತಿ.

morality: ನೈತಿಕತೆ; ನೀತಿ; ನೀತಿ ಪದ್ಧತಿ.

morality of constraint: ನಿರ್ಬಂಧದ ನೈತಿಕತೆ.

morality of co-operation: ಸಹ ಕಾರದ ನೈತಿಕತೆ.

morbidity: ರೋಗಜನಕ; ರೋಗ ವ್ಯಾಪನೆ.

morbidity rate: ರೋಗ ವ್ಯಾಪನೆಯ ದರ.

more elastic demand: ಹೆಚ್ಚು ಸ್ಥಿತಿ ಸ್ಥಾಪಕತ್ವವಿರುವ ಬೇಡಿಕೆ.

more elastic supply: ಹೆಚ್ಚು ಸ್ಥಿತಿಸ್ಥಾಪಕತ್ವವಿರುವ ಪೂರೈಕೆ. ಬೆಲೆಯ ಬದಲಾವಣೆಯ ಪ್ರಮಾಣಕ್ಕಿಂತಲೂ ಪೂರೈಕೆಯ ಬದಲಾವಣೆಯ ಪ್ರಮಾಣ ಹೆಚ್ಚಾಗಿರುವ ಸ್ಥಿತಿ.

mores: ನೈತಿಕ ನಿಯಮಗಳು; ಲೋಕ ನೀತಿ. ನೋಡಿ: moral norms.

morgantic marriage: ಭಿನ್ನ ವರ್ಗೀಯ ಮದುವೆ. ಶ್ರೀಮಂತ ವರ್ಗದ ಪುರುಷನೊಡನೆ ಕೆಳ ಅಂತಸ್ತಿನ, ಆತನ ಪದವಿ-ಪ್ರತಿಷ್ಠೆಗೆ ತಕ್ಕವಳಲ್ಲದ, ಸ್ತ್ರೀಯ ವಿವಾಹ. ಇಂತಹ ವಿವಾಹ ಸಂಬಂಧಗಳಲ್ಲಿ ಹೆಂಡತಿಗೆ ಗಂಡನ ಹಾಗೂ ಮಕ್ಕಳಿಗೆ ತಂದೆಯ ಆಸ್ತಿಯ ಅಥವಾ ಪದವಿಯ ಹಕ್ಕಿಲ್ಲ. ಇದೇ ರೀತಿ ಮೇಲ್ವರ್ಗದ ಸ್ತ್ರೀಯು ಕೆಳವರ್ಗದ ಪುರುಷನೊಡನೆ ವಿವಾಹವಾದರೆ ಸ್ಥಾನಭ್ರಷ್ಟಳಾಗುತ್ತಾಳೆ. ಇಂಥ ವಿವಾಹ ಸಂಬಂಧದಿಂದ ಮೇಲ್ವರ್ಗದ ಸಂಪತ್ತು ಅಥವಾ ಸ್ಥಾನಮಾನಗಳ ಸಂವಹನ ಸಾಧ್ಯವಾಗುವುದಿಲ್ಲ.

moron: ಮೂಢ ಬುದ್ಧಿ; ದುರ್ಬಲ ಬುದ್ಧಿ. ಬುದ್ಧಿಯ ಬೆಳವಣಿಗೆ ನಿಂತು ಹೋದ ಪ್ರಾಪ್ತವಯಸ್ಕ.

morphological method: ರೂಪರಚನಾತ್ಮಕ ವಿಧಾನ.

morphological unit: ರೂಪ ರಚನಾತ್ಮಕ ಘಟಕ.

mortality rate: ಮರಣದರ.

mortgage: ಅಡಮಾನ;ಈಡು; ಭೋಗ್ಯ. ಪಡೆದಿರುವ ಸಾಲಕ್ಕೆ ಭೂಮಿ ಅಥವಾ ಇತರ ಸ್ಥಿರ-ಚರಾಸ್ತಿಗಳನ್ನು ಆಧಾರವಾಗಿ ಒದಗಿಸುವ ಕಾನೂನುಬದ್ಧ ಭದ್ರತೆ.

mortgage bank: ಅಡಮಾನ ಬ್ಯಾಂಕು. ಜಮೀನು ಅಥವಾ ಬೇರಾವುದೇ ಸ್ಥಿರ ಆಸ್ತಿಯನ್ನು ಆಧಾರವಾಗಿಟ್ಟುಕೊಂಡು ಸಾಲ ನೀಡುವ ಬ್ಯಾಂಕು.

mortgage loan: ಅಡಮಾನ ಸಾಲ.

mortuary magic: ಶವಸಂಸ್ಕಾರ ಸಂಬಂಧಿತ ಮಾಟವಿದ್ಯೆ. ಮೃತವ್ಯಕ್ತಿಯ ಉತ್ತಮ ಅದೃಷ್ಟವನ್ನು ಮುಂದಿನ ಜಗತ್ತಿಗೆ ವಿಮೆ ಮಾಡಿಸುವ ಮಾಟ.

mother goddess: ಮಾತೃ ದೇವತೆ; ಶಕ್ತಿ ದೇವತೆ.

mother-in law taboo: ಅತ್ತೆ-ಅಳಿಯ ನಿಷೇಧ, ನೋಡಿ: avoidance relation ship.

mother right: ತಾಯಿಯ ಹಕ್ಕು. ಮಾತೃವಂಶೀಯ ಉತ್ತರಾಧಿಕಾರವನ್ನು ಹೊಂದಿರುವ ಸಾಮಾಜಿಕ ಸಂಘಟನೆ.

mother sentiment: ಮಾತೃ ಭಾವನೆ.

mother tongue: ಮಾತೃ ಭಾಷೆ.

mother worship: ಶಕ್ತಿ ಪೂಜೆ 'ಅಮ್ಮ', 'ತಾಯಿ' ಎಂದು ನಂಬಲಾದ ಶಕ್ತಿ ಸ್ವರೂಪದ ಪೂಜೆ.

motherhood: ತಾಯ್ತನ. ತಾಯ್ತನವು ಜೈವಿಕ ಕ್ರಿಯೆಯ ಬದಲಾಗಿ ಪ್ರಾಥಮಿಕವಾಗಿ ಒಂದು ಸಂಸ್ಥೆ.

motif: ಆಶಯ. ಅಂತಃಸತ್ವವುಳ್ಳ ವಿಶಿಷ್ಟ ವಿಚಾರ.

motif index: ಆಶಯ ಸೂಚಿ.

motifeme: ಆಶಯಿಮ.

motivated behaviour: ಅಭಿಪ್ರೇರಿತ ವರ್ತನೆ.

motivated learning: ಪ್ರೇರಿತ ಕಲಿಕೆ.

motivating factor: ಅಭಿಪ್ರೇರಕ ಕಾರಕ; ಪ್ರೇರಣಾಂಶ; ಪ್ರೇರೇಪಣಾಂಶ.

motivation: ಪ್ರೇರಕ ಶಕ್ತಿ; ಪ್ರೇರಣೆ.

motivation psychology: ಪ್ರೇರಣಾ ಮನಶ್ಶಾಸ್ತ್ರ.

motivation process: ಅಭಿಪ್ರೇರಣಾತ್ಮಕ ಪ್ರಕ್ರಿಯೆ.

motivational research: ಪ್ರೇರಣಾ ವಿಷಯಕ ಸಂಶೋಧನೆ; ಪ್ರೇರಣೆಯ ಬಗೆಗಿನ ಸಂಶೋಧನೆ. ವಿವಿಧ ಉತ್ಪನ್ನಗಳನ್ನು ಖರೀದಿಸಲು ಜನರಿಗೆ ಪ್ರೇರೇಪಣೆ ನೀಡುವ ಮಾನಸಿಕ ಸಾಮಾಜಿಕ ಅಂಶಗಳ ಬಗೆಗಿನ ಈ ಅಧ್ಯಯನದಿಂದ ಜಾಹೀರಾತು ಹಾಗೂ ಮಾರಾಟ ತಂತ್ರಗಳನ್ನು ಪ್ರಭಾವಶಾಲಿಯಾಗಿ ಮಾಡಬಹುದು.

motive: ಪ್ರಚೋದನೆ; ಅಭಿಪ್ರೇರಣೆ.

motive power: ಪ್ರೇರಕ ಶಕ್ತಿ.

motor activity: ನಿರ್ವಾಹಕ ಕ್ರಿಯೆ.

motor disability: ಚಾಲನ ಅಸಾಮರ್ಥ್ಯ.

motor nerve: ಚಾಲಕ ನರ; ಕ್ರಿಯಾವಾಹಿ ನರ; ಪ್ರೇರಕ ನರ.

motor system: ಚಾಲಕ ಮಂಡಲ.

mourning song: ಶೋಕ ಗೀತೆ.

mouth piece: ವದನಕ; ವಕ್ತಾರ.

movable property: ಚರಾಸ್ತಿ.

movement: ಚಳವಳಿ; ಚಲನೆ.

muckrakers: ಸಮಾಜ ವಿಮರ್ಶಕರು; ಕೊಳಕು ಕೆದಕುವವರು.

multibonded group: ಬಹುಬಂಧಿತ ಸಮೂಹ. ಒಂದು ಗುಂಪಿನ ಸದಸ್ಯರು ಒಂದಕ್ಕಿಂತ ಹೆಚ್ಚು ಸಂಬಂಧಗಳಿಂದ (ಉದ್ದೇಶಗಳು, ಅವಶ್ಯಕತೆಗಳು, ಮೌಲ್ಯಗಳು ಇತ್ಯಾದಿ) ಬಂಧಿತರಾಗಿರುವಿಕೆ.

multidimension: ಬಹು ಆಯಾಮ.

multi-direction: ಬಹು ದಿಶಾನುವರ್ತಿ

multi-disciplinary: ಬಹುಶಾಸ್ತ್ರೀಯ.

multi-factor: ಬಹು ಅಂಶಗಳನ್ನೊಳಗೊಂಡ; ಬಹು ಅಂಶೀಯ.

multi-factor theory: ಬಹುಕಾರಕ ಸಿದ್ಧಾಂತ.

multi-form stage: ವೈವಿಧ್ಯದ ಹಂತ; ವಿವಿಧತೆಯ ಹಂತ.

multilateral agreement: ಬಹು ಮುಖ ಒಪ್ಪಂದ; ಬಹುಪಕ್ಷೀಯ ಒಪ್ಪಂದ.

multilateral diplomacy: ಸಾಮೂಹಿಕ ರಾಜತಂತ್ರ. ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ನಿವಾರಿಸಲು ವಿವಿಧ ರಾಜ್ಯಗಳ ಪ್ರತಿನಿಧಿಗಳು ಒಂದೆಡೆ ಸೇರಿ, ವಿಚಾರ ವಿನಿಮಯ ನಡೆಸಿ, ಸರ್ವಸಮ್ಮತವಾಗುವಂತಹ ಒಪ್ಪಂದವನ್ನು ರೂಪಿಸುವುದು.

multilateral investment insurance scheme: ಬಹುಮುಖೀಯ ಹೂಟೆ ವಿಮೆ ಯೋಜನೆ.

multilateral trade: ಬಹುಮುಖ ವ್ಯಾಪಾರ. ದೇಶಗಳು ಯಾವ ನಿರ್ಬಂಧವೂ ಇಲ್ಲದೆ ಒಂದರೊಡನೊಂದು ನಡೆಸುವ ವ್ಯಾಪಾರ.

multilineal descent: ಬಹುಸಂತತಿಯ ವಂಶಾವಳಿ.

multilineal evolution: ಬಹು ರೇಖಾತ್ಮಕ ವಿಕಾಸ.

multi member constituency: ಬಹುಸದಸ್ಯ ಮತದಾರ ಕ್ಷೇತ್ರ. ಒಂದಕ್ಕಿಂತ ಹೆಚ್ಚು ಸದಸ್ಯರನ್ನು (ಪ್ರತಿನಿಧಿಗಳನ್ನು) ಚುನಾಯಿಸುವ ಮತದಾರಕ್ಷೇತ್ರ.

multimodel economy: ಬಹುವಿಧ ಆರ್ಥಿಕ ವ್ಯವಸ್ಥೆ. ಬಹುಸಂಖ್ಯೆಯಲ್ಲಿರುವ ವಿಭಿನ್ನ ಉತ್ಪಾದನಾ ವಿಧಾನಗಳಿಂದ ಮತ್ತು ಉತ್ಪಾದನಾ ಸಂಬಂಧಗಳಿಂದ ಕೂಡಿರುವ ಆರ್ಥಿಕ ವ್ಯವಸ್ಥೆ.

multinational company: ಬಹು ರಾಷ್ಟ್ರೀಯ ಸಂಸ್ಥೆ. ಹಲವಾರು ರಾಷ್ಟ್ರಗಳಲ್ಲಿ ಶಾಖೆಗಳಿರುವ ವ್ಯಾಪಾರೀ ನಿಗಮ.

multinational corporations: ಬಹು ರಾಷ್ಟ್ರೀಯ ನಿಗಮಗಳು. ವಿದೇಶಗಳಲ್ಲಿ ಸ್ವತ್ತುಗಳನ್ನು ಹೊಂದಿರುವ ಉದ್ಯಮ ಸಂಸ್ಥೆಗಳು ಮತ್ತು ಅನೇಕ ಬಂಡವಾಳಶಾಹಿ ಹಾಗೂ ವರ್ಧಿಷ್ಣು ದೇಶಗಳಲ್ಲಿ ಶಾಖೆ ಗಳನ್ನು ಹೊಂದಿರುವ ಅಂತಾರಾಷ್ಟ್ರೀಯ ಕಂಪೆನಿಗಳು.

multinational state: ಬಹು ರಾಷ್ಟ್ರೀಯ ರಾಜ್ಯ.

multi-nuclei theory: ಬಹುಕೇಂದ್ರ ಸಿದ್ಧಾಂತ.

multi-party system: ಬಹುಪಕ್ಷ ಪದ್ಧತಿ. ಒಂದು ರಾಜಕೀಯ ವ್ಯವಸ್ಥೆಯಲ್ಲಿ ಎರಡು ರಾಜಕೀಯ ಪಕ್ಷಗಳಿಗಿಂತ ಹೆಚ್ಚು ರಾಜಕೀಯ ಪಕ್ಷಗಳು ಅಸ್ತಿತ್ವದಲ್ಲಿರುವುದು (ಉದಾ. ಭಾರತ-ಫ್ರಾನ್ಸ್).

multiphase sample: ವಿವಿಧ ಮಜಲು ಮಾದರಿ.

multiphasic personality inventory: ಬಹುಮುಖ ವ್ಯಕ್ತಿತ್ವದ ವಿವರ ಪಟ್ಟಿ.

multiple allelomorphism: ಬಹು ತಳಿಗಳ ಸಮೂಹ. ಒಂದಕ್ಕೊಂದು ವಿರೋಧವಾಗಿರುವ ಅನುವಂಶೀಯ ತಳಿಗಳು ಒಂದು ಜೊತೆಗಿಂತ ಹೆಚ್ಚಾಗಿ ಒಂದೇ ಕಡೆ ಗೋಚರಿಸುವಿಕೆ.

multiple causation: ಬಹ್ವಂಶ ಕಾರ್ಯ ಕಾರಣ; ಬಹುಕಾರಣೀಯ. ಒಂದು ಘಟನೆಗೆ ಒಂದಕ್ಕಿಂತ ಹೆಚ್ಚು ಕಾರಣಗಳನ್ನು ಆರೋಪಿಸುವುದು.

multiple choice apparatus: ಬಹು ಪರ್ಯಾಯ ಪ್ರಯೋಗ ಪರಿಕರ.

multiple choice problem: ಬಹು ಪರ್ಯಾಯ (ಸಮಸ್ಯೆ) ಪ್ರಶ್ನೆ.

multiple choice question: ಬಹು ಪರ್ಯಾಯ ಪ್ರಶ್ನೆ.

multiple correlation: ಬಹುಮುಖೀ ಸಹಸಂಬಂಧ.

multiple documentation: ಬಹು ಮುಖೀ ದಾಖಲಾತಿ.

multiple exchange rate: ಬಹು ವಿನಿಮಯ ದರ. ವಿನಿಮಯ ನಿಯಂತ್ರಣ ಜಾರಿಯಲ್ಲಿರುವಾಗ ತನ್ನ ಲಾಭಕ್ಕನುಗುಣ ವಾಗಿ ಬೇರೆ ಬೇರೆ ವಿನಿಮಯ ದರಗಳನ್ನು ವಿಧಿಸುವುದು.

multiple factor analysis: ಬಹು ವಂಶೀಯ ವಿಶ್ಲೇಷಣೆ.

multiple group membership: ಬಹುಮುಖ ಸಮೂಹ ಸದಸ್ಯತ್ವ.

multiple independent discoveries: ಬಹುಮುಖ ಸ್ವತಂತ್ರ ಅನ್ವೇಷಣೆಗಳು.

multiple interaction: ಬಹುವಿಧ ಪರಸ್ಪರಾನುಕ್ರಿಯೆ.

multiple market equilibrium: ಬಹುಸರಕುಗಳ ಮಾರುಕಟ್ಟೆ ಸಮ ತೋಲನ.

multiple monopoly: ಬಹ್ವಂಶ ಏಕಸ್ವಾಮ್ಯ. ನೋಡಿ: oligopoly.

multiple personality: ಬಹುಮುಖ ವ್ಯಕ್ತಿತ್ವ.

multiple roles: ಬಹುಮುಖ ಪಾತ್ರಗಳು. ಒಬ್ಬ ವ್ಯಕ್ತಿಯು ಒಂದೇ ಸಮಯದಲ್ಲಿ ನಿರ್ವಹಿಸಬೇಕಾದ ವಿವಿಧ ಪಾತ್ರಗಳು. ಉದಾ:ಗಂಡನಾಗಿ, ತಂದೆಯಾಗಿ ವಕೀಲನಾಗಿ ಒಬ್ಬ ವ್ಯಕ್ತಿಯು ಏಕಕಾಲದಲ್ಲಿ ನಿರ್ವಹಿಸುವ ಬಹುಮುಖ ಪಾತ್ರಗಳು.

multiple sovereignty: ಬಹು ಪರಮಾಧಿಕಾರ. ಒಂದು ಸಮಾಜದಲ್ಲಿ ಒಂದೇ ಪರಮಾಧಿಕಾರ ಇಲ್ಲದಿರುವಂತಹ ಸಂದರ್ಭ ಅಥವಾ ಸನ್ನಿವೇಶ.

multiplier: ಗುಣಕ. ಖರ್ಚು ಮತ್ತು ರಾಷ್ಟ್ರೀಯ ಆದಾಯದ ನಡುವಿನ ಸಂಬಂಧವನ್ನು ವಿವರಿಸುವ ಸಿದ್ಧಾಂತ.

multiplier-accelerator interaction: ಗುಣಕ ವೇಗೋತ್ಕರ್ಷಗಳ ಸಂಯೋಜನೆ. ಗುಣಕ ಮತ್ತು ವೇಗೋತ್ಕರ್ಷಗಳ ಮಿಶ್ರಿತ ಪರಿಣಾಮ.

multi-point entry: ಬಹುಬಿಂದು ಪ್ರವೇಶ; ಬಹು ದಿಶೆಗಳಿಂದ ಪ್ರವೇಶ.

multi-psychism: ಬಹು ಚಿತ್ತವಾದ.

multi purpose area: ವಿವಿಧೋದ್ದೇಶ ಕ್ಷೇತ್ರ.

multi-purpose school: ವಿವಿಧೋದ್ದೇಶ ಶಾಲೆ.

multi-stage sampling: ಬಹುಸ್ತರ ಮಾದರಿ.

multi target programme: ಬಹು ಗುರಿ ಯೋಜನೆ.

multitudinous desolation: ಸಾಮುದಾಯಿಕ ವಿವಿಕ್ತತೆ.

multi variate analysis: ಬಹು ಪರಿವರ್ತಕಗಳ ವಿಶ್ಲೇಷಣೆ.

mummies: ಮಮ್ಮಿಗಳು; ರಕ್ಷಿತ ಶವ; ಶುಷ್ಕ ದೇಹ. ಕೆಡದಂತೆ ಹೂತಿಟ್ಟ ಸುವಾಸನಾ ದ್ರವ್ಯಗಳಿಂದ ಸಂಸ್ಕರಿಸಿದ ಮೃತ ದೇಹ.

municipal corporation: ಪೌರ ಸಂಸ್ಥೆ; ಪೌರ ಸಭೆ; ನಗರ ಸಭೆ.

municipal duty: ಪೌರ ಕಾರ್ಯ.

municipal government: ನಗರ ಸರಕಾರ.

municipal law: ಪೌರ ಕಾನೂನು. ಒಂದು ಸರಕಾರವು ತನ್ನ ಪೌರರ ನಡವಳಿಕೆಯನ್ನು ನಿಯಂತ್ರಿಸಲು ಮಾಡುವ ಕಾನೂನು. ಇದನ್ನು ರಾಷ್ಟ್ರೀಯ ಕಾನೂನು ಎಂದೂ ಕರೆಯಲಾಗುವುದು.

municipality: ಪುರಸಭೆ.

munsief: ಮುನ್ಸೀಪ್. ಸುಲ್ತಾನಾಧಿ ಪತ್ಯದ

ಒಂದು ಹುದ್ದೆಯ ಹೆಸರು; ತಾಲ್ಲೂಕು ಮಟ್ಟದ ನ್ಯಾಯಾಧೀಶ.

museum: ವಸ್ತು ಸಂಗ್ರಹಾಲಯ.

mutation: ಉತ್ಪರಿವರ್ತನೆ; ಮಾರ್ಪಾಟು. ಹೊಸ ವಂಶೋತ್ಪನ್ನತೆಯು ಸಾಧ್ಯವಾಗುವಂತಹ ಬದಲಾವಣೆ. ಸ್ಥಳ ವಿಕ್ರಯದ ಸಂದರ್ಭದಲ್ಲಿ ಹೊಸ ಹಿಡುವಳಿದಾರನ ಹೆಸರು ದಾಖಲಿಸುವ ಕ್ರಮ.

mutiny: ಬಂಡಾಯ; ದಂಗೆ

mutism: ಮೂಕತೆ; ಮೂಕತನ.

mutual relationship: ಅನ್ಯೋನ್ಯ ಸಂಬಂಧ.

mutualism: ಪಾರಸ್ಪರಿಕತೆ.

mysophobia: ಅಶುಚಿ ಭೀತಿ. ಕೊಳೆ ಮತ್ತು ಅಂಟುರೋಗಗಳ ಭೀತಿ. ಸಾಮಾನ್ಯವಾಗಿ ಕೈತೊಳೆದುಕೊಳ್ಳುವ ಚಟದ ಹಿಂದೆ ಇಂಥ ಭೀತಿ ಇರುತ್ತದೆ.

mystery cult: ಗೂಢ ಆರಾಧನೆ.

mystery religion: ಗೂಢ ಧರ್ಮ. ಸಮುದಾಯಕ್ಕಿಂತ ವ್ಯಕ್ತಿಯ ಲಾಭಗಳಿಗೆ ಪ್ರಾಮುಖ್ಯತೆ ನೀಡುವ ಧಾರ್ಮಿಕ ವಿಧಿಗಳು.

mystical: ಅತೀಂದ್ರಿಯ.

mystical bond of kinship: ಅನುಭಾವಿಕ ರಕ್ತಬಾಂಧವ್ಯ.

mysticism: ಅನುಭಾವ; ಆಧ್ಯಾತ್ಮವಾದ; ಅತೀಂದ್ರಿಯವಾದ; ಅಗೋಚರವಾದ.

myth: ಪುರಾಣ. ಪುರಾಣ ಎನ್ನುವುದು ದೇವತೆಗಳಿಗೆ, ಉಪದೇವತೆಗಳಿಗೆ, ಸಾಂಸ್ಕೃತಿಕ ವೀರರಿಗೆ ಸಂಬಂಧಿಸಿದ ಕಥೆ.

mytheme: ಪುರಾಣಿಮ.

mythical animal: ಕಾಲ್ಪನಿಕ ಪ್ರಾಣಿ. ಜನಪದ ಕಥೆಗಳಲ್ಲಿ ಕಂಡುಬರುವ ಸಾಮಾನ್ಯವಲ್ಲದ ವಿಲಕ್ಷಣ ಕಾಲ್ಪನಿಕ ಪ್ರಾಣಿ.

mythological tale: ಪೌರಾಣಿಕ ಕತೆ.

mythological theory: ಪುರಾಣ ಮೂಲ ಸಿದ್ಧಾಂತ.

mythological theory of folktales: ಜಾನಪದ ಕಥೆಗಳ ಪುರಾಣ ಸಿದ್ಧಾಂತ. ಜಾನಪದ ಕಥೆಗಳ ಉಗಮ ಮತ್ತು ಪ್ರಾಮುಖ್ಯತೆಯ ಕುರಿತಾದ ಸಿದ್ಧಾಂತ.

mythology: ಪುರಾಣಶಾಸ್ತ್ರ.

N

name avoidance: ಹೆಸರು ಹೇಳಬಾರದೆಂಬ ನಿಯಮ. ನಿರ್ದಿಷ್ಟ ಪಂಗಡದ ವಿವಾಹಸಂಬಂಧಿ ಅಥವಾ ಮೃತ ಸಂಬಂಧಿಗಳ ಹೆಸರನ್ನು ನಿರೂಪಿಸದೇ ಇರುವುದು.

name riddle: ಹೆಸರಿನ ಒಗಟು.

name taboo: ಹೆಸರಿನ ನಿಷೇಧ. ಕೆಲವೊಂದು ವ್ಯಕ್ತಿಗಳ, ವಸ್ತುಗಳ ಮತ್ತು ದೇವತೆಗಳ ಹೆಸರನ್ನು ಉಲ್ಲೇಖಿಸುವುದರ ನಿಷೇಧ.

narcissism: ಆತ್ಮಪ್ರೀತಿ; ಆತ್ಮರತಿ. ನೋಡಿ: autophilia.

narcoanalysis: ನಿದ್ರಾಜನಕ ವಿಶ್ಲೇಷಣೆ; ವೇದನಾ ಜಡತೆಯ ವಿಶ್ಲೇಷಣೆ.

narcolepsy: ಅತಿನಿದ್ರೆ; ನಿದ್ರಾರೋಗ. ಮೆದುಳಿನ ತೊಂದರೆಯಿಂದ ಬರುವ ರೋಗ.

narcosis: ವೇದನಾ ಜಡತೆ. ವೇದನೆ ಅನುಭವಕ್ಕೆ ಬಾರದಿರುವ ಸ್ಥಿತಿ.

narcotic: ಮಾದಕ ದ್ರವ್ಯ.

narcotic drugs: ನಿದ್ರಾಜನಕ ಮದ್ದುಗಳು; ಮಾದಕ ದ್ರವ್ಯಗಳು.

narcotism: ನಿದ್ರಾವೇಗ; ವೇದನಾ ಸುಪ್ತಿ.
narrative lyric: ಕಥನ ಭಾವಗೀತ.
narrative prose: ಕಥನ ಗದ್ಯ.
narrative song: ಕಥನ ಗೀತ.
narratology: ಕಥನ ಶಾಸ್ತ್ರ.
narrow majority: ಅಲ್ಪಬಹುಮತ.
nasal index: ಮೂಗಿನ ಸೂಚ್ಯಂಕ.
nastaliq: ದುಂಡಾಕೃತಿಯ ಲಿಪಿ ಶೈಲಿ. ಅರೆಬಿಕ್ ಲಿಪಿಯ ಅಲಂಕಾರಿಕ ಶೈಲಿ.
nation: ಜನಪದ; ರಾಷ್ಟ್ರ.
nation state: ರಾಷ್ಟ್ರ ರಾಜ್ಯ. ೧೬ನೇ ಶತಮಾನದ ಆದಿಭಾಗದಲ್ಲಿ ಯುರೋಪಿನಲ್ಲಿ ರಾಷ್ಟ್ರೀಯತೆಯ ಪ್ರಜ್ಞೆ ಬೆಳೆದು ರಾಷ್ಟ್ರ ರಾಜ್ಯಗಳು ಉದಿಸಿದವು. ಇಂಗ್ಲೆಂಡ್, ಫ್ರಾನ್ಸ್ ಮತ್ತು ಸ್ಪೇನ್ ಮೊದಲು ಉದಿಸಿದ ರಾಷ್ಟ್ರ ರಾಜ್ಯಗಳು.
nation state system: ರಾಷ್ಟ್ರ ರಾಜ್ಯ ವ್ಯವಸ್ಥೆ.
national animal: ರಾಷ್ಟ್ರೀಯ ಪ್ರಾಣಿ.
national anthem: ರಾಷ್ಟ್ರಗೀತೆ. ಒಂದು ರಾಷ್ಟ್ರದ ಸಮಗ್ರತೆ ಮತ್ತು ಪ್ರತಿಷ್ಠೆಯ ಸಂಕೇತವಾಗಿ ಹಾಡುವಂತಹ ಗೀತೆ. ಆ ಗೀತೆಯನ್ನು ಆ ರಾಷ್ಟ್ರದ ರಾಷ್ಟ್ರಗೀತೆಯಾಗಿ ಸಂವಿಧಾನಬದ್ಧವಾಗಿ ಅಳವಡಿಸಿಕೊಳ್ಳಲಾಗುತ್ತದೆ. ಉದಾ: ಭಾರತದಲ್ಲಿ ಜನಗಣಮನ.
national archives: ರಾಷ್ಟ್ರೀಯ ಪತ್ರಾಗಾರ; ರಾಷ್ಟ್ರೀಯ ದಾಖಲೆ ಪತ್ರಗಳ ಸಂಗ್ರಹಾಲಯ.
national areas: ರಾಷ್ಟ್ರೀಯ ಪ್ರದೇಶಗಳು.
national army: ರಾಷ್ಟ್ರೀಯ ಸೈನ್ಯ.
national assembly: ರಾಷ್ಟ್ರೀಯ ಸಭೆ. ಫ್ರೆಂಚ್ ಸಂಸತ್ತಿನ ಕೆಳಮನೆ.
national awakening: ರಾಷ್ಟ್ರೀಯ ಜಾಗೃತಿ.
national bird: ರಾಷ್ಟ್ರೀಯ ಪಕ್ಷಿ.
national calendar of India: ಭಾರತದ ರಾಷ್ಟ್ರೀಯ ಕ್ಯಾಲೆಂಡರ್.
national capital: ರಾಷ್ಟ್ರೀಯ ಬಂಡವಾಳ. ಒಂದು ನಿರ್ದಿಷ್ಟ ಕಾಲದಲ್ಲಿ ಒಂದು ದೇಶದಲ್ಲಿರುವ ಒಟ್ಟು ನೈಜ ಬಂಡವಾಳ.
national character: ರಾಷ್ಟ್ರೀಯ ಚಾರಿತ್ರ್ಯ; ರಾಷ್ಟ್ರ ಗುಣ. ಒಂದು ರಾಷ್ಟ್ರದ ಗುಣವು ಜನರ ಸಮಾನ ಸಾಂಸ್ಕೃತಿಕ ಗುಣಗಳು, ಆ ರಾಷ್ಟ್ರದ ಇತಿಹಾಸ, ಅಲ್ಲಿನ ಸಾಮಾಜಿಕ ವ್ಯವಸ್ಥೆ ಮುಂತಾದವುಗಳ ಆಧಾರದ ಮೇಲೆ ರೂಪಿತವಾಗುತ್ತದೆ. ಇವು ಆಯಾ ದೇಶದ ರಾಷ್ಟ್ರೀಯ ಚಾರಿತ್ರ್ಯವೆನಿಸುತ್ತದೆ.
national consciousness: ರಾಷ್ಟ್ರೀಯ ಪ್ರಜ್ಞೆ.
national consumer service: ರಾಷ್ಟ್ರೀಯ ಬಳಕೆದಾರರ ಸೇವೆ.
national convention: ರಾಷ್ಟ್ರೀಯ ಸಮಾವೇಶ.
national council: ರಾಷ್ಟ್ರೀಯ ಸಭೆ ಸ್ವಿಸ್ ಕೇಂದ್ರ ಶಾಸನ ಸಭೆಯ ಕೆಳಮನೆ ಯನ್ನು ಹೀಗೆ ಕರೆಯಲಾಗುತ್ತದೆ.
national currency: ರಾಷ್ಟ್ರೀಯ ನಾಣ್ಯ (ಚಲಾರ್ಥ).
national debt: ರಾಷ್ಟ್ರೀಯ ಋಣ;

ರಾಷ್ಟ್ರೀಯ ಸಾಲ. ಒಂದು ಸರಕಾರವು ತನ್ನ ದೇಶದೊಳಗಿನ ಜನರಿಗೆ ಹಾಗೂ ಸಂಸ್ಥೆಗಳಿಗೆ ಕೊಡಬೇಕಾದ ಮತ್ತು ವಿದೇಶೀ ಸಾಲಗಳಿಗೆ ಪಾವತಿ ಮಾಡ ಬೇಕಾದ ಹಣ.

national development council: ರಾಷ್ಟ್ರೀಯ ಅಭಿವೃದ್ಧಿ ಮಂಡಳಿ.

national dictatorship: ರಾಷ್ಟ್ರೀಯ ಸರ್ವಾಧಿಕಾರತ್ವ. ಪ್ರಥಮ ಮಹಾಯುದ್ಧದ (೧೯೧೪-೧೯೧೮) ನಂತರ ಇದು ಇಟಲಿ, ಜರ್ಮನಿಗಳಲ್ಲಿ ಹುಟ್ಟಿಕೊಂಡಿತು.

national dividend: ರಾಷ್ಟ್ರೀಯ ಲಾಭಾಂಶ.

national economic budget: ರಾಷ್ಟ್ರೀಯ ಆರ್ಥಿಕ ಮುಂಗಡ ಪತ್ರ.

national economy: ರಾಷ್ಟ್ರೀಯ ಅರ್ಥವ್ಯವಸ್ಥೆ. ಕೈಗಾರಿಕೆ, ಕಟ್ಟಡ ನಿರ್ಮಾಣ, ಕೃಷಿ, ಸಾರಿಗೆ ಸಂಪರ್ಕಗಳು, ವಾಣಿಜ್ಯ ಮತ್ತು ವಿತರಣೆ, ಸಾಲವ್ಯವಸ್ಥೆ ಮೊದಲಾದವುಗಳನ್ನು ಒಳಗೊಂಡಿರುವ ಒಂದು ದೇಶದ ಎಲ್ಲಾ ಉತ್ಪಾದನಾ ಶಾಖೆಗಳ ಒಟ್ಟುಮೊತ್ತ.

national emblem: ರಾಷ್ಟ್ರೀಯ ಲಾಂಛನ. ಉದಾ: ಅಶೋಕ ಚಕ್ರವು ಭಾರತದ ರಾಷ್ಟ್ರೀಯ ಸಂಕೇತ (ಲಾಂಛನ) ವಾಗಿದೆ.

national emergency: ರಾಷ್ಟ್ರೀಯ ತುರ್ತುಪರಿಸ್ಥಿತಿ. ದೇಶದ ಅಥವಾ ಯಾವುದೇ ಪ್ರದೇಶದ ಭದ್ರತೆಗೆ ಯುದ್ಧದಿಂದ, ಹೊರ ಆಕ್ರಮಣದಿಂದ ಅಥವಾ ಸಶಸ್ತ್ರ ಬಂಡಾಯದಿಂದ ಅಪಾಯವಿದೆಯೆಂದು ರಾಷ್ಟ್ರಪತಿಗೆ ಮನವರಿಕೆಯಾದರೆ ದೇಶಾದ್ಯಂತ ಅಥವಾ ದೇಶದ ಯಾವುದೇ ಭಾಗದಲ್ಲಿ ಸಂವಿಧಾನದ ೩೫೨ನೇ ವಿಧಿಯ ಪ್ರಕಾರ ರಾಷ್ಟ್ರಪತಿಯವರು ಘೋಷಿಸುವ ತುರ್ತುಪರಿಸ್ಥಿತಿ. ಈ ಸಮಯದಲ್ಲಿ ಆಡಳಿತಾಂಗವು ಅನೇಕ ಬಗೆಯ ವಿಶೇಷಾಧಿಕಾರಗಳನ್ನು ಪಡೆಯುತ್ತದೆ ಮತ್ತು ಜನರ ವಿವಿಧ ಮೂಲಭೂತ ಹಕ್ಕುಗಳ ಮೇಲೆ ನಿರ್ಬಂಧಗಳನ್ನು ಹೇರಲಾಗುತ್ತದೆ.

national ethos: ರಾಷ್ಟ್ರೀಯ ಸ್ವಭಾವ.

national expenditure: ರಾಷ್ಟ್ರೀಯ ವೆಚ್ಚ. ಒಂದು ರಾಷ್ಟ್ರದ ಜನರು ಮತ್ತು ಸರಕಾರ ಆಯಾ ವರ್ಷದಲ್ಲಿ ಸರಕುಗಳ ಮತ್ತು ಸೇವೆಗಳ ಅನುಭೋಗಕ್ಕೆ ಮಾಡುವ ಒಟ್ಟು ವೆಚ್ಚ.

national flag: ರಾಷ್ಟ್ರಧ್ವಜ.

national flower: ರಾಷ್ಟ್ರೀಯ ಹೂವು.

national freedom struggle: ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮ.

national front: ರಾಷ್ಟ್ರೀಯ ರಂಗ.

national frontiers: ರಾಷ್ಟ್ರೀಯ ಸರಹದ್ದುಗಳು; ರಾಷ್ಟ್ರದ ಸೀಮೆಗಳು.

national government: ರಾಷ್ಟ್ರೀಯ ಸರಕಾರ.

national identity: ರಾಷ್ಟ್ರೀಯ ಅನನ್ಯತೆ.

national income: ರಾಷ್ಟ್ರೀಯ ಆದಾಯ. ಒಂದು ನಿರ್ದಿಷ್ಟ ಅವಧಿಯಲ್ಲಿ (ಸಾಮಾನ್ಯವಾಗಿ ಒಂದು ವರ್ಷದಲ್ಲಿ) ಒಂದು ದೇಶದಲ್ಲಿ ಉತ್ಪಾದಿಸಲಾಗುವ ಸರಕು ಹಾಗೂ ಸೇವೆಗಳ ಒಟ್ಟು ಮೌಲ್ಯ.

national income at factor cost: ಉತ್ಪಾದನಾಂಗ ವೆಚ್ಚರೂಪದ ರಾಷ್ಟ್ರೀಯ ಆದಾಯ. ಆದಾಯದ ಗಣತಿಯಲ್ಲಿ ಪ್ರತಿಯೊಂದು ಉತ್ಪಾದನಾ ಸಾಲಗಳಿಗೆ (ಭೂಮಿ, ಶ್ರಮ, ಬಂಡವಾಳ ಮತ್ತು ಸಂಘಟನೆ)

ನೀಡಲಾಗುವ ಪ್ರತಿಫಲಗಳ (ಗೇಣಿ, ವೇತನ, ಬಡ್ಡಿ ಮತ್ತು ಲಾಭ) ಮೌಲ್ಯವನ್ನು ಸೇರಿಸಲಾಗುತ್ತದೆ.

national integration: ರಾಷ್ಟ್ರೀಯ ಸಮಗ್ರತೆ.

national intelligence: ರಾಷ್ಟ್ರೀಯ ಬುದ್ಧಿಶಕ್ತಿ.

national interest: ರಾಷ್ಟ್ರೀಯ ಹಿತಾಸಕ್ತಿ. ರಾಷ್ಟ್ರದ ಜನತೆಯ ಆಸೆ, ಆಕಾಂಕ್ಷೆಗಳು, ಬೇಡಿಕೆಗಳು ಮುಂತಾದವನ್ನು ಪೂರೈಸುವ ಮೂಲಕ ಪ್ರಗತಿಯನ್ನು ಸಾಧಿಸುವ ಉದ್ದೇಶ. ಇದು ಆ ದೇಶದ ವಿದೇಶಾಂಗ ನೀತಿಯ ಮೇಲೆ ಪ್ರಭಾವ ಬೀರುತ್ತದೆ.

national law: ರಾಷ್ಟ್ರೀಯ ಕಾನೂನು. ನೋಡಿ: municipal law.

national liberation revolution: ರಾಷ್ಟ್ರೀಯ ವಿಮೋಚನಾ ಕ್ರಾಂತಿ. ರಾಷ್ಟ್ರೀಯ ವಿಮೋಚನಾ ಚಳುವಳಿಯಿಂದ ಉದ್ಭವಿಸುವ ಕ್ರಾಂತಿ. ವಿದೇಶೀ ಅಧಿಪತ್ಯವನ್ನು ನಾಶಗೊಳಿಸುವುದು, ರಾಷ್ಟ್ರೀಯ ಸ್ವಾತಂತ್ರ್ಯವನ್ನು ಗಳಿಸುವುದು, ರಾಷ್ಟ್ರೀಯ ವಸಾಹತುಶಾಹಿ ಮರ್ದನವನ್ನು ಹಾಗೂ ಶೋಷಣೆ ಯನ್ನು ತೊಡೆದು ಹಾಕುವುದು, ರಾಷ್ಟ್ರಗಳ ಸ್ವಯಂ ನಿರ್ಣಯಾಧಿಕಾರವನ್ನು ಕಾರ್ಯಗತ ಮಾಡುವುದು ಮತ್ತು ಒಂದು ರಾಷ್ಟ್ರೀಯ ರಾಜ್ಯವನ್ನು ಸ್ಥಾಪಿಸುವುದು ಅದರ ಗುರಿ. ಉದಾ: ಏಶಿಯಾ, ಆಫ್ರಿಕ ಮತ್ತು ಲ್ಯಾಟೀನ್ ಅಮೇರಿಕಾದ ದೇಶ ಗಳಲ್ಲಿನ ರಾಷ್ಟ್ರೀಯ ವಿಮೋಚನಾ ಸಮರ.

national liberty: ರಾಷ್ಟ್ರೀಯ ಸ್ವಾತಂತ್ರ್ಯ. ಒಂದು ದೇಶವು ಪರದೇಶದ ನಿಯಂತ್ರಣಕ್ಕೊಳಗಾಗದೆ ತನ್ನ ಒಳಾಡಳಿತದಲ್ಲಿ ಸ್ವಾತಂತ್ರ್ಯ ಹೊಂದಿರುವುದು. ರಾಷ್ಟ್ರೀಯ ಸ್ವಾತಂತ್ರ್ಯವು ಆಂತರಿಕ ಹಾಗೂ ಬಾಹ್ಯ ಸ್ವಾತಂತ್ರ್ಯಗಳೆರಡನ್ನೂ ಸೂಚಿಸುತ್ತದೆ.

national money income: ರಾಷ್ಟ್ರೀಯ ಹಣರೂಪಿ ಆದಾಯ.

national morale: ರಾಷ್ಟ್ರೀಯ ಮನೋಸ್ಥೈರ್ಯ.

national output: ರಾಷ್ಟ್ರೀಯ ಉತ್ಪನ್ನ.

national party: ರಾಷ್ಟ್ರೀಯ ಪಕ್ಷ. ರಾಷ್ಟ್ರಾದ್ಯಂತ ಅಸ್ತಿತ್ವದಲ್ಲಿರುವ ಮತ್ತು ಮಾನ್ಯತೆ ಪಡೆದಿರುವ ಪಕ್ಷ. ಉದಾ: ಭಾರತದಲ್ಲಿ ಕಾಂಗ್ರೆಸ್ ಪಕ್ಷ, ಭಾರತೀಯ ಜನತಾ ಪಕ್ಷ, ಜನತಾದಳ, ಸಿ.ಪಿ.ಐ., ಸಿ.ಪಿ.ಐ. (ಯಂ) ಇತ್ಯಾದಿ.

national product: ರಾಷ್ಟ್ರೀಯ ಉತ್ಪನ್ನ. ಒಂದು ರಾಷ್ಟ್ರದಲ್ಲಿ ಒಂದು ವರ್ಷದಲ್ಲಿ ಉತ್ಪಾದನೆಯಾಗುವ ಎಲ್ಲಾ ವಸ್ತುಗಳ ಮೌಲ್ಯ.

national power: ರಾಷ್ಟ್ರಶಕ್ತಿ. ರಾಷ್ಟ್ರಗಳು ತಮ್ಮ ವಿವಿಧ ರಾಷ್ಟ್ರೀಯ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಬೇಕಾದ ಸಾಧನೋಪಾಯವೇ ರಾಷ್ಟ್ರೀಯ ಶಕ್ತಿ. ಉದಾ. ಭೌಗೋಳಿಕ ಪರಿಸರ, ಜನಸಂಖ್ಯೆ, ತಾಂತ್ರಿಕ ಜ್ಞಾನ, ಆರ್ಥಿಕ ಅಂಶ, ವಿಜ್ಞಾನ ಮತ್ತು ತಾಂತ್ರಿಕ ಜ್ಞಾನ, ನಾಯಕತ್ವ ಇತ್ಯಾದಿ.

national sample survey: ರಾಷ್ಟ್ರೀಯ ಮಾದರಿ ಸಮೀಕ್ಷೆ.

national saving scheme: ರಾಷ್ಟ್ರೀಯ ಉಳಿತಾಯ ಯೋಜನೆ.

national service scheme: ರಾಷ್ಟ್ರೀಯ ಸೇವಾ ಯೋಜನೆ.

national socialism: ರಾಷ್ಟ್ರೀಯ ಸಮಾಜವಾದ. ಸರಕಾರವೇ ರಾಷ್ಟ್ರದ ಆರ್ಥಿಕತೆಯನ್ನು ನಿಯಂತ್ರಿಸುವ ತತ್ವ.

national sovereignty: ರಾಷ್ಟ್ರೀಯ ಪರಮಾಧಿಕಾರ.

national symbol: ರಾಷ್ಟ್ರೀಯ ಲಾಂಛನ. ನೋಡಿ national emblem.

national trade: ರಾಷ್ಟ್ರೀಯ ವ್ಯಾಪಾರ. ಒಂದು ರಾಷ್ಟ್ರದೊಳಗೇ ನಡೆಯುವ ವ್ಯಾಪಾರ.

national wealth: ರಾಷ್ಟ್ರೀಯ ಸಂಪತ್ತು. ಒಂದು ರಾಷ್ಟ್ರದ ಪ್ರಜೆಗಳ ವೈಯಕ್ತಿಕ ಸಂಪತ್ತು ಮತ್ತು ಸಾಮಾಜಿಕ ಸಂಪತ್ತಿನ ಒಟ್ಟು ಮೌಲ್ಯ.

nationalism: ರಾಷ್ಟ್ರೀಯ ಮನೋಭಾವನೆ. ಒಂದು ರಾಷ್ಟ್ರದ ಪ್ರಜೆಗಳು ತಮ್ಮ ರಾಷ್ಟ್ರದ ಬಗ್ಗೆ ತೋರುವ ಅಭಿಮಾನ ಮತ್ತು ನಿಷ್ಠೆ.

nationalist: ರಾಷ್ಟ್ರ ಪಾರಮ್ಯವಾದಿ; ರಾಷ್ಟ್ರೀಯವಾದಿ.

nationality: ರಾಷ್ಟ್ರೀಯತೆ; ಪೌರತ್ವ.

nationalization: ರಾಷ್ಟ್ರೀಕರಣ. ಖಾಸಗಿ ಒಡೆತನ (ವಲಯ)ದಲ್ಲಿರುವ ಸಂಸ್ಥೆಗಳನ್ನು ಸರಕಾರದ ಒಡೆತನಕ್ಕೆ ತೆಗೆದುಕೊಂಡು ಅವುಗಳ ಸಂಪೂರ್ಣ ಸ್ವಾಮ್ಯವನ್ನು ಸರಕಾರವೇ ಪಡೆದಿರುವಂತೆ ಮಾಡುವುದು. ಉದಾ: ಭಾರತದಲ್ಲಿ ವಾಣಿಜ್ಯ ಬ್ಯಾಂಕುಗಳ ಮತ್ತು ಕೈಗಾರಿಕೆಗಳ ರಾಷ್ಟ್ರೀಕರಣ.

nationalized bank: ರಾಷ್ಟ್ರೀಕೃತ ಬ್ಯಾಂಕ್.

native: ಮೂಲನಿವಾಸಿ.

native ability : ಸ್ವಾಭಾವಿಕ ಶಕ್ತಿ; ಸಹಜ ಸಾಮರ್ಥ್ಯ.

native intelligence: ಜನ್ಮಜಾತ ಬುದ್ಧಿ ಶಕ್ತಿ; ಸಹಜಬುದ್ಧಿ.

native interest: ಜನ್ಮಜಾತ ಅಭಿರುಚಿ.

native trait: ಜನ್ಮಜಾತ ವಿಶಿಷ್ಟ ಗುಣ.

nativism: ದೇಶೀಯತೆ; ದೇಶೀಯ ವಾದ. ವಸಾಹತು ಪ್ರದೇಶದ ವಸಾಹತುದಾರರನ್ನು ಓಡಿಸಿ, ಸ್ಥಳೀಯರು ಅಧಿಕಾರ ಪಡೆದು ಸ್ಥಳೀಯ ಸಂಸ್ಕೃತಿಗೆ ಪುನರುಜ್ಜೀವನ ನೀಡುವ ಚಳುವಳಿ.

nativistic movement: ದೇಶೀಯ ಚಳುವಳಿ. ಸ್ಥಳೀಯ ಸಂಸ್ಕೃತಿಯ ಮರು ಚೇತನಕ್ಕಾಗಿ ನಡೆಯುವ ಹೋರಾಟ.

nativistic theory: ದೇಶೀಯತಾ ಸಿದ್ಧಾಂತ. ಶಬ್ದ ಮತ್ತು ಅರ್ಥದ ಮಧ್ಯೆ ಒಂದು ಗುಪ್ತ ಒಡಂಬಡಿಕೆ ಇರುತ್ತದೆ ಮತ್ತು ಮಾನವ ಭಾಷೆಯು ಆತನ ಹೊರ ಭಾವನೆಗಳನ್ನು ಉಚ್ಚರಿಸುವ ಕಾರಣದಿಂದ ಉಗಮಗೊಂಡಿತು ಎಂಬ ಸಿದ್ಧಾಂತ.

natural advantage: ನೈಸರ್ಗಿಕ ಅನುಕೂಲತೆ.

natural affection: ಸಹಜ ಅನುರಾಗ.

natural-born citizenship: ಜನ್ಮದತ್ತ ಪೌರತ್ವ.

natural check: ನೈಸರ್ಗಿಕ ಪ್ರತಿಬಂಧಕ. ಯಾವುದೇ ಅತಿ ಬೆಳವಣಿಗೆಯನ್ನು ಪ್ರಕೃತಿಯೇ ನಿರ್ಬಂಧಿಸುವುದು. ಉದಾ: ನೈಸ

ರ್ಗಿಕ ಉತ್ಪಾತಗಳು ಜನಸಂಖ್ಯಾಭಿವೃದ್ಧಿಯ ಪ್ರತಿಬಂಧಕಗಳಾಗಿ ಕ್ರಿಯಾತ್ಮಕತೆ ಹೊಂದಿವೆ ಯೆಂಬ ಕಲ್ಪನೆ.

natural divine right: ಸ್ವಾಭಾವಿಕ ದೈವೀ ಹಕ್ಕು; ಸ್ವಾಭಾವಿಕ ದೈವದತ್ತ ಹಕ್ಕು. ರಾಜ್ಯದ ಉಗಮದ ಬಗೆಗಿನ ದೈವೀ ಸಿದ್ಧಾಂತ ದಲ್ಲಿ ರಾಜನು ದೈವದತ್ತವಾಗಿ ಆಡಳಿತ ನಡೆಸುವ ಹಕ್ಕನ್ನು ಪಡೆದಿರುವುದರಿಂದ ಅವನನ್ನು ಪ್ರಶ್ನಿಸುವಂತಿಲ್ಲವೆಂಬ ಪ್ರತಿ ಪಾದನೆ.

natural economy: ನೈಸರ್ಗಿಕ ಆರ್ಥಿಕತೆ.

natural environment: ನೈಸರ್ಗಿಕ ಪರಿಸರ; ಸ್ವಾಭಾವಿಕ ಪರಿಸರ.

natural equality: ನೈಸರ್ಗಿಕ ಸಮಾ ನತೆ. ಜನ್ಮತಃ ಎಲ್ಲರೂ ಸಮಾನರೆಂಬ ನೆಲೆಯಲ್ಲಿ ಸಾಮಾಜಿಕ, ಆರ್ಥಿಕ ಅಸಮಾನತೆಗಳನ್ನು ಖಂಡಿಸುವ ಧೋರಣೆ.

natural family: ಸ್ವಾಭಾವಿಕ ಕುಟುಂಬ.

natural group: ಸ್ವಾಭಾವಿಕ ಸಮೂಹ. ನಿಶ್ಚಿತ ಉದ್ದೇಶಗಳಿಗಾಗಿ ಸ್ಥಾಪಿಸಲ್ಪಟ್ಟ ಗುಂಪುಗಳಿಗಿಂತ ಭಿನ್ನವಾಗಿ ಸಹಜ ಪರಿಸರ ದಲ್ಲಿ ಸ್ಥಾಪಿತವಾದ ಸಮೂಹ.

natural law: ನಿಸರ್ಗ ನಿಯಮ; ಸ್ವಾಭಾ ವಿಕ ಕಾನೂನು; ಜೈವಿಕ ನಿಯಮ.

natural liberty : ನೈಸರ್ಗಿಕ ಸ್ವಾತಂತ್ರ್ಯ. ಸಮಾಜ ಅಥವಾ ರಾಜ್ಯ ಸ್ಥಾಪನೆಯಾಗು ವುದಕ್ಕೆ ಮೊದಲು ಮಾನವರು ಅನುಭವಿಸು ತ್ತಿದ್ದ ಸ್ವಾತಂತ್ರ್ಯ.

natural monopoly: ಪ್ರಾಕೃತಿಕ ಏಕ ಸ್ವಾಮ್ಯ. ಒಬ್ಬ ವ್ಯಕ್ತಿ ಅಥವಾ ಒಂದು ದೇಶ ಯಾವುದಾದರೂ ನೈಸರ್ಗಿಕ ಸಂಪತ್ತನ್ನು ವಿಫುಲವಾಗಿ ಹೊಂದಿದ್ದು ಅದರ ಪೂರೈಕೆ, ಬಳಕೆಗಳ ಸಂಪೂರ್ಣ ನಿಯಂತ್ರಣವನ್ನು ಹೊಂದಿರುವುದು. ಉದಾ: ತೈಲ ಉತ್ಪಾದನೆ ಯಲ್ಲಿ ಅರಬ್ ರಾಷ್ಟ್ರಗಳ ನಿಯಂತ್ರಣ.

natural phenomena: ನೈಸರ್ಗಿಕ ಘಟನೆಗಳು.

natural proportion: ಸ್ವಾಭಾವಿಕ ಅನುಪಾತ.

natural price: ನೈಜ ಬೆಲೆ; ಸ್ವಾಭಾವಿಕ ಬೆಲೆ. ಉತ್ಪಾದನಾ ವೆಚ್ಚವನ್ನವಲಂಬಿಸಿ ನಿರ್ಧಾರಿತವಾಗುವ ಬೆಲೆ. ಇದು ಸ್ವಾಭಾವಿಕ ವಾದ ಲಾಭ, ಕೂಲಿ ಮತ್ತು ಗೇಣಿದರ ಗಳನ್ನು ಒಳಗೊಂಡಿರುತ್ತದೆ.

natural rate of interest: ನೈಜ ಬಡ್ಡಿದರ; ಸ್ವಾಭಾವಿಕ ಬಡ್ಡಿದರ.

natural rate of unemployment: ಸ್ವಾಭಾವಿಕ ದರದ ನಿರುದ್ಯೋಗ. ಅರ್ಥ ವ್ಯವಸ್ಥೆಯಲ್ಲಿ ಎಲ್ಲಾ ಮಾರುಕಟ್ಟೆಗಳು ಸಮ ತೋಲನ ಸ್ಥಿತಿಯಲ್ಲಿರುವಾಗಲೂ ಕಂಡು ಬರುವ ನಿರುದ್ಯೋಗದ ಮಟ್ಟ.

natural resources: ನೈಸರ್ಗಿಕ ಸಂಪನ್ಮೂಲಗಳು; ಪ್ರಾಕೃತಿಕ ಸಂಪನ್ಮೂಲ ಗಳು. ಜಗತ್ತಿನಲ್ಲಿ ಸಿಗುವ ನೈಸರ್ಗಿಕ ಸಂಪತ್ತಿನ ಮೂಲಗಳು. ಉದಾ: ಖನಿಜ ಗಳು, ಅರಣ್ಯಗಳು ಇತ್ಯಾದಿ.

natural right: ನೈಸರ್ಗಿಕ ಹಕ್ಕು; ಸ್ವಾಭಾವಿಕ ಹಕ್ಕು.

natural rights theory: ನೈಸರ್ಗಿಕ ಹಕ್ಕುಗಳ ಸಿದ್ಧಾಂತ. ಈ ಸಿದ್ಧಾಂತದ ಪ್ರಕಾರ ಹಕ್ಕುಗಳು ನಿಸರ್ಗದತ್ತವಾದವುಗಳು. ಕೃತಕವಾದವುಗಳಲ್ಲ. ವಿರುದ್ಧ ಪರಿಕಲ್ಪನೆ

ಗಾಗಿ ನೋಡಿ: legal theory of rights.

natural science: ಪ್ರಾಕೃತಿಕ ವಿಜ್ಞಾನ; ನೈಸರ್ಗಿಕ ವಿಜ್ಞಾನ. ಪ್ರಾಕೃತಿಕ ಪ್ರಪಂಚ ವನ್ನು ಅಧ್ಯಯನ ಮಾಡುವ ವಿಜ್ಞಾನಗಳು. ಉದಾ: ಭೌತಶಾಸ್ತ್ರ, ಜೀವಶಾಸ್ತ್ರ ಇತ್ಯಾದಿ.

natural selection: ನೋಡಿ: Darwinian theory of evolution.

natural stratification: ಸ್ವಾಭಾವಿಕ ಸ್ತರ ವಿನ್ಯಾಸ.

natural traits: ಸ್ವಾಭಾವಿಕ ಗುಣ ಲಕ್ಷಣಗಳು.

natural truth: ಸ್ವಾಭಾವಿಕ ಸತ್ಯ.

natural vegetation: ನೈಸರ್ಗಿಕ ವನಸ್ಪತಿ; ಪ್ರಾಕೃತಿಕ ವನಸ್ಪತಿ.

natural wealth : ನೈಸರ್ಗಿಕ ಸಂಪತ್ತು.

naturalism: ನಿಸರ್ಗವಾದ; ವಾಸ್ತವ ವಾದ.

naturalization: ಪ್ರಾಕೃತೀಕರಣ; ಪೌರಹಕ್ಕಿನ ನೀಡಿಕೆ; ದೇಶೀಯಗೊಳಿಸು ವಿಕೆ; ನಾಗರಿಕತ್ವ ಪ್ರಧಾನ.

naturalized citizenship: ಸಹಜೀ ಕೃತ ಪೌರತ್ವ.

naturality: ಸ್ವಾಭಾವಿಕತೆ.

nature: ಸ್ವರೂಪ-ಲಕ್ಷಣ; ಸ್ವಭಾವ ಲಕ್ಷಣ; ನಿಸರ್ಗ; ಪ್ರಕೃತಿ.

nature-nurture: ಪ್ರಕೃತಿ ಪೋಷಣೆ.

naturism: ಪ್ರಕೃತಿ ವಾದ; ನೈಸರ್ಗಿಕ ವಾದ.

naturo-cultural study: ಪ್ರಾಕೃತಿಕ ಸಾಂಸ್ಕೃತಿಕ ಅಧ್ಯಯನ.

naturopathy: ಪ್ರಕೃತಿ ಚಿಕಿತ್ಸೆ.

navigation law: ಹಡಗು ವ್ಯಾಪಾರ ಕಾಯ್ದೆ.

nazism: ನಾಝೀವಾದ. ಜರ್ಮನಿಯಲ್ಲಿ ಹಿಟ್ಲರನು ಪ್ರತಿಪಾದಿಸಿದ ಜರ್ಮನ್ ಜನಾಂಗವೇ ಶ್ರೇಷ್ಠವೆಂಬ ಸಿದ್ಧಾಂತ. ಪ್ರಜಾ ಪ್ರಭುತ್ವದ ನಿರಾಕರಣೆ, ಉಗ್ರವಾದ ಕಮ್ಯೂನಿಸಮ್ ವಿರೋಧ, ರಾಷ್ಟ್ರೀಯ ದುರಭಿಮಾನ ಹಾಗೂ ಜನಾಂಗ ಶ್ರೇಷ್ಠತಾ ವಾದ ಇವು ಈ ಸಿದ್ಧಾಂತದ ಮೂಲ ಲಕ್ಷಣ ಗಳಾಗಿದ್ದವು. ೧೯೩೩ರಲ್ಲಿ ಹಿಟ್ಲರ್‌ನ ನೇತೃತ್ವದಲ್ಲಿ ಜರ್ಮನಿಯಲ್ಲಿ ನಾಝೀ ಪಾರ್ಟಿಯು ಫ್ಯಾಸಿಸ್ಟ್ ಸರ್ವಾಧಿಕಾರವನ್ನು ಸ್ಥಾಪಿಸಿತು.

near money: ಸಮೀಪ ಹಣ. ತಾಂತ್ರಿಕ ವಾದ ಹಣವೆಂದು ಪರಿಗಣಿಸಲಾಗದಿದ್ದರೂ ಹಣದ ಕೆಲವು ಕಾರ್ಯಗಳನ್ನು ನೆರವೇರಿ ಸುವ ವಸ್ತು. ಉದಾ: ಹುಂಡಿ, ಬ್ಯಾಂಕ್ ಠೇವಣಿ.

necessaries of life: ಜೀವನಾ ವಶ್ಯಕಗಳು.

necromancy: ಪ್ರೇತವಿದ್ಯೆ; ಕಣ್ಕಟ್ಟು; ಯಕ್ಷಿಣಿ; ಇಂದ್ರಜಾಲ.

negation: ನಕಾರ; ನಿರಾಕರಣೆ.

negative: ನಕಾರಾತ್ಮಕ; ನಿಷೇಧಾತ್ಮಕ.

negative adaptation: ನಿರಾಕರಣಾ ತ್ಮಕ ಹೊಂದಾಣಿಕೆ.

negative after image: ವಿಷಮೋತ್ತರ ಬಿಂಬ; ವಿಷಮಾನು ಬಿಂಬ.

negative after sensation: ವಿಷಮೋ ತ್ತರ ಸಂವೇದನೆ.

negative approach: ನಕಾರಾತ್ಮಕ

ದೃಷ್ಟಿಕೋನ. ಸಮಸ್ಯೆಗಳ ವಸ್ತುನಿಷ್ಠ ಮತ್ತು ವ್ಯವಸ್ಥಿತ ಅಧ್ಯಯನಕ್ಕೆ ಪೂರಕವಾಗಿರದ ದೃಷ್ಟಿಕೋನ.

negative association: ವಿಷಮ ಸಾಹಚರ್ಯ.

negative attitude: ವಿರುದ್ಧ ಮನೋವೃತ್ತಿ.

negative behaviour: ನೇತ್ಯಾತ್ಮಕ ವರ್ತನೆ.

negative correlation: ವಿಷಮ ಸಹ ಸಂಬಂಧ; ನಿಷೇಧಾತ್ಮಕ ಸಹ ಸಂಬಂಧ.

negative fixation: ನಿಷೇಧಾತ್ಮಕ ಸ್ಥಿರೀಕರಣ.

negative function: ನಿಷೇಧಾತ್ಮಕ ಕಾರ್ಯ; ಋಣಾತ್ಮಕ ಕಾರ್ಯ. ನಷ್ಟ ಹಾಗೂ ಕೆಟ್ಟ ಪರಿಣಾಮಗಳನ್ನುಂಟು ಮಾಡುವ ಕಾರ್ಯ. ನೋಡಿ: dys function.

negative guidance: ವಿರುದ್ಧಾತ್ಮಕ ಮಾರ್ಗದರ್ಶನ.

negative incentives: ನಿಷೇಧಾತ್ಮಕ ಉತ್ತೇಜನಗಳು.

negative income: ಋಣಾತ್ಮಕ ಆದಾಯ. ಒಂದು ನಿರ್ದಿಷ್ಟ ಮಟ್ಟಕ್ಕಿಂತ ಕಡಿಮೆ ಆದಾಯವಿರುವವರಿಗೆ ಸರಕಾರವು ನೀಡುವ ಸಹಾಯ ಧನ.

negative income effect: ಋಣಾತ್ಮಕ ಆದಾಯ ಪರಿಣಾಮ. ಕೆಲವೊಂದು ಸಂದರ್ಭಗಳಲ್ಲಿ ವ್ಯಕ್ತಿಯ ಆದಾಯದಲ್ಲಿ ಬದಲಾವಣೆ ಉಂಟಾದರೂ ವಸ್ತುಗಳ ಮೇಲಿನ ಬೇಡಿಕೆಯ ಪ್ರಮಾಣದಲ್ಲಿ ಬದಲಾವಣೆ ಉಂಟಾಗದಿರುವ ಸ್ಥಿತಿ.

negative income tax: ಬಡತನ ಪರಿಹಾರ ಭತ್ಯೆ. ಜನರ ಬದುಕಿನ ಮಟ್ಟವು ಬಡತನ ರೇಖೆಗಿಂತ ಕೆಳಗೆ ಇಳಿಯದಂತೆ ಸರಕಾರವು ಬಡಜನರಿಗೆ ನೀಡುವ ಧನ ಸಹಾಯ. ಇದು ಅಮೇರಿಕಾದಲ್ಲಿ ಬಳಕೆಯಲ್ಲಿದ್ದ ಪರಿಕಲ್ಪನೆ. ಇಂಗ್ಲೆಂಡಿನಲ್ಲಿ ಇದನ್ನು 'reserve income tax' ಎನ್ನಲಾಗುತ್ತದೆ.

negative mores: ನಕಾರಾತ್ಮಕ ನೈತಿಕ ನಿಯಮಗಳು; ನಿಷೇಧಾತ್ಮಕ ನಿಯಮಗಳು.

negative reference group: ನಿರಾಕರಣಾತ್ಮಕ ಉಲ್ಲೇಖ ಸಮೂಹ. ಒಬ್ಬ ವ್ಯಕ್ತಿಯು ತನ್ನ ಸಮೂಹದ ನಿಯಮಗಳು ಹಾಗೂ ಚಟುವಟಿಕೆಗಳನ್ನು ವಿರೋಧಿಸುವ ಹಾಗೂ ತಿರಸ್ಕರಿಸುವ ನೆಲೆಗಳನ್ನು ತಿಳಿಯಲು ಉಪಯೋಗಿಸುವ ಉಲ್ಲೇಖ ಸಮೂಹ. ಸಮೂಹದ ಮೌಲ್ಯಗಳಿಗೆ ವಿರುದ್ಧವಾದ ವರ್ತನೆಯನ್ನು ಇದು ಪ್ರೇರೇಪಿಸುತ್ತದೆ.

negative sanction: ನಿಷೇಧಾತ್ಮಕ ಸಂಹಿತೆ; ನಿಷೇಧಾತ್ಮಕ ನಿರ್ಬಂಧ. ಪುರಸ್ಕಾರಕ್ಕಿಂತ ಶಿಕ್ಷೆಯೇ ಪ್ರಾಮುಖ್ಯವಾಗುಳ್ಳ ಸಂಹಿತೆ.

negative social control: ನಿಷೇಧಾತ್ಮಕ ಸಾಮಾಜಿಕ ನಿಯಂತ್ರಣ.

negative suggestion: ನಕಾರಾತ್ಮಕ ಸಲಹೆ; ನಿಷೇಧಾತ್ಮಕ ಸಲಹೆ.

negative wealth: ಋಣಾತ್ಮಕ ಸಂಪತ್ತು. ಉದಾ: ಸಾಲ, ಅಣುಬಾಂಬು, ಮದ್ಯ ಇತ್ಯಾದಿ.

negativism: ನಿಷೇಧವಾದ; ನಿರಾಕರಣವಾದ; ವಿರೋಧ ವರ್ತನೆ. ಸಾಮಾಜಿಕ ಸಂದರ್ಭದಲ್ಲಿ ಅಸಹಕಾರದ ಹಾಗೂ ಅನನುಸರಣೆಯ ಮನೋವೃತ್ತಿ.

neglected child: ನಿರ್ಲಕ್ಷಿತ ಶಿಶು; ಉಪೇಕ್ಷಿತ ಶಿಶು.

negotiable instrument: ಸಂಧಾನ ಯೋಗ್ಯ ಸಾಧನ. ಋಣದ ತೀರುವೆಗಾಗಿ ಒಬ್ಬರು ಇನ್ನೊಬ್ಬರಿಗೆ ನಿರಾಂತಕವಾಗಿ ಕೊಡಬಹುದಾದ, ಒಬ್ಬರಿಂದ ಇನ್ನೊಬ್ಬರು ಪಡೆಯಬಹುದಾದ ಹಕ್ಕುಪತ್ರ.

negotiation: ಸಂಧಾನ. ವಿಭಿನ್ನ ಹಿತಾ ಸಕ್ತಿಗಳನ್ನು ಹೊಂದಿರುವ ಸರಕಾರಗಳ ಅಥವಾ ಗುಂಪುಗಳ ಮಧ್ಯೆ ಸಾಮರಸ್ಯ ಸಾಧಿಸಲು ನಡೆಸುವ ಮಾತುಕತೆ.

negroid: ನಿಗ್ರೋಯಿಡ್; ನಿಗ್ರಿಡೋ ಜನಾಂಗದ ಗುಂಪಿನ ಲಕ್ಷಣಗಳುಳ್ಳ ಆಫ್ರಿಕಾದ ಒಂದು ಪ್ರಮುಖ ಮಾನವ ಪಂಗಡ. ಸಣ್ಣ ಕಿವಿ, ಕಪ್ಪು ಗುಂಗುರು ತಲೆ ಕೂದಲು, ಕಂದು ಕಪ್ಪು ಕಣ್ಣು, ಶರೀರದ ಮೇಲೆ ಕಡಿಮೆ ರೋಮ ಇತ್ಯಾದಿ ಈ ಜನಾಂಗದ ಲಕ್ಷಣಗಳು.

neighbourhood: ನೆರೆಹೊರೆ.

neighbourhood pattern: ನೆರೆಹೊರೆ ಮಾದರಿ.

neighbourhood school pattern: ನೆರೆಹೊರೆ ಶಾಲಾ ಪರಿಕಲ್ಪನೆ.

neo-asiatic: ನವ ಏಶಿಯಾದ. ಇತ್ತೀಚಿನ ದಿನಗಳಲ್ಲಿ ಏಷ್ಯಾಕ್ಕೆ ಸೇರಿದ ಮಧ್ಯ ಪ್ರಾಚ್ಯದ ಏಷಿಯಾಟಿಕ್ ಮುಂಗೋಲಿಡ್ ಉಪವಿಭಾಗ.

neo-behaviourism: ನವವರ್ತನ ವಾದ; ನವ ವ್ಯವಹಾರ ವಾದ.

neo-classical approach: ನವ ಸಾಂಪ್ರದಾಯಿಕ ಸಮೀಪನ.

neo-classical school: ನವ ಸಾಂಪ್ರದಾಯಿಕ ಪಂಥ.

neo-colonialism: ವಿನೂತನ ವಸಾಹತು ವಾದ; ನವವಸಾಹತು ವಾದ. ಸಾಮ್ರಾಜ್ಯ ಶಾಹಿ ಮತ್ತು ವರ್ಧಿಷ್ಣು ದೇಶಗಳ ನಡುವಣ ಸಂಬಂಧವು ಮರೆ ಮಾಚಿದ ಆರ್ಥಿಕ ಮತ್ತು ರಾಜಕೀಯ ನಿಯಂತ್ರಣದ ರೂಪದಲ್ಲಿ ಕಾಣಿಸಿಕೊಳ್ಳುವುದು.

neo-evolutionism: ನವವಿಕಾಸವಾದ. ಈ ಶತಮಾನದ ಮಧ್ಯಭಾಗದಲ್ಲಿ ಅಮೇರಿಕದಲ್ಲಿ ಪ್ರಚಲಿತವಿದ್ದ ನವೀಕರಿಸಿದ ವಿಕಾಸವಾದ.

neo- genesis: ಜ್ಞಾನೋತ್ಪತ್ತಿ; ಪುನರುತ್ಪತ್ತಿ; ಸಸ್ಯಗಳಲ್ಲಿ ಅಂಗಾಂಶಗಳ ಪುನರುತ್ಪತ್ತಿ.

neo-Hinduism: ನವ ಹಿಂದೂ ವಾದ. ಹಿಂದೂ ಧರ್ಮದಲ್ಲಿಯ ನವೋದಯ.

neo-individualism: ನವ ವ್ಯಕ್ತಿವಾದ.

neo-Kantianism: ನವ ಕ್ಯಾಂಟ್ ವಾದ. ೧೯ ಹಾಗೂ ೨೦ನೇ ಶತಮಾನದಲ್ಲಿ ಜರ್ಮನಿಯಲ್ಲಿ ಕ್ಯಾಂಟ್‌ನ ಸಿದ್ಧಾಂತಗಳನ್ನು ಪ್ರತಿಪಾದಿಸಿದ ತಾತ್ವಿಕ ಚಳವಳಿ.

neo-lithic age: ನವಶಿಲಾಯುಗ, ನೂತನ ಶಿಲಾಯುಗ. ಕ್ರಿಸ್ತಪೂರ್ವ ೧೦,೦೦೦ದ ಸುಮಾರಿಗೆ ಪ್ರಾರಂಭವಾದ ನೂತನ ಶಿಲಾಯುಗ. ಈ ಕಾಲದ ಮಾನವರು ಕಲ್ಲಿನ ಆಯುಧಗಳನ್ನು ತಿಕ್ಕಿ (ಮಸೆದು) ಹದಗೊಳಿಸುವ ವಿಧಾನವನ್ನು ಕಂಡುಹಿಡಿದುದರಿಂದ ನೂತನ ಶಿಲಾಯುಗ ಎಂದು ಹೆಸರು ಬಂದಿದೆ.

neo-local residence: ಹೊಸಸ್ಥಳ

ವಾಸ್ತವ್ಯ. ಮದುವೆಯಾದ ದಂಪತಿಗಳು ತಮ್ಮ ಹೆತ್ತವರ ಮನೆಯನ್ನು ತೊರೆದು ಹೊಸ ಮನೆ ಮಾಡುವ ಸಾಮಾಜಿಕ ಪದ್ಧತಿ.

neo-Muslim: ನವೀನ ಮುಸ್ಲಿಂ; ಪರಿವರ್ತನೆ ಹೊಂದಿದ ಮುಸ್ಲಿಂ.

neonatal mortality: ಶೈಶವಾವಸ್ಥೆಯ ಮರಣ.

neo positivism: ಹೊಸ ನಿಶ್ಚಿತವಾದ; ನವವಾಸ್ತವ ವಾದ.

neo-psycho-analysis: ನವ ಮನೋವಿಶ್ಲೇಷಣೆ.

nephew right: ಅಳಿಯನ ಹಕ್ಕು.

nepotism: ಸ್ವಜನ ಪಕ್ಷಪಾತ. ಸರಕಾರಿ ಅಧಿಕಾರಿಗಳು ಅಥವಾ ರಾಜಕೀಯ ಮುಖಂಡರು ತಮ್ಮ ಕುಟುಂಬವರ್ಗದವರಿಗೆ ಅಥವಾ ಹತ್ತಿರದ ಸಂಬಂಧಿಗಳಿಗೆ ಸರಕಾರದ ಅಧಿಕಾರ ಸ್ಥಾನಗಳನ್ನು ಅಥವಾ ಸರಕಾರದ ಸೌಲಭ್ಯಗಳನ್ನು ದೊರಕಿಸಿ ಕೊಡುವುದಕ್ಕಾಗಿ ಅಧಿಕಾರದ ದುರುಪಯೋಗ ಮಾಡುವುದು.

nervousness: ಗಾಬರಿ; ಅಧೀರತೆ; ಉದ್ವಿಗ್ನತೆ, ಭಯ, ಸುಸ್ತುಗಳಿಂದ ಕೂಡಿದ ಭಾವೋದ್ವೇಗದ ಸ್ಥಿತಿ.

net barter terms of trade: ನಿವ್ವಳ ವಿನಿಮಯ ವ್ಯಾಪಾರ ಷರತ್ತುಗಳು. ಹಿಂದಿನ ಮೂಲವರ್ಷವೊಂದರೊಡನೆ ತುಲನೆ ಮಾಡಿ ನಿರ್ದಿಷ್ಟ ವರ್ಷದ ಆಮದು ಮತ್ತು ರಫ್ತು ಬೆಲೆಗಳ ವ್ಯಾಪಾರದ ಕರಾರುಗಳು.

net domestic product: ನಿವ್ವಳ ಆಂತರಿಕ ಉತ್ಪನ್ನ. ಒಟ್ಟು ಆಂತರಿಕ ಉತ್ಪನ್ನದಿಂದ ಬಂಡವಾಳ ವೆಚ್ಚವನ್ನು ಕಳೆದಾಗ ಸಿಗುವ ಮೊತ್ತ.

net economic welfare: ನಿವ್ವಳ ಆರ್ಥಿಕ ಯೋಗಕ್ಷೇಮ. ನೋಡಿ: gross national product.

net income: ನಿವ್ವಳ ಆದಾಯ.

net interest: ನಿವ್ವಳ ಬಡ್ಡಿ. ಕೇವಲ ಬಂಡವಾಳದ ಉಪಯೋಗಕ್ಕೆ ಕೊಡುವ ಪ್ರತಿಫಲ.

net investment: ನಿವ್ವಳ ಹೂಟಿ.

net national product: ನಿವ್ವಳ ರಾಷ್ಟ್ರೀಯ ಉತ್ಪನ್ನ. ಸವಕಳಿ ವೆಚ್ಚವನ್ನು ಕಳೆದು ನಂತರದ ಎಲ್ಲಾ ಸರಕು ಹಾಗೂ ಸೇವೆಗಳ ಒಟ್ಟು ಮಾರುಕಟ್ಟೆ ಮೌಲ್ಯ.

net output based manpower projection: ನಿವ್ವಳ ಉತ್ಪನ್ನ ಆಧಾರಿತ ಜನಶಕ್ತಿ ಅಂದಾಜು. ವಿವಿಧ ಉತ್ಪಾದನಾ ವಲಯ ಮತ್ತು ಉಪವಲಯಗಳಿಗೆ ಲಾಭಾಂಶ ಗಳಿಕೆಯ ನೆಲೆಯಲ್ಲಿ ಭವಿಷ್ಯದಲ್ಲಿ ಬೇಕಾಗುವ ವಿವಿಧ ತಜ್ಞರ ಹಾಗೂ ನುರಿತ ಕಾರ್ಮಿಕರ ಬಗ್ಗೆ ಅಂದಾಜಿಸುವ ವಿಧಾನ.

net present value index method: ನಿವ್ವಳ ಪ್ರಸ್ತುತ ಮೌಲ್ಯದ ಸೂಚ್ಯಂಕ ವಿಧಾನ. ಇದು ಎಲ್ಲಾ ನಗದು ಪ್ರವಾಹದ ಪ್ರಸಕ್ತ ಮೌಲ್ಯ ಮತ್ತು ಯೋಜನೆಯ ಆರಂಭಿಕ ಹೂಟೆಯ ವ್ಯತ್ಯಾಸವನ್ನು ತಿಳಿಸುತ್ತದೆ.

net product: ನಿವ್ವಳ ಉತ್ಪನ್ನ.

net profit: ನಿವ್ವಳ ಲಾಭ. ಒಟ್ಟು ಲಾಭದಿಂದ ಎಲ್ಲಾ ಖರ್ಚುಗಳನ್ನು ಕಳೆದಾಗ ಅಂತಿಮವಾಗಿ ಉಳಿಯುವ ಲಾಭ.

net rate of return: ನಿವ್ವಳ ಪ್ರತಿಫಲ ದರ.

net reproduction rate: ನಿವ್ವಳ ಸಂತಾನೋತ್ಪತ್ತಿ ದರ. ಜನಸಂಖ್ಯೆಯ ಪ್ರವೃತ್ತಿಯನ್ನು ಅಭ್ಯಸಿಸುವ ಒಂದು ವಿಧಾನ. ಇದರ ಪ್ರಕಾರ ಕುಟುಂಬವೊಂದರಲ್ಲಿರುವ ಹೆಣ್ಣು ಮಕ್ಕಳ ಸಂಖ್ಯೆಯನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಒಂದು ಕುಟುಂಬದ ಹೆಣ್ಣುಮಕ್ಕಳ ಸರಾಸರಿ ಸಂಖ್ಯೆ ಒಂದು ಆದರೆ ನಿವ್ವಳ ಸಂತಾನೋತ್ಪತ್ತಿ ದರವು ಒಂದಕ್ಕೆ ಸಮ.

network of social relation: ಸಾಮಾಜಿಕ ಸಂಬಂಧಗಳ ಬಲೆ.

neuropsychiatry: ನರ ಮನೋ ವೈದ್ಯಶಾಸ್ತ್ರ.

neuropsychic: ನರಮನೋಜನ್ಯ.

neuropsychology: ನರ ಮನೋ ವಿಜ್ಞಾನ.

neurotic gambler: ನರವ್ಯಾಧಿ ಪೀಡಿತ ಜೂಜು ಕೋರ.

neurotic inhibition: ನರ ಸಂಬಂಧೀ ಅವರೋಧ.

neurotic symptom: ನರದೌರ್ಬಲ್ಯದ ರೋಗಲಕ್ಷಣ.

neurotic tendency: ದುರ್ಬಲ ಚಿತ್ತ ಪ್ರವೃತ್ತಿ.

neutral equilibrium: ತಟಸ್ಥ ಸಮ ತೋಲನ. ಸಮತೋಲನದಲ್ಲಿದ್ದ ಒಂದು ಘಟಕವು ಸ್ವಲ್ಪ ತೊಂದರೆಗೊಳಗಾಗಿ ತನ್ನ ಸಮತೋಲನ ಸ್ಥಿತಿಯನ್ನು ಕಳೆದುಕೊಂಡು ಹೊಸ ಸ್ಥಿತಿಗೆ ತಲುಪಿದಾಗ ಅದು ಅಲ್ಲಿಯೇ ಸಮತೋಲನ ಪಡೆದು ಉಳಿಯುವಂತಾ ಗುವ ಸನ್ನಿವೇಶ.

neutral money: ತಟಸ್ಥ ಹಣ.

neutral money policy: ತಟಸ್ಥ ಹಣದ ನೀತಿ.

neutral role: ತಟಸ್ಥ ಪಾತ್ರ.

neutrality: ತಟಸ್ಥ ಧೋರಣೆ; ತಾಟಸ್ಥ್ಯ ನೀತಿ.

neutrality of taxation: ತೆರಿಗೆಯ ತಾಟಸ್ಥ್ಯ.

neutralization: ತಟಸ್ಥೀಕರಣ. ತಾಟಸ್ಥ್ಯ ನೀತಿಯನ್ನು ಅನುಸರಿಸಿಕೊಂಡು ಬರುವುದು.

new deal policy: ಹೊಸ ಆರ್ಥಿಕ ಸುಧಾರಣಾ ನೀತಿ. ೧೯೩೩ರಲ್ಲಿ ಅಮೇರಿಕಾದ ಅಧ್ಯಕ್ಷರಾಗಿದ್ದ ಫ್ರಾಂಕ್ಲಿನ್ ರೊಸ್‌ವೆಲ್ಟ್‌ರು ಆರ್ಥಿಕ ಸುಧಾರಣೆ ಮತ್ತು ಸಾಮಾಜಿಕ ಭದ್ರತೆಯನ್ನು ಸಾಧಿಸುವ ಉದ್ದೇಶದಿಂದ ಜಾರಿಗೊಳಿಸಿದ ನೀತಿ.

new despotism: ನವೀನ (ನೂತನ) ನಿರಂಕುಶತ್ವ. ನಿಯೋಜಿತ ಶಾಸನಾಧಿಕಾರ (delegated legislation)ವು ಕೆಲವೊಂದು ದೋಷಗಳನ್ನು ಹೊಂದಿರುವುದರಿಂದ ಅದರ ಅಪಾಯುಗಳನ್ನು ವಿವರಿಸಿ ಲಾರ್ಡ್ ಹೀವರ್ಟ್ ಅದನ್ನು 'ನವ ನಿರಂಕುಶತ್ವ' ಎಂದು ಕರೆದಿದ್ದಾನೆ.

new imperialism: ನೂತನ ಸಾಮ್ರಾಜ್ಯ ಶಾಹಿ. ಆಧುನಿಕ ಪ್ರಪಂಚದಲ್ಲಿ ಪ್ರಬಲ ರಾಷ್ಟ್ರಗಳು (ಮುಂದುವರಿದ ರಾಷ್ಟ್ರಗಳು) ಹಿಂದುಳಿದ ರಾಷ್ಟ್ರಗಳಿಗೆ ಆರ್ಥಿಕ ನೆರವು ನೀಡುವ ನೆಪದಲ್ಲಿ ಅವುಗಳ ಆಂತರಿಕ ವ್ಯವಹಾರದಲ್ಲಿ ಹಸ್ತಕ್ಷೇಪ ಮಾಡುವುದನ್ನು ನೂತನ ಸಾಮ್ರಾಜ್ಯಶಾಹಿ ಎನ್ನಲಾಗುತ್ತದೆ.

new leftists: ನವ ವಾಮ ಪಂಥೀಯರು.

ಪುರೋಗಾಮಿ ಮಾರ್ಪಾಟುಗಳನ್ನು ಪ್ರತಿಪಾದಿಸುತ್ತಿರುವ ಯುವ ಬುದ್ಧಿಜೀವಿಗಳು ಮತ್ತು ವಿದ್ಯಾರ್ಥಿಗಳು ಜನಾಂಗಶ್ರೇಷ್ಠವಾದದ ಖಂಡನೆ ಹಾಗೂ ವಿಶ್ವವಿದ್ಯಾಲಯಗಳಲ್ಲಿ ಪ್ರಜಾಪ್ರಭುತ್ವದ ಕೊರತೆ ವಿರುದ್ಧ ಪ್ರತಿಭಟನೆಗಳೊಂದಿಗೆ ಅಮೆರಿಕದಲ್ಲಿ ಹುಟ್ಟಿಕೊಂಡ ನೂತನ ವಾಮಪಂಥೀಯರು. ಇವರು ಬೂರ್ಷುವಾ ಸಮಾಜದ ಮತ್ತು ಅದರ ಸಿದ್ಧಾಂತದ ಅನೇಕ ಅಂಶಗಳನ್ನು ಖಂಡಿಸಿದರು.

new middle class: ನವ ಮಧ್ಯಮ ವರ್ಗ.

niche burial: ಕುಂಡದಲ್ಲಿ ಶವ ಹೂಳುವುದು.

night mare: ಭಯಾನಕ ಸ್ವಪ್ನ, ಉದ್ವಿಗ್ನಗೊಳಿಸುವ ಭಯಂಕರ ಸ್ವಪ್ನಗಳು.

night terror: ರಾತ್ರಿ ದಿಗಿಲು; ಇರುಳು ಭೀತಿ.

night walking: ನಿದ್ರಾ ಸಂಚಾರ.

nihilist: ಸರ್ವಶೂನ್ಯವಾದಿ.

nihilistic delusion: ಶೂನ್ಯತಾ ವಿಭ್ರಾಂತಿ; ಎಲ್ಲವೂ ನಶ್ವರ ಎನ್ನುವ ಭ್ರಾಂತಿ.

nihilistic party: ಕ್ರಾಂತಿಕಾರಿ ಪಕ್ಷ. ನೈತಿಕ ಧಾರ್ಮಿಕ ರಂಗಗಳಲ್ಲಿದ್ದ ಹಿಂದಿನ ನಂಬಿಕೆಗಳನ್ನು ತೊಡೆದುಹಾಕಲು ರಷ್ಯಾದಲ್ಲಿ ಈ ಪಕ್ಷವು ಹುಟ್ಟಿಕೊಂಡಿತು.

niradhara: ಒಳ ಪ್ರದಕ್ಷಿಣ ಪಥವಿಲ್ಲದ ಗುಡಿ.

nirvana: ನಿರ್ವಾಣ. ಬೌದ್ಧರ ಪರಿಪೂರ್ಣತೆಯ ಅತ್ಯುನ್ನತ ಹಂತ.

nirvasita: ನಿರ್ವಸಿತ. ಸಮಾಜದಿಂದ ಹೊರಗೆ ಇಡಲ್ಪಟ್ಟಿರುವ ಶೂದ್ರರು, ಅಂತ್ಯಜರು.

nishka: ನಿಷ್ಕ. ಪ್ರಾಚೀನ ಕಾಲದಲ್ಲಿ ಮೌಲ್ಯದ ಘಟಕ. ನಂತರ ಈ ಪದವನ್ನು ಒಂದು ನಾಣ್ಯಕ್ಕೆ ಬಳಸಲಾಯಿತು.

nisidige- nisidikal: ಶಿಲ್ಪವುಳ್ಳ ಶಿಲೆ. ಜೈನ ಸಲ್ಲೇಖನ ವ್ರತಾಚರಣೆಯ ಮೂಲಕ ದೇಹತ್ಯಾಗ ಮಾಡಿದವರ ಸ್ಮಾರಕ ಶಾಸನ.

nobility: ಉದಾತ್ತ ಗುಣ; ಕುಲೀನತೆ. ಉತ್ತಮ ಅನುವಂಶೀಯ ಸ್ಥಾನಮಾನ, ಘನತೆ ಮತ್ತು ಅಧಿಕಾರ ಹೊಂದಿರುವ ಸಾಮಾಜಿಕ ವರ್ಗ.

noble savage: ಗಣ್ಯ ಅನಾಗರಿಕ; ಗಣ್ಯ ಅಸಂಸ್ಕೃತ. ನಾಗರಿಕತೆಯ ಕೆಡುಕುಗಳ ಅನುಭವವಿಲ್ಲದ ಸಹಜಸ್ಥಿತಿಯಲ್ಲಿದ್ದ ಪುರಾತನ ಮನುಷ್ಯ.

nobles: ಸರದಾರರು; ಪಾಳೆಯಗಾರರು; ಜಾಗೀರುದಾರರು.

no confidence motion: ಅವಿಶ್ವಾಸ ನಿರ್ಣಯ. ಅವಿಶ್ವಾಸ ಗೊತ್ತುವಳಿ. ಆಡಳಿತ ನಡೆಸುವ ಸರಕಾರ (ಮಂತ್ರಿ ಮಂಡಲ) ಸಮರ್ಪಕವಾಗಿ ಮತ್ತು ದಕ್ಷರೀತಿಯಿಂದ ಆಡಳಿತವನ್ನು ನಡೆಸದೇ ಇದ್ದಾಗ ಅದರ ವಿರುದ್ಧ ಅವಿಶ್ವಾಸವನ್ನು ಸೂಚಿಸಲು ಸ್ಪೀಕರ್‌ನ ಅನುಮತಿ ಪಡೆದು ಲೋಕಸಭೆಯ ಸದಸ್ಯರು ಮಂಡಿಸುವ ನಿರ್ಣಯ. ಈ ಅವಿಶ್ವಾಸ ನಿರ್ಣಯ ಬಹುಮತದಿಂದ ಅಂಗೀಕರಿಸಲ್ಪಟ್ಟರೆ ಆಡಳಿತಾರೂಢ ಸರಕಾರ ರಾಜೀನಾಮೆ ನೀಡಬೇಕಾಗುತ್ತದೆ.

no confidence vote: ಅವಿಶ್ವಾಸ ಮತ.

nomad: ಅಲೆಮಾರಿ.

nomadic tribe: ಅಲೆಮಾರಿ ಬುಡಕಟ್ಟು.

nomadics: ಅಲೆಮಾರಿ ಜನಾಂಗ.

nomadism: ಅಲೆಮಾರಿತನ. ಜೀವನಾಧಾರ ಪಡೆಯಲು ಜನಸಮೂಹದ ನಿಯಮಿತ, ಋತುಕಾಲಿಕ ಅಥವಾ ಆವರ್ತನೀಯ ಅಲೆತ.

nomenclature: ನಾಮಕರಣ ವ್ಯವಸ್ಥೆ.

nominal definition: ನಾಮಮಾತ್ರ ವ್ಯಾಖ್ಯೆ.

nominal executive: ನಾಮ ಮಾತ್ರದ ಕಾರ್ಯಾಧಿಕಾರಿ; ನಾಮ ಮಾತ್ರ ಕಾರ್ಯಾಂಗ. ಸಂಸದೀಯ ಸರಕಾರವು ನಾಮಮಾತ್ರ ಮತ್ತು ವಾಸ್ತವಿಕ ಎಂಬ ಎರಡು ಬಗೆಯ ಕಾರ್ಯಾಂಗ ಪ್ರಮುಖರನ್ನು ಹೊಂದಿರುತ್ತದೆ. ಈತನು ನಾಮ ಮಾತ್ರ ಇದ್ದು ಅವನ ಎಲ್ಲಾ ಅಧಿಕಾರಗಳನ್ನು ವಾಸ್ತವಿಕ ಕಾರ್ಯಾಂಗ ಚಲಾಯಿಸುತ್ತದೆ. ಉದಾ: ಭಾರತದಲ್ಲಿ ರಾಷ್ಟ್ರಾಧ್ಯಕ್ಷನ ಎಲ್ಲಾ ಅಧಿಕಾರಗಳನ್ನು ಮಂತ್ರಿಮಂಡಲ ಅವನ ಹೆಸರಿನಲ್ಲಿ ಚಲಾಯಿಸುವುದು.

nominal gross domestic product: ಸಾಂಕೇತಿಕ ಒಟ್ಟು ಆಂತರಿಕ ಉತ್ಪನ್ನ. ಚಾಲ್ತಿ ಬೆಲೆಯಲ್ಲಿ ಒಟ್ಟು ಆಂತರಿಕ ಉತ್ಪನ್ನದ ಮೌಲ್ಯ.

nominal income: ಸಾಂಕೇತಿಕ ಆದಾಯ. ಆದಾಯವನ್ನು ಚಾಲ್ತಿ ಬೆಲೆಯಲ್ಲಿ ವ್ಯಕ್ತಪಡಿಸಿದರೆ ಅದು ಸಾಂಕೇತಿಕ ಆದಾಯವೆಂದೆನಿಸಲ್ಪಡುತ್ತದೆ.

nominal leader: ನಾಮಮಾತ್ರ ನಾಯಕ. ಉದಾ: ಭಾರತದ ರಾಷ್ಟ್ರಾಧ್ಯಕ್ಷ.

nominal price: ಅತ್ಯಲ್ಪ ಬೆಲೆ; ನಾಮಮಾತ್ರ ಬೆಲೆ; ಸಾಂಕೇತಿಕ ಬೆಲೆ.

nominal value: ಸಾಂಕೇತಿಕ ಮೌಲ್ಯ. ಡಿಬೆಂಚರ್, ಶೇರು ಇತ್ಯಾದಿಗಳ ಮೇಲೆ ನಮೂದಿತವಾಗಿರುವ ಮಾರುಕಟ್ಟೆ ಮೌಲ್ಯಕ್ಕಿಂತ ಭಿನ್ನವಾಗಿರಬಹುದಾದ ಮೌಲ್ಯ.

nominal wage: ಸಾಂಕೇತಿಕ ಕೂಲಿ (ವೇತನ); ಧನವೇತನ. ಹಣದ ರೂಪದಲ್ಲಿ ಪಾವತಿ ಮಾಡಲಾಗುವ ವೇತನ.

nominated member: ನಾಮಕರಣ ಸದಸ್ಯ. ಸಂಸತ್ತಿಗೆ ರಾಷ್ಟ್ರಪತಿಯಿಂದ, ರಾಜ್ಯ ವಿಧಾನಸಭೆಗಳಿಗೆ ರಾಜ್ಯಪಾಲರಿಂದ ಅಥವಾ ಇನ್ನಿತರ ಆಡಳಿತ ಘಟಕಗಳಿಗೆ ನಾಮಕರಣಗೊಳ್ಳುವ ಸದಸ್ಯರು. ಇವರು ನೇರವಾಗಿ ಜನರಿಂದಲೇ ಆಯ್ಕೆಗೊಂಡ ಸದಸ್ಯರಾಗಿರುವುದಿಲ್ಲ.

nomination: ನಾಮಕರಣ. ನೋಡಿ: nominated member.

nomination paper: ಚುನಾವಣಾ ಅಭ್ಯರ್ಥನ ಪತ್ರ; ನಾಮಾಂಕನ ಪತ್ರ.

non-aggression: ಅನಾಕ್ರಮಣ; ಪರಸ್ಪರ ಯುದ್ಧವನ್ನು ಮಾಡದಿರುವುದು. ಎರಡು ರಾಷ್ಟ್ರಗಳ ಮಧ್ಯೆ ಉಂಟಾಗಬಹುದಾದ ದ್ವೇಷ ಭಾವನೆಯನ್ನು ತಪ್ಪಿಸುವ ಮೂಲಕ ಯುದ್ಧವನ್ನು ತಡೆಯುವ ನೀತಿ. ಭಾರತದ ಮಾಜಿ ಪ್ರಧಾನಿ ಜವಾಹರ್ ಲಾಲ್ ನೆಹರೂರವರು ತಮ್ಮ ಪಂಚಶೀಲ ತತ್ವಗಳಲ್ಲಿ ಇದನ್ನು ಅಳವಡಿಸಿದ್ದಾರೆ.

non-aligned countries: ಅಲಿಪ್ತ ರಾಷ್ಟ್ರಗಳು; ನಿರ್ಲಿಪ್ತ ರಾಷ್ಟ್ರಗಳು.

ಯಾವುದೇ ಮಿಲಿಟರಿ ರಾಜಕೀಯ ಕೂಟಗಳಿಗೂ ಸೇರದಿರುವ ರಾಷ್ಟ್ರಗಳು.

non-aligned movement: ಅಲಿಪ್ತ ನೀತಿ ಚಳವಳಿ. ಕಮ್ಯೂನಿಸ್ಟ್ ಮತ್ತು ಬಂಡವಾಳಶಾಹಿ ಮಿಲಿಟರಿ ಬಣಗಳಿಗೆ ಸೇರದೆ ಅಲಿಪ್ತವಾಗಿರುವ ದೇಶಗಳ ಒಕ್ಕೂಟದ ಚಳವಳಿ. ನೋಡಿ: policy of non-alignment.

non-aryans: ಆರ್ಯೇತರರು.

non-brahmin movement: ಬ್ರಾಹ್ಮಣೇತರರ ಆಂದೋಲನ; ಬ್ರಾಹ್ಮಣತ್ವದ ವಿರೋಧಿ ಚಳವಳಿ.

non-capitalist road of development: ಬಂಡವಾಳಶಾಹಿಯೇತರ ಅಭಿವೃದ್ಧಿ ಪಥ. ಮಾಜಿ ವಸಾಹತುಗಳು ಮತ್ತು ಅರೆ ವಸಾಹತುಗಳು, ಬಂಡವಾಳಶಾಹಿ ವ್ಯವಸ್ಥೆಯ ಘಟ್ಟದ ಹೊರತಾಗಿ ಬೇರೆ ಮಾರ್ಗಗಳಲ್ಲಿ ಸಮಾಜವಾದಕ್ಕೆ ಪರಿವರ್ತನೆ ಹೊಂದುವ ಐತಿಹಾಸಿಕ ಪ್ರಕ್ರಿಯೆ.

non- commissioned: ಸನ್ನದುರಹಿತ.

non- confidential: ಗೋಪ್ಯವಲ್ಲದ.

non-conformist: ಅನಂಗೀಕಾರಿ; ಒಪ್ಪಿ ನಡೆಯದವ. ಸಾಮಾಜಿಕ ಮೌಲ್ಯಗಳನ್ನು, ಆದರ್ಶಗಳನ್ನು ಒಪ್ಪದ ಹಾಗೂ ಅಂಗೀಕರಿಸದ ವ್ಯಕ್ತಿ.

non-conformity: ಅಸಾಂಗತ್ಯ; ವಿರೋಧ. ಒಂದು ನಿರ್ದಿಷ್ಟ ಸಂದರ್ಭದಲ್ಲಿ ಸಾಮಾಜಿಕ ನಿರೀಕ್ಷೆಗಿಂತ ಭಿನ್ನವಾದ ವರ್ತನೆ.

non-controllable cost: ಅನಿಯಂತ್ರಿತ ವೆಚ್ಚ.

non-co-operation movement: ಅಸಹಕಾರ ಚಳವಳಿ; ಅಸಹಕಾರ ಆಂದೋಲನ. ನಾಗರಿಕರು ತಮ್ಮ ಕರ್ತವ್ಯಗಳನ್ನು ಮಾಡುವುದನ್ನು ಸಾಮೂಹಿಕವಾಗಿ ನಿರಾಕರಿಸುವುದರ ಮೂಲಕ ಸರಕಾರಕ್ಕೆ ಪ್ರತಿರೋಧ ವ್ಯಕ್ತಪಡಿಸುವ ಕ್ರಮ. ಉದಾ: ತೆರಿಗೆಗಳನ್ನು ಪಾವತಿಸದಿರುವುದು.

non-criminal lunatic: ನಿರಪರಾಧೀ ಉನ್ಮತ್ತ.

non-developmental expenditure: ಅಭಿವೃದ್ಧಿಯೇತರ ವೆಚ್ಚ. ಅಭಿವೃದ್ಧಿಯೇತರ ಕಾರ್ಯಗಳಿಗಾಗಿ ಮಾಡುವ ವೆಚ್ಚ. ಉದಾ: ರಕ್ಷಣಾ ವೆಚ್ಚ; ಆಡಳಿತ ವೆಚ್ಚ.

non-directive: ಅನಿರ್ದೇಶಾತ್ಮಕ.

non-directive counselling: ಅನಿರ್ದೇಶನಾತ್ಮಕ ಪರಾಮರ್ಶೆ.

non-directive interview: ಅನಿರ್ದೇಶಿತ ಸಂದರ್ಶನ. ಸಂದರ್ಶಕನಿಗೆ ಪ್ರಶ್ನೆಗಳನ್ನು ಕೇಳಲು ಹೆಚ್ಚಿನ ಸ್ವಾತಂತ್ರ್ಯವಿದ್ದು ಆತನಿಗೆ ಪ್ರಾಮುಖ್ಯವೆಂದು ಕಂಡ ವಿಷಯಗಳ ಬಗ್ಗೆ ಚರ್ಚಿಸಬಹುದು. ಇಂಥ ಸಂದರ್ಶನದಲ್ಲಿ ತಯಾರಿಸಿದ ಪ್ರಶ್ನಾವಳಿ ಇರುವುದಿಲ್ಲ. ಸಂದರ್ಶಕನು ಕನಿಷ್ಟ ಪ್ರಶ್ನೆಗಳನ್ನು ಕೇಳಿ ಕೆಲವೇ ಸಲಹೆಗಳನ್ನು ನೀಡಿದರೂ ಹೆಚ್ಚಿನ ಮಾಹಿತಿ ಪಡೆಯುವ ವಿಧಾನ.

non-directive psychotherapy: ಅನಿರ್ದೇಶಿತ ಮನೋಚಿಕಿತ್ಸೆ. ಈ ವಿಧಾನದಲ್ಲಿ ರೋಗಿ ಹೆಚ್ಚು ಪ್ರಧಾನವಾದ ಪಾತ್ರ ವಹಿಸುತ್ತಾನೆ. ರೋಗಿಗೆ ಯಾವ ಅಡಚಣೆಯಿಲ್ಲದೆ ಆತ್ಮಾಭಿವ್ಯಕ್ತಿಗೆ ಮತ್ತು ಸ್ವನಿರ್ದೇಶನಕ್ಕೆ ಹೆಚ್ಚಿನ ಅವಕಾಶವಿದೆ.

non-directive therapy: ಅನಿರ್ದೇಶಾತ್ಮಕ ಚಿಕಿತ್ಸೆ.

non-durable consumer good: ಅಲ್ಪ ಬಾಳಿಕೆಯ ಅನುಭೋಗೀ ಸರಕು. ಉದಾ: ಹಾಲು, ಹಣ್ಣು, ತರಕಾರಿಗಳು.

non-economic good: ಆರ್ಥಿಕೇತರ ಸರಕು. ಉದಾ: ಗಾಳಿ, ನೀರು.

non-economic service: ಆರ್ಥಿಕೇತರ ಸೇವೆ. ಉದಾ: ಶಿಕ್ಷಣ ಹಾಗೂ ಸರಕಾರೀ ಕಚೇರಿಗಳ ಸೇವೆಗಳು.

non-elites: ಗಣ್ಯರಲ್ಲದವರು.

non-essential function: ಅನಗತ್ಯ ಕಾರ್ಯ; ಐಚ್ಛಿಕವಲ್ಲದ ಕಾರ್ಯ.

non-fraternal polyandry: ಭ್ರಾತ್ರೇ ತರ ಬಹುಪತಿತ್ವ; ಸೋದರೇತರ ಬಹು ಪತಿತ್ವ.

non-hierarchic: ಏಣಿ ಶ್ರೇಣಿ ಹೊಂದಿರದ.

non-human: ಮಾನವೇತರ.

non-institutional service: ಅಸಾಂಸ್ಥಿಕ ಸೇವೆ.

non-institutional source: ಅಸಾಂ ಸ್ಥಿಕ ಮೂಲ. ಕೃಷಿಕರು ತಮ್ಮ ಅಗತ್ಯಗಳಿಗೆ ಸಾಲ ಪಡೆಯುವ ಖಾಸಗಿ ಮೂಲಗಳು. ಉದಾ: ಸಾಹುಕಾರರು, ನೆಂಟರು, ಗೆಳೆಯರು ಇತ್ಯಾದಿ.

non-intervention: ಹಸ್ತಕ್ಷೇಪ ಮಾಡದಿರುವಿಕೆ. ಒಂದು ರಾಷ್ಟ್ರವು ಮತ್ತೊಂದು ರಾಷ್ಟ್ರದ ಆಂತರಿಕ ವ್ಯವಹಾರದಲ್ಲಿ ಹಸ್ತಕ್ಷೇಪ ಮಾಡದಿರುವುದು.

non-intervention policy: ಹಸ್ತಕ್ಷೇಪ ರಹಿತತೆಯ ನೀತಿ.

non-justiciable dispute: ನ್ಯಾಯಾಂಗೇತರ ವಿವಾದ. ನ್ಯಾಯಾಂಗ ನಿರ್ಣಯಕ್ಕೆ ಒಳಪಡದ ವಿವಾದ.

non-legal: ಕಾಯಿದೆಯೇತರ.

non-linear function: ವಕ್ರ ರೇಖಾ ಕಾರ್ಯ. ಪರಿವರ್ತಕಗಳ ಪರಸ್ಪರ ಸಂಬಂಧವನ್ನು ನಕ್ಷೆಯ ಮೇಲೆ ಮೂಡಿಸಿದಾಗ ಅವು ನಾನಾ ರೀತಿಯ ವಕ್ರರೇಖೆಗಳನ್ನು ವ್ಯಕ್ತಪಡಿಸುವುದಾದರೆ ಅದು ವಕ್ರರೇಖಾ ಕಾರ್ಯ ಎಂದೆನಿಸು ವುದು.

non-linear trend: ವಕ್ರರೇಖಾ ಪ್ರವೃತ್ತಿ; ಚದುರಿದ ಒಲವು. ನೋಡಿ. non-linear function.

non-literate culture: ಅನಕ್ಷರಸ್ಥ ಸಂಸ್ಕೃತಿ.

non-marginal change: ಸೀಮಾಂತೇತರ ಬದಲಾವಣೆ.

non-material culture: ಅಭೌತ ಸಂಸ್ಕೃತಿ; ಭೌತವಸ್ತು ರಹಿತ ಸಂಸ್ಕೃತಿ. ಉದಾ: ಮೌಲ್ಯಗಳು, ನೈತಿಕತೆ, ನಂಬಿಕೆಗಳು, ಕಾನೂನು, ಜ್ಞಾನ, ತಾಂತ್ರಿಕ ಕೌಶಲ್ಯಗಳು, ಭಾಷೆ ಇತ್ಯಾದಿ.

non-material reward: ಅಭೌತಿಕ ಪ್ರತಿಫಲ ಉದಾ: ಸಂತೋಷ, ಪುಣ್ಯ ಇತ್ಯಾದಿ.

non-member: ಸದಸ್ಯೇತರ.

non-monetary theory: ವಿತ್ತೇತರ ಸಿದ್ಧಾಂತ. ಹಣಕಾಸಿಗೆ ಸಂಬಂಧಿಸಿರದ ಸಿದ್ಧಾಂತ.

non-negotiable: ಸಂಧಾನ ರಹಿತ.

non-normative: ನಿಯಮೇತರ.

non-numerical variable: ನೋಡಿ: qualitative variable.

non-occupancy tenant: ಹಕ್ಕು ರಹಿತ

ಗೇಣಿದಾರ. ತಾವು ಸಾಗುವಳಿ ಮಾಡುವ ಜಮೀನಿನ ಮೇಲೆ ಶಾಶ್ವತ ಹಕ್ಕನ್ನು ಹೊಂದಿರದ ಗೇಣಿದಾರರು.

non-official: ಅನಧಿಕೃತ; ಅಧಿಕಾರೇತರ.

non-parliamentary: ಅಸಂಸದೀಯ.

non-participant observation: ಅಸಹಭಾಗೀ ಅವಲೋಕನ.

non-partisan: ಪಕ್ಷಾತೀತ; ಪಕ್ಷಪಾತ ರಹಿತ.

non-plan expenditure: ಯೋಜನೇತರ ವೆಚ್ಚ.

non-political: ರಾಜಕೀಯೇತರ.

non-price competition: ಬೆಲೆ ಯೇತರ ಸ್ಪರ್ಧೆ; ಬೆಲೆರಹಿತ ಪೈಪೋಟಿ.

non-probability sample: ಅಸಂಭವನೀಯ ಮಾದರಿ; ಅಸಂಭಾವ್ಯತೆಯ ಮಾದರಿ.

non-productive consumption: ಅನುತ್ಪಾದಕ ಅನುಭೋಗ.

non-proliferation treaty: ಶಸ್ತ್ರಾಸ್ತ್ರ ಪ್ರಸಾರತಡೆ ಒಪ್ಪಂದ. ಜಗತ್ತಿನಲ್ಲಿ ಅಣು ಶಸ್ತ್ರಾಸ್ತ್ರಗಳ ಸ್ಪರ್ಧೆಯನ್ನು ಕೊನೆಗೊಳಿಸಿ ನಿಶ್ಶಸ್ತ್ರೀಕರಣಕ್ಕೆ ಪ್ರಯತ್ನಿಸುವ ಉದ್ದೇಶದಿಂದ ೧೯೬೮ರಲ್ಲಿ ವಿಶ್ವಸಂಸ್ಥೆಯ ಕರೆಯಂತೆ ಮಾಡಲ್ಪಟ್ಟ ಒಪ್ಪಂದ.

non-random: ಅಯಾದೃಚ್ಛಿಕ; ಯಾದೃಚ್ಛಿಕವಲ್ಲದ.

non-recurring expenditure: ಅನಾವರ್ತಕ ವೆಚ್ಚ.

Non-Residential Indian (NRI): ಅನಿವಾಸೀ ಭಾರತೀಯ.

non-sanskritic: ಸಂಸ್ಕೃತೇತರ.

non-sensory experience: ಅಸಂವೇದೀ ಅನುಭವ.

non-sensory recall: ಅಸಂವೇದೀ ಪುನಃಸ್ಮರಣೆ.

non-social: ಸಮಾಜೇತರ; ಅಸಾಮಾಜಿಕ.

non-sororal polygyny: ಭಗಿನೇತರ ಬಹುಪತ್ನಿತ್ವ.

non-structured interview: ಅರಚಿತ ಸಂದರ್ಶನ.

non-substitution theorem: ಪ್ರತಿನಿದಾನ ರಹಿತತೆಯ ಪ್ರಮೇಯ. ವಸ್ತುಗಳ ಸ್ಪರ್ಧಾತ್ಮಕ ಬೆಲೆಗಳು ಅವುಗಳ ಬೇಡಿಕೆಯನ್ನವಲಂಬಿಸದೆ ಕೇವಲ ತಾಂತ್ರಿಕತೆ ಮತ್ತು ಉತ್ಪಾದನಾ ವೆಚ್ಚಗಳ ಆಧಾರದಲ್ಲಿ ನಿರ್ಧಾರಗೊಳ್ಳುವ ಪ್ರಮೇಯ.

non-tax revenue: ತೆರಿಗೆಯೇತರ ಆದಾಯ. ತೆರಿಗೆಗಳ ಹೊರತಾಗಿ ಇತರ ಮೂಲಗಳಿಂದ ಸರಕಾರ ಪಡೆಯುವ ಆದಾಯ. ಉದಾ: ಆಡಳಿತ ಆದಾಯ, ಸಾರ್ವಜನಿಕ ಸಂಸ್ಥೆ ಮತ್ತು ಆಸ್ತಿಗಳ ಆದಾಯ.

non-territorial group: ಅಪ್ರಾದೇಶಿಕ ಸಮೂಹ.

non-transferable expenditure: ವರ್ಗಾಯಿಸಲಾಗದ ವೆಚ್ಚ. ಉದಾ: ಆಡಳಿತ ನಿರ್ವಹಣೆಗೆ ತಗಲುವ ವೆಚ್ಚ.

non-verbal communication: ಅಶಾಬ್ದಿಕ; (ಶಾಬ್ದಿಕವಲ್ಲದ) ಸಂವಹನ.

non-verbal illustration: ಅಶಾಬ್ದಿಕ ದೃಷ್ಟಾಂತ, ಮೌಖಿಕೇತರ ವಿವರಣೆ.

non-violence: ಅಹಿಂಸೆ.

non-violent civil disobedience: ಅಹಿಂಸಾತ್ಮಕ ಕಾನೂನು ಭಂಗ.

non-violent coercion: ಅಹಿಂಸಾತ್ಮಕ ಬಲಪ್ರಯೋಗ.

nordic: ಶುದ್ಧ ಆರ್ಯ ಕುಲಕ್ಕೆ ಸೇರಿದ.

no-rent land: ಗೇಣಿರಹಿತ ಭೂಮಿ; ತೆರಿಗೆರಹಿತ ಭೂಮಿ.

normal behaviour: ಸಾಮಾನ್ಯ ನಡತೆ; ಸಾಮಾನ್ಯ ವರ್ತನೆ.

normal child: ಸಾಮಾನ್ಯ ಮಗು.

normal distribution: ಸಾಮಾನ್ಯ ವಿತರಣೆ; ಸಹಜ ವಿತರಣೆ.

normal inventory: ಸಾಧಾರಣ ದಾಸ್ತಾನು.

normal market rate: ಸಾಮಾನ್ಯ ಮಾರುಕಟ್ಟೆ ದರ.

normal mind: ಸಾಮಾನ್ಯ ಮನಸ್ಸು; ಸ್ವಸ್ಥ ಮನ.

normal price: ಸಾಮಾನ್ಯ ಬೆಲೆ; ಸಹಜ ಬೆಲೆ. ಮಾರುಕಟ್ಟೆಯಲ್ಲಿ ದೀರ್ಘಾವಧಿಯಲ್ಲಿ ಬೇಡಿಕೆ ಮತ್ತು ಪೂರೈಕೆಗಳು ಸಂದಾಯವಾದಾಗ ನಿರ್ಧರಿಸಲ್ಪಡುವ ಬೆಲೆ.

normal profit: ಸಾಮಾನ್ಯ ಲಾಭ.

normal psychology: ಸಾಮಾನ್ಯ ಮನೋವಿಜ್ಞಾನ.

normative: ನಿಯಮಾತ್ಮಕ; ಪ್ರಮಾ ಣಕ.

normative approach: ನಿಯಮಾ ತ್ಮಕ ಸಮೀಪನ.

normative economics: ನಿಯಮಾತ್ಮಕ ಅರ್ಥಶಾಸ್ತ್ರ. ಏನಾಗಿದೆ ಎಂಬುದರ ಬದಲಾಗಿ ಏನಾಗಿರಬೇಕು ಎಂಬುದನ್ನು ವಿವರಿಸುವ ಅರ್ಥಶಾಸ್ತ್ರದ ವಿಭಾಗ.

normative ideology: ಆದರ್ಶ ವಿಚಾರಧಾರೆ.

normative integration: ನಿಯಮಾತ್ಮಕ ಸಮಗ್ರತೆ.

normative method: ನಿಯಮಾತ್ಮಕ ವಿಧಾನ.

normative order: ನಿಯಮಾತ್ಮಕ ವ್ಯವಸ್ಥೆ.

normative pattern: ನಿಯಮಾತ್ಮಕ ಮಾದರಿ (ನಮೂನೆ). ಒಂದು ಸಮೂಹದ ಸದಸ್ಯರು ಹೊಂದಿರುವ ಅಂತರಸಂಬಂಧಗಳ ಸಾಮಾಜಿಕ ನಿಯಮಗಳು.

normative science: ನಿಯಮಾತ್ಮಕ ವಿಜ್ಞಾನ, ನೀತಿಬೋಧಕ ವಿಜ್ಞಾನ ಏನಾಗಿದೆ ಎಂಬುದರ ಬದಲಾಗಿ ಏನಾಗಿರಬೇಕೆಂಬುದನ್ನು ತಿಳಿಸುವ ವಿಜ್ಞಾನ ವಿಭಾಗ. ಉದಾ: ತತ್ವಶಾಸ್ತ್ರ.

normative score: ನಿಯಮಾತ್ಮಕ ಪ್ರಾಪ್ತಾಂಕ. ಜನಸಂಖ್ಯಾ ವಿತರಣೆಯ ಆಧಾರದ ಮೇಲೆ ವಿವರಿಸಲಾದ ಪ್ರಾಪ್ತಾಂಕ.

normative study: ನಿಯಮಾತ್ಮಕ ಅಧ್ಯಯನ; ಮೌಲ್ಯಾಧಾರಿತ ಅಧ್ಯಯನ.

normative system: ನಿಯಮಾತ್ಮಕ ವ್ಯವಸ್ಥೆ; ಆದರ್ಶ ನಿರ್ಧಾರದ ವ್ಯವಸ್ಥೆ.

normative theory: ನಿಯಮಾತ್ಮಕ ಸಿದ್ಧಾಂತ.

normative theory of public expenditure: ಸಾರ್ವಜನಿಕ ವೆಚ್ಚದ ನೈತಿಕ ಸಿದ್ಧಾಂತ.

normless suicide: ನೋಡಿ: anomic suicide.

normlessness: ನಿಯಮರಹಿತತೆ. ನೋಡಿ: anomie.

norms: ನಿಯಮಗಳು; ಪ್ರಮಾಣಕಗಳು.

norms and sanctions: ನಿಯಮಗಳು ಮತ್ತು ಅಂಗೀಕಾರಗಳು.

North Atlantic Treaty Organization (NATO): ನೇಟೋ ಸೇನಾ ಕೂಟ (೪.೪.೧೯೪೯). ಸಮಾಜವಾದಿ ದೇಶಗಳ ಮತ್ತು ರಾಷ್ಟ್ರೀಯ ವಿಮೋಚನಾ ಚಳವಳಿಗಳ ವಿರುದ್ಧದ ಬಂಡವಾಳಶಾಹಿ ರಾಜ್ಯಗಳ ಒಂದು ಮಿಲಿಟರಿ ಮತ್ತು ರಾಜಕೀಯ ಮೈತ್ರಿಕೂಟ.

nosophobia: ವ್ಯಾಧಿ ಭೀತಿ; ರೋಗ ಬಂದೀತೆಂಬ ಭೀತಿ.

nostalgia: ೧. ಮನೆಯ ಹಂಬಲದ ರೋಗ. ಏಕಾಕಿ ಭಾವನೆ. ನೋಡಿ: home sickness. ೨. ಗತ ಸಂಸ್ಕೃತಿಯ ಗೀಳು.

notification: ಅಧಿಸೂಚನೆ.

notified area: ಅಧಿಸೂಚಿತ ಕ್ಷೇತ್ರ.

novice: ಆರಂಭಿಗ. ಸಾಂಸ್ಕೃತಿಕ ಆಚರಣೆಗಳಿಗೆ ಹೊಸದಾಗಿ ಪ್ರವೇಶ ಮಾಡುವ ಅನನುಭವಿ.

nubility: ಸ್ತ್ರೀಯ ವಿವಾಹಯೋಗ್ಯತೆ. ಪ್ರಾಯ ಮತ್ತು ಶಾರೀರಿಕ ಬೆಳವಣಿಗೆಯ ನೆಲೆಯಿಂದ ಒಂದು ಹೆಣ್ಣು ಹೊಂದುವ ವಿವಾಹ ಯೋಗ್ಯತೆ.

nuclear family: ವಿಭಕ್ತ ಕುಟುಂಬ; ಅಣು ಕುಟುಂಬ. ಮದುವೆಯಾದ ದಂಪತಿಗಳು ಮತ್ತು ಅವರ ಮಕ್ಕಳು ಮಾತ್ರ ಪ್ರತ್ಯೇಕವಾಗಿ ವಾಸಿಸುವ ಕುಟುಂಬ.

nuclear free zone: ಅಣ್ವಸ್ತ್ರ ಮುಕ್ತ ವಲಯ. ಪರಮಾಣು ಅಸ್ತ್ರಗಳನ್ನು ತಯಾರಿಸದಿರುವ ಅಥವಾ ನಿಯುಕ್ತಿಗೊಳಿಸದಿರುವ ಪ್ರದೇಶ.

nuclear position: ಮೂಲಸ್ಥಾನ; ಕೇಂದ್ರಸ್ಥಾನ.

nuclear test ban treaty: ಪರ ಮಾಣು ಪರೀಕ್ಷಾ ನಿಷೇಧ ಒಪ್ಪಂದ.

nuclear war: ಪರಮಾಣು ಯುದ್ಧ. ಆಧುನಿಕ ಜಗತ್ತಿನ ಯುದ್ಧದ ಒಂದು ವಿಧ. ಇದರಲ್ಲಿ ಪರಮಾಣು ಅಸ್ತ್ರಗಳ ಬಳಕೆಯಾಗುತ್ತದೆ.

nucleated city: ಕೇಂದ್ರೀಕೃತ ನಗರ.

nucleated settlement: ನೋಡಿ: clustered settlement.

null hypothesis: ಶೂನ್ಯ ಪ್ರಾಕ್‌ಕಲ್ಪನೆ. ಎರಡು ಅಥವಾ ಅದಕ್ಕಿಂತ ಹೆಚ್ಚು ಸಮೂಹಗಳ ನಡುವೆ ನಿರ್ದಿಷ್ಟ ಪರಿವರ್ತಕಗಳಲ್ಲಿ ಯಾವುದೇ ಗಣನೀಯ ವ್ಯತ್ಯಾಸಗಳಿಲ್ಲ ಅಥವಾ ಅಭ್ಯಸಿಸುವ ಪರಿವರ್ತಕಗಳ ನಡುವೆ ಯಾವುದೇ ಸಂಬಂಧವಿಲ್ಲ ಎಂದು ಹೇಳುವ ಪ್ರಾಕ್‌ಕಲ್ಪನೆ.

nullification: ಅನೂರ್ಜಿತತೆ.

numismatics: ನಾಣ್ಯಶಾಸ್ತ್ರ.

nuptial birth rate: ವೈವಾಹಿಕ ಜನನ ದರ. ಒಂದು ನಿರ್ದಿಷ್ಟ ಜನಸಂಖ್ಯೆಯಲ್ಲಿ ೧೫ ರಿಂದ ೪೪ ವರ್ಷ ವಯೋಮಿತಿಯ ಮದುವೆಯಾದ ಹೆಂಗಸರಿಗೆ ಒಂದು ವರ್ಷದಲ್ಲಿ ಹುಟ್ಟುವ ಜೀವಂತ ಮಕ್ಕಳ ಸಂಖ್ಯೆ.

nuptiality: ಶೋಭನ ಪ್ರಮಾಣತೆ. ಒಂದು ಜನಸಂಖ್ಯೆಯಲ್ಲಿ ಮದುವೆಯ ಪ್ರಮಾಣವು ಆ ಜನಸಂಖ್ಯೆಯ ಜನನ ದರವನ್ನು ನಿರ್ಧರಿಸುತ್ತದೆ. ಅಂತೆಯೇ ಸಾಮಾಜಿಕ ಸಂಬಂಧ ಹಾಗೂ ಕೌಟುಂಬಿಕ ರಚನೆಯನ್ನು ಮದುವೆಯ ಸ್ವರೂಪವು ನಿರ್ಧರಿಸುತ್ತದೆ.

nursery rhymes: ಶಿಶುಗೀತೆಗಳು. ಮಕ್ಕಳ ಆಟ ಪಾಠಗಳ ಹಿನ್ನಲೆಯಲ್ಲಿ ಹೇಳುವ, ಕಲಿಸುವ-ಕಲಿಯುವ ಹಾಡು ಗಳು. ಈ ಹಾಡುಗಳಲ್ಲಿ ಶಿಕ್ಷಣ ಮತ್ತು ಮನ ರಂಜನೆಯನ್ನು ಏಕಕಾಲದಲ್ಲಿ ಕೊಡಬಲ್ಲ ಕಲೆಗಾರಿಕೆ ಇರುತ್ತದೆ.

nurture: ಪಾಲನೆ; ಪೋಷಣೆ.

nutrition: ಪೌಷ್ಠಿಕತೆ.

nyaya: ನ್ಯಾಯ. ಪ್ರಾಚೀನ ಭಾರತದ ಆರು ಪ್ರಮುಖ ದಾರ್ಶನಿಕ ಪಂಥಗಳ ಲ್ಲೊಂದು.

nyctophobia: ನಿಶಾಭೀತಿ. ರಾತ್ರಿ ಮತ್ತು ಕತ್ತಲೆಯ ಭೀತಿ.

nymphomania: ಸ್ತ್ರೀ ಕಾಮೋನ್ಮಾದ; ಸ್ತ್ರೀ ಕಾಮಾತಿರೇಕ; ಹೆಂಗಸರಲ್ಲಿ ಕಂಡು ಬರುವ ಅತಿ ಕಾಮಾಸಕ್ತಿ.

O

oath of allegiance: ನಿಷ್ಠಾ ಪ್ರಮಾಣ ವಚನ.

oath of secrecy: ರಹಸ್ಯ ಪಾಲನಾ ಪ್ರಮಾಣ ವಚನ; ಗೋಪ್ಯತೆಯ ಪ್ರಮಾಣ ವಚನ.

object: ವಸ್ತು; ವಿಷಯ; ಗುರಿ; ಜ್ಞೇಯ.

object blindness: ವಸ್ತು ಅಂಧತೆ; ವಸ್ತ್ವಂಧತೆ.

object consciousness: ವಸ್ತು ಪ್ರಜ್ಞೆ; ವಿಷಯ ಬೋಧೆ.

object libido: ವಸ್ತು ವಾಂಛೆ.

object of consciousness: ಪ್ರಜ್ಞಾ ವಸ್ತು; ಪ್ರಜ್ಞಾ ವಿಷಯ.

object of emotion: ಭಾವಾವಿಷಯ; ಸಂವೇಗ ವಸ್ತು.

object of experience: ಅನುಭವ ವಿಷಯ; ಅನುಭವಿತ ವಸ್ತು.

object of thought: ಚಿಂತನ ವಿಷಯ; ಚಿಂತನ ವಸ್ತು.

object permanence: ವಸ್ತುವಿನ ಚಿರ ಸ್ಥಾಯಿತ್ವ. ಒಬ್ಬ ವ್ಯಕ್ತಿಯು ಒಂದು ವಸ್ತು ವನ್ನು ನೋಡದೇ ಅಥವಾ ಅನುಭವಿಸದೇ ಆತನ ಮನಸ್ಸಿನಲ್ಲಿ ಅದರ ಬಗ್ಗೆ ರೂಪು ಗೊಂಡ ಚಿರಕಲ್ಪನೆ.

objectification: ವಾಸ್ತವೀಕರಣ; ವಿಷಯೀಕರಣ.

objective: ವಸ್ತು ನಿಷ್ಠ; ವಾಸ್ತವಿಕ; ವಸ್ತು ಗತ; ವಿಷಯ ನಿಷ್ಠ.

objective analysis: ವಸ್ತುನಿಷ್ಠ ವಿಶ್ಲೇಷಣೆ.

objective approach: ವಸ್ತುನಿಷ್ಠ ದೃಷ್ಟಿಕೋನ. ಒಂದು ಸನ್ನಿವೇಶದ ಬಗ್ಗೆ ಸಾಂಸ್ಕೃತಿಕ ಅಥವಾ ಸಮೂಹ ಮೌಲ್ಯ ಮಾಪನ ಮಾಡುವಾಗ ವೈಯಕ್ತಿಕ ಆಸಕ್ತಿ ಅಥವಾ ಪಕ್ಷಪಾತವನ್ನು ಸಂಪೂರ್ಣ ಹಿಡಿತ ದಲ್ಲಿಟ್ಟುಕೊಳ್ಳುವುದು.

objective condition of equilib rium: ಸಮತೋಲನದ ವಸ್ತುನಿಷ್ಠ ಷರತ್ತು. ಯಾವುದೇ ವಸ್ತುವಿನ ಪೂರೈಕೆಯು ಅದರ

ಬೇಡಿಕೆಗೆ ಸಮವಾಗುವಂತೆ ಅದರ ಬೆಲೆಯನ್ನು ನಿಗದಿಪಡಿಸಬೇಕೆಂಬ ಷರತ್ತು.

objective control: ವಾಸ್ತವಿಕ ನಿಯಂತ್ರಣ; ವಿಷಯನಿಷ್ಠ ನಿಯಂತ್ರಣ.

objective correlation: ವಸ್ತುನಿಷ್ಠ ಸಹಸಂಬಂಧ.

objective criteria: ವಸ್ತುನಿಷ್ಠ ಪ್ರಮಾಣ; ವಸ್ತುನಿಷ್ಠ ಅಂಶ.

objective data: ವಸ್ತುನಿಷ್ಠ ಮಾಹಿತಿ; ವಸ್ತುನಿಷ್ಠ ದತ್ತ.

objective element: ವಸ್ತುನಿಷ್ಠ ಅಂಶ.

objective evidence: ವಸ್ತುನಿಷ್ಠ ಪುರಾವೆ; ವಾಸ್ತವಿಕ ಸಾಕ್ಷ್ಯ.

objective factor: ವಾಸ್ತವಿಕ ಕಾರ ಕಾಂಶ; ವಿಷಯಗತ ಕಾರಕ.

objective imagery: ವಾಸ್ತವಿಕ ಬಿಂಬಾವಳಿ.

objective index: ವಸ್ತುನಿಷ್ಠ ಸೂಚಿ.

objective judgement: ವಸ್ತುನಿಷ್ಠ ನಿರ್ಣಯ.

objective measurement: ವಸ್ತುನಿಷ್ಠ ಮಾಪನ.

objective psychology: ವಸ್ತುನಿಷ್ಠ ಮನೋವಿಜ್ಞಾನ.

objective sensation: ವಾಸ್ತವಿಕ ಸಂವೇದನೆ.

objective social class: ವಸ್ತುನಿಷ್ಠ ಸಾಮಾಜಿಕ ವರ್ಗ. ಆದಾಯ, ಉದ್ಯೋಗ, ಶಿಕ್ಷಣ ಮುಂತಾದ ವಸ್ತುನಿಷ್ಠ ಪ್ರಮಾಣ ಅಥವಾ ಒರೆಗಲ್ಲುಗಳ ಮೂಲಕ ನಿರ್ಧರಿಸಲಾಗುವ ಸಾಮಾಜಿಕ ವರ್ಗ.

objective spirit: ಜ್ಞೇಯ ಚೈತನ್ಯ; ವಾಸ್ತವಿಕ ಆತ್ಮ.

objective standardized test: ವಸ್ತುನಿಷ್ಠ ಪ್ರಾಮಾಣೀಕೃತ ಪರೀಕ್ಷೆ.

objective study: ವಸ್ತುನಿಷ್ಠ ಅಧ್ಯಯನ.

objective theory: ವಾಸ್ತವಿಕ ಸಿದ್ಧಾಂತ; ವಸ್ತುನಿಷ್ಠ ಸಿದ್ಧಾಂತ.

objective thinking: ವಾಸ್ತವಿಕ ಚಿಂತನೆ.

objective value: ವಾಸ್ತವ ಮೌಲ್ಯ.

objective resolution: ವಸ್ತುನಿಷ್ಠ ಠರಾವು. ಕೆಲವೊಂದು ಗುರಿಗಳನ್ನು ಅಥವಾ ಯೋಜನೆಗಳನ್ನು ನಿರ್ದೇಶಿಸುವ ನಿರ್ಣಯ (ಠರಾವು).

objectivism: ವಸ್ತುನಿಷ್ಠ ವಾದ; ವಿಷಯನಿಷ್ಠವಾದ. ಮಾನವನ ಪ್ರಜ್ಞೆಗೆ ನಿಲುಕುವ ಹೊರತಾಗಿಯೂ ವಸ್ತುಗಳಿಗೆ ಅವುಗಳದೇ ಆದ ಅಸ್ತಿತ್ವವಿದೆಯೆಂಬ ತತ್ವಶಾಸ್ತ್ರೀಯ ದೃಷ್ಟಿಕೋನ.

objectivity: ವಸ್ತುನಿಷ್ಠತೆ; ವಾಸ್ತವತ್ವ; ವಿಷಯನಿಷ್ಠತೆ.

objectless emotion: ವಸ್ತುರಹಿತ ಸಂವೇಗ.

obligation: ಋಣ; ಹಂಗು; ಬಂಧನ; ಉಪಕಾರಭಾರ.

obligatory attendance: ಅನಿವಾರ್ಯ ಹಾಜರಿ.

obligatory expenditure: ಅತ್ಯವಶ್ಯಕವಾದ ವೆಚ್ಚ. ಒಂದು ದೇಶದ ಸರಕಾರ ಅವಶ್ಯಕವಾಗಿ ಮಾಡಲೇಬೇಕಾದ ವೆಚ್ಚ. ಉದಾ: ಸಾಲಮರುಪಾವತಿ, ವೃದ್ಧಾಪ್ಯ ವೇತನ ಇತ್ಯಾದಿ.

obligatory jurisdiction: ಕಡ್ಡಾಯ ಕ್ಷೇತ್ರಾಧಿಕಾರ; ಅನಿವಾರ್ಯ ಕಾರ್ಯವ್ಯಾಪ್ತಿ.

obliviousness: ವಿಸ್ಮರಣಾ ಪ್ರವೃತ್ತಿ; ವಿಸ್ಮರಣ ಶೀಲತೆ.

obscurantism: ಜ್ಞಾನವಿರೋಧ ವಾದ; ಅಜ್ಞಾನ ವಾದ.

observation: ಅವಲೋಕನ; ವೀಕ್ಷಣೆ. ಅಧ್ಯಯನಕ್ಕಾಗಿ ಸಂಶೋಧಕನು ವಸ್ತು, ವ್ಯಕ್ತಿ ಅಥವಾ ವಿಷಯವನ್ನು ಅವಲೋಕಿ ಸುವುದು.

observation method: ಅವಲೋಕನ ವಿಧಾನ.

observation technique: ಅವ ಲೋಕನ ತಂತ್ರ.

observational learning: ಅವ ಲೋಕನ ಕಲಿಕೆ. ಇನ್ನೊಬ್ಬ ವ್ಯಕ್ತಿಯನ್ನು ಅವಲೋಕಿಸುವುದರ ಮೂಲಕ ಅರ್ಜಿಸಿದ ವರ್ತನೆ.

observer agreement: ಅವಲೋಕಕ ಒಪ್ಪಂದ.

observer involvement: ಅವಲೋಕಕ ತನ್ಮಯತೆ.

obsession: ಚಿತ್ತಪೀಡೆ; ಮನೋಗ್ರಸ್ತತೆ.

obsession compulsion: ಗೀಳಿನ ಒತ್ತಡ; ಚಿತ್ತಪೀಡಾತ್ಮಕ ಒತ್ತಡ. ಇದ ರಿಂದಾಗಿ ಜ್ಞಾಪಕ ಶಕ್ತಿಯ ಕೊರತೆ, ಅರ್ಥ ವಿಲ್ಲದ ಭಯ ಇತ್ಯಾದಿ ಪರಿಣಾಮಗಳಾಗು ತ್ತವೆ.

obsessional neurosis: ಚಿತ್ತ ಪೀಡಾತ್ಮಕ ನರವ್ಯಾಧಿ.

obsessive compulsive reaction: ಚಿತ್ತಪೀಡಾತ್ಮಕ ಒತ್ತಡದ ಪ್ರತಿಕ್ರಿಯೆ; ಗೀಳು ಚಟದ ಪ್ರತಿಕ್ರಿಯೆ; ಕಾರ್ಯ ಒತ್ತಡದ ಪ್ರತಿಕ್ರಿಯೆ.

obsolete law: ಬಳಕೆಯಲ್ಲಿಲ್ಲದ ಶಾಸನ; ಅಪ್ರಚಲಿತ ಶಾಸನ.

obstruction method: ಪ್ರತಿಬಂಧಕ ವಿಧಾನ.

occassional criminal: ಪ್ರಾಸಂಗಿಕ (ಸಾಂದರ್ಭಿಕ) ಅಪರಾಧಿ.

occult phenomenon: ಐಂದ್ರಜಾಲಿಕ ಘಟನೆ; ರಹಸ್ಯ ಘಟನೆ; ಗೂಢ ಘಟನೆ.

occultism: ಐಂದ್ರಜಾಲಿಕ ವಿದ್ಯೆ; ಗುಹ್ಯ ವಿದ್ಯಾವಾದ; ಗುಪ್ತವಿದ್ಯೆ.

occupancy right: ಸ್ವಾಧೀನ ಹಕ್ಕು.

occupancy tenant: ಹಕ್ಕುದಾರ ಗೇಣಿ ದಾರ; ಹಕ್ಕುಳ್ಳ ಗೇಣಿದಾರ. ಜಮೀನುದಾರ ರಿಂದ ಗೇಣಿ ಸಾಗುವಳಿಗಾಗಿ ಪಡೆದಿರುವ ಜಮೀನಿನ ಮೇಲೆ ಶಾಶ್ವತ ಗೇಣಿ ಹಕ್ಕನ್ನು ಹೊಂದಿರುವ ಗೇಣಿದಾರ.

occupation: ಉದ್ಯೋಗ; ವೃತ್ತಿ.

occupational categories: ಉದ್ಯೋ ಗದ ವಿಧಗಳು; ವೃತ್ತಿ ವಿಧಗಳು.

occupational choice: ಉದ್ಯೋಗದ ಆಯ್ಕೆ; ವೃತ್ತಿಯಾಯ್ಕೆ.

occupational classification: ಔದ್ಯೋಗಿಕ ವರ್ಗೀಕರಣ; ವೃತ್ತಿ ವರ್ಗೀ ಕರಣ.

occupational composition: ಔದ್ಯೋಗಿಕ ರಚನೆ. ಉದ್ಯೋಗಗಳಿಗನು ಗುಣವಾಗಿ ಹಂಚಲ್ಪಟ್ಟ ಜನಸಂಖ್ಯಾ ರಚನೆ.

occupational counselling:

ವೃತ್ತ್ಯಾತ್ಮಕ ಮಾರ್ಗದರ್ಶನ; ಔದ್ಯೋಗಿಕ ಉಪಬೋಧನೆ.

occupational culture: ವೃತ್ತಿ ಸಂಸ್ಕೃತಿ; ವೃತ್ತಿ ವಿಶೇಷವಾದ ಸಂಸ್ಕೃತಿ. ಒಂದು ನಿರ್ದಿಷ್ಟ ವೃತ್ತಿಯ ಜನರು ಬೆಳೆಸಿಕೊಳ್ಳುವ ಹಾಗೂ ಆ ವೃತ್ತಿಗೆ ಹೊಸದಾಗಿ ಬಂದವರಿಗೆ ವರ್ಗಾಯಿಸುವ ಉಪಸಂಸ್ಕೃತಿ ಲಕ್ಷಣಗಳು. ಉದಾ: ಕಸುಬಿಗೆ ಸಂಬಂಧಿಸಿದ ನಂಬುಗೆಗಳು, ಕೌಶಲ್ಯಗಳು, ವಿಶೇಷ ಭಾಷೆ ಇತ್ಯಾದಿ.

occupational differential association: ವೃತ್ತಿ ಕ್ಷೇತ್ರದಲ್ಲಿ ವ್ಯತ್ಯಸ್ಥ ಒಡನಾಟ. ತನ್ನ ಉದ್ಯೋಗ ಕ್ಷೇತ್ರದಲ್ಲೇ ಅಥವಾ ಅದಕ್ಕೆ ಸಂಬಂಧಿಸಿದ ಪೂರಕ ಉದ್ಯೋಗ ಕ್ಷೇತ್ರದಲ್ಲೇ ಗೆಳೆಯರನ್ನು ಹುಡುಕಿಕೊಳ್ಳುವ ಜನರ ಪ್ರವೃತ್ತಿ.

occupational distance: ಉದ್ಯೋಗಗಳ ಅಂತರ. ಸ್ಥಾನಮಾನ ಹಾಗೂ ಘನತೆ ಗೌರವಗಳ ಆಧಾರದ ಮೇಲೆ ಕಂಡುಬರುವ ವಿವಿಧ ಉದ್ಯೋಗಿಕ ವರ್ಗಗಳ ನಡುವಿನ ಅಂತರ.

occupational distribution of population: ಜನಸಂಖ್ಯೆಯ ವೃತ್ತಿಪರ ವಿತರಣೆ. ನೋಡಿ: occupational composition.

occupational group: ಔದ್ಯೋಗಿಕ ಸಮೂಹ. ಒಂದೇ ರೀತಿಯ ಉದ್ಯೋಗ ಮಾಡುವ ಸದಸ್ಯರ ಸಮೂಹ.

occupational hazard: ಔದ್ಯೋಗಿಕ ಅಪಾಯ.

occupational hierarchy: ಉದ್ಯೋಗಗಳ ಏಣಿ ಶ್ರೇಣಿ; ವೃತ್ತಿಯ ಏಣಿ ಶ್ರೇಣಿ. ಸ್ಥಾನಮಾನ, ಆದಾಯ ಮುಂತಾದವುಗಳ ಆಧಾರದ ಮೇಲೆ ಉದ್ಯೋಗಗಳ ಶ್ರೇಣೀಕರಣ.

occupational level: ಔದ್ಯೋಗಿಕ ಮಟ್ಟ.

occupational mobility: ಔದ್ಯೋಗಿಕ ಚಲನೆ.

occupational movement: ನೋಡಿ: occupational mobility.

occupational neurosis: ವೃತ್ತಿ ಮನೋಬೇನೆ. ಉದ್ಯೋಗಕ್ಕೆ ಅವಶ್ಯಕ ವಾದ ಸಾಮರ್ಥ್ಯಗಳಲ್ಲೇ ಕಂಡುಬರುವ ದೋಷ. ಮನೋಬೇನೆಯ ಒಂದು ರೂಪ. ಮುಖ್ಯ ಚಿಹ್ನೆಯೆಂದರೆ ರೋಗಿ ತನ್ನ ಉದ್ಯೋಗಕ್ಕೆ ಬೇಕಾದ ಕಾರ್ಯಕೌಶಲ್ಯವನ್ನು ಶಾರೀರಿಕ ಕಾರಣದಿಂದಾಗಿ ಕಳೆದುಕೊಳ್ಳುವುದು. ಉದಾ: ಬರಹಗಾರನ ಕೈ ನಡುಕ.

occupational pattern: ಉದ್ಯೋಗ ಗಳ ವಿನ್ಯಾಸ.

occupational prestige: ಔದ್ಯೋಗಿಕ ಸ್ಥಾನಮಾನ. ಸಾಮಾಜಿಕ ಚಲನೆ ಹಾಗೂ ಸ್ಥಾನಮಾನದ ರಚನೆಯ ಅಧ್ಯಯನವು ವಿವಿಧ ಉದ್ಯೋಗಗಳ ಸಾಪೇಕ್ಷ ಸ್ಥಾನವನ್ನು ನಿರ್ಧರಿಸುತ್ತದೆ.

occupational psychology: ಔದ್ಯೋಗಿಕ ಮನೋವಿಜ್ಞಾನ.

occupational research: ವೃತ್ತಿ ಸಂಶೋಧನೆ.

occupational sociology: ಉದ್ಯೋಗ ಸಮಾಜಶಾಸ್ತ್ರ. ಸಮಾಜಶಾಸ್ತ್ರದ ತತ್ವಗಳನ್ನು ವೃತ್ತಿ ಹಾಗೂ ಉದ್ಯೋಗಗಳ ವಿಶ್ಲೇಷಣೆಗೆ ಅನ್ವಯಿಸುವುದು.

occupational structure: ವೃತ್ತಿ

ವಿನ್ಯಾಸ. ಒಂದು ಸಮುದಾಯ ಅಥವಾ ಸಮಾಜದಲ್ಲಿರುವ ವಿವಿಧ ವೃತ್ತಿಗಳ ಜನರ ನಡುವಿನ ಸಮಾಂತರ ಹಾಗೂ ಲಂಬಾಂತರ ಸಂಬಂಧಗಳ ರಚನೆ.

occupational therapy: ವೃತ್ತಿ ಚಿಕಿತ್ಸೆ. ಕೆಲಸದ ಮೂಲಕ ಚಿಕಿತ್ಸೆ ಕೊಡುವುದು.

ochlocracy: ದೊಂಬಿಜನರ ಪ್ರಭುತ್ವ; ದಬ್ಬಾಳಿಕೆಯ ಪ್ರಭುತ್ವ.

octroi duty: ಆಕ್ಟ್ರಾಯಿ ಸುಂಕ; ಪ್ರವೇಶ ಸುಂಕ. ಪಟ್ಟಣದೊಳಕ್ಕೆ ಬರುವ ಸಾಮಾನುಗಳ ಮೇಲೆ ವಿಧಿಸುವ ಸ್ಥಳೀಯ ಸುಂಕ (ತೆರಿಗೆ).

odd-even reliability: ಬೆಸ-ಸರಿ ವಿಶ್ವಸನೀಯತೆ; ವಿಷಮಸಮ ವಿಶ್ವಸನೀಯತೆ.

oedeipal and latency stage: ಮಾತೃ ಕಾಮನೆಯ ಮತ್ತು ಭಾವಸುಪ್ತಿಯ ಹಂತ. ಸಮಾಜೀಕರಣದ ಹಂತಗಳಲ್ಲಿ ಮೂರನೆಯದು. ಇದು ಮಗುವಿಗೆ ಸುಮಾರು ಮೂರು ವರ್ಷದಿಂದ ಹದಿನೈದು ವರ್ಷಗಳ ಪ್ರಾಯದಲ್ಲಿ ಜರಗುವ ಕ್ರಿಯೆ. ಸುಮಾರು ಆರು ಏಳು ವರ್ಷಗಳವರೆಗೆ ಮಾತೃಕಾಮನೆಯ ಹಂತವಿದ್ದು ನಂತರದ ಹಂತದಲ್ಲಿ ವಿರುದ್ಧ ಲಿಂಗಿಗಳ ಬಗೆಗಿನ ಒಲವು ಅಪ್ರಕಟಿತವಾಗಿರುತ್ತದೆ. ಆದರೆ ಪ್ರಕಟಿತವಾಗಿ ಹುಡುಗ-ಹುಡುಗಿಯರು ಪರಸ್ಪರ ತಿರಸ್ಕಾರ ದ್ವೇಷ ವ್ಯಕ್ತಪಡಿಸುವುದಿದೆ. ಏನಿದ್ದರೂ ಇದು ಸಾಂಸ್ಕೃತಿಕವಾಗಿ ನಿಯಂತ್ರಿಸಲ್ಪಟ್ಟ ಪ್ರಕ್ರಿಯೆಯಾಗಿದೆ. ಅಂದರೆ ಕೆಲವು ಸಂಸ್ಕೃತಿಗಳಲ್ಲಿ ಕಾಣಿಸದೆಯೂ ಇರಬಹುದು.

oedipus complex: ಈಡಿಪಸ್ ಲಕ್ಷಣ; ಮಾತೃ ಕಾಮನೆ. ಮಗನು ತಾಯಿಯ ಬಗ್ಗೆ ಪ್ರೀತಿಯನ್ನೂ, ತಂದೆಯ ಬಗ್ಗೆ ದ್ವೇಷವನ್ನೂ ಹೊಂದಿರುತ್ತಾನೆಂಬ ಸಂಕೀರ್ಣ ಗುಣ.

oestrus: ಈಸ್ಟ್ರಸ್; ಅತ್ಯಾವೇಶ; ಹುಚ್ಚಾಟ; ಮದ.

offender: ಅಪರಾಧಿ. ಕಾನೂನು ಮತ್ತು ಸಮಾಜದಿಂದ ಅಪರಾಧ ಆರೋಪಿಸಲ್ಪಟ್ಟಾತ.

offensive expression: ಆಕ್ಷೇಪಾರ್ಹ ಮಾತು; ಆಕ್ಷೇಪಾರ್ಹ ಭಾವಪ್ರಕಟಣೆ.

offer curve: ನೀಡಿಕೆ ರೇಖೆ. ಒಂದು ದೇಶವು ಇನ್ನೊಂದು ದೇಶದೊಂದಿಗೆ ವಸ್ತು ವಿನಿಮಯ ಒಪ್ಪಂದಕ್ಕೆ ಬರುವಾಗ ಒಂದು ವಸ್ತುವಿನ ನಿಗದಿತ ಪ್ರಮಾಣಕ್ಕೆ ಇನ್ನೊಂದು ವಸ್ತುವನ್ನು ಎಷ್ಟು ಪ್ರಮಾಣದಲ್ಲಿ ವಿನಿಮಯ ಮಾಡಿಕೊಳ್ಳಬಹುದೆಂಬ ಮೌಲ್ಯ ನಿಗದೀಕರಣದ ವ್ಯತ್ಯಸ್ಥತೆಯನ್ನು ಗುರುತಿಸುವ ರೇಖೆ.

office bearer: ಪದಾಧಿಕಾರಿ.

office machinery: ಆಡಳಿತ ಯಂತ್ರ.

office memorandum: ಕಛೇರಿ ಜ್ಞಾಪನಾ ಪತ್ರ.

office of profit: ಲಾಭದಾಯಕ ಹುದ್ದೆ.

official language: ಆಡಳಿತ ಭಾಷೆ.

official receiver: ಅಧಿಕೃತ ಆಸ್ತಿ ನಿರ್ವಾಹಕ. ದಿವಾಳಿಯಾದವನ ವ್ಯವಹಾರಗಳನ್ನು ಪರಿಸಮಾಪ್ತಿಗೊಳಿಸುವ ಕಾರ್ಯದ ನಿರ್ವಹಣೆಗಾಗಿ ನೇಮಕವಾಗುವವನು.

official version: ಸರಕಾರಿ ವ್ಯಾಖ್ಯಾನ; ಅಧಿಕೃತ ಹೇಳಿಕೆ.

oikotype: ಪ್ರಾದೇಶಿಕ ಗುಣವನ್ನು ಪಡೆದು ಕೊಂಡ ಮಾದರಿ.

old common law: ಪುರಾತನ ಸಾಮಾನ್ಯ ಕಾನೂನು.

old middle class: ಹಳೆಯ ಮಧ್ಯಮ ವರ್ಗ.

old stone age: ಪ್ರಾಚೀನ ಶಿಲಾಯುಗ.

old Testament: ಹಳೆಯ ಒಡಂಬಡಿಕೆ. ಕ್ರಿಶ್ಚಿಯನ್ ಮತದ ಆರಂಭಿಕ ಧರ್ಮ ಗ್ರಂಥ.

olfactionary hallucination: ವಾಸನಾಗ್ರಹಣ ವಿಭ್ರಮೆ; ವಿಚಿತ್ರ ವಾಸನೆ ಗಳ ವಿಭ್ರಮೆ.

oligarchic military rule: ಸೈನಿಕ ಶಕ್ತಿಯ ಅಲ್ಪಜನಾಧಿಪತ್ಯ.

oligarchic party: ಶ್ರೀಮಂತರ ಪಕ್ಷ. ಅಲ್ಪಜನ ಶ್ರೀಮಂತ ವರ್ಗಕ್ಕೆ ಸೇರಿದವರ ಪಕ್ಷ.

oligarchy: ಅಲ್ಪಜನಾಧಿಪತ್ಯ; ಧನ ವಂತರ ಅಧಿಪತ್ಯ. ಅಧಿಕ ಆರ್ಥಿಕ ಶಕ್ತಿ ಕೇಂದ್ರೀಕೃತ ವಾಗಿರುವ ಕೆಲವೇ ಜನರ ಒಂದು ಸಣ್ಣ ಗುಂಪಿನಿಂದ ರಾಜ್ಯಾಧಿಕಾರದ ಚಲಾವಣೆ.

oligopoly: ಬಹುಜನಸ್ವಾಮ್ಯ. ಮಾರು ಕಟ್ಟೆಯಲ್ಲಿ ಎರಡಕ್ಕಿಂತ ಅಧಿಕ ಉತ್ಪಾದ ಕರು ಅಥವಾ ಮಾರಾಟಗಾರರಿರುವ ಸನ್ನಿವೇಶ.

oligopoly with product differe ntiation: ವಸ್ತುಪ್ರಭೇದವುಳ್ಳ ಹಲಜನ ಸ್ವಾಮ್ಯ. ಕಾರ್ಖಾನೆಗಳು ಅನೇಕ ರೀತಿಯ ವಸ್ತುಗಳನ್ನು ಉತ್ಪಾದಿಸುವುದರಿಂದಾಗಿ ಏಕಸ್ವಾಮ್ಯದ ಸಾಧ್ಯತೆಗಳಿಲ್ಲದಿರುವುದು.

oligopoly without product diff erentiation: ವಸ್ತುಪ್ರಭೇದವಿರದ ಬಹುಜನ ಸ್ವಾಮ್ಯ. ಕಾರ್ಖಾನೆಗಳು ಒಂದೇ ರೀತಿಯ ವಸ್ತುಗಳನ್ನು ಉತ್ಪಾದಿಸುವು ದರಿಂದಾಗಿ ಬೆಲೆಗಳಲ್ಲಿ ಅನಿಶ್ಚಿತತೆಯಿರುವ ಪರಿಸ್ಥಿತಿ.

oligopsony: ಹಲವು ಗ್ರಾಹಕರ ಮಾರು ಕಟ್ಟೆ. ಮಾರುಕಟ್ಟೆಯಲ್ಲಿ ಹಲವು ಮಂದಿ ಗ್ರಾಹಕರಿರುವ ಸನ್ನಿವೇಶ.

olla burial: ಭಕ್ಷ್ಯ ಶವ ಸಂಸ್ಕಾರ. ಸತ್ತ ವ್ಯಕ್ತಿಯ ಪ್ರಿಯವಾದ ಭಕ್ಷ್ಯಗಳನ್ನು ಮಣ್ಣಿನ ಗಡಿಗೆಗಳಲ್ಲಿ ಹಾಕಿ ಶವದೊಂದಿಗೆ ಆಳವಾದ ಹಗೇವುಗಳಲ್ಲಿ ಹೂಳುವುದು.

ommission to pay: ಪಾವತಿ ತಪ್ಪಿಸುವಿಕೆ.

omnipotence: ಸರ್ವಶಕ್ತಿತ್ವ; ಅನಂತ ಶಕ್ತಿ.

oneirology: ಸ್ವಪ್ನ ಶಾಸ್ತ್ರ.

oneirophrenia: ಸ್ವಪ್ನ ಮನೋ ವಿಕ್ಷಿಪ್ತಿ.

one party dictatorship: ಏಕ ಪಕ್ಷೀಯ ಸರ್ವಾಧಿಕಾರ. ಎಲ್ಲ ಪಕ್ಷಗಳೂ ಅಲ್ಪ ಬೆಂಬಲ ಹೊಂದಿರುವಾಗ ಅಧಿಕಾರಕ್ಕೆ ಬಂದ ಒಂದೇ ಪಕ್ಷ ನಡೆಸುವ ನಿರಂಕುಶ ಆಡಳಿತ.

one party government: ಏಕ ಪಕ್ಷೀಯ ಸರಕಾರ.

one way screen: ಒಮ್ಮುಖ ತೆರೆ.

ontogenesis: ವ್ಯಕ್ತಿವಿಕಾಸ.

ontogenetic function: ವ್ಯಕ್ತಿ ವಿಕಾ ಸಾತ್ಮಕ ಕಾರ್ಯ.

ontogenetic psychology: ವ್ಯಕ್ತಿ ವಿಕಾ ಸಾತ್ಮಕ ಮನೋವಿಜ್ಞಾನ.

ontogenetics: ವ್ಯಕ್ತಿ ವಿಕಾಸ ವಿಜ್ಞಾನ.

ontogeny: ದೇಹವಿಕಾಸ ಶಾಸ್ತ್ರ. ಜೀವಿಯ

ಶರೀರ ರಚನೆಯ ಬೆಳವಣಿಗೆ ಮತ್ತು ಅಭಿವೃದ್ಧಿಯ ಅಧ್ಯಯನ.

ontology: ಮೂಲತತ್ತ್ವಶಾಸ್ತ್ರ. ವಸ್ತುಗಳ ಮೂಲತತ್ವಗಳ ಕುರಿತ ಆಧ್ಯಾತ್ಮಶಾಸ್ತ್ರ ಭಾಗ

open air jails: ಬಯಲು ಕಾರಾಗೃಹಗಳು; ತೆರೆದ ಬಂದೀಖಾನೆಗಳು.

open battle: ನೇರವಾದ ಯುದ್ಧ; ಎದುರು ಬದುರು ಯುದ್ಧ.

open cheque: ಮುಕ್ತ ಧನಾದೇಶ.

open class ideology: ಮುಕ್ತ ವರ್ಗ ವಿಚಾರಧಾರೆ. ತನ್ನ ಮೂಲವರ್ಗ ಅಥವಾ ಸ್ಥಾನಮಾನವನ್ನು ಪರಿಗಣಿಸದೆ, ಯಾವನೇ ವ್ಯಕ್ತಿಯೂ ಪರಿಶ್ರಮ ಹಾಗೂ ಸ್ವ ಸಾಮರ್ಥ್ಯದಿಂದ ಉತ್ತಮ ಸ್ಥಾನಮಾನ ಹಾಗೂ ಮೇಲಿನ ಸಾಮಾಜಿಕ ವರ್ಗಕ್ಕೆ ಪ್ರವೇಶ ಪಡೆಯಬಹುದೆಂಬ ಕಲ್ಪನೆ.

open class system: ಮುಕ್ತ ವರ್ಗ ವ್ಯವಸ್ಥೆ. ಲಂಬಾಂತರ ಅಥವಾ ಸಮಾಂತರ ಸಾಮಾಜಿಕ ಸಂಚರಣೆಗೆ ಅವಕಾಶವಿರುವ ವರ್ಗ ವ್ಯವಸ್ಥೆ.

open common interview: ಮುಕ್ತ ಸಾಮೂಹಿಕ ಸಂದರ್ಶನ.

open diplomacy: ಬಹಿರಂಗ ರಾಜ ತಂತ್ರ; ಮುಕ್ತ ರಾಜತಂತ್ರ. ರಾಜತಂತ್ರದ ಉದ್ದೇಶ, ಕಾರ್ಯಚಟುವಟಿಕೆಗಳನ್ನು ಗೋಪ್ಯವಾಗಿಡದೆ ಸಾರ್ವತ್ರಿಕವಾಗಿ ತಿಳಿಯಪಡಿಸುವ ರಾಜನೀತಿ.

open door policy: ಮುಕ್ತ ಧೋರಣೆ; ತೆರೆದ ಬಾಗಿಲು ನೀತಿ. ಒಂದು ರಾಷ್ಟ್ರ ತನ್ನ ವಿದೇಶ ಮತ್ತು ಆಂತರಿಕ ವ್ಯಾಪಾರವನ್ನು ಸಮಾನ ಶರತ್ತುಗಳ ಆಧಾರದಲ್ಲಿ ಎಲ್ಲಾ ರಾಷ್ಟ್ರಗಳಿಗೂ ತೆರೆದಿಡುವುದು. ೧೮೯೯ ರಲ್ಲಿ ಅಮೇರಿಕಾ ದೇಶದ ವಿದೇಶಾಂಗ ನೀತಿಯು ದೂರಪ್ರಾಚ್ಯ ರಾಷ್ಟ್ರಗಳ ವಿಷಯಕವಾಗಿ ತೆರೆದ ಬಾಗಿಲ ತತ್ವವನ್ನು ಅನುಸರಿಸಿತು.

open economy: ಮುಕ್ತ ಆರ್ಥಿಕತೆ. ದೇಶಗಳ ನಡುವೆ ವಿದೇಶ ವ್ಯಾಪಾರ ಹಾಗೂ ಪಾವತಿಗಳು ಮತ್ತು ಶ್ರಮ ಮತ್ತು ಬಂಡವಾಳದ ಚಲನೆಗಳು ಅನಿರ್ಬಂಧಿತವಾಗಿರುವ ಸ್ಥಿತಿ.

open ended interview: ಮುಕ್ತಾಂತ ಸಂದರ್ಶನ.

open ended question: ಮುಕ್ತಾಂತ ಪ್ರಶ್ನೆ.

open government: ಮುಕ್ತ ಸರಕಾರ.

open inflation: ಮುಕ್ತ ಹಣದುಬ್ಬರ.

open lineage family: ಮುಕ್ತ ವಂಶೀಯ ಕುಟುಂಬ. ಯುರೋಪಿನಲ್ಲಿದ್ದಂತಹ ಸಾಂಪ್ರದಾಯಿಕ ಕುಟುಂಬ ವ್ಯವಸ್ಥೆ. ಇಂಥ ಕುಟುಂಬಗಳಲ್ಲಿ ಸ್ಥಳೀಯ ಸಮುದಾಯದ ಜತೆಗೆ ಕುಟುಂಬದ ಆಂತರಿಕ ಸಂಬಂಧವು ನಿಕಟವಾಗಿ ಹೆಣೆಯಲ್ಪಟ್ಟಿತು.

open market operation: ಮುಕ್ತ ಮಾರುಕಟ್ಟೆ ಕಾರ್ಯಾಚರಣೆ. ರಿಸರ್ವ್ ಬ್ಯಾಂಕಿನ ಎರಡು ಹಣಕಾಸು ನೀತಿಗಳಲ್ಲೊಂದು. ದೇಶದ ಆರ್ಥಿಕ ಏರಿಳಿತಗಳ ಸಮತೋಲನಕ್ಕಾಗಿ ರಿಸರ್ವ್‌ಬ್ಯಾಂಕ್ ಬಹಿರಂಗ ಮಾರುಕಟ್ಟೆಯಲ್ಲಿ ಸರಕಾರೀ ಭದ್ರತಾ ಪತ್ರಗಳನ್ನು ಮಾರುವ ಮತ್ತು ಕೊಳ್ಳುವ ವ್ಯವಸ್ಥೆ.

open nursery school: ಬಯಲು ಶಿಶುವಿಹಾರ.

open oligopoly: ಮುಕ್ತ ಬಹುಜನ

ಸ್ವಾಮ್ಯ. ಹೊಸ ಉದ್ಯಮ ಸಂಸ್ಥೆಗಳು ಕೈಗಾರಿಕಾರಂಗವನ್ನು ಪ್ರವೇಶಿಸಲು ಮುಕ್ತ ಸ್ವಾತಂತ್ರ್ಯವಿರುವ ವ್ಯವಸ್ಥೆ.

open sector: ಮುಕ್ತ ವಲಯ.

open social class system: ತೆರೆದ ಸಾಮಾಜಿಕ ವರ್ಗ ವ್ಯವಸ್ಥೆ. ವ್ಯಕ್ತಿಯ ಸಾಮಾಜಿಕ ಚಲನೆಗೆ ಮುಕ್ತ ಅವಕಾಶವುಳ್ಳ ವ್ಯವಸ್ಥೆ.

open society: ಮುಕ್ತ ಸಮಾಜ, ತೆರೆದ ಸಮಾಜ.

open text book examination: ತೆರೆದ ಪುಸ್ತಕ ಪರೀಕ್ಷಾ ಪದ್ಧತಿ; ಮುಕ್ತ ಗ್ರಂಥ ಪರೀಕ್ಷಾ ಪದ್ಧತಿ.

open theatre: ಮುಕ್ತ ರಂಗಭೂಮಿ. ಭೂತಾರಾಧನೆಯಂತಹ ಆರಾಧನಾ ರಂಗ ಭೂಮಿಯಲ್ಲಿ ಪ್ರದರ್ಶನದ ಸಂದರ್ಭದಲ್ಲಿ ಹಿಗ್ಗುವ ಅಥವಾ ಕುಗ್ಗುವ ಗುಣವನ್ನು ಹೊಂದಿರುವ ವೇದಿಕೆ. ಆರಾಧನೆ ನಡೆಯುವ ಸಮಯ, ಪ್ರದರ್ಶನದ ಅವಧಿ, ಸ್ಥಳ ಮುಂತಾದ ಅಂಶಗಳಲ್ಲಿ ನಿರ್ದಿಷ್ಟತೆ ಇದ್ದರೂ ಸಂದರ್ಭಕ್ಕೆ ತಕ್ಕಂತೆ ಸಾಕಷ್ಟು ಬದಲಾವಣೆಗಳು ಉಂಟಾಗುತ್ತವೆ.

open unemployment: ವ್ಯಾಪಕ ನಿರುದ್ಯೋಗ. ಬಂಡವಾಳದ ಕೊರತೆ ಯಿಂದಾಗಿ ಬಡದೇಶಗಳಲ್ಲಿ ಕಂಡುಬರುವ ನಿರುದ್ಯೋಗ.

open university: ಮುಕ್ತ ವಿಶ್ವವಿದ್ಯಾ ಲಯ.

operating contract: ನಿರ್ವಹಣಾ ಒಪ್ಪಂದ. ಒಂದು ಸಾರ್ವಜನಿಕ ಉದ್ಯಮದ ಮೇಲೆ ಸರಕಾರ ತನ್ನ ಸ್ವಾಮಿತ್ವವನ್ನು ಹೊಂದಿದ್ದು ಅದರ ಕಾರ್ಯ ನಿರ್ವಹಣೆ ಗಾಗಿ ಖಾಸಗಿ ಕಂಪೆನಿಯೊಂದಿಗೆ ಒಪ್ಪಂದ ಮಾಡಿಕೊಳ್ಳುವುದು.

operating staff: ಕಾರ್ಯಾಚರಣೆ ಸಿಬ್ಬಂದಿ.

operating of need reduction: ಅವಶ್ಯಕತೆಗಳನ್ನು ಅವರೋಹಣಗೊಳಿ ಸುವಿಕೆ.

operational definition: ಕಾರ್ಯ ಸಾಧ್ಯ ವ್ಯಾಖ್ಯೆ; ಪ್ರಯೋಗಸಾಧ್ಯ ವ್ಯಾಖ್ಯೆ.

operational principle: ಪ್ರಯೋಗ ಸಾಧ್ಯ ತತ್ವ; ಕಾರ್ಯಸಾಧ್ಯ ತತ್ವ.

operational research unit: ಪ್ರಯೋಗಶೀಲ ಸಂಶೋಧನಾ ಘಟಕ.

operational theory: ಕಾರ್ಯಾನ್ವಯಿಕ ಸಿದ್ಧಾಂತ.

operational variables: ಕಾರ್ಯ ಸಾಧ್ಯ ಪರಿವರ್ತಕಗಳು.

operationism: ಕಾರ್ಯ ತತ್ವವಾದ; ಕಾರ್ಯಾಚರಣ ವಾದ.

operative norms: ಪ್ರಾಯೋಗಿಕ ನಿಯಮಗಳು; ಬಳಕೆಯಲ್ಲಿರುವ ನಿಯಮ ಗಳು.

ophidiphobia: ಸರ್ಪಭೀತಿ.

opinion leader: ಅಭಿಪ್ರಾಯ ರೂಪಿ ಸುವ ನಾಯಕ.

opportunity cost: ಅವಕಾಶ ವೆಚ್ಚ; ಪರ್ಯಾಯ ವೆಚ್ಚ. ವ್ಯಕ್ತಿಯು ತನ್ನ ಪರಿಮಿತ ಆದಾಯದಲ್ಲಿ ಒಂದು ವಸ್ತುವನ್ನು ಪಡೆ ಯಲು ಇನ್ನೊಂದು ವಸ್ತುವನ್ನು ತ್ಯಜಿಸಬೇಕಾ

ಗುತ್ತದೆ. ಆ ತ್ಯಜಿಸಲ್ಪಟ್ಟ ವಸ್ತುವಿನ ಮೌಲ್ಯವೇ ಅವಕಾಶ ವೆಚ್ಚ.

opposite party: ವಿರೋಧ ಪಕ್ಷ.

opposition front: ವಿರೋಧರಂಗ. ಹಲವು ವಿರೋಧ ಪಕ್ಷಗಳು ಒಟ್ಟುಗೂಡಿ ರೂಪಿಸಿಕೊಳ್ಳುವ ರಂಗ.

oppression: ದಬ್ಬಾಳಿಕೆ.

optimal criterion: ಗರಿಷ್ಟತೆಯ ಸೂತ್ರ; ಗರಿಷ್ಟತೆಯ ಮಾಪಕ.

optimistic temperament: ಆಶಾ ವಾದಿ ಸ್ವಭಾವ.

optimization principle: ಗರಿಷ್ಟತೆಯ ತತ್ತ್ವ.

optimum allocation of resources: ಸಂಪನ್ಮೂಲಗಳ ಗರಿಷ್ಟ ವಿತರಣೆ.

optimum cost combination: ಗರಿಷ್ಟ ವೆಚ್ಚ ಸಂಯೋಜನೆ.

optimum holding: ಗರಿಷ್ಟ ಹಿಡುವಳಿ.

optimum output: ಗರಿಷ್ಟ ಉತ್ಪನ್ನ. ಕನಿಷ್ಠ ಸರಾಸರಿ ವೆಚ್ಚದಲ್ಲಿ ಉತ್ಪಾದಿಸಲಾಗುವ ಗರಿಷ್ಟ ಉತ್ಪನ್ನ.

optimum population: ಗರಿಷ್ಟ ಜನಸಂಖ್ಯೆ (ಆದರ್ಶ ಜನಸಂಖ್ಯೆ). ಒಂದು ದೇಶದಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಅಗತ್ಯವಿರುವ ಜನಸಂಖ್ಯೆ.

optimum solution: ಗರಿಷ್ಟ ಪರಿಹಾರ. (ಆದರ್ಶ ಪರಿಹಾರ).

optimum taxable capacity: ಗರಿಷ್ಟ ತೆರಿಗೆ ಸಾಮರ್ಥ್ಯ.

optimum theory of population: ಗರಿಷ್ಟ ಜನಸಂಖ್ಯಾ ಸಿದ್ಧಾಂತ. ಆದರ್ಶ ಜನಸಂಖ್ಯಾ ಸಿದ್ಧಾಂತ.

optional expenditure: ಐಚ್ಛಿಕ ವೆಚ್ಚ.

optional jurisdiction: ಐಚ್ಛಿಕ ಕ್ಷೇತ್ರಾಧಿಕಾರ; ಐಚ್ಛಿಕ ನ್ಯಾಯಾಧಿಕಾರ; ಐಚ್ಛಿಕ ಕಾರ್ಯಾಧಿಕಾರ.

optional referendum: ಐಚ್ಛಿಕ ಜನಮತಗಣನೆ. ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಯಾವುದೇ ಕಾಯಿದೆಯು ಜಾರಿಯಾಗುವ ಮೊದಲು ಅದು ಜನಮತಗಣನೆಯ ಮೂಲಕ ಬೆಂಬಲ ಪಡೆಯಬೇಕು. ಈ ಮತಗಣನೆಯಲ್ಲಿ ಪಾಲ್ಗೊಳ್ಳುವಿಕೆಯು ಜನರ ಇಚ್ಛೆಯ ಸ್ವಾತಂತ್ರ್ಯಕ್ಕೆ ಬಿಟ್ಟದ್ದಾಗಿದೆ.

opulence: ಸಮೃದ್ಧ ಸ್ಥಿತಿ.

oracle bones: ಮಾಂತ್ರಿಕ ಎಲುಬುಗಳು. ದಿವ್ಯಶಕ್ತಿಯನ್ನು ಪಡೆಯಲು ಉಪಯೋಗಿಸುವ ಕೆಲವು ಪ್ರಾಣಿಗಳ ಎಲುಬುಗಳು.

oral activity: ಮೌಖಿಕ ಚಟುವಟಿಕೆ; ನುಡಿಕ್ರಿಯೆ.

oral agreement: ಮೌಖಿಕ ಒಪ್ಪಂದ.

oral composition: ಮೌಖಿಕ ಸಂಯೋಜನೆ.

oral consultation: ಮೌಖಿಕ ಸಮಾಲೋಚನೆ.

oral critic: ಮೌಖಿಕ ವಿಮರ್ಶಕ.

oral culture: ಮೌಖಿಕ ಸಂಸ್ಕೃತಿ.

oral epic: ಮೌಖಿಕ ಮಹಾಕಾವ್ಯ.

oral erotic state: ಬಾಯಿರತಿಯ ಅವಸ್ಥೆ; ಮೌಖಿಕ ಕಾಮಾವಸ್ಥೆ.

oral eroticism: ಮೌಖಿಕ ಕಾಮುಕತೆ.

ಮನೋಲೈಂಗಿಕ ಬೆಳವಣಿಗೆಯ ಪ್ರಾರಂಭದ ಒಂದು ಹಂತ. ಇದರಲ್ಲಿ ಮಗು ಮುಖ್ಯ ವಾಗಿ ಮೊಲೆಯೂಡುವುದು ಮೊದಲಾದ ಚಟುವಟಿಕೆಯಿಂದ ಲೈಂಗಿಕ ತೃಪ್ತಿ ಪಡೆ ಯುತ್ತದೆ.

oral formulaic: ಮೌಖಿಕ ಸೂತ್ರೀಯ; ಮೌಖಿಕ ಸೂತ್ರಾತ್ಮಕ.

oral formulaic theory: ಮೌಖಿಕ ಸೂತ್ರಾತ್ಮಕ ಸಿದ್ಧಾಂತ. ಮೌಖಿಕ ಕಾವ್ಯಗಳ ಸಂಯೋಜನೆ ಹಾಗೂ ಪ್ರಸರಣವನ್ನು ಕುರಿತಂತೆ ಬಂದಿರುವ ಪ್ಯಾರಿಲಾರ್ಡ್ ಸಿದ್ಧಾಂತವನ್ನು ಮೌಖಿಕ ಸೂತ್ರಾತ್ಮಕ ಸಿದ್ಧಾಂತ ಎಂದು ಕರೆಯುತ್ತಾರೆ.

oral history: ಮೌಖಿಕ ಇತಿಹಾಸ.

oral neurosis: ಮೌಖಿಕ ನರವ್ಯಾಧಿ.

oral sadism: ಮೌಖಿಕ ಪರಪೀಡನ ರತಿ; ಮೌಖಿಕ ಕ್ರೌರ್ಯಕಾಮ.

oral stage: ಮೌಖಿಕ ಹಂತ; ವಾಚಕ ಹಂತ.

oral style: ಮೌಖಿಕ ಶೈಲಿ.

oral tradition: ಮೌಖಿಕ ಸಂಪ್ರದಾಯ.

oral transmission: ಮೌಖಿಕ ಪ್ರಸರಣ.,

order of birth: ಜನನ ಕ್ರಮ.

orders in council: ಸಭಾಜ್ಞೆ; ಸಭೆಯ ಆಜ್ಞೆ.

ordinal: ಸ್ಥಾನಸೂಚಕ.

ordinal approach: ಸ್ಥಾನಸೂಚಕ ದೃಷ್ಟಿಕೋನ.

ordinal sampling: ನೋಡಿ: systematic sample.

ordinal scale: ಕ್ರಮಸೂಚಕ ಮಾಪಕ.

ordinal utility: ಸ್ಥಾನಸೂಚಕ ತುಷ್ಟಿಗುಣ.

ordinance: ಸುಗ್ರೀವಾಜ್ಞೆ; ವಿಶೇಷಾಜ್ಞೆ. ಭಾರತದ ಸಂವಿಧಾನದ ೧೨೩ನೇ ವಿಧಿಯ ಪ್ರಕಾರ ಸಂಸತ್ತಿನ ಎರಡೂ ಸದನಗಳು ಅಧಿವೇಶನದಲ್ಲಿ ಇಲ್ಲದಿದ್ದಾಗ ಜರೂರ ಸಮಸ್ಯೆಗಳನ್ನು ಬಗೆಹರಿಸಲು ರಾಷ್ಟ್ರಪತಿಯು ಹೊರಡಿಸುವ ಅಧಿಕಾರಯುತ ಆಜ್ಞೆ.

ordinary bill: ಸಾಮಾನ್ಯ ವಿಧೇಯಕ. ಹಣಕಾಸಿನ ವಿಧೇಯಕ(ಮಸೂದೆ)ದಿಂದ ಹೊರತುಪಡಿಸಿದಂತಹ ಎಲ್ಲಾ ವಿಚಾರಗಳ ಕುರಿತಾದ ವಿಧೇಯಕ.

ordinary court: ಸಾಮಾನ್ಯ ಕಾಯಿದೆ; ಸಾಮಾನ್ಯ ಕಾನೂನು.

organ inferiority: ಅಂಗಾಂಗ ಕೀಳರಿಮೆ.

organ neurosis: ಅವಯವ ನರ ವ್ಯಾಧಿ.

organic analogy: ಜೈವಿಕ ಹೋಲಿಕೆ; ಜೈವಿಕ ಸಾದೃಶ್ಯತೆ.

organic composition of capital: ಬಂಡವಾಳದ ಸಾವಯವ ಸಂರಚನೆ.

organic disturbances: ಸೇಂದ್ರೀಯ ಸಂಕ್ಷೋಭೆಗಳು; ಜೈವಿಕ ಸಂಕ್ಷೋಭೆಗಳು.

organic environment: ಜೈವಿಕ ಪರಿಸರ.

organic evolution: ಜೀವ ವಿಕಾಸ; ಜೈವಿಕ ವಿಕಾಸ; ಸೇಂದ್ರೀಯ ವಿಕಾಸ.

organic growth: ಜೈವಿಕ ಬೆಳವಣಿಗೆ.

organic inferiority: ಅಂಗಾಂಗ ಕೀಳರಿಮೆ; ಸೇಂದ್ರೀಯ ಕೀಳರಿಮೆ; ಜೈವಿಕ ಕೀಳರಿಮೆ.

organic law: ಜೈವಿಕ ನಿಯಮ.

organic memory: ಸೇಂದ್ರೀಯ ಸ್ಮರಣೆ; ಜೈವಿಕ ಸ್ಮರಣೆ.

organic need: ಜೈವಿಕ ಅಗತ್ಯ.

organic psychosis: ಆಂಗಿಕ ಮನೋವಿಕೃತಿ; ಜೈವಿಕ ಮನೋವಿಕೃತಿ. ಮೆದುಳಿನ ಮತ್ತು ನರಮಂಡಲದ ತೊಂದರೆಗಳು ಇದಕ್ಕೆ ಕಾರಣ. ಉದಾ: ಮೆದುಳಿಗೆ ಏಟು, ಮೆದುಳಿನಲ್ಲಿ ಗಡ್ಡೆಗಳ ಬೆಳವಣಿಗೆ, ನರಮಂಡಲದ ಕ್ಷಯ ಇತ್ಯಾದಿ.

organic science: ಜೈವಿಕ ವಿಜ್ಞಾನ; ಸಾವಯವ ವಿಜ್ಞಾನ.

organic social system: ಸಾವಯವ ಸಾಮಾಜಿಕ ವ್ಯವಸ್ಥೆ.

organic social unity: ಜೈವಿಕ ಸಾಮಾಜಿಕ ಏಕತೆ.

organic society: ಜೈವಿಕ ಸಮಾಜ.

organic solidarity: ಸೇಂದ್ರೀಯ ಐಕ್ಯತೆ; ಜೈವಿಕ ಐಕ್ಯತೆ; ಸಂಕೀರ್ಣ ಶ್ರಮ ವಿಭಜನೆಯಿರುವ ಆಧುನಿಕ ಕೈಗಾರಿಕಾ ಸಮಾಜಗಳಲ್ಲಿ ಹಲವು ವಿಶೇಷ ಪಾತ್ರಗಳ ನಡುವಿನ ಅಂತರ್‌ಸಂಬಂಧದಿಂದಾಗಿ ಸಮಾಜದ ಐಕ್ಯತೆಗೆ ಸಮೂಹಗಳ ಹಾಗೂ ವ್ಯಕ್ತಿಗಳ ಸಹಕಾರ ಅಗತ್ಯವಾಗಿರುತ್ತದೆ.

organic theory of emotion: ಸಂವೇಗದ ಸೇಂದ್ರೀಯ ಸಿದ್ಧಾಂತ; ಸಂವೇಗದ ಜೈವಿಕ ಸಿದ್ಧಾಂತ.

organic theory of state: ರಾಜ್ಯದ ಜೈವಿಕ ಸಿದ್ಧಾಂತ.

organic unity: ಜೈವಿಕ ಏಕತೆ.

organised crime: ಸಂಘಟಿತ ಅಪರಾಧ.

organised group: ಸಂಘಟಿತ ಸಮೂಹ.

organism: ಜೀವಿ.

organismic psychology: ಜೈವಿಕ ಮನೋವಿಜ್ಞಾನ.

organization: ಸಂಘಟನೆ. ಒಂದು ನಿರ್ದಿಷ್ಟ ಉದ್ದೇಶ ಸಾಧನೆಗಾಗಿ ಸಂಘಟಿತವಾದ ಹಲವು ವ್ಯಕ್ತಿಗಳ ಸಮೂಹ.

organization chart: ಸಂಘಟನಾ ರೇಖಾಪಟ; ಸಾಂಘಿಕ ರೇಖಾಪಟ.

organization of cognitive life: ಜ್ಞಾನಾತ್ಮಕ ಜೀವನ ಸಂಘಟನೆ.

organization of emotional life: ಸಂವೇಗಾತ್ಮಕ ಜೀವನ ಸಂಘಟನೆ; ಭಾವ ಜೀವನ ಸಂಘಟನೆ.

organizational devices: ಸಂಘಟನಾ ಕೌಶಲ್ಯಗಳು; ಸಂಘಟನಾ ಸಾಧನಗಳು.

organizational set-up: ಸಾಂಸ್ಥಿಕ ರಚನೆ.

organizational unit: ಸಾಂಸ್ಥಿಕ ಘಟಕ.

organized democracy: ಸಂಘಟಿತ ಪ್ರಜಾಪ್ರಭುತ್ವ.

organized research: ಸಂಘಟಿತ ಸಂಶೋಧನೆ. ಒಂದೇ ಸಮಸ್ಯೆಯ ಬಗೆಗೆ ಅಧ್ಯಯನ ನಡೆಸುವ ಸಂಶೋಧಕರ ಗುಂಪಿನಿಂದ ನಡೆಸಲ್ಪಡುವ ಸಂಶೋಧನೆ.

organized sanction: ಸಂಘಟಿತ ಸಂಹಿತೆ.

orgy: ಶಕ್ತಿಪೂಜೆ; ಉನ್ಮತ್ತತೆಯ ಕಾರ್ಯ. ಕುಡಿತ, ಹಾಡು ಇವುಗಳಿಂದ ಕೂಡಿದ ರಹಸ್ಯೋಪಾಸನೆ.

oriental: ಪ್ರಾಚ್ಯ.

oriental culture: ಪ್ರಾಚ್ಯ ಸಂಸ್ಕೃತಿ.

orientation training: ಗುರಿ ನಿರ್ದೇಶಿತ ತರಬೇತಿ, ಹೊಸದಾಗಿ ನೇಮಕ ಗೊಂಡ ಅಭ್ಯರ್ಥಿಗೆ/ನೌಕರನಿಗೆ ಆಡಳಿತ ವ್ಯವಸ್ಥೆಯ ನಿರ್ದಿಷ್ಟ ಸ್ಥಾನಕ್ಕೆ ಸಂಬಂಧಿಸಿದ ಮುಖ್ಯ ವಿಚಾರಗಳು ಮತ್ತು ತತ್ವಗಳು, ಹೊಸ ಸ್ಥಾನದ ಪರಿಸರ, ವ್ಯವಸ್ಥೆ ಮತ್ತು ಅದರ ಗುರಿಗಳನ್ನು ಪರಿಚಯ ಮಾಡಿ ಕೊಡುವ ಉದ್ದೇಶದಿಂದ ಕೊಡುವ ತರಬೇತಿ.

original jurisdiction: ಮೂಲ ಅಧಿಕಾರ ವ್ಯಾಪ್ತಿ; ಮೂಲಕ್ಷೇತ್ರ ವ್ಯಾಪ್ತಿ; ಮೂಲ ನ್ಯಾಯಾಧಿಕಾರ.

original nature: ಮೂಲಭೂತ ಸ್ವಭಾವ.

orthogenic evolution: ನೇರ ರೇಖಾತ್ಮಕ ವಿಕಾಸ. ನೇರಗೆರೆಯ ವಿಧಾನದಲ್ಲಿ ನಡೆದ ವಿಕಾಸದ ಪರಿಕಲ್ಪನೆ.

orthogenesis: ರೂಢಿ ಸಮ್ಮತ ಜನನ. ಹೊಸ ಜೀವ ಜಾತಿಯ ಉಗಮದಲ್ಲಿ ಜನನ ವ್ಯತ್ಯಾಸ ಗಳು ಒಂದು ನಿರ್ದಿಷ್ಟ ಕ್ರಮವನ್ನನುಸರಿಸಿ ಸಂಭವಿಸುವುದೇ ವಿನಃ ಕೇವಲ ಆಕಸ್ಮಿಕ ಗಳಲ್ಲವೆಂದು ಹೇಳುವ ಪರಿಣಾಮವಾದ.

orthography: ಅಕ್ಷರ ಸಂಯೋಜನೆಯ ಅಧ್ಯಯನ.

orthostat: ಶಿಲಾತೊಟ್ಟಿಯ ಪಾರ್ಶ್ವಗೋಡೆಯಾಗಿ ನಿಲ್ಲಿಸಿದ ಬೃಹತ್ ಶಿಲಾಯುಗದ ಶಿಲಾಫಲಕ.

oscillation of mind: ಚಿತ್ತ ಚಾಂಚಲ್ಯ.

oscillator: ಆಂದೋಲಕ.

oscilloscope: ದೋಲನದರ್ಶಿ.

Osiris: ಒಸಿರಿಸ್ ದೇವತೆ. ಪುರಾತನ ಈಜಿಪ್ಟ್‌ನಲ್ಲಿ ಧಾನ್ಯ ಬೆಳೆಯಲು ಸಹಾಯ ಮಾಡುತ್ತಿದ್ದ ದೇವತೆ.

ossification: ಎಲುಬಾಗಿ ಮಾರ್ಪಡುವಿಕೆ.

ostracism: ಬಹಿಷ್ಕಾರ ಪದ್ಧತಿ. ಕ್ಲಿಸ್ತಿನಿಸ್‌ನ ಅತ್ಯಂತ ಮಹತ್ವದ ಕಾಯ್ದೆ. ಈ ಕಾಯ್ದೆಯ ಪ್ರಕಾರ ಅಥೆನ್ಸಿನ ನಾಗರಿಕರು ವರ್ಷಕ್ಕೊಮ್ಮೆ ರಾಜ್ಯಕ್ಕೆ ಅಪಾಯಕಾರಿಯೆನಿಸಿದ ಯಾವುದೇ ಪ್ರಮುಖ ವ್ಯಕ್ತಿಯನ್ನು ಆರು ಸಾವಿರ ಅಥವಾ ಅದಕ್ಕೂ ಮೇಲ್ಪಟ್ಟ ಮತಗಳಿಂದ ಹತ್ತು ವರ್ಷಗಳವರೆಗೆ ರಾಜ್ಯದಿಂದ ಹೊರಗೆ ತಳ್ಳಬಹುದಿತ್ತು.

other directed society: ಬಾಹ್ಯ ನಿರ್ದೇಶಿತ ಸಮಾಜ.

other worldly: ಅನ್ಯ ಪ್ರಾಪಂಚಿಕ.

out-breeding: ದೂರ ತಳಿವೃದ್ಧಿ. ಸಮೂಹದಿಂದ ಹೊರಗಿನ ಅಥವಾ ವಿಭಿನ್ನ ಸಮೂಹಗಳ ವ್ಯಕ್ತಿಗಳು ಮದುವೆಯಾಗಿ ಮಕ್ಕಳನ್ನು ಪಡೆಯುವುದು.

out door interest: ಹೊರಾಂಗಣಾಭಿರುಚಿ.

out group: ಹೊರ ಸಮೂಹ; ಬಾಹ್ಯ ಸಮೂಹ. ವ್ಯಕ್ತಿಯು ತಾನು ಯಾವ ಸಮೂಹದ ಸದಸ್ಯನಲ್ಲವೆಂಬುದನ್ನು ಗುರುತಿಸಿಕೊಳ್ಳುತ್ತಾನೋ ಅದು ಅವನಿಗೆ ಹೊರ ಸಮೂಹವಾಗುತ್ತದೆ. ಇದು ವ್ಯಕ್ತಿಗತವಾದ ಸಾಪೇಕ್ಷ ಗುರುತಿಸಿಕೊಳ್ಳುವಿಕೆಯಾಗಿದೆ.

outlay: ಖರ್ಚು.

out-posts: ಗಡಿಠಾಣೆಗಳು; ಗಡಿಠಾಣ್ಯಗಳು.

over-all-planning: ಸಮಗ್ರ ಯೋಜನೆ.

ಎಲ್ಲ ವಿಷಯಗಳನ್ನು ಸಮಗ್ರವಾಗಿ ಒಳ ಗೊಂಡಿರುವ ಯೋಜನೆ.

overall sex ratio: ಸಮಗ್ರ ಸ್ತ್ರೀ ಪುರುಷ ಅನುಪಾತ.

overbounded city: ಗಡಿಮೀರಿ ಬೆಳೆದ ನಗರ.

over compensation: ಅತಿಪರಿಹಾರ.

over conformity: ಅತಿಬದ್ಧತೆ. ಸಾಮಾಜಿಕ ನಿಯಮಗಳಿಗೆ ಅತಿಯಾಗಿ ಬದ್ಧನಾಗಿರುವುದು.

over dependency: ಅತಿಪರಾವಲಂಬನೆ.

over draft: ಬ್ಯಾಂಕ್ ಮಂಜೂರು

ಕಾಯ್ದೆಯ ಪ್ರಕಾರ ಅಥೆನ್ಸಿನ ನಾಗರಿಕರು ವರ್ಷಕ್ಕೊಮ್ಮೆ ರಾಜ್ಯಕ್ಕೆ ಅಪಾಯಕಾರಿಯೆನಿಸಿದ ಯಾವುದೇ ಪ್ರಮುಖ ವ್ಯಕ್ತಿಯನ್ನು ಆರು ಸಾವಿರ ಅಥವಾ ಅದಕ್ಕೂ ಮೇಲ್ಪಟ್ಟ ಮತಗಳಿಂದ ಹತ್ತು ವರ್ಷಗಳವರೆಗೆ ರಾಜ್ಯದಿಂದ ಹೊರಗೆ ತಳ್ಳಬಹುದಿತ್ತು.

other directed society: ಬಾಹ್ಯ ನಿರ್ದೇಶಿತ ಸಮಾಜ.

other worldly: ಅನ್ಯ ಪ್ರಾಪಂಚಿಕ.

out-breeding: ದೂರ ತಳಿವೃದ್ಧಿ. ಸಮೂಹದಿಂದ ಹೊರಗಿನ ಅಥವಾ ವಿಭಿನ್ನ ಸಮೂಹಗಳ ವ್ಯಕ್ತಿಗಳು ಮದುವೆಯಾಗಿ ಮಕ್ಕಳನ್ನು ಪಡೆಯುವುದು.

out door interest: ಹೊರಾಂಗಣಾಭಿರುಚಿ.

out group: ಹೊರ ಸಮೂಹ; ಬಾಹ್ಯ ಸಮೂಹ. ವ್ಯಕ್ತಿಯು ತಾನು ಯಾವ ಸಮೂಹದ ಸದಸ್ಯನಲ್ಲವೆಂಬುದನ್ನು ಗುರುತಿಸಿಕೊಳ್ಳುತ್ತಾನೋ ಅದು ಅವನಿಗೆ ಹೊರ ಸಮೂಹವಾಗುತ್ತದೆ. ಇದು ವ್ಯಕ್ತಿಗತವಾದ ಸಾಪೇಕ್ಷ ಗುರುತಿಸಿಕೊಳ್ಳುವಿಕೆಯಾಗಿದೆ.

outlay: ಖರ್ಚು.

out-posts: ಗಡಿಠಾಣೆಗಳು; ಗಡಿಠಾಣ್ಯಗಳು.

over-all-planning: ಸಮಗ್ರ ಯೋಜನೆ. ಎಲ್ಲ ವಿಷಯಗಳನ್ನು ಸಮಗ್ರವಾಗಿ ಒಳ ಗೊಂಡಿರುವ ಯೋಜನೆ.

overall sex ratio: ಸಮಗ್ರ ಸ್ತ್ರೀ ಪುರುಷ ಅನುಪಾತ.

overbounded city: ಗಡಿಮೀರಿ ಬೆಳೆದ ನಗರ.

over compensation: ಅತಿಪರಿಹಾರ.

over conformity: ಅತಿಬದ್ಧತೆ. ಸಾಮಾಜಿಕ ನಿಯಮಗಳಿಗೆ ಅತಿಯಾಗಿ ಬದ್ಧನಾಗಿರುವುದು.

over dependency: ಅತಿಪರಾವಲಂಬನೆ.

over draft: ಬ್ಯಾಂಕ್ ಮಂಜೂರು ಮಾಡಿರುವ ಒಂದು ನಿಗದಿತ ಮೊತ್ತದವರೆಗೆ ಗ್ರಾಹಕನು ತನ್ನ ಚಾಲ್ತಿ ಖಾತೆಯಲ್ಲಿರುವ ಹಣಕ್ಕಿಂತ ಅಧಿಕ ಮೊತ್ತವನ್ನು ಅಗತ್ಯವಿರುವಾಗ ಪಡೆಯಬಹುದಾದ ಒಂದು ಬಗೆಯ ಸಾಲ ಸೌಲಭ್ಯ.

overhead administration: ಮೇಲ್ವಿಚಾರಣಾ ಆಡಳಿತ; ಮೇಲಾಡಳಿತ.

overhead cost: ಮೇಲಾಡಳಿತ ವೆಚ್ಚ. ಉದಾ. ಅಂಚೆ ಮತ್ತು ವಿದ್ಯುತ್ ವೆಚ್ಚ.

overhead expenses: ಮೇಲು ವೆಚ್ಚ.

over inhibited child: ಅತ್ಯವರೋಧಿತ ಮಗು; ಅತಿನಿರ್ಬಂಧಿತ ಮಗು.

overinvestment theory: ಅಧಿಕ ಹೂಡಿಕೆ (ಹೂಟೆ) ಸಿದ್ಧಾಂತ.

over-lapping groups: ಅತಿಕ್ರಮಣಕಾರಿ ಸಮೂಹಗಳು; ಪರಸ್ಪರ ಪ್ರಸರಿತ ಸಮೂಹ ಗಳು.

over learning: ಮಿತಿಮೀರಿದ ಕಲಿಕೆ ಅತಿ ಕಲಿಕೆ.

over loading: ಅತಿಭಾರ ಹೇರಿಕೆ. ಅತಿ ಒತ್ತಡ ಅಥವಾ ಅಧಿಕ ಭಾರ ಹೊರಿಸು ವುದು.

overlord: ಅಧಿಪತಿ.

overpopulation: ಜನಸಂಖ್ಯಾ ಬಾಹುಳ್ಯ. ಒಂದು ದೇಶದ ಜನಸಂಖ್ಯೆಯು ಗರಿಷ್ಠ ಜನಸಂಖ್ಯೆ ಮಟ್ಟಕ್ಕಿಂತ ಹೆಚ್ಚು ಇರುವ ಸ್ಥಿತಿ.

over production: ಅಧಿಕ ಉತ್ಪಾದನೆ.

over protected child: ಅತಿ ಸಂರಕ್ಷಿತ ಮಗು.

over protection: ಅತಿ ಸಂರಕ್ಷಣೆ. ಸಮಾಜೀಕರಣದ ದೃಷ್ಟಿಯಿಂದ ಇದು ಅನುಚಿತ.

over riding decision: ಮೇಲು ತೀರ್ಮಾನ.

over saving theory: ಅಧಿಕ ಉಳಿತಾಯ ಸಿದ್ಧಾಂತ; ಉಳಿತಾಯ ಬಾಹುಳ್ಯ ಸಿದ್ಧಾಂತ.

over valuation of currency: ಕರೆನ್ಸಿಯ ಅಧಿಕ ಮೌಲ್ಯತೆ.

overt action: ಪ್ರತ್ಯಕ್ಷ ಕ್ರಮ; ಬಹಿರಂಗ ಕ್ರಮ; ವ್ಯಕ್ತ ಕ್ರಮ.

overt behaviour: ಬಹಿರಂಗ ವರ್ತನೆ. ಸ್ಪಷ್ಟವಾಗಿ ಗೋಚರವಾಗುವ ವರ್ತನೆ.

overt culture: ನೋಡಿ: explicit culture.

overt expression: ಪ್ರಕಟ ಅಭಿವ್ಯಕ್ತತೆ; ಪ್ರಕಟವಾಗಿ ಹೇಳುವುದು.

P

pacific settlement: ಶಾಂತಿಯುತ ಒಡಂಬಡಿಕೆ. ಅಂತಾರಾಷ್ಟ್ರೀಯ ಸಮಸ್ಯೆ ಗಳನ್ನು (ವಿವಾದಗಳನ್ನು) ಯುದ್ಧದ ಮೂಲಕ ಬಗೆಹರಿಸುವ ಬದಲು ಕಾನೂನಿನ ಚೌಕಟ್ಟಿನೊಳಗೆ ಚರ್ಚಿಸಿ ಶಾಂತಿಯುತ ವಿಧಾನಗಳ ಮೂಲಕ ಬಗೆಹರಿಸುವಿಕೆ.

pacifism: ಶಾಂತಿವಾದ. ಯುದ್ಧ ವಿರೋಧೀ ನಿಲುವು.

package programme: ಕಂತೆ ಕಾರ್ಯ ಕ್ರಮ. ಒಟ್ಟು ಅಭಿವೃದ್ಧಿಗೆ ಬೇಕಾದ ವಿವಿಧ ಕಾರ್ಯಕ್ರಮಗಳನ್ನು ಜೊತೆ ಜೊತೆಯಾಗಿ ಹಮ್ಮಿಕೊಂಡ ಯೋಜನೆ.

pagan: ಕ್ಷುದ್ರ; ಧರ್ಮಹೀನ. ಯಾವುದೇ ಧಾರ್ಮಿಕ ಕಟ್ಟುಪಾಡುಗಳಿಗೆ ಒಳಗಾಗದೆ ಪ್ರಾಕೃತಿಕ ಸ್ವಭಾವವೇ ಮುಖ್ಯವೆಂದು ನಂಬಿ ದಾತ.

pagan culture: ಕ್ಷುದ್ರ ಸಂಸ್ಕೃತಿ; ಧರ್ಮ ಹೀನ ಸಂಸ್ಕೃತಿ; ಪ್ರಾಕೃತಿಕ ಧರ್ಮಸಂಸ್ಕೃತಿ. ಉದಾ: ಯುರೋಪ್‌ನಲ್ಲಿ ಕ್ರೈಸ್ತ ಧರ್ಮ ಕ್ಕಿಂತ ಪೂರ್ವಯುಗದ ಸಂಸ್ಕೃತಿಯನ್ನು ಹೀಗೆ ಕರೆಯಲಾಗಿದೆ.

pagan religion: ಕ್ಷುದ್ರ ಧರ್ಮ.

paid up capital: ಪಾವತಿಯಾದ ಬಂಡ ವಾಳ. ಕಂಪೆನಿಯು ಹೂಡಿದ ಷೇರುಗಳ ಮೊಬಲಗಿನಲ್ಲಿ ಷೇರುದಾರರು ಕಂಪೆನಿಗೆ ಪಾವತಿ ಮಾಡಿದ ಒಟ್ಟು ಮೊಬಲಗು.

paidophilia: ಬಾಲರತಿ; ಶಿಶುಕಾಮು ಕತೆ.

pain sensation: ಪೀಡಾ ಸಂವೇದನೆ; ಯಾತನಾ ಸಂವೇದನೆ.

paired associates: ಯುಗ್ಮ ಸಹ ಚರಗಳು.

paired associated learning: ಯುಗ್ಮ ಸಹಚಾರೀ ಕಲಿಕೆ.

paired comparison method: ಯುಗ್ಮ ತೌಲನ ವಿಧಾನ.

paired concepts: ಜೋಡಿ ಪರಿಕಲ್ಪನೆಗಳು. ಸಾಮಾಜಿಕ ವಿದ್ಯಮಾನಗಳ ವಿಶ್ಲೇಷಣೆಗೆ ಉಪಯೋಗಿಸುವ ದ್ವಂದ್ವ ವರ್ಗೀಕರಣ. ಉದಾ: ಪ್ರಾಥಮಿಕ ಸಂಬಂಧ ಮತ್ತು ಮಾಧ್ಯಮಿಕ ಸಂಬಂಧ; ಜನಪದ ಸಮಾಜ ಮತ್ತು ನಗರ ಸಮಾಜ ಇತ್ಯಾದಿ.

paleoanthropology: ಆದಿಮಾನವ ಶಾಸ್ತ್ರ.

paleoclimatology: ಪಳೆಯುಳಿಕೆ ಆಧಾರಿತ ಹವಾಮಾನ ಅಧ್ಯಯನ ಶಾಸ್ತ್ರ.

paleography : ಪ್ರಾಚೀನ ಲಿಪಿಶಾಸ್ತ್ರ. ಶಾಸನಶಾಸ್ತ್ರಕ್ಕೆ ಪೂರಕವಾಗಿರುವ ಅಧ್ಯಯನ ಲಿಪಿ. ಲೇಖನ ಕಾರ್ಯಗಳ ವ್ಯವಸ್ಥಿತ ಅಧ್ಯಯನ.

paleolithic culture: ಹಳೆಶಿಲಾ ಯುಗದ ಸಂಸ್ಕೃತಿ.

paleolithic period: ಹಳೆಶಿಲಾಯುಗ. ನಾಗರಿಕತೆಯ ವಿಕಾಸದ ಮೊದಲ ಹಂತ.

paleontology: ಪಳೆಯುಳಿಕೆ ಅಧ್ಯಯನ ಶಾಸ್ತ್ರ.

paleopathology: ಪಳೆಯುಳಿಕೆ ಆಧಾರಿತ ರೋಗನಿದಾನ ಶಾಸ್ತ್ರ. ಆದಿಮಾನವರ ಅಥವಾ ಪ್ರಾಣಿಗಳ ರೋಗಲಕ್ಷಣಗಳ ಅಧ್ಯಯನ.

paleopsychology: ಪುರಾತನ ಮನೋವಿಜ್ಞಾನ; ಪ್ರಾಕ್ತನ ಮನೋವಿಜ್ಞಾನ.

palpitation: ಏರಿದ ಎದೆಬಡಿತ; ಉದ್ವಿಗ್ನತೆಯಿಂದಾದ ಹೃದಯ ಬಡಿತ.

pan-Asian: ಅಖಿಲ ಏಶಿಯಾದ.

panchayat: ಪಂಚಾಯತಿ; ಪಂಚರ ಸಮಿತಿ.

panchayat raj system : ಪಂಚಾ ಯತ್ ರಾಜ್ ವ್ಯವಸ್ಥೆ.

panic : ತೀವ್ರಾತಂಕ; ತೀವ್ರಭಯ; ಗಾಬರಿ. ತೀವ್ರವಾದ ಉದ್ವಿಗ್ನತೆಯಲ್ಲಿ ಕಾಣಿಸಿಕೊಳ್ಳುವ ಸ್ಥಿತಿ.

panic attack: ಉದ್ದೀಪನಗೊಂಡ ಉದ್ವಿಗ್ನತೆ. ಸಾಮಾನ್ಯ ಮಟ್ಟದಲ್ಲಿರುವ ಉದ್ವಿಗ್ನತೆಯಲ್ಲಿ ಒಮ್ಮೆಲೇ ಏರಿಕೆ.

panic reaction: ಉದ್ವಿಗ್ನ ಪ್ರತಿಕ್ರಿಯೆ; ಗಾಬರಿ ಪ್ರತಿಕ್ರಿಯೆ.

pantheism: ವಿಶ್ವದೇವತಾ ತತ್ವ; ಸಪ್ರಪಂಚ ಬ್ರಹ್ಮವಾದ; ವಿಶ್ವಾತ್ಮವಾದ.

papacy: ಪೋಪ್‌ರವರ ಅಧಿಕಾರ.

papal supremacy: ಪೋಪ್‌ರವರ ಶ್ರೇಷ್ಠತ್ವ.

papal theory: ಪೋಪ್ ಸಿದ್ಧಾಂತ.

paper currency: ಕಾಗದದ ನೋಟುಗಳು.

paper money: ನೋಡಿ: paper currency.

papyres: ಲೇಖನ ಸಾಧನ. ಪ್ರಾಚೀನ ಕಾಲದಲ್ಲಿ ಈಜಿಪ್ಟ್‌ನವರು ಬರೆಯಲು ಉಪಯೋಗಿಸುತ್ತಿದ್ದ ಜೊಂಡು ಜಾತಿಯ ಒಂದು ಜಲಸಸ್ಯದಿಂದ ತಯಾರಿಸಿದ ಬರವಣಿಗೆಯ ಸಾಧನ.

par value: ಮೌಲ್ಯ ಸಮಾನತೆ; ಸಮ ಮೌಲ್ಯ. stocks ಮತ್ತು shares ಮುಂತಾದುವುಗಳ ಮುಖ ಮೌಲ್ಯವು ಅವುಗಳ ಮಾರುಕಟ್ಟೆ ಬೆಲೆಯಷ್ಟೇ ಇರುವಿಕೆ.

pardah system: ಪರದಾ ಪದ್ಧತಿ. ಪರದೆಯನ್ನು ಉಪಯೋಗಿಸಿ ಪುರುಷರ ದೃಷ್ಟಿಗೆ ಸಿಗದಂತೆ ಸ್ತ್ರೀಯರನ್ನು ಪ್ರತ್ಯೇಕಿಸಿ ಡುತ್ತಿದ್ದ ಪದ್ಧತಿ.

paradigm : ಸಿದ್ಧಾಂತ ಸೂತ್ರ.

paradigmatic structural anal ysis: ಸಿದ್ಧಾಂತ ಸೂತ್ರಾತ್ಮಕ ರಾಚನಿಕ ವಿಶ್ಲೇಷಣೆ.

paradox of induction: ಅನು ಗಮನದ ವಿರೋಧಾಭಾಸ.

paradox of thrift: ಉಳಿತಾಯದ ವಿರೋಧಾಭಾಸ. ಸಮಾಜದ ಉಳಿತಾಯದ ದರವನ್ನು ಹೆಚ್ಚಿಸಬೇಕೆಂಬ ಯಾವುದೇ ಪ್ರಯತ್ನವು ವಾಸ್ತವವಾಗಿ ಉಳಿತಾಯ ಆಗಬಹುದಾದ ಮೊತ್ತವನ್ನು ಕಡಿಮೆ ಗೊಳಿಸುವುದು ಎಂಬ ತತ್ವ.

paradox of value: ಮೌಲ್ಯದ ವಿರೋಧಾಭಾಸ. ಕೆಲವು ನಿರ್ದಿಷ್ಟ ಅತ್ಯ ವಶ್ಯಕ ವಸ್ತುಗಳು (ಉದಾ: ನೀರು) ಅತಿ ಮೌಲ್ಯದ್ದಾಗಿದ್ದರೂ ಅತಿ ಕಡಿಮೆ ದರ ಹೊಂದಿದ್ದು ಇನ್ನು ಕೆಲವು ಕನಿಷ್ಟ ಉಪ ಯೋಗವುಳ್ಳ ವಸ್ತುಗಳು (ಉದಾ: ವಜ್ರ) ದುಬಾರಿಯಾಗಿರುವುದೇ ಮೌಲ್ಯದ ವಿರೋಧಾಭಾಸ.

paradoxical paraesthesia: ವಿರೋಧಾ ಭಾಸೀ ಸಂವೇದನೆ.

paragana: ಪರಗಣ. ಒಂದು ಆಡಳಿತ ಘಟಕ.

paragraphia: ಬರಹ ವಿಕಾರ. ಮಾನಸಿಕ ಅಸಮತೋಲನದಿಂದಾಗಿ ಯೋಚಿಸಿದ್ದನ್ನು ಬರೆಯದೆ ಇನ್ನೇನಾದರೂ ಬರೆಯುವಂತಹ ದೋಷ.

parallax: ವಸ್ತು ಸ್ಥಾನಾಭಾಸ. ದೃಷ್ಟಿ ಸ್ಥಾನ ಬದಲಾಯಿಸುವುದರಿಂದ ವಸ್ತುವಿನ ಸ್ಥಾನ ದಲ್ಲಿ ಬದಲಾವಣೆ ಆದಂತೆ ತೋರುವಿಕೆ.

parallel cousin: ಸಮಾಂತರ ಸಹೋದರ/ ರಿ, ನೇರ ಸಹೋದರ/ರಿ. ತಂದೆಯ ಸಹೋದರನ ಅಥವಾ ತಾಯಿಯ ಸಹೋ ದರಿಯ ಮಗ ಅಥವಾ ಮಗಳು.

parallel evolution : ಸಮಾಂತರ ವಿಕಾಸ. ಒಂದೇ ಲಕ್ಷಣಗಳು ಎರಡು ಅಥವಾ ಹೆಚ್ಚು ಗುಂಪುಗಳಲ್ಲಿ ಸ್ವತಂತ್ರವಾಗಿ ವಿಕಸಿಸುವಿಕೆ.

parallel forms of reliability: ವಿಶ್ವಸನೀಯತೆಯ ಸಮಾಂತರ ರೂಪ ಗಳು.

parallel invention: ಸಮಾಂತರ ಆವಿಷ್ಕಾರ. ಎರಡು ವಿಭಿನ್ನ ಸಂಸ್ಕೃತಿಗಳಲ್ಲಿ ಒಂದೇ ಸಮಯದಲ್ಲಿ ಒಂದೇ ರೀತಿಯ ಹೊಸ ಆವಿಷ್ಕಾರ. ಇದು ಪ್ರಸರಣದ ಪ್ರಭಾವವಾಗಿರದೆ ಸ್ವತಂತ್ರ ಬೆಳವಣಿಗೆ ಯಾಗಿರುತ್ತದೆ.

parallel play: ಸಮಾಂತರ ಕ್ರೀಡೆ.

parallel relative: ಸಮಾಂತರ ಬಂಧು; ನೇರ ಬಂಧು.

parallel uncle: ಸಮಾಂತರ ಚಿಕ್ಕಪ್ಪ; ತಂದೆಯ ಸಹೋದರ.

parallelism: ಸಾದೃಶ್ಯವಾದ; ಸಮಾಂತ ರತೆ. ವಿಭಿನ್ನ ಸಂಸ್ಕೃತಿಗಳಲ್ಲಿ ಒಂದೇ ತೆರನಾದ ಸಾಂಸ್ಕೃತಿಕ ರೂಪಗಳು, ಲಕ್ಷಣ

ಗಳು ಹಾಗೂ ಸಾದೃಶ್ಯ ಆವಿಷ್ಕಾರಗಳ ಸ್ವತಂತ್ರ ಬೆಳವಣಿಗೆ.

parallelism of instincts and emotions: ಮೂಲ ಪ್ರೇರಣೆ ಮತ್ತು ಸಂವೇಗಗಳ ಸಮಾಂತರ ವಾದ.

paralogia: ಅಭಿವ್ಯಕ್ತ ದೋಷ; ಪ್ರಕಟಿತ ದೋಷ.

paralogism: ಕುತರ್ಕ; ತರ್ಕದೋಷ. ತನ್ನ ವಾದವು ಅಸತ್ಯವೆಂಬ ಅರಿವಿಲ್ಲದಿರುವುದು.

paralysing suggestion: ಕ್ರಿಯಾ ಘಾತಕ ಸಲಹೆ.

paralytic dementia: ಅಂಗಾಘಾತ; ಅಂಗ ಮನೋಹ್ರಾಸ.

parameter: ಪರಿಮಾಣ ಮಾಪಕ. ಸಾಮಾಜಿಕ ಆರ್ಥಿಕ ಬದಲಾವಣೆಯನ್ನು ಗುರುತಿಸಲು ಅಥವಾ ಅಳೆಯಲು ಸಹಾಯಕವಾಗುವ ಮಾಪಕ ಅಥವಾ ನಿಯತಾಂಕ.

paramnesia: ಸ್ಮೃತಿ ವಿಕಾರ.

paramountcy: ಪರಮಾಧಿಕಾರ; ಸಾರ್ವಭೌಮಾಧಿಕಾರ; ಶ್ರೇಷ್ಠ ಅಧಿಕಾರ.

paranoia: ಬುದ್ಧಿವಿಕಲ್ಪ; ಸಂಭ್ರಾಂತಿ. ಮಾನಸಿಕ ಅವ್ಯವಸ್ಥೆಯಿಂದುಂಟಾಗುವ ಭ್ರಮೆ.

paranoiac: ಬುದ್ಧಿ ವಿಕಲ್ಪದ; ಸಂಭ್ರಾಂತಿಕ.

paranoid behaviour: ಸಂಭ್ರಾಂತಿಕ ವರ್ತನೆ.

paranoid condition: ಸಂಭ್ರಾಂತ ಸ್ಥಿತಿ.

paranoid hypersensitivity: ಸಂಭ್ರಾಂತಿಕ ಅತಿ ಸಂವೇದನಾ ಶೀಲತೆ.

paranoid personality: ಸಂಭ್ರಾಂತಿಕ ವ್ಯಕ್ತಿತ್ವ.

paranoid reactions: ಸಂಭ್ರಾಂತಿಕ ಪ್ರತಿಕ್ರಿಯೆಗಳು. ಸಂಶಯ ಮತ್ತು ಭ್ರಾಂತಿಗಳಿಂದಾಗಿ ತಮ್ಮ ಮೇಲೆ ಯಾರೋ ಸಂಚು ನಡೆಸುತ್ತಾರೆ ಎಂದು ನಂಬಿ ಅದಕ್ಕೆ ಪ್ರತಿಕ್ರಿಯಾತ್ಮಕವಾಗಿ ತೊಡಗುವ ಚಟುವಟಿಕೆಗಳು.

paranoid schizophrenia: ಸಂಭ್ರಾಂತಕ ಮನೋವಿದಳನ.

paranoid scleroid component: ಸಂಭ್ರಾಂತಕ ಜಡ ಘಟಕ.

paranoid state: ಸಂಭ್ರಾಂತಾವಸ್ಥೆ.

paraphasia: ವಾಗ್‌ವಿಕಾರ; ನುಡಿ ವಿಕಾರ.

paraphonia: ಸ್ವರ ವಿಕಾರ.

parapraxis: ವಿಕೃತಾಭಿವ್ಯಕ್ತಿ. ತಪ್ಪು ಬರವಣಿಗೆ. ತಪ್ಪಾಗಿ ವಸ್ತುಗಳ ಮತ್ತು ತಪ್ಪಾದ ಮಾತುಗಳ ಮೂಲಕ ಹೇಳಬೇಕಾದನ್ನು ಅಭಿವ್ಯಕ್ತಿಸಲಾಗದಿರುವುದು.

parapsychic: ಮನೋವಿಕೃತಿ.

parapsychology: ಪರಾ ಮಾನಸ ಶಾಸ್ತ್ರ; ಅತಿ ಮನೋವಿಜ್ಞಾನ.

parasitical: ಪರಾವಲಂಬಿ.

parasympathetic nervous system: ಪರಾನುಕಂಪೀ ನರವ್ಯವಸ್ಥೆ.

parasympathetic system: ಸಹಾನುಭೂತಿಯ ವ್ಯವಸ್ಥೆ.

pardoning power: ಕ್ಷಮಾದಾನದ ಅಧಿಕಾರ. ಉದಾ: ಭಾರತದ ರಾಷ್ಟ್ರಪತಿಯು ಅಪರಾಧಿಗಳಿಗೆ ಕ್ಷಮದಾನ ನೀಡುವುದು, ಶಿಕ್ಷೆಯ ಅವಧಿಯನ್ನು ಮೊಟಕುಗೊಳಿ

ಸುವುದು, ಕಠಿಣ ಶಿಕ್ಷೆಯನ್ನು ಹಗುರ ಶಿಕ್ಷೆಗೆ ಬದಲಿಸುವುದು, ಮರಣ ದಂಡನೆಗೆ ಬದಲಾಗಿ ಬೇರೆ ಶಿಕ್ಷೆ ನೀಡುವ ಅಥವಾ ಮರಣದಂಡನೆ ಯನ್ನು ರದ್ದುಗೊಳಿಸುವ ಅಧಿಕಾರ.

parent office: ಮೂಲ ಕಚೇರಿ; ಪ್ರಧಾನ ಕಚೇರಿ.

parentage: ಜನ್ಮ; ವಂಶ; ಕುಲಗೋತ್ರ; ಮಾತಾ-ಪಿತೃತ್ವ.

parental behaviour: ಹೆತ್ತವರ ವರ್ತನೆ; ತಾಯಿ-ತಂದೆ ವರ್ತನೆ.

parental fixation: ಹೆತ್ತವರ ಸೆಳೆತ; ತಾಯಿ-ತಂದೆ ಸಂಬಂಧನ.

parental instinct: ಹೆತ್ತವರ ಪ್ರವೃತ್ತಿ; ವಾತ್ಸಲ್ಯ ಪ್ರವೃತ್ತಿ.

parental rejection: ಹೆತ್ತವರ ನಿರಾ ಕರಣೆ.

parental relation: ಹೆತ್ತವರ ಸಂಬಂಧ.

pariah group: ನಿರ್ಲಕ್ಷಿತ ಗುಂಪು. ಸ್ಥಾನಮಾನ ತಾರತಮ್ಯದಿಂದ ಬಳಲುವ ಗುಂಪು. ಉದಾ: ಯುರೋಪ್‌ನಲ್ಲಿ ಯಹೂದಿಗಳು.

parish : ಪಾದ್ರಿಯಾಡಳಿತದ ಪ್ರಾಂತ್ಯ.

parity of exchange: ವಿನಿಮಯದ ಸಮಾನತೆ. ವಿದೇಶೀ ವಿನಿಮಯದ ಬೇಡಿಕೆ ಮತ್ತು ಪೂರೈಕೆಗಳೆರಡೂ ಸಮನಾಗಿರುವ ಸನ್ನಿವೇಶ.

parity of reasoning: ವಿವೇಚನಾ ಸಾಮ್ಯತೆ.

parkinesis: ಚಲನ ವಿಕಾರ.

parliament: ಸಂಸತ್ತು; ಕೇಂದ್ರ ಶಾಸಕಾಂಗ. ಶಾಸಕಾಂಗೀಯ ಅಧಿಕಾರವನ್ನು ಹೊಂದಿರುವ ಕೇಂದ್ರೀಯ ಪ್ರತಿನಿಧಿ ಸಭೆ.

parliamentary commissioner: ಸಂಸದೀಯ ಆಯುಕ್ತ. ಸಂಸತ್ ಸದಸ್ಯರು ಗಮನಕ್ಕೆ ತಂದಂತಹ ಸರಕಾರದ ಯಾವುದೇ ಇಲಾಖೆಯ ಮೇಲಣ ದುರಾಡಳಿತದ ಆರೋಪಗಳನ್ನು ವಿಚಾರಣೆ ಮಾಡುವ ಅಧಿಕಾರಿ.

parliamentary constitution: ಸಂಸದೀಯ ಸಂವಿಧಾನ.

parliamentary control: ಸಂಸದೀಯ ಹತೋಟಿ.

parliamentary council: ಸಂಸತ್ ಸಲಹಾಮಂಡಳಿ. ಸಂಸತ್ತಿನ ಮುಂದಿಡ ಬೇಕಾದ ಮಸೂದೆಯ ಕರಡು ಪ್ರತಿಯನ್ನು ರೂಪಿಸುವ ತಜ್ಞರ ಸಮಿತಿ.

parliamentary democracy: ಸಂಸದೀಯ ಪ್ರಜಾಪ್ರಭುತ್ವ.

parliamentary government: ಸಂಸದೀಯ ಸರಕಾರ. ಶಾಸಕಾಂಗವು ಹೆಚ್ಚಿನ ಅಧಿಕಾರವನ್ನು ಹೊಂದಿರುವ ಮತ್ತು ಕಾರ್ಯಾಂಗವು ಶಾಸಕಾಂಗವನ್ನು ಅವ ಲಂಬಿಸಿರುವ ಸರಕಾರ ಪದ್ಧತಿ.

parliamentary practice: ಸಂಸ ದೀಯ ವ್ಯವಹಾರ.

parliamentary secretary: ಸಂಸ ದೀಯ ಕಾರ್ಯದರ್ಶಿ.

parochialization: ಪ್ರಾದೇಶೀಕರಣ; ಪ್ರಾಂತೀಕರಣ.

parole : ನಂಬಿಕೆಯ ವಾಗ್ದಾನ. ಉತ್ತಮ

ನಡತೆಯ ವಾಗ್ದಾನದ ಮೇಲೆ ಮಾಡ ಲಾಗುವ ಅಪರಾಧಿಯ ಬಿಡುಗಡೆ. ಅಪರಾಧಿಯು ತೋರುವ ಸದ್ಗುಣಗಳಿಂದಾಗಿ ಆತನಿಗೆ ಪೂರ್ಣಾವಧಿ ಶಿಕ್ಷೆ ಅನುಭವಿಸುವ ಮೊದಲೇ ಸ್ವಾತಂತ್ರ್ಯ ನೀಡಲು, ಕೆಲವು ಷರತ್ತುಗಳಿಗೆ ಅನುಗುಣವಾಗಿ ಸಂಬಂಧಿಸಿದ ಅಧಿಕಾರಿಯ ಮುಂದೆ ಆತನು ಹಾಜರಾಗುವುದನ್ನು ಮುಂದುವರಿಸುವ ವಾಗ್ದಾನ ನೀಡಿದಾಗ ಸೆರೆಯಿಂದ ಬಿಡುಗಡೆ ಮಾಡುವುದು.

paroxysm: ಆವೇಶ.

parricide: ರಾಜದ್ರೋಹಿ; ದೇಶ ದ್ರೋಹಿ; ಪಿತೃಘಾತಕ.

part-time: ಅರೆಕಾಲಿಕ.

part whole learning: ಖಂಡಾಖಂಡ ಕಲಿಕೆ; ಅಂಶಪೂರ್ಣ ಕಲಿಕೆ.

parthenogenesis: ನಿರ್ಲಿಂಗ ಜನನ. ಲೈಂಗಿಕತೆಯಿಲ್ಲದೆ ಕೆಲವು ಕೀಟಗಳಲ್ಲಿ ಕಾಣುವ ಜೀವೋತ್ಪನ್ನ ವಿಧಾನ.

partial correlation: ಆಂಶಿಕ ಸಹ ಸಂಬಂಧ.

partial equilibrium: ಆಂಶಿಕ ಸಮ ತೋಲನ.

partial modification: ಆಂಶಿಕ ಬದ ಲಾವಣೆ.

partial oligopoly : ಆಂಶಿಕ ಬಹುಜನ ಸ್ವಾಮ್ಯ. ಕೈಗಾರಿಕೋತ್ಪನ್ನದ ಬೆಲೆ ನಿರ್ಧಾರದಲ್ಲಿ ಯಾವುದಾದರೊಂದು ಉದ್ಯಮ ಸಂಸ್ಥೆಯು ನಾಯಕನಂತೆ ವರ್ತಿಸಿದರೆ ಅದನ್ನು ಆಂಶಿಕ (ಭಾಗಶಃ) ಬಹುಜನ ಸ್ವಾಮ್ಯ ವೆನ್ನಲಾಗುತ್ತದೆ.

partial rank correlation: ಆಂಶಿಕ ಶ್ರೇಣಿಯ ಸಹಸಂಬಂಧ.

partial reinforcement: ಆಂಶಿಕ ಪುನರ್ಬಲನ.

partial structure: ಆಂಶಿಕ ರಚನೆ.

partial trauma: ಆಂಶಿಕ ಮನೋ ಘಾತ.

partial unemployment: ಭಾಗಶಃ ನಿರುದ್ಯೋಗ.

participant: ಸಹಭಾಗಿ.

participant observation: ಸಹ ಭಾಗೀ ಅವಲೋಕನ. ಸಂಶೋಧಕನು ತಾನು ಸಂಶೋಧನೆ ನಡೆಸುವ ಗುಂಪು ಅಥವಾ ಸಮುದಾಯದ ಸದಸ್ಯನಾಗಿ ಬೆರೆತು, ಅವರ ಜೀವನ ವಿಧಾನಗಳೆಲ್ಲವನ್ನು ಅನುಸರಿಸಿ, ಗುಂಪಿನ ಸದಸ್ಯರ ಆತ್ಮೀಯತೆಯನ್ನು ಸಾಧಿಸಿ ಅವರಿಗೆ ತಿಳಿಯದಂತೆ ನಡೆಸುವ ಅಧ್ಯಯನ ವಿಧಾನ. ಅನೇಕ ಮಾನವ ಶಾಸ್ತ್ರೀಯ ಅಧ್ಯಯನಗಳು ಈ ಬಗೆಯಲ್ಲಿ ನಡೆದಿವೆ.

participant observer: ಸಹಭಾಗೀ ಅವಲೋಕನಕಾರ.

participative management: ಸಹಭಾಗೀ ನಿರ್ವಹಣೆ. ಒಂದು ಸಂಸ್ಥೆಯಲ್ಲಿ ಎಲ್ಲಾ ನೌಕರರ ಭಾಗವಹಿಸುವಿಕೆ ಅಥವಾ ಸಹಭಾಗಿತ್ವದ ಮೂಲಕ ಕಾರ್ಯ ನಿರ್ವಹಿಸುವಿಕೆ.

particular concrete situation: ನಿರ್ದಿಷ್ಟ ಮೂರ್ತ ಸನ್ನಿವೇಶ.

particular loss: ನಿರ್ದಿಷ್ಟ ನಷ್ಟ (ಕ್ಷತಿ). ಸಾಗಾಣಿಕೆಗಾಗಿ ಹಡಗಿನಲ್ಲಿ ತುಂಬಿದ ಯಾವುದೇ ನಿರ್ದಿಷ್ಟ ಮಾಲಿನ ನಷ್ಟ. ಆ

ಮಾಲಿನ ವಿಮಾದಾರರು ಮಾತ್ರ ಆ ನಷ್ಟ ವನ್ನು ಭರಿಸಬೇಕಾಗುತ್ತದೆ.

particular will: ನಿರ್ದಿಷ್ಟ ಇಚ್ಛೆ; ವೈಯಕ್ತಿಕ ಇಚ್ಛೆ.

particularism: ಪ್ರತ್ಯೇಕತಾ ವಾದ; ನಿರ್ದಿಷ್ಟ ವಾದ.

particularizing terminology: ವಿಶೇಷ ಪದಮಾಲೆ. ಪ್ರತಿಯೊಬ್ಬ ವ್ಯಕ್ತಿಯನ್ನು ವಿಭಿನ್ನ ಪದಗಳಿಂದ ಹೆಸರಿಸುವ ಮೂಲಕ ರಕ್ತಸಂಬಂಧವನ್ನು ವಿವರಿಸುವುದು.

partition: ವಿಭಜನೆ.

partnership: ಪಾಲುಗಾರಿಕೆ.

party government: ಪಕ್ಷದ ಸರಕಾರ.

party interest: ಪಕ್ಷದ ಹಿತ.

party politics: ಪಕ್ಷ ರಾಜಕೀಯ. ೧. ಎಲ್ಲರ ಹಿತದ ಬದಲಾಗಿ ಅಥವಾ ರಾಷ್ಟ್ರದ ಹಿತದ ಬದಲಾಗಿ ತನ್ನ ಪಕ್ಷದ ಹಿತವನ್ನೇ ಮುಂದಿಟ್ಟುಕೊಂಡು ನಡೆಸುವ ರಾಜಕೀಯ ಚಟುವಟಿಕೆ. ೨. ರಾಜಕೀಯ ಪಕ್ಷದೊಳಗೇನೇ ಅಧಿಕಾರಕ್ಕಾಗಿ ನಡೆಯುವ ಮೇಲಾಟ.

party system: ಪಕ್ಷ ಪದ್ಧತಿ.

party whip: ಪಕ್ಷ ಸಚೇತಕ.

partyless democracy: ಪಕ್ಷರಹಿತ ಪ್ರಜಾತಂತ್ರ; ಪಕ್ಷರಹಿತ ಪ್ರಜಾಪ್ರಭುತ್ವ.

parwardah: ಪರವರ್ಧ. ದೊಡ್ಡ ಕುಟುಂಬಗಳನ್ನು ಹೊಂದಿದ ಕಡುಬಡವರು ಶ್ರೀಮಂತರ ಮನೆಗಳಲ್ಲಿ ತಮ್ಮ ಹೆಣ್ಣು ಮಕ್ಕಳನ್ನಿಡುವುದು. ಶಿಕ್ಷಣ, ಆರೋಗ್ಯದಿಂದ ವಂಚಿತರಾದ ಈ ಮಕ್ಕಳು ಪ್ರಾಯಕ್ಕೆ ಬಂದ ಕೂಡಲೇ ಕುಟುಂಬದ ತರುಣ ಹುಡುಗರ ಲೈಂಗಿಕ ತೃಷೆ ತೀರಿಸುವ ವಸ್ತುಗಳಾಗುತ್ತಾರೆ.

passion: ಭಾವಾವೇಶ; ಭಾವತೀವ್ರತೆ ಅತಿಲಾಲಸೆ.

passionate: ಭಾವೋದ್ವೇಗಶೀಲ.

passive absorption: ಮಂದ ತಲ್ಲೀನತೆ.

passive aggressive personality: ನಿಷ್ಕ್ರಿಯ ಆಕ್ರಮಣಶೀಲ ವ್ಯಕ್ತಿತ್ವ. ಸಂದಿಗ್ಧಗಳೆದುರು ಆಂತರಿಕವಾಗಿ ಅಸಹಾಯಕರೆನಿಸಿದರೂ, ಹಠ, ಪ್ರತಿರೋಧ, ಕೋಪಗಳಿಂದ ವರ್ತಿಸುವ ಪೊಳ್ಳು ಹಠವುಳ್ಳವರು.

passive bearers: ಮಂದ ವಾಹಕರು.

passive crowd : ನಿಷ್ಕ್ರಿಯ ಜನಸಂದಣಿ; ಜಡ ಜನಸಂದಣಿ.

passive dependent personality: ಜಡ ಅವಲಂಬನ ವ್ಯಕ್ತಿತ್ವ. ಜೀವನದ ಸಮಸ್ಯೆಗಳನ್ನು ಬಗೆಹರಿಸಲಾಗದ ಅಸಹಾಯಕ ವ್ಯಕ್ತಿತ್ವ.

passive forgetting: ನಿಕ್ಷೇಪ್ಟ ವಿಸ್ಮೃತಿ; ನಿಕ್ಷೇಪ್ಟ ವಿಸ್ಮರಣೆ; ನಿಕ್ಷೇಪ್ಟ ಮರೆವು.

passive imagination: ಜಡ ಕಲ್ಪನೆ.

passive magic: ಮಂದ ಮಾಟ.

passive resistance: ಜಡ ಪ್ರತಿಭಟನೆ; ಶಾಂತಿಯುತ ಪ್ರತಿಭಟನೆ (ಸತ್ಯಾಗ್ರಹ); ನಿಶ್ಶಸ್ತ್ರ ಪ್ರತಿಭಟನೆ.

passive therapy: ನಿಷ್ಕ್ರಿಯ ಚಿಕಿತ್ಸೆ; ಜಡ ಚಿಕಿತ್ಸೆ.

past oriented folkfore: ಭೂತಾಭಿಮುಖಿ ಜಾನಪದ.

pastoral community: ಪಶುಪಾಲನಾ ಸಮುದಾಯ.

pastoral social system: ಪಶು ಪಾಲನಾ ಸಾಮಾಜಿಕ ವ್ಯವಸ್ಥೆ.

pastoral stage: ಪಶುಪಾಲನಾ ಯುಗ.

pastoralism: ಪಶುಪಾಲನೆ. ಸಾಕು ಪ್ರಾಣಿಗಳ ಸುತ್ತ ಹೆಣೆದಿರುವ ಆರ್ಥಿಕತೆ.

patavari: ಪಟವಾರಿ. ಗ್ರಾಮಾಧಿಕಾರಿ.

patch method: ತುಂಡು ವಿಧಾನ.

patent: ಸ್ವಾಮ್ಯ ಸನದು. ವಾಣಿಜ್ಯ ಸೌಲಭ್ಯ, ಹಕ್ಕು ಮತ್ತು ಚಿಹ್ನೆಯ ಸ್ವಾಮ್ಯ.

patent right: ಸ್ವಾಮ್ಯ ಸನದಿನ ಹಕ್ಕು.

pater familias: ನೋಡಿ : patriarchal family .

paternal authority: ಪಿತೃವಂಶೀಯ ಅಧಿಕಾರ; ಪಿತೃಸದೃಶ ಅಧಿಕಾರ.

paternal family: ಪಿತೃಮೂಲ ಕುಟುಂಬ. ತಂದೆಯಿಂದ ರಕ್ತ ಸಂಬಂಧವು ಗುರುತಿಸಲ್ಪಡುವ ಕುಟುಂಬ. ನೋಡಿ: patriarchal family.

paternal interference: ಪೈತ್ರಿಕ ಹಸ್ತಕ್ಷೇಪ; ತಂದೆಯ ಅನುರೋಧ.

paternalism: ಪಿತೃಸ್ಥಾನತ್ವ. ಅನುಯಾಯಿಗಳ ವಿಧೇಯತೆ ಹಾಗೂ ನಿಷ್ಠೆಗಾಗಿ ಅವರ ಅವಶ್ಯಕತೆಗಳನ್ನು ನಾಯಕನು ಪೂರೈಸುವ ನಾಯಕತ್ವ ವಿಧಾನ.

patesi: ಪುರೋಹಿತರು. ಬೆಬಿಲೋನಿಯಾದ ಸಮಾಜದಲ್ಲಿದ್ದ ನಾಲ್ಕು ವರ್ಗಗಳಲ್ಲಿ ಒಂದು. ಇವರು ಜ್ಯೋತಿಷ್ಯದ ಆಧಾರದಲ್ಲಿ ಭವಿಷ್ಯದ ಸಂಗತಿಗಳನ್ನು ತಿಳಿಸುತ್ತಿದ್ದರು.

pathogenesis: ರೋಗೋತ್ಪತ್ತಿ.

pathological evidence: ರೋಗಾವಿಷ್ಟ ಪುರಾವೆ.

pathological fact: ರೋಗಾವಿಷ್ಟ ಸಂಗತಿ; ರೋಗಾವಿಷ್ಟ ತಥ್ಯಾಂಶ.

pathological intoxication: ರೋಗಾವಿಷ್ಟ ಅಮಲು.

pathology: ರೋಗನಿದಾನ ಶಾಸ್ತ್ರ.

patria potestas : ಪಿತೃ ಪರಮಾಧಿಕಾರ.

patriarchal family: ಪಿತೃಪ್ರಧಾನ ಕುಟುಂಬ. ತಂದೆಯು ಕುಟುಂಬದ ಮುಖ್ಯಸ್ಥನಾಗಿದ್ದು ಅಧಿಕಾರವು ಆತನ ಕೈಯಲ್ಲಿರುವಂತಹ ಕುಟುಂಬ.

patriarchal joint family: ಪಿತೃ ಪ್ರಧಾನ ಅವಿಭಕ್ತ ಕುಟುಂಬ.

patriarchal society: ಪಿತೃಪ್ರಧಾನ ಸಮಾಜ.

patriarchal theory: ಪಿತೃಪ್ರಧಾನ ಸಿದ್ಧಾಂತ. ರಾಜ್ಯದ ಉಗಮಕ್ಕೆ ಪಿತೃಪ್ರಧಾನ ಕುಟುಂಬ ವ್ಯವಸ್ಥೆಯೇ ಕಾರಣ ಎನ್ನುವ ಸಿದ್ಧಾಂತ.

patriarchate : ಪುರುಷ ಪ್ರಧಾನ ಸಂಸ್ಕೃತಿ.

patriarchy: ಪಿತೃಪ್ರಧಾನತೆ. ಕುಟುಂಬದ ಆಡಳಿತ ಹಾಗೂ ಆಸ್ತಿ ಹಕ್ಕುಗಳ ಅನುವಂಶೀಯತೆಯು ಹಿರಿಯ ಗಂಡಸಿಗೆ ಸೇರಿದ್ದಾಗಿದ್ದು ಇಂತಹ ಅಧಿಕಾರವು ಗಂಡು ಮಕ್ಕಳಿಗೆ ಮಾತ್ರ ಬರುವ ಪದ್ಧತಿ.

patricians : ಕುಲಸ್ಥ ಶ್ರೀಮಂತ ವರ್ಗ; (ರೋಮ್) ನಗರ ಪಿತೃಗಳು.

patrilineal descent: ಪಿತೃವಂಶೀಯ; ಪಿತೃಮೂಲ ವಂಶ.

patrilineal family: ಪಿತೃವಂಶೀಯ

ಕುಟುಂಬ. ಗಂಡು ಸಂತತಿಯ ಮೂಲಕ ಕುಟುಂಬದ ಉತ್ತರಾಧಿಕಾರ ಹಾಗೂ ವಂಶಾ ವಳಿಯನ್ನು ನಿರ್ಧರಿಸುವ ಕುಟುಂಬ.

patrilineal kinship: ಪಿತೃವಂಶೀಯ ರಕ್ತ ಸಂಬಂಧ. ಪುರುಷರ ಮೂಲಕ ಗುರುತಿಸಲ್ಪಡುವ ರಕ್ತ ಸಂಬಂಧ.

patrilocal family: ಪಿತೃಸ್ಥಾನೀಯ ಕುಟುಂಬ. ಮದುವೆಯಾದ ದಂಪತಿಗಳು ಗಂಡನ ಮನೆಯಲ್ಲಿ ವಾಸಿಸುವಂಥ ಕುಟುಂಬ.

patrimonialism: ಪಿತೃ ಅಧಿಕಾರ. ಪಿತೃಗಳಿಂದ ಮಕ್ಕಳು ಆಡಳಿತಾಧಿಕಾರ ಪಡೆಯುವುದು.

patriotism : ರಾಷ್ಟ್ರಭಕ್ತಿ; ರಾಷ್ಟ್ರಪ್ರೇಮ.

patron-client relationship : ಪೋಷಕ ಆಶ್ರಿತ ಸಂಬಂಧ. ಇದು ಶೋಷಕ-ಶೋಷಿತ ಸಂಬಂಧಕ್ಕೆ ವಿರುದ್ಧವಾದುದು. ನೋಡಿ: exploiter-exploited relation ship.

patronage: ಪೋಷಣೆ; ಸಂರಕ್ಷಣೆ.

patronymic family: ಪಿತೃವಂಶಾ ವಳಿಯ ಕುಟುಂಬ. ಮಕ್ಕಳು ತಂದೆಯ ವಂಶಾವಳಿಯನ್ನು ಹೊಂದಿರುವ ಕುಟುಂಬ.

patronymic system: ನೋಡಿ: patronymic family.

pattern: ರಚನಾ ಮಾದರಿ; ನಮೂನೆ.

pattern of production: ಉತ್ಪಾದನಾ ಮಾದರಿ.

pattern variable: ಮಾದರಿ ಪರಿ ವರ್ತಕ. ಒಬ್ಬನು ಇನ್ನೊಬ್ಬನೊಡನೆ ಅಂತರ್ ಕ್ರಿಯೆಯಲ್ಲಿ ತೊಡಗುವ ಸಂದರ್ಭದಲ್ಲಿ ಕಂಡುಬರುವ ಮಾದರಿ ಗಳಲ್ಲಿ ೫ ಬಗೆಯ ಪರಿವರ್ತಕಗಳನ್ನು ಟಾಲ್‌ಕಾಟ್ ಪಾರ್ಸನ್ಸ್ ಎಂಬ ಸಮಾಜ ಶಾಸ್ತ್ರಜ್ಞನು ವಿವರಿಸಿದ್ದಾನೆ. ನೋಡಿ: 1. affetivity-affective neutrality; 2. self orientation-collective orientation; 3. universalism-particularism; 4. ascription-achievement ಮತ್ತು 5. diffuseness-specificity.

patterned evasion: ವ್ಯವಸ್ಥಿತವಾಗಿ ತಪ್ಪಿಸಿಕೊಳ್ಳುವಿಕೆ. ಒಂದು ಸಾಮಾಜಿಕ ವ್ಯವಸ್ಥೆಯಲ್ಲಿ ಸ್ಥಾಪಿತ ಸಾಮಾಜಿಕ ನಿಯಮಗಳನ್ನು ಮುರಿಯುವ ಕ್ರಿಯೆಯು ನಡೆಯುತ್ತಿರುತ್ತದೆ. ಉದಾ: ತೆರಿಗೆ ತಪ್ಪಿಸುವಿಕೆ.

pay back method: ಮರುಸಂದಾಯ ವಿಧಾನ. ಹೂಟೆಯ ನಿರ್ಧಾರಗಳಲ್ಲಿ ಅನಿಶ್ಚಿತತೆಗಳ ನಿವಾರಣೆಗಾಗಿ ಅನುಸರಿಸಲಾಗುವ ಒಂದು ವಿಧಾನ. ಈ ವಿಧಾನದಲ್ಲಿ ಅಲ್ಪಾವಧಿ ಗಳಿಕೆಯ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುತ್ತದೆ.

payment: ಪಾವತಿ.

payment deficit: ಪಾವತಿ ಕೊರತೆ.

peace treaty: ಶಾಂತಿ ಒಪ್ಪಂದ.

peaceful access: ಶಾಂತಿಯುತ ಸಂಪರ್ಕ ಲಭ್ಯತೆ. ಒಂದು ಗುಂಪಿನ ಭೂಪ್ರದೇಶದೊಳಗೆ ಆ ಗುಂಪಿನಿಂದ ಹೊರತಾದವನಿಗೆ ಘರ್ಷಣೆಯಿಲ್ಲದೆ ಪ್ರವೇಶಿಸಲು ಅನುಮತಿ ಕೊಡುವುದು.

peaceful progress: ಶಾಂತಿಯುತ ಪ್ರಗತಿ.

peaceful settlement: ಶಾಂತಿಯುತ ಇತ್ಯರ್ಥ.

peasant community: ರೈತ ಸಮುದಾಯ. ಸರಳ ತಾಂತ್ರಿಕತೆಯುಳ್ಳ ಕೃಷಿಯನ್ನು ಅವಲಂಬಿಸಿದ ಸ್ವಂತ ಕೆಲಸ ಮಾಡುವ ಭೂ ಹಿಡುವಳಿದಾರರ ಸಮು ದಾಯ.

peasant farming: ರೈತಾಪಿ ವ್ಯವಸಾಯ. ಈ ರೀತಿಯ ಕೃಷಿ ಪದ್ಧತಿಯಲ್ಲಿ ರೈತನು ಸಣ್ಣ ಪ್ರಮಾಣದಲ್ಲಿರುವ ತನ್ನ ಸ್ವಂತ ಭೂಮಿಯನ್ನು ತನ್ನ ಕುಟುಂಬದ ಸದಸ್ಯರ ಸಹಾಯದಿಂದ ಸಾಗುವಳಿ ಮಾಡುವನು.

peasant force: ರೈತ ಜನ.

peasant proprietorship: ರೈತ ಒಡೆತನ. ಬಹುತೇಕ ತನ್ನ ಕುಟುಂಬದ ಸದಸ್ಯರ ಶ್ರಮಶಕ್ತಿಯನ್ನೇ ಅವಲಂಬಿ ಸಿರುವ ಸಣ್ಣ ಹಿಡುವಳಿದಾರರ ಭೂ ಒಡೆತನ.

peasant revolt: ರೈತ ಕ್ರಾಂತಿ; ಕೃಷಿಕರ ಬಂಡಾಯ.

pebble tool: ಕಲ್ಲಿನ ಆಯುಧ. ಚೂಪಾದ ಅಂಚುಳ್ಳ ಬೆಣಚು ಕಲ್ಲಿನ ಆಯುಧ.

peccadillophobia: ದುಷ್ಕರ್ಮ ಭೀತಿ; ತಪ್ಪು ಮಾಡುತ್ತೇನೆಂಬ ಭೀತಿ.

pecuniary penalty: ಆರ್ಥಿಕ ದಂಡ.

pedagogy: ಶಿಕ್ಷಣ ಶಾಸ್ತ್ರ.

pedagogic psychology: ಶಿಕ್ಷಣ ಮನೋವಿಜ್ಞಾನ.

pedophilia: ನೋಡಿ: paidophilia.

peer group: ಓರಗೆಯ ಗುಂಪು. ಸಮವಯಸ್ಕರ ತಂಡ. ಸಮಾನ ಸ್ಥಾನವುಳ್ಳ ಸಮವಯಸ್ಕರ ಸದಸ್ಯರೊಳಗೆ ಆತ್ಮೀಯ ಸಂಬಂಧವುಳ್ಳ ಪ್ರಾಥಮಿಕ ಸಮೂಹ.

peerage: ಮನ್ನೆಯತ್ವ; ಶ್ರೀಮಂತ ವರ್ಗದ ಸದಸ್ಯತ್ವ; ಬ್ರಿಟಿಷ್ ಸಂಸತ್ತಿನ ಮೇಲ್ಮನೆಯ ಸದಸ್ಯತ್ವ.

peg down: ದರ ನಿರ್ಬಂಧನೆ. ವಿನಿ ಮಯ ದರವನ್ನು ಸ್ಥಿರವಾಗಿ ಒಂದು ಹಂತದಲ್ಲಿ ನಿಲ್ಲಿಸುವುದು.

pegging: ನೋಡಿ: peg down.

penal code: ದಂಡನಾ ಕಾಯಿದೆ; ದಂಡ ಸಂಹಿತೆ.

penal policy: ಶಿಕ್ಷಾ ಧೋರಣೆ.

penance: ಪ್ರಾಯಶ್ಚಿತ್ತ; ದೇಹದಂಡನೆ; ತಪಸ್ಸು.

penetrating power: ಅಂತರ್ವೇದಿ ಶಕ್ತಿ.

penetration price: ಒಳನುಗ್ಗುವ ಬೆಲೆ. ಮಾರುಕಟ್ಟೆಯಲ್ಲಿ ಒಳನುಗ್ಗುವುದಕ್ಕಾಗಿ ಉದ್ಯಮವು ತನ್ನ ಉತ್ಪನ್ನಗಳಿಗೆ ಕಡಿಮೆ ಬೆಲೆಯನ್ನು ನಿಗದಿಪಡಿಸುವ ವಿಧಾನ. ಇಲ್ಲಿ ಉತ್ಪಾದನಾ ವೆಚ್ಚಕ್ಕೆ ಮಾರಾಟವೆಚ್ಚವನ್ನು ಸೇರಿಸಿ ಸ್ವಲ್ಪ ಮಾತ್ರ ಲಾಭ ಬರುವಂತೆ ಬೆಲೆ ನಿಗದಿಪಡಿಸಲಾಗುತ್ತದೆ.

penitentiary: ಪ್ರಾಯಶ್ಚಿತ ಗೃಹ; ಸುಧಾರಣ ಗೃಹ. ಸೆರೆಮನೆಯ ಸುಧಾರಣಾ ವಿಭಾಗ.

penology: ದಂಡನಾ ಶಾಸ್ತ್ರ. ವಿವಿಧ ಸಮಾಜಗಳಲ್ಲಿ ವಿವಿಧ ಕಾಲಗಳಲ್ಲಿ ಅಪರಾಧಗಳಿಗೆ ನೀಡುವ ಶಿಕ್ಷೆಗಳ ಕುರಿತು ಅಭ್ಯಸಿಸುವ ಅಪರಾಧ ಶಾಸ್ತ್ರದ ಒಂದು ವಿಭಾಗ.

pension: ಪಿಂಚಣಿ; ನಿವೃತ್ತಿ ವೇತನ.

pent up energy: ಅದುಮಿಟ್ಟ ಚೈತನ್ಯ.

people's capitalism: ಜನತಾ ಬಂಡವಾಳಶಾಹಿತ್ವ. ಬಂಡವಾಳಶಾಹಿ ವ್ಯವಸ್ಥೆ

ಯಲ್ಲಿ ಕ್ರಮೇಣ ಶೋಷಣೆಯು ಮರೆಯಾಗಿ, ಆಸ್ತಿಯು ಚದುರಿಹೋಗಿ, ಪ್ರಜಾತಾಂತ್ರಿಕತೆ ಬಲಗೊಂಡು ದುಡಿಯುವ ಜನರ ಮತ್ತು ಬಂಡವಾಳಗಾರರ ವರಮಾನಗಳು ಸಮಾನವಾಗುತ್ತವೆ ಎಂಬ ಒಂದು ಸೈದ್ಧಾಂತಿಕವಾದ.

people's control: ಜನತಾ ನಿಯಂ ತ್ರಣ. ಸೋವಿಯತ್ ಒಕ್ಕೂಟದಲ್ಲಿ ದುಡಿ ಯುವ ಜನಸಮೂಹಗಳು ಸಕ್ರಿಯವಾಗಿ ಭಾಗವಹಿಸುತ್ತಿದ್ದ ರಾಜ್ಯ ನಿಯಂತ್ರಣ.

people's democracy: ಜನತಂತ್ರ; ಜನತಾ ಪ್ರಜಾಪ್ರಭುತ್ವ.

people's democratic revolution: ಜನತಂತ್ರ ಕ್ರಾಂತಿ. ಯುರೋಪ್ ಮತ್ತು ಏಶಿಯಾದ ಹಲವು ದೇಶಗಳಲ್ಲಿ ಎರಡನೆಯ ಮಹಾಯುದ್ಧದ ಕಾಲದಲ್ಲಿ (೧೯೩೯-೪೫) ಮತ್ತು ಅನಂತರ ಜರಗಿದ ಸಾಮ್ರಾಜ್ಯಶಾಹಿತ್ವ ಮತ್ತು ಪಾಳೆಗಾರಿಕೆಯನ್ನು ವಿರೋಧಿಸಿದ ಪ್ರಜಾಪ್ರಭುತ್ವವಾದಿ ಕ್ರಾಂತಿ. ಇದು ಸಮಾಜವಾದಿ ಪರಿವರ್ತನೆಗೆ ಮುನ್ಸೂಚನೆಯಾಗಿತ್ತು.

people's democratic state: ಜನ ತಂತ್ರ ರಾಷ್ಟ್ರ; ಜನತೆಯ ಪ್ರಜಾಸತ್ತಾತ್ಮಕ ರಾಷ್ಟ್ರ.

people's power: ಜನತಾಧಿಕಾರ.

people's republic: ಜನತಾ ಗಣರಾಜ್ಯ. ಕಮ್ಯೂನಿಸ್ಟರು ಪೀಕಿಂಗ್ ನಗರದಲ್ಲಿ ೧೯೪೯ ಆಕ್ಟೋಬರ್‌ನಲ್ಲಿ ಜನತಾ ಗಣರಾಜ್ಯವನ್ನು ಸ್ಥಾಪಿಸಿದರು.

people's welfare: ಜನತಾ ಕಲ್ಯಾಣ.

per capita income: ತಲಾ ಆದಾಯ.

per capita money income: ಹಣ ರೂಪದ ತಲಾ ಆದಾಯ.

per capita real income: ನೈಜ ತಲಾ ವರಮಾನ.

perceived role performance: ಗ್ರಹೀತ ಗ್ರಾಹ್ಯ ಪಾತ್ರ ನಿರ್ವಹಣೆ. ನಿರ್ದಿಷ್ಟ ಸಂದರ್ಭದಲ್ಲಿ ತನ್ನ ನಡತೆಯನ್ನು ಇತರರು ಯಾವ ರೀತಿ ನಿರೀಕ್ಷಿಸಬಹು ದೆಂದು ವ್ಯಕ್ತಿಯು ಗ್ರಹಿಸಿ ಅದರಂತೆ ನಡೆ ಯುವುದು.

percentile score: ಪ್ರತಿಶತ ಪ್ರಾಪ್ತಾಂಕ.

perceptible sensation: ದೃಷ್ಟ ಸಾಧ್ಯ ಸಂವೇದನೆ; ಪ್ರತ್ಯಕ್ಷ ಜ್ಞಾನಸಾಧ್ಯ ಸಂವೇದನೆ.

perception: ಗ್ರಹಿಕೆ; ಅರಿವು; ದೃಷ್ಟತೆ; ಪ್ರತ್ಯಕ್ಷ ಜ್ಞಾನ; ಗ್ರಹಣ ಶಕ್ತಿ.

perception of depth: ಆಳ ಪ್ರತ್ಯಕ್ಷ ಜ್ಞಾನ.

perceptual constancy: ಪ್ರತ್ಯಕ್ಷ ಜ್ಞಾನಾತ್ಮಕ ಸ್ಥಿರತೆ.

perceptual defence: ಪ್ರತ್ಯಕ್ಷ ಜ್ಞಾನಾತ್ಮಕ ರಕ್ಷಣೆ.

perceptual experience: ಪ್ರತ್ಯಕ್ಷ ಜ್ಞಾನಾತ್ಮಕ ಅನುಭವ; ಗ್ರಹೀತ ಅನುಭವ.

perceptual judgement: ಗ್ರಹೀತ ನಿರ್ಣಯ.

perceptual knowledge: ಗ್ರಹೀತ ಜ್ಞಾನ.

perfect competition: ಪರಿಪೂರ್ಣ ಪೈಪೋಟಿ (ಸ್ಪರ್ಧೆ).

perfect discrimination: ಪರಿ ಪೂರ್ಣ ತಾರತಮ್ಯ. ಏಕಸ್ವಾಮ್ಯ ವ್ಯಾಪಾರಿಗೆ ಗ್ರಾಹಕನು ತನ್ನ ಸರಕಿಗೆ ಕೊಡಬಹುದಾದ

ಗರಿಷ್ಟ ಬೆಲೆಯು ತಿಳಿದಿದ್ದಾಗ ಅವನು ಪ್ರತಿಯೊಬ್ಬ ಗ್ರಾಹಕನಿಗೆ ವಿಭಿನ್ನ ಬೆಲೆಗಳನ್ನು ನಿಗದಿಪಡಿಸಿ ಅವರು ಕೊಡಬಹುದಾದ ಗರಿಷ್ಟ ಬೆಲೆಯನ್ನು ಪಡೆಯುವುದರ ಮೂಲಕ ಉಂಟುಮಾಡುವ ಬೆಲೆ ತಾರತಮ್ಯ.

perfect inelasticity: ಪರಿಪೂರ್ಣ ಸ್ಥಿತಿಸ್ಥಾಪಕ ರಹಿತತೆ. ಬೆಲೆಯೇರಿಕೆ ದೊಡ್ಡ ಪ್ರಮಾಣದಲ್ಲಿ ಉಂಟಾದರೂ ಅದು ಬೇಡಿಕೆಯ ಮೇಲೆ ಯಾವ ಪರಿಣಾಮವನ್ನೂ ಬೀರದಿರುವ ಸ್ಥಿತಿ.

perfect society : ಪರಿಪೂರ್ಣ ಸಮಾಜ.

perfectionism: ಪರಿಪೂರ್ಣ ವಾದ.

perfectly elastic demand: ಪರಿಪೂರ್ಣ ಸ್ಥಿತಿಸ್ಥಾಪಕ ಬೇಡಿಕೆ. ಒಂದು ವಸ್ತುವಿನ ಬೆಲೆಯಲ್ಲಿ ಅತ್ಯಲ್ಪ ಬದಲಾವಣೆಯಾದಾಗ ಬೇಡಿಕೆಯಲ್ಲಿ ಉಂಟಾಗುವ ಗಣನೀಯ ಬದಲಾವಣೆ.

perfectly elastic supply: ಪರಿ ಪೂರ್ಣ ಸ್ಥಿತಿಸ್ಥಾಪಕ ಪೂರೈಕೆ. ವಸ್ತು ವೊಂದರ ಬೆಲೆಯಲ್ಲಿ ಅತಿ ಸ್ವಲ್ಪ ಬದಲಾವಣೆಯುಂಟಾದಾಗ ಅದರ ಪೂರೈಕೆಯಲ್ಲಿ ಉಂಟಾಗುವ ಗಣನೀಯ ಬದಲಾವಣೆ.

perfectly inelastic demand: ಪರಿಪೂರ್ಣ ಸ್ಥಿತಿಸ್ಥಾಪಕ ರಹಿತ ಬೇಡಿಕೆ. ನಿರ್ದಿಷ್ಟ ವಸ್ತುವೊಂದರ ಬೆಲೆಯಲ್ಲಿ ಬದಲಾವಣೆಯುಂಟಾದಾಗ ಅದರ ಬೇಡಿಕೆಯಲ್ಲಿ ಯಾವುದೇ ಬದಲಾವಣೆ ಉಂಟಾ ಗದಿರುವ ಸ್ಥಿತಿ.

perfectly inelastic supply: ಪರಿಪೂರ್ಣ ಸ್ಥಿತಿಸ್ಥಾಪಕ ರಹಿತ ಪೂರೈಕೆ. ನಿರ್ದಿಷ್ಟ ವಸ್ತುವೊಂದರ ಬೆಲೆಯಲ್ಲಿ ಬದಲಾವಣೆಯುಂಟಾದಾಗ ಅದರ ಪೂರೈಕೆಯಲ್ಲಿ ಯಾವುದೇ ಬದಲಾವಣೆ ಉಂಟಾಗದಿರುವ ಸ್ಥಿತಿ.

performance art: ಪ್ರದರ್ಶನ ಕಲೆ.

performance configuration: ಪ್ರದರ್ಶನ ವಿನ್ಯಾಸ.

performance context: ಪ್ರದರ್ಶನ ಸಂದರ್ಭ.

performance demonstration: ೧. ಪ್ರದರ್ಶನ ಪ್ರಾತ್ಯಕ್ಷಿಕೆ. ೨. ನಿರ್ವಹಣಾ ಪ್ರಾತ್ಯಕ್ಷಿಕೆ. ಸಾರ್ವಜನಿಕ ಆಡಳಿತ ವ್ಯವಸ್ಥೆಗೆ ಸಿಬ್ಬಂದಿಗಳ ನೇಮಕಾತಿ ಸಂದರ್ಭದಲ್ಲಿ ಅವರ ಅರ್ಹತೆಯನ್ನು ಪರೀಕ್ಷಿಸುವ ವಿಧಾನಗಳಲ್ಲೊಂದು. ಉದಾ: ಬೆರಳಚ್ಚುಗಾರರು.

performance event: ಪ್ರದರ್ಶನ ಘಟನೆ

performance oriented research: ಪ್ರದರ್ಶನ ಕೇಂದ್ರಿತ ಸಂಶೋಧನೆ.

performance scale: ಕಾರ್ಯನಿರ್ವಹಣಾ ಮಾಪಕ.

performance scale of intelligence: ಬುದ್ಧಿ ಶಕ್ತಿಯ ಕಾರ್ಯನಿರ್ವಹಣಾ ಮಾಪಕ.

performance study: ಪ್ರದರ್ಶನ ಅಧ್ಯಯನ.

performance test: ನಿರ್ವಹಣಾ ಸಾಮರ್ಥ್ಯದ ಪರೀಕ್ಷೆ. ನೋಡಿ: performance demonstration.

performance theory: ಪ್ರದರ್ಶನ ಸಿದ್ಧಾಂತ.

performance tradition: ಪ್ರದರ್ಶನ ಸಂಪ್ರದಾಯ.

performer: ಪ್ರದರ್ಶನಕಾರ; ನಟ. **performing genre:** ಪ್ರದರ್ಶನ ರೂಪ.

period of concrete operation: ನೋಡಿ : concrete operational stage.

period of disqualification: ಅನರ್ಹತಾ ಅವಧಿ. ಯಾವನೇ ವ್ಯಕ್ತಿಯು ಅಪರಾಧ ಅಥವಾ ಭ್ರಷ್ಟಾಚಾರಕ್ಕೆ ಒಳಗಾಗಿದ್ದಾನೆಂದು ಚುನಾವಣಾ ಆಯೋಗ ಎತ್ತಿ ಹಿಡಿದು ಆತನು ನಿರ್ದಿಷ್ಟ ವರ್ಷಗಳವರೆಗೆ ಚುನಾವಣೆಗಳಲ್ಲಿ ಸ್ಪರ್ಧಿಸಲು ಅನರ್ಹನೆಂದು ಘೋಷಿತ ಅವಧಿ.

periodic fluctuation: ನಿಯತಕಾಲಿಕ ಏರಿಳಿತ. ನಿಯಮಿತ ಕಾಲದಲ್ಲಿ ಸಂಭವಿ ಸುವ ಬದಲಾವಣೆ.

periodic psychosis: ನಿಯತಕಾಲಿಕ ಮನೋವಿಕ್ಷಿಪ್ತಿ.

periodic report: ನಿಯತಕಾಲಿಕ ವರದಿ.

periodical assembly: ನಿಯತಕಾಲಿಕ ಸಭೆ.

periodical check: ನಿಯತಕಾಲಿಕ ತನಿಖೆ.

periodical valuation: ನಿಯತಕಾಲಿಕ ಮೌಲ್ಯಮಾಪನ.

peripheral aspect: ಹೊರಮೈಯ ಅಂಶ; ಹೊರಮೈಯ ಲಕ್ಷಣ.

peripheral country: ಪರಿಧಿಯ ದೇಶ; ಗಡಿಪ್ರದೇಶದ ದೇಶಗಳು.

peripheral hallucination: ಪರಿಧಿ ವಿಭ್ರಮೆ.

perishable good: ಬೇಗನೆ ನಾಶವಾಗುವ (ಸರಕು) ವಸ್ತು. ಉದಾ: ಹಣ್ಣು, ತರಕಾರಿ.

perjury: ಪ್ರಮಾಣ ಭಂಗ. ಸುಳ್ಳು ಪ್ರಮಾಣ ಮಾಡುವುದು.

permanent house: ಖಾಯಂ ಸದನ. ಉದಾ. ಭಾರತದ ರಾಜ್ಯಸಭೆ. ಇದನ್ನು ಯಾವುದೇ ಸಂದರ್ಭದಲ್ಲಿ ವಿಸರ್ಜಿಸಲು ಸಾಧ್ಯವಿಲ್ಲ. ಇದರ ಮೂರನೇ ಒಂದು ಭಾಗದಷ್ಟು ಸದಸ್ಯರು ಮಾತ್ರ ಪ್ರತಿ ಎರಡು ವರ್ಷಕ್ಕೊಮ್ಮೆ ನಿವೃತ್ತಿ ಪಡೆಯುತ್ತಾರೆ.

permanent income: ಖಾಯಂ ಆದಾಯ.

permanent memory power: ಶಾಶ್ವತ ಜ್ಞಾಪಕ ಶಕ್ತಿ.

permissive attitude: ಅನಿರ್ಬಂಧಿತ ಭಾವನೆ; ಸ್ವೇಚ್ಛಾ ಮನೋಭಾವನೆ.

permissiveness: ಅತಿವರ್ತನೆ; ಅನಿರ್ಬಂಧಿತತೆ.

permutation: ಕ್ರಮ ವ್ಯತ್ಯಾಸ; ಅದಲು ಬದಲು. ಒಂದು ವಸ್ತುವನ್ನು ನಿರ್ದಿಷ್ಟ ಕ್ರಮದಲ್ಲಿ ಅದಲು ಬದಲು ಮಾಡುವುದು ಉದಾ: ABC ಯನ್ನು CBA ಅಥವಾ BCA ಅಥವಾ BAC ಹೀಗೆ ಕ್ರಮ ವ್ಯತ್ಯಾಸ ಮಾಡಿ ಬರೆಯಬಹುದು.

perpetual fire: ಸದಾ ಉರಿಯುವ ಬೆಂಕಿ.
೧. ಬೆಂಕಿಪೊಟ್ಟಣವಿರದ ಆದಿವಾಸಿ ಗುಂಪುಗಳು ಕಾಡುಪ್ರಾಣಿಗಳನ್ನು ದೂರ ವಿಡಲು ಸದಾ ಬೆಂಕಿಯನ್ನು ಉರಿಸುತ್ತಿದ್ದರು.
೨. ಹಿಂದೆ ಯಜ್ಞ ಕುಂಡಗಳಲ್ಲಿ ಅಗ್ನಿಯನ್ನು ಸದಾ ಜೀವಂತವಾಗಿಡುತ್ತಿದ್ದರು.

perpetual succession: ಶಾಶ್ವತ ಉತ್ತರಾಧಿಕಾರ.

persecution: ಶಿಕ್ಷಿಸುವಿಕೆ; ಪೀಡನೆ.

persecution delusion: ಪೀಡನಾ ಭ್ರಾಂತಿ.

persecutory hallucination: ಪೀಡನಾತ್ಮಕ ವಿಭ್ರಮೆ.

perseverance: ದೃಢ ಪ್ರಯತ್ನ; ನಿರಂತರ ಶ್ರಮಶೀಲತೆ.

perseverating tendency: ದೃಢ ಪ್ರವರ್ತನಾ ಪ್ರವೃತ್ತಿ.

perseveration: ದೃಢ ಪ್ರವರ್ತನೆ.

persona: ಪಾತ್ರ. ೧. ನಾಟಕ ಅಥವಾ ಕಾದಂಬರಿಯ ಪಾತ್ರ. ೨ ಹೊರ ಜಗತ್ತಿಗೆ ಒಬ್ಬನು ತೋರಿಸುವ ತನ್ನ ಬಾಹ್ಯ ವ್ಯಕ್ತಿತ್ವ.

personal ascendancy: ವೈಯಕ್ತಿಕ ಔನ್ನತ್ಯ; ವೈಯಕ್ತಿಕ ಪ್ರಭುತ್ವ.

personal adjustment: ವೈಯಕ್ತಿಕ ಹೊಂದಾಣಿಕೆ. ಒಂದು ನಿರ್ದಿಷ್ಟ ಸಾಮಾಜಿಕ ಸನ್ನಿವೇಶಕ್ಕೆ ವ್ಯಕ್ತಿಯು ಹೊಂದಿಕೊಳ್ಳುವುದು.

personal assumption: ವೈಯಕ್ತಿಕ ಕಲ್ಪನೆ (ಊಹನೆ).

personal bias: ಸ್ವಪಕ್ಷಪಾತ.

personal construct theory: ವ್ಯಕ್ತಿತ್ವ ರೂಪಣಾ ಸಿದ್ಧಾಂತ. ವ್ಯಕ್ತಿಗಳು ಜಗತ್ತಿನ ಬಗೆಗೆ ಕಲ್ಪಿಸಿಕೊಳ್ಳುವ ಹಾಗೂ ತಮ್ಮ ನಡತೆಯನ್ನು ನಿರ್ಧರಿಸುವ ವಿಧಗಳು.

personal data analysis: ವ್ಯಕ್ತಿ ದತ್ತಾಂಶ ವಿಶ್ಲೇಷಣೆ.

personal data sheet: ವ್ಯಕ್ತಿ ದತ್ತಾಂಶ ಪತ್ರ.

personal disciplinary norms: ವ್ಯಕ್ತಿಗತ ಶಿಸ್ತಿನ ನಿಯಮಗಳು.

personal disorganization: ವೈಯಕ್ತಿಕ ವಿಘಟನೆ. ವಿರುದ್ಧಾತ್ಮಕ ವರ್ತನಾ ಪ್ರಮಾಣಕಗಳನ್ನು ಒಪ್ಪಿಕೊಳ್ಳುವುದರಿಂದ ವ್ಯಕ್ತಿಯಲ್ಲಿ ಉಂಟಾಗುವ ವಿಘಟನೆ.

personal distance: ವೈಯಕ್ತಿಕ ಅಂತರ. ವ್ಯಕ್ತಿಗಳು ಪರಸ್ಪರರನ್ನು ವೈಯಕ್ತಿಕವಾಗಿ ಅರಿತು ಇಟ್ಟುಕೊಳ್ಳುವ ದೈಹಿಕ ಅಂತರ. ಉದಾ. ಅತ್ತೆ-ಅಳಿಯ, ಭಾವ-ನಾದಿನಿ.

personal distribution: ವ್ಯಕ್ತಿಗತ ಹಂಚಿಕೆ; ವೈಯಕ್ತಿಕ ಹಂಚಿಕೆ.

personal document: ವೈಯಕ್ತಿಕ ದಾಖಲೆ. ಉದಾ: ಪತ್ರ, ದಿನಚರಿ ಇತ್ಯಾದಿ.

personal equation: ವೈಯಕ್ತಿಕ ಸಮೀಕರಣ.

personal evolution: ವೈಯಕ್ತಿಕ ವಿಕಾಸ.

personal good: ವ್ಯಕ್ತಿಗತ ಸರಕು (ವಸ್ತು). ಇತರರಿಗೆ ವರ್ಗಾಯಿಸಲಾಗದ ಮಾನವನ ಆಂತರಿಕ ಗುಣಲಕ್ಷಣಗಳು. ಉದಾ: ಜಾಣ್ಮೆ.

personal history: ವೈಯಕ್ತಿಕ ಇತಿಹಾಸ; ವ್ಯಕ್ತಿ ವೃತ್ತಾಂತ.

personal identity: ವೈಯಕ್ತಿಕ ಅನನ್ಯತೆ.

personal inadequacy: ವೈಯಕ್ತಿಕ ಅಸಮರ್ಥತೆ.

personal income: ವೈಯಕ್ತಿಕ ಆದಾಯ; ವ್ಯಕ್ತಿಗತ ವರಮಾನ.

personal income tax: ವೈಯಕ್ತಿಕ ವರಮಾನ ತೆರಿಗೆ.

personal index: ವೈಯಕ್ತಿಕ ಸೂಚ್ಯಂಕ.

personal interview: ವೈಯಕ್ತಿಕ ಸಂದರ್ಶನ.

personal leadership: ವೈಯಕ್ತಿಕ ನಾಯಕತ್ವ. ವ್ಯಕ್ತಿಯು ತನ್ನ ವ್ಯಕ್ತಿತ್ವ ಮತ್ತು ಸಹಜ ಪ್ರವೃತ್ತಿಗಳಿಂದ ನಾಯಕನಾಗುವುದು. ನೋಡಿ: charismatic leadership.

personal liberty: ವ್ಯಕ್ತಿ ಸ್ವಾತಂತ್ರ್ಯ.

personal maladjustment: ವ್ಯಕ್ತಿತ್ವದ ಅಪಹೊಂದಾಣಿಕೆ; ವೈಯಕ್ತಿಕ ಅಸಮಾಯೋಜನೆ.

personal memory: ವೈಯಕ್ತಿಕ ಸ್ಮರಣೆ; ಖಾಸಗೀ ವಿಷಯಗಳ ಸ್ಮರಣೆ.

personal price discrimination: ವ್ಯಕ್ತಿಗತ ಬೆಲೆ ತಾರತಮ್ಯ. ಮಾರುಕಟ್ಟೆಯಲ್ಲಿ ವ್ಯಾಪಾರಿಯು ಒಂದೇ ಸರಕಿಗೆ ವಿಭಿನ್ನ ಗ್ರಾಹಕರಿಗೆ ವಿಭಿನ್ನ ಬೆಲೆಗಳನ್ನು ನಿಗದಿಪಡಿಸುವುದು.

personal relationship: ವೈಯಕ್ತಿಕ ಸಂಬಂಧ.

personal research: ವೈಯಕ್ತಿಕ ಸಂಶೋಧನೆ.

personal satisfaction: ವೈಯಕ್ತಿಕ ಸಂತೃಪ್ತಿ.

personal secretary: ಆಪ್ತ ಕಾರ್ಯದರ್ಶಿ; ಖಾಸಗಿ ಕಾರ್ಯದರ್ಶಿ.

personal skill: ವೈಯಕ್ತಿಕ ಕೌಶಲ್ಯ.

personal-social learning: ವೈಯಕ್ತಿಕ -ಸಾಮಾಜಿಕ ಕಲಿಕೆ. ಸಂಸ್ಕೃತಿಯಿಂದ ನಿಯಂತ್ರಿಸಲ್ಪಡದ ವ್ಯಕ್ತಿಗತ ಸಾಮಾಜಿಕ ಅನುಭವಗಳಿಂದ ಗಳಿಸುವ ಕಲಿಕೆ.

personal- social motive: ವೈಯಕ್ತಿಕ ಸಾಮಾಜಿಕ ಅಂತಃಪ್ರೇರಣೆ.

personal wealth: ವೈಯಕ್ತಿಕ ಸಂಪತ್ತು; ವ್ಯಕ್ತಿಗತ ಸಂಪತ್ತು.

personality: ವ್ಯಕ್ತಿತ್ವ. ವ್ಯಕ್ತಿಯ ಗುಣಲಕ್ಷಣಗಳಾದ ವರ್ತನಾ ವಿಧಗಳು, ಮನೋವೃತ್ತಿಗಳು, ನಂಬುಗೆಗಳು, ಮೌಲ್ಯಗಳು ಮುಂತಾದುವುಗಳ ಸಂಘಟಿತ ವಿನ್ಯಾಸ.

personality absorption: ವ್ಯಕ್ತಿತ್ವ ಹೀರಿಕೆ. ಮಗುವಿಗೆ ಸ್ವತಂತ್ರ ನಿರ್ಣಯ ತೆಗೆದುಕೊಳ್ಳಲು ಬಿಡದೆ ಹೆತ್ತವರು ಮಗುವಿನ ಚಟುವಟಿಕೆಯನ್ನು ನಿಯಂತ್ರಿಸುವುದು.

personality adjustment: ವ್ಯಕ್ತಿತ್ವದ ಹೊಂದಾಣಿಕೆ.

personality break down: ವ್ಯಕ್ತಿತ್ವ ಕುಸಿತ.

personality configuration: ವ್ಯಕ್ತಿತ್ವ ವಿನ್ಯಾಸ.

personality counselling: ವ್ಯಕ್ತಿತ್ವ ಮಾರ್ಗದರ್ಶನ.

personality cult : ವ್ಯಕ್ತಿತ್ವದ ಆರಾಧನೆ.

personality disorder: ವ್ಯಕ್ತಿತ್ವ ವಿಕಾರ. ನೋಡಿ : mental disorder.

personality disorganization: ವ್ಯಕ್ತಿತ್ವ ವಿಘಟನೆ. ನೋಡಿ: personal disorganization.

personality integration: ವ್ಯಕ್ತಿತ್ವದ ಸಮಗ್ರತೆ. ವ್ಯಕ್ತಿತ್ವದ ಹಲವು ಅಂಶಗಳನ್ನು ಪರಸ್ಪರ ಸಾಮರಸ್ಯದಿಂದ ಸಂಯೋಜಿಸಿ ಸಾಮಾಜಿಕ ಪರಿಸರಕ್ಕೆ ಹೊಂದಿಕೊಳ್ಳುವುದು.

personality inventory: ವ್ಯಕ್ತಿತ್ವ ಸೂಚಿ ಪಟ್ಟಿ; ವ್ಯಕ್ತಿತ್ವ ಮೌಲ್ಯಮಾಪನ ಪಟ್ಟಿ. ಸಾರ್ವಜನಿಕ ಆಡಳಿತ ವ್ಯವಸ್ಥೆಯಲ್ಲಿ ಸಿಬ್ಬಂದಿಗಳ ದಕ್ಷತೆಯ ಮಾಪನ ಮಾಡಲು ಉದ್ಯೋಗಿಗಳ ನಡತೆಯ ವ್ಯಾಪಕ ವಿವರ ಗಳಿರುವ ಪಟ್ಟಿ.

personality needs: ವ್ಯಕ್ತಿತ್ವದ ಅಗತ್ಯ ಗಳು.

personality of state: ರಾಜ್ಯದ ವ್ಯಕ್ತಿತ್ವ. ಪ್ರಜೆಗಳ ಪ್ರಜ್ಞೆಯೇ ರಾಷ್ಟ್ರದ ಆತ್ಮವಾಗಿದ್ದು ಅದೇ ರಾಷ್ಟ್ರದ ವ್ಯಕ್ತಿತ್ವ ವಾಗಿದೆ. ಮಾನವ ವಿಕಾಸವು ಕೇವಲ ರಾಷ್ಟ್ರದ ಮೂಲಕ ಸಾಧ್ಯವೆಂಬ ಆದರ್ಶವಾದಿಗಳು ರಾಜ್ಯದ ವ್ಯಕ್ತಿತ್ವದ ಬಗ್ಗೆ ವಿವರಿಸಿದ್ದಾರೆ.

personality problems: ವ್ಯಕ್ತಿತ್ವದ ತೊಂದರೆಗಳು.

personality scale: ವ್ಯಕ್ತಿತ್ವ ಮಾಪಕ.

personality structure: ವ್ಯಕ್ತಿತ್ವ ರಚನೆ.

personality study: ವ್ಯಕ್ತಿತ್ವ ಅಧ್ಯಯನ.

personality test: ವ್ಯಕ್ತಿತ್ವ ಪರೀಕ್ಷೆ. ನೋಡಿ: performance demonstration.

personality trait: ವ್ಯಕ್ತಿತ್ವದ ಗುಣ ಲಕ್ಷಣ. ಉದಾ: ಪ್ರಾಮಾಣಿಕತೆ, ಸಹನೆ, ಹಿಂಸಾ ಪ್ರವೃತ್ತಿ.

personality type: ವ್ಯಕ್ತಿತ್ವದ ಪ್ರರೂಪ.

personalization: ವೈಯಕ್ತೀಕರಣ.

personalizing process: ನೋಡಿ: fusion process.

personification: ವ್ಯಕ್ತೀಕರಣ; ಮನುಷ್ಯತ್ವಾರೋಪಣ.

personnel administration: ಸಿಬ್ಬಂದಿ ಆಡಳಿತ. ಆಡಳಿತ ಸೇವೆಯಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿಯ ಸ್ಥಾನ ಭರ್ತಿ, ವೇತನ, ತರಬೇತಿ, ಶಿಸ್ತು, ಕಾರ್ಯ ಚೈತನ್ಯ, ನಿವೃತ್ತಿ ಮುಂತಾದ ಸೇವಾ ಸೌಲಭ್ಯ ಮತ್ತು ಸಮಸ್ಯೆಗಳಿಗೆ ಸಂಬಂಧಿಸಿದ ಆಡಳಿತ.

personnel guidance: ಸಿಬ್ಬಂದಿ ಮಾರ್ಗದರ್ಶನ.

personnel management: ಸಿಬ್ಬಂದಿ ವ್ಯವಸ್ಥಾಪನೆ.

personnel selection: ಸಿಬ್ಬಂದಿ ಆಯ್ಕೆ.

personology: ವ್ಯಕ್ತಿವಿಜ್ಞಾನ.

perspective planning: ಭವಿಷ್ಯಗಾಮಿ ಯೋಜನೆ; ದೂರದೃಷ್ಟಿಯ ಯೋಜನೆ. ದೀರ್ಘಾವಧಿಯ ಆರ್ಥಿಕಾಭಿವೃದ್ಧಿಗೆ ತಯಾರಿಸುವ ಯೋಜನೆ. ಬೆಳವಣಿಗೆಯ ವಾಸ್ತವಿಕ ನಿಯಮಗಳನ್ನು ಗಣನೆಗೆ ತೆಗೆದುಕೊಂಡು ವೈಜ್ಞಾನಿಕ ಆಧಾರದ ಮೇಲೆ ಭವಿಷ್ಯ ಗಾಮಿ ಯೋಜನೆಗಳನ್ನು ತಯಾರಿಸಲಾಗು ತ್ತದೆ.

perspectives: ದೃಷ್ಟಿಕೋನಗಳು. ಮೌಲ್ಯಗಳು, ನಂಬುಗೆಗಳು, ಮನೋವೃತ್ತಿ ಗಳು ಮುಂತಾದುವುಗಳನ್ನು ಗ್ರಹಿಸಲು ವ್ಯಕ್ತಿಯು ಹಾಕಿಕೊಳ್ಳುವ ಸೈದ್ಧಾಂತಿಕ ಚೌಕಟ್ಟು.

persuation: ಮನವೊಲಿಸುವಿಕೆ. ಅನುನಯತೆ, ಪ್ರೋತ್ಸಾಹಕರ ಸಂಭಾಷಣೆ ಯಿಂದ, ರೋಗಚಿಹ್ನೆಗಳ ವಿವರಣೆಯಿಂದ ಮತ್ತು ತರ್ಕದಿಂದ ರೋಗಿ ಗುಣಹೊಂದು ವಂತೆ ಮಾಡುವ ಮನೋಚಿಕಿತ್ಸೆಯ ವಿಧಾನ.

persuasive leader: ಅನುನಯೀ ನಾಯಕ; ಮನವೊಲಿಸುವ ನಾಯಕ.

perturbed mental condition: ಕದಡಿದ ಮನಸ್ಥಿತಿ; ಕ್ಷೋಭಿತ ಮನಸ್ಥಿತಿ.

perversion: ವ್ಯತಿಕ್ರಮಣ.

perversion of personality: ವ್ಯಕ್ತಿತ್ವದ ವ್ಯತಿಕ್ರಮಣ.

pessimism: ನಿರಾಶಾವಾದ.

pessimistic temperament: ನಿರಾಶಾವಾದಿ ಸ್ವಭಾವ.

petition: ಪ್ರತಿಭಟನೆಯ ಪತ್ರ; ತಕರಾರು ಪತ್ರ.

petition of rights: ಹಕ್ಕುಗಳ ಮನವಿ. ಬ್ರಿಟನ್‌ನ ಅಲಿಖಿತ ಸಂವಿಧಾನಕ್ಕೆ ಪೂರಕವಾಗಿರುವ ಮಾನವ ಹಕ್ಕುಗಳಿಗೆ ಸಂಬಂಧಿಸಿದ ಹಕ್ಕುಗಳ ಲಿಖಿತ ಯಾದಿ.

petrodollar: ಪೆಟ್ರೋಡಾಲರ್. ತೈಲವನ್ನು ರಫ್ತು ಮಾಡುವ ದೇಶಗಳು ತೈಲ ಮತ್ತು ತೈಲೋತ್ಪನ್ನಗಳನ್ನು ಮಾರಾಟ ಮಾಡಿ ಗಳಿಸಿದ ಡಾಲರ್.

petite bourgeoisie: ಪುಟ್ಟ ಬಂಡವಾಳಶಾಹಿ; ಸಣ್ಣ ವ್ಯಾಪಾರಸ್ಥರ ವರ್ಗ.

phantam child: ಕಲ್ಪನಾ ಶಿಶು.

phantasm: ಭ್ರಮೆ; ಮಾಯೆ.

phantasy: ಕಲ್ಪನಾವಿಲಾಸ. ನೋಡಿ: fantasy.

phantic communion: ಭಾವನಾತ್ಮಕ ಸಂಸರ್ಗ. ಒಂದು ಸಾಮಾಜಿಕ ಗುಂಪಿನಲ್ಲಿರುವ ಭಾವನಾತ್ಮಕ ಸಂಬಂಧ.

pharaoh: ಈಜಿಪ್ಟ್‌ನ ದೊರೆ. ಪ್ರಾಚೀನ ಈಜಿಪ್ಟ್ ರಾಜವರ್ಗದ ಹೆಸರು.

phenomenal world: ಇಂದ್ರಿಯ ಗೋಚರ ಪ್ರಪಂಚ.

phenomenalism: ಪ್ರಕೃತಿಗೋಚರಾನುಭವ ವಾದ. ಸತ್ಯವನ್ನಾಗಲೀ, ವಸ್ತುಗಳ ಪರಿಪೂರ್ಣ ಸ್ವಭಾವವನ್ನಾಗಲೀ ತಿಳಿಯಲು ಅಸಾಧ್ಯವಾಗಿದ್ದು ಅವುಗಳ ರೂಪ ಮತ್ತು ಚರ್ಯೆಯನ್ನು ಮಾತ್ರ ತಿಳಿಯಬಹುದೆಂಬ ತತ್ವಶಾಸ್ತ್ರೀಯ ಸಿದ್ಧಾಂತ.

phenomenology: ಪ್ರಕೃತಿಗೋಚರಾನುಭವಶಾಸ್ತ್ರ. ನೋಡಿ: phenomenalism.

phenomenon: ಘಟನೆ; ವಿದ್ಯಮಾನ. ಇಂದ್ರಿಯ ಗೋಚರವಾದ ಅಥವಾ ಅವಲೋಕಿಸಬಹುದಾದ ಯಾವುದೇ ಘಟನೆ ಅಥವಾ ವಿದ್ಯಮಾನ.

phenomenal whole: ಅಖಂಡ ವಿದ್ಯಮಾನ.

Philip's curve: ಫಿಲಿಫ್ಸ್ ರೇಖೆ. ಹಣರೂಪಿ ವೇತನದ ಶತಾಂಶ ಬದಲಾವಣೆ ಮತ್ತು ನಿರುದ್ಯೋಗ ಮಟ್ಟಗಳ ನಡುವಿನ ಸಂಬಂಧವನ್ನು ವಿವರಿಸುವ ನಕ್ಷಾರೂಪದ ವಿಶ್ಲೇಷಣೆ.

philosopher king: ತತ್ವಜ್ಞಾನಿ ಅರಸು. ಗ್ರೀಕ್ ನಗರ ರಾಜ್ಯಗಳು ಯೋಗ್ಯವಾಗಿ ಕಾರ್ಯ ನಿರ್ವಹಿಸಲು ಅರಸರು ತತ್ವಜ್ಞಾನಿಗಳಾಗಬೇಕೆಂಬ ಪ್ಲೇಟೋನ ವಾದ.

philosopher of action: ಕಾರ್ಯಶೀಲ ತತ್ವಜ್ಞಾನಿ. ತನ್ನ ತಾತ್ವಿಕ ಚಿಂತನೆಯನ್ನು ಕಾರ್ಯರೂಪಕ್ಕೆ ಇಳಿಸಬಲ್ಲ ತತ್ವಜ್ಞಾನಿ.

philosophical anarchist: ತಾತ್ವಿಕ ಅರಾಜಕತಾ ವಾದಿ.

philosophical anthropology: ತಾತ್ವಿಕ ಮಾನವಶಾಸ್ತ್ರ.

philosophical idealism: ನೋಡಿ: idealism.

philosophical method: ದಾರ್ಶನಿಕ ವಿಧಾನ; ತತ್ತ್ವಾನ್ವೇಷಣೆಯ ವಿಧಾನ.

philosophical school: ದಾರ್ಶನಿಕ ಪಂಥ; ತಾತ್ವಿಕ ಪಂಥ.

philosophical sociology: ತತ್ತ್ವ ಶಾಸ್ತ್ರೀಯ ಸಮಾಜಶಾಸ್ತ್ರ.

philosophical theory: ತತ್ತ್ವ ಶಾಸ್ತ್ರೀಯ ಸಿದ್ಧಾಂತ.

philosophical thought: ದಾರ್ಶನಿಕ ಚಿಂತನೆ; ತಾತ್ವಿಕ ಚಿಂತನೆ.

philosophical wisdom: ತತ್ತ್ವಪ್ರಜ್ಞೆ; ತತ್ತ್ವವಿವೇಕ.

philosophy: ತತ್ತ್ವಶಾಸ್ತ್ರ; ತತ್ತ್ವಜ್ಞಾನ; ದಾರ್ಶನಿಕತೆ.

philosophy of propaganda: ಪ್ರಚಾರದ ತತ್ತ್ವ.

phi-phenomenon: ಫೈ ಘಟನೆ; ಚಲನಾಭಾಸ ಘಟನೆ.

phlegmatic temperament: ಅನ್ಯ ಮನ ಚಿತ್ತಪ್ರಕೃತಿ; ಜಡ ಪ್ರಕೃತಿ.

phobic reaction: ಭೀತಿ ಪ್ರತಿಕ್ರಿಯೆ.

photism : ಕಾಂತಿ ಭ್ರಮೆ; ಬೆಳಕಿನ ಭ್ರಮೆ.

photographic observation: ಛಾಯಾ ಚಿತ್ರಾವಲೋಕನ.

phratry: ಏಕರಕ್ತ ಸಂಬಂಧ. ಆದಿವಾಸಿ ಬುಡಕಟ್ಟುಗಳಲ್ಲಿ ಹೊರಬಾಂಧವ್ಯವುಳ್ಳ ಏಕವಂಶೀಯ ಉಪಪಂಗಡ.

phrenology: ಕಪಾಲ ವಿದ್ಯೆ; ಕಪಾಲ ಸಾಮುದ್ರಿಕ ಶಾಸ್ತ್ರ.

physical anthropology: ಶಾರೀರಿಕ ಮಾನವಶಾಸ್ತ್ರ.

physical basis: ಭೌತಿಕ ಆಧಾರ.

physical capital: ಭೌತಿಕ ಬಂಡವಾಳ.

physical compactness: ಭೌತಿಕ ಸಾಮೀಪ್ಯ.

physical environment: ಭೌತಿಕ ಪರಿಸರ; ಪ್ರಾಕೃತಿಕ ಪರಿಸರ.

physical factors: ಭೌತಿಕ ಅಂಶಗಳು. ಉದಾ: ಪರಿಸರ, ನೆರೆ, ಬರಗಾಲ, ಭೂಮಿಯ ಫಲವತ್ತತೆ, ಶಾರೀರಿಕ ಅಂಶಗಳು.

physical folklore: ಭೌತಿಕ ಜಾನಪದ.

physical indivisibility : ಭೌತಿಕ ಅವಿಭಜನೀಯತೆ; ಭೌತಿಕ ಏಕತೆ.

physical marginal productivity: ಭೌತಿಕ ಸೀಮಾಂತ ಉತ್ಪಾದಕತೆ.

physical needs: ಭೌತಿಕ ಅಗತ್ಯಗಳು; ದೈಹಿಕ ಅಗತ್ಯಗಳು; ಜೈವಿಕ ಅಗತ್ಯಗಳು.

physical paternity: ಜೈವಿಕ ಪಿತೃತ್ವ. ನಿಜವಾದ ರಕ್ತಸಂಬಂಧೀ ತಂದೆ. ಅವಿಭಕ್ತ ಕುಟುಂಬಗಳಲ್ಲಿ ಹಾಗೂ ಕೆಲವು ಬುಡಕಟ್ಟುಗಳಲ್ಲಿ ಸ್ವಂತ ಮಕ್ಕಳ ಮೇಲೆ ಈತನಿಗಿರುವ ಪ್ರಭಾವ ಅತ್ಯಲ್ಪ. ನೋಡಿ: biological fatherhood.

physical planning: ಭೌತಿಕ ಯೋಜನೆ

physical policy: ಭೌತಿಕ ನೀತಿ.

physical proximity: ಭೌತಿಕ ಸಾಮೀಪ್ಯ

physical social environment: ಭೌತಿಕ ಸಾಮಾಜಿಕ ಪರಿಸರ.

physiocracy: ವ್ಯವಸಾಯ ಪಂಥ. ಕೃಷಿಯೊಂದೇ ಸಾಮಾಜಿಕ ಬದುಕಿನ ಮತ್ತು ರಾಜಸ್ವದ ಮೂಲವೆಂಬ ಪ್ರತಿಪಾದನೆ.

physiognomy: ಮುಖ ಸಾಮುದ್ರಿಕ ವಿದ್ಯೆ.

physiological drives: ಶಾರೀರಿಕ ಪ್ರೇರಣೆಗಳು. ಪದೇ ಪದೇ ಉಂಟಾಗುವ ಆಂತರಿಕ ಪ್ರಚೋದನೆಗಳು. ಇವು ವ್ಯಕ್ತಿಯ ಲಕ್ಷ್ಯ ಮತ್ತು ಶಕ್ತಿಯನ್ನು ಕೆಲವೊಂದು ಗುರಿಗಳ ಸಾಧನೆಯ ಕಡೆಗೆ ಹರಿಸುತ್ತವೆ. ನೋಡಿ: biological drive.

physiological ecology: ಶಾರೀರಿಕ ಜೀವಪರಿಸರ ಶಾಸ್ತ್ರ.

physiological need: ದೈಹಿಕ ಅವಶ್ಯಕತೆ.

physiological psychology: ಭೌತಿಕ ಮನಶ್ಶಾಸ್ತ್ರ; ಶಾರೀರಿಕ ಮನಶ್ಶಾಸ್ತ್ರ.

physiological stimulation: ಶಾರೀರಿಕ ಪ್ರಚೋದನೆ.

physio-psychology: ಶರೀರ ಮನೋವಿಜ್ಞಾನ.

physio-therapy: ಶರೀರ ಚಿಕಿತ್ಸೆ; ಕಾಯ ಚಿಕಿತ್ಸೆ. ಶಾಖ ಕೊಡುವುದು, ಮೈಕೈ ತಿಕ್ಕುವುದು ಮೊದಲಾದ ಚಿಕಿತ್ಸಾ ವಿಧಾನಗಳು.

picketing: ಶಾಂತಿಯುತ ಧರಣಿ. ಸಾಮೂಹಿಕ ಪ್ರತಿಭಟನೆಯ ಒಂದು ರೂಪವಾಗಿ ಆಡಳಿತಗಾರರನ್ನು ಅಥವಾ ಅಧಿಕಾರಿಗಳನ್ನು ಸುತ್ತುಗಟ್ಟಿ ತಮ್ಮ ಬೇಡಿಕೆಗಳಿಗಾಗಿ ಒತ್ತಡ ಹೇರುವ ಶಾಂತಿಯುತ ವಿಧಾನ.

pictograph: ಚಿತ್ರ ನಕಾಶೆ.

pictography: ಚಿತ್ರ ಲಿಪಿ.

picture frustration: ಚಿತ್ರ ವ್ಯಾಘಾತ.

pidgin: ಮಿಶ್ರ ಭಾಷೆ. ಅಶುದ್ಧ ಉಚ್ಚಾರಣೆಯ ವಿಕಾರ ಭಾಷೆ.

piece wage: ಹಿಡಿ ಕೂಲಿ. ನಿರ್ದಿಷ್ಟ ಕೆಲಸಕ್ಕೆ ನಿಗದಿಸಲ್ಪಟ್ಟ ಕೂಲಿ.

Pigou effect theory: ಪಿಗೋ ಪರಿಣಾಮ ಸಿದ್ಧಾಂತ. ಒಂದು ಅರ್ಥ ವ್ಯವಸ್ಥೆಯಲ್ಲಿ ವಸ್ತುವಿನ ಬೆಲೆಯ ಕಡಿತವು ಸರಕು ಮತ್ತು ಸೇವೆಗಳ ಮೇಲಿನ ಖರ್ಚನ್ನು ಹೆಚ್ಚಿಸುವುದರ ಮೂಲಕ ಉತ್ಪಾದನೆ ಮತ್ತು ಉದ್ಯೋಗ ಪ್ರಮಾಣವನ್ನು ಉತ್ತೇಜಿಸುತ್ತದೆಂಬ ಸಿದ್ಧಾಂತ. ಇದನ್ನು ನೈಜ ಶಿಲ್ಕು ಪರಿಣಾಮ ಎಂದೂ ಕರೆಯುತ್ತಾರೆ.

pilaster: ಸ್ತಂಭಿಕಾ; ಅರೆಕಂಬ.

pillared hall: ಮಹಾಮಂಟಪ; ಸ್ತಂಭಗಳ ಮಂಟಪ.

pilot project: ಮಾರ್ಗದರ್ಶಕ ಯೋಜನೆ.

pilot study: ಮಾರ್ಗದರ್ಶಕ ಅಧ್ಯಯನ.

pilot survey: ಮಾರ್ಗದರ್ಶಕ ಸಮೀಕ್ಷೆ.

pinnacle: ಬುರುಜು; ಶಿಖರದ ತುತ್ತ ತುದಿ; ಅಲಂಕಾರಿಕ ಪುಟಗೋಪುರ.

piracy : ಕಡಲ್ಗಳ್ಳತನ.

place grouping: ನೋಡಿ: territorial group.

place utility: ಸ್ಥಳದ ತುಷ್ಟಿಗುಣ.

plan expenditure: ಯೋಜನಾ ವೆಚ್ಚ.

plan of action: ಕಾರ್ಯ ವಿಧಾನ.

planned economic system: ಯೋಜನಾಬದ್ಧ ಆರ್ಥಿಕ ಪದ್ಧತಿ.

planned economy: ಯೋಜನಾಬದ್ಧ ಆರ್ಥಿಕತೆ.

planned interview: ಯೋಜಿತ ಸಂದರ್ಶನ.

planned parenthood: ನೋಡಿ: family planning.

planning by direction: ನಿರ್ದೇಶಿತ ಯೋಜನೆ.

planning by inducement: ಪ್ರೇರಿತ ಯೋಜನೆ.

Planning Commission: ಯೋಜನಾ ಆಯೋಗ.

planning curve: ಯೋಜನಾ ರೇಖೆ.

planning period: ಯೋಜನಾ ಅವಧಿ.

planning process: ಯೋಜನಾ ವಿಧಾನ.

planning system: ಯೋಜನಾ ಪದ್ಧತಿ.

plantiff: ವಾದಿ.

plasticity: ಮೆದುತನ. ಪರಿಸರದ ಬದಲಾವಣೆಯೊಂದಿಗೆ ಬದಲಾಗುವ ಸ್ವಭಾವ.

plasticity of infant: ಶಿಶುವಿನ ಮೆದುತನ.

platform burial: ವೇದಿಕಾ ಶವ ಸಂಸ್ಕಾರ. ಎತ್ತರವಾದ ಸ್ಥಳದಲ್ಲಿ ಶವವನ್ನು ಇಟ್ಟು ರಣಹದ್ದುಗಳಿಗೆ ತಿನ್ನಲು ಬಿಡುವ ಶವಸಂಸ್ಕಾರ.

play genre: ಆಟದ ಪ್ರಕಾರ; ಆಟದ ರೂಪ.

play instinct: ಕ್ರೀಡಾ ಮೂಲಪ್ರವೃತ್ತಿ.

play therapy: ಕ್ರೀಡಾ ಚಿಕಿತ್ಸೆ.

pleasure economy: ಸುಖದಾಯಕ ಆರ್ಥಿಕತೆ.

pleasure principle: ಸುಖಸೂತ್ರ. ಮುಂದೇನಾಗುವುದೆಂಬ ಯೋಚನೆಯಿಲ್ಲದೆ ಬಯಕೆಗಳನ್ನು ತಕ್ಷಣ ಪೂರೈಸಿಕೊಳ್ಳುವಿಕೆ.

plebiscite: ಜನಾಭಿಪ್ರಾಯ. ಮುಖ್ಯವಾದ ಸಾರ್ವಜನಿಕ ವಿಷಯಗಳ ಮೇಲೆ ರಾಷ್ಟ್ರದ ಮತದಾರರೆಲ್ಲರೂ ನೇರವಾಗಿ ಕೊಡುವ ಅಭಿಮತ.

pledge: ಅಡವು; ಗಿರವಿ.

pledgee: ಗಿರವಿಧಾರಕ. ಸ್ಥಿರ ಅಥವಾ ಚರ ಸೊತ್ತುಗಳನ್ನು ಆಧಾರವಾಗಿಟ್ಟು ಕೊಂಡು ಸಾಲ ನೀಡುವವ.

pledger: ಗಿರವಿಕರ್ತ. ಸ್ಥಿರ ಯಾ ಚರ ಸೊತ್ತುಗಳನ್ನು ಆಧಾರ ನೀಡಿ ಸಾಲ ಪಡೆವಾತ.

pleistocene: ಮಾನವ ಯುಗ.

plenary session: ಸಮಗ್ರಾಧಿವೇಶನ; ಪೂರ್ಣಾಧಿವೇಶನ. ಅರ್ಹ ಸದಸ್ಯರೆಲ್ಲರೂ ಹಾಜರಾಗುವ ಅಧಿವೇಶನ.

plethysmograph: ಶಕ್ತಿ ಆಯತನಾ ಲೇಖಿ.

plough back policy: ಮರು ಹೂಡಿಕೆಯ ನೀತಿ.

plow (plough) agriculture: ನೇಗಿಲು ಆಧಾರಿತ ಕೃಷಿ.

plow (plough) culture: ನೇಗಿಲು ಸಂಸ್ಕೃತಿ. ನೇಗಿಲಿನ ಉಪಯೋಗವೇ ಮುಖ್ಯವಾಗಿದ್ದ ಐತಿಹಾಸಿಕ ಹಂತದ ಸಂಸ್ಕೃತಿ.

plumping voting system: ಏಕೀಕೃತ ಮತ ಪದ್ಧತಿ.

plural executive: ಬಹುಸದಸ್ಯ ಕಾರ್ಯಾಂಗ. ಕಾರ್ಯಾಂಗದ ಅಧಿಕಾರವು ಒಂದು ಗುಂಪಿನಲ್ಲಿರುವುದು. ಉದಾ: ಸ್ವಿಸ್ ಕಾರ್ಯಾಂಗ ಪದ್ಧತಿ. ಇಲ್ಲಿ ಸರಕಾರದ

ಅಧಿಕಾರಗಳು ಏಳು ಮಂದಿ ಸದಸ್ಯರಿಂದ ಕೂಡಿದ ಫೆಡೆರಲ್ ಕೌನ್ಸಿಲ್ ಎಂಬ ಸಮಿತಿಯ ಸಾಮೂಹಿಕ ಒಡೆತನ ದಲ್ಲಿದೆ.

plural society: ಬಹುವಿಧ ಸಮಾಜ.

pluralistic ignorance: ಬಹುವಿಧ ಅಜ್ಞಾನ.

pluralistic minorities: ಬಹುವಿಧ ಅಲ್ಪಸಂಖ್ಯಾತರು.

pluralistic realism: ಅನೇಕಾತ್ಮಕ ವಾಸ್ತವವಾದ.

pluralistic state: ಅನೇಕತಾವಾದಿ ರಾಜ್ಯ.

pluralistic theory: ಬಹುತ್ವ ಸಿದ್ಧಾಂತ.

pluralistic theory of sovereignty: ಪರಮಾಧಿಕಾರದ ಬಹುತ್ವ ಸಿದ್ಧಾಂತ. ಇದರ ಪ್ರಕಾರ ಪರಮಾಧಿಕಾರವು ಕೇವಲ ರಾಜ್ಯಕ್ಕೆ ಸೀಮಿತವಾಗಿರದೆ ಜನರ ಆಶೋತ್ತರಗಳನ್ನು ಈಡೇರಿಸುವ ವಿವಿಧ ಸಂಘ ಸಂಸ್ಥೆಗಳಿಗೆ ಸೇರಿದ್ದಾಗಿದೆ ಎಂಬ ಪ್ರತಿಪಾದನೆ. ಏಕೆಂದರೆ ಈ ಸಂಘ ಸಂಸ್ಥೆಗಳು ರಾಜ್ಯದ ಅಸ್ತಿತ್ವವನ್ನು ಅವಲಂಬಿಸದೆ ಉಳಿಯಬಲ್ಲವಾಗಿವೆ.

plurality of votes: ಅನೇಕ ಮತ ಪದ್ಧತಿ. ಅರ್ಹ ಮತದಾರರಿಗೆ ಒಂದಕ್ಕಿಂತ ಹೆಚ್ಚು ಮತ ಚಲಾಯಿಸುವ ಅಧಿಕಾರ.

pocket veto: ಸಂದೇಹ ನಿಷೇಧಾಧಿಕಾರ; ಮೌನ ನಿರಾಕರಣೆ. ಸಂಸತ್ತು ಅಂಗೀಕರಿಸಿದ ಮಸೂದೆಯು ತನ್ನ ಮುಂದೆ ಬಂದಾಗ ರಾಷ್ಟ್ರಾಧ್ಯಕ್ಷನು ಯಾವುದೇ ಗಮನ ಹರಿಸದೆ ಅಥವಾ ಪುನರ್‌ಪರಿಶೀಲನೆಗೆ ಕಳುಹಿಸದೆ ತನ್ನಲ್ಲೇ ಇಟ್ಟುಕೊಂಡು ಅಂಕಿತ ನೀಡದಿರುವುದನ್ನು ಮೌನ ನಿರಾಕರಣೆ ಎನ್ನಲಾಗುತ್ತದೆ.

point elasticity: ಬಿಂದು ಸ್ಥಿತಿಸ್ಥಾಪಕತೆ.

point method: ಬಿಂದು ವಿಧಾನ. ಸ್ಥಿತಿಸ್ಥಾಪಕತ್ವವನ್ನು ಅಳೆಯುವ ವಿಧಾನಗಳಲ್ಲೊಂದು.

point of order: ವಿಧಿ ಬಿಂದು. ಸದಸ್ಯರು ಚರ್ಚೆಗೆತ್ತಿರುವ ವಿಷಯವು ಆಯಾ ಸಭೆಯ ನಿಯಮಾವಳಿ ಹಾಗೂ ವಿಧಿಗಳಿಗೆ ಸಂಬಂಧಿಸಿದಂತೆ ವಿಧಿಬದ್ಧವಾಗಿದೆಯೇ ಎಂಬ ಪ್ರಶ್ನೆ. ವಿಧಿಬಿಂದು ತಪ್ಪಿದಾಗ ಅದನ್ನು ಕ್ರಿಯಾಲೋಪ ಎನ್ನಲಾಗುತ್ತದೆ.

polemology: ಸಂಘರ್ಷ ಅಧ್ಯಯನ ಶಾಸ್ತ್ರ. ಸಮೂಹ ಸಂಘರ್ಷ ಮತ್ತು ಮಾನವನ ಆಕ್ರಮಣಕಾರೀ ಪ್ರವೃತ್ತಿಯ ಬಗೆಗಿನ ಅಧ್ಯಯನ.

police state: ರಕ್ಷಣೆಯ ರಾಜ್ಯ. ಜನರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಜೀವನದ ಮೇಲೆ ಸರಕಾರವು ಕಟ್ಟುನಿಟ್ಟಿನ ಹಿಡಿತವನ್ನಿಟ್ಟುಕೊಳ್ಳುವುದು.

policy formulation: ನೀತಿ ನಿರೂಪಣೆ.

policy of annexation: ಆಕ್ರಮಣ ನೀತಿ.

policy of appeasement: ಶಮನ ಕಾರೀ ನೀತಿ. ಯಾವುದೇ ಒಂದು ರಾಷ್ಟ್ರವು ಪರ ರಾಷ್ಟ್ರದ ಮೇಲೆ ದುರಾಕ್ರಮಣವೆಸಗಿದಾಗ ಅದನ್ನು ಶಮನಗೊಳಿಸುವ ನೀತಿ.

policy of assimilation: ಸ್ವಾಂಗೀ ಕರಣ ನೀತಿ.

policy of controlled expansion: ನಿಯಂತ್ರಿತ ವಿಸ್ತರಣೆಯ ನೀತಿ. ಅರ್ಥ ವ್ಯವಸ್ಥೆಯಲ್ಲಿ ಕಂಡುಬರುವ ಅತಿ ಪ್ರಸರಣದ ಸ್ಥಿತಿಯನ್ನು ನಿವಾರಿಸಿ ಬೆಲೆಗಳಲ್ಲಿ ಸ್ಥಿರತೆಯನ್ನು ಕಾಯ್ದುಕೊಂಡು ದೇಶದ ಅಭಿವೃದ್ಧಿಗೆ

ಅಗತ್ಯವಾದ ಹಣಕಾಸು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಾಗುವಂತೆ ನೋಡಿಕೊಳ್ಳುವ ಹಣಕಾಸು ನೀತಿ.

policy of exclusion: ಬಹಿಷ್ಕಾರ ನೀತಿ. ಸಮೂಹದ ಸಮಗ್ರತೆಗೆ ಧಕ್ಕೆಯುಂಟು ಮಾಡುವ ವ್ಯಕ್ತಿಗಳನ್ನು ಸಮೂಹದಿಂದ ಹೊರಗಿಡುವುದು.

policy of indirect rule: ಪರೋಕ್ಷ ಆಳ್ವಿಕೆಯ ನೀತಿ.

policy of integration: ಸಮನ್ವಯ ನೀತಿ; ಏಕೀಕರಣ ನೀತಿ.

policy of neutrality: ತಾಟಸ್ಥ್ಯ ಧೋರಣೆ; ತಟಸ್ಥನೀತಿ. ಪ್ರಪಂಚದಲ್ಲಿರುವ ಯಾವ ಶಕ್ತಿ ಬಣಕ್ಕೂ ಸೇರದೆ ಎಲ್ಲಾ ವಿಧವಾದ ಅಂತಾರಾಷ್ಟ್ರೀಯ ಸಮಸ್ಯೆ ಗಳನ್ನು ಬಗೆಹರಿಸುವಲ್ಲಿ ತನ್ನದೇ ಆದ ವಿಧಾನ ಅನುಸರಿಸುವ ನೀತಿ.

policy of non-alignment: ಅಲಿಪ್ತ ನೀತಿ; ನಿರ್ಲಿಪ್ತ ನೀತಿ. ಯುರೋಪ್, ಏಶಿಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೇರಿಕಾದ ಕೆಲವು ದೇಶಗಳು ಅನುಸರಿಸುತ್ತಿರುವ ವಿದೇಶಾಂಗ ನೀತಿ. ಮಿಲಿಟರಿ ಕೂಟಗಳು ಅಥವಾ ಗುಂಪುಗಳಲ್ಲಿ ಭಾಗವಹಿಸದಿರುವುದು ಹಾಗೂ ಸಾಮ್ರಾಜ್ಯವಾದ, ಯುದ್ಧ, ವಸಾಹತುವಾದ ಮತ್ತು ಜನಾಂಗ ಶ್ರೇಷ್ಠತಾ ವಾದವನ್ನು ವಿರೋಧಿಸುವುದು ಈ ನೀತಿಯ ಮುಖ್ಯ ಆಶಯವಾಗಿದೆ.

policy of non-intervention: ನೋಡಿ: policy of neutrality.

policy of non- violence: ಅಹಿಂಸಾ ನೀತಿ.

policy of protection: ರಕ್ಷಣಾನೀತಿ. ಆರ್ಥಿಕ ಅಭಿವೃದ್ಧಿಗಾಗಿ ಮತ್ತು ದೇಶದ ಕೈಗಾರಿಕೆಗಳ ಬೆಳವಣಿಗೆಗಾಗಿ ಆಮದು ಮತ್ತು ರಫ್ತಿನ ಮೇಲೆ ವಿವಿಧ ನಿರ್ಬಂಧಗಳ ಹೇರಿಕೆ.

policy of seclusion: ಏಕಾಂತತೆಯ ನೀತಿ. ರಾಷ್ಟ್ರದ ವ್ಯಾಪಾರ ವಾಣಿಜ್ಯದಲ್ಲಿ ವಿದೇಶೀ ಪ್ರಭಾವಕ್ಕೆ ಆಸ್ಪದ ನೀಡದ ನೀತಿ. ಉದಾ: ಜಪಾನಿನಲ್ಲಿ ಟೋಕೋಗಾವಾ ಮನೆತನದ ಆಡಳಿತವಿದ್ದಾಗ ವಿದೇಶೀ ವ್ಯಾಪಾರಕ್ಕೆ ತಡೆ ಹಾಕಿ ವಿದೇಶೀ ವಿಚಾರ ಗಳಿಗೆ ಆಸ್ಪದ ನೀಡದ ಏಕಾಂತತೆಯ ನೀತಿ ಯನ್ನು ಅನುಸರಿಸಲಾಗಿತ್ತು.

polis: ನಗರ ರಾಜ್ಯ; ಪುರ ರಾಜ್ಯ. ನೋಡಿ: city states.

polit bureau : ಕೇಂದ್ರ ಶಾಖೆ; ಪೊಲಿಟ್ ಬ್ಯೂರೋ. ಕಮ್ಯೂನಿಸ್ಟ್ ಪಕ್ಷದ ಕೇಂದ್ರ ರಾಜಕೀಯ ಹಾಗೂ ಕಾರ್ಯಕಾರೀ ಮಂಡಳಿ.

political action: ರಾಜಕೀಯ ಕ್ರಮ. ಸಾಮಾಜಿಕ ಹಾಗೂ ಆರ್ಥಿಕ ಕ್ರಮದಲ್ಲಿನ ಬದಲಾವಣೆಗೆ ರಾಜಕೀಯ ಅಧಿಕಾರದ ಉಪಯೋಗ.

political advisor: ರಾಜಕೀಯ ಸಲಹೆಗಾರ.

political affair: ರಾಜಕೀಯ ವ್ಯವ ಹಾರ.

political arithmetic: ರಾಜಕೀಯ ಲೆಕ್ಕಾಚಾರ.

political art: ರಾಜತಂತ್ರ ಕೌಶಲ್ಯ.

political asylum: ರಾಜಕೀಯ ರಕ್ಷಣೆ.

political behaviourism: ರಾಜಕೀಯ ವರ್ತನಾತತ್ವ.

political change: ರಾಜಕೀಯ ಬದಲಾವಣೆ.

political charter: ರಾಜಕೀಯ ಸನ್ನದು.

political class: ರಾಜಕೀಯ ವರ್ಗ.

political cohesion: ರಾಜಕೀಯ ಸಂಯೋಜನೆ.

political collusion: ರಾಜಕೀಯ ಒಳಸಂಚು.

political community: ರಾಜಕೀಯ ಸಮುದಾಯ.

political concept: ರಾಜಕೀಯ ಪರಿಕಲ್ಪನೆ.

political consciousness: ರಾಜಕೀಯ ಪ್ರಜ್ಞೆ.

political contract: ರಾಜಕೀಯ ಒಪ್ಪಂದ.

political corruption: ರಾಜಕೀಯ ಭ್ರಷ್ಟಾಚಾರ.

political crisis: ರಾಜಕೀಯ ಬಿಕ್ಕಟ್ಟು.

political culture: ರಾಜಕೀಯ ಸಂಸ್ಕೃತಿ. ರಾಜಕೀಯ ಕ್ಷೇತ್ರದಲ್ಲಿ ವ್ಯಕ್ತಿಗಳ ಅಂತಃಕ್ರಿಯೆ, ಇತಿಹಾಸ, ಪರಂಪರೆ ಹಾಗೂ ಮೌಲ್ಯಗಳು ರಾಜಕೀಯ ಅಧಿಕಾರದತ್ತ ಕೇಂದ್ರೀಕೃತವಾಗಿರುವ ಸಂಸ್ಕೃತಿ.

political disabilities: ರಾಜಕೀಯ ದೌರ್ಬಲ್ಯಗಳು.

political disintegration: ರಾಜಕೀಯ ವಿಘಟನೆ; ರಾಜಕೀಯ ಶಿಥಿಲತೆ.

political economy: ರಾಜಕೀಯ ಅರ್ಥವ್ಯವಸ್ಥೆ. ನೋಡಿ: economics.

political education: ರಾಜಕೀಯ ಶಿಕ್ಷಣ.

political empiricism: ರಾಜಕೀಯ ಅನುಭವೈಕವಾದ.

political equality: ರಾಜಕೀಯ ಸಮಾನತೆ. ರಾಜ್ಯದಲ್ಲಿರುವ ನಾಗರಿಕರೆಲ್ಲರೂ ಸರಿಸಮಾನ ರಾಜಕೀಯ ಹಕ್ಕುಗಳನ್ನು ಪಡೆಯುವುದು. ಉದಾ: ಪ್ರಜಾ ಪ್ರಭುತ್ವದಲ್ಲಿ ಎಲ್ಲರೂ ಸಮಾನವಾದ ರಾಜಕೀಯ ಹಕ್ಕುಗಳನ್ನು ಪಡೆಯುತ್ತಾರೆ. ಮತನೀಡುವ ಹಕ್ಕನ್ನು ಎಲ್ಲಾ ವಯಸ್ಕರೂ ಪಡೆದಿರುತ್ತಾರೆ.

political executive: ರಾಜಕೀಯ ಅಧಿಕಾರಿ; ರಾಜಕೀಯ ಕಾರ್ಯಾಂಗ. ಉದಾ: ಸಂಸದೀಯ ಸರಕಾರ ಪದ್ಧತಿಯಲ್ಲಿ ಮಂತ್ರಿಮಂಡಲ. ನೋಡಿ: civil service.

political folklore: ರಾಜಕೀಯ ಜಾನಪದ.

political force: ರಾಜಕೀಯ ಶಕ್ತಿ.

political geography: ರಾಜಕೀಯ ಭೂಗೋಳಶಾಸ್ತ್ರ. ರಾಜಕೀಯ ಘಟನೆ ಗಳ ಪ್ರಾದೇಶಿಕ ವಿಶ್ಲೇಷಣೆ.

political homogeneity: ರಾಜಕೀಯ ಸಮರೂಪತೆ. ಆಡಳಿತ ನಿರ್ವಹಣೆಯಲ್ಲಿ ಏಕಾಭಿಪ್ರಾಯ ಅಥವಾ ಸಮಾನಾಭಿಪ್ರಾಯ ರೂಪುಗೊಂಡ ಸ್ಥಿತಿ. ಒಂದೇ ಆಡಳಿತ ಪಕ್ಷದ ಸರಕಾರವಿದ್ದಾಗ ಇದು ಸಂಭವಿ ಸುತ್ತದೆ.

political horoscope: ರಾಜಕೀಯ ಜಾತಕ.

political ideology: ರಾಜಕೀಯ ತತ್ವಾದರ್ಶ.

political institution: ರಾಜಕೀಯ ಸಂಸ್ಥೆ. ಉದಾ : ರಾಜಕೀಯ ಪಕ್ಷ.

political integration: ರಾಜಕೀಯ ಸಮಗ್ರತೆ.

political intrigue: ರಾಜಕೀಯ ಒಳ ಸಂಚು.

political justice: ರಾಜಕೀಯ ನ್ಯಾಯ

political liberty: ರಾಜಕೀಯ ಸ್ವಾತಂತ್ರ್ಯ. ಸರಕಾರದ ಚಟುವಟಿಕೆಗಳಲ್ಲಿ ಮತ್ತು ಆಡಳಿತ ಕಾರ್ಯಗಳಲ್ಲಿ ಜನರು ಭಾಗ ವಹಿಸಲು ನೀಡುವ ಸ್ವಾತಂತ್ರ್ಯ.

political messianism: ರಾಜಕೀಯ ಯುಗಪ್ರವರ್ತನ. ರಾಜಕೀಯ ತತ್ವಗಳು ಹಾಗೂ ಚಳವಳಿಗಳು ಸಮಾಜದಲ್ಲಿ ತರುವ ಕ್ರಾಂತಿ.

political movement: ರಾಜಕೀಯ ಚಳವಳಿ (ಆಂದೋಲನ).

political obligation: ರಾಜಕೀಯ ಹೊಣೆ.

political organization: ರಾಜಕೀಯ ಸಂಘಟನೆ.

political party: ರಾಜಕೀಯ ಪಕ್ಷ. ನಿರ್ದಿಷ್ಟ ತತ್ವಗಳ ಆಧಾರದ ಮೇಲೆ ರಾಷ್ಟ್ರದ ಹಿತಾಸಕ್ತಿಯನ್ನು ಸಾಧಿಸಲು ತಮ್ಮದೇ ತತ್ವಗಳನ್ನು ಕಾರ್ಯರೂಪಕ್ಕೆ ತರುವ ಉದ್ದೇಶದಿಂದ ಆಡಳಿತದ ಮೇಲೆ ನಿಯಂತ್ರಣ ಹೊಂದಲು ರೂಪುಗೊಂಡ ಸಂಘಟನೆ.

political philosophy: ರಾಜಕೀಯ ತತ್ವ.

political pluralism: ರಾಜಕೀಯ ಬಹುತ್ವವಾದ; ರಾಜಕೀಯ ಅನೇಕವಾದ.

political polarization: ರಾಜಕೀಯ ಧ್ರುವೀಕರಣ. ಹಲವು ಶಕ್ತಿಗಳು ಅಥವಾ ರಾಜಕೀಯ ಬಣಗಳ ಒಂದಾಗುವಿಕೆ.

political power: ರಾಜಕೀಯ ಅಧಿಕಾರ.

political pressure group: ರಾಜಕೀಯ ಒತ್ತಡ ಸಮೂಹ.

political right: ರಾಜಕೀಯ ಹಕ್ಕು. ಸಂವಿಧಾನದ ಮೂಲಕ ಪ್ರಜೆಗಳಿಗೆ ರಾಜಕೀಯ ಚಟುವಟಿಕೆಗಳಲ್ಲಿ ಭಾಗವಹಿಸಲು ಸರಕಾರ ನೀಡುವ ಹಕ್ಕು. ಉದಾ: ಮತದಾನದ ಹಕ್ಕು.

political science: ರಾಜಕೀಯ ಶಾಸ್ತ್ರ.

political socialization: ರಾಜಕೀಯ ಸಮಾಜೀಕರಣ.

political sociology: ರಾಜಕೀಯ ಸಮಾಜಶಾಸ್ತ್ರ. ರಾಜಕೀಯ ಸಂಸ್ಥೆಗಳ ಸಮಾಜಶಾಸ್ತ್ರೀಯ ಅಧ್ಯಯನ.

political sovereignty: ರಾಜಕೀಯ ಪರಮಾಧಿಕಾರ.

political stability: ರಾಜಕೀಯ ಸ್ಥಿರತೆ; ರಾಜಕೀಯ ದೃಢತೆ.

political system: ರಾಜಕೀಯ ವ್ಯವಸ್ಥೆ.

political theory: ರಾಜಕೀಯ ಸಿದ್ಧಾಂತ.

political thesis: ರಾಜಕೀಯ ಪ್ರಮೇಯ.

political thought: ರಾಜಕೀಯ ವಿಚಾರಧಾರೆ.

political turncoatism: ಪಕ್ಷಾಂತರ.

political unrest: ರಾಜಕೀಯ ಅಶಾಂತಿ; ರಾಜಕೀಯ ಕ್ಷೋಭೆ.

political violence: ರಾಜಕೀಯ ಹಿಂಸೆ.

political will: ರಾಜಕೀಯ ಸಂಕಲ್ಪ.

politics: ರಾಜಕಾರಣ.

polity: ರಾಜ್ಯಾಂಗ ವ್ಯವಸ್ಥೆ. ಅರಿಸ್ಟಾಟಲ್ ವಿವರಿಸಿದ ರಾಜ್ಯಗಳ ವಿಧಗಳಲ್ಲಿ ಪೊಲಿಟಿ ಎಂಬುದನ್ನು ಉತ್ತಮ ರಾಜ್ಯವೆಂದಿದ್ದಾನೆ.

polling booth: ಮತಗಟ್ಟೆ. ಅರ್ಹ ಮತದಾರರು ತಮ್ಮ ಮತವನ್ನು ಚಲಾಯಿಸಲು ಚುನಾವಣಾ ಮಂಡಲಿಯು ನಿಗದಿಪಡಿಸುವ ನಿರ್ದಿಷ್ಟ ಕೇಂದ್ರ.

polling centre: ನೋಡಿ: polling booth.

pollution: ಮಲಿನೀಕರಣ; ಅಪವಿತ್ರಗೊಳಿಸುವಿಕೆ; ಮಾಲಿನ್ಯ.

polyandrous family: ಬಹುಪತಿತ್ವ ಕುಟುಂಬ. ಒಬ್ಬಾಕೆಗೆ ಒಂದೇ ಸಮಯದಲ್ಲಿ ಹಲವಾರು ಗಂಡಂದಿರು ಇರುವ ಕುಟುಂಬ.

polyandrous marriage: ಬಹು ಪತಿತ್ವ ವಿವಾಹ.

polyandry: ಬಹುಪತಿತ್ವ.

polydemonism: ಬಹುಪ್ರೇತಾರಾಧನೆ. ಬಹುಪ್ರೇತಾರಾಧನೆಯ ನಂಬಿಕೆಯಿರುವ ಧರ್ಮ.

polygamous family: ಬಹುಸಂಗಾತಿ ಗಳ ಕುಟುಂಬ. ಗಂಡು ಅಥವಾ ಹೆಣ್ಣಿಗೆ ಒಂದಕ್ಕಿಂತ ಹೆಚ್ಚಿಗೆ ಸಂಗಾತಿಗಳಿರುವಂತಹ ಕುಟುಂಬ.

polygamous marriage: ಬಹು ಸಂಗಾತಿ ವಿವಾಹ.

polygamy: ಬಹುವಿವಾಹ. ಬಹು ಪತ್ನಿತ್ವ, ಬಹುಪತಿತ್ವ ಎರಡೂ ಪದ್ಧತಿ ಗಳಿರುವ ಸಮಾಜ.

polygenesis theory: ಬಹುಮೂಲ ಸಿದ್ಧಾಂತ.

polyglot state : ಬಹುಭಾಷಾ ರಾಜ್ಯ.

polygraph: ಅನೇಕಾಲೇಖಿ; ಬಹು ಗ್ರಂಥಕರ್ತ.

polygynous family: ಬಹುಪತ್ನಿತ್ವ ಕುಟುಂಬ ಒಬ್ಬನಿಗೆ ಒಂದೇ ಸಮಯದಲ್ಲಿ ಹಲವಾರು ಹೆಂಡತಿಯರು ಇರುವಂತಹ ಕುಟುಂಬ.

polygynous marriage: ಬಹುಪತ್ನಿತ್ವ ವಿವಾಹ.

polygyny: ಬಹುಪತ್ನಿತ್ವ.

polymorphism: ಬಹುರೂಪತ್ವ.

polynucleated city: ಬಹುಕೇಂದ್ರೀಯ ನಗರ.

polytheism: ಬಹುದೇವತಾರಾಧನೆ.

poly-typical evolution: ಬಹುವಿಧ ವಿಕಾಸ. ಅನೇಕ ಸಮಾಂತರ ಗುಂಪುಗಳು ವಿಕಾಸಗೊಂಡ ಪ್ರಕ್ರಿಯೆ.

pontiff: ಮುಖ್ಯ ಧರ್ಮಾಧಿಕಾರಿ.

poor law: ಬಡವರ ಕಾಯಿದೆ. ಬಡವರಿಗಾಗಿ ಕಡಿಮೆ ದರದಲ್ಲಿ ಜೀವನಾವಶ್ಯಕ ವಸ್ತುಗಳನ್ನು ಒದಗಿಸುವ ವ್ಯವಸ್ಥೆಗಾಗಿ ರೂಪಿಸಿದ ಕಾನೂನು.

popular antiquities: ಜನಪ್ರಿಯ ಪಳೆಯುಳಿಕೆಗಳು.

popular assembly: ಲೋಕಸಭೆ; ಜನಸಭೆ.

popular consent: ಜನಸಮ್ಮತಿ.

popular control: ಜನತಾ ನಿಯಂತ್ರಣ.

popular culture: ಜನಪ್ರಿಯ ಸಂಸ್ಕೃತಿ.

popular government: ಜನತಾ ಸರಕಾರ.

popular initiative: ಜನತಾ ಉಪಕ್ರಮಣ. ಸ್ವಿಸ್ ಸರಕಾರದಲ್ಲಿ ಶಾಸನ ರಚನೆಯ ಬಗೆಗೆ ಜನರೇ ಕೆಲವೊಂದು ಸೂಚನೆಗಳನ್ನು ನೀಡುವ ಅವಕಾಶವಿರುತ್ತದೆ. ಶಾಸನ ರಚನೆಯ ವಿಧಾನವನ್ನು ಜನರೇ ಪ್ರಾರಂಭಿಸುತ್ತಾರೆ.

popular institutions: ಜನತಾ ಸಂಸ್ಥೆಗಳು.

popular tale: ಜನಪ್ರಿಯ ಕಥೆ.

popular tradition: ಜನಪ್ರಿಯ ಸಂಪ್ರದಾಯ.

popular sovereignty: ಜನತಾ ಪರಮಾಧಿಕಾರ.

popular will : ಸಾರ್ವಜನಿಕ ಇಚ್ಛೆ.

population : ಜನಸಂಖ್ಯೆ.

population change theory: ನೋಡಿ: demographic transition.

population composition: ನೋಡಿ : demographic structure.

population control: ಜನಸಂಖ್ಯಾ ನಿಯಂತ್ರಣ.

population dynamics: ಜನಸಂಖ್ಯಾ ಚಲನಶಾಸ್ತ್ರ; ಜನಸಂಖ್ಯೆಯ ಸ್ಥಿತಿಗತಿ.

population ecology: ಜನಸಂಖ್ಯೆಯ ಜೀವಪರಿಸರಶಾಸ್ತ್ರ.

population element: ಜನಸಂಖ್ಯೆಯ ಮೂಲಾಂಶ. ನಿರ್ದಿಷ್ಟ ಜನಸಂಖ್ಯೆಯ ಅಂಕಿ ಅಂಶಗಳಲ್ಲಿ ಒಬ್ಬ ವ್ಯಕ್ತಿ ಮತ್ತು ವಿವರಗಳು.

population explosion: ಜನಸಂಖ್ಯಾ ಸ್ಫೋಟ.

population geography: ಜನಸಂಖ್ಯಾ ಭೂಗೋಳಶಾಸ್ತ್ರ.

population growth: ಜನಸಂಖ್ಯಾ ಬೆಳವಣಿಗೆ.

population map: ಜನಸಂಖ್ಯಾ ಭೂಪಟ.

population parameter: ಜನಸಂಖ್ಯಾ ಮಾಪಕ.

population projection: ಜನಸಂಖ್ಯಾ ಪ್ರಕ್ಷೇಪಣೆ.

population pyramid: ಜನಸಂಖ್ಯಾ ಗೋಪುರ.

population studies: ಜನಸಂಖ್ಯಾ ಅಧ್ಯಯನಗಳು.

populist politics: ಜನರಂಜನೀಯ ರಾಜಕೀಯ.

portfolio: ಖಾತೆ. ವಿವಿಧ ಸಚಿವರು ವಹಿಸಿಕೊಂಡಿರುವ ಆಡಳಿತ ಶಾಖೆಗಳು.

portfolio investment: ವಿಭಾಗೀಯ ಹೂಡಿಕೆ.

portfolio system: ಆಡಳಿತ ಖಾತೆ ಪದ್ಧತಿ. ಕೇಂದ್ರ ಸರಕಾರದ ಆಡಳಿತ ಶಾಖೆಗಳನ್ನು ವಿಂಗಡಿಸಿ ಹಂಚುವ ಪದ್ಧತಿ.

portfolio theory: ವಿಭಾಗೀಯ ಸಿದ್ಧಾಂತ. ಹೂಟೆದಾರರು ತಾವು ಹೊಂದಿರುವ ವಿವಿಧ ಆಸ್ತಿಗಳ ಹೆಚ್ಚು ದಕ್ಷ ಹಾಗೂ ಲಾಭದಾಯಕ ಮೊತ್ತಗಳ ಕುರಿತು ವಿಶ್ಲೇಷಿಸುವ ಸಿದ್ಧಾಂತ.

position classification: ಸ್ಥಾನಗಳ ವರ್ಗೀಕರಣ. ಸಾರ್ವಜನಿಕ ಆಡಳಿತದಲ್ಲಿ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಆಧರಿಸಿ ಸ್ಥಾನಗಳನ್ನು ವಿಂಗಡಿಸಿ ದರ್ಜೆಗಳಿಗನು

ಸಾರವಾಗಿ ಅವುಗಳನ್ನು ಕ್ರಮಬದ್ಧವಾದ ಶ್ರೇಣಿಯಲ್ಲಿ ಒಂದುಗೂಡಿಸುವುದು.

positional change: ಸ್ಥಾನಮಾನದ ಬದಲಾವಣೆ.

positive after image: ಗುಣಾನು ಬಿಂಬ; ಸಮ ಉತ್ತರ ಬಿಂಬ.

positive behaviour: ಸ್ಪಷ್ಟ ವರ್ತನೆ; ವಾಸ್ತವ ವರ್ತನೆ.

positive attitude change: ಧನಾತ್ಮಕ ಮನಃಪರಿವರ್ತನೆ. ಉದ್ದೇಶಿತ ರೀತಿಯಲ್ಲಿ ಮನೋವೃತ್ತಿಯ ಬದಲಾವಣೆ.

positive check: ಪ್ರಾಕೃತಿಕ ನಿಯಂತ್ರಣ ಕ್ರಮ. ಜನಸಂಖ್ಯಾ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಪ್ರಕೃತಿಯಲ್ಲಿ ತಾನಾಗಿಯೇ ಸಂಭವಿಸುವ ನಿಯಂತ್ರಣಗಳು ಉದಾ: ನೆರೆ, ಕ್ಷಾಮ, ಯುದ್ಧ ಇತ್ಯಾದಿ ಗಳು.

positive correlation: ಧನಾತ್ಮಕ ಸಹ ಸಂಬಂಧ.

positive deviation: ಧನಾತ್ಮಕ ವ್ಯತಿಕ್ರಮಣ; ಸಹಜ ವಿಪಥನ.

positive economics: ವಸ್ತುನಿಷ್ಠ ಅರ್ಥಶಾಸ್ತ್ರ.

positive function: ಧನಾತ್ಮಕ ಕಾರ್ಯ. ಲಾಭ ಹಾಗೂ ಗುಣಾತ್ಮಕ ಪರಿಣಾಮಗಳನ್ನುಂಟು ಮಾಡುವ ಕಾರ್ಯ.

positive guidance: ಗುಣಾತ್ಮಕ ಮಾರ್ಗದರ್ಶನ.

positive income effect: ಧನಾತ್ಮಕ ಆದಾಯ ಪರಿಣಾಮ. ವ್ಯಕ್ತಿಯ ಆದಾಯವು ಹೆಚ್ಚಿದಂತೆ ಆತನು ಹೆಚ್ಚು ಹೆಚ್ಚು ಅನುಭೋಗ ಸಾಮರ್ಥ್ಯವನ್ನು ಹೊಂದುತ್ತಾನೆ. ಇದನ್ನು ಧನಾತ್ಮಕ ಆದಾಯ ಪರಿಣಾಮ ಎನ್ನಲಾಗುತ್ತದೆ.

positive law: ಸಕಾರಾತ್ಮಕ ಕಾಯಿದೆ. ಶಾಸನಾಂಗದಿಂದ ರಚಿತವಾದ ಹಾಗೂ ರೂಢಿಯಲ್ಲಿರುವ ಕಾನೂನು.

positive morality: ಸಕಾರಾತ್ಮಕ ನೈತಿಕ ನಿಯಮ. ಆಚರಣೆಯಲ್ಲಿರುವ ನೈತಿಕ ನಿಯಮ.

positive reference group : ಸಕಾರಾತ್ಮಕ ಉಲ್ಲೇಖ ಸಮೂಹ. ನೋಡಿ: reference group.

positive sanction: ಸಕಾರಾತ್ಮಕ ಸಂಹಿತೆ. ಮಗು ಅಥವಾ ಅಪರಾಧಿಯ ಸುಧಾರಣೆಯಲ್ಲಿ ಶಿಕ್ಷೆಗಿಂತ ಪುರಸ್ಕಾರಕ್ಕೆ ಹೆಚ್ಚಿನ ಒತ್ತು ಕೊಡುವ ಸಂಹಿತೆ.

positive science: ವಸ್ತುನಿಷ್ಠ ವಿಜ್ಞಾನ. ವಸ್ತುನಿಷ್ಠ ವಿಜ್ಞಾನವು ವಸ್ತು ಹೇಗಿದೆಯೋ ಹಾಗೆಯೇ ಅದರ ಲಕ್ಷಣಗಳನ್ನು ಪರಿಶೀಲಿಸುತ್ತದೆ ಮತ್ತು ವಿವರಿಸುತ್ತದೆ.

positive sense: ವಾಸ್ತವಿಕ ದೃಷ್ಟಿ; ಯಥಾರ್ಥ ದೃಷ್ಟಿ.

positive social control: ಸಕಾರಾತ್ಮಕ ಸಾಮಾಜಿಕ ನಿಯಂತ್ರಣ.

positive state: ಸಕಾರಾತ್ಮಕ ರಾಜ್ಯ; ಕಲ್ಯಾಣ ರಾಜ್ಯ.

positive suggestion: ಸಕಾರಾತ್ಮಕ ಭಾವಪ್ರೇರಣೆ. ಒಪ್ಪಿತವಾಗುವ ಭಾವ ಪ್ರೇರಣೆ.

positive weight: ಸಮಭಾರ.

possession priest: ದರ್ಶನ ಪಾತ್ರಿ.

possibilism: ಸಾಧ್ಯತಾ ವಾದ. ಪರಿ ಸರದ ಪ್ರಭಾವದ ಜೊತೆಗೆ ಮಾನವನಿಗೆ ಪರಿಮಿತ ಆಯ್ಕೆಯ ಅಧಿಕಾರ ಇದೆ ಎನ್ನುವ ವಾದ.

possible growth rate: ಸಾಧ್ಯತಾ ಬೆಳವಣಿಗೆ ದರ.

post entry training: ನೌಕರಿ ಸೇರ್ಪಡೆ ಯೋತ್ತರ ತರಬೆತಿ. ಆಡಳಿತ ವ್ಯವಸ್ಥೆ ಯಲ್ಲಿ ಪ್ರಸ್ತುತ ಸ್ಥಾನದಲ್ಲಿ ನೌಕರನ ಕಾರ್ಯ ನಿರ್ವಹಣೆಯನ್ನು ಉತ್ತಮಪಡಿಸುವ ಸಲುವಾಗಿ ಮತ್ತು ಉನ್ನತ ಸ್ಥಾನದ ಕಾರ್ಯ ನಿರ್ವಹಣೆಗೆ ಸಿದ್ಧಪಡಿಸುವ ಉದ್ದೇಶದಿಂದ ನೀಡುವ ತರಬೇತಿ.

posthumous award: ಮರಣೋತ್ತರ ಪ್ರಶಸ್ತಿ.

post hypnotic conflict: ಸಮ್ಮೋಹ ನೋತ್ತರ ಸಂಘರ್ಷ; ಸಮ್ಮೋಹನೋತ್ತರ ಒಳತೋಟಿ. ಸಮ್ಮೋಹನ ಸ್ಥಿತಿಯಿಂದ ಬಿಡುಗಡೆ ಹೊಂದಿದಾತನ ಮಾನಸಿಕ ತುಮುಲ.

post hypnotic state: ಸಮ್ಮೋಹ ನೋತ್ತರ ಸ್ಥಿತಿ. ಸಮ್ಮೋಹನ ಸ್ಥಿತಿಯಿಂದ ಬಿಡುಗಡೆಯ ಬಳಿಕದ ಸ್ಥಿತಿ.

post hypnotic suggestion: ಸಮ್ಮೋಹನೋತ್ತರ ಭಾವಪ್ರೇರಣೆ. ವ್ಯಕ್ತಿ ಸಮ್ಮೋಹನ ಸ್ಥಿತಿಯಲ್ಲಿರುವಾಗ ಪಡೆದ ಸೂಚನೆಯನ್ನು ಆಮೇಲೆ ಅದರಿಂದ ಹೊರ ಬಂದು ಚಿಕಿತ್ಸಕನ ಹತೋಟಿಯಲ್ಲಿದ್ದಾಗ ಕಾರ್ಯಗತಗೊಳಿಸುವಿಕೆ.

postponable cost: ಮುಂದೂಡಬಹು ದಾದ ವೆಚ್ಚ.

postponed reaction: ವಿಲಂಬಿತ ಪ್ರತಿಕ್ರಿಯೆ; ಮುಂದೂಡಿದ ಪ್ರತಿಕ್ರಿಯೆ.

post programme evaluation: ಕಾರ್ಯಕ್ರಮೋತ್ತರ ಮೌಲ್ಯಮಾಪನ.

post structuralist: ರಚನೋತ್ತರ ವಾದಿ.

postal interview: ಅಂಚೆ ಸಂದರ್ಶನ.

postulate psychology: ಸ್ವಯಂಸಿದ್ಧ ಮನಶ್ಶಾಸ್ತ್ರ.

postulates: ಗೃಹೀತ ತತ್ವಗಳು.

posture: ನಿಲುವು; ಅಂಗವಿನ್ಯಾಸ.

potential ability: ಅಂತರ್ನಿಹಿತ ಸಾಮರ್ಥ್ಯ.

potential economic surplus : ಸುಪ್ತ ಆರ್ಥಿಕ ಹೆಚ್ಚಳ. ಒಂದು ನಿರ್ದಿಷ್ಟ ಸ್ವಾಭಾವಿಕ ಹಾಗೂ ತಾಂತ್ರಿಕ ಸನ್ನಿವೇಶ ದಲ್ಲಿ ಅವಶ್ಯಕ ಅನುಭೋಗಕ್ಕೆ ಬೇಕಾಗುವ ಉತ್ಪನ್ನಗಳಿಗಿಂತ ಉತ್ಪಾದಿಸಬಹುದಾದ ಉತ್ಪನ್ನದಲ್ಲಿ ಆಗುವ ಹೆಚ್ಚಳ.

potential gross national product: ಸುಪ್ತ ಗರಿಷ್ಠ ರಾಷ್ಟ್ರೀಯ ಉತ್ಪನ್ನ.

potential power: ನಿಹಿತ ಶಕ್ತಿ; ಅಂತಸ್ಥ ಶಕ್ತಿ.

potential price: ಸುಪ್ತ ಬೆಲೆ; ಅಂತಸ್ಥ ಬೆಲೆ.

potential propensity to save: ನಿಹಿತ ಉಳಿತಾಯ ಪ್ರವೃತ್ತಿ.

potentiality: ಶಕ್ತಿ ಸಾಮರ್ಥ್ಯ; ಪೂರ್ಣ ಶಕ್ತಿ.

poverty line: ಬಡತನದ ರೇಖೆ; ದಾರಿದ್ರ್ಯ ರೇಖೆ.

poverty trap: ಬಡತನದ ಬಲೆ. ವೈಯ ಕ್ತಿಕ ಆದಾಯದಲ್ಲಿ ಹೆಚ್ಚಳ ಉಂಟಾದಾಗ ಒಂದು ಕಡೆಯಲ್ಲಿ ತೆರಿಗೆಯ ಹೊರೆ ಹೆಚ್ಚಿ, ಇನ್ನೊಂದು ಕಡೆಯಿಂದ ಸರ್ಕಾರಿ ಸೌಲಭ್ಯ ಗಳಿಂದ ಹೊರಗುಳಿಯಬೇಕಾಗುವುದ ರಿಂದಾಗಿ ನಗದು ಆರ್ಥಿಕ ಕೊರತೆ ಹೆಚ್ಚುವ ಸ್ಥಿತಿ.

power: ಅಧಿಕಾರ; ಶಕ್ತಿ; ಸಾಮರ್ಥ್ಯ.

power block: ಶಕ್ತಿ ಬಣ.

power of delegated legislation: ನಿಯೋಜಿತ ಶಾಸನ ರಚನಾಧಿಕಾರ. ಆಧುನಿಕ ಜಗತ್ತಿನಲ್ಲಿ ಶಾಸಕಾಂಗಗಳು ಹೆಚ್ಚಿನ ಕಾರ್ಯಭಾರದ ಒತ್ತಡವನ್ನು ಹೊಂದಿರುವು ದರಿಂದ ಅವು ಕಾಯಿದೆಯ ಮೂಲತತ್ವ ಗಳನ್ನು ಮತ್ತು ಮುಖ್ಯಾಂಶಗಳನ್ನು ಮಾತ್ರ ಅನುಮೋದಿಸುವುದಕ್ಕಾಗಿ ಅದರ ನಿಯಮ ಗಳನ್ನು ರಚಿಸುವ ಅಧಿಕಾರವನ್ನು ಸಂಬಂಧ ಪಟ್ಟ ಸರಕಾರೀ ಇಲಾಖೆಗಳಿಗೆ ನಿಯೋಜಿ ಸುವಿಕೆ. ನೋಡಿ: delegated power.

power of dissolution: ವಿಸರ್ಜನೆಯ ಅಧಿಕಾರ. ಸಂಸದೀಯ ಸರಕಾರ ಪದ್ಧತಿ ಯಲ್ಲಿ ನಾಮಮಾತ್ರ ಕಾರ್ಯಾಂಗ ಅಧಿಕಾ ರಿಯು ಭಾರತದ ರಾಷ್ಟ್ರಪತಿ, ಇಂಗ್ಲೆಂಡಿನ ರಾಣಿ, ಪ್ರಧಾನ ಮಂತ್ರಿಯ ಸಲಹೆ ಮೇರೆಗೆ ಸಂಸತ್ತನ್ನು ವಿಸರ್ಜನೆ ಮಾಡುವ ಅಧಿಕಾರ.

power of imagination: ಊಹಾ ಶಕ್ತಿ; ಕಲ್ಪನಾಶಕ್ತಿ.

power of judicial review: ನ್ಯಾಯಾಂಗ ಮರುಪರಿಶೀಲನಾ ಅಧಿಕಾರ. ಶಾಸಕಾಂಗವು ಮಾಡಿದ ಕಾನೂನನ್ನು ವಿಮರ್ಶಿಸುವ ಅಥವಾ ಸಮೀಕ್ಷೆ ಮಾಡುವ ನ್ಯಾಯಾಂಗದ ಅಧಿಕಾರ.

power of mind: ಮನಸ್ಸಿನ ಶಕ್ತಿ.

power of pardon: ಕ್ಷಮಾದಾನದ ಅಧಿಕಾರ; ಕ್ಷಮಾಧಿಕಾರ. ಶಿಕ್ಷಿತರನ್ನು (ಶಿಕ್ಷೆ ಗೊಳಗಾದವರನ್ನು) ಕ್ಷಮಿಸುವ ಅಧಿಕಾರ. ಅಪರಾಧಿಗಳನ್ನು ಅಥವಾ ಮರಣದಂಡನೆಗೆ ಒಳಗಾದವರನ್ನು ರಾಷ್ಟ್ರದ ಮುಖಂಡನು (ಉದಾ: ಭಾರತದಲ್ಲಿ ರಾಷ್ಟ್ರಪತಿ, ಅಮೇ ರಿಕಾದಲ್ಲಿ ಅಧ್ಯಕ್ಷ, ಇಂಗ್ಲೆಂಡ್‌ನಲ್ಲಿ ಅರಸ) ಕ್ಷಮಿಸುವ ಅಧಿಕಾರ.

power of reasoning: ವಿವೇಚನಾ ಶಕ್ತಿ.

power of rememberance: ಜ್ಞಾಪಕ ಶಕ್ತಿ.

power of revision: ಮರುಪರಿ ಶೀಲನಾಧಿಕಾರ; ಪುನರ್ ವಿಮರ್ಶನಾಧಿ ಕಾರ. ರಾಷ್ಟ್ರದ ಅತ್ಯುನ್ನತ ನ್ಯಾಯಾಲಯಕ್ಕೆ ಅಧೀನ ನ್ಯಾಯಾಲಯಗಳಿಂದ ಬರುವ ಮೇಲ್ಮನವಿಗಳನ್ನು ಮರುಪರಿಶೀಲನೆ ಮಾಡಲು ಇರುವ ಅಧಿಕಾರ.

power of thinking: ಆಲೋಚನಾ ಶಕ್ತಿ.

power organization: ನೋಡಿ: power structure.

power political approach: ಶಕ್ತಿ ರಾಜಕೀಯ ದೃಷ್ಟಿಕೋನ. ಅಂತಾ ರಾಷ್ಟ್ರೀಯ ಸಂಬಂಧಗಳ ಅಧ್ಯಯನದ ಬಗ್ಗೆ ಆದರ್ಶ ವಾದಿಗಳು ಕೊಟ್ಟಿರುವ ದೃಷ್ಟಿ ಕೋನ. ಇದರ ಪ್ರಕಾರ ಪ್ರತಿಯೊಂದು ರಾಷ್ಟ್ರವೂ ತನ್ನ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನ ಮಾಡಿಕೊಳ್ಳುತ್ತದೆ. ಹೀಗಾಗಿ ವಿಶ್ವ ರಾಷ್ಟ್ರ ಗಳಲ್ಲಿ ವಿವಿಧ ಬಣಗಳಾಗುತ್ತವೆ.

power resource: ಶಕ್ತಿ ಸಂಪನ್ಮೂಲ.

power strategy: ಅಧಿಕಾರ ಕೌಶಲ; ಅಧಿಕಾರ ತಂತ್ರ.

power structure: ಅಧಿಕಾರ ರಚನೆ. ಒಂದು ನಿರ್ದಿಷ್ಟ ಸಮೂಹ ಅಥವಾ ಸಮಾಜದಲ್ಲಿ ಅಧಿಕಾರದ ವಿತರಣೆ ಹಾಗೂ ಬಳಕೆ.

powerlessness: ಅಧಿಕಾರಹೀನತೆ.

practical ability: ವ್ಯವಹಾರ ಸಾಮರ್ಥ್ಯ.

practical idealist: ಅನುಷ್ಠಾನ ಆದರ್ಶವಾದಿ.

practical maximum rate of investment: ಕಾರ್ಯಸಾಧ್ಯ (ಪ್ರಾಯೋಗಿಕ) ಪರಮಾವಧಿ ಹೂಟೆ ದರ.

practical politics: ವ್ಯಾವಹಾರಿಕ ರಾಜಕಾರಣ.

pragmatic: ಫಲಕಾರಿ; ವ್ಯಾವಹಾರಿಕ.

pragmatic approach: ವ್ಯಾವಹಾರಿಕ ಮಾರ್ಗದೃಷ್ಟಿ, ವ್ಯಾವಹಾರಿಕ ಸಮೀಪನ.

pragmatic plane: ವ್ಯಾವಹಾರಿಕ ಮಟ್ಟ.

pragmatic theory: ವ್ಯಾವಹಾರಿಕ ಸಿದ್ಧಾಂತ.

pragmatic truth: ವ್ಯಾವಹಾರಿಕ ಸತ್ಯ.

pragmatism: ವ್ಯಾವಹಾರಿಕ ವಾದ; ಪ್ರಯೋಜನವಾದ.

prathiloma marriage: ಪ್ರತಿ ಲೋಮ ವಿವಾಹ. ಮೇಲ್ಜಾತಿಯ ಹುಡುಗಿಯು ಕೆಳಜಾತಿಯ ಹುಡುಗನನ್ನು ಮದುವೆಯಾಗುವುದು. ಇದು ಅಂತರ್ಜಾತೀಯ ವಿವಾಹದ ಒಂದು ಪ್ರಕಾರ. ಇನ್ನೊಂದು ಅನುಲೋಮ ವಿವಾಹ.

prayer for the dead: ಸತ್ತವರಿಗಾಗಿ ಪ್ರಾರ್ಥನೆ. ಮೃತರ ಸಹಾಯಕ್ಕಾಗಿ ನಡೆಸುವ ಪ್ರಾರ್ಥನೆ. ಗೋರಿಯ ಬಳಿಯಲ್ಲಿ ಆಹಾರ ಇಡುವುದು, ಮೃತರ ಪರವಾಗಿ ದೇವತೆಗಳ ಜೊತೆ ಸಂವಾದ ನಡೆಸುವುದು ಇತ್ಯಾದಿ ಇದರ ಒಂದು ಅಂಗ.

pre-adaptation: ಪೂರ್ವ ಹೊಂದಾಣಿಕೆ.

pre-amble: ಪೂರ್ವ ಪೀಠಿಕೆ; ಪ್ರಸ್ತಾವನೆ; ಸಂವಿಧಾನದ ಪೀಠಿಕೆ.

pre-animism: ಪೂರ್ವ ಸರ್ವಚೇತನವಾದ; ಸರ್ವಚೇತನವಾದದ ಪೂರ್ವಕಾಲ. ಸರ್ವಚೇತನವಾದದ ಉಗಮಕ್ಕಿಂತ ಪೂರ್ವದಲ್ಲಿದ್ದ ಎಲ್ಲಾ ವಸ್ತುಗಳಿಗೂ ಜೀವ ಇದೆ ಮತ್ತು ಅವು ಅಂತಸ್ಥಶಕ್ತಿಯನ್ನು ಪಡೆದಿರುತ್ತವೆ ಎಂಬ ಧರ್ಮದ ಮೂಲಾಂಶ.

pre-capitalist economy: ಬಂಡವಾಳಶಾಹಿ ಪೂರ್ವದ ಆರ್ಥಿಕ ವ್ಯವಸ್ಥೆ.

precautionary motive: ಮುನ್ನೆಚ್ಚರಿಕೆಯ ಉದ್ದೇಶ. ವ್ಯಕ್ತಿಗಳು ಮತ್ತು ಉದ್ಯಮಗಳು ಆಕಸ್ಮಿಕ ಹಾಗೂ ಅನಿರೀಕ್ಷಿತ ಖರ್ಚುಗಳನ್ನು ಸರಿದೂಗಿಸುವುದಕ್ಕಾಗಿ ಹಣವನ್ನು ಶೇಖರಿಸಲು ಪ್ರೇರಕವಾಗುವ ಅಂಶ.

precedent: ಪೂರ್ವಾಚಾರ; ಪೂರ್ವ ನಿದರ್ಶನ. ಯಾವುದಾದರೂ ಕಾರ್ಯ ಅಥವಾ ನಿರ್ಣಯ ಕೈಗೊಳ್ಳುವಾಗ ಹಿಂದಿನ ಮಾದರಿ ಅಥವಾ ನಿದರ್ಶನಗಳನ್ನು, ನಿರ್ಧಾರಗಳನ್ನು ಅನುಸರಿಸುವುದು. ಸಾಮಾನ್ಯವಾಗಿ ನ್ಯಾಯ ಹಾಗೂ ಆಡಳಿತ ನಿರ್ವಹಣೆಯಲ್ಲಿ ಪೂರ್ವನಿದರ್ಶನಗಳಿಗೆ ಶಾಸನದಷ್ಟೇ ಮಾನ್ಯತೆ ಕೊಡಲಾಗುವುದು.

precinct committeeman: ಚುನಾವಣಾ ಮಂಡಳಿಯ ಸದಸ್ಯ.

precious stone: ಅಮೂಲ್ಯ ರತ್ನ; ಅಮೂಲ್ಯ ಶಿಲೆ.

precision matching: ನಿಷ್ಕೃಷ್ಟತಾ ಸರಿಜೋಡಣೆ.

precocity: ಅಕಾಲ ಪರಿಪಕ್ವತೆ; ಬಾಲ ಪ್ರೌಢತೆ. ಬಾಲ್ಯದಲ್ಲಿಯೇ ಪ್ರೌಢರ ಸಾಮರ್ಥ್ಯಗಳ ಪ್ರಕಟಣೆ.

precognition: ಭವಿಷ್ಯ ದರ್ಶನ. ಮುನ್ನರಿವು. ಮುಂದಾಗುವುದನ್ನು ಈಗಲೇ ತಿಳಿಯುವುದು.

preconscious: ಪೂರ್ವಪ್ರಬುದ್ಧ ಚೇತನ; ನಿಹಿತಮನ; ಕೆಳಚೇತನ. ಮನೋವಿಶ್ಲೇಷಣೆಯಲ್ಲಿ ನಿರೋಧಿತವಾಗಿರದ, ಆ ಕ್ಷಣದಲ್ಲಿ ಪ್ರಜ್ಞೆಯಲ್ಲಿಲ್ಲದ ನೆನಕೆಗಳು ಉಳಿಯುವ ಮನಸ್ಸಿನ ಒಂದು ಭಾಗ. (ಬೇಕೆಂದಾಗ ಈ ವಿಷಯಗಳನ್ನು ನೆನಪಿಸಿಕೊಳ್ಳುವುದು).

predatory pricing: ಶೋಷಣೆಯ ಬೆಲೆ. ಮಾರುಕಟ್ಟೆಯಲ್ಲಿ ಪೈಪೋಟಿ ದಾರರನ್ನು ನಿರ್ಮೂಲನಗೊಳಿಸಲು ಅಥವಾ ಸೋಲಿಸಲು ಅಥವಾ ಹೊಸ ವ್ಯಾಪಾರಿಗಳ ಪ್ರವೇಶವನ್ನು ತಪ್ಪಿಸುವ ಉದ್ದೇಶದಿಂದ ಬೆಲೆಯನ್ನು ಅತಿ ಕಡಿಮೆ ಮಟ್ಟದಲ್ಲಿ ನಿಗದಿಸುವುದು.

predatory warfare: ಕೊಳ್ಳೆ ಹೊಡೆಯುವ ಯುದ್ಧ ಪದ್ಧತಿ.

pre-destination: ಪೂರ್ವ ಸಂಕಲ್ಪ ವಾದ; ದೈವಸಂಕಲ್ಪವಾದ.

prediction: ಭವಿಷ್ಯ ನುಡಿಯುವಿಕೆ; ಮುಂದಾಗಿ ಹೇಳುವುದು.

pre-disposition: ಪೂರ್ವಪ್ರವಣತೆ.

pre-dravidian: ದ್ರಾವಿಡ ಪೂರ್ವ; ಪ್ರಾಗ್‌ದ್ರಾವಿಡ.

pre-dynastic: ರಾಜವಂಶದ ಪೂರ್ವ ಕಾಲ.

pre-entry training: ಪ್ರವೇಶ ಪೂರ್ವ ತರಬೇತಿ. ವ್ಯಕ್ತಿಯು ನೌಕರಿಗೆ ಸೇರುವ ಮುನ್ನ ತರಬೇತಿ ಮತ್ತು ಅನುಭವವನ್ನು ಪಡೆಯುವುದು.

prefect system: ಹಿರೇಮಣಿ ಪದ್ಧತಿ.

preference function: ಆಯ್ಕೆ ಕಾರ್ಯ.

preferential marriage: ಆದ್ಯತೆಯ ವಿವಾಹ. ಸಂಗಾತಿಗಳ ಆಯ್ಕೆಯಲ್ಲಿ ನಿಗದಿತ ಕುಲ ಕುಟುಂಬಗಳಿಂದ ಅಥವಾ ವಿಷಮ ಸೋದರ ಬಂಧುಗಳಿಂದಲೇ ಸಂಬಂಧ ಹುಡುಕುವ ವಿವಾಹ ಪದ್ಧತಿ.

preferential mating: ಆಯ್ಕೆಯ ಲೈಂಗಿಕ ಸಂಗ. ನಿರ್ದಿಷ್ಟ ರಕ್ತಸಂಬಂಧ ವುಳ್ಳ ವ್ಯಕ್ತಿಗಳ ವಿವಾಹಕ್ಕೆ ಸಮ್ಮತಿ ಇರುವ ವಿವಾಹ ಸಂಬಂಧ.

preferential rate : ತಾರತಮ್ಯ ದರ.

preferential treatment: ತಾರತಮ್ಯ ಧೋರಣೆ.

preferential voting system: ಪ್ರಾಶಸ್ತ್ಯ ಸೂಚಕ ಮತದಾನ ಪದ್ಧತಿ. ಉದಾ: ಭಾರತದ ರಾಷ್ಟ್ರಪತಿಯ ಚುನಾವಣೆಯಲ್ಲಿ ಅಳವಡಿಸಲಾಗುವ ಮತದಾನ ಪದ್ಧತಿ. ಇಲ್ಲಿ ಸಂಸತ್ತಿನ ಮತ್ತು ವಿಧಾನ ಸಭೆಗಳ ಸದಸ್ಯರು ತಮ್ಮ ಆದ್ಯತೆಯ ಆಧಾರದಲ್ಲಿ ಮತಗಳನ್ನು ಚಲಾಯಿಸುತ್ತಾರೆ.

preformation theory: ಪೂರ್ವರೂಪಣಾವಾದ.

pre-historic: ಪ್ರಾಗೈತಿಹಾಸಿಕ; ಇತಿಹಾಸ ಪೂರ್ವದ.

pre-historic anthropology: ಇತಿಹಾಸಪೂರ್ವ ಮಾನವಶಾಸ್ತ್ರ; ಪ್ರಾಗೈತಿಹಾಸಿಕ ಮಾನವಶಾಸ್ತ್ರ. ಇತಿಹಾಸ ಪೂರ್ವದ ಸಂಸ್ಕೃತಿಗಳನ್ನು ಅವಶೇಷಗಳ ಸಹಾಯದಿಂದ ಅಧ್ಯಯನ ಮಾಡುವ ಮಾನವಶಾಸ್ತ್ರ.

pre-historic archaeology: ಪ್ರಾಗೈತಿಹಾಸಿಕ ಪ್ರಾಚ್ಯವಸ್ತು ಶಾಸ್ತ್ರ.

pre-historic world : ಇತಿಹಾಸಪೂರ್ವ ಪ್ರಪಂಚ.

pre-industrial civilization: ಕೈಗಾರಿಕಾ ಪೂರ್ವದ ನಾಗರಿಕತೆ.

pre-judice: ಪೂರ್ವಾಗ್ರಹ.

pre-literate society: ಅಕ್ಷರ ಪೂರ್ವ ಸಮಾಜ.

pre-marital relation ship: ವಿವಾಹ ಪೂರ್ವದ ಲೈಂಗಿಕ ಸಂಬಂಧ.

pre-mature maternity: ಅಪ್ರಾಪ್ತ ವಯಸ್ಸಿನ ತಾಯ್ತನ.

pre-modern age: ಆಧುನಿಕ ಪೂರ್ವ ಯುಗ.

pre-natal influence: ಪ್ರಸವಪೂರ್ವ ಪ್ರಭಾವ; ಜನನಪೂರ್ವ ಪ್ರಭಾವ.

prenubile: ಕೌಮಾರ್ಯಕಾಲ.

pre-planned action: ಪೂರ್ವ ಯೋಜಿತ ಕ್ರಮ.

pre-political: ರಾಜಕೀಯ ಪೂರ್ವದ; ರಾಜಕೀಯವಾಗಿ ಸಂಘಟಿತರಾಗುವ ಮೊದಲಿನ.

pre-potence: ಪೂರ್ವಸತ್ವ; ಪ್ರಬಲತ್ವ.

prepotent drive: ಪ್ರಬಲ ಚೋದನೆ.

prepotent habit: ಪ್ರಬಲ ಅಭ್ಯಾಸ (ಚಾಳಿ).

prepotent response: ಪ್ರಬಲ ಅನುಕ್ರಿಯೆ.

pre-requisites: ಅನಿವಾರ್ಯ ಅಗತ್ಯಗಳು.

prerogatives: ವಿಶೇಷಾಧಿಕಾರಗಳು; ವಿಶೇಷ ಹಕ್ಕುಗಳು.

prescience: ನೋಡಿ : precognition.

prescribed marriage: ಸಮ್ಮತ ವಿವಾಹ. ನಿರ್ದಿಷ್ಟಪಡಿಸಿದ ಗುಂಪಿನಲ್ಲಿ ಆಗುವ ವಿವಾಹ.

prescribed role: ವಿಧಿಸಿದ ಪಾತ್ರ. ಸಾಂಸ್ಕೃತಿಕ ನಿಯಮಗಳಿಂದ ವಿವರಿಸಲ್ಪಟ್ಟ ಪಾತ್ರ.

prescription: ನಿಯಮನ; ವಿಧಿಸಿದ್ದು.

presentation of bill: ಮಸೂದೆಯ ಮಂಡನೆ.

presentation of budget: ಮುಂಗಡ ಪತ್ರ ಮಂಡನೆ; ಆಯವ್ಯಯ ಮಂಡನೆ.

presentational rituals: ಔಪಚಾರಿಕ ಗೌರವದ ಕ್ರಿಯಾವಿಧಿಗಳು. ಸಾಮಾಜಿಕ ಅಂತರ್‌ಕ್ರಿಯೆಯ ಸುಗಮತೆಗಾಗಿ ಅನುಸರಿಸುವ ವಿನಮ್ರತೆಯ ವರ್ತನಾ ವಿಧಿಗಳು. ಉದಾ: ಆಮಂತ್ರಿಸುವಿಕೆ, ವಂದಿಸುವಿಕೆ, ಹೊಗಳಿಕೆ, ಸಣ್ಣ ಪುಟ್ಟ ಸೇವೆ ಇತ್ಯಾದಿ.

pre-service : ಸೇವಾ ಪೂರ್ವ.

president's rule: ರಾಷ್ಟ್ರಪತಿ ಆಡಳಿತ. ಯಾವುದೇ ರಾಜ್ಯದಲ್ಲಿ ಜನರಿಂದ ಚುನಾಯಿತಗೊಂಡ ಸರಕಾರ ಸರಿಯಾದ ರೀತಿ

ಯಲ್ಲಿ ಕಾರ್ಯನಿರ್ವಹಿಸದೇ ಇದ್ದು ಆಡಳಿತದ ಅಥವಾ ಸಂವಿಧಾನದ ಕುಸಿತ ಆಗಿದ್ದ ಸಂದರ್ಭದಲ್ಲಿ ರಾಷ್ಟ್ರಪತಿಯು ಆ ರಾಜ್ಯದ ಸರಕಾರವನ್ನು ವಜಾಗೊಳಿಸಿ ರಾಷ್ಟ್ರಪತಿ ಆಡಳಿತವನ್ನು ಘೋಷಿಸುವುದು.

presidential cabinet: ರಾಷ್ಟ್ರಾಧ್ಯಕ್ಷರ ಸಂಪುಟ. ಅಮೇರಿಕಾದ ಅಧ್ಯಕ್ಷನಿಗೆ ಆಡಳಿತ ನಡೆಸಲು ಸಹಾಯಕವಾಗಿರುವ ಸಚಿವ ಸಂಪುಟ. ರಾಷ್ಟ್ರಾಧ್ಯಕ್ಷರ ಈ ಸಚಿವರು ವಿವಿಧ ಇಲಾಖೆಗಳ ಕಾರ್ಯದರ್ಶಿಗಳಾಗಿರುತ್ತಾರೆ.

presidential form of govern ment: ಅಧ್ಯಕ್ಷೀಯ ಸರಕಾರ ಪದ್ಧತಿ. ಈ ಪದ್ಧತಿಯಲ್ಲಿ ವಾಸ್ತವಿಕ ಕಾರ್ಯಾಂಗ ಇರುತ್ತದೆ. (ವಾಸ್ತವಿಕ ಮತ್ತು ನಾಮಮಾತ್ರ ಕಾರ್ಯಾಂಗವೆನ್ನುವ ವಿಧಗಳಿರುವುದಿಲ್ಲ) ಈ ವಾಸ್ತವಿಕ ಕಾರ್ಯಾಂಗಾಧಿಕಾರವನ್ನು ಚಲಾಯಿಸುವವ ರಾಷ್ಟ್ರಾಧ್ಯಕ್ಷ. ಈತನು ರಾಷ್ಟ್ರದ ಹಾಗೂ ಸರಕಾರದ ಮುಖ್ಯಸ್ಥನಾಗಿರುತ್ತಾನೆ. ಅಧಿಕಾರ ವಿಭಜನೆ ತತ್ವವನ್ನು ಆಧರಿಸಿ ಸರ್ಕಾರ ರಚನೆಯಾಗಿರುವುದರಿಂದ ಕಾರ್ಯಾಂಗವು ಶಾಸಕಾಂಗದಿಂದ ಸಂಪೂರ್ಣ ಸ್ವತಂತ್ರವಾಗಿರುತ್ತದೆ.

presidential veto: ಅಧ್ಯಕ್ಷೀಯ ನಿಷೇಧಾಧಿಕಾರ. ಅಮೇರಿಕಾದಲ್ಲಿ ಕೇಂದ್ರ ಶಾಸಕಾಂಗವಾದ ಕಾಂಗ್ರೆಸ್‌ನ ಶಾಸನ ರಚನಾಧಿಕಾರಗಳು ಅಧ್ಯಕ್ಷನ ನಿಷೇಧಾಧಿಕಾರದಿಂದ ನಿಯಂತ್ರಿಸಲ್ಪಡುವುದು.

pre-social: ಸಮಾಜ ಪೂರ್ವದ. ಸಾಮಾಜಿಕವಾಗಿ ಸಂಘಟಿತವಾಗುವ ಮೊದಲಿನ ಸ್ಥಿತಿ.

press conference: ಪತ್ರಿಕಾಗೋಷ್ಠಿ.

press correspondent: ಪತ್ರಿಕಾ ವರದಿಗಾರ.

pressure group: ಒತ್ತಡ ಗುಂಪು (ಸಮೂಹ). ಸಾರ್ವಜನಿಕರ ಪ್ರತಿನಿಧಿಯಾಗಿ ಅಥವಾ ತನ್ನದೇ ವಿಶೇಷ ಆಸಕ್ತಿಯಿಂದ ಆಡಳಿತ ನಿಯೋಗ ಅಥವಾ ಶಾಸಕಾಂಗವನ್ನು ಪ್ರಭಾವಿಸಬಲ್ಲ ಯಾವುದೇ ಸಕ್ರಿಯ ಸಮೂಹ. ಉದಾ: ಕಾರ್ಮಿಕರ ಸಂಘ ಟನೆ, ರೈತ ಸಂಘಟನೆ.

pressure sensation: ಒತ್ತಡ ಸಂವೇದನೆ.

prestige of occupation: ಉದ್ಯೋಗ ಘನತೆ.

prestige suggestion: ಪ್ರತಿಷ್ಠಾ ಭಾವ ಪ್ರೇರಣೆ.

pre-supposed reason: ಪೂರ್ವ ಕಲ್ಪಿತ ಕಾರಣ.

preventive check: ಪ್ರತಿನಿರೋಧಕ; ನಿವಾರಕ ಪ್ರತಿಬಂಧಕ. ಜನಸಂಖ್ಯಾ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಮಾನವನು ಕೈಗೊಳ್ಳಬಹುದಾದ ನಿಯಂತ್ರಣಗಳು. ಉದಾ: ಬ್ರಹ್ಮಚರ್ಯ ಪಾಲನೆ, ಕುಟುಂಬ ಯೋಜನೆ ಇತ್ಯಾದಿ.

preventive detention: ಮುನ್ನೆಚ್ಚರಿಕೆ ಬಂಧನ; ಸ್ಥಾನಬದ್ಧತೆಯಲ್ಲಿಡುವುದು. ದೇಶದಲ್ಲಿ ಸಮಾಜಘಾತುಕರು ಸಮಸ್ಯೆಗಳನ್ನು ಉಂಟುಮಾಡಿದರೆ ಅಂಥವರ ವಿರುದ್ಧ ಕೈಗೊಳ್ಳುವ ಮುನ್ನೆಚ್ಚರಿಕೆಯ ಕ್ರಮ.

price and income policy: ಬೆಲೆ ಮತ್ತು ಆದಾಯ ನೀತಿ. ಮುಕ್ತ ಆರ್ಥಿಕ ಬೆಳವಣಿಗೆಯನ್ನು ಹತೋಟಿಯಲ್ಲಿಡಲು ಬೆಲೆ ಮತ್ತು

ವೇತನಗಳ ಏರುವಿಕೆಯನ್ನು ನಿಯಂತ್ರಿಸುವ ನೀತಿ.

price-consumption curve: ಬೆಲೆ ಅನುಭೋಗ ರೇಖೆ. ಬೆಲೆ ಮತ್ತು ಅನುಭೋಗಗಳ ನಡುವಿನ ಸಂಬಂಧವನ್ನು ಬಿಂಬಿಸುವ ರೇಖೆ.

price control: ಬೆಲೆ ನಿಯಂತ್ರಣ.

price demand: ಬೆಲೆ ಬೇಡಿಕೆ; ಬೆಲೆಯನ್ನವಲಂಬಿಸಿರುವ ಬೇಡಿಕೆ.

price differential: ಬೆಲೆ ವಿಭೇದ.

price discount: ಬೆಲೆ ರಿಯಾಯಿತಿ.

price discrimination: ಬೆಲೆ ತಾರತಮ್ಯ. ಒಂದೇ ರೀತಿಯ ಸರಕುಗಳನ್ನು ವಿವಿಧ ಗ್ರಾಹಕರಿಗೆ ವಿಭಿನ್ನ ಬೆಲೆಗಳಲ್ಲಿ ಮಾರಾಟ ಮಾಡುವುದು.

price effect: ಬೆಲೆಯ ಪರಿಣಾಮ. ಬೆಲೆಯ ಬದಲಾವಣೆಯಿಂದ ಬೇಡಿಕೆಯ ಮೇಲೆ ಉಂಟಾಗುವ ಪರಿಣಾಮ.

price elasticity of demand: ಬೇಡಿಕೆಯ ಬೆಲೆ ಸ್ಥಿತಿ ಸ್ಥಾಪಕತ್ವ. ಬೆಲೆಯ ಬದಲಾವಣೆ ಮತ್ತು ಅದರ ಪರಿಣಾಮವಾಗಿ ಬೇಡಿಕೆಯಲ್ಲಿ ಉಂಟಾಗುವ ಬದಲಾವಣೆಯ ಪ್ರಮಾಣ.

price elasticity of supply: ಪೂರೈಕೆಯ ಬೆಲೆ ಸ್ಥಿತಿಸ್ಥಾಪಕತ್ವ. ಬೆಲೆಯ ಬದಲಾವಣೆಯಿಂದಾಗಿ ಪೂರೈಕೆಯಲ್ಲುಂಟಾಗುವ ಬದಲಾವಣೆಯ ಪ್ರಮಾಣ.

price fluctuation fund: ಬೆಲೆ ಏರಿಳಿತ ನಿಧಿ. ರೈತರ ಸರಕುಗಳನ್ನು ನಗದು ಹಣ ಕೊಟ್ಟುಕೊಳ್ಳಲು ಸಹಕಾರಿ ಮಾರಾಟ ಸಂಘಗಳಿಗೆ ಉತ್ತೇಜನ ನೀಡಲು ೧೯೬೪-೬೫ ರಲ್ಲಿ ಜಾರಿಗೆ ತಂದ ಯೋಜನೆ.

price index: ಬೆಲೆ ಸೂಚಿ.

price leader: ಬೆಲೆ ಮುಂದಾಳು. ಆಂಶಿಕ ಬಹುಜನ ಸ್ವಾಮ್ಯವಿದ್ದಾಗ ಮಾರುಕಟ್ಟೆಯಲ್ಲಿ ಬೆಲೆ ನಿರ್ಧರಿಸುವಲ್ಲಿ ಪ್ರಮುಖ ಪಾತ್ರವಹಿಸುವ ಉದ್ದಿಮೆದಾರ.

price mechanism: ಬೆಲೆಯ ತಂತ್ರ.

price policy: ಬೆಲೆ ನೀತಿ.

price ratio: ಬೆಲೆ ನಿಷ್ಪತ್ತಿ.

price rigidity: ಬೆಲೆಯ ಜಡತೆ.

price rise: ಬೆಲೆ ಏರಿಕೆ.

price scissors: ಬೆಲೆ ವಿಚ್ಛೇದಕಗಳು. ಉದಾ: ಪೂರೈಕೆ ಮತ್ತು ಬೇಡಿಕೆ.

price stability: ಬೆಲೆಯ ಸ್ಥಿರತೆ.

price support policy: ಬೆಲೆ ಬೆಂಬಲ ನೀತಿ; ಬೆಂಬಲ ಬೆಲೆ ನೀತಿ. ಮಾರಾಟವಾಗದ ಹೆಚ್ಚುವರಿ ಉತ್ಪನ್ನಗಳನ್ನು ಸರಕಾರವು ಕೊಳ್ಳುವುದರ ಮೂಲಕ ಮುಕ್ತ ಮಾರುಕಟ್ಟೆಯಲ್ಲಿ ಬೆಲೆಯನ್ನು ನಿಗದಿಸಿ ಬೆಲೆಯನ್ನು ಉತ್ತೇಜಿಸುವ ಹಾಗೂ ಕೃಷಿಕರ ಆದಾಯವನ್ನು ಹೆಚ್ಚಿಸುವ ಕೃಷಿ ಉತ್ತೇಜನಾ ನೀತಿ.

price system: ಬೆಲೆ ವ್ಯವಸ್ಥೆ. ಬೇಡಿಕೆಯು ಅಧಿಕವಾಗಿದ್ದಾಗ ಬೆಲೆಯನ್ನು ಏರಿಸುವ ಮತ್ತು ಪೂರೈಕೆಯು ಅಧಿಕವಾಗಿದ್ದಾಗ ಬೆಲೆಯನ್ನು ಇಳಿಸುವ ತಂತ್ರ.

price theory: ಬೆಲೆ ಸಿದ್ಧಾಂತ. ಮಾರುಕಟ್ಟೆಯಲ್ಲಿ ವಸ್ತುಗಳ ಬೆಲೆ ನಿರ್ಧರಿಸುವಿಕೆಯನ್ನು ಕುರಿತ ಸಿದ್ಧಾಂತ.

price trend: ಬೆಲೆ ಪ್ರವೃತ್ತಿ; ಬೆಲೆ ಯೊಲವು.

price war : ಬೆಲೆ ಹೋರಾಟ.

pricing policy: ಬೆಲೆ ನಿರ್ಧಾರಣಾ ನೀತಿ.

priest king : ಪುರೋಹಿತ ರಾಜ. ಸುಮೇರಿಯನ್ನರು ಮೆಸಪಟೋಮಿಯದಲ್ಲಿ ಸ್ಥಾಪಿಸಿದ್ದ ಸಣ್ಣ ಸಣ್ಣ ನಗರ ರಾಜ್ಯಗಳಲ್ಲಿದ್ದ ಪುರೋಹಿತ ರಾಜ.

priliminary report: ಪೂರ್ವಭಾವಿ ವರದಿ.

prima facie: ಎದ್ದು ಕಾಣುವ; ಮೊದಲ ನೋಟಕ್ಕೆ ಕಾಣುವ.

primary burden: ಪ್ರಾಥಮಿಕ ಹೊರೆ. ಅತಿ ತೆರಿಗೆಗಳ ಹೇರುವಿಕೆಯಿಂದಾಗಿ ಜನರ ಕೈಯಲ್ಲಿ ಹಣದ ಕೊರತೆಯುಂಟಾಗುವ ಪರಿಸ್ಥಿತಿ.

primary change: ಪ್ರಾಥಮಿಕ ಬದಲಾವಣೆ.

primary co-operation: ಪ್ರಾಥಮಿಕ ಸಹಕಾರ.

primary disposition: ಮೂಲ ಚಿತ್ತ ಪ್ರವೃತ್ತಿ.

primary drive: ಮೂಲ ಪ್ರೇರಣೆ; ಪ್ರಾಥಮಿಕ ಪ್ರೇರಣೆ.

primary emotion : ಮೂಲ ಸಂವೇಗ.

primary family: ಸ್ವ ಯಜಮಾನ್ಯ ಕುಟುಂಬ. ಮನೆಯ ಯಜಮಾನನೂ ಕುಟುಂಬದ ಮುಖ್ಯಸ್ಥನೂ ಒಬ್ಬನೇ ಆಗಿರುವ ಕುಟುಂಬ. ಈ ಪರಿಕಲ್ಪನೆಯನ್ನು ೧೯೬೦ರ ಅಮೇರಿಕಾದ ಜನಗಣತಿಯಲ್ಲಿ ಮೊತ್ತಮೊದಲಿಗೆ ಬಳಸಲಾಯಿತು.

primary good: ಪ್ರಾಥಮಿಕ ಸರಕು.

primary group: ಪ್ರಾಥಮಿಕ ಸಮೂಹ. ಸಾಮಾನ್ಯ ಮೌಲ್ಯಗಳು ಅಥವಾ ವರ್ತನೆಯ ಪ್ರಮಾಣಗಳಿರುವ ಹಾಗೂ ಸದಸ್ಯರ ನಡುವೆ ವೈಯಕ್ತಿಕ ಸಂಪರ್ಕವಿರುವ ಆತ್ಮೀಯ ಸಾಮಾಜಿಕ ಸಮೂಹ.

primary health unit: ಪ್ರಾಥಮಿಕ ಆರೋಗ್ಯ ಘಟಕ.

primary health worker: ಪ್ರಾಥ ಮಿಕ ಆರೋಗ್ಯ ಕಾರ್ಯಕರ್ತ.

primary identification: ಪ್ರಾಥಮಿಕ ಗುರುತಿಸುವಿಕೆ.

primary incest taboo: ಪ್ರಾಥಮಿಕ ಅಗಮ್ಯ ಗಮನ ನಿಷೇಧ. ಉದಾ: ನೇರ ರಕ್ತ ಸಂಬಂಧಿಗಳಾದ ತಂದೆ ಮಗಳು, ತಾಯಿ ಮಗ, ಅಣ್ಣ ತಂಗಿ ಇವರ ನಡುವೆ ವಿವಾಹ ನಿಷೇಧ.

primary input: ಪ್ರಾಥಮಿಕ ಆದಾನ.

primary kin: ಪ್ರಾಥಮಿಕ ಬಂಧು. ಪ್ರಧಾನ ಕಳ್ಳುಬಳ್ಳಿ ಸಂಬಂಧಿ.

primary marriage: ವ್ಯಕ್ತಿಯ ಪ್ರಥಮ ಮದುವೆ. ಅಮಂಗಳವಲ್ಲದವರ ಅಂದರೆ ವಿಧವೆ ಅಥವಾ ವಿಧುರರಲ್ಲದವರ ವಿವಾಹ.

primary memory image: ಮೂಲ ಸ್ಮೃತಿ ಬಿಂಬ.

primary mental ability: ಮೂಲ ಮನೋಸಾಮರ್ಥ್ಯ; ಮೂಲಭೂತ ಮಾನಸಿಕ ಸಾಮರ್ಥ್ಯ. ಉದಾ: ನೆನಪಿಸುವಿಕೆ, ವಿಮರ್ಶನ ಶಕ್ತಿ, ಲೆಕ್ಕಮಾಡುವಿಕೆ ಇತ್ಯಾದಿ.

primary mourner: ಪ್ರಮುಖ ಶೋಕಸ್ಥ. ಮಗ, ಹೆಂಡತಿ ಇತ್ಯಾದಿ.

primary need: ನೋಡಿ: physiological need.

primary occupation : ಪ್ರಾಥಮಿಕ ಉದ್ಯೋಗ. ಕಚ್ಚಾ ವಸ್ತುಗಳನ್ನು ಉತ್ಪಾದಿಸುವ ಉದ್ಯೋಗ. ಉದಾ: ಕೃಷಿ, ಮೀನುಗಾರಿಕೆ, ಬೇಟೆ, ಗಣಿ ಕೈಗಾರಿಕೆ ಇತ್ಯಾದಿ.

primary party organ: ಪಕ್ಷದ ಪ್ರಾಥಮಿಕ ಘಟಕ.

primary personality: ಮೂಲ ವ್ಯಕ್ತಿತ್ವ.

primary policy: ಮೂಲ ನೀತಿ.

primary poverty: ಪ್ರಾಥಮಿಕ ಬಡ ತನ.

primary product : ಪ್ರಾಥಮಿಕ ಉತ್ಪನ್ನ.

primary quality: ಪ್ರಾಥಮಿಕ ಗುಣ; ಮೂಲಗುಣ.

primary re-inforcement: ಪ್ರಾಥ ಮಿಕ ಪುನರ್ಬಲನ.

primary rule: ಪ್ರಾಥಮಿಕ ನಿಯಮ; ಮೂಲ ನಿಯಮ.

primary sector: ಪ್ರಾಥಮಿಕ ವಲಯ.

primary service: ಮೂಲ ಸೇವೆ; ಪ್ರಾಥಮಿಕ ಸೇವೆ.

primary sex ratio: ಪ್ರಾಥಮಿಕ ಲಿಂಗ ಅನುಪಾತ.

primary social institution: ನೋಡಿ: basic social institution.

primary source: ಮೂಲ ಆಕರ; ಸಂಶೋಧನೆಯ ಮೂಲ ದಾಖಲೆ. ಉದಾ: ಗಣತಿ ವರದಿಗಳು, ದಿನಚರಿಗಳು, ಆತ್ಮ ಕಥನಗಳು, ಕಾಗದ ಪತ್ರಗಳು, ಸಾರ್ವಜನಿಕ ದಾಖಲೆಗಳು ಇತ್ಯಾದಿ.

primary sterility: ಪ್ರಧಾನ ಬಂಜೆತನ.

primary sub-race: ಮೂಲ ಉಪ ಜನಾಂಗ. ಮೂಲ ಜನಾಂಗದೊಳಗಿನ ಉಪ ಪಂಗಡ.

primary word: ಪ್ರಾಥಮಿಕ ಪದ; ಇತರ ರೂಪಗಳಿಲ್ಲದ ಪದ.

primate: ಪ್ರಮುಖಿ. ಅತ್ಯುನ್ನತ ಶ್ರೇಣಿಯ ಸಸ್ತನಿ ಪ್ರಾಣಿ ವರ್ಗ.

primate society: ಪ್ರಮುಖೀ ಸಮಾಜ.

primatology: ಪ್ರಮುಖೀ ಶಾಸ್ತ್ರ. ಪ್ರಮುಖಿಗಳನ್ನು ಅಭ್ಯಾಸ ಮಾಡುವ ಶಾಸ್ತ್ರ

prime cost: ಮೂಲ ವೆಚ್ಚ; ಬದಲಾಗ ಬಲ್ಲ ವೆಚ್ಚ. ನೋಡಿ: variable cost.

Prime Minister: ಪ್ರಧಾನ ಮಂತ್ರಿ ಸಂಸದೀಯ ಸರಕಾರ ಪದ್ಧತಿಯಲ್ಲಿ ಆಡಳಿತ ಪಕ್ಷದ ನಾಯಕನಾಗಿದ್ದು ಸರ ಕಾರದ ಮುಖ್ಯಸ್ಥನಾಗಿ ತನ್ನ ಮಂತ್ರಿಮಂಡಲದ ಸದಸ್ಯರ ಮೂಲಕ ಸರಕಾರದ ಎಲ್ಲಾ ಕಾರ್ಯ ಭಾರಗಳನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿರುವ ವ್ಯಕ್ತಿ.

prime ministerial government: ಪ್ರಧಾನಿ ಪ್ರಭುತ್ವ ಸರಕಾರ; ಪ್ರಧಾನ ಮಂತ್ರಿಯ ನಾಯಕತ್ವದ ಸರಕಾರ. ಸಂಸದೀಯ ಸರಕಾರ ಪದ್ಧತಿಯಲ್ಲಿ ರಾಷ್ಟ್ರಪತಿ ಅಥವಾ ಅರಸನಿಗಿಂತ ಪ್ರಧಾನ ಮಂತ್ರಿಯು ಹೆಚ್ಚು ಅಧಿಕಾರವನ್ನು ಹೊಂದಿರುವುದರಿಂದ ಅದನ್ನು ಪ್ರಧಾನಿ ಪದ್ಧತಿಯ ಸರಕಾರವೆಂದು ಕರೆಯಲಾಗುತ್ತದೆ.

prime ministerocracy: ಪ್ರಧಾನಿ ಪ್ರಭುತ್ವ. ನೋಡಿ: prime mini sterial government.

primitive art: ಆದಿಮ ಕಲೆ.

primitive behaviour: ಅಸಂಸ್ಕೃತ ವರ್ತನೆ; ಮೂಲರೂಪದ ವರ್ತನೆ.

primitive communal system: ಆದಿಕಾಲದ ಸಮುದಾಯ ಸಮಾಜ ಪದ್ಧತಿ. ಎಲ್ಲರೂ ಜೊತೆಗೂಡಿ ಕೆಲಸ ಮಾಡುತ್ತಾ ಆಸ್ತಿಯನ್ನು ಎಲ್ಲರೂ ಸಮಾನವಾಗಿ ಅನುಭವಿಸುತ್ತಿದ್ದ ಆದಿ ಕಾಲದ ಜನರ ಜೀವನ ವಿಧಾನ.

primitive communism: ಆದಿಮ ಸಮತಾವಾದ. ಅನಕ್ಷರಸ್ಥ ಸಮಾಜಗಳಲ್ಲಿ ಪ್ರಾಮುಖ್ಯ ಆರ್ಥಿಕ ಮೂಲಗಳ ಒಡೆತನವು ವ್ಯಕ್ತಿಗಳ ಅಥವಾ ಕುಟುಂಬಗಳ ಬದಲಾಗಿ ಇಡೀ ಸಮುದಾಯದ ವಶವಿತ್ತೆಂಬ ವಾದ.

primitive culture: ಆದಿಮ ಸಂಸ್ಕೃತಿ.

primitive feudalism: ಪುರಾತನ ಊಳಿಗಮಾನ್ಯ ವ್ಯವಸ್ಥೆ.

primitive medicine: ಆದಿಮ ವೈದ್ಯಕೀಯ.

primitive people: ಆದಿಮ ಜನರು.

primitive society: ಪ್ರಾಚೀನ ಸಮಾಜ; ಆದಿಮ ಸಮಾಜ.

primitive song: ಆದಿಮ ಗೀತೆ; ಪುರಾತನ ಗೀತೆ.

primitive tale: ಪುರಾತನ ಕತೆ.

primitive theological stage: ಪ್ರಾಚೀನ ಕಾಲದ ದೈವವಾದದ ಹಂತ.

primitivism: ಪುರಾತನತೆ.

primogeniture: ಜೇಷ್ಠಾಧಿಕಾರ. ಜೇಷ್ಠ ಪುತ್ರನಿಗೆ ಆಸ್ತಿಯ ಹಕ್ಕು.

primordial: ಆದಿರೂಪ; ಮೂಲರೂಪ.

primus inter pares: ಸಮಾನಿಗರಲ್ಲಿ ಪ್ರಧಾನ (ಮೊದಲಿಗ).

princely states: ದೇಶೀಯ ಸಂಸ್ಥಾನಗಳು; ರಾಜಸಂಸ್ಥಾನಗಳು.

principal civil court: ಪ್ರಮುಖ ದಿವಾನೀ ನ್ಯಾಯಾಲಯ.

principal civilian: ಪ್ರಥಮ ಪ್ರಜೆ.

principality: ಸಂಸ್ಥಾನ.

principle of communal represe ntation: ಜಾತೀಯತೆಯ ಮೇಲೆ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ತತ್ವ.

principle of cultural possibilities: ಸಾಂಸ್ಕೃತಿಕ ಸಾಧ್ಯತೆಗಳ ಸಿದ್ಧಾಂತ. ಯಾವುದೇ ಸಾಂಸ್ಕೃತಿಕ ಅವಶ್ಯಕತೆಯನ್ನು ಪೂರೈಸುವ ಸಾಧ್ಯತೆಗಳು ಮಿತವಾಗಿರುವಾಗ ಅದರ ಯಾವುದೇ ಅಗತ್ಯದ ಸಾಂಸ್ಕೃತಿಕ ರೂಪಗಳ ಉತ್ಪನ್ನವು ಸೀಮಿತವಾಗಿರುತ್ತದೆ ಎಂಬ ಸಿದ್ಧಾಂತ.

principle of education of corre lates: ಸಂಬಂಧೀ ಜ್ಞಾನತತ್ವ.

principle of education of relat ions: ಸಂಬಂಧ ಜ್ಞಾನ ನಿಯಮ.

principle of exception: ವಿನಾಯಿತಿ ನಿಯಮ.

principle of heredity: ಅನುವಂಶೀಯ ತತ್ವ.

principle of individual difference: ವ್ಯಕ್ತಿ ವ್ಯತ್ಯಾಸ ತತ್ವ.

principle of individuation: ವ್ಯಷ್ಟೀಕರಣ ತತ್ವ.

principle of individualization: ವ್ಯಕ್ತೀಕರಣ ತತ್ವ.

principle of justice: ನ್ಯಾಯ ತತ್ವ.

principle of legitimacy: ಕಾನೂನು ಬದ್ಧತೆಯ ತತ್ವ. ಉದಾ: ಸಾಮಾಜಿಕ ಒಪ್ಪಿಗೆಯ ಮೂಲಕವೇ ಪಿತೃತ್ವ ಏರ್ಪಡುವ ನಿಯಮ.

principle of limited possibilities: ಸೀಮಿತ ಸಾಧ್ಯತೆಗಳ ಸಿದ್ಧಾಂತ.

principle of limits: ಮಿತಿಯ ತತ್ವ. ಎರಡು ಪರಿವರ್ತಕಗಳ ನಡುವೆ ಒಂದು ನಿರ್ದಿಷ್ಟ ಮಿತಿಯ ಒಳಗೇನೇ ಸಂಬಂಧಗಳೇರ್ಪಡುತ್ತವೆ ಹಾಗೂ ಈ ಮಿತಿಯ ಹೊರಗೆ ಯಾವುದೇ ಸಂಬಂಧವಿರುವುದಿಲ್ಲ ಅಥವಾ ವಿಲೋಮ ಸಂಬಂಧ ಏರ್ಪಡುತ್ತದೆ ಎಂಬ ತತ್ವ.

principle of oneness: ಏಕತಾ ತತ್ವ; ಐಕ್ಯತಾ ತತ್ವ.

principle of representation: ಪ್ರಾತಿನಿಧ್ಯ ತತ್ವ.

principle of specialization: ವೈಶಿಷ್ಟ್ಯತಾ ತತ್ವ; ತಜ್ಞತಾ ತತ್ವ. ಒಂದು ಆಡಳಿತ ವ್ಯವಸ್ಥೆಯನ್ನು ಹಲವಾರು ಸಣ್ಣ ಘಟಕಗಳಾಗಿ ವಿಭಜಿಸಿ ಪ್ರತಿಯೊಂದು ಘಟಕವನ್ನು ಒಂದು ಸ್ಥಾನ ಅಥವಾ ಹುದ್ದೆ ಎಂದು ಕರೆಯಲಾಗಿದ್ದು, ಈ ಪ್ರತಿಯೊಂದು ಸ್ಥಾನವೂ ತನ್ನದೇ ಆದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಹೊಂದಿರುವುದು.

prior approval: ಪೂರ್ವ ಅನುಮೋದನೆ

priority sector: ಆದ್ಯತೆ ವಲಯ.

prison psychosis: ಕಾರಾಗೃಹ ಮನೋವಿಕ್ಷಿಪ್ತಿ.

prison reform: ಕಾರಾಗೃಹ ಸುಧಾರಣೆ.

private administration: ಖಾಸಗಿ ಆಡಳಿತ. ಸರಕಾರಿ ನಿಯಂತ್ರಣದಿಂದ ಮುಕ್ತವಾಗಿದ್ದು ಖಾಸಗಿ ವ್ಯಕ್ತಿಗಳೇ ನಡೆಸುವ ಆಡಳಿತ. ಉದಾ: ಖಾಸಗಿ ವಾಣಿಜ್ಯ ಸಂಸ್ಥೆಗಳು.

private bill: ಖಾಸಗಿ ಮಸೂದೆ. ಮಂತ್ರಿಮಂಡಲದ ಸದಸ್ಯನಾಗಿಲ್ಲದ ಶಾಸಕಾಂಗದ ಒಬ್ಬ ಸಾಮಾನ್ಯ ಸದಸ್ಯನು ಮಂಡಿಸುವ ಮಸೂದೆ.

private capital: ಖಾಸಗಿ ಬಂಡವಾಳ. ಒಬ್ಬ ವ್ಯಕ್ತಿಯು ಖಾಸಗಿಯಾಗಿ ಹೊಂದಿರುವ ಬಂಡವಾಳ.

private cost: ಖಾಸಗಿ ವೆಚ್ಚ.

private enterprise: ಖಾಸಗಿ ಉದ್ಯಮ. ಖಾಸಗಿ ವಲಯದಲ್ಲಿನ ಆರ್ಥಿಕ ಚಟುವಟಿಕೆ.

private enterprise economy: ಖಾಸಗಿ ಉದ್ಯಮ ಶೀಲ ಆರ್ಥಿಕತೆ.

private good: ಖಾಸಗಿ ಸರಕು. ಖಾಸಗಿ ವ್ಯಕ್ತಿಗಳು ಹೊಂದಿರುವ ಸರಕು. ಉದಾ: ಖಾಸಗಿ ಆಸ್ತಿ, ವಾಹನ ಇತ್ಯಾದಿ.

private international law: ಖಾಸಗಿ ಅಂತಾರಾಷ್ಟ್ರೀಯ ಕಾನೂನು. ಒಂದು ಸಂಘಟನೆಯೊಳಗೆ ಸೇರಿದ ರಾಷ್ಟ್ರಗಳಿಗೆ ಮಾತ್ರ ಪರಸ್ಪರವಾಗಿ ಅನ್ವಯವಾಗುವ ಕಾನೂನು.

private law: ಖಾಸಗಿ ಕಾನೂನು. ಖಾಸಗಿ ವ್ಯಕ್ತಿಗಳ ನಡುವಿನ ನಡವಳಿಕೆಗಳನ್ನು

ನಿಯಂತ್ರಿಸುವ ಕಾಯಿದೆ (ಕಾನೂನು). ಪ್ರತಿಯೊಬ್ಬ ವ್ಯಕ್ತಿಯೂ ಸಮಾಜದಲ್ಲಿ ಇತರರೊಡನೆ ಹೇಗೆ ವರ್ತಿಸಬೇಕೆಂಬ ಬಗ್ಗೆ ಅವು ನಿಯಮಾವಳಿಗಳನ್ನು ರಚಿಸುತ್ತವೆ.

private marginal net product: ಖಾಸಗಿ ಸೀಮಾಂತ ನಿವ್ವಳ ಉತ್ಪನ್ನ.

private members bill: ನೋಡಿ: private bill.

private monopoly: ಖಾಸಗಿ ಏಕಸ್ವಾಮ್ಯ. ಖಾಸಗಿ ಒಡೆತನದ ಏಕಸ್ವಾಮ್ಯ.

private ownership: ಖಾಸಗಿ ಒಡೆತನ. ಒಡೆತನದ ಒಂದು ರೂಪ. ಇದರಲ್ಲಿ ಉತ್ಪಾದನಾ ಸಾಧನಗಳು ಮತ್ತು ಸಾಮಾಜಿಕ ದುಡಿಮೆಯ ಫಲಗಳು ಖಾಸಗಿ ವ್ಯಕ್ತಿಗಳಿಗೆ ಸೇರಿದ್ದಾಗಿರುತ್ತವೆ.

private property: ಖಾಸಗಿ ಆಸ್ತಿ.

private sector: ಖಾಸಗಿ ವಲಯ. ಆರ್ಥಿಕ ಚಟುವಟಿಕೆಗಳು ಖಾಸಗಿ ಉದ್ಯಮಗಳಿಂದ ನಡೆಸಲ್ಪಡುವ ಅರ್ಥವ್ಯವಸ್ಥೆಯ ಒಂದು ಭಾಗ.

private society: ಖಾಸಗಿ ಸಮಾಜ. ಸ್ವಾಮ್ಯಾಧಾರಿತ ಸಮಾಜ ವ್ಯವಸ್ಥೆಯಲ್ಲಿ ವ್ಯಕ್ತಿ ಅಥವಾ ಕುಟುಂಬಗಳು ತಮ್ಮ ಜೀವನ ಭರಿಸುವ ಹೊಣೆಗಾರಿಕೆಯನ್ನು ತಾವೇ ವಹಿಸಿರುವ ಇಂದಿನ ನಮ್ಮ ಸಮಾಜ ಪದ್ಧತಿಯನ್ನು ಖಾಸಗಿ ಸಮಾಜವ್ಯವಸ್ಥೆ ಎಂದೂ ಹೇಳಲಾಗುತ್ತದೆ.

private trade: ಖಾಸಗಿ ವ್ಯಾಪಾರ.

private trust fund: ಖಾಸಗಿ ನ್ಯಾಸ ನಿಧಿ.

private world: ವ್ಯಕ್ತಿಗತ ಪ್ರಪಂಚ; ಅಂತರಂಗದ ಪ್ರಪಂಚ.

privational contradictive: ವ್ಯಕ್ತಿಗತ ವಿರೋಧೋಕ್ತಿ.

privatization: ಖಾಸಗೀಕರಣ. ರಾಷ್ಟ್ರೀಕೃತ ಅಥವಾ ಸರಕಾರೀ ಮಾಲಕತ್ವದ ಉದ್ಯಮಗಳಲ್ಲಿರುವ ಬಂಡವಾಳಗಳನ್ನು ಸರಕಾರೀ ನಿಯಂತ್ರಣದಿಂದ ಖಾಸಗೀ ಹೂಡಿಕೆದಾರರ ವಶಕ್ಕೆ ನೀಡುವುದು.

privilege: ಹಕ್ಕು ಬಾಧ್ಯತೆ; ವಿಶೇಷ ಸೌಲಭ್ಯ.

privileged disrespect: ವಿಶೇಷಾಧಿಕಾರಯುತ ಅಗೌರವ. ಪಿತೃಪ್ರಧಾನ ಸಮಾಜಗಳಲ್ಲಿ ಸೋದರಳಿಯನು ತನ್ನ ಸೋದರ ಮಾವನೊಂದಿಗೆ ಇರಿಸಿಕೊಂಡಿರುವ ಗೇಲಿ ಸಂಬಂಧ. ನೋಡಿ: joking relationship.

privileged familiarity: ಹಕ್ಕಿನ ಸಾಹಚರ್ಯ. ಸಾಂಸ್ಕೃತಿಕ ಗುಂಪುಗಳಲ್ಲಿ ಸಹವರ್ತಿತನಕ್ಕೆ ಹಕ್ಕನ್ನು ಹೊಂದಿರುವ ಸಂಬಂಧ. ಉದಾ: ಮಾವ-ಅಳಿಯ ಸಂಬಂಧ.

privileged relationship: ಹಕ್ಕಿನ ಸಂಬಂಧ. ವಿವಾಹಪೂರ್ವ ಮತ್ತು ಕೆಲ ಸಂದರ್ಭಗಳಲ್ಲಿ ವಿವಾಹಾನಂತರವೇ ಲೈಂಗಿಕ ಸಂಪರ್ಕ ಮಾಡಲು ಸಾಧ್ಯವಿರುವ ರಕ್ತ ಸಂಬಂಧ.

privy council: ಮಂತ್ರಾಲೋಚನಾ ಸಭೆ.

privy purse: ರಾಜಧನ. ಭಾರತದಲ್ಲಿ ಸ್ವಾತಂತ್ರ್ಯ ಪೂರ್ವದ ರಾಜ ಕುಟುಂಬಗಳಿಗೆ ತಮ್ಮ ರಾಜ್ಯವನ್ನು ಭಾರತ ಒಕ್ಕೂಟಕ್ಕೆ ಬಿಟ್ಟುಕೊಟ್ಟುದಕ್ಕಾಗಿ ಸರಕಾರವು ನೀಡುತ್ತಿದ್ದ ಪರಿಹಾರ ಧನ.

probabilism: ಸಂಭವವಾದ. ನಿಶ್ಚಯ

ವಾದ ಮತ್ತು ಸಾಧ್ಯತಾವಾದಗಳ ನಡುವೆ ಸಂಭವವಾದ ಜನ್ಮವೆತ್ತಿದೆ. ಇದಕ್ಕೆ ಕಾರ್ಯಾತ್ಮಕ ನಿಶ್ಚಯವಾದ, ನವನಿಶ್ಚಯವಾದ ಎಂದೂ ಕರೆಯುತ್ತಾರೆ.

probability: ಸಂಭಾವ್ಯತೆ; ಸಂಭವನೀಯತೆ.

probability sample: ಸಂಭವನೀಯ ಮಾದರಿ.

probability theory: ಸಂಭವನೀ ಯತಾ ಸಿದ್ಧಾಂತ.

probate: ಮರಣಶಾಸನದ ಪ್ರಮಾಣಿತ ಪತ್ರ. ಮರಣ ಶಾಸನದ ರುಜುವಾತು.

probation: ಪರಿವೀಕ್ಷಣೆ. ಅಪರಾಧಿಯೊಬ್ಬನನ್ನು ಜೈಲಿಗೆ ಕಳುಹಿಸುವುದರ ಬದಲು ತಾತ್ಕಾಲಿಕವಾಗಿ ಬಿಡುಗಡೆ ಮಾಡಿ, ಅವನ ನಡತೆಯನ್ನು ಮೇಲ್ವಿಚಾರಣೆಗೆ ಒಳಪಡಿಸುವ ನ್ಯಾಯಾಲಯದ ಕ್ರಮ.

probation officer: ಅಪರಾಧೀ ಮೇಲ್ವಿಚಾರಕ.

probationary marriage: ಪರೀಕ್ಷಾರ್ಥ ವಿವಾಹ. ವಿವಾಹವಾಗಲು ಬಯಸುವ ಯುವಕನು ತಾನು ವಿವಾಹವಾಗಲು ಬಯಸುವ ಯುವತಿಯ ಮನೆಯಲ್ಲಿ ಕೆಲ ಕಾಲ ವಾಸಿಸಿ, ಪರಸ್ಪರ ಒಪ್ಪಿಗೆ ಯಾದರೆ ಮಾತ್ರ ಮದುವೆಯಾಗುವುದು.

probationary period: ಪರೀಕ್ಷಾರ್ಥಕ ಅವಧಿ. ಆಡಳಿತ ವ್ಯವಸ್ಥೆಯಲ್ಲಿ ಮೊದಲ ಬಾರಿಗೆ ನೇಮಕವಾದ ನೌಕರರನ್ನು ಒಂದು ನಿರ್ದಿಷ್ಟ ಕಾಲಾವಧಿಯವರೆಗೆ ಖಾಯಂಗೊಳಿಸದೆ ಅವನ ಕಾರ್ಯನೈಪುಣ್ಯ ಮತ್ತು ನಿಷ್ಠೆಯನ್ನು ಗಮನಿಸುವುದು.

probe questions: ಶೋಧಕ ಪ್ರಶ್ನೆಗಳು.

problem behaviour: ಸಮಸ್ಯಾತ್ಮಕ ವರ್ತನೆ.

problem child: ಸಮಸ್ಯಾ ಮಗು.

problem family: ಸಮಸ್ಯಾ ಕುಟುಂಬ. ಮಕ್ಕಳ ಪಾಲನೆಯ ಸಮಸ್ಯೆಗಳಿದ್ದು ಮಗುವಿನ ಸಾಮಾನ್ಯ ಸಾಮಾಜಿಕ ಉತ್ತಮೀಕರಣಕ್ಕೆ ತಡೆಯಾಗಿರುವ ಕುಟುಂಬ.

problem method: ಸಮಸ್ಯಾ ವಿಧಾನ.

procedural matter: ಕಾರ್ಯ ವಿಧಾನ; ಕಾರ್ಯಕಾರೀ ವಿಷಯ.

procedural rule: ಕ್ರಮ ಸಂಬಂಧೀ ನಿಯಮ.

procedure: ಕಾರ್ಯವಿಧಾನ; ವ್ಯವಹಾರ ವಿಧಾನ.

proceedings: ವ್ಯವಹರಣೆಗಳು; ನಡವಳಿಗಳು; ಕಾರ್ಯನಡವಳಿಕೆಗಳು.

proceedings in camera: ಗುಪ್ತ ರೀತಿಯ ವ್ಯವಹರಣೆಗಳು.

process: ಕಾರ್ಯವಿಧಾನ ಪ್ರಕ್ರಿಯೆ.

process of decission making: ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆ.

process of forgetting: ಮರೆವಿನ ವಿಧಾನ (ಪ್ರಕ್ರಿಯೆ).

process of impeachment: ಮಹಾಭಿಯೋಗ ವಿಧಾನ; ಮಹಾಭಿಯೋಗ ಪ್ರಕ್ರಿಯೆ.

process of legislation: ಶಾಸನ ರಚನಾ ವಿಧಾನ. ವಿಧೇಯಕಗಳ ಮಂಡನೆ ಮತ್ತು ಸ್ವೀಕೃತವಾಗುವ ವಿಧಾನಗಳು.

processing : ಪರಿಷ್ಕರಣೆ.

processional aspect: ಪ್ರಕ್ರಿಯೆಯ ಅಂಶ.

proclaimed offender: ಘೋಷಿತ ಅಪರಾಧಿ.

proclamation: ಘೋಷಣೆ.

procrastination: ಕಾಲ ವಿಳಂಬ ಮಾಡುವಿಕೆ; ಕಾಲಹರಣ ಮಾಡುವಿಕೆ.

procreation: ಸಂತಾನೋತ್ಪತ್ತಿ.

proctor: ಪಾಲನಾಧಿಕಾರಿ.

procurator general: ಮಹಾ ನಿಯೋಗಿ; ಮಹಾಖಜಾಂಚಿ.

prodigy: ಅಸಾಧಾರಣ ಪ್ರತಿಭಾಶಾಲಿ.

prodrome: ರೋಗಪೂರ್ವಲಕ್ಷಣ.

producer component: ಉತ್ಪಾದಕ ಘಟಕ.

producers' capital: ಉತ್ಪಾದಕರ ಬಂಡವಾಳ. ವಸ್ತುಗಳ ಉತ್ಪಾದನೆಗಾಗಿ ಉತ್ಪಾದಕರು ಉಪಯೋಗಿಸುವ ಬಂಡವಾಳ. ಉದಾ: ಕಚ್ಚಾಸರಕುಗಳು, ಯಂತ್ರಗಳು.

producers' co-operative: ಉತ್ಪಾದಕರ ಸಹಕಾರೀ ಸಂಘ.

producers' good: ಉತ್ಪಾದಕರ ಸರಕು. ಉತ್ಪಾದನಾ ಪ್ರಕ್ರಿಯೆಯಲ್ಲಿ ಬಳಸುವ ಸರಕು.

producers' market: ಉತ್ಪಾದಕರ ಮಾರುಕಟ್ಟೆ.

producers' surplus: ಉತ್ಪಾದಕರ ಮಿಗತೆ (ಆಧಿಕ್ಯ). ಉತ್ಪಾದಕನು ಒಂದು ನಿರ್ದಿಷ್ಟ ಮಟ್ಟದ ಪೂರೈಕೆಯನ್ನು ನಿರ್ವಹಿಸುವುದಕ್ಕಾಗಿ ಪಡೆಯಬಯಸುವ ಕನಿಷ್ಟ ಆದಾಯಕ್ಕಿಂತ ಆತನು ನಿಜವಾಗಿ ಪಡೆಯುವ ಆದಾಯದ ಮಿಗತೆ.

producing sector: ಉತ್ಪಾದಕ ಕ್ಷೇತ್ರ.

product : ಉತ್ಪನ್ನ.

product differentiation: ಉತ್ಪನ್ನ ವೈವಿಧ್ಯ.

product market: ಉತ್ಪನ್ನ ಮಾರು ಕಟ್ಟೆ; ಉತ್ಪಾದಿತ ಸರಕುಗಳ ಮಾರುಕಟ್ಟೆ.

product method: ಉತ್ಪನ್ನ ವಿಧಾನ; ಉತ್ಪಾದನಾ ವಿಧಾನ. ರಾಷ್ಟ್ರೀಯ ಆದಾಯದ ಗಣನೆಯ ಒಂದು ವಿಧಾನ. ಈ ವಿಧಾನದ ಪ್ರಕಾರ ರಾಷ್ಟ್ರದಲ್ಲಿ ಒಂದು ವರ್ಷದ ಅವಧಿಯಲ್ಲಿ ಉತ್ಪಾದಿಸಲಾದ ಎಲ್ಲಾ ಸರಕು ಮತ್ತು ಸೇವೆಗಳ ಮಾರುಕಟ್ಟೆ ಮೌಲ್ಯವನ್ನು ಕೂಡಿಸುವುದರಿಂದ ರಾಷ್ಟ್ರೀಯ ವರಮಾನವನ್ನು ಅಳೆಯಬಹುದು.

product pricing: ಉತ್ಪನ್ನಗಳ ಬೆಲೆ ನಿರ್ಧರಿಸುವಿಕೆ.

product unit: ಉತ್ಪನ್ನ ಘಟಕ.

production: ಉತ್ಪಾದನೆ.

production capacity: ಉತ್ಪಾದನಾ ಸಾಮರ್ಥ್ಯ.

production cost: ಉತ್ಪಾದನಾ ವೆಚ್ಚ.

production function: ಉತ್ಪಾದನಾ ಕಾರ್ಯ. ಉದ್ಯಮ ಅಥವಾ ಅರ್ಥವ್ಯವಸ್ಥೆಯೊಂದರಲ್ಲಿ ಉತ್ಪಾದಿಸಲಾಗುವ ಉತ್ಪನ್ನ ಮತ್ತು ಉತ್ಪಾದನೆಗೆ ಬಳಸಲಾಗುವ ಆದಾನಗಳ ನಡುವಿನ ಸಂಬಂಧ.

production indifference curve: ಉತ್ಪಾದನಾ ಔದಾಸೀನ್ಯ ರೇಖೆ; ಉತ್ಪಾದನಾ ಉಪೇಕ್ಷಿತ ರೇಖೆ.

production management: ಉತ್ಪಾದನಾ ನಿರ್ವಹಣೆ.

production possibility: ಉತ್ಪಾದನಾ ಸಾಧ್ಯತೆ.

production record system: ಉತ್ಪಾದನಾ ದಾಖಲೆಗಳ ಪದ್ಧತಿ. ನೌಕರನ ಕಾರ್ಯಕೌಶಲವನ್ನು ಆತನ ಉತ್ಪಾದನಾ ದಾಖಲೆಗಳ ಮೂಲಕ ನಿರ್ಧರಿಸುವ ಪದ್ಧತಿ.

production relation: ಉತ್ಪಾದನಾ ಸಂಬಂಧ. ಭೌತಿಕ ಸಂಪತ್ತಿನ ಸಾಮಾಜಿಕ ಉತ್ಪಾದನೆ, ವಿನಿಮಯ ಮತ್ತು ವಿತರಣೆಯ ಕಾರ್ಯದಲ್ಲಿ ಜನತೆಯ ನಡುವೆ ಇರುವ ಸಂಬಂಧಗಳು. ಉತ್ಪಾದನಾ ಸಾಧನಗಳ ಒಡೆತನದ ಸ್ವಭಾವದ ಮೇಲೆ ಉತ್ಪಾದನಾ ಸಂಬಂಧಗಳು ಅವಲಂಬಿತವಾಗಿರುತ್ತವೆ.

production technique: ಉತ್ಪಾದನಾ ತಂತ್ರ.

productive agent: ಉತ್ಪಾದನಾ ಕರ್ತೃ.

productive capacity: ಉತ್ಪಾದನಾ ಸಾಮರ್ಥ್ಯ.

productive centre: ಉತ್ಪಾದನಾ ಕೇಂದ್ರ.

productive debt: ಉತ್ಪಾದಕ ಸಾಲ. ಸಾಲವನ್ನು ಉತ್ಪಾದಕ ವೆಚ್ಚಕ್ಕಾಗಿ ಉಪಯೋಗಿಸಿದರೆ ಅದು ಉತ್ಪಾದಕ ಸಾಲವೆಂದೆನಿಸುತ್ತದೆ.

productive factor: ಉತ್ಪಾದಕ ಅಂಶ.

productive forces: ಉತ್ಪಾದಕ ಶಕ್ತಿಗಳು.

productive investment: ಉತ್ಪಾದಕ ಹೂಟೆ.

productive loan: ಉತ್ಪಾದಕ ಸಾಲ. ನೋಡಿ: productive debt.

productive magic: ಉತ್ಪನ್ನ ಕಾರಕ ಮಾಟವಿದ್ಯೆ. ಕೃಷಿ, ಪ್ರಾಣಿ ಅಥವಾ ಮನುಷ್ಯರಲ್ಲಿ ಫಲಶಕ್ತಿ (ಫಲವತ್ತತೆ)ಯನ್ನು ಪಡೆಯುವ ಗುರಿ ಹೊಂದಿರುವ ಮಾಟ.

productive taboo: ಉತ್ಪಾದಕ ನಿಷೇಧ.

productive theory of interest: ಬಡ್ಡಿಯ ಉತ್ಪಾದಕ ಸಿದ್ಧಾಂತ.

productive work: ಉತ್ಪಾದಕ ಚಟುವಟಿಕೆ; ಉತ್ಪನ್ನದಾಯಕ ಕೆಲಸ.

profane: ಅಪವಿತ್ರ; ಸಾಧಾರಣ; ಐಹಿಕ.

professional authority: ವೃತ್ತಿ ಮೂಲದ ಅಧಿಕಾರ.

professional class: ವೃತ್ತಿಪರ ವರ್ಗ.

professional criminal: ವೃತ್ತಿಪರ ಅಪರಾಧಿ.

professional ethics: ವೃತ್ತಿ ನೀತಿ.

professional group: ವೃತ್ತಿಪರ ಸಮೂಹ.

professional leadership: ವೃತ್ತಿಪರ ನಾಯಕತ್ವ; ವೃತ್ತ್ಯಾತ್ಮಕ ಧುರೀಣತ್ವ.

professional singer : ವೃತ್ತಿಗಾಯಕ.

professional skill : ವೃತ್ತಿ ಕೌಶಲ್ಯ.

professional tax: ವೃತ್ತಿ ತೆರಿಗೆ.

professionalization of labour: ಶ್ರಮದ ವೃತ್ತೀಕರಣ.

professionals: ವೃತ್ತಿಪರರು; ವೃತ್ತಿಕಾರರು. ವಿವಿಧ ವೃತ್ತಿಗಳಲ್ಲಿ ತೊಡಗಿದವರು.

proficiency test: ಪ್ರಾವೀಣ್ಯತಾ ಪರೀಕ್ಷೆ.

profit: ಲಾಭ. ೧. ಉತ್ಪಾದನಾ ಘಟಕಗಳಲ್ಲೊಂದಾದ ಬಂಡವಾಳಕ್ಕೆ ಸಿಗುವ ಪ್ರತಿಫಲ. ೨. ಆರ್ಥಿಕ ಸಿದ್ಧಾಂತದಲ್ಲಿ ಲಾಭ ಅಂದರೆ ಎಲ್ಲಾ ವೆಚ್ಚಗಳೂ ಕಳೆದುಳಿದ ಹಣ. ಲಾಭ=ಆದಾಯ-ವೆಚ್ಚ.

profit analysis: ಲಾಭದ ವಿಶ್ಲೇಷಣೆ.

profit maximization goal: ಗರಿಷ್ಟ ಲಾಭ ಗಳಿಕೆಯ ಗುರಿ.

profound retardation: ತೀವ್ರ ವಿಲಂಬನ.

progeny: ಸಂತಾನ; ಸಂತತಿ.

prognathism: ದವಡೆಯ ರಚನೆ. ದವಡೆಯು ಮುಂದಕ್ಕೆ ಚಾಚಿಕೊಂಡಿರುವ ಚಿಹ್ನೆ.

prognosis: ರೋಗ ಭವಿಷ್ಯ. ರೋಗದ ಅಥವಾ ಮಾನಸಿಕ ತಾರುಮಾರುಗಳ ಅವಧಿ. ಅವು ಮುಂದುವರಿಯುವ ಕ್ರಮ ಮತ್ತು ಗುಣವಾಗುವ ಸಾಧ್ಯತೆಯನ್ನು ಅಂದಾಜು ಮಾಡುವುದು.

prognostic function: ಸೂಚಕ ಕಾರ್ಯ; ಮುನ್‌ಸೂಚಿತ ಕಾರ್ಯ.

programme development: ಕಾರ್ಯಕ್ರಮಾಭಿವೃದ್ಧಿ.

progressive development: ಪ್ರಗತಿ ಪರ ಅಭಿವೃದ್ಧಿ.

progressive education: ಪ್ರಗತಿಪರ ಶಿಕ್ಷಣ.

progressive party: ಪ್ರಗತಿವಾದಿ ಪಕ್ಷ; ಪ್ರಗತಿಗಾಮಿ ಪಕ್ಷ.

progressive period: ಪ್ರಗತಿಪರ ಯುಗ

progressive split: ಪ್ರಗತಿಶೀಲ ವಿಭಜನೆ.

progressive stage: ಪ್ರಗತಿಪರ ಹಂತ.

progressive tax: ಪ್ರಗತಿಪರ ತೆರಿಗೆ.

progressivism: ಪ್ರಗತಿವಾದ.

prohibited area: ನಿಷೇಧಿತ ಪ್ರದೇಶ.

prohibited degree: ನಿಷೇಧಿತ ಪ್ರಮಾಣ.

prohibited types of marriage: ನಿಷೇಧಿತ ವಿವಾಹ. ಉದಾ: ಅಂತರ್ಜಾತಿ ವಿವಾಹ. (ಅನುಲೋಮ ಹಾಗೂ ಪ್ರತಿಲೋಮ ವಿವಾಹ). ನೋಡಿ : hypergamy and hypogamy.

prohibition : ನಿಷೇಧ; ಪ್ರತಿಬಂಧಕಾಜ್ಞೆ; ಮದ್ಯಪಾನ ನಿರೋಧ; ತಡೆಯಾಜ್ಞೆ. ಕೆಳಗಿನ ನ್ಯಾಯಾಲಯವು ಕಾನೂನು ಬಾಹಿರ ರೀತಿಯಲ್ಲಿ (ತನ್ನದಲ್ಲದ ಕ್ಷೇತ್ರದಲ್ಲಿ) ಅಧಿಕಾರವನ್ನು ಮಿತಿ ಮೀರಿ ಚಲಾಯಿಸುವುದನ್ನು ನಿಷೇಧಿಸಲು ಉನ್ನತ ನ್ಯಾಯಾಲಯವು ನೀಡುವ ತಡೆಯಾಜ್ಞೆ.

prohibition legislation: ಪಾನ ನಿಷೇಧ ಶಾಸನ.

prohibitive taboo: ನಿರ್ಬಂಧಾತ್ಮಕ ನಿಷೇಧ.

prohibitory order: ನಿಷೇಧಾಜ್ಞೆ.

project evaluation: ಯೋಜನಾ ಮೌಲ್ಯಮಾಪನ.

project method: ಯೋಜನಾ ವಿಧಾನ.

project report: ಯೋಜನಾ ವರದಿ; ಅಧ್ಯಯನ ವರದಿ.

projected experiment: ನೋಡಿ: controlled experiment.

projection: ಬಾಹ್ಯಾರೋಪಣೆ; ಪ್ರಕ್ಷೇಪಣೆ. ತನ್ನಲ್ಲೇ ಅಡಕವಾಗಿರುವ ಅನಿಸಿಕೆಗಳನ್ನು, ದೋಷಗಳನ್ನು ಇನ್ನೊಬ್ಬರ ಮೇಲೆ ಹೊರಿಸುವುದು. ಇದೊಂದು ಮನೋ ರಕ್ಷಣಾ ತಂತ್ರ.

projective interpretation: ಪ್ರಕ್ಷೇಪಿತ ಅಭಿಪ್ರಾಯ.

projective method: ಪ್ರಕ್ಷೇಪಣಾ ವಿಧಾನ.

projective technique: ಪ್ರಕ್ಷೇಪಣಾ ತಂತ್ರ. ವ್ಯಕ್ತಿತ್ವ ಅಥವಾ ಮನೋವೃತ್ತಿಗಳನ್ನು ಅಭ್ಯಸಿಸುವ ವಿಧಾನ.

projective test: ಪ್ರಕ್ಷೇಪೀ ಪರೀಕ್ಷೆ.

proletarian: ಕಾರ್ಮಿಕ. ಜಮೀನು ಅಥವಾ ಚರಾಸ್ತಿಗಳಿಲ್ಲದ ಶ್ರಮಜೀವಿ.

promiscuity: ಅನಿಯಮಿತ ಲೈಂಗಿಕತೆ; ಸ್ವೇಚ್ಛಾಸಂಪರ್ಕ.

promissory note: ವಚನ ಪತ್ರ.

promotion: ಬಡ್ತಿ (ಬಡತಿ). ಆಡಳಿತ ವ್ಯವಸ್ಥೆಯಲ್ಲಿ ನೌಕರನ ಸೇವಾ ಹಿರಿತನ (ಜೇಷ್ಠತೆ) ಮತ್ತು ಅರ್ಹತೆಯನ್ನಾಧರಿಸಿ ಅವನನ್ನು ಕೆಳಗಿನ ಸ್ಥಾನದಿಂದ ಮೇಲಿನ ಸ್ಥಾನಕ್ಕೆ ಏರಿಸುವುದು.

prompt action: ಶೀಘ್ರ ಕ್ರಮ; ಚುರುಕು ಕ್ರಮ.

prompting method: ನೆನಪುಕೊಡುವ ವಿಧಾನ.

pro-natalist policies: ಜನನದರ ಪೂರಕ ನೀತಿಗಳು.

propaganda work: ಪ್ರಚಾರ ಕಾರ್ಯ.

propagation: ಪ್ರಚಾರ ಮಾಡು; ಪ್ರಸಾರ ಮಾಡು.

propensity of curiosity: ಕುತೂಹಲ ಸಹಜಪ್ರವೃತ್ತಿ.

propensity of migration: ವಲಸೆ ಪ್ರವೃತ್ತಿ.

propensity of self assertion: ಆತ್ಮಪ್ರತಿಷ್ಠಾ ಸಹಜ ಪ್ರವೃತ್ತಿ.

propensity of submission: ಶರಣಾಗತಿ ಸಹಜಪ್ರವೃತ್ತಿ.

propensity to consume: ಅನುಭೋಗ ಪ್ರವೃತ್ತಿ. ವಿವಿಧ ಮಟ್ಟದ ಆದಾಯಕ್ಕೆ ಹೊಂದಿಕೊಂಡಂತೆ ವಿವಿಧ ಮಟ್ಟದ ಅನುಭೋಗ ವೆಚ್ಚವನ್ನು ತೋರಿಸುವ ಸೂಚಿ.

propensity to import: ಆಮದು ಪ್ರವೃತ್ತಿ; ಆಯಾತ ಪ್ರವೃತ್ತಿ. ಆದಾಯ ಮತ್ತು ಆಯಾತ ಮಟ್ಟಗಳ ನಡುವಿನ ಸಂಬಂಧ.

propensity to save: ಉಳಿತಾಯ ಪ್ರವೃತ್ತಿ.

proper channel: ಕ್ರಮಬದ್ಧ ಮಾರ್ಗ; ಸೂಕ್ತ ಮಾರ್ಗ.

prophylaxis: ರೋಗ ನಿರೋಧನ.

propinquity: ಸಾಮೀಪ್ಯಪ್ರೇರಿತ ಸಂಬಂಧ. ಹತ್ತಿರ ಹತ್ತಿರ ವಾಸಿಸುವ, ಜೊತೆಯಾಗಿ ಶಾಲೆಗೆ ಹೋಗುವ, ಕೆಲಸ ಮಾಡುವ ಜನರು ಪರಸ್ಪರ ಮದುವೆಯಾಗ ಲಿಚ್ಛಿಸುವುದು.

propitiation: ಪಾಪ ಪರಿಮಾರ್ಜನ; ಬೇಡಿಕೊಳ್ಳುವುದು. ಅಧಿಕಾರಿಗಳಲ್ಲಿ ಅಥವಾ ಧಾರ್ಮಿಕ ವ್ಯಕ್ತಿಗಳಲ್ಲಿ ಅನುಕೂಲಕರವಾದ

ಭಾವನೆಗಳನ್ನು ಹುಟ್ಟಿಸುವ ಅಥವಾ ಅವರನ್ನು ಸಮಾಧಾನಪಡಿಸುವ ಪ್ರಕ್ರಿಯೆ.

proportional relationship: ಪ್ರಮಾಣಾನುಗುಣ ಸಂಬಂಧ.

proportional representation: ಅನುಪಾತಿಕ ಪ್ರಾತಿನಿಧ್ಯ; ಪ್ರಮಾಣಾನು ಗುಣ ಪ್ರಾತಿನಿಧ್ಯ.

proportional reserve system: ಪ್ರಮಾಣಾನುಗುಣ ನಿಧಿ(ಮೀಸಲು) ಪದ್ಧತಿ.

proportional sample: ನೋಡಿ: startified sample.

proportional tax: ಪ್ರಮಾಣಾನುಗುಣ ತೆರಿಗೆ. ವ್ಯಕ್ತಿಯ ಆದಾಯ ಮಟ್ಟಕ್ಕೆ ಸಮನಾದ ದರದಲ್ಲಿ ವಿಧಿಸುವ ತೆರಿಗೆ.

proportionate stratified sample: ಪ್ರಮಾಣಾನುಗುಣವಾದ ವಿಭಜಿತ ಮಾದರಿ.

proposal: ಪ್ರಸ್ತಾಪ; ವಿವಾಹ ಪ್ರಸ್ತಾವ; ಕಾರ್ಯಯೋಜನೆ.

proposed action: ಪ್ರಸ್ತಾಪಿತ ಕ್ರಮ; ಯೋಜಿಸಿದ ಕ್ರಮ.

proposition: ಪ್ರಸ್ತಾಪ; ತರ್ಕವಾಕ್ಯ.

proprietary accounts: ಒಡೆತನದ (ಸ್ವಾಮ್ಯದ) ಲೆಕ್ಕಗಳು.

proprietary tenure: ಸ್ವಾಮ್ಯತ್ವದ ಹಿಡುವಳಿ.

proprioceptors: ಅಂತರ್‌ಜ್ಞಾನೇಂದ್ರಿಯಗಳು.

prorogation : ಮುಂದೂಡುವಿಕೆ; ಅಧಿವೇಶನ ಮುಂದೂಡುವಿಕೆ. ಶಾಸಕಾಂಗದ ಉಭಯ ಸದನಗಳಲ್ಲಿ ಬಿಕ್ಕಟ್ಟು ಉಂಟಾದಾಗ ಅದನ್ನು ಪರಿಹರಿಸಲು ಮುಖ್ಯ ಕಾರ್ಯನಿರ್ವಾಹಕನು (ಭಾರತದಲ್ಲಿ ರಾಷ್ಟ್ರಾಧ್ಯಕ್ಷ) ಶಾಸಕಾಂಗದ ಅಧಿವೇಶನವನ್ನು ಮುಂದೂಡುವ ಕ್ರಮ.

proscribed marriage: ನೋಡಿ: prohibited types of marriage.

prosecution: ಕಾನೂನು ಪಾಲನೆ. ಕಾನೂನು ರೀತಿಯಲ್ಲಿ ಕ್ರಮ ಜರುಗಿಸುವುದು.

prosecution witness: ಕಾನೂನುಬದ್ಧ ಸಾಕ್ಷಿ.

prosperity: ಉತ್ಕರ್ಷ; ಉಚ್ಛ್ರಾಯ ಸ್ಥಿತಿ; ಸಮೃದ್ಧಿ. ಆರ್ಥಿಕ ಆವರ್ತದ ಒಂದು ಹಂತ.

prostitution: ವೇಶ್ಯಾವೃತ್ತಿ.

protected states: ರಕ್ಷಿತ ಸಂಸ್ಥಾನ ಗಳು.

protectionist policy: ರಕ್ಷಣಾ ನೀತಿ. ನೋಡಿ: policy of protection.

protective affection: ರಕ್ಷಣಾತ್ಮಕ ಅನುರಾಗ; ಸಂರಕ್ಷಣಾತ್ಮಕ ರಾಗಭಾವ.

protective function: ರಕ್ಷಣಾತ್ಮಕ ಕಾರ್ಯ.

protective magic: ರಕ್ಷಣಾ ಮಾಟ.

protective spirit: ರಕ್ಷಕ ದೈವ.

protective taboo: ರಕ್ಷಣಾತ್ಮಕ ನಿಷೇಧ.

protective temperament: ರಕ್ಷಕ ಚಿತ್ತಪ್ರಕೃತಿ.

protectorate : ಆಶ್ರಿತ ರಾಜ್ಯ.

protem speaker: ತಾತ್ಕಾಲಿಕ (ಹಂಗಾಮಿ) ಸಭಾಪತಿ. ಹೊಸ ಚುನಾವಣೆಗಳು ನಡೆದು ಹೊಸ ಸದನ ಅಸ್ತಿತ್ವಕ್ಕೆ ಬಂದ ನಂತರ ಹೊಸ ಸಭಾಪತಿಯನ್ನು ಆಯ್ಕೆ ಮಾಡುವುದು ತಡವಾದರೆ, ಸದನದ ಹಿರಿಯ ಸದಸ್ಯರು (ಯಾವ ಪಕ್ಷಕ್ಕಾದರೂ ಸೇರಿರಬಹುದು)

ತಾತ್ಕಾಲಿಕ ಸ್ಪೀಕರ್ ಆಗಿ ನೇಮಕಗೊಂಡು ಕೆಲಸ ನಿರ್ವಹಿಸುವುದು.

protestant ethic: ಪ್ರೊಟೆಸ್ಟಾಂಟ್ ನೀತಿ (ತತ್ವ). ಇದು ಸಮಾಜದ ಚಲನಶೀಲತೆಗೆ ಸಹಕಾರಿ ಎನ್ನಲಾಗಿದೆ.

protestant ethic thesis: ಪ್ರೊಟೆಸ್ಟಾಂಟ್ ನೀತಿ ಸಿದ್ಧಾಂತ. ಆಧುನಿಕ ಬಂಡವಾಳಶಾಹಿ ಸಮಾಜದ ಶೀಲಸ್ವಭಾವವು, ಆಲೋಚನಾ ಸರಣಿಯು ಪ್ರೊಟೆಸ್ಟಾಂಟ್ ನೀತಿಗೆ ಅನುಗುಣವಾಗಿದೆ ಎಂಬ ಸಿದ್ಧಾಂತ.

proto anthropic: ಆದ್ಯಮಾನವ; ಪ್ರಾಗ್‌ಮಾನವ; ಮಾನವ ತದ್ರೂಪಿತ. ಕೆಲವು ಪರಿಭಾಷೆಗಳಲ್ಲಿ ಅತ್ಯಂತ ಪುರಾತನ ಮಾನವ ಜೀವಿಗಳು. ಉದಾ: ಜಾವಾ ಮತ್ತು ಪೀಕಿಂಗ್ ಮನುಷ್ಯರು.

protocol: ಶಿಷ್ಟಾಚಾರ; ಸಂಪ್ರದಾಯ; ರಾಯಭಾರ ಪತ್ರದ ಮೂಲ ಪ್ರತಿ.

proto culture: ಆದ್ಯ ಸಂಸ್ಕೃತಿ; ಪ್ರಾಕ್ ಸಂಸ್ಕೃತಿ.

protoform: ಪ್ರಾಕ್‌ರೂಪ.

proto history: ಆದ್ಯ ಚರಿತ್ರೆ; ಆರಂಭಿಕ ಚರಿತ್ರೆ.

proto neolithic: ಆದ್ಯ ಹೊಸ ಶಿಲಾಯುಗ. ಹೊಸ ಶಿಲಾಯುಗದ ಮೂಲ ಹಂತ.

protopathic sensibility: ಸ್ಥೂಲ ಸಂವೇದನಾಶಕ್ತಿ.

proto type: ತದ್ರೂಪಿ.

proverb: ಗಾದೆ.

provident fund: ಭವಿಷ್ಯ ನಿಧಿ.

provincial autonomy: ಪ್ರಾಂತೀಯ ಸ್ವಾಯತ್ತತೆ; ಪ್ರಾಂತೀಯ ಸ್ವಯಮಾಧಿಪತ್ಯ.

provisional agenda: ತಾತ್ಕಾಲಿಕ ಕಾರ್ಯಸೂಚಿ.

provisional government: ತಾತ್ಕಾಲಿಕ ಸರಕಾರ; ಹಂಗಾಮಿ ಸರಕಾರ. ನೋಡಿ: interim government.

provisional order: ತಾತ್ಕಾಲಿಕ ಆಜ್ಞೆ.

provisional parliament: ತಾತ್ಕಾಲಿಕ ಸಂಸತ್ತು; ಹಂಗಾಮಿ ಸಂಸತ್ತು.

provisions: ನಿಬಂಧನೆಗಳು.

proxemics: ಸ್ಥಳಾಭಿವ್ಯಕ್ತಿ.

proxies: ಪ್ರತಿನಿಧಿ ಪತ್ರಗಳು.

proximo-distal principle: ಕೇಂದ್ರ ಪರಿಧಿ ಅಭಿಮುಖ ತತ್ವ.

proxy father: ಬದಲಿ ಪಿತೃ.

proxy voting: ಬದಲಿ ಮತದಾನ; ಪರವಾಗಿ ನೀಡುವ ಮತದಾನ. ಮತದಾನದ ಕಾಲದಲ್ಲಿ ಅರ್ಹ ಮತದಾರರು ಊರಿನಲ್ಲಿ ಇಲ್ಲದೇ ಇರುವ ಸಂದರ್ಭಗಳಲ್ಲಿ ಮತ್ತೊಬ್ಬರ ಮೂಲಕ ಮತ ಚಲಾಯಿಸುವುದಕ್ಕೆ ಇರುವ ಅವಕಾಶ.

pseudo-aesthesia: ಮಿಥ್ಯಾ ವೇದನೆ; ಸುಳ್ಳು ವೇದನೆ.

pseudo communication: ಮಿಥ್ಯಾ ಸಂಪರ್ಕ. ವ್ಯಕ್ತಿಗಳ ಅಥವಾ ಸಮೂಹಗಳ ನಡುವಿನ ಸಂಪರ್ಕದಲ್ಲಿ ಪ್ರತಿಯೊಬ್ಬನು ತನ್ನ ಸಂದೇಶದ ಬಹು ಅಂಶಗಳನ್ನು ಇನ್ನೊಬ್ಬ ಅರ್ಥಮಾಡಿಕೊಳ್ಳುತ್ತಾನೆ ಎಂದು ಗ್ರಹಿಸಿಕೊಳ್ಳುವುದು. ಆದರೆ ಪ್ರತಿಯೊಬ್ಬರೂ

ಸಂಭಾಷಣೆಯ ವಿಭಿನ್ನ ದೃಷ್ಟಿಕೋನ ಹಾಗೂ ಆಸಕ್ತಿಗಳ ಬಗೆಗೆ ಗಮನ ಕೊಡುತ್ತಾರೆ.

pseudo-community: ಮಿಥ್ಯಾ ಸಮುದಾಯ; ವಿಭ್ರಮಜನ್ಯ ಸಮುದಾಯ.

pseudo-conditioning: ಮಿಥ್ಯಾನುಬಂಧನ.

pseudo-hallucination: ಮಿಥ್ಯಾ ವಿಭ್ರಮೆ; ವಿಭ್ರಮಾಭಾಸ.

pseudo- memory: ಸ್ಮರಣಾಭಾಸ; ಮಿಥ್ಯಾಸ್ಮೃತಿ.

pseudomnesia: ಮಿಥ್ಯಾಸ್ಮೃತಿ; ವಿಸ್ಮರಣಾಭಾಸ.

pseudo-neurotic schizophrenia: ಆಭಾಸ ನರವೇದನಾ ಮನೋವಿದಳನ.

pseudo-science: ಮಿಥ್ಯಾ ವಿಜ್ಞಾನ.

psyche: ಚಿತ್ತ; ಮನಸ್ಸು.

psychiatric evaluation: ಮನೋವೈದ್ಯಕೀಯ ಪರಿಶೀಲನೆ.

psychiatric nursing: ಮನೋವೈದ್ಯಕೀಯ ಆರೈಕೆ; ಮನೋರೋಗಿಯ ಆರೈಕೆ.

psychiatric social work: ಮನೋವೈದ್ಯಕೀಯ ಸಾಮಾಜಿಕ ಕಾರ್ಯ.

psychiatric social worker: ಮನೋವೈದ್ಯಕೀಯ ಸಮಾಜ ಕಾರ್ಯಕರ್ತ.

psychiatric treatment: ಮನೋವೈದ್ಯಕೀಯ ಚಿಕಿತ್ಸೆ.

psychiatry: ಮನಸೋಪಚಾರ ಶಾಸ್ತ್ರ; ಮನೋವೈದ್ಯ ಶಾಸ್ತ್ರ; ಮನೋರೋಗ ಚಿಕಿತ್ಸೆ. ಮನೋರೋಗಿಗಳ ಅಧ್ಯಯನ ಮತ್ತು ಚಿಕಿತ್ಸೆಯನ್ನು ಕುರಿತ ವೈದ್ಯಕೀಯ ಶಾಸ್ತ್ರ.

psychic: ಮಾನಸಿಕ; ಮನೋಜನ್ಯ.

psychic blindness: ಮಾನಸಿಕ ಅಂಧತೆ.

psychic blue: ಮಾನಸಿಕ ನಿರಾಶೆ.

psychic deafness: ಮಾನಸಿಕ ಕಿವುಡು.

psychic determinism: ಚಿತ್ತಸಂಕಲ್ಪವಾದ; ಮನೋನಿಯತಿವಾದ.

psychic elements: ಮಾನಸಿಕ ಮೂಲಾಂಶಗಳು.

psychic fact: ಮನೋ ತಥ್ಯಾಂಶ.

psychic force: ಮನೋ ಬಲ.

psychic gratification: ಮಾನಸಿಕ ಸಂತೃಪ್ತಿ.

psychic halo: ಮಾನಸಿಕ ದೀಪ್ತಿ.

psychic house: ಮಾನಸಿಕ ಮಂದಿರ; ಮನೋಮಂದಿರ.

psychic link: ಮಾನಸಿಕ ಕೊಂಡಿ.

psychic mobility: ಮಾನಸಿಕ ಸಂಚಲನೆ.

psychic pain: ಮನೋಯಾತನೆ; ಮಾನಸಿಕ ಯಾತನೆ.

psychic phenomenon: ಅತಿಮಾನಸ ಘಟನೆ.

psychic profile: ಮಾನಸಿಕ (ರೂಪಾ ಕೃತಿ) ಪಾರ್ಶ್ವರೇಖೆ; ಮಾನಸಿಕ ವ್ಯಕ್ತಿಚಿತ್ರ.

psychic reaction: ಮಾನಸಿಕ ಪ್ರತಿ ಕ್ರಿಯೆ.

psychic reality: ಮಾನಸಿಕ ವಾಸ್ತವಿಕತೆ.

psychic state: ಮನಸ್ಥಿತಿ; ಮಾನಸಿಕ ಸ್ಥಿತಿ.

psychic summation: ಮಾನಸಿಕ ಸಂಕಲನ.

psychic trauma: ಮನೋಘಾತ;

ಮಾನಸಿಕ ಆಘಾತ; ಮಾನಸಿಕ ಕ್ಷತಿ; ಮಾನಸಿಕ ವ್ರಣ.

psychical research: ಮಾನಸಿಕ ಸಂಶೋಧನೆ.

psycho-analysis: ಮನೋವಿಶ್ಲೇಷಣೆ. ಮನೋವಿಶ್ಲೇಷಣೆಯೆಂಬುದು, ಮನೋಬೇನೆಗಳ ಅಧ್ಯಯನ ಮತ್ತು ಚಿಕಿತ್ಸೆಯನ್ನು ಕುರಿತಾದ ಮನೋವೈದ್ಯ ಕ್ಷೇತ್ರದೊಳಗಿನ ಒಂದು ವಿಶೇಷವಾದ ಕ್ಷೇತ್ರ.

psychoanalytic psycho therapy: ಮನೋವಿಶ್ಲೇಷಣಾತ್ಮಕ ಮನೋಚಿಕಿತ್ಸೆ.

psychoanalytic school: ಮನೋವಿಶ್ಲೇಷಣಾತ್ಮಕ ಪಂಥ.

psychoanalytical theory: ಮನೋವಿಶ್ಲೇಷಣಾತ್ಮಕ ಸಿದ್ಧಾಂತ.

psychobiology: ಮನೋಜೀವ ವಿಜ್ಞಾನ. ಮಾನಸಿಕ ರೋಗಿಗೆ ಆತನ ಜೀವನ, ಮಾನಸಿಕ, ಶಾರೀರಿಕ ಮತ್ತು ಸಾಮಾಜಿಕ ಅಂಶಗಳೆಲ್ಲವನ್ನೂ ಒಳಗೊಂಡು ನೀಡುವ ಚಿಕಿತ್ಸೆ.

psychodrama: ಚಿತ್ತರೂಪಕ ಚಿಕಿತ್ಸೆ; ಮನೋನಾಟಕ ಚಿಕಿತ್ಸೆ. ಮಾನಸಿಕ ಉದ್ವೇಗವನ್ನು ಕಡಿಮೆ ಮಾಡಲು ವ್ಯಕ್ತಿತ್ವದ ವಿಶ್ಲೇಷಣೆಗಾಗಿ ಉಪಯೋಗಿಸುವ ವಿಧಾನ.

psychodynamic: ಮನೋಗತಿ.

psychogalvanic reflex: ಮನೋವಿದ್ಯುತ್ ಪ್ರತಿಕ್ಷೇಪ.

psychogalvanic response: ಮನೋವಿದ್ಯುತ್ ಪ್ರತಿಕ್ರಿಯೆ.

psychogenesis: ಮಾನಸಿಕ ಉತ್ಪತ್ತಿ.

psychogenic: ಮನೋಜನ್ಯ; ಮನಸ್ಸಿನಲ್ಲಿ ಹುಟ್ಟಿಕೊಂಡದ್ದು. ಅಂಗಾಂಗಗಳ ರಚನೆಯಲ್ಲಿ ತೊಂದರೆಯಾಗದೆ ಅವುಗಳ ನಿಜ ಕೆಲಸ ಅಸ್ತವ್ಯಸ್ತಗೊಳ್ಳುವುದು.

psychogenic disorder: ಮನೋಜನ್ಯ ವಿಕೃತಿ.

psychogenic headache: ಮನೋ ಜನ್ಯ ತಲೆಶೂಲೆ. ಮಾನಸಿಕ ಕಾರಣದಿಂದ ಬರುವ ತಲೆನೋವು.

psychogenic needs: ಮನೋಜಾತ ಅಗತ್ಯಗಳು.

psychograph: ಮಾನಸಲೇಖ; ಮನೋಲೇಖ.

psychography: ಮನೋಲೇಖ ವಿಜ್ಞಾನ; ಮಾನಸಲೇಖ ವಿಜ್ಞಾನ.

psychokinesis (P.K): ಅತಿಮಾನಸ ಕ್ರಿಯೆ; ಮನೋಚಲನೆ. ಇದು ಪರಾ ಮನೋವಿಜ್ಞಾನದ ಇನ್ನೊಂದು ವಿಭಾಗ ಇದರ ಪರಿಣಾಮ ದೇಹದ ಮೇಲೂ ಆಗುವುದು. ಉದಾ: ಮೈಯಲ್ಲಿ ದೇವರು ಬರುವುದು, ಭೂತ ಚೇಷ್ಟೆ, ಅಂಜನ ನೋಡುವುದು ಇತ್ಯಾದಿ.

psychological: ಮಾನಸಿಕ; ಮನೋವೈಜ್ಞಾನಿಕ.

psychological ailment: ಮಾನಸಿಕ ಅಸ್ವಾಸ್ಥ್ಯ.

psychological approach: ಮನೋವೈಜ್ಞಾನಿಕ ದೃಷ್ಟಿಕೋನ.

psychological assessment: ಮನೋವೈಜ್ಞಾನಿಕ ಮೌಲ್ಯನಿರ್ಧಾರಣ.

psychological automism: ಮಾನಸಿಕ ಅಣುವಾದ.

psychological automatism: ಮಾನಸಿಕ ಸ್ವಚಲನತ್ವ; ಮಾನಸಿಕ ಸ್ವಯಂ ಚಲನ ವಾದ.

psychological conception: ಮನೋ ವೈಜ್ಞಾನಿಕ ಭಾವಕಲ್ಪನೆ.

psychological determinants: ಮಾನಸಿಕ ನಿರ್ಧಾರಕಗಳು.

psychological development: ಮಾನಸಿಕ ವಿಕಾಸ.

psychological displacement: ನೋಡಿ: displaced aggression.

psychological dissociation: ಮನೋ ವಿಸಂಘಟನೆ. ವ್ಯಕ್ತಿತ್ವದ ಒಂದು ಅಂಶ. ಸಮಗ್ರ ವ್ಯಕ್ತಿತ್ವದಿಂದ ಬೇರೆಯಾಗಿ ತಾನು ಪ್ರತ್ಯೇಕವಾಗಿ ಕ್ರಿಯಾಶೀಲವಾಗುವ ವಿಸಂಘಟನಾ ಸ್ಥಿತಿ. ಹಿಸ್ಟೀರಿಯಾದ ಮಾನಸಿಕ ತೊಂದರೆಗಳು ಇಂತಹ ವಿಸಂಘ ಟನೆಯಿಂದ ಕೂಡಿರುತ್ತವೆ.

psychological distance: ಮಾನಸಿಕ ಅಂತರ.

psychological drive: ಮಾನಸಿಕ ಪ್ರೇರಣೆ.

psychological dynamics: ಮಾನಸಿಕ ಗತಿಶೀಲತೆ.

psychological equipment: ಮನೋ ವೈಜ್ಞಾನಿಕ ಪ್ರಯೋಗ ಪರಿಕರ.

psychological environment: ಮಾನಸಿಕ ಪರಿಸರ.

psychological experiment: ಮನೋ ವೈಜ್ಞಾನಿಕ ಪ್ರಯೋಗ.

psychological factors: ಮಾನಸಿಕ ಅಂಶಗಳು.

psychological feedback: ಮಾನಸಿಕ ಪುನರ್ಬಲನ; ಮಾನಸಿಕ ಪ್ರಬಲನ.

psychological group: ಮಾನಸಿಕ ಸಮೂಹ.

psychological guidance: ಮನೋ ವೈಜ್ಞಾನಿಕ ಮಾರ್ಗದರ್ಶನ.

psychological hedonism: ಮಾನಸಿಕ ಸುಖವಾದ; ಮನೋವೈಜ್ಞಾನಿಕ ಭೋಗ ವಾದ.

psychological idealism: ಮನೋ ವೈಜ್ಞಾನಿಕ ಆದರ್ಶವಾದ.

psychological laboratory: ಮನೋ ವೈಜ್ಞಾನಿಕ ಪ್ರಯೋಗಶಾಲೆ.

psychological law of consum ption: ಅನುಭೋಗದ ಮಾನಸಿಕ ನಿಯಮ.

psychological method: ಮಾನಸಿಕ ಪದ್ಧತಿ.

psychological motives: ಮಾನಸಿಕ ಪ್ರೇರಣೆಗಳು. ಮನುಷ್ಯನ ಸುಖ, ಮಾನಸಿಕ ಆರೋಗ್ಯ ಮತ್ತು ಹೊಂದಾಣಿಕೆಗೆ ಇವು ತುಂಬಾ ಪ್ರಾಮುಖ್ಯವಾಗಿವೆ.

psychological need: ಮಾನಸಿಕ ಅಗತ್ಯ; ಮಾನಸಿಕ ಅವಶ್ಯಕತೆ.

psychological observation: ಮನೋವೈಜ್ಞಾನಿಕ ಅವಲೋಕನ.

psychological relativism: ಮಾನಸಿಕ ಸಾಪೇಕ್ಷವಾದ; ಮನೋವೈಜ್ಞಾನಿಕ ಸಾಪೇಕ್ಷ ವಾದ.

psychological repression: ಮಾನಸಿಕ ನಿರೋಧ; ಮನೋನಿರೋಧ.

psychological research: ಮನೋವೈಜ್ಞಾನಿಕ ಸಂಶೋಧನೆ.

psychological terminology: ಮನೋವೈಜ್ಞಾನಿಕ ಪರಿಭಾಷೆ.

psychological test: ಮನೋವೈಜ್ಞಾನಿಕ ಪರೀಕ್ಷೆ.

psychological warfare: ಮಾನಸಿಕ ತುಮುಲ, ಮಾನಸಿಕ ಯುದ್ಧ.

psychologism: ಮನೋವೈಜ್ಞಾನಿಕ ವಾದ.

psychology of aesthetics: ರಸಾನುಭವ ಮನೋವಿಜ್ಞಾನ.

psychomatic disease: ಮನೋದೈಹಿಕ ವ್ಯಾಧಿ.

psychometric method: ಮನೋಮಾಪನ ವಿಧಾನ.

psychometrics: ಮನೋಮಾಪಿ; ಮನೋಮಿತಿ.

psychometry: ಮನೋಮಿತಿ ವಿಜ್ಞಾನ. ಭೌತಿಕ ಸಾಮಿಪ್ಯದಿಂದಲೇ ವಸ್ತು ಅಥವಾ ವ್ಯಕ್ತಿಯ ಗುಣಗಳನ್ನರಿಯುವ ಮನೋವಿಜ್ಞಾನ.

psycho- moral basis: ಮನೋನೈತಿಕ ನೆಲೆ.

psycho-motor ability: ಮನೋ ಚಾಲಕ ಸಾಮರ್ಥ್ಯ; ಮನೋಚಾಲನ ಶಕ್ತಿ.

psychoneural parallelism: ಮನೋ-ನರ ಸಮಾಂತರವಾದ.

psychoneurosis: ಮನೋ ನರತಾಪಗಳು; ಮನೋ ನರ ಚಂಚಲತೆ. ಲಘು ಸ್ವರೂಪದ ಮಾನಸಿಕ ತಾರುಮಾರುಗಳು. ಮುಖ್ಯ ಲಕ್ಷಣ : ಆಂತರಿಕ ತುಮುಲ ಮತ್ತು ಸಾಮಾಜಿಕ ಒಡನಾಡಿಗಳಲ್ಲಿ ಸಾಮರಸ್ಯ ವಿಲ್ಲದಿರುವುದು.

psychonomics: ಮನೋ ನಿಯಮ ಜ್ಞಾನ.

psychopath: ವಿಕೃತ ಮನಸ್ಸಿನ ವ್ಯಕ್ತಿ. ದುರ್ನಡತೆಗಳುಳ್ಳ, ಸಮಾಜಘಾತಕರ ವರ್ತನೆ. ಇದು ಒಂದು ರೀತಿಯ ವ್ಯಕ್ತಿತ್ವದ ಅಪಕ್ವತೆ ಅಥವಾ ವಿಕಾರ.

psychopathic personality: ಮನೋವ್ಯಾಧಿ ವ್ಯಕ್ತಿತ್ವ. ಸರಾಸರಿ ಮಟ್ಟ ಅಥವಾ ಅದಕ್ಕಿಂತಲೂ ಹೆಚ್ಚು ಬುದ್ಧಿಶಕ್ತಿ ಪಡೆದಿದ್ದು, ಮನೋಬೇನಿಗರಾಗಿಲ್ಲದೆ, ಮನೋವಿಕೃತಿಯ ಸೂಚನೆಗಳಿಲ್ಲದೆಯೂ ಸಮಾಜಕ್ಕೆ ಹೊಂದಿಕೊಳ್ಳದ, ಕೊಂಚಮಟ್ಟಿಗೆ ಮಾನಸಿಕವಾಗಿ ಸರಿ ಇಲ್ಲದ ವ್ಯಕ್ತಿಗಳು.

psychopathic offender: ವಿಕೃತ ಮನದ ಅಪರಾಧಿ.

psychopathic schizophrenia: ವಿಕೃತಮಾನಸ ಮನೋವಿದಳನ.

psychopathology: ಮನೋರೋಗ ವಿಜ್ಞಾನ. ವ್ಯಕ್ತಿತ್ವದ ತಾರುಮಾರುಗಳ ಮತ್ತು ಮನೋರೋಗಗಳ ಎಲ್ಲಾ ಮಾನಸಿಕ ಅಂಶಗಳ ಅಧ್ಯಯನ ಮಾಡುವ ವೈಜ್ಞಾನಿಕ ಅಂಶ.

psychopathy: ಮನೋವಿಕೃತಿ.

psychopharmacology: ಮನೋಔಷಧಿ ವಿಜ್ಞಾನ.

psychophysical: ಮನೋ ದೈಹಿಕ; ಮನೋ ಕಾಯಕ.

psychophysical disorder: ಮನೋ

ದೈಹಿಕ ವಿಕಾರ. ನೋಡಿ: psychosomatic disorder.

psychophysical interaction: ಮನೋ ದೈಹಿಕ ಅಂತರ್‌ಕ್ರಿಯೆ.

psychophysical law: ಮನೋ ಭೌತಿಕ ನಿಯಮ.

psychophysical method: ಮನೋ ಭೌತಿಕ ವಿಧಾನ.

psychophysical parallelism: ಮನಸ್ಸು ದೇಹಗಳ ಸಮಾಂತರವಾದ; ಮನೋಭೌತಿಕ ಸಮಾಂತರವಾದ.

psychophysical problem: ಮನೋ ದೈಹಿಕ ಸಮಸ್ಯೆ.

psychophysics: ಮನೋಭೌತ ವಿಜ್ಞಾನ.

psychophysiology: ಮನೋ ಶರೀರ ಶಾಸ್ತ್ರ.

psycho sexual: ಮನೋ ಲೈಂಗಿಕ.

psycho sexual development: ಮನೋ ಲೈಂಗಿಕ ಬೆಳವಣಿಗೆ.

psycho sexual motive: ಮನೋ ಲೈಂಗಿಕ ಪ್ರೇರಕ.

psychosis: ಬುದ್ಧಿ ವಿಕಲ್ಪ; ಮನೋ ವಿಕೃತಿ; ಮನೋವಿಕ್ಷಿಪ್ತಿ. ವಿಚಾರ, ಭಾವ ಮತ್ತು ವ್ಯಕ್ತಿತ್ವದಲ್ಲಿ ಗಾಢವಾದ ಅಸ್ತ ವ್ಯಸ್ತತೆಯನ್ನುಂಟುಮಾಡುವ ಗಂಭೀರ ಸ್ವರೂಪದ ಮನೋರೋಗಗಳು.

psychosis with drug addiction: ಔಷಧಾಸಕ್ತಿ ಜನ್ಯ ಮನೋವಿಕ್ಷಿಪ್ತಿ.

psycho social: ಮನೋ ಸಾಂಘಿಕ; ಮನೋ ಸಾಮಾಜಿಕ.

psycho social need: ಮನೋ ಸಾಮಾ ಜಿಕ ಅವಶ್ಯಕತೆ.

psycho somatic disorder: ಮನೋ ದೈಹಿಕ ರೋಗ. ಉದಾ: ತಲೆನೋವು, ರಕ್ತದ ಒತ್ತಡ, ಅಸ್ತಮಾ, ಅಲ್ಸರ್, ಅಲರ್ಜಿ ಇತ್ಯಾದಿ.

psycho somatic medicine: ಮನೋದೈಹಿಕ ವೈದ್ಯ. ಶಾರೀರಿಕ ರೋಗ ಗಳ ಹುಟ್ಟು ಮತ್ತು ಅವುಗಳನ್ನು ಹಚ್ಚಿ ಕೊಳ್ಳು ವುದರಲ್ಲಿ ಮಾನಸಿಕ ಮತ್ತು ಭಾವನಾತ್ಮಕ ಅಂಶಗಳ ಪ್ರಾಮುಖ್ಯವನ್ನು ಒತ್ತಿ ಹೇಳುವ ಒಂದು ವೈದ್ಯಕೀಯ ದೃಷ್ಟಿಕೋನ.

psycho somatic symptom: ಮನೋ ದೈಹಿಕ ರೋಗಲಕ್ಷಣ.

psycho somatic therapy: ಮನೋ ದೈಹಿಕ ಚಿಕಿತ್ಸೆ.

psycho surgery: ಮನೋಶಸ್ತ್ರ ವೈದ್ಯ ವಿಜ್ಞಾನ.

psycho synthesis: ಮನೋ ಸಂಶ್ಲೇ ಷಣೆ.

psycho technology: ಮನೋ ತಾಂತ್ರಿಕ ವಿಜ್ಞಾನ.

psycho therapy: ಮನೋಚಿಕಿತ್ಸೆ; ಮನೋರೋಗ ಚಿಕಿತ್ಸೆ. ವ್ಯಕ್ತಿತ್ವದ ತಾರು ಮಾರುಗಳನ್ನು ಮಾನಸಿಕ ಚಿಕಿತ್ಸೆಯಿಂದ ಗುಣಪಡಿಸುವ ವಿಧಾನ. ಉದಾ: ಹಿತ ವಚನ, ಸಲಹೆ, ಸೂಚನೆ ಮತ್ತು ಮನೋ ವಿಶ್ಲೇಷಣೆ.

psychotic depressive reaction: ಮನೋವಿಕ್ಷಿಪ್ತಿ ವಿಷಣ್ಣತಾ ಪ್ರತಿಕ್ರಿಯೆ.

psychotic desocialization: ಮನೋ ವಿಕ್ಷಿಪ್ತಿಯ ವಿಸಮಾಜೀಕರಣ.

psychotropic drug: ಚಿತ್ತಪ್ರಭಾವೀ ಮದ್ದು.

pubertas praecox: ಶೈಶವ್ಯ ತಾರುಣ್ಯ. ಮೂರು ಅಥವಾ ನಾಲ್ಕು ವರ್ಷದ ಮಗುವು ದೊಡ್ಡವರ ಲೈಂಗಿಕ ಬೆಳವಣಿಗೆಯನ್ನು ಪ್ರದರ್ಶಿಸಬಹುದು. ವಯಸ್ಸಿನ ದೃಷ್ಟಿಯಲ್ಲಿ ಮಕ್ಕಳೆಂದು ಕರೆಯಲ್ಪಟ್ಟರೂ ಇವರು ನಿಲುವು, ಶಕ್ತಿ ಮತ್ತು ಲೈಂಗಿಕ ಪ್ರಬುದ್ಧತೆಯಲ್ಲಿ ತರುಣರಾಗಿರುತ್ತಾರೆ. ಇದನ್ನು "ಶೈಶವ್ಯ ತಾರುಣ್ಯ" ಎಂದು ಕರೆಯಲಾಗುತ್ತದೆ.

puberty: ಪ್ರೌಢಾವಸ್ಥೆ; ಮೈನೆರೆಯುವುದು. ಸಂತಾನೋತ್ಪತ್ತಿ ಮಾಡುವ ಸಾಮರ್ಥ್ಯ.

puberty dance: ಹರೆಯ ತುಂಬಿದ ನೃತ್ಯ. ಹುಡುಗಿ ಮೈನರೆದು ಸಂತಾನೋತ್ಪತ್ತಿಗೆ ಸಿದ್ಧಳಾದಳೆಂಬ ಸಂತೋಷದ ಆಚರಣೆಗೆ ನಡೆಸುವ ನೃತ್ಯಪ್ರಕಾರ.

puberty rite: ಪ್ರೌಢದೆಸೆಯ ಸಂಸ್ಕಾರ. ಮೈನೆರೆಯುವಿಕೆಗೆ ಸಂಬಂಧಿಸಿದ ಸಂಸ್ಕಾರ. ವ್ಯಕ್ತಿ ಪ್ರೌಢಾವಸ್ಥೆ ಪಡೆದಿರುವ ಸೂಚಕವಾಗಿ ನಡೆಸುವ ಸಮಾರಂಭ.

puberty school: ಋತು ಶಾಲೆ. ಯುವಕ, ಯುವತಿಯರಿಗೆ ಪ್ರೌಢಾವಸ್ಥೆಯ ಸಂಸ್ಕಾರಗಳನ್ನು ಕಲಿಸುವ ಶಾಲೆ.

public accountability: ಸಾರ್ವಜನಿಕ ಹೊಣೆಗಾರಿಗೆ, ಸಾರ್ವಜನಿಕ ಜವಾಬ್ದಾರಿ.

public administration: ಸಾರ್ವಜನಿಕ ಆಡಳಿತ. ರಾಜ್ಯದ ದೈನಂದಿನ ವ್ಯವಹಾರಗಳನ್ನು ನಡೆಸಿಕೊಂಡು ಹೋಗುವ ಅಂಗ.

public affair: ಸಾರ್ವಜನಿಕ ವ್ಯವಹಾರ.

public bill: ಸಾರ್ವಜನಿಕ ಮಸೂದೆ. ಮಂತ್ರಿಮಂಡಲದ ಸದಸ್ಯ ಅಥವಾ ಮಂತ್ರಿಯು ಸರಕಾರದ ಪರವಾಗಿ ಮಸೂದೆಯನ್ನು ಮಂಡಿಸಿದರೆ ಅದನ್ನು ಸರಕಾರೀ ಮಸೂದೆ ಅಥವಾ ಸಾರ್ವಜನಿಕ ಮಸೂದೆ ಎಂದು ಕರೆಯಲಾಗುವುದು.

public borrowing: ಸಾರ್ವಜನಿಕ ಸಾಲ. ಸರಕಾರವು ಸಾರ್ವಜನಿಕ ವ್ಯಕ್ತಿ ಯಾ ಸಂಸ್ಥೆಯಿಂದ ಸಾಲವಾಗಿ ಪಡೆಯುವ ಹಣ.

public capital: ಸಾರ್ವಜನಿಕ ಬಂಡವಾಳ. ಸರಕಾರದ ವಶದಲ್ಲಿರುವ ಬಂಡವಾಳ.

public choice theory: ಸಾರ್ವಜನಿಕ ಆಯ್ಕೆ ಸಿದ್ಧಾಂತ.

public consciousness: ಸಾರ್ವಜನಿಕ ಪ್ರಜ್ಞೆ.

public convenience: ಸಾರ್ವಜನಿಕ ಹಿತ.

public corporation: ಸಾರ್ವಜನಿಕ ನಿಗಮ. ಕೆಲವೊಂದು ಸಾರ್ವಜನಿಕ ಗುರಿಗಳನ್ನು ಸಾಧಿಸಲು ಸಾರ್ವಜನಿಕ ಒಡೆತನ, ಸಾರ್ವಜನಿಕ ಜವಾಬ್ದಾರಿ ಮತ್ತು ವಾಣಿಜ್ಯ ನಿರ್ವಹಣೆಗಾಗಿ ಸ್ಥಾಪಿತವಾದ ಸಂಸ್ಥೆ.

public debt: ಸಾರ್ವಜನಿಕ ಸಾಲ. ಒಂದು ದೇಶದ ಸರಕಾರ ಆಂತರಿಕವಾಗಿ ತನ್ನ ಪ್ರಜೆಗಳಿಂದ ಮತ್ತು ಹೊರದೇಶಗಳ ಸರಕಾರಗಳಿಂದ ತೆಗೆದುಕೊಳ್ಳುವ ಸಾಲ.

public debt management: ಸಾರ್ವಜನಿಕ ಸಾಲ ನಿರ್ವಹಣೆ.

public demand: ಸಾರ್ವಜನಿಕ ಬೇಡಿಕೆ.

public distance: ಸಾರ್ವಜನಿಕ ಅಂತರ. ಸಾರ್ವಜನಿಕ ಪ್ರದರ್ಶನಗಳಲ್ಲಿ ಭಾಗಿಯಾಗುವಾಗ ವ್ಯಕ್ತಿಯು ತನ್ನ ಹಾಗೂ

ಇತರರ ನಡುವೆ ಉಳಿಸಿಕೊಳ್ಳುವ ದೈಹಿಕ ಅಂತರ.

public distribution: ಸಾರ್ವಜನಿಕ ವಿತರಣೆ. ಉದಾ: ಪಡಿತರ ಪದ್ಧತಿ.

public enterprise: ಸಾರ್ವಜನಿಕ ಉದ್ದಿಮೆ. ವಸ್ತುಗಳನ್ನು ಮಾರಾಟ ಮಾಡುವ ಹಾಗೂ ಜನರಿಗೆ ಸೇವೆಯನ್ನು ಒದಗಿಸಿ ಕೊಡುವ ಸರಕಾರೀ ಒಡೆತನದ ಉದ್ದಿಮೆ.

public expenditure: ಸಾರ್ವಜನಿಕ ವೆಚ್ಚ. ಸರಕಾರವು ಮಾಡುವ ವೆಚ್ಚ.

public finance: ಸಾರ್ವಜನಿಕ ಹಣಕಾಸು. ಒಂದು ದೇಶದ ಸರಕಾರದ ಆದಾಯ ಮತ್ತು ವೆಚ್ಚಗಳ ಸ್ವರೂಪ ಮತ್ತು ತತ್ವಗಳ ಅಧ್ಯಯನ.

public good: ಸಾರ್ವಜನಿಕ ಒಳಿತು (ಹಿತ).

public goods: ಸಾರ್ವಜನಿಕ ಸರಕುಗಳು. ಸರಕಾರದ ಒಡೆತನದಲ್ಲಿರುವ ವಸ್ತುಗಳು. ಉದಾ: ಸಾರ್ವಜನಿಕ ಗ್ರಂಥಾಲಯ, ಶಾಲಾ ಕಾಲೇಜುಗಳು.

public granary: ಊರೊಟ್ಟಿನ ಕಣಜ.

public health: ಸಾರ್ವಜನಿಕ ಆರೋಗ್ಯ.

public interest: ಸಾರ್ವಜನಿಕ ಹಿತಾಸಕ್ತಿ.

public investment: ಸಾರ್ವಜನಿಕ ಹೂಡಿಕೆ.

public law: ಸಾರ್ವಜನಿಕ ಕಾನೂನು.

public magic: ಸಾರ್ವಜನಿಕ ಮಾಟ. ಒಂದು ಜನಾಂಗದ ಅಥವಾ ಪಂಗಡದ ಪರವಾಗಿ ಸಾರ್ವಜನಿಕವಾಗಿ ಮಾಡುವ ಮಂತ್ರವಿದ್ಯೆ.

public monopoly: ಸಾರ್ವಜನಿಕ ಏಕಸ್ವಾಮ್ಯ. ಏಕಸ್ವಾಮ್ಯದ ಅಧಿಕಾರವನ್ನು ಸರಕಾರವು ಹೊಂದಿದ್ದರೆ ಅದನ್ನು ಸಾರ್ವಜನಿಕ ಏಕಸ್ವಾಮ್ಯ ಎನ್ನಲಾಗುತ್ತದೆ.

public morality: ಸಾರ್ವಜನಿಕ ನೈತಿಕತೆ; ಸಾರ್ವಜನಿಕ ನೀತಿ.

public notification: ಸಾರ್ವಜನಿಕ ಅಧಿಸೂಚನೆ; ಸಾರ್ವಜನಿಕ ಪ್ರಕಟಣೆ.

public opinion: ಪ್ರಜಾಭಿಪ್ರಾಯ; ಸಾರ್ವಜನಿಕ ಅಭಿಪ್ರಾಯ. ಜನಮತ, ಲೋಕಮತ, ರಾಜ್ಯದ ನೀತಿ ಅಥವಾ ಕಾರ್ಯ ಚಟುವಟಿಕೆಯ ಬಗ್ಗೆ ಹಾಗೂ ಸಾರ್ವತ್ರಿಕ ಆಸಕ್ತಿಗಳ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಜನರು ಸರ್ವಸಾಮಾನ್ಯವಾಗಿ ಹೊಂದಿರುವ ಅಭಿಪ್ರಾಯ.

public opinion poll: ಜನಮತ ಸಂಗ್ರಹ; ಜನಾಭಿಪ್ರಾಯ ಸಂಗ್ರಹಣೆ. ಸರಕಾರದ ಕಾರ್ಯಚಟುವಟಿಕೆಯ ವಿಷಯಗಳನ್ನು ಸಾರ್ವಜನಿಕ ಅವಗಾಹನೆಗೆ ತಂದು ಮತ ಸಂಗ್ರಹಣೆ ಮೂಲಕ ಅವರ ಅಭಿಪ್ರಾಯವನ್ನು ತಿಳಿದುಕೊಳ್ಳುವುದು.

public order: ಸಾರ್ವಜನಿಕ ವ್ಯವಸ್ಥೆ.

public ownership: ಸಾರ್ವಜನಿಕ ಒಡೆತನ. ಉತ್ಪಾದನಾ ಸಾಧನಗಳು ಸಾರ್ವಜನಿಕ ಒಡೆತನದಲ್ಲಿರುವುದು. ಉತ್ಪಾದನಾ ಸಾಧನಗಳ ಸಾರ್ವಜನಿಕ ಒಡೆತನವು ಸಮಾಜವಾದಿ ಸಮಾಜದ ಆರ್ಥಿಕ ಆಧಾರವಾಗಿರುತ್ತದೆ.

public ownership policy: ಸಾರ್ವತ್ರಿಕ ಒಡೆತನ ನೀತಿ.

public personnel administration: ಸಾರ್ವಜನಿಕ ಸಿಬ್ಬಂದಿ ವರ್ಗದ ಆಡಳಿತ.

public prosecutor: ಸಾರ್ವಜನಿಕ

ಅಭಿಯೋಕ್ತ. ಸಾರ್ವಜನಿಕ ಹಿತಕ್ಕಾಗಿ ಅಪರಾಧಿಗಳ ಮೇಲೆ ಕ್ರಮ ಜರುಗಿಸುವ ನ್ಯಾಯ ಖಾತೆಯ ಅಧಿಕಾರಿ.

public relation: ಸಾರ್ವಜನಿಕ ಸಂಬಂಧ. ಆಡಳಿತ ವ್ಯವಸ್ಥೆಯಲ್ಲಿ ಸಾರ್ವಜನಿಕರು ಮತ್ತು ಆಡಳಿತದ ನಡುವೆ ಇರುವ ಸಂಬಂಧ.

public relation officer : ಸಾರ್ವಜನಿಕ ಸಂಪರ್ಕಾಧಿಕಾರಿ.

public relations unit: ಸಾರ್ವಜನಿಕ ಸಂಪರ್ಕ ಘಟಕ.

public revenue: ಸಾರ್ವಜನಿಕ ಆದಾಯ. ಸರಕಾರಕ್ಕೆ ವಿವಿಧ ಮೂಲಗಳಿಂದ ಬರುವ ಆದಾಯ.

public sector: ಸಾರ್ವಜನಿಕ ವಲಯ.

public sector outlay: ಸಾರ್ವಜನಿಕ ವಲಯದ ವೆಚ್ಚ.

public servant: ಸಾರ್ವಜನಿಕ ಸೇವಕ, ನೌಕರಶಾಹಿಯಲ್ಲಿನ ಅಧಿಕಾರಸ್ಥ.

public service commission: ಸಾರ್ವಜನಿಕ ಸೇವಾ ಆಯೋಗ.

public trust fund: ಸಾರ್ವಜನಿಕ ನ್ಯಾಸ ನಿಧಿ.

public utility: ಸಾರ್ವಜನಿಕ ಉಪಯುಕ್ತತೆ.

public utility service: ಸಾರ್ವಜನಿಕ ಉಪಯುಕ್ತತಾ ಸೇವೆ.

public utilization stage: ಸಾರ್ವಜನಿಕ ಅನುಭೋಗದ ಹಂತ.

public work: ಸಾರ್ವಜನಿಕ ಕಾಮಗಾರಿ (ಕಾರ್ಯ).

public work administration: ಲೋಕಸೇವಾ ಆಡಳಿತ.

pugnacious disposition: ಜಗಳ ಗಂಟಿ ಚಿತ್ತಪ್ರವೃತ್ತಿ.

pugnacity: ಜಗಳಗಂಟಿತನ; ಜಗಳಾಕಾಂಕ್ಷೆ.

pugnacity instinct: ಜಗಳಗಂಟಿ ಪ್ರವೃತ್ತಿ; ಸಂಘರ್ಷಕ ಮೂಲ ಪ್ರವೃತ್ತಿ.

pull factors: ಸೆಳೆತದ ಅಂಶಗಳು; ಆಕರ್ಷಕ ಅಂಶಗಳು. ನಗರಗಳಿಗೆ ವಲಸೆ ಉತ್ತೇಜಿಸುವ ಅಂಶಗಳು.

pump priming: ನಲ ವಿಸ್ಫೋಟನ. ವ್ಯಾಪಾರ ಸ್ಥೈರ್ಯ ಹಾಗೂ ಬೃಹತ್ ಪ್ರಮಾಣದ ಖಾಸಗಿ ವಲಯಗಳ ಬಂಡವಾಳವನ್ನು ಉತ್ತೇಜಿಸುವ ಉದ್ದೇಶದಿಂದ ಹಿಂದುಳಿದ ಅರ್ಥವ್ಯವಸ್ಥೆಯಲ್ಲಿ ಸರಕಾರಿ ವೆಚ್ಚದ ಸಣ್ಣ ಮೊತ್ತದ ಪ್ರೇರಣೆ.

punaluant family: ಸಮೂಹ ಕುಟುಂಬ.

punch marked coin: ಮುದ್ರಾಂಕಿತ ನಾಣ್ಯ. ಬೆಳ್ಳಿ ಅಥವಾ ತಾಮ್ರದ ಚೌಕ ಅಥವಾ ಆಯತಾಕಾರದ ಮುದ್ರೆಗಳನ್ನು ಅಂಕಿತಗೊಳಿಸಿದ ಪ್ರಾಚೀನ ನಾಣ್ಯ.

punitive diety: ದಂಡಾತ್ಮಕ ದೇವತೆ; ಶಿಕ್ಷೆ ನೀಡುವ ದೈವ.

punitive tax: ದಂಡಾತ್ಮಕ ತೆರಿಗೆ.

pupil interest inventory: ವಿದ್ಯಾರ್ಥಿ ಆಸಕ್ತಿ ಯಾದಿ.

puppet government: ಕೈಗೊಂಬೆ ಸರಕಾರ.

purchase price: ಕೊಳ್ಳುವ ಬೆಲೆ; ಖರೀದಿ ಬೆಲೆ.

purchase power parity theory: ಕೊಳ್ಳುವ ಶಕ್ತಿಯ ಸಮತೆ ಸಿದ್ಧಾಂತ. ಎರಡು ದೇಶಗಳ ವಿನಿಮಯ ದರವನ್ನು ಅವುಗಳ ಹಣದ ಕೊಳ್ಳುವ ಶಕ್ತಿಯು ನಿರ್ಧರಿಸುತ್ತದೆ ಎಂದು ವಿವರಿಸುವ ಸಿದ್ಧಾಂತ.

purchase tax: ಖರೀದಿ ತೆರಿಗೆ. ವಿಭಿನ್ನ ಸರಕುಗಳಿಗೆ ಅವುಗಳ ಸಗಟು ಬೆಲೆಯ ಮೇಲೆ ವಿಭಿನ್ನ ಶತಾಂಶ ದರದಲ್ಲಿ ವಿಧಿಸುವ ಪರೋಕ್ಷ ತೆರಿಗೆ.

purchasing power: ಕೊಳ್ಳುವ ಶಕ್ತಿ.

pure correlation: ಶುದ್ಧ ಸಹ ಸಂಬಂಧ.

pure labour theory of value: ಮೌಲ್ಯದ ಪರಿಶುದ್ಧ ಶ್ರಮ ಸಿದ್ಧಾಂತ.

pure mental ability: ಶುದ್ಧ ಬೌದ್ಧಿಕ ಸಾಮರ್ಥ್ಯ.

pure monetary theory: ಪರಿಶುದ್ಧ ಹಣದ ಸಿದ್ಧಾಂತ.

pure monopoly: ಪರಿಶುದ್ಧ ಏಕ ಸ್ವಾಮ್ಯ. ಯಾವುದೇ ಬದಲಿ ವಸ್ತುಗಳಿಲ್ಲದ ಒಂದು ವಸ್ತುವಿನ ಉತ್ಪಾದನಾಧಿಕಾರ.

pure oligopoly: ಅಪ್ಪಟ ಬಹುಜನ ಸ್ವಾಮ್ಯ.

pure science: ಶುದ್ಧ ವಿಜ್ಞಾನ.

pure sensation: ಶುದ್ಧ ಸಂವೇದನೆ.

pure sociology: ಶುದ್ಧ ಸಮಾಜಶಾಸ್ತ್ರ. ಸೈದ್ಧಾಂತಿಕ ಹಾಗೂ ಪೂರ್ಣ ಜ್ಞಾನಕ್ಕಾಗಿ ಸಮಾಜವನ್ನು ವಸ್ತುನಿಷ್ಠ ಮತ್ತು ವೈಜ್ಞಾನಿಕವಾಗಿ ಪಕ್ಷಪಾತರಹಿತವಾಗಿ ಅಭ್ಯಸಿಸು ವುದು.

purification rite: ಶುದ್ಧೀಕರಣ ಸಂಸ್ಕಾರ.

puritan: ಧಾರ್ಮಿಕ; ಧರ್ಮಶುದ್ಧಿ ಸುಧಾರಕ.

purposive behaviour: ಉದ್ದೇಶಿತ ವರ್ತನೆ.

purposive behaviourism: ಉದ್ದೇಶಿತ ವರ್ತನಾವಾದ.

purposive learning: ಉದ್ದೇಶಿತ ಕಲಿಕೆ.

pursuit movement: ಅನುಗಮನ ಚಲನೆ.

pursuit meter: ಅನುಗಮನ ಮಾಪಕ.

push factors: ಅಪಕರ್ಷಕ ಅಂಶಗಳು. ತಳ್ಳುವ ಅಥವಾ ಹೊರದೂಡುವ ಅಂಶಗಳು.

push-pull migration hypothesis: ಅಪಕರ್ಷಕ ಆಕರ್ಷಕ ವಲಸೆ ಪ್ರಾಕ್‌ಕಲ್ಪನೆ.

pyramid: ಪಿರಾಮಿಡ್. ಪುರಾತನ ಈಜಿಪ್ಟ್‌ನಲ್ಲಿ ರಾಜನ ಸಮಾಧಿಗಾಗಿ ಕಟ್ಟಿದ ಸ್ಮಾರಕ ಕಟ್ಟಡ. ಪ್ರಪಂಚದ ಏಳು ಅದ್ಭುತಗಳಲ್ಲೊಂದು.

pyromancy: ಅಗ್ನಿಶಕುನ. ಬೆಂಕಿ ಉರಿಯುವುದನ್ನು ಗಮನಿಸುವುದರ ಮೂಲಕ ಭವಿಷ್ಯ ಹೇಳುವುದು.

pyromania: ದಹನೋನ್ಮಾದ.

Q

qeres: ಕ್ವೇರ್ಸ್. ಈಜಿಪ್ಟ್‌ನಲ್ಲಿ ಶವವನ್ನು ಕೆಡದಂತೆ ಸಂಸ್ಕರಿಸಿಡುವ ಪ್ರಕ್ರಿಯೆಗೆ ಮತ್ತು ಅದಕ್ಕೆ ಬಳಸುವ ಎಲ್ಲಾ ಸಾಮಾಗ್ರಿಗಳಿಗೆ ಒಂದು ಸಾಮಾನ್ಯ ಹೆಸರು.

quadratic mean: ವರ್ಗದ ಸಮೀಕರಣ ಸರಾಸರಿ.

quadripad: ನಾಲ್ಕು ಕಾಲಿನ; ಚತುಷ್ಪಾದದ.

quadruple alliance: ನಾಲ್ವರ ಮೈತ್ರಿ; ನಾಲ್ಕು ಪಕ್ಷಗಳನ್ನೊಳಗೊಂಡ ಮೈತ್ರಿ ಕೂಟ. ೧೮೧೫ರ ವಿಯೆನ್ನಾ ಕಾಂಗ್ರೆಸ್ಸಿನ ನಂತರ ಅಸ್ತಿತ್ವಕ್ಕೆ ಬಂದ ಅಂತಾರಾಷ್ಟ್ರೀಯ ಸಂಸ್ಥೆ ಅಥವಾ ಮೈತ್ರಿಕೂಟ. ಯುರೋಪಿನ ಪ್ರಮುಖ ಶಕ್ತಿಗಳಾದ ಆಸ್ಟ್ರಿಯಾ, ಬ್ರಿಟನ್, ಪ್ರಷ್ಯಾ ಮತ್ತು ರಷ್ಯಾ ಈ ಮೈತ್ರಿ ಕೂಟವನ್ನು ರಚಿಸಿಕೊಂಡವು.

qualified acceptance: ಷರತ್ತು ಸಹಿತ ವಾದ ಒಪ್ಪಿಗೆ.

qualified candidate: ಅರ್ಹ ಉಮೇದುವಾರ; ಅರ್ಹ ಅಭ್ಯರ್ಥಿ.

qualified report: ಆಕ್ಷೇಪಸಹಿತ ವರದಿ; ಪರಿಶೀಲಿತ ವರದಿ.

qualitative analysis: ಗುಣಲಕ್ಷಣ ವಿಶ್ಲೇಷಣೆ.

qualitative change: ಗುಣಲಕ್ಷಣ ಬದಲಾವಣೆ.

qualitative data: ಗುಣಲಕ್ಷಣ ದತ್ತಾಂಶಗಳು (ಮಾಹಿತಿಗಳು). ಸಂಖ್ಯಾತ್ಮಕ ರೂಪದಲ್ಲಿ ಸಂಗ್ರಹಿಸಲು ಅಸಾಧ್ಯವಾದ ಒಳ್ಳೆಯತನ, ಪ್ರೀತಿ, ಸ್ನೇಹ ಮುಂತಾದ ಸಂಗತಿಗಳ ಕುರಿತಾದ ದತ್ತಾಂಶಗಳು.

qualitative difference: ಗುಣಲಕ್ಷಣ ವ್ಯತ್ಯಾಸ. ಉತ್ಪಾದಿತ ವಸ್ತುಗಳ ಗುಣಮಟ್ಟದಲ್ಲಿ ಕಂಡುಬರುವ ವ್ಯತ್ಯಾಸ.

qualitative disarmament: ಗುಣಾವಲಂಬಿ ನಿಶ್ಶಸ್ತ್ರೀಕರಣ. ಶಸ್ತ್ರಾಸ್ತ್ರ ಸ್ಪರ್ಧೆಯನ್ನು ಕೊನೆಗಾಣಿಸಲು ಕೆಲವು ವಿಶೇಷ ರೀತಿಯ ಯುದ್ಧಾಯುಧಗಳನ್ನು ನಿಷೇಧಿಸುವುದು, ಮಿತಗೊಳಿಸುವುದು ಅಥವಾ ನಿರ್ಮೂಲನೆ ಮಾಡುವುದು. ಉದಾ: ಅಣುಬಾಂಬುಗಳನ್ನು ನಿಷ್ಪ್ರಯೋಜನಗೊಳಿಸುವುದು.

qualitative study: ಗುಣಲಕ್ಷಣ ಅಧ್ಯಯನ.

qualitative variable: ಗುಣಲಕ್ಷಣ ಪರಿವರ್ತಕ.

quality co-existence: ಗುಣ ಸಹವಾಸ; ಗುಣ ಸಹಭಾವ.

quality control drive: ಗುಣಮಟ್ಟ ನಿಯಂತ್ರಣ ಪ್ರೇರಣೆ.

quality of memory: ಸ್ಮೃತಿ ಗುಣ.

quality of personality: ವ್ಯಕ್ತಿತ್ವದ ಗುಣ.

quality of sensation: ಸಂವೇದನ ಗುಣ.

quantification: ಸಂಖ್ಯಾಮಾನ; ಸಂಖ್ಯಾ ಪರಿಮಾಣ.

quantification of mental process: ಮನೋಪ್ರಕ್ರಿಯೆಯ ಸಂಖ್ಯಾಮಾನ.

quantitative analysis: ಪರಿಮಾಣಾತ್ಮಕ ವಿಶ್ಲೇಷಣೆ.

quantitative assessment: ಸಂಖ್ಯಾತ್ಮಕ ಮೌಲ್ಯಮಾಪನ; ಪಾರಿಮಾಣಿಕ ಮೌಲ್ಯಮಾಪನ.

quantitative correlation: ಪರಿಮಾಣಾತ್ಮಕ ಸಹ ಸಂಬಂಧ.

quantitative data: ಸಂಖ್ಯಾತ್ಮಕ ದತ್ತಾಂಶಗಳು; ಪರಿಮಾಣಾತ್ಮಕ ಮಾಹಿತಿಗಳು.

quantitative difference: ಪರಿಮಾಣಾತ್ಮಕ ಭೇದ.

quantitative disarmament: ಪರಿಮಾಣಾತ್ಮಕ ನಿಶ್ಯಸ್ತ್ರೀಕರಣ. ಶಸ್ತ್ರಾಸ್ತ್ರ ಸ್ಪರ್ಧೆಯನ್ನು ಕೊನೆಗಾಣಿಸಲು ಎಲ್ಲಾ ರೀತಿಯ ಯುದ್ಧಾಯುಧಗಳನ್ನು ಸಾರ್ವತ್ರಿಕವಾಗಿ ಕಡಿಮೆ ಮಾಡುವುದು.

quantitative gradation: ಪರಿಮಾಣಾತ್ಮಕ ಶ್ರೇಣೀಕರಣ.

quantitative measurement: ಪರಿಮಾಣಾತ್ಮಕ ಮಾಪನ.

quantitative restriction: ಪರಿಮಾಣಾತ್ಮಕ ನಿಬಂಧನೆ.

quantitative theory: ಪರಿಮಾಣಾತ್ಮಕ ಸಿದ್ಧಾಂತ. ಅಂತಾರಾಷ್ಟ್ರೀಯ ಸಂಬಂಧಗಳ ಅಧ್ಯಯನ ವಿಧಾನಗಳಲ್ಲೊಂದು.

quantitative variable: ಸಂಖ್ಯಾತ್ಮಕ ಪರಿವರ್ತಕ; ಪರಿಮಾಣಾತ್ಮಕ ಪರಿವರ್ತಕ.

quantity theory of money: ಹಣದ ಪರಿಮಾಣ ಸಿದ್ಧಾಂತ. ಹಣದ ಪೂರೈಕೆಯ ಪ್ರಮಾಣದಲ್ಲಿನ ಬದಲಾವಣೆಯು ಬೆಲೆ ಗಳ ಮೇಲೆ ನೇರ ಪ್ರಭಾವವನ್ನು ಬೀರುತ್ತದೆ ಎಂಬ ಸಿದ್ಧಾಂತ.

quarantine: ಸಂಪರ್ಕ ನಿಷೇಧ.

quartile deviation: ಚತುರ್ಥಕ ವ್ಯತಿಕಲನ.

quasi conscience: ಅರೆ (ಅರ್ಧ) ಪ್ರಜ್ಞೆ.

quasi federation: ಅರೆ ಒಕ್ಕೂಟ. ಅರೆ ಸಂಯುಕ್ತ ವ್ಯವಸ್ಥೆ. ಭಾರತವು ಸಂಯುಕ್ತ ಒಕ್ಕೂಟ ರಾಜ್ಯವಾಗಿದ್ದರೂ ಕೂಡ ಹೆಚ್ಚಿನ ಅಧಿಕಾರವು ಕೇಂದ್ರ ಸರಕಾರದ ಕೈಯಲ್ಲಿದೆ ಮತ್ತು ಭಾರತದ ಸಂವಿಧಾನವು ಸಂಯುಕ್ತ ಪದ್ಧತಿಗೆ ವಿರುದ್ಧವಾದ ಅನೇಕ ತತ್ವಗಳನ್ನು ಅಳವಡಿಸಿದೆ. ಆದ್ದರಿಂದ ಭಾರತ ಅರೆ ಒಕ್ಕೂಟ ಪದ್ಧತಿಯನ್ನು ಹೊಂದಿದೆ ಎನ್ನಲಾಗಿದೆ.

quasi group: ಅರೆ ಸಮೂಹ; ಅಸಂಘಟಿತ ಜನಸಮೂಹ; ಅರೆ ಗುಂಪು. ಸಮೂಹವಾಗಿ ರೂಪುಗೊಳ್ಳುವ ಶಕ್ತಿ ಹೊಂದಿರುವ ಗುಂಪು. ಜನಮಂದೆ, ಸಾರ್ವಜನಿಕ ಮೇಳ, ಜಾತ್ರೆ ಇತ್ಯಾದಿ ಅಸಂಘಟಿತವಾಗಿ ಹಾಗೂ ಅರಚಿತವಾಗಿ ಒಗ್ಗೂಡಿದ ಗುಂಪು.

quasi household: ಅರೆ ಕುಟುಂಬ. ಕುಟುಂಬವಾಗುವ ಸಾಧ್ಯತೆ ಹೊಂದಿರುವ, ಆದರೆ ಕುಟುಂಬವಾಗಿರದ ಸಮೂಹ.

quasi judicial: ಅರೆ ನ್ಯಾಯಿಕ.

quasi mental phenomena: ಅರೆ ಮಾನಸಿಕ ವಿದ್ಯಮಾನ.

quasi-public good: ಅರೆ ಸಾಮಾಜಿಕ ಸರಕು.

quasi- rent: ಅರೆ ಗೇಣಿ. ಭೂಮಿಯನ್ನು ಹೊರತುಪಡಿಸಿ ಇತರ ಬಂಡವಾಳಗಳಿಗೆ ಅಲ್ಪಾವಧಿ ಕಾಲಕ್ಕೆ ಬರುವ ಪ್ರತಿಫಲ.

queen's proclamation: ರಾಣಿಯ ಜಾಹೀರು ಘೋಷಣೆ.

quest motif: ಅನ್ವೇಷಣಾ ಆಶಯ.

question hour: ಪ್ರಶ್ನೋತ್ತರ ವೇಳೆ, ಪ್ರಶ್ನೋತ್ತರ ಸಮಯ. ಕೇಂದ್ರ ಅಥವಾ ರಾಜ್ಯ ಶಾಸಕಾಂಗದ ಸದನಗಳಲ್ಲಿ ಶಾಸಕಾಂಗದ ಸದಸ್ಯರಿಗೆ ಸರಕಾರವನ್ನು ಪ್ರಶ್ನಿಸಲು ನಿಗದಿಗೊಳಿಸಿದ ಸಮಯ. ಅಂತಹ ಸಂದರ್ಭದಲ್ಲಿ ಸರಕಾರದ ಕಾರ್ಯಚಟುವಟಿಕೆ, ಅದರ ಕಾರ್ಯವೈಫಲ್ಯ ಇವುಗಳನ್ನು ಪ್ರಶ್ನಿಸುವ ಅಧಿಕಾರ ಸದಸ್ಯರಿಗಿದೆ.

question of law: ಕಾನೂನು ಸಂಬಂಧಿ ಪ್ರಶ್ನೆ.
questionnaire: ಪ್ರಶ್ನಾವಳಿ.
questionnaire method : ಪ್ರಶ್ನಾವಳಿ ವಿಧಾನ.
quiescence: ನಿಶ್ಚಲತೆ; ಶಾಂತಸ್ಥಿತಿ.
Quit India Movement: ಭಾರತ ಬಿಟ್ಟು ತೊಲಗಿ ಚಳವಳಿ; ಚಲೇಜಾವ್ ಚಳವಳಿ. ಈ ಚಳವಳಿಯನ್ನು ಆಗಸ್ಟ್ ೯, ೧೯೪೨ ರಂದು ಮಹಾತ್ಮಾಗಾಂಧೀಜಿಯವರು ಆರಂಭಿಸಿದರು.
quorum: ನಿರ್ದಿಷ್ಟ ಹಾಜರಿ; ಕೋರಮ್. ವ್ಯವಸ್ಥಿತ ಸಭೆ ಅಥವಾ ಸಂಘ ಸಂಸ್ಥೆಗಳಲ್ಲಿ (ವಿಧಾನ ಮಂಡಲ, ಸಂಸತ್ತು) ವಿಧಿಬದ್ಧವಾದ ನಿರ್ಣಯಗಳನ್ನು ತೆಗೆದುಕೊಳ್ಳಲು ಅವಶ್ಯವಿರುವ ನಿರ್ದಿಷ್ಟ ಸಂಖ್ಯೆಯ ಸದಸ್ಯರ ಹಾಜರಿ.
quota: ನಿಗದಿತ ಪ್ರಮಾಣ; ದೇಯಾಂಶ. ಸರಕಾರವು ಕೆಲವು ವಸ್ತುಗಳ ಆಮದು, ರಫ್ತು ಹಾಗೂ ಸಾರ್ವಜನಿಕ ವಿತರಣೆಗಾಗಿ ಹೇರುವ ಪರಿಮಾಣಾತ್ಮಕ ಮಿತಿ.
quota control: ನೋಡಿ: quota sample.
quota policy: ದೇಯಾಂಶ ಧೋರಣೆ (ನೀತಿ).
quota sample: ದೇಯಾಂಶ ಮಾದರಿ.
quotation : ದರಪಟ್ಟಿ
quo warranto: ಅಧಿಕಾರ ಲೇಖ. ಅನಧಿಕೃತವಾಗಿ ಅಧಿಕಾರ ಸ್ಥಾನವನ್ನು ಆಕ್ರಮಿಸಲೆತ್ನಿಸುವ ವ್ಯಕ್ತಿಯನ್ನು ತಡೆಗಟ್ಟುವುದಕ್ಕಾಗಿ ನ್ಯಾಯಾಲಯ ನೀಡುವ ಆಜ್ಞೆ. ಯಾವ ಅಧಿಕಾರದ ಆಧಾರದ ಮೇಲೆ ಅಧಿಕಾರ ಸ್ಥಾನವನ್ನು ವಹಿಸಿಕೊಳ್ಳುತ್ತಿರುವೆ ಎಂಬುದನ್ನು ಸಮರ್ಥಿಸಿಕೊಳ್ಳಲು ಕರೆ ನೀಡುವ ಆಜ್ಞೆ.

R

ra: ರಾ; ಸೂರ್ಯದೇವ. ಪುರಾತನ ಈಜಿಪ್ಟ್‌ನಲ್ಲಿ ಈ ದೇವತೆಯನ್ನು ದೇವತೆಗಳ ರಾಜನೆಂದು ಘೋಷಿಸ ಲಾಗಿತ್ತು.
race: ಜನಾಂಗ.
race awareness: ಜನಾಂಗೀಯ ಪ್ರಜ್ಞೆ.
race consciousness: ನೋಡಿ: race awareness.
race differences: ನೋಡಿ: racial differences.
race mixture: ಜನಾಂಗ ಸಂಕರ.
race prejudice: ಜನಾಂಗ ಪೂರ್ವಾಗ್ರಹ.
race relation: ಜನಾಂಗ ಸಂಬಂಧ.
racial ability: ಜನಾಂಗದ ಶಕ್ತಿ (ಸಾಮರ್ಥ್ಯ).
racial anthropology: ಜನಾಂಗೀಯ ಮಾನವಶಾಸ್ತ್ರ. ಮಾನವ ಜೀವಿಗಳಲ್ಲಿ ಕಂಡುಬರುವ ವಿಭಿನ್ನ ಪಂಗಡಗಳ ಉಗಮದ ಮತ್ತು ಅವುಗಳ ನಡುವಿನ ಸಂಬಂಧದ ಅಧ್ಯಯನ.
racial antipathy: ಜನಾಂಗೀಯ ವಿದ್ವೇಷ. ಜನಾಂಗಗಳ ಮಧ್ಯೆ ಅವರಲ್ಲಿರುವ ಜನಾಂಗಿಕ ವ್ಯತ್ಯಾಸಕ್ಕಾಗಿ ಉಂಟಾಗುವ ದ್ವೇಷ.
racial character: ಜನಾಂಗದ ವೈಶಿಷ್ಟ್ಯ.
racial competition: ಜನಾಂಗೀಯ ಸ್ಪರ್ಧೆ.

racial conflit: ಜನಾಂಗೀಯ ಘರ್ಷಣೆ.

racial determinism: ಜನಾಂಗೀಯ ನಿಯತಿವಾದ.

racial differences: ಜನಾಂಗೀಯ ವ್ಯತ್ಯಾಸಗಳು; ಜನಾಂಗೀಯ ಭೇದಗಳು.

racial distinction: ಜನಾಂಗೀಯ ತಾರತಮ್ಯ.

raical equality: ಜನಾಂಗೀಯ ಸಮತೆ.

racial homogeneity: ಜನಾಂಗೀಯ ಏಕರೂಪತೆ.

racial likeness: ಜನಾಂಗೀಯ ಸಾಮ್ಯತೆ.

racial memory: ಜನಾಂಗೀಯ ಸ್ಮೃತಿ.

racial psychology: ಜನಾಂಗ ಮನೋ ವಿಜ್ಞಾನ.

racial quality : ಜನಾಂಗೀಯ ಗುಣ.

racial segregation: ಜನಾಂಗ ಪ್ರತ್ಯೇಕತೆ.

racial superiority: ಜನಾಂಗ ಶ್ರೇಷ್ಠತೆ; ಜನಾಂಗೀಯ ಮೇಲರಿಮೆ.

racial unconsciousness: ಜನಾಂಗೀಯ ಅಪ್ರಜ್ಞೆ.

racial visibility: ಜನಾಂಗಿಕ ಗೋಚರತೆ.

racialism: ಜನಾಂಗವಾದ.

raciation: ಜನಾಂಗೀಯತೆ. ಜನಾಂಗೀಯ ಪಂಗಡಗಳಾಗಿ ವಿಭಾಗ ಮಾಡುವುದು.

raciology: ಜನಾಂಗಶಾಸ್ತ್ರ. ಮಾನವ ಜನಾಂಗಗಳ ಅಧ್ಯಯನ.

racism: ಜನಾಂಗ ಶ್ರೇಷ್ಟವಾದ; ಜನಾಂಗೀಯತೆ. ಮಾನವ ಜನಾಂಗಗಳ ಮಧ್ಯೆ ಶಾರೀರಿಕ ಮತ್ತು ಬೌದ್ಧಿಕ ವ್ಯತ್ಯಾಸಗಳಿರುತ್ತವೆ ಎಂಬ ಕಲ್ಪನೆಯನ್ನು ಆಧಾರವಾಗಿರಿಸಿಕೊಂಡು ಜನಾಂಗ ಶ್ರೇಷ್ಟವಾದಿಗಳು ತಮ್ಮ ದೇಶಗಳ ಒಳಗೆ ಜನಾಂಗೀಯ ಮತ್ತು ರಾಷ್ಟ್ರೀಯ ತಾರತಮ್ಯವನ್ನೂ, ಇತರ ದೇಶಗಳ ಆಕ್ರಮಣ ಮತ್ತು ಸೂರೆಯನ್ನೂ ಸಮರ್ಥಿಸಿಕೊಳ್ಳುವ ತತ್ವ.

racket : ಮೋಸವಿದ್ಯೆ; ಜಾಲ; ಕೂಟ.

radical individualism: ತೀವ್ರ ವ್ಯಕ್ತಿತ್ವವಾದ; ತೀವ್ರ ವ್ಯಕ್ತಿವಾದ.

radical socialism: ತೀವ್ರ ಸಮತಾವಾದ.

radical party: ತೀವ್ರಗಾಮಿ ಪಕ್ಷ.

radicalism: ಮೂಲಭೂತ ಪರಿವರ್ತನವಾದ; ತೀವ್ರ ಸುಧಾರಣಾ ವಾದ.

radicals: ತೀವ್ರಗಾಮಿಗಳು.

radioactive dating: ವಿಕಿರಣ ಆಧಾರಿತ ಕಾಲನಿರ್ಧಾರ. ಅಣುವಿಕಿರಣ ವಸ್ತುಗಳ ಕುಸಿತದ ಸ್ಥಿರ ದರದ ವಿಶ್ಲೇಷಣೆಯ ಮೂಲಕ ಬಂಡೆ ಮತ್ತು ಇತರ ವಸ್ತುಗಳ ವಯಸ್ಸನ್ನು ನಿರ್ಧರಿಸುವುದು.

radiocarbon dating: ಅಣು ಇಂಗಾಲದಿಂದ ವಯೋನಿರ್ಣಯ. ಅಣು ಇಂಗಾಲ ಪದ್ಧತಿಯಂತೆ ಕಾಲಮಾನ ನಿರ್ಧಾರ ಮಾಡುವುದು.

raiyatwari system: ರೈತವಾರಿ ಪದ್ಧತಿ. ಜಮೀನುದಾರರಂತಹ ಮಧ್ಯವರ್ತಿ ಗಳಿಲ್ಲದೆ ರೈತರಿಗೂ ಸರಕಾರಕ್ಕೂ ನೇರ ಸಂಬಂಧವಿರುವ ಕಂದಾಯ ಪದ್ಧತಿ.

rajasuya: ರಾಜಸೂಯ. ಚಕ್ರವರ್ತಿಗಳು ಮಾಡುತ್ತಿದ್ದ ವಿಶೇಷ ಯಜ್ಞ.

ranaka: ಊಳಿಗಮಾನ್ಯ ದೊರೆ.

random group: ಯಾದೃಚ್ಛಿಕ ಸಮೂಹ.

random mating: ಇಚ್ಛಿತ ಆಯ್ಕೆ. ತನ್ನಿಷ್ಟದ ಸಂಗಾತಿಯ ಆಯ್ಕೆಯ ಅವಕಾಶವುಳ್ಳ ಮುಕ್ತವಿಧಾನ.

random movement: ಯಾದೃಚ್ಛಿಕ ಚಲನೆ; ಅಡ್ಡಾದಿಡ್ಡಿ ಚಲನೆ.

random sample: ಯಾದೃಚ್ಛಿಕ ಮಾದರಿ.

randomness: ಯಾದೃಚ್ಛಿಕತೆ.

rank: ಶ್ರೇಣಿ; ಅಂತಸ್ತು.

rank classification: ಸ್ಥಾನ ವರ್ಗೀಕರಣ.

rank difference correlation: ಪದ ವಿಭೇದ ಸಹಸಂಬಂಧ.

rank difference method: ಶ್ರೇಣಿ ಭೇದ ವಿಧಾನ.

rank order scale: ನೋಡಿ: ordinal scale.

rank status: ಶ್ರೇಣಿ ಸ್ಥಾನಮಾನ.

ranking method: ಶ್ರೇಣ್ಯಂಕನ ವಿಧಾನ.

rapport: ವಿಶ್ವಾಸ ಸಂಬಂಧ; ಆತ್ಮೀಯತೆ.

rapture: ಭಾವಾವೇಶ; ಪರವಶತೆ; ಪರಮಾನಂದ.

rare impulse: ಅಸಾಮಾನ್ಯ ಆವೇಗ.

rate of change: ಬದಲಾವಣೆಯ ಪ್ರಮಾಣ.

rate of exchange: ವಿನಿಮಯ ದರ.

rate of interest: ಬಡ್ಡಿಯ ದರ.

rate of return: ಪ್ರತಿಫಲದ ದರ.

rate of social change: ಸಾಮಾಜಿಕ ಪರಿವರ್ತನೆಯ ಗತಿ (ದರ).

rate of substitution: ಪ್ರತಿನಿದಾನ ದರ.

rate of technical substitution: ತಾಂತ್ರಿಕ ಪ್ರತಿನಿದಾನ ದರ.

ratification: ಅನುಮೋದನೆ; ದೃಢೀಕರಣ. ಯಾವುದೇ ಪ್ರಮುಖ ತೀರ್ಮಾನ ಕೈಗೊಳ್ಳಬೇಕಾದ ಸಂಸತ್ತು ಅಥವಾ ಕಾರ್ಯಾಂಗ ಪ್ರಮುಖನು ಪಡೆದುಕೊಳ್ಳಬೇಕಾದ ಅನುಮೋದನೆ ಅಥವಾ ಮನ್ನಣೆ.

ratification of the constitution: ಸಂವಿಧಾನ ಸ್ಥಿರೀಕರಣ (ಅನುಮೋದನೆ). ಸಂವಿಧಾನದ ಊರ್ಜಿತಗೊಳಿಸುವಿಕೆ.

rating: ದರ ನಿರ್ಧಾರ.

rating scale: ತುಲಾ ಮಾನದಂಡ; ದರ ನಿಶ್ಚಯನ ಪ್ರಣಾಲಿ.

ratio: ಅನುಪಾತ; ಪ್ರಮಾಣ.

ratio analysis: ಅನುಪಾತ ವಿಶ್ಲೇಷಣೆ. ವೆಚ್ಚ ನಿಯಂತ್ರಣದ ವಿಧಾನಗಳಲ್ಲೊಂದು. ಇನ್ನೊಂದು ನೋಡಿ: value analysis.

ratio question: ಅನುಪಾತಿಕ ಪ್ರಶ್ನೆ.

rational authority: ವಿವೇಚನಾತ್ಮಕ ಅಧಿಕಾರ.

rational behaviour: ತರ್ಕ ಸಮ್ಮತ ವರ್ತನೆ; ವೈಚಾರಿಕ ವರ್ತನೆ; ವಿವೇಚನಾಯುಕ್ತ ವರ್ತನೆ.

rational learning: ವಿವೇಚನಾತ್ಮಕ ಕಲಿಕೆ.

rational-legal authority: ವಿವೇಚನಾತ್ಮಕ ಶಾಸನೀಯ ಅಧಿಕಾರ.

rational memory: ವಿವೇಚನಾತ್ಮಕ ಸ್ಮೃತಿ.

rational order: ತಾರ್ಕಿಕ ಕ್ರಮ; ಸುವಿಚಾರದ ಕ್ರಮ.

rational psychology: ವಿವೇಚನಾತ್ಮಕ ಮನೋವಿಜ್ಞಾನ.

rational trend: ತಾರ್ಕಿಕ ಧೋರಣೆ; ಸುವಿಚಾರದ ಒಲವು.

rational uniformity: ವೈಚಾರಿಕ ಏಕರೂಪತೆ.

rationalism: ವೈಚಾರಿಕವಾದ; ವಿಚಾರವಾದ; ತರ್ಕಪಾರಮ್ಯವಾದ.

rationalist: ವಿಚಾರವಾದಿ.

rationalist radicalism: ವಿಚಾರವಾದೀ ತೀವ್ರವಾದ.

rationalistic authority: ನೋಡಿ: legal authority.

rationalization: ಯುಕ್ತಿಪೂರ್ವಕ ವಿವರಣೆ; ಯುಕ್ತಿಪೂರ್ವಕ ಸಮರ್ಥನೆ. ತಾನು ಮಾಡಿದ್ದು ಅದು ತಪ್ಪೇ ಆಗಿದ್ದರೂ ಸಮರ್ಥಿಸಿಕೊಂಡು, ಅದಕ್ಕೆ ಏನಾದರೊಂದು ತರ್ಕಬದ್ಧವಾದ ಕಾರಣವನ್ನು ಸೂಚಿಸುವ ಒಂದು ಮನೋರಕ್ಷಣಾ ತಂತ್ರ.

rationing: ಪಡಿತರ ವ್ಯವಸ್ಥೆ.

rationing of foreign exchange: ವಿದೇಶೀ ವಿನಿಮಯದ ಪಡಿತರ ವ್ಯವಸ್ಥೆ. ವಿದೇಶೀ ಮಾರಾಟ ಮತ್ತು ಕೊಳ್ಳುವಿಕೆಯನ್ನು ನಿರ್ಬಂಧಿಸುವುದು.

raw-material: ಕಚ್ಚಾ ಸರಕು.

raw score: ಕಚ್ಚಾ ಪ್ರಾಪ್ತಾಂಕ; ಮೂಲ ಪ್ರಾಪ್ತಾಂಕ.

reaction: ಪ್ರತಿಕ್ರಿಯೆ.

reaction formation: ಪ್ರತಿಕ್ರಿಯಾ ರೂಪಣ. ಮನಸ್ಸಿನಲ್ಲಿರುವುದಕ್ಕೆ ವಿರುದ್ಧವಾದ ವರ್ತನೆಗಳನ್ನು ತೋರುವ ಒಂದು ಮನೋರಕ್ಷಣಾ ತಂತ್ರ.

reaction time: ಪ್ರತಿಕ್ರಿಯಾ ಕಾಲ.

reaction time apparatus: ಪ್ರತಿಕ್ರಿಯಾ ಕಾಲದ ಪ್ರಯೋಗ ಪರಿಕರ.

reaction time experiment: ಪ್ರತಿಕ್ರಿಯಾ ಕಾಲದ ಪ್ರಯೋಗ.

reactive depression: ಪ್ರತಿಕ್ರಿಯಾತ್ಮಕ ವಿಷಣ್ಣತೆ.

reactive inhibition: ಪ್ರತಿಕ್ರಿಯಾತ್ಮಕ ಹಿಂಜರಿಕೆ; ಪ್ರತಿಕ್ರಿಯಾತ್ಮಕ ಪ್ರತಿಬಂಧ.

reactive schizophrenia: ಪ್ರತಿಕ್ರಿಯಾತ್ಮಕ ಮನೋವಿದಳನ.

reactive tendency: ಪ್ರತಿಕ್ರಿಯಾತ್ಮಕ ಪ್ರವೃತ್ತಿ.

readiness: ಸಿದ್ಧ ಸ್ಥಿತಿ; ಸಿದ್ಧತೆ.

ready design: ಸಿದ್ಧ ವಿನ್ಯಾಸ.

real balance effect: ನೈಜ ಶಿಲ್ಕು ಪರಿಣಾಮ. ನೋಡಿ: pigou effect theory

real burden: ನೈಜ ಹೊರೆ. ತೆರಿಗೆಗಳನ್ನು ವಿಧಿಸುವುದರ ಪರಿಣಾಮವಾಗಿ ಪ್ರಜೆಗಳ ಮೇಲಾಗುವ ಹೊರೆ.

real cost: ನೈಜ ವೆಚ್ಚ. ಉತ್ಪಾದನಾ ವೆಚ್ಚವನ್ನು ದೈಹಿಕ ಮತ್ತು ಬೌದ್ಧಿಕ ಶ್ರಮ, ತೊಂದರೆ, ತ್ಯಾಗ, ಅನನುಕೂಲತೆ ಮೊದಲಾದವುಗಳ ರೂಪದಲ್ಲಿ ವ್ಯಕ್ತಪಡಿಸಿದಾಗ ಅದು ನೈಜವೆಚ್ಚವೆಂದು ಕರೆಯಲ್ಪಡುತ್ತದೆ.

real executive: ವಾಸ್ತವಿಕ ಕಾರ್ಯಾಂಗ; ನೈಜ ಕಾರ್ಯಾಂಗ. ಸಂಸದೀಯ ಸರಕಾರ ಪದ್ಧತಿಯಲ್ಲಿರುವ ಕಾರ್ಯಾಂಗದ ಒಂದು ವಿಧ. ಉದಾ: ಭಾರತ ಮತ್ತು ಇಂಗ್ಲೆಂಡ್‌ನಲ್ಲಿ ಮಂತ್ರಿ ಮಂಡಲವು ಹೆಚ್ಚು ಪ್ರಭಾವಶಾಲಿಯಾಗಿದ್ದು ಎಲ್ಲಾ ಪ್ರಮುಖ ಅಧಿಕಾರಗಳನ್ನು ಹೊಂದಿರುವುದರಿಂದ ಅದನ್ನು ವಾಸ್ತವಿಕ ಕಾರ್ಯಾಂಗ ಎಂದು ಕರೆಯಲಾಗುವುದು.

real head: ಕಾರ್ಯತಃ ಮುಖ್ಯಸ್ಥ; ವಾಸ್ತವಿಕ ಮುಖ್ಯಸ್ಥ. ಸಂಸದೀಯ ಸರಕಾರ ಪದ್ಧತಿಯಲ್ಲಿ ಪ್ರಧಾನಿಯು ವಾಸ್ತವ ಮುಖ್ಯಸ್ಥನಾಗಿರುತ್ತಾನೆ. ಅವನು ರಾಷ್ಟ್ರಪತಿ ಅಥವಾ ಅರಸನಿಗಿಂತ ಹೆಚ್ಚು ಅಧಿಕಾರವನ್ನು ಹೊಂದಿದ್ದು ಹೆಚ್ಚು ಪ್ರಭಾವಶಾಲಿಯಾಗಿರುತ್ತಾನೆ.

real income: ನೈಜ ಆದಾಯ (ವರಮಾನ). ಆದಾಯವನ್ನು ರೂಪಾಯಿಯ ಕೊಳ್ಳುವ ಶಕ್ತಿಯ ಮೂಲಕ ವ್ಯಕ್ತಪಡಿಸಿದರೆ ಅದು ನೈಜ ಆದಾಯವೆನಿಸುತ್ತದೆ. ಉದಾ: ವಸ್ತುಗಳ ಬೆಲೆಯ ಬದಲಾವಣೆಯಿಂದ ನೈಜ ಆದಾಯದಲ್ಲಿ ಬದಲಾವಣೆಯುಂಟಾಗುತ್ತದೆ.

real income effect: ನೈಜ ಆದಾಯ (ವರಮಾನ) ಪರಿಣಾಮ. ವ್ಯಕ್ತಿಯ ವರಮಾನವು ಸ್ಥಿರವಾಗಿದ್ದು, ವಸ್ತುಗಳ ಬೆಲೆಯಲ್ಲಿ ಬದಲಾವಣೆಯಾಗುವುದರಿಂದ ಅನುಭೋಗದ ಪ್ರಮಾಣದ ಮೇಲೆ ಉಂಟಾಗುವ ಪರಿಣಾಮ.

real per capita income: ನೈಜ ತಲಾ ಆದಾಯ.

real theory of interest: ನೈಜ ಬಡ್ಡಿ ಸಿದ್ಧಾಂತ.

real wage: ನೈಜ ಕೂಲಿ; ವಸ್ತುರೂಪಿ ಕೂಲಿ. ಹಣರೂಪಿಯಿಂದಕೊಳ್ಳಬಹುದಾದ ವಸ್ತುಗಳ ಮತ್ತು ಸೇವೆಗಳ ಪ್ರಮಾಣ.

real will: ನೈಜ ಇಚ್ಛೆ; ವಾಸ್ತವಿಕ ಇಚ್ಛೆ.

realised growth rate: ಸಾಧಿತ ಬೆಳವಣಿಗೆ ದರ.

realism: ವಸ್ತು ಸ್ಥಿತಿವಾದ; ವಾಸ್ತವ ವಾದ.

realistic approach: ವಾಸ್ತವಿಕ ಸಮೀಪನ.

realistic attitude: ಕ್ರಿಯಾನುಭವ ಜನ್ಯ ಮನೋವೃತ್ತಿ; ವಾಸ್ತವಿಕ ಮನೋವೃತ್ತಿ.

realistic tale: ವಾಸ್ತವಿಕ ಕತೆ.

reality evasion: ವಾಸ್ತವಿಕತೆಯಿಂದ ಪಲಾಯನ. ಬದುಕಿನಲ್ಲಿ ಅಸಮಾಧಾನವನ್ನುಂಟು ಮಾಡುವ ಸನ್ನಿವೇಶಗಳಿಂದ ಪರೋಕ್ಷವಾಗಿ ತಪ್ಪಿಸಿಕೊಳ್ಳುವಿಕೆ.

reality principle: ವಾಸ್ತವಿಕತೆಯ ಸೂತ್ರ; ಅಹಂನ ಪ್ರೇರಣಾ ಸೂತ್ರ. ಈ ಸೂತ್ರ ಹೊರಪ್ರಪಂಚದ ವಾಸ್ತವಿಕತೆ ಮತ್ತು ನಿರ್ದೇಶನಗಳನ್ನು ಗಣನೆಗೆ ತೆಗೆದುಕೊಳ್ಳುತ್ತದೆ.

reality testing: ವಾಸ್ತವತಾ ಪರೀಕ್ಷಣ; ನೈಜತೆ ಪರೀಕ್ಷಣ.

reality theory: ವಾಸ್ತವಿಕ ಸಿದ್ಧಾಂತ. ಯಾವುದೇ ಕಾರ್ಯಗಳನ್ನು ಕೈಗೊಳ್ಳುವಾಗ ರಾಷ್ಟ್ರೀಯ ಹಿತ ಪ್ರಮುಖವಾಗುತ್ತದೆ ಎಂಬ ಸಿದ್ಧಾಂತ.

realized growth rate: ಸಾಧಿತ ಬೆಳವಣಿಗೆ ದರ.

reappropriation of funds: ನಿಧಿಗಳ ಮರು ಹೊಂದಾಣಿಕೆ.

reason: ಬುದ್ಧಿ; ಕಾರಣ; ತರ್ಕ.

reasonable restriction: ಸಕಾರಣ ನಿರ್ಬಂಧನೆ.

reasoning: ತಾರ್ಕಿಕತೆ; ವಿಚಾರವಂತಿಕೆ; ವಿವೇಚನೆ; ತರ್ಕ.

reasoning power: ವಿಚಾರ ಶಕ್ತಿ. ತಾರ್ಕಿಕ ಆಲೋಚನಾ ಪ್ರಕ್ರಿಯೆಯನ್ನು ನಡೆಸುವುದು.

reasoning test: ವಿಚಾರ ಪರೀಕ್ಷೆ; ವಿವೇಚನಾ ಶಕ್ತಿಯ ಪರೀಕ್ಷೆ.

rebellion: ದಂಗೆ.

recall: ಪುನಃಸ್ಮರಣೆ; ನೆನಪು ಮಾಡಿ ಕೊಳ್ಳುವುದು.

recall method: ಪುನಃ ಸ್ಮರಣಾ ವಿಧಾನ.

recalling: ಹಿಂಗರೆಯುವಿಕೆ. ಪ್ರತಿನಿಧಿ ಗಳನ್ನು ಹಿಂದಕ್ಕೆ ಕರೆಸಿಕೊಳ್ಳುವ ವ್ಯವಸ್ಥೆ. ಇದು ನೇರ ಪ್ರಜಾಪ್ರಭುತ್ವದ ಪ್ರಮುಖ ಸಾಧನಗಳಲ್ಲೊಂದು. ಇದರ ಪ್ರಕಾರ ಜನರಿಂದ ಆಯ್ಕೆಯಾದ ಜನಪ್ರತಿನಿಧಿಯು ಜನರ ಆಶೋತ್ತರಗಳಿಗೆ ಸ್ಪಂದಿಸದೇ ಇದ್ದಾಗ ಅವನ ಅಧಿಕಾರಾವಧಿ ಮುಗಿ ಯುವ ಮೊದಲೇ ಆತನನ್ನು ವಾಪಸ್ಸು ಕರೆಸಿ ಕೊಳ್ಳುವ ವಿಧಾನ.

recapitulation: ಪುನಃಸ್ಮರಣೆ.

recapitulation theory: ಪುನರ್ ಘಟನಾ ಸಿದ್ಧಾಂತ; ಪುನಃಸ್ಮರಣಾ ಸಿದ್ಧಾಂತ. ಜನಾಂಗೀಯ ಇತಿಹಾಸದ ಪ್ರಮುಖ ಹಂತ ಗಳು ವ್ಯಕ್ತಿಯ ಬೆಳವಣಿಗೆಯಲ್ಲಿ ಪುನಃ ಘಟಿ ಸುತ್ತವೆಂಬ ಸಿದ್ಧಾಂತ.

receptor: ಗ್ರಹಣಕೇಂದ್ರ; ಜ್ಞಾನೇಂದ್ರಿಯ.

recession: ಹಿಂಜರಿತ; ಹಿನ್ನಡೆ. ಆರ್ಥಿಕ ಆವರ್ತದಲ್ಲಿ ಒಂದು ಹಂತ. ವಿವಿಧ ಹಂತ ಗಳು : depression; revival or recovery; full employment; boom.

recessive character: ಗೌಣ ಗುಣ ಲಕ್ಷಣ; ಅಪ್ರಧಾನ ಗುಣಲಕ್ಷಣ.

recessive gene: ಗೌಣ ವಂಶವಾಹಿ; ಅಪ್ರಭಾವೀ ವಂಶವಾಹಿ; ಹಿಂಬೀಳುವ ವಂಶವಾಹಿ.

recessive trait: ಗೌಣ ಗುಣಲಕ್ಷಣ.

recidivism: ಅಪರಾಧ ವ್ಯಸನ.

recidivist criminal: ಪುನರಪರಾಧಿ. ಶಿಕ್ಷೆ ಅನುಭವಿಸಿದರೂ ತಿದ್ದಿಕೊಳ್ಳದೆ ಮೇಲಿಂದ ಮೇಲೆ ಅಪರಾಧ ಎಸಗುವಾತ.

reciprocal action: ಪೂರಕ ಕ್ರಿಯೆ. ಎರಡು ಅಥವಾ ಹೆಚ್ಚಿನ ಸಂಖ್ಯೆಯ ಪಾತ್ರ ಧಾರಿಗಳ ಕ್ರಿಯೆ ಪರಸ್ಪರ ಪೂರಕವಾಗಿರುವುದು.

reciprocal action and reaction: ಪರಸ್ಪರ ಕ್ರಿಯೆ ಮತ್ತು ಪ್ರತಿಕ್ರಿಯೆ.

reciprocal behaviour: ಪರಸ್ಪರ ವರ್ತನೆ.

reciprocal contact: ಪರಸ್ಪರ ಸಂಪರ್ಕ.

reciprocal demand: ಪಾರಸ್ಪರಿಕ ಬೇಡಿಕೆ.

reciprocal inhibition: ಪರಸ್ಪರ ಹಿಂಜರಿಕೆ; ಪರಸ್ಪರ ಪ್ರತಿಬಂಧ.

reciprocal inhibition psycho therapy: ಪರಸ್ಪರ ಅವಿರೋಧ ಚಿತ್ತ ಚಿಕಿತ್ಸೆ.

reciprocal roles: ಪೂರಕ ಪಾತ್ರಗಳು; ಅನ್ಯೋನ್ಯ ಪಾತ್ರಗಳು. ಎರಡು ಅಥವಾ

ಅದಕ್ಕಿಂತ ಹೆಚ್ಚಿನ ಸ್ಥಾನಮಾನಗಳಿಗೆ ಸಂಬಂಧಿಸಿದ ಸಾಮಾಜಿಕ ಪಾತ್ರಗಳ ನಡುವಿನ ಅಂತರ ಕ್ರಿಯೆಯ ಮಾದರಿ.

reciprocal tariff : ಪಾರಸ್ಪರಿಕ ಸುಂಕ.

reciprocal trade agreement: ಪಾರಸ್ಪರಿಕ ವ್ಯಾಪಾರ ಒಪ್ಪಂದ.

reciprocity: ಪರಸ್ಪರತೆ.

recommendation: ಶಿಫಾರಸ್ಸು.

reconditioned action: ಪುನರಾನುಬಂಧಿತ ಕ್ರಿಯೆ.

reconditioned response: ಪುನರಾನುಬಂಧಿತ ಪ್ರತಿಕ್ರಿಯೆ.

reconsideration: ಪುನರ್ ಪರಿಶೀಲನೆ; ಪುನಃ ಪರ್ಯಾಲೋಚನೆ.

reconstitution: ಪುನರ್ರಚನೆ; ಪುನಸ್ಸಂಯೋಜನೆ.

reconstruction: ಪುನರ್ರಚನೆ; ಪುನರ್ ನಿರ್ಮಾಣ.

reconversion: ಪರಾವರ್ತನೆ.

record of rights: ಹಕ್ಕುಗಳ ದಾಖಲೆ. ಕಂದಾಯ ಕಚೇರಿಗಳಲ್ಲಿಟ್ಟಿರುವ ಭೂಮಾಲಿಕತ್ವದ ಲಿಖಿತ ದಾಖಲೆ.

recording instrument: ಅಭಿಲೇಖನ ಉಪಕರಣ; ದಾಖಲಾತಿಯ ಸಾಧನ.

recording tambour: ದಾಖಲು ಪಟಹ; ದಾಖಲು ತಮಟೆ.

recovery: ಪುನಶ್ಚೇತನ; ಚೇತರಿಕೆ.

recovery of debt: ಸಾಲ ವಸೂಲಾತಿ.

recreation leadership: ಮನರಂಜನಾ ನೇತೃತ್ವ.

recreative riddle: ಮನರಂಜಕ ಒಗಟು.

recruitment: ನೇಮಕಾತಿ; ಸ್ಥಾನಭರ್ತಿ.

recruitment by promotion: ಭಡ್ತಿ ಮೂಲಕ ಸ್ಥಾನ ಭರ್ತಿ. ಒಂದು ಆಡಳಿತ ವ್ಯವಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರಿಗೆ ಭಡ್ತಿ ನೀಡಿ ಮೇಲಿನ ಹುದ್ದೆಗೆ ನೇಮಿಸುವುದು.

rectification: ಸರಿಪಡಿಸುವುದು.

rectifying the mistake: ತಪ್ಪನ್ನು ಸರಿಪಡಿಸುವುದು.

recurrent image: ಮತ್ತೆಮತ್ತೆ ಬರುವ ಬಿಂಬ; ಆವರ್ತಿ ಬಿಂಬ; ಮರುಕಳಿಸುವ ಬಿಂಬ.

recurrent psychosis: ಮತ್ತೆ ಮತ್ತೆ ತಲೆದೋರುವ ಮನೋವಿಕ್ಷಿಪ್ತಿ.

Red Army: ಕೆಂಪು ಸೈನ್ಯ. ಲೆನಿನ್‌ನ ಸಹೋದ್ಯೋಗಿ ಟ್ರಾಟ್ಸ್ಕಿ ಸಂಘಟಿಸಿದ ಕ್ರಾಂತಿಕಾರಿ ಹೋರಾಟ ಪಡೆಯನ್ನು ಕೆಂಪು ಸೈನ್ಯವೆಂದು ಕರೆಯಲಾಗುತ್ತಿತ್ತು.

Red Book: ಕೆಂಪು ಪುಸ್ತಕ. ಮಾವೋತ್ಸೆ ತುಂಗ್ ಮತ್ತು ಕಮ್ಯೂನಿಸ್ಟ್ ಚೀನಾದ ನಿರ್ಮಾಪಕರ ಬೋಧನೆಗಳನ್ನೊಳಗೊಂಡ ಪುಸ್ತಕ.

Red Indians: ಕೆಂಪು ಇಂಡಿಯನ್ನರು; ಅಮೇರಿಕಾದ ಮೂಲನಿವಾಸಿಗಳು. ಭಾರತವನ್ನು ಸಮುದ್ರ ಮಾರ್ಗವಾಗಿ ಹುಡುಕಲು ಹೊರಟ ಕೊಲಂಬಸನು ಅಮೇರಿಕ ಖಂಡಕ್ಕೆ ತಲುಪಿ ಅದನ್ನು ಭಾರತವೆಂದೇ ಭ್ರಮಿಸಿ ಅಲ್ಲಿನ ಕೆಂಪು ಮೂಲನಿವಾಸಿಗಳನ್ನು ರೆಡ್ ಇಂಡಿಯನ್ನರೆಂದು ಕರೆದನು.

red light area: ಕೆಂಪು ದೀಪದ ಪ್ರದೇಶ. ದೊಡ್ಡ ನಗರಗಳ ಯಾವುದಾದರೊಂದು

ಮೂಲೆಯಲ್ಲಿ ವೇಶ್ಯಾವಾಟಿಕೆಯ ದಂಧೆಯನ್ನು ನಡೆಸುವವರೇ ಇರುವ ಬಡಾವಣೆಗಳು.

red tapism: ಕೆಂಪುದಾರಿಕೆ; ಕೆಂಪು ಪಟ್ಟಿ; ವಿಳಂಬ ನೀತಿ. ಸರಕಾರಿ ಕಡತಗಳ ನಿಧಾನ ವಿಲೇವಾರಿ.

redeemable debt: ಮರುಪಾವತಿಯಾಗಬಲ್ಲ ಸಾಲ.

redemption charges: ಋಣ ವಿಮೋಚನಾ ವೆಚ್ಚಗಳು.

redemption date: ಮೋಚಕ ದಿನಾಂಕ.

redemption movement: ಹಿಮ್ಮುಖ ಚಳವಳಿ. ಇಂದಿನ ಪರಿಸ್ಥಿತಿಗಿಂತ ಉತ್ತಮವಾದುದೆಂದು ನಂಬಿದಂತಹ ಹಿಂದಿನ ಪರಿಸ್ಥಿತಿಗೆ ಹಿಂದಿರುಗಬೇಕೆಂಬ ಸಾಮಾಜಿಕ ಚಳುವಳಿ.

redintegration: ಅನುಭವ ಮಂಥನ. ಒಂದು ಅನುಭವದ ಮುಖೇನ ಅಂತಹುದೇ ಹಿಂದಿನ ಅನುಭವಗಳ ನೆನಪಿನ ಸರಣಿ ಬಿಚ್ಚಿಕೊಳ್ಳುವಿಕೆ. ಉದಾ: ತನ್ನ ಶಾಲೆಯ ನೆನಪು.

redistribution: ಮರುಹಂಚಿಕೆ.

reductionism: ಅತಿವಾದ. ಒಂದು ತತ್ವವನ್ನು ಅತಿಯೆನಿಸುವಷ್ಟರ ಮಟ್ಟಿಗೆ ಅವಲಂಬಿಸುವಿಕೆ. ಸಂಕೀರ್ಣ ವಸ್ತು ಅಥವಾ ವಿಷಯವನ್ನು ಅದರಲ್ಲಿರುವ ಸರಳ ವಸ್ತುಗಳ ವಿವರಣೆಯಿಂದ ತಿಳಿದುಕೊಳ್ಳಬಹುದೆಂಬ ಸಿದ್ಧಾಂತ.

redundancy: ಅಗತ್ಯಕ್ಕಿಂತ ಹೆಚ್ಚಿರುವ ಅನಗತ್ಯ ಶಬ್ದಪ್ರಯೋಗದಿಂದ ಪದಾಧಿಕ್ಯ ದೋಷ.

re-education: ಪುನರ್ ಶಿಕ್ಷಣ.

re-election: ಮರುಚುನಾವಣೆ. ಒಂದು ಚುನಾವಣಾ ಕ್ಷೇತ್ರದಲ್ಲಿ ಚುನಾವಣೆಯ ಸಂದರ್ಭದಲ್ಲಿ ಯಾವುದೇ ಅವ್ಯವಹಾರ ನಡೆದಾಗ ಅಂತಹ ಚುನಾವಣಾ ಕ್ಷೇತ್ರದಲ್ಲಿ ಚುನಾವಣಾ ಆಯೋಗದ ಆಜ್ಞೆಯ ಮೇರೆಗೆ ನಡೆಯುವ ಮರುಚುನಾವಣೆ.

reference: ಉಲ್ಲೇಖ; ಸಂದರ್ಭ.

reference group: ಉಲ್ಲೇಖ ಸಮೂಹ. ಒಬ್ಬ ವ್ಯಕ್ತಿ ಅಥವಾ ಒಂದು ಗುಂಪು ತನ್ನ ನಂಬುಗೆಗಳು, ಮನೋಭಾವಗಳು, ಮೌಲ್ಯಗಳು ಹಾಗೂ ವರ್ತನೆಗಳಿಗೆ ಮಾದರಿಗಳನ್ನು ಪಡೆಯುವ ಉದಾಹರಣೀಯ ಸಮೂಹ.

reference individual: ಉಲ್ಲೇಖನೀಯ ವ್ಯಕ್ತಿ. ವಿವಿಧ ಸಂದರ್ಭ ಹಾಗೂ ಪಾತ್ರಗಳ ನಿರ್ವಹಣೆಯಲ್ಲಿ ವ್ಯಕ್ತಿಯೊಬ್ಬನು ಇನ್ನೊಬ್ಬ ವ್ಯಕ್ತಿಯ ವರ್ತನೆಯನ್ನು ರೂಪಿಸಿಕೊಳ್ಳುವುದು.

referendum: ಜನಮತಗಣನೆ; ಜನಾಭಿಪ್ರಾಯ. ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಪ್ರಚಲಿತವಿರುವ ನೇರ ಪ್ರಜಾಪ್ರಭುತ್ವದ ಸಾಧನಗಳಲ್ಲೊಂದು. ಸರಕಾರವು ತಾನು ಮಾಡಲು ಉದ್ದೇಶಿಸಿರುವ ಸಾರ್ವಜನಿಕ ಕಾಯಿದೆಗೆ ಸಂಬಂಧಿಸಿದ ಮಸೂದೆಯನ್ನು ಶಾಸಕಾಂಗದಲ್ಲಿ ಮಂಡಿಸುವ ಮೊದಲೇ ಜನರ ಅಭಿಪ್ರಾಯಕ್ಕೆ ಒಪ್ಪಿಸುವುದನ್ನು ಜನಮತಗಣನೆ ಎನ್ನಲಾಗುತ್ತದೆ. ಜನರು ಅದನ್ನು ಬಹುಮತದಿಂದ ಒಪ್ಪಿಕೊಂಡರೆ ಮಾತ್ರ ಶಾಸಕಾಂಗದಲ್ಲಿ ಮಂಡಿಸಲಾಗುತ್ತದೆ.

refining capacity: ಶುದ್ಧೀಕರಣ ಸಾಮರ್ಥ್ಯ.

reflation: ಆರ್ಥಿಕ ಆವರ್ತದ ಏರಿಕೆ.

reflective attention: ಪ್ರತಿಫಲಿತ ಅವಧಾನ; ವಿಚಾರಾತ್ಮಕ ಅವಧಾನ.

reflex action: ಪ್ರತಿಕ್ಷೇಪ ಕ್ರಿಯೆ.

refex arc or curve: ಪ್ರತಿಕ್ಷೇಪ ಚಾಪ ಅಥವಾ ವಕ್ರರೇಖೆ.

reflex behaviour: ಪ್ರತಿಕ್ಷೇಪ ವರ್ತನೆ.

reformation: ಸುಧಾರಣೆ. ಅಪರಾಧಿಗಳನ್ನು ಪರಿವರ್ತಿಸುವುದು; ಧಾರ್ಮಿಕ ಸುಧಾರಣೆ.

reformatory borstal Institution: ಸುಧಾರಣಾ ಶಾಲೆ. ನೋಡಿ: borstal Institution.

reformatory school: ಸುಧಾರಣಾ ಶಾಲೆ; ಸುಧಾರಣಾ ಪಂಥ.

reformatory socialism: ಸುಧಾರಣಾ ಸಮಾಜವಾದ.

refractory attitude: ಹಠಮಾರಿ ಅಭಿವ್ಯಕ್ತಿ; ಎದುರು ಬೀಳುವ ಅಭಿವ್ಯಕ್ತಿ.

refuge area: ಆಶ್ರಿತ ಪ್ರದೇಶ; ಶರಣು ಬಂದ ಪ್ರದೇಶ. ಇತರ ಬುಡಕಟ್ಟುಗಳ ಒತ್ತಡದಿಂದಾಗಿ ಒಂದು ಸ್ಥಳದ ಜನರು ವಲಸೆ ಬಂದು ನೆಲೆಸಿದ ಪ್ರದೇಶ. ಅಂತಹ ಪ್ರದೇಶಗಳು ಸಾಮಾನ್ಯವಾಗಿ ಆರ್ಥಿಕವಾಗಿ ಹಿಂದುಳಿದಿರುತ್ತವೆ ಹಾಗೂ ಪ್ರಾಕೃತಿಕ ವಿಕೋಪಗಳಿಂದ ರಕ್ಷಣೆ ಪಡೆದಿರುತ್ತವೆ.

refugee capital: ಕೊರತೆಯಿರುವ ಬಂಡವಾಳ.

refugee rehabilitation: ನಿರಾಶ್ರಿತರ ಪುನರ್ವಸತಿ.

refugees: ನಿರಾಶ್ರಿತರು.

refunding: ಮರುಪಾವತಿ.

regeneration: ಪುನಶ್ಚೇತನ.

regiment: ಸೇನಾಪಡೆ; ತುಕಡಿ.

regional court: ಪ್ರಾದೇಶಿಕ ನ್ಯಾಯಾಲಯ.

regional dualism: ಪ್ರಾದೇಶಿಕ ದ್ವಂದ್ವತೆ. ದೇಶದ ಕೆಲವೇ ಸ್ಥಳಗಳು ಆಧುನಿಕ ರೀತಿಯಲ್ಲಿ ಮುಂದುವರಿದು ಉಳಿದ ಬಹುಭಾಗಗಳು ಹಿಂದುಳಿದಿರುವುದು.

regional economic council: ಪ್ರಾದೇಶಿಕ ಆರ್ಥಿಕ ಮಂಡಳಿ.

regional ethnology: ಸ್ಥಳೀಯ ಮಾನವ ಕುಲ ವಿಜ್ಞಾನ.

regional government: ಪ್ರಾಂತೀಯ ಸರಕಾರ; ಪ್ರಾದೇಶಿಕ ಸರಕಾರ. ಪ್ರಾಂತೀಯ ವ್ಯವಹಾರಗಳನ್ನು ನೆರವೇರಿಸಲು ಅಥವಾ ನಡೆಸಲು ಅಸ್ತಿತ್ವಕ್ಕೆ ಬರುವ ಸರಕಾರ.

regional integration: ಪ್ರಾದೇಶಿಕ ಸಮಗ್ರತೆ.

regional language: ಪ್ರಾದೇಶಿಕ ಭಾಷೆ.

regional party: ಪ್ರಾದೇಶಿಕ ಪಕ್ಷ. ನಿರ್ದಿಷ್ಟ ಪ್ರದೇಶ ಅಥವಾ ರಾಜ್ಯದಲ್ಲಿ ಮಾತ್ರ ಪ್ರಭಾವ ಹೊಂದಿರುವ ಪಕ್ಷ.

regional planning: ಪ್ರಾದೇಶಿಕ ಯೋಜನೆ.

regional policy: ಪ್ರಾದೇಶಿಕ ನೀತಿ. ದೇಶದ ವಿವಿಧ ಭಾಗಗಳಲ್ಲಿ ನಿರುದ್ಯೋಗ ಮತ್ತು ಆರ್ಥಿಕ ಬೆಳವಣಿಗೆಯಲ್ಲಿನ ಅಸಮತೋಲನವನ್ನು ಕಡಿಮೆಗೊಳಿಸಲು ಕೈಗೊಳ್ಳುವ ವಿಧಾನಗಳ ಚೌಕಟ್ಟು.

regional rural bank: ಪ್ರಾದೇಶಿಕ ಗ್ರಾಮೀಣ ಬ್ಯಾಂಕು.

regional specialisation: ಪ್ರಾದೇಶಿಕ ಪರಿಣತಿ.

regional zone: ಪ್ರಾದೇಶಿಕ ವಲಯ.

registration area: ನೋಂದಣಿ ಕ್ಷೇತ್ರ. ಒಂದು ನಿರ್ದಿಷ್ಟ ಸಮೂಹದ ಅಂಕಿ ಅಂಶಗಳ ಸಂಗ್ರಹಣೆ ಹಾಗೂ ಸಂಯೋಜನೆಯ ಕ್ಷೇತ್ರ. ಅಮೇರಿಕದಲ್ಲಿ ಎರಡು ಪ್ರಾಮುಖ್ಯ ನೋಂದಣಿ ಕ್ಷೇತ್ರಗಳಿವೆ. ೧೮೮೦ರಲ್ಲಿ ಸ್ಥಾಪಿಸಲ್ಪಟ್ಟ ಮರಣ ನೋಂದಣಿ ಕ್ಷೇತ್ರ ಮತ್ತು ೧೯೧೫ರ ಜನನ ನೋಂದಣಿ ಕ್ಷೇತ್ರ.

registration of vital events: ಪ್ರಾಮುಖ್ಯ ಘಟನೆಗಳ ನೋಂದಣಿ.

regnal year: ಆಳ್ವಿಕೆಯ ವರ್ಷ. ದೊರೆ ಪಟ್ಟಕ್ಕೆ ಬಂದಾಗಿನಿಂದ ಅಥವಾ ಅದರ ವಾರ್ಷಿಕೋತ್ಸವದಿಂದ ಎಣಿಸುವ ಆಳ್ವಿಕೆಯ ವರ್ಷ.

regnant: ಆಳುವ ಹಕ್ಕಿನಿಂದ ರಾಜ್ಯವಾಳುತ್ತಿರುವ ರಾಜ.

regression: ಪ್ರತಿಗಮನ; ಸಮಾಶ್ರಯಣ; ಹಿನ್ನಡೆ; ವರ್ತನೆಯ ಅವಗತಿ. ತನ್ನ ವಯಸ್ಸಿಗಿಂತ ಚಿಕ್ಕವರಂತೆ ವರ್ತಿಸುವುದು. ಮೆದುಳಿನ ತೊಂದರೆಗಳಲ್ಲಿ ಮತ್ತು ಮನೋವಿಕೃತಿಗಳಲ್ಲಿ ಕಾಣಿಸುವ ಲಕ್ಷಣ.

regression equation: ಪ್ರತಿಗಮನ ಸಮೀಕರಣ.

regression method: ಪ್ರತಿಗಮನ ವಿಧಾನ. ಸ್ವತಂತ್ರ ಮತ್ತು ಅವಲಂಬೀ ಚಲಗಳ ನಡುವಿನ ಸಂಬಂಧವನ್ನು ಅಳತೆ ಮಾಡುವ ವಿಧಾನ.

regression model: ಪ್ರತಿಗಮನ ಮಾದರಿ.

regularisation: ನಿಯಮಾನುಗುಣವಾಗಿಸುವುದು.

regulated capitalism: ನಿಯಂತ್ರಿತ ಬಂಡವಾಳಶಾಹಿ ವ್ಯವಸ್ಥೆ.

regulated democracy: ನಿಯಂತ್ರಿತ ಪ್ರಜಾಪ್ರಭುತ್ವ.

regulated market: ನಿಯಂತ್ರಿತ ಮಾರುಕಟ್ಟೆ.

regulation: ಕಟ್ಟಳೆ; ನಿಬಂಧನೆ; ಕಟ್ಟುಪಾಡು; ನಿಯಮ; ವಿಧಿ.

regulatory body: ನಿಯಂತ್ರಕ ಮಂಡಳಿ.

regulatory law: ನಿಯಂತ್ರಣಾ ಕಾನೂನು.

regulatory system: ನಿಯಂತ್ರಕ ವ್ಯವಸ್ಥೆ; ನಿಯಂತ್ರಣಾ ವ್ಯವಸ್ಥೆ.

rehabilitation: ಪುನರ್ವಸತಿ.

reification of culture: ಸಂಸ್ಕೃತಿಯ ಮೂರ್ತೀಕರಣ. ಉದಾ: ಸಾಮಾಜಿಕ ಮೌಲ್ಯಗಳ ವಾಸ್ತವಿಕ ಪ್ರಯೋಗ.

reign of terror: ಭಯಾನಕ ಆಳ್ವಿಕೆ. ಭಯೋತ್ಪಾದಕ ಕೃತ್ಯಗಳ ಮೂಲಕ ಆಳ್ವಿಕೆ ನಡೆಸುವುದು. ಉದಾ: ಅಫ್ಘಾನಿಸ್ತಾನದಲ್ಲಿ ತಾಲಿಬಾನ್ ಆಡಳಿತ.

reincarnation: ಪುನರವತಾರ.

reindeer age: ಹಿಮಸಾರಂಗ ಯುಗ. ಐರೋಪ್ಯ ಬೆಳವಣಿಗೆಯ ಮೇಲು ಪುರಾತನ ಯುಗದ ಕೊನೆಯ ಹಂತ. ಸುಮಾರು ೬೦೦೦ ವರ್ಷಗಳಷ್ಟು ದೀರ್ಘಾವಧಿಯ ಈ ಯುಗ

ಕ್ರಿಸ್ತಪೂರ್ವ ೭೫೦೦ ರ ಸುಮಾರಿಗೆ ಕೊನೆಗೊಂಡಿತು.

re-inforcement: ಪುನರ್ಬಲನ; ಪುನರ್ ಪುಷ್ಟೀಕರಣ.

reinvestible surplus: ಮರುಹೂಟೆಯಾಗಬಲ್ಲ ಮಿಗುತೆ.

rejected child: ತಿರಸ್ಕೃತ ಮಗು.

rejection: ತಿರಸ್ಕಾರ; ಪರಿತ್ಯಜನೆ.

rejection rate: ಅಸ್ವೀಕರಣ ಪ್ರಮಾಣ; ಪರಿತ್ಯಜನೆಯ ಪ್ರಮಾಣ.

rejuvenation: ಪುನರುಜ್ಜೀವನಗೊಳಿಸುವಿಕೆ.

relatedness: ಸಂಬಂಧಿಕತೆ. ಸಂಸ್ಕೃತಿ ಅಥವಾ ಸಾಂಸ್ಕೃತಿಕ ಘಟಕದೊಳಗೆ ಚಟುವಟಿಕೆಗಳ ಅನುಕಲನ.

relational theory of mind: ಮನಸ್ಸಿನ ಸಂಬಂಧ ಸಿದ್ಧಾಂತ.

relations of ideas: ವಿಚಾರ ಸಂಬಂಧ. ಭಾವವಿಚಾರಗಳ ನಡುವಿನ ಸಂಬಂಧಗಳು.

relative amount: ಸಾಪೇಕ್ಷ ಮೊತ್ತ.

relative cheapness: ಸಾಪೇಕ್ಷ ಅಗ್ಗ.

relative dating: ಸಾಪೇಕ್ಷ ಕಾಲ ನಿರ್ಧಾರ.

relative deprivation: ಸಾಪೇಕ್ಷ ಅಭಾವ; ಸಾಪೇಕ್ಷ ಕಳೆತ. ಪ್ರಾತಿನಿಧಿಕ ಉಲ್ಲೇಖ ಸಮೂಹಗಳೊಂದಿಗೆ ಅಥವಾ ಹೆಚ್ಚು ಅನುಕೂಲವುಳ್ಳ ಜನರೊಂದಿಗೆ ತನ್ನನ್ನು ಹೋಲಿಸಿಕೊಂಡು ವ್ಯಕ್ತಿಯು ತನ್ನ ಅಭಾವ (ಕಳೆತ)ವನ್ನು ಗುರುತಿಸಿಕೊಳ್ಳುವುದು.

relative income hypothesis: ಸಾಪೇಕ್ಷ ಆದಾಯ ಪ್ರಾಕ್‌ಕಲ್ಪನೆ.

relative majority: ಸಾಪೇಕ್ಷ ಬಹು ಮತ. ಬಹುಮತವು ಪ್ರಥಮ ಮತಪತ್ರ ಗಳಿಂದ ದೊರೆಯದಿದ್ದರೆ ದ್ವಿತೀಯ ಮತ ಪತ್ರ ಗಳಲ್ಲಿಯ ಸಾಪೇಕ್ಷ ಬಹುಮತದಿಂದ ಆಯ್ಕೆಯನ್ನು ನಿರ್ಧರಿಸುವುದು.

relative permanence: ಸಾಪೇಕ್ಷ ಶಾಶ್ವತತೆ.

relative personal equation: ಸಾಪೇಕ್ಷ ವೈಯಕ್ತಿಕ ಸಮೀಕರಣ.

relative poverty: ಸಾಪೇಕ್ಷ ಬಡತನ.

relative price difference: ಸಾಪೇಕ್ಷ ಬೆಲೆ ವ್ಯತ್ಯಾಸ.

relative scarcity: ಸಾಪೇಕ್ಷ ಕೊರತೆ.

relative taxable capacity: ಸಾಪೇಕ್ಷ ತೆರಿಗೆ ಸಾಮರ್ಥ್ಯ.

relative value: ಸಾಪೇಕ್ಷ ಮೌಲ್ಯ.

relative version: ಸಾಪೇಕ್ಷ ರೂಪ.

relatively elastic supply: ಸಾಪೇಕ್ಷ ಸ್ಥಿತಿಸ್ಥಾಪಕ ಪೂರೈಕೆ. ನೋಡಿ: perfectly elastic supply.

relatively inelastic: ಸಾಪೇಕ್ಷ ಸ್ಥಿತಿ ಸ್ಥಾಪಕ ರಹಿತ.

relativism: ಸಾಪೇಕ್ಷವಾದ; ಸಂಬಂಧ ವಾದ.

relaxation feeling: ವಿಶ್ರಾಂತಿ ಭಾವನೆ.

relaxation of rule: ನಿಯಮ ಸಡಿಲಿಕೆ; ರಿಯಾಯಿತಿ ತೋರುವಿಕೆ.

relaxed condition: ವಿಶ್ರಾಂತ ಸ್ಥಿತಿ; ಅನುದ್ವಿಗ್ನ ಮಾನಸಿಕ ಸ್ಥಿತಿ.

release on appeal: ಅಪೀಲು ಮೇಲೆ

ಬಿಡುಗಡೆ; ಮೇಲ್ಮನವಿ ಆಧಾರದಲ್ಲಿ ಬಿಡು ಗಡೆ.

release on bail: ಜಾಮೀನು ಮೇಲೆ ಬಿಡುಗಡೆ.

relevant behaviour: ಸಂಗತ ವರ್ತನೆ.

reliable proof: ನಂಬಲರ್ಹವಾದ ಆಧಾರ; ವಿಶ್ವಾಸಾರ್ಹ ಪ್ರಮಾಣ.

reliability: ವಿಶ್ವಸನೀಯತೆ; ವಿಶ್ವಸ್ಥತೆ.

relic : ಅವಶೇಷ; ಪ್ರಾಚೀನಾವಶೇಷ.

relic chamber: ಧಾತು ಗರ್ಭ; ಅವ ಶೇಷಗಳುಳ್ಳ ಕೋಣೆ.

relic stupa: ಧರ್ಮ ರಾಜಿಕಾ; ಅವಶೇಷ ಗಳುಳ್ಳ ಸ್ತೂಪ.

relict: ವಿತಂತು. ಜೀವವರ್ಗದ ಎಲ್ಲಾ ಜೀವಿಗಳ ನಿರ್ನಾಮದ ನಂತರ ಉಳಿದ ಜೀವಿ.

religion: ಧರ್ಮ.

religion of humanity: ಮಾನವತಾ ವಾದಿ ಧರ್ಮ.

religionist: ಮತೀಯ ಧರ್ಮೀಯ.

religiosity: ಧಾರ್ಮಿಕತೆ.

religious and charitable endow ments: ಮತೀಯ ಮತ್ತು ಧರ್ಮಾರ್ಥ ದತ್ತಿಗಳು.

religious ballad: ಧಾರ್ಮಿಕ ಲಾವಣಿ.

religious consciousness: ಧಾರ್ಮಿಕ ಪ್ರಜ್ಞೆ.

religious conversion: ಮತಾಂತರ.

religious denomination: ಧಾರ್ಮಿಕ ಪಂಗಡ. ಸಮಾಜದ ಬಹುಜನ ಸದಸ್ಯರು ಸಾಮಾಜಿಕವಾಗಿ ಸ್ವೀಕಾರಾರ್ಹವೆಂದು ಪರಿಗಣಿಸಿದ ಧಾರ್ಮಿಕ ಸಂಘಟನೆ.

religious disabilities: ಧಾರ್ಮಿಕ ಅನರ್ಹತೆಗಳು; ಧಾರ್ಮಿಕ ದೌರ್ಬಲ್ಯಗಳು.

religious dogmatism: ಧಾರ್ಮಿಕ ಮತತತ್ತ್ವವಾದ.

religious endowment: ಧಾರ್ಮಿಕ ದತ್ತಿ.

religious experience: ಧಾರ್ಮಿಕ ಅನುಭವ.

religious fundamentalism: ಮತೀಯ (ಧಾರ್ಮಿಕ) ಮೂಲಭೂತ ವಾದ.

religious hero: ಧಾರ್ಮಿಕ ವೀರ.

religious initiation: ಧಾರ್ಮಿಕ ದೀಕ್ಷೆ.

religious instinct: ಧಾರ್ಮಿಕ ಮೂಲ ಪ್ರೇರಣೆ.

religious institution: ಧಾರ್ಮಿಕ ಸಂಸ್ಥೆ.

religious judiciary: ಧಾರ್ಮಿಕ ನ್ಯಾಯಾಂಗ.

religious legend: ಧಾರ್ಮಿಕ ಐತಿಹ್ಯ.

religious minded: ಧಾರ್ಮಿಕ ಮನೋ ವೃತ್ತಿಯುಳ್ಳ.

religious minorities: ಧಾರ್ಮಿಕ ಅಲ್ಪ ಸಂಖ್ಯಾತರು.

religious movement: ಧಾರ್ಮಿಕ ಚಳ ವಳಿ; ಧಾರ್ಮಿಕ ಆಂದೋಲನ.

religious order: ಧಾರ್ಮಿಕ ವ್ಯವಸ್ಥೆ.

religious psychology: ಧಾರ್ಮಿಕ ಮನೋವಿಜ್ಞಾನ.

religious reformation: ಧಾರ್ಮಿಕ ಸುಧಾರಣೆ.

religious sacrament: ಧಾರ್ಮಿಕ ವಿಧಿ; ಧಾರ್ಮಿಕ ಸಂಸ್ಕಾರ.

religious song: ಧಾರ್ಮಿಕ ಗೀತೆ.

religious stone: ಧಾರ್ಮಿಕ ಶಿಲೆ. ಪೂಜಾ ಸಂದರ್ಭಗಳಲ್ಲಿ ಉಪಯೋಗಿಸುವ ಕಲ್ಲು.

religious suicide: ಧಾರ್ಮಿಕ ಆತ್ಮಹತ್ಯೆ. ನೋಡಿ: altruistic suicide.

religious unrest: ಧಾರ್ಮಿಕ ಅಸಂತುಷ್ಟತೆ; ಧಾರ್ಮಿಕ ಅಶಾಂತಿ.

relinquishment of charge: ಅಧಿಕಾರ ತ್ಯಾಗ.

reliquary: ಅವಶೇಷಗಳನ್ನಿಡುವ (ಪಾತ್ರೆ) ಸಂಪುಟ. ಅಮರರೆಂದು ಭಾವಿಸಲಾದ ವ್ಯಕ್ತಿಗಳ ಶವವನ್ನು ಅಥವಾ ಅವರು ಉಪಯೋಗಿಸುವ ವಸ್ತುಗಳನ್ನು ಪೂಜಿಸಲೆಂದು ಸಂಗ್ರಹಿಸಿಡುವುದು.

remand homes: ಪ್ರತಿಪ್ರೇಕ್ಷಣ ಗೃಹಗಳು. ನ್ಯಾಯ ವಿಚಾರಣಾವಧಿಯ ಕೈದಿ ಗೃಹ.

remarriage of widows: ವಿಧವಾ ವಿವಾಹ. ೧೮೫೬ರಲ್ಲಿ ಭಾರತದಲ್ಲಿ ಹಿಂದೂ ವಿಧವೆಯರಿಗೆ ಸಂಬಂಧಿಸಿ ಲಾರ್ಡ್ ಡಾಲ್‌ಹೌಸಿ ಎಂಬ ಗವರ್ನರನು ಈ ಕಾಯಿದೆಯನ್ನು ಜಾರಿಗೆ ತಂದನು.

remedical instruction: ಪರಿಹಾರಾತ್ಮಕ ಸಲಹೆ.

remedical reading: ಪರಿಹಾರಾತ್ಮಕ ವಾಚನ.

reminiscence: ಅನುಸರಣೆ; ನೆನವರಿಕೆ; ಮರುಕಳಿಕೆ.

reminiscence effect: ಅನುಸ್ಮರಣೀಯ ಪ್ರಭಾವ.

remission: ಕಡಿಮೆ ಮಾಡುವಿಕೆ; ಕ್ಷಮಾಪಣೆ. ದಂಡ ಅಥವಾ ಜುಲ್ಮಾನೆಯನ್ನು ಪೂರ್ಣವಾಗಿ ಇಲ್ಲವೇ ಅದರ ಒಂದು ಭಾಗವನ್ನು ರದ್ದುಮಾಡುವುದು.

remonetization: ಪುನರ್‌ನಾಣ್ಯೀಕರಣ. ಚಲಾವಣೆಯಿಂದ ಹಿಂದಕ್ಕೆ ತೆಗೆದುಕೊಂಡ ನಾಣ್ಯ ಅಥವಾ ನೋಟುಗಳನ್ನು ಪುನಃ ಮುದ್ರಿಸಿ ಚಲಾವಣೆಗೆ ಯೋಗ್ಯವೆಂದು ಘೋಷಿಸುವುದು.

remunerative capital: ಪ್ರತಿಫಲಾತ್ಮಕ ಬಂಡವಾಳ.

renaissance: ಪುನರುತ್ಥಾನ; ಪುನರುಜ್ಜೀವನ.

renewable resource: ನವೀಕರಣ ಸಾಧ್ಯ ಸಂಪನ್ಮೂಲ. ಪುನಃ ಪುನಃ ಉಪಯೋಗಿಸಬಲ್ಲ ಸಂಪನ್ಮೂಲ.

rent: ಗೇಣಿ. ಉತ್ಪಾದನಾ ಅಂಶಗಳಲ್ಲೊಂದಾದ ಭೂಮಿಯ ಉಪಯೋಗಕ್ಕೆ ನೀಡುವ ಪ್ರತಿಫಲ.

rent theory of profit: ಲಾಭದ ಗೇಣಿ ಸಿದ್ಧಾಂತ. ಈ ಸಿದ್ಧಾಂತದ ಪ್ರಕಾರ ಲಾಭವು ಸಂಘಟಕನ ಸಾಮರ್ಥ್ಯಕ್ಕೆ ದೊರೆಯುವ ಗೇಣಿಯಾಗಿದೆ.

rent wages: ಗೇಣಿ ಕೂಲಿಗಳು.

rentier-lion type: ಗೇಣೀಗ್ರಾಹಿ ಶ್ರೀಮಂತರ ವರ್ಗ. ನೋಡಿ: circulation of elite.

renunciation of war: ಯುದ್ಧ ಪರಿತ್ಯಾಗ.

reorganization of states: ರಾಜ್ಯಗಳ ಪುನರ್‌ರಚನೆ. ಸ್ವಾತಂತ್ರ್ಯಾನಂತರ ಭಾರತದಲ್ಲಿ ಭಾಷೆಯ ಆಧಾರದ ಮೇಲೆ ೧೯೫೬ರಲ್ಲಿ ರಾಜ್ಯಗಳನ್ನು ಪುನರ್‌ರಚನೆ ಮಾಡಲಾಗಿದೆ.

repertoire: ನಾಟಕಗಳ ಅಥವಾ ಸಂಗೀತ ಕೃತಿಗಳ ಬಂಡವಾಳ.

repertory: ಭಂಡಾರ. ನೋಡಿ: repert oire.

repertory grid technique: ಮಾಹಿತಿ ಸಂಗ್ರಹ ಜಾಲತಂತ್ರ. ವ್ಯಕ್ತಿಯ ವ್ಯಕ್ತಿಗತ ರಚನೆ ಹಾಗೂ ವ್ಯಕ್ತಿ ಉಪಯೋಗಿಸುವ ಪರಸರದ ವಿಭಿನ್ನ ವರ್ಗಗಳ ನಡುವಿನ ಸಂಬಂಧದ ಶೋಧನೆ ಮಾಡುವ ವಿಧಾನ.

repetitive interview: ಪುನರಾವರ್ತಿತ ಸಂದರ್ಶನ.

repetitive magic: ಪುನರಾವರ್ತಿತ ಮಾಟ.

replacement cost: ಪುನರ್ನಿರ್ಮಾಣ ವೆಚ್ಚ; ಪರಿವರ್ತನೆಯ ವೆಚ್ಚ.

replicated sampling: ಪ್ರತಿರೂಪ ಮಾದರಿ ವಿಧಾನ.

report stage: ವರದಿಯ ಹಂತ. ಶಾಸಕಾಂಗದಲ್ಲಿ ಮಸೂದೆಯನ್ನು ಕಾಯಿದೆಯನ್ನಾಗಿ ಪರಿವರ್ತಿಸಿ ಅಂಗೀಕರಿಸುವಾಗ ಅದು ಅನೇಕ ಹಂತಗಳನ್ನು ದಾಟಿ ಬರಬೇಕಾಗುತ್ತದೆ. ಅದರಲ್ಲಿ ನಿಯುಕ್ತಿಗೊಂಡ ಸಂಸದೀಯ ಸಮಿತಿಯು ವರದಿ ಸಲ್ಲಿಸುವುದು ಒಂದು ಪ್ರಮುಖ ಹಂತ. ಈ ಸಮಿತಿಯು ಮಸೂದೆಯನ್ನು ಉತ್ತಮಗೊಳಿಸುವ ಸಲಹೆಗಳನ್ನೊಳಗೊಂಡ ವರದಿ ಸಲ್ಲಿಸುತ್ತದೆ.

reposicion: ಇಷ್ಟನಾಮಕರಣ. ಮಧ್ಯ ಅಮೇರಿಕಾದಲ್ಲಿರುವ ಒಂದು ಆಚರಣೆ. ಹೆತ್ತವರು ಮಗನಲ್ಲಿ ಯಾವ ವ್ಯಕ್ತಿಯ ಲಕ್ಷಣಗಳನ್ನು ಕಾಣಲು ಬಯಸುತ್ತಾರೋ ಆತನ ಹೆಸರಿಡುವುದು.

representation: ಪ್ರಾತಿನಿಧ್ಯ.

representative body: ಪ್ರತಿನಿಧಿ ಸಭೆ.

representative capacity: ಪ್ರಾತಿ ನಿಧಿಕ ನೆಲೆ.

representative democracy: ಪ್ರತಿ ನಿಧಿ ಪ್ರಜಾಪ್ರಭುತ್ವ.

representative firm: ಪ್ರಾತಿನಿಧಿಕ ಕಾರ್ಖಾನೆ. ದೀರ್ಘಜೀವಿತವುಳ್ಳ ಮತ್ತು ಸಾಮಾನ್ಯ ಸಾಮರ್ಥ್ಯದಿಂದ ವ್ಯವಹಾರ ನಡೆಸಲ್ಪಡುವ ಕಾರ್ಖಾನೆ.

representative government: ಪ್ರತಿನಿಧಿ ಸರಕಾರ. ಜನರಿಂದ ನೇರವಾಗಿ ಆಯ್ಕೆಗೊಂಡಂತಹ ಜನಪ್ರತಿನಿಧಿಗಳಿಂದ ನಡೆಸಲ್ಪಡುವ ಸರಕಾರ.

representative imagination: ಪ್ರಾತಿ ನಿಧಿಕ ಕಲ್ಪನೆ.

representative object: ಪ್ರಾತಿನಿಧಿಕ ವಸ್ತು.

representative one-party demo cracy: ಏಕಪಕ್ಷೀಯ ಪ್ರಜಾ ಪ್ರಭು ತ್ವೀಯ ಪದ್ಧತಿ. ಮತದಾರರು ತಮ್ಮ ಪ್ರತಿನಿಧಿಗಳನ್ನು ಪಕ್ಷದೊಳಗಿನಿಂದಲೇ ಆರಿಸುತ್ತಾರೆ.

representative role: ಪ್ರಾತಿನಿಧಿಕ

ಪಾತ್ರ. ಒಂದು ಸಮೂಹದ ಮೌಲ್ಯಗಳನ್ನು ಪ್ರತಿನಿಧಿಸುವ ವ್ಯಕ್ತಿಯ ವೈಯಕ್ತಿಕ ಪಾತ್ರ.

representative sample: ಪ್ರಾತಿನಿಧಿಕ ಮಾದರಿ.

representative system: ಪ್ರಾತಿನಿಧಿಕ ಪದ್ಧತಿ.

representative wealth: ಪ್ರಾತಿನಿಧಿಕ ಸಂಪತ್ತು.

repressed complex: ನಿರೋಧಿತ ಭಾವನೆ.

repressed desire: ನಿರೋಧಿತ ಇಚ್ಛೆ.

repressed drive: ನಿರೋಧಿತ ಚೋಧನೆ.

repressed wish: ನಿರೋಧಿತ ಆಕಾಂಕ್ಷೆ.

repression: ದಮನ; ಅಡಗಿಸುವಿಕೆ; ದಬ್ಬಾಳಿಕೆ; ನಿರೋಧನೆ. ಅಚೇತನವು ತನ್ನಲ್ಲಿ ಹಲವು ಭಾವನೆಗಳನ್ನು ಇರಿಸಿಕೊಳ್ಳುವ ಕ್ರಿಯೆ.

repression symptom: ನಿರೋಧ ಲಕ್ಷಣ.

repressive attitude: ನಿರೋಧಾತ್ಮಕ ಮನೋವೃತ್ತಿ.

repressive mental disorder: ನಿರೋಧಕ ಮನೋರೋಗ; ನಿರೋಧಾತ್ಮಕ ಮನೋರೋಗ.

reprieve: ತಾತ್ಕಾಲಿಕ ತಡೆಯಾಜ್ಞೆ; ವಿಲಂಬನ ಆಜ್ಞೆ. ದಂಡ ಅಥವಾ ಮರಣ ದಂಡನೆಯನ್ನು ತಾತ್ಕಾಲಿಕವಾಗಿ ನಿಲ್ಲಿಸುವುದು, ಬೇರೆ ಶಿಕ್ಷೆಗೆ ಪರಿವರ್ತಿಸುವುದು, ಮುಂದಕ್ಕೆ ಹಾಕುವುದು ಅಥವಾ ಶಿಕ್ಷಾ ಅವಧಿಯನ್ನು ತಗ್ಗಿಸುವುದು.

reproduction: ಸಂತಾನೋತ್ಪತ್ತಿ; ಪುನರುತ್ಪಾದನೆ.

reproductive technology: ಸಂತಾನ ತಾಂತ್ರಿಕತೆ. ಮಾನವನ ಸಂತಾನೋತ್ಪತ್ತಿಯ ಪ್ರಕ್ರಿಯೆಯ ಮೇಲೆ ಪ್ರಭಾವ ಬೀರುವ ತಾಂತ್ರಿಕತೆ. ಉದಾ: ನಳಿಕಾಶಿಶು.

reproductivity: ಸಂತಾನೋತ್ಪತ್ತಿ ಕ್ರಿಯೆ.

republic: ಗಣರಾಜ್ಯ. ದೇಶದ ಮುಖ್ಯ ಕಾರ್ಯನಿರ್ವಾಹಕ (ರಾಷ್ಟ್ರದ ನಾಯಕ) ಹಾಗೂ ಪ್ರತಿನಿಧಿಗಳನ್ನು ನೇರವಾಗಿ ಅಥವಾ ಪರೋಕ್ಷವಾಗಿ ಪ್ರಜೆಗಳು ಚುನಾಯಿಸುವ ಅಥವಾ ನೇಮಕ ಮಾಡುವ ಸರಕಾರ ಪದ್ಧತಿ.

republic form: ಗಣರಾಜ್ಯ ಸ್ವರೂಪ.

republical constitution: ಗಣ ತಂತ್ರೀಯ ಸಂವಿಧಾನ.

republical government: ಗಣ ತಂತ್ರೀಯ ಸರಕಾರ.

repudiation of debt: ಋಣ ನಿರಾ ಕರಣೆ ಒಂದು ದೇಶದ ಸರಕಾರವು ಸಾಲ ಮರು ಪಾವತಿಯ ಜವಾಬ್ದಾರಿಯಿಂದ ನುಣುಚಿ ಕೊಂಡು ಹಳೆಯ ಸಾಲದ ಒಪ್ಪಂದಗಳನ್ನು ಉಲ್ಲಂಘಿಸಿ ಸಾಲ ಮರುಪಾವತಿ ಮಾಡದಿರುವುದು.

repugnant to the context: ಸಂದರ್ಭ ವಿರುದ್ಧ.

reputational approach: ಗೌರವಾದರದ ದೃಷ್ಟಿಕೋನ. ಉದಾ: ಜನರು ಉಳಿದವರನ್ನು ಗೌರವಾದರಗಳ ನೆಲೆಯಿಂದ ಹೇಗೆ ವರ್ಗೀಕರಿಸುತ್ತಾರೆ ಎಂಬುದು ಅವರ ಸಾಮಾಜಿಕ ವರ್ಗಗಳನ್ನು ಅವಲಂಬಿಸಿದೆಯೇ ಎಂಬುದನ್ನು ಅಭ್ಯಸಿಸುವ ವಿಧಾನ.

re-sankritization: ಪುನರ್ ಸಂಸ್ಕೃತೀಕರಣ; ಮರುಸಂಸ್ಕೃತೀಕರಣ.

research access: ಸಂಶೋಧನಾ ಮಾರ್ಗ. ಮಾದರಿ ಚೌಕಟ್ಟು ದೊರೆಯುವಂಥ ಅಧ್ಯಯನವೇ ಅಥವಾ ಯಾವುದಾದರೂ ಸಂಸ್ಥೆ ಅಥವಾ ಸಂಘಟನೆಯ ಬಗ್ಗೆ ಸಂಶೋಧನೆ ನಡೆಸುವುದೇ ಎಂಬ ಬಗ್ಗೆ ಸಂಶೋಧಕನೇ ನಿರ್ಧರಿಸುವ ಮಾರ್ಗ.

research and development (R&D)**:** ಸಂಶೋಧನೆ ಮತ್ತು ಅಭಿವೃದ್ಧಿ.

research design: ಸಂಶೋಧನಾ ವಿನ್ಯಾಸ; ದತ್ತಾಂಶಗಳ ಸಂಗ್ರಹಣೆ. ವಿಶ್ಲೇಷಣೆ ಹಾಗೂ ಮೌಲ್ಯೀಕರಣಕ್ಕಾಗಿ ಹಾಕಿಕೊಳ್ಳುವ ಯೋಜನೆ.

research interview: ಸಂಶೋಧನಾ ಸಂದರ್ಶನ.

research methodology: ಸಂಶೋಧನಾ ವಿಧಾನ.

research resources: ಸಂಶೋಧನಾ ಸಂಪನ್ಮೂಲಗಳು.

research tool: ಸಂಶೋಧನಾ ಸಲಕರಣೆ (ಸಾಧನ).

reservation: ಮೀಸಲಾತಿ.

reservation of posts: ಹುದ್ದೆಗಳ ಮೀಸಲಾತಿ.

reservation of seat: ಸ್ಥಾನ ಮೀಸಲಾತಿ.

reserve-asset ratio: ಮೀಸಲು ಆಸ್ತಿ ನಿಷ್ಪತ್ತಿ.

reserve capital: ಮೀಸಲು ಬಂಡವಾಳ; ಬಂಡವಾಳ ನಿಧಿ. ವ್ಯವಹಾರ ಉದ್ಯಮಗಳು ನಿರ್ದಿಷ್ಟ ಉದ್ದೇಶಗಳಿಗಾಗಿ ಮೀಸಲಿರಿಸಿದ ಹಣದ ಗಳಿಕೆ.

reserve currency: ಮೀಸಲು ಕರೆನ್ಸಿ. ಒಂದು ದೇಶದ ಸರಕಾರ ಮತ್ತು ಅಂತಾರಾಷ್ಟ್ರೀಯ ಸಂಸ್ಥೆ ತಮ್ಮ ಮೀಸಲಿನ ಭಾಗವಾಗಿ ಹಾಗೂ ಅಂತಾರಾಷ್ಟ್ರೀಯ ಪಾವತಿಗಳಿಗಾಗಿ ಮೀಸಲಾಗಿರಿಸಿರುವ ಹಣ.

reserve fund: ಮೀಸಲು ನಿಧಿ. ಯಾವುದೇ ವೆಚ್ಚವನ್ನು ಅಥವಾ ನಷ್ಟ ಸಂಭವವನ್ನು ಭರಿಸಲು ತೆಗೆದಿರಿಸುವ ಮೀಸಲು ಹಣ.

reserve income tax: ನೋಡಿ: negative income tax.

reserve power: ಮೀಸಲು ಅಧಿಕಾರ. ಭಾರತದ ರಾಷ್ಟ್ರಪತಿಯು ತನ್ನ ಸ್ವಂತ ವಿವೇಚನೆಗೆ ಅನುಗುಣವಾಗಿ ಅಧಿಕಾರವನ್ನು ಚಲಾಯಿಸುವ ಅವಕಾಶವಿದ್ದರೂ ಅದನ್ನು ಅಗತ್ಯತೆಗಳಿಗೆ ಅನುಗುಣವಾಗಿ ಯಾವ ಸಂದರ್ಭದಲ್ಲಿ ಬೇಕೋ ಆವಾಗ ಕಾಯ್ದಿರಿಸಿದ ಅಧಿಕಾರದಂತೆ ಚಲಾಯಿಸುವುದು. ಉದಾ: ಸಂಸತ್ತು ಜನರ ಬೆಂಬಲವನ್ನು ಕಳೆದುಕೊಂಡಿದೆ ಎಂದು ಮನವರಿಕೆಯಾದಾಗ ಲೋಕಸಭೆಯನ್ನು ವಿಸರ್ಜಿಸುವ ಅಧಿಕಾರ.

reserve price: ಮೀಸಲು ಬೆಲೆ. ಮಾರಾಟಗಾರನು ನಿಗದಿಸಿರುವ ಕನಿಷ್ಠ ಬೆಲೆ.

reserve ratio: ಮೀಸಲು ಅನುಪಾತ. ಬ್ಯಾಂಕಿನ ನಗದು ಮೀಸಲಿಗೂ ಅದರ ಒಟ್ಟು ಠೇವಣಿಗಳಿಗೂ ಇರುವ ಅನುಪಾತ.

reserved constituency: ಮೀಸಲು ಮತಕ್ಷೇತ್ರ. ಚುನಾವಣಾ ಕ್ಷೇತ್ರವನ್ನು ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಬುಡಕಟ್ಟಿನವರಿಗೆ ಕಾದಿರಿಸುವುದು. ಅಂತಹ ಮತಕ್ಷೇತ್ರ

ದಲ್ಲಿ ಆ ಜಾತಿ/ವರ್ಗಗಳ ಅಭ್ಯರ್ಥಿ ಗಳು ಮಾತ್ರ ಸ್ಪರ್ಧಿಸುವ ಅವಕಾಶವಿರುವುದು.

reserved subject: ಕಾಯ್ದಿರಿಸಿದ ವಿಷಯ; ಮೀಸಲು ವಿಷಯ. ಭಾರತದಲ್ಲಿ ಬ್ರಿಟಿಷರ ಆಡಳಿತ ಕಾಲದಲ್ಲಿ ದ್ವಿಸರಕಾರ ಪದ್ಧತಿಗೆ ಅನುಗುಣವಾಗಿ ಪ್ರಾಂತ್ಯದ ಗವರ್ನರ್ ಮತ್ತು ಕಾರ್ಯನಿರ್ವಾಹಕ ಮಂಡಳಿಯು ನೋಡಿ ಕೊಳ್ಳಬೇಕಾಗಿದ್ದ ಸರಕಾರಿ ವಿಷಯಗಳು. ನೋಡಿ: transfered subjects.

residential city: ವಸತಿ ಪ್ರಧಾನ ನಗರ.

residential mobility: ವಸತಿ ಸಂಚರಣೆ.

residential school: ವಸತಿ ಶಾಲೆ.

residential suburb: ವಾಸ್ತವ್ಯದ ಉಪ ನಗರ.

residential zone: ಜನವಸತಿ ವಲಯ.

residual claimant theory of wage: ಶೇಷ ಹಕ್ಕುದಾರಿಕೆ ಕೂಲಿ ಸಿದ್ಧಾಂತ. ಬಡ್ಡಿ ಮತ್ತು ಲಾಭಗಳನ್ನು ಉತ್ಪಾದ ನಾಂಗಗಳಿಗೆ ಹಂಚಿದ ಬಳಿಕ ಉಳಿಯುವ ಶೇಷವೇ ಶ್ರಮದ ಪ್ರತಿಫಲವಾದ ಕೂಲಿ ಎಂಬುದನ್ನು ವಿವರಿಸುವ ಸಿದ್ಧಾಂತ.

residuary power: ಶೇಷಾಧಿಕಾರ. ಸಂವಿಧಾನದ ಮೂರು ಪಟ್ಟಿಗಳಲ್ಲೂ (ಕೇಂದ್ರ, ರಾಜ್ಯ ಮತ್ತು ಸಮವರ್ತಿ ಪಟ್ಟಿ). ನಮೂದಿಸದೇ ಇರುವ ಅಧಿಕಾರ.

residuary-sense: ಶೇಷಾರ್ಥ.

residuary subject: ಶೇಷ ವಿಷಯ; ಅನುಲ್ಲೇಖಿತ ವಿಷಯ. ಕೇಂದ್ರ ಮತ್ತು ರಾಜ್ಯ ಸರಕಾರಗಳ ನಡುವಿನ ಅಧಿಕಾರ ವಿಭಜನೆಯಲ್ಲಿ ಉಲ್ಲೇಖಿಸದೇ ಇರುವ ವಿಷಯ.

residues: ಸಹಜ ಪ್ರವೃತ್ತಿಗಳು. ಮಾನವನ ಅತಾರ್ಕಿಕ ಅಥವಾ ಅವೈಚಾರಿಕ ಕ್ರಿಯೆಗಳನ್ನು ಪ್ರಚೋದಿಸುವ ಭಾವನೆಗಳು.

residues of combination : ಸಂಯೋಜನಾ ಸಹಜ ಪ್ರವೃತ್ತಿಗಳು.

residues of persistence of aggregation: ಗುಂಪುಗಳ ಅಥವಾ ಒಟ್ಟು ಮೊತ್ತಗಳ ಶಾಶ್ವತತೆಯ ಸಹಜ ಪ್ರವೃತ್ತಿಗಳು.

resignation: ರಾಜೀನಾಮೆ.

resistance: ಪ್ರತಿರೋಧ; ಪ್ರತಿಭಟನೆ.

resistance curve: ಪ್ರತಿರೋಧ ರೇಖೆ; ನಿರೋಧಕ ರೇಖೆ.

resistance movement: ಪ್ರತಿಭಟನಾ ಚಳುವಳಿ. ಎರಡನೇ ಮಹಾಯುದ್ಧದ ಕಾಲದಲ್ಲಿ ಜರ್ಮನಿ, ಇಟಲಿ, ಜಪಾನ್ ಮತ್ತು ಅದರ ಮಿತ್ರ ರಾಷ್ಟ್ರಗಳ ದುರಾಕ್ರಮಣದ ವಿರುದ್ಧವಾಗಿ ಜನಸಮೂಹಗಳು ನಡೆಸಿದ ಫ್ಯಾಸಿಸ್ಟ್ ವಿರೋಧಿ ರಾಷ್ಟ್ರೀಯ ವಿಮೋಚನಾ ಚಳವಳಿ.

re-socialization: ಪುನರ್ ಸಮಾಜೀಕರಣ.

resolution: ನಿರ್ಣಯ; ಗೊತ್ತುವಳಿ.

resonance: ಅನುನಾದ.

resonator: ಅನುಗಣಕ; ಅನುನಾದಕ.

resource allocation: ಸಂಪನ್ಮೂಲ ಹಂಚುವಿಕೆ.

resource immobility: ಸಂಪನ್ಮೂಲಗಳ ಅಚಲತೆ.

resource mobilisation: ಸಂಪನ್ಮೂಲ ಸಂಗ್ರಹಣೆ.

resource unit: ಸಂಪನ್ಮೂಲ ಘಟಕ.

resourceful mind: ವ್ಯವಹಾರ ಚತುರ ಮನಸ್ಸು.

resourcefulness: ಸಂಪನ್ಮೂಲ ಸಮೃದ್ಧತೆ.

respectful distance: ಗೌರವಯುತ ಅಂತರ.

respondent: ಸಂವಾದಿ; ಉತ್ತರಿಸುವ ವ್ಯಕ್ತಿ; ಮಾಹಿತಿದಾರ.

response: ಪ್ರತಿಕ್ರಿಯೆ.

response by analogy: ಹೋಲಿಕೆಯ ಪ್ರತಿಕ್ರಿಯೆ.

response cries: ಪ್ರತಿಕ್ರಿಯಾ ಕೂಗುಗಳು. ಅನುದ್ದೇಶಿತ ಉದ್ಗಾರಗಳು-ಆಶ್ಚರ್ಯ ಸೂಚಕ, ಸಂತೋಷ ಸೂಚಕ ಇತ್ಯಾದಿ.

response time: ಪ್ರತಿಕ್ರಿಯಾ ಕಾಲ.

response variable: ಪ್ರತಿಕ್ರಿಯಾ ಪರಿವರ್ತಕ.

responsible government: ಜವಾಬ್ದಾರಿ ಸರಕಾರ. ತಾನು ಕೈಗೊಂಡ ಕ್ರಮಗಳ ವಿಷಯದಲ್ಲಿ ಪಾರ್ಲಿಮೆಂಟಿಗೂ ಮತ್ತು ತನ್ಮೂಲಕ ದೇಶದ ಜನತೆಗೂ ಜವಾಬ್ದಾರವಾಗಿರುವ ಸರಕಾರ.

responsible parenthood: ಜವಾಬ್ದಾರಿಯುತ ಪಾಲಕತ್ವ.

restitution: ಪುನಃ ಸ್ವಾಧೀನತೆ; ಪ್ರತ್ಯರ್ಪಣ; ನಷ್ಟಪರಿಹಾರ.

restoration: ಪುನಃಸ್ಥಾಪನೆ; ಮರುಸ್ಥಾಪನೆ; ರಾಜಪ್ರಭುತ್ವದ ಪುನರ್‌ಸ್ಥಾಪನೆ.

restorative rebellion: ಪುನಃಸ್ಥಾಪನಾ ದಂಗೆ.

restrain: ತಡೆಹಿಡಿ; ನಿಗ್ರಹಿಸು; ಪ್ರತಿಬಂಧಿಸು.

restraining influence of ideas: ವಿಚಾರಗಳ ನಿಗ್ರಹೀ ಪ್ರಭಾವ.

restraining order: ಪ್ರತಿಬಂಧಕಾಜ್ಞೆ.

restricted code: ಪರಿಮಿತ ಸಂಕೇತ ಭಾಷೆ. ಶಬ್ದದ ಅವಶ್ಯಕತೆ ಇಲ್ಲದೇನೇ ಸಾಂಸ್ಕೃತಿಕ ತಿಳುವಳಿಕೆಯಲ್ಲಿ ಬೆಳೆದ ಸಂಕೇತ ಭಾಷೆ.

restricted franchise: ನಿರ್ಬಂಧಿತ ಅಥವಾ ಸೀಮಿತವಾದ ಮತಾಧಿಕಾರ. ರಾಷ್ಟ್ರದ ಎಲ್ಲಾ ಪೌರರಿಗೂ ಸಮಾನ ಮತದಾನದ ಅಧಿಕಾರವಿಲ್ಲದೆ, ಕೆಲವೊಂದು ಅರ್ಹತೆಯ ಆಧಾರದ ಮೇಲೆ (ಜಾತಿ, ಲಿಂಗ, ಅಂತಸ್ತು, ಆಸ್ತಿ, ಶಿಕ್ಷಣ ಇತ್ಯಾದಿ) ಸೀಮಿತಗೊಳಿಸಿದ ಮತದಾನದ ಅಧಿಕಾರ.

restricted interaction: ಪ್ರತಿಬಂಧಿತ ಅಂತರ್‌ಕ್ರಿಯೆ.

restricted interpretation: ಸಂಕುಚಿತ ಅರ್ಥವಿವರಣೆ; ಸೀಮಿತವಾಗಿ ಅರ್ಥೈಸುವುದು.

restricted marital exchange: ಸೀಮಿತ ದಾಂಪತ್ಯ ವಿನಿಮಯ. ಎರಡು ಗುಂಪಿನೊಳಗೇ ಮದುವೆಯಾಗುವುದು.

restricted patriarchal family: ಸೀಮಿತ ಪಿತೃ ಪ್ರಧಾನ ಕುಟುಂಬ. ೧೭ನೇ ಶತಮಾನದಿಂದ ೧೯ನೇ ಶತಮಾನದ ಮಧ್ಯಭಾಗದವರೆಗೆ ಯುರೋಪಿನಲ್ಲಿ ಪ್ರಚಲಿತವಿದ್ದ ಪರಿವರ್ತನಶೀಲ ಕುಟುಂಬ ವಿಧಾನ. ಇಂಥ ಕುಟುಂಬಗಳಲ್ಲಿ ಕೌಟುಂಬಿಕ ಘಟಕವು

ಹೊರಗಿನ ಸಮುದಾಯಕ್ಕಿಂತ ಪ್ರತ್ಯೇಕಿಸಲ್ಪಟ್ಟಿತ್ತು ಹಾಗೂ ತಂದೆಯ ಸ್ಥಾನ ಮಾನಕ್ಕೆ ಕುಟುಂಬದಲ್ಲಿ ಹೆಚ್ಚಿನ ಒತ್ತು ಕೊಡಲಾಗುತ್ತಿತ್ತು.

restrictive covenant: ನಿರ್ಬಂಧಿತ ಒಪ್ಪಂದ. ಒಂದು ವಸತಿ ಪ್ರದೇಶದಲ್ಲಿ ಆಸ್ತಿ ಮಾರಾಟ ಮಾಡುವವರು ಒಂದು ನಿರ್ದಿಷ್ಟ ಸಮೂಹದ ಜನರೊಳಗೆ ಅಥವಾ ಸಾಮಾಜಿಕ ಪ್ರವರ್ಗದೊಳಗೇ ಗಿರಾಕಿಗಳನ್ನು ಹುಡುಕ ಬೇಕೆಂಬ ನಿರ್ಬಂಧ.

resurrection: ಸ್ವರ್ಗಾರೋಹಣ. ಉದಾ: ಯೇಸುಕ್ರಿಸ್ತ ಸ್ವರ್ಗಕ್ಕೇರಿದ ರೀತಿ.

retail price: ಚಿಲ್ಲರೆ ಬೆಲೆ.

retail trade: ಚಿಲ್ಲರೆ ವ್ಯಾಪಾರ.

retained earning: ಉಳಿಸಿದ ಗಳಿಕೆ.

retaliation: ಬದಲೀ ಕ್ರಮ; ಪ್ರತೀಕಾರ ಯುಕ್ತ ಕ್ರಮ.

retaliative behaviour: ಪ್ರತೀಕಾ ರಾತ್ಮಕ ವರ್ತನೆ.

retardation: ಹಿಂಬೀಳಿಕೆ; ವಿಲಂಬನ. ಗೊತ್ತಾದ ಅಥವಾ ಲೆಕ್ಕ ಹಾಕಿದ ಕಾಲದಲ್ಲಿ ಆಗಬೇಕಾದ ಬೆಳವಣಿಗೆಯಲ್ಲಿ ಹಿಂಬೀಳುವುದು.

retention price: ಬೆಲೆ ಹಿಡಿದಿಡುವಿಕೆ.

retirement centre: ನಿವೃತ್ತಿ ಕೇಂದ್ರ. ಉತ್ತಮ ಹವೆ ಇರುವಂಥ ನಗರ ಪ್ರದೇಶಗಳಿಗೆ ನಿವೃತ್ತಿ ಹೊಂದಿದ ಜನರು ಚಲಿಸುವ ಕೇಂದ್ರ.

retirement system: ನಿವೃತ್ತಿ ಪದ್ಧತಿ.

retreatism: ಹಿನ್ನಡೆ; ನಿಸ್ಸಂಗತ್ವ.

retreatist sub-culture: ನಿಸ್ಸಂಗತ್ವದ ಉಪಸಂಸ್ಕೃತಿ.

retrenchment: ವಜಾ ಮಾಡುವಿಕೆ. ಯಾವುದೇ ಕಾರಣಕ್ಕಾಗಿ ಸರಕಾರಿ ಸಂಸ್ಥೆಯ ಇಲ್ಲವೇ ಇಲಾಖೆಯ ಅಧಿಕಾರಿಗಳ ಸಂಖ್ಯೆಯನ್ನು ಕಡಿಮೆ ಮಾಡುವುದು.

retributive aim: ಪ್ರತೀಕಾರದ ಉದ್ದೇಶ.

retroactive theory of forgetting: ಪೂರ್ವವರ್ತೀ ವಿಸ್ಮರಣ ಸಿದ್ಧಾಂತ.

retroactive amnesia: ಪೂರ್ವಕ್ರಿಯಾ ವಿಸ್ಮರಣೆ.

retroactive facilitation: ಪೂರ್ವ ಕ್ರಿಯಾ ಸೌಕರ್ಯ.

retroactive inhibition: ಪೂರ್ವ ಲಕ್ಷೀ ಅವರೋಧ.

retrograde amnesia: ಭಾವಾಘಾತ ಪೂರ್ವ ಮರೆವು ರೋಗ.

retrospection: ಪುನರಾವಲೋಕನ.

retrospective: ಪೂರ್ವಾನ್ವಯಿತ.

retrospective complex feeling: ಪೂರ್ವಾನ್ವಯಿತ ಸಂಕೀರ್ಣ ಭಾವನೆ.

retrospective desires: ಪೂರ್ವಾನ್ವಯಿತ ಇಚ್ಛೆಗಳು.

retrospective method: ಪೂರ್ವಾವಲೋಕೀ ವಿಧಾನ.

retrospective plan: ಪೂರ್ವಾನ್ವಯಿತ ಯೋಜನೆ.

returning officer: ಚುನಾವಣಾಧಿಕಾರಿ.

returns to scale: ಪ್ರತಿಫಲ ಪ್ರಮಾಣಗಳು. ಉತ್ಪಾದನಾ ಪ್ರಕ್ರಿಯೆಯಲ್ಲಿ ಎಲ್ಲಾ ಆದಾನಗಳ ಅಳವಡಿಸಿಕೊಳ್ಳುವಿಕೆಯ

ಪ್ರಮಾಣಾನುಗುಣ ಹೆಚ್ಚಳದಿಂದ ಉಂಟಾಗುವ ಉತ್ಪನ್ನದ ಪ್ರಮಾಣಾನುಗುಣ ಹೆಚ್ಚಳ.

revaluation: ಪುನರ್ ಮೌಲ್ಯಮಾಪನ.

revaluation of assets: ಆಸ್ತಿಪಾಸ್ತಿಗಳ ಪುನರ್ ಮೌಲ್ಯಾಂಕನ.

revaluation of currency: ಹಣದ (ಕರೆನ್ಸಿಯ) ಪುನರ್ ಮೌಲ್ಯಮಾಪನ.

revealed preference theorem: ಅಭಿವ್ಯಕ್ತ (ಪ್ರಕಟಿತ) ಒಲವಿನ ಸಿದ್ಧಾಂತ.

revelation: ಅಂತರ್ಜ್ಞಾನ; ದಿವ್ಯ ದರ್ಶನ.

revenge cannibalism: ಸೇಡಿನ ನರಭಕ್ಷಕತನ. ಸೇಡು ಅಥವಾ ವೈರತ್ವ ತೀರಿಸುವುದಕ್ಕಾಗಿ ಮೃತ ಶತ್ರುಗಳ ಮಾಂಸ ಭಕ್ಷಣೆ ಮಾಡುವ ಕ್ರಮ. ಉದಾ: ಆಸ್ಟ್ರೇಲಿಯಾದ ನರಿಗೋವ ಪಂಗಡದ ಜನರು ಮೃತ ಶತ್ರುಗಳ ಬಗ್ಗೆ ತುಚ್ಛ ಮಾತುಗಳನ್ನಾಡುತ್ತಾ ಅವರ ಮಾಂಸ ತಿನ್ನುವ ಸಂಪ್ರದಾಯವಿದೆ.

revenue: ಕಂದಾಯ; ಆದಾಯ.

revenue budget: ಕಂದಾಯ ಮುಂಗಡ ಪತ್ರ.

revenue budgeting: ಕಂದಾಯದ ಅಂದಾಜೀಕರಣ.

revenue expenditure: ಆದಾಯ (ಕಂದಾಯ) ವೆಚ್ಚ.

revenue income and expen diture: ಕಂದಾಯ ಆದಾಯ ಮತ್ತು ವೆಚ್ಚ; ಕಂದಾಯ ಆಯವ್ಯಯ.

revenue tariff: ಕಂದಾಯ (ಆದಾಯ) ಸುಂಕ. ದೇಶದ ಖಜಾನೆಗೆ ಆದಾಯ ತರುವುದೇ ಸುಂಕದ ಉದ್ದೇಶವಾದರೆ ಅಂತಹ ಸುಂಕ ಆದಾಯ ಸುಂಕವೆನಿಸುವುದು.

reverberation in imagination: ಕಾಲ್ಪನಿಕ ಹಿಂಗಮನ.

reverberation through person ality: ವ್ಯಕ್ತಿತ್ವದ ಮೂಲಕ ಹಿಂಗಮನ.

reversal formation: ವಿಪರ್ಯಾಯ ರೂಪಣ.

reversal principle: ವೈರುಧ್ಯ ತತ್ವ.

reverse multiplier: ಹಿಮ್ಮುಖದ ಗುಣಕ; ವಿಪರ್ಯಸ್ತ ಗುಣಕ. ಹೂಟೆಯ ಪ್ರಮಾಣವು ಕಡಿಮೆಯಾದಾಗ ವರಮಾನವು ಹಲವಾರು ಪಟ್ಟು ಕಡಿಮೆಯಾಗುವ ಹಿಮ್ಮುಖ ಕ್ರಿಯೆ.

reversed cues: ವ್ಯತಿಕ್ರಮಿತ ಸಂಕೇತಗಳು.

reversible configuration: ವ್ಯತಿ ಕ್ರಮ ಸಾಧ್ಯ ವಿನ್ಯಾಸ.

reversible reaction: ವ್ಯತಿಕ್ರಮಸಾಧ್ಯ ಪ್ರತಿಕ್ರಿಯೆ.

reviewing officer: ಪರಿಶೀಲನಾ ಧಿಕಾರಿ.

revised series: ಪರಿಷ್ಕೃತ ಸರಣಿ.

revisionism: ಪರಿಷ್ಕರಣವಾದ. ಉದಾಹರಣೆಗೆ ಸಮತಾವಾದದ ಪರಿಷ್ಕರಣದಲ್ಲಿ ಮಾರ್ಕ್ಸ್‌ವಾದ-ಲೆನಿನ್‌ವಾದದ ರಾಜಕೀಯ, ದಾರ್ಶನಿಕ ಮತ್ತು ಆರ್ಥಿಕ ಬುನಾದಿಗಳನ್ನು ಪುನರ್‌ಪರಿಶೀಲಿಸಲು ಅಥವಾ ಪರಿಷ್ಕರಿಸಲು ಪ್ರಯತ್ನ ನಡೆ ಯಿತು.

revitalization movement: ಪುನ ಶ್ಚೇತನ ಆಂದೋಲನ.

revival: ಚೇತರಿಕೆ; ಪುನಶ್ಚೇತನ. ಆರ್ಥಿಕ ಆವರ್ತದ ಒಂದು ಹಂತ.

revocable letter of credit: ರದ್ದು ಮಾಡಬಹುದಾದ ಪತ್ತಿನ ಪತ್ರ. ಬ್ಯಾಂಕು ತನ್ನ ಸಾಲ ಸೌಲಭ್ಯದ ಫಲಾನುಭವಿಗೆ ಯಾವುದೇ ಪೂರ್ವ ಸೂಚನೆಯಿಲ್ಲದೆ ಪತ್ತಿನ ಪತ್ರವನ್ನು ರದ್ದು ಮಾಡಬಹುದಾಗಿದೆ.

revoke : ಹಿಂತೆಗೆದುಕೊಳ್ಳು.

revolution: ಕ್ರಾಂತಿ. ಸಮಾಜದಲ್ಲಿನ ಮೂಲಭೂತ ವಿಷಯಗಳಲ್ಲಿ ಆಗುವ ಬದಲಾವಣೆ.

revolutionary consciousness: ಕ್ರಾಂತಿಕಾರಿ ಪ್ರಜ್ಞೆ. ಬಂಡವಾಳಶಾಹಿ ವ್ಯವಸ್ಥೆಯನ್ನು ಬದಲಾವಣೆಗೊಳಿಸುವುದು ಕ್ರಾಂತಿಯ ಮೂಲಕ ಮಾತ್ರ ಸಾಧ್ಯ ಮತ್ತು ಕಾರ್ಮಿಕರು ಕ್ರಾಂತಿಕಾರಿ ಪ್ರಜ್ಞೆ ಪಡೆದಾಗ ಮಾತ್ರ ಕ್ರಾಂತಿ ಸಂಭವಿಸುತ್ತದೆಯೆಂಬ ಮಾರ್ಕ್ಸ್‌ನ ನಿಲುವು.

revolutionary democracy: ಕ್ರಾಂತಿಕಾರಿ ಪ್ರಜಾಪ್ರಭುತ್ವವಾದ. ನಗರಗಳ ಪುಟ್ಟ ಬಂಡವಾಳಶಾಹಿ ವರ್ಗದ ಮತ್ತು ಪುರೋಗಾಮಿ ಬುದ್ಧಿ ಜೀವಿಗಳ ಕ್ರಿಯಾಶೀಲ ಸದಸ್ಯರನ್ನೊಳಗೊಂಡಿರುವ ಒಂದು ರಾಜಕೀಯ ಶಕ್ತಿ. ಅದು ಪಾಳೆಯಗಾರಿ ವಿರೋಧಿ, ಸಾಮ್ರಾಜ್ಯಶಾಹಿ ವಿರೋಧಿ ಮತ್ತು ಬಂಡವಾಳಶಾಹಿ ವಿರೋಧಿ ಹೋರಾಟಗಳಿಗೆ ಹಾಗೂ ಈ ವರ್ಗಗಳ ಹಿತಾಸಕ್ತಿಗಳನ್ನು ವ್ಯಕ್ತಗೊಳಿಸುವ ಪಾರ್ಟಿ ಗಳು, ಸಂಸ್ಥೆಗಳು ಮತ್ತು ತಂಡಗಳಿಗೆ ಬೆಂಬಲವನ್ನು ನೀಡುತ್ತದೆ.

revolutionary party: ಕ್ರಾಂತಿಕಾರಿ ಪಕ್ಷ.

revolutionary terror: ಕ್ರಾಂತಿಕಾರಿ ಭಯ. ಕ್ರಾಂತಿಕಾರಿ ನಾಯಕರು ತಮ್ಮ ನಿಯಮಗಳನ್ನು ಒತ್ತಾಯಪೂರ್ವಕವಾಗಿ ಹೇರಲು ಹಿಂಸೆಯನ್ನು ಅಥವಾ ಭಯವನ್ನು ಉಪಯೋಗಿಸುವುದು.

revolutionary vigilance: ಕ್ರಾಂತಿಕಾರಿ ಜಾಗೃತಿ. ಕ್ರಾಂತಿಯ ಶತ್ರುಗಳನ್ನು ಗುರುತಿಸುವ ಮತ್ತು ನಿಷ್ಕ್ರಿಯಗೊಳಿಸುವ ಸಾಮರ್ಥ್ಯ. ಬಂಡವಾಳಶಾಹಿ ವ್ಯವಸ್ಥೆ ಮತ್ತು ಸಮಾಜವಾದಗಳ ನಡುವೆ ತೀವ್ರವಾದ ವರ್ಗಸಮರದ ಪರಿಸ್ಥಿತಿಗಳಲ್ಲಿ ಕ್ರಾಂತಿಕಾರಿಗಳು ದಿಕ್ಕು ತಪ್ಪದೆ ತಮ್ಮ ನೆಲೆಯನ್ನು ಕಂಡುಕೊಳ್ಳುವ ಸಾಮರ್ಥ್ಯ.

revolving fund: ಆವರ್ತ ನಿಧಿ. ಕೆಲವು ನಿರ್ದಿಷ್ಟ ಉದ್ದೇಶಗಳಿಗಾಗಿ ಸಂಗ್ರಹಿಸಲಾದ ಹಾಗೂ ಸ್ವಯಂ ವಿಸರ್ಜಿತಗೊಳ್ಳುವ ವಿಶೇಷ ನಿಧಿ.

reward for service: ಸೇವಾ ಪುರಸ್ಕಾರ.

reward system: ಪುರಸ್ಕಾರ ಪದ್ಧತಿ. ವ್ಯಕ್ತಿಯ ಸಾಧನೆ-ಸದ್ವರ್ತನೆಗೆ ಹೊಗಳಿಕೆ, ಬಹುಮಾನ, ಸನ್ಮಾನಗಳಿಂದ ಪುರಸ್ಕರಿಸುವ ಪದ್ಧತಿ.

rewards and punishments: ಬಹುಮಾನಗಳು ಮತ್ತು ಶಿಕ್ಷೆಗಳು.

ribbon development: ನೋಡಿ: conurbation.

Ricardian theory of rent: ರಿಕಾರ್ಡೋನ ಗೇಣಿ ಸಿದ್ಧಾಂತ. ಗೇಣಿಯು ಭೂಮಿಯ ಫಲವತ್ತತೆಯಲ್ಲಿನ ಭಿನ್ನತೆಯಿಂದ ನಿರ್ಧರಿಸಲ್ಪಡುತ್ತದೆಯೆನ್ನುವುದನ್ನು ವಿವರಿಸುವ ಸಿದ್ಧಾಂತ.

Ricardo effect: ರಿಕಾರ್ಡೋ ಪರಿಣಾಮ.

riddle song: ಒಗಟು ಗೀತೆ.

riddle tale: ಒಗಟು ಕತೆ. ಒಗಟಿಗೂ ಕಥೆಗೂ ಇರುವ ಸಂಬಂಧವನ್ನು ಹೇಳುವ ಕಥೆ. ಕಥಾರೂಪದಲ್ಲಿರುವ ಒಗಟು ಎಂದೂ ಹೇಳಬಹುದು.

riddles: ಒಗಟುಗಳು.

right: ಹಕ್ಕು; ಯುಕ್ತ. ಸಾಮಾಜಿಕ ಮಾನ್ಯತೆಯುಳ್ಳ ನೈತಿಕ ಹಾಗೂ ನ್ಯಾಯಾತ್ಮಕ ಹಕ್ಕು.

right against exploitation: ಶೋಷಣೆಯ ವಿರುದ್ಧ ಹಕ್ಕು. ಯಾವುದೇ ರೀತಿಯ ಶೋಷಣೆಯ ವಿರುದ್ಧ ನಾಗರಿಕರು ಸರಕಾರದಿಂದ ಭದ್ರತೆಯನ್ನು ಪಡೆಯುವ ಮೂಲಭೂತ ಹಕ್ಕು. ಉದಾ: ಗುಲಾಮಗಿರಿ, ಮನುಷ್ಯ ವ್ಯಾಪಾರ ಮತ್ತು ಒತ್ತಾಯದ ದುಡಿತಗಳಿಂದ ಮುಕ್ತಿ ಪಡೆಯುವ ಹಕ್ಕು.

right handedness: ಬಲಗೈತನ.

right of appeal: ಮನವಿ ಸಲ್ಲಿಸುವ ಹಕ್ಕು.

right of asylum: ಶರಣಾಶ್ರಯದ ಹಕ್ಕು. ರಾಜಕೀಯ, ಧಾರ್ಮಿಕ ಅಥವಾ ಜನಾಂಗೀಯ ದ್ವೇಷಕ್ಕೊಳಗಾಗಿ ಹೊರದೂಡಲ್ಪಟ್ಟವರಿಗೆ ಇನ್ನೊಂದು ಸಾರ್ವಭೌಮ ರಾಷ್ಟ್ರವು ಆಶ್ರಯ ನೀಡುವ ಹಕ್ಕು.

right of collective bargaining: ಸಾಮೂಹಿಕ ಚೌಕಾಸಿಯ ಹಕ್ಕು.

right to advice: ಸಲಹೆ ಕೊಡುವ ಹಕ್ಕು. ಉದಾ: ಇಂಗ್ಲೆಂಡ್‌ನ ಅರಸ ಅಥವಾ ಭಾರತದ ರಾಷ್ಟ್ರಪತಿ ರಾಜ್ಯಾಡಳಿತದ ವಿಷಯಗಳಲ್ಲಿ ಮಂತ್ರಿಮಂಡಲ ಅಥವಾ ಸರಕಾರಕ್ಕೆ ಸಲಹೆ ಕೊಡುವ ಹಕ್ಕು.

right to affiliate: ಸೇರ್ಪಡೆ ಹಕ್ಕು; ವಿಲೀನದ ಹಕ್ಕು.

right to association: ಸಂಘಟನೆಯ ಹಕ್ಕು.

right to citizenship: ನಾಗರಿಕತ್ವದ ಹಕ್ಕು.

right to constitutional remedies: ಸಂವಿಧಾನಾತ್ಮಕ ಪರಿಹಾರದ ಹಕ್ಕು. ಭಾರತದ ಪ್ರಜೆಯ ಮೂಲಭೂತ ಹಕ್ಕುಗಳಿಗೆ ಯಾವುದೇ ರೀತಿಯ ಧಕ್ಕೆ ಬಂದಾಗ ಕೋರ್ಟಿಗೆ ಹೋಗುವುದರ ಮೂಲಕ ಅದರ ರಕ್ಷಣೆಯನ್ನು ಮಾಡಿಕೊಳ್ಳುವ ಹಕ್ಕು.

right to contest: ಸ್ಪರ್ಧಿಸುವ ಹಕ್ಕು. ಉದಾ: ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕು.

right to contract: ಒಪ್ಪಂದದ ಹಕ್ಕು. ಒಪ್ಪಂದ ಮಾಡಿಕೊಳ್ಳುವ ಅರ್ಹತೆ ಇರುವಿಕೆ.

right to criticise: ಟೀಕಿಸುವ ಹಕ್ಕು. ಪ್ರಜಾಪ್ರಭುತ್ವದಲ್ಲಿ ಇದು ಮುಖ್ಯವಾದುದು.

right to earn: ಗಳಿಸುವ ಹಕ್ಕು.

right to education: ಶಿಕ್ಷಣದ ಹಕ್ಕು.

right to equality: ಸಮಾನತೆಯ ಹಕ್ಕು. ರಾಷ್ಟ್ರದ ಎಲ್ಲಾ ಪ್ರಜೆಗಳು ಜಾತಿ, ಮತ, ಧರ್ಮ, ಕುಲ, ಲಿಂಗ, ಜನ್ಮಸ್ಥಳಗಳ ಭೇದವಿಲ್ಲದೆ ಸಮಾನವಾಗಿ ಅವಕಾಶಗಳನ್ನು ಅನುಭವಿಸುವ ಹಕ್ಕು.

right to freedom: ಸ್ವಾತಂತ್ರ್ಯದ ಹಕ್ಕು.

right to freedom of religion: ಧಾರ್ಮಿಕ ಸ್ವಾತಂತ್ರ್ಯ. ಸರಕಾರವು ಪ್ರತಿಯೊಬ್ಬ ನಾಗರಿಕನಿಗೂ ತನ್ನದೇ ಆದ ಧರ್ಮವನ್ನು ಪಾಲಿಸುವ ಮತ್ತು ಅದನ್ನು ಪ್ರಚಾರಗೊಳಿಸಲು ನೀಡುವ ಹಕ್ಕು. ಆದರೆ ನಾಗರಿಕರು ಈ ಹಕ್ಕನ್ನು ದೇಶದ ಮತ್ತು ಸಮಾಜದ ಭದ್ರತೆಗೆ ಭಂಗವನ್ನುಂಟು ಮಾಡದಂತೆ ಅನುಭವಿಸಬೇಕಾಗುತ್ತದೆ.

right to information: ಮಾಹಿತಿ ಯನ್ನು ಪಡೆವ ಹಕ್ಕು. ಸರಕಾರದ ಕಾರ್ಯ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆಯಲು ರಾಷ್ಟ್ರದ ಮುಖ್ಯಸ್ಥನಿಗೆ (ಭಾರತದಲ್ಲಿ ರಾಷ್ಟ್ರಪತಿ, ಇಂಗ್ಲೆಡ್‌ನಲ್ಲಿ ಅರಸ) ಇರುವ ಹಕ್ಕು.

right to personal liberty: ವ್ಯಕ್ತಿ ಸ್ವಾತಂತ್ರ್ಯ. (ವೈಯಕ್ತಿಕ ಸ್ವಾತಂತ್ರ್ಯ)ದ ಹಕ್ಕು. ಉದಾ: ಅಕ್ರಮ ಬಂಧನಕ್ಕೊಳಗಾಗದಂತಹ ಸ್ವಾತಂತ್ರ್ಯ.

right to petition: ಮನವಿ ಸಲ್ಲಿಸುವ ಹಕ್ಕು.

right to private property: ಖಾಸಗಿ ಆಸ್ತಿಯ ಹಕ್ಕು.

right to public office: ಸಾರ್ವಜನಿಕ ಹುದ್ದೆಗಳನ್ನು ಹೊಂದುವ ಹಕ್ಕು.

right to reputation: ಆತ್ಮಗೌರವದ ಹಕ್ಕು.

right to resist: ಪ್ರತಿಭಟನೆಯ ಹಕ್ಕು.

right to strike: ಮುಷ್ಕರ ಹೂಡುವ ಹಕ್ಕು.

right to vote: ಮತದಾನದ ಹಕ್ಕು. ಪ್ರಜಾಪ್ರಭುತ್ವ ರಾಜ್ಯದಲ್ಲಿ ನಾಗರಿಕರಿಗಿರುವ ರಾಜಕೀಯ ಹಕ್ಕುಗಳಲ್ಲಿ ಅತ್ಯಂತ ಮಹತ್ವವಾದ ಹಕ್ಕು. ಈ ಹಕ್ಕಿನ ಮೂಲಕ ನಾಗರಿಕರು ತಮ್ಮ ಪ್ರತಿನಿಧಿಗಳನ್ನು ಚುನಾಯಿಸಿ, ಸರಕಾರವನ್ನು ರಚಿಸಿ ಅದರ ಮೂಲಕ ತಮ್ಮನ್ನು ತಾವೇ ಆಳಿಕೊಳ್ಳುತ್ತಾರೆ.

right to warn and suggest: ಎಚ್ಚರಿಕೆ ಹಾಗೂ ಸೂಚನೆಯನ್ನೀಯುವ ಹಕ್ಕು. ಸರಕಾರವನ್ನು ಎಚ್ಚರಿಸುವ ಹಾಗೂ ಕಾರ್ಯ ಚಟುವಟಿಕೆಗಳ ಬಗ್ಗೆ ಸಲಹೆ ಸೂಚನೆಯನ್ನು ನೀಡುವ ರಾಷ್ಟ್ರದ ಮುಖ್ಯಸ್ಥನ ಹಕ್ಕು.

right to work: ಕೆಲಸದ ಹಕ್ಕು. ಸಮಾಜವಾದಿ ರಾಜ್ಯವು ತನ್ನ ನಾಗರಿಕರಿಗೆ ಖಾತರಿಯಾಗಿ ನೀಡುವ ಒಂದು ಹಕ್ಕು. ಇದು ಉದ್ಯೋಗ ಪಡೆಯುವ ಹಕ್ಕನ್ನು ಮಾತ್ರವಲ್ಲದೆ, ಕೆಲಸದ ಪ್ರಮಾಣ ಮತ್ತು ಗುಣಮಟ್ಟಗಳಿಗನುಸಾರವಾಗಿ ಸರಕಾರ ನಿಗದಿ ಮಾಡಿರುವ ಕನಿಷ್ಠ ಮಿತಿಗಿಂತ ಕಡಿಮೆಯಿಲ್ಲದಂತೆ ವೇತನ ಪಡೆಯುವ ಹಕ್ಕನ್ನೂ ಒಳಗೊಂಡಿದೆ.

right-wing trade unionism: ಬಲಪಂಥೀಯ ಕಾರ್ಮಿಕ ಸಂಘಟನಾ ವಾದ. ಕಾರ್ಮಿಕ ವರ್ಗದ ಚಳವಳಿಯಲ್ಲಿನ ಒಂದು ಬಲಪಂಥೀಯ ದೃಷ್ಟಿಕೋನ. ಬಂಡವಾಳಶಾಹಿ ವ್ಯವಸ್ಥೆಯ ಚೌಕಟ್ಟಿನೊಳಗೇನೇ ದುಡಿಯುವ ಪರಿಸ್ಥಿತಿಗಳನ್ನು ಮತ್ತು ಜೀವನದ ಸ್ಥಿತಿಗಳನ್ನು ಉತ್ತಮಗೊಳಿಸಲು ಮಾತ್ರ ಹೋರಾಟವು ಸೀಮಿತವಾಗಿರಬೇಕು ಎಂದು ಅದು ಹೇಳುತ್ತದೆ.

rightist group: ಬಲಪಂಥೀಯ ಗುಂಪು.

rightist party: ಬಲಪಂಥೀಯ ಪಕ್ಷ.

rightists: ಬಲಪಂಥೀಯರು.

rigid constitution: ಅನಮ್ಯ ಸಂವಿಧಾನ. ಬದಲಾಗುವ ಕಾಲ ಮತ್ತು ಸಂದರ್ಭಕ್ಕೆ ಸುಲಭವಾಗಿ ಹೊಂದಿಕೊಳ್ಳಲಾಗದ ಸಂವಿಧಾನ.

rigid orthodoxy: ಕಟ್ಟುನಿಟ್ಟಿನ ಸಂಪ್ರದಾಯ ಬದ್ಧತೆ.

rigid party system: ಕಟ್ಟುನಿಟ್ಟಾದ ಪಕ್ಷ ವ್ಯವಸ್ಥೆ.

rigidity : ಅನಮ್ಯತೆ.

Rigbeda: ಋಗ್ವೇದ. ಹಿಂದೂಗಳ ನಾಲ್ಕು ಮುಖ್ಯ ವೇದಗಳಲ್ಲಿ ಮೊದಲನೆಯದು ಮತ್ತು ಪ್ರಾಚೀನವಾದುದು.

riot: ದಂಗೆ. ವ್ಯಕ್ತಿಗಳ, ಆಸ್ತಿಗಳ ಅಥವಾ ಎರಡರ ಮೇಲೂ ಅನ್ಯಾಯಯುತ ಕ್ರೌರ್ಯ.

rising cost condition: ಏರುಮುಖ ವೆಚ್ಚದ ಸ್ಥಿತಿ.

risk bearing economies: ಗಂಡಾಂತರ (ಅಪಾಯ)ವನ್ನು ಸಹಿಸಿಕೊಳ್ಳುವುದಕ್ಕೆ ಪ್ರತಿಯಾಗಿ ದೊರೆಯುವ ಮಿತವ್ಯಯ.

risk bearing theory of profit: ಗಂಡಾಂತರ ಸಹಿಸಿಕೊಳ್ಳುವ ಲಾಭದ ಸಿದ್ಧಾಂತ. ಲಾಂಭಾಂಶದಲ್ಲಿ ಔದ್ಯಮಿಕ ಅಪಾಯವನ್ನು ಎದುರಿಸುವುದಕ್ಕೆ ದೊರೆಯುವ ಪಾಲಿನ ಸಿದ್ಧಾಂತ.

rite: ನೋಡಿ: ritual ceremony.

rites de passage: ಜೀವನ ಯಾತ್ರೆಯ ಸಂಸ್ಕಾರಗಳು. ಜೀವನದುದ್ದಕ್ಕೂ ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಪ್ರವೇಶಿಸುವ ಸಂದರ್ಭದಲ್ಲಿ ಆಚರಿಸುವ ವಿಧಿಗಳು. ಉದಾ: ದೀಕ್ಷೆ, ವಿವಾಹ ಇತ್ಯಾದಿ.

rites of intensification: ೧. ಸಮೂಹದ ಸಂಘಟನೆಯ ಸಂಸ್ಕಾರಗಳು. ಸಮೂಹ ಐಕ್ಯತೆಯನ್ನು ಬಲಪಡಿಸುವ ಮುಖ್ಯ ಉದ್ದೇಶವಿಟ್ಟುಕೊಂಡು ಮಾಡುವ ಸಮಾರಂಭಗಳು. ೨. ಜ್ಞಾಪನಾಚರಣೆಗಳು. ೩. ಕೆಲವೊಂದು ಆಚರಣೆಗಳ ಮೂಲಕ ವ್ಯಕ್ತಿಗಳು ತಮ್ಮ ಕಾರ್ಯ ಹಾಗೂ ಸಂಬಂಧಗಳ ಕುರಿತಾಗಿ ನಿರಂತರ ಎಚ್ಚರ ಕಾಯ್ದುಕೊಳ್ಳುವುದು.

rites of passage: ನೋಡಿ: rites de passage.

ritual: ಕ್ರಿಯಾವಿಧಿ; ಧಾರ್ಮಿಕ ವಿಧಿ; ಸಂಸ್ಕಾರ; ಶಾಸ್ತ್ರೋಕ್ತಿ. ಸಂಪ್ರದಾಯ ನಿರ್ದೇಶಿತವಾದ ಸಂದರ್ಭಗಳಲ್ಲಿ ಆಚರಿಸಲ್ಪಡುವ, ಸಾಂಕೇತಿಕ ಪ್ರಾಮುಖ್ಯತೆ ಇರುವ ಸಾಂಸ್ಕೃತಿಕವಾಗಿ ಪ್ರಮಾಣೀಕರಿಸಲ್ಪಟ್ಟ ಆಚರಣೆಗಳು.

ritual cannibalism: ಕ್ರಿಯಾವಿಧಿಯ ನರಭಕ್ಷಕತನ. ಮೃತ ವ್ಯಕ್ತಿಯ ಪಂಗಡದವರು ಆತನ ಶರೀರದ ಸ್ವಲ್ಪ ಅಥವಾ ಇಡೀ ಭಾಗವನ್ನು ವಿಧ್ಯುಕ್ತವಾಗಿ ಸೇವಿಸುವುದು. ಹೀಗೆ ಸೇವಿಸುವವರು ಆತನ ಹತ್ತಿರದ ಸಂಬಂಧಿಗಳು ಅಥವಾ ಅದೇ ಪಂಗಡದವರಾಗಿರುತ್ತಾರೆ.

ritual ceremony: ಧಾರ್ಮಿಕ ವಿಧಿ ಆಚರಣೆ.

ritual continence: ಸಂಸ್ಕಾರ ಸಂಬಂಧವಾದ ಇಂದ್ರಿಯ ನಿಗ್ರಹ. ಧಾರ್ಮಿಕ ಅಥವಾ ಇನ್ನಿತರ ಕಾರಣಗಳಿಗಾಗಿ ದಂಪತಿಗಳು ಲೈಂಗಿಕ ಸಂಪರ್ಕದಿಂದ ದೂರ ಇರುವುದು.

ritual kinship: ಕ್ರಿಯಾವಿಧಿ ಬಂಧುತ್ವ.

ಮದುವೆ ಅಥವಾ ರಕ್ತ ಸಂಬಂಧದ ಹೊರತಾಗಿ ಕಾರ್ಯಾತ್ಮಕ ಸಂಬಂಧದ ಮೂಲಕ ಏರ್ಪಡುವ ಬಂಧುತ್ವ. ನೋಡಿ: social father hood.

ritual language: ಕ್ರಿಯಾ ವಿಧಿ ಭಾಷೆ. ಧಾರ್ಮಿಕ ಆಚರಣೆಗಳಲ್ಲಿ ಬಳಸುವ ಭಾಷೆ. ಸಮುದಾಯದ ದೈನಂದಿನ ಭಾಷೆಗಿಂತ ವಿಭಿನ್ನವಾದ ಭಾಷೆ. ಉದಾ : ಮಂತ್ರಗಳು.

ritual mentality: ಆಚರಣಾ ಮನೋಭಾವ.

ritual of passage: ನೋಡಿ: rites de passage.

rituals of agriculture: ಕೃಷಿ ಸಂಬಂಧಿತ ಆಚರಣೆಗಳು; ಕೃಷಿ ಸಂಸ್ಕಾರಗಳು. ಕೃಷಿಗಾಗಿ ಮಣ್ಣನ್ನು ಹದಗೊಳಿಸುವುದು. ಬಿತ್ತುವುದು ಮತ್ತು ಬೆಳೆಯ ರಕ್ಷಣೆಗೆ ಸಂಬಂಧಿಸಿದ ದೈವೀ ಆಚರಣೆಗಳನ್ನು ಕೃಷಿ ಸಂಸ್ಕಾರಗಳೆನ್ನಲಾಗುತ್ತದೆ.

ritual performance: ಆಚರಣಾತ್ಮಕ ಪ್ರದರ್ಶನ. ಜಾನಪದ ಸಂದರ್ಭದಲ್ಲಿ ಪ್ರದರ್ಶನವೆಂದರೆ ಸಂಸ್ಕೃತಿಯ ಪರಂಪರೆಯೊಂದು (ಕತೆ, ಗೀತೆ, ಗಾದೆ, ಆಚರಣೆ ಇತ್ಯಾದಿ) ಶೈಲೀಕೃತಗೊಂಡು ಸಾಂದರ್ಭಿಕ ಹಿನ್ನಲೆಯೊಂದಿಗೆ ದೃಶ್ಯರೂಪದಲ್ಲಿ ನಿರೂಪಣೆಗೊಳ್ಳುವ ಪ್ರಕ್ರಿಯೆ. ಇಲ್ಲಿ ಪಠ್ಯವೆನ್ನುವುದು ಆದರ್ಶೀಕೃತವಾದುದಲ್ಲ. ಯಾವುದೇ ಪೂರ್ವನಿಶ್ಚಿತ ಗ್ರಹೀತಕ್ಕೆ ಬದ್ಧವಾದುದೂ ಅಲ್ಲ; ಸಾಂಪ್ರದಾಯಿಕವೂ ಅಲ್ಲ. ಯಾವುದೋ ಒಂದು ವಿಶಿಷ್ಟ ಸಂದರ್ಭದಲ್ಲಿ ವಾಸ್ತವಿಕವಾಗಿ ಪ್ರದರ್ಶನ ಗೊಂಡುದು. ಪ್ರದರ್ಶನ ಒಂದು ಜೀವಂತ ನಿರೂಪಣಾ ವಿಧಾನ. ಅದು ಯಥಾವತ್ತಾಗಿ ಪುನರಾವರ್ತನೆಗೊಳ್ಳದು. ನಿರಂತರ ಹರಿಯುವಿಕೆಯಲ್ಲೇ ಅದರ ಅಸ್ತಿತ್ವ.

ritual riddle: ಧಾರ್ಮಿಕ ವಿಧಿ ಒಗಟು. ಯಜ್ಞಯಾಗಾದಿ ಕರ್ಮಾಚರಣೆಗಳಲ್ಲಿ ಬಳಕೆಯಾಗುವ ಒಗಟುಗಳು. ಮತಧರ್ಮದ ಪರವಾದ ಇಂಥ ಒಗಟುಗಳು ಬಹುತೇಕ ಸಾಹಿತ್ಯಿಕ ಪರಂಪರೆಯವು.

ritual theatre: ಆಚರಣಾತ್ಮಕ ರಂಗಭೂಮಿ.

ritual union: ಆಚರಣಾತ್ಮಕ ಸಂಯೋಗ; ಶೋಭನ ಪ್ರಸ್ಥ. ೧. ಬುಡಕಟ್ಟುಗಳಲ್ಲಿ ಕೆಲವೊಂದು ಆಚರಣೆಗಳ ಸಂದರ್ಭದಲ್ಲಿ ನೀಡಲಾಗುವ ಮುಕ್ತ ಲೈಂಗಿಕ ಜೊತೆಗೂಡುವಿಕೆ. ೨. ನಿಶ್ಚಿತ ಮೂಹೂರ್ತದಲ್ಲಿ ಪೂಜಾದಿ ಆರಾಧನೆಗಳನ್ನು ಮಾಡುವ ಮೂಲಕ ನವವಿವಾಹಿತರ ಲೈಂಗಿಕ ಸಂಯೋಗ.

ritualism: ಕರ್ಮಾಚರಣೆ; ಧಾರ್ಮಿಕ ವಿಧಿ ಆಚರಣೆ. ಇದು ಸಾಮೂಹಿಕ ಹೊಂದಾಣಿಕೆಯ ಒಂದು ವಿಧ. ಸಾಂಸ್ಕೃತಿಕವಾಗಿ ವಿವರಿಸಲ್ಪಟ್ಟ ಗುರಿಗಳನ್ನು ಸಾಧಿಸಲಾಗದ್ದೆಂಬ ಭಯದಿಂದ ತಿರಸ್ಕರಿಸಿದರೂ ತನ್ನ ಸುರಕ್ಷಿತ ಅಸ್ತಿತ್ವಕ್ಕಾಗಿ ಸಂಸ್ಥೀಕರಣಗೊಂಡ ದಿನಚರಿಗಳು ಹಾಗೂ ನಿಯಮಗಳಿಗೆ ಅಂಟಿಕೊಂಡು ಕೆಲಸ ಮಾಡುವ ಹೊಂದಾಣಿಕೆ.

ritualistic complex: ಆರಾಧನಾ ಸಂಕೀರ್ಣ. ಒಂದು ಭೂತಕ್ಕೆ ಬೇರೆ ಬೇರೆ ಸ್ಥಳಗಳಲ್ಲಿ ನಡೆಸುವ ಆರಾಧನೆಯನ್ನು ಒಟ್ಟಾಗಿ ಆರಾಧನಾ ಸಂಕೀರ್ಣ ಎನ್ನುವರು.

ಉದಾ: ಪಂಜುರ್ಲಿ ಭೂತದ ಆರಾಧನಾ ಸಂಕೀರ್ಣ.

ritualistic dance: ಆಚರಣಾತ್ಮಕ ಕುಣಿತ.

ritualistic folk theatre: ಧಾರ್ಮಿಕ ಜನಪದ ರಂಗಭೂಮಿ.

ritualistic hunting: ವಿಧ್ಯುಕ್ತ ಬೇಟೆ.

ritualistic riddle: ನೋಡಿ: ritual riddle.

ritualistic song: ಆಚರಣಾತ್ಮಕ ಗೀತೆ.

ritualistic tone: ಆಚರಣಾತ್ಮಕ ಧ್ವನಿ.

rivalry: ವೈರತ್ವ.

river valley civilization: ನದೀ ಕಣಿವೆಯ ನಾಗರಿಕತೆ.

rock edict: ಶಿಲಾ ಶಾಸನ.

role: ಪಾತ್ರ; ಭೂಮಿಕೆ. ನಿರ್ದಿಷ್ಟ ಹಕ್ಕುಗಳ ಮತ್ತು ಕರ್ತವ್ಯಗಳ ಸುತ್ತ ರಚಿತವಾದ ವರ್ತನಾ ವಿಧಾನ ಹಾಗೂ ಒಂದು ಸಾಮಾಜಿಕ ಸಂದರ್ಭ ಅಥವಾ ಸಮೂಹದ ಸ್ಥಾನ ಮಾನಗಳೊಂದಿಗೆ ಸಂಬಂಧವುಳ್ಳದ್ದು.

role anticipation: ನೋಡಿ: role expectation.

role behaviour: ಪಾತ್ರ; ವರ್ತನೆ. ಒಂದು ನಿರ್ದಿಷ್ಟ ಪಾತ್ರದಲ್ಲಿ ಸಾಮಾಜಿಕವಾಗಿ ನಿರೀಕ್ಷಿಸುವ ವರ್ತನೆ ಅಥವಾ ಒಂದು ಪಾತ್ರದ ಭಾಗವಾಗಿ ನಿರ್ವಹಿಸುವ ಪಾತ್ರ.

role cluster: ನೋಡಿ: multiple roles.

role compatibility: ಪಾತ್ರಾನು ರೂಪತೆ.

role conflict: ಪಾತ್ರ ತಿಕ್ಕಾಟ; ಪಾತ್ರ ಘರ್ಷಣೆ.

role demands: ಪಾತ್ರದ ನಿರೀಕ್ಷೆಗಳು. ವ್ಯಕ್ತಿಯು ಪಾತ್ರವನ್ನು ನಿರ್ವಹಿಸುವ ಸಂದರ್ಭದಲ್ಲಿ ಆತನ ಬಗ್ಗೆ ಇತರರ ನಿರೀಕ್ಷೆಗಳು.

role differentiation: ಪಾತ್ರ ಪ್ರಭೇದ.

role discontinuity: ಪಾತ್ರ ಅನಿರಂತರತೆ; ಪಾತ್ರ ವಿಚ್ಛಿನ್ನತೆ. ವೃತ್ತಿ ಜೀವನದಿಂದ ನಿವೃತ್ತಿಗೊಂಡ ಜೀವನದ ಪಾತ್ರ.

role expectations: ಪಾತ್ರ ನಿರೀಕ್ಷೆಗಳು. ಒಂದು ನಿರ್ದಿಷ್ಟ ಪಾತ್ರದ ಬಗೆಗೆ ನಿರೀಕ್ಷಿಸುವ ಜವಾಬ್ದಾರಿಗಳು ಅಥವಾ ವರ್ತನೆಗಳು.

role feeling: ಪಾತ್ರ ಪ್ರಜ್ಞೆ; ಭೂಮಿಕೆಯ ಭಾವನೆ.

role handicap: ಪಾತ್ರ ವೈಕಲ್ಯ. ಕೆಲವು ಸಂದರ್ಭಗಳಲ್ಲಿ ವ್ಯಕ್ತಿಯ ನಡತೆಯ ನಿರೀಕ್ಷೆಗಳು ಸಂಸ್ಕೃತಿ ಹಾಗೂ ಕೆಲಸದ ಪರಿಸರದಲ್ಲಿ ವಿಭಿನ್ನವಾಗಿರುತ್ತವೆ. ಅಂತಹ ಸಂದರ್ಭದಲ್ಲಿ ವ್ಯಕ್ತಿಯು ತನ್ನ ಪಾತ್ರಗಳನ್ನು ಸರಿಯಾಗಿ ನಿರ್ವಹಿಸಲು ಸಮರ್ಥನಾಗುವುದಿಲ್ಲ.

role insulation: ಪಾತ್ರ ಪ್ರತ್ಯೇಕತೆ. ಒಂದು ನಿರ್ದಿಷ್ಟ ಕಾರ್ಯ ಅಥವಾ ಉದ್ಯೋಗದಲ್ಲಿ ತೊಡಗಿರುವ ವ್ಯಕ್ತಿಗಳು ತಮ್ಮನ್ನು ಪಾತ್ರದ ಒಳಗೇ ಸೀಮಿತವಾಗಿರಿಸಿಕೊಂಡು ತಮ್ಮೊಳಗಿನ ಅಂತಃಸಂಬಂಧಗಳನ್ನು ಹೆಚ್ಚಿಸಿಕೊಳ್ಳುವುದರಿಂದ ಉಂಟಾಗುವ ಪ್ರತ್ಯೇಕತೆ. ಇದರಿಂದಾಗಿ ಅವರಿಗೆ ಇನ್ನುಳಿದ ಪಾತ್ರಗಳ ಹಾಗೂ ಕಾರ್ಯಗಳ ಸ್ಪಷ್ಟ ಪರಿಚಯವಿರುವುದಿಲ್ಲ.

role model: ಪಾತ್ರ ಮಾದರಿ. ಒಂದು ನಿರ್ದಿಷ್ಟ ಪಾತ್ರವನ್ನು ನಿರ್ವಹಿಸುವ

ವ್ಯಕ್ತಿಯು ಅಂತಹದೇ ಪಾತ್ರವನ್ನು ನಿರ್ವಹಿಸುವ ಇನ್ನೊಬ್ಬ ವ್ಯಕ್ತಿಗೆ ಮಾದರಿಯಾಗಿ ಇರುವುದು.

role performance: ಪಾತ್ರ ನಿರ್ವಹಣೆ; ಒಂದು ನಿರ್ದಿಷ್ಟ ಸಂದರ್ಭದಲ್ಲಿ ಒಬ್ಬ ವ್ಯಕ್ತಿಯು ನಿರ್ವಹಿಸುವ ಪಾತ್ರ.

role playing: ಪಾತ್ರಾಭಿನಯ. ಒಂದು ಪಾತ್ರಕ್ಕೆ ಸರಿಯಾಗಿ ವರ್ತಿಸುವ ನಡತೆ. ಇಂತಹ ಸಂದರ್ಭಗಳಲ್ಲಿ ವ್ಯಕ್ತಿಯು ಆ ಪಾತ್ರಕ್ಕೆ ತಕ್ಕುದಾದ ಸಾಮಾಜಿಕ ನಿಯಮಗಳಿಗೆ ಬದ್ಧನಾಗಿರುತ್ತಾನೆ.

role set: ಪಾತ್ರ ಜೋಡಣೆ. ನಿರ್ದಿಷ್ಟ ಸಾಮಾಜಿಕ ಸ್ಥಾನಮಾನದ ಸುತ್ತ ಹೆಣೆದಿರುವ ಪಾತ್ರಗಳ ಗುಚ್ಛ.

role taking: ಪಾತ್ರ ಸ್ವೀಕಾರ. ಇನ್ನೊಬ್ಬ ವ್ಯಕ್ತಿಯ ಪಾತ್ರವನ್ನು ಗ್ರಹಿಸಿಕೊಂಡು ನಡೆಸುವ ವರ್ತನೆ.

rolling plan: ಆವರ್ತ ಯೋಜನೆ. ಇದರ ಪ್ರಕಾರ ಆಯಾ ವರ್ಷದ ಯೋಜನೆಯ ಪ್ರಗತಿಯನ್ನು ನೋಡಿಕೊಂಡು ಮುಂದಿನ ವರ್ಷಗಳ ಯೋಜನೆಯನ್ನು ರೂಪಿಸಲಾಗುವುದು.

Roman Era (ಕ್ರಿ.ಪೂ.೭೬೩): ರೋಮನ್ ಶಕೆ. ಈ ಶಕವನ್ನು ರೋಮನ್ ನಗರದ ಸ್ಥಾಪನೆಯ ವರ್ಷದಿಂದ ಪ್ರಾರಂಭಿಸಲಾಗಿದೆ.

romantic and mystic socialism: ರಸೋಭರಿತ ಮತ್ತು ಅತೀಂದ್ರಿಯತೆಯ ಸಮಾಜವಾದ; ಭಾವಾತ್ಮಕ ಮತ್ತು ಕಲ್ಪನಾತ್ಮಕ ಸಮಾಜವಾದ.

romantic ballad: ರಮ್ಯ ಲಾವಣಿ.

romantic family: ನೋಡಿ: companionship family.

romantic tales: ರಮ್ಯ ಕಥೆಗಳು.

romanticism: ಭಾವನಾ ತತ್ವವಾದ, ರಮ್ಯ ಪ್ರಜ್ಞೆ.

root crop: ಬೇರು ಬೆಳೆ.

rotation of crop: ಪರ್ಯಾಯ ಬೆಳೆ; ಬೆಳೆಗಳ ಆವರ್ತನ; ಬೆಳಗಳ ಸರದಿ ಕ್ರಮ.

round about method: ಸುತ್ತು ಬಳಸಿನ ವಿಧಾನ.

round table conference: ದುಂಡು ಮೇಜಿನ ಪರಿಷತ್ತು.

royal fertility: ರಾಜಫಲ ಸಮೃದ್ಧಿ. ಉತ್ತಮ ಸಂತಾನಕ್ಕಾಗಿ ತಾತ್ಕಾಲಿಕವಾಗಿ ಹೆಂಡತಿಯನ್ನು ರಾಜವಂಶದವರ ಬಳಿ ಬಿಟ್ಟು ಉತ್ತಮ ವಂಶದಿಂದ ಪುತ್ರ ಸಂತಾನ ಪಡೆಯುತ್ತಿದ್ದ ಪದ್ಧತಿ.

royal spirit: ಅರಸು ದೈವ.

royalty: ರಾಜಾದಾಯ; ಗೌರವಧನ; ರಾಯಧನ.

rudiments of learning: ಕಲಿಕೆಯ ಮೂಲ ತತ್ವಗಳು.

ruins: ಅವಶೇಷಗಳು.

rule: ನಿಯಮ.

rule making: ನಿಯಮ ರಚನೆ; ಕಾನೂನು ರಚನೆ.

rule of lapse: ದತ್ತು ಮಕ್ಕಳಿಗೆ ಹಕ್ಕಿಲ್ಲ ವೆಂಬ ನಿಯಮ. ನೋಡಿ: doctrine of lapse.

rule of law: ಕಾನೂನಿನ ಅಧಿಪತ್ಯ; ಕಾಯಿದೆಯ ಆಳ್ವಿಕೆ. ಇದರ ಪ್ರಕಾರ ಒಬ್ಬ

ವ್ಯಕ್ತಿಯ ನಿರಂಕುಶ ಇಚ್ಛೆಗಿಂತ ರಾಷ್ಟ್ರದ ಕಾಯಿದೆ/ಕಾನೂನು ಸರ್ವಶ್ರೇಷ್ಠವಾಗಿರುವುದು.

rule of natural justice: ಸ್ವಾಭಾವಿಕ ನ್ಯಾಯದ ನಿಯಮ.

rule of procedure committee: ಕ್ರಮ ನಿರ್ಣಾಯಕ (ಕಾರ್ಯ ವಿಧಾನ) ಮಂಡಳಿ.

rules of conduct: ನಡತೆಯ ನಿಯಮಗಳು.

ruling: ನಿರ್ಣಯ. ೧. ಯಾವುದೇ ವಿಷಯದ ಬಗ್ಗೆ ಸಭಾಧ್ಯಕ್ಷರು ನೀಡುವ ನಿರ್ಣಯ. ೨. ಯಾವುದೇ ರೀತಿಯ ಅಧಿಕಾರ ಯುಕ್ತ ಹಾಗೂ ಅಧಿಕೃತ ನಿರ್ಣಯ.

ruling class: ಆಡಳಿತ ವರ್ಗ.

ruling party: ಆಡಳಿತ ಪಕ್ಷ.

running contract: ಚಾಲ್ತಿಯಲ್ಲಿರುವ ಒಪ್ಪಂದ.

running expenditure: ಕಾರ್ಯಕಾರೀ ವೆಚ್ಚ. ನಿತ್ಯ ಖರ್ಚುಗಳಿಗೆ ತಗಲುವ ವೆಚ್ಚ.

running inflation: ಹಿಡಿತವಿಲ್ಲದ ಹಣದುಬ್ಬರ. ಬೆಲೆಗಳು ನಿರಂತರವಾಗಿ ಅಪಾಯಕಾರಿ ಮಟ್ಟದಲ್ಲಿ ಏರುತ್ತಿರುವ ಸನ್ನಿವೇಶ.

rural community: ಗ್ರಾಮೀಣ ಸಮುದಾಯ.

rural community development: ಗ್ರಾಮೀಣ ಸಮುದಾಯ ಅಭಿವೃದ್ಧಿ.

rural culture: ಗ್ರಾಮೀಣ ಸಂಸ್ಕೃತಿ.

rural economy: ಗ್ರಾಮೀಣ ಆರ್ಥಿಕತೆ.

rural employment: ಗ್ರಾಮೀಣ ಉದ್ಯೋಗ.

rural health: ಗ್ರಾಮೀಣ ಆರೋಗ್ಯ.

rural indebtedness: ಗ್ರಾಮೀಣ ಋಣಭಾರ.

rural nonfarm: ಕೃಷಿರಹಿತ ಗ್ರಾಮೀಣ ಪ್ರದೇಶ. ಶಿಲ್ಪ, ಗಣಿಗಾರಿಕೆ ಅಥವಾ ಇನ್ನಿತರ ಗೃಹೋದ್ಯಮದ ಕೌಶಲ್ಯಯುತ ವೃತ್ತಿಗಳಿಂದ ಜೀವಿಸುವ ಗ್ರಾಮೀಣ ಜನ ವಸತಿ.

rural nonfarm village: ವ್ಯವಸಾಯೇತರ ಗ್ರಾಮ. ನೋಡಿ: rural nonfarm.

rural proletariat: ಗ್ರಾಮೀಣ ಕಾರ್ಮಿಕ ವರ್ಗ.

rural reconstruction: ಗ್ರಾಮೀಣ ಪುನರ್ನಿರ್ಮಾಣ; ಗ್ರಾಮೀಣ ಪುನರ್ರಚನೆ.

rural sector: ಗ್ರಾಮೀಣ ವಲಯ.

rural settlement: ಗ್ರಾಮೀಣ ವಸತಿ ಪ್ರದೇಶ.

rural society: ಗ್ರಾಮೀಣ ಸಮಾಜ.

rural sociology: ಗ್ರಾಮೀಣ ಸಮಾಜ ಶಾಸ್ತ್ರ. ಗ್ರಾಮೀಣ ಸಮುದಾಯಗಳ ಜೀವನದ ಬಗೆಗೆ ಸಮಾಜ ಶಾಸ್ತ್ರೀಯ ಅಧ್ಯಯನ.

rural unemployment: ಗ್ರಾಮೀಣ ನಿರುದ್ಯೋಗ.

rural-urban continuity: ಗ್ರಾಮ ನಗರ ಸಾತತ್ಯ. ಗ್ರಾಮ ಮತ್ತು ನಗರಗಳ ನಡುವಿನ ಅಂತರಗಳು ಮಾಯವಾಗುತ್ತ ಹೋಗಿ ಅವುಗಳ ಲಕ್ಷಣಗಳಲ್ಲಿ ಸಾತತ್ಯ ಕಂಡು ಬರುವ ಪ್ರಕ್ರಿಯೆ.

rural urban fringe: ನೋಡಿ: fringe village.

rurbanization: ಗ್ರಾಮ-ನಗರ ಸಮೀಕರಣ.

ryot: ರೈತ; ಭೂ-ಸಾಗುವಳಿದಾರ. ಭೂಮಿಯನ್ನು ಹೊಂದಿರುವ ಸಾಗುವಳಿದಾರ.

ryotwari system: ರೈಯತ್ವಾರಿ ಪದ್ಧತಿ. ನೋಡಿ: raiyatwari system.

S

sabotage: ವಿಧ್ವಂಸಕ ಕ್ರಿಯೆ.

sacerdotalism: ಪುರೋಹಿತ ಪ್ರಾಬಲ್ಯದವಾದ. ಪುರೋಹಿತಶಾಹಿಯನ್ನು ತನ್ನ ಕೇಂದ್ರ ಶಕ್ತಿಯಾಗಿರಿಸಿಕೊಂಡ ತತ್ವ.

sacraments: ಸಂಸ್ಕಾರಗಳು; ಧಾರ್ಮಿಕ ವಿಧಿಗಳು.

sacra privata: ವೈಯಕ್ತಿಕ ಪವಿತ್ರತೆ. ಪ್ರಾಚೀನ ರೋಮ್‌ನ ಕುಟುಂಬ ಪೂಜೆಯ ಸಮಾರಂಭ.

sacra publica: ಸಾರ್ವಜನಿಕ ಪವಿತ್ರತೆ.

sacred animal: ಪವಿತ್ರ ಪ್ರಾಣಿ. ಧಾರ್ಮಿಕ ಪ್ರಾಮುಖ್ಯತೆಯುಳ್ಳ ಪ್ರಾಣಿ. ಕೆಲವೊಂದು ನಿರ್ದಿಷ್ಟ ಕಾರ್ಯಗಳೊಂದಿಗೆ ಗುರುತಿಸಲ್ಪಡುವ ಅಂತಹ ಪ್ರಾಣಿಗಳನ್ನು ಆಹಾರವಾಗಿ ಉಪಯೋಗಿಸುವುದಾಗಲೀ, ಘಾಸಿಗೊಳಿಸುವುದಾಗಲೀ ನಿಷೇಧಿಸಲಾಗಿದೆ. ನೋಡಿ: totem.

sacred fire: ಪವಿತ್ರಾಗ್ನಿ.

sacred object: ಪವಿತ್ರ ವಸ್ತು; ಪವಿತ್ರ ವಿಷಯ; ಪವಿತ್ರ ಉದ್ದೇಶ. ಪವಿತ್ರ ಉದ್ದೇಶವು ಮತಶ್ರದ್ಧೆ ಮತ್ತು ಮತ ಪ್ರಕ್ರಿಯೆಗಳನ್ನು ಒಳಗೊಂಡಿರುತ್ತದೆ.

sacred society: ಮಡಿವಂತ ಸಮಾಜ. ಏಕರೂಪತೆ, ಐಕ್ಯತೆ ಹಾಗೂ ಸ್ಥಿರತೆ ಇವುಗಳಿಂದಾಗಿ ಪವಿತ್ರ ಹಾಗೂ ಬದಲಾಯಿಸಲಾಗದಂತಹ ಮೌಲ್ಯಗಳು ಹಾಗೂ ಪದ್ಧತಿಗಳನ್ನು ಹೊಂದಿರುವಂತಹ ಸಮಾಜ.

sacrificial animal: ಯಜ್ಞ ಪಶು; ಬಲಿಪಶು.

sacrificial object: ಯಾಜ್ಞಿಕ ವಸ್ತು; ಹವಿಸ್ಸು.

sadism: ಕ್ರೂರ ಕಾಮ; ಪರಹಿಂಸಾ ಕಾಮ; ಕ್ರೌರ್ಯ ಕಾಮವಿಕಾರ.

sadist: ಹಿಂಸಕ; ಹಿಂಸಾರತ.

sadistic behaviour: ಕ್ರೌರ್ಯಕಾಮ ವರ್ತನೆ.

sado-masochistic: ಪರಸ್ಪರಪೀಡನ ಸುಖ. ಇನ್ನೊಬ್ಬರನ್ನು ಘಾಸಿಗೊಳಿಸಿ ತಾನೂ ದೇಹ ದಂಡನೆ ಮಾಡಿಕೊಂಡು ಸಂತೋಷ ಪಡುವ ಗುಣ.

safe constituency: ಸುರಕ್ಷಿತ ಚುನಾವಣಾ ಕ್ಷೇತ್ರ. ಒಂದು ಪಕ್ಷ ಅಥವಾ ಪಕ್ಷದ ಅಭ್ಯರ್ಥಿಗೆ ಚುನಾವಣೆಯಲ್ಲಿ ಸ್ಪಷ್ಟ ಬಹುಮತ ಸಿಗಬಹುದಾದ ಚುನಾವಣಾ ಕ್ಷೇತ್ರ.

safeguards: ರಕ್ಷಣೋಪಾಯಗಳು; ಸುರಕ್ಷಿತಾ ಕ್ರಮಗಳು.

safety valves: ರಕ್ಷಣಾ ಕವಾಟಗಳು.

sales maximization: ಮಾರಾಟವನ್ನು ಗರಿಷ್ಠಗೊಳಿಸುವಿಕೆ.

sales promotion: ಮಾರಾಟ ಪ್ರವರ್ತನೆ.

salvation: ಮುಕ್ತಿ; ಬಿಡುಗಡೆ.

sample mean: ಮಾದರಿ ಸರಾಸರಿ.

sample method: ಮಾದರಿ ವಿಧಾನ.

sample poll: ಮಾದರಿ ಮತದಾನ. ಜನಾಭಿಪ್ರಾಯವನ್ನು ಸಂಗ್ರಹಿಸಲು ನಡೆಸುವ ಮತದಾನ.

sample size: ಮಾದರಿ ಗಾತ್ರ.

sample survey: ಮಾದರಿ ಸಮೀಕ್ಷೆ.

sample survey method: ಮಾದರಿ ಸಮೀಕ್ಷಾ ವಿಧಾನ.

sampling: ಮಾದರಿ.

sampling error: ಮಾದರಿಯಲ್ಲಿನ ದೋಷ.

sampling theory: ಮಾದರಿ ಸಿದ್ಧಾಂತ.

sampling unit: ಮಾದರಿ ಘಟಕ.

sampling variation: ಮಾದರಿ ಭಿನ್ನತೆ; ಮಾದರಿ ವ್ಯತ್ಯಾಸ.

sanction: ಅನುಮೋದನೆ; ನಿರ್ಬಂಧ; ಸಂಹಿತೆ. ನಿರ್ಬಂಧ ಸಹಿತವಾದ ಅನುಮೋದನೆ. ಅಂದರೆ ಮಗುವಿನ ಅಥವಾ ವ್ಯಕ್ತಿಯ ಗುಣಗಳನ್ನು ಬಹುಮಾನ-ಹೊಗಳಿಕೆಗಳ ಮೂಲಕ ಪ್ರೋತ್ಸಾಹಿಸುವ ಮತ್ತು ಅವಗುಣಗಳನ್ನು ಶಿಕ್ಷೆಯ ಮೂಲಕ ತಡೆಯುವ ಸಂಹಿತೆ.

sanctity of private property: ಖಾಸಗಿ ಆಸ್ತಿಯ ಪವಿತ್ರತೆ.

sangha: ಸಂಘ; ಬೌದ್ಧ ಭ್ರಾತೃಮಾರ್ಗ; ಬೌದ್ಧ ಭಿಕ್ಷುಗಳ ಸಮುದಾಯ.

sanity: ಚಿತ್ತ ಸ್ವಾಸ್ಥ; ಸ್ವಸ್ಥ ಮನೋಸ್ಥಿತಿ.

sanskritization: ಸಂಸ್ಕೃತಾನುಕರಣ. ಸ್ಥಳೀಯವಾಗಿ ಸಾಮಾಜಿಕ ಆರ್ಥಿಕ ರಾಜಕೀಯ ಪ್ರಾಬಲ್ಯ ಹೊಂದಿದ ಜಾತಿಯ ಪದ್ಧತಿಗಳು, ಮೌಲ್ಯಗಳು, ಆಚರಣೆಗಳು ಹಾಗೂ ಜೀವನ ವಿಧಾನವನ್ನು ಅನುಕರಣೆ ಮಾಡುವುದರ ಮೂಲಕ ಸಾಮಾಜಿಕ ಏಣಿ ಶ್ರೇಣಿಯಲ್ಲಿ ಮೇಲ್ಮುಖ ಚಲನೆ ಸಾಧಿಸಲು ಕೆಳಜಾತಿಯವರು ನಡೆಸುವ ಸಾಮಾಜಿಕ ಚಲನೆಯ ಪ್ರಕ್ರಿಯೆ. ಈ ಪರಿಕಲ್ಪನೆಯನ್ನು ಎಂ. ಎನ್. ಶ್ರೀನಿವಾಸರು ಬಳಕೆಗೆ ತಂದರು

sarcastic attitude: ಕಹಿ ಮನೋಭಾವ; ಕೆಣಕುವ ಮನೋಭಾವ.

sargent of arms: ರಕ್ಷಣಾಧಿಕಾರಿ. ಸಭೆಯ (ಪಾರ್ಲಿಂಮೆಂಟಿನ) ಶಿಸ್ತನ್ನು ಕಾಪಾಡುವುದಕ್ಕೆ ಸಹಕರಿಸುವ ಅಧಿಕಾರಿ.

sarpanch: ಸರ್‌ಪಂಚ್; ಪಂಚರ ಪ್ರಮುಖ; ಗ್ರಾಮಪಂಚಾಯಿತಿ ಪ್ರಮುಖ.

sarvodaya: ಸರ್ವೋದಯ. ಸರ್ವಜನ ಹಿತವನ್ನು ಬಯಸುವ ತತ್ವ.

satellite city: ಉಪನಗರ.

satirical sanction: ವಿಡಂಬನಶೀಲ (ಅಪಹಾಸ್ಯಕಾರಿ) ಅನುಮೋದನೆ.

sati system: ಸತಿ ಪದ್ಧತಿ; ಸತಿ ಸಹಗಮನ. ಪತಿಯ ಚಿತೆಯ ಮೇಲೆ ಹಾರಿ ಪತ್ನಿಯು ತನ್ನನ್ನು ದಹನ ಮಾಡಿಕೊಳ್ಳುವ ಪದ್ಧತಿ.

satyagraha: ಸತ್ಯಾಗ್ರಹ. ಪ್ರಭುತ್ವದ ದೌರ್ಜನ್ಯದ ವಿರುದ್ಧ ಸತ್ಯವನ್ನು ಆಗ್ರಹಿಸಿ ನ್ಯಾಯವಾದ್ದನ್ನು ಪಡೆಯುವ ಚಳುವಳಿ. ಗಾಂಧೀಜೀಯವರು ಈ ಮಾರ್ಗದ ಪ್ರವರ್ತಕರು.

satyriasis: ಗಂಡಸರಲ್ಲಿ ಕಂಡುಬರುವ ಅತಿ ಕಾಮಾಸಕ್ತಿ.

savage stage: ಅನಾಗರಿಕ ಹಂತ.

savagery: ಅನಾಗರಿಕತೆ. ಕೃಷಿ ಮತ್ತು

ಭಾಷೆಗಳಿಲ್ಲದ ಊಹನಾತ್ಮಕ ಸಾಂಸ್ಕೃತಿಕ ಹಂತ.

saving income ratio: ಉಳಿತಾಯ ಆದಾಯ ನಿಷ್ಪತ್ತಿ.

saving investment gap: ಉಳಿತಾಯ ಹೂಡಿಕೆ ಅಂತರ.

savings bank: ಉಳಿತಾಯ ಬ್ಯಾಂಕು.

savings deposit: ಉಳಿತಾಯ ಠೇವಣಿ.

saviour of federation: ಸಂಯುಕ್ತ ವ್ಯವಸ್ಥೆಯ ರಕ್ಷಕ.

Say's law of market: ಸೇಯವರ ಮಾರುಕಟ್ಟೆ ನಿಯಮ. ಜೆ.ಬಿ.ಸೇ. ಎಂಬ ಅರ್ಥಶಾಸ್ತ್ರಜ್ಞನ ಪ್ರಕಾರ ಮಾರುಕಟ್ಟೆಯಲ್ಲಿ ಪೂರೈಕೆಯು ತನ್ನ ಬೇಡಿಕೆಯನ್ನು ತಾನೇ ಸೃಷ್ಟಿಸಿಕೊಳ್ಳುವುದರಿಂದ ಅರ್ಥ ವ್ಯವಸ್ಥೆ ಯೊಂದರಲ್ಲಿ ದೀರ್ಘಕಾಲದಲ್ಲಿ ಅಧಿಕ ಉತ್ಪಾದನೆ ಹಾಗೂ ನಿರುದ್ಯೋಗಗಳಿರು ವುದಿಲ್ಲ.

scaffolding: ಶತ್ರು ಕೋಟೆಯನ್ನು ಹತ್ತುವುದಕ್ಕಾಗಿ ಸೈನಿಕರು ಬಳಸುತ್ತಿದ್ದ ಸಾಧನೆ.

scalar chain: ಶ್ರೇಣಿಯ ಸರಪಣಿ. ಒಂದು ಆಡಳಿತ ಸಂಸ್ಥೆಯಲ್ಲಿ (ಆಡಳಿತ ಘಟಕದಲ್ಲಿ) ಅಧಿಕಾರ, ಆದೇಶ ಮತ್ತು ನಿಯಂತ್ರಣ ಇವು ಕೆಳಗಿನ ಅಂತಸ್ತಿನವರೆಗೂ ಹಂತಹಂತವಾಗಿ ಹರಿದು ಬರುವುದು ಮತ್ತು ಪ್ರತಿಯೊಂದು ಹಂತವೂ ಒಂದಕ್ಕೊಂದು ಸಂಬಂಧವನ್ನು ಹೊಂದಿ ರುವುದು.

scalar principle: ಶ್ರೇಣಿ ನಿಯಮ.

scalar process: ಶ್ರೇಣಿಯ ಪ್ರಕ್ರಿಯೆ. ಒಂದು ಆಡಳಿತ ಸಂಸ್ಥೆಯಲ್ಲಿ ಮೇಲಿನಿಂದ ಕೆಳಗಿನವರೆಗೂ ಹಲವಾರು ಹಂತಗಳಲ್ಲಿ ಉಚ್ಚ ಅಧೀನ ಸಂಬಂಧಗಳೇರ್ಪಡುವುದು.

scale ratio: ಅನುಪಾತ ಪ್ರಣಾಲಿ.

scalogram analysis: ಪ್ರಣಾಲಾಲೇಖ ವಿಶ್ಲೇಷಣೆ.

scandal: ಹಗರಣ; ಪ್ರಕರಣ.

scape-goat: ಬಲಿಪಶು. ತನ್ನದಲ್ಲದ ತಪ್ಪಿಗೆ ಆರೋಪಿತನಾದ ನಿರಪರಾಧಿ.

scapulomancy: ಹೆಗಲು ಶಕುನ. ಹೆಗಲಿನ ಎಲುಬಿನ ಸಹಾಯದಿಂದ ಶಕುನ ಹೇಳು ವುದು.

scarcity definition: ಕೊರತೆ ಆಧಾರಿತ ವ್ಯಾಖ್ಯೆ.

scarcity rent: ವಿರಳತೆ ಗೇಣಿ; ಕೊರತೆಯ ಗೇಣಿ. ಆಧುನಿಕ ಅರ್ಥ ಶಾಸ್ತ್ರಜ್ಞರ ಪ್ರಕಾರ ಭೂಮಿಯ ಪೂರೈಕೆಯು ಕೊರತೆಯುಳ್ಳ ದ್ದಾಗಿರುವುದರಿಂದ ಅದರ ಉಪಯೋಗಕ್ಕೆ ಗೇಣಿಯನ್ನು ಕೊಡಬೇಕಾಗುತ್ತದೆ. ಇದನ್ನು ಕೊರತೆ ಗೇಣಿ ಎನ್ನುವರು.

scatter diagram: ಹರಡಿದ ಪಟ; ಹರಡಿದ ನಕ್ಷೆ; ವಿಕೀರ್ಣ ನಕ್ಷೆ.

scattered villages: ಚದುರಿದ ಗ್ರಾಮ ಗಳು.

scepticism: ಸಂದೇಹವಾದ.

schedule: ಅನುಸೂಚಿ; ಪಟ್ಟಿ; ತಪ ಶೀಲು.

schedule of instructions: ಸೂಚನೆ ಗಳ ಅನುಸೂಚಿ.

schedule of reinforcement: ಪುನ ರ್ಬಲನ ಅನುಸೂಚಿ.

scheduled area: ಅನುಸೂಚಿತ ಪ್ರದೇಶ.

scheduled caste: ಪರಿಶಿಷ್ಟ ಜಾತಿ.

scheduled tribe: ಪರಿಶಿಷ್ಟ ಪಂಗಡ; ಗಿರಿಜನ ಬುಡಕಟ್ಟು.

scheme: ನಕ್ಷೆ; ರೂಪುರೇಷೆ.

schism: ಒಡಕು ತತ್ವ, ಆಚಾರ ಮೊದಲಾದುವುಗಳ ವಿಷಯವಾಗಿ ಭಿನ್ನಾಭಿಪ್ರಾಯ ಬಂದು ಒಂದು ಮತ, ಸಂಸ್ಥೆ ಅಥವಾ ಪಕ್ಷವು ತುಂಡು ಪಂಗಡಗಳಾಗಿ ಒಡೆಯುವುದು.

schizo-affective type: ಮನೋವಿದಳಿತ ಭಾವಾತ್ಮಕ ಪ್ರರೂಪ.

schizoid personality: ಅಂತರ್ಮುಖೀ ವ್ಯಕ್ತಿತ್ವ. ಭಯ, ನಾಚಿಕೆ, ಸ್ಪರ್ಧಾ ಹೀನತೆ, ಕ್ರಿಯಾಹೀನತೆ, ಹಗಲುಗನಸುಗಳಿಂದ ತೃಪ್ತಿಪಡೆಯುವ ಏಕಾಂತ ಪ್ರಿಯತೆ.

schizophrenia: ಸ್ಕಿಜೋಫ್ರೇನಿಯಾ; ಮನೋವಿದಳನ. ವಿಚಿತ್ರ ವರ್ತನೆಗಳಿಂದ, ಭ್ರಾಂತಿ ವಿಭ್ರಮೆಗಳಿಂದ ಕೂಡಿದ ತೀವ್ರ ಸ್ವರೂಪದ ಮನೋರೋಗಗಳ ಗುಂಪಿಗೆ ಸೇರಿದೆ. ವಿಚಾರಲಹರಿಯ ತೊಂದರೆ, ಭಾವ ವಿಕಲತೆಗಳಿಂದ ಕೂಡಿದ ವ್ಯಕ್ತಿತ್ವದ ವಿಸಂಘಟನೆ ಎದ್ದು ಕಾಣುವ ಮನೋವಿಕೃತಿ.

schizophrenic process: ಮನೋವಿದಳನಾತ್ಮಕ ಪ್ರಕ್ರಿಯೆ.

schizothyme: ಮನೋವಿದಳನಾಭಿಮುಖಿ.

school adjustment: ಶಾಲಾ ಹೊಂದಾಣಿಕೆ. ಶಾಲೆಗೆ ಹೊಸದಾಗಿ ಸೇರಿದಾಗಿನ ಸಮಸ್ಯೆ.

school complex: ಶಾಲಾ ಸಂಕೀರ್ಣ.

school drop-outs: ಶಾಲೆ ಬಿಟ್ಟಿರುವ ಮಕ್ಕಳು; ಅರ್ಧದಲ್ಲೇ ಶಿಕ್ಷಣವನ್ನು ನಿಲ್ಲಿಸಿದ ವಿದ್ಯಾರ್ಥಿಗಳು.

school guidance service: ಶಾಲಾ ಮಾರ್ಗದರ್ಶನ ಸೇವೆ.

school of individual psychology: ವ್ಯಷ್ಟಿ ಮನೋವಿಜ್ಞಾನ ಪಂಥ.

school of law: ಕಾನೂನಿಕ ಪಂಥ.

school of psychology: ಮನೋವಿಜ್ಞಾನ ಪಂಥ.

school plant: ಶಾಲೆಯ ಭೌತಿಕ ನೆಲೆ. ಕಟ್ಟಡಗಳು, ಆವರಣ, ಆಟದ ಬಯಲು, ಸಲಕರಣೆಗಳು ಇತ್ಯಾದಿ.

school problems: ಶಾಲಾ ಸಮಸ್ಯೆಗಳು. ಮಕ್ಕಳಲ್ಲಿ ಕಲಿಕೆಯ ತೊಂದರೆ, ಸಾಹಚರ್ಯದ ತೊಂದರೆ, ಶಾಲೆಗೆ ಹೋಗಲು ನಿರಾಕರಿಸುವುದು, ಭಯಪಡುವುದು ಇತ್ಯಾದಿ.

school sanitation programme: ಶಾಲಾ ನೈರ್ಮಲ್ಯ ಕಾರ್ಯಕ್ರಮ.

school of philosophy: ತತ್ವಶಾಸ್ತ್ರದ ಪಂಥ.

science of mental facts: ಮಾನಸಿಕ ಸಂಗತಿಗಳ ವಿಜ್ಞಾನ.

science of mental life: ಮಾನಸಿಕ ಜೀವನ ವಿಜ್ಞಾನ.

science of mental states: ಮಾನಸಿಕಾವಸ್ಥೆಗಳ ವಿಜ್ಞಾನ.

scientific approach: ವೈಜ್ಞಾನಿಕ ಸಮೀಪನ.

scientific argument: ವೈಜ್ಞಾನಿಕ ವಾದ.

scientific attitude: ವೈಜ್ಞಾನಿಕ ಅಭಿವೃತ್ತಿ (ಮನೋಭಾವನೆ).

scientific commentary: ವೈಜ್ಞಾನಿಕ ಚರ್ಚೆ; ವೈಜ್ಞಾನಿಕ ವ್ಯಾಖ್ಯಾನ.

scientific communism: ವೈಜ್ಞಾನಿಕ ಸಾಮ್ಯವಾದ. ೧. ಮಾರ್ಕ್ಸ್‌ವಾದ ಲೆನಿನ್ ವಾದದ ಒಂದು ಮುಖ್ಯಭಾಗ. ಅದು ಕಾರ್ಮಿಕ ವರ್ಗದ ಐತಿಹಾಸಿಕ ಕರ್ತವ್ಯಕ್ಕೆ ಸಾಮಾಜಿಕ ಮತ್ತು ರಾಜಕೀಯ ಆಧಾರ ಗಳನ್ನು ನೀಡುತ್ತದೆ. ೨. ಅದು ಸಮಾಜ ವನ್ನು ಕಮ್ಯೂನಿಸ್ಟ್ ರೀತಿಯಲ್ಲಿ ಪುನರ್ ರೂಪಿಸುವ ಮಾರ್ಗಗಳು, ರೂಪಗಳು ಮತ್ತು ವಿಜ್ಞಾನಗಳಿಗೆ ಸಂಬಂಧಿಸಿದೆ.

scientific imagination: ವೈಜ್ಞಾನಿಕ ಕಲ್ಪನೆ.

scientific introspection: ವೈಜ್ಞಾನಿಕ ಅಂತರಾವಲೋಕನ.

scientific investigation : ವೈಜ್ಞಾನಿಕ ಅನ್ವೇಷಣೆ.

scientific law : ವೈಜ್ಞಾನಿಕ ನಿಯಮ.

scientific management system: ವೈಜ್ಞಾನಿಕ ಕಾರ್ಯನಿರ್ವಹಣಾ ವ್ಯವಸ್ಥೆ.

scientific method: ವೈಜ್ಞಾನಿಕ ವಿಧಾನ. ಅವಲೋಕನ, ಪ್ರಯೋಗ, ಸಾಮಾನ್ಯೀ ಕರಣ ಹಾಗೂ ಪ್ರಮಾಣೀಕರಣದ ಮೂಲಕ ನಡೆಸುವ ವೈಜ್ಞಾನಿಕ ಅಧ್ಯಯನ ವಿಧಾನ.

scientific observation: ವೈಜ್ಞಾನಿಕ ಅವಲೋಕನ.

scientific opinion: ವೈಜ್ಞಾನಿಕ ಮತ.

scientific outlook: ವೈಜ್ಞಾನಿಕ ದೃಷ್ಟಿ.

scientific political theory: ವೈಜ್ಞಾನಿಕ ರಾಜಕೀಯ ಸಿದ್ಧಾಂತ.

scientific probability: ವೈಜ್ಞಾನಿಕ ಸಂಭಾವ್ಯತೆ.

scientific psychology: ವೈಜ್ಞಾನಿಕ ಮನೋವಿಜ್ಞಾನ.

scientific social thought: ವೈಜ್ಞಾನಿಕ ಸಾಮಾಜಿಕ ಚಿಂತನೆ.

scientific socialism: ವೈಜ್ಞಾನಿಕ ಸಮಾಜವಾದ.

scientific spirit: ವೈಜ್ಞಾನಿಕ ಮನೋ ಭಾವ.

scientific theory: ವೈಜ್ಞಾನಿಕ ಸಿದ್ಧಾಂತ.

scientific world view: ವೈಜ್ಞಾನಿಕ ವಿಶ್ವದೃಷ್ಟಿಕೋನ; ವೈಜ್ಞಾನಿಕ ಜಗದ್ದೃಷ್ಟಿ.

scienticism: ವೈಜ್ಞಾನಿಕತೆ. ವಿಜ್ಞಾನವು ಮಾನವ ಕುಲದ ಜೀವನಕ್ಕೆ ಬೇಕಾದ ಎಲ್ಲಾ ತತ್ವಜ್ಞಾನಗಳನ್ನೂ ಎಲ್ಲಾ ಸಮಸ್ಯೆಗಳಿಗೆ ಪರಿಹಾರವನ್ನೂ ಕೊಡಬಲ್ಲದೆಂಬ ದೃಷ್ಟಿ ಕೋನ.

score: ಪ್ರಾಪ್ತಾಂಕ.

scoring method: ಪ್ರಾಪ್ತಾಂಕದ ವಿಧಾನ.

scoring weights: ಪ್ರಾಪ್ತಾಂಕನ ಮೌಲ್ಯ ಗಳು.

script: ಲಿಪಿ; ಅಕ್ಷರ.

scriptural language: ಲಿಪಿಯುಳ್ಳ ಭಾಷೆ.

sculptor: ರೂವಾರಿ; ಶಿಲಾರೂಪಕ; ಶಿಲ್ಪಿ.

sculpture: ಶಿಲಾಕೃತಿ.

search warrant: ಶೋಧನಾಧಿಕಾರ ಪತ್ರ; ಶೋಧಾಜ್ಞೆ. ಕಳವು ಮಾಲು

ವೊದಲಾದುವುಗಳನ್ನು ಬಚ್ಚಿಟ್ಟು ಕೊಂಡಿರುವನೆಂದು ಸಂಶಯಕ್ಕೆ ಗುರಿಯಾದವನನ್ನು ಅಥವಾ ಆರೋಪಿಯನ್ನು ಪತ್ತೆ ಹಚ್ಚಲು, ಮನೆ ಮೊದಲಾದವುಗಳನ್ನು ಶೋಧಿಸಲು ನ್ಯಾಯಾಧಿಕಾರಿ ಕೊಡುವ ಅಧಿಕಾರ ಪತ್ರ.

seasonal ceremony: ಋತು ಆಧಾರಿತ ಸಮಾರಂಭ. ವರ್ಷದ ನಿರ್ದಿಷ್ಟ ಅವಧಿಯಲ್ಲಿ ಆಚರಿಸಲಾಗುವ ಸಮಾರಂಭ.

seasonal unemployment: ಸಾಂದರ್ಭಿಕ (ಋತುಸಂಬಂಧಿ) ನಿರುದ್ಯೋಗ. ಕೆಲವು ನಿರ್ದಿಷ್ಟ ಉದ್ಯಮಗಳ ಉತ್ಪಾದನೆಯಲ್ಲಿ ಉಂಟಾಗುವ ಋತುಮಾನಿಕ ಬದಲಾವಣೆಯಿಂದ ಉಂಟಾಗುವ ನಿರುದ್ಯೋಗ.

seasonal variation: ಕಾಲಾನುಸಾರ (ಕಾಲಿಕ) ಬದಲಾವಣೆ; ಸಾಂದರ್ಭಿಕ ಬದಲಾವಣೆ. ಕಾಲಕ್ಕನುಗುಣವಾಗಿ ಮರುಕಳಿಸುವ ಬದಲಾವಣೆಯ ಮಾದರಿಗಳು. ಉದಾ: ನಿರುದ್ಯೋಗದ ದರವು ಕೆಲವು ಕಾಲಗಳಲ್ಲಿ ಹೆಚ್ಚಾಗಿ ಕೆಲವು ಕಾಲಗಳಲ್ಲಿ ಕಡಿಮೆಯಿರುತ್ತದೆ.

secession: ಒಕ್ಕೂಟದಿಂದ ಬೇರೆಯಾಗು.

seclusion: ವಿವಿಕ್ತತೆ; ಏಕಾಂತತೆ.

seclusiveness: ಏಕಾಕಿತನ; ಏಕಾಂತತೆ.

second ballot system: ದ್ವಿತೀಯ ಮತದಾನ ಪದ್ಧತಿ.

second chamber: ದ್ವಿತೀಯ ಸದನ.

second order conditioning: ಎರಡನೆಯ ಮಟ್ಟದ ಅನುಬಂಧನ.

second preferential vote: ಎರಡನೇ ಆದ್ಯತಾ ಮತ. ಆದ್ಯತೆ ಅನುಸಾರದ ಮತದಾನದಲ್ಲಿ ಮೊದಲನೇ ಎಣಿಕೆಯಲ್ಲಿ ಯಾರಿಗೂ ನಿರ್ದಿಷ್ಟ ಆದ್ಯತೆ ಮತಗಳು ಬರದಿದ್ದರೆ ಎರಡನೇ ಆದ್ಯತೆ ಮತಗಳ ಎಣಿಕೆ ನಡೆಯುತ್ತದೆ.

second settlement area: ದ್ವಿತೀಯ ವಾಸಸ್ಥಾನ. ಒಂದು ನಿರ್ದಿಷ್ಟ ಕುಲ ಸಮೂಹದ ಜನರು, ಮುಖ್ಯವಾಗಿ ವಲಸಿಗ ಸಮೂಹವು ತಮ್ಮ ಮೂಲಸ್ಥಾನವನ್ನು ಬಿಟ್ಟು ಇನ್ನೊಂದೆಡೆ ವಾಸ್ತವ್ಯ ಹೂಡು ವುದು.

second world: ದ್ವಿತೀಯ ಜಗತ್ತು. ಪೌರಾತ್ಯ ಯೂರೋಪ್ ಹಾಗೂ ರಶ್ಯಾದ ಕೈಗಾರಿಕೀಕರಣಗೊಂಡ ಸಮತಾವಾದದ ಸಮಾಜಗಳು.

secondary burial: ಎರಡನೇ ಸುತ್ತಿನ ಶವಸಂಸ್ಕಾರ. ಪ್ರಾರಂಭದಲ್ಲಿ ಶವದ ಮಾಂಸ ಮಾತ್ರ ಕೊಳೆಯುವಂತೆ ಮಾಡಿ ನಂತರ ಉಳಿದ ಮೂಳೆಗಳನ್ನು ಸಂಸ್ಕರಿಸುವ ಕ್ರಮ.

secondary control: ಅಪ್ರಧಾನ (ಅಪ್ರತ್ಯಕ್ಷ) ನಿಯಂತ್ರಣ; ಮಾಧ್ಯಮಿಕ ನಿಯಂತ್ರಣ.

secondary co-operation: ಅನುಷಂಗಿಕ ಸಹಕಾರ; ಮಾಧ್ಯಮಿಕ ಸಹಕಾರ.

secondary diety: ಅನುಷಂಗಿಕ ದೈವ.

secondary disposition: ಗೌಣ ಚಿತ್ತಪ್ರವೃತ್ತಿ; ಅಪ್ರಧಾನ ಮನೋಪೇಕ್ಷೆ.

secondary drive: ನೋಡಿ: acquired drive.

secondary education : ಪ್ರೌಢಶಿಕ್ಷಣ.

secondary elaboration: ಗೌಣ ವಿಸ್ತಾರ.

secondary emotion: ಗೌಣ ಸಂವೇಗ.

secondary family: ಮಾಧ್ಯಮಿಕ ಕುಟುಂಬ. ಅನ್ಯಯಜಮಾನ್ಯ ಕುಟುಂಬ. ಕುಟುಂಬದ ಮುಖ್ಯಸ್ಥನು ಬೇರೆಕಡೆ ಇದ್ದು ಇನ್ನೊಬ್ಬನು ಯಜಮಾನನಾಗಿರುವ ಕುಟುಂಬ. ಈ ಪರಿಕಲ್ಪನೆಯನ್ನು ೧೯೬೦ರ ಅಮೇರಿಕಾದ ಜನಗಣತಿಯಲ್ಲಿ ಬಳಸಲಾಯಿತು.

secondary husband: ಗೌಣ ಪತಿ. ಸತ್ತ ಗಂಡನ ಸಹೋದರನ ಜತೆ ವಿವಾಹ ವಾದಾಗ ಆತ ಗೌಣ ಪತಿಯಾಗುತ್ತಾನೆ.

secondary labour market: ಗೌಣ ಕಾರ್ಮಿಕ ಮಾರುಕಟ್ಟೆ. ಅನಿಶ್ಚಿತ ಉದ್ಯೋಗದಲ್ಲಿ ಇರುವ ಹಾಗೂ ಕೆಳಮಟ್ಟದ ಕೆಲಸದ ಪರಿಸ್ಥಿತಿ ಇರುವಂತಹ ವ್ಯಕ್ತಿಗಳ ಆರ್ಥಿಕ ಸ್ಥಾನ.

secondary marriage: ಎರಡನೆಯ ಮದುವೆ; ದ್ವಿತೀಯ ವಿವಾಹ.

secondary mental retardation: ಗೌಣ ಬುದ್ಧಿ ಮಾಂದ್ಯತೆ. ಅಪಘಾತ, ಅನ್ನಾಂಗಗಳ ಕೊರತೆ, ಮೂರ್ಛೆರೋಗ, ಜ್ವರ ಇವುಗಳಿಂದ ಬರುವ ಬುದ್ಧಿ ಮಾಂದ್ಯತೆ.

secondary mourners: ಗೌಣ ಶೋಕಸ್ಥರು.

secondary occupation: ಮಾಧ್ಯಮಿಕ ಉದ್ಯೋಗ.

secondary policy: ಗೌಣ ನೀತಿ.

secondary poverty: ಮಾಧ್ಯಮಿಕ ಬಡತನ. ಮೂಲಭೂತ ಅವಶ್ಯಕತೆಗಳಾದ ಅನ್ನ, ಆಹಾರ, ವಸತಿಗೆ ಯಾವುದೇ ಸಮಸ್ಯೆ ಇಲ್ಲದಿದ್ದು ಇನ್ನುಳಿದ ಸಾಮಾಜಿಕ, ಸಾಂಸ್ಕೃತಿಕ ಅವಶ್ಯಕತೆಗಳ ಬಡತನ.

secondary quality: ಅನುಷಂಗಿಕ ಗುಣ; ಅಪ್ರಧಾನ ಗುಣ.

secondary race: ಗೌಣ ಜನಾಂಗ; ಅಪ್ರಾಮುಖ್ಯ ಜನಾಂಗ. ಎರಡು ಪ್ರಾಥಮಿಕ ಜನಾಂಗಗಳ ಬೆರೆಯುವಿಕೆಯಿಂದ ಆದ ಜನಾಂಗ.

secondary reinforcement: ಅನುಷಂಗಿಕ ಪುನರ್ಬಲನ.

secondary relation: ಮಾಧ್ಯಮಿಕ ಸಂಬಂಧ; ಅವ್ಯೈಯಕ್ತಿಕ ಸಾಮಾಜಿಕ ಸಂಬಂಧ. ಕಡಿಮೆ ಅವಧಿಯ ಈ ಸಂಬಂಧಗಳಲ್ಲಿ ಯಾವುದೇ ಸಂವೇಗಾತ್ಮಕ ಒಳಗೊಳ್ಳುವಿಕೆ ಇರುವುದಿಲ್ಲ. ಉದಾ: ಮಾರಾಟಗಾರ ಹಾಗೂ ಗ್ರಾಹಕನ ಸಂಬಂಧ.

secondary sector: ಮಾಧ್ಯಮಿಕ ವಲಯ.

secondary sex characteristics: ಅನುಷಂಗಿಕ ಲಿಂಗ ಲಕ್ಷಣಗಳು.

secondary source: ಅನುಷಂಗಿಕ ಮೂಲ. ಮೂಲ ಮಾಹಿತಿಯಿಂದ ಸಂಗ್ರಹಿಸಿದ ಅಥವಾ ಯಾವುದಾದರೂ ಮಾಹಿತಿಯಿಂದ ನಕಲು (ಯಥಾ ಪ್ರತಿ) ತೆಗೆದ ಮಾಹಿತಿ.

secondary sterility: ಅಪ್ರಧಾನ ಬಂಜೆತನ.

secret ballot: ಗುಪ್ತ ಮತದಾನ; ಪ್ರಜಾಪ್ರಭುತ್ವವಾದಿ ಮತದಾನ ಪದ್ಧತಿ. ಈ ಮತದಾನ ಪದ್ಧತಿಯ ಪ್ರಕಾರ ಜನರು ಗುಪ್ತವಾಗಿ ತಮ್ಮ ಅಭಿಪ್ರಾಯವನ್ನು ಸೂಚಿಸುತ್ತಾರೆ.

secret desire: ರಹಸ್ಯ ಆಕಾಂಕ್ಷೆ; ಗುಪ್ತ ಅಭಿಲಾಶೆ.

secret diplomacy: ಗುಪ್ತ ರಾಜತಂತ್ರ; ರಹಸ್ಯ ರಾಜತಾಂತ್ರಿಕತೆ.

secret instruction: ರಹಸ್ಯ ಸೂಚನೆ.

secret language: ಗುಪ್ತಭಾಷೆ.

secret military alliance: ಗುಪ್ತ (ರಹಸ್ಯ) ಸೈನಿಕ ಒಪ್ಪಂದ.

secret society: ರಹಸ್ಯ ಸಂಘ; ಗುಪ್ತ ಸಮಾಜ.

secretarial service: ಸಚಿವಾಲಯ ಸೇವೆ.

secretariat: ಸಚಿವಾಲಯ, ಮಂತ್ರಿ ಮಂಡಲದ ಸಚಿವಾಲಯ. ಸಚಿವನ ಮುಖ್ಯ ಸಲಹೆಗಾರನಾಗಿರುವ ಕಾರ್ಯದರ್ಶಿಯು ತನ್ನ ಕಾರ್ಯಗಳನ್ನು ನಿರ್ವಹಿಸುವ ಕಛೇರಿ.

secretary general: ಪ್ರಧಾನ ಕಾಯ ದರ್ಶಿ.

sectarianism: ಪಂಥೀಯ ಭಾವನೆ.

section officer: ಶಾಖಾಧಿಕಾರಿ.

sectional diversities: ಪಂಗಡಗಳ ವಿವಿಧತೆ.

sectionalism: ಪಂಗಡಭಾವನೆ; ಪಂಗಡ ಗಾರಿಕೆ.

secular disequilibrium: ದೀರ್ಘ ಕಾಲೀನ ಅಸಮತೋಲನ. ದೀರ್ಘಕಾಲೀನ ಬದಲಾವಣೆಯಿಂದ ಉಂಟಾಗುವ ಅಸಮ ತೋಲನ.

secular outlook: ಮತೇತರ ದೃಷ್ಟಿ ಕೋನ; ಜಾತ್ಯತೀತ ದೃಷ್ಟಿಕೋನ; ಲೌಕಿಕ ದೃಷ್ಟಿಕೋನ.

secular period: ಲೌಕಿಕ ಕಾಲ. ವ್ಯಕ್ತಿಯ ಮಡಿ ಮತ್ತು ಮೈಲಿಗೆಯ ನಡುವಿನ ಅವಧಿ.

secular society: ಮತೇತರ ಸಮಾಜ; ಲೌಕಿಕ ಸಮಾಜ. ಧರ್ಮ ನಿರಪೇಕ್ಷತೆಯ ಮೌಲ್ಯದೊಂದಿಗೆ ವೈಚಾರಿಕತೆ ಹಾಗೂ ಉಪಯುಕ್ತತಾವಾದವನ್ನು ಮೂಲಭೂತ ಮೌಲ್ಯಗಳಾಗಿ ಸ್ವೀಕರಿಸಿರುವ ಸಮಾಜ.

secular song: ಲೌಕಿಕ ಗೀತೆ.

secular source: ಲೌಕಿಕ ಮೂಲ.

secular stagnation: ದೀರ್ಘಕಾಲೀನ ಸ್ಥಗಿತತೆ.

secular state: ಜಾತ್ಯಾತೀತ ರಾಷ್ಟ್ರ. ಎಲ್ಲಾ ಜಾತಿ, ಧರ್ಮಗಳಿಗೂ ಸಂವಿಧಾನದ ಚೌಕಟ್ಟಿನೊಳಗೆ ಸಮಾನ ಅವಕಾಶವನ್ನು ಕೊಡುವ ರಾಷ್ಟ್ರ.

secular trend: ಮತಾತೀತ ಒಲವು; ಲೌಕಿಕ ಒಲವು.

secularism: ಮತಾತೀತತೆ; ಜಾತ್ಯತೀತತೆ.

secularization: ಲೌಕಿಕೀಕರಣ; ಮತಾ ತೀತತೆಯ ಪ್ರಕ್ರಿಯೆ.

secured creditor: ಸುರಕ್ಷಿತ ಸಾಲಿಗ.

secured loan: ಸುರಕ್ಷಿತ ಸಾಲ.

security council: ಭದ್ರತಾ ಸಮಿತಿ. ವಿಶ್ವಸಂಸ್ಥೆಯ ಒಂದು ಅಂಗ ಸಂಸ್ಥೆ.

security deposit: ಭದ್ರತಾ ಠೇವಣಿ.

security tenure: ಹಿಡುವಳಿ ಭದ್ರತೆ.

sedition: ರಾಜದ್ರೋಹ.

segmental replacement: ಭಾಗಶಃ (ಭಾಗೀಯ) ಸ್ಥಾನಪಲ್ಲಟ. ಒಂದು ಸಂಸ್ಥೆಯ ಒಂದು ಭಾಗ ತನ್ನ ಕಾರ್ಯ ನಿರ್ವಹಿಸಲು ಅಶಕ್ತವಾದಾಗ ಅತ್ಯಂತ ಕಡಿಮೆ ಸಮಯ

ದಲ್ಲಿ ಅದನ್ನು ಬದಲಾಯಿಸಿ ಆ ಸಂಸ್ಥೆ ತನ್ನ ಕೆಲಸ ಮುಂದುವರಿಸುವುದು. ಉದಾ: ಯುದ್ಧದಲ್ಲಿ ಸೈನ್ಯದ ಒಂದು ತುಕಡಿ ನಾಶವಾದರೆ ಅಥವಾ ದುರ್ಬಲವಾದರೆ ಅದನ್ನು ಬದಲಾಯಿಸಿ ಯುದ್ಧವನ್ನು ಮುಂದುವರಿಸುವುದು.

segmentalized personality: ಖಂಡ ವ್ಯಕ್ತಿತ್ವ. ವ್ಯಕ್ತಿತ್ವದ ಒಂದು ಆಯಾಮ.

segregation: ಪ್ರತ್ಯೇಕತೆ. ಜನಾಂಗ, ಧರ್ಮ ಮುಂತಾದುವುಗಳ ಆಧಾರದ ಮೇಲೆ ವಾಸಸ್ಥಳ, ಸೇವೆ ಇನ್ನಿತರ ಸೌಲಭ್ಯಗಳ ಐಚ್ಛಿಕ ಅಥವಾ ಅನೈಚ್ಛಿಕ ಪ್ರತ್ಯೇಕತೆ.

selection of career: ವೃತ್ತಿಯ ಆಯ್ಕೆ; ಜೀವನ ಮಾರ್ಗದ ಆಯ್ಕೆ.

selectional restriction: ಆಯ್ಕೆಯ ಮಿತಿ.

selective forgetting: ಜಾಣ ಮರೆವು. ತಾಪದಾಯಕ ಸನ್ನಿವೇಶದಿಂದ ಸುಲಭವಾಗಿ ತಪ್ಪಿಸಿಕೊಳ್ಳಲು ಉಪಯೋಗಿಸುವ ವಿಧಾನ.

selective impotency: ಆಯ್ಕೆಯ ನಪುಂಸಕತೆ; ಸಾಂದರ್ಭಿಕವಾದ ಉದ್ರೇಕ ರಹಿತತೆ.

selective migration: ಆಯ್ಕೆಯ ವಲಸೆ. ಆಯ್ದ ಸ್ಥಳಕ್ಕೆ ಆಯ್ದ ಜನರ ವಲಸೆ.

selective perception: ಜಾಣ ಗ್ರಹಿಕೆ.

selective service: ಆಯ್ಕೆಯ ಸೇವೆ; ವರಣಾತ್ಮಕ ಸೇವಾಕಾರ್ಯ. ಸೇವೆಗಳನ್ನು ನೀಡುವಾಗ ಮುಂದೆ ಲಾಭವಾಗುವಂತೆ ಆಯ್ದ ವ್ಯಕ್ತಿಗಳಿಗೆ ಸೇವೆ ನೀಡುವುದು.

self: ಅಹಂ; ಆತ್ಮ; ಸ್ವ.

self abasement : ಸ್ವ ತುಚ್ಛೀಕಾರ; ಸ್ವಾಭಿಮಾನದ ಹೀನಾಯ.

self abasement instinct: ಆತ್ಮ ತುಚ್ಛೀಕರಣ ಮೂಲ ಪ್ರವೃತ್ತಿ.

self acquired: ಸ್ವಯಾರ್ಜಿತ.

self actualization: ಅಹಂ ವಾಸ್ತವೀಕರಣ.

self aggrendizement: ಸ್ವಾತಿಶಯತೆ.

self analysis: ಸ್ವಯಂ ವಿಶ್ಲೇಷಣೆ.

self appraisal : ಸ್ವಮೌಲ್ಯನ; ಸ್ವಯಂ ಮೌಲ್ಯಮಾಪನ.

self appreciation : ಸ್ವಪ್ರಶಂಸೆ; ಆತ್ಮ ಪ್ರಶಂಸೆ.

self assertion: ಸ್ವ ಪ್ರತಿಪಾದನೆ.

self assertion instinct: ಸ್ವಪ್ರತಿಪಾದನಾ ಮೂಲಪ್ರವೃತ್ತಿ.

self centred: ಸ್ವಕೇಂದ್ರಿತ; ಸ್ವಾಭಿಮಾನ ಪೂರ್ಣ; ಅಹಂ ಕೇಂದ್ರಿತ.

self conceit: ಅಹಂಕಾರ; ಸ್ವ ಗರ್ವ.

self concept: ಅಹಂಕಲ್ಪಿತ ಭಾವ; ಸ್ವ ಪರಿಕಲ್ಪನೆ.

self-condemnatory delusion: ಆತ್ಮನಿಂದಾ ಭ್ರಾಂತಿ. ಇದು ಸಾಮಾನ್ಯವಾಗಿ ಶಿಕ್ಷೆಯ ಅವಶ್ಯಕತೆಯನ್ನು ಸೂಚಿಸುತ್ತದೆ.

self conflict: ಸ್ವಯಂ ಸಂಘರ್ಷ; ಸ್ವಸಂಘರ್ಷ.

self conquest: ಆತ್ಮ ವಿಜಯ; ಆತ್ಮ ಸಂಯಮ.

self consciousness: ಸ್ವಯಂ ಪ್ರಜ್ಞೆ; ಆತ್ಮಬೋಧೆ. ಇನ್ನೊಬ್ಬರು ತನ್ನಿಂದ ಏನನ್ನು ನಿರೀಕ್ಷಿಸುತ್ತಾರೆಂಬ ಬಗ್ಗೆ ಪ್ರಜ್ಞೆ.

self contradictory: ಸ್ವವಿರೋಧ.

self contradictory delusion: ಸ್ವಯಂ ವಿರೋಧಾತ್ಮಕ ವಿಭ್ರಮೆ.

self contradictory hypothesis: ಸ್ವಯಂ ವಿರೋಧಾತ್ಮಕ ಪ್ರಾಕ್‌ಕಲ್ಪನೆ.

self control: ಸ್ವ ನಿಯಂತ್ರಣ; ಆತ್ಮ ನಿಯಂತ್ರಣ. ಸಾಮಾಜಿಕ ನಿಯಮಗಳಿಗೆ ಬದ್ಧನಾಗುವುದರಲ್ಲಿ ಸಂತೋಷಪಡುವಿಕೆ.

self corrective process: ಸ್ವತಃ ತಿದ್ದುವಿಕೆಯ ಪ್ರಕ್ರಿಯೆ.

self defence: ಸ್ವರಕ್ಷಣೆ; ಆತ್ಮರಕ್ಷಣೆ.

self delusion: ಆತ್ಮ ವಿಭ್ರಾಂತಿ; ಸ್ವಯಂ ವಿಭ್ರಾಂತಿ.

self denial: ಆತ್ಮ ನಿರಾಕರಣ.

self determination: ಸ್ವ ಇಚ್ಛಾ ಸಂಕಲ್ಪ.

self development: ಆತ್ಮವಿಕಾಸ.

self differentiation: ಆತ್ಮ ವಿಭೇದನ.

self display instinct: ಸ್ವಪ್ರದರ್ಶನ ಮೂಲಪ್ರವೃತ್ತಿ.

self employment: ಸ್ವ ಉದ್ಯೋಗ.

self enlightenment: ಸ್ವತಿಳುವಳಿಕೆ; ಆತ್ಮ ಪರಿಜ್ಞಾನ.

self equilibrium: ಸ್ವಸಂಯಮ; ಸ್ವ ಸಮತೋಲನ. ಆವೇಶ ಪ್ರವೃತ್ತಿಯ ನಿಯಂತ್ರಣ.

self esteem: ಆತ್ಮ ಗೌರವ; ಆತ್ಮಾಭಿಮಾನ. ತನ್ನ ಬಗ್ಗೆ ಇನ್ನೊಬ್ಬರ ಅಭಿಪ್ರಾಯಗಳನ್ನು ಗ್ರಹಿಸಿ, ಸ್ವ ಮೌಲ್ಯೀಕರಣ ಮಾಡಿಕೊಳ್ಳುವುದು.

self evident truth: ಸ್ವಯಂ ಸಾಕ್ಷ್ಯ ಸತ್ಯ.

self exhibitionism: ಆತ್ಮ ಪ್ರದರ್ಶನ ಕಲೆ.

self expression: ಸ್ವಯಂ ಅಭಿವ್ಯಕ್ತಿ.

self financing: ಸ್ವಯಂ ಹಣ ಪೂರೈಕೆ. ಉದ್ಯಮಗಳು ತಮ್ಮ ಆಂತರಿಕ ಮೂಲಗಳಿಂದಲೇ ಹೂಡಿಕೆ ನಿಧಿಯನ್ನು ಉಂಟು ಮಾಡುವುದು.

self hypnotism: ಸ್ವ ಸಮ್ಮೋಹನಿಕೆ.

self ideal: ಸ್ವ ಆದರ್ಶ.

self identification: ಸ್ವಂತ ಗುರುತಿಸುವಿಕೆ. ತಾನು ಪ್ರಭಾವಿತಗೊಂಡ ಮಾದರಿ ವ್ಯಕ್ತಿಗಳಂತೆ ತನ್ನ ವರ್ತನೆಯನ್ನು ರೂಪಿಸಿಕೊಂಡು ಸಮಾಜದಲ್ಲಿ ಗುರುತಿಸಿಕೊಳ್ಳುವುದು.

self-identified social class: ಸ್ವ ಗುರುತಿಸುವಿಕೆಯ ಸಾಮಾಜಿಕ ವರ್ಗ.

self-immolation: ಆತ್ಮ ಬಲಿದಾನ; ಸ್ವ ಬಲಿದಾನ.

self-imposed: ಸ್ವಯಂ ವಿಧಿತ.

self-loving: ಸ್ವಾನುರಕ್ತಿಯ.

self medication: ಸ್ವಯಂ ಚಿಕಿತ್ಸೆ.

self observation: ಆತ್ಮಾವಲೋಕನ.

self orientation: ಸ್ವ ನಿರ್ದೇಶನ, ಸ್ವಾನುರಕ್ತಿ.

self orientation-collective orientation: ಸ್ವಾನುರಕ್ತಿ-ಸಮೂಹಾನುರಕ್ತಿ. ಟಾಲ್ಕಾಟ್ ಪಾರ್ಸನ್ಸ್ ಹೇಳಿರುವ ಮಾದರಿ ಪರಿವರ್ತಕಗಳಲ್ಲೊಂದು. ನೋಡಿ: pattern variable.

self perception: ಸ್ವಯಂ ಪ್ರತ್ಯಕ್ಷ ಜ್ಞಾನ.

self preservation: ಸ್ವ ಸಂರಕ್ಷಣೆ; ಆತ್ಮ ಸಂರಕ್ಷಣೆ. ಬದಲಾವಣೆಯ ವಿರುದ್ಧ ತನ್ನ

ಜೀವಂತಿಕೆಯನ್ನು ಉಳಿಸಿಕೊಳ್ಳಲು ಮಾನವ ಜೀವಿಗಳ ಪ್ರಯತ್ನ.

self-protective instinct: ಸ್ವರಕ್ಷಣಾ ಮೂಲ ಪ್ರವೃತ್ತಿ.

self psychology: ಆತ್ಮ ಮನೋ ವಿಜ್ಞಾನ.

self rating inventory: ಸ್ವಮೌಲ್ಯಾಂಕನ ಅಂಶಮಾಲೆ.

self rating social class: ನೋಡಿ: subjective social class.

self restraint: ಸ್ವ ನಿಯಂತ್ರಣ.

self sacrifice: ಆತ್ಮ ತ್ಯಾಗ; ಆತ್ಮ ಬಲಿದಾನ.

self study: ಸ್ವಾಧ್ಯಾಯ; ಸ್ವ ಅಧ್ಯಯನ.

self submission instinct : ಸ್ವ ಶರಣಾಗತಿಯ ಮೂಲ ಪ್ರವೃತ್ತಿ.

self sufficiency: ಸ್ವಯಂ ಪರಿ ಪೂರ್ಣತೆ; ಸ್ವಾವಲಂಬನೆ.

self sustained stage: ಸ್ವಯಂ ಪೋಷಕ ಹಂತ; ಸ್ವಯಮಾಧಾರಿತ ಹಂತ.

self theory: ಆತ್ಮ ಸಿದ್ಧಾಂತ.

sellers' market: ಮಾರುವವರ ಮಾರುಕಟ್ಟೆ; ಬೇಡಿಕೆಯು ಪೂರೈಕೆಗಿಂತ ಅಧಿಕವಾಗಿದ್ದು ಮಾರಾಟಗಾರರಿಗೆ ಲಾಭಕರವಾಗುವಂತೆ ಬೆಲೆಗಳು ಏರಬಹುದಾದ ಪ್ರವೃತ್ತಿಯನ್ನು ಹೊಂದಿರುವ ಮಾರುಕಟ್ಟೆ.

selling cost: ಮಾರಾಟ ವೆಚ್ಚ. ಉತ್ಪಾದಕ ಅಥವಾ ಮಾರಾಟಗಾರ ತನ್ನ ಉತ್ಪನ್ನಗಳು ಹೆಚ್ಚಿನ ಪ್ರಮಾಣದಲ್ಲಿ ಮಾರಾಟವಾಗಲು ಮಾಡುವ ವಿವಿಧ ರೀತಿಯ ಖರ್ಚು.

selling rate: ಮಾರಾಟ ದರ.

semantic differential: ಗುಣ ವಿಂಗಡನೆ; ಶಬ್ದಾರ್ಥ ವಿಭೇದಕ. ವ್ಯಕ್ತಿಗಳು, ರಾಜಕೀಯ ವಿಷಯಗಳು, ಸಾಮಾಜಿಕ ಸಂಸ್ಥೆಗಳು, ವಸ್ತುಗಳು ಮುಂತಾದುವುಗಳನ್ನು ಒಳ್ಳೆಯದು-ಕೆಟ್ಟದ್ದು, ಕ್ರಿಯಾಶೀಲ-ನಿಷ್ಕ್ರಿಯ ಹೀಗೆ ವಿಂಗಡನೆಯ ಮೂಲಕ ಹೇಳುವುದು. ಭಾಷಾ ಶಾಸ್ತ್ರದಲ್ಲಿ ಶಬ್ದಾರ್ಥ ವಿಭೇದಕ ಎಂಬ ಅರ್ಥ ಬರುತ್ತದೆ.

semantic differential evaluative scale: ಶಬ್ದಾರ್ಥ ವಿಭೇದಕ ಮೌಲ್ಯ ಪ್ರಣಾಲಿ.

semantic differential rating instrument: ಶಬ್ದಾರ್ಥ ವಿಭೇದಕ ಪದ ನಿಶ್ಚಯನ ಸಲಕರಣೆ.

semantics : ಭಾಷಾ ಅರ್ಥಶಾಸ್ತ್ರ. ಭಾಷಾ ಶಾಸ್ತ್ರದಲ್ಲಿ ಅಕ್ಷರಗಳ ಸಂಯೋಜನೆ, ಉಚ್ಚಾರಣೆ ಮೊದಲಾದವುಗಳನ್ನು ಬಿಟ್ಟು ಅರ್ಥಕ್ಕೆ ಸಂಬಂಧಪಟ್ಟ ಭಾಗ.

semi-autonomous: ಅರೆ ಸ್ವಾಯತ್ತ.

semi-consciousness: ಅರ್ಧ ಪ್ರಬುದ್ಧ ಚೇತನತೆ.

semi-isolation: ಅರೆ ಒಂಟಿತನ; ಅರೆ ಏಕಾಂಗೀಕರಣ.

semi liquid asset: ಅರೆನಗದು ಸೊತ್ತು.

semi-mythological: ಅರೆ ಪೌರಾಣಿಕ.

semi nomadic tribe: ಅರೆ ಅಲೆಮಾರಿ ಬುಡಕಟ್ಟು.

semiology: ಸಂಕೇತಶಾಸ್ತ್ರ. ಮಾನವ ಹಾಗೂ ಪ್ರಾಣಿ ಜೀವಿಗಳಲ್ಲಿ ಸಂಕೇತಗಳ ಬಳಕೆಯ ಅಧ್ಯಯನ.

semiotics: ನೋಡಿ: semiology.

semi-periphery: ಅರೆ ಪರಿಧಿ. ಕಾರ್ಮಿಕರನ್ನು ಹಾಗೂ ಕಚ್ಚಾವಸ್ತುಗಳನ್ನು ಕೈಗಾರಿಕಾ ದೇಶಗಳಿಗೆ ಹಾಗೂ ಜಾಗತಿಕ ಆರ್ಥಿಕತೆಗೆ ಪೂರೈಸುವ, ಆದಾಗ್ಯೂ ಪೂರ್ಣ ಕೈಗಾರಿಕೀಕರಣಗೊಳ್ಳದ ದೇಶಗಳು ಆರ್ಥಿಕವಾಗಿ ಅರೆಪರಿಧಿಯಲ್ಲಿವೆ ಎನ್ನಲಾಗುತ್ತದೆ.

senate: ಸೆನೆಟ್. ಅಮೇರಿಕಾದ ಸಂಸತ್ತಿನ (ಕಾಂಗ್ರೆಸ್) ಮೇಲ್ಮನೆ.

senatorial courtsey: ಸೆನೆಟ್‌ನ ಒಪ್ಪಿಗೆ (ಸಮ್ಮತಿ). ಅಮೇರಿಕಾದ ಅಧ್ಯಕ್ಷನು ಅಮೇರಿಕಾ ಸಂಸ್ಥಾನಗಳಲ್ಲಿ ಒಕ್ಕೂಟದ ಅಧಿಕಾರಿಗಳನ್ನು ನೇಮಿಸುವಾಗ ಆಯಾ ಸಂಸ್ಥಾನದ ಸೆನೆಟರ್‌ನೊಂದಿಗೆ ಚರ್ಚಿಸಿ (ಸಮಾಲೋಚಿಸಿ) ಅವರ ಇಚ್ಛೆಯಂತೆ ನಡೆಯುವ ವಿಧಾನ (ಸೆನೆಟರ್‌ನ ಸಮ್ಮತಿ ಪಡೆಯುವ ವಿಧಾನ).

senicide: ವೃದ್ಧರ ಹತ್ಯೆ. ಒಂದು ಸಮಾಜದಲ್ಲಿರುವ ವೃದ್ಧರನ್ನು, ಮುಖ್ಯವಾಗಿ ಶಕ್ತಿಯುಡುಗಿದ ವೃದ್ಧರನ್ನು ಕೊಲೆ ಮಾಡುವ ಪದ್ಧತಿ. ಉದಾ: ಎಸ್ಕಿಮೊಗಳು ವಲಸೆ ಹೋಗುವಾಗ ತಮ್ಮೊಂದಿಗೆ ನಡೆಯಲಾಗದ ವೃದ್ಧರನ್ನು ಹಿಮದ ನಡುಗಡ್ಡೆಗಳ ಎಡೆಯಲ್ಲಿ ಎಸೆದು ಬಿಡುತ್ತಾರೆ.

senile delirium: ಜರಾಜನ್ಯ ಪ್ರಲಾಪ; ಮುಪ್ಪಿನ ಪ್ರಲಾಪ.

senile dementia: ಜರಾಜನ್ಯ ಮನೋಭ್ರಂಶ; ವೃದ್ಧಾಪ್ಯ ಮನೋವಿದಳನ.

senile depression: ಜರಾಜನ್ಯ ವಿಷಣ್ಣತೆ; ಮುಪ್ಪಿನ ವಿಷಣ್ಣತೆ.

senile deterioration: ಜರಾಜನ್ಯ ಹ್ರಾಸ; ಜರಾಜನ್ಯ ಕ್ಷೀಣತೆ; ಮುಪ್ಪಿನ ಕ್ಷೀಣತೆ.

senile psychosis: ಜರಾಜನ್ಯ ಮನೋವಿಕ್ಷಿಪ್ತಿ; ವೃದ್ಧಾಪ್ಯ (ಮುಪ್ಪಿನ) ಮನೋವಿಕ್ಷಿಪ್ತಿ.

senility: ಜರಾವಿಕೃತಿ; ಮುದಿತನ ವಿಕಾರ.

senior levirate: ಅಣ್ಣನು ಮೃತ ತಮ್ಮನ ಹೆಂಡತಿಯನ್ನು ವಿವಾಹವಾಗುವುದು.

senior sororate: ಪತ್ನಿಯ ಅಕ್ಕನೊಂದಿಗೆ ವಿವಾಹ; ಹಿರಿಯ ಭಗಿನಿ ವಿವಾಹ.

seniority cum fitness principle: ಸೇವಾಶ್ರೇಷ್ಠತೆ ಹಾಗೂ ಸದೃಢ ನಿಯಮ.

sensate culture: ಇಂದ್ರಿಯ ಪ್ರಧಾನ ಸಂಸ್ಕೃತಿ; ಅನುಭವಾತ್ಮಕ ಸಂಸ್ಕೃತಿ. ಭೌತಿಕ ಹಾಗೂ ಪ್ರಾಯೋಗಿಕ ಮೌಲ್ಯಗಳಿಗೆ ಮಾತ್ರ ಪ್ರಾಧಾನ್ಯತೆ ಕೊಟ್ಟು ಅಮೂರ್ತ, ಅಜ್ಞೇಯ ತಾವಾದಗಳನ್ನು ನಂಬದ ಸಂಸ್ಕೃತಿ.

sensation: ಇಂದ್ರಿಯ ಜ್ಞಾನ; ಸಂವೇದನೆ.

sensation of depth: ಆಳದ ಸಂವೇದನೆ.

sensation of movement: ಚಲನೆಯ ಸಂವೇದನೆ.

sensation of time: ಕಾಲದ ಸಂವೇದನೆ.

sensationalism : ಇಂದ್ರಿಯ ಗ್ರಾಹ್ಯತೆ. ಇಂದ್ರಿಯಗಳಿಂದ ಪರಿಗ್ರಹಿತವಾದ ಪ್ರಜ್ಞಾಪೂರ್ವಕ ಅನುಭವ.

sense: ಇಂದ್ರಿಯ.

sense illusion: ಇಂದ್ರಿಯ ಭ್ರಮೆ.

sense image: ಜ್ಞಾನೇಂದ್ರಿಯ ಪ್ರತಿಮೆ; ಇಂದ್ರಿಯ ಪ್ರತಿಮೆ.

sense impressions: ಇಂದ್ರಿಯಾತ್ಮಕ ಪ್ರಭಾವಗಳು. ಮಗುವಿನ ಮೊದಲ ಮೂರು

ವರ್ಷಗಳಲ್ಲಿ ಸಂಪ್ರತ್ಯಕ್ಷಣವು ಅಸ್ಪಷ್ಟ ವಾಗಿರುವುದರಿಂದ ಅದು ಇಂದ್ರಿಯಾತ್ಮಕ ಪ್ರಭಾವಗಳಿಂದಲೇ ಎಲ್ಲಾ ಶಬ್ದಗಳನ್ನು ಗ್ರಹಿಸುತ್ತದೆ.

sense of belongingness: ಸಂಬಂಧ ಪ್ರಜ್ಞೆ; ಸೇರಿರುವ ಪ್ರಜ್ಞೆ.

sense of duty: ಕರ್ತವ್ಯ ಪ್ರಜ್ಞೆ.

sense perception: ಇಂದ್ರಿಯ ಜ್ಞಾನ.

sense of personal identity: ವೈಯಕ್ತಿಕ ಅನನ್ಯತಾ ಪ್ರಜ್ಞೆ.

sensitive: ಸೂಕ್ಷ್ಮ; ಭಾವಾತ್ಮಕ.

sensitivity: ಸೂಕ್ಷ್ಮ ಸ್ವಭಾವ. ಬೇಗನೆ ಭಾವುಕನಾಗುವ, ನೊಂದುಕೊಳ್ಳುವ, ಭಾವನೆಗಳನ್ನು ತಡೆದುಕೊಳ್ಳಲಾರದ ಮೃದು ಸ್ವಭಾವ.

sensitivity reaction: ಸಂವೇದನಾಶೀಲತಾ ಪ್ರತಿಕ್ರಿಯೆ.

sensory: ಸಂವೇದನ; ಸಂವೇದನಾ ವಾಹಕ.

sensory ability : ಸಂವೇದನಾ ಯೋಗ್ಯತೆ.

sensory acuity: ಸಂವೇದನಾ ತೀಕ್ಷ್ಣತೆ.

sensory adaptation: ಸಂವೇದನಾ ಹೊಂದಾಣಿಕೆ; ಇಂದ್ರಿಯಗಳ ಹೊಂದಾಣಿಕೆ. ದೀರ್ಘಕಾಲದ ಅಭ್ಯಾಸ, ಬಳಕೆ, ಅನುಭವದಿಂದ ಇಂದ್ರಿಯಗಳು ಪರಿಸ್ಥಿತಿಗೆ ಹೊಂದಿಕೊಳ್ಳುವುದು. ಉದಾ: ಶಬ್ದಮಾಲಿನ್ಯಕ್ಕೆ ಹೊಂದಿಕೊಳ್ಳುವುದು.

sensory aphasia: ವಾಚಾ ವೇದನಾಘಾತ.

sensory automatism: ಸಂವೇದನ ಸ್ವಚಲನತೆ.

sensory continuum: ಇಂದ್ರಿಯ ಸಾತತ್ಯ.

sensory deprivation: ಸಂವೇದನಾಪಹರಣ.

sensory discrimination: ಸಂವೇದನ ವಿಭೇದನ.

sensory experience: ಸಂವೇದನಾನುಭವ.

sensory-motor activity: ಸಂವೇದನ ಚಾಲನ ಚಟುವಟಿಕೆ; ಸಂವೇದನ ಚಾಲನ ಕ್ರಿಯೆ.

sensory motor arc: ಸಂವೇದನಾ ಚಲನ ಚಾಪ.

sensory motor period: ಸಂವೇದನಾ ಚಲನ ಅವಧಿ.

sensory motor training: ಸಂವೇದನಾ ಚಲನ ತರಬೇತಿ. ಇಂದ್ರಿಯ ಮತ್ತು ಅಂಗಾಂಗಗಳ ಚಲನೆಯ ಶಕ್ತಿಯನ್ನು ವೃದ್ಧಿಪಡಿಸುವ ಪ್ರೋತ್ಸಾಹಕ ಶಿಕ್ಷಣ.

sensory reaction: ಸಂವೇದೀ ಪ್ರತಿಕ್ರಿಯೆ.

sensory threshold: ಸಂವೇದನೆಯ ಹೊಸ್ತಿಲು.

sensualism: ವಿಷಯಾಸಕ್ತಿ ವಾದ; ಇಂದ್ರಿಯ ಸುಖಾಸಕ್ತಿ ವಾದ.

sentiment: ಭಾವನೆ; ರಸಭಾವ. ಒಬ್ಬ ವ್ಯಕ್ತಿ, ಒಂದು ವಸ್ತು ಅಥವಾ ವಿಚಾರವೊಂದರ ಬಗೆಗೆ ವ್ಯಕ್ತಿಯೊಬ್ಬನು ಇರಿಸಿಕೊಂಡಿರುವ ಸಂವೇಗಾತ್ಮಕ ಮನೋಧರ್ಮ.

sentiment of self regard: ಆತ್ಮ ಗೌರವ; ರಸಭಾವ.

sentimentalism: ರಸಭಾವ ವಾದ.

sentimentality: ಭಾವೋದ್ರೇಕತೆ.

sentiments and ideas: ಭಾವುಕ ಕಲ್ಪನೆಗಳು ಮತ್ತು ಆದರ್ಶಗಳು. ಇವುಗಳು ಬಹುಪಾಲು ಅನುಭವ ಮತ್ತು ತರಬೇತಿಯಿಂದ ಬೆಳೆದವು. ಉದಾ: ದೇಶಭಕ್ತಿ, ಸಹಾನೂಭೂತಿ, ಗೌರವ, ಕರ್ತವ್ಯ ಮತ್ತು ಪ್ರಾಮಾಣಿಕತೆ.

separate communal electorate: ಪ್ರತ್ಯೇಕ ಕೋಮು ಚುನಾಯಕ ಸಮುದಾಯ.

separate electorate: ಪ್ರತ್ಯೇಕ ಚುನಾಯಕ ಸಮುದಾಯ.

separation anxiety: ದೂರಾತಂಕ. ಮಕ್ಕಳಲ್ಲಿ ತಂದೆ ತಾಯಿಗಳಿಂದ ದೂರವಾಗುವ ಭಯ. ಇದು ಕಾಲ್ಪನಿಕ ಅಥವಾ ನಿಜವಾದ ಭಯವಿರಬಹುದು.

separation of power: ಅಧಿಕಾರ ಪ್ರತ್ಯೇಕತೆ; ಅಧಿಕಾರ ವಿಭಜನೆ. ಸರಕಾರದ ಅಧಿಕಾರವು ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗ ಈ ಮೂರು ಅಂಗಗಳಲ್ಲಿ ವಿಭಜಿಸಲ್ಪಡುವುದು..

Sepoy Mutiny (1857): ಸಿಪಾಯಿಗಳ ದಂಗೆ; ಸಿಪಾಯಿಗಳ ಬಂಡಾಯ. ಉದಾ: ಭಾರತದಲ್ಲಿ ೧೮೫೭ರ ಕ್ರಾಂತಿಯನ್ನು ಸಿಪಾಯಿದಂಗೆ ಎನ್ನಲಾಗಿದೆ. ಇದನ್ನೇ ಭಾರತೀಯರು ತಮ್ಮ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂದಿದ್ದಾರೆ.

sept : ಸಮೂಹ. ತಂದೆ ಅಥವಾ ತಾಯಿಯ ಮೂಲಕ ವಂಶಾವಳಿ ಗುರುತಿಸುವ ಸಮೂಹ.

sequence dating: ಕ್ರಮಾನುಗತ ಕಾಲ ನಿರ್ಧಾರ.

sequential analysis: ಅನುಕ್ರಮಿಕ ವಿಶ್ಲೇಷಣೆ.

sequential arrangement: ಅನುಕ್ರ ಮಿಕ ವ್ಯವಸ್ಥಾಪನೆ.

sequential marriage: ಕ್ರಮಾನು ಗತಿಯ ವಿವಾಹ. ಒಬ್ಬ ವ್ಯಕ್ತಿಗೆ ಒಂದಕ್ಕಿಂತ ಹೆಚ್ಚು ಹೆಂಡತಿಯರು ಇರಬಹುದಾದರೂ ಏಕಕಾಲದಲ್ಲಿ ಒಬ್ಬಳೇ ಹೆಂಡತಿ ಇರಬೇಕು.

serendipity: ಅನಿರೀಕ್ಷಿತ ಶೋಧ; ಆಕಸ್ಮಿಕ ಹೊಳಹು.

serf: ಜೀತದಾಳು.

serfdom: ಜೀತಪದ್ಧತಿ.

serial action: ಸರಣಿ ಕ್ರಿಯೆ. ಒಬ್ಬ ವ್ಯಕ್ತಿಯ ಕ್ರಿಯೆಯಿಂದ ಇನ್ನೊಬ್ಬ, ಮತ್ತೊಬ್ಬ ಹೀಗೆ ಪ್ರಭಾವಿತರಾಗಿ ಕ್ರಿಯೆ ನಡೆಸುವುದು.

serial polygamy: ಸರಣಿ ಬಹು ವಿವಾಹ.

serpent worship: ನಾಗಪೂಜೆ. ನಾಗರಹಾವನ್ನು ದೇವರೆಂದು ಪೂಜಿಸುವುದು.

service bureaucrat: ಸೇವಾ ಅಧಿಕಾರಿ.

service class: ಸೇವಾವರ್ಗ. ಬಂಡವಾಳಶಾಹಿಗಳ ಬಂಡವಾಳದ ಬೆಳವಣಿಗೆಗಾಗಿ ಸಹಾಯ ಮಾಡುವಂತಹ ಖಾಸಗಿ ನಿಗಮಗಳ ಹಾಗೂ ಪೌರಸೇವೆಯ ನೌಕರರು.

service industries: ಸೇವಾ ಕೈಗಾರಿಕೆಗಳು. ಸಿದ್ಧವಸ್ತುಗಳನ್ನು ತಯಾರಿಸುವುದರ ಬದಲು ಸೇವೆಗಳ ಉತ್ಪಾದನೆಯಲ್ಲಿ ನಿರತವಾಗಿರುವ ಕೈಗಾರಿಕೆಗಳು.

service register: ಸೇವಾ ದಾಖಲಾತಿ ಪುಸ್ತಕ. ಸರಕಾರಿ ಸೇವೆಯಲ್ಲಿ ನೌಕರರ ಕಾರ್ಯನಿರ್ವಹಣೆ ಮತ್ತು ಅನುಭವ ಗಳನ್ನು ದಾಖಲೆ ಮಾಡುವ ವಿಧಾನ.

services: ಸೇವೆಗಳು. ಭೌತಿಕ ಸರಕು ಗಳಂತೆ ವರ್ಗಾಯಿಸಲಾಗದ ಹಾಗೂ ಸ್ಪರ್ಶಿಸಲಾಗದ ಆರ್ಥಿಕ ಸರಕುಗಳು.

servitude: ಗುಲಾಮತನ.

session: ಅಧಿವೇಶನ.

sessions judge: ಸತ್ರ ನ್ಯಾಯಾಧೀಶ.

setting: ಆವರಣ; ಕ್ಷೇತ್ರ.

settlement geography: ವಾಸಸ್ಥಳ ಭೂಗೋಳಶಾಸ್ತ್ರ. ಮಾನವನ ವಾಸಕ್ಕಾಗಿ ನಿರ್ಮಿಸಲಾದ ವಾಸಸ್ಥಳಗಳ ಅಧ್ಯಯನ.

severe retardation: ತೀವ್ರ ಹಿಂದುಳಿಕೆ.

sex adjustment: ಲೈಂಗಿಕ ಹೊಂದಾಣಿಕೆ.

sex bias: ಲೈಂಗಿಕ ಪಕ್ಷಪಾತ. ಗಂಡಿಗೆ ಗಂಡಸರ ಪರವಾದ ಹಾಗೂ ಹೆಣ್ಣಿಗೆ ಹೆಂಗಸರ ಪರವಾದ ಭಾವನೆಗಳು.

sex characteristics: ಲಿಂಗ ಲಕ್ಷಣ ಗಳು.

sex chromosomes: ಲಿಂಗ ನಿರ್ಧಾರಕ ವರ್ಣತಂತುಗಳು.

sex determination clinics: ಲಿಂಗ ನಿರ್ಧಾರಕ ಚಿಕಿತ್ಸಾಲಯಗಳು.

sex gland: ಲಿಂಗ ಗ್ರಂಥಿ.

sex gratification: ಕಾಮ ಸಂತುಷ್ಟಿ; ಲೈಂಗಿಕ ತೃಪ್ತಿ.

sex instinct: ಲೈಂಗಿಕ ಪ್ರವೃತ್ತಿ.

sex linked character: ಲಿಂಗ ಸಂಬಂಧೀ ಗುಣ.

sex offender: ಲೈಂಗಿಕ ಅಪರಾಧಿ.

sex psychology: ಲೈಂಗಿಕ ಮನೋ ವಿಜ್ಞಾನ.

sex ratio: ಸ್ತ್ರೀಪುರುಷ ಅನುಪಾತ.

sex role compatibility: ಲಿಂಗ ಪಾತ್ರಾ ನುರೂಪತೆ.

sex role identification: ಲಿಂಗ ಸಂಬಂಧೀ ಪಾತ್ರ ಗುರುತಿಸುವಿಕೆ.

sex role incompatibility: ಲಿಂಗ ಪಾತ್ರ ಅನನುರೂಪತೆ.

sex roles: ಲಿಂಗ ಪಾತ್ರಗಳು; ಗಂಡು ಹೆಣ್ಣುಗಳ ಪಾತ್ರಗಳು.

sexism: ಲಿಂಗವಾದ. ಪುರುಷರು ಮೇಲು ಹಾಗೂ ಸ್ತ್ರೀಯರು ಕೀಳು ಎಂಬ ಲಿಂಗ ಅಸಮಾನತೆಯ ಪ್ರತಿಪಾದನೆ.

sexology: ಲೈಂಗಿಕ ವಿಜ್ಞಾನ; ಕಾಮಶಾಸ್ತ್ರ.

sexual communism: ಲೈಂಗಿಕ ಸಾಮ್ಯ ವಾದ; ಲೈಂಗಿಕ ಸಮತಾವಾದ. ಹೆಂಡಿರು ಗಳನ್ನು ಸಮಾನವಾಗಿ ಹಂಚಿಕೊಳ್ಳುವ ಪದ್ಧತಿ. ಪ್ರಾಚೀನ ಕಾಲದಲ್ಲಿ ಅತಿಯಾದ ಮುಕ್ತ ಲೈಂಗಿಕತೆಯ ಸಮುದಾಯವಿತ್ತೆಂಬ ಕಲ್ಪನೆ. ಈಗ ಇಂತಹ ಲೈಂಗಿಕ ಸಾಮ್ಯ ವಾದದ ಅಸ್ತಿತ್ವವನ್ನು ತೋರಿಸುವ ಸಮು ದಾಯಗಳ ಉದಾಹರಣೆಗಳು ಮಾತ್ರ ಅತ್ಯಲ್ಪ ಇವೆ.

sexual crime: ಲೈಂಗಿಕ ಅಪರಾಧ.

sexual debility: ಧಾತುಕ್ಷಯಜನ್ಯ ಅಶಕ್ತತೆ; ಲೈಂಗಿಕ ದುರ್ಬಲತೆ.

sexual deviance: ಲೈಂಗಿಕ ಅಡ್ಡದಾರಿ; ಲೈಂಗಿಕ ಅಪವರ್ತನೆ.

sexual deviate: ಲೈಂಗಿಕ ವಿವರ್ತಕ.

sexual dimorphism: ಲೈಂಗಿಕ ದ್ವಿರೂಪತ್ವ.
sexual disorder: ಲೈಂಗಿಕ ವಿಕಾರ.
sexual harassment: ಲೈಂಗಿಕ ಕಿರು ಕುಳ.
sexual infantilism: ಲೈಂಗಿಕ ಶಿಶುತ್ವ. ಯೌವನಾವಸ್ಥೆಗೆ ಬಂದರೂ ಲೈಂಗಿಕ ವಿಚಾರದಲ್ಲಿ ಮಾನಸಿಕವಾಗಿಯೂ ದೈಹಿಕವಾಗಿಯೂ ಶೈಶವಾವಸ್ಥೆಯಲ್ಲಿರುವಿಕೆ.
sexual instinct: ಲೈಂಗಿಕ ಮೂಲ ಪ್ರವೃತ್ತಿ.
sexual intercourse: ರತಿಕ್ರೀಡೆ; ಸಂಭೋಗ.
sexual latency: ಲೈಂಗಿಕ ಸುಪ್ತತೆ. ನೋಡಿ: sexual infantilism.
sexual life cycle: ಲೈಂಗಿಕ ಜೀವನ ಚಕ್ರ.
sexual maturity: ಲೈಂಗಿಕ ಪರಿಪಕ್ವತೆ.
sexual perversion: ಲೈಂಗಿಕ ಅಪಚಾರ; ವಿಕೃತ ಲೈಂಗಿಕ ಪ್ರವೃತ್ತಿ.
sexual reflex: ಲೈಂಗಿಕ ಪ್ರತಿಕ್ಷೇಪ.
sexual reproduction: ಲೈಂಗಿಕ ಪುನರುತ್ಪಾದನೆ; ಲೈಂಗಿಕ ಪ್ರಜನನ.
sexual selection: ಲೈಂಗಿಕ ಆಯ್ಕೆ.
sexual trauma: ಲೈಂಗಿಕ ಆಘಾತ.
sexuality: ಲೈಂಗಿಕತೆ; ಕಾಮುಕತೆ.
shadow cabinet: ಛಾಯಾಸಂಪುಟ. ಶಾಸನಸಭೆಯಲ್ಲಿ ಮಂತ್ರಿಮಂಡಲದ ಕಾರ್ಯ ನಿಷ್ಠೆಯ ಬಗ್ಗೆ ನೆರಳಿನಂತೆ ತೀವ್ರ ಗಮನ ನೀಡುವ ವಿರೋಧ ಪಕ್ಷಗಳ ವಕ್ತಾರರು ಹಾಗೂ ನಾಯಕರು.
shadow price: ಛಾಯಾಬೆಲೆ. ನೈಜ ಬೆಲೆಯನ್ನು ನಿಗದಿಸಲು ಅಸಾಧ್ಯವಾಗಿರುವಲ್ಲಿ ಅಥವಾ ನಿಗದಿಸಿದ ನೈಜ ಬೆಲೆಗಳು ಉತ್ಪಾದನಾ ವೆಚ್ಚಗಳನ್ನು ಭರಿಸಲಾಗದ ಸಂದರ್ಭದಲ್ಲಿ ಅನ್ವಯಿಸುವ ಬೆಲೆ.
Shakti: ಶಕ್ತಿ. ಶಾಕ್ತಪಂಥದ ಮಾತೃ ದೇವತೆ.
Shalivahana era (78 AD): ಶಾಲಿವಾಹನ ಶಕ. ಪ್ರತಿಷ್ಠಾನ ನಗರದಲ್ಲಿ ಆಳುತ್ತಿದ್ದ ಶಾಲಿವಾಹನ (ಶಾತವಾಹನ) ಅರಸನಿಂದ ಆರಂಭಿಸಲ್ಪಟ್ಟಿತು. ಇದು ಕ್ರಿಶ್ಚಿಯನ್ ಶಕಾರಂಭದ ಇಪ್ಪತ್ತೆಂಟು ವರ್ಷಗಳ ನಂತರ ಆರಂಭವಾಯಿತು.
shallow feeling: ಖಾಲಿ ಭಾವನೆ. ಎಲ್ಲವೂ ಖಾಲಿಯಾದಂತೆನಿಸುವ ಅನು ಭವ.
shaman: ಶಾಮನ್. ವ್ಯಕ್ತಿಯೊಬ್ಬನಿಗೆ ವಿಶೇಷ ಮಂತ್ರಶಕ್ತಿ ಇದೆಯೆಂಬ ನಂಬಿಕೆ. ಉದಾ: ಮಂತ್ರ ವೈದ್ಯ.
shamanism: ಶಾಮನ್‌ವಾದ. ಭೂತ-ಪ್ರೇತ ಮತ್ತು ಉಪದೇಶಗಳಲ್ಲಿ ನಂಬಿಕೆ ಉಳ್ಳ ಮತ್ತು ಒಲಿಸಿಕೊಳ್ಳಲು ಮಾಂತ್ರಿಕ ಪುರೋಹಿತರಿಗೆ ಮಾತ್ರ ಶಕ್ತಿ ಉಂಟೆಂದು ನಂಬುವ ಸೈಬೀರಿಯಾ ದೇಶದ ಜನಗಳ ಒಂದು ಮತ.
shamanistic ballad: ಮಾಂತ್ರಿಕ ಲಾವಣಿ.
shaping of personality: ವ್ಯಕ್ತಿತ್ವ ರೂಪಣ.
share indices: ಷೇರು ಸೂಚಿಗಳು. ಷೇರು ಮಾರುಕಟ್ಟೆಯಲ್ಲಿ ಷೇರುಗಳ ಸರಾಸರಿ ಬೆಲೆಯಲ್ಲಿನ ಬದಲಾವಣೆಯನ್ನು ಸೂಚಿಸುವ ಸೂಚ್ಯಂಕಗಳು.
shariyat : ಶರಿಯಾ. ಇಸ್ಲಾಂನ ಕಾನೂನು ಸೂತ್ರ.

shell shock: ಶೆಲ್ ಆಘಾತ; ಕದನ ಮನೋಬೇನೆ. ಮೊದಲನೆ ಮಹಾಯುದ್ಧದ ಸಮಯದಲ್ಲಿ ಕದನ ಭೂಮಿಯಲ್ಲಿ ತಲೆ ದೋರಿದ ಮನೋಬೇನೆಗಳಿಗೆ ಅಸಮರ್ಪಕ ವಾಗಿ ಬಳಸಲಾದ ಪರಿಕಲ್ಪನೆ.

shift system: ಸರತಿ ಪದ್ಧತಿ.

shifting cultivation: ಸಂಚಾರೀ ಬೇಸಾಯ; ಸ್ಥಾನಾಂತರ ಬೇಸಾಯ; ಸ್ಥಳ ಬದಲಿಕೆಯ ಬೇಸಾಯ.

shifting equilibrium: ಪಲ್ಲಟ ಗೊಳ್ಳುವ ಸಮತೋಲನ.

shifting of taxation: ತೆರಿಗೆಯ ವರ್ಗಾವಣೆ; ಕರ ವರ್ಗಾವಣೆ.

shista: ಭೂಕಂದಾಯ.

Shiya: ಶಿಯಾ ಪಂಥ. ಮುಸಲ್ಮಾನ ರಲ್ಲಿರುವ ಎರಡು ಪಂಗಡಗಳಲ್ಲಿ ಒಂದು. ಈ ಪಂಥದವರು ಪೈಗಂಬರ ಮನೆತನ ದವರಿಗೇ "ಖಲೀಫ" ಪಟ್ಟ ವಂಶಪರಂಪರೆ ಯಾಗಿ ದೊರೆಯಬೇಕೆಂಬ ಅಭಿಪ್ರಾಯ ಪಟ್ಟರು.

shock reaction: ಆಘಾತ ಪ್ರತಿಕ್ರಿಯೆ.

shock therapy: ಆಘಾತ ಚಿಕಿತ್ಸೆ.

shock treatment: ಆಘಾತ ಚಿಕಿತ್ಸೆ.

short contact interview: ಅಲ್ಪ ಕಾಲಾವಧಿ ಸಂದರ್ಶನ.

short distance memory: ಅಲ್ಪಕಾಲಿಕ ಸ್ಮೃತಿ.

short notice question: ಅಲ್ಪಕಾಲಿಕ ಪ್ರಶ್ನೆ.

shortrun cost: ಅಲ್ಪಾವಧಿ ವೆಚ್ಚ.

shortrun cost curve: ಅಲ್ಪಾವಧಿ ವೆಚ್ಚ ರೇಖೆ. ಉದ್ಯಮವೊಂದರ ನಿಗದಿತ ಸ್ಥಿರ ಆಸ್ತಿಗಳೊಂದಿಗೆ ಉದ್ಯಮದ ಉತ್ಪನ್ನ ಮತ್ತು ಆ ಉತ್ಪನ್ನಗಳ ಉತ್ಪಾದನಾ ವೆಚ್ಚಗಳ ನಡುವಿನ ಸಂಬಂಧದ ನಕ್ಷಾ ರೂಪದ ವಿವರಣೆ.

short-run demand: ಅಲ್ಪಾವಧಿ ಬೇಡಿಕೆ.

short term debt: ಅಲ್ಪಾವಧಿ ಸಾಲ.

short term equilibrium: ಅಲ್ಪಾ ವಧಿಯ ಸಮತೋಲನ.

short term planning: ಅಲ್ಪಾವಧಿಯ ಯೋಜನೆ.

shot-gun collection: ಕ್ಷಿಪ್ರ ಸಂಗ್ರಹ.

show cause notice: ಕಾರಣ ನೀಡೆಂಬ ಸೂಚನೆ. ಒಬ್ಬ ಸದಸ್ಯ ಅಥವಾ ನೌಕರನು ತಪ್ಪೆಸಗಿದಾಗ ಆತ ಹಾಗೇಕೆ ಮಾಡಿದ ನೆಂಬುದಕ್ಕೆ ಕಾರಣ ವಿಚಾರಿಸುವ ಸೂಚನಾ ಪತ್ರ.

showy disposition: ತೋರಿಕೆಯ ಪ್ರವೃತ್ತಿ; ಆಡಂಬರ ಚಿತ್ತವೃತ್ತಿ.

shuddering sensation: ನಡುಕ ಸಂವೇದನೆ.

shut-in personality: ನಿಮೀಲಿತ ವ್ಯಕ್ತಿತ್ವ; ಅಂತರ್ಲೀನ ವ್ಯಕ್ತಿತ್ವ.

sib: ರಕ್ತಸಂಬಂಧಿ.

siblings: ಒಡಹುಟ್ಟಿದವರು.

sibling rivalry: ಸೋದರ ಸ್ಪರ್ಧೆ.

sickness insurance: ಅನಾರೋಗ್ಯ ವಿಮೆ.

sign: ಸಂಕೇತ.

sign language: ಸಂಜ್ಞಾ ಭಾಷೆ.

signature campaign: ಸಹಿಸಂಗ್ರಹ

ಚಳುವಳಿ. ಯಾವುದೇ ವಿಷಯದ ಪರವಾಗಿ ಅಥವಾ ವಿರೋಧವಾಗಿ ಜನರ ಅಭಿಪ್ರಾಯವನ್ನು ಸಂಗ್ರಹಿಸುವ ವಿಧಾನ. ಪ್ರಜಾಪ್ರಭುತ್ವ ಆಡಳಿತದಲ್ಲಿ ಅಭಿಪ್ರಾಯ ಹೇರಿಕೆಯ ವಿಧಾನಗಳಲ್ಲೊಂದು.

significance test: ಪ್ರಾಮುಖ್ಯತಾ ಪರೀಕ್ಷೆ. ಒಂದು ಅಥವಾ ಅದಕ್ಕಿಂತ ಹೆಚ್ಚಿನ ಘಟಕದ ಅಂಕಿ ಅಂಶಗಳ ಕುರಿತ ಊಹನೆಗಳನ್ನು ಪರೀಕ್ಷಿಸಲು ಸಂಖ್ಯಾಶಾಸ್ತ್ರದಲ್ಲಿ ಬಳಸುವ ಸಂಭವನೀಯ ಸಿದ್ಧಾಂತ.

significant others: ಪ್ರಾಮುಖ್ಯ ಇತರರು. ಸಾಮಾಜಿಕ ನಿಯಮಗಳನ್ನು ಒಪ್ಪಿಕೊಳ್ಳಲು ಅಥವಾ ತಿರಸ್ಕರಿಸಲು ಒಬ್ಬ ವ್ಯಕ್ತಿಯ ಮೇಲೆ ಪ್ರಭಾವ ಬೀರುವ ಇತರರು. ಮಗುವಿನ ಸಮಾಜೀಕರಣದಲ್ಲಿ ಆತನ ಹೆತ್ತವರು, ಶಿಕ್ಷಕರು, ಮಹಾತ್ಮರು, ಆಟ ಪಾಠದ ಸಹಪಾಠಿಗಳು ಪ್ರಾಮುಖ್ಯ ಇತರರಾಗಿರುತ್ತಾರೆ.

significant symbol: ಪ್ರಮುಖ ಚಿಹ್ನೆ; ಪ್ರಾಮುಖ್ಯ ಸಂಕೇತ.

silent trade: ಮಾತನಾಡದೆ ಮಾಡುವ ವ್ಯವಹಾರ. ಶ್ರೀಲಂಕಾದ ವೆಡ್ಡಾ ಆದಿವಾಸಿಗಳು ಮಾತನಾಡದೇ ವ್ಯಾಪಾರ ಮಾಡುತ್ತಾರೆ.

simple anomie: ಸರಳರೀತಿಯ ನಿಯಮ ರಾಹಿತ್ಯ.

simple correlation: ಸರಳ ಸಹ ಸಂಬಂಧ.

simple diffusion: ಸರಳ (ನೇರ) ಪ್ರಸರಣ.

simple folk-tale: ಸರಳ ಜನಪದ ಕತೆ. ಸರಳ ಜನಪದ ಕಥೆಗಳು ಕೇವಲ ಒಂದು ಅಥವಾ ಎರಡು ಆಶಯಗಳನ್ನು ಮಾತ್ರ ಹೊಂದಿದ್ದು ತಮ್ಮ ರಚನೆಯಲ್ಲಿ ಸರಳವಾಗಿರುತ್ತವೆ.

simple interest: ಸರಳ ಬಡ್ಡಿ. ಹೂಡಿಕೆಯಾದ ಬಂಡವಾಳಕ್ಕೆ ಲೆಕ್ಕ ಹಾಕುವ ಬಡ್ಡಿ.

simple majority: ಸರಳ ಬಹುಮತ. ಸಂಸತ್ತಿನಲ್ಲಿ ಯಾವುದೇ ಒಂದು ಮಸೂದೆಯು ಮನ್ನಣೆಯನ್ನು ಪಡೆಯಲು ಅಗತ್ಯದಷ್ಟು ಇರುವ ಬಹುಮತ. ಉದಾ: ಒಂದಾದರೂ ಹೆಚ್ಚು ಮತಗಳಿಸಿ ಗೆಲುವು ಸಾಧಿಸುವ ಕನಿಷ್ಟ ಬಹುಮತ.

simple observation: ಸರಳಾವಲೋಕನ.

simple random sample: ಸರಳ ಯಾದೃಚ್ಛಿಕ ಮಾದರಿ; ಸರಳ ಆಯ್ಕೆ ಮಾದರಿ.

simple ratio: ಸರಳ ಪ್ರಮಾಣ; ಸರಳ ಅನುಪಾತ.

simple schizophrenia: ಸರಳ ಮನೋವಿದಳನ.

simple society: ಸರಳ ಸಮಾಜ.

simulated conduct: ಅನುಕರಣೀಕೃತ ನಡತೆ.

simulation techniques: ಅನುಕರಣ ತಂತ್ರಗಳು.

simultaneous conditioning: ಏಕಕಾಲಿಕ ಅನುಬಂಧನ; ಸಹಕಾಲಿಕ ನಿಯಮಾಧೀನತೆ.

simultaneous contrast: ಸಹಕಾಲಿಕ ವೈರುಧ್ಯ.

simultaneous equation method: ಏಕಕಾಲಿಕ ಸಮೀಕರಣ ವಿಧಾನ.

simultaneous experience: ಸಹ ಕಾಲಿಕ ಅನುಭವ.

simultaneous variable: ಏಕಕಾಲಿಕ ಪರಿವರ್ತಕ.

simultaneous variation: ಸಹಕಾಲಿಕ ಪರಿವರ್ತನೆ.

sinecure: ಲಾಭಸ್ಥಾನ. ರಾಜಕೀಯ ಪಕ್ಷವೊಂದರ ಕಾರ್ಯಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಉತ್ತಮ ಸೇವೆ ಸಲ್ಲಿಸುವ ಸದಸ್ಯರಿಗೆ ಕಡಿಮೆ ಕಾರ್ಯ ಹೊಂದಿರುವ, ಹೆಚ್ಚು ವೇತನ ದೊರಕುವ ಅಧಿಕಾರಸ್ಥಾನ ನೀಡುವುದು.

sine die: ಅನಿರ್ದಿಷ್ಟ ಕಾಲ. ನೋಡಿ: adjourn sine die.

singer of tale: ಕಥಾಗಾಯಕ.

single budget: ಏಕ ಆಯವ್ಯಯ; ಏಕಮುಂಗಡ ಪತ್ರ. ಸರಕಾರದ ಎಲ್ಲಾ ಆದಾಯಗಳು ಮತ್ತು ವೆಚ್ಚಗಳನ್ನು ಒಳಗೊಂಡಿರುವ ಒಂದೇ ಒಂದು ಆಯವ್ಯಯ ಪಟ್ಟಿ.

single citizenship: ಏಕಪೌರತ್ವ; ಏಕ ನಾಗರಿಕತ್ವ.

single column tariff: ಏಕದರದ ಸುಂಕ.

single electoral college: ಏಕ ಚುನಾಯಕ ಸಮುದಾಯ.

single executive: ಏಕವ್ಯಕ್ತಿ ಕಾರ್ಯಾಂಗ. ಕಾರ್ಯಾಂಗದ ನಿರ್ಣಯಾತ್ಮಕ ಅಧಿಕಾರವು ಒಬ್ಬನಲ್ಲಿ ಕೇಂದ್ರಿಕೃತವಾಗಿರುವುದು. ಉದಾ: ಅಮೇರಿಕಾದ ಅಧ್ಯಕ್ಷ.

single factor experiment: ಏಕಾಂಶ ಕೇಂದ್ರಿತ ಪ್ರಯೋಗ.

single factoral terms of trade: ಏಕಘಟಕ ವ್ಯಾಪಾರದ ಕರಾರುಗಳು.

single genre forms: ಏಕರೂಪ ಪ್ರಕಾರಗಳು.

single member constituency: ಏಕಸದಸ್ಯ ಕ್ಷೇತ್ರ; ಏಕಸದಸ್ಯ ಚುನಾವಣಾ ಕ್ಷೇತ್ರ. ಒಂದು ಮತದಾರ ಕ್ಷೇತ್ರವು ಕೇವಲ ಒಬ್ಬ ಸದಸ್ಯನನ್ನು ಚುನಾಯಿಸುವುದು.

single party system: ಏಕಪಕ್ಷ ಪದ್ಧತಿ. ಒಂದು ರಾಷ್ಟ್ರದ ರಾಜಕೀಯದಲ್ಲಿ ಭಾಗವಹಿಸಲು ಕೇವಲ ಒಂದು ರಾಜಕೀಯ ಪಕ್ಷಕ್ಕೆ ಮಾತ್ರ ಅವಕಾಶವಿರುವ ವ್ಯವಸ್ಥೆ. ಉದಾ: ರಷ್ಯಾ, ಚೀನಾ.

single point entry: ಏಕಬಿಂದು ಪ್ರವೇಶ.

single sector model: ಏಕವಲಯ ಮಾದರಿ.

single teacher schools: ಏಕೋಪಾಧ್ಯಾಯ ಶಾಲೆಗಳು.

single transferable vote: ಏಕ ವರ್ಗಾವಣೆಯ ಮತ.

single use goods: ಏಕೋಪಯೋಗಿ ಸರಕುಗಳು.

single voting system: ಏಕಮತ ಪದ್ಧತಿ.

sinking fund: ಋಣಪರಿಹಾರ ನಿಧಿ. ರಾಜ್ಯ ಅಥವಾ ಇತರ ಸಂಸ್ಥೆಗಳು ತನ್ನ ಸಾಲವನ್ನು ಕ್ರಮಕ್ರಮವಾಗಿ ತೀರಿಸಲು ಕೂಡಿ ಹಾಕುವ ಹಣ.

sin offering: ಪಾಪದ ಅರ್ಪಣೆ. ತಪ್ಪು

ಮಾಡಿದಾತ ಬಲಿಕೊಡುವುದರ ಮೂಲಕ ಮಾಡಿಕೊಳ್ಳುವ ಪಾಪವಿಮೋಚನೆ.

sito phobia: ಭೋಜನ ಭೀತಿ.

situational analysis: ಸನ್ನಿವೇಶಿಕ ವಿಶ್ಲೇಷಣೆ; ಸಾಂದರ್ಭಿಕ ವಿಶ್ಲೇಷಣೆ.

situational criminal: ಸಾಂದ ರ್ಭಿಕ ಅಪರಾಧಿ.

situational neurosis: ಸಾಂದರ್ಭಿಕ ಮನೋಬೇನೆ. ಸಾಂದರ್ಭಿಕ ಒತ್ತಡಗಳಿಂದ ಉಂಟಾಗುವ ಮನೋಬೇನೆ. ಇಲ್ಲಿ ವ್ಯಕ್ತಿತ್ವದ ದುರ್ಬಲತೆಗಿಂತ ಸಂದರ್ಭದ ತೀವ್ರತೆಯೇ ಹೆಚ್ಚು ಮುಖ್ಯ. ಉದಾ: ಯುದ್ಧಕಾಲದಲ್ಲಿ ಬರುವ ಮನೋಬೇನೆ.

skewed distribution curve: ಕೊಂಕು ವಿತರಣಾ ರೇಖೆ.

skewness: ಕೊಂಕು; ಬಾಗುವಿಕೆ.

skull vault: ತಲೆಬುರುಡೆಯ ಕವಾಟ.

slave dynasty: ಗುಲಾಮ ಮನೆತನ.

slave labour: ಜೀತ-ಕೂಲಿ.

slave-owners: ಗುಲಾಮ ಒಡೆಯರು; ಶೋಷಕ ವರ್ಗ. ಇವರು ಕೆಲಸ ಮಾಡದೆ ರೈತರ, ಗುಲಾಮರ ಶ್ರಮವನ್ನು ಶೋಷಿಸಿ ಬಾಳುತ್ತಿದ್ದರು.

slave owning system: ಗುಲಾಮರನ್ನು ಇಟ್ಟುಕೊಂಡಿರುವ ವ್ಯವಸ್ಥೆ. ವರ್ಗ ಸಮಾಜದ ಮೊದಲ ಐತಿಹಾಸಿಕ ರೂಪ. ಉತ್ಪಾದನಾ ಸಾಧನಗಳ ಮತ್ತು ಗುಲಾಮರ ಮೇಲೆ ಒಡೆತನವಿದ್ದ ಆರ್ಥಿಕ ಸಂಬಂಧಗಳ ಐತಿಹಾಸಿಕ ವ್ಯವಸ್ಥೆ.

slavery: ದಾಸ್ಯವೃತ್ತಿ; ಗುಲಾಮಗಿರಿ.

sleep disturbance: ನಿದ್ರೆಯ ತೊಂದರೆ.

sleep walking: ನಿದ್ರಾಸಂಚಾರ; ನಿದ್ರಾ ಭ್ರಮಣ; ನಿದ್ರೆಯಲ್ಲಿ ನಡೆಯುವುದು. ನಿದ್ದೆಯ ಮಂಪರಿನ ಸ್ಥಿತಿಯಲ್ಲಿದ್ದಾಗ ವ್ಯಕ್ತಿ ಸುತ್ತಾಡುವ ಸಂಕೀರ್ಣವಾದ ಚಟುವಟಿಕೆಯಲ್ಲಿ ತೊಡಗಿ ಆಮೇಲೆ ಅವುಗಳನ್ನು ಮರೆತು ಬಿಡುತ್ತಾನೆ.

sleeping sickness: ನಿದ್ರಾರೋಗ.

sleeplessness: ನಿದ್ರಾಹೀನತೆ.

slip of tongue: ಬಾಯಿ ತಪ್ಪುವುದು.

slum: ಕೊಳೆಗೇರಿ; ಕೊಳಚೆ ಪ್ರದೇಶ. ಬಡಕುಟುಂಬಗಳೇ ಹೆಚ್ಚಾಗಿ ವಾಸಿಸುವ, ಅನೈತಿಕತೆ, ಅಶುಚಿತ್ವಗಳ ಬೀಡಾಗಿರುವ ಸಾಮಾಜಿಕವಾಗಿ ವಿಸಂಘಟಿತವಾಗಿರುವ, ನಗರ ಪ್ರದೇಶಗಳಲ್ಲಿ ಹೆಚ್ಚಾಗಿ ಕಂಡು ಬರುವ ಜನನಿಬಿಡ ವಾಸಪ್ರದೇಶಗಳು.

slump: ಬೆಲೆ ಕುಸಿತ; ತಾತ್ಕಾಲಿಕ ಆರ್ಥಿಕ ಕುಸಿತ.

small group: ಸಣ್ಣ ಗುಂಪು; ಕಿರಿ ಸಮೂಹ.

small scale industry: ಸಣ್ಣ ಪ್ರಮಾಣದ ಕೈಗಾರಿಕೆ.

smoked drum: ಧೂಮ ಪಟಹ.

snakephobia: ಸರ್ಪಭೀತಿ.

sneezing impulse: ಸೀನು ಆವೇಗ.

snow blindness: ಹಿಮಗುರುಡು; ಹಿಮಾಂಧತೆ.

sociability: ಸಂಘಪರತೆ; ಸಮಾಜ ಶೀಲತೆ. ಯಾವುದೇ ತೀವ್ರತರನಾದ ಗುರಿ, ಉದ್ದೇಶಗಳನ್ನಿಟ್ಟುಕೊಳ್ಳದೇ ಮಾನವ ಅಂತರಕ್ರಿಯೆಯ ಸಂತೋಷಕ್ಕಾಗಿ ಇತರರೊಂದಿಗೆ ಬೆರೆಯುವ ಪ್ರವೃತ್ತಿ.

sociable disposition: ಸಂಘಶೀಲ ಚಿತ್ತ ವೃತ್ತಿ.

social: ಸಾಮಾಜಿಕ; ಸಾಂಘಿಕ; ಸಂಘ ಪ್ರಿಯ.

social accommodation: ಸಾಮಾಜಿಕ ಸಮಂಜನ.

social accounting of national income: ರಾಷ್ಟ್ರೀಯ ಆದಾಯದ ಸಾಮಾಜಿಕ ಲೆಕ್ಕಾಚಾರ. ಅರ್ಥವ್ಯವಸ್ಥೆಯ ವಿವಿಧ ವಲಯಗಳ ನಡುವಿನ ನಿರ್ದಿಷ್ಟ ಅವಧಿ ಯಲ್ಲಿನ ವ್ಯವಹಾರಗಳನ್ನು ತೋರಿಸುವ ರಾಷ್ಟ್ರೀಯ ಆದಾಯ ಮತ್ತು ಖರ್ಚುಗಳ ನಿರೂಪಣೆ.

social acquisitiveness : ಸಾಮಾಜಿಕ ಸಂಗ್ರಹಣ ಶೀಲತೆ.

social action: ೧. ಸಾಮಾಜಿಕ ಕ್ರಿಯೆ. ಬೇರೆ ವ್ಯಕ್ತಿ ಅಥವಾ ವ್ಯಕ್ತಿಗಳಿಂದ ಪ್ರಭಾ ವಿತಗೊಂಡ ಕ್ರಿಯೆ. ೨. ಒಂದು ಸಾಮಾಜಿಕ ಸಮಸ್ಯೆಯನ್ನು ಬಗೆಹರಿಸಲು ಮಾಡುವ ಸಂಘಟಿತ ಯತ್ನ.

social action theory: ಸಾಮಾಜಿಕ ಕ್ರಿಯಾ ಸಿದ್ಧಾಂತ. ಮೌಲ್ಯಗಳಿಂದ ಪ್ರೇರಿತ ವಾದ ವ್ಯಕ್ತಿಗಳ ನಡತೆಯ ಕುರಿತಾದ ಸಿದ್ಧಾಂತ.

social adaptation: ಸಾಮಾಜಿಕ ಹೊಂದಾಣಿಕೆ. ಸಾಮಾಜಿಕ ಪರಿಸರಕ್ಕೆ ಒಬ್ಬ ವ್ಯಕ್ತಿ ಅಥವಾ ಸಮೂಹ ತನ್ನ ನಡತೆಯನ್ನು ಹೊಂದಿಸಿಕೊಳ್ಳುವ ಪ್ರಕ್ರಿಯೆ.

social adjustment: ಸಾಮಾಜಿಕ ಹೊಂದಾಣಿಕೆ.

social administration: ಸಾಮಾಜಿಕ ಆಡಳಿತ. ಸಾಮಾಜಿಕ ನೀತಿ, ಸಾಮಾಜಿಕ ಕ್ರಿಯೆಯ ಮೂಲಕ ಅದರ ಅನುಷ್ಠಾನ, ತನ್ಮೂಲಕ ಸಾಮಾಜಿಕ ಸಮಸ್ಯೆಗಳ ಪರಿಹಾರ, ಸಾಮಾಜಿಕ ಸೇವೆಗಳ ಆಡಳಿತ ಇವು ಸಾಮಾಜಿಕ ಆಡಳಿತ ವ್ಯಾಪ್ತಿಯೊಳಗೆ ಬರುವ ಅಧ್ಯಯನದ ವಿಷಯಗಳು.

social affiliation: ಸಾಮಾಜಿಕ ಒಲವು; ಸಾಮಾಜಿಕ ಸಂಲಗ್ನತೆ.

social age: ಸಾಮಾಜಿಕ ವಯಸ್ಸು.

social aggregate: ಸಾಮಾಜಿಕ ಸಮುಚ್ಚಯ.

social anabolism: ಸಮಾಜ ರಚನಾತ್ಮಕ ಜೀವದ್ರವ್ಯ ಪರಿಣಾಮ.

social anatomy: ಸಾಮಾಜಿಕ ಶರೀರ.

social amunities: ಸಾಮಾಜಿಕ ಸೌಲಭ್ಯ ಗಳು.

social analysis: ಸಾಮಾಜಿಕ ವಿಶ್ಲೇಷಣೆ.

social anarchy: ಸಾಮಾಜಿಕ ಅರಾಜ ಕತೆ.

social animal: ಸಾಮಾಜಿಕ ಜೀವಿ.

social anthropology: ಸಾಮಾಜಿಕ ಮಾನವಶಾಸ್ತ್ರ.

social approval: ಸಾಮಾಜಿಕ ಅನು ಮೋದನೆ.

social area analysis: ಸಾಮಾಜಿಕ ಕ್ಷೇತ್ರ ವಿಶ್ಲೇಷಣೆ.

social arena: ಸಾಮಾಜಿಕ ಕಾರ್ಯ ಸ್ಥಾನ.

social arithmetic: ಸಾಮಾಜಿಕ ಅಂಕ ಗಣಿತ.

social ascendancy: ಸಾಮಾಜಿಕ ಅಭ್ಯುದಯ.

social assistance scheme: ಸಾಮಾಜಿಕ ಸಹಾಯ ಯೋಜನೆ.

social assurance: ಸಾಮಾಜಿಕ ಭದ್ರತೆ.

social atmosphere: ಸಾಮಾಜಿಕ ವಾತಾವರಣ.

social attitude: ಸಾಮಾಜಿಕ ಮನೋಭಾವ.

social banditry: ಸಮಾಜನಿಷ್ಠ ದರೋಡೆ.

social base: ಸಾಮಾಜಿಕ ನೆಲೆ.

social base map: ಸಾಮಾಜಿಕ ಮೂಲನಕ್ಷೆ.

social behaviour: ಸಾಮಾಜಿಕ ವರ್ತನೆ.

social behaviourism: ಸಾಮಾಜಿಕ ವರ್ತನಾ ತತ್ತ್ವ. ವ್ಯಕ್ತಿಯು ಇತರರೊಡನೆ ನಡೆಸುವ ಅಂತರ ಕ್ರಿಯೆಯನ್ನು ಸಮಾಜ ಶಾಸ್ತ್ರೀಯ ವಿಶ್ಲೇಷಣೆಯಿಂದ ಅಭ್ಯಸಿಸುವ ಪಂಥ.

social benefit: ಸಾಮಾಜಿಕ ಲಾಭ. ಆರ್ಥಿಕ ಚಟುವಟಿಕೆಯಿಂದ ಸಮಾಜಕ್ಕೆ ಉಂಟಾಗುವ ಲಾಭ (ಅನುಕೂಲತೆ).

social body: ಸಾಮಾಜಿಕ ಶರೀರ.

social bond: ಸಾಮಾಜಿಕ ಬಂಧ (ಬಾಂಧವ್ಯ).

social campaign: ಸಾಮಾಜಿಕ ಅಭಿಯಾನ.

social case work: ಸಾಮಾಜಿಕ ವಿಷಯ ಕಾರ್ಯ; ಸಾಮಾಜಿಕ ವ್ಯಕ್ತಿಗತ ಕಾರ್ಯ.

social category: ಸಾಮಾಜಿಕ ಪ್ರವರ್ಗ.

social causation: ಸಾಮಾಜಿಕ ಕಾರ್ಯ ಕಾರಣ.

social change: ಸಾಮಾಜಿಕ ಬದಲಾವಣೆ. ಸಾಮಾಜಿಕ ಸಂಬಂಧದ ಸ್ಥಾಪಿತ ಮಾದರಿಗಳಲ್ಲಿ ಕಂಡುಬರುವ ಬದಲಾವಣೆಗಳು. ಉದಾ: ಕೌಟುಂಬಿಕ, ಧಾರ್ಮಿಕ ಹಾಗೂ ಆರ್ಥಿಕ ಜೀವನದಲ್ಲಿ ಆಗುವ ಬದಲಾವಣೆ.

social characteristics: ಸಾಮಾಜಿಕ ಗುಣಲಕ್ಷಣಗಳು.

social charter: ಸಾಮಾಜಿಕ ಸನ್ನದು.

social class: ಸಾಮಾಜಿಕ ವರ್ಗ. ಏಕಪ್ರಕಾರದ ಆರ್ಥಿಕ ಸ್ಥಾನಮಾನವಿದ್ದು ಒಂದೇ ತೆರನಾದ ಆಸೆ, ಆಕಾಂಕ್ಷೆ ಹಾಗೂ ನಿಗದಿತ ಜೀವನಮಟ್ಟದಲ್ಲಿರುವ ಸಂಘಟಿತ ಅಥವಾ ಅಸಂಘಟಿತ ಜನವರ್ಗ.

social class system: ಸಾಮಾಜಿಕ ವರ್ಗ ವ್ಯವಸ್ಥೆ.

social cleavage: ಸಾಮಾಜಿಕ ಬಿರುಕು.

social climate: ಸಾಮಾಜಿಕ ವಾತಾವರಣ; ಸಾಮಾಜಿಕ ಪರಿಸರ.

social closure: ಸಾಮಾಜಿಕ ಮುಚ್ಚುಗಡೆ. ಉಳಿದ ಗುಂಪುಗಳಿಗಿಂತ ತಾವು ಬೇರೆಯೆಂಬ ಪ್ರತ್ಯೇಕತೆ ತೋರುವಂಥ ಗುಂಪಿನ ಅಭ್ಯಾಸಗಳು, ವಿಧಾನಗಳು.

social codes: ಸಾಮಾಜಿಕ ಕಟ್ಟಳೆಗಳು.

social cohesion: ಸಾಮಾಜಿಕ ಒಗ್ಗಟ್ಟು. ಸಾಮಾಜಿಕವಾಗಿ ಒಂದಾಗಿರುವಿಕೆ.

social collective: ಸಾಮಾಜಿಕ ಸಮಷ್ಟಿ.

social component: ಸಾಮಾಜಿಕ ಘಟಕ.

social conduct: ಸಾಮಾಜಿಕ ಆಚಾರ; ಸಾಮಾಜಿಕ ನಡೆವಳಿ.

social coflict: ಸಾಮಾಜಿಕ ಸಂಘರ್ಷ.

social conformity: ಸಾಮಾಜಿಕ ಬದ್ಧತೆ; ಸಾಮಾಜಿಕ ಅನುವರ್ತನೆ.

social consciousness: ಸಾಮಾಜಿಕ ಪ್ರಜ್ಞೆ; ಸಾಮಾಜಿಕ ಜಾಗ್ರತೆ.

social constraint: ಸಾಮಾಜಿಕ ನಿರ್ಬಂಧ; ಸಾಮಾಜಿಕ ನಿಯಂತ್ರಣ. ನಾವು ವಾಸಿಸುವ ಸಮೂಹ ಮತ್ತು ಸಮಾಜಗಳು ನಮ್ಮ ನಡತೆಯ ಮೇಲೆ ಕಟ್ಟುಪಾಡಿನ ಪ್ರಭಾವ ಬೀರುತ್ತವೆ. ಸಾಮಾಜಿಕ ನಿರ್ಬಂಧವು ಸಾಮಾಜಿಕ ಸಂಗತಿಯ ವಿಷಯದ ಒಂದು ಲಕ್ಷಣ.

social contact: ಸಾಮಾಜಿಕ ಸಂಪರ್ಕ.

social contagion: ಸಾಮಾಜಿಕ ಸಹ ವಾಸ ದೋಷ.

social contiguity: ಸಾಮಾಜಿಕ ಸಾಮೀಪ್ಯ; ಸಾಮಾಜಿಕ ನಿಕಟತೆ.

social contract: ಸಾಮಾಜಿಕ ಒಪ್ಪಂದ.

social contract theory: ಸಾಮಾಜಿಕ ಒಪ್ಪಂದ ಸಿದ್ಧಾಂತ. ರಾಜ್ಯದ ಉಗಮದ ಬಗ್ಗೆ ಇರುವ ಸಿದ್ಧಾಂತ. ರಾಜ್ಯವು ಜನರೊಂದಿಗಿನ ಪರಸ್ಪರ ಒಪ್ಪಂದದ ಫಲವಾಗಿ ಉಗಮಿಸಿತು ಎಂದು ತಿಳಿಸುವ ಸಿದ್ಧಾಂತ.

social contractualist: ಸಾಮಾಜಿಕ ಒಪ್ಪಂದದ ಪ್ರತಿಪಾದಕ. ಉದಾ: ಜೆ.ಜೆ. ರೂಸೋ, ಜಾನ್ ಲಾಕ್ ಮತ್ತು ಥಾಮಸ್ ಹಾಬ್ಸ್.

social control: ಸಾಮಾಜಿಕ ನಿಯಂತ್ರಣ.

social co-operation: ಸಾಮಾಜಿಕ ಸಹಕಾರ.

social cost: ಸಾಮಾಜಿಕ ವೆಚ್ಚ. ಆರ್ಥಿಕ ಚಟುವಟಿಕೆಯೊಂದರಿಂದ ಸಮಾಜಕ್ಕೆ ತಗಲುವ ಒಟ್ಟು ವೆಚ್ಚ.

social curiosity: ಸಾಮಾಜಿಕ ಕುತೂಹಲ.

social Darwinism: ಸಾಮಾಜಿಕ ಡಾರ್ವಿನ್‌ವಾದ, ಸಾಮಾಜಿಕ ವಿಕಾಸ ವಾದ.

social defence: ಸಾಮಾಜಿಕ ಸಂರಕ್ಷಣೆ.

social democracy: ಸಾಮಾಜಿಕ ಪ್ರಜಾಪ್ರಭುತ್ವ. ಚುನಾವಣೆಯಲ್ಲಿ ಭಾಗವಹಿಸುವ ಮೂಲಕ ಈಗಿರುವ ರಾಜಕೀಯ ಆರ್ಥಿಕ ವ್ಯವಸ್ಥೆಯಲ್ಲೇ ಸುಧಾರಣೆಗಳನ್ನು ಹಾಗೂ ಕ್ರಾಂತಿಕಾರಿ ಬದಲಾವಣೆಗಳನ್ನು ತರುವ ಪ್ರಕ್ರಿಯೆ.

social demography: ಸಾಮಾಜಿಕ ಜನಸಂಖ್ಯಾಶಾಸ್ತ್ರ.

social development: ಸಾಮಾಜಿಕ ವಿಕಾಸ.

social deviant: ಸಾಮಾಜಿಕ ಅಪಚಾರಿ.

social deviation: ಸಾಮಾಜಿಕ ವಿಚಲನೆ; ಸಾಮಾಜಿಕವಾಗಿ ದಾರಿ ತಪ್ಪುವಿಕೆ.

social differences: ಸಾಮಾಜಿಕ ಭೇದಗಳು (ಭಿನ್ನತೆಗಳು).

social differenciation: ಸಾಮಾಜಿಕ ಭಿನ್ನತೆ (ವೈವಿಧ್ಯ).

social disabilities: ಸಾಮಾಜಿಕ ದೌರ್ಬಲ್ಯಗಳು; ಸಾಮಾಜಿಕ ಅನರ್ಹತೆಗಳು.

social disapproval: ಸಾಮಾಜಿಕ ಅಸಮ್ಮತಿ.

social discrimination: ಸಾಮಾಜಿಕ ತಾರತಮ್ಯ; ಸಾಮಾಜಿಕ ವಿಭೇದನ. ಜನಾಂಗೀಯ, ಧಾರ್ಮಿಕ ಕುಲಸಂಬಂಧದ ಅಥವಾ ಸಾಮಾಜಿಕ ವರ್ಗದ ಆಧಾರದ ಮೇಲೆ ವ್ಯಕ್ತಿಗಳ ಅಥವಾ ಸಮೂಹಗಳ ಬಗೆಗೆ ತಾರತಮ್ಯದ ನಡತೆ.

social disintegration: ೧. ಸಾಮಾಜಿಕ ವಿಘಟನೆ. ಸಾಮಾಜಿಕ ರಚನೆ, ಕಾರ್ಯ, ಸಂಸ್ಥೆಗಳು ಹಾಗೂ ಸಂಘಟನೆಗಳ ಮೂಲಾಂಶದಲ್ಲಿ ಕಂಡುಬರುವ ವಿಘಟನೆ. ೨. ಸಾಮಾಜಿಕ ಶಿಥಿಲತೆ. ಸಾಮಾಜಿಕ ನಿಯಮ ಪಾಲನೆ, ನಾಯಕತ್ವ ಹಾಗೂ ಸಂಘಟನೆ ಇಲ್ಲದಿರುವುದರಿಂದ ಸಾಮಾಜಿಕ ರಚನೆಯಲ್ಲಾಗುವ ಶಿಥಿಲತೆ.

social disorganization: ಸಾಮಾಜಿಕ ವಿಘಟನೆ. ಅಪರಾಧ, ವಿಲೋಪನ, ಮದ್ಯ ಪಾನ, ಮಾನಸಿಕ ರೋಗಗಳು, ಆತ್ಮಹತ್ಯೆ ಮುಂತಾದ ಸಾಮಾಜಿಕ ಸಮಸ್ಯೆಗಳು ಹೆಚ್ಚಾಗಿ ಕಂಡುಬರುವ ಯಾವುದೇ ಸಮಾಜ ಅಥವಾ ಸಮುದಾಯಗಳು ತೋರುವ ಸಾಮಾಜಿಕ ವಿಘಟನೆ.

social dissociation: ಸಾಮಾಜಿಕ ಅಸಂಘಟಿತತೆ. ವೈರತ್ವ ಹಾಗೂ ದ್ವೇಷದಿಂದ ವ್ಯಕ್ತಿ ವ್ಯಕ್ತಿಗಳ ನಡುವೆ ಹಾಗೂ ಸಮೂಹ ಗಳ ನಡುವೆ ಅಂತರ್‌ಕ್ರಿಯೆಯು ಕಡಿಮೆ ಯಾಗುವಿಕೆ.

social distance: ಸಾಮಾಜಿಕ ಅಂತರ; ಸಾಮಾಜಿಕ ದೂರ. ವ್ಯಕ್ತಿಗಳ ಅಥವಾ ಸಮೂಹಗಳ ನಡುವೆ ಕಂಡುಬರುವ ಸಾಮಾಜಿಕ ಪ್ರತ್ಯೇಕತೆ ಅಥವಾ ಪ್ರತ್ಯೇಕತೆಯ ಭಾವನೆ.

social distance mobility: ಸಾಮಾಜಿಕ ಅಂತರ ಸಂಚರಣೆ. ಒಬ್ಬನ ಸಾಮಾಜಿಕ ಸ್ಥಾನಮಾನದ ಬದಲಾವಣೆಯಿಂದಾಗಿ ಆತನ ಹೆತ್ತವರ ಸ್ಥಾನಮಾನದಲ್ಲಾಗುವ ಸಂಚರಣೆ.

social distance scale: ಸಾಮಾಜಿಕ ಅಂತರ ಪ್ರಣಾಲಿ. ನೋಡಿ: Bogardus social distance scale.

social distance scaling method: ಸಾಮಾಜಿಕ ಅಂತರ ಪ್ರಣಾಲೀಕರಣ ವಿಧಾನ.

social dividend: ಸಾಮಾಜಿಕ ಲಾಭಾಂಶ.

social drive: ಸಾಮಾಜಿಕ ಪ್ರೇರಣೆ.

social dynamics: ಸಾಮಾಜಿಕ ಚಲನಶಾಸ್ತ್ರ; ಸಾಮಾಜಿಕ ಗತಿಶೀಲ ಶಾಸ್ತ್ರ, ಸಾಮಾಜಿಕ ಪ್ರಕ್ರಿಯೆಗಳ ಅಧ್ಯಯನ.

social ecology: ಸಾಮಾಜಿಕ ಜೀವ ಪರಿಸರಶಾಸ್ತ್ರ.

social economics: ಸಾಮಾಜಿಕ ಅರ್ಥಶಾಸ್ತ್ರ.

social education: ಸಾಮಾಜಿಕ ಶಿಕ್ಷಣ.

social eidos: ಸಾಮಾಜಿಕ ಸಾಂಸ್ಕೃತಿಕ ವ್ಯಕ್ತಾಂಶಗಳು. ಸಾಮಾಜಿಕ ಸಂಸ್ಥೆಗಳಿಗೆ ಹಾಗೂ ಚಟುವಟಿಕೆಗಳಿಗೆ ಸಂಬಂಧಿಸಿದ ವ್ಯಕ್ತ ಆದರ್ಶಗಳ ಸಮುಚ್ಚಯ.

social element: ಸಾಮಾಜಿಕ ಮೂಲಾಂಶ.

social engineering: ಸಾಮಾಜಿಕ ಅಭಿ ಯಂತರತೆ; ಸಾಮಾಜಿಕ ಯೋಜಕತೆ. ನಿರ್ದಿಷ್ಟ ಸಮಸ್ಯೆಗಳ ಪರಿಹಾರಕ್ಕಾಗಿ ಸಾಮಾಜಿಕ ತತ್ವಗಳ ಅನ್ವಯ.

social environment: ಸಾಮಾಜಿಕ

ಪರಿಸರ. ಸಾಮಾಜಿಕ ಸಂಘಟನೆಯ ನಮೂನೆ ಹಾಗೂ ಸಮಾಜದ ಇತರ ಅಂಶಗಳನ್ನು ಒಳಗೊಂಡಿರುವ ವ್ಯಕ್ತಿಗಳು ಹಾಗೂ ಗುಂಪುಗಳ ಅಂತಃಕ್ರಿಯೆಯುಳ್ಳ ಪರಿಸರ.

social epidemic: ನೋಡಿ: social contagion.

social equality: ಸಾಮಾಜಿಕ ಸಮಾನತೆ. ಧರ್ಮ, ಜಾತಿ, ಪಂಗಡ, ಲಿಂಗ ಇತ್ಯಾದಿಗಳ ಆಧಾರದ ಮೇಲೆ ಪಕ್ಷಪಾತಕ್ಕೆ ಅವಕಾಶವಿಲ್ಲದೆ ಎಲ್ಲರೂ ಸಮಾನರು ಎಂಬ ತತ್ವ.

social equilibrium: ಸಾಮಾಜಿಕ ಸಮತೋಲನ. ಸಾಮಾಜಿಕ ವ್ಯವಸ್ಥೆಯ ಒಂದು ಭಾಗದಲ್ಲಿ ಉಂಟಾದ ಬದಲಾವಣೆಗೆ ಹೊಂದಿಕೆಯಾಗುವಂತೆ ಇನ್ನುಳಿದ ಭಾಗಗಳಲ್ಲೂ ಬದಲಾವಣೆಯಾಗಿ ಸಾಮಾಜಿಕ ಸಮತೋಲನವನ್ನು ಉಳಿಸಿಕೊಳ್ಳುವ ಪರಿಕಲ್ಪನೆ.

social esteem: ಸಾಮಾಜಿಕ ಗೌರವ; ಸಾಮಾಜಿಕ ಪ್ರತಿಷ್ಠೆ.

social evil customs: ಸಾಮಾಜಿಕ ಅನಿಷ್ಟ ಪದ್ಧತಿಗಳು (ಸಂಪ್ರದಾಯಗಳು). ಉದಾ: ಸತಿಪದ್ಧತಿ, ವಿಧವೆಯರ ಕೇಶ ಮುಂಡನ, ಹೆಣ್ಣು ಶಿಶುವಿನ ಹತ್ಯೆ ಇತ್ಯಾದಿ.

social evolution: ಸಾಮಾಜಿಕ ವಿಕಾಸ.

social exclusiveness: ಸಾಮಾಜಿಕ ಪ್ರತ್ಯೇಕತೆ. ಸಮಾಜದ ವಿಶಿಷ್ಟ ಲಕ್ಷಣದಿಂದಾಗಿ ಗುರುತಿಸಲ್ಪಡುವ ಸಾಮಾಜಿಕ ಪ್ರತ್ಯೇಕತೆ.

social expectation: ಸಾಮಾಜಿಕ ನಿರೀಕ್ಷೆ.

social experience: ಸಾಮಾಜಿಕ ಅನುಭವ.

social facilitation: ಸಾಮಾಜಿಕ ಸೌಲಭ್ಯ. ಒಬ್ಬ ವ್ಯಕ್ತಿಯ ಅಂತಃಪ್ರೇರಣೆ ಅಥವಾ ನಡತೆಯ ಮೇಲೆ ಇನ್ನೊಬ್ಬ ವ್ಯಕ್ತಿ ಅಥವಾ ಸಮಾಜವು ಬೀರುವ ಉತ್ತೇಜಕ ಪರಿಣಾಮ.

social fact: ಸಾಮಾಜಿಕ ಸಂಗತಿ; ಸಾಮಾಜಿಕ ಸತ್ಯ. ಉದಾ: ಮೌಲ್ಯಗಳು, ಪದ್ಧತಿಗಳು, ನಂಬಿಕೆಗಳು, ಆಚರಣೆಗಳು, ಕಾನೂನು ಇತ್ಯಾದಿ.

social fatherhood: ಸಾಮಾಜಿಕ ಪಿತೃತ್ವ. ಜೈವಿಕ ಸಂಬಂಧವಿಲ್ಲದೆಯೂ ಒಂದು ಮಗುವಿನ ತಂದೆಯೆಂದು ಸಾಮಾಜಿಕ ಮನ್ನಣೆಗಳಿಸಿ ತಂದೆಯ ಕರ್ತವ್ಯ ನಿರ್ವಹಿಸುವುದು. ಕೆಲವು ಗುಡ್ಡಗಾಡು ಜನಾಂಗಗಳಲ್ಲಿ ಅವಿವಾಹಿತ ಗರ್ಭಿಣಿ ಸ್ತ್ರೀಗೆ ಸಂಬಂಧಿಸಿ ಯಾರಾದರೂ ಆಸಕ್ತ ಗಂಡಸರು ಬಿಲ್ಲುಬಾಣ ಸಮಾರಂಭವೇರ್ಪಡಿಸಿ ಈ ಬಗೆಯ ಸಾಮಾಜಿಕ ಸ್ಥಾನ ಪಡೆಯುವ ಕ್ರಮವಿತ್ತು.

social feed back: ಸಾಮಾಜಿಕ ಪ್ರತಿಪುಷ್ಟಿ; ಸಾಮಾಜಿಕ ಪ್ರತಿಫಲ.

social feminist: ಸಾಮಾಜಿಕ ಸ್ತ್ರೀ ಸ್ವಾತಂತ್ರ್ಯವಾದಿ; ಸಾಮಾಜಿಕ ಸ್ತ್ರೀವಾದಿ.

social field: ಸಾಮಾಜಿಕ ಕ್ಷೇತ್ರ.

social force: ಸಾಮಾಜಿಕ ಶಕ್ತಿ; ಸಾಮಾಜಿಕ ಬಲ. ಸಾಮಾಜಿಕ ವರ್ತನೆಯನ್ನು ಪ್ರಭಾವಿಸುವ ಅಥವಾ ಸಾಮಾಜಿಕ ಅಂತರಕ್ರಿಯೆಯನ್ನು ಉಂಟುಮಾಡುವ ಯಾವುದೇ ಸಂಗತಿ.

social formation: ಸಾಮಾಜಿಕ ರೂಪೀಕರಣ.

social freedom: ಸಾಮಾಜಿಕ ಸ್ವಾತಂತ್ರ್ಯ.

social frustration: ಸಾಮಾಜಿಕ ಭ್ರಮನಿರಸನ.

social function: ಸಾಮಾಜಿಕ ಕಾರ್ಯಗಳು.

social geography: ಸಾಮಾಜಿಕ ಭೂಗೋಳ ಶಾಸ್ತ್ರ. ಮಾನವ ಹಾಗೂ ಪ್ರಾಕೃತಿಕ ಘಟಕಗಳ ಪರಸ್ಪರ ಸಂಬಂಧ ದಿಂದ ಉಂಟಾಗುವ ಸಾಮಾಜಿಕ ಪರಿಸ್ಥಿತಿ ಗಳ ಅಧ್ಯಯನ.

social good: ಸಾಮಾಜಿಕ ಹಿತ.

social group: ಸಾಮಾಜಿಕ ಸಮೂಹ (ಗುಂಪು).

social group work: ವೃಂದಗತ ಸಮಾಜಕಾರ್ಯ; ಸಾಮಾಜಿಕ ಸಮೂಹ ಕಾರ್ಯ.

social handicap: ಸಾಮಾಜಿಕ ಅನನು ಕೂಲತೆ.

social heredity: ಸಾಮಾಜಿಕ ಅನು ವಂಶೀಯತೆ. ಸಾಂಸ್ಕೃತಿಕ ಸಂಪ್ರದಾಯಗಳು ಹಾಗೂ ವ್ಯಕ್ತಿತ್ವದ ಮಾದರಿಗಳನ್ನು ಸಮಾ ಜೀಕರಣದ ಮೂಲಕ ಒಂದು ಪೀಳಿಗೆ ಯಿಂದ ಇನ್ನೊಂದು ಪೀಳಿಗೆಯು ಪಡೆಯು ವುದು.

social heritage: ಸಾಮಾಜಿಕ ಬಳುವಳಿ; ಸಾಮಾಜಿಕ ಪರಂಪರೆ.

social heterogeneity: ಸಾಮಾಜಿಕ ಭಿನ್ನರೂಪತೆ; ಸಾಮಾಜಿಕ ಭಿನ್ನ ಭಿನ್ನ ಸ್ವರೂಪ.

social hierarchy: ಸಾಮಾಜಿಕ ಏಣಿಶ್ರೇಣಿ.

social history: ಸಾಮಾಜಿಕ ಇತಿಹಾಸ. ಸಾಮಾಜಿಕ ಸಮೂಹದಲ್ಲಿ ಮಾನವನ ಸಾಮಾಜಿಕ ಸಂಬಂಧಗಳ ಬಗೆಗಿನ ಚರಿತ್ರೆ.

social homogeneity: ಸಾಮಾಜಿಕ ಸಮೈಕ್ಯತೆ.

social idealism: ಸಾಮಾಜಿಕ ಆದರ್ಶ ವಾದ.

social identity : ಸಾಮಾಜಿಕ ಅನನ್ಯತೆ.

social imperative: ಸಾಮಾಜಿಕ ಬದ್ಧತೆ; ಸಾಮಾಜಿಕ ಅಗತ್ಯತೆ. ಅಂತರ್ ವ್ಯಕ್ತಿ ಸಂಬಂಧಗಳ ಸಮಸ್ಯೆಗೆ ಪರಿಹಾರ ತೋರಿಸುವ ಸಾಮಾಜಿಕ ಸಂಘಟನೆಯು ಹಲವು ಮೂಲಭೂತ ಅವಶ್ಯಕತೆಗಳು.

social inadequacy: ಸಾಮಾಜಿಕ ನ್ಯೂನತೆ.

social indoctrination: ಸಾಮಾಜಿಕ ಸೈದ್ಧಾಂತಿಕ ಬೋಧನೆ.

social inequality: ಸಾಮಾಜಿಕ ಅಸಮಾನತೆ.

social insecurity: ಸಾಮಾಜಿಕ ಅರಕ್ಷಿ ತತೆ.

social instinct: ಸಾಮಾಜಿಕ ಮೂಲ ಪ್ರವೃತ್ತಿ.

social institution: ಸಾಮಾಜಿಕ ಸಂಸ್ಥೆ.

social insurance: ಸಾಮಾಜಿಕ ವಿಮೆ.

social integration: ಸಾಮಾಜಿಕ ಐಕ್ಯತೆ. ಸಾಮಾಜಿಕ ಹಾಗೂ ಸಾಂಸ್ಕೃತಿಕ ವಿಭಿನ್ನತೆ ಗಳುಳ್ಳ ಎರಡು ಗುಂಪುಗಳ ನಡುವಿನ ಭಿನ್ನತೆಗಳನ್ನು ಅಳಿಸಿ ಹಾಕಿ, ಅವನ್ನು ಒಂದು

ಸಮೂಹವಾಗಿ ಒಗ್ಗೂಡಿಸುವುದು. ಸಮೂಹದ ಸದಸ್ಯರು ಹೊಸ ವ್ಯಕ್ತಿಯೊಬ್ಬನನ್ನು ಸದಸ್ಯನಾಗಿ ಸ್ವೀಕರಿಸುವುದು.

social intelligence: ಸಾಮಾಜಿಕ ಚಾತುರ್ಯ; ಸಾಮಾಜಿಕ ಬುದ್ಧಿಶಕ್ತಿ; ವ್ಯವಹಾರ ಕುಶಲತೆ.

social intelligence test: ಸಾಮಾಜಿಕ ಬುದ್ಧಿ ಪರೀಕ್ಷೆ. ಸಾರ್ವಜನಿಕ ಆಡಳಿತ ವ್ಯವಸ್ಥೆಗೆ ಸಿಬ್ಬಂದಿಗಳನ್ನು ಆಯ್ಕೆ ಮಾಡಲು ನಡೆಸುವ ಪರೀಕ್ಷೆಗಳಲ್ಲೊಂದು. ಜನ ಸಂಪರ್ಕವನ್ನು ಬೆಳೆಸುವ, ಹೊಸ ಸನ್ನಿವೇಶಗಳಿಗೆ ಹೊಂದಿಕೊಳ್ಳುವ ಸಾಮರ್ಥ್ಯವನ್ನು ಈ ಪರೀಕ್ಷೆಯ ಮೂಲಕ ನಿರ್ಧರಿಸಲಾಗುತ್ತದೆ.

social interaction: ಸಾಮಾಜಿಕ ಅಂತರ್‌ಕ್ರಿಯೆ.

social intercourse: ಸಾಮಾಜಿಕ ಸಂಸರ್ಗ; ಸಾಮಾಜಿಕ ಸಂಬಂಧ.

social interest: ಸಾಮಾಜಿಕಾಭಿರುಚಿ.

social interrelations: ಸಾಮಾಜಿಕ ಅಂತರ್‌ಸಂಬಂಧಗಳು. ವ್ಯಕ್ತಿ ವ್ಯಕ್ತಿಗಳ ನಡುವೆ ಹಾಗೂ ಸಮೂಹಗಳೊಳಗಿನ ಪರಸ್ಪರ ಸಂಬಂಧ.

social judgement: ಸಾಮಾಜಿಕ ನ್ಯಾಯ ತೀರ್ಮಾನ.

social justice: ಸಾಮಾಜಿಕ ನ್ಯಾಯ.

social laws: ಸಾಮಾಜಿಕ ನಿಯಮಗಳು.

social legislations: ಸಾಮಾಜಿಕ ಶಾಸನಗಳು.

social maladjustment: ಸಾಮಾಜಿಕ ಅಪಹೊಂದಾಣಿಕೆ (ಅಸಮಾಯೋಜನೆ). ಉದಾ: ಹಿಪ್ಪಿಗಳ ಸಂಸ್ಕೃತಿ.

social markets: ಸಾಮಾಜಿಕ ಮಾರುಕಟ್ಟೆಗಳು.

social marriage: ಸಾಮಾಜಿಕ ವಿವಾಹ.

social matrix: ಸಾಮಾಜಿಕ ಅಳತೆಗೋಲು.

social maturity: ಸಾಮಾಜಿಕ ಪರಿಪಕ್ವತೆ.

social mechanism: ಸಾಮಾಜಿಕ ಯಂತ್ರಕೌಶಲ.

social metabolism: ಸಾಮಾಜಿಕ ಜೀವದ್ರವ್ಯ. ನೋಡಿ: social anabolism.

social microscope: ಸಾಮಾಜಿಕ ಸೂಕ್ಷ್ಮದರ್ಶಕ.

social milieu: ಸಾಮಾಜಿಕ ಪರಿಸರ; ಸಾಮಾಜಿಕ ಸಂದಣಿ (ಸನ್ನಿವೇಶ).

social mobility: ಸಾಮಾಜಿಕ ಸಂಚರಣೆ; ಸಾಮಾಜಿಕ ಗತಿಶೀಲತೆ. ಒಂದು ಸಮೂಹದ ಅಥವಾ ಒಬ್ಬ ವ್ಯಕ್ತಿಯ ಸಾಮಾಜಿಕ ವರ್ಗ ಅಥವಾ ಸಾಮಾಜಿಕ ಸ್ತರದಲ್ಲಿನ ಸಂಚರಣೆ. ಇದು ಲಂಬಾಂತರ ಅಥವಾ ಸಮಾಂತರ ಸಾಮಾಜಿಕ ಸಂಚರಣೆಯಾಗಿರಬಹುದಾಗಿದೆ.

social monopoly: ಸಾಮಾಜಿಕ ಏಕಸ್ವಾಮ್ಯ.

social morality: ಸಾಮಾಜಿಕ ನೀತಿ.

social morphology: ಸಾಮಾಜಿಕ ರೂಪರಚನಾಶಾಸ್ತ್ರ; ಸಾಮಾಜಿಕ ಆಕೃತಿಶಾಸ್ತ್ರ.

social movement: ಸಾಮಾಜಿಕ ಚಲನೆ; ಸಾಮಾಜಿಕ ಚಳವಳಿ. ಸಾಮಾಜಿಕ ಬದ

ಲಾವಣೆಯನ್ನು ತರುವಲ್ಲಿ ಅಥವಾ ತಡೆಯುವಲ್ಲಿ ಬೃಹತ್ ಸಂಖ್ಯೆಯ ಜನರು ಒಟ್ಟಾಗಿ ಸಂಘಟಿತರಾಗಿ ಕೆಲಸಮಾಡುವ ಸಮಷ್ಟಿ ವರ್ತನೆಯ ಒಂದು ಮುಖ್ಯ ವಿಧಾನ. ಕ್ರಾಂತಿ, ಸುಧಾರಣೆ ಮುಂತಾದವು ಸಾಮಾಜಿಕ ಚಳುವಳಿಯ ಪ್ರಾಮುಖ್ಯ ಉದಾಹರಣೆಗಳು.

social necessity: ನೋಡಿ: functional imperative; functional pre-requisite.

social need: ಸಾಮಾಜಿಕ ಅವಶ್ಯಕತೆ. ಸಾಮಾಜಿಕ ಅಂತರ್‌ಕ್ರಿಯೆಯಿಂದ ವ್ಯಕ್ತಿಯು ಕಲಿತ ಅವಶ್ಯಕತೆ. ಉದಾ: ಸ್ಥಾನಮಾನ, ಮೌಲ್ಯಗಳು, ಪ್ರತಿಷ್ಠೆ ಇತ್ಯಾದಿ.

social net product: ಸಾಮಾಜಿಕ ನಿವ್ವಳ ಉತ್ಪನ್ನ. ಕೆಲವು ಉತ್ಪಾದನಾಂಗಗಳ ಬಳಕೆಯಿಂದ ಅಥವಾ ಕೆಲವು ರೀತಿಯ ಆರ್ಥಿಕ ಚಟುವಟಿಕೆಗಳಿಂದ ಉಂಟಾಗುವ ಸಾಮಾಜಿಕ ವೆಚ್ಚ ಮತ್ತು ಸಾಮಾಜಿಕ ಲಾಭಗಳ ನಡುವಿನ ವ್ಯತ್ಯಾಸ.

social nexus: ಸಾಮಾಜಿಕ ಅಂತರ್ ಬಂಧನ.

social norm: ಸಾಮಾಜಿಕ ನಿಯಮ.

social object: ಸಾಮಾಜಿಕ ವಸ್ತು. ನಿರ್ದಿಷ್ಟ ಸಂದರ್ಭದಲ್ಲಿ ಸಾಮಾಜಿಕ ವರ್ತನೆಯ ಕೇಂದ್ರವಾಗಿರುವ ವ್ಯಕ್ತಿ ಅಥವಾ ವಿಷಯ. ಒಬ್ಬ ವ್ಯಕ್ತಿ, ಒಂದು ಸಮೂಹ, ಒಂದು ಮನೋಭಾವ, ಒಂದು ಉದ್ದೇಶ ಇತ್ಯಾದಿ. ನೋಡಿ: social fact.

social obligation: ಸಾಮಾಜಿಕ ಋಣ; ಸಾಮಾಜಿಕ ಬದ್ಧತೆ.

social opprobrium: ಸಾಮಾಜಿಕ ಕಳಂಕ; ಸಾಮಾಜಿಕ ನಿಂದೆ.

social order: ಸಾಮಾಜಿಕ ಕ್ರಮ; ಸಾಮಾಜಿಕ ವ್ಯವಸ್ಥೆ. ಸಮಾಜದ ಸಾಮಾಜಿಕ ಸಂಸ್ಥೆಗಳ ಒಟ್ಟು ಸಂಕೀರ್ಣ ಹಾಗೂ ಅವುಗಳ ಅಂತರ್ ಸಂಬಂಧ.

social organization: ಸಾಮಾಜಿಕ ಸಂಘಟನೆ. ಸಾಮಾಜಿಕ ಅಂತರ್‌ಕ್ರಿಯೆಗೆ ನಿರಂತರತೆ ಹಾಗೂ ಭವಿಷ್ಯವನ್ನು ಕೊಡುವ ಸಂಘಟನೆಗಳು. ಇವು ಸಾಮಾಜಿಕ ಪಾತ್ರಗಳು ಹಾಗೂ ನಿಯಮಗಳ ಮೇಲೆ ಆಧಾರಿತವಾಗಿದ್ದು, ವ್ಯಕ್ತಿಗಳ ಹಾಗೂ ಉಪಸಮೂಹಗಳ ನಡುವಿನ ಸ್ಥಿರ ಸಾಮಾಜಿಕ ಸಂಬಂಧಗಳನ್ನು ಅವಲಂಬಿಸಿವೆ.

social ostracism: ಸಾಮಾಜಿಕ ಬಹಿಷ್ಕಾರ.

social overhead capital: ಸಾಮಾಜಿಕ ಮೌಲ್ಯೋತ್ಪಾದಕ ಬಂಡವಾಳ. ಉದಾ: ರಸ್ತೆ, ರೈಲ್ವೆ, ನೀರಾವರಿ ಸೌಲಭ್ಯ ಮುಂತಾದ ಸಾರ್ವಜನಿಕ ಸೌಲಭ್ಯಗಳು.

social participation: ಸಾಮಾಜಿಕ ಪಾಲ್ಗೊಳ್ಳುವಿಕೆ; ಸಾಮಾಜಿಕ ಒಡನಾಟ. ವ್ಯಕ್ತಿಯ ಉದ್ಯೋಗದ ಸನ್ನಿವೇಶಕ್ಕಿಂತ ಭಿನ್ನವಾಗಿರುವ, ಸಮುದಾಯ ಚಟುವಟಿಕೆಗಳಲ್ಲಿ ತೊಡಗಿರುವ ಸ್ವಯಂ ಸೇವಾ ಸಂಸ್ಥೆಗಳಲ್ಲಿ ಪಾಲ್ಗೊಳ್ಳುವಿಕೆ.

social paternity: ನೋಡಿ: social fatherhood.

social pathology: ಸಾಮಾಜಿಕ ರೋಗ ನಿದಾನಶಾಸ್ತ್ರ. ಸಮಾಜದ ರೋಗಗಳಾದ ಅಪರಾಧ, ದುರಾಚಾರ, ಕುಡುಕುತನ

ಮುಂತಾದುವುಗಳ ಕುರಿತು ಅಭ್ಯಸಿಸುವ ಶಾಸ್ತ್ರ.

social perpetuation: ಸಾಮಾಜಿಕ ನಿರಂತರತೆ.

social phenomena: ಸಾಮಾಜಿಕ ವಸ್ತುಗಳು; ಸಾಮಾಜಿಕ ನೋಟಗಳು; ಸಾಮಾಜಿಕ ಸಂಗತಿಗಳು (ಘಟನೆಗಳು). ಒಬ್ಬ ಅಥವಾ ಅದಕ್ಕಿಂತ ಹೆಚ್ಚಿನ ವ್ಯಕ್ತಿಗಳ ಪರಸ್ಪರ ಪ್ರಭಾವದಿಂದ ಉಂಟಾಗುವ ಯಾವುದೇ ಸಂಗತಿ. ಮಾನವನ ಸಾಮಾಜಿಕ ಜೀವನದಲ್ಲಿ ಅವಲೋಕಿಸಬಹುದಾದ ವರ್ತನೆ, ವಿಚಾರ, ಘಟನೆಗಳ ಮಾದರಿ ಇತ್ಯಾದಿಗಳು ಸಾಮಾಜಿಕ ಸಂಗತಿಗಳಾಗಿವೆ.

social philosophy: ಸಾಮಾಜಿಕ ತತ್ವಶಾಸ್ತ್ರ. ಸಮಾಜ ಹಾಗೂ ಸಾಮಾಜಿಕ ಜೀವನದ ಬಗೆಗೆ ತತ್ವಶಾಸ್ತ್ರೀಯ ದೃಷ್ಟಿ ಹಾಗೂ ಪರಿಕಲ್ಪನೆಗಳನ್ನು ಬಳಸಿ ವಿಶ್ಲೇಷಿಸುವುದು.

social physics: ಸಾಮಾಜಿಕ ಭೌತಶಾಸ್ತ್ರ. ಸಮಾಜಶಾಸ್ತ್ರದ ಪಿತನೆಂದು ಕರೆಯಲ್ಪಡುವ ಆಗಸ್ಟ್ ಕಾಮ್ಟ್‌ನು ಸಮಾಜ ಶಾಸ್ತ್ರಕ್ಕೆ ಪ್ರಥಮವಾಗಿ ಹೆಸರಿಸಿದ ಪದ.

social physiology: ಸಾಮಾಜಿಕ ಶರೀರಶಾಸ್ತ್ರ.

social planning: ಸಾಮಾಜಿಕ ಯೋಜನೆ. ಸಮಾಜ, ಸಮುದಾಯ ಅಥವಾ ಸಂಘಟನೆಯ ಒಳಿತಿಗಾಗಿ ಹಳೆಯ ಸಮಸ್ಯೆಗಳ ನಿವಾರಣೆಗಾಗಿ ಅಥವಾ ಹೊಸ ಸಮಸ್ಯೆಗಳು ಉದಿಸಿದರೆ ಅದಕ್ಕೆ ಪರಿಹಾರಗಳನ್ನು ಹಾಗೂ ಕಾರ್ಯಕ್ರಮಗಳನ್ನು ದೊಡ್ಡ ಪ್ರಮಾಣದಲ್ಲಿ ಸಂಯೋಜಿತ ರೀತಿಯಲ್ಲಿ ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸುವಿಕೆ.

social policy: ಸಾಮಾಜಿಕ ನೀತಿ. ಹಿಂದುಳಿದವರಿಗಾಗಿ ಕೈಗೊಳ್ಳುವ ಸುಧಾರಣಾ ನೀತಿ. ಉದಾ: ಉದ್ಯೋಗ ಮೀಸಲಾತಿ.

social position: ಸಾಮಾಜಿಕ ಸ್ಥಾನಮಾನ; ಸಾಮಾಜಿಕ ಅಂತಸ್ತು.

social power: ಸಾಮಾಜಿಕ ಅಧಿಕಾರ; ಸಾಮಾಜಿಕ ಸಾಮರ್ಥ್ಯ.

social prejudice: ಸಾಮಾಜಿಕ ಪೂರ್ವಾಗ್ರಹ.

social pressure: ಸಾಮಾಜಿಕ ಒತ್ತಡ.

social problem: ಸಾಮಾಜಿಕ ಸಮಸ್ಯೆ. ಸಾಮಾಜಿಕ ಸಂಬಂಧಗಳಿಗೆ ಹಾಗೂ ಸೌಹಾರ್ದತೆಗೆ ಭಂಗತರುವ ಪ್ರಕ್ರಿಯೆಗಳು. ಉದಾ: ಬಾಲಾಪರಾಧ, ಜನರಲ್ಲಿ ಮದ್ಯಪಾನ ವ್ಯಸನ, ಅಪರಾಧ, ವ್ಯಭಿಚಾರ, ಬಡತನ, ಭಿಕ್ಷಾಟನೆ, ಕೊಳೆಗೇರಿ ಇತ್ಯಾದಿ.

social process: ಸಾಮಾಜಿಕ ಪ್ರಕ್ರಿಯೆ.

social progress: ಸಾಮಾಜಿಕ ಪ್ರಗತಿ.

social psychology: ಸಾಮಾಜಿಕ ಮನಶ್ಶಾಸ್ತ್ರ.

social pyramid: ಸಾಮಾಜಿಕ ಗೋಪುರ; ಗೋಪುರಾಕೃತಿಯಲ್ಲಿ ಜನಸಂಖ್ಯೆಯ ರಚನೆ. ಗೋಪುರದ ತಳಭಾಗದಲ್ಲಿ ಕೆಳವರ್ಗದ ಜನರು ಹೆಚ್ಚು ಸಂಖ್ಯೆಯಲ್ಲಿದ್ದು ಮೇಲೇರುತ್ತಾ ಬಂದ ಹಾಗೆ ಮೇಲ್ವರ್ಗದ ಜನರ ಸಂಖ್ಯೆ ಕಡಿಮೆಯಾಗುವುದು.

social quotient (SQ): ಸಾಮಾಜಿಕ ಸೂಚಿ. ಸಾಮಾಜಿಕ ವಯಸ್ಸನ್ನು ವ್ಯಕ್ತಿಯ ವಾಸ್ತವ ವಯಸ್ಸಿನಿಂದ ಭಾಗಿಸುವುದರಿಂದ

ಸಾಮಾಜಿಕ ಸಾಮರ್ಥ್ಯ ಸೂಚಿಯನ್ನು ಪಡೆಯಬಹುದು. ಇದನ್ನು ಐ.ಕ್ಯೂ.ಗೆ ಪೂರಕವಾಗಿ ಬುದ್ಧಿಮಾಂದ್ಯತೆಯ ಮಟ್ಟವನ್ನು ನಿದಾನಿಸಲು ಉಪಯೋಗಿಸಬಹುದು.

social reality: ಸಾಮಾಜಿಕ ಸತ್ಯ; ಸಾಮಾಜಿಕ ವಾಸ್ತವಿಕತೆ; ಸಾಮಾಜಿಕ ನೈಜತೆ.

social recognition: ಸಾಮಾಜಿಕ ಸಮ್ಮತಿ (ಅಂಗೀಕಾರ); ಸಾಮಾಜಿಕ ಗುರುತಿಸುವಿಕೆ.

social reconstruction: ಸಾಮಾಜಿಕ ಪುನರ್ರಚನೆ.

social relations: ಸಾಮಾಜಿಕ ಸಂಬಂಧಗಳು.

social reorganization: ಸಾಮಾಜಿಕ ಪುನರ್‌ಸಂಘಟನೆ. ಸಮಾಜದಲ್ಲಿ ಅನಿಚ್ಛೆಯ ಪರಿಸ್ಥಿತಿಯನ್ನು ಹೋಗಲಾಡಿಸುವ ಸಹಕಾರಾತ್ಮಕ ಕ್ರಿಯಾ ಪ್ರಕ್ರಿಯೆ. ಸಾಮಾಜಿಕ ವಿಘಟನೆಯ ಸಂದರ್ಭದಲ್ಲಿ ಅದಕ್ಕೆ ಪ್ರತಿಕ್ರಿಯೆಯಾಗಿ ಸಾಮಾಜಿಕ ಪುನರ್ ಸಂಘಟನಾ ಕೆಲಸವು ನಡೆಯುತ್ತದೆ.

social reproduction: ಸಾಮಾಜಿಕ ಪುನರುತ್ಪಾದನೆ. ಸಾಮಾಜಿಕ ರಚನೆಯನ್ನು ದೀರ್ಘಾವಧಿಯಲ್ಲಿ ಉಳಿಸಿ ಬೆಳೆಸಿಕೊಳ್ಳುವಂಥ ಪ್ರಕ್ರಿಯೆ.

social research: ಸಾಮಾಜಿಕ ಸಂಶೋಧನೆ. ಮಾನವ ಸಮೂಹಗಳು ಅಥವಾ ಸಾಮಾಜಿಕ ಅಂತರ್‌ಕ್ರಿಯೆಯ ಪ್ರಕ್ರಿಯೆಗಳ ಬಗೆಗೆ ನಡೆಸುವ ಸಂಶೋಧನೆ.

social response: ಸಾಮಾಜಿಕ ಪ್ರತಿಕ್ರಿಯೆ.

social responsibility: ಸಾಮಾಜಿಕ ಜವಾಬ್ದಾರಿ; ಸಾಮಾಜಿಕ ಹೊಣೆಗಾರಿಕೆ.

social restraint: ಸಾಮಾಜಿಕ ಸಂಯಮ; ಸಾಮಾಜಿಕ ನಿರ್ಬಂಧ.

social retardation: ಸಾಮಾಜಿಕ ವಿಲಂಬನ.

social returns: ಸಾಮಾಜಿಕ ಪ್ರತಿಫಲಗಳು; ಸಾಮಾಜಿಕ ಲಾಭ.

social sanction: ಸಾಮಾಜಿಕ ಅನುಮೋದನೆ; ಸಾಮಾಜಿಕ ನಿರ್ಬಂಧ ಸಂಹಿತೆ.

social satisfaction: ಸಾಮಾಜಿಕ ಸಂತೃಪ್ತಿ.

social science: ಸಮಾಜ ವಿಜ್ಞಾನ.

social security: ಸಾಮಾಜಿಕ ಭದ್ರತೆ.

social security legislation: ಸಾಮಾಜಿಕ ಭದ್ರತಾ ಶಾಸನ.

social segmentation: ಸಾಮಾಜಿಕ ವಿಭಜನೆ; ಸಾಮಾಜಿಕ ಹೋಳುಗಳು. ಸಮೂಹದೊಳಗಿನ ಉಪಸಮೂಹಗಳು ಸಾಪೇಕ್ಷವಾಗಿ ಪ್ರತ್ಯೇಕವಾಗಿದ್ದು, ನೇರ ಸಂಪರ್ಕ ಇಲ್ಲದಿರುವುದು ಹಾಗೂ ಕೆಲವೊಮ್ಮೆ ಪರಸ್ಪರ ವೈರತ್ವವೂ ಇರುವ ಸಾಧ್ಯತೆಗಳುಳ್ಳದ್ದು.

social selection: ಸಾಮಾಜಿಕ ಆಯ್ಕೆ. ಕೃತಕ ಸಾಮಾಜಿಕ ತಡೆಗಳ ಮೂಲಕ ವಿವಾಹ ಹಾಗೂ ಸಂತನಾಭಿವೃದ್ಧಿಯನ್ನು ತಡೆಹಿಡಿಯುವುದು.

social self: ಸಾಮಾಜಿಕ ಆತ್ಮ; ಸಾಮಾಜಿಕ ಅಹಂ.

social sensitiveness: ಸಾಮಾಜಿಕ ಸೂಕ್ಷ್ಮವೇದಕತೆ (ಪ್ರಜ್ಞೆ).

social service: ಸಮಾಜಸೇವೆ.

social service state: ಸಾಮಾಜಿಕ ಸೇವಾ ರಾಜ್ಯ. ಮನುಷ್ಯನ ಎಲ್ಲಾ ಚಟುವಟಿಕೆಗಳನ್ನು ತಾನೇ ನಿರ್ಧರಿಸುವ ಮತ್ತು ಜನರ ಶ್ರೇಯಸ್ಸಿಗೆ ದುಡಿಯುವ ರಾಜ್ಯ (ರಾಷ್ಟ್ರ).

social situation: ಸಾಮಾಜಿಕ ಸಂದರ್ಭ (ಸನ್ನಿವೇಶ). ಒಂದು ನಿಶ್ಚಿತ ಸಮಯದ ಅಂತರ್ ಕ್ರಿಯೆಯಲ್ಲಿ ವ್ಯಕ್ತಿಯ ವರ್ತನೆ ಅಥವಾ ಅನುಭವಗಳ ಮೇಲೆ ಪ್ರಭಾವ ಬೀರುವ ಸಾಮಾಜಿಕ ಅಂಶಗಳು.

social solidarity: ಸಾಮಾಜಿಕ ಏಕತೆ; ಸಾಮಾಜಿಕ ಸ್ಥಿರತೆ. ಸಮೂಹದ ಗುರಿ ಸಾಧನೆಗಾಗಿ ಸಮಷ್ಟಿ ಕ್ರಿಯೆ ಇದ್ದು ಸಹಕಾರ, ಸಾಮಾಜಿಕ ಸುಸಂಬದ್ಧತೆ ಹಾಗೂ ಸಾಮಾಜಿಕ ಸ್ಥಿರತೆ ಇರುವ ಸಂದರ್ಭ.

social space: ಸಾಮಾಜಿಕ ಪ್ರದೇಶ. ಒಬ್ಬ ವ್ಯಕ್ತಿಯ ಪ್ರಜ್ಞೆಯ ನಕಾಶೆಯಲ್ಲಿರುವ ಒಂದು ಸಮೂಹ ಹಾಗೂ ಅಲ್ಲಿನ ವ್ಯಕ್ತಿಗಳ ಬಗೆಗಿನ ಒಲವು.

social spirit: ಸಾಮಾಜಿಕ ಸ್ಫೂರ್ತಿ.

social stability: ಸಾಮಾಜಿಕ ಸ್ಥಿರತೆ. ಒಂದು ಸಮಾಜದಲ್ಲಿ ನಿಧಾನವಾಗಿ ಸಾಮಾಜಿಕ ರಚನೆ ಹಾಗೂ ಸಾಂಸ್ಕೃತಿಕ ರಚನೆಯಲ್ಲಿ ಬದಲಾವಣೆಗಳುಂಟಾಗಿ, ತನ್ಮೂಲಕ ಪುನರ್ ಹೊಂದಾಣಿಕೆಗೆ ಅವಕಾಶವಿರುವ, ವಿಘಟನೆಯ ಕ್ಷಣಗಳಿಲ್ಲದೆ, ಸಾಮಾಜಿಕ ಹಾಗೂ ಸಾಂಸ್ಕೃತಿಕ ರಚನೆಗಳ ನಿರಂತರತೆ.

social statics: ಸಾಮಾಜಿಕ ಸ್ಥಿತಿಶಾಸ್ತ್ರ; ಸಾಮಾಜಿಕ ಸಮಸ್ಥಿತಿಶಾಸ್ತ್ರ. ಸಾಮಾಜಿಕ ರಚನೆ ಹಾಗೂ ವಿವಿಧ ಭಾಗಗಳ ಅಂತರ ಸಂಬಂಧಗಳ ಅಧ್ಯಯನ.

social status: ಸಾಮಾಜಿಕ ಅಂತಸ್ತು.

social stimulus: ಸಾಮಾಜಿಕ ಉತ್ತೇಜಕ.

social satisfaction: ಸಾಮಾಜಿಕ ಸ್ತರ ವಿನ್ಯಾಸ. ಸಾಮಾಜಿಕ ವ್ಯವಸ್ಥೆಯಲ್ಲಿ ವಿಭಿನ್ನ ಸ್ಥಾನಮಾನ, ವಿಶೇಷಾಧಿಕಾರ, ಪ್ರಭಾವ ಮುಂತಾದವುಗಳ ಆಧಾರದ ಮೇಲೆ ವ್ಯಕ್ತಿಗಳ ಸ್ಥಾನಮಾನದಲ್ಲಿ ಸಾಪೇಕ್ಷ ಶ್ರೇಣೀಕರಣವಿದ್ದು ಅಸಮಾನತೆ ಮುಖ್ಯ ಲಕ್ಷಣವಾಗಿರುತ್ತದೆ.

social stratum: ಸಾಮಾಜಿಕ ಸ್ತರ. ಸಾಪೇಕ್ಷವಾಗಿ ಒಂದೇ ರೀತಿಯ ಸ್ಥಾನಮಾನ, ಶ್ರೇಣಿ ಹಾಗೂ ಗುಣಲಕ್ಷಣಗಳಿರುವ ವ್ಯಕ್ತಿಗಳ ಗುಂಪು.

social structure: ಸಾಮಾಜಿಕ ರಚನೆ. ಒಂದು ಸಮೂಹ ಅಥವಾ ಸಮಾಜದಲ್ಲಿ ಕಂಡುಬರುವ ಅಂತರ್ ಸಂಬಂಧಿತ ಸ್ಥಾನಮಾನ ಮತ್ತು ಪಾತ್ರಗಳ ರಚನೆ ಹಾಗೂ ಸಾಮಾಜಿಕ ಸಂಬಂಧಗಳ ಸಾಪೇಕ್ಷ ಸ್ಥಿರತೆ.

social suggestions: ಸಾಮಾಜಿಕ ಸಲಹೆಗಳು.

social survey: ಸಾಮಾಜಿಕ ಸಮೀಕ್ಷೆ.

social survey method: ಸಾಮಾಜಿಕ ಸಮೀಕ್ಷಾ ವಿಧಾನ.

social system: ಸಾಮಾಜಿಕ ವ್ಯವಸ್ಥೆ.

social technique: ಸಾಮಾಜಿಕ ತಂತ್ರ.

social technology : ಸಾಮಾಜಿಕ ತಂತ್ರಜ್ಞಾನ.

social telesis: ಸಾಮಾಜಿಕ ಯೋಜನೆ.

social tensions: ಸಾಮಾಜಿಕ ತುಮುಲಗಳು.

social theory: ಸಾಮಾಜಿಕ ಸಿದ್ಧಾಂತ.

social thinkers: ಸಾಮಾಜಿಕ ಚಿಂತಕರು (ಚಿಂತನಕಾರರು).

social thought: ಸಾಮಾಜಿಕ ಚಿಂತನೆ. ಸಾಮಾಜ ಹಾಗೂ ಸಾಮಾಜಿಕ ಜೀವನದ ಬಗೆಗೆ ಸಿದ್ಧಾಂತಗಳನ್ನು ಮಾಡುವರೇ ಕ್ರಮಬದ್ಧ ಪ್ರಯತ್ನ.

social time: ಸಾಮಾಜಿಕ ಸಮಯ. ಸಾಮಾಜಿಕ ಹಾಗೂ ಸಾಂಸ್ಕೃತಿಕ ಉಲ್ಲೇಖ ಬಿಂದುಗಳಲ್ಲಿ ಗ್ರಹಿಸಿದ ಸಮಯ.

social tolerance: ಸಾಮಾಜಿಕ ಸಹಿಷ್ಣುತೆ.

social treaty: ನೋಡಿ: social contract.

social trend: ಸಾಮಾಜಿಕ ಒಲವು (ಪ್ರವೃತ್ತಿ). ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಸಾಮಾಜಿಕ ವರ್ತನೆ ಹಾಗೂ ಸಾಮಾಜಿಕ ರಚನೆಯಲ್ಲಿ ಗಮನಿಸತಕ್ಕ, ನಿಧಾನವಾದ ಆದಾಗ್ಯೂ ದೀರ್ಘಕಾಲಿಕ ಬದಲಾವಣೆ.

social type: ಸಾಮಾಜಿಕ ವಿಧ (ಪ್ರಕಾರ).

social usage: ಸಾಮಾಜಿಕ ವಾಡಿಕೆ; ಸಾಮಾಜಿಕ ಬಳಕೆ.

social values: ಸಾಮಾಜಿಕ ಮೌಲ್ಯಗಳು. ಉದಾ: ಸಮಾನತೆ, ಸಹಕಾರ, ರಾಷ್ಟ್ರಪ್ರೇಮ, ವಿಶ್ವಮಾನವತೆ ಇತ್ಯಾದಿ.

social vigilance group: ಸಾಮಾಜಿಕ ವಿಚಕ್ಷಕ ಸಮೂಹ.

social virtues: ಸಾಮಾಜಿಕ ಸದ್ಗುಣಗಳು.

social wants: ಸಾಮಾಜಿಕ ಬಯಕೆಗಳು.

social wealth: ಸಾಮಾಜಿಕ ಸಂಪತ್ತು.

social welfare: ಸಮಾಜ ಕಲ್ಯಾಣ.

social welfare state: ಸಮಾಜಕಲ್ಯಾಣ ರಾಜ್ಯ.

social welfare theory of rights: ಹಕ್ಕುಗಳ ಸಮಾಜ ಕಲ್ಯಾಣ ಸಿದ್ಧಾಂತ.

social welfare programme: ಸಮಾಜ ಕಲ್ಯಾಣ ಕಾರ್ಯಕ್ರಮ.

social work curriculum: ಸಮಾಜ ಕಾರ್ಯದ ಪಠ್ಯಕ್ರಮ.

social work education: ಸಮಾಜ ಕಾರ್ಯ ಶಿಕ್ಷಣ.

social work forum: ಸಮಾಜ ಕಾರ್ಯ ರಂಗ.

social work research: ಸಮಾಜ ಕಾರ್ಯ ಸಂಶೋಧನೆ.

socialism: ಸಮಾಜವಾದ. ಬಂಡವಾಳಶಾಹಿ ವ್ಯವಸ್ಥೆಯನ್ನು ಪದಚ್ಯುತಿಗೊಳಿಸಿ ಅದರ ಸ್ಥಾನದಲ್ಲಿ ಬರುವ ಸರ್ವ ಸಮಾನತೆಯ ಸಾಮಾಜಿಕ ವ್ಯವಸ್ಥೆ.

socialist democracy: ಸಮಾಜವಾದಿ ಪ್ರಜಾಪ್ರಭುತ್ವ. ಪ್ರಜಾಪ್ರಭುತ್ವದ ಉದ್ದೇಶಗಳನ್ನು ಸಮಾಜವಾದಿ ಮಾರ್ಗಗಳ ಮೂಲಕ ಸಾಧಿಸುವುದು.

socialist orientation: ಸಮಾಜವಾದಿ ಒಲವು. ಸಮಾಜವಾದಕ್ಕೆ ಬುನಾದಿಯನ್ನು ನಿರ್ಮಿಸಲು ಅಗತ್ಯವಾದ ಸ್ಥಿತಿಗತಿಗಳನ್ನು ಉಂಟುಮಾಡುವ ದೃಷ್ಟಿಯಿಂದ ಕೆಲವು ವರ್ಧಿಷ್ಣು ದೇಶಗಳು ಅನುಸರಿಸುವ ನೀತಿ.

socialist state: ಸಮಾಜವಾದಿ ರಾಷ್ಟ್ರ.

ಉತ್ಪಾದನೆಯ ಸಾಧನಗಳು ರಾಷ್ಟ್ರದ ಒಡೆತನದಲ್ಲಿದ್ದು, ಜನತೆಯ ಪರವಾಗಿ ರಾಷ್ಟ್ರವೇ ಅವುಗಳ ಸಹಾಯದಿಂದ ಉತ್ಪಾದನೆ ಮತ್ತು ವಿತರಣೆಯ ಕಾರ್ಯದ ಹೊಣೆ ಹೊತ್ತಿರುವುದು.

socialistic economic system: ಸಮಾಜವಾದಿ ಆರ್ಥಿಕ ಪದ್ಧತಿ (ವ್ಯವಸ್ಥೆ).

socialistic economy: ಸಮಾಜವಾದಿ ಆರ್ಥಿಕತೆ; ಸಮಾಜವಾದಿ ಆರ್ಥಿಕ ವ್ಯವಸ್ಥೆ.

socialistic pattern of society: ಸಮಾಜವಾದಿ ಸಮಾಜ ವ್ಯವಸ್ಥೆ.

socialistic theory: ಸಮಾಜವಾದಿ ಸಿದ್ಧಾಂತ.

socialization: ಸಮಾಜೀಕರಣ. ಮಾನವ ಜೀವಿಯನ್ನು ಸಾಮಾಜಿಕ ಜೀವಿಯನ್ನಾಗಿ ಪರಿವರ್ತಿಸುವ ಪ್ರಕ್ರಿಯೆ. ಇದು ಜೀವನ ಪೂರ್ತಿ ಜರುಗುವ ಕ್ರಿಯೆ. ಮೂಲಭೂತ ಸಾಮಾಜಿಕ ಪ್ರಕ್ರಿಯೆಗಳ ಮೂಲಕ ವ್ಯಕ್ತಿಯು ಸಮೂಹದ ಸಂಸ್ಕೃತಿ ಹಾಗೂ ಸಮೂಹದಲ್ಲಿ ತನ್ನ ಪಾತ್ರದ ಬಗ್ಗೆ ಅರಿತುಕೊಂಡು ಸಾಮಾಜಿಕ ಸಮೂಹದಲ್ಲಿ ಒಂದಾಗಿ ಬೆರೆಯುವ ಪ್ರಕ್ರಿಯೆ.

socialization of means of production: ಉತ್ಪಾದನಾ ಸಾಧನಗಳ ಸಮಾಜೀಕರಣ. ಬಂಡವಾಳಶಾಹಿ ಖಾಸಗಿ ಒಡೆತನದಿಂದ ಸಮಾಜವಾದಿ ಸಾರ್ವಜನಿಕ ಒಡೆತನಕ್ಕೆ ಉತ್ಪಾದನಾ ಸಾಧನಗಳ ಕ್ರಾಂತಿಕಾರಿ ಪರಿವರ್ತನೆ.

socialized production: ಸಮಾಜೀಕೃತ ಉತ್ಪನ್ನ. ಸಮಾಜೀಕರಣ ಹೊಂದಿರುವ ಸಾಮೂಹಿಕ ಉತ್ಪಾದನಾ ವಿಧಾನ. ಕಾರ್ಮಿಕ ವರ್ಗ ಒಟ್ಟುಗೂಡಿ ನಡೆಸುವ ಉತ್ಪಾದನೆ.

socializing agent: ಸಮಾಜೀಕರಣದ ನಿಯೋಗಿ (ಕಾರ್ಯಭಾರಿ).

socializing process: ಸಮಾಜೀಕರಣದ ಪ್ರಕ್ರಿಯೆ.

socially defined criteria: ಸಾಮಾಜಿಕವಾಗಿ ವ್ಯಾಖ್ಯಾನಿಸಲ್ಪಟ್ಟ ಪ್ರಮಾಣಕಗಳು.

socially defined prescripts: ಸಾಮಾಜಿಕವಾಗಿ ವ್ಯಾಖ್ಯಾನಿಸಲ್ಪಟ್ಟ ವಿಧಿಗಳು.

socially handicapped: ಸಾಮಾಜಿಕವಾಗಿ ವಿಕಲಾಂಗ; ಸಾಮಾಜಿಕವಾಗಿ ಊನಶಕ್ತ. ಉದಾ: ದಲಿತರು, ಸ್ತ್ರೀಯರು.

socially necessary labour: ಸಾಮಾಜಿಕವಾಗಿ ಅಗತ್ಯವಾಗಿರುವ ಶ್ರಮ.

societal reaction: ಸಾಮಾಜಿಕ ಪ್ರತಿಕ್ರಿಯೆ.

society: ಸಮಾಜ.

sociobiology: ಸಾಮಾಜಿಕ ಜೀವಶಾಸ್ತ್ರ. ಸಾಮಾಜಿಕ ನಡವಳಿಕೆಗಳಿಗೆ ಕಾರಣವಾದ ಜೈವಿಕ ಅಂಶಗಳ ಅಧ್ಯಯನ.

socio-capitalism: ಸಾಮಾಜಿಕ ಬಂಡವಾಳಶಾಹಿತ್ವ.

socio-centrism: ನೋಡಿ: ethno centrism.

socio-cultural conditioning: ಸಾಮಾಜಿಕ ಸಾಂಸ್ಕೃತಿಕ ಅನುಬಂಧನ.

socio-cultural process: ಸಾಮಾಜಿಕ ಸಾಂಸ್ಕೃತಿಕ ಪ್ರಕ್ರಿಯೆ.

sociodrama: ಸಾಮಾಜಿಕ ನಾಟಕ.

ಪ್ರಾಮುಖ್ಯ ಸಾಮಾಜಿಕ ಪಾತ್ರಗಳನ್ನು (ಉದಾ: ಗಂಡ ಹೆಂಡತಿ) ನಾಟಕೀಯವಾಗಿ ನಿರ್ವಹಿಸುವ ಮೂಲಕ ಇನ್ನೊಂದು ಸಾಮಾಜಿಕ ಸಮೂಹ ಅಥವಾ ಬೇರೆ ಸಾಮಾಜಿಕ ಪಾತ್ರ ನಿರೀಕ್ಷೆಗಳನ್ನು ಅಥವಾ ಸಂಸ್ಕೃತಿಯ ಅಂಶಗಳನ್ನು ಅಧ್ಯಯನ ಮಾಡುವ ತಂತ್ರ.

socio-economic class: ಸಾಮಾಜಿಕ ಆರ್ಥಿಕ ವರ್ಗ.

socio-economic planning: ಸಾಮಾಜಿಕ ಆರ್ಥಿಕ ಯೋಜನೆ. ಸಮಾಜದ ಎಲ್ಲಾ ಸಂಪನ್ಮೂಲಗಳು, ಉದ್ದೇಶಗಳು ಮತ್ತು ಚಟುವಟಿಕೆಗಳಿಗೆ ಸಂಬಂಧಿಸಿದ ಯೋಜನೆ. ಇದನ್ನು ಸಮಗ್ರ ಯೋಜನೆಯೆಂದೂ ಕರೆಯಲಾಗುತ್ತದೆ.

socio-economic status: ನೋಡಿ: socio-economic class or social class.

socio-facts: ಸಾಮಾಜಿಕ ಸಂಗತಿಗಳು. ನೋಡಿ: social fact.

sociogenic: ಸಮಾಜ ಜನ್ಯ. ಮನೋವೃತ್ತಿಗಳು, ಮೌಲ್ಯಗಳು, ನಿಯಮಗಳು, ಸಾಮಾಜಿಕ ನಿರೀಕ್ಷೆಗಳು ಮುಂತಾದವುಗಳ ಮೂಲಕ ಉತ್ಪನ್ನಗೊಂಡ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಗತಿಗಳು.

socio-gram: ಸಾಮಾಜಿಕ ಸಂಖ್ಯಾಪಟ; ಸಮಾಜ ಲೇಖ.

socio-group: ಸಾಮಾಜಿಕ ಸಮೂಹ. ಒಬ್ಬ ವ್ಯಕ್ತಿಯು ತನ್ನ ವೈಯಕ್ತಿಕ ತೃಪ್ತಿಗೆ ಬದಲಾಗಿ ಸಮೂಹದ ಸಾಮಾಜಿಕ ಪ್ರಾಮುಖ್ಯತೆಗಾಗಿ ಸಮೂಹವನ್ನು ಸೇರುವುದು.

socio-linguistics: ಸಾಮಾಜಿಕ ಭಾಷಾಶಾಸ್ತ್ರ. ಭಾಷೆ ಹಾಗೂ ಸಾಮಾಜಿಕ ಸಂಬಂಧಗಳ ಬಗ್ಗೆ ಅಭ್ಯಸಿಸುವ ಶಾಸ್ತ್ರ.

sociological conceptualist approach: ಸಮಾಜಶಾಸ್ತ್ರೀಯ ಪರಿ ಕಲ್ಪನಾ ವಿಧಾನ. ಸಮಾಜಶಾಸ್ತ್ರದಲ್ಲಿ ಸೈದ್ಧಾಂತಿಕ ಕಲ್ಪನೆಗಳ ಅಗತ್ಯವನ್ನು ಒತ್ತಿ ಹೇಳುವ ವಿಧಾನ.

sociological determinism: ಸಮಾಜಶಾಸ್ತ್ರೀಯ ನಿಯತಿವಾದ. ಸಾಂಸ್ಕೃತಿಕ ಹಾಗೂ ಸಮೂಹ ಪ್ರಭಾವಗಳು ವ್ಯಕ್ತಿಯ ವರ್ತನೆಯನ್ನು ನಿಯಂತ್ರಿಸುತ್ತವೆ ಎಂಬ ವಾದ.

sociological dualism: ಸಾಮಾಜಿಕ ದ್ವಂದ್ವವಾದ; ಸಮಾಜ ಶಾಸ್ತ್ರೀಯ ದ್ವಂದ್ವವಾದ.

sociological imagination: ಸಮಾಜಶಾಸ್ತ್ರೀಯ ಕಲ್ಪನೆ. ಸಮಾಜಶಾಸ್ತ್ರೀಯ ಪ್ರಶ್ನೆಗಳನ್ನು ಕೇಳಲು ಹಾಗೂ ಪ್ರಶ್ನೆಗಳಿಗೆ ಉತ್ತರಿಸಲು ಕಲ್ಪನಾಶಕ್ತಿಯನ್ನು ಅನ್ವಯಿಸುವುದು.

sociological jurisprudence: ಸಮಾಜಶಾಸ್ತ್ರೀಯ ನ್ಯಾಯಶಾಸ್ತ್ರ. ಸಾಮಾಜಿಕ ನಿಯಂತ್ರಣದಲ್ಲಿ ಕಾನೂನಿನ ಪಾತ್ರ ಹಾಗೂ ಕಾರ್ಯದ ಬಗೆಗೆ ಬೃಹತ್ ಸಾಮಾಜಿಕ ಸಮಷ್ಟಿಯಲ್ಲಿ ಹೆಚ್ಚಿನ ಒತ್ತುಕೊಡುವಂಥ ಅಧ್ಯಯನ.

sociological linguistics: ಸಮಾಜಶಾಸ್ತ್ರೀಯ ಭಾಷಾವಿಜ್ಞಾನ; ಭಾಷಾ ವಿಷಯಕ ಸಮಾಜಶಾಸ್ತ್ರ.

sociological mystic integralism:

ಸಮಾಜಶಾಸ್ತ್ರೀಯ ಆಧ್ಯಾತ್ಮಿಕ ಒಗ್ಗೂಡಿಕೆ.

sociological parenthood: ಸಮಾಜಶಾಸ್ತ್ರೀಯ ಪಿತೃತ್ವ. ಬಹುಪತಿತ್ವದ ಮದುವೆಯಿಂದ ಜನಿಸಿದ ಮಕ್ಕಳ ಪಿತೃತ್ವವನ್ನು ನಿರ್ಧರಿಸುವುದು ಕಷ್ಟವಾದಾಗ ಪ್ರಾಚೀನರು ತಮ್ಮದೇ ಆದ ವಿಶಿಷ್ಟ ರೀತಿಯಿಂದ ನಿರ್ಧರಿಸುತ್ತಿದ್ದ ಈ ಬಗೆಯ ಪಿತೃತ್ವಕ್ಕೆ "ಸಮಾಜಶಾಸ್ತ್ರೀಯ ಪಿತೃತ್ವ" ಎನ್ನಲಾಗುತ್ತದೆ.

sociological singularism: ಸಮಾಜಶಾಸ್ತ್ರೀಯ ಪ್ರತ್ಯೇಕತೆ. ಯಾವುದೇ ಒಂದು ಸಮಾಜಕ್ಕೆ ವೈಯಕ್ತಿಕ ಸದಸ್ಯರ ಹೊರತಾಗಿ ಬೇರೆ ಉದಾಹರಣೀಯ ಗುಂಪು ಇರುವುದಿಲ್ಲ ಎಂಬ ವಾದ.

sociological theory: ಸಮಾಜಶಾಸ್ತ್ರೀಯ ಸಿದ್ಧಾಂತ. ಮಾನವನ ಸಾಮಾಜಿಕ ಅಂತರಕ್ರಿಯೆಗಳ ಸ್ವಭಾವ, ವಿಧಗಳು, ಮಾದರಿಗಳು ಹಾಗೂ ಗತಿಶೀಲತೆಯನ್ನು ವಿವರಿಸುವ ಸಿದ್ಧಾಂತ.

sociological thought: ಸಮಾಜಶಾಸ್ತ್ರೀಯ ಚಿಂತನೆ.

sociological universalism: ಸಮಾಜಶಾಸ್ತ್ರೀಯ ಸಾರ್ವತ್ರಿಕತೆ. ವೈಯಕ್ತಿಕ ಸದಸ್ಯರ ಹೊರತಾಗಿಯೂ ಸಮೂಹ ಅಥವಾ ಸಮಾಜಕ್ಕೆ ತನ್ನದೇ ಆದ ಅಸ್ತಿತ್ವವಿದೆ ಎಂಬ ವಾದ.

sociologistic school of sociology: ಸಮಾಜಶಾಸ್ತ್ರದ ಸಮಾಜಶಾಸ್ತ್ರೀಯ ಪಂಥ.

sociology of agriculture: ವ್ಯವಸಾಯದ ಸಮಾಜಶಾಸ್ತ್ರ.

sociology of art: ಕಲಾವಿಷಯಕ ಸಮಾಜಶಾಸ್ತ್ರ. ಸಮಾಜವು ಕಲೆಯ ಮೇಲೆ ಬೀರುವ ಪ್ರಭಾವ ಹಾಗೂ ಸಮಾಜದಲ್ಲಿ ಕಲೆಯ ಪಾತ್ರ ಪ್ರಭಾವದ ಕುರಿತಾದ ಅಧ್ಯಯನ.

sociology of crime: ಅಪರಾಧದ ಸಮಾಜಶಾಸ್ತ್ರ; ಅಪರಾಧ ವಿಷಯಕ ಸಮಾಜಶಾಸ್ತ್ರ.

sociology of family: ಕುಟುಂಬದ ಸಮಾಜಶಾಸ್ತ್ರ; ಕುಟುಂಬ ವಿಷಯಕ ಸಮಾಜಶಾಸ್ತ್ರ.

sociology of knowledge: ಜ್ಞಾನ ವಿಷಯಕ ಸಮಾಜಶಾಸ್ತ್ರ.

sociology of language: ಭಾಷಾ ವಿಷಯಕ ಸಮಾಜಶಾಸ್ತ್ರ.

sociology of law: ಕಾನೂನು ವಿಷಯಕ ಸಮಾಜಶಾಸ್ತ್ರ.

sociology of literature: ಸಾಹಿತ್ಯದ ಸಮಾಜಶಾಸ್ತ್ರ.

sociology of mental illness: ಮಾನಸಿಕ ವ್ಯಾಧಿ ಕುರಿತ ಸಮಾಜಶಾಸ್ತ್ರ.

sociology of religion: ಮತಧರ್ಮದ ಸಮಾಜಶಾಸ್ತ್ರ. ಧಾರ್ಮಿಕ ಸಂಸ್ಥೆಗಳು ಹಾಗೂ ಸಂಗತಿಗಳ ಬಗೆಗೆ ಸಮಾಜಶಾಸ್ತ್ರೀಯ ವಿಶ್ಲೇಷಣೆ.

sociology of science and invention: ವಿಜ್ಞಾನ ಸಂಶೋಧನೆಗಳ ಸಮಾಜಶಾಸ್ತ್ರ.

sociometric data: ಸಮಾಜ ಮಾಪನ ದತ್ತಾಂಶಗಳು.

sociometric disposition: ಸಮಾಜ ಮಾಪನ ಚಿತ್ತವೃತ್ತಿ.

sociometric measurement: ಸಮಾಜ ಮಾಪನ ಲೆಕ್ಕ.

sociometric method: ಸಮಾಜಮಾಪನ ವಿಧಾನ.

socio metry: ಸಮಾಜಮಾಪನ ಅಧ್ಯಯನ. ನಿರ್ದಿಷ್ಟ ಸನ್ನಿವೇಶದಲ್ಲಿ ಸಮೂಹದ ಸದಸ್ಯರ ವೈಯಕ್ತಿಕ ಆಯ್ಕೆಯ ನೆಲೆಯಲ್ಲಿ ಸಮೂಹ ರಚನೆ ಹಾಗೂ ಸಾಮಾಜಿಕ ಅಂತರದ ಬಗೆಗಿನ ಅಧ್ಯಯನ.

socio organic theory: ಸಾಮಾಜಿಕ ಜೈವಿಕ ಸಿದ್ಧಾಂತ.

sociopath : ಸಮಾಜರೋಗಿ. ಸಮಾಜ ವಿರೋಧೀ ಮಾರ್ಗದಲ್ಲಿ ನಡೆಯ ಬಯಸುವ ವ್ಯಕ್ತಿ.

sociopathic personality: ವಿಕೃತ ಸಂಗಶೀಲ ವ್ಯಕ್ತಿತ್ವ; ಸಮಾಜಾಪಚಾರಿ ವ್ಯಕ್ತಿತ್ವ.

sociotherapy: ಸಮಾಜ ಚಿಕಿತ್ಸೆ; ಸಮಾಜ ಸಾಹಚರ್ಯ ಚಿಕಿತ್ಸೆ.

socius: ಸಮಾಜೀಯ. ಸಾಮಾಜಿಕ ಅಂತರಕ್ರಿಯೆಯ ವ್ಯವಸ್ಥೆಯಲ್ಲಿ ವ್ಯಕ್ತಿಯು ಒಂದು ಘಟಕವಾಗಿ ಹಾಗೂ ವಿವಿಧ ಸಾಮಾಜಿಕ ಸಾಂಸ್ಕೃತಿಕ ಮಾದರಿಯ ಒಗ್ಗೂಡುವಿಕೆಯ ಬಿಂದುವಾಗಿ ಗುರುತಿಸಲ್ಪಡುವಿಕೆ.

sodality: ಭ್ರಾತೃಭಾವನೆಯ ವರ್ಗ. ಐಚ್ಛಿಕ ಅಥವಾ ಅನೈಚ್ಛಿಕ ಸದಸ್ಯತ್ವಉಳ್ಳ ಸಂಘ.

sodomy: ಅನೈತಿಕ ಸಂಭೋಗ.

soft currency: ವಿದಳತೆಯಿಲ್ಲದ ಕರೆನ್ಸಿ; ಸುಲಭ ಕರೆನ್ಸಿ. ವಿನಿಮಯ ಮಾರುಕಟ್ಟೆಯಲ್ಲಿ ಧಾರಾಳವಾಗಿ ಲಭ್ಯವಿರುವ ಕರೆನ್ಸಿ.

soft loan: ಸುಲಭ ಸಾಲ. ಕಡಿಮೆ ಬಡ್ಡಿ ದರದಲ್ಲಿ ಸಿಗುವ ಸಾಲ.

soft state: ಮೃದು ರಾಜ್ಯ.

software: ಲಘುವರ. ಗಣಕ ಯಂತ್ರದಲ್ಲಿ ಪೂರಕ ಭಾಗ.

soil conservation: ಭೂಸಾರ ಸಂರಕ್ಷಣೆ.

soil erosion: ಭೂ ಸವೆತ (ಸವಕಳಿ).

soldier society: ಸೈನಿಕ ಸಮಾಜ

sole arbitrator: ಏಕೈಕ ಮಧ್ಯಸ್ಥಿಕೆ ದಾರ.

sole proprietorship: ಏಕವ್ಯಕ್ತಿ ಒಡೆತನಸಂಸ್ಥೆ.

solidarity: ಐಕ್ಯತೆ; ಸ್ಥಿರತೆ; ಭದ್ರತೆ.

solidarity play: ಏಕಾಕಿ ಕ್ರೀಡೆ; ಒಂಟಿ ಆಟ.

solvency: ಸಾಲ ತೀರಿಸುವ ಶಕ್ತಿ.

somasthesis: ಶರೀರ ಸಂವೇದನೆ.

somatic resonance: ದೈಹಿಕ ಅನುನಾದ.

somatic tendency in psychology: ಮನೋವಿಜ್ಞಾನದಲ್ಲಿ ಕಾಯ ಪ್ರವೃತ್ತಿ.

somatogenic disorder: ಕಾಯಜನ್ಯ ವಿಕಾರ; ಶರೀರ ಜನ್ಯ ವಿಕಾರ.

somatometry: ಶರೀರ ಮಾಪನ. ಅಸ್ಥಿ ಪಂಜರ ಮತ್ತು ಜೀವಂತ ಶರೀರದ ಮಾಪನ.

somatopsychosis: ದೈಹಿಕ ಮನೋ ವಿಕ್ಷಿಪ್ತಿ.

somatotonia: ಕಾಯಶೀಲತೆ. ಕಾಯಶೀಲ ವ್ಯಕ್ತಿ ತುಂಬಾ ಚಟುವಟಿಕೆಯಿಂದ ಕೂಡಿ, ತಾನು ಹೇಳಿದ್ದು ಸರಿ ಎಂದು ವಾದಿಸುವ, ಗದ್ದಲಮಯ, ದೃಢ ವರ್ತನೆಯ, ಜೋರಿನ ಆಕ್ರಮಣಶೀಲ ವ್ಯಕ್ತಿತ್ವ.

somato type: ಕಾಯ ರೂಪ; ಕಾಯ ನಮೂನೆ.
somnambulism: ನಿದ್ರಾ ಸಂಚಾರ; ನಿದ್ರಾಭ್ರಮಣ.
somnambulistic state: ನಿದ್ರಾ ಭ್ರಮಣ ಸ್ಥಿತಿ.
sondesmian family: ಮುಕ್ತ ಕುಟುಂಬ. ಗಂಡ ಹೆಂಡತಿಯ ನಡುವಿನ ವೈವಾಹಿಕ ಸಂಬಂಧದ ಮೇಲೆ ಯಾವುದೇ ತರದ ನಿಶ್ಚಿತ ನೈತಿಕ ನಿಯಮಗಳಿಲ್ಲದಿರುವುದು.
sons of liberty: ಸ್ವಾತಂತ್ರ್ಯ ಕುವರರು. ಅಮೇರಿಕಾದಲ್ಲಿ ರೂಪಗೊಂಡ ಉಗ್ರ ಗಾಮಿ ಪಂಥ.
sophistication of mental attitude: ಮನೋಭಿವೃತ್ತಿಯ ನಾಜೂಕುತನ.
sophisticated culture: ಶಿಷ್ಟ ಸಂಸ್ಕೃತಿ.
sorcery: ಮಾಟ. ನೋಡಿ: witchcraft.
sororal polygyny: ಭಗಿನೀ ಬಹು ಪತ್ನಿತ್ವ. ಒಬ್ಬ ಪುರುಷನು ಒಂದು ಕುಟುಂಬದಲ್ಲಿರುವ ಎಲ್ಲಾ ಅಕ್ಕತಂಗಿಯರನ್ನು ವಿವಾಹವಾಗುವುದು.
sororate: ಜಾಯಾ ಭಗಿನೀ ವಿವಾಹ; ನಾದಿನಿ ವಿವಾಹ. ಹೆಂಡತಿ ಸತ್ತನಂತರ ಆಕೆಯ ಸಹೋದರಿಯನ್ನು ಮದುವೆಯಾಗುವ ಪದ್ಧತಿ.
sound civil service: ಸಮರ್ಥ ಆಡಳಿತ ಸೇವಾವರ್ಗ; ದಕ್ಷ ಆಡಳಿತ ಸೇವಾವರ್ಗ.
sound effect: ನಾದ ಪರಿಣಾಮ.
sound recording: ಧ್ವನಿ ಮುದ್ರಿಕೆ.
source method: ಮೂಲಾಧಾರ ವಿಧಾನ.
sovereign democratic republic: ಸಾರ್ವಭೌಮ ಪ್ರಜಾಸತ್ತಾತ್ಮಕ ಗಣರಾಜ್ಯ. ಸಂಪೂರ್ಣವಾಗಿ ಸ್ವತಂತ್ರವಾಗಿದ್ದು ಪರಮಾಧಿಕಾರವನ್ನು ಹೊಂದಿರುವ ಮತ್ತು ಪ್ರಜಾಪ್ರಭುತ್ವ ತತ್ವಗಳ ಆಧಾರದಲ್ಲಿರುವ ಗಣರಾಜ್ಯ.
sovereign general will: ಸಾರ್ವಭೌಮ ಸಾರ್ವಜನಿಕ ಇಚ್ಛೆ. ಸಾರ್ವತ್ರಿಕ ಇಚ್ಛೆಯೇ ಪರಮಾಧಿಕಾರವುಳ್ಳದ್ದೆಂದು ತತ್ವಶಃ ಒಪ್ಪಿರುವ ರಾಜ್ಯವ್ಯವಸ್ಥೆ.
sovereign power: ಸಾರ್ವಭೌಮ ಅಧಿಕಾರ.
sovereign right: ಸಾರ್ವಭೌಮ ಹಕ್ಕು.
sovereign state: ಸಾರ್ವಭೌಮ ರಾಷ್ಟ್ರ. ತನ್ನ ಆಂತರಿಕ ಮತ್ತು ಬಾಹ್ಯ ಸಂಬಂಧಗಳನ್ನು ತಾನೇ ನಿಯಂತ್ರಿಸುವ ರಾಷ್ಟ್ರ.
sovereignty: ಸಾರ್ವಭೌಮಾಧಿಕಾರ; ಪರಮಾಧಿಕಾರ. ೧. ರಾಜ್ಯದ ಮೂಲ ವಾದ, ಅಧಿಕೃತವಾದ ಮತ್ತು ಅನಿಯಮಿತ ವಾದ ಅಧಿಕಾರ. ೨. ಪ್ರತಿಯೊಬ್ಬ ಪ್ರಜೆ ಮತ್ತು ಸಮಸ್ತ ಸಂಘಗಳ ಮೇಲೂ ಇರುವ ರಾಜ್ಯದ ಮೂಲಭೂತ, ನಿರಂಕುಶ ಹಾಗೂ ಅಮಿತ ವಾದ ಅಧಿಕಾರ.
sovereignty of parliament: ಪಾರ್ಲಿಮೆಂಟಿನ ಸಾರ್ವಭೌಮತ್ವ. ಕಾಯಿದೆಗಳನ್ನು ರಚಿಸುವುದು, ಕರಗಳನ್ನು ಹಾಕುವುದು, ಯುದ್ಧ ಮತ್ತು ಸಂಧಾನಗಳಿಗೆ ಸಮ್ಮತಿ ಸೂಚಿಸುವುದು ಮುಂತಾದ ವಿಸ್ತಾರ ವಾದ ಸಂಸತ್ತಿನ ಅಧಿಕಾರ.
sovereignty of the people: ಜನತಾ ಸಾರ್ವಭೌಮತ್ವ. ಸರಕಾರದ ಅಸ್ತಿತ್ವವನ್ನು ನಿರ್ಧರಿಸುವ ಜನರ ಪರಮಾಧಿಕಾರ.

Soviet Federation: ಸೋವಿಯತ್ ಸಂಯುಕ್ತ ರಾಜ್ಯ (ಒಕ್ಕೂಟ).

Soviet Nationalities: ಸೋವಿಯತ್‌ನ ರಾಷ್ಟ್ರೀಯ ಸಭೆ. ಸೋವಿಯತ್ ಪಾರ್ಲಿಮೆಂಟಿನ ಮೇಲ್ಮನೆ.

spaced repetition: ಅಂತರಿತ ಪುನಶ್ಚರಣೆ.

spaced whole study: ಅಂತರಿತ ಪೂರ್ಣಕಲಿಕೆ.

span of apprehension: ಅನುಬೋಧೆಯ ವಿಸ್ತಾರ.

span of attention: ಗಮನದ ವ್ಯಾಪ್ತಿ.

span of consciousness: ಪ್ರಬುದ್ಧ ಚೇತನ ವಿಸ್ತಾರ; ಪ್ರಜ್ಞಾಸ್ಥಿತಿಯ ವಿಸ್ತಾರ.

span of control: ನಿಯಂತ್ರಣದ ವ್ಯಾಪ್ತಿ. ಆಡಳಿತ ವ್ಯವಸ್ಥೆಯೊಂದರ ಅಧೀನ ಅಧಿಕಾರಿಗಳು ಅಥವಾ ಕಾರ್ಯ ಘಟಕಗಳನ್ನು ಶ್ರೇಷ್ಠಾಧಿಕಾರಿಯು ತನ್ನ ನಿಯಂತ್ರಣದಲ್ಲಿರಿಸಿಕೊಳ್ಳುವ ಆತನ ಸಾಮರ್ಥ್ಯ.

span of memory: ಸ್ಮೃತಿ ವಿಸ್ತಾರ.

spatial form: ಸ್ಥಳ ವ್ಯಾಪ್ತಿ ರೂಪ.

spatial mobility: ಸ್ಥಳೀಯ (ಪ್ರಾದೇಶಿಕ) ಸಂಚಲನೆ.

spatial pattern: ಸ್ಥಳ ವಿನ್ಯಾಸ.

spatial perception: ಸ್ಥಳದ ಜ್ಞಾನ.

spatial perspective: ದೇಶಿಕ ದೃಷ್ಟಿ.

spatial separation: ಸ್ಥಳ ಪ್ರತ್ಯೇಕತೆ; ದೇಶಿಕ ಪ್ರತ್ಯೇಕತೆ.

speaker: ಸಭಾಧ್ಯಕ್ಷ. ಸಂಸದೀಯ ಸರಕಾರ ಅಥವಾ ಅಧ್ಯಕ್ಷೀಯ ಸರಕಾರ ಪದ್ಧತಿಯಲ್ಲಿ ಶಾಸಕಾಂಗದ ಕೆಳಸದನದ ಕಾರ್ಯಕಲಾಪಗಳನ್ನು ನಿಯಂತ್ರಿಸಿಕೊಂಡು ಬರಲು ಆ ಸದನದ ಸದಸ್ಯರಿಂದಲೇ ಆಯ್ಕೆ ಮಾಡಲ್ಪಟ್ಟ ವ್ಯಕ್ತಿ.

speaking symbols: ಮಾತನಾಡುವ ಚಿಹ್ನೆಗಳು. ಪುರಾತನ ಕಾಲದಲ್ಲಿ ಜನರು ಮರದ ತೊಗಟೆಗಳ ಮೇಲೆ, ಕಲ್ಲಿನ ಮೇಲೆ ಅಥವಾ ಹದಮಾಡಿದ ಚರ್ಮದ ಮೇಲೆ ತಮ್ಮ ಚಟುವಟಿಕೆಗಳನ್ನು ಚಿಹ್ನೆಗಳ ಮೂಲಕ ದಾಖಲು ಮಾಡುತ್ತಿದ್ದರು. ಇವುಗಳನ್ನು 'ಮಾತನಾಡುವ ಚಿಹ್ನೆಗಳು' ಎನ್ನುತ್ತಾರೆ.

Spearman rank correlation: ಸ್ಪಿಯರ್‌ಮನ್ನನ ಶ್ರೇಣಿಯ ಸಹಸಂಬಂಧ.

special aptitude: ವಿಶೇಷಾಭಿರುಚಿ.

special aptitude test: ವಿಶೇಷಾಭಿರುಚಿಯ ಪರೀಕ್ಷೆ.

special assessment: ವಿಶೇಷ ಕಂದಾಯ. ಯಾವುದೇ ನಿರ್ದಿಷ್ಟ ಪ್ರದೇಶದ ನಿವಾಸಿಗಳಿಗೆ ಒದಗಿಸಲಾಗುವ ವಿಶೇಷ ಕಾರ್ಯಗಳಿಂದ ಪ್ರಯೋಜನ ಪಡೆಯುವ ವ್ಯಕ್ತಿಗಳು ಸರಕಾರಕ್ಕೆ ಕೊಡಬೇಕಾದ ಹಣ.

special assistant: ವಿಶೇಷ ಸಹಾಯಕ.

special court: ವಿಶೇಷ ನ್ಯಾಯಾಲಯ. ಸುಪ್ರೀಮ್ ಕೋರ್ಟಿನ ಸಲಹೆ ಮೇರೆಗೆ (ವಿಶೇಷ) ಅಪರಾಧಗಳನ್ನು ವಿಚಾರಣೆ ಮಾಡಲು ಸ್ಥಾಪಿಸಬಹುದಾದ ನ್ಯಾಯಾಲಯಗಳು. ಉದಾ: ತುರ್ತು ಪರಿಸ್ಥಿತಿಯ ಕಾಲದಲ್ಲಿ ಉಂಟಾದ (ಅತಿರೇಕಗಳ) ಅಪರಾಧಗಳನ್ನು ವಿಚಾರಣೆ ಮಾಡಲು ವಿಶೇಷ ನ್ಯಾಯಾಲಯಗಳ ಸ್ಥಾಪನೆ ಬಗ್ಗೆ ಸುಪ್ರೀಮ್ ಕೋರ್ಟು ಆಗಸ್ಟ್ ೧,

೯೬೦೮ರಂದು ತನ್ನ ಸಲಹೆ ನೀಡಿ ವಿಶೇಷ ನ್ಯಾಯಾಲಯಗಳನ್ನು ರಚಿಸಬಹುದೆಂದು ತಿಳಿಸಿತು.

special drawing rights (SDR's): ವಿಶೇಷ ಹಣ ಪಡೆಯುವ ಹಕ್ಕು.

special electoral roll: ವಿಶೇಷ ಮತದಾರರ ಪಟ್ಟಿ.

special endorsement: ವಿಶೇಷ ಹಿಂಬರಹ.

special grant: ವಿಶೇಷ ಅನುದಾನ. ಯಾವುದೇ ಒಂದು ಸೇವೆಗೆ ಆಯವ್ಯಯದ ಅನುದಾನಗಳು ಆಮೇಲೆ ಸಾಕಾಗುವುದಿಲ್ಲವೆಂದು ಕಂಡುಬಂದಾಗ ಅಥವಾ ಈಗಾಗಲೇ ಒಂದು ಸೇವೆಯ ಮೇಲೆ ಮಾಡಿರುವ ವೆಚ್ಚವು ಮುಂಗಡಪತ್ರದಲ್ಲಿ ಅನುವು ಮಾಡಿದ ಹಣಕ್ಕಿಂತ ಹೆಚ್ಚಾಗಿದ್ದರೆ ಲೋಕಸಭೆಯು ಮಂಡಿಸುವ ಪೂರಕ ಆರ್ಥಿಕ ನಿರೂಪಣೆ.

special indorsement: ವಿಶೇಷ ವರ್ಗಾವಣೆ, ಪತ್ರ, ಹುಂಡಿ, ಇತ್ಯಾದಿಗಳನ್ನು ಇನ್ನೊಬ್ಬರ ಹೆಸರಿಗೆ ವರ್ಗಾವಣೆ ಮಾಡುವುದು.

special interest groups: ವಿಶೇಷ ಹಿತಾಸಕ್ತಿ ಸಮೂಹಗಳು.

special language: ನೋಡಿ: argot.

special majority: ವಿಶೇಷ ಬಹುಮತ. ಭಾರತದ ಸಂವಿಧಾನದ ಕೆಲವು ಮುಖ್ಯ ವಿಷಯಗಳನ್ನು ಸಂಸತ್ತು ತಿದ್ದುಪಡಿ ಮಾಡಲು ಬೇಕಾಗಿರುವ ಶೇಕಡಾ ೫೦ಕ್ಕಿಂತ ಹೆಚ್ಚಿನ ಬಹುಮತ.

special privilege: ವಿಶೇಷ ಸೌಲಭ್ಯ.

special provision: ವಿಶೇಷ ನಿಯಮ; ವಿಶೇಷ ಅನುವು.

special session: ವಿಶೇಷ ಅಧಿವೇಶನ. ರಾಷ್ಟ್ರದ ರಾಷ್ಟ್ರಾಧ್ಯಕ್ಷರು ಅವಶ್ಯವೆನಿಸಿದಾಗ ಸಂಸತ್ತಿನ ಸದನಗಳ ನಿಗದಿಪಡಿಸಿದ ಅಧಿವೇಶನಗಳ ಬದಲಾಗಿ ಯಾವುದೇ ಸದನದ ಅಥವಾ ಉಭಯಸದನಗಳ ಅಧಿವೇಶನವನ್ನು ಕರೆಯಬಹುದು. ಇದಕ್ಕೆ ವಿಶೇಷ ಅಧಿವೇಶನವೆಂದು ಹೆಸರು.

special term: ವಿಶೇಷ ಕರಾರು (ನಿಯಮ).

special vocabulary: ನೋಡಿ: argot; jargon.

specialised farming: ಪರಿಣತ ಬೇಸಾಯ.

specialist bureaucrat: ಪರಿಣತ (ತಜ್ಞ) ಅಧಿಕಾರಿ.

specialistic school of thought: ವಿಶೇಷತಾವಾದದ ವಿಚಾರವಾದಿಗಳ ಪಂಥ.

specialistic view: ವಿಶೇಷತಾವಾದದ ದೃಷ್ಟಿಕೋನ.

specialization: ವಿಶಿಷ್ಟೀಕರಣ; ಪ್ರಾವೀಣ್ಯತೆ; ತಜ್ಞತೆ. ತಜ್ಞರಿಗೆ ಕಾರ್ಯವನ್ನು ಒಪ್ಪಿಸುತ್ತಾ ಹೋಗುವ ಪ್ರಕ್ರಿಯೆ.

species : ಜೀವಜಾತಿಗಳು.

specific birth rate: ನಿರ್ದಿಷ್ಟ ಜನನ ದರ. ಒಂದು ನಿರ್ದಿಷ್ಟ ಜನಸಂಖ್ಯೆಯ ಯಾವುದೇ ವರ್ಗದಲ್ಲಿ ಪ್ರತಿ ಸಾವಿರಕ್ಕೆ ಹುಟ್ಟುವ ಜೀವಂತ ಮಕ್ಕಳ ಸಂಖ್ಯೆ.

specific death rate: ನಿರ್ದಿಷ್ಟ ಮರಣ ದರ. ಒಂದು ನಿರ್ದಿಷ್ಟ ಜನಸಂಖ್ಯೆಯ

ಯಾವುದೇ ವರ್ಗದಲ್ಲಿ ಪ್ರತಿ ಸಾವಿರಕ್ಕೆ ಮರಣಿಸುವ ಜನರ ಸಂಖ್ಯೆ.

specific duty: ನಿರ್ದಿಷ್ಟ ಸುಂಕ.

specific tax: ನಿರ್ದಿಷ್ಟ ತೆರಿಗೆ; ಪ್ರಮಾಣ ಆಧಾರಿತ ತೆರಿಗೆ, ಉತ್ಪಾದಿಸಲಾದ ಅಥವಾ ಮಾರಾಟವಾದ ಸರಕುಗಳ ಪ್ರತಿ ಯುನಿಟ್ಟುಗಳ ಮೇಲೆ ಹೇರಲಾದ ಸಾಪೇಕ್ಷ ತೆರಿಗೆ.

specification: ವಿವರಣೆ; ನಮೂದಿಸಿದ ವಿವರ; ತಪಶೀಲು.

spectral analysis: ವರ್ಣಪಟಲ ವಿಶ್ಲೇಷಣೆ.

spectro calorimeter: ವರ್ಣಾನುಪಾತ ಮಾಪಕ.

spectro meter: ವರ್ಣ ಕ್ರಮ ಮಾಪಕ

spectro photo metre: ವರ್ಣದೀಪ್ತಿ ಮಾಪಕ.

spectro scope: ವರ್ಣಕ್ರಮದರ್ಶಿ.

spectrum: ವರ್ಣಪಟಲ.

speculation : ಸಟ್ಟಾವ್ಯವಹಾರ. ಬೆಲೆಗಳ ತೀವ್ರ ಏರಿಳಿತಗಳಿಂದ ಅಪಾರ ಲಾಭಗಳಿಸುವ ಉದ್ದೇಶದಿಂದ ಸ್ಟಾಕು, ಷೇರು, ಮುಂತಾದ ಪ್ರತಿಭೂತಿಗಳನ್ನು ಅಥವಾ ಸರಕುಗಳನ್ನು ಕೊಳ್ಳುವ, ಮಾರುವ ವ್ಯವಹಾರ.

speculative activity: ಸಟ್ಟಾ ವ್ಯವಹಾರದ ಚಟುವಟಿಕೆ.

speculative effect: ಸಟ್ಟಾ ವ್ಯವಹಾರದ ಪರಿಣಾಮ; ಊಹಾಪೋಹದ ಪರಿಣಾಮ.

speculative method: ಅನುಮಾನಿಕ ವಿಧಾನ; ಊಹಾತ್ಮಕ ವಿಧಾನ.

speculative motive: ಸಟ್ಟಾ ವ್ಯವಹಾರದ ಉದ್ದೇಶ.

speculative sociology: ಊಹಾತ್ಮಕ ಸಮಾಜಶಾಸ್ತ್ರ.

speculative tendency: ಊಹಾತ್ಮಕ ಪ್ರವೃತ್ತಿ.

speculative theories: ಕಾಲ್ಪನಿಕ ಸಿದ್ಧಾಂತಗಳು.

speech area: ವಾಕ್ ಪ್ರದೇಶ; ಭಾಷಾ ಪ್ರದೇಶ. ಒಂದು ಭಾಷೆ ಅಥವಾ ಆ ಪ್ರದೇಶಕ್ಕೆ ಸೀಮಿತವಾಗಿರುವ ವಿಶಿಷ್ಟ ಲಕ್ಷಣಗಳಿರುವ ಸ್ಥಳೀಯ ಭಾಷೆಯನ್ನಾಡುವ ಪ್ರದೇಶ.

speech development: ನುಡಿ ವಿಕಾಸ.

speech disorders: ಮಾತಿನ ತಾರುಮಾರುಗಳು.

spell: ಮಾಂತ್ರಿಕ ನುಡಿ.

spillover effect: ಪ್ರಸರಣ ಪರಿಣಾಮ.

spirit: ಆತ್ಮ; ಜೀವ; ಚೇತನ; ಉತ್ಸಾಹ. ಅಭೌತಿಕ ವಸ್ತು ಅಥವಾ ಸ್ಥಿತಿ.

sprit medium: ದೈವ ಮಾಧ್ಯಮ. ದೈವದ ವೇಷ ತೊಟ್ಟವನು; ಪೂಜಾರಿ

spirit mediumship: ದೈವ ಪಾತ್ರಿತ್ವ.

spirit of inquiry: ಜಿಜ್ಞಾಸೆಯ ಪ್ರವೃತ್ತಿ; ಶೋಧನೋತ್ಸಾಹ.

spirit photography: ಪ್ರೇತ ಛಾಯಾ ಚಿತ್ರಣ.

spirit possession: ದೈವಾವೇಶ.

spirit teaching: ಪ್ರೇತ ಬೋಧನೆ.

spiritual change: ಆಧ್ಯಾತ್ಮಿಕ ಪರಿವರ್ತನೆ.

spiritual intuition: ಆಧ್ಯಾತ್ಮಿಕ ಅನುಭವ.

spiritual kingdom: ಪಾರಮಾರ್ಥಿಕ ಸಾಮ್ರಾಜ್ಯ.
spiritual state: ನೋಡಿ: spiritual kingdom.
spiritual substance : ಆಧ್ಯಾತ್ಮಿಕ ವಸ್ತು (ಅಥವಾ ಆತ್ಮ).
spiritualism: ಆಧ್ಯಾತ್ಮಿಕತೆ; ಪಾರಮಾರ್ಥಿಕತೆ.
spiritualist: ಆಧ್ಯಾತ್ಮವಾದಿ.
spiritualistic monism: ಆಧ್ಯಾತ್ಮ ಐಕ್ಯವಾದ.
spirituality: ಆಧ್ಯಾತ್ಮಿಕತೆ.
spirometer: ಶ್ವಾಸಮಾಪಕ.
split consciousness: ವಿಚ್ಛಿನ್ನ ಪ್ರಜ್ಞೆ; ವಿಚ್ಛಿದ್ರ ಪ್ರಜ್ಞೆ; ವಿಚ್ಛಿನ್ನ ಪ್ರಬುದ್ಧ ಚೇತನ.
split personality: ವಿಚ್ಛಿನ್ನ ವ್ಯಕ್ತಿತ್ವ.
spoils system: ಅಧಿಕಾರ ಸೂರೆ ವ್ಯವಸ್ಥೆ. ಮಂತ್ರಿಗಳು ಹಾಗೂ ಪ್ರಭಾವಿ ರಾಜಕಾರಣಿಗಳು ತಮ್ಮ ಅಧಿಕಾರ ಹಾಗೂ ಸ್ಥಾನಬಲವನ್ನು ದುರುಪಯೋಗಿಸಿ ತಮ್ಮ ಖಾಸಗಿ ಹಿತಾಸಕ್ತಿಗಳಿಗೆ ನೆರವಾಗುವವರಿಗೆ ಉದ್ಯೋಗವನ್ನು ಅಥವಾ ಸೌಲಭ್ಯಗಳನ್ನು ದೊರಕಿಸಿಕೊಡುವ ದುಷ್ಟ ಪದ್ಧತಿ.
spontaneous action: ಸ್ವಯಂ ಪ್ರೇರಿತ ಕ್ರಮ; ಸ್ವ ಪ್ರಚೋದಿತ ಕ್ರಮ.
spontaneous attention: ಸ್ವ ಪ್ರೇರಣೆಯ ಅವಧಾನ.
spontaneous generalization: ಸ್ವಯಂಪ್ರೇರಿತ ಸಾಧಾರಣೀಕರಣ.
spontaneous recovery: ಸ್ವಯಂ ಪ್ರೇರಿತ ಚೇತರಿಕೆ.
spontaneous trains of thought: ಸ್ವಯಂ ಪ್ರೇರಿತ ವಿಚಾರಸರಣಿಗಳು.
spontaneous variation: ಸ್ವಯಂ ಪ್ರೇರಿತ ಪರಿವರ್ತನೆ.
spot interview: ಸ್ಥಳದಲ್ಲೇ ಸಂದರ್ಶನ; ಧಿಡೀರ್ ಸಂದರ್ಶನ.
spouse: ದಾಂಪತ್ಯ ಸಹಭಾಗಿ.
speed effect: ವಿಸ್ತರಣಾ ಪರಿಣಾಮ.
spring of action: ಕ್ರಿಯೆಯ ಚಿಮ್ಮುವಿಕೆ.
spurious correlation: ಮಿಥ್ಯಾ ಸಹಸಂಬಂಧ; ಹುಸಿ ಸಹಸಂಬಂಧ.
spurious record: ಕೂಟಶಾಸನ; ಕೃತಕ ಶಾಸನ.
spurious relationship: ಹುಸಿ ಸಂಬಂಧ; ಖೋಟಾ ಸಂಬಂಧ.
spying: ಗುಪ್ತಚರ್ಯೆ.
square deal: ನ್ಯಾಯಬದ್ಧವಾದ ಹಂಚಿಕೆ.
stability: ಸ್ಥಿರತೆ.
stability of interest: ಅಭಿರುಚಿಯ ಸ್ಥಿರತೆ.
stability of mind: ಮನಸ್ಥೈರ್ಯ; ಚಿತ್ತಸ್ಥೈರ್ಯ.
stability of trait: ವಿಶಿಷ್ಟ ಗುಣದ ಸ್ಥಿರತೆ.
stabilization function: ಸ್ಥಿರತೆ ಸಾಧಿಸುವ ಕಾರ್ಯ.
stabilization policy: ಸ್ಥಿರತೆ ಸಾಧಿಸುವ ನೀತಿ. ರಾಷ್ಟ್ರೀಯ ಆದಾಯದ ಏರಿಳಿತಗಳನ್ನು ಕಡಿಮೆಗೊಳಿಸುವ ಉದ್ದೇಶದಿಂದ ಸರಕಾರ ಕೈಗೊಳ್ಳುವ ಕ್ರಮ.

stable equilibrium: ಸ್ಥಿರ ಸಮತೋಲನ.

stable exchange rate: ಸ್ಥಿರ ವಿನಿಮಯ ದರ.

stable formula: ಸ್ಥಿರ ಸೂತ್ರ. ಜನಪದ ಮಹಾಕಾವ್ಯಗಳಲ್ಲಿ ಪಾತ್ರಗಳ ಅಂಕಿತ ನಾಮ, ಮುಖ್ಯಕ್ರಿಯೆ, ಕಾಲ ಮತ್ತು ಸ್ಥಳಗಳನ್ನು ಸೂಚಿಸತಕ್ಕ ಸಂದರ್ಭಗಳಲ್ಲಿ ಕೆಲವು ಸ್ಥಿರ ಸೂತ್ರಾಭಿವ್ಯಕ್ತಿಗಳು ಕಾಣಿಸುತ್ತವೆ. ಅವುಗಳನ್ನು ಸ್ಥಿರ ಸೂತ್ರಗಳೆನ್ನುತ್ತಾರೆ.

stable function: ಸ್ಥಿರ ಕಾರ್ಯ.

stable government: ಸ್ಥಿರ ಸರಕಾರ. ಸ್ಪಷ್ಟ ಬಹುಮತ ಹೊಂದಿದ್ದು, ಜನರ ಆಶೋತ್ತರಗಳಿಗೆ ಸರಿಯಾಗಿ ಸ್ಪಂದಿಸುವ ಸರಕಾರ.

stable population: ಸ್ಥಿರ ಜನಸಂಖ್ಯೆ.

stable population analysis: ಸ್ಥಿರ ಜನಸಂಖ್ಯಾ ವಿಶ್ಲೇಷಣೆ.

staff agency: ಸಲಹಾ ಸಿಬ್ಬಂದಿ ವರ್ಗ. ಮುಖ್ಯ ಕಾರ್ಯನಿರ್ವಾಹಕನಿಗೆ ಆಡಳಿತ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಅಗತ್ಯವಾದ ಸಲಹೆಗಳನ್ನು ನೀಡುವ ವರ್ಗ.

staff instruction: ಸಿಬ್ಬಂದಿ ಸೂಚನೆ.

staff officer: ಸಲಹಾಧಿಕಾರಿ.

staffing: ಸಿಬ್ಬಂದಿ ನೇಮಕಾತಿ. ಸಾರ್ವಜನಿಕ ಆಡಳಿತದಲ್ಲಿ ವಿವಿಧ ಹುದ್ದೆಗಳಿಗೆ ಸರಿ ಹೊಂದುವ ವ್ಯಕ್ತಿಗಳನ್ನು ಅರ್ಹತೆಯ ಆಧಾರದ ಮೇಲೆ ನೇಮಿಸುವುದು.

stage play: ರಂಗ ಪ್ರಯೋಗ.

stagflation: ಹಣದುಬ್ಬರ ನಿರುದ್ಯೋಗ ಸ್ಥಿತಿ. ಅರ್ಥವ್ಯವಸ್ಥೆಯಲ್ಲಿ ನಿರುದ್ಯೋಗ ಮತ್ತು ಹಣದುಬ್ಬರ ಒಟ್ಟಿಗೇ ಇರುವ ಸ್ಥಿತಿ.

stagnancy: ಜಡತೆ; ಸ್ಥಗಿತತೆ; ನಿಂತು ನಾರುವುದು.

stagnation: ನೋಡಿ: stagnancy.

staircase illusion: ಸೋಪಾನ (ಪಾವಟಿಗೆ) ಭ್ರಮೆ. ಮುಂದೆ ಮೆಟ್ಟಲುಗಳಿವೆಯೆಂದು ಭ್ರಮಿಸುತ್ತ ನಡೆಯುವುದು.

stale bill of lading: ಜಡಹುಂಡಿ.

stammering: ಉಗ್ಗುವಿಕೆ. ಪದಗಳು ಸ್ಪಷ್ಟವಾಗಿ ಹೊರಡದೆ, ತಡೆತಡೆದು ಬರುವುದು. ಕೆಲವೊಂದು ಘಟನೆಗಳಿಂದ, ಭಯದಿಂದ, ಭಾವೋದ್ವೇಗಗಳಿಂದ ಇದು ಉಂಟಾಗುವುದು.

stand by credit: ಖಾತ್ರಿಗೊಳಿಸಿದ ಸಾಲವ್ಯವಸ್ಥೆ.

standard coin: ಶಿಷ್ಟ ನಾಣ್ಯ; ಮಾನಕ ನಾಣ್ಯ. ಉದಾ: ರೂಪಾಯಿ ಭಾರತದ ಶಿಷ್ಟ ನಾಣ್ಯವಾಗಿದೆ.

standard error of estimate: ಅಂದಾಜಿನ ಪ್ರಮಾಣಕ ದೋಷ.

standard expression: ಪ್ರಮಾಣಕ ಅಭಿವ್ಯಕ್ತಿ.

standard metropolitan area: ಪ್ರಮಾಣೀಕೃತ ಮಹಾನಗರ ಕ್ಷೇತ್ರ.

standard of allocation: ಹಂಚಿಕೆಯ ಮಟ್ಟ.

standard of living: ಜೀವನ ಮಟ್ಟ.

standard of measurement: ಅಳತೆಯ ಪ್ರಮಾಣಕ.

standard price: ಮಾದರಿ ಬೆಲೆ.

standard score: ಪ್ರಮಾಣಕ ಪ್ರಾಪ್ತಾಂಕ.

standard stimulus: ಪ್ರಮಾಣ ಪ್ರಚೋದಕ.

standard text: ಪ್ರಮಾಣ ಪಠ್ಯ.

standardization: ಪ್ರಮಾಣೀಕರಣ; ಮಟ್ಟ ನಿಷ್ಕರ್ಷೆ.

standardization of test: ಪರೀಕ್ಷೆಗಳ ಮಟ್ಟ ನಿಷ್ಕರ್ಷೆ.

standardized death rate: ಪ್ರಮಾಣೀಕೃತ ಮರಣದರ.

standardized interview: ಪ್ರಮಾಣೀಕೃತ ಸಂದರ್ಶನ.

standards: ಪ್ರಮಾಣಾದರ್ಶಗಳು; ಮಟ್ಟಗಳು.

standing army: ಖಾಯಂ ಸೇನೆ. ಪೂರ್ಣಾವಧಿಯ, ವೃತ್ತಿನಿರತ ಖಾಯಂ ಅಸ್ತಿತ್ವವಿರುವ ಸೈನಿಕ ಪಡೆ.

standing body: ಸ್ಥಾಯೀ ಸಮಿತಿ.

standing committee: ಸ್ಥಾಯೀ ಮಂಡಳಿ.

standing order: ಸ್ಥಾಯೀ ಆದೇಶ (ಆಜ್ಞೆ).

standing stone : ಸ್ಮಾರಕ ಶಿಲೆ. ದೊಡ್ಡ ಶಿಲಾಸ್ತಂಭದಿಂದ ಮಾಡಿದ ಸ್ಮಾರಕ.

stand-still agreement: ನಿಲುಗಡೆ (ಸ್ಥಗಿತ) ಒಪ್ಪಂದ.

stand-still argument: ಸ್ಥಾಯೀ ಒಪ್ಪಂದ.

startle reaction: ಬೆಚ್ಚಿಬೀಳುವ ಪ್ರತಿಕ್ರಿಯೆ.

startle response: ಬೆಚ್ಚಿಬೀಳುವ ಪ್ರತಿಕ್ರಿಯೆ.

state: ರಾಜ್ಯ; ರಾಷ್ಟ್ರ. ನಿಶ್ಚಿತ ಭೂ ಪ್ರದೇಶ, ಜನರು, ಸರಕಾರ ಮತ್ತು ಸಾರ್ವಭೌಮಾಧಿಕಾರ (ಪರಮಾಧಿಕಾರ) ಎಂಬ ನಾಲ್ಕು ಅಂಶಗಳನ್ನು ಒಳಗೊಂಡಿರುವ ರಾಜಕೀಯ ಸಂಘಟನೆ.

state aid: ರಾಜ್ಯ ಸಹಾಯಧನ; ರಾಜ್ಯ ಅನುದಾನ. ಸ್ಥಳೀಯ ಘಟಕ (ವಿಭಾಗ) ಗಳಿಗೆ ನೀಡಲಾಗುವ ಸರಕಾರೀ ಸಹಾಯ ಧನ ಅಥವಾ ಅನುದಾನ.

state capitalism: ರಾಜ್ಯ ಬಂಡವಾಳಶಾಹಿ ವ್ಯವಸ್ಥೆ. ದೇಶದ ಆರ್ಥಿಕ ಬೆಳವಣಿಗೆಯ ವೇಗವನ್ನು ಹೆಚ್ಚಿಸುವುದಕ್ಕಾಗಿ ಸರಕಾರ ಪ್ರೇರಿತವಾದ ಬಂಡವಾಳಶಾಹಿ ತತ್ತ್ವ.

state central committee: ರಾಜ್ಯ ಕೇಂದ್ರ ಸಮಿತಿ.

state craft: ರಾಜ್ಯಾಡಳಿತ ಕಲೆ, ರಾಜ್ಯಾಂಗ ನೈಪುಣ್ಯ.

state government: ರಾಜ್ಯ ಸರಕಾರ.

state industry: ಸಾರ್ವಜನಿಕ ಕೈಗಾರಿಕೆ.

state legislative assembly: ರಾಜ್ಯ ವಿಧಾನಮಂಡಲ.

state legislature: ರಾಜ್ಯ ಶಾಸಕಾಂಗ; ರಾಜ್ಯದ ವಿಧಾನಮಂಡಲ.

state list: ರಾಜ್ಯ ಪಟ್ಟಿ. ರಾಜ್ಯ ಸರಕಾರದ ಕಾರ್ಯವ್ಯಾಪ್ತಿಗೆ ಒಳಪಡುವ ವಿಷಯಗಳನ್ನೊಳಗೊಂಡ ಪಟ್ಟಿ. ಇನ್ನೆರಡು ಪಟ್ಟಿಗಳಿಗಾಗಿ ನೋಡಿ: union list, concurrent list.

state ministry: ರಾಜ್ಯ ಮಂತ್ರಿ ಮಂಡಲ; ರಾಜ್ಯ ಸಂಪುಟ.

state of behaviour: ವರ್ತನ ಸ್ಥಿತಿ.

state of consciousness: ಪ್ರಜ್ಞಾ ಸ್ಥಿತಿ.

state of excitement: ಉತ್ತೇಜಕ ಸ್ಥಿತಿ. ಉತ್ತೇಜನಾವಸ್ಥೆ.

state of nature: ನೈಸರ್ಗಿಕ ಸ್ಥಿತಿ; ಸ್ವಾಭಾವಿಕ ಪರಿಸ್ಥಿತಿ. ಮನುಷ್ಯರು ನಾಗರಿಕತೆಯನ್ನು ಪಡೆದು ರಾಜ್ಯ ಎಂಬ ಸಂಘಟನೆಯನ್ನು ಕಟ್ಟಿಕೊಳ್ಳುವ ಮೊದಲು ಇದ್ದ ಪರಿಸ್ಥಿತಿ.

state of war: ಯುದ್ಧ ಸ್ಥಿತಿ.

state overload: ರಾಜ್ಯದ ಅತಿಹೊರೆ. ಆಧುನಿಕ ರಾಜ್ಯಗಳು ತಮ್ಮ ಸಂಕೀರ್ಣ ಆಡಳಿತಾತ್ಮಕ ನಿರ್ಣಯಗಳಿಂದ ಹೆಚ್ಚುವರಿ ಹೊರೆ ಹೊತ್ತಿವೆ ಎಂದು ಪ್ರತಿಪಾದಿಸುವ ಸಿದ್ಧಾಂತ.

state ownership: ರಾಜ್ಯ ಒಡೆತನ.

state policy: ರಾಜ್ಯ ನೀತಿ.

State Public Service Commission: ರಾಜ್ಯಲೋಕಸೇವಾ ಆಯೋಗ. ರಾಜ್ಯ ಸರ್ಕಾರಗಳ ಸೇವೆಗಳಿಗೆ ಸಿಬ್ಬಂದಿಗಳನ್ನು ಆಯ್ಕೆ ಮಾಡುವ ಅಧಿಕಾರವನ್ನು ಹೊಂದಿರುವ ಆಯಾ ರಾಜ್ಯದ ಲೋಕಸೇವಾ ಆಯೋಗ.

state religion: ರಾಷ್ಟ್ರ ಧರ್ಮ; ರಾಜ್ಯ ಧರ್ಮ.

statesmanship: ರಾಜನೀತಿ ನಿಪುಣತೆ; ರಾಜತಂತ್ರ ನಿಪುಣತೆ.

state socialism: ಸರಕಾರಿ ಸಮಾಜವಾದ; ರಾಜ್ಯ ಸಮತಾವಾದ. ಹಾನ್ ವಂಶದ ದೊರೆಯಾಗಿದ್ದ ವು-ತಿ ಎಂಬವನು ಚೀನಾದಲ್ಲಿ ತಂದ ಕ್ರಾಂತಿಕಾರಿ ಬದಲಾವಣೆ.

state society: ರಾಜ್ಯ ಸಮಾಜ. ಸರಕಾರದ ಔಪಚಾರಿಕ ಸಾಧನಗಳಿರುವ ಸಮಾಜ.

state system: ರಾಜ್ಯ ಪದ್ಧತಿ.

state trading: ರಾಜ್ಯ ವ್ಯಾಪಾರ. ರಫ್ತು ಮತ್ತು ಆಮದುಗಳ ಮೇಲೆ ರಾಜ್ಯಗಳು ವಿಧಿಸುತ್ತಿರುವ ಹೆಚ್ಚಿನ ನಿರ್ಬಂಧಗಳ ಮೂಲಕ ವ್ಯಾಪಾರದ ಮೇಲೆ ಹಿಡಿತ ಸಾಧಿಸುವುದು.

statehood: ರಾಜತ್ವ.

stateless society: ರಾಜ್ಯರಹಿತ ಸಮಾಜ. ಮಾರ್ಕ್ಸ್‌ವಾದದ ಪ್ರಕಾರ ಸಮಾಜವಾದದ ಕೊನೆಯ ಹಂತದಲ್ಲಿ ರಾಜ್ಯವು ಅಸಂಗತವೆನಿಸಿ ಅಸ್ತಿತ್ವಹೀನವಾಗುವಾಗಿನ ಸಾಮಾಜಿಕ ಸ್ಥಿತಿ.

static absolutism: ಸ್ಥಿರ ನಿರಪೇಕ್ಷತೆ.

static analysis: ಸ್ಥಿರ ವಿಶ್ಲೇಷಣೆ.

static contrast: ಸ್ಥಿರ ವೈರುಧ್ಯ.

static economics: ಸ್ಥಿರ ಅರ್ಥಶಾಸ್ತ್ರ.

static genre: ಸ್ಥಿರ ರೂಪ (ಪ್ರಕಾರ).

static method: ಸ್ಥಿರ ವಿಧಾನ.

static society: ನಿಶ್ಚಲ ಸಮಾಜ; ಸ್ಥಿರ ಸಮಾಜ. ಅಕ್ಷರಪೂರ್ವ ಸಮಾಜಗಳು ನಿಶ್ಚಲ ಸಮಾಜಗಳೆಂಬ ಕಲ್ಪನೆ ಇದೆ. ಆದರೆ ಯಾವ ಸಮಾಜವೂ ನಿಶ್ಚಲವಾಗಿರಲು ಸಾಧ್ಯವಿಲ್ಲ.

static theory: ಸ್ಥಿರ ಸಿದ್ಧಾಂತ.

static version: ಸ್ಥಿರ ಸ್ವರೂಪ.

stationary state: ಸ್ಥಗಿತ ಪರಿಸ್ಥಿತಿ.

statism: ರಾಜ್ಯತ್ವ. ರಾಷ್ಟ್ರೀಯ ಸಮಾಜ

ಕ್ಕಿಂತ ಸರ್ಕಾರವು ಉಚ್ಚಸ್ಥಾನದಲ್ಲಿದೆ ಎಂಬ ಸಿದ್ಧಾಂತ. ನೋಡಿ: tota litarianism.

statistical attenuation: ಸಂಖ್ಯಾ ಶಾಸ್ತ್ರೀಯ ವಿರಳತೆ.

statistical class: ಸಂಖ್ಯಾಶಾಸ್ತ್ರೀಯ ವರ್ಗ.

statistical consistency: ಸಂಖ್ಯಾತ್ಮಕ ಸಮಂಜಸತೆ.

statistical deviation: ಸಂಖ್ಯಾ ಶಾಸ್ತ್ರೀಯ ವ್ಯತಿಕಲನ.

statistical enumeration: ಅಂಕಿ ಅಂಶಗಳ ಎಣಿಕೆ (ಗಣನೆ).

statistical hypothesis: ಸಂಖ್ಯಾ ಶಾಸ್ತ್ರೀಯ ಊಹೆ.

statistical interaction: ಸಂಖ್ಯಾ ಶಾಸ್ತ್ರೀಯ ಅಂತರ್‌ಕ್ರಿಯೆ.

statistical mechanics: ಸಂಖ್ಯಾ ಬಲ ವಿಜ್ಞಾನ.

statistical method: ಅಂಕಿಅಂಶ ವಿಧಾನ; ಸಂಖ್ಯಾಶಾಸ್ತ್ರ ವಿಧಾನ; ಸಾಂಖ್ಯಿಕ ವಿಧಾನ; ಅಂಕಿ ಅಂಶಾತ್ಮಕ ವಿಧಾನ.

statistical probability: ಅಂಕಿ ಅಂಶಾತ್ಮಕ ಸಂಭಾವ್ಯತೆ.

statistical psychology: ಸಾಂಖ್ಯಿಕ ಮನೋವಿಜ್ಞಾನ; ಅಂಕಿ ಸಂಖ್ಯಾತ್ಮಕ ಮನೋವಿಜ್ಞಾನ.

statistical technique: ಸಾಂಖ್ಯಿಕ ಪ್ರವಿಧಿ.

statistical test: ಸಂಖ್ಯಾಶಾಸ್ತ್ರೀಯ ಪರೀಕ್ಷೆ.

statistics: ಸಂಖ್ಯಾಶಾಸ್ತ್ರ; ಅಂಕಿಸಂಖ್ಯೆ.

stature: ಶರೀರದ ಎತ್ತರ ಮತ್ತು ಮೈಕಟ್ಟು.

status: ಅಂತಸ್ತು; ಸ್ಥಾನಮಾನ.

status class: ಸ್ಥಾನಮಾನ ವರ್ಗ.

status composition: ಸ್ಥಾನಮಾನ ರಚನೆ.

status consistency: ಸ್ಥಾನಮಾನದ ದೃಢತೆ; ಅಂತಸ್ತಿನ ಸುಸಂಬದ್ಧತೆ. ಒಬ್ಬ ವ್ಯಕ್ತಿಯು ಹೊಂದಿರುವ ವಿವಿಧ ಸ್ಥಾನಮಾನ ಗಳ ಬಗೆಗೆ ಸಾಮಾಜಿಕ ಹಾಗೂ ಸಾಂಸ್ಕೃತಿಕ ನಿರೀಕ್ಷೆಗಳ ಏಕರೂಪತೆ.

status crystallization: ನೋಡಿ: status consistency.

status discrepancy: ಸ್ಥಾನಮಾನದ ಭೇದ.

status equilibrium: ನೋಡಿ: status consistency.

status equilibrium hypothesis: ಸ್ಥಿರ ಸಮತೋಲನ ಪ್ರಾಕ್‌ಕಲ್ಪನೆ.

status frustration: ಸ್ಥಾನಮಾನದ ಹತಾಶೆ. ಆಕಾಂಕ್ಷೆಗಳೆಲ್ಲವನ್ನೂ ಸಾಧಿಸಲು ಅಸಾಧ್ಯವಾದಾಗ ಉಂಟಾಗುವ ಹತಾಶೆ.

status group: ಅಂತಸ್ತು ಸಮೂಹ. ಒಂದು ನಿರ್ದಿಷ್ಟ ಜೀವನ ವಿಧಾನವಿರುವ, ಸಾಮಾಜಿಕವಾಗಿ ಸಮಾನ ಮರ್ಯಾದೆ ಹೊಂದಿದ್ದು, ತಮ್ಮ ಸ್ಥಾನಮಾನದ ಪ್ರಜ್ಞೆ ಇರುವ ಸಮೂಹ. ಉದಾ: ಜಾತಿ ಸಮೂಹ.

status honour: ಸ್ತರ ಗೌರವ. ಸ್ಥಾನ ಮಾನ ಗೌರವವನ್ನು ಉಳಿಸಿಕೊಳ್ಳಲಿಕ್ಕಾಗಿ ಸಮೂಹದ ಸದಸ್ಯರೆಲ್ಲರಲ್ಲೂ ಇರಬೇಕಾದ ವರ್ತನಾ ಸಂಹಿತೆ. ಉದಾ: ಒಂದೇ ಅಂತಸ್ತಿಗೆ

ಸೇರಿದವರೊಳಗೇ ವಿವಾಹ ಸಂಬಂಧ ಬೆಳೆಸುವುದು.

status insecurity: ಸ್ಥಾನಮಾನದ ಅಭದ್ರತೆ.

status personality: ಔದ್ಯೋಗಿಕ ಸ್ತರ ವ್ಯಕ್ತಿತ್ವ. ಒಬ್ಬ ವ್ಯಕ್ತಿಯು ತನ್ನ ಉದ್ಯೋಗದ ಘನತೆಗೆ ತಕ್ಕಂತೆ ಬೆಳೆಸಿಕೊಂಡ ವ್ಯಕ್ತಿತ್ವ.

status quo: ಯಥಾಸ್ಥಿತಿ.

status quoist: ಯಥಾಸ್ಥಿತಿವಾದಿ.

status sequence: ಅಂತಸ್ತಿನ ಕ್ರಮಾನುಗತಿ.

status situation: ಅಂತಸ್ತಿನ ಸನ್ನಿವೇಶ.

status symbol: ಸ್ಥಾನಮಾನದ ಸಂಕೇತ. ವ್ಯಕ್ತಿಯ ಅಥವಾ ಸಮೂಹದ ಸ್ಥಾನಮಾನವನ್ನು ವಿವರಿಸುವ ಯಾವುದೇ ಗೋಚರ ವಸ್ತು; ಶಬ್ದ, ಕ್ರಿಯೆ ಅಥವಾ ಗುರುತು.

status system: ಸ್ಥಾನಮಾನದ ವ್ಯವಸ್ಥೆ. ಒಂದು ಸಾಮಾಜಿಕ ವ್ಯವಸ್ಥೆಯೊಳಗೆ ಕಂಡುಬರುವ ಸ್ಥಾನಮಾನಗಳ ವ್ಯವಸ್ಥೆ.

statute law: ಶಾಸನವಿಧಿ; ಸಂವಿಧಿಕ ಕಾನೂನು; ಶಾಸಕಾಂಗ ನಿರ್ಮಿತ ಕಾನೂನು.

statutes: ನಿಬಂಧನೆಗಳು; ಶಾಸನ ನಿಯಮಾವಳಿಗಳು.

statutory framework: ಶಾಸನಬದ್ಧ ಚೌಕಟ್ಟು.

statutory law: ಶಾಸನಬದ್ಧ ಕಾಯಿದೆ. ಸಂಸತ್ತಿನಿಂದ ಶಾಸನ ರೂಪದಲ್ಲಿ ಹೊರಬೀಳುವ ಕಾನೂನು.

statutory liquidity ratio: ಶಾಸನ ಬದ್ಧ ದ್ರವ್ಯತೆಯ ಅನುಪಾತ.

statutory order: ಶಾಸನಬದ್ಧ ಆದೇಶ.

statutory power: ಶಾಸನಬದ್ಧ ಅಧಿಕಾರ.

statutory protection: ಶಾಸನಬದ್ಧ ರಕ್ಷಣೆ.

statutory standard: ಶಾಸನಬದ್ಧ ಮಟ್ಟ. ಆಡಳಿತ ನ್ಯಾಯನಿರ್ಣಯದಲ್ಲಿ ತೀರ್ಪನ್ನು ನೀಡುವಾಗ ಕೆಲವು ಶಾಸನಬದ್ಧ ಪ್ರಮಿತಿಗಳನ್ನು ಗಮನದಲ್ಲಿಟ್ಟುಕೊಳ್ಳಲಾಗುತ್ತದೆ. ಉದಾ: ಸಾರ್ವಜನಿಕ ಒಳಿತು, ಸಾರ್ವಜನಿಕ ಆಸಕ್ತಿ ಮತ್ತು ಸಾರ್ವಜನಿಕ ಅನುಕೂಲ ಇತ್ಯಾದಿ.

stay of proceedings: ವ್ಯವಹರಣೆಗಳ ತಡೆ.

stay order: ತಡೆಯಾಜ್ಞೆ.

steering committee: ಕಾರ್ಯ ಮುನ್ನಡೆಸುವ ಸಮಿತಿ; ಚಾಲಕ ಸಮಿತಿ.

stem family: ಶಾಖಾ ಕುಟುಂಬ. ೧. ಒಂದು ಮೂಲ ಕುಟುಂಬದೊಂದಿಗೆ ಒಂದು ಅಥವಾ ಒಂದಕ್ಕಿಂತ ಹೆಚ್ಚು ಸಂಬಂಧಿಗಳು ವಾಸಿಸುವ ಕುಟುಂಬ.
೨.ಹತ್ತಿರದ ತಲೆಮಾರಿನ ಎರಡು ಮೂಲ ಕುಟುಂಬಗಳು ಒಟ್ಟಿಗೆ ವಾಸಿಸುವ ವಿಸ್ತೃತ ಕುಟುಂಬ.

step-families: ಮಲ ಕುಟುಂಬಗಳು. ಮೊದಲಿನ ಮದುವೆಯಿಂದ ಗಂಡ ಅಥವಾ ಹೆಂಡತಿಗೆ ಮಕ್ಕಳಿದ್ದು, ಅವರು ಮನೆಯಲ್ಲೇ ಅಥವಾ ಸಮೀಪ ಎಲ್ಲಾದರೂ ವಾಸಿಸುವಂಥ ಕುಟುಂಬಗಳು.

stereotyped: ಏಕಪ್ರಕಾರದ.

stereotyped responses: ಏಕ ಪ್ರಕಾ ರದ ಪ್ರತಿಕ್ರಿಯೆಗಳು.

sterilization: ಸಂತಾನಹರಣ; ಬಂಜೆಗೊಳಿಸುವಿಕೆ.

sterility: ಬಂಜೆತನ.

stigmata: ದೈಹಿಕ ನ್ಯೂನತೆಗಳು, ಅಸಾಮಾನ್ಯ ವರ್ತನೆಗೆ ಕಾರಣವೆಂದು ಭಾವಿಸಲಾಗುವ ದೈಹಿಕ ಅಸಹಜತೆ, ವಿಕಾರತೆ.

still birth: ಮೃತ ಜನನ.

stimulus: ಪ್ರಚೋದಕ.

stimulus diffusion: ೧. ಪ್ರಚೋದಕ ಪ್ರಸರಣ. ಒಂದು ಮತ್ತೊಂದು ಬಗೆಯ ಆವಿಷ್ಕಾರಕ್ಕೆ ಪ್ರಚೋದನೆ ನೀಡುವ ಕ್ರಿಯೆ. ಉದಾ: ಶಿಕ್ಷಣ ಪಡೆಯಬೇಕೆಂಬಾಸೆಯಿಂದ ಆದಿವಾಸಿಯೊಬ್ಬ ೧೯ನೇ ಶತಮಾನದಲ್ಲಿ ತನ್ನ ಗುಂಪಿನವರಾಡುತ್ತಿದ್ದ ಭಾಷೆಗೆ ಸರಿಹೊಂದುವ ಅಕ್ಷರಮಾಲೆ ಸೃಷ್ಟಿಸಿದನು. ೨. ಉತ್ತೇಜಕ ಪ್ರಸರಣ. ಸಾಂಸ್ಕೃತಿಕ ಗುಣ ಲಕ್ಷಣಗಳನ್ನು ಮೂರ್ತ ರೂಪದಲ್ಲಲ್ಲದೆ ಸಾಮಾನ್ಯ ರೂಪದಲ್ಲಿ ಇನ್ನೊಂದು ಸಂಸ್ಕೃತಿಯವರು ಪಡೆದುಕೊಂಡು ಅದಕ್ಕೆ ಒಂದು ನಿರ್ದಿಷ್ಟ ರೂಪವನ್ನು ಕೊಡುವುದು.

stimulus differentiation: ಪ್ರಚೋದಕ ವಿಭೇದೀಕರಣ.

stimulus generalization: ಪ್ರಚೋದಕ ಸಾಮಾನ್ಯೀಕರಣ.

stimulus response learning: ನೋಡಿ: conditioned response.

stipulated condition: ಗೊತ್ತು ಪಡಿಸುವ ಷರತ್ತು.

stock: ೧. ದಾಸ್ತಾನು. ೨. ವಂಶಮೂಲ. ಜನಾಂಗೀಯ ಪಂಗಡಗಳ ಸಂಗ್ರಹವನ್ನು ಗುರುತಿಸಲು ಬಳಸುವ ಪದ. ಅನೇಕ ಸಂಬಂಧಿತ ಭಾಷೆಗಳ ಭಾಷಾ ಕುಟುಂಬ.

stock appreciation: ದಾಸ್ತಾನು ಮೌಲ್ಯೋನ್ನತಿ. ಮಾರುಕಟ್ಟೆಯ ಬೆಲೆಯಲ್ಲಿನ ಹೆಚ್ಚಳದಿಂದಾಗಿ ದಾಸ್ತಾನಿನ ಮೌಲ್ಯದಲ್ಲಿ ಉಂಟಾಗುವ ಹೆಚ್ಚಳ.

stock belief: ಸಂಗ್ರಹಿತ ನಂಬಿಕೆ.

stock exchange: ಷೇರು ವಿನಿಮಯ. ಷೇರು ಭದ್ರತಾ ಪತ್ರಗಳು ಕೊಳ್ಳಲ್ಪಡುವ ಮತ್ತು ಮಾರಾಟವಾಗುವ ಮಾರುಕಟ್ಟೆ.

stock exchage security: ಷೇರು ವಿನಿಮಯ ಭದ್ರತಾ ಪತ್ರ.

stock piling: ದಾಸ್ತಾನು ಸಂಗ್ರಹಣೆ. ಮುಂದಿನ ಅಗತ್ಯಗಳಿಗಾಗಿ ಅಥವಾ ಮುಂದೆ ಬೆಲೆ ಹೆಚ್ಚಾಗಬಹುದು ಎಂಬ ನಿರೀಕ್ಷೆಯಿಂದ ಸಾಮಾಗ್ರಿಗಳನ್ನು ಸಂಗ್ರಹಿಸಿಡುವುದು.

stocking anesthesia: ಪಾದ ಸಂವೇದನಾ ಶೂನ್ಯತೆ.

stoicism: ಸೌಶೀಲತ್ವ; ವಿರಕ್ತಮತ. ಸೌಶೀಲ್ಯವೇ ಪರಮಹಿತವೆಂದು ಸಮರ್ಥಿಸುವ ಪಂಥ.

stone age: ಶಿಲಾಯುಗ.

stone columns: ಕಲ್ಲಿನ ಸ್ತಂಭಗಳು. ಪುರಾತನ ಈಜಿಪ್ಟ್‌ನಲ್ಲಿ ಮಾಳಿಗೆಯನ್ನು ಬಲವಾದ ಕಲ್ಲಿನ ಸ್ತಂಭಗಳ ಆಧಾರದ ಮೇಲೆ ಕಟ್ಟುತ್ತಿದ್ದರು. ಅಂತಹ ಸ್ತಂಭ ಗಳಲ್ಲಿ ಒಂದೊಂದರ ಮೇಲೂ ನೂರು ಜನ ನಿಲ್ಲಲು ಸಾಧ್ಯವಿದ್ದಿತು.

store of value: ಮೌಲ್ಯ ಸಂಗ್ರಹ.

storm and stress: ಸಂಕ್ಷೋಭೆ ಮತ್ತು ಒತ್ತಡ.

straining of attention: ಅವಧಾನ ಪ್ರಯಾಸ.

Strategic Arms Limitation Treaty: (SALT): ಶಸ್ತ್ರಾಸ್ತ್ರ ಸೀಮೀಕರಣ ಒಪ್ಪಂದ. ಪ್ರಮುಖ ಅಸ್ತ್ರಗಳನ್ನು ಕಡಿಮೆಗೊಳಿಸುವ ಬಗ್ಗೆ ರಷ್ಯಾ ಮತ್ತು ಅಮೇರಿಕಗಳ ನಡುವೆ ಆದ ಒಪ್ಪಂದ.

strategic factor: ಆಯಕಟ್ಟಿನ ಅಂಶ. ಒಂದು ರಾಜ್ಯ (ರಾಷ್ಟ್ರ)ವನ್ನು ಹೆಚ್ಚು ಸ್ವಾವಲಂಬಿ ಮತ್ತು ಬಲಯುತವಾಗಿರುವಂತೆ ಮಾಡುವ ಆರ್ಥಿಕ ಅಂಶಗಳು. ಉದಾ: ಕಬ್ಬಿಣದ ಅದಿರು, ಉಕ್ಕು, ಮ್ಯಾಂಗನೀಸ್, ಪೆಟ್ರೋಲಿಯಂ ಇತ್ಯಾದಿ.

stratification: ಸ್ತರ ವಿನ್ಯಾಸ.

stratified sample: ವಿಭಜಿತ ಮಾದರಿ ನೋಡಿ: sampling.

stratigraphy: ಸ್ತರವಿವರಣಾ ಶಾಸ್ತ್ರ, ಭೂವಿಜ್ಞಾನದಲ್ಲಿ ಸ್ತರಗಳ ಕುರಿತ ಭಾಗ.

stratum: ಸ್ತರ; ಪದರ.

stream of consciousness: ಪ್ರಜ್ಞಾವಾಹಿನಿ.

stream of migration: ವಲಸೆ ಪ್ರವಾಹ.

street drama: ಬೀದಿ ನಾಟಕ.

strength of mind: ಮನೋಬಲ.

strength of motive: ಅಭಿಪ್ರೇರಣೆಯ (ಶಕ್ತಿ) ಬಲ.

stress interview: ಪ್ರಯಾಸ ಸಂದರ್ಶನ.

stress-strain concept: ಎಳೆತ ಬಿಗಿತಗಳ ಪರಿಕಲ್ಪನೆ. ಸಾಮಾಜಿಕ ವ್ಯವಸ್ಥೆಯು ಸಂಪೂರ್ಣ ಸಮತೋಲನವನ್ನು ಹೊಂದಿರದೆ ಪಾತ್ರ ನಿರೀಕ್ಷೆ ಹಾಗೂ ಸಾಮಾಜಿಕ ಸಂಸ್ಥೆಗಳಲ್ಲಿ ಎಳೆತ ಬಿಗಿತಗಳನ್ನೊಳಗೊಂಡ ನಮ್ಮ ಕ್ರಿಯೆಯಾಗಿದೆ ಎಂಬ ಪರಿಕಲ್ಪನೆ.

stress tolerance: ಪ್ರಯಾಸ ಸಹಿಷ್ಣುತೆ.

strike: ಹರತಾಳ; ಮುಷ್ಕರ.

strikebreaker: ಮುಷ್ಕರ ಮುರುಕ; ಕರಿಗಾವಲಿನವ. ೧. ಮುಷ್ಕರದಲ್ಲಿ ಭಾಗವಹಿಸಲು ನಿರಾಕರಿಸುವ ಅಥವಾ ಮುಷ್ಕರ ಹೂಡಿರುವ ಕಾರ್ಮಿಕರ ಜಾಗದಲ್ಲಿ ಕೆಲಸ ಮಾಡಲು ಬಂಡವಾಳ ಶಾಹಿ ಮೂಲಕ ಬಾಡಿಗೆಗೆ ನೇಮಕಗೊಂಡ ಕಾರ್ಮಿಕ. ೨. ಶೋಷಕರ ವಿರುದ್ಧವಾದ ಹೋರಾಟದಲ್ಲಿ ಕಾರ್ಮಿಕರ ವರ್ಗ ಹಿತಾಸಕ್ತಿಗಳಿಗೆ ದ್ರೋಹ ಬಗೆಯುವವನು.

string riddle: ಸರಣಿ ಒಗಟು.

structural change: ರಾಚನಿಕ ಬದಲಾವಣೆ. ಸಾಂಸ್ಥಿಕ ಸಾಮಾಜಿಕ ಸಂಬಂಧಗಳ ರಚನೆಯಲ್ಲಿ ಉಂಟಾಗುವ ಬದಲಾವಣೆ.

structural conduciveness: ರಾಚನಿಕ ಅನುಕೂಲತೆ. ನಿರ್ದಿಷ್ಟ ರೀತಿಯ ಸಾಮಾಜಿಕ ನಡತೆಗೆ ಅನುಮತಿ ನೀಡುವ ಸಾಮಾಜಿಕ ಸನ್ನಿವೇಶ ಅಥವಾ ಪರಿಸ್ಥಿತಿ.

structural disequilibrium: ರಾಚನಿಕ ಅಸಮತೋಲನ.

structural formula: ರಚನಾ ಸೂತ್ರ.

structural functional analysis: ರಾಚನಿಕ ಕಾರ್ಯಾತ್ಮಕ ವಿಶ್ಲೇಷಣೆ. ಸಮಾಜದ ರಚನೆ ಹಾಗೂ ಅದರ ವಿವಿಧ

ಅಂಗಗಳ ನಡುವಿನ ಕಾರ್ಯಾತ್ಮಕ ಸಂಬಂಧದ ಕುರಿತು ವೈಧಾನಿಕ ಮತ್ತು ಸೈದ್ಧಾಂತಿಕ ವಿಶ್ಲೇಷಣೆ.

structural functional theory: ರಾಚನಿಕ ಕಾರ್ಯಾತ್ಮಕ ಸಿದ್ಧಾಂತ.

structural imperative: ರಾಚನಿಕ ಅನಿವಾರ್ಯ; ರಾಚನಿಕ ಅಗತ್ಯ. ಒಂದು ಸಾಮಾಜಿಕ ವ್ಯವಸ್ಥೆಯಲ್ಲಿ ಅವಶ್ಯಕವಾದ ವರ್ತನಾ ವಿನ್ಯಾಸ.

structural interview: ರಾಚನಿಕ ಸಂದರ್ಶನ.

structural planning: ರಾಚನಿಕ ಯೋಜನೆ. ರಚನೆಗೆ ಸಂಬಂಧಿಸಿದ ಯೋಜನೆ.

structural psychology: ರಾಚನಿಕ ಮನೋವಿಜ್ಞಾನ; ಸ್ವರೂಪ ರಚನಾ ಮನೋವಿಜ್ಞಾನ.

structural requisite: ರಾಚನಿಕ ಅವಶ್ಯಕತೆ.

structural technique: ರಾಚನಿಕ ತಂತ್ರ.

structural theory: ರಾಚನಿಕ ಸಿದ್ಧಾಂತ.

structural unemployment: ರಾಚನಿಕ ನಿರುದ್ಯೋಗ. ಅರ್ಥವ್ಯವಸ್ಥೆಯ ರಚನೆಯ ಬದಲಾವಣೆಯಿಂದ ಉಂಟಾಗುವ ನಿರುದ್ಯೋಗ.

structural unit: ರಾಚನಿಕ ಘಟಕ.

structuralism: ರಚನಾ ವಾದ, ರಾಚನಿಕ ಸಿದ್ಧಾಂತ.

structure: ರಚನೆ; ಸಂರಚನೆ.

structure of consciousness: ಪ್ರಜ್ಞೆಯ ರಚನೆ.

structure of mind: ಚಿತ್ತ ಸ್ವರೂಪ; ಮನಸ್ಸಿನ ಸಂರಚನೆ.

structure of sense organs: ಸಂವೇದನೇಂದ್ರಿಯಗಳ ಸ್ವರೂಪ.

structured interview: ರಚಿತ ಸಂದರ್ಶನ.

structured observation: ರಚಿತ ಅವಲೋಕನ; ನಿಯಂತ್ರಿತ ಪರಿವೀಕ್ಷಣೆ.

struggle for existence: ಉಳಿವಿಗಾಗಿ ಹೋರಾಟ; ಜೀವನ ಸಂಗ್ರಾಮ.

struggle for survival: ಉಳಿವಿಗಾಗಿ ಹೋರಾಟ; ಅಸ್ತಿತ್ವಕ್ಕಾಗಿ ಹೋರಾಟ.

student counselling: ವಿದ್ಯಾರ್ಥಿ ಮಾರ್ಗದರ್ಶನ; ವಿದ್ಯಾರ್ಥಿ ಉಪಬೋಧೆ.

student counsellor: ವಿದ್ಯಾರ್ಥಿ ಮಾರ್ಗದರ್ಶಕ. ವಿದ್ಯಾರ್ಥಿಗಳ ಸುಪ್ತ ಕೌಶಲ್ಯಗಳನ್ನು ಗುರುತಿಸಿ ಅವರು ಆಯ್ಕೆ ಮಾಡಬಹುದಾದ ಉನ್ನತ ಶಿಕ್ಷಣ ಅಥವಾ ಉದ್ಯೋಗಕ್ಕೆ ಸಂಬಂಧಿಸಿದ ಮಾರ್ಗದರ್ಶನ ನೀಡುವಾತ.

stupa: ಸ್ತೂಪ. ಬುದ್ಧನ ಇಲ್ಲವೇ ಬೌದ್ಧರಿಂದ ಗೌರವಿಸಲ್ಪಡುವ ಇತರರ ಸ್ಮಾರಕಗಳನ್ನು ಹೊಂದಿದ ಗೋರಿ, ದಿಬ್ಬದಂತಹ ಕಟ್ಟಡ.

stupa on articles: ಪರಿಭೋಗಿಕ ವಸ್ತುಗಳ ಮೇಲಿನ ಸ್ತೂಪ.

stupa on relics: ಶಾರೀರಿಕ ಅವಶೇಷಗಳ ಮೇಲಣ ಸ್ತೂಪ.

stupi: ತಲೆಕಲ್ಲು; ಶಿಖರದ ಕಲಶವನ್ನೊಳಗೊಂಡ ಭಾಗ.

stupor: ಜಡತೆ; ಮಂಪರು; ಸೆಟೆತ. ಅರ್ಧ

ಅಥವಾ ಪೂರ್ತಿ ಪ್ರಜ್ಞೆ ಇಲ್ಲದ ಸ್ಥಿತಿ. ವಿಪರೀತವಾದ ನಿರ್ಭಾವ, ತೂಕಡಿಕೆ ಮತ್ತು ಮಾನಸಿಕ ಶಾರೀರಿಕ ಚಟುವಟಿಕೆಗಳು ಇಲ್ಲದಾಗುವುದು.

stuttering: ನೋಡಿ: stammering.

stuttering style: ಉಗ್ಗುವ ವೈಖರಿ (ವಿನ್ಯಾಸ).

style of life: ಜೀವನ ವಿಧಾನ; ಜೀವನ ವೈಶಿಷ್ಟ್ಯ. ಒಂದೇ ಸಾಮಾಜಿಕ ಶ್ರೇಣಿಯ ಜನರು ಹಂಚಿಕೊಳ್ಳುವ ಜೀವನ ವಿಧಾನ.

subcaste: ಉಪಜಾತಿ.

sub-caste endogamy: ಉಪಜಾತಿ; ಒಳಬಾಂಧವ್ಯ.

subcentralization: ಉಪ ಕೇಂದ್ರಿಯತೆ. ಮಾಧ್ಯಮಿಕ ಸೇವಾಕೇಂದ್ರಗಳು ಬೃಹತ್ ನಗರ ಪ್ರದೇಶಗಳಲ್ಲಿ ಬೆಳೆಯುವಂತಹ ಜೀವಪರಿಸರ ಪ್ರಕ್ರಿಯೆ.

subception: ಅವಚೇತನ. ಪರಿಜ್ಞಾನದ ಕೆಳಸ್ತರದಲ್ಲಿ ವರ್ತಿಸುವಿಕೆ.

subcommittee: ಉಪ ಸಮಿತಿ.

subconscious: ಸುಪ್ತ ಚೇತನ; ಚೇತನಕ್ಕಿಂತ ಕೆಳಗಿನ ಮಟ್ಟ. ಆದರೆ ಇದು ಅಚೇತನವಲ್ಲ; ಉಪಜಾಗ್ರತಾವಸ್ಥೆ.

subconscious experience: ಸುಪ್ತ ಚೇತನಾನುಭವ.

subconscious mental life: ಸುಪ್ತ ಚೇತನದ ಮಾನಸಿಕ ಜೀವನ.

subconscious mind: ಸುಪ್ತ ಚೇತನದ ಮನಸ್ಸು.

sub-continent: ಉಪಖಂಡ.

sub-culture: ಉಪ ಸಂಸ್ಕೃತಿ.

sub-culture conflict: ಉಪ ಸಾಂಸ್ಕೃತಿಕ ಸಂಘರ್ಷ.

sub-division: ಉಪವಿಭಜನೆ; ಉಪ ಭೇದ.

sub-division and fragmentation: ಉಪವಿಭಜನೆ ಮತ್ತು ಛಿದ್ರೀಕರಣ.

sub-family: ಉಪಕುಟುಂಬ.

sub-fileds: ಉಪ ಕ್ಷೇತ್ರಗಳು.

sub-group: ಉಪ ಸಮೂಹ. ದೊಡ್ಡ ಸಮೂಹದ ಒಂದು ಭಾಗವಾಗಿದ್ದು ಅದರ ಕಾರ್ಯಾತ್ಮಕ ಘಟಕವಾಗಿ ಕೆಲಸ ಮಾಡುವ ಸಮೂಹ. ಉದಾ: ಗ್ರಾಮ ಸಮುದಾಯದಲ್ಲಿ ವಿವಿಧ ಜಾತಿ ಸಮೂಹಗಳು, ಶಾಲಾ ಕಾಲೇಜುಗಳಲ್ಲಿ ಶಿಕ್ಷಕರ ಹಾಗೂ ವಿದ್ಯಾರ್ಥಿ ಸಮೂಹಗಳು.

sub-group culture: ಒಳಸಂಸ್ಕೃತಿ; ಉಪಸಮೂಹ ಸಂಸ್ಕೃತಿ.

sub imperialism: ಉಪಸಾಮ್ರಾಜ್ಯಶಾಹಿತ್ವ. ಇಸ್ಲಾಮಿಕ್ ಕ್ರಾಂತಿಯ ಮೊದಲು ಬ್ರೆಜಿಲ್, ಮೆಕ್ಸಿಕೋ, ದಕ್ಷಿಣ ಕೊರಿಯ, ಥೈವಾನ್, ಇರಾನ್ ಮುಂತಾದ ಶೀಘ್ರ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿನ ಕೈಗಾರಿಕೀಕರಣದ ವಿಭಿನ್ನ ಲಕ್ಷಣಗಳನ್ನು ವಿವರಿಸಲು ಉಪಯೋಗಿಸುವ ಪದ.

subject: ವಿಷಯ; ಪ್ರಯೋಗಪಶು. ಪ್ರಯೋಗಕ್ಕೊಳಗಾಗುವ ವ್ಯಕ್ತಿ.

subject centered: ವಿಷಯ ಕೇಂದ್ರಿತ.

subjective approach: ವ್ಯಕ್ತಿನಿಷ್ಠ ದೃಷ್ಟಿಕೋನ; ವ್ಯಕ್ತಿನಿಷ್ಠ ಸಮೀಪನ. ಸಾಮಾಜಿಕ-ಸಾಂಸ್ಕೃತಿಕ ಅಧ್ಯಯನಗಳಲ್ಲಿ ಸಂಶೋಧನಕಾರನು ತನ್ನ ವೈಯಕ್ತಿಕ

ಅಭಿಪ್ರಾಯ ಮತ್ತು ಮೌಲ್ಯಗಳಿಗೆ ಪ್ರಾಧಾನ್ಯತೆ ನೀಡಿ ಮಾಡುವ ಅಧ್ಯಯನ.

subjective criteria: ವ್ಯಕ್ತಿನಿಷ್ಠ ಪ್ರಮಾಣಕ; ಪಕ್ಷಪಾತ ಪ್ರಮಾಣಕ.

subjective experience: ವ್ಯಕ್ತಿನಿಷ್ಠ ಅನುಭವ.

subjective idealism: ವ್ಯಕ್ತಿನಿಷ್ಠ ವಿವೇಚನೆ; ವ್ಯಕ್ತಿನಿಷ್ಠ ಆದರ್ಶ ರೂಪ ಗ್ರಹಣ.

subjective judgement: ಆತ್ಮನಿಷ್ಠ ನಿರ್ಣಯ; ವ್ಯಕ್ತಿನಿಷ್ಠ ನಿರ್ಣಯ.

subjective observation: ವ್ಯಕ್ತಿನಿಷ್ಠ ಅವಲೋಕನ.

subjective psychology: ಆತ್ಮನಿಷ್ಠ (ವ್ಯಕ್ತಿನಿಷ್ಠ) ಮನೋವಿಜ್ಞಾನ.

subjective social class: ವ್ಯಕ್ತಿನಿಷ್ಠ ಸಾಮಾಜಿಕ ವರ್ಗ. ಜನರು ಸಮಾಜದಲ್ಲಿ ತಮ್ಮನ್ನು ಯಾವ ಸ್ಥಾನದಲ್ಲಿರಿಸಿಕೊಂಡಿದ್ದಾರೆಂಬ ಆಧಾರದ ಮೇಲೆ ಮಾಡುವ ಸಾಮಾಜಿಕ ವರ್ಗದ ವ್ಯಾಖ್ಯಾನ. ಕೆಳವರ್ಗ, ಮಧ್ಯಮವರ್ಗ, ಉನ್ನತವರ್ಗ ಹೀಗೆ ವ್ಯಕ್ತಿಯು ಯಾವ ವರ್ಗಕ್ಕೆ ತಾನು ಸೇರಿದವನೆಂದು ಗುರುತಿಸಿಕೊಳ್ಳುವಿಕೆ.

subjective spirit: ವ್ಯಕ್ತಿನಿಷ್ಠ ಚೈತನ್ಯ.

subjectivism: ವ್ಯಕ್ತಿನಿಷ್ಠವಾದ.

subjectivity: ಆತ್ಮನಿಷ್ಠತೆ; ವ್ಯಕ್ತಿ ನಿಷ್ಠತೆ. ಒಬ್ಬ ವ್ಯಕ್ತಿಯ ವಿಶಿಷ್ಟ ಹಾಗೂ ಖಾಸಗಿ ಅನುಭವಗಳನ್ನು ಪ್ರತಿಫಲಿಸುವ ಗುಣ.

sub-lease: ಉಪಗೇಣಿ; ಉಪಗುತ್ತಿಗೆ.

sub-legislation: ಉಪಶಾಸನ.

sublimation: ಉದಾತ್ತೀಕರಣ; ಉತ್ತಮೀಕರಣ. ಒಂದು ಮನಪ್ರವೃತ್ತಿಯ ಶಕ್ತಿಯನ್ನು ಉನ್ನತ ಉದ್ದೇಶದೆಡೆಗೆ ತಿರುಗಿಸುವಿಕೆ.

subliminal: ಅವಸೀಮಾ; ನಿರ್ದಿಷ್ಟ ಮಟ್ಟಕ್ಕಿಂತ ಕೆಳಗಿನ.

subliminal self: ಅವಸೀಮಾ ಅಹಂ. ವ್ಯಕ್ತಿಯ ಅಹಂಗಿಂತ ಕೆಳಮಟ್ಟ.

submarine archaeology: ಸಾಗರ ಪುರಾತತ್ವ; ಸಾಗರ ತಳಪ್ರಾಕ್ತನಶಾಸ್ತ್ರ.

sub-mind: ಸುಪ್ತಮನ; ಒಳಮನ.

submission: ಶರಣಾಗತಿ; ಅಧೀನತೆ.

submissive disposition: ಶರಣಾಗತ ಪ್ರವೃತ್ತಿ; ಅಧೀನ ಪ್ರವೃತ್ತಿ.

subnormal: ಅಪಸಾಮಾನ್ಯ.

subnormal intelligence: ಅಪಸಾಮಾನ್ಯ ಬುದ್ಧಿಶಕ್ತಿ.

subordinate court: ಅಧೀನ ನ್ಯಾಯಾಲಯ.

subordinate isolation: ಅಧೀನ ಪ್ರತ್ಯೇಕತೆ. ಅಧೀನದಲ್ಲಿದ್ದ ರಾಜ್ಯಗಳು ಪ್ರತ್ಯೇಕತೆಯ ಸ್ಥಿತಿಯಲ್ಲಿ ಇರುವಂತಹ ನೀತಿ.

subordinate legislation: ನೋಡಿ: sub-legislation.

subordinate office: ಅಧೀನ ಕಛೇರಿ.

subordinate principle: ಉಪನಿಯಮ.

subordination: ಪರಾಧೀನತೆ; ಅಧೀನತೆ.

subordination to group: ಸಮೂಹಾಧೀನತೆ.

sub sample: ಉಪ ಮಾದರಿ.

subsidiary: ಸಹಾಯಕ; ಉಪಾಂಗ.

subsidiary alliance system: ಸಹಾಯಕ ಸೈನ್ಯ ಪದ್ಧತಿ. ಲಾರ್ಡ್ ವೆಲ್ಲೆಸ್ಲಿಯು ಪರಾಜಿತ ರಾಜರುಗಳೊಡನೆ ಮಾಡಿಕೊಳ್ಳುತ್ತಿದ್ದ ಮೈತ್ರಿ ಒಪ್ಪಂದ.

subsidiary farm: ಸಹಾಯಕ ಸಾಗುವಳಿ ಕ್ಷೇತ್ರ.

subsidiary sons: ಅಧೀನ ಪುತ್ರರು; ಪರ್ಯಾಯ ಪುತ್ರರು.

subsidy: ಸಹಾಯಧನ. ನಿರ್ದಿಷ್ಟ ಸಾಮಗ್ರಿ ಉತ್ಪಾದಿಸುವ ಅಥವಾ ಸೇವೆ ನೀಡುವ ಖಾಸಗಿ ಉದ್ದಿಮೆಗಳಿಗೆ ಸರಕಾರವು ಯಾವುದೇ ರೂಪದಲ್ಲಿ ನೀಡುವ ಧನ ಸಹಾಯದ ಕೊಡುಗೆ. ಉದಾ: ರೈತರಿಗೆ, ಸಣ್ಣ ಕೈಗಾರಿಕೆ ಉದ್ಯಮಿಗಳಿಗೆ ಸಿಗುವ ಸಹಾಯ ಧನ.

subsistence farming: ಜೀವನಾಧಾರ ಬೇಸಾಯ.

subsistence population: ಜೀವನಾಧಾರವುಳ್ಳ ಜನಸಂಖ್ಯೆ. ಹೊಟ್ಟೆ ಪಾಡಿನ ಸ್ಥಿತಿಗತಿ ಮಾತ್ರ ಉಳ್ಳ ಜನಸಂಖ್ಯೆ.

subsistence sector: ಜೀವನಾಧಾರ ವಲಯ.

subsistence theory of wage: ಕೂಲಿಯ ಜೀವನಾಧಾರಿತ ಸಿದ್ಧಾಂತ.

subspecies: ಉಪಜೀವಿಗಳು.

substance soul: ಭೂತ ವಸ್ತುವಿನ ಆತ್ಮ.

substantive document: ವಾಸ್ತವಿಕ ದಾಖಲೆ; ಮಹತ್ವದ ದಾಖಲೆ.

substantive matter: ಮಹತ್ವದ ವಿಷಯ.

substantive session: ಮಹತ್ವದ ಅಧಿವೇಶನ.

substantive theory: ವಸ್ತು ಪ್ರಮಾಣಿತ ಸಿದ್ಧಾಂತ. ವಾಸ್ತವ ಪ್ರಪಂಚದ ಸಂಗತಿ ಗಳ ಪ್ರಮಾಣಿತ ಆಧಾರಗಳನ್ನಷ್ಟೆ ತಳಹದಿಯನ್ನಾಗಿ ಇಟ್ಟುಕೊಂಡು ಸಾಮಾಜಿಕ ಸಂಬಂಧಗಳನ್ನು ವಿವರಿಸುವ ಸಿದ್ಧಾಂತ. ಇದು ಊಹಾತ್ಮಕ ಹಾಗೂ ವೈಧಾನಿಕ ಪರಿಕಲ್ಪನೆಗಳಿಗೆ ಅವಕಾಶವೀಯುವುದಿಲ್ಲ.

substitutability: ಪರ್ಯಾಯತೆ.

substitute good: ಬದಲಿ ವಸ್ತು; ಪರ್ಯಾಯ ವಸ್ತು.

substitution: ಪ್ರತಿನಿದಾನ.

substitution effect: ಪ್ರತಿನಿದಾನ ಪರಿಣಾಮ.

substructure: ಉಪರಚನೆ. ಸಾಮಾಜಿಕ ರಚನೆಯ ಉಪವಿಭಜನೆ.

subsystem: ಉಪವ್ಯವಸ್ಥೆ.

subtenant: ಉಪಗೇಣಿದಾರ.

subtler emotion: ಸೂಕ್ಷ್ಮ ಸಂವೇಗ.

suburb: ಉಪನಗರ.

suburbanization: ಉಪನಗರೀಕರಣ.

subversion: ಬುಡಮೇಲು; ವಿದ್ರೋಹ.

subversion group: ವಿದ್ರೋಹಿದಳ. ಬುಡಮೇಲು ಅಥವಾ ವಿನಾಶಕಾರಿ ಕೃತ್ಯಗಳನ್ನು ನಡೆಸುವ ಸಮೂಹ.

subversive activity: ಬುಡಮೇಲು ಕ್ರಿಯೆ; ವಿದ್ರೋಹೀ ಚಟುವಟಿಕೆ. ಒಂದು ರಾಷ್ಟ್ರದ ಅಥವಾ ಸಮುದಾಯದ ಧರ್ಮ, ನೀತಿ, ರಾಜ್ಯಾಂಗಗಳನ್ನು ತಲೆಕೆಳಗೆ ಮಾಡುವ ಕ್ರಿಯೆ.

subvocal thought: ಕೆಳಧ್ವನಿ ಚಿಂತನೆ.

succession: ಉತ್ತರಾಧಿಕಾರತ್ವ. ಒಂದು ಸಾಮಾಜಿಕ ಪಂಗಡದಿಂದ ಶ್ರೇಣಿ ಆದ್ಯತೆ ಅಥವಾ ಅಧಿಕಾರಗಳನ್ನು ಪಡೆಯುವ ರಕ್ತ ಸಂಬಂಧ ಅಥವಾ ಇತರ ಮೂಲಗಳು.

succession of events: ಘಟನೆಗಳ ಪರಂಪರೆ; ಘಟನೆಗಳ ಸರಮಾಲೆ.

successive age level: ಅನುಕ್ರಮಿಕ ವಯೋಮಟ್ಟ.

successor: ಉತ್ತರಾಧಿಕಾರಿ.

sudden impulse: ಹಠಾತ್ತಾದ ಆವೇಗ.

suffrage: ಮತಾಧಿಕಾರ. ಚುನಾವಣೆಯಲ್ಲಿ ಮತಚಲಾಯಿಸುವ ಹಕ್ಕು.

suffragists: ಸ್ತ್ರೀಮತವಾದಿಗಳು. ಮಹಿಳೆಯರಿಗೂ ಮತದಾನ ಹಕ್ಕು ಬೇಕೆಂದು ಪ್ರತಿಪಾದಿಸಿದ ಮಹಿಳಾ ಚಳವಳಿಯ ಸದಸ್ಯರು.

suggestibility: ಸಂಸೂಚ್ಯನಾಶೀಲತೆ.

suggestion: ಸಲಹೆ; ಸೂಚನೆ.

suit: ದಾವೆ ಹೊಂದಿಸು; ಹೆಣ್ಣೋಲೈಕೆ. ತನ್ನನ್ನು ಮದುವೆಯಾಗೆಂದು ಹೆಣ್ಣನ್ನು ಅನುನಯಿಸುವುದು.

suitor service: ಕನ್ಯಾರ್ಥಿ ಸೇವೆ. ವಧೂವರರ ಪರಸ್ಪರ ಪರಿಚಯ ಮಾಡುವ ದಲ್ಲಾಳಿತನ.

sulkiness: ದುಮ್ಮಾನತೆ; ಅಂತರುದ್ವೇಗ.

summary action: ಕ್ಷಿಪ್ರ ಕ್ರಮ; ಶೀಘ್ರ ಕ್ರಮ.

summary determination: ಕ್ಷಿಪ್ರ ನಿರ್ಧಾರ.

summary jurisdiction: ಕ್ಷಿಪ್ರ ನ್ಯಾಯಾಧಿಕಾರ. ಶೀಘ್ರವಾಗಿ ಅಥವಾ ಕ್ಷಿಪ್ರವಾಗಿ ನಡೆಸುವ ಕ್ರಮ ಅಥವಾ ಕಾರ್ಯಗಳ ಅಧಿಕಾರ ವ್ಯಾಪ್ತಿ. ಉದಾ: ಅತ್ಯಂತ ಕೆಳಹಂತದಲ್ಲಿರುವ ನ್ಯಾಯಾಲಯಗಳು ಕ್ಷಿಪ್ರ ನ್ಯಾಯದಾನ ಮಾಡುವ ಅಧಿಕಾರ ಹೊಂದಿರುತ್ತವೆ.

summit diplomacy: ಶೃಂಗ ರಾಯಭಾರ. ವಿದೇಶಾಂಗ ಸಚಿವ ಅಥವಾ ದೇಶದ ಮುಖ್ಯಸ್ಥರೇ ಆದ ಅಧ್ಯಕ್ಷ ಇಲ್ಲವೇ ಪ್ರಧಾನ ಮಂತ್ರಿಗಳು ತಾವೇ ಖುದ್ದಾಗಿ, ನೇರವಾಗಿ ವ್ಯವಹರಿಸುವ ರಾಯಭಾರ.

summit evaluation: ಸಂಕಲನಾತ್ಮಕ ಮೌಲ್ಯಮಾಪನ.

summons: ಕರೆಯಾಜ್ಞೆ; ಸಭೆಕರೆ.

sumptuary allowance: ಆತಿಥ್ಯ ಭತ್ಯ. ಉನ್ನತ ಅಧಿಕಾರಸ್ಥರು ತಮ್ಮ ರಾಜತಾಂತ್ರಿಕ ಅತಿಥಿಗಳ ಉಪಚಾರದ ವೆಚ್ಚಗಳಿಗಾಗಿ ಪಡೆಯುವ ಭತ್ಯೆ.

sun spot theory: ಸೂರ್ಯ ಬಿಂದು ಸಿದ್ಧಾಂತ.

sunk capital: ಏಕೋಪಯೋಗಿ ಬಂಡವಾಳ; ನಿಕ್ಷೇಪ ಬಂಡವಾಳ. ಒಂದು ನಿರ್ದಿಷ್ಟವಾದ ಉದ್ದೇಶಕ್ಕಾಗಿ ಮಾತ್ರ ಬಳಸಲಾಗುವ ಬಂಡವಾಳ.

sunk cost: ಕ್ಷಯಿಸುವ ವೆಚ್ಚ.

sunni: ಸುನ್ನಿ ಪಂಥ. ಮುಸಲ್ಮಾನರಲ್ಲಿರುವ ಎರಡು ಪಂಗಡಗಳಲ್ಲೊಂದು.

superannuation: ನಿವೃತ್ತಿ. ಪ್ರಾಯದ ಆಧಾರದಲ್ಲಿ ಅಥವಾ ಶಕ್ತಿಹೀನತೆಯ ನೆಲೆಯಲ್ಲಿ ನಿವೃತ್ತಿಗೊಳಿಸುವಿಕೆ.

superannuation age: ನಿವೃತ್ತಿ ವಯಸ್ಸು.

super cabinet: ಮಹಾಸಂಪುಟ; ಅಧಿಸಂಪುಟ. ಆಡಳಿತ ಮತ್ತು ರಾಜಕೀಯದ ಮೇಲೆ ಮಂತ್ರಿಮಂಡಲವು ಪ್ರಭಾವ ಬೀರುವ ಪದ್ಧತಿ.

super consciousness: ಮೇಲು ಪ್ರಜ್ಞೆ; ಮೇಲು ಸ್ತರದ ಪ್ರಜ್ಞೆ.

super ego: ಮಹದಹಂ. ಮನೋವಿಶ್ಲೇಷಣೆಯ ಪ್ರಕಾರ ಆತ್ಮಸಾಕ್ಷಿ.

super human power: ಅತಿಮಾನುಷ ಶಕ್ತಿ.

super-man: ಅತಿಮಾನವ.

super ministerial power: ಉನ್ನತ ಶಾಸನಾಧಿಕಾರ; ಉನ್ನತಾಧಿಕಾರ. ಭಾರತದ ರಾಷ್ಟ್ರಪತಿಯು ಮಂತ್ರಿಮಂಡಲದ ಸಲಹೆಯಂತೆ ತನ್ನ ಅಧಿಕಾರವನ್ನು ಚಲಾಯಿಸುತ್ತಾನೆ. ಆದರೆ ಕೆಲವೊಂದು ಸಂದರ್ಭದಲ್ಲಿ ಮಂತ್ರಿಮಂಡಲದ ಸಲಹೆ ಇಲ್ಲದೇ ಚಲಾಯಿಸುವ ಅಧಿಕಾರವನ್ನು ಉನ್ನತಾಧಿಕಾರ ಎನ್ನಲಾಗುತ್ತದೆ.

super multiplier: ಉನ್ನತ ಗುಣಕ. ಗುಣಕ ಮತ್ತು ವೇಗೋತ್ಕರ್ಷಗಳ ಪರಸ್ಪರ ಕಾರ್ಯಾಚರಣೆ.

super natural: ಅಲೌಕಿಕ; ಅತಿ ಪ್ರಾಕೃತಿಕ; ಅತಿಲೌಕಿಕ.

super natural adversary: ಅತಿಮಾನುಷ ವಿರೋಧಿ.

super natural element: ಅತಿಮಾನುಷ ಅಂಶ.

super natural force: ಅಲೌಕಿಕ ಶಕ್ತಿ.

super natural helper: ಅತಿಮಾನುಷ ಸಹಾಯಕ.

super natural power: ನೋಡಿ: super natural force.

super natural tale: ಅತಿಮಾನುಷ ಕತೆ.

super normal: ಅತಿ ಪ್ರಾಕೃತ; ಅಸಾಧಾರಣ.

super normal ability: ಅಸಾಧಾರಣ ಸಾಮರ್ಥ್ಯ.

super normal profit: ಅತಿಲಾಭ; ಅಸಾಧಾರಣ ಲಾಭ.

super-ordination: ಉನ್ನತ ಸ್ಥಾನೀಯ; ಉನ್ನತ ಮೌಲ್ಯದ.

super-organic: ದೇಹಾತೀತ; ಜೀವಾತೀತ. ಉದಾ: ಸಂಸ್ಕೃತಿ.

super-organic environment: ಜೀವಾತೀತ ಪರಿಸರ.

super power: ಅಗ್ರಮಾನ್ಯ ಶಕ್ತಿ; ಅಗ್ರಮಾನ್ಯ ರಾಷ್ಟ್ರ. ಆರ್ಥಿಕ, ಸೈನ್ಯ, ಕೈಗಾರಿಕೆ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಹೆಚ್ಚು ಬಲಾಢ್ಯವಾಗಿರುವ ರಾಷ್ಟ್ರ. ಉದಾ: ೨೦ನೇ ಶತಮಾನದ ಅಮೇರಿಕಾ, ಜಪಾನ್, ಇತ್ಯಾದಿ.

super sensuous: ಅತಿ ಸಂವೇದಕ, ಸಂವೇದನಾತೀತ.

super sensuous experience: ಅತಿ ಸಂವೇದನಾತೀತ ಅನುಭವ.

super stratum: ಮೇಲು ಸ್ತರ; ಉನ್ನತ ಸ್ತರ.

super structure: ಹೊರಹೊದಿಕೆ; ಬಾಹ್ಯ ರಚನೆ.

superior council of the judiciary: ವರಿಷ್ಠ ನ್ಯಾಯಾಂಗ ಮಂಡಳಿ.
superior nation: ಶ್ರೇಷ್ಠ ರಾಷ್ಟ್ರ; ಪ್ರಬಲ ರಾಷ್ಟ್ರ.
superiority complex: ಮೇಲರಿಮೆ; ಶ್ರೇಷ್ಠತಾ ಭಾವನೆ.
superiority feeling: ನೋಡಿ: superiority complex.
superstition: ಮೂಢನಂಬಿಕೆ. ಧಾರ್ಮಿಕವಾಗಿ ಅಥವಾ ವೈಜ್ಞಾನಿಕವಾಗಿ ನೈಜ ತಳಹದಿ ಇಲ್ಲದ ನಂಬಿಕೆ.
superstitious mind: ಮೂಢ ನಂಬಿಕೆಯ ಮನಸ್ಸು.
supervised study: ಮೇಲ್ವಿಚಾರಣೀಯ ಅಧ್ಯಯನ.
supervisory function: ಮೇಲ್ವಿಚಾರಣಾ ಕಾರ್ಯ.
supplementary budget: ಪೂರಕ ಆಯವ್ಯಯ; ಪೂರಕ ಮುಂಗಡ ಪತ್ರ.
supplementary cost: ಪೂರಕ ವೆಚ್ಚ.
supplementary detailed account: ವಿವರವಾದ ಪೂರಕ ಲೆಕ್ಕ. ಹಲವಾರು ಕಡೆಯಿಂದ ಸಂದಾಯವಾದ ಸರಕಾರದ ಆಸ್ತಿ, ಸಾಲಗಳು, ರಸೀದಿಗಳು ಮತ್ತು ಖರ್ಚುಗಳಿಗೆ ಸಂಬಂಧಿಸಿದ ವಿವರವಾದ ಲೆಕ್ಕ.
supplementary discount: ಪೂರಕ ಸೋಡಿ.
supplementary financing facility: ಪೂರಕ ಹಣಕಾಸು ಸೌಲಭ್ಯ.
supplementary grant: ಪೂರಕ ಅನುದಾನ. ಆಯವ್ಯಯದಲ್ಲಿ ನಿಗದಿ ಮಾಡಿದ ಮೊತ್ತವನ್ನು ಹೊರತುಪಡಿಸಿ ಹೊಸ ಬೇಡಿಕೆ ಅಂದಾಜುಗಳನ್ನು ಶಾಸಕಾಂಗದಲ್ಲಿ ಮಂಡಿಸಿ ಶಾಸಕಾಂಗದ ಮಂಜೂರಾತಿ ಪಡೆಯುವುದು.
supplementary labour: ಪೂರಕ ಶ್ರಮ.
supplementary question: ಉಪ ಪ್ರಶ್ನೆ; ಪೂರಕ ಪ್ರಶ್ನೆ.
supplementary sector: ಪೂರಕ ವಲಯ.
supplementary service: ಪೂರಕ ಸೇವೆ.
supply elasticity: ಪೂರೈಕೆಯ ಸ್ಥಿತಿಸ್ಥಾಪಕತೆ.
supply price: ಪೂರೈಕೆ ಬೆಲೆ.
supply schedule: ಪೂರೈಕೆ ಅನುಸೂಚಿ.
supply side economics: ಪೂರೈಕೆ ಪ್ರಧಾನ ಅರ್ಥಶಾಸ್ತ್ರ.
support price: ಬೆಂಬಲ ಬೆಲೆ.
suppressed inflation: ಅದುಮಿಟ್ಟ ಹಣದುಬ್ಬರ; ಹತ್ತಿಕ್ಕಿದ ಹಣದುಬ್ಬರ. ಪರಿಸ್ಥಿತಿಯ ಒತ್ತಡಗಳಿದ್ದರೂ ಸರಕಾರದ ನೇರ ಬೆಲೆ ನಿಯಂತ್ರಣ ಹಾಗೂ ವಸ್ತುಗಳ ಪಡಿತರ ಪದ್ಧತಿಗಳಿಂದಾಗಿ ಹಣದುಬ್ಬರವು ಕಾಣಿಸದ ಸ್ಥಿತಿ.
suppression: ದಮನ. ಭಾವನೆಗಳನ್ನು ಹತ್ತಿಕ್ಕುವುದು. ಇದು ಮನೋಬೇನೆಗಳಿಗೆ ಮೂಲಕಾರಣವಾಗುವುದು.
supra consciousness: ಅತೀತ ಚೇತನ.
supra organic evolution: ಜೀವಾತೀತ ವಿಕಾಸ. ಜೀವಿಗಳ ವಿಕಾಸ ಕ್ರಮದಲ್ಲೇ ಸಮಾಜದ ವಿಕಾಸವು ನಡೆದಿದೆ ಎಂಬ ಸಿದ್ಧಾಂತ.

supra social sanction: ಸಮಾಜಾತೀತ ನಿರ್ಬಂಧ.

supra intellectual: ಅತಿಬುದ್ಧಿಶಾಲಿ; ಅತಿಪ್ರಾಜ್ಞ.

supremacy: ಪ್ರಾಬಲ್ಯ; ಅಧಿಪತ್ಯ; ಸಾರ್ವಭೌಮಾಧಿಪತ್ಯ.

supremacy of the constitution: ಸಂವಿಧಾನದ ಶ್ರೇಷ್ಠತೆ. ಸರಕಾರದ ಎಲ್ಲಾ ಕಾಯಿದೆಗಳು ಮತ್ತು ಆದೇಶಗಳು ಸಂವಿಧಾನ ಬದ್ಧವಾಗಿರಬೇಕಾದ ಅವಶ್ಯಕತೆ.

supremacy of judiciary: ನ್ಯಾಯಾಂಗ ಶ್ರೇಷ್ಠತೆ. ನ್ಯಾಯಾಂಗವು ಶಾಸಕಾಂಗ ಮತ್ತು ಕಾರ್ಯಾಂಗದಿಂದ ಸ್ವತಂತ್ರವಾಗಿದ್ದು ಕಾಯಿದೆಗಳ ಅರ್ಥ ವಿವರಣೆಕೊಡುವ ಅಧಿಕಾರ ಹೊಂದಿರುವುದು. ಶಾಸಕಾಂಗ ನಿರ್ಮಿತ ಕಾಯಿದೆಯು ಸಂವಿಧಾನದ ನಿಯಮಗಳಿಗೆ ವ್ಯತಿರಿಕ್ತವಾಗಿದ್ದಲ್ಲಿ ಅದನ್ನು ಸಂವಿಧಾನ ಬಾಹಿರವೆಂದು ಘೋಷಿಸುವ ನ್ಯಾಯಾಂಗದ ಅಧಿಕಾರ.

supremacy of the parliament: ಲೋಕಸಭೆಯ ಸಾರ್ವಭೌಮತ್ವ.

supremacy of the power: ಬಲ ಪಾರಮ್ಯ.

supremacy of spirit: ಆತ್ಮ ಪಾರಮ್ಯ;

supreme administration: ಪರಮಾಡಳಿತ.

supreme commander: ಮಹಾದಂಡ ನಾಯಕ. ಉದಾ: ಭಾರತದಲ್ಲಿ ರಾಷ್ಟ್ರಪತಿ.

supreme court: ಸರ್ವೋಚ್ಚ ನ್ಯಾಯಾಲಯ.

supreme end: ಅಂತಿಮ ಧ್ಯೇಯ; ಪರಮ ಗುರಿ.

supreme law: ಅತ್ಯುಚ್ಚ ಕಾಯಿದೆ.

supreme power: ಪರಮಾಧಿಕಾರ. ನೋಡಿ : sovereignty.

supreme rule: ಶ್ರೇಷ್ಠ ನಿಯಮ; ಅತ್ಯುಚ್ಚ ಕಾನೂನು.

supreme scriptures: ಶ್ರೇಷ್ಠ ಧರ್ಮಗ್ರಂಥಗಳು.

sur charge: ಅಧಿಕ ಶುಲ್ಕ; ಆದಾಯದ ಮೇಲಿನ ಅಧಿಕ ತೆರಿಗೆ.

surface meaning: ಮೇಲ್ಪದರದ ಅರ್ಥ.

surplus budget: ಮಿಗತೆ ಮುಂಗಡ ಪತ್ರ.

surplus land: ಹೆಚ್ಚುವರಿ ಭೂಮಿ.

surplus profit: ಮಿಗತೆ ಲಾಭ; ಹೆಚ್ಚುವರಿ ಲಾಭ.

surplus revenue: ಹೆಚ್ಚುವರಿ (ಮಿಗತೆ) ಆದಾಯ.

surplus theory of value: ಮಿಗತೆ ಮೌಲ್ಯ ಸಿದ್ಧಾಂತ.

surplus value: ಮಿಗತೆ ಮೌಲ್ಯ.

surrealism: ಅದ್ಭುತ ವಾಸ್ತವವಾದ. ಅಜ್ಞಾನದಿಂದ ಪೂರ್ಣ ಬಿಡುಗಡೆಗೊಂಡು ಸಾಮಾಜಿಕ, ವೈಜ್ಞಾನಿಕ, ತಾತ್ವಿಕ ಮೌಲ್ಯಗಳಲ್ಲಿ ತೀವ್ರ ಪರಿವರ್ತನೆ ತರಲು ಸಾಧ್ಯವೆಂಬ ವಾದ. ಇದು ತೀರಾ ಪ್ರಾಪಂಚಿಕ ಸಂಗತಿಗಳನ್ನು ಅದ್ಭುತ ಸಾಧ್ಯತೆಗಳನ್ನೂ ಜೊತೆ ಜೊತೆಯಾಗಿ ಚಿತ್ರಿಸುತ್ತದೆ.

surrender: ಶರಣಾಗುವುದು; ಶರಣಾಗತಿ.

surrender value: ಅರ್ಪಿತ ಮೌಲ್ಯ. ಪಾಲಿಸಿಯ ಅವಧಿ ಪೂರೈಸುವ ಮುನ್ನ

ಅದನ್ನು ವಿಮಾ ಕಂಪನಿಗೆ ಒಪ್ಪಿಸಿಕೊಟ್ಟಾಗ ಪಾಲಿಸಿದಾರನಿಗೆ ಕಂಪೆನಿ ಪಾವತಿ ಮಾಡುವ ಮೌಲ್ಯ.

surrogate: ಪರ್ಯಾಯ ಪಿತೃ ಅಥವಾ ಸಂಬಂಧಿ.

surrogate parenthood: ಬದಲಿ ಮಾತೃತ್ವ. ಹೆಣ್ಣೊಬ್ಬಳು ತಾಯಿಯಾಗಲು ಅಸಮರ್ಥಳಾದಾಗ ಅವಳ ಬದಲಿಗೆ ಇನ್ನೊಬ್ಬಳು ಮಗುವನ್ನು ಹೆತ್ತು ಅವಳಿಗೆ ಕೊಡುವುದು.

survey: ಸಮೀಕ್ಷೆ.

survey method: ಸಮೀಕ್ಷಾ ವಿಧಾನ.

survival: ಉಳಿಕೆ; ಬದುಕಿ ಉಳಿಯುವಿಕೆ. ಆದಿ ಅಥವಾ ಪುರಾತನ ಕಾಲದಿಂದ ಸಮಕಾಲೀನ ಸಂಸ್ಕೃತಿಯವರೆಗೆ ಅಸ್ತಿತ್ವದಲ್ಲಿ ಉಳಿದು ಬಂದಿರುವುದು.

survival of the fittest: ಬಲಾಧಿಕ್ಯನ ಉಳಿವು; ಬಲಿಷ್ಠನಾದವನ ಉಳಿವು. ಮನುಷ್ಯನು ನಾಗರಿಕ ಬದುಕಿಗೆ ಬರುವ ಮೊದಲು ಅವನ ಅನಾಗರಿಕ ಜೀವನವನ್ನು ನಿರ್ಧರಿಸುತ್ತಿದ್ದ ತತ್ವ. ಯಾರಿಗೆ ಶಕ್ತಿ ಇತ್ತೋ ಅವನು ಮಾತ್ರ ಇತರರೊಂದಿಗೆ ಹೋರಾಟ ನಡೆಸಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸಾಧ್ಯವಿತ್ತು.

survival of species: ನೋಡಿ: evolutionary theory.

survival theory: ಅವಶೇಷ ಸಿದ್ಧಾಂತ; ಪಳೆಯುಳಿಕೆ ಸಿದ್ಧಾಂತ.

survivorship: ಮರಣಾನಂತರ ಉಳಿದ ಹಕ್ಕು.

suspended animation: ಅಮಾನತ್ತಿನಲ್ಲಿಡುವಿಕೆ. ರಾಜ್ಯಗಳಲ್ಲಿ ರಾಷ್ಟ್ರಪತಿ ಆಡಳಿತವನ್ನು ಘೋಷಿಸಿದ ಮೇಲೆ ಕೆಲವೊಂದು ಸಂದರ್ಭಗಳಲ್ಲಿ ವಿಧಾನಸಭೆಯನ್ನು ವಿಸರ್ಜಿಸದೆ ಅಮಾನತ್ತಿನಲ್ಲಿಡುವುದು.

suspense account: ಅಮಾನತ್ತು ಲೆಕ್ಕ.

suspense fund: ಅಮಾನತ್ತು ನಿಧಿ.

suspension: ನಿಲಂಬನ; ಅಮಾನತ್ತೀಕರಣ.

suspensive veto: ತಾತ್ಕಾಲಿಕ ತಡೆ; ತಾತ್ಕಾಲಿಕ ಪ್ರತಿಭೇದಾಧಿಕಾರ. ಸಂಸತ್ತಿನಲ್ಲಿ ಅಂಗೀಕಾರ ಪಡೆದ ಮಸೂದೆಗೆ ರಾಷ್ಟ್ರಪತಿ ತಮ್ಮ ಅಂಕಿತ ನೀಡದೆ ಅದರ ಪುನರ್ ಪರಿಶೀಲನೆಗೆ ವಾಪಸ್ಸು ಸಂಸತ್ತಿಗೆ ಕಳುಹಿಸುವುದನ್ನು ತಾತ್ಕಾಲಿಕ ಪ್ರತಿಭೇದಾಧಿಕಾರ ಎಂದು ಕರೆಯಲಾಗುವುದು.

sustainable development: ಸಂಪೋಷಣಾ ಅಭಿವೃದ್ಧಿ; ಜೀವನಾಧಾರ ಪ್ರಗತಿ.

sustaining forces: ಸಂಪೋಷಣಾ ಶಕ್ತಿಗಳು.

sustaining system: ಪೋಷಕ ವ್ಯವಸ್ಥೆ; ದೃಢವ್ಯವಸ್ಥೆ.

sustenance relations: ಸಂಪೋಷಣಾ ಸಂಬಂಧಗಳು.

suttee: ನೋಡಿ: sati system.

suture: ಮೆದುಳು ಕವಚಕ್ಕೆ ಅನೇಕ ಎಲುಬುಗಳನ್ನು ಸೇರಿಸುವ ಜೋಡಣೆ.

swadeshi movement : ಸ್ವದೇಶೀ ಚಳವಳಿ.

swayamvara: ಸ್ವಯಂವರ; ಸ್ವಯಂ

ಆಯ್ಕೆಮಾಡುವುದು. ವಿವಾಹಾರ್ಥ ಕರೆದ ಸಭೆಯಲ್ಲಿ ಯೋಗ್ಯನೆನಿಸಿದ ಯಾರಾದ ರೊಬ್ಬರನ್ನು ರಾಜಕುಮಾರಿಯು ತನ್ನ ಪತಿ ಯೆಂದು ಆರಿಸುವ ವಿಧಾನ.

swearing in: ಪ್ರಮಾಣವಚನ ಸ್ವೀಕಾರ.

swearing in ceremony: ಪ್ರಮಾಣ ವಚನ ಸ್ವೀಕಾರ ಸಮಾರಂಭ.

syllabification: ಪದಗಳ ವಿಭಜನೆ.

symbiosis: ಸಹಜೀವನ; ಸಹಬಾಳ್ವೆ. ವಿಜಾತೀಯ ಗುಂಪುಗಳ ಪರಸ್ಪರಾವ ಲಂಬನೆ.

symbiotic child: ಸಹಜೀವಿ ಮಗು.

symbol: ಸಂಕೇತ; ಚಿಹ್ನೆ; ಪ್ರತೀಕ.

symbolic: ಸಾಂಕೇತಿಕ; ಸಂಜ್ಞಾತ್ಮಕ.

symbolic behaviour: ಸಾಂಕೇತಿಕ ವರ್ತನೆ.

symbolic communication: ಸಾಂಕೇತಿಕ ಸಂಪರ್ಕ; ಸಂಕೇತಗಳ ಮೂಲಕ ಸಂಪರ್ಕ.

symbolic devices: ಸಾಂಕೇತಿಕ ಸಾಧನ ಗಳು.

symbolic function: ಸಾಂಕೇತಿಕ ಕ್ರಿಯೆ.

symbolic gesture: ಸಾಂಕೇತಿಕ ಸಂಜ್ಞೆ (ಅಭಿನಯ).

symbolic interaction: ಸಾಂಕೇತಿಕ ಅಂತರ್ ಕ್ರಿಯೆ.

symbolic model: ಸಾಂಕೇತಿಕ ಮಾದರಿ.

symbolic personality: ಸಾಂಕೇತಿಕ ವ್ಯಕ್ತಿತ್ವ.

symbolic traits: ಸಾಂಕೇತಿಕ ಲಕ್ಷಣಗಳು

symbolisation: ಸಂಕೇತೀಕರಣ.

symbolism: ಸಾಂಕೇತಿಕತೆ. (ಪ್ರತೀತ ವಾದ); ಸಂಕೇತ ಪದ್ಧತಿ.

symmetrical cross-cousin marriage: ಸಮಭ್ರಾತೃ ವಿವಾಹ.

symmetrical distribution: ಸಮಾಂಗ ವಿತರಣೆ.

symmetrical relationship: ಸಮಾಂಗ ಸಂಬಂಧ; ಸಮರೂಪದ ಸಂಬಂಧ; ಸಾಮಂಜಸ್ಯ ಸಂಬಂಧ.

sympathetic introspection: ಅನು ಕಂಪದ ಅಂತರ್‌ದೃಷ್ಟಿ. ಇತರರ ಭಾವನೆ ಗಳನ್ನು ಅರ್ಥಮಾಡಿಕೊಳ್ಳಲು ತಾನೇ ಸ್ವತಃ ಅವರ ಜೀವನ ಕ್ರಮವನ್ನು ಅನುಭವಿಸಿ, ತನ್ನಲ್ಲಿ ಮೂಡಿದ ಭಾವನೆಗಳನ್ನು ಅಧ್ಯ ಯನ ಮಾಡುವ ವಿಧಾನ.

sympathetic magic: ಅನುಕಂಪ ನಾತ್ಮಕ ಮಾಟವಿದ್ಯೆ. ಒಂದು ವಸ್ತುವು ಅದರಂತ ಹದೇ ಇತರ ವಸ್ತುಗಳ ಮೇಲೆ ಪ್ರಭಾವ ಬೀರುತ್ತದೆಂಬ ತತ್ವದ ಮೇಲೆ ಆಧರಿತ ಮಾಟ.

sympathetic nervous system: ಅನುವೇದನಾ ನರಮಂಡಲ.

sympathetic response: ಅನುಕಂಪದ ಪ್ರತಿಕ್ರಿಯೆ.

sympathy: ಸಹಾನುಭೂತಿ; ಅನುಕಂಪ.

sympathy strike: ಸಹಾನುಭೂತಿಪರ ಮುಷ್ಕರ. ತಮ್ಮ ಅಸಮಾಧಾನಕ್ಕೆ ಕಾರಣ ವಿಲ್ಲದಿದ್ದರೂ ಮುಷ್ಕರ ನಡೆಸುತ್ತಿರುವ ಮತ್ತೊಂದು ಗುಂಪಿನವರಿಗೆ ನೈತಿಕ ಬೆಂಬಲ ಸೂಚಿಸಲು ಸಹಾನುಭೂತಿಯಿಂದ ನಡೆ ಸುವ ಮುಷ್ಕರ.

sympatric groups: ಸಹಜೀವಿ ಭಿನ್ನಸಮೂಹಗಳು. ಒಂದೇ ಪ್ರದೇಶದಲ್ಲಿ ಎರಡು ಅಥವಾ ಹೆಚ್ಚು ಗುಂಪುಗಳು ತಮ್ಮ ಸಾಂಸ್ಕೃತಿಕ ಪ್ರತ್ಯೇಕತೆಯನ್ನು ಉಳಿಸಿಕೊಂಡು ಸಹಜೀವನ ನಡೆಸುವುದು. ನೋಡಿ: allopatric groups.

symposium: ವಿಚಾರ ಸಂಕಿರಣ; ಗೋಷ್ಠಿ.

symptom: ರೋಗ ಲಕ್ಷಣ.

symptomatic act: ರೋಗಲಕ್ಷಣಾತ್ಮಕ ಕ್ರಿಯೆ.

symptomatic epilepsy: ರೋಗ ಲಕ್ಷಣ ಸೂಚಕ ಅಪಸ್ಮಾರ.

symptomatic treatment: ರೋಗ ಲಕ್ಷಣ ಚಿಕಿತ್ಸೆ.

symptomatology: ರೋಗಲಕ್ಷಣ ವಿಜ್ಞಾನ.

synaesthesia: ಸಹಸಂವೇದನೆ; ಸಂಯುಕ್ತ ಸಂವೇದನೆ.

synanon: ಸಿನಾನನ್; ಲಾಲಸಿಗಳ ಪುನರುಜ್ಜೀವನ ಸಂಸ್ಥೆ.

synchronic: ಸಮಕಾಲೀನ; ಏಕಕಾಲೀನ.

synchronism: ಏಕೀಕೃತವಾದ; ಏಕೀಕರಣವಾದ.

syncope: ಮೂರ್ಛೆ.

syncretism: ಸಮನ್ವಯತೆ. ಉದಾ: ಮತ ಸಮನ್ವಯ.

syndicalism: ಕಾರ್ಮಿಕ ಸಂಘ ಯಜಮಾನ್ಯತತ್ತ್ವ. ಸಮಾಜ ಹಾಗೂ ಅರ್ಥ ವ್ಯವಸ್ಥೆಯನ್ನು ಕಾರ್ಮಿಕರ ಕೂಟಗಳಿಗೆ ವಹಿಸಬೇಕೆನ್ನುವ ತತ್ತ್ವದಲ್ಲಿ ನಂಬಿಕೆ ಹೊಂದಿದ ಕಮ್ಯೂನಿಸಂನ ಒಂದು ಪಂಥ.

syndicalist: ಕಾರ್ಮಿಕ ಸಂಘ ಯಜಮಾನ್ಯವಾದಿ.

syndicate: ಸಮಾನೋದ್ದೇಶ ಸಾಧನೆಗಾಗಿ ಏರ್ಪಡಿಸಿಕೊಂಡ ಸಂಘ.

syndrome: ಲಕ್ಷಣಕೂಟ; ಲಕ್ಷಣ ಸಮಷ್ಟಿ. ಒಟ್ಟಿಗೇ ಕಾಣಿಸಿಕೊಳ್ಳುವ ಅನೇಕ ರೋಗ ಚಿಹ್ನೆಗಳ ಕೂಟ. ಸಾಮಾನ್ಯವಾಗಿ ಇದು ರೋಗವೊಂದರ ಸೂಚನೆ.

synthesis: ಸಂಯೋಜನೆ; ಸಂಯೋಗ; ಸಮನ್ವಯ ಸಿದ್ಧಾಂತ.

synthetic perception: ಸಂಶ್ಲೇಷಕ ಪ್ರತ್ಯಕ್ಷ ಜ್ಞಾನ.

synthetic school: ಸಮನ್ವಯ ಪಂಥ.

syntonia: ಭಾವಾವೇಶ.

system: ವ್ಯವಸ್ಥೆ.

system analysis: ವ್ಯವಸ್ಥಾ ವಿಶ್ಲೇಷಣೆ.

system approach: ವ್ಯವಸ್ಥಾ ಸಮೀಪನ.

system of checks and balances: ನಿಯಂತ್ರಣ ಮತ್ತು ಸಮತೋಲನ ಪದ್ಧತಿ. ನೋಡಿ: checks and balances.

system of free enterprise: ಮುಕ್ತ ಉದ್ದಿಮೆ ವ್ಯವಸ್ಥೆ.

system of proportional representation: ಪ್ರಮಾಣಾನುಗುಣ ಪ್ರಾತಿನಿಧ್ಯ ವಿಧಾನ.

system of stratification: ಸ್ತರೀಕರಣ ವ್ಯವಸ್ಥೆ.

system theory: ವ್ಯವಸ್ಥಾಪನಾ ಸಿದ್ಧಾಂತ.

systematic behaviouristic psychology: ವ್ಯವಸ್ಥಿತ ವರ್ತನಾ ಮನಶ್ಶಾಸ್ತ್ರ.

systematic correlation: ವ್ಯವಸ್ಥಿತ ಸಹಸಂಬಂಧ.

systematic deviation: ವ್ಯವಸ್ಥಿತ ಅಪವರ್ತನೆ; ವ್ಯವಸ್ಥಿತ ವಿಚಲನೆ.

systematic error: ವ್ಯವಸ್ಥಿತ ದೋಷ.

systematic observation: ವ್ಯವಸ್ಥಿತ ಅವಲೋಕನ.

systematic sample: ೧. ವ್ಯವಸ್ಥಿತ ಮಾದರಿ. ೨. ಕ್ರಮಬದ್ಧ ಮಾದರಿ.

systematic sense: ವ್ಯವಸ್ಥಿತ ಸಂವೇದನೆ.

systematic sociology: ವ್ಯವಸ್ಥಿತ ಸಮಾಜಶಾಸ್ತ್ರ. ಎಲ್ಲಾ ಸಾಮಾಜಿಕ ವಿದ್ಯಮಾನಗಳ ಕುರಿತು ವ್ಯಾಪಕವಾದ, ಪರಿಪೂರ್ಣವಾದ ಹಾಗೂ ಸ್ವಯಂಪೂರ್ಣವಾದ ಸಾಮಾಜಿಕ ತತ್ವಗಳ ಸಮುಚ್ಚಯ.

systematic theory: ವ್ಯವಸ್ಥಾ ಸಿದ್ಧಾಂತ.

T

tableau economique: ಸಂಪತ್ತು ಪ್ರಸರಣ ಕೋಷ್ಟಕ. ಸಮಾಜದ ವಿವಿಧ ವರ್ಗಗಳನ್ನು ರೂಪಿಸಿ, ಅರ್ಥವ್ಯವಸ್ಥೆಯಲ್ಲಿ ಸಂಪತ್ತಿನ ಚಲನೆಯನ್ನು ವಿಶ್ಲೇಷಿಸಲು ಕ್ವೆನೇ ಎಂಬ ಅರ್ಥಶಾಸ್ತ್ರಜ್ಞನು ಪ್ರಸ್ತುತಪಡಿಸಿದ ಪಟ್ಟಿ.

taboo: ವಿಧಿನಿಷೇಧ; ಬಹಿಷ್ಕಾರಾಜ್ಞೆ. ಸಮೂಹ ಅಥವಾ ಸಮುದಾಯವು ನಿಷೇಧಿಸಿರುವ ಸಂಬಂಧಗಳು ಹಾಗೂ ಸಾಮಾಜಿಕ ನಡವಳಿಕೆಗಳು. ಉದಾ: ಆಚರಣೆಯ ಸಂದರ್ಭದಲ್ಲಿ ಕೆಲವು ವಸ್ತುಗಳನ್ನು, ವ್ಯಕ್ತಿಗಳನ್ನು ಮುಟ್ಟುವಂತಿಲ್ಲ; ಕೆಲವು ಆಹಾರ ಪದಾರ್ಥಗಳನ್ನು ತಿನ್ನುವಂತಿಲ್ಲ; ಕೆಲವು ಪಾನೀಯಗಳನ್ನು ಕುಡಿಯುವಂತಿಲ್ಲ; ಕೆಲವು ಪ್ರದೇಶಗಳಿಗೆ ಪ್ರವೇಶಿಸುವಂತಿಲ್ಲ. ಇವೇ ನಿಷೇಧಗಳು.

tabu: ನೋಡಿ: taboo.

tabulation: ಪಟ್ಟಿ ಮಾಡುವಿಕೆ. ಸಾರಣೀಕರಣ.

taccavi loan: ತಕ್ಕಾವಿ ಸಾಲ. ನೆರೆ ಹಾವಳಿ, ಕ್ಷಾಮ ಮುಂತಾದ ನೈಸರ್ಗಿಕ ವಿಕೋಪಗಳ ಸನ್ನಿವೇಶದಲ್ಲಿ ಸರ್ಕಾರವು ಕೊಡುವ ನೆರವು ಸಾಲ.

tacit acceptance: ಮೌನ ಸಮ್ಮತಿ.

tactile experience: ಸ್ಪರ್ಶಾನುಭವ.

tactile illusion: ಸ್ಪರ್ಶ ಭ್ರಮೆ. ನೋಡಿ: tactual hallucination.

tactile sensation: ಸ್ಪರ್ಶ ಸಂವೇದನೆ.

tactile type of imagination: ಸ್ಪರ್ಶ ಪ್ರರೂಪ ಕಲ್ಪನೆ.

tactual hallucination: ಸ್ಪರ್ಶ ಭ್ರಮೆ. ಮೈಯಲ್ಲಿ ಏನೋ ಆದಂತೆ ಅನಿಸುವ ವಿಭ್ರಮೆ.

tahsil: ತಹಶೀಲು; ತಾಲೂಕು; ಜಿಲ್ಲಾ ಉಪವಿಭಾಗ.

take-off in economic develop ment: ಆರ್ಥಿಕಾಭಿವೃದ್ಧಿಯ ಮುನ್ನೆಗೆತ.

talisman: ತಾಯಿತ. ಅಸಾಮಾನ್ಯ ಮತ್ತು ಆಶ್ಚರ್ಯಕರ ಘಟನೆಗಳನ್ನು ನಿಯಂತ್ರಿಸುವ ವಸ್ತು.

tantrums: ಶಿಶುಕ್ರೋಧ. ಮಕ್ಕಳಲ್ಲಿ ಕಾಣಿಸುವ ಕೋಪ, ಅಳು, ಕಿರುಚಾಟ, ಭಾವೋದ್ರೇಕ, ಹಠದಿಂದ ಕೂಡಿದ ವರ್ತನೆ.

tappa: ಸಣ್ಣ ಎಸ್ಟೇಟು ಅಥವಾ ಒಂದು ಗ್ರಾಮ ಸಮೂಹ.

target data: ಸಂಗ್ರಹಿಸಬೇಕಾದ ಮಾಹಿತಿ; ನಿರೀಕ್ಷಿತ (ಉದ್ದೇಶಿತ) ಮಾಹಿತಿ.

target group: ಉದ್ದೇಶಿತ ಗುಂಪು.

tariff: ಆಮದು ರಫ್ತು ಸುಂಕ. ಆಮದು ಮತ್ತು ರಫ್ತು ಸರಕುಗಳ ಮೇಲೆ ವಿಧಿಸುವ ತೆರಿಗೆ.

tariff advisory committee: ಸುಂಕ ಸಲಹಾ ಸಮಿತಿ.

tariff law: ಸುಂಕದ ಕಾನೂನು.

tariff policy: ಸುಂಕ ನೀತಿ.

tatoo: ಹಚ್ಚೆ. ಮೇಲ್ಪದರದ ಅಡಿಯಲ್ಲಿ ಒಂದು ರೀತಿಯ ಸ್ವಾಭಾವಿಕ ವರ್ಣದ್ರವ್ಯ ಇಡುವುದರ ಮೂಲಕ ಚರ್ಮದಲ್ಲಿ ಸಂಕೇತ ಅಥವಾ ಚಿತ್ರಗಳನ್ನು ಮೂಡಿಸುವುದು.

tax: ತೆರಿಗೆ.

tax assessment: ತೆರಿಗೆ ನಿರ್ಧಾರಣ.

tax avoidance: ತೆರಿಗೆಗಳ್ಳತನ.

tax base: ತೆರಿಗೆ ಮೂಲ.

tax burden: ತೆರಿಗೆ ಹೊರೆ. ವ್ಯಕ್ತಿ, ಸಮೂಹ ಅಥವಾ ಸಂಸ್ಥೆಗಳು ತೆರಿಗೆ ರೂಪದಲ್ಲಿ ನೀಡಬೇಕಾದ ಹಣದ ಮೊತ್ತ.

tax concession: ತೆರಿಗೆ ವಿನಾಯಿತಿ (ರಿಯಾಯಿತಿ).

tax dodging: ತೆರಿಗೆ ಕಳ್ಳತನ. ತೆರಿಗೆಗೆ ಒಳಪಡುವ ಆದಾಯವನ್ನು ವರದಿ ಮಾಡದೆ ತೆರಿಗೆ ತಪ್ಪಿಸಿಕೊಳ್ಳುವಿಕೆ.

tax evasion: ತೆರಿಗೆ ತಪ್ಪಿಸಿಕೊಳ್ಳುವಿಕೆ. ಸರಕಾರಕ್ಕೆ ಸಲ್ಲಿಸಬೇಕಾದ ತೆರಿಗೆಯನ್ನು ಕೊಡದೆ ತಪ್ಪಿಸಿಕೊಳ್ಳುವಿಕೆ.

tax exemption: ತೆರಿಗೆ (ಕರ) ವಿನಾಯಿತಿ. ಸಾಮಾನ್ಯವಾಗಿ ತೆರಿಗೆ ಪಾವತಿ ಮಾಡುವುದರಿಂದ ವ್ಯಕ್ತಿ ಅಥವಾ ಸಂಸ್ಥೆಗೆ ನೀಡುವ ವಿನಾಯಿತಿ. ಉದಾ: ಧಾರ್ಮಿಕ ಅಥವಾ ಶಿಕ್ಷಣ ಸಂಸ್ಥೆಗಳ ಕಾರ್ಯಚಟುವಟಿಕೆ ಗಳನ್ನು ಉತ್ತೇಜಿಸಲು ಅವುಗಳ ಮೇಲೆ ತೆರಿಗೆ ವಿಧಿಸದೆ ವಿನಾಯಿತಿ ನೀಡುವುದು.

tax impact: ತೆರಿಗೆ ಪ್ರಭಾವ; ತೆರಿಗೆ ಪರಿಣಾಮ.

tax limit: ತೆರಿಗೆ ಮಿತಿ.

tax on income: ಆದಾಯದ ಮೇಲಿನ ತೆರಿಗೆ.

tax on profit: ಲಾಭದ ಮೇಲಿನ ತೆರಿಗೆ.

tax on property: ಆಸ್ತಿಯ ಮೇಲಿನ ತೆರಿಗೆ.

tax on urban property: ನಗರದ ಆಸ್ತಿಯ ಮೇಲಿನ ತೆರಿಗೆ.

tax policy: ತೆರಿಗೆ ನೀತಿ.

tax rate: ತೆರಿಗೆ ದರ.

tax revenue: ತೆರಿಗೆ ರೂಪದ ಆದಾಯ.

tax yield: ತೆರಿಗೆ ಆದಾಯ.

taxable capacity: ತೆರಿಗೆ ಕೊಡಬಲ್ಲ ಸಾಮರ್ಥ್ಯ; ತೆರಿಗೆ ನೀಡಿಕೆಯ ಸಾಮರ್ಥ್ಯ.

taxation: ತೆರಿಗೆ. ಖಾಸಗಿ ವ್ಯಕ್ತಿಗಳಿಂದ, ಸಂಸ್ಥೆಗಳಿಂದ ಅಥವಾ ಸಮೂಹಗಳಿಂದ ಸರಕಾರಕ್ಕೆ ಕಡ್ಡಾಯವಾಗಿ ವರ್ಗಾಯಿಸಬೇಕಾದ ಹಣ.

Taxation Enquiry Commission : ತೆರಿಗೆ ವಿಚಾರಣಾ ಆಯೋಗ.

taxation policy : ತೆರಿಗೆ ನೀತಿ.

taxonomy: ವರ್ಗೀಕರಣ ತತ್ವ.

teacher pupil ratio: ಶಿಕ್ಷಕ ವಿದ್ಯಾರ್ಥಿ ಅನುಪಾತ.

team spirit: ತಂಡೋತ್ಸಾಹ; ವೃಂದ ಮನೋಭಾವ. ಜೊತೆಗೂಡಿ ಕೆಲಸ ಮಾಡುವ ಭಾವನೆ.

team work: ತಂಡಕಾರ್ಯ. ಏಕ ಮನೋಭಾವದಿಂದ ಪ್ರತಿಯೊಬ್ಬರು ತಂಡದ ಸಮಗ್ರ ಲಾಭಕ್ಕಾಗಿ ದುಡಿಯುವಿಕೆ.

technical assumption: ತಾಂತ್ರಿಕ ಪರಿಕಲ್ಪನೆ.

technical economies: ತಾಂತ್ರಿಕ ಮಿತವ್ಯಯಗಳು.

technical education: ತಾಂತ್ರಿಕ ಶಿಕ್ಷಣ.

technical staff: ತಾಂತ್ರಿಕ ಸಲಹಾ ವರ್ಗ (ಸಿಬ್ಬಂದಿ).

technicways: ತಾಂತ್ರಿಕ ವಿಧಾನಗಳು. ಸಾಂಪ್ರದಾಯಿಕ ಲೋಕನೀತಿಗಳು ಹಾಗೂ ನೈತಿಕ ನಿಯಮಗಳ ಸ್ಥಾನವನ್ನು ಆಕ್ರಮಿಸಿರುವ ಆಧುನಿಕ, ವೈಜ್ಞಾನಿಕ ಹಾಗೂ ತಾಂತ್ರಿಕ ನಾಗರಿಕತೆಗಳು.

technique: ವಿಶಿಷ್ಟ ತಾಂತ್ರಿಕ ಕೌಶಲ್ಯ.

technocracy: ತಂತ್ರಜ್ಞಾಧಿಪತ್ಯ; ತಂತ್ರಜ್ಞರ ಸರಕಾರ. ಆರ್ಥಿಕ ಮತ್ತು ರಾಜಕೀಯ ಅಧಿಕಾರವು ಉದ್ಯಮಗಳ ಒಡೆಯರಿಂದ ಅವರು ಸಂಬಳಕ್ಕಾಗಿ ನೇಮಿಸಿಕೊಂಡಿರುವ ಮ್ಯಾನೇಜರುಗಳು ಮತ್ತು ವಿಶೇಷ ತಜ್ಞರ (ಇಂಜಿನಿಯರ್‌ಗಳು, ತಂತ್ರಜ್ಞರು ಮತ್ತು ವಿಜ್ಞಾನಿಗಳ) ಕೈಗೆ ವರ್ಗಾವಣೆಯಾಗುತ್ತದೆ ಎಂಬ ಸಿದ್ಧಾಂತ.

technological change: ತಾಂತ್ರಿಕ ಬದಲಾವಣೆ.

technological dualism: ತಾಂತ್ರಿಕತೆಯ ದ್ವಂದ್ವವಾದ.

technological gap: ತಾಂತ್ರಿಕ ಅಂತರ. ತಾಂತ್ರಿಕತೆಯ ಬೆಳವಣಿಗೆಯ ಆಧಾರದಿಂದ ಸಮುದಾಯಗಳ ನಡುವೆ ಉಂಟಾಗುವ ಅಂತರ.

technological lag: ತಾಂತ್ರಿಕ ಹಿಂಬೀಳಿಕೆ. ಉತ್ಪಾದನಾ ಪ್ರಕ್ರಿಯೆಯಲ್ಲಿ ಹಳೆಯ ತಾಂತ್ರಿಕತೆಯನ್ನೇ ಅವಲಂಬಿಸಿರುವಿಕೆ.

technological society: ತಂತ್ರಜ್ಞಾನಾಧಾರಿತ ಸಮಾಜ. ಅಭಿವೃದ್ಧಿ ಹೊಂದಿದ ಸಮಾಜಗಳ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಸಮಸ್ಯೆಗಳಿಗೆ ವಿಜ್ಞಾನ ಹಾಗೂ ತಾಂತ್ರಿಕತೆಯ ಬಳಕೆಯೇ ಪರಿಹಾರವಾಗಿದೆ ಎಂಬ ವಾದ.

technological unemployment: ತಾಂತ್ರಿಕ ನಿರುದ್ಯೋಗ. ಉತ್ಪಾದನಾ ವಿಧಾನದಲ್ಲಿ ಯಂತ್ರಗಳ ಅಳವಡಿಸಿಕೊಳ್ಳುವಿಕೆಯಿಂದ ಉಂಟಾಗುವ ನಿರುದ್ಯೋಗ.

technology: ತಾಂತ್ರಿಕತೆ; ತಂತ್ರಜ್ಞಾನ.

techno-psychology: ತಂತ್ರಮನೋವಿಜ್ಞಾನ.

teknonymy: ಶಿಶುಮೂಲ ಸಂಬೋಧನೆ. ವ್ಯಕ್ತಿಯನ್ನು ಆತನ ವೈಯಕ್ತಿಕ ಹೆಸರಿನ ಬದಲಾಗಿ ಮಗನ ಹೆಸರಿನ ಮೂಲಕ ಕರೆಯುವುದು.

teleological explanation: ಮೂಲ ಸಂಕಲ್ಪಾತ್ಮಕ ವಿವರಣೆ. ನೋಡಿ: teleology.

teleological idealism: ಮೂಲ ಸಂಕಲ್ಪಾತ್ಮಕ ಆದರ್ಶವಾದ.

teleology: ಮೂಲಸಂಕಲ್ಪವಾದ. ಪ್ರಾಣಿಗಳ ರಚನೆ,ಬೆಳವಣಿಗೆ ಮತ್ತು ಅಸ್ತಿತ್ವವು ಸೃಷ್ಟಿಯ ಪರಮೋದ್ದೇಶಕ್ಕೆ ಅನುಸಾರವಾಗಿ ಆಗುತ್ತದೆಂಬ ವಾದ. ಇದು ಮುಂದುವರಿದು ನಾವು ಬಯಸುವ ಸಮಾಜ ಗಳನ್ನು ಬುದ್ಧಿಪೂರ್ವಕವಾಗಿ ಸೃಷ್ಟಿಸ ಬಹುದು ಎಂಬ ಸಮಾಜ ಪರಿವರ್ತನೆಯ ಸಿದ್ಧಾಂತ.

telepathy: ದೂರಮನಸ್ಪರ್ಶನ; ದೂರಾನು ಭೂತಿ; ಅನ್ಯಮನಸ್ಪರ್ಶನ. ವಾಸ್ತವಿಕ ಸಂಪರ್ಕವಿಲ್ಲದೆ ಬಹುದೂರದ ವ್ಯಕ್ತಿಯ ಮನಸ್ಸನ್ನು ತಿಳಿಯುವುದು ಹಾಗೂ ಭಾವ ಪ್ರಭಾವವನ್ನುಂಟು ಮಾಡುವುದು.

telesis: ನೋಡಿ: social telesis :

telesthesia: ದೂರಸಂವೇದನೆ.

telic change: ಯೋಜಿತ ಬದಲಾವಣೆ. ಒಂದು ಉದ್ದೇಶ ಸಾಧನೆಗಾಗಿ ಮಾನವನ ಯೋಜನೆಗಳ ಮೂಲಕ ತರುವ ಬದಲಾ ವಣೆ.

teller system: ಧಿಡೀರ್ ಸಂದಾಯ ಕ್ರಮ. ಗ್ರಾಹಕರ ಚೆಕ್ಕುಗಳಲ್ಲಿರುವ ಮೊಬಲಗು ಒಂದು ಮಿತಿಯೊಳಗೆ ಇದ್ದರೆ ಅವರ ಖಾತೆ ಗಳನ್ನು ನೋಡದೆ ಕೂಡಲೇ ನಗದು ಪಾವತಿ ಮಾಡುವ ವ್ಯವಸ್ಥೆ.

temper tantrums: ನೋಡಿ: tant rums.

temperance: ಆತ್ಮಸಂಯಮ; ಮಿತಾ ಚಾರ.

temperament: ಸ್ವಭಾವ ವೈಚಿತ್ರ್ಯ.

temperamental incompatibility: ಚಿತ್ತಪ್ರಾಕೃತಿಕ ಅಸಮರ್ಥತೆ.

temperature illusion: ಶೀತೋಷ್ಣ ಭ್ರಮೆ.

temporal: ಲೌಕಿಕ; ಐಹಿಕ.

temporal perception: ಲೌಕಿಕ ದೃಷ್ಟಿ.

temporal realm: ಲೌಕಿಕ ಜಗತ್ತು.

temporal state: ಇಹರಾಜ್ಯ; ಲೌಕಿಕ ರಾಜ್ಯ.

temporocentrism: ಸ್ವ ಕಾಲಾಭಿಮಾನ. ತಾನು ಬದುಕಿರುವ ಶತಮಾನ, ಯುಗ, ಜೀವನಕಾಲವನ್ನು ಕೇಂದ್ರವಾಗಿಟ್ಟುಕೊಂಡು ಉಳಿದೆಲ್ಲಾ ಕಾಲಖಂಡಗಳನ್ನು ಅಳೆಯು ವುದು.

tenancy: ಒಕ್ಕಲುತನ. ಇನ್ನೊಬ್ಬರ ಒಡೆತನದ ಭೂಮಿಯಲ್ಲಿ ಕೃಷಿಮಾಡುತ್ತಾ ಭೂಮಾಲಿಕನಿಗೆ ನಿಗದಿತ ಕಾಲದಲ್ಲಿ ನಿಗದಿತ ಗೇಣಿಯನ್ನು ನೀಡುವ ಷರತ್ತಿನಲ್ಲಿ ಬದುಕು ಸಾಗಿಸುವ ಗ್ರಾಮೀಣ ಕೃಷಿ ಸಂಬಂಧ.

tenancy reform: ಗೇಣಿ ಪದ್ಧತಿ ಸುಧಾರಣೆ.

tenancy right: ಗೇಣಿ ಹಕ್ಕು.

tenancy system: ಗೇಣಿ ವ್ಯವಸ್ಥೆ; ಒಕ್ಕಲುತನ ಪದ್ಧತಿ.

tenant: ಒಕ್ಕಲು; ಬಾಡಿಗೆದಾರ; ಗೇಣಿ ದಾರ.

tenant at will: ತಾತ್ಕಾಲಿಕ ಆಸ್ತಿಹಕ್ಕನ್ನು ಹೊಂದಿರುವ ಗೇಣಿದಾರ. ನೋಡಿ: non-occupancy tenant.

tendency: ಒಲವು; ಪ್ರವೃತ್ತಿ; ಗಮನ.

tendency for self preservation: ಸ್ವರಕ್ಷಣೆ ಮಾಡಿಕೊಳ್ಳುವ ಪ್ರವೃತ್ತಿ; ಆತ್ಮ ರಕ್ಷಣಾ ಪ್ರವೃತ್ತಿ.

tendency in situation (tinsit): ಸಾಂದರ್ಭಿಕ ಒಲವು. ಸಂದರ್ಭಗಳಿಗನು ಸಾರವಾಗಿ ವ್ಯಕ್ತಿಯ ಪ್ರತಿಕ್ರಿಯಾವರ್ತನೆ.

tender feeling: ವಾತ್ಸಲ್ಯ ಭಾವನೆ.

tension: ಬಿಗುವು; ಉದ್ವೇಗ; ತುಡಿತ.

tension release: ಉದ್ವೇಗ ನಿವಾರಣೆ; ಬಿಕ್ಕಟ್ಟು ಪರಿಹಾರ.

tenure: ಅಧಿಕಾರಾವಧಿ.

terai: ಹಿಮಭರಿತಭೂಮಿ. ಹಿಮಾಲಯದ ತಪ್ಪಲು ಭೂಮಿ.

term deposit: ಸಾವಧಿಕ ಠೇವಣಿ; ಅವಧಿ ಠೇವಣಿ. ನಿಶ್ಚಿತ ಕಾಲಾವಧಿಯವರೆಗೆ ಬ್ಯಾಂಕಿನಲ್ಲಿ ಗ್ರಾಹಕರು ಇಡುವ ಹಣದ ಠೇವಣಿ.

term loan: ಅವಧಿ ಸಾಲ. ನಿಯತಕಾಲಿಕ ಪಾವತಿಗಳಲ್ಲಿ ಬಡ್ಡಿಯೊಂದಿಗೆ ಹಿಂದಿರು ಗಿಸಬೇಕಾದ ನಿರ್ದಿಷ್ಟ ಅವಧಿಯ ಬ್ಯಾಂಕ್ ಸಾಲ.

term marriage: ಕರಾರು ಮದುವೆ; ಅವಧಿಯ ಮದುವೆ. ನಿರ್ದಿಷ್ಟ ಅವಧಿಗೆ ಕರಾರಿನ ಆಧಾರದ ಮೇಲೆ ನಡೆಯುವ ವಿವಾಹ. ಟಿಬೆಟ್, ಇತಿಯೋಪಿಯಾ, ಉತ್ತರ ಆಫ್ರಿಕಾದ ವ್ಯಾಪಾರಿಗಳು ಈ ರೀತಿಯ ವಿವಾಹವಾಗುತ್ತಾರೆ.

term of office: ನೋಡಿ: tenure.

term of reference: ಸಂಬಂಧಿತ ಪದ; ಉಲ್ಲೇಖ ಪದ. ಮೂರನೆಯ ವ್ಯಕ್ತಿ ಯೊಂದಿಗೆ ಸಂಭಾಷಿಸುವಾಗ ಸಂಬಂಧಿ ಯೊಬ್ಬನನ್ನು ಉಲ್ಲೇಖಿಸಲು ಬಳಸುವ ಪದ.

terms of address. ಸಂಬೋಧನಾ ಪದಗಳು. ಇತರರೊಡನೆ ಸಂಭಾಷಿಸುವಾಗ ಬಳಸುವ ಗೌರವ ಸೂಚಕ ಪದಗಳು.

terms of reference: ಕಾರ್ಯವ್ಯಾಪ್ತಿ ಉಲ್ಲೇಖ.

terms of trade: ವ್ಯಾಪಾರ ಷರತ್ತು (ಕರಾರು)ಗಳು.

terminal tax: ಸೀಮಾಶುಲ್ಕ. ಉದಾ: ರೈಲುಯಾನ, ವಿಮಾನಯಾನ ಮತ್ತು ಸಮುದ್ರಯಾನಗಳ ಮೇಲೆ ವಿಧಿಸುವ ತೆರಿಗೆ.

termination: ಹೊರಹಾಕುವಿಕೆ; ಸಮಾಪ್ತಿ ಗೊಳಿಸುವಿಕೆ.

terminology: ಪರಿಭಾಷಾ ಶಾಸ್ತ್ರ; ಪದಮಾಲೆ.

terracotta: ಪಾರ್ಥಿವ; ಸುಡಾವೆ ಮಣ್ಣಿನ ವಿಗ್ರಹ. ಆವೆಮಣ್ಣಿನಿಂದ ಮಾಡಿ ಅನಂತರ ಸುಟ್ಟದ್ದು.

terrestrial unity: ಭೌಮಿಕ ಏಕತೆ.

territorial army: ಪ್ರಾದೇಶಿಕ ಸೇನೆ.

territorial constituency: ಪ್ರಾದೇಶಿಕ ಚುನಾವಣಾ ಕ್ಷೇತ್ರ.

territorial court: ಪ್ರಾದೇಶಿಕ ನ್ಯಾಯಾಲಯ.

territorial exogamy: ಪ್ರಾದೇಶಿಕ ಹೊರ ವಿವಾಹ. ನಿಗದಿತ ಗಡಿ ಅಥವಾ ದೂರದಿಂದ ವಿವಾಹವಾಗುವುದು.

territorial group: ಪ್ರಾದೇಶಿಕ ಸಮೂಹ. ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶ ದೊಳಗೆ ವಾಸ್ತವ್ಯವಿರುವ ಜನರ ಸಮೂಹ.

territorial integrity: ಪ್ರಾದೇಶಿಕ ಸಮಗ್ರತೆ.

territorial sovereignty: ಪ್ರಾದೇಶಿಕ ಸಾರ್ವಭೌಮತ್ವ.

territorial units: ಪ್ರಾದೇಶಿಕ ಘಟಕಗಳು. ಒಂದು ರಾಷ್ಟ್ರವು ಆಡಳಿತ ದೃಷ್ಟಿಯಿಂದ ಸಾಂವಿಧಾನಿಕವಾಗಿ ರೂಪಿಸಿದ ವಿವಿಧ ಪ್ರಾದೇಶಿಕ ಘಟಕಗಳು.

terrorism: ಭಯೋತ್ಪಾದಕತೆ. ಸರ್ಕಾರೇತರ ಸಮೂಹಗಳು ರಾಜಕೀಯ ಗುರಿ ಸಾಧಿಸಲು ಬಳಸುವ ಹಿಂಸೆ.

terrorist vengeance: ಭಯೋತ್ಪಾದಕ ಪ್ರತೀಕಾರ.

tertiary co-operation: ತೃತೀಯ ಹಂತದ ಸಹಕಾರ.

tertiary occupation: ತೃತೀಯ ಉದ್ಯೋಗ. ವಸ್ತುಗಳ ಉತ್ಪಾದನೆಗೆ ಬದಲಾಗಿ ಸೇವೆಗಳ ಉತ್ಪಾದನೆಯನ್ನು ಒಳಗೊಳ್ಳುವ ಉದ್ಯೋಗ. ಉದಾ: ಸರ್ಕಾರಿ ಉದ್ಯೋಗಗಳು, ವೈದ್ಯಕೀಯ, ಧಾರ್ಮಿಕ, ಸಂಪರ್ಕ ಸೇವೆಗಳು ಇತ್ಯಾದಿ.

tertiary quality: ತೃತೀಯಗುಣ; ಉತ್ತರೋತ್ತರ ಗುಣ.

tertiary sector: ತೃತೀಯ (ಸೇವಾ) ವಲಯ.

test ban treaty: ಪರೀಕ್ಷಾ ನಿಷೇಧ ಒಪ್ಪಂದ.

test of temperament: ಚಿತ್ತಪ್ರಕೃತಿ ಪರೀಕ್ಷೆ.

test-re-test method: ಪರೀಕ್ಷಣ ಮರು ಪರೀಕ್ಷಣ ವಿಧಾನ.

test score: ಪರೀಕ್ಷಾ ಅಂಕ.

testicular feminization syndrome: ಗಂಡಸರಲ್ಲಿ ಕಂಡುಬರುವ ಸ್ತ್ರೀ ಲಕ್ಷಣಗಳು.

testimonial: ಅರ್ಹತಾಪತ್ರ; ಯೋಗ್ಯತಾಪತ್ರ.

testing method: ಪರೀಕ್ಷಾ ಪದ್ಧತಿ.

testing of hypothesis: ಪ್ರಾಕ್ ಕಲ್ಪನೆಯ ಪರೀಕ್ಷಣ.

text: ಪಠ್ಯ. ಪಠ್ಯವೆಂದರೆ ಬರೆದಿರಿಸಿದ ಶಾಬ್ದಿಕ ಸ್ವರೂಪದ್ದಾಗಿರಬೇಕಾಗಿಲ್ಲ. ಜನಪದ ಪ್ರದರ್ಶನವೊಂದರಲ್ಲಿ ಪ್ರದರ್ಶಕ ಹಾಗೂ ಪ್ರೇಕ್ಷಕರ ಸಹಯೋಗದಿಂದ ಪಠ್ಯ ಹೊರಹೊಮ್ಮುತ್ತದೆ. ಸಂದರ್ಭ ಬದಲಾದಾಗ ಈ ಪಠ್ಯದಲ್ಲಿ ಬದಲಾವಣೆ ಅನಿವಾರ್ಯ. ಈ ಪಠ್ಯವನ್ನು ಬಹುಮಾಧ್ಯಮಗಳಲ್ಲಿ ದಾಖಲುಪಡಿಸಿಕೊಂಡಾಗ ಸಿಗುವುದೇ ಬೃಹತ್‌ಪಠ್ಯ (larger text).

text oriented research: ಪಠ್ಯ ಕೇಂದ್ರಿತ ಸಂಶೋಧನೆ.

textual analysis: ಪಠ್ಯ ವಿಶ್ಲೇಷಣೆ.

textures: ನೋಟಗಳು; ಶಬ್ದಗಳು.

thanatomania: ಹತ್ಯೋನ್ಮಾದ.

thaumaturgy: ಇಂದ್ರಜಾಲಿಕ.

theatre sense: ರಂಗಪ್ರಜ್ಞೆ.

theism: ದೈವಾಸ್ತಿತ್ವವಾದ.

thematic apperception test: ತತ್ವವಿಷಯ ಅನುಬೋಧೆಯ ಪರೀಕ್ಷೆ.

theme: ಸಾರ; ಒಳತತ್ವ. ನೋಡಿ: cultural theme.

theocracy: ಧರ್ಮಪ್ರಭುತ್ವ; ಮತಾಧಿಪತ್ಯ. ದೇವರ ಹೆಸರಿನಲ್ಲಿ ಪುರೋಹಿತಶಾಹಿಗಳು ನಡೆಸುವ ರಾಜ್ಯಾಡಳಿತ.

theocratic government: ಧರ್ಮ ಪ್ರಭುತ್ವ ಪದ್ಧತಿ ಸರಕಾರ. ನೋಡಿ: theocracy.

theologian: ವೇದಾಂತಿ.

theological anthropology: ಧರ್ಮ ಶಾಸ್ತ್ರಾಧಾರಿತ ಮಾನವಶಾಸ್ತ್ರ.

theological stage: ಧರ್ಮಶಾಸ್ತ್ರೀಯ ಹಂತ; ಅಧಿದೈವಿಕ ಹಂತ. ಸಮಾಜ ವಿಕಾಸದ ಮೂರು ಹಂತಗಳ ಸೂತ್ರ ಎಂಬ ತನ್ನ ಸಿದ್ಧಾಂತದಲ್ಲಿ Auguste Comte ಹೇಳಿದ ಮೊದಲ ಹಂತ.

theology: ದೇವತಾಶಾಸ್ತ್ರ; ಧರ್ಮಗಳ ಅಭ್ಯಾಸಶಾಸ್ತ್ರ. ಒಂದು ಸಮುದಾಯದ ವಿಸ್ತೃತ ಧಾರ್ಮಿಕ ಭಾವನೆಗಳು ಮತ್ತು ಆಲೋಚನೆಗಳು.

theoretic bias: ಪ್ರಮೇಯಾತ್ಮಕ ಪಕ್ಷಪಾತ. ಪ್ರಸ್ತುತ ವೈಜ್ಞಾನಿಕ ಸಿದ್ಧಾಂತಗಳ ಆಧಾರದಲ್ಲಿ ವಿಚಾರಮಂಡನೆ ಕಷ್ಟವಾದಾಗ ಒಂದು ಸ್ವಯಂಪ್ರೇರಿತ ಸಿದ್ಧಾಂತದ ಸಹಾಯ ದಿಂದ ಮಂಡನೆ ಮಾಡಿ ಸತ್ಯ ದರ್ಶನ ಮಾಡುವುದು.

theoretical constitution: ಸೈದ್ಧಾಂ ತಿಕ ಸಂವಿಧಾನ.

theoretical expression: ಸೈದ್ಧಾಂತಿಕ ಅಭಿವ್ಯಕ್ತಿ.

theoretical model: ಸೈದ್ಧಾಂತಿಕ ಮಾದರಿ.

theoretical politics: ಸೈದ್ಧಾಂತಿಕ ರಾಜಕಾರಣ.

theoretical problem: ಸೈದ್ಧಾಂತಿಕ ಸಮಸ್ಯೆ.

theoretical psychology: ಸೈದ್ಧಾಂತಿಕ ಮನೋವಿಜ್ಞಾನ.

theoretical questions: ಸೈದ್ಧಾಂತಿಕ ಪ್ರಶ್ನೆಗಳು. ಅಧ್ಯಯನ ವಿಷಯವನ್ನು ಅರ್ಥೈಸಲು ಸಮಾಜಶಾಸ್ತ್ರಜ್ಞರು ಮುಂದಿಡುವ (ಬಳಸುವ) ಸೈದ್ಧಾಂತಿಕ ಜಿಜ್ಞಾಸೆಗಳು.

theoretical reason: ಸೈದ್ಧಾಂತಿಕ ವಿವೇಚನೆ; ಶಾಸ್ತ್ರೀಯ ತರ್ಕ.

theorization: ಸಿದ್ಧಾಂತೀಕರಣ; ಸೈದ್ಧಾಂತೀಕರಣ.

theory of aggrendisement: ಪ್ರಸರಣಾತ್ಮಕ ಸಿದ್ಧಾಂತ; ರಾಜ್ಯ ಪ್ರಸಾರಕ ಸಿದ್ಧಾಂತ.

theory of applied admini stration: ಅನ್ವಯಿಕ ಆಡಳಿತ ಸಿದ್ಧಾಂತ.

theory of biological evolution: ಜೈವಿಕ ಉತ್ಕ್ರಾಂತಿ ಸಿದ್ಧಾಂತ.

theory of class war: ವರ್ಗ ಸಂಘರ್ಷ ಸಿದ್ಧಾಂತ; ವರ್ಗಕಲಹ ಸಿದ್ಧಾಂತ. ಬಂಡವಾಳಶಾಹಿಗಳು ಶ್ರಮಜೀವಿಗಳನ್ನು ಹೆಚ್ಚು ಹೆಚ್ಚು ಶೋಷಣೆ ಮಾಡುತ್ತಾ ಹೋದಾಗ ಅವರಲ್ಲಿ ವರ್ಗಪ್ರಜ್ಞೆ ಉಂಟಾಗುತ್ತದೆ. ಅದು ಬಂಡವಾಳಶಾಹಿಗಳು ಮತ್ತು ಶ್ರಮಜೀವಿಗಳ ಮಧ್ಯೆ ಸಮರಕ್ಕೆ ನಾಂದಿಯಾಗುತ್ತದೆ ಎನ್ನುವ ಮಾರ್ಕ್ಸ್‌ನ ಸಿದ್ಧಾಂತ.

theory of diffusion: ಪ್ರಸರಣ ಸಿದ್ಧಾಂತ.

theory of divine origin: ದೈವಿಕ ಉಗಮ ಸಿದ್ಧಾಂತ. ರಾಜ್ಯದ ಉಗಮದ ಬಗೆಗಿನ ಸಿದ್ಧಾಂತ. ಇದರ ಪ್ರಕಾರ ರಾಜ್ಯವು ದೇವರ ಸೃಷ್ಟಿ ಮತ್ತು ರಾಜನು ದೇವರ ಪ್ರತಿನಿಧಿ.

theory of dual sovereignty: ದ್ವಿಪರಮಾಧಿಕಾರದ ಸಿದ್ಧಾಂತ.

theory of emotion: ಸಂವೇಗ ಸಿದ್ಧಾಂತ.

theory of equations: ಸಮೀಕರಣಗಳ ಸಿದ್ಧಾಂತ.

theory of evolution: ಪರಿಣಾಮ ವಾದ; ಉತ್ಕ್ರಾಂತಿವಾದ.

theory of force: ನೋಡಿ: force theory.

theory of historical develop ment: ಚಾರಿತ್ರಿಕ ಬೆಳವಣಿಗೆಯ ಸಿದ್ಧಾಂತ.

theory of human nature: ಮಾನವ ಸ್ವಭಾವ ಸಿದ್ಧಾಂತ.

theory of identical element: ಅನನ್ಯ ವಸ್ತುವಿನ ನಿಯಮ.

theory of imperialism: ಸಾಮ್ರಾಜ್ಯ ಶಾಹಿ ಸಿದ್ಧಾಂತ.

theory of intelligence: ಬುದ್ಧಿಶಕ್ತಿಯ ಸಿದ್ಧಾಂತ.

theory of law: ಕಾಯಿದೆಯ ಸಿದ್ಧಾಂತ; ಕಾನೂನಿನ ಸಿದ್ಧಾಂತ.

theory of liberty: ಸ್ವಾತಂತ್ರ್ಯದ ಸಿದ್ಧಾಂತ.

theory of mana: 'ಮಾನ' ಸಿದ್ಧಾಂತ. ನೋಡಿ: manaism.

theory of market gluts: ಮಿತಿ ಮೀರಿ ತುಂಬಿದ ಮಾರುಕಟ್ಟೆ. ಮಾರುಕಟ್ಟೆಯಲ್ಲಿ ಸರಕುಗಳು ಮಾರಾಟವಾಗದೇ ಇರುವ ಸ್ಥಿತಿಯನ್ನು ಕುರಿತ ಸಿದ್ಧಾಂತ.

theory of natural rights: ನೈಸರ್ಗಿಕ ಹಕ್ಕುಗಳ ಸಿದ್ಧಾಂತ.

theory of organic evolution: ಜೀವ ವಿಕಾಸ ಸಿದ್ಧಾಂತ.

theory of perception: ಪ್ರತ್ಯಕ್ಷ ಜ್ಞಾನ ಸಿದ್ಧಾಂತ.

theory of personality: ವ್ಯಕ್ತಿತ್ವ ಸಿದ್ಧಾಂತ.

theory of probability: ಸಂಭಾವ್ಯತಾ ಸಿದ್ಧಾಂತ.

theory of profit: ಲಾಭದ ಸಿದ್ಧಾಂತ. ಉದ್ಯಮಿಗೆ ಲಾಭವು ಯಾವ ರೀತಿಯಿಂದ ಉಂಟಾಗುತ್ತದೆ ಎಂಬುದನ್ನು ವಿವರಿಸುವ ಸಿದ್ಧಾಂತ.

theory of reason: ವಿಚಾರಶೀಲ ಸಿದ್ಧಾಂತ; ವೈಚಾರಿಕ ಸಿದ್ಧಾಂತ.

theory of relativity: ಸಾಪೇಕ್ಷ ಸಿದ್ಧಾಂತ.

theory of rent: ಗೇಣಿ ಸಿದ್ಧಾಂತ. ಉತ್ಪಾದನಾ ಅಂಶಗಳಲ್ಲೊಂದಾದ ಭೂಮಿಗೆ ಪ್ರತಿಫಲವು ಯಾವ ರೀತಿಯಲ್ಲಿ ನಿರ್ಧರಿಸಲ್ಪಡುತ್ತದೆಯೆಂಬುದನ್ನು ವಿವರಿಸುವ ಸಿದ್ಧಾಂತ.

theory of repression: ನಿರೋಧ ಸಿದ್ಧಾಂತ.

theory of revolution: ಕ್ರಾಂತಿಯ ಸಿದ್ಧಾಂತ.

theory of rights: ಹಕ್ಕುಗಳ ಸಿದ್ಧಾಂತ.

theory of separation of powers: ಅಧಿಕಾರ ಪ್ರತ್ಯೇಕತಾ ಸಿದ್ಧಾಂತ. ನೋಡಿ: separation of power.

theory of sovereignty: ಪರಮಾಧಿಕಾರದ ಸಿದ್ಧಾಂತ.

theory of surplus value: ಅಧಿಕಾರ ಮೌಲ್ಯ ಸಿದ್ಧಾಂತ; ಮೌಲ್ಯಾಧಿಕ್ಯ ಸಿದ್ಧಾಂತ. ಬಂಡವಾಳಶಾಹಿಗಳು ಶ್ರಮಿಕರನ್ನು ಕಡಿಮೆ ಸಂಬಳಕೊಟ್ಟು ಶೋಷಣೆ ಮಾಡುವುದರ ಮೂಲಕ ತಮ್ಮ ಸಂಪತ್ತನ್ನು ಜಾಸ್ತಿ ಮಾಡುತ್ತಾ ಹೋಗುತ್ತಾರೆ ಎನ್ನುವ ತತ್ವ.

theory of survival: ನೋಡಿ: survival theory.

theory of value: ಮೌಲ್ಯದ ಸಿದ್ಧಾಂತ.

theory of wage: ಕೂಲಿಯ ಸಿದ್ಧಾಂತ.

therapeutic counselling: ಚಿಕಿತ್ಸಾತ್ಮಕ ಪರಮಾರ್ಶೆ; ಚಿಕಿತ್ಸಾತ್ಮಕ ಉಪಬೋಧನೆ.

therapeutic interview : ಚಿಕಿತ್ಸಾ ತ್ಮಕ ಸಂದರ್ಶನ.

therapeutic research: ಚಿಕಿತ್ಸಾತ್ಮಕ ಸಂಶೋಧನೆ.

therapeutic technique: ಚಿಕಿತ್ಸಾ ತಂತ್ರ.

therianthropic: ನರ-ಮೃಗಪೂಜಕ. ಮೃಗ ಮತ್ತು ಮಾನವ ಶರೀರದ ಸಂಯೋಗ ಗೊಂಡಿರುವ ದೇವತೆಗಳ ಪೂಜಕ.

thesis: ಸಿದ್ಧಾಂತ; ಮಹಾ ಪ್ರಬಂಧ.

'they' group: ಅವರ ಗುಂಪು; ಪರಕೀಯ ಗುಂಪು. ನೋಡಿ: out group.

thinking disorders: ಆಲೋಚನಾ ವಿಕಾರಗಳು. ವ್ಯಕ್ತಿಯ ವಿಚಾರ ಕ್ರಮವು ಸಂಘಟಿತವಾಗಿ, ಸುವ್ಯವಸ್ಥಿತವಾಗಿ ವಸ್ತು ವನ್ನು ನಿರ್ದೇಶಿಸದಿರುವುದು.

third world: ತೃತೀಯ ವಿಶ್ವ. ಮುಂದು ವರಿಯುತ್ತಿರುವ ಆಫ್ರಿಕಾ, ಏಶ್ಯಾ ಮತ್ತು ಲ್ಯಾಟಿನ್ ಅಮೆರಿಕ ಇವು ಮೂರನೇ ಜಗತ್ತಿನ ರಾಷ್ಟ್ರಗಳೆನಿಸಿವೆ. ಇವು ಅಭಿವೃದ್ಧಿಶೀಲ ಸಮಾಜಗಳು. ಇಂತಹ ದೇಶಗಳಲ್ಲಿ ಕೈಗಾರಿಕಾ ಉತ್ಪಾದನೆ ಅಲ್ಪಪ್ರಮಾಣ ದಲ್ಲಿರುತ್ತದೆ. ಜಗತ್ತಿನ ಜನಸಂಖ್ಯೆಯ ಬಹುಭಾಗ ಜನರು ಮೂರನೇ ಜಗತ್ತಿನ ದೇಶಗಳಲ್ಲಿ ವಾಸಿಸುತ್ತಾರೆ. ಇವುಗಳಲ್ಲಿ ಹೆಚ್ಚಿನವು ಎರಡನೇ ಮಹಾಯುದ್ಧದ ನಂತರ ಸ್ವಾತಂತ್ರ್ಯ ಗಳಿಸಿದ ರಾಷ್ಟ್ರಗಳು.

third world entrepot: ತೃತೀಯ ವಿಶ್ವ ವಲಸೆ ಪ್ರೇಷಕ. ಅನಭಿವೃದ್ಧಿ ಹೊಂದಿದ ದೇಶಗಳಿಗೆ ವಲಸೆ ಹೋಗುವಾಗ ಪ್ರವೇಶ ಕೇಂದ್ರವಾಗಿ ಕೆಲಸ ಮಾಡುವ ನಗರ ಅಥವಾ ದೇಶ.

thirst for democracy: ಪ್ರಜಾ ಪ್ರಭುತ್ವದ ಹಂಬಲ.

this worldly: ಇಹ ಪ್ರಾಪಂಚಿಕ.

thought experiment: ವಿಚಾರ ಪ್ರಯೋಗ.

thought process: ವಿಚಾರ ಪ್ರಕ್ರಿಯೆ.

thought reader: ಅನ್ಯಚಿತ್ತ ಗ್ರಾಹಕ.

thought transference: ವಿಚಾರ ವರ್ಗಾವಣೆ.

three field system: ತ್ರಿವಿಭಾಗ ವ್ಯವಸಾಯ ಪದ್ಧತಿ. ಹೊಲವನ್ನು ಮೂರು ವಿಭಾಗಗಳನ್ನಾಗಿ ಮಾಡಿ ಪ್ರತಿ ವರ್ಷ ಒಂದಲ್ಲ ಒಂದು ಭಾಗವನ್ನು ಬಿಟ್ಟು ಉಳಿದ ಎರಡು ವಿಭಾಗಗಳಲ್ಲಿ ಮಾತ್ರ ಸಾಗುವಳಿ ಮಾಡುವ ಕ್ರಮ.

three tier system: ಮೂರು ಹಂತ ಗಳನ್ನು ಒಳಗೊಂಡ ವ್ಯವಸ್ಥೆ. ಗ್ರಾಮೀಣ ಪ್ರದೇಶದ ಸ್ಥಳೀಯ ಸರಕಾರಗಳ ಬಗ್ಗೆ

ಬಲವಂತರಾಯ್ ಮೆಹತಾ ಸಮಿತಿಯು ಮೂರು ಶ್ರೇಣಿಯ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಶಿಫಾರಸು ಮಾಡಿತು. ಅವುಗಳೆಂದರೆ, ಗ್ರಾಮಪಂಚಾಯಿತಿ, ತಾಲೂಕು ಸಮಿತಿ ಮತ್ತು ಜಿಲ್ಲಾ ಪಂಚಾಯಿತಿ.

three world theory: ಮೂರು ಜಗತ್ತುಗಳ ಸಿದ್ಧಾಂತ. ೧೯೭೪ರಲ್ಲಿ ಚೀನಾದ ನಾಯಕರು ಮಂಡಿಸಿರುವ ಒಂದು ಸಿದ್ಧಾಂತ. ಅದರ ಪ್ರಕಾರ ಮೊದಲನೆ ಜಗತ್ತು ಅಮೆರಿಕ ಮತ್ತು ಸೋವಿಯತ್ ಒಕ್ಕೂಟಗಳಿಂದ ಕೂಡಿರುತ್ತದೆ. ಜಪಾನ್, ಯುರೋಪ್ ಮತ್ತು ಕೆನಡಾಗಳು ಎರಡನೆಯ ಜಗತ್ತಾಗಿದ್ದು ಏಷ್ಯಾವು (ಜಪಾನ್ ಬಿಟ್ಟು) ಮೂರನೆಯ ಜಗತ್ತಾಗಿರುತ್ತದೆ. ಇದೊಂದು ಕೃತಕ ರಾಜಕೀಯ ವಿಭಜನೆ.

thrift: ಉಳಿತಾಯ; ಮಿತವ್ಯಯ.

Tibeto-Burman: ಟಿಬೆಟೋ ಬರ್ಮನ್. ಟಿಬೆಟ್ ಮತ್ತು ಬರ್ಮೀ ಭಾಷೆಯ ಸಮ್ಮಿಶ್ರಿತ ಭಾಷಾ ಸ್ವರೂಪ.

tic: ಅಂಗಚೇಷ್ಟೆ. ಯಾತನೆಯಿಂದ ಕೂಡಿದ ಅಂಗಚೇಷ್ಟೆ.ಉದಾ: ಭುಜ ಕುಣಿಸುವುದು, ಮಾತನಾಡುವಾಗ ಕೈಹಿಸುಕಿ ಕೊಳ್ಳುವುದು ಇತ್ಯಾದಿ.

tie-in sales: ನಿರ್ಬಂಧಿತ ಮಾರಾಟ. ಒಂದು ಉತ್ಪನ್ನದ ಮಾರಾಟದೊಂದಿಗೆ ಇತರ ಕೆಲವು ವಸ್ತುಗಳೂ ಖರೀದಿಸಲ್ಪಡಬೇಕೆಂಬ ನಿರ್ಬಂಧವುಳ್ಳ ವಸ್ತುವಿನ (ಉತ್ಪನ್ನ) ಮಾರಾಟ.

tied loan: ಬಂಧಿತಸಾಲ; ನಿಬಂಧನೆ ಯುಕ್ತ ಸಾಲ.

tight money: ಬಿಗಿ ಹಣ. ಬಡ್ಡಿದರವು ಅಧಿಕವಾಗಿದ್ದು, ವ್ಯವಹಾರಗಳಿಗೆ ಹೆಚ್ಚು ಹಣವು ಸುಲಭವಾಗಿ ಒದಗದಂತಿರುವ ಸ್ಥಿತಿ.

tight money policy: ಬಿಗಿ ಹಣದ ನೀತಿ. ಅತಿಪ್ರಸರಣದ ಕಾಲದಲ್ಲಿ ಸರಕಾರವು ಅನುಸರಿಸಬೇಕಾದ ನೀತಿ.

time bill: ಕಾಲಿಕ ಹುಂಡಿ.

time budget: ಕಾಲದ ಪೂರ್ವ ಯೋಜನೆ.

time deposit: ಕಾಲಿಕ (ಅವಧಿ) ಠೇವಣಿ.

time element: ಕಾಲದ ಅಂಶ; ಸಮಯದ ಪರಿಗಣನೆ.

time geography: ಕಾಲ ಭೂಗೋಳ ಶಾಸ್ತ್ರ.

time measuring instrument: ಕಾಲಮಾಪನ ಸಾಧನ.

time period: ಕಾಲಾವಧಿ.

time perception: ಕಾಲದ ಪ್ರತ್ಯಕ್ಷ ಜ್ಞಾನ

time preference: ಕಾಲದೊಲವು. ಅನುಭೋಗಿಯು ಶೀಘ್ರ ಅನುಭೋಗಕ್ಕೆ ಮಹತ್ವವನ್ನು ನೀಡುವ ಪ್ರವೃತ್ತಿ.

time preference theory: ಕಾಲದೊಲವಿನ ಸಿದ್ಧಾಂತ.

time series analysis: ಸಮಯ ಶ್ರೇಣಿ ವಿಶ್ಲೇಷಣೆ.

time series data: ಸಮಯ ಶ್ರೇಣಿ ಅಂಕಿ ಅಂಶಗಳು.

time utility: ಕಾಲೋಚಿತ ತುಷ್ಟಿಗುಣ; ಸಮಯದ ತುಷ್ಟಿಗುಣ.

time disposition: ಕಾಲಾಧೀನ ಪ್ರವೃತ್ತಿ.

tinsit: ನೋಡಿ: tendency in situation.

tithes: ಧಾರ್ಮಿಕ ತೆರಿಗೆ; ಧರ್ಮ ಕಾಣಿಕೆಗಳು.

titular head: ನಾಮಮಾತ್ರ ಮುಖ್ಯಸ್ಥ. ಉದಾ: ಭಾರತದಲ್ಲಿ ರಾಷ್ಟ್ರಪತಿ ನಾಮಮಾತ್ರ ಮುಖ್ಯಸ್ಥ. ಇಲ್ಲಿ ಪ್ರಧಾನಿಯು ಹೆಚ್ಚು ಪ್ರಭಾವಶಾಲಿಯಾಗಿದ್ದು ರಾಷ್ಟ್ರದ ಎಲ್ಲಾ ಅಧಿಕಾರವನ್ನು ಚಲಾಯಿಸುವುದರಿಂದ ರಾಷ್ಟ್ರಪತಿಯನ್ನು ನಾಮಮಾತ್ರ ಮುಖ್ಯಸ್ಥ ಎನ್ನಲಾಗುತ್ತದೆ.

titular sovereignty: ನಾಮಮಾತ್ರ ಪರಮಾಧಿಕಾರ. ನೋಡಿ: titular head.

toilet training: ಶೌಚ ಶಿಕ್ಷಣ. ಮಗುವಿನ ಸಮಾಜೀಕರಣದ ದ್ವಿತೀಯ ಹಂತದಲ್ಲಿ ಶುಚಿತ್ವದ ಶಿಕ್ಷಣ ನೀಡಲಾಗುತ್ತದೆ.

token currency: ಕುರುಹಿನ ನಾಣ್ಯ; ಗುರುತಿನ ನಾಣ್ಯ. ನಾಣ್ಯದಂಥ ಮತ್ತು ನಾಣ್ಯಕ್ಕೆ ಬದಲಾಗಿ ಉಪಯೋಗಿಸುವ ವಸ್ತು.

token money: ಸಾಂಕೇತಿಕ ಹಣ.

toleration: ಸಹನೆ.

tolls : ಸುಂಕಗಳು.

tools of fiscal policy: ವಿತ್ತ (ಹಣ ಕಾಸು)ನೀತಿಯ ಪರಿಕರಗಳು.

top management : ಉನ್ನತ ನಿರ್ವಾಹಕ ಹಂತ. ಇಲಾಖೆಯ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ನಿರ್ದೇಶನ ಮತ್ತು ನಿಯಂತ್ರಣ ಕಾರ್ಯಗಳನ್ನು ಹೊಂದಿರುವ ಹಂತ.

topical plan: ವಿಷಯಾನುಗುಣ ಯೋಜನೆ.

topographical ability: ಸ್ವರೂಪಾತ್ಮಕ ಯೋಗ್ಯತೆ.

topographical psychology: ಸ್ವರೂಪಾತ್ಮಕ ಮನೋವಿಜ್ಞಾನ.

topography: ಭೌಗೋಳಿಕ ಮೇಲ್ಮೈ. ಒಂದು ರಾಜ್ಯದ (ರಾಷ್ಟ್ರದ) ಬೆಟ್ಟಗುಡ್ಡಗಳು, ನದಿ, ಸರೋವರ, ಸಮುದ್ರ, ಅರಣ್ಯ ಮತ್ತು ಸರಹದ್ದುಗಳನ್ನು ಒಳಗೊಂಡಿರುವ ಅಂಶ.

topological psychology: ಸ್ವರೂಪಾತ್ಮಕ ಮನಶ್ಶಾಸ್ತ್ರ; ಸ್ಥಾನವರ್ಣದ ಮನೋವಿಜ್ಞಾನ.

topology: ಸ್ಥಾನವರ್ಣನಾ ವಿಜ್ಞಾನ.

toponymy: ಸ್ಥಳನಾಮ ಅಧ್ಯಯನ.

torch bearers: ಮುಂಚೂಣಿಯಲ್ಲಿರುವವರು.

total cost: ಒಟ್ಟು ವೆಚ್ಚ.

total cost function: ಒಟ್ಟು ವೆಚ್ಚದ ಕಾರ್ಯ.

total debt liabilities: ಒಟ್ಟು ಸಾಲದ ಹೊಣೆಗಾರಿಕೆಗಳು.

total expenditure: ಒಟ್ಟು ಖರ್ಚು.

total fertility rate: ಒಟ್ಟು ಫಲೋತ್ಪನ್ನ ದರ.

total fixed cost: ಒಟ್ಟು ಸ್ಥಿರ ವೆಚ್ಚ.

total institution: ಸಮಗ್ರ ಸಂಸ್ಥೆ; ಸಂಪೂರ್ಣಸಂಸ್ಥೆ. ನಿರ್ದಿಷ್ಟ ಗುಣ ಧರ್ಮಗಳ ವ್ಯಕ್ತಿಗಳನ್ನು ಔಪಚಾರಿಕ ನಿಯಂತ್ರಣ ಹಾಗೂ ಮಾರ್ಗದರ್ಶನಗಳ ಮೂಲಕ ಸಮಾಜದಿಂದ ಹೊರಗೆ ಒಂದೆಡೆ ನಿರ್ಬಂಧಿಸಿಟ್ಟು ಅವರ ಜೀವನ ವಿಧಾನವನ್ನು ರೂಪಿ

ಸುವ ಸಂಸ್ಥೆ. ಉದಾ: ಸೈನಿಕ ಶಿಬಿರಗಳು, ವಸತಿ ಶಾಲೆಗಳು, ಆಸ್ಪತ್ರೆಗಳು, ಜೈಲುಗಳು.

total market demand: ಒಟ್ಟು ಮಾರುಕಟ್ಟೆ ಬೇಡಿಕೆ.

total outlay method: ಒಟ್ಟು ಖರ್ಚಿನ ವಿಧಾನ.

total psychosis: ಪೂರ್ಣ ಮನೋ ವಿಕ್ಷಿಪ್ತಿ.

total recall: ಪೂರ್ಣ ಸಂಸ್ಮರಣೆ.

total revenue: ಒಟ್ಟು ಆದಾಯ.

total revolution: ಸಮಗ್ರ ಕ್ರಾಂತಿ.

total theatre: ಸಮಗ್ರ ರಂಗಭೂಮಿ.

total variable cost: ಒಟ್ಟು ಬದಲಾಗ ಬಲ್ಲ ವೆಚ್ಚ.

total war: ಪೂರ್ಣ ಪ್ರಮಾಣದ ಯುದ್ಧ. ಆಧುನಿಕ ಪ್ರಪಂಚದಲ್ಲಿ ಯುದ್ಧಗಳು ಅಣು ಬಾಂಬು ಮತ್ತು ನ್ಯೂಕ್ಲಿಯರ್ ಬಾಂಬುಗಳ ಬಳಕೆಯಿಂದ ಇಡೀ ವಿಶ್ವವನ್ನೇ ದಮನ (ನಾಶ)ಮಾಡಬಲ್ಲ ಶಕ್ತಿಯನ್ನು ಹೊಂದಿರು ವುದು.

totalitarian diplomacy: ಸರ್ವ ಸ್ವಾಮ್ಯ ರಾಜತಂತ್ರ.

totalitarian state: ಸರ್ವಾಧಿಕಾರಿ ರಾಜ್ಯ.

totalitarian way of life: ನಿರಂಕುಶತೆಯ ಜೀವನ ಮಾರ್ಗ. ಸರ್ವಾಧಿಕಾರಿ ಆಡಳಿತವು ನಿರ್ಧರಿಸುವ ಜೀವನ ಮಾರ್ಗ. ಅದನ್ನು ಬಿಟ್ಟು ಬೇರೆ ಮಾರ್ಗವಿಲ್ಲ. ಉದಾ: ಸೋವಿಯತ್ ರಷ್ಯಾದಲ್ಲಿದ್ದ ಸಾಮ್ಯವಾದಿ ಪಕ್ಷದ ನಿರಂಕುಶತೆಯ ಜೀವನ ಮಾರ್ಗ.

totalitarianism: ನಿರಂಕುಶ ಪ್ರಭುತ್ವ ತತ್ವ.

totality: ಸಮಷ್ಟಿ.

totem: ಕುಲಚಿಹ್ನೆ. ನಿರ್ದಿಷ್ಟ ರಕ್ತ ಸಂಬಂಧಿ ಪಂಗಡದ ಸದಸ್ಯರು ವಿಶೇಷ ಆಧ್ಯಾತ್ಮ ಸಂಬಂಧ ಹೊಂದಿರುವ ವಸ್ತು ಅಥವಾ ಚಿಹ್ನೆ. ಆ ವಸ್ತು ಅಥವಾ ವಸ್ತುವಿನ ಹೆಸರಿನ ಮೂಲಕ ಆ ಪಂಗಡ ಗುರುತಿಸಲ್ಪಡು ತ್ತದೆ.

totem feast: ಕುಲದೇವತಾ ಹಬ್ಬದೂಟ. ಕುಲದೇವತಾರಾಧನೆಗೆ ಸಂಬಂಧಿಸಿ ಬುಡ ಕಟ್ಟು ಕುಲದ ಸದಸ್ಯರು ತಮ್ಮ ಕುಲಲಾಂಛ ನದ ಪ್ರಾಣಿಯನ್ನು ವರ್ಷದಲ್ಲಿ ಒಂದು ದಿನ ತಿನ್ನುವುದು.

totem pole: ಕುಲದೇವತಾ ಕಂಬ. ಕೆತ್ತಿದ ಅಥವಾ ತೂಗು ಹಾಕಿದ ಕುಲದೇವತೆಯ ಲಾಂಛನವುಳ್ಳ ಕಂಬ.

totemic emblem: ಕುಲದೇವತಾ ಚಿಹ್ನೆ.

totemic group: ಕುಲದೇವತಾ ಸಮೂಹ.

totemic kinship: ಕುಲಲಾಂಛನ ಬಂಧುತ್ವ. ಒಂದೇ ಕುಲಚಿಹ್ನೆ ಇರುವುದ ರಿಂದಾಗಿ ಗುರುತಿಸಲ್ಪಡುವ ಬಂಧುತ್ವ.

totemism: ಕುಲದೇವತಾ ಪದ್ಧತಿ.

town planning: ನಗರ ರಚನಾ ಯೋಜನೆ.

toxic psychosis: ವಿಷಜನ್ಯ ಮನೋ ವಿಕ್ಷಿಪ್ತಿ.

traces: ಗುರುತುಗಳು. ಭೂಮಿಯ ಮೇಲೆ ಗುರುತಿಲ್ಲದೆ ಏನೂ ಕಣ್ಮರೆಯಾಗುವು ದಿಲ್ಲ. ಈ ಗುರುತುಗಳ ಆಧಾರದಿಂದ ಇತಿಹಾಸದ ಅಧ್ಯಯನ ಮಾಡಲಾಗುತ್ತದೆ.

tract: ಪ್ರದೇಶ; ಪ್ರಾಂತ; ಅವಧಿ.

trade agreement: ವ್ಯಾಪಾರ ಒಪ್ಪಂದ.

trade area: ವ್ಯಾಪಾರ ಕ್ಷೇತ್ರ. ತೃತೀಯ ಸುತ್ತಿನಲ್ಲಿ ಗ್ರಾಮೀಣ ವ್ಯಾಪಾರವನ್ನು ಪಡಕೊಳ್ಳುವ ಪ್ರದೇಶ.

trade association: ವ್ಯಾಪಾರಸಂಘ.

trade balance: ವ್ಯಾಪಾರ ಶಿಲ್ಕು (ಬಾಕಿ).

trade barrier: ವ್ಯಾಪಾರ ತಡೆ; ವ್ಯಾಪಾರ ನಿರ್ಬಂಧ. ವ್ಯಾಪಾರ ವ್ಯವಹಾರಗಳ ಮುಕ್ತ ಅಂತಾರಾಷ್ಟ್ರೀಯ ವಿನಿಮಯದ ಮೇಲೆ ಸರಕಾರವು ಹೇರುವ ಯಾವುದೇ ಮಿತಿಗಳಿಗೆ ಉಪಯೋಗಿಸಲಾಗುವ ಪದ.

trade credit: ವ್ಯಾಪಾರೀ ಸಾಲ.

trade cycle: ವ್ಯಾಪಾರೀ ಆವರ್ತ. ರಾಷ್ಟ್ರೀಯ ಆದಾಯದ ಮಟ್ಟದಲ್ಲಿ ಉಂಟಾಗುವ ಕ್ರಮಾನುಗತ ಏರಿಳಿತಗಳು.

trade discount: ವ್ಯಾಪಾರೀ ಸೋಡಿ. ಉತ್ಪಾದಕನು ವಿತರಕರಿಗೆ ಅಥವಾ ಸಗಟು ವ್ಯಾಪಾರಿಯು ಚಿಲ್ಲರೆ ವ್ಯಾಪಾರಿಗೆ ತನ್ನ ಉತ್ಪನ್ನಗಳನ್ನು ಮಾರಾಟ ಮಾಡುವಾಗ ನೀಡುವ ರಿಯಾಯಿತಿ ಬೆಲೆ.

trade dispute: ವ್ಯಾಪಾರ ವಿವಾದ.

trade diversion: ವ್ಯಾಪಾರ ಬದಲಾವಣೆ.

trade gap: ವ್ಯಾಪಾರ ಅಂತರ. ಸರಕು ಹಾಗೂ ಸೇವೆಗಳ ರಫ್ತಿನ ಮೌಲ್ಯಕ್ಕಿಂತ ಸರಕು ಹಾಗೂ ಸೇವೆಗಳ ಆಮದಿನ ಮೌಲ್ಯದಲ್ಲಿನ ಮಿಗತೆ.

trade guild: ವೃತ್ತಿಸಂಘ.

trade investment: ವ್ಯಾಪಾರ ಹೂಡಿಕೆ. ಒಂದು ಕಂಪೆನಿಯು ಇನ್ನೊಂದು ಕಂಪೆನಿಯಲ್ಲಿ ಹೊಂದಿರುವ ಶೇರು.

trade union: ಕಾರ್ಮಿಕ ಸಂಘ. ನೋಡಿ: employee's union.

trade village: ನೋಡಿ: village craft.

trading company: ವಾಣಿಜ್ಯ ಸಂಸ್ಥೆ (ಕಂಪೆನಿ).

trading currency: ವ್ಯಾಪಾರ ಕರೆನ್ಸಿ. ಅಂತಾರಾಷ್ಟ್ರೀಯ ವ್ಯಾಪಾರದಲ್ಲಿ ಧಾರಣೆಗೊಳ್ಳುವ ಹಣ.

tradition: ಪರಂಪರೆ. ಸಮಾಜೀಕರಣದ ಪ್ರಕ್ರಿಯೆಯ ಮೂಲಕ ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಮುಂದುವರಿಯುವ ಸಾಮಾಜಿಕ ಪದ್ಧತಿ.

tradition directed society: ಸಂಪ್ರದಾಯ ನಿರ್ದೇಶಿತ ಸಮಾಜ. ಸಮಾಜದ ಸದಸ್ಯರ ಸಂಪ್ರದಾಯಗಳನ್ನು ಅನುವರ್ತಿಸುವಂತಹ ಮಾದರಿ ಸಮಾಜ.

traditional approach: ಸಾಂಪ್ರದಾಯಿಕ ಸಮೀಪನ. ಇತಿಹಾಸ, ತತ್ವಶಾಸ್ತ್ರ, ನ್ಯಾಯಶಾಸ್ತ್ರ ಮೊದಲಾದುವುಗಳ ಆಧಾರವನ್ನು ಹೊಂದಿರುವ ದೃಷ್ಟಿಕೋನ ಅಥವಾ ಅಧ್ಯಯನ ವಿಧಾನ.

traditional authority: ಸಾಂಪ್ರದಾಯಿಕ ಅಧಿಕಾರ. ಸಂಪ್ರದಾಯಗಳ ಪಾವಿತ್ರ್ಯತೆಯಿಂದ ಪಡೆದ ಅಧಿಕಾರ.

traditional lore: ಪರಂಪರಾಗತ ಜ್ಞಾನ.

traditional model: ಸಾಂಪ್ರದಾಯಿಕ ಮಾದರಿ.

traditional occupation: ಸಾಂಪ್ರದಾಯಿಕ ಕುಲಕಸುಬು.

traditional practice: ಸಾಂಪ್ರದಾಯಿಕ ನಡವಳಿಕೆ; ಹಿಂದಿನಿಂದ ಬಂದ ಆಚರಣೆ.

traditional religious leader: ಸಾಂಪ್ರದಾಯಿಕ ಧಾರ್ಮಿಕ ನಾಯಕ.

traditional sector: ಸಾಂಪ್ರದಾಯಿಕ ವಲಯ.

traditional theory of soverei gnty: ಪರಮಾಧಿಕಾರದ ಸಾಂಪ್ರದಾಯಿಕ ಸಿದ್ಧಾಂತ.

traditional view: ಪರಂಪರಾಗತ ದೃಷ್ಟಿಕೋನ; ಸಾಂಪ್ರದಾಯಿಕ ದೃಷ್ಟಿ ಕೋನ.

traditionalism: ಪರಂಪರಾ ವಾದ; ಸಂಪ್ರದಾಯ ವಾದ. ಪರಂಪರೆಯ ಮೌಲ್ಯ ಗಳೇ ಜೀವನದ ಸಮಸ್ಯೆಗಳಿಗೆ ಪರಿಹಾರ ನೀಡಬಲ್ಲವಾಗಿವೆಯೆಂಬ ವಾದ.

traditionality: ಸಾಂಪ್ರದಾಯಿಕತೆ.

traffic in human beings:ಮಾನವ ದುರ್ವ್ಯವಹಾರ. ಉದಾ: ವೇಶ್ಯಾವಾಟಿಕೆ.

trained incapacity: ತರಬೇತಾದ ಅಸಾಮರ್ಥ್ಯ. ಒಬ್ಬ ವ್ಯಕ್ತಿಯು ತನ್ನ ತರಬೇತಿ ಹಾಗೂ ಅನುಭವಗಳ ನೆಲೆಯಲ್ಲಿ ವಿಶೇಷ ಜ್ಞಾನವನ್ನು ಪಡೆಯುತ್ತಿದ್ದಂತೆ ಅವನ ಕ್ಷೇತ್ರದಲ್ಲಿ ಸಾಮಾನ್ಯ ವಿಷಯಗಳ ಬಗ್ಗೆ ವಿಮರ್ಶಿಸುವ ಅಥವಾ ವಿವರಿಸುವ ಸಾಮರ್ಥ್ಯವು ಸಂಕುಚನಗೊಳ್ಳುತ್ತದೆ. ಉದಾ: ಮಕ್ಕಳ ತಜ್ಞನು ವಯಸ್ಕ ರೋಗಿಯ ಸಾಮಾನ್ಯ ಜ್ವರಕ್ಕೆ ಔಷಧಿ ಕೊಡಲು ಹಿಂಜರಿ ಯುತ್ತಾನೆ. ಇದಕ್ಕೆ ಆತನ ವಿಶೇಷ ತರ ಬೇತಿಯೇ ಕಾರಣ.

training of attention: ಅವಧಾನದ ತರಬೇತಿ.

training of emotion: ಸಂವೇಗ ತರಬೇತಿ.

trait: ಗುಣಲಕ್ಷಣ; ಸ್ವಭಾವ.

trait cluster: ವಿಶಿಷ್ಟ ಗುಣಪುಂಜ.

trait complex: ನೋಡಿ :culture complex.

trait consistency: ವಿಶಿಷ್ಟ ಗುಣ ದೃಢತೆ.

tranquility: ಶಾಂತಿ.

transaction cost: ವ್ಯವಹಾರೀ ವೆಚ್ಚ; ಸಾಗಾಟ ವೆಚ್ಚ. ಖರೀದಿ ಹಾಗೂ ಮಾರಾ ಟದ ಪ್ರಕ್ರಿಯೆಗಳಲ್ಲಿ ಸಂಯೋಜಿತವಾದ ವೆಚ್ಚ.

transaction demand for money: ವ್ಯವಹಾರ ಪ್ರೇರಕ ಹಣದ ಬೇಡಿಕೆ. ಜನರು ತಮ್ಮ ದೈನಂದಿನ ವ್ಯವಹಾರಗಳಿಗೋಸ್ಕರ ಬೇಡಿಕೆ ಸಲ್ಲಿಸುವ ಹಣ.

transaction by agreement: ಒಪ್ಪಂದದ ವ್ಯವಹಾರ.

transaction motive: ವ್ಯವಹಾರ ಉದ್ದೇಶ. ದೈನಂದಿನ ಖರ್ಚುಗಳಿಗೆ ಹಣ ಕಾಸನ್ನು ಒದಗಿಸಲು ಜನರು ಅಥವಾ ಉದ್ಯಮಗಳು ಹಣವನ್ನು ಶೇಖರಿಸಲು ಪ್ರೇರಿಸುವ ಅಂಶ.

transcendental: ವಿಷಯಾತೀತ; ಬುದ್ಧಿ ರೂಢ. ಅನುಭವದಲ್ಲಿ ಸೇರಿರುವ ಮತ್ತು ಅನುಭವಕ್ಕೆ ಅವಶ್ಯವಾದ ಆದರೆ ಅನುಭವಾ ತೀತ ವಿಚಾರಶಕ್ತಿ.

transcendental illusion: ಪ್ರಾಗಾನು ಭವಾತ್ಮಕ ಭ್ರಮೆ.

transfer cost: ವರ್ಗಾವಣೆ ವೆಚ್ಚ. ಒಂದು ವಸ್ತುವನ್ನು ಅಥವಾ ಸರಕನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವರ್ಗಾಯಿ ಸಲು ತಗಲುವ ವೆಚ್ಚ.

transfer deed: ವರ್ಗಾವಣೆ ದಸ್ತಾ ವೇಜು. ಮಾರಾಟಗಾರನಿಂದ ಖರೀದಿಸುವ

ವನಿಗೆ ಸಾಲಪತ್ರಗಳ ಯಜಮಾನಿಕೆಯ ವರ್ಗಾವಣೆಗೆ ನೀಡುವ ಕಾನೂನಿನ ದಾಖಲೆ ಪತ್ರ.

transfer earning: ವರ್ಗಾವಣೆ ಗಳಿಕೆ.

transfer moratorium: ಸಾಲ ತೀರಿಕೆಯ ವರ್ಗಾವಣೆ. ಆಮದು ಸರಕುಗಳ ಪಾವತಿ ಅಥವಾ ವಿದೇಶೀ ಬಂಡವಾಳದ ಬಡ್ಡಿಯನ್ನು ವ್ಯಾಪಾರ ಒಪ್ಪಂದದಲ್ಲಿ ನಿರ್ಣಯಿಸಲಾದ ಅವಧಿ ತೀರಿದ ಬಳಿಕವಷ್ಟೇ ವಿದೇಶೀ ಬ್ಯಾಂಕುಗಳಿಗೆ ವರ್ಗಾಯಿಸುವ ಪದ್ಧತಿ.

transfer payment: ವರ್ಗಾವಣೆ ಪಾವತಿ.

transfer with designation: ನಾಮ ಸೂಚಿತ ವರ್ಗಾವಣೆ.

transferable good: ಸಾಗಿಸಬಹುದಾದ ಸರಕು; ವರ್ಗಾವಣೆಗೆ ಯೋಗ್ಯವಾದ ಸರಕು.

transferable vote: ವರ್ಗಾಯಿಸಬಹುದಾದ ಮತ.

transference: ವರ್ಗಾವಣೆ; ಭಾವಾಂತರಣ. ೧. ಸಾರ್ವಜನಿಕ ಅಭಿಪ್ರಾಯದಲ್ಲಿ ವಿಚಾರಗಳ ವರ್ಗಾವಣೆ. ೨. ರೋಗಿ ಚಿಕಿತ್ಸಕನ ಮಧ್ಯೆ ಬೆಳೆಯುವ ಭಾವ ಸಂಬಂಧ.

transferred memory: ವರ್ಗಾವಣೆಯಾದ ಸ್ಮರಣೆ; ಸ್ಥಾನಾಂತರಿತ ಸ್ಮರಣೆ.

transferred power: ವರ್ಗಾಯಿಸಲ್ಪಟ್ಟ ಅಧಿಕಾರ.

transferred subjects: ವರ್ಗಾಯಿಸಿದ ವಿಷಯಗಳು.

transformation: ರೂಪ ಪರಿವರ್ತನೆ; ರೂಪಾಂತರಣ.

transformation curve: ಪರಿವರ್ತನಾ ರೇಖೆ; ಬದಲಾವಣಾ ರೇಖೆ.

transformation of mental state: ಮಾನಸಿಕ ಅವಸ್ಥೆಗಳ ರೂಪಾಂತರಣ.

transformative movement: ಪರಿವರ್ತನಾ ಚಳವಳಿ. ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಗಳನ್ನು ಉತ್ಪಾದಿಸುವಂತಹ ಸಾಮಾಜಿಕ ಚಳವಳಿ.

transhumance: ಋತುಪ್ರವಾಸ. ಸಸ್ಯಗಳು ಸಿಗುವ ಕಡೆಗೆ ಕಾಲದಿಂದ ಕಾಲಕ್ಕೆ ಸ್ಥಳಾಂತರ ಹೋಗುತ್ತಿದ್ದ ಆದಿವಾಸಿಗಳ ವಲಸೆ.

transient situational: ಅಸ್ಥಿರ ಸನ್ನಿವೇಶಾತ್ಮಕ.

transit duties: ರವಾನೆ ಸುಂಕಗಳು.

transition: ಸ್ಥಿತ್ಯಂತರ; ಸ್ಥಳಾಂತರ; ಪರಿವರ್ತನೆ.

transitional classes: ಸ್ಥಿತ್ಯಂತರ ವರ್ಗಗಳು. ಅವನತಿ ಹೊಂದುತ್ತಿರುವ ಅಥವಾ ಹೊಸ ಸಮಾಜದಲ್ಲಿ ತೆವಳುತ್ತಿರುವ ವರ್ಗಗಳು. ಉದಾ: ಬಂಡವಾಳಶಾಹಿ ಸಮಾಜದಲ್ಲಿ ರೈತರು ಹಾಗು ದೊಡ್ಡ ಭೂಮಾಲಿಕರು.

transitional constitution: ಸ್ಥಿತ್ಯಂತರ ಸಂವಿಧಾನ. ಕಾಲಕಾಲಕ್ಕೆ ಬದಲಾವಣೆಗೊಳಗಾಗುವ ಸಂವಿಧಾನ.

transitional life cycle: ಆವರ್ತನಾತ್ಮಕ ಜೀವನ ಚಕ್ರ.

transitional period: ಸಂಕ್ರಮಣ ಕಾಲ; ಸಂಧಿಕಾಲ.

transitional society: ಪರಿವರ್ತಕ ಸಮಾಜ; ಪರಿವರ್ತನೀಯ ಸಮಾಜ.

transitoriness of mental state: ಮಾನಸಿಕ ಅವಸ್ಥೆಯ ಪರಿವರ್ತನಾಶೀಲತೆ.

transitory: ಪರಿವರ್ತನ ಶೀಲ; ಕ್ಷಣಿಕ.

transliteration : ಲಿಪ್ಯಂತರ; ಲಿಪಿ ಬದಲಾವಣೆ.

transmigration of soul: ಆತ್ಮದ ಪರಕಾಯ ಪ್ರವೇಶ; ಆತ್ಮದ ಪುನರ್‌ಜನನ.

transmission: ನೋಡಿ: cultural transmission.

transnational company: ನೋಡಿ: multi national company.

transplantation: ಬದಲೀ ಜೋಡಣೆ.

transport co-ordination: ಸಾರಿಗೆ ಸಮನ್ವಯ.

transubstantiation: ಪದಾರ್ಥ ಪರಿವರ್ತನೆ. ಒಂದು ಪದಾರ್ಥವನ್ನು ಮತ್ತೊಂದು ಪದಾರ್ಥವಾಗಿ ಭಾವಿಸುವುದು. ಉದಾ: ಕ್ರಿಶ್ಚಿಯನ್ನರ ಪ್ರಭು ಭೋಜನ ಸಂಸ್ಕಾರದಲ್ಲಿಯ ರೊಟ್ಟಿ, ಮದ್ಯಗಳು ಕ್ರಿಸ್ತನ ಮಾಂಸ, ರಕ್ತಗಳೆಂದು ಭಾವಿಸುವುದು.

transvertism: ಬದಲುಡಿಗೆ. ಭಿನ್ನ ಲಿಂಗದ ಅಂದರೆ ಹುಡುಗರು ಹುಡುಗಿಯರ ಮತ್ತು ಹುಡುಗಿಯರು ಹುಡುಗರ ಉಡುಗೆ ಧರಿಸಿ ಲೈಂಗಿಕ ತೃಪ್ತಿಹೊಂದುವುದು. ನೋಡಿ: eonism.

trauma: ಆಘಾತ.

trauma conflict: ಆಘಾತ ತುಮುಲ; ಆಘಾತ ಸಂಘರ್ಷ.

travelogue: ಪ್ರವಾಸ ಕಥನ.

treachery: ದ್ರೋಹ; ವಿಶ್ವಾಸಘಾತುಕತೆ.

treason: ದೇಶದ್ರೋಹ; ರಾಜದ್ರೋಹ.

treasure trove: ಗುಪ್ತ ನಿಧಿ; ನಿಕ್ಷೇಪ.

treasury: ಕೋಶ; ಖಜಾನೆ.

treasury bill: ಖಜಾನೆ ಹುಂಡಿ.

treatment interview: ಚಿಕಿತ್ಸಾತ್ಮಕ ಸಂದರ್ಶನ.

treaty: ಒಪ್ಪಂದ; ಕರಾರು.

treaty obligation: ಒಪ್ಪಂದ ಬಾಧ್ಯತೆ.

tree burial: ವೃಕ್ಷ ಶವಸಂಸ್ಕಾರ. ಮರದ ಪೊಟರೆಯೊಳಗೆ ಅಥವಾ ಮರದ ರೆಂಬೆಗಳಿಂದ ನಿರ್ಮಿತವಾದ ವೇದಿಕೆಯಲ್ಲಿ ಶವವನ್ನು ಇಟ್ಟು ಸಂಸ್ಕಾರ ನಡೆಸುವ ಕ್ರಮ.

tree marriage: ವೃಕ್ಷ ವಿವಾಹ. ೧. ಭಾರತದಲ್ಲಿ ಬೇವು ಮತ್ತು ಅರಳಿ ಗಿಡಗಳನ್ನು ವಿಷ್ಣು ಮತ್ತು ಲಕ್ಷ್ಮಿ ಎಂದು ತಿಳಿದು ಮದುವೆ ಆಚರಿಸುವುದು. ೨. ಎರಡನೆಯ ಬಾರಿ ವಿಧುರನಾದವನು ಮತ್ತೆ ಮದುವೆಯಾಗುವ ಮುನ್ನ ಮೂರನೆಯದಾಗಿ ಬಾಳೆಗಿಡ ಅಥವಾ ಮರದೊಂದಿಗೆ ವಿವಾಹವಾಗಿ ಅದನ್ನು ಕಡಿದು ಹಾಕಿ ನಾಲ್ಕನೆ ಮದುವೆ ಆಗುವುದು. ಏಕೆಂದರೆ ಮೂರನೆಯ ಸಂಖ್ಯೆ ಅಮಂಗಲಕರವೆಂಬ ನಂಬಿಕೆ. ೩. ಅವಿವಾಹಿತ ಪುರುಷನು ಮಡಿದಾಗ ಆತನು ಸದ್ಗತಿಗೆ ಯೋಗ್ಯನಲ್ಲವೆಂಬ ನಂಬಿಕೆಯಿಂದ ಅವನ ಶವ ಸಂಸ್ಕಾರದ ಮುನ್ನ ಅವನನ್ನು ಒಂದು ವಿಶಿಷ್ಟ ಗಿಡದೊಂದಿಗೆ ವಿವಾಹ ಮಾಡಿ ಕೂಡಲೇ ಅದನ್ನು ಕಡಿದು ಹಾಕುವ ಪದ್ಧತಿ.

tree of liberty: ಸ್ವಾತಂತ್ರ್ಯ ವೃಕ್ಷ. ಟಿಪ್ಪು ಶ್ರೀರಂಗಪಟ್ಟಣದಲ್ಲಿ ನೆಡಿಸಿರುವ ವೃಕ್ಷ.

tremor: ನಡುಕ.

trend: ಒಲವು; ಧೋರಣೆ; ಗತಿ.

trend equation: ಗತಿಸೂಚಕ ಸಮೀಕರಣ.

trend line: ಗತಿಸೂಚಕ ರೇಖೆ.

trends in population: ಜನಸಂಖ್ಯಾ ಒಲವುಗಳು. ಜನಸಂಖ್ಯೆಯ ಗಾತ್ರ ಹಾಗೂ ರಚನೆಯ ಅಂಶಗಳಲ್ಲಿ ಉಂಟಾಗುವ ವ್ಯೆಪರೀತ್ಯಗಳಿಂದಾಗಿ ಕಂಡುಬರುವ ಭಾವೀ ಬದಲಾವಣೆಗಳು ಅಥವಾ ಬೆಳವಣಿಗೆಯ ಸೂಚಕ.

tresspass: ಅತಿಕ್ರಮಣ.

triad: ಮುಕ್ಕೂಟ; ಮೂವರತಂಡ; ತ್ರಿಯೋಗ. ಉದಾ: ಮೂರು ವಿಧದಲ್ಲಿ ವರ್ಗೀಕೃತವಾಗಿರುವ ದೇವತೆಗಳ ಸಮುಚ್ಛಯ. ಹಿಂದುಗಳಲ್ಲಿ ತ್ರಿಮೂರ್ತಿಗಳು, ಕ್ರಿಶ್ಚಿಯನ್‌ರಲ್ಲಿ 'ಟ್ರಿನಿಟಿ' ಇತ್ಯಾದಿ.

trial and error learning: ಯತ್ನದೋಷ ಕಲಿಕೆ. ತಪ್ಪುಮಾಡಿ ಸರಿ ಯಾವುದೆಂದು ತಿಳಿಯುವುದರ ಮೂಲಕ ಕಲಿಯುವುದು.

trial and error method: ಯತ್ನದೋಷ ವಿಧಾನ; ಪ್ರಯೋಗ ಮತ್ತು ತಪ್ಪುವಿಕೆಯ ವಿಧಾನ. ಯಾವುದೇ ಜ್ಞಾನವು ಪ್ರಯೋಗ ಮತ್ತು ಅದರಲ್ಲಿ ಕಂಡುಬರುವ ತಪ್ಪುಗಳ ತಿದ್ದುವಿಕೆಯಿಂದ ಬೆಳೆಯುತ್ತದೆಂಬ ಸಿದ್ಧಾಂತವಿದೆ. ಪ್ರತಿಯೊಂದು ಮಗುವೂ ಮೊದಲು ತಪ್ಪು ಹೆಜ್ಜೆ ಇಟ್ಟು ನಂತರ ತಾನಾಗಿ ಆ ತಪ್ಪನ್ನು ತಿದ್ದುವ ಸಾಮರ್ಥ್ಯ ಬೆಳೆಸಿಕೊಳ್ಳುತ್ತದೆ. ಹೆಚ್ಚಿನ ಸಂಶೋಧನೆಗಳು ಪ್ರಯೋಗ ಮತ್ತು ತಪ್ಪುವಿಕೆಯ ಹಂತದಿಂದಲೇ ಆರಂಭವಾಗುತ್ತವೆ ಎನ್ನಲಾಗಿದೆ.

trial archetype: ಪ್ರಾಯೋಗಿಕ ಮೂಲಮಾದರಿ.

trial court: ವಿಚಾರಣಾ ನ್ಯಾಯಾಲಯ.

trial urtype: ನೋಡಿ: trial archetype.

triangulation method: ತ್ರಿಕೋನಕಲ್ಪ ವಿಧಾನ. ಒಂದೇ ಸಂಶೋಧನಾ ವಿಧಾನವನ್ನು ಬಳಸುವ ಬದಲು ಬಹು ವಿಧಾನದ ಸಂಶೋಧನಾ ವಿಧಾನಗಳನ್ನು ಬಳಸಿ ನಂಬಲರ್ಹವಾದ ಪ್ರಾಯೋಗಿಕ ಅಂಕಿ ಸಂಖ್ಯೆಗಳನ್ನು ಪಡೆಯುವುದು.

tribal analogy: ಆದಿವಾಸಿ ಸಾದೃಶ್ಯ.

tribal chieftain: ಬುಡಕಟ್ಟಿನ ಸೇನಾನಿ.

tribal community: ಬುಡಕಟ್ಟು ಸಮುದಾಯ.

tribal council: ಬುಡಕಟ್ಟು ಮಂಡಳಿ.

tribal culture: ಬುಡಕಟ್ಟಿನ ಸಂಸ್ಕೃತಿ.

tribal endogamy: ಆದಿವಾಸಿ ಒಳಬಾಂಧವ್ಯ.

tribal extinction: ಬುಡಕಟ್ಟು ಕಣ್ಮರೆಯಾಗುವಿಕೆ(ನಶಿಸಿ ಹೋಗುವಿಕೆ); ಬುಡಕಟ್ಟುಗಳ ಅಳಿವು.

tribal folklore: ಬುಡಕಟ್ಟು ಜಾನಪದ.

tribal God: ಬುಡಕಟ್ಟು ದೇವತೆ.

tribal justice: ಬುಡಕಟ್ಟಿನ ನ್ಯಾಯ.

tribal society: ಆದಿವಾಸಿ ಸಮಾಜ; ಬುಡಕಟ್ಟು ಸಮಾಜ.

tribalization: ಆದಿವಾಸೀಕರಣ.

tribe: ಬುಡಕಟ್ಟು. ನಿರ್ದಿಷ್ಟ ಪ್ರದೇಶ, ಭಾಷೆ, ಸಾಂಸ್ಕೃತಿಕ ಏಕರೂಪತೆ ಮತ್ತು ಏಕೀಕೃತ ಸಾಮಾಜಿಕ ಸಂಘಟನೆ ಇರುವ ಸಾಮಾಜಿಕ ಪಂಗಡ.

tribunal: ನ್ಯಾಯಮಂಡಳಿ. ಒಂದು ನಿರ್ದಿಷ್ಟ ವಿಷಯ ಅಥವಾ ವಿವಾದದ ಬಗ್ಗೆ ತನಿಖೆ ನಡೆಸುವ ಅಥವಾ ನ್ಯಾಯ ತೀರ್ಮಾನ ನೀಡುವ ಅಧಿಕಾರ ಹೊಂದಿರುವ ಸಮಿತಿ ಅಥವಾ ಮಂಡಲಿ.

tribunal conflict: ವಿವಾದಗಳಿಗೆ ಸಂಬಂಧಿಸಿದ ನ್ಯಾಯಮಂಡಳಿ.

tribune: ಪ್ರಜಾರಕ್ಷಕ ಮಂಡಳಿ; ನ್ಯಾಯ ವೇದಿಕೆ.

tribunician power: ನ್ಯಾಯ ಪೀಠಾಧಿಕಾರ.

tribute: ಕಪ್ಪ.

trickle of oral tradition: ಮೌಖಿಕ ಪರಂಪರೆಯ ಜಿನುಗು ಹರಿತ.

trickster tale: ತಂತ್ರಿ ಕತೆ.

tridimensional theory of feeling: ಭಾವನೆಯ ತ್ರಿ ಆಯಾಮೀಯ ಸಿದ್ಧಾಂತ.

trinity: ತ್ರಿತತ್ವ; ತ್ರಿಮೂರ್ತಿ ತತ್ವ.

tripartite agreement: ತ್ರಿಪಕ್ಷೀಯ ಒಪ್ಪಂದ.

tripitaka: ತ್ರಿಪಿಟಕ. ಸುಪ್ತ, ವಿನಯ, ಅಭಿದಮ್ಮ ಎಂಬ ತ್ರಿಪಿಟಕಗಳು ಬೌದ್ಧ ಧರ್ಮದ ಪವಿತ್ರ ಗ್ರಂಥಗಳು.

triple alliance: ತ್ರಿವಳಿ ಮೈತ್ರಿಕೂಟ; ತ್ರಿವಳಿ ಮೈತ್ರಿ.

triple column tariff: ಮೂರು ಸಾಲಿನ ಸುಂಕ.

triple entente: ತ್ರಿವಳಿ ಒಪ್ಪಂದ.

triratna of Jainism: ಜೈನ ಧರ್ಮದ ರತ್ನತ್ರಯಗಳು. ಸಮ್ಯಕ್ ದರ್ಶನ, ಸಮ್ಯಕ್ ಜ್ಞಾನ, ಸಮ್ಯಕ್‌ಚಾರಿತ್ರ್ಯ ಇವನ್ನು ಮೋಕ್ಷ ಮಾರ್ಗದ ರತ್ನತ್ರಯಗಳೆಂದು ಜೈನರು ನಂಬುತ್ತಾರೆ.

triumvirate: ಮೂವರ ಕೂಟ.

trophy: ವಿಜಯ ಸ್ಮಾರಕ.

tropic: ಉಷ್ಣವಲಯ.

tropic action: ಭಾವೋದ್ರೇಕ ಕ್ರಿಯೆ.

Trotskyism: ಟ್ರಾಟ್‌ಸ್ಕಿವಾದ. ಮಾರ್ಕ್ಸ್‌ವಾದ-ಲೆನಿನ್‌ವಾದಕ್ಕೆ ವಿರೋಧವಾದೊಂದು ಪುಟ್ಟ ಬಂಡವಾಳಶಾಹಿ ಧೋರಣೆ. ೨೦ನೇ ಶತಮಾನದಲ್ಲಿ ಹುಟ್ಟಿಕೊಂಡ ಟ್ರಾಟ್‌ಸ್ಕಿವಾದ ಮಾರ್ಕ್ಸ್‌ವಾದಿ ಪಾರ್ಟಿಯ ರಚನೆಯನ್ನು ಮತ್ತು ಕ್ರಾಂತಿಯಲ್ಲಿ ಶ್ರಮಜೀವಿ ವರ್ಗದ ನೇತೃತ್ವವನ್ನು ವಿರೋಧಿಸಿದ್ದರು.

truancy: ಶಾಲೆಗಳ್ಳತನ.

truant child: ಮೈಗಳ್ಳ ಮಗು; ಪಲಾಯನಶೀಲ ಮಗು; ಅಲೆಯುವ ಮಗು.

truce: ಸಮರ ಶಾಂತಿ.

true value: ನೈಜ ಮೌಲ್ಯ.

trust: ನ್ಯಾಸ. ಪೈಪೋಟಿಯನ್ನು ಕಡಿಮೆ ಮಾಡುವುದಕ್ಕಾಗಿ ವ್ಯಾಪಾರಿ ಸಂಘಗಳು ಒಟ್ಟು ಸೇರಿ ಸ್ಥಾಪಿಸಿಕೊಳ್ಳುವ ಕೇಂದ್ರ ಸಮಿತಿ ಸಂಸ್ಥೆ.

trust deed: ನ್ಯಾಸ ಒಪ್ಪಂದ ಪತ್ರ.

trust fund: ನ್ಯಾಸ ನಿಧಿ.

trust property: ನ್ಯಾಸದ ಆಸ್ತಿ.

trust receipt: ನ್ಯಾಸ ರಶೀದಿ.

trust territory: ನ್ಯಾಸ ಪ್ರದೇಶ.

trustee: ನ್ಯಾಸಧಾರಿ; ಧರ್ಮದರ್ಶಿ.

trusteeship council: ಧರ್ಮದರ್ಶಿ ಸಮಿತಿ; ಉಸ್ತುವಾರಿ ಮಂಡಳಿ.

trusteeship family: ನ್ಯಾಸ ಕುಟುಂಬ.

ವ್ಯಕ್ತಿಯ ಮೇಲೆ ಕುಟುಂಬದ ನಿಯಂತ್ರಣ ಹೆಚ್ಚು ಇದ್ದು ವೈಯಕ್ತಿಕ ಶ್ರೇಯಸ್ಸಿಗಿಂತಲೂ ಕುಟುಂಬದ ಶ್ರೇಯಸ್ಸೇ ಪ್ರಾಮುಖ್ಯ ಎಂಬ ಭಾವನೆಯುಳ್ಳ ಕುಟುಂಬ. ಇಂಥ ಕುಟುಂಬಗಳಲ್ಲಿ ಕುಟುಂಬದ ಸದಸ್ಯರು ತಮ್ಮ ಪೂರ್ವಿಕರ ರಕ್ತ, ಆಸ್ತಿ, ಹೆಸರು ಇವೆಲ್ಲವನ್ನೂ ಇನ್ನೂ ಹುಟ್ಟದ ಮುಂದಿನ ಪೀಳಿಗೆಗಾಗಿ ಉಳಿಸಿ ಬೆಳೆಸುವ ಪಾರುಪತ್ಯಗಾರರಷ್ಟೆ ಆಗಿರುತ್ತಾರೆ.

trustified capitalism: ಪ್ರತಿಷ್ಠಾಪಿತ ಬಂಡವಾಳಶಾಹಿತ್ವ.

tubectomy: ಸ್ತ್ರೀಸಂತಾನಶಕ್ತಿ ಹರಣ ಶಸ್ತ್ರ ಚಿಕಿತ್ಸೆ.

turbulent: ಪ್ರಕ್ಷುಬ್ಧ.

turnover tax: ವ್ಯಾಪಾರದ ಪ್ರಮಾಣದ ಮೇಲಿನ ಕರ.

tutelary guardian: ನಾಮಮಾತ್ರದ ಸಂರಕ್ಷಕ. ಉದಾ: ಗ್ರಾಮದೇವತೆ. ಕನಸು ಅಥವಾ ದರ್ಶನದ ಮೂಲಕ ಗುರುತಿಸಲ್ಪಡುವ ವೈಯಕ್ತಿಕ ರಕ್ಷಣಾತ್ಮಕ ಶಕ್ತಿ ಅಥವಾ ಮಾಂತ್ರಿಕ ಶಕ್ತಿಯಿಂದ ನಿಯಂತ್ರಿಸಲ್ಪಡುವ ದುಷ್ಟಶಕ್ತಿ.

tutelary spirit: ಪಾಲಕಶಕ್ತಿ; ಪಾಲಕ ದೈವ.

twelve tables: ಹನ್ನೆರಡು ನ್ಯಾಯ ನಿಬಂಧನೆಗಳು. ಕ್ರಿ.ಪೂ. ೪೫೦ರಲ್ಲಿ ರೋಮಿನ ಎಲ್ಲಾ ಕಾಯಿದೆಗಳನ್ನು ಕ್ರೋಢೀಕರಿಸಿ ಕಂಚಿನ ಫಲಕಗಳ ಮೇಲೆ ಬರೆಸಿ, ಹನ್ನೆರಡು ನ್ಯಾಯ ನಿಬಂಧನೆಗಳು ಎಂದು ಹೆಸರಿಸಲಾಯಿತು.

twice born: ದ್ವಿಜ.

twin cities: ಅವಳಿ ನಗರಗಳು.

twin folk epic: ಅವಳಿ ಜನಪದ ಮಹಾಕಾವ್ಯ. ಉದಾ: ಕೋಟಿ ಚೆನ್ನಯ.

twin heroes: ಅವಳಿ ವೀರರು.

twilight of consciousness: ಪ್ರಜ್ಞೆಯ ಮುಂಬೆಳಕು.

two field system: ಎರಡು ಕ್ಷೇತ್ರ (ಹೊಲ) ವ್ಯವಸ್ಥೆ. ಹೊಲವನ್ನು ಎರಡು ಭಾಗಗಳನ್ನಾಗಿ ಮಾಡಿ ಪ್ರತಿವರ್ಷ ಆವರ್ತ ಪ್ರಕಾರ ಒಂದು ಭಾಗದಲ್ಲಿ ಮಾತ್ರ ವ್ಯವಸಾಯ ಮಾಡುವ ಪದ್ಧತಿ.

two fold action: ದ್ವಿಮುಖ ಕಾರ್ಯಾಚರಣೆ.

two nation theory: ದ್ವಿರಾಷ್ಟ್ರ ಸಿದ್ಧಾಂತ. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಭಾರತ ಮತ್ತು ಪಾಕಿಸ್ತಾನವೆಂಬೆರಡು ರಾಷ್ಟ್ರಗಳನ್ನು ರಚಿಸಬೇಕೆಂದು ಮಹಮದ್ ಅಲಿ ಜಿನ್ನಾ ಅವರು ಮುಂದಿಟ್ಟ ದ್ವಿರಾಷ್ಟ್ರ ಸಿದ್ಧಾಂತ.

two party system: ದ್ವಿ ಪಕ್ಷೀಯ ಪದ್ಧತಿ. ಒಂದು ರಾಜಕೀಯ ವ್ಯವಸ್ಥೆಯಲ್ಲಿ ಎರಡು ರಾಜಕೀಯ ಪಕ್ಷಗಳು ಮಾತ್ರ ಅಸ್ತಿತ್ವದಲ್ಲಿದ್ದು ರಾಜಕೀಯ ಚಟುವಟಿಕೆಯಲ್ಲಿ ಭಾಗವಹಿಸುವುದು. ಈ ವ್ಯವಸ್ಥೆಯಲ್ಲಿ ಒಂದು ಪಕ್ಷವು ಆಡಳಿತ ನಡೆಸಿದರೆ ಮತ್ತೊಂದು ಪಕ್ಷವು ವಿರೋಧ ಪಕ್ಷವಾಗಿ ಕೆಲಸ ಮಾಡುತ್ತದೆ. ಉದಾ: ಅಮೇರಿಕಾ, ಇಂಗ್ಲೆಂಡ್‌ಗಳಲ್ಲಿ ಈ ಪದ್ಧತಿ ಇದೆ.

two sector model: ದ್ವಿವಲಯ ಮಾದರಿ.

two sided competition: ದ್ವಿಪಕ್ಷೀಯ ಪೈಪೋಟಿ.

two tier exchange rate: ದ್ವಿಸ್ತರದ ವಿನಿಮಯ ದರ.

two way consultation: ಪರಸ್ಪರ ಸಂಧಾನ.

type: ಮಾದರಿ ವರ್ಗ. ಒಂದು ಅಥವಾ ಹಲವು ಆಶಯಗಳನ್ನು ಒಳಗೊಂಡ ಸ್ವತಂತ್ರ ಕಥಾನಕವನ್ನು ವರ್ಗ (ಮಾದರಿ) ಎಂದು ಕರೆಯಲಾಗಿದೆ.

type index: ಮಾದರಿಸೂಚಿ.

typical attitude: ವ್ಯಕ್ತಿ ವಿಶಿಷ್ಟ ಮನೋವೃತ್ತಿ. ಸಮೂಹದ ಅಥವಾ ವ್ಯಕ್ತಿಯ ಲಕ್ಷಣಗಳನ್ನು ಹೊಂದಿರುವ ವರ್ತನೆ.

typology: ಪ್ರರೂಪ ವಿಜ್ಞಾನ; ಸಂಕೇತ ನಿರೂಪಣಾ ಶಾಸ್ತ್ರ. ರೂಪ ತಯಾರಿ ವಿಧಾನದ ಮೂಲಕ ಮಾನವ ನಿರ್ಮಿತ ವಸ್ತುಗಳನ್ನು ಕುಟುಂಬವಾರು ಮತ್ತು ಪಂಗಡವಾರು ವಿಭಾಗಿಸುವುದು.

tyrannical government: ದಬ್ಬಾಳಿಕೆಯ ಸರಕಾರ. ನೋಡಿ: tyranny.

tyranny: ನಿರಂಕುಶ ಪ್ರಭುತ್ವ; ನಿರಂಕುಶಾಧಿಕಾರ. ಸರಕಾರದ ಅಧಿಕಾರವು ಒಬ್ಬನ ಕೈಯಲ್ಲಿದ್ದು ಅವನು ನಿರಂಕುಶ ಅಧಿಕಾರವನ್ನು ಚಲಾಯಿಸುವುದು. ಅದು ಅನ್ಯಾಯಯುತವಾದ, ಕ್ರೂರ ಮತ್ತು ಸ್ವೇಚ್ಛಾನುಸಾರ ಸರಕಾರವಾಗಿರುತ್ತದೆ.

tyranny of majority: ಬಹುಮತದ ದಬ್ಬಾಳಿಕೆ; ಬಹುಸಂಖ್ಯಾತರ ನಿರಂಕುಶಾಧಿಕಾರ.

tyrant: ನಿರಂಕುಶ ಪ್ರಭು; ನಿರಂಕುಶ ನಾಯಕ. ನೋಡಿ: tyranny.

U

ubiquity: ಸರ್ವವ್ಯಾಪಕತೆ.

ultimate reality: ಅಂತಿಮ ಸತ್ಯ; ಆತ್ಯಂತಿಕ ಸತ್ಯ.

ultimate value: ಮೂಲಭೂತ ಮೌಲ್ಯ; ಅತ್ಯುನ್ನತ ಮೌಲ್ಯ.

ultimatum: ಅಂತಿಮ ಎಚ್ಚರಿಕೆ; ಕೊನೆಯ ಎಚ್ಚರಿಕೆ.

ultimogeniture: ಕೊನೆಯ ಮಗುವಿನ ಉತ್ತರಾಧಿಕಾರ. ಹೆತ್ತವರ ಆಸ್ತಿಯನ್ನು ಪಡೆಯುವ ಉತ್ತರಾಧಿಕಾರದ ಹಕ್ಕನ್ನು ಕೊನೆಯ ಮಗುವು ಮಾತ್ರ ಹೊಂದಿರುತ್ತದೆಂಬ ತತ್ವ. ಕೆಲವು ಮಾತೃಪ್ರಧಾನ ಬುಡಕಟ್ಟುಗಳಲ್ಲಿ ಕೊನೆಯ ಮಗಳೊಬ್ಬಳೇ ತಾಯಿಯ ಎಲ್ಲಾ ಆಸ್ತಿಯ ಹಕ್ಕುದಾರಣಿಯಾಗುತ್ತಾಳೆ.

ultra vires: ಸಂವಿಧಾನ ಬಾಹಿರ; ಅಧಿಕಾರಾತೀತ. ಕೇಂದ್ರ ಅಥವಾ ರಾಜ್ಯ ಶಾಸಕಾಂಗಗಳು ಸಂವಿಧಾನದ ನಿಯಮಗಳಿಗೆ ವಿರುದ್ಧವಾಗಿ ಯಾವುದೇ ಶಾಸನ ರೂಪಿಸಿದರೆ ಅದು ಅಧಿಕಾರಕ್ಕೆ ಮೀರಿದುದು ಮತ್ತು ಕಾನೂನು ಬಾಹಿರವೆಂದೆನಿಸುತ್ತದೆ.

unanimous decision: ಒಮ್ಮತದ ತೀರ್ಮಾನ; ಸರ್ವಾನುಮತದ ತೀರ್ಮಾನ.

unauthorized exactions: ಅನಧಿಕೃತ ದಂಡ ವಸೂಲಿ.

unavoidable cost: ತಪ್ಪಿಸಲಾಗದ ವೆಚ್ಚ; ಅನಿವಾರ್ಯ ವೆಚ್ಚ. ಉತ್ಪಾದನೆಯ ಪ್ರಕ್ರಿಯೆಯಲ್ಲಿ ಉತ್ಪನ್ನಗಳ ಪ್ರಮಾಣ ಶೂನ್ಯವಾಗಿದ್ದಾಗಲೂ ಹುಟ್ಟಿಕೊಳ್ಳುವ ಅನಿವಾರ್ಯ ವೆಚ್ಚಗಳು.

unbalanced budget: ಅಸಮ ತೋಲನ ಮುಂಗಡಪತ್ರ. ಖರ್ಚುಗಳು ಜಾಸ್ತಿಯಾಗಿದ್ದು ಆದಾಯವು ಕಡಿಮೆಯಾಗಿರುವ ಸರಕಾರೀ ಮುಂಗಡ ಪತ್ರ.

unbalanced growth: ಅಸಮಾನ ಬೆಳವಣಿಗೆ.

unbiased estimate: ಪಕ್ಷಪಾತರಹಿತ (ನಿಷ್ಪಕ್ಷಪಾತ)ವಾದ ಅಂದಾಜು.

unbiased sample: ಪಕ್ಷಪಾತರಹಿತ ಮಾದರಿ.

uncalled capital: ಕರೆಯಲ್ಪಡದ ಬಂಡವಾಳ. ಒಂದು ಕಂಪೆನಿ ಹಂಚಿರುವ ಷೇರು ಬಂಡವಾಳದಲ್ಲಿ ಅದು ಪಾವತಿಗಾಗಿ ಷೇರುದಾರರಿಗೆ ಇನ್ನೂ ನಿಗದಿಪಡಿಸದಿರುವ ಭಾಗ.

uncertainty bearing theory of profit: ಅನಿಶ್ಚಿತತೆಯ ಲಾಭ ಸಿದ್ಧಾಂತ. ಲಾಭವು ಅನಿಶ್ಚಿತತೆಯ ಹೊಣೆಗಾರಿಕೆ ವಹಿಸಿದ್ದಕ್ಕಾಗಿ ಸಂಘಟಕನಿಗೆ ದೊರೆಯುವ ಸಂಭಾವನೆಯಾಗಿದೆ ಎಂಬ ಸಿದ್ಧಾಂತ.

unclaimed balances: ಹಿಂದಕ್ಕೆ ಪಡೆಯದ ಶಿಲ್ಕುಗಳು. ಬಹುಕಾಲ ಯಾವ ವ್ಯವಹಾರವೂ ನಡೆಯದಿರುವ ಬ್ಯಾಂಕ್ ಖಾತೆಗಳಲ್ಲಿರುವ ಖಾತೆದಾರರು ವಾಪಸ್ಸು ಪಡೆಯದಿರುವ ಶಿಲ್ಕುಗಳು.

unconditional liquidity: ಅನಿರ್ಬಂಧಿತ ದ್ರವತ್ವ. ಯಾವುದೇ ನಿರ್ಬಂಧಗಳ ಹೇರುವಿಕೆಯಿಲ್ಲದೆ ಚಿನ್ನದ ರೂಪದಲ್ಲಿ ಸದಸ್ಯ ರಾಷ್ಟ್ರಗಳಿಗೆ ಸಾಲ ಪಡೆಯುವ ಸೌಲಭ್ಯ.

unconditional stimulus: ನಿರ್ಬಂಧರಹಿತ ಉತ್ತೇಜಕ; ಅನನುಬಂಧಿತ ಪ್ರಚೋದಕ.

unconscious: ಅಚೇತನ; ಸುಪ್ತಚೇತನ; ಪ್ರಜ್ಞಾವಿಹೀನ; ಅಜಾಗೃತ. ನಿರೋಧಿತ ಅನುಭವಗಳು ಮತ್ತು ಅನುವಂಶಿಕವಾಗಿ ಬಂದ ಅನಾಗರಿಕ (ಪ್ರಾಚೀನ) ಒತ್ತಡಗಳ ಆಗರವಾದ ಮನಸ್ಸಿನ ಒಂದು ಭಾಗ.

unconscious cerebration theory: ಸುಪ್ತಚೇತನದ ಪ್ರಮಸ್ತಿಷ್ಕ ಕ್ರಿಯಾ ಸಿದ್ಧಾಂತ.

unconscious communication: ಅಪ್ರಜ್ಞಾ ಪೂರ್ವಕ ಸಂಪರ್ಕ.

unconscious impulse: ಸುಪ್ತ ಚೇತನಾವೇಗ.

unconscious intention: ಸುಪ್ತ ಆಶಯ.

unconscious memory: ಅಪ್ರಜ್ಞಾ ಪೂರ್ವಕ ಸ್ಮರಣೆ.

unconscious mental function: ಪ್ರಜ್ಞಾಹೀನ ಮನೋಕಾರ್ಯ.

unconscious mental life: ಪ್ರಜ್ಞಾಹೀನ ಮಾನಸಿಕ ಜೀವನ.

unconscious mind: ಅಜಾಗೃತ ಮನಸ್ಸು.

unconscious motivation: ಪ್ರಜ್ಞಾಹೀನ ಪ್ರೇರೇಪಣೆ.

unconscious motive: ಪ್ರಜ್ಞಾಹೀನ ಅಂತಃಪ್ರೇರಕ.

unconscious process: ಪ್ರಜ್ಞಾಹೀನ ಪ್ರಕ್ರಿಯೆ.

unconscious state: ಅಜಾಗೃತಾವಸ್ಥೆ; ಪ್ರಜ್ಞಾಹೀನ ಸ್ಥಿತಿ.

unconscious struggle: ಅಪ್ರಜ್ಞಾ ಪೂರ್ವಕ ಹೋರಾಟ.

unconstitutional: ಸಂವಿಧಾನ ಬಾಹಿರ. ಸಂವಿಧಾನದ ನಿಯಮಗಳಿಗೆ ವಿರುದ್ಧವಾಗಿ ನಡೆದುಕೊಳ್ಳುವುದು ಅಥವಾ ಸಂವಿಧಾನದ ನಿಯಮಗಳಿಗೆ ವಿರುದ್ಧವಾಗಿ ಕಾರ್ಯ ವೈಖರಿ ನಡೆಸುವುದು.

uncontested election: ಅವಿರೋಧ ಆಯ್ಕೆ. ಒಂದು ಮತ ಕ್ಷೇತ್ರದಲ್ಲಿ ಒಬ್ಬ ವ್ಯಕ್ತಿಗೆ ಅಥವಾ ಒಂದು ಪಕ್ಷದ ಅಭ್ಯರ್ಥಿಗೆ ಮತ್ತೊಬ್ಬ ವ್ಯಕ್ತಿ ಅಥವಾ ಮತ್ತೊಂದು ಪಕ್ಷದ ಅಭ್ಯರ್ಥಿಯಿಂದ ಸ್ಪರ್ಧೆಯಿಲ್ಲದೆ ಅವಿರೋಧವಾಗಿ ಆಯ್ಕೆಯಾಗುವುದು.

uncontrolled interview: ಅನಿ ಯಂತ್ರಿತ ಸಂದರ್ಶನ.

uncontrolled observation: ಅನಿಯಂತ್ರಿತ ಅವಲೋಕನ.

undeciphered: ಓದಲಾಗದೆ ಇದ್ದ.

underbounded city: ಸೀಮಿತ ಬೆಳವಣಿಗೆಯ ನಗರ.

under-class: ಕೆಳವರ್ಗ. ಅಲ್ಪಸಂಖ್ಯಾತ ಕುಲದ ಹಿನ್ನಲೆಯವರು ಹೆಚ್ಚಾಗಿ ವರ್ಗ ವ್ಯವಸ್ಥೆಯ ತಳದಲ್ಲಿರುತ್ತಾರೆ.

underconsumption: ಅಪೂರ್ಣಾನು ಭೋಗ.

under current: ಅಂತರ್‌ಪ್ರವಾಹ.

under developed area: ಅನಭಿವೃದ್ಧ ಪ್ರದೇಶ.

under developed country : ಅನಭಿ ವೃದ್ಧ ರಾಷ್ಟ್ರ; ಹಿಂದುಳಿದ ರಾಷ್ಟ್ರ.

under employment: ಅರೆ ಉದ್ಯೋಗ. ಉದ್ಯೋಗ ಮಾಡಲು ಬಯಸುವವರಿಗೆ ಮತ್ತು ಅರ್ಹರಾದವರಿಗೆ ಪೂರ್ಣಾವಧಿಗೆ ತಮ್ಮ ಅರ್ಹತೆಗೆ ತಕ್ಕಂತೆ ಉದ್ಯೋಗ ದೊರಕದಿರುವ ಸ್ಥಿತಿ.

under enumeration: ಅಲ್ಪ ಎಣಿಕೆ.

under population: ಕಡಿಮೆ ಜನ ಸಂಖ್ಯೆ. ಒಂದು ದೇಶದ ಜನಸಂಖ್ಯೆಯು ಆದರ್ಶ ಜನಸಂಖ್ಯೆಯ ಮಟ್ಟಕ್ಕಿಂತ ಕಡಿಮೆಯಿರುವ ಸ್ಥಿತಿ.

underlying ideas: ನಿಹಿತ ಅಭಿಪ್ರಾಯ; ಅಡಗಿರುವ ಅಭಿಪ್ರಾಯ; ಅಂತರಾರ್ಥ.

undervaluation of currency: ನಾಣ್ಯಗಳ ಕೆಳಮಟ್ಟದ ಮೌಲ್ಯ.

undesirable action: ಅನಪೇಕ್ಷಣೀಯ ಕ್ರಮ.

undirected interview: ಅನಿರ್ದೇಶಿತ ಸಂದರ್ಶನ.

undischarged insolvent: ಬಿಡುಗಡೆ ರಹಿತ ದಿವಾಳಿಕೋರ.

undue delay: ಅನಗತ್ಯ ವಿಳಂಬ.

undue influence: ಅನುಚಿತ ಪ್ರಭಾವ.

undue interference: ಅನುಚಿತ ಹಸ್ತಕ್ಷೇಪ; ಅನುಚಿತ ಮಧ್ಯ ಪ್ರವೇಶ.

un earned income: ದುಡಿಯದೆ ಸಂಪಾದಿಸಿದ ಆದಾಯ.

uneconomical: ಮಿತವ್ಯಯವಲ್ಲದ; ದುಂದುವೆಚ್ಚದ.

unemployment insurance: ನಿರು ದ್ಯೋಗ ವಿಮೆ.

unemployment stipend: ನಿರು ದ್ಯೋಗ ಭತ್ತೆ.

unemployment trap: ನಿರುದ್ಯೋಗ ಸೆರೆ.

unencumbered estate : ಋಣಾತೀತ ಆಸ್ತಿ.

unequal exchange: ಅಸಮಾನ ವಿನಿಮಯ. ಅಭಿವೃದ್ಧಿ ಹೊಂದಿದ ಕೈಗಾರಿಕಾ ದೇಶಗಳು ಮತ್ತು ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳ ನಡುವಿನ ವ್ಯಾಪಾರ ಸಂಬಂಧಗಳ ಬಗೆಗೆ ಚರ್ಚೆ.

unequal voting: ಅಸಮಾನ ಮತದಾನ. ಮತದಾನವು ಪ್ರತಿಭಾಗಕ್ಕೂ ಸಮಾನವಾಗಿರದೆ, ಕೆಲವು ಜನರಿಗೆ ಮಾತ್ರ ಹೆಚ್ಚಿನ ಪ್ರಾತಿನಿಧ್ಯವನ್ನು ಕೊಡುವುದು ಮತ್ತು ಕೆಲವು ಜನರಿಗೆ ಕಡಿಮೆ ಪ್ರಾತಿನಿಧ್ಯ ಕೊಡುವುದು. ಉದಾ: ನಗರವಾಸಿಗಳಿಗೆ ಹೆಚ್ಚಿನ ಪ್ರಾತಿನಿಧ್ಯ ಹಾಗೂ ಹಳ್ಳಿಗಾಡಿನವರಿಗೆ ಕಡಿಮೆ ಪ್ರಾತಿನಿಧ್ಯ. ಇದು ಸಾಮಾನ್ಯವಾಗಿ ದ್ವಿತೀಯ ಪ್ರಪಂಚ ಯುದ್ಧಕ್ಕೆ ಮೊದಲು ಹೆಚ್ಚಿನ ರಾಷ್ಟ್ರಗಳಲ್ಲಿ ಇದ್ದ ವ್ಯವಸ್ಥೆ.

unfair competition: ಅಹಿತ ಸ್ಪರ್ಧೆ.

unfair trade practice: ಅನ್ಯಾಯಯುತ ವ್ಯಾಪಾರ ನಡವಳಿಕೆ.

unfavourable balance of pay ment: ಪ್ರತಿಕೂಲಕರ ಸಂದಾಯ ಶಿಲ್ಕು; ಪ್ರತಿಕೂಲಕರ ಪಾವತಿ ಶೇಷ.

unfavourable balance of trade: ಪ್ರತಿಕೂಲಕರ ವ್ಯಾಪಾರ ಸಮತೋಲನ.

unfocussed interaction: ಅಪರೋಕ್ಷ ಅಂತರಕ್ರಿಯೆ. ಪರಸ್ಪರ ಮುಖಾಮುಖಿಯಾಗದೇನೇ ಒಂದು ನಿರ್ದಿಷ್ಟ ಸಂದರ್ಭದಲ್ಲಿ ವ್ಯಕ್ತಿಗಳೊಳಗಿನ ಅಂತರಕ್ರಿಯೆ.

unformulated initiative: ಅನಿರ್ದಿಷ್ಟ ಪ್ರಜಾ ನಿರ್ದೇಶನ. ಸಾಮಾನ್ಯ ಸ್ವರೂಪದಲ್ಲಿದ್ದು ಪ್ರಜೆಗಳ ಪರವಾಗಿ ಶಾಸಕಾಂಗದ ಸದಸ್ಯರಿಂದ ಮಂಡಿಸ ಬಹುದಾದ ಪ್ರಜಾ ನಿರ್ದೇಶನ.

unfunded assistance: ನಿಧಿರಹಿತ ನೆರವು.

unfunded debt: ಅಲ್ಪಕಾಲಾವಧಿಯ ಸಾಲ; ಅನಿರ್ದಿಷ್ಟ ಸಾಲ.

unguided interview: ನೋಡಿ :non-directive interview.

unhealthy mind: ಅನಾರೋಗ್ಯಕರ ಮನಸ್ಸು; ವಿಕೃತ ಮನಸ್ಸು.

unibonded group: ಏಕ ಉದ್ದೇಶದ ಸಮೂಹ. ಏಕ ಉದ್ದೇಶದ ಸಾಧನೆಗಾಗಿ ಒಟ್ಟುಗೂಡಿದ ಸಮೂಹ.

unicameral legislature: ಏಕಸದನ ಶಾಸಕಾಂಗ. ಒಂದು ರಾಷ್ಟ್ರದ ಶಾಸಕಾಂಗವು ಕೇವಲ ಒಂದು ಸದನವನ್ನು ಮಾತ್ರ ಹೊಂದಿರುವುದು. ಉದಾ: ಚೀನಾ, ನಾರ್ವೆ, ಡೆನ್ಮಾರ್ಕ್, ಟರ್ಕಿ.

unicameralism: ಏಕಸದನ ಪದ್ಧತಿ. ನೋಡಿ: unicameral legislature.

uni-directional: ಏಕ ದಿಶಾನುವರ್ತಿ.

unification: ಏಕೀಕರಣ.

uniform civil code: ಏಕರೀತಿಯ ನಾಗರಿಕ ಕಾಯ್ದೆ. ರಾಷ್ಟ್ರದ ಎಲ್ಲಾ ಜನರಿಗೂ ಸಮಾನ ರೀತಿಯಲ್ಲಿ ಅನ್ವಯವಾಗುವ ನಾಗರಿಕ ಸಂಹಿತೆ.

uniform motion: ಸಮರೂಪ ಚಲನೆ.

uniform stage: ಏಕಪ್ರಕಾರದ ಹಂತ.

uniformitarianism: ಏಕ ಪ್ರಕಾರತಾ ವಾದ.

unilateral action: ಏಕಪಕ್ಷೀಯ ಕ್ರಮ (ಕ್ರಿಯೆ).

unilateral decision: ಏಕಪಕ್ಷೀಯ ತೀರ್ಮಾನ.

unilateral descent: ಏಕವಂಶೀಯ ಸಂತತಿ (ಮೂಲ).

unilateral family: ಏಕವಂಶೀಯ ಕುಟುಂಬ. ರಕ್ತಸಂಬಂಧವು ಮಾತೃ ಅಥವಾ ಪಿತೃ ಮೂಲದಿಂದ ಸಾಗುವ ಕುಟುಂಬ.

unilateral power relationship: ಏಕಪಕ್ಷೀಯ ಅಧಿಕಾರ ಸಂಬಂಧ.

unilneal descent: ಏಕವಂಶೀಯ ಮೂಲ.

unilnear descent: ಏಕ (ಒಂದೇ) ಮೂಲದ ವಂಶಾವಳಿ.

unilinear evolution: ಏಕರೇಖಾತ್ಮಕ ವಿಕಾಸ. ಸಾಮಾಜಿಕ ವಿಕಾಸದ ಪ್ರಕಾರ ಎಲ್ಲಾ ಸಮಾಜಗಳೂ ಒಂದೇ ಸರಣಿಯ ಬೆಳವಣಿಗೆಯ ಹಂತಗಳಲ್ಲಿ ಮುಂದುವರಿಯುವಿಕೆ.

unilocal residence: ಏಕಸ್ಥಳೀಯ ವಾಸ. ನವವಿವಾಹಿತ ದಂಪತಿಗಳು ಒಂದೋ ಹುಡುಗನ ತಂದೆ ಮನೆಯಲ್ಲಿ ಅಥವಾ ಹುಡುಗಿಯ ತಂದೆ ಮನೆಯಲ್ಲಿ ವಾಸಿಸುವ ಪದ್ಧತಿ.

union: ಒಕ್ಕೂಟ.

union constitution committee: ಕೇಂದ್ರ ಸಂವಿಧಾನ ಸಮಿತಿ.

union excise duty: ಕೇಂದ್ರ ಅಬಕಾರಿ ಸುಂಕ.

union legislature: ಕೇಂದ್ರ ಶಾಸಕಾಂಗ.

union list: ಕೇಂದ್ರ ಪಟ್ಟಿ. ಕೇಂದ್ರ ಶಾಸಕಾಂಗ ಅಥವಾ ಪಾರ್ಲಿಮೆಂಟ್‌ನ ಕಾರ್ಯವ್ಯಾಪ್ತಿಗೆ (ಕಾನೂನು ನಿರ್ಮಿಸುವ ಅಧಿಕಾರ) ಒಳಪಡುವ ವಿಷಯಗಳನ್ನೊಳಗೊಂಡ ಪಟ್ಟಿ. ಇದು ತೊಂಬತ್ತೇಳು ವಿಷಯಗಳನ್ನೊಳಗೊಂಡಿದೆ. ಇನ್ನೆರಡು ಪಟ್ಟಿಗಳಿಗಾಗಿ ನೋಡಿ: state list, concurrent list.

union of states: ರಾಜ್ಯಗಳ ಒಕ್ಕೂಟ. ಹಲವು ರಾಜ್ಯಗಳನ್ನು ಒಳಗೊಂಡಿರುವ ಒಕ್ಕೂಟ. ಉದಾ: ಭಾರತದ ಸಂವಿಧಾನವು ಭಾರತವು ರಾಜ್ಯಗಳ ಒಕ್ಕೂಟ ಎಂದು ತಿಳಿಸುತ್ತದೆ.

Union Public Service Commission (UPSC): ಕೇಂದ್ರ ಲೋಕಸೇವಾ ಆಯೋಗ.

union republic: ಒಕ್ಕೂಟ ಗಣರಾಜ್ಯ.

union territory: ಕೇಂದ್ರಾಡಳಿತ ಪ್ರದೇಶ.

unique group goal: ಸಮೂಹದ ವಿಶಿಷ್ಟ ಧ್ಯೇಯ.

unique mental state: ಅನನ್ಯ ಮಾನಸಿಕ ಸ್ಥಿತಿ.

uniqueness of human per sonality: ಮಾನವ ವ್ಯಕ್ತಿತ್ವದ ಅಸದೃಶತೆ.

unit: ಘಟಕ.

unit banking: ಏಕಘಟಕ ಬ್ಯಾಂಕಿಂಗ್. ಶಾಖೆಗಳನ್ನು ತೆರೆಯಲು ಅನುಮತಿಯನ್ನು ಹೊಂದಿರದ ಬ್ಯಾಂಕ್‌ವ್ಯವಸ್ಥೆ.

unit cost: ನೋಡಿ: average cost.

unit elasticity: ಏಕಕ್ಕೆ ಸಮನಾದ

ಸ್ಥಿತಿಸ್ಥಾಪಕತ್ವ. ವಸ್ತುವಿನ ಬೆಲೆಯ ಬದಲಾವಣೆಗೆ ಸರಿಸಮವಾದ ಪ್ರಮಾಣದಲ್ಲಿ ಅದರ ಅವಲಂಬೀ ಚಲದಲ್ಲಿ (ಬೇಡಿಕೆ ಅಥವಾ ಪೂರೈಕೆ) ಬದಲಾವಣೆ ಉಂಟಾ ಗುವ ಸ್ಥಿತಿ.

unit method: ಘಟಕ ಪದ್ಧತಿ.

unit of intellect: ಬುದ್ಧಿ ಶಕ್ತಿಯ ಘಟಕ.

unit of observation: ಅವಲೋಕನದ ಘಟಕ.

unit of sensation: ಸಂವೇದನಾ ಘಟಕ.

unitarianism: ಏಕಾತ್ಮಕ ವಾದ.

unitary: ಏಕಾತ್ಮಕ.

unitary areas: ಒಕ್ಕೂಟ ಪ್ರದೇಶಗಳು.

unitary constitution: ಏಕಾತ್ಮಕ ಸಂವಿಧಾನ. ಕೇಂದ್ರ ಸರಕಾರವು ಹೆಚ್ಚಿನ ಅಧಿಕಾರವನ್ನು ಹೊಂದಲು ಅವಕಾಶ ಮಾಡಿ ಕೊಡುವ ಸಂವಿಧಾನ.

unitary character: ಏಕಾತ್ಮಕ ಸ್ವರೂಪ.

unitary government: ಏಕಾತ್ಮಕ ಸರಕಾರ. ಸರಕಾರದ ಎಲ್ಲಾಅಧಿಕಾರವು ಶಾಸನಬದ್ಧವಾದ ಏಕೈಕ ಕೇಂದ್ರ ಸರಕಾರ ದಲ್ಲಿ ಕೇಂದ್ರೀಕೃತವಾಗಿರುವ ಸರಕಾರಿ ಪದ್ಧತಿ. ಆಡಳಿತ ಅನುಕೂಲಕ್ಕಾಗಿ ದೇಶ ವನ್ನು ವಲಯ, ಪ್ರಾಂತ್ಯ, ಜಿಲ್ಲೆ, ನಗರ, ಗ್ರಾಮಗಳಾಗಿ ವಿಭಾಗಿಸಲಾಗುತ್ತದೆ. ಉದಾ: ಇಂಗ್ಲೆಂಡ್, ಇಟಲಿ, ಜಪಾನ್.

unitary state: ಏಕಾತ್ಮಕ ರಾಜ್ಯ. ಏಕೈಕ ಕೇಂದ್ರಾಧೀನ ಆಡಳಿತವುಳ್ಳ ರಾಷ್ಟ್ರ.

united democratic front: ಸಂಯುಕ್ತ ಪ್ರಜಾಸತ್ತಾತ್ಮಕ ರಂಗ.

united front: ಸಂಯುಕ್ತ ರಂಗ.

united functional system: ಸಂಯುಕ್ತ ಕಾರ್ಯ ವ್ಯವಸ್ಥೆ.

United Nations Declaration: ಸಂಯುಕ್ತ ರಾಷ್ಟ್ರಗಳ ಘೋಷಣೆ.

United Nations Emergency Force: ವಿಶ್ವಸಂಸ್ಥೆಯ ತುರ್ತು ಸೇನಾಪಡೆ.

units of organization: ಸಂಘಟನೆಯ ಘಟಕಗಳು.

unity: ಏಕೀಭಾವ; ಐಕ್ಯಮತ್ಯ; ಸಮಷ್ಟಿ.

unity in diversity: ವೈವಿಧ್ಯತೆಯಲ್ಲಿ ಏಕತೆ; ವಿವಿಧತೆಯಲ್ಲಿ ಏಕತೆ.

unity of attention: ಅವಧಾನದ ಏಕತೆ.

unity of command : ಆದೇಶದ ಏಕತೆ; ಆಜ್ಞೆಯ ಏಕತೆ. ಶ್ರೇಣಿ ಪದ್ಧತಿಯನ್ನು ಹೊಂದಿರುವ ಆಡಳಿತ ವ್ಯವಸ್ಥೆಯಲ್ಲಿ ಎಲ್ಲಾ ಕಾರ್ಯನಿರ್ವಾಹಕರು ಹಾಗೂ ಅಧೀನ ನೌಕರರು ಶ್ರೇಷ್ಠಾಧಿಕಾರಿಯೊಬ್ಬನ ಆದೇಶ ಗಳಿಗೆ ಅನುಸಾರವಾಗಿ ಕಾರ್ಯನಿರ್ವಹಿಸು ವುದು.

unity of opposites: ವಿರೋಧಗಳ ಏಕತೆ.

universal adult franchise system: ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ. ಜನಾಂಗ ಅಥವಾ ರಾಷ್ಟ್ರೀಯತೆ, ಲಿಂಗ, ಧರ್ಮ, ಶಿಕ್ಷಣ, ವಾಸಸ್ಥಾನ, ಸಾಮಾಜಿಕ ಮೂಲ, ಆಸ್ತಿ, ಅಂತಸ್ತು ಇವುಗಳ ಭೇದ ಭಾವವಿಲ್ಲದೆ ಒಂದು ನಿರ್ದಿಷ್ಟ ವಯಸ್ಸಿನ ಆಧಾರದ ಮೇಲೆ ಎಲ್ಲಾ ಪ್ರಜೆಗಳಿಗೆ ಮತ ದಾನದ ಹಕ್ಕು ನೀಡುವುದು.

universal brotherhood: ವಿಶ್ವ ಭ್ರಾತೃತ್ವ; ಸಾರ್ವತ್ರಿಕ ಭ್ರಾತೃತ್ವ.

universal conscription: ಸಾರ್ವತ್ರಿಕ

ಸೇನಾ ತರಬೇತಿ. ಒಂದು ನಿರ್ದಿಷ್ಟ ವಯೋಮಾನದ ಎಲ್ಲ ಜನರೂ (ಮುಖ್ಯವಾಗಿ ಗಂಡಸರು) ನಿರ್ದಿಷ್ಟ ಅವಧಿಯ ಸೈನಿಕ ತರಬೇತಿ ಪಡೆಯುವುದು.

universal declaration of human rights: ಮಾನವ ಹಕ್ಕುಗಳ ಜಾಗತಿಕ ಘೋಷಣೆ.

universal education: ಸಾರ್ವತ್ರಿಕ ಶಿಕ್ಷಣ.

universal element: ಸಾರ್ವತ್ರಿಕ ಅಂಶ.

universal evolution: ಸಾರ್ವತ್ರಿಕ ವಿಕಾಸ. ಜೀವನದ ಎಲ್ಲಾ ಸಂಗತಿಗಳಲ್ಲೂ ಅಭಿವೃದ್ಧಿ ಮತ್ತು ವಿಕಾಸ ಪರತೆ.

universal idea of justice: ಸಾರ್ವತ್ರಿಕ ನ್ಯಾಯ.

universal law: ಸಾರ್ವತ್ರಿಕ ನಿಯಮ; ಸಾರ್ವತ್ರಿಕ ಕಾಯಿದೆ.

universal pattern: ಸರ್ವವ್ಯಾಪಿ ಮಾದರಿ; ಸಾರ್ವತ್ರಿಕ ಮಾದರಿ.

universal retention: ಸಾರ್ವತ್ರಿಕ ಸ್ತಂಭನ.

universal sequence: ಸಾರ್ವತ್ರಿಕ ಕ್ರಮಾನುಗತಿ.

universal socialism: ಸಾರ್ವತ್ರಿಕ ಸಮಾಜವಾದ. ಕ್ರಾಂತಿ, ವಿಪ್ಲವ, ಅಶಾಂತಿ, ಅನಿಶ್ಚಿತತೆಗಳನ್ನು ವಿರೋಧಿಸಿ ಹೋರಾಟಕ್ಕೆ ಬದಲಾಗಿ ಮನ ಒಲಿಸಿಕೊಳ್ಳುವುದರ ಮೂಲಕ ಸಮಾಜ ಸುಧಾರಣೆ ತರಬೇಕು ಎನ್ನುವ ಸಮಾಜವಾದ.

universal suffrage : ನೋಡಿ: universal adult franchise system.

universal taboo : ಸಾರ್ವತ್ರಿಕ ನಿಷೇಧ. ಎಲ್ಲಾ ಸಮಾಜಗಳಲ್ಲೂ ಕಂಡುಬರುವ ವಿಧಿ ನಿಷೇಧಗಳು. ಅಗಮ್ಯ ಗಮನ ಮಾತ್ರವೇ ಸಾರ್ವತ್ರಿಕ ನಿಷೇಧವಾಗಿದೆ.

universalism: ಸಾರ್ವತ್ರಿಕವಾದ.

universalism-particularism: ಸಮಷ್ಟಿತ್ವ-ವ್ಯಷ್ಟಿತ್ವ. ನೋಡಿ: pattern variable.

universality: ವಿಶ್ವವ್ಯಾಪಕತೆ; ಸಾರ್ವತ್ರಿಕತೆ.

universalization: ಸಾರ್ವತ್ರೀಕರಣ.

universalizing tendency: ಸಾರ್ವತ್ರೀಕರಣ ಪ್ರವೃತ್ತಿ.

universally applicable principle: ಸಾರ್ವತ್ರಿಕ ಅನ್ವಯತಾ ತತ್ವ; ಸರ್ವಮಾನ್ಯ ತತ್ವ.

universe: ವಿಶ್ವ; ಜಗತ್ತು; ಬ್ರಹ್ಮಾಂಡ; ಪ್ರಪಂಚ.

universe of discourse: ಸಂವಾದ ಪ್ರಪಂಚ. ಶಬ್ದಗಳು, ನುಡಿಗಟ್ಟುಗಳು, ಆಲೋಚನೆಗಳು ಇತ್ಯಾದಿಗಳಿಗೆ ಒಂದು ಗುಂಪಿನಲ್ಲಿರುವ ವಿಶಿಷ್ಟಾರ್ಥಗಳಿಂದಾಗಿ ಆ ಗುಂಪಿಗಿರುವ ಅನನ್ಯತೆ ಹಾಗೂ ಅದರ ಸದಸ್ಯರೊಳಗೆ ಪರಸ್ಪರ ಸುಲಭ ಸಂವಹನ ಸಾಧ್ಯವಾಗುವಂತಹ ಸಂವಾದ.

unlimited monarchy: ಅನಿಯಂತ್ರಿತ ಅರಸೊತ್ತಿಗೆ. ಯಾವುದೇ ರೀತಿಯಲ್ಲಿ ಜನರ ನಿಯಂತ್ರಣಕ್ಕೊಳಪಡದೆ ನಡೆಸುವ ನಿರಂಕುಶ ಆಡಳಿತ.

unlimited power: ಮೇರೆಯಿಲ್ಲದ ಅಧಿಕಾರ; ಅಮಿತಾಧಿಕಾರ.

unmotivated act: ಅನಭಿಪ್ರೇರಿತ ಕ್ರಿಯೆ.

unofficial tariff enquiry: ಅನಧಿಕೃತ ನಿರ್ಣಾಯಕ ಸಮಿತಿ.

unorganized charity: ಅಸಂಘಟಿತ ಔದಾರ್ಯ.

unorganized groups: ಅಸಂಘಟಿತ ಸಮೂಹಗಳು.

unorganized sector: ಅಸಂಘಟಿತ ವಲಯ.

unparliamentary word: ಅಸಂಸದೀಯ ಪದ. ಸಂಸತ್ತಿನ ನೀತಿ ನಿಯಮಗಳಿಗೆ ವಿರುದ್ಧವಾದ ಮಾತು ಅಥವಾ ಚರ್ಚೆ.

unproductive consumer: ಅನುತ್ಪಾದಕ ಅನುಭೋಗಿ. ಯಾವುದೇ ಬಗೆಯ ಭೌತಿಕ ವಸ್ತುಗಳನ್ನು ಉತ್ಪಾದಿಸದ ಅನುಭೋಗಿ.

unproductive debt: ಅನುತ್ಪಾದಕ ಸಾಲ.

unqualified apology: ಬೇಷರತ್ತು ಕ್ಷಮಾಪಣೆ.

unquestionable right: ಪ್ರಶ್ನಾತೀತ ಹಕ್ಕು.

unreal individual liberty: ಅವಾಸ್ತವಿಕ ವೈಯಕ್ತಿಕ ಸ್ವಾತಂತ್ರ್ಯ. ಸಂವಿಧಾನದಲ್ಲಿ ನೀಡಲಾಗಿರುವ ಎಲ್ಲಾ ಸ್ವಾತಂತ್ರ್ಯಗಳನ್ನು ವಾಸ್ತವಿಕವಾಗಿ ಎಲ್ಲರಿಗೂ ಅನುಭವಿಸಲಾಗದ ಸ್ಥಿತಿ.

unrealistic attitude: ಮಿಥ್ಯಾಭಿವೃತ್ತಿ.

unreality feeling: ಅವಾಸ್ತವಿಕತಾ ಭಾವನೆ.

unreasonable attitude: ವಿವೇಚನಾಹೀನ ಮನೋವೃತ್ತಿ; ವಿಚಾರ ಹೀನ ಮನೋವೃತ್ತಿ.

unsecured loan : ಆಧಾರ ರಹಿತ ಸಾಲ.

unseeables : ನೋಡಬಾರದವರು; ಕಾಣಬಾರದವರು. ಉದಾ: ಹಿಂದಿನ ಕಾಲದಲ್ಲಿ ಅಸ್ಪೃಶ್ಯರು ಊರ ಹೊರಗಿದ್ದು ಅವರು ಮೇಲ್ಜಾತಿಯವರಿಗೆ ಕಾಣಸಿಗಬಾರದಿತ್ತು ಹಾಗೂ ಮೇಲ್ಜಾತಿಯವರ ಮನೆಗಳನ್ನು ನೋಡಬಾರದಿತ್ತು.

unstable administration : ಅಸ್ಥಿರ ಆಡಳಿತ.

unstable equilibrium: ಅಸ್ಥಿರ ಸಮತೋಲನ.

unstructured interview : ಅರಚಿತ ಸಂದರ್ಶನ; ಅರೂಪಿತ ಸಂದರ್ಶನ. ನೋಡಿ: non-structured interview.

unstructured observation : ಅರಚಿತ ಅವಲೋಕನ.

unstructured situation : ಅರಚಿತ ಸಂದರ್ಭ.

untouchability : ಅಸ್ಪೃಶ್ಯತೆ.

unutilized resource : ಬಳಸಲ್ಪಡದ ಸಂಪನ್ಮೂಲ.

unwed mother : ಅವಿವಾಹಿತ ಮಾತೆ.

unwritten agreement : ಅಲಿಖಿತ ಒಪ್ಪಂದ.

unwritten constitution : ಅಲಿಖಿತ ಸಂವಿಧಾನ. ಸರಕಾರದ ರಚನೆಯ ಮೂಲ ತತ್ವಗಳನ್ನು ಯಾವ ಮೂಲ ದಾಖಲೆಗಳಲ್ಲೂ ಬರೆದಿಡದಿರುವ ಸಂವಿಧಾನ. ಇದಕ್ಕೆ ಬದಲಾಗಿ ಅದು ಸಂಪ್ರದಾಯಗಳು,

ರೂಢಿ ನಿಯಮಗಳು, ಕಾಲಕಾಲಕ್ಕೆ ಮೂಡಿ ಬರುವ ನ್ಯಾಯಾಂಗದ ವ್ಯಾಖ್ಯಾನಗಳು ಹಾಗೂ ಕಾನೂನುಗಳನ್ನು ಅಳವಡಿಸಿ ಕೊಂಡಿರುತ್ತದೆ. ಉದಾ: ಇಂಗ್ಲೆಂಡಿನ ಸಂವಿಧಾನ.

unwritten law : ಅಲಿಖಿತ ಶಾಸನ (ಕಾನೂನು).

Upanishads : ಉಪನಿಷತ್ತುಗಳು. ವೈದಿಕ ಸಾಹಿತ್ಯದಲ್ಲಿ ಸೇರಿಸಲಾದ ದಾರ್ಶನಿಕ ಮತ್ತು ಆಧ್ಯಾತ್ಮಿಕ ಗ್ರಂಥಗಳು.

upari: ಉಪರಿ; ತಾತ್ಕಾಲಿಕ ಸ್ವಾಧೀನ ದಾರ; ಚಾಲಗೇಣಿದಾರ.

upheavel: ಉತ್‌ಪ್ಲವನ; ಬುಡಮೇಲು. ಕ್ರಾಂತಿಯ ಮೂಲಕ ಸಂಭವಿಸುವ ಪ್ರಕ್ರಿಯೆ.

upper class: ಮೇಲ್‌ವರ್ಗ; ಉನ್ನತ ವರ್ಗ.

upper lower class: ಮೇಲ್ ಕೆಳವರ್ಗ.

upper middle class: ಮೇಲ್ ಮಧ್ಯಮ ವರ್ಗ.

upper paleolithic: ಮೇಲಿನ ಅಥವಾ ಅಂತ್ಯದ ಹಳೆ ಶಿಲಾಯುಗ.

upper social class: ಮೇಲ್ ಸಾಮಾಜಿಕ ವರ್ಗ.

upper upper class: ಉನ್ನತೋನ್ನತ ವರ್ಗ.

upward communication: ಮೇಲ್ಮುಖ ಸಂಪರ್ಕ. ಸಂಸ್ಥೆಯ ಕೆಳಹಂತದಿಂದ ಪ್ರಾರಂಭವಾಗಿ ವಿವಿಧ ಹಂತಗಳ ಮೂಲಕ ಹರಿದು ಉನ್ನತ ಅಧಿಕಾರಿಯತ್ತ ಮೇಲ್ಮುಖ ವಾಗಿ ಹರಿಯುವ ಸಂಪರ್ಕ.

upward mobility: ಊರ್ಧ್ವಮುಖ ಸಂಚರಣೆ; ಮೇಲ್ಮುಖ ಲಂಬಾಂತರ ಚಲನೆ.

urban agglomeration: ಮಹಾನಗರ.

urban area: ನಗರ ಪ್ರದೇಶ; ನಗರ ಕ್ಷೇತ್ರ.

urban community: ನಗರ ಸಮುದಾಯ.

urban community centre: ನಗರ ಸಮುದಾಯ ಕೇಂದ್ರ.

urban community development: ನಗರ ಸಮುದಾಯ ಅಭಿವೃದ್ಧಿ.

urban concentration: ನಗರ ಕೇಂದ್ರೀಕರಣ. ನಗರ ಪ್ರದೇಶಗಳ ಅನುಕೂಲತೆಗಳಿಂದಾಗಿ ಅಲ್ಲಿ ವ್ಯಕ್ತಿಗಳು ಕೇಂದ್ರೀಕರಿಸುವ ಪ್ರಕ್ರಿಯೆ.

urban culture: ನಗರ ಸಂಸ್ಕೃತಿ.

urban day time population: ನಗರದ ಹಗಲಿನ ಜನಸಂಖ್ಯೆ. ದಿನದ (ಹಗಲಿನ) ನಿರ್ದಿಷ್ಟ ಸಮಯದಲ್ಲಿ ನಗರ ಪ್ರದೇಶದಲ್ಲಿ ಕೆಲಸ ಮಾಡುವ, ವ್ಯಾಪಾರ ವ್ಯವಹಾರ ನಡೆಸುವುದಕ್ಕಾಗಿ ಬಂದು ಹೋಗುವ ಜನರ ಸಂಖ್ಯೆ.

urban development : ನಗರಾಭಿವೃದ್ಧಿ.

urban ecology: ನಗರ ಜೀವಪರಿಸರ ಶಾಸ್ತ್ರ.

urban folklore: ನಗರ ಜಾನಪದ.

urban fringe: ನಗರದಂಚು. ಪಟ್ಟಣದ ಉಪಪ್ರದೇಶಗಳ ಹೊರಗೆ ನಗರ ಹಾಗೂ ಗ್ರಾಮೀಣ ಲಕ್ಷಣಗಳು ಒಟ್ಟು ಗೂಡಿರುವ ಪ್ರದೇಶ.

urban managerialism: ನಗರ ನಿರ್ವಹಣಾತತ್ವ. ನಗರದ ಸಾಮಾಜಿಕ ಹಾಗೂ

ಪ್ರಾದೇಶಿಕ ಅಸಮಾನತೆಗಳ ನಿರ್ವಹಣಾ ತತ್ತ್ವ.

urban morphology: ನಗರ ರೂಪ ರಚನಾ ಶಾಸ್ತ್ರ.

urban psychology: ನಗರ ಮನೋ ವಿಜ್ಞಾನ.

urban recycling: ನಗರ ನವೀಕರಣ. ಅವನತಿ ಹೊಂದುತ್ತಿರುವ ನೆರೆಹೊರೆ ಕಟ್ಟಡಗಳನ್ನು ನವೀಕರಿಸುವುದು ಹಾಗೂ ಹೊಸ ಕಟ್ಟಡಗಳನ್ನು ಕಟ್ಟಿಸುವುದು.

urban renewal: ನೋಡಿ: urban recycling.

urban ring: ನಗರ ವರ್ತುಲ. ನಗರದ ಗಡಿ ಹಾಗೂ ನಗರದಂಚಿನ ಪ್ರದೇಶಗಳನ್ನು ಒಳಗೊಳ್ಳುವ, ನಗರವನ್ನು ಸುತ್ತುವರಿದಿರುವ ಪ್ರದೇಶ.

urban social planning: ನಗರ ಸಾಮಾಜಿಕ ಯೋಜನೆ. ನಗರ ಪ್ರದೇಶಕ್ಕಾಗಿ ಪಂಚಾಯತ್ ಅಥವಾ ಪ್ರಾದೇಶಿಕ ನಿಯೋಗದಿಂದ ಸಂಯೋಜಿತ ಹಾಗೂ ನಿರ್ದೇಶಿತ ಸಾಮಾಜಿಕ ಯೋಜನೆ. ಇದು ಮುಖ್ಯವಾಗಿ ಶಿಕ್ಷಣ, ನೈರ್ಮಲ್ಯ, ಮನರಂಜನೆ ಇತ್ಯಾದಿಗಳ ಕುರಿತಾಗಿರುತ್ತದೆ.

urban society: ನಗರ ಸಮಾಜ. ಸಂಕೀರ್ಣ ಶ್ರಮವಿಭಜನೆಯುಳ್ಳ ವಿಭಿನ್ನ ಸಾಂಸ್ಕೃತಿಕ ಹಿನ್ನೆಲೆಯ ಜನರಿರುವ, ವ್ಯಾಪಾರ ಹಾಗೂ ಸಂಪರ್ಕಗಳಿಗಾಗಿ ಅನೇಕ ಸಮಾಜಗಳೊಂದಿಗೆ ನಿಕಟ ಬಾಂಧವ್ಯ ಇರುವ ಭಿನ್ನರೂಪತೆಯ ಸಮಾಜ.

urban sociology: ನಗರ ಸಮಾಜ ಶಾಸ್ತ್ರ. ನಗರಗಳ ಸಾಮಾಜಿಕ ಜೀವನ ಹಾಗೂ ಸಂಘಟನೆಗಳ ಕುರಿತ ವ್ಯಾಪಕ ಅಧ್ಯಯನಕ್ಕೆ ಮೀಸಲಾದ ಸಮಾಜ ಶಾಸ್ತ್ರ.

urban unemployment: ನಗರ ನಿರುದ್ಯೋಗ.

urbanism: ನಗರತ್ವ. ಸಣ್ಣ ಪ್ರದೇಶ ಗಳಲ್ಲಿ ಬಹುಸಂಖ್ಯೆಯ ಜನರ ಕೇಂದ್ರೀಕರಣದಿಂದಾಗಿ ಸಂಸ್ಕೃತಿ ಹಾಗೂ ಸಾಮಾಜಿಕ ಅಂತರ ಕ್ರಿಯೆಯಲ್ಲಾಗುವ ಬದಲಾವಣೆಗಳು.

urbanization: ನಗರೀಕರಣ. ೧. ಹಳ್ಳಿಗಳಿಂದ ನಗರದೆಡೆಗೆ ಜನರ ಚಲನೆ ಹಾಗೂ ತನ್ಮೂಲಕ ನಗರ ಪ್ರದೇಶಗಳಲ್ಲಿ ವಾಸಿಸುವ ಜನರ ಪ್ರಮಾಣದಲ್ಲಿ ಏರಿಕೆ. ೨.ನಗರದ ವರ್ತನಾ ವಿಧಾನ ಹಾಗೂ ಚಿಂತನ ಶೈಲಿಯ ಹರಡುವಿಕೆ.

urbanized area: ನಗರೀಕರಣಗೊಂಡ ಕ್ಷೇತ್ರ (ಪ್ರದೇಶ).

urform: ಮೂಲ ಮಾತೃಕೆ.

urgent cost: ತುರ್ತುವೆಚ್ಚ. ಉದ್ಯಮದ ಚಟುವಟಿಕೆಗಳು ಮುಂದುವರಿಯಲು ಅಗತ್ಯವಾದ ವೆಚ್ಚ.

urges: ಅಂತಃಪ್ರೇರಣೆಗಳು; ಬಯಕೆಗಳು.

urn-burial: ಜಾಡಿ (ಮಣ್ಣಿನಮಡಿಕೆ) ಶವಸಂಸ್ಕಾರ. ಶವಸಂಸ್ಕಾರದ ಬೂದಿ ಯನ್ನು ಮಣ್ಣಿನ ಕುಡಿಕೆಯಲ್ಲಿಟ್ಟು, ಕಲ್ಲಿನಿಂದ ಮುಚ್ಚಿಡುವ ಕ್ರಮ.

usages: ರೂಢಿಗಳು.

usance bill: ಮುದ್ದತಿ ಹುಂಡಿ; ಸಮಯ ವಿನಿಮಯ ಹುಂಡಿ. ಪಾವತಿಗೆ ಬರುವ ಮುನ್ನ ಒಂದು ನಿರ್ದಿಷ್ಟ ಅವಧಿ ಕಳೆಯ ಬೇಕಾದ ಹುಂಡಿ.

use of strategy: ತಂತ್ರಗಳ ಬಳಕೆ. ಒಂದು ನಿರ್ದಿಷ್ಟ ಉದ್ದೇಶವನ್ನು ಕಾರ್ಯಗತಗೊಳಿಸಲು ಅಥವಾ ಸಾಧಿಸಲು ಬಳಸುವ ವಿವಿಧ ಕೌಶಲಗಳು ಅಥವಾ ತಂತ್ರಗಳು.

use theory: ಉಪಯೋಗ ಸಿದ್ಧಾಂತ. ಬಡ್ಡಿಯು ತ್ಯಾಗದ ಪ್ರತಿಫಲ ಅಥವಾ ತ್ಯಾಗ ವೆಚ್ಚವೆಂಬುದನ್ನು ವಿವರಿಸುವ ಸಿದ್ಧಾಂತ.

use value: ಉಪಯುಕ್ತತಾ ಮೌಲ್ಯ.

usufructuary mortgage: ಭೋಗ್ಯಾದಿ ಅಡಮಾನ.

usurpation: ಸಿಂಹಾಸನಾಪಹರಣ.

usurper: ಅಪಹರಣಕಾರ; ದುರಾಕ್ರಮಣ ಕಾರ.

usury: ಅತಿ ಬಡ್ಡಿ. ನೀಡಿದ ಸಾಲಕ್ಕೆ ಪ್ರತಿಯಾಗಿ ಲಾಭದ ರೂಪದಲ್ಲಿ ದೊರಕುವ ಬಡ್ಡಿ.

uterine: ಏಕಮಾತೃಕ. ಒಂದೇ ಗರ್ಭದಿಂದ ಬೇರಬೇರೆ ತಂದೆಗೆ ಹುಟ್ಟಿದ ಮಕ್ಕಳು.

uterine descent: ನೋಡಿ: matril ineal descent.

uterine kin: ಗರ್ಭಸಂಬಂಧಿ. ನೋಡಿ: uterine.

utilitarian approach: ಪ್ರಯೋಜನವಾದಿ ಮಾರ್ಗದೃಷ್ಟಿ; ಉಪಯುಕ್ತತಾ ಸಮೀಪನ.

utilitarian school: ಪ್ರಯೋಜನೈಕ ಪಂಥ.

utilitarian theory: ನೋಡಿ: utilitarianism.

utilitarianism: ಉಪಯುಕ್ತತಾ ವಾದ; ಪ್ರಯೋಜಕತಾ ವಾದ. ಬಹುಜನರ ಸುಖವನ್ನು ಸಾಧಿಸುವುದೇ ರಾಜ್ಯದ ಉದ್ದೇಶ ಎಂಬ ವಾದ.

utility: ತುಷ್ಟಿಗುಣ; ಉಪಯುಕ್ತತೆ.

utility analysis: ತುಷ್ಟಿ ಗುಣ ವಿಶ್ಲೇಷಣೆ.

utility theory: ತುಷ್ಟಿಗುಣ ಸಿದ್ಧಾಂತ.

utilization: ಉಪಯುಕ್ತತೆ; ಉಪಯೋಗೀಕರಣ.

utopia: ಕಲ್ಪನಾರಾಜ್ಯ; ಆದರ್ಶರಾಜ್ಯ.

utopian community: ಕಾಲ್ಪನಿಕ ಸಮುದಾಯ.

utopian socialism: ಕಾಲ್ಪನಿಕ ಸಮಾಜವಾದ.

utopian socialist: ಕಾಲ್ಪನಿಕ ಸಮಾಜವಾದಿ.

utopianism: ಆದರ್ಶರಾಜ್ಯ ವಾದ. ಯಾವ ಕೊರತೆಯೂ ಇಲ್ಲದ, ಸಾಮಾಜಿಕ ಮತ್ತು ರಾಜಕೀಯ ಪದ್ಧತಿಗಳುಳ್ಳ ಕಾಲ್ಪನಿಕ ರಾಜ್ಯವಾದ.

uxorilocal residence: ನೋಡಿ: matrilocal residence.

V

vacillating foreign policy: ಅದೃಢ ವಿದೇಶಾಂಗ ನೀತಿ; ಡೋಲಾಯಮಾನ ವಿದೇಶಾಂಗ ನೀತಿ.

vacuum family: ಶೂನ್ಯ ಕುಟುಂಬ. ಮಕ್ಕಳಿಲ್ಲದ ಕುಟುಂಬ ಅಥವಾ ಗಂಡ ಹೆಂಡಿರಲ್ಲೊಬ್ಬರು ಗತಿಸಿರುವ ಕುಟುಂಬ.

vagrancy: ಅಲೆಮಾರಿತನ; ಅಂಡಲೆಯುವಿಕೆ.

vagueness: ಸಂದಿಗ್ಧತೆ; ಅಸ್ಪಷ್ಟತೆ.

Vaishnavism: ವೈಷ್ಣವವಾದ. ವಿಷ್ಣುವೇ ಸರ್ವಶ್ರೇಷ್ಠ ದೇವರೆಂಬ ವಾದ.

valence: ಸಂಯೋಗ ಶಕ್ತಿ.

valid argument: ನ್ಯಾಯಸಮ್ಮತ ವಾದ ಚರ್ಚೆ.

valid study: ಸೂಕ್ತ ಅಧ್ಯಯನ; ಸಮಂಜಸ ಅಧ್ಯಯನ.

validation: ಊರ್ಜಿತತ್ವ; ಮಾನ್ಯ ಮಾಡುವಿಕೆ.

valuable security: ಮೌಲ್ಯಯುತ ಭದ್ರತೆ.

value: ಬೆಲೆ, ಮೌಲ್ಯ.

value added: ಮೌಲ್ಯವರ್ಧಿತ. ಒಂದು ವಸ್ತುವಿನ ತಯಾರಿಕೆಯಲ್ಲಿ ನಿರತವಾದ ಪ್ರತಿಯೊಂದು ಘಟಕವೂ ತನ್ನ ವೆಚ್ಚವನ್ನು ಸೇರಿಸುವುದರ ಮೂಲಕ ಉಂಟಾಗುವ ಮೌಲ್ಯಾಧಿಕ್ಯ.

value added tax: ಮೌಲ್ಯವರ್ಧಿತ ತೆರಿಗೆ. ಒಂದು ಪದಾರ್ಥದ ತಯಾರಿಕೆ ಹಾಗೂ ವಿಕ್ರಯದಲ್ಲಿ ತೊಡಗಿದ ಎಲ್ಲಾ ಘಟಕಗಳಲ್ಲೂ ನಿಶ್ಚಿತವಾದ ದರದಲ್ಲಿ ತೆರಿಗೆ ವಿಧಿಸುವುದು.

value analysis: ಮೌಲ್ಯ ವಿಶ್ಲೇಷಣೆ.

value based politics: ಮೌಲ್ಯಾಧಾರಿತ ರಾಜಕಾರಣ.

value conflict: ಮೌಲ್ಯ ಸಂಘರ್ಷ.

value consensus: ಒಮ್ಮತ ಮೌಲ್ಯ.

value dilemma: ಮೌಲ್ಯಗಳ ಗೊಂದಲ.

value in exchange: ವಿನಿಮಯ ಮೌಲ್ಯ. ವಸ್ತುಗಳ ಬೆಲೆ ಅಥವಾ ಕೊಳ್ಳುವ ಶಕ್ತಿ.

value in use: ಉಪಯುಕ್ತತಾ ಮೌಲ್ಯ. ವಸ್ತುಗಳ ತುಷ್ಟಿಗುಣ ಅಥವಾ ಆಸೆಗಳನ್ನು ತೃಪ್ತಿಪಡಿಸುವ ಶಕ್ತಿ.

value of money: ಹಣದ ಮೌಲ್ಯ.

value indicators: ಮೌಲ್ಯ ಸೂಚಕಗಳು.

value investigation: ಮೌಲ್ಯ ಶೋಧನ.

value judgement: ಮೌಲಿಕ ತೀರ್ಮಾನ; ಮೌಲ್ಯ ನಿರ್ಣಯ.

value of service principle: ಸೇವಾ ಮೌಲ್ಯದ ಸೂತ್ರ.

value orientation: ಮೌಲ್ಯದ ಒಲವು. ಮೌಲ್ಯವೊಂದಕ್ಕೆ ವ್ಯಕ್ತಿಯೊಬ್ಬನು ಬದ್ಧನಾಗಿರುವುದು ಹಾಗೂ ಅದು ಅವನ ವರ್ತನೆಯ ಮೇಲೆ ಪ್ರಭಾವ ಬೀರುವುದು.

value system: ಮೌಲ್ಯಪದ್ಧತಿ. ಮೌಲ್ಯಗಳು ಅಂತರ ಸಂಬಂಧಿತವಾಗಿ ಒಂದನ್ನೊಂದು ಬಲಪಡಿಸುವ ಒಂದು ಸುಸಂಘಟಿತ ವ್ಯವಸ್ಥೆ.

vampirism: ಪ್ರೇತಭಯ; ರಕ್ತ ಪಿಶಾಚಿಗಳ ನಂಬಿಕೆ. ಶವವು ರಾತ್ರಿಯಲ್ಲಿ ಗೋರಿ ಅಥವಾ ಸಮಾಧಿಗಳಿಂದ ಎದ್ದು ಬಂದು ಜೀವಂತ ವ್ಯಕ್ತಿಗಳ ರಕ್ತ ಕುಡಿಯುವುದೆಂಬ ಮೂಢನಂಬಿಕೆ.

variability: ಪರಿವರ್ತನಶೀಲತೆ; ವೈವಿಧ್ಯತೆ; ಚಂಚಲತೆ.

variable: ಪರಿವರ್ತಕ; ಚಲಕ; ಚಲ.

variable behaviour: ಪರಿವರ್ತಕ ವರ್ತನೆ.

variable capital: ವ್ಯತ್ಯಾಸಾತ್ಮಕ ಬಂಡವಾಳ.

variable cost: ವ್ಯತ್ಯಾಸಾತ್ಮಕ ವೆಚ್ಚ;

ಬದಲಾಗಬಲ್ಲ ವೆಚ್ಚ. ಉತ್ಪನ್ನದ ಪ್ರಮಾಣದ ಬದಲಾವಣೆಯೊಂದಿಗೆ ಬದಲಾಗುವ ವೆಚ್ಚ.

variable error: ಪರಿವರ್ತಕ ದೋಷ.

variable factors of production: ವ್ಯತ್ಯಾಸಾತ್ಮಕ ಉತ್ಪಾದನಾಂಗ.

variable group: ಪರಿವರ್ತನೀಯ ಸಮೂಹ.

variable reserve ratio: ವ್ಯತ್ಯಾಸಾತ್ಮಕ ಮೀಸಲು ಅನುಪಾತ.

variable returns: ಬದಲಾಗಬಲ್ಲ ಪ್ರತಿಫಲಗಳು.

variable stimulus: ಪರಿವರ್ತನೀಯ ಪ್ರಚೋದಕ.

variance: ವ್ಯತ್ಯಾಸ; ಭಿನ್ನತೆ.

variant: ಭಿನ್ನರೂಪ; ಭಿನ್ನಪಾಠ.

variation: ಭಿನ್ನತೆ; ವೈವಿಧ್ಯ; ವ್ಯತ್ಯಾಸ; ಪರಿವರ್ತನೆ.

varna: ವರ್ಣ (ಬಣ್ಣ). ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳನ್ನು ಹೇಳಲಾಗಿದೆ.

varna model: ವರ್ಣ ಮಾದರಿ.

varying concomitants: ಪರಿವರ್ತಕ ಸಹಚರಗಳು.

vector of disease: ರೋಗವಾಹಕ.

vector psychology: ದಿಕ್ಪರಿಮಾಣ ಮನೋವಿಜ್ಞಾನ.

Vedanta: ವೇದಾಂತ. ಉಪನಿಷತ್ತುಗಳ ಒಟ್ಟು ಸಾರಸಂಗ್ರಹ.

velocity of circulation: ಚಲಾವಣೆಯ ವೇಗ. ಹಣದ ಪ್ರತಿಯೊಂದು ಘಟಕವನ್ನೂ ಒಂದು ಗೊತ್ತಾದ ಅವಧಿಯಲ್ಲಿ ಸರಾಸರಿ ಎಷ್ಟು ಬಾರಿ ಬಳಸಲಾಗಿದೆಯೆಂಬುದರ ಲೆಕ್ಕಾಚಾರ.

vendor's share: ಮಾರಾಟಗಾರನ ಪಾಲು.

venereal diseases: ಗುಹ್ಯರೋಗಗಳು; ರತಿರೋಗಗಳು.

verbal alteration: ಶಾಬ್ದಿಕ ಬದಲಾವಣೆ. ಶಾಸನಗಳ ಸ್ಪಷ್ಟ ನಿರೂಪಣೆಗಾಗಿ ಕೊನೆಯ ಹಂತದಲ್ಲಿ ಮಾಡಲಾಗುವ ಶಬ್ದಗಳ ಬದಲಾವಣೆ.

verbal behaviour: ಶಾಬ್ದಿಕ ವರ್ತನೆ.

verbal communication: ಶಾಬ್ದಿಕ ಸಂವಹನ.

verbal definition: ನೋಡಿ: nominal definition.

verbal illustration: ಮೌಖಿಕ ದೃಷ್ಟಾಂತ.

verbal learning experiment: ಮಾತಿನ ಕಲಿಕೆಯ ಪ್ರಯೋಗ.

verbal order: ಬಾಯಿಮಾತಿನ ಆದೇಶ; ಮೌಖಿಕ ಆಜ್ಞೆ.

verbal projective test: ಮೌಖಿಕ ಪ್ರಕ್ಷೇಪಣಾ ಪರೀಕ್ಷೆ.

verbal reasoning: ಶಾಬ್ದಿಕ ವಿವೇಚನೆ.

verbal report: ಶಾಬ್ದಿಕ ವರದಿ.

verbal report method: ಮೌಖಿಕ ವರದಿ ವಿಧಾನ.

verbal statement: ಬಾಯಿಮಾತಿನ ಹೇಳಿಕೆ.

verbal suggestion: ಶಾಬ್ದಿಕ ಸೂಚನೆ; ಶಾಬ್ದಿಕ ಭಾವಪ್ರೇರಣೆ.

verbal test: ಮೌಖಿಕ ಪರೀಕ್ಷೆ.

verbalism: ಶಾಬ್ದಿಕತೆ.

verbalization: ೧. ಕ್ರಿಯಾಕರಣ. ಕ್ರಿಯಾ ಪದವನ್ನಾಗಿ ಮಾಡುವಿಕೆ. ೨. ಶಬ್ದಾಡಂಬರ. ಅನವಶ್ಯಕವಾಗಿ ಅಧಿಕ ಪದಗಳನ್ನು ತುಂಬಿ ವಿವರಣೆ ನೀಡುವಿಕೆ.

verification: ಪ್ರಮಾಣೀಕರಣ; ಪುನರ್ ಪರಿಶೀಲನೆ; ಸಮರ್ಥನೆ; ದೃಢೀಕರಣ.

verification of hypothesis: ಪ್ರಾಕ್ ಕಲ್ಪನೆಯ ಪ್ರಮಾಣೀಕರಣ.

verifying experiment: ಪರಿಶೀಲ ನಾತ್ಮಕ ಪ್ರಯೋಗ.

vernacular school: ದೇಶಭಾಷಾ ಪಂಥ. ಸಂಸ್ಕೃತಿಗ್ರಹಣಕ್ಕೆ ದೇಶಭಾಷಾ ಶಿಕ್ಷಣದ ಪ್ರಾಧಾನ್ಯತೆಯನ್ನು ಪ್ರತಿಪಾದಿಸುವ ಸಿದ್ಧಾಂತ ವಾದಿಗಳು.

versatility: ಬಹುಮುಖ ಸಾಮರ್ಥ್ಯ (ಪ್ರತಿಭೆ).

verse riddle: ಹಾಡಿನ ರೂಪದ ಒಗಟು.

vertebrates : ಕಶೇರುಕಗಳು. ಬೆನ್ನೆಲುಬು ಇರುವ ಪ್ರಾಣಿಗಳು.

vertical excavation: ಲಂಬಮಾನ ಉತ್ಖನನ; ಆಳಗುಂಡಿಯ ತೋಡು ಕೆಲಸ.

vertical mobility: ಶೃಂಗ ಚಲನೆ; ಲಂಬಾಂತರ ಸಾಮಾಜಿಕ ಸಂಚರಣೆ.

vertical occupational movement: ವೃತ್ತಿಯ ಲಂಬಾಂತರ ಚಲನೆ.

vertical social distance: ಲಂಬಾಂತರ ಸಾಮಾಜಿಕ ಅಂತರ. ಅಸಮಾನ ಶ್ರೇಣಿಗಳ ಜನರ ನಡುವಿನ ಸ್ಥಾನಮಾನದ ಅಂತರ.

vertical social mobility: ಲಂಬಾಂತರ ಸಾಮಾಜಿಕ ಸಂಚರಣೆ. ವಿವಿಧ ಸಾಮಾಜಿಕ ವರ್ಗಗಳ ಮೇಲ್ಮುಖ ಅಥವಾ ಇಳಿಮುಖ ಸಂಚರಣೆ. ಇಲ್ಲಿ ವರ್ಗ ಸ್ಥಾನಮಾನವನ್ನು ಕಳಕೊಳ್ಳಲೂಬಹುದು, ಪಡೆಯಲೂ ಬಹುದು.

vertical solidarity: ಲಂಬಾಂತರ ಐಕ್ಯತೆ.

vertical stratification: ಲಂಬ ಸ್ತರ ವಿನ್ಯಾಸ.

vertical work group: ಲಂಬಾಂತರ ಕಾರ್ಮಿಕ ಸಮೂಹ. ವೃತ್ತಿ, ಸ್ಥಾನಮಾನ, ವೇತನ, ಕೌಶಲ ಹಾಗೂ ಅಧಿಕಾರದಲ್ಲಿ ವ್ಯತ್ಯಾಸವಿರುವ ಕಾರ್ಮಿಕರ ಸಮೂಹ.

vertically extended family: ಲಂಬಾತ್ಮಕ ವಿಸ್ತೃತ ಕುಟುಂಬ.

vested interest : ಪಟ್ಟಭದ್ರ ಹಿತಾಸಕ್ತಿ. ನ್ಯಾಯಬದ್ಧ ಅರ್ಹತೆಗಳಿಲ್ಲದಿದ್ದಾಗಲೂ ಸಾರ್ವಜನಿಕ ಲಾಭಗಳಿಸುವುದಕ್ಕಾಗಿ ಜಾತಿ, ಮತ, ಸಂಬಂಧ ಹಾಗೂ ಅಧಿಕಾರಗಳ ದುರ್ಬಳಕೆ.

vested right: ಪಟ್ಟಭದ್ರ ಹಕ್ಕು.

vestibule training: ಸಂಬಂಧಕ ತರಬೇತಿ. ನೌಕರರು ಕೆಲಸಕ್ಕೆ ಸೇರಿದ ನಂತರ ದಲ್ಲಿ ಪ್ರವಾಸ ಮುಖೇನ ಇಲಾಖೆಗಳು ಹಾಗೂ ಕ್ಷೇತ್ರ ಸಂಸ್ಥೆಗಳನ್ನು ಸಂದರ್ಶಿಸಿ ಆಡಳಿತಾತ್ಮಕ ಸಮಸ್ಯೆಗಳನ್ನು ಹಾಗೂ ವಿಚಾರಗಳನ್ನು ತಿಳಿಯುವುದರ ಮೂಲಕ ಪಡೆಯುವ ತರಬೇತಿ.

veto power: ನಿಷೇಧಾಧಿಕಾರ; ನಿರಾ

ಕರಣೆಯ ಅಧಿಕಾರ. ಉದಾ: ರಾಷ್ಟ್ರದ ಕಾರ್ಯಾಂಗ ಮುಖ್ಯಸ್ಥನು ಸಂಸತ್ತು ಮಂಜೂರು ಮಾಡಿದ ಮಸೂದೆಗೆ ಅಂಕಿತ ನೀಡದೆ ಶಾಸನವನ್ನು ತಡೆಯುವ ಅಥವಾ ನಿರಾಕರಿಸುವ ಅಧಿಕಾರ.

vexatious: ಪೀಡಾತ್ಮಕ; ತೊಂದರೆ ಪಡಿಸುವ.

vexed question: ಜಟಿಲ ಪ್ರಶ್ನೆ; ಕಾಡುವ ಪ್ರಶ್ನೆ.

via media: ಮಾಧ್ಯಮ ಮಾರ್ಗ.

vice: ದುರಾಚಾರ.

vice area: ದೂಷಿತ ಕ್ಷೇತ್ರ.

vice chairman: ಉಪಸಭಾಪತಿ; ಉಪಸಭಾಧ್ಯಕ್ಷ.

vice-president : ಉಪರಾಷ್ಟ್ರಪತಿ. ಒಂದು ರಾಷ್ಟ್ರದಲ್ಲಿ ರಾಷ್ಟ್ರಾಧ್ಯಕ್ಷನ ನಂತರ ಉನ್ನತ ಅಧಿಕಾರವನ್ನು ಹೊಂದಿರುವ ವ್ಯಕ್ತಿ.

viceroy: ಪ್ರತಿನಿಧಿ; ರಾಜಪ್ರತಿ ನಿಧಿ; ರಾಜ್ಯಗಳ ಅಧಿಪತಿ; ರಾಜಾಧಿಕಾರವನ್ನು ಚಲಾಯಿಸುವ ಆಡಳಿತಗಾರ.

vicinal location: ಸಾಮೀಪ್ಯ ನೆಲೆ.

vicious circle: ವಿಷ ವರ್ತುಲ.

vicious circle of poverty: ಬಡತನದ ವಿಷವೃತ್ತ.

vicious cycle: ವಿಷವರ್ತುಲ.

victimization: ಬಲಿಪಶುಗೊಳಿಸುವಿಕೆ.

victimized hero: ವಂಚಿತ ನಾಯಕ; ಬಲಿಪಶುವಾದ ನಾಯಕ.

victimless crime: ಬಲಿಪಶುರಹಿತ ಅಪರಾಧ. ಮದ್ಯಪಾನ, ಜೂಜು, ಮುಂತಾದ ಅಪರಾಧಗಳಲ್ಲಿ ಅಪರಾಧಿಯ ಹೊರತಾಗಿ ಬಲಿಪಶುವಾಗುವ ವ್ಯಕ್ತಿಗಳು ಇರುವುದಿಲ್ಲ.

victory pillar: ವಿಜಯ ಸ್ತಂಭ.

vigilance commission: ಜಾಗೃತ ಆಯೋಗ. ಅಧಿಕಾರಿಗಳು ಲಂಚ, ಭ್ರಷ್ಟಾಚಾರಗಳಲ್ಲಿ ತೊಡಗಿದಾಗ ಅವರುಗಳನ್ನು ಪತ್ತೆ ಹಚ್ಚುವ ಆರಕ್ಷಕ ವಿಭಾಗ. ಉದಾ: ಲೋಕಾಯುಕ್ತ.

vigilant control: ಜಾಗರೂಕತೆಯಿಂದ ಕೂಡಿದ ನಿಯಂತ್ರಣ.

vihara: ವಿಹಾರ; ಬೌದ್ಧ ಮಠ. ಬೌದ್ಧ ಭಿಕ್ಷುಗಳ ಪವಿತ್ರ ಆಶ್ರಮಸ್ಥಾನ.

village assembly: ಗ್ರಾಮ ಸಭೆ.

village community: ಗ್ರಾಮ ಸಮುದಾಯ.

village council: ಗ್ರಾಮ ಮಂಡಲ. ಗ್ರಾಮ ಸಮುದಾಯದ ಆಡಳಿತ ಮಂಡಲ.

village craft: ಗ್ರಾಮೀಣ ಕೌಶಲ; ಗ್ರಾಮೀಣ ಕಸುಬು.

village God: ಗ್ರಾಮ ದೇವತೆ. ಯಾವ ಬಗೆಯ ಲಿಖಿತಾಧಾರಗಳಿಲ್ಲವಾದರೂ ಗ್ರಾಮದ ಜನಸಮೂಹಗಳ ನಡುವೆ ಆದಿಮ ಕಾಲದಿಂದಲೂ ಉಳಿದು ಆರಾಧನೆಗೊಂಡು ಬಂದಿರುವ ದೇವತೆಯನ್ನು ಗ್ರಾಮದೇವತೆ ಎನ್ನುತ್ತಾರೆ.

village panchayat: ಗ್ರಾಮ ಪಂಚಾಯತು. ಗ್ರಾಮ ಮಟ್ಟದಲ್ಲಿರುವ ಸ್ವಯಮಾಡಳಿತ ಸಂಸ್ಥೆ.

village system: ಗ್ರಾಮ ಪದ್ಧತಿ.

violation of constitution: ಸಂವಿಧಾನದ ಉಲ್ಲಂಘನೆ.

violation of law: ಕಾನೂನು ಉಲ್ಲಂಘನೆ; ನಿಯಮೋಲ್ಲಂಘನೆ.

violence: ಹಿಂಸೆ.

violent back-lash: ತೀವ್ರತರವಾದ ಪ್ರತಿಸ್ಪಂದನ.

virgin goddess: ಕನ್ಯಾದೇವತೆ.

virginity: ಕನ್ಯತ್ವ.

virginity test: ಕನ್ಯತ್ವ ಪರೀಕ್ಷೆ.

virilocal residence: ಪಿತೃಸ್ಥಾನೀಯ ವಾಸ್ತವ್ಯ.

vis-a-vis: ಸಮ್ಮುಖದಲ್ಲಿ; ಎದುರೆದುರು.

visceral behaviour: ಅಂತರ್ ಅವಯವಗಳ ವರ್ತನೆ.

visceral sensation: ಅಂತರ್ ಅವಯವಗಳ ಸಂವೇದನೆ.

viscerotonia: ಸುಖಶೀಲತೆ. ಆಹಾರ, ಸಾಮಾಜಿಕ ಚಟುವಟಿಕೆ ಮತ್ತು ಸ್ವಯಂ ಸುಖದಲ್ಲಿ ಆಸಕ್ತರಾಗಿರುವುದು.

visible item: ಪ್ರತ್ಯಕ್ಷ ಬಾಬು.

visible speech: ಮುಖಾಮುಖಿ ಮಾತು.

vision : ದೃಷ್ಟಿ; ದೂರದೃಷ್ಟಿ.

visual delusion: ದೃಷ್ಟಿ ವಿಭ್ರಾಂತಿ.

visual depth feeling: ದೃಷ್ಟಿಯ ಆಳಾನುಭವ.

visual recording: ಚಾಕ್ಷುಷ ಮುದ್ರಿಕೆ.

vital records: ಪ್ರಮುಖ ದಾಖಲೆಗಳು.

vital statistics: ಅತಿ ಮಹತ್ವದ ಅಂಕಿ ಸಂಖ್ಯೆಗಳು. ಉದಾ: ಜನನ, ಮರಣ, ವಲಸೆಯ ಅಂಕಿ ಅಂಶಗಳು.

vitalism: ಜೀವ ಚೈತನ್ಯವಾದ. ನೋಡಿ: animatism.

viva voce: ಮೌಖಿಕ ಪರೀಕ್ಷೆ; ವಾಚಿಕ ಪರೀಕ್ಷೆ. ಅಭ್ಯರ್ಥಿಯ ವ್ಯಕ್ತಿತ್ವವನ್ನು ನಿರ್ಧರಿಸಲು ಸಹಕಾರಿಯಾಗುವ ಪರೀಕ್ಷೆ.

vocabulary: ಶಬ್ದ ಸಂಪತ್ತು.

vocabulary of motive: ಉದ್ದೇಶಿತ ಶಬ್ದಗಳು. ನಿರ್ದಿಷ್ಟ ಸಂದರ್ಭಗಳಲ್ಲಿ ತಮ್ಮ ನಡತೆಯ ವಿವರಣೆ ಕೊಡಲು ಉಪಯೋಗಿಸುವ ಶಬ್ದಗಳು.

vocational: ವೃತ್ತಿಪರ; ಉದ್ಯೋಗಪರ.

vocational adult education: ವೃತ್ತಿಪರ ವಯಸ್ಕ ಶಿಕ್ಷಣ.

vocational ethic: ವೃತ್ತಿಪರ ನೀತಿ.

vocational guidance: ಔದ್ಯೋಗಿಕ ಮಾರ್ಗದರ್ಶನ; ವೃತ್ತಿ ಮಾರ್ಗದರ್ಶನ.

vocational interest: ಔದ್ಯೋಗಿಕ ಅಭಿರುಚಿ; ವೃತ್ತಿಯಭಿರುಚಿ.

vocational psychology: ಔದ್ಯೋಗಿಕ ಮನೋವಿಜ್ಞಾನ.

vocational re-habilitation: ವೃತ್ತಿ ಪುನರ್‌ವಸತಿ.

vocational selection: ಔದ್ಯೋಗಿಕ ಆಯ್ಕೆ; ವೃತ್ತಿಯ ಆಯ್ಕೆ.

vocational social adjustment: ವೃತ್ತಿಪರ ಸಾಮಾಜಿಕ ಹೊಂದಾಣಿಕೆ. ಯುವಜನರು ತಮ್ಮ ಕೆಲಸ ಹಾಗೂ ಆರ್ಥಿಕ ಸ್ಥಾನಮಾನಗಳಿಗೆ ಹೊಂದಿಕೊಳ್ಳುವ ಹಾಗೂ ತಯಾರಿ ಮಾಡುವ ಪ್ರಕ್ರಿಯೆ.

void: ರದ್ದುಗೊಳಿಸಿದ; ಅನೂರ್ಜಿತ.

void marriage: ಅನೂರ್ಜಿತ ವಿವಾಹ.

voidable: ಅನೂರ್ಜಿತಗೊಳಿಸಬಹುದಾದ; ರದ್ದುಗೊಳಿಸಬಹುದಾದ.

voidable marriage: ಅನೂರ್ಜಿತಗೊಳಿಸಬಹುದಾದ ವಿವಾಹ.

volitional action: ಐಚ್ಛಿಕ ಕ್ರಿಯೆ; ಸಾಂಕಲ್ಪಿಕ ಕ್ರಿಯೆ.

volitional process: ಐಚ್ಛಿಕ ಪ್ರಕ್ರಿಯೆ.

volk school: ಸ್ಥಾನಿಕ ಶಾಲೆ.

voluntarism: ಸ್ವಯಂ ಸೇವಾ ಭಾವನೆ.

voluntary act: ಸ್ವಪ್ರೇರಣೆಯ ಕೃತ್ಯ.

voluntary action: ನೋಡಿ: voluntary act.

voluntary agencies: ಸ್ವಯಂ ಸೇವಾ ನಿಯೋಗಿಗಳು.

voluntary association: ಐಚ್ಛಿಕ ಸಂಘ; ಸ್ವಯಂ ಸೇವಾ ಸಂಘ. ಸರ್ಕಾರಿ ಸ್ವಾಮ್ಯದ ನಿಯೋಗದ ಬದಲು ಜನರು ಐಚ್ಛಿಕವಾಗಿ ಒಂದು ಸಾಮಾನ್ಯ ಉದ್ದೇಶ ಸಾಧನೆಗಾಗಿ ಸಂಘಟಿತರಾಗುವುದು.

voluntary court: ಐಚ್ಛಿಕ ನ್ಯಾಯಾಲಯ.

voluntary debt: ಸ್ವಯಂ ಪ್ರೇರಿತ ಸಾಲ; ಐಚ್ಛಿಕ ಸಾಲ.

voluntary factors: ಸ್ವಯಂ ಪ್ರೇರಣಾತ್ಮಕ ಅಂಶಗಳು.

voluntary jurisdiction: ಐಚ್ಛಿಕ ಅಧಿಕಾರ ವ್ಯಾಪ್ತಿ (ಕಾರ್ಯವ್ಯಾಪ್ತಿ). ಅಂತಾರಾಷ್ಟ್ರೀಯ ನ್ಯಾಯಾಲಯವು ಹೊಂದಿರುವ ಅಧಿಕಾರ ವ್ಯಾಪ್ತಿ. ನೋಡಿ: compulsory jurisdiction ಮತ್ತು advisory jurisdiction.

voluntary monopoly: ಐಚ್ಛಿಕ ಏಕಸ್ವಾಮ್ಯ; ಸ್ವಯಂ ಪ್ರೇರಣೆಯ ಏಕಸ್ವಾಮ್ಯ.

voluntary organization: ಸ್ವಯಂ ಸೇವಾ ಸಂಸ್ಥೆ.

voluntary retirement: ಐಚ್ಛಿಕ ನಿವೃತ್ತಿ; ಸ್ವಯಂ ನಿವೃತ್ತಿ. ನಿಗದಿಗೊಳಿಸಿದ ವಯಸ್ಸಿಗೆ ಮುಂಚೆಯೇ ನೌಕರರು ಸ್ವಯಂ ಇಚ್ಛೆಯಿಂದ (ಆರೋಗ್ಯ ಕುಂದಿದಾಗ, ಮಾನಸಿಕವಾಗಿ ದುರ್ಬಲರಾದಾಗ, ವಿಶ್ರಾಂತಿ ಬಯಸಿದಾಗ) ಪಡೆಯುವ ನಿವೃತ್ತಿ.

voluntary saving: ಸ್ವಯಂ ಪ್ರೇರಿತ ಉಳಿತಾಯ.

voluntary train of thought: ಐಚ್ಛಿಕ ವಿಚಾರ ಸರಣಿ.

voluntary unemployment: ಐಚ್ಛಿಕ ನಿರುದ್ಯೋಗ. ವ್ಯಕ್ತಿಗಳು ಉದ್ಯೋಗ ಮಾಡಲು ಸಾಮರ್ಥ್ಯ ಹೊಂದಿದ್ದರೂ ಕೆಲಸದ ಕುರಿತು ಒಲವಿಲ್ಲದಿರುವುದು.

volunteer corps: ಸ್ವಯಂ ಸೇವಾದಳ.

vote of censure: ಖಂಡನಾ ನಿರ್ಣಯ.

vote of confidence: ವಿಶ್ವಾಸ ಮತ.

vote on account: ಲೇಖಾನುದಾನ. ಸ್ಥೂಲ ಲೆಕ್ಕದ ಮೇಲೆ ಮತ ನೀಡುವಿಕೆ. ಹಣಕಾಸು ವರ್ಷ ಆರಂಭವಾದ ನಂತರ ಮತ್ತು ಆಯವ್ಯಯಕ್ಕೆ ಅನುಮೋದನೆ ದೊರೆಯುವವರೆಗೆ ಆಗುವ ಸರಕಾರದ ವೆಚ್ಚವನ್ನು ಭರಿಸಲು ಶಾಸಕಾಂಗ ನೀಡುವ ಅನುಮೋದನೆ.

vote on credit: ಪ್ರತ್ಯಯಾನುದಾನ. ಕೆಲವೊಮ್ಮೆ ಹಣವನ್ನು ಒದಗಿಸಬೇಕಾದ ಯಾವುದೋ ಒಂದು ವಿಭಾಗದ ಖರ್ಚು

ಗಳು ಅನಿರ್ದಿಷ್ಟ ಸ್ವಭಾವದ್ದಾಗಿದ್ದು ಅದರ ವಿವರಗಳನ್ನು ಅಥವಾ ಅದಕ್ಕೆ ಬೇಕಾದ ಹಣದ ಮೊತ್ತವನ್ನು ನಿಖರವಾಗಿ ಬಜೆಟ್‌ನಲ್ಲಿ ತಿಳಿಸಲು ಸಾಧ್ಯವಾಗದಿದ್ದಾಗ ಅಂತಹ ವೆಚ್ಚಕ್ಕೆ ಲೋಕಸಭೆ ನೀಡುವ ಒಪ್ಪಿಗೆ. ಉದಾ: ರಕ್ಷಣಾ ವೆಚ್ಚಗಳು.

voting behaviour: ಮತದಾನದ ವರ್ತನೆ ಜನರು ಮತ ಚಲಾಯಿಸುವಾಗ ಅವರ ಮೇಲೆ ಜಾತಿ, ಧರ್ಮ, ಪ್ರಾದೇಶಿಕತೆ ಮುಂತಾದುವುಗಳ ಪ್ರಭಾವದಿಂದಾಗಿ ಮಾಡುವ ನಿರ್ಧಾರಗಳು ಅವರ ಮತದಾನದ ವರ್ತನೆಯನ್ನು ನಿಯಂತ್ರಿಸುತ್ತದೆ.

voting of demands: ಬೇಡಿಕೆಗಳ ಮಂಜೂರಾತಿ.

voting qualification: ಮತದಾನದ ಅರ್ಹತೆಗಳು. ಚುನಾವಣೆಯಲ್ಲಿ ಮತ ಚಲಾಯಿಸಲು ನಾಗರಿಕರು ಅವಶ್ಯವಾಗಿ ಹೊಂದಿರಬೇಕಾದ ಅರ್ಹತೆಗಳು. ಉದಾ: ೧೮ ವರ್ಷ ಪ್ರಾಯ, ರಾಷ್ಟ್ರದ ಪೌರತ್ವ ಇತ್ಯಾದಿ.

votive offering: ಹರಿಕೆ ಕಾಣಿಕೆ; ಹರಕೆ ಅರ್ಪಣೆ. ಕಾಣಿಕೆ ಅರ್ಪಿಸುವುದರ ಮೂಲಕ ಹರಕೆ ತೀರಿಕೆ.

voyeurism: ಹಣಕುವಿಕೆ; ಇಣುಕುವಿಕೆ. ಲೈಂಗಿಕ ಸನ್ನಿವೇಶಗಳತ್ತ ಹಣಕಿ ನೋಡುವುದರಲ್ಲಿ ಲೈಂಗಿಕ ತೃಪ್ತಿ ಪಡೆಯುವ ಕಾಮ ವಿಕಾರ.

vulnerable: ಸುಲಭ ಲಭ್ಯ; ಸುಲಭ ಪೀಡಿತ.

W

wage: ಕೂಲಿ; ವೇತನ.

wage cut policy: ಕೂಲಿ (ವೇತನ) ಕಡಿತ ನೀತಿ.

wage differences: ಕೂಲಿ (ವೇತನ) ವ್ಯತ್ಯಾಸಗಳು.

wage flexibility: ವೇತನ (ಕೂಲಿ) ನಮ್ಯತೆ

wage freeze: ಕೂಲಿ ಸ್ಥಗಿತತೆ; ವೇತನ ಸ್ಥಗಿತತೆ.

wage fund: ಕೂಲಿ (ವೇತನ) ನಿಧಿ.

wage fund theory: ಕೂಲಿ ನಿಧಿ ಸಿದ್ಧಾಂತ; ವೇತನ ನಿಧಿ ಸಿದ್ಧಾಂತ.

wage goods: ಕೂಲಿ ಸರಕುಗಳು.

wage labour: ಕೂಲಿ ಶ್ರಮ.

wage policy: ಕೂಲಿ (ವೇತನ) ನೀತಿ.

wage preference path : ಕೂಲಿ ಒಲವಿನ ಪಥ; ವೇತನದೊಲವಿನ ಮಾರ್ಗೋಪಾಯ.

wage rate: ಕೂಲಿ (ವೇತನ) ದರ.

wage slave: ಕೂಲಿಯ ಗುಲಾಮ. ಉದ್ದಿಮೆಗಳು ಬೆಳೆದಂತೆ ಬಂಡವಾಳಗಾರರ ಪ್ರಾಬಲ್ಯವೂ ಹೆಚ್ಚುತ್ತದೆ. ಅವರಲ್ಲಿ ಉತ್ಪಾದನೆಯ ಸಾಧನಗಳು ಕೇಂದ್ರೀಕೃತವಾಗಿರುತ್ತವೆ. ಅವರು ಕಡಿಮೆ ಕೂಲಿಯನ್ನು ಕೊಟ್ಟು ಕಾರ್ಮಿಕರನ್ನು ಕೂಲಿಯ ಗುಲಾಮರನ್ನಾಗಿ ಮಾಡುತ್ತಾರೆ ಎಂಬ ಪರಿಕಲ್ಪನೆ.

wage stability: ಕೂಲಿ (ವೇತನ) ದೃಢತೆ; ಕೂಲಿ (ವೇತನ) ಸ್ಥಿರತೆ.

wage theory of profit: ಲಾಭದ ಕೂಲಿ ಸಿದ್ಧಾಂತ. ಲಾಭವು ಸಂಘಟಕನ ಸೇವೆಗೆ ನೀಡುವ ಕೂಲಿಯಾಗಿದೆ ಎಂಬುದಾಗಿ ವಿವರಿಸುವ ಸಿದ್ಧಾಂತ.

waiting theory of interest: ಬಡ್ಡಿಯ ತಾಳ್ಮೆ ಸಿದ್ಧಾಂತ.

wake : ಶವಪ್ರಾರ್ಥನೆ. ಮೃತ ಶರೀರದ ಸಮ್ಮುಖದಲ್ಲಿ ಮೃತನ ಸಂಬಂಧಿಕರು ಮತ್ತು ಸ್ನೇಹಿತರು ಸೇರಿ ನಡೆಸುವ ಪ್ರಾರ್ಥನೆ.

walking inflation: ನಿಧಾನ ಹಣ ದುಬ್ಬರ. ಬೆಲೆಗಳು ನಿಧಾನವಾಗಿ ಏರುತ್ತಿರುವ ಸನ್ನಿವೇಶ.

wander lust: ಪರಿಭ್ರಮಣ ಲಾಲಸೆ; ಪರ್ಯಟನಾಸಕ್ತಿ.

wandering attention: ಸಂಚಾರಿ ಅವಧಾನ; ಅಲೆಯುವ ಅವಧಾನ.

want satisfaction: ಅಪೇಕ್ಷಾ ತೃಪ್ತಿ; ಬಯಕೆ ತೀರಿಕೆ.

wanton force: ಸ್ವೈರ ಶಕ್ತಿ. ಗೊತ್ತು ಗುರಿ ಇಲ್ಲದ ಶಕ್ತಿ.

Waqf : ಮುಸ್ಲಿಂ ದಯಾನಿಧಿ; ವಕ್ಫ್.

war communism: ಸಮರ ಸಮತಾವಾದ. ೧೯೧೭ರಿಂದ ೧೯೨೫ ರವರೆಗೆ ರಷ್ಯಾದಲ್ಲಿ ಯುದ್ಧಕಾಲೀನ ಪರಿಸ್ಥಿತಿ ಇದ್ದು ಆಗ ಸಮತಾವಾದದ ತತ್ವಕ್ಕನುಸಾರವಾಗಿ ಜಮೀನ್ದಾರರು, ಉದ್ಯೋಗಪತಿಗಳು ಮತ್ತು ಬಂಡವಾಳಶಾಹಿಗಳು ತಮ್ಮ ಮೊದಲಿನ ಪ್ರತಿಷ್ಠಿತ ಸ್ಥಾನವನ್ನು ಕಳೆದುಕೊಂಡು ಅವರ ಆಸ್ತಿಯು ಸರಕಾರದ ಒಡೆತನಕ್ಕೆ ಸೇರಿದ ಪ್ರಕ್ರಿಯೆ.

war compensation: ಯುದ್ಧ ನಷ್ಟ ಪರಿಹಾರ. ಯುದ್ಧದಿಂದ ಉಂಟಾದ ನಷ್ಟವನ್ನು ಭರ್ತಿ ಮಾಡಲು ಅಪಜಯವನ್ನು ಅನುಭವಿಸಿದ ರಾಜ್ಯದ ಅಥವಾ ಅದರ ಅಧೀನದಲ್ಲಿರುವ ಭೂ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳುವುದು.

war conference: ಸಮರ ಸಮ್ಮೇಳನ.

war dance: ಯುದ್ಧ ನರ್ತನ; ಸಮರ ನೃತ್ಯ. ಯುದ್ಧದ ಅಣಕವಾಡುವ ನೃತ್ಯ ಪ್ರಕಾರ ಅಥವಾ ಅಣಕು ಯುದ್ಧದ ಮೂಲಕ ಯುದ್ಧ ಪೂರ್ವದ ಸೈನ್ಯಬಲದ ಭಾವನಾತ್ಮಕತೆಯನ್ನು ಪ್ರತಿನಿಧಿಸುವ ನೃತ್ಯ.

war ministry: ಸಮರಕಾಲೀನ ಮಂತ್ರಿಮಂಡಲ; ಸಮರ ಸಚಿವಾಲಯ.

war neurosis: ಕದನ ಮನೋಬೇನೆ. ಯುದ್ಧದ ಸಮಯದಲ್ಲಿ ಯುದ್ಧದ ಭಯದಿಂದ ಸೈನಿಕರಲ್ಲಿ ಕಂಡು ಬರುವ ಮಾನಸಿಕ ಗೊಂದಲದ ಪ್ರತಿಕ್ರಿಯೆ.

war of ideas: ವೈಚಾರಿಕ ತಾಕಲಾಟ; ವೈಚಾರಿಕ ಸಮರ.

wardha scheme: ವಾರ್ಧಾ ಯೋಜನೆ. ಮಹಾತ್ಮಾ ಗಾಂಧಿಯವರ ಅಸಹಕಾರ ಚಳವಳಿಯ ಬಳಿಕ ಮೂಲ ಶಿಕ್ಷಣವನ್ನು ನೀಡಲು ಅನೇಕ ರಾಷ್ಟ್ರೀಯ ಶಾಲೆಗಳೂ, ಗುರುಕುಲಗಳೂ, ವಿದ್ಯಾಪೀಠಗಳೂ ಆರಂಭವಾದವು. ಇದನ್ನು ವಾರ್ಧಾ ಯೋಜನೆ ಎಂದು ಕರೆಯಲಾಗುತ್ತದೆ.

warrant of arrest: ಬಂಧನದ ವಾರಂಟ್; ದಸ್ತಗಿರಿಯ ಆಜ್ಞೆ.

warrant of precedence: ಪೂರ್ವ ಭಾವಿ ದಸ್ತಗಿರಿ ಆಜ್ಞೆ.

warranted growth rate: ಸಮರ್ಥನೀಯ ಬೆಳವಣಿಗೆ ದರ; ಅಪೇಕ್ಷಿತ ಅಭಿವೃದ್ಧಿ ದರ.

warrior hero: ಸೈನಿಕ ನಾಯಕ. ದೈವಿಕ ಸ್ಥಾನವನ್ನು ಪಡೆದ ಯುದ್ಧವೀರ.

warrior subalters: ಅಧೀನ ಯೋಧ.

Warsaw pact (1955): ವಾರ್ಸಾ ಒಪ್ಪಂದ. ರಷ್ಯಾದ ನೇತೃತ್ವದಲ್ಲಿ ಕಮ್ಯೂನಿಸ್ಟ್ ಬಣ ರಚಿಸಿಕೊಂಡ ಮಿಲಿಟರಿ ಒಪ್ಪಂದ. ಇದೇ ದ್ವಿತೀಯ ವಿಶ್ವ. (second world). ರಷ್ಯಾ, ಅಲ್ಬೇರಿಯಾ, ಹಂಗೇರಿ, ಪೋಲೆಂಡ್, ಜೆಕೋಸ್ಲೋವಾಕಿಯಾ, ರುಮೇನಿಯಾ, ಪೂರ್ವಜರ್ಮನಿ ಸದಸ್ಯ ರಾಷ್ಟ್ರಗಳಾಗಿದ್ದವು. ಪ್ರಧಾನ ಕಚೇರಿ ವಾರ್ಸಾದಲ್ಲಿತ್ತು.

wasteful expenditure: ದುಂದು ವೆಚ್ಚ.

watchful attitude: ಜಾಗರೂಕತಾ ಮನೋಭಾವ.

watch word: ಸೂತ್ರವಾಕ್ಯ; ನುಡಿ.

water burial: ಜಲ ಸಂಸ್ಕಾರ; ಜಲ ಸಮಾಧಿ. ದೋಣಿಯಲ್ಲಿ ತೇಲಿಬಿಡುವ ಅಥವಾ ಸಮುದ್ರಕ್ಕೆ ಎಸೆಯುವ ಮೂಲಕ ಶವ ಸಂಸ್ಕಾರ ನಡೆಸುವ ಕ್ರಮ.

watershed development: ಜಲಾನಯನ ಅಭಿವೃದ್ಧಿ.

wave enthusiasm: ಉತ್ಸಾಹ ಲಹರಿ.

wave of excitement: ಉತ್ತೇಜನಾ ಲಹರಿ.

wave of unrest: ಅಶಾಂತಿ ಲಹರಿ.

wazir: ವಜೀರ; ಮಂತ್ರಿಪ್ರಮುಖ; ಮುಖ್ಯಮಂತ್ರಿ. ದೆಹಲಿ ಸುಲ್ತಾನರ ರಾಜ್ಯದ ಮುಖ್ಯಮಂತ್ರಿ.

we feeling: ಸ್ವಕೀಯ ಭಾವನೆ. ನಾವು, ನಮ್ಮದು ಎಂಬ ಭಾವನೆ.

we group: ಸ್ವಸಮೂಹ. ನೋಡಿ: in-group.

weak power: ದುರ್ಬಲ ಶಕ್ತಿ. ರಾಷ್ಟ್ರಗಳು ಹೊಂದಿರುವ ರಾಷ್ಟ್ರೀಯ ಶಕ್ತಿಯ ಆಧಾರದ ಮೇಲೆ ಪ್ರಪಂಚದ ವಿವಿಧ ರಾಷ್ಟ್ರಗಳನ್ನು ವಿವಿಧ ಶಕ್ತಿಗಳನ್ನಾಗಿ ವರ್ಗೀಕರಣ ಮಾಡಿರುವುದು. ಉದಾ: ಅಗ್ರಶಕ್ತಿ, ಪ್ರಬಲ ಶಕ್ತಿ, ಮಧ್ಯಮ ಶಕ್ತಿ ಹಾಗೂ ದುರ್ಬಲ ಶಕ್ತಿ.

weak sanction: ದುರ್ಬಲ ನಿರ್ಬಂಧ.

weaker section: ದುರ್ಬಲ ವರ್ಗ.

wealth tax : ಸಂಪತ್ತು ತೆರಿಗೆ; ಸಂಪತ್ತಿನ ಮೇಲಿನ ತೆರಿಗೆ.

web of life: ಜೀವ ಜಾಲ.

web of social relation: ಸಾಮಾಜಿಕ ಸಂಬಂಧಗಳ ಬಲೆ.

welfare agency: ಕಲ್ಯಾಣ ಕೇಂದ್ರ.

welfare approach: ಯೋಗಕ್ಷೇಮ ದೃಷ್ಟಿಕೋನ.

welfare capitalism: ಕಲ್ಯಾಣ ಬಂಡವಾಳ ಪ್ರಭುತ್ವ.

welfare definition: ಯೋಗಕ್ಷೇಮ ಆಧಾರಿತ ವ್ಯಾಖ್ಯೆ.

welfare function: ಕಲ್ಯಾಣ ಕಾರ್ಯಕ್ರಮ. ಜನರ ಅಭಿವೃದ್ಧಿಗೆ ಪೂರಕವಾದ ಸರಕಾರದ ಕೆಲಸಗಳು (ಕಾರ್ಯಕ್ರಮಗಳು). ಉದಾ: ಬಡ್ಡಿ ವಿನಾಯಿತಿಯಲ್ಲಿ ಸಾಲ ಕೊಡುವುದು, ನಿರುದ್ಯೋಗ ನಿವಾರಣಾ ಯೋಜನೆಗಳು ಇತ್ಯಾದಿ.

welfare institution: ಕಲ್ಯಾಣ ಸಂಸ್ಥೆ. ಜನಪರ ಕಾರ್ಯಕ್ರಮಗಳನ್ನು ಮಾಡುವ ಸಂಸ್ಥೆ. ಸಾರ್ವಜನಿಕ ಹಿತರಕ್ಷಣೆಯೇ ಆಧುನಿಕ ಸರಕಾರಗಳ ಮೂಲ ಉದ್ದೇಶವಾಗಿರುವುದರಿಂದ ಆಧುನಿಕ ಸರಕಾರಗಳನ್ನು

ಕಲ್ಯಾಣ ಸಂಸ್ಥೆಗಳು ಎಂದು ಕರೆಯಲಾಗುತ್ತದೆ. ನೋಡಿ: welfare state.

welfare policy: ಯೋಗಕ್ಷೇಮ (ಕಲ್ಯಾಣ) ನೀತಿ.

welfare programme: ನೋಡಿ: social welfare programme.

welfare rights: ಕಲ್ಯಾಣ ಹಕ್ಕುಗಳು.

welfare service: ಕಲ್ಯಾಣ ಸೇವೆ.

welfare society: ಕ್ಷೇಮಾಭ್ಯುದಯ ಸಮಾಜ.

welfare state: ಕಲ್ಯಾಣ ರಾಜ್ಯ; ಸುಖೀ ರಾಜ್ಯ; ಕಲ್ಯಾಣ ರಾಷ್ಟ್ರ. ವ್ಯಕ್ತಿಗೆ ಭದ್ರತೆ ಒದಗಿಸಿ ಸಾರ್ವಜನಿಕ ಹಿತಾಸಕ್ತಿಗಳನ್ನು ರಕ್ಷಿಸುವುದಕ್ಕಾಗಿ ಆರ್ಥಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳನ್ನು ಹೆಚ್ಚು ಹೆಚ್ಚಾಗಿ ರೂಪಿಸಿ, ಕಾರ್ಯಗತಗೊಳಿಸುವ ಮೂಲಕ ಅನೇಕ ರೀತಿಯ ಸೇವೆ(ಸೌಲಭ್ಯ)ಗಳನ್ನು ಒದಗಿಸುವಲ್ಲಿ ಪ್ರಮುಖ ಪಾತ್ರವಹಿಸುವ ರಾಜ್ಯ(ರಾಷ್ಟ್ರ).

welfare state concept: ಕಲ್ಯಾಣ ರಾಜ್ಯ ಪರಿಕಲ್ಪನೆ. ಆಧುನಿಕ ಪ್ರಜಾಪ್ರಭುತ್ವ ರಾಷ್ಟ್ರಗಳು ಕಲ್ಯಾಣ ರಾಜ್ಯ ತತ್ವಗಳನ್ನು ಅಳವಡಿಸಿಕೊಂಡಿವೆ. ಅಂದರೆ ಜನರ ಹಿತ ರಕ್ಷಣೆಯೇ ರಾಜ್ಯದ ಮುಖ್ಯ ಉದ್ದೇಶ.

welfare state idea: ಸುಖೀ ರಾಜ್ಯದ ಭಾವನೆ.

welfare theory: ಕಲ್ಯಾಣ ಸಿದ್ಧಾಂತ.

western cultural trait: ಪಾಶ್ಚಾತ್ಯ ಸಂಸ್ಕೃತಿಯ ಅಂಶ (ಲಕ್ಷಣ).

western culture: ಪಾಶ್ಚಾತ್ಯ ಸಂಸ್ಕೃತಿ.

westernization: ಪಾಶ್ಚಾತ್ತೀಕರಣ. ತೃತೀಯ ವಿಶ್ವದ ದೇಶಗಳಲ್ಲಿ ಅಥವಾ ಪೌರಾತ್ಯ ದೇಶಗಳಲ್ಲಿ ಬ್ರಿಟಿಷರ ಅಥವಾ ಯುರೋಪಿನ ಇತರ ದೇಶಗಳ ವಸಾಹತುಶಾಹಿಯ ಪರಿಣಾಮದಿಂದ ಉಂಟಾದ ಬದಲಾವಣೆಗಳು. ಇವು ಮುಖ್ಯವಾಗಿ ಸಾಮಾಜಿಕ ಮೌಲ್ಯಗಳು, ಸಾಮಾಜಿಕ ಸಂಬಂಧಗಳು, ಸಾಮಾಜಿಕ ಸಂಸ್ಥೆಗಳು ಹಾಗೂ ಜೀವನ ವಿಧಾನದಲ್ಲಿ ಉಂಟಾದ ಪರಿವರ್ತನೆಗಳಾಗಿವೆ.

westernized sub-cultural pa ttern: ಪಾಶ್ಚಾತ್ತೀಕೃತ ಉಪಸಾಂಸ್ಕೃತಿಕ ಮಾದರಿ.

whip: ಸಚೇತಕ. ಸಂಸತ್ತಿನಲ್ಲಿ (ಶಾಸಕಾಂಗದಲ್ಲಿ) ಒಂದು ಪಕ್ಷದ ಸದಸ್ಯರು ಶಿಸ್ತು ಮತ್ತು ಸಭ್ಯತೆಯಿಂದ ನಡೆದುಕೊಳ್ಳುವಂತೆ ನೋಡಿಕೊಳ್ಳುವುದಕ್ಕೆ ಮತ್ತು ಅವರಿಗೆ ಬೇಕಾದ ತಿಳುವಳಿಕೆ ನೀಡುವುದಕ್ಕಾಗಿ ನೇಮಿತವಾದ ಆಯಾ ಪಕ್ಷದ ವ್ಯಕ್ತಿ.

white collar crime: ಬಿಳಿ ಕತ್ತಿನ ಪಟ್ಟಿಯವರ ಅಪರಾಧ. ಸಾಮಾನ್ಯವಾಗಿ ಸುಶಿಕ್ಷಿತರು ಮತ್ತು ಗಣ್ಯರು ಮಾಡುವ ಅಪರಾಧ.

white collar worker: ಕಛೇರಿ ನೌಕರ; ಬಿಳಿ ಕೊರಳುಪಟ್ಟಿ ಕೆಲಸಗಾರ; ಕಛೇರಿಗಳಲ್ಲಿ ದುಡಿವ ಕಾರ್ಮಿಕ.

white good: ಗೃಹೋಪಯೋಗೀ ಆಧುನಿಕ ವಸ್ತು. ಸಾಂಕೇತಿಕವಾಗಿ ಶ್ರೀಮಂತಿಕೆಯನ್ನು ತೋರಿಸುವ ವಿದ್ಯುತ್ ಗೃಹೋಪಯೋಗಿ ಸಾಧನಗಳು. ಉದಾ: ರೆಫ್ರಿಜರೇಟರ್, ವಾಶಿಂಗ್ ಮೆಶಿನ್, ಟೆಲಿವಿಷನ್ ಇತ್ಯಾದಿ.

white magic: ಅನುಕೂಲಾತ್ಮಕ ಮಾಟವಿದ್ಯೆ; ಶ್ವೇತಮಾಟ.

white paper: ಶ್ವೇತ ಪತ್ರ. ರಾಷ್ಟ್ರೀಯ ಅಥವಾ ಅಂತಾರಾಷ್ಟ್ರೀಯ ಸಮಸ್ಯೆಗೆ ಸಂಬಂಧಿಸಿದ ವಿಷಯದ ಕುರಿತು ಸಾರ್ವ ಜನಿಕರ ತಿಳುವಳಿಕೆಗಾಗಿ ಸರಕಾರವು ಹೊರಡಿಸುವ ವಿಶೇಷ ವರದಿ.

white revolution: ಕ್ಷೀರ ಕ್ರಾಂತಿ.

whole learning: ಪೂರ್ಣ ಕಲಿಕೆ; ಅಖಂಡ ಕಲಿಕೆ.

whole sale trade: ಸಗಟು ವ್ಯಾಪಾರ.

wife hospitality: ಪತ್ನಿ ಆತಿಥ್ಯ. ಅತಿಥಿಗೆ ಎಲ್ಲಾ ಅನುಕೂಲ ಒದಗಿಸಲು ಆತಿಥೇಯನ ಪತ್ನಿಯರಲ್ಲಿ ಒಬ್ಬಾಕೆಯ ಜೊತೆ ಲೈಂಗಿಕ ಸಂಬಂಧ ನಡೆಸಲು ಅವಕಾಶ ನೀಡುವ ಪದ್ಧತಿ.

wife leasing: ಪತ್ನಿ ಅಡಮಾನ. ನಿಗದಿತ ಅವಧಿಗೆ ಪತ್ನಿಯನ್ನು ಈಡು ಇಡುವುದು.

will: ಇಚ್ಛಾಪತ್ರ; ಉಯಿಲು.

will power: ಸಂಕಲ್ಪ ಶಕ್ತಿ; ಇಚ್ಛಾಶಕ್ತಿ. ವ್ಯಕ್ತಿಯ ಬಯಕೆಯನ್ನು ಈಡೇರಿಸುವ ಶಕ್ತಿ.

will therapy: ಸಂಕಲ್ಪ ಚಿಕಿತ್ಸೆ.

wind fall profit: ಆಕಸ್ಮಿಕ ಲಾಭ.

wishfulfilling fantasy: ಇಚ್ಛಾ ಪೂರ್ಣ ಮನೋವಿಹಾರ.

wishful thinking: ಇಚ್ಛಾತ್ಮಕ ಚಿಂತನೆ.

witchcraft: ಮಾಟ. ವೈಯಕ್ತಿಕ ರಕ್ಷಣಾತ್ಮಕ ಶಕ್ತಿಯ ಮೂಲಕ ಬೇರೆ ವ್ಯಕ್ತಿಯನ್ನು ನಿಯಂತ್ರಿಸುವುದು. ಸಾಮಾನ್ಯವಾಗಿ ಸ್ತ್ರೀ ಮಂತ್ರವಾದಿಗಳನ್ನು ಹೆಸರಿಸಲು ಈ ಪದ ಬಳಸುತ್ತಾರೆ.

witch doctor: ಮಂತ್ರವಾದಿ.

withdraw: ಹಿಂದೆಗೆ; ಹಿಂಜರಿಯು.

withdrawal of motion: ಸೂಚನೆ ಯನ್ನು ಹಿಂದೆಗೆದುಕೊಳ್ಳುವುದು. ಪಾರ್ಲಿಮೆಂಟು ಅಥವಾ ಸಭೆಗಳಲ್ಲಿ ಚರ್ಚೆಗಾಗಿ ಸದಸ್ಯರು ಮೊದಲೇ ಕಳುಹಿಸಿದ ಸೂಚನೆಗಳನ್ನು ಚರ್ಚೆ ಅಗತ್ಯವಿಲ್ಲವೆಂದು ಕಂಡು ಬಂದಾಗ ಹಿಂತೆಗೆದುಕೊಳ್ಳುವಿಕೆ.

withdrawal symptoms: ಮದ್ಯಾ ಭಾವ ಚಿಹ್ನೆಗಳು. ಮಾದಕ ದ್ರವ್ಯಗಳ ಸೇವನೆಯನ್ನು ಒಮ್ಮೆಗೇ ನಿಲ್ಲಿಸಿದಾಗ ಉಂಟಾಗುವ ನಡುಕ, ಉದ್ವಿಗ್ನತೆ, ಬೆವರುವಿಕೆ ಮುಂತಾದ ಮನೋದೈಹಿಕ ತಾರುಮಾರುಗಳು.

withdrawn child: ವಿಮುಖ ಮಗು.

withering away of the state: ರಾಜ್ಯದ ಕ್ರಮೇಣ ಲಯ. ಮಾರ್ಕ್ಸ್ ವಾದದ ಪ್ರಕಾರ ಸಮಾಜವಾದಿ ಕ್ರಾಂತಿಯ ನಂತರ ಬಂಡವಾಳಶಾಹಿಯು ನಾಶವಾಗುತ್ತದೆ ಮತ್ತು ಸಮಾಜವಾದಿ ರಾಜ್ಯವು ಸ್ಥಾಪನೆಯಾಗುತ್ತದೆ. ಸಮಾಜವಾದಿ ರಾಜ್ಯದಲ್ಲಿ ರಾಜ್ಯ ಎನ್ನುವ ಸಂಘಟನೆಯ ಅವಶ್ಯಕತೆಯೇ ಇರುವುದಿಲ್ಲವಾದ್ದರಿಂದ ರಾಜ್ಯವು ಕ್ರಮೇಣ ಲಯವಾಗುತ್ತದೆ ಎಂಬ ಪರಿಕಲ್ಪನೆ. ನೋಡಿ: stateless society.

wolf child: ನೋಡಿ: feral child.

women suffrage: ಸ್ತ್ರೀಯರ ಮತಾಧಿಕಾರ.

women's liberation movement: ಸ್ತ್ರೀ ವಿಮೋಚನಾ ಚಳವಳಿ.

women's welfare: ಮಹಿಳಾ ಕಲ್ಯಾಣ.

wonder tale: ಅದ್ಭುತ ಕತೆ. ಉದಾ: ಜಾನಪದೀಯ ಭ್ರಮಾತ್ಮಕ ಕತೆಗಳು.

wondering attitude: ವಿಸ್ಮಯಗೊಳ್ಳುವ ಮನೋವೃತ್ತಿ.

word association: ಪದ ಸಂಯೋಜನೆ; ಶಬ್ದ ಸಂಯೋಜನೆ.

word building: ಶಬ್ದ ರಚನೆ.

work culture: ನೋಡಿ: occupational culture.

work ecology: ಕಾರ್ಯ ಪರಿಸರಶಾಸ್ತ್ರ; ಕಾರ್ಮಿಕ ಪರಿಸರ. ಕಾರ್ಖಾನೆ, ಆಫೀಸು ಮುಂತಾದೆಡೆ ಜನರ ವಿತರಣೆ ಹಾಗೂ ಕೆಲಸದ ಸಂಬಂಧ ಹಾಗೂ ಅನೌಪಚಾರಿಕ ಸಾಮಾಜಿಕ ಸಂಬಂಧದ ವಿತರಣೆಯ ಬಗೆಗಿನ (ಪರಿಸರದ) ಅಧ್ಯಯನ.

work experience: ಕಾರ್ಯಾನುಭವ.

work group: ಕಾರ್ಯ ಪ್ರವೃತ್ತ ಗುಂಪು; ಕ್ರಿಯಾಶೀಲ ಗುಂಪು. ನೋಡಿ: vertical and horizontal work group.

work house: ಕಾರ್ಯಾಗಾರ. ಕಾರ್ಖಾನೆಗಳಲ್ಲಿ ಯಂತ್ರಗಳಿಂದ ಉತ್ಪಾದನಾ ಚಟುವಟಿಕೆ ಜರಗುವ ಕಟ್ಟಡ.

work motivation: ಕಾರ್ಯಾಭಿಪ್ರೇರಣೆ.

work riddle: ಕೆಲಸದ ಒಗಟು.

work samples: ಕಾಯಕ ನಮೂನೆ ಗಳು.

work shop: ಕಾರ್ಯಾಗಾರ; ಪ್ರಶಿಕ್ಷಣ ವರ್ಗ.

work song: ಕೆಲಸದ ಹಾಡು.

work trait: ಕಾರ್ಯ ವಿಶಿಷ್ಟ ಗುಣ.

worker craft guild: ಕಾರ್ಮಿಕ ವೃತ್ತಿ ಸಂಘಟನೆ.

workers' committee: ಕಾರ್ಮಿಕರ ಸಮಿತಿ.

workers' compensation: ಕಾರ್ಮಿಕರ ಪರಿಹಾರ.

workers' control: ಕಾರ್ಮಿಕರ ನಿಯಂತ್ರಣ. ಆರ್ಥಿಕತೆಯ ನಿರ್ವಹಣೆಯ ಕಾರ್ಯದಲ್ಲಿ ಕಾರ್ಮಿಕ ವರ್ಗವನ್ನು ತೊಡಗಿಸುವ ಒಂದು ಕ್ರಮ. ಅದು ಕಾರ್ಮಿಕರಿಗೆ ಆಡಳಿತ ನಿರ್ವಹಣೆಯ ಅನುಭವವನ್ನು ಕೊಡುತ್ತದೆ ಮತ್ತು ತಮ್ಮ ಸ್ವಂತಹಿತಾಸಕ್ತಿಗಳಿಗಾಗಿ ಉತ್ಪಾದನೆಯನ್ನು ನಡೆಸುವುದರಲ್ಲಿ ಅವರು ಭಾಗವಹಿಸುವುದಕ್ಕೆ ಸಹಾಯಕವಾಗುತ್ತದೆ.

workers' paradise: ಕಾರ್ಮಿಕರ ಸ್ವರ್ಗ. ವರ್ಗ ಸಂಘರ್ಷದ ಕೊನೆಯ ಹಂತದಲ್ಲಿ ಉಂಟಾಗುವ ರಾಜ್ಯರಹಿತ ಕಾಲ್ಪನಿಕ ಜಾಗತಿಕ ಸಮಾಜವಾದವು ಕಾರ್ಮಿಕರ ಪಾಲಿನ ಸ್ವರ್ಗವಾಗಿರುತ್ತದೆ ಎಂಬ ಪರಿ ಕಲ್ಪನೆ.

workers' revolution: ಕಾರ್ಮಿಕ ಕ್ರಾಂತಿ; ಕಾರ್ಮಿಕರ ಆಂದೋಲನ.

working age group: ದುಡಿಯುವ ವಯೋ ಗುಂಪು.

working capital: ಕಾರ್ಯನಿರ್ವಹಣಾ ಬಂಡವಾಳ.

working class: ಕಾರ್ಮಿಕ ವರ್ಗ. ಆಧುನಿಕ ಸಮಾಜದ ಪ್ರಧಾನ ಉತ್ಪಾದಕ ಶಕ್ತಿ. ಬಂಡವಾಳಶಾಹಿ ವ್ಯವಸ್ಥೆಯಿಂದ ಸಮಾಜವಾದಕ್ಕೆ ಮತ್ತು ಕಮ್ಯೂನಿಸಂಗೆ ಉಂಟಾಗುವ ಪರಿವರ್ತನೆಯ ಮುಖ್ಯ ಚಾಲಕ ಶಕ್ತಿ. ಸಮಾಜವಾದಿ ವ್ಯವಸ್ಥೆಯಲ್ಲಿ ಕಾರ್ಮಿಕ ವರ್ಗದ ಸಾಮಾಜಿಕ ಸ್ಥಾನವು ಬಂಡವಾಳಶಾಹಿ ವ್ಯವಸ್ಥೆಯಲ್ಲಿರುವುದಕ್ಕಿಂತ ಮೂಲಭೂತವಾಗಿ ಭಿನ್ನವಾದದ್ದಾಗಿರುತ್ತದೆ.

working committee: ಕಾರ್ಯಕಾರಿ ಸಮಿತಿ.

working hypothesis: ಪ್ರಯೋಗಾತ್ಮಕ ಪ್ರಾಕ್‌ಕಲ್ಪನೆ; ಕಾರ್ಯಾತ್ಮಕ ಪ್ರಾಕ್‌ಕಲ್ಪನೆ.

working women's forum: ದುಡಿಯುವ ಸ್ತ್ರೀಯರ ವೇದಿಕೆ.

workmanship: ಕಾರ್ಯಕೌಶಲ್ಯ.

workmen's compensation: ಕಾರ್ಮಿಕರ ಪರಿಹಾರ.

works committees: ಕಾರ್ಯ ಸಮಿತಿಗಳು.

world almanac: ವಿಶ್ವ ಪಂಚಾಂಗ.

world bank: ವಿಶ್ವಬ್ಯಾಂಕ್.

world community: ವಿಶ್ವಸಮುದಾಯ.

world empire: ಜಾಗತಿಕ ಚಕ್ರಾಧಿಪತ್ಯ.

world fair: ವಿಶ್ವಮೇಳ.

world federation of trade union: ವಿಶ್ವ ವೃತ್ತಿ ಸಂಘಗಳ ಒಕ್ಕೂಟ.

world government: ಜಾಗತಿಕ ಸರಕಾರ. ಒಂದು ರಾಜ್ಯದಲ್ಲಿ ಪ್ರಜೆಗಳ ನಡತೆಯನ್ನು ನಿರ್ದೇಶಿಸಿ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಲು ಸರಕಾರವಿರುವ ರೀತಿಯಲ್ಲಿ ಅಂತಾರಾಷ್ಟ್ರೀಯ ರಂಗದಲ್ಲಿ ರಾಷ್ಟ್ರಗಳ ನಡವಳಿಕೆಯನ್ನು ರೂಪಿಸಿ, ಅವಿಧೇಯ ರಾಷ್ಟ್ರಗಳನ್ನು ಶಿಕ್ಷಿಸಲು ಮತ್ತು ಯುದ್ಧಗಳನ್ನು ಕೊನೆಗೊಳಿಸಿ ಮುಂದಿನ ಪೀಳಿಗೆ ಶಾಂತ ಮತ್ತು ಸುಖಮಯ ವಾತಾವರಣದಲ್ಲಿ ಬೆಳೆಯುವುದರ ಜೊತೆಗೆ ವಿಶ್ವಶಾಂತಿಯನ್ನು ನೆಲೆಗೊಳಿಸುವ ಉದ್ದೇಶದಿಂದ ಸ್ಥಾಪಿಸಬಹುದಾದ ಸರಕಾರ.

world information order: ವಿಶ್ವ ಮಾಹಿತಿ ವ್ಯವಸ್ಥೆ. ಉಪಗ್ರಹ, ಆಕಾಶವಾಣಿ ಹಾಗೂ ದೂರದರ್ಶನ ಪ್ರಸಾರಗಳ ಮೂಲಕ ಹಾಗೂ ದೂರವಾಣಿ ಮತ್ತು ಗಣಕ ಯಂತ್ರಗಳ ಕಾರ್ಯನಿರ್ವಹಣೆಯ ಜಾಗತಿಕ (ವಿಶ್ವ) ಸಂಪರ್ಕ ವ್ಯವಸ್ಥೆ.

world of illusion: ಭ್ರಮಾಲೋಕ.

world outlook: ಜಾಗತಿಕ ದೃಷ್ಟಿ ಕೋನ.

world parliament: ಜಾಗತಿಕ ಸಂಸತ್ತು.

world revolutionary process: ಜಾಗತಿಕ ಕ್ರಾಂತಿಕಾರಿ ಪ್ರಕ್ರಿಯೆ. ನಮ್ಮ ಕಾಲದ ಕ್ರಾಂತಿಕಾರಿ ಚಳವಳಿಗಳ, ಅಂದರೆ ಸಮಾಜವಾದಿ ಕ್ರಾಂತಿಗಳು, ರಾಷ್ಟ್ರೀಯ ವಿಮೋಚನಾ ಹೋರಾಟ, ಸಾಮ್ರಾಜ್ಯಶಾಹಿ ವಿರೋಧಿ, ಪಾಳೆಗಾರಿ ವಿರೋಧಿ ಮತ್ತು ಪ್ರಜಾಸತ್ತಾತ್ಮಕ ಕ್ರಾಂತಿಗಳ ಹಾಗೂ ಪ್ರಜಾಪ್ರಭುತ್ವಕ್ಕಾಗಿ ಫ್ಯಾಸಿಸ್ಟ್ ಮತ್ತು ಇತರ ದಮನಕಾರಿ ಆಳ್ವಿಕೆಗಳ ವಿರುದ್ಧವಾದ ಹೋರಾಟಗಳ ಒಟ್ಟು ಮೊತ್ತ.

world socialism: ಜಾಗತಿಕ ಸಮಾಜವಾದ. ಜಗತ್ತಿನಲ್ಲಿ ಎಲ್ಲಾ ಕಾರ್ಮಿಕರು ಒಂದಾದಾಗ ಜಾಗತಿಕ ಸಮಾಜವಾದವು ಅಸ್ತಿತ್ವಕ್ಕೆ ಬರುತ್ತದೆ ಎಂಬ ಪರಿಕಲ್ಪನೆ.

world socialist system: ಜಾಗತಿಕ ಸಮಾಜವಾದಿ ವ್ಯವಸ್ಥೆ. ಸಮಾಜವಾದ ಮತ್ತು ಕಮ್ಯೂನಿಸಮ್‌ನ ನಿರ್ಮಾಣದಲ್ಲಿ ತೊಡಗಿರುವ ದೇಶಗಳ ಸಾಮಾಜಿಕ, ಆರ್ಥಿಕ, ಮತ್ತು ರಾಜಕೀಯ ಸಮುದಾಯ.

world state: ವಿಶ್ವರಾಜ್ಯ; ವಿಶ್ವ ರಾಷ್ಟ್ರ. ನೋಡಿ :world government.

world system: ವಿಶ್ವ ವ್ಯವಸ್ಥೆ (ಕ್ರಮ). ಯಾವುದೇ ರಾಷ್ಟ್ರದ ಅಭಿವೃದ್ಧಿ-ಅನಭಿ

ವೃದ್ಧಿಯು ಸ್ವಾಯತ್ತತೆಯುಳ್ಳದ್ದಲ್ಲ. ಬದಲಾಗಿ ಅಭಿವೃದ್ಧಿ ಹೊಂದುತ್ತಿರುವ ವಿಶ್ವ ಆರ್ಥಿಕತೆಯ ಒಂದು ಭಾಗವಾಗಿ ಪರೀಕ್ಷಿಸಲ್ಪಡಬೇಕು ಎಂಬ ದೃಷ್ಟಿಕೋನ.

world system theory: ವಿಶ್ವ ವ್ಯವಸ್ಥಾ ಸಿದ್ಧಾಂತ.

world tribunal: ಅಂತಾರಾಷ್ಟ್ರೀಯ ನ್ಯಾಯಮಂಡಲಿ. ಅನೇಕ ಅಂತಾರಾಷ್ಟ್ರೀಯ ಸಮಸ್ಯೆಗಳನ್ನು ಬಗೆಹರಿಸಲು ಸಹಕರಿಸುವ ನ್ಯಾಯಮಂಡಳಿ.

world view: ಲೋಕದೃಷ್ಟಿ.

world war: ಪ್ರಪಂಚದ ಮಹಾಯುದ್ಧ.

worrying nature: ಚಿಂತಾಪ್ರಕೃತಿ.

writ : ಆಜ್ಞೆ; ಆಜ್ಞಾಪತ್ರ.

writ petition: ರಿಟ್‌ಅರ್ಜಿ. ನ್ಯಾಯಾಲಯವು ಆಜ್ಞಾಪತ್ರ ಹೊರಡಿಸಬೇಕೆಂದು ಕೋರುವ ಅರ್ಜಿ.

writ warrant: ತಪಾಸಣಾ ಆಜ್ಞಾಪತ್ರ.

write off: ತೆಗೆದುಹಾಕು; ವಜಾ ಮಾಡು; ರದ್ದುಮಾಡು.

writer's cramp: ಲೇಖನವ್ಯಾಧಿ. ಉದಾ: ಬರೆಯುವಾಗ ಕೈನಡುಗುವುದು, ಅಕ್ಷರ ಸೊಟ್ಟಗಾಗುವುದು ಇತ್ಯಾದಿ.

writs of general proclamation: ಸಾರ್ವತ್ರಿಕ ಲೇಖಗಳು; ಸಾರ್ವತ್ರಿಕ ಘೋಷಣೆಯ ಆಜ್ಞಾಪತ್ರ.

writs of guidance: ಮಾರ್ಗದರ್ಶನ ನಿರೂಪಗಳು/ಆಜ್ಞಾಪತ್ರಗಳು.

writs of licence: ಅನುಮತಿ ಪತ್ರದ ನಿರೂಪಗಳು.

writs of reply: ಪತ್ರಿಲೇಖ ನಿರೂಪಗಳು.

written constitution: ಲಿಖಿತ ಸಂವಿಧಾನ. ಸರಕಾರದ ರಚನೆಯ ಮೂಲ ತತ್ತ್ವ, ಸರಕಾರದ ವಿವಿಧ ಅಂಗಗಳ ಕಾರ್ಯವ್ಯಾಪ್ತಿ ಹಾಗೂ ಪ್ರಜೆಗಳ ಹಕ್ಕು ಬಾಧ್ಯತೆಗಳನ್ನು ದಾಖಲೆಗಳಲ್ಲಿ ಬರೆದಿಡಲ್ಪಟ್ಟಿರುವ ಸಂವಿಧಾನ. ಉದಾ: ಭಾರತ, ಅಮೇರಿಕಾ.

written examination: ಲಿಖಿತ ಪರೀಕ್ಷೆ.

written historical sources: ಲಿಖಿತ ಐತಿಹಾಸಿಕ ಆಕರಗಳು.

written law: ಲಿಖಿತ ಶಾಸನ.

written tradition : ಲಿಖಿತ ಸಂಪ್ರದಾಯ.

X

xenocentrism: ಅನ್ಯ ಸಂಸ್ಕೃತಿ ನಿಷ್ಠೆ; ಸ್ವಕುಲ ಗ್ಲಾನಿತ್ವ. ತನ್ನ ಗುಂಪಿನ ಸಂಸ್ಕೃತಿಯನ್ನು ತಿರಸ್ಕರಿಸುವ ಪ್ರವೃತ್ತಿ. ನೋಡಿ: ವಿರುದ್ಧ ಪದ ethnocentrism.

xenophobia: ಪರಕೀಯಭೀತಿ; ಅಪರಿಚಿತರ ಭೀತಿ; ಆಗಂತುಕ ಭೀತಿ.

x variable: ನೋಡಿ: independent variable.

Y

y variable: ಅವಲಂಬಿತ ಚಲ. ನೋಡಿ: dependent variable.

yavana: ಭಾರತೀಯ ಮೂಲಗಳಲ್ಲಿ ಪಶ್ಚಿಮ ಏಶ್ಯಾ ಜನರಿಗೆ ಬಳಸಲಾದ ಪದ.

yellow journalism: ಪೀತ ಪತ್ರಿಕೋದ್ಯಮ. ವಾಚಕರ ಆಸಕ್ತಿ, ಆವೇಶಗಳನ್ನು ಕೆರಳಿಸಿ ಅವರನ್ನು ಆಕರ್ಷಿಸಲು ಉದ್ರೇಕ

ಕಾರಿಯಾದ ವಿಷಯಗಳನ್ನು ಪ್ರಕಟಿಸುವ ಪತ್ರಿಕೆಗಳು.

yellow peril: ಹಳದಿ ಪೀಡೆ. ಕ್ಯಾಲಿಫೋರ್ನಿಯಾದಲ್ಲಿದ್ದ ಜಪಾನಿ ವಲಸೆಗಾರರನ್ನು ಬಿಳಿಯರು ಹಳದಿಪೀಡೆ ಎಂದು ತುಚ್ಛೀಕರಿಸುತ್ತಿದ್ದ ಪದ.

yoga: ಯೋಗ. ಇದು ಭಾರತೀಯ ಆಧ್ಯಾತ್ಮ ವಿದ್ಯೆಗಳಲ್ಲಿ ಒಂದು.

young economy argument: ಪ್ರಾರಂಭಿಕ ಅರ್ಥವ್ಯವಸ್ಥಾವಾದ. ಅಭಿವೃದ್ಧಿಯ ಆರಂಭಿಕ ಹಂತದಲ್ಲಿರುವ ಅರ್ಥವ್ಯವಸ್ಥೆಯ ಅಭಿವೃದ್ಧಿಗೆ ಬೃಹತ್ ಪ್ರಮಾಣದಲ್ಲಿ ಕೈಗಾರಿಕೆಗಳ ಬೆಳವಣಿಗೆ ಯಾಗಬೇಕೆಂಬ ವಾದ.

youth dormitory: ಯುವ ಗೃಹ. ಸಮೂಹ ಶಯನಾಗಾರ. ಆದಿವಾಸಿಗಳಲ್ಲಿ ಅವಿವಾಹಿತ ಯುವಕರು ಮತ್ತು ಯುವತಿಯರು ಪ್ರತ್ಯಕ ಪ್ರತ್ಯೇಕವಾಗಿ ವಾಸಿಸುತ್ತಿದ್ದ ಗೃಹಗಳು.

youth movement: ಯುವಾಂದೋಲನ; ಯುವ ಚಳುವಳಿ.

youth programme: ಯುವಜನ ಕಾರ್ಯಕ್ರಮ.

youth psychology: ಯುವ ಮನೋವಿಜ್ಞಾನ.

youth unrest: ಯುವ ಅಶಾಂತಿ.

youth vocational centre: ಯುವ ವೃತ್ತಿಪರ ಕೇಂದ್ರ.

yuga: ಯುಗ. ಜಗತ್ತಿನ ಕಾಲಮಾನ.

Z

zakat: ಝುಕಾತ್. ಮುಸ್ಲಿಮರಲ್ಲಿ ಪ್ರತಿಯೊಬ್ಬ ವ್ಯಕ್ತಿಯು ತನ್ನ ಗಳಿಕೆಯ ೧\೧೪ರಷ್ಟು ಅಂಶವನ್ನು ದಾನವಾಗಿ ಕೊಡುವಂತಹ ದಾನ ರೂಪ.

zamindar: ಜಮೀನುದಾರ; ಭೂಮಾಲಿಕ.

zamindari abolition: ಜಮೀನ್ದಾರಿ ರದ್ದತಿ.

zamindari syste: ಜಮೀನುದಾರಿ ಪದ್ಧತಿ.

zero balance of trade: ಶೂನ್ಯ ವ್ಯಾಪಾರ ಶಿಲ್ಕು.

zero based budget: ಶೂನ್ಯಾಧಾರಿತ ಮುಂಗಡ ಪತ್ರ.

zero cost condition: ಶೂನ್ಯ ವೆಚ್ಚದ ಪರಿಸ್ಥಿತಿ.

zero hour: ಶೂನ್ಯ ವೇಳೆ. ಶಾಸನ ಸಭೆಗಳಲ್ಲಿ ನಿಗದಿತ ಪ್ರಶ್ನೋತ್ತರ ವೇಳೆ ಮುಗಿದ ನಂತರ ಯಾವನೇ ಸದಸ್ಯನಿಗೆ ಯಾವುದೇ ವಿಷಯದ ಮೇಲೆ ಪ್ರಶ್ನೆ ಎತ್ತಲು ಅವಕಾಶವಿರುವ ಸಮಯಾವಧಿ.

zigot: ಭ್ರೂಣ.

zionism: ಜಿಯೋನಿಸಮ್. ಜೆರುಸಲೆಮ್‌ನಲ್ಲಿರುವ ಜಿಯೋನ್ ಎಂಬ ಬೆಟ್ಟದ ಹೆಸರಿನಿಂದ ಹುಟ್ಟಿದ ಪದ. ೧೯ನೇ ಶತಮಾನದ ಕೊನೆಯಲ್ಲಿ, ವರ್ಗ-ಸ್ಥಾನದ ಪರಿಗಣನೆ ಇಲ್ಲದೆ ಎಲ್ಲಾ ಯಹೂದಿಯರು ಒಂದುಗೂಡಬೇಕೆಂಬ ಘೋಷಣೆಯಡಿಯಲ್ಲಿ ಹಲವು ದೇಶಗಳಲ್ಲಿ ಯಹೂದ್ಯ ಬೂರ್ಷ್ವಾಗಳ ಮಧ್ಯೆ ತಲೆ ಎತ್ತಿದ ಒಂದು ಪ್ರತಿಗಾಮಿ ರಾಷ್ಟ್ರೀಯವಾದಿ ಚಳವಳಿ.

zonal boundaries: ವಲಯ ಮೇರೆಗಳು.

zonal council: ವಲಯ ಮಂಡಳಿ.

zone in transition: ಪರಿವರ್ತನಾ ಶೀಲ ಮಂಡಲ. ಮಹಾನಗರಗಳಲ್ಲಿ ಕೇಂದ್ರ ವ್ಯಾಪಾರೀ ವಲಯವನ್ನು ಸುತ್ತುವರಿದ ತಕ್ಷಣದ ಹೊರಸುತ್ತು. ವ್ಯಾಪಾರ ಮತ್ತು ಕೈಗಾರಿಕೋದ್ಯಮಗಳು ಹೆಚ್ಚಾದಂತೆ ಇದರಲ್ಲಿರುವ ಹಳೆಯ ಕಟ್ಟಡಗಳು ನಶಿಸಿ ಇದು ಕೂಡಾ ಕೇಂದ್ರ ವ್ಯಾಪಾರೀವಲಯದ ಭಾಗವೇ ಆಗಿ ಪರಿವರ್ತನೆಗೊಳ್ಳುತ್ತದೆಂಬುದಾಗಿ E.W. Burgess ಪ್ರತಿಪಾದಿಸಿದ ತತ್ತ್ವ.

zone of commuters: ನೋಡಿ: concentric zone hypothesis.

zone of dense population: ಅಧಿಕ ಜನಸಾಂದ್ರತೆಯ ವಲಯ.

zone of sparse population: ವಿರಳ ಜನಸಾಂದ್ರತೆಯ ವಲಯ.

zoophobia: ಮೃಗಭೀತಿ.

zoophilia: ಪಶುಕಾಮಾಸಕ್ತಿ; ಪಶುರತಿ.

Zorostranianism: ಝೊರೋಸ್ಟ್ರೇನಿಯನ್ ಪಂಥ.

ಸಮಾಜ ವಿಜ್ಞಾನಗಳ ಪಾರಿಭಾಷಿಕ ಪದಕೋಶ

ಕನ್ನಡ ಭಾಷೆಯಲ್ಲಿ ಸಮಾಜ ವಿಜ್ಞಾನವನ್ನು ಕುರಿತ ಬರವಣಿಗೆಯ ವ್ಯಾಪ್ತಿ ವಿಸ್ತೃತಗೊಳ್ಳುತ್ತಿದೆ. ಈ ಕಾರಣದಿಂದಾಗಿ ಸಮಾಜ ವಿಜ್ಞಾನದಲ್ಲಿ ಬಳಸುತ್ತಿರುವ ವಿಶಿಷ್ಟ ಸಾಮಾನ್ಯ ಪರಿಭಾಷೆಯನ್ನು ರೂಪಿಸುವ ಶಾಸ್ತ್ರೀಯ ಪ್ರಯತ್ನ ನಡೆಯುತ್ತಿದೆ. ಸಮಾಜ ವಿಜ್ಞಾನದಲ್ಲಿ ಮಾನವಶಾಸ್ತ್ರ, ಮನಶಾಸ್ತ್ರ, ಜಾನಪದ ಮುಂತಾದ ಪೂರಕ ವಿಜ್ಞಾನಗಳ ಪ್ರವೇಶವೂ ಗಣನೀಯ ಪ್ರಮಾಣದಲ್ಲಿ ಇರುವುದರಿಂದ ಈ ರೀತಿಯ ಪರಿಭಾಷಾ ರೂಪಣೆ ಅನಿವಾರ್ಯವೂ ಆಗಿದೆ. ಜೊತೆಗೆ ಈಗ ಕನ್ನಡವನ್ನು ಸಮಗ್ರ ಸಾಮಾಜಿಕ ಹಾಗೂ ಶುದ್ಧ ವಿಜ್ಞಾನಗಳ ಪ್ರಬುದ್ಧ ಭಾಷೆಯನ್ನಾಗಿ ರೂಪಿಸುವ ಒತ್ತಡವೂ ಅಧಿಕವಾಗುತ್ತಿದೆ. ವಿದ್ಯಾರ್ಥಿಗಳ ಒತ್ತಡದಿಂದ ಮತ್ತು ಸಾರ್ವಜನಿಕರ ಅಪೇಕ್ಷೆಯ ಕಾರಣದಿಂದ ಸಮಾಜ ವೈಜ್ಞಾನಿಕ ವಿಷಯಗಳನ್ನು ಕನ್ನಡದಲ್ಲಿ ಸರಳವಾಗಿ ಮತ್ತು ಸಮರ್ಪಕವಾಗಿ ಬರೆಯುವ ಹಾಗೂ ಆ ಬರವಣಿಗೆಗಳಲ್ಲಿ ಬಳಸಲಾಗುವ ಪಾರಿಭಾಷಿಕ ಶಬ್ದಗಳಿಗೆ ಏಕರೂಪ ಪರ್ಯಾಯ ಕನ್ನಡ ಪದಗಳನ್ನು ರೂಪಿಸುವ ಪ್ರಯತ್ನ ಅತ್ಯಂತ ಜರೂರಾಗಿ ನಡೆಯಬೇಕಾಗಿದೆ. ಸಮಾಜ ವಿಜ್ಞಾನದ ಬೇರೆ ಬೇರೆ ಶಾಖೆಗಳ ವಿದ್ವಾಂಸರ ಸಕ್ರಿಯ ನೆರವು ಮತ್ತು ಆಸಕ್ತಿಗಳಿಂದ ಸಿದ್ಧಗೊಂಡಿರುವ ಈ ಕೃತಿ ಸಮಾಜ ವಿಜ್ಞಾನ ಕ್ಷೇತ್ರದ ಬಹುದೊಡ್ಡ ಕೊರತೆಯೊಂದನ್ನು ನಿವಾರಿಸುವಲ್ಲಿ ಸಫಲವಾಗುತ್ತದೆ ಎಂಬ ನಂಬಿಕೆ ನನಗಿದೆ. ಅಗತ್ಯ ಮೂಲಪದಗಳ ಆಯ್ಕೆಯಲ್ಲಿ, ಅವುಗಳಿಗೆ ಬಹುಮಟ್ಟಿಗೆ ಸರ್ವಸಮ್ಮತವಾದ ಸಮರ್ಪಕ ಪರ್ಯಾಯ ಪದಗಳನ್ನು ಕಂಡುಹಿಡಿಯುವಲ್ಲಿ, ಬಳಕೆಯಲ್ಲಿ ಇರದಿದ್ದ ಸಾವಿರಾರು ಪದಗಳನ್ನು ಮೂಲಪದ ಸೃಷ್ಟಿಸುವ ಅರ್ಥ ಪರಂಪರೆಗನುಗುಣವಾಗಿ ಹೊಸ ಪದಗಳನ್ನು ಟಂಕಿಸುವಲ್ಲಿ, ಸ್ಪಷ್ಟವಾದ ಅರ್ಥಪರಿವೇಷವನ್ನು ಅವುಗಳಿಗೆ ತುಂಬುವಲ್ಲಿ, ಈ ವಿಶಾಲ ಕ್ಷೇತ್ರದ ಬಹುಮುಖ್ಯ ಪರಿಕಲ್ಪನೆಗಳಿಗೆ ಅನುಗುಣವಾದ ಪದಗಳನ್ನು ಸೇರ್ಪಡೆಗೊಳಿಸುವಲ್ಲಿ, ಅಪಾರ್ಥಕ್ಕೆ, ಅನ್ಯಾರ್ಥಕ್ಕೆ ಎಡೆಗೊಡದಂತೆ ಅತ್ಯಂತ ಜಾಗರೂಕತೆಯಿಂದ ಅವುಗಳನ್ನು ಕಟ್ಟಿಕೊಡುವಲ್ಲಿ ಡಾ. ಚಂದ್ರಶೇಖರ ದಾಮ್ಲೆ ಮತ್ತು ಅವರ ವಿದ್ವತ್ ಪರಿವಾಹ ವಹಿಸಿರುವ ಶ್ರಮಕ್ಕೆ ಗೌರವಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಡಾ. ಎಚ್. ಜೆ. ಲಕ್ಕಪ್ಪಗೌಡ

ಕುಲಪತಿಯವರು